ಭಾಗ-7

ಸತ್ತರ್ಕದೀಪಾವಳಿ ತತ್ವಪ್ರಕಾಶಿಕಾ ತತ್ವಪ್ರದೀಪ

ಭಾವದೀಪ

ಉಧ್ಯಕ್ಷರು :

ಪರಮಪೂಜ್ಯ ॥ ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ದೌರವ ಸಂಪಾದಕರು :

ವಿ॥ ರಾಜಾ ಎಸ್. ನಿದಿ ಆಚಾರ್ಯ

ಮಂತ್ರಾಲಯ.

ಸಂಪಾದನೆ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು.

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀ ಗುರುರಾಜೋ ವಿಜಯತೇ ॥

ಭಾಗ -೭

ಶ್ರೀಪದ್ಮನಾಭತೀರ್ಥಮುನಿ ವಿರಚಿತ
ಸತ್ತರ್ಕದೀಪಾವಳಿ

ಶ್ರೀತ್ರಿವಿಕ್ರಮಪಂಡಿತಾಚಾರ್ಯ ವಿರಚಿತ
ತತ್ವಪ್ರದೀಪ

ಶ್ರೀಜಯತೀರ್ಥಮುನಿ ವಿರಚಿತ
ತತ್ವಪ್ರಕಾಶಿಕಾ

ಭಾವದೀಪ

ಶ್ರೀವೇದವ್ಯಾಸರ ಬ್ರಹ್ಮಸೂತ್ರ , ಶ್ರೀಮಧ್ವಾಚಾರ್ಯರ ಭಾಷ್ಯ ,
ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ ಟೀಕೆಗಳೊಂದಿಗೆ
ಶ್ರೀಮಂತ್ರಾಲಯಪ್ರಭುಗಳ ಭಾವದೀಪ
ಸಂಸ್ಕೃತ ಮೂಲ ಹಾಗೂ ಕನ್ನಡ ಅನುವಾದ

ವಿಶೇಷ ವಿಚಾರ ಹಾಗೂ ಸಮಗ್ರ ವಿಶ್ಲೇಷಣೆಯೊಂದಿಗೆ

* * * * * *

ಪ್ರಕಾಶನ :
ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 ಆಂಧ್ರಪ್ರದೇಶ.

॥

'ಭಾವದೀಪ' : ಮಂತ್ರಾಲಯ ಕ್ಷೇತ್ರದಲ್ಲಿ ದುರ್ಮುಖ ॥ ಜ್ಯೇಷ್ಠ ಮಾಸ ॥ ಜೂನ್ ೨೦೧೬ ರಲ್ಲಿ ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಈ ಕೃತಿಯನ್ನು ಲೋಕೇಶಾರ್ಪಣೆ ಹಾಗೂ ಲೋಕಾರ್ಪಣೆ ಮಾಡಿದರು.

ಪ್ರಕಾಶನ : ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345
ಆಂಧ್ರಪ್ರದೇಶ.

ಸಂಪಾದನೆ ಮತ್ತು ಅನುವಾದ : ವಿ ॥ ಬೆಮ್ಮತ್ತಿ ವೇಂಕಟೇಶಾಚಾರ್ಯ, ಬೆಂಗಳೂರು.
ದೂರವಾಣಿ : 914149120

ಪ್ರಥಮಮುದ್ರಣ : 2015

ಪುಟಗಳು : 704

ಬೆಲೆ : 600 ರೂ

ಪ್ರತಿಗಳು : 1000

©

Publication Copy right :

ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 ಆಂಧ್ರಪ್ರದೇಶ.

ಅಕ್ಷರಜೋಡಣೆ :

ಶ್ರೀ ಬೆಮ್ಮತ್ತಿ ಶ್ರೀನಿವಾಸ
ಶ್ರೀಮತಿ ಎಸ್. ನಾಗಲತಾ

ಮುದ್ರಣ :
ಮುಕ್ತಿಪಥ ಮುದ್ರಣಾಲಯ, ಬೆಂಗಳೂರು.

॥ Srimanmoola Ramo Vijayate ॥ ॥ Sri Gururajo Vijayate ॥

Vol. - 7

SRI PADMANABHATIRTHAMUNI'S
SATTARKADIPAVALI

SRIJAYATIRTHAMUNI'S
TATVAPRAKAASHIKAA

SRI TRIVIKRMAPANDITAACHARYA'S
TATVAPRADIPA

BHAVADIPA

Sri Vedavyasa's Brahmasutra,
Sri Madhvacharya's Bhashya,
Teekas - Sattarkadipawali, Tatvapradipa, Tatvaprakaashikaa

Bhavadipa by Sri Mantrayala Prabhu

Sanskrit Original Text with Kannada Translation

with special debate from many commentaries & overall critisism

Published by :

Sri Gurusarvabhouma Samshodhana Mandira,
Jagadguru Srimanmadhvacharya Mula Mahasamsthana,
Sri Raghavendraswamy Mutt, Mantralayam - 518 345 A.P.

'BHAVADIPA' : HH Sri Sri Subhudendra Thirta sripada has submitted this 7th volume to Sri Raghavendraswamiji at Mantralaya.

Publication : Sri Gurusarvabhouma Sanshodhana Mandira,
Jagadguru Srimanmadhvacharya Mula
Mahasamsthana, Sri Raghavendraswamy mutt,
Mantralayam. A.P.

Edited & Translated by : Vidwan Bemmatti Venkateshacharya,
Bangalore. Ph : 9141495120

First Edition : 2015

Price : Rs. 600

Copies : 1000

©

Publication Copy right :

Sri Gurusarvabhouma Samshodhana Mandira,
Jagadguru Srimanmadhvacharya Mula Mahasamsthana,
Sri Raghavendraswamy Mutt, Mantralayam - 518 345 A.P.

Type set :

Smt. S. Nagalatha, Bangalore.
Sri Sri Bemmatti Srinivasa

Printed at :

Muktipatha Mudranalaya, Bangalore.

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಬ್ರಹ್ಮಸೂತ್ರ ಭಾಷ್ಯ

ಸತ್ತರ್ಕದೀಪಾವಳಿ ತತ್ವಪ್ರಕಾಶಿಕಾ ತತ್ವಪ್ರದೀಪ

ಭಾವದೀಪ

* * * *

ಅಧ್ಯಕ್ಷರು :

ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ಗೌರವ ಸಂಪಾದಕರು :

ವಿ॥ ರಾಜಾ ಎಸ್. ಗಿರಿಆಚಾರ್ಯ

ಮಂತ್ರಾಲಯ

ಸಂಪಾದನೆ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು.

II Srimanmoola Ramo Vijayate II

II Sri Gururajo Vijayate II

Brahmasutra Bhashya

Sattrakadipavali Tatvaprakaashikaa

Tatvapradipa

BHAVADIPA

******

President:

HH Sri Subhudhendratirtha Sripadaru

PeeTadhipati of Sri Raghavendraswamy Mutt,
Mantralayam.

Honorary Editor:

Sri Vidwan Raja S. Giri Acharya

Mantralayam.

Edited & Translated by :

Vidwan Bemmatti Venkateshacharya,

Bangalore.

ಏಳನೆಯ
ವಾಙ್ಮಯ-ಕುಸುಮಹಾರ
ಸಮರ್ಪಣೆ

ಶ್ರೀರಾಘವೇಂದ್ರಸ್ವಾಮಿಗಳ ಮಠಾಧೀಶರಾದ
ಪರಮಪೂಜ್ಯ ।। ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು
ಶ್ರೀರಾಘವೇಂದ್ರತೀರ್ಥಶ್ರೀಪಾದರ ಅಂತರ್ಯಾಮಿಗಳಾದ ಶ್ರೀಮನ್ಮಧ್ವಾಚಾರ್ಯರ
ಅಂತರ್ಯಾಮಿಗಳಾದ ಶ್ರೀಮನ್ ಮೂಲರಾಮಚಂದ್ರದೇವರಿಗೆ ಈ ಕೃತಿಯನ್ನು
ಏಳನೆಯ ವಾಙ್ಮಯ ಕುಸುಮಹಾರವನ್ನಾಗಿ ಸಮರ್ಪಣೆ ಮಾಡಿದ್ದಾರೆ.

॥ ಶ್ರೀಮನ್‌ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಶ್ರೀಮತ್-ಪರಮಹಂಸ-ಪರಿವ್ರಾಜಕಾಚಾರ್ಯ-ಪದ-ವಾಕ್ಯ-ಪ್ರವೀಣ-ಪಾರಾವಾರ-ಪಾರಂಗತ-
ಸರ್ವತಂತ್ರ-ಸ್ವತಂತ್ರ-ಶ್ರೀಮನ್-ಮೂಲರಘುಪತಿ-ವೇದವ್ಯಾಸ-ದೇವ-ದಿವ್ಯ-ಶ್ರೀಪಾದ
ಪದ್ಮಾರಾಧಕ-ಜಗದ್ಗುರು-ಶ್ರೀಮನ್-ಮಧ್ವಾಚಾರ್ಯ-ಮೂಲಮಹಾಸಂಸ್ಥಾನ-
ಮಂತ್ರಾಲಯ-ಶ್ರೀರಾಘವೇಂದ್ರಸ್ವಾಮಿಗಳವರ ಮಠದ ವೇದಾಂತ-ಸಾಮ್ರಾಜ್ಯ-
ದಿಗ್ವಿಜಯ-ವಿದ್ಯಾಸಿಂಹಾಸನಾಧೀಶ್ವರರಾದ
ಪರಮಪೂಜ್ಯ ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ
ಪರಮಪೂಜ್ಯ ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರರಾದ
ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ

ಅನುಗ್ರಹ ಸಂದೇಶ

ಏಳನೆಯ ಸಂಪುಟದ ಮೂಲಕ ಸಮನ್ವಯಾಧ್ಯಾಯದ ಪ್ರಾರಂಭದ ಮೂರು ಪಾದಗಳ ಅನುವಾದ ಕಾರ್ಯವು ಮುಕ್ತಾಯವಾಗಿ, ನಾಕನೆಯ ಪಾದದ ಆನುಮಾನಿಕಾಧಿಕರಣವು ಇದರಲ್ಲಿ ಪ್ರಾರಂಭವಾಗಿದೆ. ಅನ್ಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದಸಮನ್ವಯಕ್ಕಾಗಿ ಪ್ರಥಮಪಾದವು ಹೊರಟಿದೆ. ಅನ್ಯತ್ರಪ್ರಸಿದ್ಧವಾದ ಲಿಂಗಾತ್ಮಕ ಶಬ್ದಗಳ ಸಮನ್ವಯಕ್ಕಾಗಿ ಎರಡನೆಯ ಪಾದವು ಹೊರಟಿದೆ. ಉಭಯತ್ರಪ್ರಸಿದ್ಧವಾದ ನಾಮಲಿಂಗಾತ್ಮಕಶಬ್ದಗಳ ಸಮನ್ವಯಕ್ಕಾಗಿ ಮೂರನೆಯ ಪಾದವು ಹೊರಟಿದೆ. ಹೀಗೆ ವೇದದಲ್ಲಿರುವ ಎಲ್ಲಾ ಶಬ್ದಗಳ ಸಮನ್ವಯವನ್ನು ಈ ಮೂರು ಪಾದಗಳಿಂದ ಸಾಧಿಸಿದ್ದಾಯಿತು.

ಮೊದಲೆರಡು ಪಾದಗಳಲ್ಲಿ ಯಾವ ಯಾವ ಶಬ್ದಗಳನ್ನು ಸಮನ್ವಯ ಮಾಡಲಾಯಿತೊ ಅದೇ ಶಬ್ದಗಳ ಸಮನ್ವಯವನ್ನು ಪುನಃ ಮೂರನೆಯ ಪಾದದಲ್ಲಿ ಮಾಡುತ್ತಿದ್ದಾರೆಂಬ ಅಪೂರ್ವ ಪ್ರಮೇಯವನ್ನು ಚಂದ್ರಿಕಾಚಾರ್ಯರು ಹಾಗೂ ರಾಯರು ತಿಳಿಸಿದ್ದಾರೆ. ಏಕೆಂದರೆ ಲೋಕದಲ್ಲಿ ಪ್ರಸಿದ್ಧವಾದ ನಾಮಾತ್ಮಕಶಬ್ದಗಳನ್ನು ಹಾಗೂ ಲಿಂಗಾತ್ಮಕಶಬ್ದಗಳನ್ನು ವಿಷ್ಣುವಿನಲ್ಲಿ ಮೊದಲೆರಡು ಪಾದಗಳಲ್ಲಿ ಸಮನ್ವಯ ಮಾಡಲಾಯಿತು. ಆಗ ಆ ಶಬ್ದಗಳೆಲ್ಲವೂ ಉಭಯತ್ರಪ್ರಸಿದ್ಧವಾದವು. ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿವೆ. ಶಾಸ್ತ್ರದೃಷ್ಟಿಯಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿವೆ.

ಆದ್ದರಿಂದ ಹೀಗೆ ಉಭಯತ್ರಪ್ರಸಿದ್ಧವಾದ ಎಲ್ಲ ಶಬ್ದಗಳ ಸಮನ್ವಯವನ್ನು ಪುನಃ ಈ ಮೂರನೆಯ ಪಾದದಲ್ಲಿ ಸಾಧಿಸಲಾಯಿತು. ಯಾವಾಗ ಉಭಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯವನ್ನು ಕೂಡ ಶ್ರೀಹರಿಯಲ್ಲಿ ಸಾಧಿಸಲಾಗುತ್ತದೋ, ಆಗ ಸಕಲಶಬ್ದಗಳು ಶ್ರೀಹರಿಯನ್ನು ಮಾತ್ರ ಪ್ರತಿಪಾದನೆ ಮಾಡುತ್ತವೆ. ಬೇರೆ ಯಾರನ್ನು ಕೂಡ ಪ್ರತಿಪಾದನೆ ಮಾಡುವುದಿಲ್ಲ. ಎಂಬ ಬ್ರಹ್ಮಮೀಮಾಂಸಶಾಸ್ತ್ರದ ಮುಖ್ಯಪ್ರಮೇಯವು ಸಿದ್ಧವಾಗುತ್ತದೆ. ಆದ್ದರಿಂದ ಮೂರನೆಯ ಪಾದವು ಹೊರಡದಿದ್ದರೆ ಮೊದಲೆರಡು ಪಾದಗಳ ಸಮನ್ವಯ ಮಾಡಿದ ಶಬ್ದಗಳಿಗೆ ಸಾರ್ಥಕ್ಯವೇ ಕೂಡುವುದಿಲ್ಲ. ಆದ್ದರಿಂದ ತೃತೀಯಪಾದದ ಅಧ್ಯಯನವು ಅತ್ಯಾವಶ್ಯಕವಾಗಿದೆ.

ಈ ಪಾದದಲ್ಲಿ ದೇವತಾಧಿಕರಣ, ಅಪಶೂದ್ರಾಧಿಕರಣಗಳನ್ನು ಬಿಟ್ಟು ಉಳಿದೆಲ್ಲ ಅಧಿಕರಣಗಳು ಉಭಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯವನ್ನು ಮಾಡುತ್ತಿವೆ. ಈ ಎರಡು ಅಧಿಕರಣಗಳು ಯಾವುದೇ ಶಬ್ದಗಳನ್ನು ಸಮನ್ವಯ ಮಾಡದೆ ಪ್ರಾಸಂಗಿಕವಾಗಿ ದೇವತೆಗಳಿಗೆ ವೇದವಿದ್ಯಾಧಿಕಾರವಿದೆ. ಹಾಗೂ ಸ್ತ್ರೀ ಶೂದ್ರರಿಗೆ ವೇದವಿದ್ಯಾಧಿಕಾರವಿಲ್ಲವೆಂಬೆರಡು ಪ್ರಮೇಯಗಳನ್ನು ಸಾಧಿಸಲು ಹೊರಟಿವೆ.

ಸಕಲ ದೇವತೆಗಳು ಮನುಷ್ಯರಾಗಿ ಸಾಧನೆ ಮಾಡಿಕೊಂಡು ಅನಂತರ ದೇವತಾಪದವಿಯನ್ನು ಪಡೆಯುತ್ತಾರೆಂಬ ಅಪೂರ್ವಪ್ರಮೇಯವು ನಮಗೆ ದೇವತಾಧಿಕರಣದಿಂದ ತಿಳಿಯುತ್ತಿದೆ. ಆದ್ದರಿಂದ ಜಗತ್ತಿನಲ್ಲಿ ಯಾರೇ ಒಬ್ಬ ವ್ಯಕ್ತಿಯನ್ನು ನಾವು ತಿರಸ್ಕಾರ ಭಾವದಿಂದ ನೋಡಬಾರದು. ಅವನು ದೇವತಾಪುರುಷನೂ ಆಗಿರಬಹುದು. ಹೀಗೆ ವ್ಯವಹಾರ ಪ್ರಪಂಚದಲ್ಲಿ ನಾವು ನಡೆದುಕೊಳ್ಳುವ ಕ್ರಮವನ್ನು ಕೂಡ ಈ ಅಧಿಕರಣಗಳಿಂದ ತಿಳಿಯಲು ಸಾಧ್ಯವಿದೆ.

ಅಪಶೂದ್ರಾಧಿಕರಣದಲ್ಲಿ 'ಸತ್ಯವನ್ನು ಹೇಳುವವನೇ ನಿಜವಾದ ಬ್ರಾಹ್ಮಣನು. ಸುಳ್ಳನ್ನು ಹೇಳಿದರೆ ಅವನು ಶೂದ್ರನಾಗುತ್ತಾನೆ' ಎಂಬ ಅಪೂರ್ವ ಪ್ರಮೇಯವನ್ನು ತಿಳಿಸಿದ್ದಾರೆ. ಸಮಸ್ತ ಜಗತ್ತಿನಲ್ಲಿ ನಿಜವಾದ ಧರ್ಮದ ಪರಿಪಾಲನೆ ಎಂದರೆ ಸತ್ಯದ ರಕ್ಷಣೆಯೆ ಹೊರತು ಬೇರೆ ಮತ್ತೇನೂ ಅಲ್ಲ. ನಮ್ಮ ಲೌಕಿಕ ಜೀವನದಲ್ಲಿ ತಿಳಿಯಬೇಕಾದ ಈ ಮುಖ್ಯ ಪ್ರಮೇಯವನ್ನು ಅಪಶೂದ್ರಾಧಿ-ಕರಣದಿಂದ ತಿಳಿಯಬೇಕು.

ನಾವು ಕಾಣುತ್ತಿರುವ ಈ ಜಗತ್ತು ಪ್ರತಿಕ್ಷಣವು ಅತ್ಯಂತ ಕ್ರಿಯಾಶೀಲವಾಗಿ ನಡೆಯುತ್ತಿದೆ. ಸಮಸ್ತ ಜಗತ್ತಿನಲ್ಲಿರುವ ಈ ಕ್ರಿಯಾಶೀಲತೆಯನ್ನು ನಿಯಮನ ಮಾಡುತ್ತಿರುವವನು ಯಾರು? ಎಂಬ

ಕುತೂಹಲಕ್ಕೆ ಕಂಪನಾಧಿಕರಣವು ಉತ್ತರಿಸುತ್ತಿದೆ. ವಜ್ರಶಬ್ದವನ್ನು ಸಮನ್ವಯ ಮಾಡುವ ಮೂಲಕ ಸಮಸ್ತ ಜಗತ್‌ಚೇಷ್ಟಕನಾದವನು ಶ್ರೀಹರಿಯೇ ಆಗಿದ್ದಾನೆ ಎಂಬ ಪ್ರಮೇಯವನ್ನು ನಮ್ಮ ಅರಿವಿಗಾಗಿ ತಿಳಿಸುತ್ತಿದೆ.

ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ಎಂದೂ ಆರದ ಜ್ಯೋತಿ ಬೆಳಗುತ್ತಿದೆ. ಇದನ್ನು ಕೆಲವರು ಜೀವ ಎಂದು ಕರೆಯಬಹುದು. ಆದರೆ ಆ ಜೀವದ ಒಳಗಡೆ ಕುಳಿತು ಜೀವನಿಗೂ ಜ್ಯೋತಿಪ್ರದನಾದವನು ಮಹಾವಿಷ್ಣುವೇ ಆಗಿದ್ದಾನೆ. ಆದ್ದರಿಂದ ನಮ್ಮ ಹೃದಯದಲ್ಲಿ ಬೆಳಗುತ್ತಿರುವ ಜ್ಯೋತಿ ಪರಮಾತ್ಮನೆಂದೇ ಉಪಾಸನೆಗೈಯಬೇಕೆಂಬ ನಮ್ಮ ಅನುಷ್ಠಾನಪ್ರಮೇಯವನ್ನು ಜ್ಯೋತಿರಧಿಕರಣವು ಬಿತ್ತರಿಸುತ್ತಿದೆ.

ಅಪ್ರಾಕೃತ ಶರೀರಿಯಾದ ಮಹಾವಿಷ್ಣು ಪ್ರಾಕೃತವಾದ ನಾಮರೂಪಗಳಿಂದ ಅತೀತನಾಗಿದ್ದಾನೆ. ಆದ್ದರಿಂದಲೇ ಎಲ್ಲೆಡೆಯು ಏಕೈಕನಾಗಿ ಪ್ರಕಾಶಿಸುತ್ತಿದ್ದಾನೆ. ನಮ್ಮ ನಿಮ್ಮಂತೆ ಆಕೃತಿ ನಾಮ ಮೊದಲಾದವುಗಳಿಂದ ಅವನು ಕೂಡಿರುವುದಿಲ್ಲ. ಆದ್ದರಿಂದಲೇ ಅವನನ್ನು ಆಕಾಶ ಎಂದು ಛಾಂದೋಗ್ಯೊಪನಿಷತ್ತು ಕರೆಯುತ್ತಿದೆ. ಭಗವಂತನನ್ನು ಹೀಗೆ ಅತ್ಯಂತ ಲೋಕವಿಕ್ಷಣನನ್ನಾಗಿ ತಿಳಿಯಬೇಕೆಂಬ ಪ್ರಮೇಯವನ್ನು ತಿಳಿಸಲು ಆಕಾಶಾಧಿಕರಣವು ಹೊರಟಿದೆ.

ಬೆಳಿಗ್ಗೆ ಎದ್ದ ಕೂಡಲೇ 'ನಾನು ಸ್ವಪ್ನವನ್ನು ಕಂಡೆ. ನನಗೆ ಇಂದು ಸ್ವಪ್ನ ಬೀಳಲೇ ಇಲ್ಲ'. ಇತ್ಯಾದಿಯಾಗಿ ನಾವು ವ್ಯವಹರಿಸುತ್ತೇವೆ. ಆದರೆ ಸ್ವಪ್ನವನ್ನು ಸೃಷ್ಟಿ ಮಾಡಿದವರು ನಾವಲ್ಲ. ಸ್ವತಂತ್ರವಾಗಿ ನೋಡುವವರು ನಾವಲ್ಲ. ನೋಡದಿದ್ದರೂ ನೋಡಿದ್ದೇವೆಂಬ ಅಹಂಕಾರವುಳ್ಳವರು ಮಾತ್ರ ನಾವಾಗಿದ್ದೇವೆ. ಏಕೆಂದರೆ ಸ್ವಪ್ನವನ್ನು ಸೃಷ್ಟಿ ಮಾಡುವ ಪರಮಾತ್ಮನೇ ಸ್ವಪ್ನವನ್ನು ನೋಡುವವನಾಗಿದ್ದಾನೆ. ಸ್ವಪ್ನಪದಾರ್ಥಗಳನ್ನು ಸೃಷ್ಟಿ ಮಾಡಿ ಅಸಂಗನಾಗಿದ್ದುಕೊಂಡು ತೈಜಸರೂಪಿಯಾದ ಭಗವಂತನು ಆ ಸ್ವಪ್ನಪದಾರ್ಥಗಳನ್ನು ಮುಖ್ಯವಾಗಿ ತಾನೇ ಕಾಣುತ್ತಾನೆಂಬ ಅಪೂರ್ವ ಪ್ರಮೇಯಗಳನ್ನು ತಿಳಿಸಲು ಸುಷುಪ್ತ್ಯಧಿಕರಣವು ಹೊರಟಿದೆ.

ಕೊನೆಯದ್ದು ಬ್ರಾಹ್ಮಣಾಧಿಕರಣ. ವೇದದಿಂದ ಪ್ರತಿಪಾದ್ಯನಾಗಿ ಜ್ಞಾನಗಮ್ಯನಾದ ಪರಮಾತ್ಮನೊಬ್ಬನೇ 'ಬ್ರಾಹ್ಮಣ' ಎಂದು ಕರೆಸಿಕೊಳ್ಳುತ್ತಾನೆ. ಚತುರ್ಮುಖಬ್ರಹ್ಮನನ್ನು ಕೆಲವು ವೇದಗಳು 'ಬ್ರಾಹ್ಮಣ' ಎಂದು ಕರೆದಿರುವಂತೆ ಕಾಣಿಸುತ್ತದೆ. ಆದರೆ ಅವನಿಗೂ ಬ್ರಾಹ್ಮಣ್ಯವನ್ನು

ನೀಡಿದ ಮಹಾಬ್ರಾಹ್ಮಣನೆಂದರೆ ಮಹಾವಿಷ್ಣುವೇ ಹೊರತು ಬೇರಾರೂ ಅಲ್ಲ. ಬ್ರಾಹ್ಮಣ ಶಬ್ದಕ್ಕೆ 'ಬ್ರಹ್ಮಣಾ ಅಣ್ಯತೇ' ಎಂಬ ವ್ಯುತ್ಪತ್ತಿಯಿಂದ ವೇದದಿಂದ ಗಮ್ಯನಾದವನು ಎಂದರ್ಥ.

ಹೀಗೆ ಲೌಕಿಕಜೀವನದಲ್ಲಿ ನಾವು ಅನುಷ್ಠಾನಕ್ಕೆ ತಂದುಕೊಳ್ಳಬೇಕಾದ ಅನೇಕ ಮಾರ್ಮಿಕ-ವಿಚಾರಗಳನ್ನು, ತಾತ್ವಿಕವಿಚಾರಗಳನ್ನು ಬ್ರಹ್ಮಮೀಮಾಂಸಾಶಾಸ್ತ್ರವು ನಮಗೆ ತಿಳಿಸಿಕೊಡುತ್ತಿದೆ.

ಏಳನೆಯ ಸಂಪುಟವನ್ನು ಅತ್ಯಂತ ಶ್ರದ್ಧೆಯಿಂದ ಬರೆದು ನೀಡಿದ ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯರಿಗೆ ಶ್ರೀಮನ್ ಮೂಲರಘುಪತಿರಾಮಚಂದ್ರದೇವರು ಹಾಗೂ ಹರಿವಾಯುಗುರುಗಳು ವಿಶೇಷ ಅನುಗ್ರಹವನ್ನು ಮಾಡಿ ಇನ್ನು ಹೆಚ್ಚಿನ ಅನುವಾದ ಕಾರ್ಯದ ಸಾಮರ್ಥ್ಯವನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಅಸ್ಮದ್ಗುರ್ವಂತರ್ಗತ ಶ್ರೀಮದ್ರಾಘವೇಂದ್ರತೀರ್ಥಗುರ್ವಂತರ್ಗತ-
ಭಾರತೀರಮಣ - ಮುಖ್ಯಪ್ರಾಣಾಂತರ್ಗತ - ಶ್ರೀಮನ್‌ಮೂಲರಘುಪತಿ -
ವೇದವ್ಯಾಸದೇವರು ಸಂಪೂರ್ಣವಾಗಿ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇತಿ ನಾರಾಯಣಸ್ಮರಣೆಗಳು.

Brahmasutra Bhashya
With
Select Commentaries including
Bhavadipa of Sri Raghavendra Tirtha

By

Vachaspati Dr. V. R. Panchamukhi

At the outset, I would like to express our sincere respectful danda pranams, to His Holiness Sri Subudhendra Tirtha for his encouragement to publish this Series of Volumes on Sutra Bjhashya, Tatvaprakasika, and other commentaries with Focus on Bhavadipa, with Kannada Translations.

We would also express our gratitude to Mahamahopadhyaya, Pandita Kesari, Vidwan Sri Raja .S. Giri Acharya, for his guidance, support and encouragement in the finalisation of the different Volumes.

The present Volume is concerned with the the last seven Adhikaranas of the Third Pada and the First Adhikarana of the Fourth Pada of the First Adhyaya.

As done in the other Volumes, Vidwan Venkateshacharya has provided translations, with critical notes and discussions, of other commentaries on Sutra Bhashya, such as Sattarkadipavali, Tatva prakasika, Tatvapradipa, along with the Translation of Bhavadipa of Sri Raghavendra Swamigalu. He has also given the account of Tantradipika of Sri Raghavendra Tirtha, whenever necessary.

The present Volume - Volume No. 7. in the series of Volumes on Sri Madhva Bhashya and the Commentaries/Tippanis, thereupon, consists

of the Kannada Translation and Notes, pertaining to the following eight Adhikaranas:

1. *Devatadhikarana (the Eighth Adhikarana of the Third pada of the first Adhyaya);*
2. *Apashoodradhikarana, (the Ninth Adhikarana of the Third pada of the First Adhyaya);*
3. *Kampanadhikarana, (the Tenth Adhikarana of the Third Pada of the First Adhyaya);*
4. *Jyotiradhikarana (the Eleventh Adhikarana of the Third Pada of the First Adhyaya);*
5. *Akashadhikarana (the Twelfth Adhikarana of the Third Pada of the First Adhyaya);*
6. *Shusuptyadhikarana (The Thirteenth Adhikarana of the Third Pada of the First Adhyaya);*
7. *Brahmnadhikarana (the Fourteenth Adhikarana in the Third Pada of the First Adhyaya);*
8. *Aanumankadhikarana (the First Adhikarana of the Fourth Pada of the First Adhyaya).*

Thus, this Seventh Volume deals with, eight Adhikaranas, in Total - the first seven being the Adhikarana of the Third Pada, while the remaining One Adhikarana, belonging to the Foruth Pada of the First Adhyaya.

Vidwan Sri Bemmatti Venkateshacharya, has covered the detailed explanations given in all the commentaries stated above, in the sequential manner. He has very competently presented the main arguments of Purvapaksha and Siddhanta, and has upheld the superiority of Siddhanta of Madhvacharya, as the final interpretation.

Sri Venkateshacharya, presents, in a succinct manner, the summaries of arguments, developed in the different Adhikaranas listed above.

In order to facilitate the understanding of the main themes dealt with in the different Brahmasutras, covered in this Volume, I have ven-

tured to present brief English Translations of the Brahmasutras. These translations are based upon one of my earlier Books, published by Rashtriya Sanskrita Vidyapeetha, (deemed University) Tirupati.

Devataadhikarna

।। तदुपर्यपि बादरायणः सम्भवात् ।।

Badarayana opines that it is not only the human beings but also the divine entities who are obviously above the human beings, that are entitled to perform Upasana, acquire knowledge and perform deeds because they have all the faculties such as special intellect required for this purpose.

।। विरोधः कर्मणीति चेन्नानेकप्रतिपत्तेर्दर्शनात् ।।

The state of subordinate gods can be attained by the eligible human-beings through special deeds and Yajnas. But if in the very early stage nobody had attained this state, then the question is whom would the deeds and Yajnas be addressed to. Without anybody in the seat of particular gods, the deeds to be performed by the human beings, addressed to the Gods may have to be regarded as futile. We cannot argue like this because at any stage someone or the other would have attained some status of Godhood in the hierarchy of gods.

।। शब्द इति चेन्नातः प्रभवात्प्रत्यक्षानुमानाभ्याम् ।।

One may argue that at sometime there won't be any gods, and as such Vedas would be addressing to some non-existent entities, and that the statements made in the Vedas are futile and baseless. This is not correct. That the Gods are continually existent is confirmed by the statements available in the Vedas, by the clear perception of the great men and also by the use of deductive logic.

।। अत एव च नित्यत्वम् ।।

Since the Shabdas (words) are eternal, the continuity of gods explained in the Vedas has also to be accepted as eternal.

।। समाननामरूपत्वाच्चावृत्तावप्यविरोधो दर्शनात्स्मृतेश्च ।।

Even though those who occupy some positions of the gods get emancipated in due course of time, there would be many others who take their turn to occupy those positions and possess the same names and same characteristics. Hence the statements made in the Vedas cannot be regarded as baseless and untrue, there are many statements in the Srutis and in the Smrtis which corroborate these points.

।। मध्वादिष्वसम्भवादनधिकारं जैमिनिः ।।

Jaimini believes that in regard to some lores (vidyas) like madhu Vidya, Jyotistoma Vidya, gods do not have the eligibility because gods do not aspire for fruits which can be achieved by such lores.

।। ज्योतिषि भावाच्च ।।

Jaimini also holds the view that the gods who have already acquired the knowledge of all the objects are not eligible for acquisition of further knowledge which is instrumental for achieving Moksha. The presumption here is that the gods who have the knowledge would have also acquired the knowledge relevant for achieving Moksha and hence there is no need for acquiring further knowledge.

।। भावं तु बादरायणोऽस्ति हि ।।

On the contrary, Badarayana holds the view that even gods, who have acquired knowledge, have eligibility to the lores such as Madhu Vidya Jyotistoma Vidya and also further knowledge. He believes that by such knowledge, gods would be able to realise some special exuberance in their Bliss in the Moksha. There is no conflict between the views of Jaimini and those of Badarayana becuase Jaimini refers to the knoweldge and to the fruit acquired there from, in which gods do not have interest.

Apashudraadhikarna

।। शुगस्य तदानादरश्रवणात्तदाद्रवणात्सूच्यते हि ।।

Shudras do not have the eligibility in the Vedic lores. Further, it should be noted that in the context of conversation between Raikwamuni

and Pautrayana Raja, the word Shudra is used not in the sense of the person of Shudra Varna but in the sense of one afflicted with great sorrow. Raikwa addressed Pautrayana as Shudra because Pautrayana was in a state of deep remorse on learning about the disrespect shown by the Hamsa.

॥ क्षत्रियत्वावगतेश्चोत्तरत्र चैत्ररथेन लिङ्गात् ॥

The word Shudra in the context of conversation between Raikwa and Pautrayana cannot mean Shudra Varna because in the later portion it is clearly stated that Pautrayana possesses the special chariot drawn by Mules and from this one can infer that Pautrayana was a Kshatriya and not a Shdura.

॥ संस्कारपरामर्शात्तदभावाभिलापाच्च ॥

The Vedas prescribe that for eligibility in learning the Vedic lores, one should have the Samskara of Upanayana. It is also stated in the Vedas that Shduras do not have such Samskaras.

॥ तदभावनिर्धारणे च प्रवृत्तेः ॥

Gautama proceeds to perform the Upanayana Samskara for Satyakama only after he was convinced that Satyakama was not a Shudra. This clearly brings out that Upanayana Samskara cannot be performed for Shudras.

॥ श्रवणाध्ययनार्थप्रतिषेधात्स्मृतेश्च ॥

Further there was clear statements in the Srutis which prohibit Shudras even the hearing of the Vedas and also learning and understanding their meaning. There are also similar evidences in the Smrtis.

Kampanadhikarna

॥ कम्पनात् ॥

The entity referred to by the work Kampana is not the Vajrayudha as is commonly understood, but it means Lord Vishnu, because Kampana

means the regulator and activator of the Universe and this feature is applicable only to Lord Vishnu.

Jyotiradhikarna

।। ज्योतिर्दर्शनात् ।।

The word Jyotis appearing in Srutis should essentially mean Lord Vishnu and not Jiva because it is clearly specified in the Srutis that Vishnu himself is Jyotis. The word Jyotis considered here is the one which is known for its dual-meaning as Jiva and Vishnu (Ubhayatra Prasiddha).

Akashadhikarna

।। आकाशोऽर्थान्तरत्वादिव्यपदेशात् ।।

The word Akasha used in the Srutis, refers to Lord Brahma and not to the physical sky because in the same Sruti, Akasha is described to have features of not having name or form and of being Amrta and Brahma. These features are applicable only to Lord Vishnu.

Shushuptyadhikarna

।। सुषुप्त्युत्क्रान्त्योर्भेदेन ।।

The entity who perceives the Svapnas the objects in the dreams - is Lord Vishnu himself and not Jiva because the perceiver is described to have the feature of being totally detached (Asanga) and this feature is applicable only to Lord Vishnu. We cannot argue that Jiva and Vishnu are undifferentiated and hence both have the feature of undifferentiated and hence both in the Prakarana dealing with the topic of Sushupti (deep sleep) and that dealing with that jiva is closely embraced with the form of Vishnu called Prajna and thus Jiva and Vishnu are distinct from each other.

Brahmnadhikarna

।। पत्यादिशब्देभ्यः ।।

The word Brahma appearing in the Sruti refers to Lord Vishnu and not Chaturmukha Brahma because in the same Sruti Brahma is described

to be the commander of everything (Isa, Isana) supreme to everybody (Pati) and these features are applicable only to Lord Vishnu.

Anumaanikadhikarna

।। आनुमानिकमप्येकेषामिति चेन्न शरीररूपकविन्यस्त गृहीतेर्दर्शयति च ।।

The word Avyakta essentially (by Mukhya Vrtti) means Brahma and not Pradhana as assumed in some schools of thought, because there is clear evidence from the Srutis in this regard. It is because Lord Brahma called Avyakta resides as an inner motive force within the pradhana just as He resides inside all the bodies. Pradhana is also called as Avyakta in common parlance. Just as this wretched body of Jiva is subservient to the Supreme Lord residing in it, Pradhana is also under the control of the Lord Brhama called Avyakta.

।। सूक्ष्मं तु तदर्हत्वात् ।।

Only the entity which is very minute (Sokshma) is eligible to justify the essence of the meaning of the word Avyakta. i.e., unmanifest. Lord Vishnu alone has the capability of being microcosm and hence He alone can be called as Avyakta.

।। तदधीनत्वादर्थवत् ।।

All the word having Panchami Vibhakti indicating relative inferiority, are meaningful in the Lord Brhama because the features reflecting this inferiority are subservient to the Supreme Lord. Just as we often say that the King is victorious, even though the army subordinate to him was indeed victorious, in the same way we could meaningfully apply the words of inferiority substance to refer to the Supreme Lord.

ज्ञेयत्वावचनाच्च ।।

The words like Avyakta, Jiva etc mean Para Brahma by Mukya Vrtti (essential inference), and not Pradhana etc. because later in the same Sruti it is stated that Avyakta should be understood by all those desirous of

emancipation and that Pradhana etc. should be discarded. It is accepted that it is Lord Brahma who should be understood by all those desiring freedom from bondage.

।। वदतीति चेन्न प्राज्ञो हि ।।

We cannot argue that in some sruti it is stated that those who are desirous of Moksha could adore and meditate upon the entity which is adove the Mahattattwa and hence Avyakta-which is next in superiority to Mahat - is described to be the entity which should be understood by the Mumukshus. Because, even in that Sruti, Lord Vishnu is refferred to by the words Mahatam Para. Since Lord Vishnu is superior to every thing else. he is obviously superior to Mahattattwa.

।। प्रकरणात् ।।

In this Prakarana it is stated that one who performs Upasana of the entity described in it realises Vishnu Pada. In view of this, we could infer that Vishnu is the entity whose Upasana is prescribed here.

।। त्रयाणामेव चैवमुपन्यासः प्रश्नश्च ।।

In the relevant Chapter (Prakarana) Pradhana is not considered for explanation. Three themes descussed in that chapater of the Kathopanishad, in response to three questions of enquiry put forth by Nachiketa to Yama are concerned with the following :

i. Pacified mood of the father of Nachiketa.
ii. The lore of sacrificial fire leading to the heaven (Swargayagni Vidya) and
iii. Worshipping Lord Brahma.

Hence Avyakta does not mean Pradhana but Lord Brahma himself.

।। महद्वच ।।

The word Mahat though most commonly used to mean Mahattattwa, has essentially the meaning of Lord Brahma because the basic features

of being Great indicated by the word Mahat are essentially applicable to Lord Brahma and not to anybody else. In a similar way the word Avyakta essentially means Lord Brahma because the basic features reflected in the word Avyakta are applicable to Lord Brahma himself.

॥ चमसवदविशेषात् ॥

The word Chamasa in its common usage, means the sacrificial vessel but its prime meaning is taken as head. The context of the debate on the prime meaning of the word Avyakta is also similar to this. Hence prime meaning of Avyakta would be lord Brahma and not Pradhana.

The Jijnasus are indeed grateful to Vidwan Sri Bemmatti Venkateshacharya, for preparing such an extremely useful Volume on Brahmasutra Bhashya, covering several Commentaries and providing good critical comparative discussions.

We pray the the scholar author continues his pains-taking exercise to complete all the Four Adhyayas of Brahmasutras, in a similar manner with useful details.

Vachaspati Dr. V. R. Panchamukhi
Chancellor, Sri Gurusarvabhouma Sanskrit Vidyapeeth and
Executive Director,
Sri Gurusarvabhouma Samsodhan Mandir
Mantralayam

ಮುನ್ನುಡಿ

ಸೂತ್ರಪ್ರಸ್ಥಾನದ ಮೇಲೆ ಮಂತ್ರಾಲಯಪ್ರಭುಗಳು ಅನೇಕ ಕೃತಿಗಳನ್ನು ರಚಿಸಿರುವರು.ಅವುಗಳಲ್ಲಿ ನೇರವಾಗಿ ಸೂತ್ರಕ್ಕೆ ತಂತ್ರದೀಪಿಕಾ, ಅಧಿಕರಣಗಳಿಗೆ ಸಂಬಂಧಪಟ್ಟಂತೆ ನ್ಯಾಯಮುಕ್ತಾವಳೀ, ಟೀಕಾಕೃತ್ಪಾದರ ತತ್ವಪ್ರಕಾಶಿಕಾಕ್ಕೆ ಭಾವದೀಪ, ಶ್ರೀವ್ಯಾಸತೀರ್ಥರ ತಾತ್ಪರ್ಯಚಂದ್ರಿಕೆಗೆ ಪ್ರಕಾಶ, ಅಣುಭಾಷ್ಯಕ್ಕೆ ತತ್ವಮಂಜರಿ, ನ್ಯಾಯಸುಧೆಗೆ ಪರಿಮಳ, ಹೀಗೆ ಅವು ಪ್ರಸಿದ್ಧವಾಗಿವೆ. ಇವುಗಳಲ್ಲಿ 'ಭಾವದೀಪ' ಎಂಬ ತತ್ವಪ್ರಕಾಶಿಕಾ ವ್ಯಾಖ್ಯಾನವು ಸರ್ವ ವಿದ್ವನ್ಮಾನ್ಯವಾಗಿದೆ. ಬಾಲಸಂಘಮಪಿ ಎಂಬ ಶ್ರೀಮದಾಚಾರ್ಯರ ಗ್ರಂಥದ ಹಿರಿಮೆ ಶ್ರೀಗುರುರಾಜರ ಈ ಗ್ರಂಥಕ್ಕೂ ಅವರ ಅನುಗ್ರಹದಿಂದ ಅನ್ವಯವಾಗುತ್ತದೆ. ಸೂತ್ರಗಳ ಅಂತರಂಗವನ್ನು ಅವರು ಇದರಲ್ಲಿ ಹೇಗೆ ಸ್ಫುಟಗೊಳಿಸುತ್ತಾರೆ ಎಂಬುದು ಅಧ್ಯೇತೃಗಳಿಗೆ ವೇದ್ಯವಾಗುತ್ತದೆ.

ಆದ್ದರಿಂದಲೇ ಗುರುಗಣಸ್ತವನಕಾರರಾದ ಶ್ರೀವಾದೀಂದ್ರತೀರ್ಥರು ಈಗ್ರಂಥದ ಬಗ್ಗೆ ಹೇಳುತ್ತಾ ತತ್ವಪ್ರಕಾಶಿಕಾಕ್ಕೆ ಅನೇಕ ವ್ಯಾಖ್ಯಾನಗಳು ಇದ್ದರೂ ಭಾಷ್ಯ ಹಾಗೂ ಟೀಕೆಯ ಹೃದಯವು ಸುಲಭವಾಗಿ ಪಂಡಿತರಿಗೆ ತಿಳಿದಿರಲಿಲ್ಲ. ಆದರೆ ಶ್ರೀಗುರುಸಾರ್ವಭೌಮರು ಭಾವದೀಪ ಎಂಬ ಅದ್ಭುತವಾದ ಟಿಪ್ಪಣಿಯನ್ನು ರಚಿಸಿದ ಮೇಲೆ ಅದು ಸುಲಭವಾಗಿ ತಿಳಿಯಲು ಸಾಧ್ಯವಾಯಿತು. ಮೊದಲು 'ತತ್ವಪ್ರಕಾಶಿಕಾ' ಎಂಬ ಯುವತಿಯು ಇತರರು ರಚಿಸಿದ ವ್ಯಾಖ್ಯಾನ ಎಂಬ ಬಟ್ಟೆಯಿಂದ ತನ್ನ ಶರೀರವನ್ನು ಪೂರ್ಣ ಮುಚ್ಚಿಕೊಳ್ಳಲು ಆಗದೇ ನಾಚಿಕೆಯಿಂದ ಪಂಡಿತರ ಮುಂದೆ ಬರದೇ ಅಡಗಿ ಕುಳಿತ್ತಿದ್ದಳು. ಶ್ರೀರಾಘವೇಂದ್ರತೀರ್ಥರು 'ತತ್ವಪ್ರಕಾಶಿಕಾ' ಎಂಬ ಹೆಣ್ಣಿಗೆ 'ಭಾವದೀಪ' ಎಂಬ ಪೀತಾಂಬರವನ್ನು ಉಡಿಸಿದಾಗ 'ತತ್ವಪ್ರಕಾಶಿಕಾ' ಎಂಬ ಯುವತಿಯು ವಿದ್ವಾಂಸರ ಮುಂದೆ ಧೈರ್ಯದಿಂದ ಓಡಾಡಿದಳು ಎಂದು ಹೃದಯಂಗಮವಾಗಿ ವರ್ಣಿಸಿರುತ್ತಾರೆ. ಕೆಲವರು ತತ್ವಪ್ರಕಾಶಿಕೆಯಲ್ಲಿ ಕೆಲವೊಂದು ದೋಷಗಳಿವೆ ಎಂದು ಆರೋಪ ಮಾಡುತ್ತಾರೆ. ಅಂಥವರಿಗೆ ದಿಟ್ಟ ಉತ್ತರವನ್ನು ನಾನು ಕೊಡುತ್ತೇವೆ ಎಂದು ಶ್ರೀಗುರುರಾಜರು ತಮ್ಮ ಭಾವದೀಪದಲ್ಲಿ ''ನೂತನೈರುದಿತಾ'' ಎಂಬ ಶ್ಲೋಕದಿಂದ ಅರ್ವಾಚೀನರು ಹೇಳುವ ಯಾವ ದೋಷವೂ ನಮ್ಮ ಟೀಕಾಕೃತ್ಪಾದರ ಗ್ರಂಥಕ್ಕೆ ಕೂಡುವುದಿಲ್ಲ ಎಂಬುದನ್ನು ನಾವು ಸಮರ್ಥಿಸುತ್ತೇವೆಂದು ಹೇಳಿರುತ್ತಾರೆ.

of being Great indicated by the word Mahat are essentially applicable to Lord Brahma and not to anybody else. In a similar way the word Avyakta essentially means Lord Brahma because the basic features reflected in the word Avyakta are applicable to Lord Brahma himself.

॥ चमसवदविशेषात् ॥

The word Chamasa in its common usage, means the sacrificial vessel but its prime meaning is taken as head. The context of the debate on the prime meaning of the word Avyakta is also similar to this. Hence prime meaning of Avyakta would be lord Brahma and not Pradhana.

The Jijnasus are indeed grateful to Vidwan Sri Bemmatti Venkateshacharya, for preparing such an extremely useful Volume on Brahmasutra Bhashya, covering several Commentaries and providing good critical comparative discussions.

We pray the the scholar author continues his pains-taking exercise to complete all the Four Adhyayas of Brahmasutras, in a similar manner with useful details.

Vachaspati Dr. V. R. Panchamukhi
Chancellor, Sri Gurusarvabhouma Sanskrit Vidyapeeth and
Executive Director,
Sri Gurusarvabhouma Samsodhan Mandir
Mantralayam

ಮುನ್ನುಡಿ

ಸೂತ್ರಪ್ರಸ್ಥಾನದ ಮೇಲೆ ಮಂತ್ರಾಲಯಪ್ರಭುಗಳು ಅನೇಕ ಕೃತಿಗಳನ್ನು ರಚಿಸಿರುವರು.ಅವುಗಳಲ್ಲಿ ನೇರವಾಗಿ ಸೂತ್ರಕ್ಕೆ ತಂತ್ರದೀಪಿಕಾ, ಅಧಿಕರಣಗಳಿಗೆ ಸಂಬಂಧಪಟ್ಟಂತೆ ನ್ಯಾಯಮುಕ್ತಾವಳೀ, ಟೀಕಾಕೃತ್ಪಾದರ ತತ್ವಪ್ರಕಾಶಿಕಾಕ್ಕೆ ಭಾವದೀಪ, ಶ್ರೀವ್ಯಾಸತೀರ್ಥರ ತಾತ್ಪರ್ಯಚಂದ್ರಿಕೆಗೆ ಪ್ರಕಾಶ, ಅಣುಭಾಷ್ಯಕ್ಕೆ ತತ್ವಮಂಜರಿ, ನ್ಯಾಯಸುಧೆಗೆ ಪರಿಮಳ, ಹೀಗೆ ಅವು ಪ್ರಸಿದ್ಧವಾಗಿವೆ. ಇವುಗಳಲ್ಲಿ 'ಭಾವದೀಪ' ಎಂಬ ತತ್ವಪ್ರಕಾಶಿಕಾ ವ್ಯಾಖ್ಯಾನವು ಸರ್ವ ವಿದ್ವನ್ಮಾನ್ಯವಾಗಿದೆ. ಬಾಲಸಂಘಮಪಿ ಎಂಬ ಶ್ರೀಮದಾಚಾರ್ಯರ ಗ್ರಂಥದ ಹಿರಿಮೆ ಶ್ರೀಗುರುರಾಜರ ಈ ಗ್ರಂಥಕ್ಕೂ ಅವರ ಅನುಗ್ರಹದಿಂದ ಅನ್ವಯವಾಗುತ್ತದೆ. ಸೂತ್ರಗಳ ಅಂತರಂಗವನ್ನು ಅವರು ಇದರಲ್ಲಿ ಹೇಗೆ ಸ್ಫುಟಗೊಳಿಸುತ್ತಾರೆ ಎಂಬುದು ಅಧ್ಯೇತೃಗಳಿಗೆ ವೇದ್ಯವಾಗುತ್ತದೆ.

ಆದ್ದರಿಂದಲೇ ಗುರುಗಣಸ್ತವನಕಾರರಾದ ಶ್ರೀವಾದೀಂದ್ರತೀರ್ಥರು ಈಗ್ರಂಥದ ಬಗ್ಗೆ ಹೇಳುತ್ತಾ ತತ್ವಪ್ರಕಾಶಿಕಾಕ್ಕೆ ಅನೇಕ ವ್ಯಾಖ್ಯಾನಗಳು ಇದ್ದರೂ ಭಾಷ್ಯ ಹಾಗೂ ಟೀಕೆಯ ಹೃದಯವು ಸುಲಭವಾಗಿ ಪಂಡಿತರಿಗೆ ತಿಳಿದಿರಲಿಲ್ಲ. ಆದರೆ ಶ್ರೀಗುರುಸಾರ್ವಭೌಮರು ಭಾವದೀಪ ಎಂಬ ಅದ್ಭುತವಾದ ಟಿಪ್ಪಣಿಯನ್ನು ರಚಿಸಿದ ಮೇಲೆ ಅದು ಸುಲಭವಾಗಿ ತಿಳಿಯಲು ಸಾಧ್ಯವಾಯಿತು. ಮೊದಲು 'ತತ್ವಪ್ರಕಾಶಿಕಾ' ಎಂಬ ಯುವತಿಯು ಇತರರು ರಚಿಸಿದ ವ್ಯಾಖ್ಯಾನ ಎಂಬ ಬಟ್ಟೆಯಿಂದ ತನ್ನ ಶರೀರವನ್ನು ಪೂರ್ಣ ಮುಚ್ಚಿಕೊಳ್ಳಲು ಆಗದೇ ನಾಚಿಕೆಯಿಂದ ಪಂಡಿತರ ಮುಂದೆ ಬರದೇ ಅಡಗಿ ಕುಳಿತ್ತಿದ್ದಳು. ಶ್ರೀರಾಘವೇಂದ್ರತೀರ್ಥರು 'ತತ್ವಪ್ರಕಾಶಿಕಾ' ಎಂಬ ಹೆಣ್ಣಿಗೆ 'ಭಾವದೀಪ' ಎಂಬ ಪೀತಾಂಬರವನ್ನು ಉಡಿಸಿದಾಗ 'ತತ್ವಪ್ರಕಾಶಿಕಾ' ಎಂಬ ಯುವತಿಯು ವಿದ್ವಾಂಸರ ಮುಂದೆ ಧೈರ್ಯದಿಂದ ಓಡಾಡಿದಳು ಎಂದು ಹೃದಯಂಗಮವಾಗಿ ವರ್ಣಿಸಿರುತ್ತಾರೆ. ಕೆಲವರು ತತ್ವಪ್ರಕಾಶಿಕೆಯಲ್ಲಿ ಕೆಲವೊಂದು ದೋಷಗಳಿವೆ ಎಂದು ಆರೋಪ ಮಾಡುತ್ತಾರೆ. ಅಂಥವರಿಗೆ ದಿಟ್ಟ ಉತ್ತರವನ್ನು ನಾನು ಕೊಡುತ್ತೇವೆ ಎಂದು ಶ್ರೀಗುರುರಾಜರು ತಮ್ಮ ಭಾವದೀಪದಲ್ಲಿ ''ನೂತನೈರುದಿತಾ'' ಎಂಬ ಶ್ಲೋಕದಿಂದ ಅರ್ವಾಚೀನರು ಹೇಳುವ ಯಾವ ದೋಷವೂ ನಮ್ಮ ಟೀಕಾಕೃತ್ಪಾದರ ಗ್ರಂಥಕ್ಕೆ ಕೂಡುವುದಿಲ್ಲ ಎಂಬುದನ್ನು ನಾವು ಸಮರ್ಥಿಸುತ್ತೇವೆಂದು ಹೇಳಿರುತ್ತಾರೆ.

ಶ್ರೀಮದಾಚಾರ್ಯರ ಭಾಷ್ಯದ ಹೃದಯವನ್ನು ತಿಳಿಯಲು ಶ್ರೀಮಜ್ಜಯತೀರ್ಥರ ತತ್ವಪ್ರಕಾಶಿಕೆಯು ಬಹೂಪಕೃತವಾಗಿದ್ದರೂ, ಭಾಷ್ಯದ ಆಖೈರು ಅರ್ಥವನ್ನು ತಿಳಿಯಲು ಶ್ರೀಗುರುಸಾರ್ವಭೌಮರ ಭಾವದೀಪಿಕೆಯು ಅತ್ಯಂತ ಮಹತ್ತಾದ ಸ್ಥಾನವನ್ನು ಪಡೆಯುತ್ತದೆ.

'ಭಾವದೀಪ' ಎಂಬ ಹೆಸರೇ ಹೇಳುವಂತೆ ಇದು ಭಾವನೆಯ ದೀಪಗಳು ಅಂದರೆ ಮೂಲಗ್ರಂಥಕಾರರ ಭಾವನೆಗಳಿಗೆ ದೀಪವಿದ್ದಂತೆ, ಶಾಸ್ತ್ರವಾರಿಧಿಯಲ್ಲಿ ತೇಲಾಡುವ ಜಿಜ್ಞಾಸುಗಳಿಗೆ ಅನೇಕ ವಿಚಾರಗಳಲ್ಲಿ ಗೊಂದಲವು ಉಂಟಾಗುವುದು ಸಹಜ ಅಂತಹ ಗೊಂದಲ ನಿವಾರಣೆಯ ದಾರಿದೀಪ ಈ ನಮ್ಮ ಗುರುರಾಜರ 'ಭಾವದೀಪ'. ಟೀಕೆಯಲ್ಲಿ ಉದಾಹರಿಸಿದ ಕೃತಿ, ಉಪನಿಷತ್ತು, ಸೂತ್ರ, ವ್ಯಾಕರಣಸೂತ್ರ, ಪುರಾಣವಚನಗಳ ಅಪೂರ್ಣತೆ ಕಂಡಲ್ಲಿ ಅದರ ಪೂರ್ಣಪಾಠವನ್ನು ಕೊಡುವ ಮಹದುಪಕಾರವನ್ನು ಗುರುಗಳು ಈ ಭಾವದೀಪದಲ್ಲಿ ತೋರಿಸಿದ್ದಾರೆ. ಪ್ರಕೃತ ಭಾವದೀಪದ ಕನ್ನಡ ಅನುವಾದವು ಈಗಾಗಲೇ ೬ ಸಂಪುಟಗಳನ್ನು ಕಂಡಿದೆ. ಇದರ ಅನುವಾದಕರು ನಮ್ಮ ಶ್ರೀಮಠದ ವಿದ್ವಾಂಸರಾದ ವಿದ್ವಾನ್ ಬೆಮತ್ತಿ ವೇಂಕಟೇಶಾಚಾರ್ಯರು, ಆಕಾರದಲ್ಲಿ ವಾಮನದಂತೆ ಇದ್ದರೂ ಸಾಧನೆಯಲ್ಲಿ ತ್ರಿವಿಕ್ರಮರು. ಇವರ ಅನುವಾದದ ಶೈಲಿಯಂತೂ ಅನನ್ಯ ಸ್ಪಷ್ಟಶಬ್ದಗಳಿಂದ ಟಿಪ್ಪಣಿಕಾರರ ಹೃದಯವನ್ನು ತಮ್ಮ ಬಿಚ್ಚುನುಡಿಗಳಲ್ಲಿ ತೆರೆದಿಡುವ ಇವರ ಜಾಣ್ಮೆ ಅಪರೂಪ. ನಾಕಂಡ ಯುವವಿದ್ವಾಂಸರಲ್ಲಿ ಇವರು ಒಂದು ವಿಶಿಷ್ಟಸ್ಥಾನವನ್ನು ಅಲಂಕರಿಸಿರುತ್ತಾರೆ. ಇವರ ಅನುವಾದಿತ ಕೃತಿಯಲ್ಲಿ ಈ ೭ನೇ ಸಂಪುಟವು ಪ್ರಥಮಾಧ್ಯಾಯದ ಎಂಟು ಅಧಿಕರಣಗಳಿಂದ ಯುಕ್ತವಾಗಿದೆ. ೧. ದೇವತಾಧಿಕರಣ, ೨. ಅಪಶೂದ್ರಾಧಿಕರಣ, ೩. ಕಂಪನಾಧಿಕರಣ, ೪ ಜ್ಯೋತಿರಧಿಕರಣ, ೫. ಆಕಾಶಾಧಿಕರಣ, ೬. ಸುಷುಪ್ತ್ಯಾಧಿಕರಣ, ೭. ಬ್ರಾಹ್ಮಣಧಿಕರಣ, ೮. ಅನುಮಾನಿಕಾಧಿಕರಣ.

ಮೇಲೆ ಪ್ರಸಕ್ತವಾದ ಎಂಟು ಅಧಿಕರಣಗಳಲ್ಲಿ ವಿವರಿಸಿದ ಭಾವದೀಪದ ವಿಚಾರವನ್ನು ಸ್ಪಷ್ಟವಾಗಿ ಅನುವಾದಿಸುವುದರೊಂದಿಗೆ ೭ನೇ ಭಾಗದ ಭಾವದೀಪದಲ್ಲಿ ಶ್ರೀಪದ್ಮನಾಭತೀರ್ಥರ ಸತ್ತರ್ಕದೀಪಾವಳಿ ಹಾಗೂ ಶ್ರೀತ್ರಿವಿಕ್ರಮಪಂಡಿತರ ತತ್ವದೀಪಾ ಎಂಬ ಕೃತಿಯ ಅನುವಾದವು ಸುಂದರವಾಗಿ ಮೂಡಿಬಂದಿದೆ. ಇದರ ಅಧ್ಯಯನದಿಂದ ಶ್ರೀಗುರುರಾಜರ ಭಾವದೀಪಗ್ರಂಥದ ಪೂರ್ಣಜ್ಞಾನವಾಗುವುದರಲ್ಲಿ ಎರಡನೆಯ ಮಾತಿಲ್ಲ. ಈ ಎರಡು ನುಡಿಗಳನ್ನು ಗುರುಗಳ ಮೂಲಕ ಭಗವಂತನಿಗೆ ಸಮರ್ಪಿಸುತ್ತಿದ್ದೇನೆ.

ವಿ॥ ಎನ್. ವಾದಿರಾಜಾಚಾರ್ಯರು
ಪ್ರಾಂಶುಪಾಲರು, ಗುರುಸಾರ್ವಭೌಮ ವಿದ್ಯಾಪೀಠ,
ಮಂತ್ರಾಲಯ.

ನಾಕು ದೀಪಗಳ ಬೆಳಕಿನಲ್ಲಿ
ಮೂರು ಪಾದಗಳು

ಏಳನೆಯ ಸಂಪುಟ ಬರೆದು ಮುಗಿಸಿದಾಕ್ಷಣ ನನಗನಿಸಿದ್ದು ಹೀಗೆ - .....

''ಚಲಾವಣೆ ಇರುವಷ್ಟು ಕಾಲ ಹಣಕ್ಕೆ ಬೆಲೆ. ಚಲಾವಣೆ ಕಳೆದುಕೊಂಡ ಮೇಲೆ ಅದು ಕೇವಲ ಕಾಗದ ಅಥವಾ ಧಾತು. ಅದಕ್ಕೆ ಸಮಾಜದಲ್ಲಿ ಬೆಲೆಯಿಲ್ಲ. ಒಂದು ಗ್ರಂಥ ವಾಙ್ಮಯರೂಪದಲ್ಲಿ ಚಲಾವಣೆ ಪಡೆದುಕೊಂಡಾಗ ಮಾತ್ರ ..... ಅದು ನಮ್ಮಂತರಂಗದಲ್ಲಿ ಅಜರಾಮರ ಆಸೆ''ಳನ್ನು ಹುಟ್ಟಿಸಿ, ನಮ್ಮ ಬಾಳಿನ ಬೆಳಕಾಗುತ್ತದೆ !!!!!. ಇಲ್ಲದಿದ್ದರೆ ..... ಅದೂ ಕೂಡ ಒಂದು ಕಾಗದದ ಮೇಲೆ ಗೀಚಿದ ಅಕ್ಷರ ಮಾತ್ರ !!!!!!. ಬಹುಷಃ ಇದರಿಂದ ಹಾನಿಯೇ ಆದೀತು.....ಅದು ಕೇವಲ ಬೆಳಕಲ್ಲ. ಬಾಳಿನ ಕತ್ತಲೂ ಆದೀತು..... !!!!''

XXIV

''ಕಾಲೋ ಹ್ಯಯಂ ನಿರವಧಿಃ ವಿಪುಲಾ ಚ ಪೃಥ್ವೀ.....'' ಎಂಬ ಭವಭೂತಿಯ ಮಾತು ನೆನಪಾಗಿ ಸುಮ್ಮನಾದೆ.

೧. ಸಮಾಜದಲ್ಲಿ ಜ್ಞಾನ-ಅಜ್ಞಾನಗಳದ್ದೇ ಜಗಳ. ವಿವೇಕವಿಲ್ಲದೇ ಅಜ್ಞಾನವೇ ಗೆಲ್ಲುತ್ತಿದೆ. ಕಣ್ಣು ಬರೀ ಕನ್ನಡಿ..... ಕಾಲಿಗೆ ಕಣ್ಣಿಲ್ಲ ..... ಹೆಜ್ಜೆ ಇಟ್ಟದ್ದೇ ದಾರಿ, ಹಾಡಿದ್ದೇ ರಾಗ, ಕುಣಿದದ್ದೇ ನಾಟ್ಯ, ಬರೆದದ್ದೇ ಪ್ರಬಂಧ, ಕೂಡಿದ್ದೇ ಸಭೆ.....

ಇವೆಲ್ಲಾ ನಮಗೇಕೆ ..... ?? ಅಜ್ಞಾನದ ಬಾಲಕ್ಕೇಕೆ ಜೋಲಬೇಕು .....??

ನರಳಾಟ, ಮರಳಾಟ, ಉರುಳಾಟ, ತಾಕಲಾಟಗಳ ಬಿರುಗಾಳಿಗೇಕೆ ಎದೆ ಉಬ್ಬಿಸಬೇಕು .....??

ದುರ್ವಿಚಾರವೆಂಬ ಪಕ್ಷಿ ಈಕ್ಷಿಸುತ್ತಿದೆ !! ಸದ್ವಿಚಾರವೆಂಬ ಗವಿಯ ಒಳಹೊಕ್ಕೋಣ....

ಇದು ಕೂಪಮಂಡೂಕದರ್ಶನವಲ್ಲ. ಅಣುವಿನಲ್ಲಿರುವ ವಿಶ್ವಶಕ್ತಿಯ ದರ್ಶನ..... ಪ್ರದರ್ಶನ..... ದಿವ್ಯದರ್ಶನ. ಇದುವೇ ಅನಂತದ ದರ್ಶನವೂ ಕೂಡ.

ಅವಿವೇಕ ಪ್ರಪಂಚವನ್ನು ಅಚ್ಚುಕಟ್ಟಾಗಿ ನಡೆಸುತ್ತಿರುವವನು ಶಿಸ್ತಿನ ಸಿಪಾಯಿ ಮಹಾವಿಷ್ಣು. ವಿವೇಕಿ ಪ್ರಪಂಚವನ್ನೂ ಕೂಡ ಆಳುತ್ತಿರುವವನೂ ಅವನೇ. ಅಂಥ ದೇವನಿಗೆ 'ವಜ್ರ' ಎಂಬ ಬಿರುದು ನೀಡಿತು ಈ ಸಂಪುಟದಲ್ಲಿರುವ ಕಂಪನಾಧಿಕರಣ.

೨. ಕೆಲವರು ಬದುಕು ಸುಂದರವೆಂದರು. ಕೆಲವರು ಸಾವು ಸುಂದರವೆಂದರು. ಎರಡೂ ಸುಂದರವಲ್ಲ..... ಅರಿವು ಸುಂದರ. ಅರಿವಿನ ಗರ್ಭದಲ್ಲಿರುವ ಸುಖವು ಸುಂದರ. ಕೊನೆ ಮೊದಲಿಲ್ಲದ ಸುಖದ ತಾಣ ಮತ್ತೂ ಸುಂದರ. ಇದರ ಯಜಮಾನ ಸುಂದಾತಿಸುಂದರ. ಎಲ್ಲ ಬೆಳಕುಗಳ ಕಾಂತಿ ಇವನೆದುರು ನಿಸ್ತೇಜ. ಇವನು ಮಹಾಸುಂದರನಷ್ಟೇ ಅಲ್ಲ ಮಹದಾನಂದನೂ ಕೂಡ, ಮಹಾಜ್ಯೋತಿಯೂ ಕೂಡ.

'ವಿಷ್ಣುರೇವ ಜ್ಯೋತಿಃ' 'ವಿಷ್ಣುರೇವ ಆನಂದಃ' ಹೀಗೆಂದಿತು ಮುಂದಿನ ಜ್ಯೋತಿರಧಿಕರಣ.

೩. ನಮ್ಮಂತರಂಗದಲ್ಲೇ ವಿಶ್ವಶಕ್ತಿ ಅಡಗಿದೆ. ಇದನ್ನು ಹೊರಜಗತ್ತಿನಲ್ಲೂ ಕಾಣಬೇಕು. ಸೌಜನ್ಯವೆಂಬ ಹೂ..... ಬುದ್ಧಿಯೆಂಬ ಪತ್ರ..... ಸತ್ಯವೆಂಬ ದೀಪ ..... ಪ್ರೀತಿಯೆಂಬ

ನೈವೇದ್ಯ..... ನೀಡಿದಾಗ ಹೃದಯಪುಂಡರೀಕದಲ್ಲಿ ಅಡಗಿದ ವಿಟ್ಠಲ ಎಲ್ಲೆಡೆಯೂ ಕಾಣುವನು. ಎಲ್ಲೆಡೆ ಕಾಣುವುದರಿಂದಲೇ ಇವನು ಆಕಾಶ. ಅದಕ್ಕಾಗಿಯೇ ಹೊರಟಿತು ಆಕಾಶಾಧಿಕರಣ.

೪. ನಿದ್ರೆಯಲ್ಲಿ ಕನಸು ಕಾಣುವುದುಂಟು..... ಎಚ್ಚರದಲ್ಲಿ ಕನಸು ಕಾಣುವುದುಂಟು..... ಎಚ್ಚರದಲ್ಲಿ ನಿದ್ರಿಸುವವನಿಗೆ ಕನಸು-ನನಸುಗಳ ವ್ಯತ್ಯಾಸ ತಿಳಿಸುವುದೆಂತು..... ?

ಕೆಲವರಿಗೆ ಸಂಪತ್ತಿನ ಕನಸು, ಕೆಲವರಿಗೆ ಕೀರ್ತಿಯ ಕನಸು. ಸಂಪತ್ತು ಹಾಗೂ ಕೀರ್ತಿಗಳು ಇಬ್ಬರು ತುಂಟ ಬಾಲೆಯರು. ತನ್ನನ್ನು ದೈನ್ಯದಿಂದ ಬೇಡುವವರ ಬಳಿ ಬರಲು ಈ ಬಾಲೆಯರಿಗೆ ಬಲು ಅಸಹ್ಯ.....

ತಿಳಿಗೇಡಿ ಸಾಹಸಿ ಹುಡುಗನಿಗೆ ಇವರು ವಶವಾಗುವರು !!! ಸಮಾಧಾನ ಚಿತ್ತದಿಂದ ಅಂತರಂಗದಲ್ಲಿ ಕರ್ತವ್ಯ ಪರಿಪಾಲಿಸುವವನನ್ನು ಈ ಬಾಲೆಯರು ಬಿಗಿದಪ್ಪುವರು. ಕರ್ತವ್ಯ ಪರಿಪಾಲಿಸದೇ ಕೀರ್ತಿಯ ಬೆನ್ನತ್ತಿದವರಿಗೆ ''ತಿರುಕನೊಬ್ಬ ಊರ ಹೊರಗೆ ಮುರುಕು ಧರ್ಮಶಾಲೆಯಲ್ಲಿ ಕನಸು ಕಂಡನು'' ಎಂಬಂತೆ ಮರೀಚಿಕೆ ಮಾತ್ರ.

''ಕನಸು ಕಾಣುವವನು ನಾನಲ್ಲ. ನನಸೂ ನನ್ನ ಸ್ವತ್ತಲ್ಲ'' ಎಂದು ಕೈಮುಗಿದು ಈಶನಲ್ಲಿ ಶರಣೆಂದವನೇ ನಿಜ ಸಾಹಸಿಗ.

ಎಲ್ಲರ ಕನಸುಗಳನ್ನು ಸೃಷ್ಟಿಸಿ, ಎಕ್ಕೆಕನಾಗಿ ನೋಡುತ್ತಿರುವ ಮಹಾವ್ಯಕ್ತಿ ಆ ಪರಮಚೇತನ ಮಾತ್ರ. ಇದುವೇ ಸುಪ್ತಪ್ರಧಿಕರಣದ ಹೃದಯ.

೫. 'ಕೆಲವರಿಗೆ ಜಾತಿಯೇ ಹೆಚ್ಚು..... ಕೆಲವರಿಗೆ ಜಾತಿಯಿಲ್ಲವೆಂಬ ಹುಚ್ಚು.....' 'ನಾನು ಹೆಚ್ಚು.... ನೀನು ಹುಚ್ಚ .....' 'ದೀಪ ಹಚ್ಚುವ ಕೈಯಲ್ಲಿ ಸನಾತನ ಸಂಸ್ಕೃತಿಯ ದಹನವೇ ಹೆಚ್ಚು !!!' 'ನಾನು ಬ್ರಾಹ್ಮಣ...' 'ನಾನು ಬುದ್ಧ...' 'ನಾನು ಪ್ರಬುದ್ಧ...' 'ನಾನು ಸಂಪ್ರಬುದ್ಧ...' 'ನಾನು ಸುಸಂಪ್ರಬುದ್ಧSSSS' 'ನಾನು ಸುಸುಸುಸುಸಂಪ್ರಬುದ್ಧSSSS'.

ಇಂಥದ್ದೇ ಗತ್ತಿನ ಸಾಮ್ರಾಜ್ಯವಿದು. ಆದರೆ ಬ್ರಾಹ್ಮಣನೇ ಇರಲಿ, ಬುದ್ಧನೇ ಇರಲಿ, ಸಿದ್ಧನೇ ಇರಲಿ, ಪ್ರಸಿದ್ಧನೇ ಇರಲಿ, ಒಳಗಣ್ಣು ತೆರೆಯದವ ಶುದ್ಧ ನಿರ್ಬುದ್ಧ. ಅಪ್ರಬುದ್ಧ.

ನಿಜವಾದ ಬ್ರಾಹ್ಮಣ ಎಂದರೆ....!! ಮಹಾವಿಷ್ಣು ಮಾತ್ರ. ಅವನೇ ಮಹಾಬ್ರಾಹ್ಮಣ. ಅವನೇ ಮಹಾಬುದ್ಧ. ಇದುವೇ ಕೊನೆಯ ಬ್ರಾಹ್ಮಣಾಧಿಕರಣದ ಸಾರ.

XXVI

ಇಲ್ಲಿಗೆ ಮೊದಲ ಅಧ್ಯಾಯದ ಏಳು ಸಂಪುಟಗಳೆಂಬ ಶಿಶುಗಳ ಪ್ರಸವ ನಿರಾತಂಕವಾಯಿತು. ಏಳು ಹೆಣ್ಣುಮಕ್ಕಳ ಗರ್ಭ ಧರಿಸಿದ ಮೂರು ಪಾದಗಳೆಂಬ ಮಾತೆಯರು ಮಾನ್ಯರಾದರು... ನಾವು ಧನ್ಯರಾದೆವು.....

ಶ್ರೀಸುಬುಧೇಂದ್ರತೀರ್ಥರು

ಪರಮಪೂಜ್ಯ॥ ಶ್ರೀಸುಬುಧೇಂದ್ರತೀರ್ಥಶ್ರೀಪಾದಂಗಳವರು ಕಠಿಣ ಪರಿಶ್ರಮದಿಂದ ಏಳು ಶಿಶುಗಳನ್ನು ನಿಮ್ಮ ಉಡಿಯಲ್ಲಿ ತುಂಬಿರುವರು. ಈ ಕಂದಮ್ಮಗಳನ್ನು ತಟ್ಟಿ, ಮಲಗಿಸದೇ ಉಳಿಸಿ ಬೆಳೆಸಿದರೆ ಸಾಕು.

ಇಂದು ಮಾತ್ರ ನಿಮಗೆ ಇವು ಶಿಶುಗಳು. ಮುಂದೊಂದು ದಿನ ನೀವೇ ಇವರ ಶಿಶುಗಳು.

ಈ ಶಿಶುಗಳನ್ನು ಬೆಳೆಸುವುದೆಂದರೆ ಕಾಮಧೇನು ಕಲ್ಪವೃಕ್ಷಗಳನ್ನು ಬೆಳೆಸಿದಂತೆ.

ಅನಂತಕಾಲದ ತನಕ ನಿಮ್ಮ ಪೋಷಣೆಯೇ ಈ ಶಿಶುಗಳ ಗುರಿ.

ಪರಮಪೂಜ್ಯ ॥ ಶ್ರೀಪಾದಂಗಳವರ ವಿಚಾರವಂತಿಕೆ ಹೇಳತೀರದು. ಇವರು ಕೇವಲ ಹಂಸರಲ್ಲ. ರಾಯರ ಭಕ್ತರಲ್ಲಿ ಗುಣವನ್ನಷ್ಟೇ ಹೀರಿ, ಪರಮಹಂಸರಾಗಿರುವರು. ಬೇಕಾದ್ದನ್ನು ಸ್ವೀಕರಿಸಬಲ್ಲರು. ಬೇಡವಾದ್ದನ್ನು ಬಿಡಬಲ್ಲರು.

ಸಂಪ್ರದಾಯ ಬಿಟ್ಟು, ಹೊಸತನ್ನು ಹುಟ್ಟುಹಾಕಲಿಲ್ಲ. ಮಾಡಿದ್ದು ಹಳತು ಅಲ್ಲವೇ ಅಲ್ಲ. ಇವರಲ್ಲಿ ಇವರದ್ದೇ ಆದ ದಿವ್ಯ ಆತ್ಮಶಕ್ತಿಯಿದೆ.

ಶ್ರೀಗಳಲ್ಲಿ ಪಾಂಡಿತ್ಯದ ಶಾರ್ದೂಲವಿಕ್ರೀಡಿತವಿದ್ದರೂ ವಿದ್ಯೆಯ ವಿನಯವಿದೆ. ಬಿಡುವಿಲ್ಲದ ಕಾರ್ಯಗಳ ಪ್ರವಾಹವಿದೆ.

ಶ್ರೀಗಳವರನ್ನು ನೋಡಿ ಹಲವರು ಪುಂಖಾನುಪುಂಖವಾದ ಕಾರ್ಯಗಳ ಪ್ರವಾಹಕ್ಕೆ ಉಗಮಸ್ಥಾನ ಎಂದರು. ಕೆಲವರು ಭವ್ಯಮಂದಿರ ಎಂದರು. ಕೆಲವರು ಎಲ್ಲ ಅನುಕೂಲವಿರುವ ದಿವ್ಯ ಅರಮನೆ ಎಂದರು.

ಇವರಿಗೆಲ್ಲ ಶ್ರೀಗಳು ''ಬಯಲಿಗಿಂತ ಚಿಕ್ಕದು'' ಎಂದು ಉತ್ತರಿಸಿದರು.

ನಿಜವೆಂದರೆ ಬಯಲನ್ನೂ ಚಿಕ್ಕದು ಮಾಡಿದ ಉದ್ಯೋಗ ಶ್ರೀಗಳವರದ್ದು. ಎಲ್ಲರಿಗೂ ಕೊಟ್ಟು ಇವರು ದೊಡ್ಡವರಾದರು. ದೊಡ್ಡವರು ತಮಗಾಗಿ ಏನು ಇಟ್ಟುಕೊಳ್ಳುವುದಿಲ್ಲ. ಶ್ರೀಗಳು ಕೊಟ್ಟು ಶ್ರೀಮಂತರಾದರು. ನಾವು ತೆಗೆದುಕೊಂಡು ಧನ್ಯರಾದೆವು.

ಶ್ರೀಗಳಿಗೆ ಜ್ಞಾನದ ಓಟದ ಅವಸರವಿದೆ. ಆದರೂ ಪ್ರತಿಹೆಜ್ಜೆ ಬಲು ಅಚ್ಚುಕಟ್ಟು.

ಶ್ರೀಗಳಿಗೆ ನಿಂತೇ ಗೊತ್ತಿಲ್ಲ. ನಿರಂತರ ನಡೆಯುವ ನಡೆಗಾರರಿರುವರು. ಎದ್ದಾಗ..... ನಿಂತಾಗ ..... ಕುಳಿತಾಗ ..... ಮಲಗಿದಾಗಲೂ ನಡೆಯುತ್ತಲೇ ಇರುವವರು. ನಾವು ನಡೆಯುತ್ತಿದ್ದೇವೆಂದು ತಿಳಿದು ನಿಂತಲ್ಲೇ ನಿಂತಿರುವವರು. ಕುಳಿತಲ್ಲೇ ಕುಳಿತವರು. ನಮಗೆ ನಡೆದು ಗೊತ್ತಿಲ್ಲ. ಶ್ರೀಗಳಿಗೆ ನಿಂತು ಗೊತ್ತಿಲ್ಲ.

ಆದರೆ ಮುಂದೆ ನಡೆಯುವ ಹುಚ್ಚು ಹಂಬಲ ಮಾತ್ರ ನನಗಿದೆ. ಅದಕ್ಕಾಗಿ ಶ್ರೀಗಳೇ ಶಕ್ತಿ ತುಂಬಿ ''ನಡೆ ಮುಂದೆ..... ನಡೆ ಮುಂದೆ .....'' ಎಂದು ಹರಸಲಿ.

ಈಗ ಭಾವದೀಪ ಬೃಹತ್‌ಯೋಜನೆಯ ಭಾರವನ್ನು ಶ್ರೀಪಾದರು ವಿ॥ ಎನ್. ವಾದಿರಾಜಾಚಾರ್ಯರಿಗೆ ಆಶೀರ್ವಾದಪೂರ್ವಕವಾಗಿ ವಹಿಸಿರುವರು. ಇನ್ನು ಮುಂದೆ ಇವರ ಮೂಲಕ ಮಿಂಚಿನ ವೇಗದಲ್ಲಿ ಈ ಯೋಜನೆ ಸಾಗಬೇಕೆಂದು ಶ್ರೀಗಳವರ ಮುತುವರ್ಜಿ. ಗುರುಸಾರ್ವಭೌಮವಿದ್ಯಾಪೀಠದ ಪ್ರಾಂಶುಪಾಲರಾದ ವಿ॥ ಎನ್. ವಾದಿರಾಜಾಚಾರ್ಯರಿಗೆ ಅನಂತ ನಮಸ್ಕಾರಗಳು ಹಾಗೂ ಕೃತಜ್ಞತೆಗಳು.

ಲೇಖಕ - ಬೆಮ್ಮತ್ತಿ ವೇಂಕಟೇಶಾಚಾರ್ಯ

ಅನುಕ್ರಮಣಿಕಾ

ಅನುಗ್ರಹ ಸಂದೇಶ	IX-XII
ಪ್ರಾಸ್ತಾವಿಕ - (ಆಂಗ್ಲಭಾಷೆ)	XIII-XX
ಮುನ್ನುಡಿ	XXI-XXII
ನಾಕು ದೀಪ	XXIII-XXVII
ಅಧಿಕರಣ ಸಾರಾಂಶ	XXIX-LXXII
ದೇವತಾಧಿಕರಣ	೧-೧೯೪
ಅಪಶೂದ್ರಾಧಿಕರಣ	೧೯೫-೨೯೪
ಕಂಪನಾಧಿಕರಣ	೨೯೫-೩೨೪
ಜ್ಯೋತಿರಧಿಕರಣ	೩೩೫-೩೬೦
ಆಕಾಶಾಧಿಕರಣ	೩೬೧-೩೯೦
ಸುಷುಪ್ತ್ಯಧಿಕರಣ	೩೯೧-೪೨೦
ಬ್ರಾಹ್ಮಣಾಧಿಕರಣ	೪೨೧-೪೬೪
ಆನುಮಾನಿಕಾಧಿಕರಣ	೪೬೫-೬೩೨

ತತ್ತ್ವಪ್ರಕಾಶಿಕಾ - ಭಾವದೀಪ

ಸಾರಾಂಶ

ದೇವತಾಧಿಕರಣ

ಈ ಸಂಪುಟದಲ್ಲಿ ದೇವತಾಧಿಕರಣದಿಂದ ಪ್ರಾರಂಭಮಾಡಿ ಮೂರನೆಯ ಪಾದವು ಮುಗಿದು, ನಾಕನೆಯ ಪಾದದ ಆನುಮಾನಿಕಾಧಿಕರಣದ ವಿಷಯವು ಸೇರಿದೆ. ಮೂರನೆಯ ಪಾದವು ಉಭಯತ್ರಪ್ರಸಿದ್ಧವಾದ ನಾಮಲಿಂಗಾತ್ಮಕಶಬ್ದಗಳ ಸಮನ್ವಯಕ್ಕಾಗಿ ಹೊರಟಿದೆ. ಇಂಥ ಪಾದದಲ್ಲಿ ದೇವತಾಧಿಕರಣವು ಹೇಗೆ ಸಂಗತವಾಗುತ್ತವೆಂಬುದನ್ನು ವಿಚಾರ ಮಾಡುವ ಮೂಲಕ ಸಮಗ್ರ ದೇವತಾಧಿಕರಣದ ಸಾರವನ್ನು ತಿಳಿಯೋಣ. ದೇವತಾಧಿಕರಣದಲ್ಲಿ ಯಾವುದೇ ಶಬ್ದಗಳನ್ನು ಸಮನ್ವಯ ಮಾಡುತ್ತಿಲ್ಲ. ಮುಂದಿನ ಅಪಶೂದ್ರಾಧಿಕರಣದಲ್ಲಿಯೂ ಯಾವುದೇ ಶಬ್ದವನ್ನು ಸಮನ್ವಯ ಮಾಡುತ್ತಿಲ್ಲ. ಆದ್ದರಿಂದ ಸಮನ್ವಯಾಧ್ಯಾಯದಲ್ಲಿ ಈ ಎರಡು ಅಧಿಕರಣಗಳ ಕೃತ್ಯವೇನು? ಎಂದು ಸಾಮಾನ್ಯವಾಗಿ ಬರುವಂತಹ ಪ್ರಶ್ನೆ. ಆದರೆ ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂಬ ದೊಡ್ಡ ಶಂಕಾಪಿಶಾಚಿಯು ಪ್ರಾಪ್ತವಾದಾಗ ಅದನ್ನು ನಿರಾಕರಿಸುವುದಕ್ಕಾಗಿ ಈ ಅಧಿಕರಣವನ್ನು ಇಲ್ಲಿ ಉಲ್ಲೇಖಿಸುವುದು ಅತ್ಯಂತ ಅನಿವಾರ್ಯ.

ಹಿಂದಿನ ಅಧಿಕರಣದಲ್ಲಿ ಮನುಷ್ಯರಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವನ್ನು ಸಮರ್ಥಿಸಿದರು. ಮನುಷ್ಯರಿಗೆ ಅಧಿಕಾರವಿದೆಯೆಂದು ಹೇಳಿದಾಗ, ದೇವತೆಗಳಿಗೆ ಅಧಿಕಾರವಿಲ್ಲವೇನು? ಎಂಬ ಪ್ರಶ್ನೆಯು ಹುಟ್ಟುತ್ತದೆ. ಅದಕ್ಕೆ ಉತ್ತರಿಸುವುದಕ್ಕಾಗಿ ದೇವತೆಗಳಿಗೆ, ಋಷಿಗಳಿಗೆ, ಗಂಧರ್ವ ಮೊದಲಾದವರೆಲ್ಲರಿಗೂ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿದ್ದೇ ಇರುತ್ತದೆ. ಆದರೆ ತಿರ್ಯಕ್‌ಪ್ರಾಣಿಗಳಿಗೆ ಅಧಿಕಾರವಿಲ್ಲದಕಾರಣ ಮನುಷ್ಯರಿಗೆ ಅಧಿಕಾರವಿದೆಯೆಂದು ಸೂತ್ರಕಾರರು ಹೇಳಿರುತ್ತಾರೆ. ಮನುಷ್ಯಪದವನ್ನು ಪ್ರಯೋಗಿಸಿದ್ದರಿಂದ ದೇವತೆಗಳಿಗೆ ಅಧಿಕಾರವಿಲ್ಲವೆಂದು ಸೂತ್ರಕಾರರ ಅಭಿಪ್ರಾಯವಲ್ಲ. ಬ್ರಹ್ಮವಿದ್ಯೆಯನ್ನು ಸಂಪಾದಿಸಲು ಯಾವ ವಿಶಿಷ್ಟಬುದ್ಧಿಯು ಆವಶ್ಯಕವೋ, ಅಂತಹ ವಿಶಿಷ್ಟಬುದ್ಧಿಯು ತಿರ್ಯಕ್ ಪ್ರಾಣಿಗಳಲ್ಲಿಲ್ಲದ ಕಾರಣ ಅವುಗಳಿಗೆ ಅಧಿಕಾರವಿಲ್ಲವೆಂಬುದು ಸೂತ್ರಕಾರರ ಹೃದಯ.

ಪ್ರಾಸಂಗಿಕವಾದ್ದರಿಂದ ಈ ವಿಷಯವನ್ನು ಇಲ್ಲಿಯೇ ಸಮರ್ಥಿಸಬೇಕು. ಆದ್ದರಿಂದ ಮೂರನೆಯ ಅಧ್ಯಾಯದ ನಾಲ್ಕನೆಯ ಪಾದದಲ್ಲಿ ಜ್ಞಾನಾಧಿಕಾರವು ಯಾರಿಗೆಲ್ಲಾ ಇರುತ್ತದೆಂದು ವಿಚಾರ ಮಾಡಿದ್ದರಿಂದ ಅಲ್ಲಿಯೇ ಈ ಅಧಿಕರಣದ ಪ್ರಮೇಯವನ್ನು ವಿಚಾರಮಾಡಬಹುದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸಿದಂತಾಗುತ್ತದೆ. ಕೇವಲ ಜ್ಞಾನಾಧಿಕಾರದ ವಿಚಾರವಷ್ಟೇ

ಇಲ್ಲಿ ಪ್ರಸಕ್ತವಾಗಿಲ್ಲ. ಮನುಷ್ಯಪದದಿಂದ ವ್ಯಾವರ್ತ್ಯವಾದ ವಿಷಯ ಯಾವುದು ಎಂಬುದನ್ನು ಇಲ್ಲಿ ವಿಮರ್ಶಿಸಬೇಕಾಗಿದೆ. ಆದ್ದರಿಂದ ಮೂರನೇ ಅಧ್ಯಾಯದಲ್ಲಿ ಈ ಅಧಿಕರಣವನ್ನು ಹೇಳಬೇಕಾಗಿದ್ದರೂ ಪ್ರಾಸಂಗಿಕವಾದ್ದರಿಂದ ಇಲ್ಲಿಯೇ ಹೇಳಿರುತ್ತಾರೆ.

ಉದಾಹರಣೆ : ಭೋಕ್ತ್ರಧಿಕರಣದಲ್ಲಿ ಮುಕ್ತರಿಗೂ, ಪರಮಾತ್ಮನಿಗೂ ಭೇದವನ್ನು ಸಮರ್ಥನೆ ಮಾಡಿರುವುದರಿಂದ ನಾಲ್ಕನೆಯ ಅಧ್ಯಾಯದಲ್ಲಿ ಸಂಗತವಾಗುತ್ತದೆ. ಆದರೂ ಜೀವಾಭೇದವಿರುವುದರಿಂದ ಎಂಬ ಯುಕ್ತಿವಿರೋಧ ಪರಿಹಾರ ಮಾಡುತ್ತದೆಂಬ ಕಾರಣದಿಂದ ಎರಡನೆಯ ಅಧ್ಯಾಯದಲ್ಲೇ ಹೇಗೆ ಭೋಕ್ತ್ರಧಿಕರಣವನ್ನು ಸೇರಿಸಿದ್ದಾರೋ, ಅದರಂತೆ ಈ ದೇವತಾಧಿಕರಣವೂ ಸಹ ಇಲ್ಲಿಯೇ ಸಂಗತವಾಗುತ್ತದೆ ಹೊರತು, ಮೂರನೆಯ ಅಧ್ಯಾಯದಲ್ಲಲ್ಲ.

ವಿಚಾರ ಮಾಡಿದರೆ ಮೂರನೆಯ ಅಧ್ಯಾಯದಲ್ಲೂ ಸಹ ಇದು ಸಂಗತವಾಗುವುದಿಲ್ಲ. ಏಕೆಂದರೆ ಸಾಧನೆಯ ಬಗ್ಗೆ ಮಾತ್ರ ಮೂರನೆಯ ಅಧ್ಯಾಯವು ವಿಚಾರವನ್ನು ಪ್ರತಿಪಾದನೆ ಮಾಡಬೇಕು. ದೇವತೆಗಳ ಜ್ಞಾನಾಧಿಕಾರವು ಸಾಧನೆಯಲ್ಲಿ ಸೇರದಿದ್ದಾಗ ಅಲ್ಲಿಯೂ ಸಹ ಹೇಗೆ ಸಂಗತವಾಗುತ್ತದೆ? ಅಂತೂ ಯಾವುದೇ ಅಧ್ಯಾಯದಲ್ಲೂ ಈ ವಿಚಾರವೂ ಅಸಂಗತವೆಂದು ತಿಳಿಯುತ್ತಿರುವಾಗ ಪ್ರಸಕ್ತವಾದಾಗ ಪ್ರಾರಂಭದಲ್ಲೇ ಇದನ್ನು ಉಲ್ಲೇಖ ಮಾಡುವುದು ಹೆಚ್ಚು ಸ್ವರಸ. ಆದ್ದರಿಂದ ಸಮನ್ವಯಾಧ್ಯಾಯದಲ್ಲಿ ದೇವತಾಧಿಕರಣಕ್ಕೆ ಅಸಾಂಗತ್ಯದೋಷವಿಲ್ಲವೆಂದು ತಿಳಿಯಬೇಕು.

ದೇವತಾ ಪದವಿಯು ನಿತ್ಯವಾದ್ದರಿಂದ ದೇವತೆಗಳಿಗೆ ಮೋಕ್ಷವೇ ಇರುವುದಿಲ್ಲ. ಆದ್ದರಿಂದಲೇ ಮುಮುಕ್ಷಾವೂ ಸಹ ಕೂಡುವುದಿಲ್ಲ. ಅಧಿಕಾರವಿಶೇಷಣವಾದ ಮುಮುಕ್ಷಾ ಎಂಬುದು ಇಲ್ಲದ ಕಾರಣ, ದೇವತೆಗಳು ಬ್ರಹ್ಮವಿದ್ಯೆಯಲ್ಲಿ ಅಧಿಕಾರಿಗಳಾಗುವುದಿಲ್ಲವೆಂದು ಸಂಶಯ ಬರುತ್ತದೆ. ಇದರ ಪರಿಹಾರಕ್ಕಾಗಿ ದೇವತಾಧಿಕರಣವು ಹೊರಟಿದೆ. ಅಂದರೆ ದೇವತೆಗಳ ಪದವು ನಿತ್ಯವಲ್ಲ. ಆದ್ದರಿಂದಲೇ ದೇವತೆಗಳು ಮೋಕ್ಷವನ್ನು ಬಯಸಲು ಬ್ರಹ್ಮಜ್ಞಾನವನ್ನು ಪಡೆಯಲೇ ಬೇಕು ಎಂದು ಈ ಅಧಿಕರಣವು ಸಮರ್ಥಿಸುತ್ತಿದೆ. ಈ ಅಧಿಕರಣವನ್ನು ಅಧ್ಯಯನ ಮಾಡಿದಾಗ, ದೇವತೆಗಳಿಗೆ ಬ್ರಹ್ಮವಿದ್ಯೆಯಲ್ಲಿ ಪ್ರವೃತ್ತಿಯು ಉಂಟಾಗುತ್ತದೆ. ಆದ್ದರಿಂದ ದೇವತೆಗಳ ದೃಷ್ಟಿಯಿಂದ ಈ ಅಧಿಕರಣವು ಸಾರ್ಥಕ.

ನಮಗೂ ಸಹ ಈ ಅಧಿಕರಣವು ಸಾರ್ಥಕ. ಪರಮಾತ್ಮನು ಸರ್ವದೇವೋಪಾಸ್ಯನಾಗಿದ್ದಾನೆಂದು ಅವಶ್ಯವಾಗಿ ತಿಳಿಯಬೇಕು. ದೇವತೆಗಳಿಗೆ ಮೋಕ್ಷವೇ ಇಲ್ಲವೆಂದಾದರೆ, ಪರಮಾತ್ಮನನ್ನು ಉಪಾಸನೆ ಮಾಡಲಾರರು. ಆದ್ದರಿಂದ ದೇವತಾ ಪದವಿಯು ಅನಿತ್ಯವಾದ್ದರಿಂದ ಅವರಿಗೂ ಮೋಕ್ಷವಿರುತ್ತದೆಂದು ಈ ಅಧಿಕರಣದಲ್ಲಿ ಸಮರ್ಥಿಸಿದಾಗ, ದೇವತೆಗಳಿಂದ ಪರಮಾತ್ಮನು ಉಪಾಸ್ಯನೆಂದು ಸಿದ್ಧವಾಗುತ್ತದೆ. ಆವಾಗ 'ಸರ್ವದೇವೋಪಾಸ್ಯತ್ವ' ಎಂಬ ಧರ್ಮವನ್ನು ಪರಮಾತ್ಮನಲ್ಲಿ ತಿಳಿದಂತಾಗುತ್ತದೆ. ಈ ಜ್ಞಾನದ ಸಂಪಾದನೆಗಾಗಿ ದೇವತಾಧಿಕರಣವು ನಮಗೂ ಸಹ ಸಾರ್ಥಕವಾಗಿದೆ. ಮತ್ತು 'ವಿಶ್ವೇದೇವಾ ಉಪಾಸತೇ' ಇತ್ಯಾದಿ ಶ್ರುತಿಗಳ ಪ್ರಾಮಾಣ್ಯದ ಸಮರ್ಥನೆಯೂ ಸಹ ಈ ಅಧಿಕರಣದ ಮತ್ತೊಂದು ಉದ್ದೇಶ.

ಈ ಅಧಿಕರಣದಲ್ಲಿ ಶ್ರುತಿಗೆ ಯುಕ್ತಿಯಿಂದ ಅಪ್ರಾಮಾಣ್ಯದೋಷವು ಪ್ರಾಪ್ತವಾದರೆ, ಅದರ ಪರಿಹಾರವನ್ನೂ ಸಹ ಮಾಡುತ್ತಿದ್ದಾರೆಂದು ಹೇಳಿದಂತಾಯಿತು. ಆವಾಗ ಈ ಅಧಿಕರಣವು ಎರಡನೆಯ ಅಧ್ಯಾಯದಲ್ಲಿ ಸೇರಬೇಕಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಆದರೆ ಹಿಂದಿನ ಅಧಿಕರಣದಿಂದ ಅವಾಂತರಸಂಗತಿಯಿರುವ ಪ್ರಯುಕ್ತ ಇದನ್ನು ಇಲ್ಲಿಯೇ ಸೇರಿಸಿದ್ದಾರೆ. ಹೊರತು, ಎರಡನೆಯ ಅಧ್ಯಾಯದಲ್ಲಿ ಇದನ್ನು ಸೇರಿಸಿಲ್ಲ. ಪೂರ್ವಮೀಮಾಂಸಕರು ವಿಶ್ವಜಿದಧಿಕರಣವನ್ನು ಪ್ರಥಮಾಧ್ಯಾಯದಲ್ಲಿ ಸೇರಿಸದೇ, ನಾಕನೇ ಅಧ್ಯಾಯದಲ್ಲಿ ಸೇರಿಸಿದ್ದಾರೆ. ವಾಸ್ತವಿಕವಾಗಿ ಶ್ರುತಿಯ ಅಪ್ರಾಮಾಣ್ಯದೋಷವನ್ನು ಪರಿಹರಿಸುತ್ತಿರುವುದರಿಂದ ಪ್ರಥಮಾಧ್ಯಾಯದಲ್ಲೇ ಅದನ್ನು ಸೇರಿಸಬೇಕು. ಆದರೂ ಅವಾಂತರಸಂಗತಿಯಿದೆ ಎಂಬ

ಕಾರಣಕ್ಕೋಸ್ಕರ ನಾಕನೆಯ ಅಧ್ಯಾಯದಲ್ಲಿ ಹೇಗೆ ಸೇರಿಸಿದ್ದಾರೋ, ಅದರಂತೆ ದೇವತಾಧಿ- ಕರಣದಲ್ಲಿಯೂ ಅವಾಂತರಸಂಗತಿಯಿರುವುದರಿಂದ ಎರಡನೆಯ ಅಧ್ಯಾಯದಲ್ಲಿ ಸೇರಿಸದೇ ಪ್ರಥಮಾಧ್ಯಾಯದಲ್ಲೇ ಸೇರಿಸಿರುತ್ತಾರೆ.

ಪೂರ್ವಪಕ್ಷದ ಫಲ ಹೀಗಿದೆ - ಮುಂದೆ ಹೇಳುವಂತೆ ಕರ್ಮ ಹಾಗೂ ಶಬ್ದಗಳು ವಿರುದ್ಧವಾಗುವುದಾದರೆ, ಈ ವಿರೋಧ ಪರಿಹಾರಕ್ಕೋಸ್ಕರ ದೇವತೆಗಳು ಅನಾದಿನಿತ್ಯರೆಂದೇ ಒಪ್ಪಬೇಕು. ಅಂತಹ ದೇವತೆಗಳಿಗೆ ಮುಂದೆ ಹೇಳುವ ಪ್ರಕಾರ ಮೋಕ್ಷದಲ್ಲಿ ಅಪೇಕ್ಷೆಯೂ ಉಪಪನ್ನವಾಗುವುದಿಲ್ಲ. ಆದ್ದರಿಂದಲೇ ಬ್ರಹ್ಮವಿದ್ಯೆಯಲ್ಲಿ ಅಧಿಕಾರವೂ ಸಹ ಕೂಡುವುದಿಲ್ಲ.

ಸಿದ್ಧಾಂತದ ಫಲ - ಒಂದು ವೇಳೆ ಇಂದ್ರಾದಿ ದೇವತೆಗಳಿಗೆ ಉತ್ಪತ್ತಿನಾಶಗಳು ಇರುವುದಾದರೆ, ದೇವತಾಪ್ರವಾಹವು ಅನಾದಿನಿತ್ಯವಾದ್ದರಿಂದ ಕರ್ಮ ಹಾಗೂ ಶಬ್ದಗಳ ವಿರೋಧಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದಲೇ ಬಾಧಕವಿಲ್ಲದ ಕಾರಣ, ಉತ್ಪತ್ತಿನಾಶಗಳನ್ನು ದೇವತೆಗಳಿಗೆ ಹೇಳಬಹುದು. ಇಂತಹ ದೇವತೆಗಳಿಗೆ ನಿತ್ಯವಾದ ಮೋಕ್ಷ ಎಂಬ ಫಲದಲ್ಲಿ ಅಪೇಕ್ಷೆಯು ಉಪಪನ್ನವಾಗುತ್ತದೆ. ಆದ್ದರಿಂದಲೇ ಮೋಕ್ಷಫಲಕವಾದ ಬ್ರಹ್ಮವಿದ್ಯೆಯಲ್ಲಿ ಅಧಿಕಾರವು ಯುಕ್ತವಾಗುತ್ತದೆಂಬುದು ಸಿದ್ಧಾಂತದ ಫಲ.

ಪೂರ್ವಪಕ್ಷ ಹೀಗಿದೆ - ದೇವತೆಗಳಿಗೆ ಬ್ರಹ್ಮೋಪಾಸನೆಯಲ್ಲಿ ಅಧಿಕಾರವಿಲ್ಲ. ಏಕೆಂದರೆ ಇಂದ್ರಾದಿಪದವಿಗಳನ್ನು ಹೊಂದಿರುವಂತಹ ದೇವತೆಗಳಿಗೆ ಉತ್ಪತ್ತಿನಾಶಗಳು ಇದೆಯೋ, ಇಲ್ಲವೋ ಎಂಬ ಪ್ರಶ್ನೆಗೆ ಉತ್ತರಿಸಬೇಕು. ಒಂದು ವೇಳೆ ಉತ್ಪತ್ತಿವಿನಾಶವಿದೆಯೆಂದು ಉತ್ತರಿಸಿದರೆ, ಇಂದ್ರಾದಿಪದವಿಗಳು ದೊರೆಯುವುದಕ್ಕಿಂತ ಮೊದಲು ಆಯಾ ಪದವಿಗಳಲ್ಲಿ ಯಾರೂ ಇರುವುದಿಲ್ಲ. ಆ ಸಮಯದಲ್ಲಿ ಮಾಡುವಂತಹ ಯಾಗಾದಿ ಕ್ರಿಯೆಗಳು ವ್ಯರ್ಥವಾಗುವ ಪ್ರಸಂಗ ಬರುತ್ತವೆ. ಇನ್ನು ಪದವಿಯಲ್ಲಿ ದೇವತೆಗಳಿಲ್ಲದ್ದರೂ ಆ ಚೇತನರು ನಿತ್ಯರಾದ್ದರಿಂದ ಅಂತಹ ಚೇತನನ್ನು ವಿವಕ್ಷಿಸಿ ಯಾಗವನ್ನು ಮಾಡಬಹುದಲ್ಲವೇ? ಎಂದು ಪ್ರಶ್ನಿಸಬಹುದು. ಆದರೆ ಮನುಷ್ಯ ಮೊದಲಾದ ಶರೀರಗಳಲ್ಲಿದ್ದು ಸಾಧನೆಯನ್ನು ಮಾಡಿಕೊಂಡ ಮೇಲಷ್ಟೇ ದೇವತೆಗಳಿಗೆ ಪದವಿಯು ಪ್ರಾಪ್ತವಾಗುತ್ತದೆ. ಮನುಷ್ಯ ಮೊದಲಾದ ಶರೀರದಲ್ಲಿರುವ ವ್ಯಕ್ತಿಯನ್ನು ಕುರಿತು, ಯಾಗಮಾಡುವುದು ಸರ್ವಥಾ ಯುಕ್ತವಾಗುವುದಿಲ್ಲ. ಮತ್ತು ವೇದಮಂತ್ರಗಳಲ್ಲಿ ಆಯಾಪದವಿಗಳಿಂದ ವಿಶಿಷ್ಟರಾದ ದೇವತಾಶರೀರವುಳ್ಳ ವ್ಯಕ್ತಿಯನ್ನೇ ಉದ್ದೇಶಿಸಿ, ಯಾಗವನ್ನು ಮಾಡಬೇಕೆಂದು ಹೇಳಲಾಗಿದೆ.

ಪೂರ್ವಮೀಮಾಂಸಕರು ಹೇಳುವಂತೆ 'ಸೂರ್ಯಾಯ', 'ಇಂದ್ರಾಯ' ಮೊದಲಾದ ಚತುರ್ಥೀವಿಭಕ್ತ್ಯಂತವಾದ ಶಬ್ದವನ್ನೇ ದೇವತೆಯೆಂದು ಹೇಳಬೇಕು. ಶಬ್ದಗಳು ನಿತ್ಯವಾದ್ದರಿಂದ, ದೇವತೆಗಳೂ ಸಹ ನಿತ್ಯರಾಗುತ್ತಾರಲ್ಲವೇ? ಎಂಬ ಶಂಕೆಯೂ ಸಹ ತಪ್ಪಾಗುತ್ತದೆ. ಏಕೆಂದರೆ ಇತಿಹಾಸಪುರಾಣಾದಿಗಳಲ್ಲಿ ದೇವತೆಗಳ ಶರೀರವನ್ನು ಸ್ಪಷ್ಟವಾಗಿ ವರ್ಣಿಸಿರುತ್ತಾರೆ. ಅಭಿಮಾನ್ಯಧಿಕರಣದಲ್ಲಿಯೂ ದೇವತೆಗಳಿಗೆ ಶರೀರಾದಿಗಳಿವೆಯೆಂದು ಸಮರ್ಥಿಸಲಾಗಿದೆ. ಹೀಗಿರುವಾಗ ಶರೀರಾದಿಗಳಿಲ್ಲದ ಜಡಭೂತವಾದ ಶಬ್ದವನ್ನೇ ದೇವತೆಗಳೆಂದು ಹೇಳುವುದು ತಪ್ಪಾಗುತ್ತದೆ. ಇನ್ನು ಬ್ರಹ್ಮನನ್ನು ಉದ್ದೇಶಿಸಿ, ಯಾಗವನ್ನು ಮಾಡುವುದರಿಂದ ಅನಾದಿನಿತ್ಯನಾದ ಬ್ರಹ್ಮೋದ್ದೇಶಕವಾದ ಯಾಗಾದಿಗಳಿಗೆ ವೈಯರ್ಥ್ಯವಿಲ್ಲವೆಂದು ಹೇಳಬಹುದು. ಆದರೆ, ಸಕಲಕರ್ಮಗಳು ವೈಷ್ಣವಕರ್ಮಗಳೆಂದು ಹೇಳಿದರೆ, ಐಂದ್ರಕರ್ಮಕಯಾಗ, ಸೂರ್ಯಕರ್ಮಕಯಾಗವೆಂಬ ವಿಭಾಗವೇ ತಪ್ಪಾಗುತ್ತದೆ. ಆದ್ದರಿಂದ ದೇವತಾಪದವಿಗಳು ಅನಿತ್ಯವಾದಾಗ ಕರ್ಮವಿರೋಧ ದೋಷ ಬರುವುದಷ್ಟೇ ಅಲ್ಲದೇ, ಶಬ್ದವಿರೋಧದೋಷವೂ ಸಹ ಬರುತ್ತದೆ. ಅಂದರೆ ಅನಿತ್ಯರಾದ ದೇವತೆಗಳನ್ನು ನಿತ್ಯವಾದ ಶಬ್ದವು ಪ್ರತಿಪಾದಿಸಲು ಸಾಧ್ಯವಿಲ್ಲ.

ದೇವತೆಗಳು ಅನಿತ್ಯರಾದ್ದರಿಂದ ಮೋಕ್ಷವನ್ನು ಹೊಂದುತ್ತಾರೆ. ಮೋಕ್ಷಕ್ಕಾಗಿ ಅಧಿಕಾರಿವಿಶೇಷಣವಾದ 'ಮುಮುಕ್ಷಾ' ಎಂಬ ಧರ್ಮವು ದೇವತೆಗಳಲ್ಲಿ ಉಪಪನ್ನವಾಗುತ್ತದೆ. ಆದ್ದರಿಂದ ಬ್ರಹ್ಮವಿದ್ಯೆಯಲ್ಲಿ ದೇವತೆಗಳೂ ಸಹ ಅಧಿಕಾರಿಗಳಾಗಿದ್ದಾರೆಂದು ಸಿದ್ಧಾಂತಿಗಳು ಸಮರ್ಥಿಸಬೇಕು. ಆದರೆ ದೇವತೆಗಳು ಅನಿತ್ಯರಾದಲ್ಲಿ ಕರ್ಮವಿರೋಧ ಹಾಗೂ ಶಬ್ದವಿರೋಧ ಎಂಬೆರಡು ಪ್ರಧಾನ ದೋಷಗಳು ಬರುತ್ತವೆ. ಅನಿತ್ಯರಾದ ದೇವತೆಗಳು ಯಾವಾಗ ತಮ್ಮ ಪದವಿಯಲ್ಲಿ ಇರುವುದಿಲ್ಲವೋ, ಆ ಸಂದರ್ಭದಲ್ಲಿ ಮಾಡುವಂತಹ ಯಾಗಗಳಿಗೆ ವೈಯರ್ಥ್ಯದೋಷ ಬರುತ್ತದೆ. ಮತ್ತು ದೇವತೆಗಳಿಲ್ಲದಾಗ ತದ್‌ವಾಚಕಪದಗಳಿಗೆ ಅಪ್ರಾಮಾಣ್ಯದೋಷವು ಬರುತ್ತದೆ.

ಕರ್ಮವಿರೋಧ ದೋಷವನ್ನು ಎರಡನೆಯ ಸೂತ್ರವು ಹೇಳುತ್ತಿದೆ. ಶಬ್ದವಿರೋಧ ದೋಷವನ್ನು ಮೂರನೆಯ ಸೂತ್ರವು ಹೇಳುತ್ತಿದೆ. ಎರಡನೆಯ ಸೂತ್ರದಲ್ಲಿ ದೇವತಾಪ್ರವಾಹವು ನಿತ್ಯವಾದ್ದರಿಂದ ಕರ್ಮವಿರೋಧಕ್ಕೆ ಅವಕಾಶವಿಲ್ಲವೆಂದು ಪರಿಹಾರವನ್ನು ನೀಡುತ್ತದೆ. ಇದರಿಂದಲೇ ಶಬ್ದವಿರೋಧ ಪರಿಹಾರವನ್ನೂ ಸಹ ಮಾಡಿದಂತಾಗುತ್ತದೆ. ಏಕೆಂದರೆ ದೇವತಾಪ್ರವಾಹವು ನಿತ್ಯವಾದ್ದರಿಂದ, ನಿರಂತರವಾಗಿ ದೇವತೆಗಳು ತಮ್ಮ ಪದವಿಯಲ್ಲಿ ಇದ್ದೇ ಇರುತ್ತಾರೆಂದಂತಾಯಿತು. ಆವಾಗ ಶಬ್ದಕ್ಕೆ ಅಪ್ರಾಮಾಣ್ಯದೋಷಕ್ಕೂ ಸಹ ಅವಕಾಶ ಬರುವುದಿಲ್ಲ. ಹೀಗಿರುವಾಗ ಮೂರನೆಯ ಸೂತ್ರಕ್ಕೆ ಏನು ಸಾರ್ಥಕ್ಯ ? ಎಂಬುದು ಇಲ್ಲಿ ಪ್ರಾಸಂಗಿಕವಾಗಿ ಮಾಡಬೇಕಾದ ವಿಚಾರ.

ಎರಡನೆಯ ಸೂತ್ರವು ಕೇವಲ ದೇವತೆಗಳಿಗೆ ಉತ್ಪತ್ತಿಯಿಲ್ಲವೆಂದಷ್ಟೇ ಹೇಳುತ್ತಿದೆ. ಮೂರನೆಯ ಸೂತ್ರವು ನಾಶವಿಲ್ಲವೆಂದು ಹೇಳುತ್ತಿರುವುದರಿಂದ ಸಾರ್ಥಕವೆಂದು ಉತ್ತರಿಸಬೇಕು. ಹಾಗಾದಲ್ಲಿ ಎರಡು ಹಾಗೂ ಮೂರನೆಯ ಸೂತ್ರಗಳು ಒಟ್ಟಿಗೆ ಸೇರಿ, ಕರ್ಮವಿರೋಧ ಹಾಗೂ ಶಬ್ದವಿರೋಧಗಳೆರಡನ್ನೂ ಪರಿಹರಿಸುತ್ತಿವೆ ಎಂದೇ ಉತ್ತರಿಸಬೇಕಾಗುತ್ತದೆ. ಆವಾಗ ಎರಡನೆಯ ಸೂತ್ರದಲ್ಲಿ 'ಕರ್ಮ' ಎಂಬ ಪದವು ಮೂರನೆಯ ಸೂತ್ರದಲ್ಲಿ 'ಶಬ್ದ' ಎಂಬ ಪದವು ವ್ಯರ್ಥವಾಗುತ್ತದೆ. ಈ ಶಂಕೆಗೆ ಉತ್ತರವನ್ನು ಹೀಗೆ ತಿಳಿಯಬೇಕು - ವಾಸ್ತವಿಕವಾಗಿ ಎರಡೂ ಸೂತ್ರಗಳಲ್ಲಿಯೂ ಎರಡು ಬಗೆಯ ಸಮಾಧಾನಗಳನ್ನು ಹೇಳುತ್ತಿದ್ದಾರೆ. ಆದರೆ ಪ್ರಥಮ ಸೂತ್ರದಲ್ಲಿ ಮನುಷ್ಯರು ಸತ್ಕರ್ಮಗಳಿಂದ ದೇವತಾಪದವಿಯನ್ನು ಪಡೆಯುತ್ತಾರೆಂದು ಹೇಳಿದರು. ಆವಾಗ ಮನುಷ್ಯರಾಗಿರುವ ಸಂದರ್ಭದಲ್ಲಿ ದೇವತಾಪದವಿಯಲ್ಲಿ ಯಾರೂ ಇಲ್ಲವೆಂದಂತಾಯಿತು. ಆ ಸಂದರ್ಭದಲ್ಲಿ ಮಾಡುವಂತಹ ಕರ್ಮಗಳೆಲ್ಲವೂ ವ್ಯರ್ಥವಾಗುತ್ತವಲ್ಲವೇ? ಎಂಬ ಕರ್ಮವಿರೋಧಾಶಂಕೆಗೆ ಎರಡನೆಯ ಸೂತ್ರವು ಉತ್ತರಿಸಿತು. ಇದರ ಮೇಲೆ ಉಪಜೀವ್ಯವಾದ ಶಬ್ದದವಿರೋಧವೂ ಪ್ರಾಪ್ತವಾಗುತ್ತದೆ. ಅಂದರೆ ದೇವತೆಗಳೇ ಇಲ್ಲದಿದ್ದಾಗ ಶಬ್ದವಾದರೂ ಸಹ ದೇವತೆಯನ್ನು ಹೇಗೆ ಪ್ರತಿಪಾದಿಸಲು ಸಾಧ್ಯ ? ಎಂಬ ಅಭ್ಯಧಿಕಾಶಂಕೆಗೆ ಮೂರನೆಯ ಸೂತ್ರವು ಹೊರಟಿದೆ. ಆದ್ದರಿಂದ ಆಕಾಂಕ್ಷಕ್ರಮದಿಂದ ಎರಡನೆಯ ಹಾಗೂ ಮೂರನೆಯ ಸೂತ್ರಗಳು ಉತ್ತರಿಸುತ್ತಿರುವುದರಿಂದ, ಎರಡೂ ಸೂತ್ರಗಳು ಸಾರ್ಥಕವಾಗಿವೆ. ಮತ್ತು ಎರಡನೆಯ ಸೂತ್ರದಲ್ಲಿರುವ 'ಕರ್ಮ' ಎಂಬ ಪದವು ಮೂರನೆಯ ಸೂತ್ರದಲ್ಲಿರುವ 'ಶಬ್ದ' ಎಂಬ ಪದವೂ ಸಹ ಸಾರ್ಥಕವಾಗಿದೆ.

'ವಿರೋಧಃ ಕರ್ಮಣಿ ಇತಿ ಚೇನ್ನ ಅನೇಕಪ್ರತಿಪತ್ಯ್ಯದರ್ಶನಾತ್' ಎಂಬುದು ಎರಡನೆಯ ಸೂತ್ರ. ಈ ಸೂತ್ರದಲ್ಲಿ ದೇವತೆಗಳು ತಮ್ಮ ಸ್ಥಾನಕ್ಕೆ ಬರುವ ಮೊದಲು ಆಯಾ ಪದವಿಯು ಶೂನ್ಯವಾಗಿರುವುದಿಲ್ಲ. ಮತ್ತೊಬ್ಬ ದೇವತೆ ಅಲ್ಲಿರುತ್ತಾನೆ. ಹೀಗೆ ದೇವತಾಪ್ರವಾಹವು ಅನಾದಿಯಾದ್ದರಿಂದ, ತದುದ್ದೇಶಕವಾದ ಕರ್ಮಗಳು ಎಂದೂ ಸಹ ನಿಷ್ಫಲಗಳಲ್ಲ ಎಂದು ಸಮರ್ಥಿಸಲಾಯಿತು. ಹೀಗೆ ಕರ್ಮವಿರೋಧವನ್ನಷ್ಟೇ ಎರಡನೆಯ ಸೂತ್ರವು ಪರಿಹಾರ ಮಾಡಿದೆ ಹೊರತು, ಶಬ್ದವಿರೋಧವನ್ನು ಪರಿಹಾರ ಮಾಡಿಲ್ಲ. ಶಬ್ದವಿರೋಧವನ್ನೂ ಸಹ ಕರ್ಮವಿರೋಧಪರಿಹಾರದಿಂದಲೇ ಮಾಡಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ದೇವತೆಗಳಿಗೆ ತಮ್ಮ ಸ್ಥಾನವು ಹೇಗೆ ಅನಿತ್ಯವಾಗಿದೆಯೋ,

ಅದರಂತೆ ಕರ್ಮಗಳೂ ಸಹ ಸ್ವರೂಪತಃ ಅನಿತ್ಯವಾಗಿವೆ. ಆದರೆ ದೇವತಾಪ್ರವಾಹವು ಅನಾದಿನಿತ್ಯವಾಗಿದೆ. ಅದರಂತೆ ಕರ್ಮಪ್ರವಾಹವೂ ಸಹ ಅನಾದಿನಿತ್ಯವಾಗಿದೆ. ಇದರಂತೆ ಶಬ್ದದಲ್ಲಿ ಹೇಳಲಾಗದು. ವೇದರೂಪವಾದ ಶಬ್ದವು ಸ್ವರೂಪತಃ ನಿತ್ಯವಾಗಿದೆ. ಪ್ರವಾಹತಃ ನಿತ್ಯತ್ವವನ್ನು ಕರ್ಮದ ವಿಷಯದಲ್ಲಿ ಹೇಳಬಹುದೇ ಹೊರತು, ಶಬ್ದದ ವಿಷಯದಲ್ಲಿ ಹೇಳಲು ಸಾಧ್ಯವೇ ಇಲ್ಲ. ಹಾಗೇನಾದರೂ ಹೇಳಿದಲ್ಲಿ ಪುರಾಣಾದಿಗಳಿಗೂ ವೇದಕ್ಕೂ ಪೌರುಷೇಯತ್ವ, ಅಪೌರುಷೇಯತ್ವ ಎಂಬ ವ್ಯತ್ಯಾಸವನ್ನೇ ಹೇಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸ್ವರೂಪತಃ ನಿತ್ಯವಾದ ಇಂದ್ರಾದಿಸೂಕ್ತಗಳು ಒಬ್ಬನೇ ಇಂದ್ರನನ್ನು ಪ್ರತಿಪಾದನೆ ಮಾಡಲು ಸಾಧ್ಯವಿಲ್ಲ. ಪ್ರತಿಕಲ್ಪಗಳಲ್ಲಿಯೂ ಒಬ್ಬನೇ ಇಂದ್ರನು ಇರುವುದಿಲ್ಲವೆಂದು ಸಿದ್ಧವಾಗಿದೆ. ಹಾಗಾಗಿ ಕರ್ಮವಿರೋಧವು ಪರಿಹಾರವಾದರೂ ಶಬ್ದವಿರೋಧವು ಹಾಗೆಯೇ ಉಳಿಯುತ್ತದೆ.

ಇದರ ಪರಿಹಾರಕ್ಕಾಗಿ 'ಶಬ್ದ ಇತಿ ಚೇನ್ನಾತಃ ಪ್ರಭವಾತ್ ಪ್ರತ್ಯಕ್ಷಾನುಮಾನಾಭ್ಯಾಮ್' ಎಂಬ ಮೂರನೆಯ ಸೂತ್ರವು ಹೊರಟಿದೆ. ಇಂದ್ರಾದಿಸೂಕ್ತಗಳಿಗೆ ಇಂದ್ರಾದಿ ಪದವಿಯಲ್ಲಿರುವ ವ್ಯಕ್ತಿಯಲ್ಲಷ್ಟೇ ತಾತ್ಪರ್ಯವಿರುತ್ತದೆ. ಯಾವರೀತಿಯಾಗಿ ಮಂತ್ರಿ ಎಂಬ ಒಂದೇ ಪದವು ಬೇರೆ ಬೇರೆ ಕಾಲದಲ್ಲಿ ಆ ಮಂತ್ರಿಸ್ಥಾನವನ್ನು ಹೊಂದುವ ಎಲ್ಲಾ ವ್ಯಕ್ತಿಗಳನ್ನು ಪ್ರತಿಪಾದನೆ ಮಾಡುತ್ತವೋ, ಅದರಂತೆ ಇಂದ್ರಾದಿಸೂಕ್ತಗಳು ಆಯಾ ಪದವಿಯಲ್ಲಿ ಬರುವ ಇಂದ್ರಾದಿದೇವತೆಗಳನ್ನು ಪ್ರತಿಪಾದನೆ ಮಾಡುತ್ತದೆ. ಹಾಗಾಗಿ ಮೂರನೆಯ ಸೂತ್ರ ಹೊರಟಿದ್ದು ಸಾರ್ಥಕ. ಎರಡನೆಯ ಸೂತ್ರದಿಂದಲೇ ಇದು ಗತಾರ್ಥವಾಗುವುದಿಲ್ಲ.

ದೇವತೆಗಳಿಗೆ ನಿತ್ಯತ್ವವನ್ನು ಹೇಳುವುದು ಅನಿವಾರ್ಯ. ಏಕೆಂದರೆ ವೇದದಲ್ಲಿ ಒಂದೇ ಬಗೆಯ ನಾಮರೂಪಗಳಿಂದ ಇಂದ್ರಾದಿಸೂಕ್ತಗಳು, ಇಂದ್ರಾದಿದೇವತೆಗಳನ್ನು ಪ್ರತಿಪಾದಿಸುತ್ತಿವೆ. ಬೇರೆ ಬೇರೆ ಕಲ್ಪದಲ್ಲಿರುವ ಆಯಾದೇವತೆಗಳಿಗೆ ಒಂದೇ ರೂಪ ಹಾಗೂ ನಾಮಗಳು ಬರಲು ಸಾಧ್ಯವಿಲ್ಲ. ಆದ್ದರಿಂದ ದೇವತೆಗಳಿಗೆ ತಮ್ಮ ಪದವಿಯು ನಿತ್ಯವೆಂದು ಹೇಳಬೇಕು. ಸೂರ್ಯಾದಿ ದೇವತೆಗಳು ಪರಮಾತ್ಮನಿಂದ ಹುಟ್ಟಿದ್ದಾರೆ ಇತ್ಯಾದಿಯಾಗಿ ಕೆಲವು ಶ್ರುತಿಗಳು ಪ್ರತಿಪಾದನೆ ಮಾಡುತ್ತಿರಬಹುದು. ಆದರೆ ಪ್ರಳಯಕಾಲದಲ್ಲಿ ತಮ್ಮ ವ್ಯಾಪಾರದಿಂದ ವಿಶ್ರಮಿಸಿದ ಸೂರ್ಯಾದಿದೇವತೆಗಳಿಗೆ ಪುನಃ ಪರಮಾತ್ಮನು ಸೃಷ್ಟಿಕಾಲದಲ್ಲಿ ಆಯಾವ್ಯಾಪಾರದಲ್ಲಿ ತೊಡಗುವಂತೆ ಪ್ರೇರಣೆ ಮಾಡಿದನೆಂದಷ್ಟೇ ಆ ಶ್ರುತಿಯ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಸಕಲ ದೇವತೆಗಳೂ ಆಯಾ ಪದವಿಗಳಿಂದ ವಿಶಿಷ್ಟರಾಗಿ ಅನಾದಿನಿತ್ಯರಾಗಿದ್ದಾರೆಂದು ಅನಿವಾರ್ಯವಾಗಿ ಒಪ್ಪಬೇಕು. ದೇವತಾಪದವಿಯು ನಿತ್ಯವಾದ್ದರಿಂದ ಬ್ರಹ್ಮವಿದ್ಯೆಯಲ್ಲಿ ದೇವತೆಗಳಿಗೆ ಅಧಿಕಾರಬೇಕಾಗಿರುವುದಿಲ್ಲ. ತಮ್ಮ ಪದವಿಯು ನಿತ್ಯವಾದ ಮೇಲೆ ಮೋಕ್ಷವು ದೊರೆಯುವುದಿಲ್ಲವೆಂದು ಖಚಿತವಾಗಿರುತ್ತದೆ. ಹೀಗಿರುವಾಗ ಬ್ರಹ್ಮವಿದ್ಯೆಯಲ್ಲಿ ಅಧಿಕಾರವನ್ನು ದೇವತೆಗಳು ಹೊಂದುವುದಿಲ್ಲ.

ಮತ್ತು ಬ್ರಹ್ಮವಿದ್ಯೆಯಲ್ಲಿ ದೇವತೆಗಳಿಗೆ ಅಧಿಕಾರವೂ ಸಹ ಇಲ್ಲ. ಏಕೆಂದರೆ 'ಏತದೇವಮಮೃತಂ ವೇದ ವಸೂನಾಮೇವೈಕೋ ಭೂತ್ವಾ' ಎಂಬುದಾಗಿ ಯಾರು ಬ್ರಹ್ಮವಿದ್ಯೆಯನ್ನು ಅಭ್ಯಾಸ ಮಾಡುತ್ತಾರೋ ಅವರಿಗೆ ವಸು ಮೊದಲಾದ ಪದವಿಗಳು ದೊರೆಯುತ್ತವೆಂದು ಫಲವನ್ನು ಶ್ರುತಿಯು ಹೇಳಿದೆ. ದೇವತೆಗಳಿಗೆ ಈಗಾಗಲೇ ವಸು ಮೊದಲಾದ ಪದವಿಗಳು ದೊರೆತದ್ದರಿಂದ ಪುನಃ ಅದೇ ಫಲಕ್ಕೋಸ್ಕರ ಅವರು ಆಯಾವಿದ್ಯೆಗಳನ್ನು ಅಭ್ಯಾಸ ಮಾಡುವುದು ಕೂಡುವುದಿಲ್ಲ. ಇನ್ನು ಮೋಕ್ಷಫಲಕ್ಕೋಸ್ಕರ ಮಧುವಿದ್ಯಾದಿಗಳನ್ನು ಅಭ್ಯಾಸ ಮಾಡಬೇಕು. ಆದರೆ 'ನೈವ ದೇವಪದಂ ಪ್ರಾಪ್ತಾ ಬ್ರಹ್ಮದರ್ಶನವರ್ಜಿತಾಃ' ಇತ್ಯಾದಿ ವಾಕ್ಯಗಳಿಂದ ದೇವತೆಗಳು ಈಗಾಗಲೇ ಬ್ರಹ್ಮಜ್ಞಾನಿಗಳಾಗಿರುತ್ತಾರೆ. ಹೀಗಿರುವಾಗ ಪುನಃ ಬ್ರಹ್ಮಜ್ಞಾನಕ್ಕೋಸ್ಕರ ಬ್ರಹ್ಮವಿದ್ಯೆಯಲ್ಲಿ ತೊಡಗುವುದು ಸರ್ವಥಾ ಕೂಡುವುದಿಲ್ಲ.

ಅನುಮಾನಸ್ವರೂಪಗಳನ್ನು ಹೀಗೆ ತಿಳಿಯಬೇಕು -

೧. ದೇವಾಃ ವೇದವಿದ್ಯಾದಿಷು ಅನಧಿಕಾರಿಣಃ ತತ್ ಫಲೇ ಮೋಕ್ಷೇ ಅರ್ಥಿತಾಶೂನ್ಯತ್ವಾತ್.

೨. ದೇವಾಃ ಅರ್ಥಿತಾಶೂನ್ಯಾಃ ಮೋಕ್ಷಾಭಾವನಿಶ್ಚಯವತ್ವಾತ್.

೩. ದೇವಾಃ ಮೋಕ್ಷಾಭಾವನಿಶ್ಚಯವಂತಃ ಪದವೀವಿಶಿಷ್ಟಾನಾಂ ತೇಷಾಂ ಅನಾದಿನಿತ್ಯತ್ವಾತ್.

ಇತ್ಯಾದಿ ಅನುಮಾನಗಳಿಂದ ದೇವತೆಗಳಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು. ಏಕೆಂದರೆ ಬ್ರಹ್ಮವಿದ್ಯೆಯ ಫಲವಾದ ಮೋಕ್ಷದಲ್ಲಿ ಅರ್ಥಿತ್ವವಿಲ್ಲವೆಂದು, ಮೋಕ್ಷವಿಲ್ಲವೆಂದು ನಿಶ್ಚಯವಾಗಿರುವುದರಿಂದ ಅರ್ಥಿತ್ವವಿಲ್ಲವೆಂದು ತಮ್ಮ ಪದವಿಗಳು ಅನಾದಿನಿತ್ಯವಾದ್ದರಿಂದ ಮೋಕ್ಷವಿಲ್ಲವೆಂದು ನಿರ್ಣಯವಾಗುತ್ತದೆ.

ಈಗಿರುವ ಅನೇಕ ಪಶುಪಕ್ಷಿಗಳಲ್ಲಿ ವೇದವನ್ನು ಓದುವಂತಹ ಸಾಮರ್ಥ್ಯವಿರುವುದಿಲ್ಲ. ಅದರಂತೆ ದೇವತೆಗಳಿಗೆ ಸಾಮರ್ಥ್ಯವಿಲ್ಲವೆಂದು ಹೇಳಲಾಗದು. ವೇದವಿದ್ಯೆಯನ್ನು ಅಭ್ಯಾಸ ಮಾಡಲು ದೇವತೆಗಳು ಸಮರ್ಥರೇ ಆಗಿದ್ದಾರೆ. ಮತ್ತು ಶೂದ್ರರು, ಸ್ತ್ರೀಯರು, ಬ್ರಹ್ಮಬಂಧುಗಳು ವೇದವನ್ನು ಓದಬಾರದೆಂದು ಹೇಗೆ ನಿಷೇಧವಚನವಿದೆಯೋ, ಅದರಂತೆ ದೇವತೆಗಳು ವೇದವನ್ನು ಓದಬಾರದೆನ್ನಲು ಯಾವುದೇ ನಿಷೇಧವಾಕ್ಯಗಳಿರುವುದಿಲ್ಲ.

ತಮ್ಮ ಪದವಿಗಳೆಲ್ಲವೂ ಅನಿತ್ಯವಾದುದು. ಮುಂದೆ ಮೋಕ್ಷವನ್ನು ದೇವತೆಗಳು ಪಡೆಯಲೇ ಬೇಕು. ಆದ್ದರಿಂದ ಮುಕ್ತಿಯ ವಿಷಯದಲ್ಲಿ ಅರ್ಥಿತ್ವವೂ ಸಹ ದೇವತೆಗಳಿಗೆ ಇದ್ದೇ ಇರುತ್ತದೆ. ಹಾಗಾದರೆ ದೇವತೆಗಳು ಅನಿತ್ಯರಾದರೆ, ಶಬ್ದವಿರೋಧ ಹಾಗೂ ಕರ್ಮವಿರೋಧಗಳು ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ದೇವತಾಪ್ರವಾಹವು ಅನಾದಿನಿತ್ಯವಾದ್ದರಿಂದ ಹಿಂದಿನ- ಮುಂದಿನ ಕಲ್ಪಗಳಲ್ಲಿರುವ ಎಲ್ಲ ದೇವತೆಗಳ ನಾಮ ಹಾಗೂ ರೂಪಗಳು ಒಂದೇ ರೀತಿಯಾಗಿರುವುದರಿಂದ ಶಬ್ದವಿರೋಧ ಮತ್ತು ಕರ್ಮವಿರೋಧಗಳಿಗೆ ಅವಕಾಶವಿಲ್ಲ.

ಹೀಗೆ ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆಯೆನ್ನಲು ಯಾವುದೇ ಬಾಧಕಗಳಿರುವುದಿಲ್ಲ. ಮತ್ತು ಶ್ರುತಿಗಳಲ್ಲಿ ಸ್ಪಷ್ಟವಾಗಿ ಅಧಿಕಾರವಿದೆಯೆಂಬ ಮಾತೇ ಹೆಚ್ಚಾಗಿ ಕೇಳಿಸುತ್ತದೆ.

ಆದ್ದರಿಂದ ವೇದವಿದ್ಯೆಯ ಅಧಿಕಾರಕ್ಕೆ ಉಪಯೋಗಿಯಾದ ಅರ್ಥಿತ್ವ, ಸಾಮರ್ಥ್ಯ, ವೈದುಷ್ಯ ಎಂಬ ಮೂರೂ ಧರ್ಮಗಳು ದೇವತೆಗಳಲ್ಲಿದೆಯೆಂದಷ್ಟೇ ಅಲ್ಲ. ದೇವತೆಗಳಿಗೆ ವೇದವಿದ್ಯಾಧಿಕಾರವಿದೆಯೆಂಬ ವಿಧಿವಾಕ್ಯಗಳೂ ಸಹ ಅನೇಕ ಇರುತ್ತವೆ. 'ಏಕಶತಂ ಹ ವೈ ವರ್ಷಾಣಿ ಮಘವಾನ್ ಪ್ರಜಾಪತೌ ಬ್ರಹ್ಮಚರ್ಯಮುವಾಸ' ನೂರೊಂದು ವರ್ಷಗಳ ಕಾಲ ಇಂದ್ರದೇವರು ಬ್ರಹ್ಮದೇವರ ಬಳಿ ವಿದ್ಯೆಗಾಗಿ ಬ್ರಹ್ಮಚರ್ಯ ವ್ರತದಿಂದ ಉಪಸತ್ತಿ ಮಾಡಿದರು ಎಂದು. ಆದ್ದರಿಂದ ಮನುಷ್ಯರು ಹೇಗೆ ವೇದವಿದ್ಯೆಗೆ ಅಧಿಕಾರಿಗಳೋ, ಅದರಂತೆ ದೇವತೆಗಳೂ ಕೂಡ ಅಧಿಕಾರಿಗಳಾಗಿರುತ್ತಾರೆ.

ಮಧುವಿದ್ಯೆ ಮೊದಲಾದವನ್ನು ಅಧ್ಯಯನ ಮಾಡಿದರೆ ವಸುಪದವಿ ಮೊದಲಾದವು ದೊರೆಯುತ್ತದೆಂದು ಶ್ರುತಿ ಹೇಳುತ್ತಿದೆ. ಇನ್ನು ಕೆಲವು ವಿದ್ಯೆಗಳಿಂದ ಬ್ರಹ್ಮಜ್ಞಾನವು ಬರುತ್ತದೆಂದು ಶ್ರುತಿ ಹೇಳುತ್ತಿದೆ. ಆದರೆ ದೇವತೆಗಳಿಗೆ ಈಗಾಗಲೇ ವಸು ಮೊದಲಾದ ಪದವಿಗಳು ಮತ್ತು ಬ್ರಹ್ಮಜ್ಞಾನವು ದೊರೆತದ್ದರಿಂದ ಪುನಃ ಅದೇ ಫಲಕ್ಕಾಗಿ ಏಕೆ ವೇದಾಧ್ಯಯನದಲ್ಲಿ ತೊಡಗಬೇಕು.

ಹೀಗೆ ಪ್ರಶ್ನಿಸಬಾರದು. ಏಕೆಂದರೆ ಬ್ರಹ್ಮಜ್ಞಾನದಲ್ಲಿ ಇನ್ನು ಹೆಚ್ಚಿನ ತತ್ವವನ್ನು ತಿಳಿಯುವುದಕ್ಕಾಗಿ ಮತ್ತು ಮೋಕ್ಷದಲ್ಲಿ ಅತಿಶಯವಾದ ಫಲವನ್ನು ಪಡೆಯುವುದಕ್ಕಾಗಿ ದೇವತೆಗಳು ಪುನಃ ಪುನಃ ವೇದಾಧ್ಯಯನವನ್ನು ಮಾಡುತ್ತಾರೆ.

ಸೂತ್ರಕಾರರ ಸೂತ್ರಗಳ ಜೋಡಣೆಯು ಅತ್ಯಂತ ಸ್ವರಸವಾಗಿದೆ. ಮೊದಲು 'ತದುಪರ್ಯಪಿ ಬಾದರಾಯಣಃ ಸಂಭವಾತ್' ಎಂಬ ಸೂತ್ರವನ್ನೇ ಉಲ್ಲೇಖಮಾಡಲು ಕಾರಣ ಹೀಗಿದೆ - ಹಿಂದಿನ ಸೂತ್ರದಲ್ಲಿ ಮನುಷ್ಯರಿಗೆ ಮಾತ್ರ ವೇದವಿದ್ಯೆಯಲ್ಲಿ ಅಧಿಕಾರವಿದೆಯೆಂದು ಹೇಳಲಾಯಿತು. ಮನುಷ್ಯರು ಅಧಿಕಾರಿಗಳು ಎಂದು ಹೇಳಿದರೆ ದೇವತೆಗಳು ಅಧಿಕಾರಿಗಳಲ್ಲ ಎಂದರ್ಥವಲ್ಲ. ಹೊರತು, ಪ್ರಾಣಿಗಳಿಗೆ ಅಧಿಕಾರವಿಲ್ಲ ಎಂದಷ್ಟೇ ಅರ್ಥ. ಈ ವಿಷಯವನ್ನು ಸೂತ್ರಕಾರರೇ ಸ್ವತಃ 'ತದುಪರ್ಯಪಿ' ಇತ್ಯಾದಿ ಸೂತ್ರಗಳಿಂದ ಸ್ಪಷ್ಟಪಡಿಸುತ್ತಿದ್ದಾರೆ.

'ತದುಪರಿ' ಎಂದರೆ ಮೊದಲು ಮನುಷ್ಯರಾಗಿದ್ದು, ಅನಂತರ ದೇವತಾ ಪದವಿಯು ಪ್ರಾಪ್ತವಾದ ಮೇಲೂ ಸಹ ಬೌದ್ಧಿಕಸಾಮರ್ಥ್ಯವು ವಿಶಿಷ್ಟವಾಗಿರುವುದರಿಂದ ಆ ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದ್ದೇ ಇರುತ್ತದೆ. ಬಾದರಾಯಣರು ಈ ವಿಷಯವನ್ನು ಸಮರ್ಥಿಸಿದ್ದಾರೆ. ಆದ್ದರಿಂದ 'ವಿಶಿಷ್ಟ ಬುದ್ಧ್ಯಾದಿಮತ್ವ' ಎಂಬ ಪ್ರಧಾನಹೇತುವಿನಿಂದ ದೇವತೆಗಳಿಗೆ ಬ್ರಹ್ಮವಿದ್ಯಾಧಿಕಾರವನ್ನು ಮೊದಲು ಸಮರ್ಥಿಸಿದ್ದಾರೆ.

ಹಿಂದಿನ ಸೂತ್ರದಲ್ಲಿ 'ತದುಪರಿ' ಎಂಬ ಪದದಿಂದ ಮನುಷ್ಯರೇ ಮುಂದೆ ದೇವತೆಗಳಾಗುತ್ತಾರೆಂದು ಹೇಳಲಾಗಿದೆ. ಮೊದಲು ಮನುಷ್ಯರಾಗಿದ್ದವರು ಅನಂತರ ದೇವತೆಗಳಾಗುವುದಾದರೆ, ದೇವತೆಗಳಾಗುವ ಮೊದಲು ದೇವತಾಪದವಿಯಲ್ಲಿ ಯಾರೂ ಇರುವುದಿಲ್ಲವೆಂದಂತಾಯಿತು. ಆವಾಗ ದೇವತೋದ್ದೇಶ್ಯಕವಾದ ಕರ್ಮ ಮತ್ತು ತದ್ವಾಚಕವಾದ ಶಬ್ದ ಎಲ್ಲವೂ ಕೂಡ ವ್ಯರ್ಥವಾಗುತ್ತದಲ್ಲವೇ? ಎಂಬ ಪ್ರಶ್ನೆಗೆ ಎರಡನೆಯ ಸೂತ್ರವು ಉತ್ತರಿಸುತ್ತಿದೆ. ದೇವತಾಪದವಿಯಲ್ಲಿ ಒಬ್ಬರೇ ದೇವತೆಗಳು ಶಾಶ್ವತವಾಗಿರುವುದಿಲ್ಲ. ಯಾವ ದೇವತೆಯು ಮನುಷ್ಯಾವಸ್ಥೆಯಲ್ಲಿದ್ದು ಕರ್ಮಾನುಷ್ಠಾನ ಮಾಡುತ್ತಿರುತ್ತಾನೋ, ಆ ಸಮಯದಲ್ಲಿ ಮತ್ತೊಬ್ಬ ದೇವತೆಯು ಆ ಪದವಿಯಲ್ಲಿ ಇದ್ದೇ ಇರುತ್ತಾನೆ. ಹೀಗೆ ದೇವತಾ ಪ್ರವಾಹವು ಅನಾದಿಯಾಗಿರುವುದರಿಂದ, ಕರ್ಮಗಳು ಎಂದೂ ಸಹ ವ್ಯರ್ಥವಾಗುವುದಿಲ್ಲ ಎಂದು ಸಮರ್ಥಿಸಲಾಗಿದೆ.

ದೇವತೆಗಳು ಅನಿತ್ಯರಾದರೆ, ವೇದವು ಅಪ್ರಾಮಾಣವಾಗಬೇಕಾಗುತ್ತದಲ್ಲವೇ? ಎಂಬ ಪ್ರಶ್ನೆಗೆ ಮೂರನೆಯ ಸೂತ್ರವು ಉತ್ತರಿಸಿದೆ. ಪರಮಾತ್ಮನು ಸೂರ್ಯ-ಚಂದ್ರರನ್ನು ಹಿಂದಿನ ಕಲ್ಪದಂತೆ, ಈ ಕಲ್ಪದಲ್ಲಿಯೂ ಸೃಷ್ಟಿಮಾಡಿದನು. ಆದ್ದರಿಂದ ದೇವತೆಗಳ ಪ್ರವಾಹವು ನಿತ್ಯವೇ ಆಗಿರುತ್ತದೆ. ಇವೇ ಮೊದಲಾದ ಶಬ್ದರೂಪಪ್ರಮಾಣಗಳಿಂದ ಮತ್ತು ಮಹಾತ್ಮರ ಪ್ರತ್ಯಕ್ಷದಿಂದ ನಮಗೆ ಬರುವ ಅನುಮಾನದಿಂದಲೂ ದೇವತೆಗಳ ಪ್ರವಾಹವು ನಿತ್ಯವೆಂದು ಸಿದ್ಧವಾಗುತ್ತದೆ.

ವೇದಗಳು ನಿತ್ಯವೆಂದು ಸಿದ್ಧವಾದ್ದರಿಂದಲೇ ಅವುಗಳು ಅಪ್ರಮಾಣವಲ್ಲ. ಒಂದು ವೇಳೆ ವಾಚ್ಯವಾದ ದೇವತೆಗಳು ಅನಿತ್ಯರಾದರೆ, ವಾಚಕವಾದ ವೇದವೂ ಕೂಡ ಅನಿತ್ಯವೇ ಆಗಬೇಕಾಗುತ್ತದೆ. ಹೀಗೆ ವಾಚಕನಿತ್ಯತ್ವದ ಅನ್ಯಥಾನುಪಪತ್ತಿಯಿಂದ ವಾಚ್ಯದ ನಿತ್ಯತ್ವವು ಸಿದ್ಧವಾಗುತ್ತದೆಂದು ನಾಲ್ಕನೆಯ ಸೂತ್ರವು ಸಮರ್ಥಿಸಿದೆ. ಹೀಗೆ ನಾಲ್ಕು ಸೂತ್ರಗಳಲ್ಲಿ ದೇವತೆಗಳ ಪ್ರವಾಹವು ನಿತ್ಯವೆಂದು ಸಮರ್ಥಿಸಿದ್ದಾರೆ.

ದೇವತೆಗಳನ್ನು ಪ್ರತಿಪಾದಿಸುವ ವೇದವು ಪ್ರತಿಕಲ್ಪಗಳಲ್ಲಿಯೂ ಒಂದೇ ರೀತಿಯಾಗಿರುತ್ತದೆ. ಅಂತಹ ವೇದವನ್ನು ನೋಡಿಯೇ ಅದಕ್ಕನುಸಾರಿಯಾಗಿ ಪರಮಾತ್ಮನು ದೇವತೆಗಳನ್ನು ಸೃಷ್ಟಿಮಾಡುತ್ತಾನೆ. ವಾಚಕವಾದ ವೇದವು ನಿತ್ಯವಾದ್ದರಿಂದ ಆ ವೇದದಿಂದ ಪ್ರತಿಪಾದ್ಯರಾದ ದೇವತೆಗಳೂ ಕೂಡ ಪ್ರತಿಕಲ್ಪದಲ್ಲಿಯೂ ಒಂದೇರೀತಿಯಾಗಿ ಇರುತ್ತಾರೆ. ಇದರಿಂದ ದೇವತಾಪ್ರವಾಹಕ್ಕೆ ನಿತ್ಯತ್ವವನ್ನು ಹೇಳಿದಂತಾಗುತ್ತದೆ.

ಪ್ರತಿಕಲ್ಪದಲ್ಲಿಯೂ ವೇದೋಕ್ತವಾದ ಕರ್ಮವನ್ನು ಅನುಷ್ಠಾನ ಮಾಡಲೇ ಬೇಕು. ಅನುಷ್ಠಾನ ಮಾಡುವಾಗ ಇಂದ್ರಾದಿಗಳನ್ನು ಆಹ್ವಾನ ಮಾಡಬೇಕು. ಆದ್ದರಿಂದ ಪ್ರತಿಕಲ್ಪಗಳಲ್ಲಿಯೂ ಇಂದ್ರಾದಿದೇವತೆಗಳು ಇದ್ದೇ ಇರುತ್ತಾರೆಂದು

ನಿಶ್ಚಯವಾಗುತ್ತದೆ. ಕೇವಲ ಯಾವುದಾದರೂ ಒಂದೇ ಕಲ್ಪದಲ್ಲಿ ಇಂದ್ರಾದಿದೇವತೆಗಳನ್ನು ಒಪ್ಪಿ, ಮಹಾಭಾರತಾದಿ ಗ್ರಂಥಗಳಂತೆ ವೇದವೂ ಸಹ ಅತೀತವಿಷಯಕವಾಗಿದೆಯೆಂದು ಹೇಳಲು ಸಾಧ್ಯವಾಗುವುದಿಲ್ಲ. ಹಾಗಾಗಿ ದೇವತೆಗಳ ಪ್ರವಾಹವನ್ನು ಅನಾದಿನಿತ್ಯವೆಂದು ಒಪ್ಪಲೇಬೇಕು

ಪ್ರಥಮ ಸೂತ್ರದಲ್ಲಿ ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆಯೆಂದು ಹೇಳಲಾಯಿತು. ಮತ್ತು ದೇವತೆಗಳು ಉತ್ಪತ್ತಿವುಳ್ಳವರೆಂದೂ ಕೂಡ ಹೇಳಿದರು. ದೇವತೆಗಳಿಗೆ ಉತ್ಪತ್ತಿಯಿರುವುದಾದರೆ, ಕರ್ಮವಿರೋಧದ ಆಶಂಕೆಯು ಪ್ರಾಪ್ತವಾದರೆ, ಅದನ್ನು ಎರಡನೆಯ ಸೂತ್ರವು ಶಬ್ದದ ಮೂಲಕ ಪರಿಹರಿಸಿತು. ಪುನಃ ದೇವತೆಗಳು ಉತ್ಪತ್ತಿವುಳ್ಳವರಾದರೆ ಶಬ್ದಕ್ಕೆ ಅಪ್ರಾಮಾಣ್ಯದೋಷ ಬರುತ್ತದೆಂಬ ಶಬ್ದವಿರೋಧದೋಷವು ಪ್ರಾಪ್ತವಾದರೆ, ಮೂರನೆಯ ಸೂತ್ರವು ಅದನ್ನು ಪರಿಹಾರ ಮಾಡುತ್ತದೆ. ಅದೇ ಶಬ್ದವಿರೋಧದ ಪರಿಹಾರವಿಷಯದಲ್ಲಿ ನಾಲ್ಕನೆಯ ಸೂತ್ರವು ಅನ್ಯಥಾನುಪಪತ್ತಿಪ್ರಮಾಣವನ್ನು ಸಮರ್ಥನೆ ಮಾಡಿದೆ. ಹೀಗೆ ಮೊದಲ ನಾಲ್ಕು ಸೂತ್ರಗಳು ಧರ್ಮಿಭೂತರಾದ ದೇವತೆಗಳ ಅನಿತ್ಯತ್ವ ಪ್ರಯುಕ್ತವಾದ ವಿರೋಧ ಪರಿಹಾರದಲ್ಲಿ ಏಕಾಭಿಪ್ರಾಯವುಳ್ಳವುಗಳಾಗಿವೆ. ಆದರೆ ಪ್ರಕೃತ ಐದನೆಯ ಸೂತ್ರವು ಧರ್ಮವೆನಿಸಿದ ದೇವತೆಗಳ ರೂಪ, ಆಕಾರ, ಕಾರ್ಯ ಇವುಗಳ ವಿಷಯದಲ್ಲಿ ಬರುವಂತಹ ವಿರೋಧಗಳನ್ನು ಪರಿಹಾರ ಮಾಡುತ್ತಿದೆ. ಮೊದಲು ಧರ್ಮಿಯಲ್ಲಿ ಬರುವಂತಹ ವಿರೋಧವನ್ನು ಪರಿಹಾರ ಮಾಡಿ, ಅನಂತರ ಧರ್ಮದಲ್ಲಿ ಬರುವಂತಹ ವಿರೋಧವನ್ನು ಪರಿಹಾರ ಮಾಡುವುದು ಅತ್ಯಂತ ಸೂಕ್ತವಾಗಿದೆ. ಆದ್ದರಿಂದ 'ಸಮಾನನಾಮರೂಪತ್ವಾಚ್ಚಾವೃತ್ತ್ಯಾವಪ್ಯವಿರೋಧೋ ದರ್ಶನಾತ್ ಸ್ಮೃತೇಶ್ಚ' ಎಂಬ ಸೂತ್ರವು ಐದನೆಯ ಸ್ಥಾನವನ್ನು ಪಡೆದಿದೆ.

ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆಯೆಂದು ಪ್ರಥಮಸೂತ್ರದಲ್ಲಿ ಹೇಳಲಾಯಿತು. ಮಧುವಿದ್ಯೆ ಮೊದಲಾದ ವಿದ್ಯೋಪಾಸನೆಯಿಂದ ಸಿಗುವಂತಹ ಫಲಗಳು ಈಗಾಗಲೇ ದೇವತೆಗಳಿಗೆ ದೊರೆತಿದೆ. ಅಂತಹ ಫಲವನ್ನು ಪಡೆದಿರುವ ದೇವತೆಗಳಿಗೆ ಪುನಃ ಮಧ್ವಾದಿವಿದ್ಯೆಗಳಲ್ಲಿ ಅಧಿಕಾರವಿಲ್ಲವೆಂದು ಜೈಮಿನಿ ಋಷಿಗಳು ಹೇಳುತ್ತಾರೆ. ಈ ಆಶಂಕೆಯನ್ನು ಆರನೆಯ ಸೂತ್ರದಲ್ಲಿ ಮಾಡಿದ್ದಾರೆ. ಮತ್ತು ದೇವತೆಗಳ ಜ್ಞಾನದಲ್ಲಿ ಸಕಲವಸ್ತುಗಳು ವಿಷಯವಾಗಿರುವುದರಿಂದ ತತ್ವಜ್ಞಾನವೆಂಬ ಫಲಕ್ಕೋಸ್ಕರವೂ ದೇವತೆಗಳು ವೇದವನ್ನು ಓದಬೇಕಾಗಿಲ್ಲ ಎಂದು ಏಳನೆಯ ಸೂತ್ರದಲ್ಲಿ ಆಶಂಕಿಸಲಾಗಿದೆ. ಈ ಎರಡೂ ಆಶಂಕೆಗಳನ್ನು 'ಭಾವಂ ತು ಬಾದರಾಯಣೋಽಸ್ತಿ ಹಿ' ಎಂಬ ಎಂಟನೆಯ ಸೂತ್ರದಲ್ಲಿ ಪರಿಹಾರ ಮಾಡಿದ್ದಾರೆ. ಅಂದರೆ ವಿದ್ಯೆಯ ಫಲವಾದ ಪದವಿ ಹಾಗೂ ಜ್ಞಾನವನ್ನು ದೇವತೆಗಳು ಹೊಂದಿರಬಹುದು. ಆದರೂ ಸಹ ಫಲವಿಶೇಷತೆಗೋಸ್ಕರ ಮಧ್ವಾದಿವಿದ್ಯೆಗಳಲ್ಲಿ ಅವರಿಗೆ ಅಧಿಕಾರವಿದ್ದೇ ಇರುತ್ತದೆಂಬುದು. ಶ್ರೀ ವೇದವ್ಯಾಸದೇವರ ಅಭಿಪ್ರಾಯ. ಸ್ಕಾಂದ ಪುರಾಣದಲ್ಲಿ ಪರತತ್ವದ ಸೇವೆಯನ್ನು ಶ್ರವಣಾದಿ ಉಪಾಸನೆಗಳನ್ನು ಮಾಡಿದಷ್ಟು ದೇವತೆಗಳಿಗೆ ಸುಖವಿಶೇಷಿತಲಾಭವಿದೆ ಮತ್ತು ಶ್ರೀಹರಿಯನ್ನು ಬಿಟ್ಟು ಉಳಿದೆಲ್ಲರಿಗೂ ಜ್ಞಾನವಿಶೇಷತ ಪ್ರಾಪ್ತಿಯು ಇದ್ದೇ ಇರುತ್ತದೆ ಎಂದು ಹೇಳಲಾಗಿದೆ. ಆದ್ದರಿಂದ ದೇವತೆಗಳಿಗೂ ಸಹ ಫಲ ಮತ್ತು ಯೋಗ್ಯತೆಗಳು ಇರುವುದರಿಂದ ವೇದಗಳ ಉಪಾಸನೆ ಅತ್ಯಂತ ಅನಿವಾರ್ಯವಾಗಿದೆ. ಆದ್ದರಿಂದ ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ಸರ್ವಥಾ ಹೇಳಬಾರದೆಂದು ಸಿದ್ಧವಾಯಿತು.

ಇಲ್ಲಿಗೆ ದೇವತಾಧಿಕರಣದ ಸಾರಾಂಶವು ಮುಗಿಯಿತು. ಇನ್ನು ಮುಂದೆ ಈ ಪಾದದಲ್ಲಿ ಅಪಶೂದ್ರಾಧಿಕರಣವು ಹೇಗೆ ಸಂಗತವಾಗುತ್ತದೆಂಬುದನ್ನು ವಿಚಾರ ಮಾಡುವ ಮೂಲಕ ಅಪಶೂದ್ರಾಧಿಕರಣದ ಸಾರಾಂಶವನ್ನು ತಿಳಿಯೋಣ.

ಅಪಶೂದ್ರಾಧಿಕರಣ

ಹಿಂದಿನ ಅಧಿಕರಣದಲ್ಲಿ ಆರ್ತಿತ್ವ, ಸಾಮರ್ಥ್ಯ, ವಿದ್ವತ್ವ ಎಂಬ ಅಧಿಕಾರ ಪ್ರಯೋಜಕವಾದ ಧರ್ಮಗಳು ದೇವತೆಗಳಲ್ಲಿರುವುದರಿಂದ, ವೇದವಿದ್ಯಾಧಿಕಾರವನ್ನು ಅವರು ಹೊಂದಿರುತ್ತಾರೆಂದು ಸಿದ್ಧಾಂತ ಮಾಡಲಾಯಿತು. ಹಾಗಾದರೆ ಈ ಮೂರು ಧರ್ಮಗಳು ಶೂದ್ರರು ಮತ್ತು ಸ್ತ್ರೀಯರಲ್ಲಿಯೂ ಸಹ ಇರುವುದರಿಂದ, ಅವರೂ ಸಹ ವೇದವಿದ್ಯೆಯಲ್ಲಿ ಅಧಿಕಾರಿಗಳಾಗುತ್ತಾರಲ್ಲವೇ? ಎಂಬ ಆಕ್ಷೇಪಕ್ಕೆ ಉತ್ತರಿಸಲು ಈ ಅಧಿಕರಣವು ಹೊರಟಿದೆ. ಆದ್ದರಿಂದ ಹಿಂದಿನ ಅಧಿಕರಣದ ಸಿದ್ಧಾಂತದ ಮೇಲೆ ಬರುವಂತಹ ಪೂರ್ವಪಕ್ಷವನ್ನು ನಿರಾಕರಣೆ ಮಾಡುತ್ತಿರುವುದರಿಂದ ಆನಂತರ್ಯಸಂಗತಿಯನ್ನು ತಿಳಿಯಬೇಕು.

'ಹೃದ್ಯಪೇಕ್ಷಯಾತು ಮನುಷ್ಯಾಧಿಕಾರತ್ವಾತ್' ಎಂಬ ವಾಮನಾಧಿಕರಣದ ಕೊನೆಯ ಸೂತ್ರದಲ್ಲಿ ಮನುಷ್ಯರಿಗೆ ವೇದಾಧಿಕಾರವಿದೆಯೆಂದು ಸಮರ್ಥಿಸಲಾಯಿತು. ಶೂದ್ರರೂ ಕೂಡ ಮನುಷ್ಯರೇ ಆಗಿರುವುದರಿಂದ, ಅವರಿಗೂ ಕೂಡ ವೇದಾಧಿಕಾರವನ್ನು ಹೇಳಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಶೂದ್ರರಿಗೆ ಅಧಿಕಾರವಿದೆಯೆನ್ನಲು ಪೌತ್ರಾಯಣ ಶ್ರುತಿಯನ್ನು ಆಧಾರವನ್ನಾಗಿ ನೀಡಬೇಕು. ಆದರೆ ಶ್ರುತಿಯ ಬಲದಿಂದ ಶೂದ್ರರಿಗೆ ಅಧಿಕಾರವಿಲ್ಲವೆಂದು ಸ್ಪಷ್ಟವಾಗುತ್ತಿದೆ. ಆದ್ದರಿಂದ, 'ಮನುಷ್ಯಾಧಿ- ಕಾರತ್ವಾತ್' ಎಂಬ ಪದಕ್ಕೆ ಶೂದ್ರರನ್ನು ಬಿಟ್ಟು ಉಳಿದ ಮನುಷ್ಯರು ಮಾತ್ರ ವೇದವಿದ್ಯೆಯಲ್ಲಿ ಅಧಿಕಾರವನ್ನು ಪಡೆದಿರುತ್ತಾರೆ ಎಂದರ್ಥ. ಹೀಗೆ ವಾಮನಾಧಿಕರಣದ ಸಿದ್ಧಾಂತವನ್ನು ಆಕ್ಷೇಪ ಮಾಡುವುದೇ ಈ ಅಧಿಕರಣದ ಫಲ.

ವಾಸ್ತವಿಕವಾಗಿ ಜಜ್ಞಾಸಾಧಿಕರಣದ 'ಅಥ' ಶಬ್ದದಿಂದ ತ್ರೈವರ್ಣಿಕರಿಗೆ ಮಾತ್ರ ವೇದಾಧಿಕಾರವಿದೆಯೆಂದು ಸೂಚಿತವಾಗಿದೆ. ಅದನ್ನೂ ಕೂಡ ನೇರವಾಗಿಯೇ ಆಕ್ಷೇಪ ಮಾಡಬಹುದು. ಆದರೆ ಹತ್ತಿರದಲ್ಲೇ ಇರುವ 'ಮನುಷ್ಯಾಧಿಕಾರತ್ವಾತ್' ಎಂಬುದನ್ನೇ ಆಕ್ಷೇಪ ಮಾಡಲು ಬರುವಾಗ ದೂರದಲ್ಲಿರುವ ಬುದ್ಧಿಯಲ್ಲಿ ಉಪಸ್ಥಿತವಾಗದ, ಜಜ್ಞಾಸಾಧಿಕರಣದಲ್ಲಿ 'ಅಥ' ಶಬ್ದದಿಂದ ಸೂಚಿತವಾದ ಅಧಿಕಾರವನ್ನು ಆಕ್ಷೇಪ ಮಾಡುವುದು ಯುಕ್ತವಾಗುವುದಿಲ್ಲ. ಹಾಗಾಗಿ ವಾಮನಾಧಿಕರಣದ ಸಿದ್ಧಾಂತದ ಆಕ್ಷೇಪವೇ ಈ ಅಧಿಕರಣದ ಫಲವಾಗಿದೆ.

ಛಾಂದೋಗ್ಯದ ನಾಕನೆಯ ಅಧ್ಯಾಯದ ಸಂವರ್ಗ ಪ್ರಕರಣದಲ್ಲಿ ಹೀಗೊಂದು ಕಥೆಯಿದೆ - ಪೌತ್ರಾಯಣನೆಂಬ ಒಬ್ಬ ರಾಜನಿದ್ದನು, ಮಂಚದ ಮೇಲೆ ಮಲಗಿದ್ದಾಗ ಒಂದು ರಾತ್ರಿ ತನ್ನ ಪ್ರಾಸಾದದ ಮೇಲ್ಭಾಗದ ಬಯಲಿನಲ್ಲಿ ಮಂಚದ ಮೇಲೆ ಮಲಗಿದ್ದನು. ಅವನ ಮೇಲೆ ಆಕಾಶದಲ್ಲಿ ಹಂಸಪಕ್ಷಿಗಳು ಹಾರಿಹೋದವು. ಎರಡು ಹಂಸಪಕ್ಷಿಗಳಲ್ಲಿ ಹಿಂದಿರುವ ಹಂಸಪಕ್ಷಿಯು ಮುಂದಿರುವ ಹಂಸ ಪಕ್ಷಿಯನ್ನು ಉದ್ದೇಶಿಸಿ, ಹೀಗೆ ಮಾತನಾಡಿತು - 'ಏಲೈ ! ಮಂದನೇ ಪೌತ್ರಾಯಣನ ಬ್ರಹ್ಮವರ್ಚಸ್ಸು ಅತ್ಯದ್ಭುತವಾಗಿದೆ. ಅದು ತಗಲುವಂತೆ ಅವನ ಮೇಲೆ ಹಾರಬೇಡ, ಸುಟ್ಟುಹೋಗುತ್ತಿ' ಎಂದು ಎಚ್ಚರಿಸಿತು. ಅದಕ್ಕೆ ಪ್ರತ್ಯುತ್ತರವಾಗಿ ಮುಂದಿರುವ ಹಂಸ ಪಕ್ಷಿಯು ಹೇಳಿತು. ' ಎಲೈ ! ಹಂಸವೇ? ಗಾಡಿಯ ಕೆಳಗಿರುವ ಅವಧೂತ ರೈಕ್ವಮುನಿಯ ಬಗ್ಗೆ ಹೇಳುವಂತೆ ಯಾರನ್ನೂ ಕುರಿತು ಮಾತನಾಡುತ್ತಿದ್ದೀಯಾ? ಅವನ ಬ್ರಹ್ಮವರ್ಚಸ್ಸಿನ ಮುಂದೆ ಇವನದ್ದೇನು?' ಎಂದು ಪೌತ್ರಾಯಣನ ಬಗ್ಗೆ ಅನಾದರವನ್ನು ತೋರ್ಪಡಿಸಿತು.

ಈ ತಿರಸ್ಕಾರದ ಮಾತನ್ನು ಕೇಳಿದ ರಾಜನು ಎದ್ದಕೂಡಲೇ ಬಹಳ ದುಃಖದಿಂದ ತನ್ನ ಸಾರಥಿಯನ್ನು ಕರೆದು 'ರೈಕ್ವಮುನಿಯನ್ನು ಹುಡುಕಿಕೊಂಡು ಬಾ' ಎಂದು ಆದೇಶ ಮಾಡಿದನು. ರೈಕ್ವಮುನಿಯನ್ನು ಹುಡುಕಲು ಸಾರಥಿಯು ಹೊರಟನು. ಎಲ್ಲೆಡೆ ಹುಡುಕಿ ಅವನು ಸಿಗಲಿಲ್ಲವೆಂದು ರಾಜನ ಬಳಿ ಹೇಳಿದನು. ಪುನಃ ರಾಜನು ರೈಕ್ವನ ಗುರುತನ್ನು

ಹೇಳಿ ಕಳುಹಿಸಿದನು. ಅನಂತರ ಸಾರಥಿಯು ರೈಕ್ವಮುನಿಯನ್ನು ಹುಡುಕಿಕೊಂಡು ಬಂದು, ರೈಕ್ವನಿರುವ ಸ್ಥಳವನ್ನು ತಿಳಿಸಿದನು. ಕೂಡಲೇ ರಾಜನು ಆರುನೂರು ಗೋವುಗಳನ್ನು, ಮುತ್ತಿನಹಾರವನ್ನು, ರಥವನ್ನು ತೆಗೆದುಕೊಂಡು ರೈಕ್ವನ ಮುಂದೆ ನಡೆದನು. ಗುರುದಕ್ಷಿಣೆಯಾಗಿ ಅವುಗಳನ್ನು ತಾವು ಸ್ವೀಕರಿಸಿ, ನನಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಿದನು. ರೈಕ್ವಮುನಿಯು ರಾಜನನ್ನು ಕುರಿತು, 'ಎಲೈ ! ಶೂದ್ರನೇ ಈ ಹಾರ, ರಥ, ಗೋವುಗಳು ಎಲ್ಲವೂ ನಿನಗೇ ಇರಲಿ. ನನಗೆ ಅದರಿಂದೇನು ಉಪಯೋಗ?' ಎಂದು ಹೇಳಿದನು. ಮತ್ತಷ್ಟು ಗುರುಕಾಣಿಕೆಯನ್ನು ರಾಜನು ವಿನಯದಿಂದ ಸಮರ್ಪಿಸಿ, ಸಾಂತ್ವನಗೊಳಿಸಿದನು. ರೈಕ್ವಮುನಿಯು ರಾಜನ ಮೇಲೆ ಕರುಣೆದೋರಿ, ಸಂವರ್ಗವಿದ್ಯೆಯನ್ನು ಉಪದೇಶ ಮಾಡಿದನು.

ಈ ಆಖ್ಯಾಯಿಕೆಯಲ್ಲಿ 'ಅಹಹಾರೇತ್ವ ಶೂದ್ರ' ಎಂಬ ಮಾತು ಕೇಳಿಸುತ್ತಿದೆ. 'ಶೂದ್ರ' ಎಂದು ಸಂಬೋಧನೆ ಮಾಡಿದ್ದರಿಂದ ಪೌತ್ರಾಯಣನು ಶೂದ್ರನೇ ಆಗಿದ್ದಾನೆ. ಅಂತಹ ಪೌತ್ರಾಯಣನಿಗೆ ಸಂವರ್ಗ ವಿದ್ಯೆಯನ್ನು ಉಪದೇಶ ಮಾಡಿದ ಕಾರಣ ಶೂದ್ರರಿಗೂ ವೇದವಿದ್ಯಾಧಿಕಾರವಿದೆಯೆಂದು ಪೂರ್ವಪಕ್ಷದಲ್ಲಿ ಹೇಳಲಾಗುತ್ತದೆ.

ತ್ರೈವರ್ಣಿಕರಿಗಿಂತ ಬೇರೆಯವರಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲ. ಪೌತ್ರಾಯಣನು ಕ್ಷತ್ರಿಯನೇ ಹೊರತು, ಶೂದ್ರನಲ್ಲ. ರೈಕ್ವನು ಶೂದ್ರನೆಂಬ ಜಾತಿನಿಮಿತ್ತವೆಂಬ ಶೂದ್ರನೆಂದು ಕರೆದಿಲ್ಲ ಹೊರತಾಗಿ, 'ಶುಚಾದ್ರವಣಂ' ಶೋಕದಿಂದ ಓಡಿಬಂದಿದ್ದೀಯಾ ಎಂಬರ್ಥದಲ್ಲಿ ಶೂದ್ರನೆಂದು ಸಂಬೋಧನೆ ಮಾಡಿದ್ದಾನೆ ಆದ್ದರಿಂದ ಶೂದ್ರರಿಗೆ ವೇದವಿದ್ಯಾಧಿಕಾರವಿಲ್ಲವೆಂದು ಸಿದ್ಧಾಂತ.

ಪೂರ್ವಪಕ್ಷದ ಫಲ - ಮುಂದೆ ಪೂರ್ವಪಕ್ಷದಲ್ಲಿ ಹೇಳುವ ಪ್ರಕಾರ ಶೂದ್ರನಿಗೂ ವೇದಾಧ್ಯಯನವು ಇರುವುದಾದರೆ, 'ಯತ್ರ ವೇದೋ ರಥಸ್ತತ್ರ ನ ವೇದೋ ಯತ್ರ ನೋ ರಥಃ' ಎಂಬ ಸ್ಮೃತಿಯು ಹೇಳಿದ ವೇದದಿಂದ ಅವಿನಾಭೂತವಾದ ರಥವು ಶೂದ್ರನಿಗೆ ಯುಕ್ತವಾಗುತ್ತದೆ. ಅಂದರೆ ವೇದವಿದ್ದಲ್ಲಿ ರಥವಿರುತ್ತದೆ. ವೇದವಿಲ್ಲದಿದ್ದರೆ ರಥವು ಇರುವುದಿಲ್ಲವೆಂದು ಸ್ಮೃತಿಯು ಹೇಳುತ್ತಿದೆ. ಶೂದ್ರನಿಗೆ ವಿಶಿಷ್ಟಬುದ್ಧ್ಯಾದಿಗಳಿರುವ ಕಾರಣ ವೇದವಿದೆಯೆಂದಂತಾಯಿತು. ಆದ್ದರಿಂದ ರಥಸಂಬಂಧವೂ ಕೂಡ ಶೂದ್ರನಿಗೆ ಯುಕ್ತವಾಗುತ್ತದೆ. ಆವಾಗ ರಥಸಂಬಂಧವೆಂಬ ಬಾಧಕವಿಲ್ಲದ ಕಾರಣ ತ್ರೈವರ್ಣಿಕನಲ್ಲವೆಂದು ಹೇಳಲಾಗದು. ಆದ್ದರಿಂದ ರೂಢಿಯ ಬಲದಿಂದ ಶೂದ್ರಶಬ್ದವು ಜಾತಿಪರವೇ ಆಗುತ್ತದೆ. ಆದ್ದರಿಂದ ಶೂದ್ರಾದಿಗಳಿಗೂ ವೇದಾಧಿಕಾರವಿದೆಯೆಂದು ಸಿದ್ಧವಾಗುತ್ತದೆ. .

ಸಿದ್ಧಾಂತದ ಫಲ - ಒಂದು ವೇಳೆ ಸಿದ್ಧಾಂತದಲ್ಲಿ ಹೇಳುವಂತೆ ಶೂದ್ರನಿಗೆ ವೇದಾಧಿ- ಕಾರವಿಲ್ಲವೆಂದಾದರೆ, ವೇದದಿಂದ ಅವಿನಾಭೂತವಾದ ರಥದ ಸಂಬಂಧವೂ ಕೂಡ ಯುಕ್ತವಾಗುವುದಿಲ್ಲ. ಆವಾಗ ರಥಸಂಬಂಧವೆಂಬ ಬಾಧಕವಿರುವ ಕಾರಣದಿಂದಲೇ ರೂಢಿಯನ್ನು ತ್ಯಾಗ ಮಾಡಬೇಕು, ಶೂದ್ರಶಬ್ದಕ್ಕೆ ಯೌಗಿಕಾರ್ಥವನ್ನೇ ಸ್ವೀಕರಿಸಬೇಕು. ಆವಾಗ ಶೂದ್ರನಿಗೆ ವೇದಾಧಿಕಾರವಿಲ್ಲವೆಂದು ಸಿದ್ಧವಾಗುತ್ತದೆ. ಹೀಗೆ ಫಲಫಲಿಭಾವವು ಸ್ಪಷ್ಟವಾಗಿದೆ.

ವೇದವನ್ನು ಅಧ್ಯಯನ ಮಾಡಲು ಆರ್ಥಿತ್ವ, ಸಾಮರ್ಥ್ಯ, ವೈದುಷ್ಯಗಳಿರಬೇಕು. ತ್ರೈವರ್ಣಿಕರಲ್ಲಿ ಈ ಧರ್ಮವಿರುವಂತೆ, ಶೂದ್ರರಲ್ಲೂ ಇರುತ್ತದೆ. ಆದ್ದರಿಂದ ಸ್ತ್ರೀಯರು ಶೂದ್ರರು ಬ್ರಹ್ಮಬಂಧುಗಳು ಇವರಿಗೂ ಕೂಡ ವೇದವಿದ್ಯಾಧಿಕಾರವನ್ನು ಹೇಳಬಹುದು.

ಇವರಿಗೆ ಉಪನಯನ ಸಂಸ್ಕಾರವಿಲ್ಲದ ಕಾರಣ ವೇದಾಧ್ಯಯನವನ್ನು ಹೇಗೆ ಹೇಳುವುದು? ಎಂಬ ಗೊಂದಲಕ್ಕೆ ಅವಕಾಶವಿಲ್ಲ. ಏಕೆಂದರೆ ಸಂವರ್ಗವಿದ್ಯಾ ಪ್ರಕರಣದಲ್ಲಿ ಶೂದ್ರನಾದ ಪೌತ್ರಾಯಣನಿಗೆ ರೈಕ್ವಮುನಿಗಳು 'ಅಹಹಾರೇತ್ವ

ಶೂದ್ರ' ಎಲೈ ! ಶೂದ್ರನೇ ಎಂದು ಸಂಬೋಧನೆ ಮಾಡಿ, ಸಂವರ್ಗ ವಿದ್ಯೆಯನ್ನು ಉಪದೇಶ ಮಾಡಿರುತ್ತಾರೆ. ಅಷ್ಟೇ ಅಲ್ಲದೆ, ಮಹಾಭಾರತಾದಿಗಳಲ್ಲಿ ಹೇಳುವಂತೆ ಶೂದ್ರನಾದ ವಿದುರನಿಗೆ, ಮಾಂಸ ಮಾರಾಟ ಮಾಡುವ ಧರ್ಮವ್ಯಾಧನಿಗೆ ವೇದಾರ್ಥ ತತ್ವಜ್ಞಾನವಿರುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗೆ ಕೆಲವು ಮಂದಿ ಶೂದ್ರರಿಗೆ ವೇದಾರ್ಥ ತತ್ವಜ್ಞಾನವಿರುವುದರಿಂದ ಅದಕ್ಕೆ ಕಾರಣವಾದ ಉಪನಯನ ಸಂಸ್ಕಾರವೂ ಸಹ ಅವರಿಗೆ ಆಗಿರುತ್ತದೆಂದು ಅನ್ಯಥಾನುಪಪತ್ತಿ ಪ್ರಮಾಣದಿಂದ ಸಾಧಿಸಬಹುದು.

ಅಥವಾ ಶೂದ್ರಾದಿಗಳಿಗೆ ಉಪನಯನಸಂಸ್ಕಾರವೂ ಬೇಡ, ವೇದಾಧ್ಯಯನವೂ ಬೇಡ? ಆದರೂ ವೇದಾರ್ಥ ತತ್ವಜ್ಞಾನವು ಮತ್ತೊಬ್ಬರ ಅಧ್ಯಯದಿಂದ ಅಥವಾ ಲಿಖಿತವಾದ ಪುಸ್ತಕಗಳ ಅಧ್ಯಯನದಿಂದ ಹೊಂದಬಹುದು. ಹಾಗಾಗಿ ಸ್ತ್ರೀ ಶೂದ್ರ, ಬ್ರಹ್ಮಬಂಧುಗಳಿಗೂ ವೇದಾಧಿಕಾರವಿರುತ್ತದೆ. ಪೌತ್ರಾಯಣರಾಜನು ಸಂಬೋಧನೆ ಮಾಡಿರುವ ಶೂದ್ರಶಬ್ದಕ್ಕೆ ಯೌಗಿಕಾರ್ಥವನ್ನು ಸ್ವೀಕರಿಸುವ ಅವಶ್ಯಕತೆಯಿಲ್ಲ. ಪ್ರಬಲವಾದ ರೂಢ್ಯರ್ಥವನ್ನೇ ಸ್ವೀಕರಿಸಲು ಬರುವಾಗ ಯೌಗಿಕಾರ್ಥವನ್ನು ಸ್ವೀಕರಿಸಬಾರದೆಂದು ಪೂರ್ವಮೀಮಾಂಸೆಯ ರಥಕಾರಾಧಿಕರಣವು ಸಾಧಿಸಿದೆ. ಇಷ್ಟು ಪೂರ್ವಪಕ್ಷ.

'ಅಹಹಾರೇತ್ವಶೂದ್ರ' ಎಂಬ ಸಂವರ್ಗ ಪ್ರಕರಣದಲ್ಲಿ ಬರುವಂತಹ 'ಶೂದ್ರ' ಶಬ್ದಕ್ಕೆ ಶೂದ್ರಜಾತಿಯವನು ಎಂಬರ್ಥವೇ ಅಲ್ಲ. ಹಾಗಾಗಿದ್ದಲ್ಲಿ, ಶೂದ್ರನಿಗೂ ವೇದಾಧಿಕಾರವನ್ನು ಊಹಿಸಬಹುದಿತ್ತು ಹೊರತಾಗಿ ದುಃಖದಿಂದ ಓಡಿಬಂದವನು ಎಂಬ ಕಾರಣದಿಂದ ಪೌತ್ರಾಯಣನನ್ನು ಕುರಿತು, ಮುನಿಗಳಾದ ರೈಕ್ವರು 'ಎಲೈ ! ಶೂದ್ರನೇ' ಎಂದು ಸಂಬೋಧನೆ ಮಾಡಿದ್ದಾರೆ. 'ಶೂದ್ರ' ಎಂದು ಸಂಬೋಧನೆ ಮಾಡಿದ ಮಾತ್ರಕ್ಕೆ ಶೂದ್ರಜಾತಿಯವನೇ ಆಗಿರಬೇಕೆಂದೇನು ನಿಯಮವಿಲ್ಲ.

'ಶೂದ್ರ' ಶಬ್ದಕ್ಕೆ ಶೂದ್ರಜಾತಿಯೆಂಬ ರೂಢ್ಯರ್ಥವನ್ನು ವಿವಕ್ಷಿಸಬೇಕು. ಏಕೆಂದರೆ ಯೋಗಕ್ಕಿಂತಲೂ ರೂಢಿಯು ಪ್ರಬಲವಾಗಿರುತ್ತದೆಂದು ಹಿಂದೆ ಪೂರ್ವಪಕ್ಷಿಯು ಆಕ್ಷೇಪ ಮಾಡಿದ್ದನು. ಇದು ಸರಿಯಲ್ಲ. ಬಾಧಕವಿಲ್ಲದಿದ್ದಾಗ ಮಾತ್ರ ರೂಢ್ಯರ್ಥವನ್ನು ಸ್ವೀಕರಿಸಬೇಕು. ಆದ್ದರಿಂದಲೇ ಪೂರ್ವಮೀಮಾಂಸೆಯಲ್ಲಿ 'ರಥಕಾರ' ಶಬ್ದಕ್ಕೆ ರೂಢ್ಯರ್ಥವನ್ನು ಸ್ವೀಕರಿಸಲಾಗಿದೆ. ಆದರೆ ಪ್ರಕೃತ ರೂಢ್ಯರ್ಥವನ್ನು ಸ್ವೀಕರಿಸಲು ರಥ ಸಂಬಂಧ ಮೊದಲಾದ ಬಾಧಕಗಳು ಇರುತ್ತವೆ. ಹಾಗಾಗಿ ಅನಿವಾರ್ಯವಾಗಿ ರೂಢ್ಯರ್ಥವನ್ನು ಬಿಟ್ಟು ಯೋಗಾರ್ಥವನ್ನೇ ಸ್ವೀಕರಿಸುವುದು ಉಚಿತ.

ಮತ್ತು 'ಹಾರೇತ್ವಾ ತವೈವ' ಎಂಬ ಶ್ರುತಿಯು ಕ್ಷತ್ರಿಯತ್ವವನ್ನು ಸಾಧಿಸುವ ವಿಷಯದಲ್ಲಿ ಲಿಂಗರೂಪವಾಗಿದೆ. ಆದರೆ ರಥಸಂಬಂಧ ಎಂಬರ್ಥದಲ್ಲಿ ಶ್ರುತಿರೂಪಪ್ರಮಾಣವೇ ಆಗಿದೆ. ಹಾಗಾಗಿ ಶೂದ್ರಶಬ್ದವು ಮಾತ್ರ ಶೂದ್ರಜಾತಿಯೆಂಬರ್ಥದಲ್ಲಿ ಶ್ರುತಿರೂಪವಾದ ಪ್ರಮಾಣವಾಗಿದೆಯೆಂದು ವಾದಿಸಲು ಪೂರ್ವಪಕ್ಷಿಗೆ ಸಾಧ್ಯವಿಲ್ಲ. ಮತ್ತು 'ಹಾರೇತ್ವಾ ತವೈವ' ಎಂಬ ಶ್ರುತಿಯ ಹಿಂದಿನ-ಮುಂದಿನ ಪ್ರಕರಣಗಳನ್ನು ಗಮನಿಸಿದಾಗ ಪೌತ್ರಾಯಣನು ಕ್ಷತ್ರಿಯನೇ ಆಗಿದ್ದಾನೆಂದು ಸ್ಪಷ್ಟವಾಗುತ್ತದೆ. ರೈಕ್ವಮುನಿಗಳು ವಾಸ ಮಾಡುವ ಗ್ರಾಮವನ್ನೇ ದಾನ ಮಾಡುತ್ತೇನೆಂದು ಪೌತ್ರಾಯಣನು ಹೇಳುತ್ತಾನೆ. ಬರುವವರಿಗೆಲ್ಲಾ ಅನ್ನದಾನವನ್ನು ಮಾಡುತ್ತೇನೆಂದೆಲ್ಲಾ ಪೌತ್ರಾಯಣನು ರೈಕ್ವಮುನಿಗಳ ಬಳಿ ವಿನಂತಿಸಿದ್ದಾನೆ. ಇವುಗಳನ್ನು ಗಮನಿಸಿದಾಗ ಶೂದ್ರನಾಗಲು ಸಾಧ್ಯವೇ ಇರುವುದಿಲ್ಲ.

ಬೇಡಜಾತಿಯವನಿಗೆ ವೇದಾಧಿಕಾರವಿಲ್ಲದಿದ್ದರೂ 'ಸ್ಥಪತೀಷ್ಟಿ' ಎಂಬ ಯಾಗವಿಶೇಷದಲ್ಲಿ ಮಾತ್ರ ಅಧಿಕಾರವನ್ನು ಹೇಳುವಂತೆ ಪೌತ್ರಾಯಣನು ಶೂದ್ರನಾದ್ದರಿಂದ ಸಮಗ್ರ ವೇದಾಧ್ಯಯನದಲ್ಲಿ ಅಧಿಕಾರವಿಲ್ಲದಿದ್ದರೂ ಸಂವರ್ಗಪ್ರಕರಣದಲ್ಲಿ ಮಾತ್ರ ಅಧಿಕಾರವನ್ನು ಹೇಳಬಹುದಲ್ಲವೇ? ಎಂದು ಪೂರ್ವಪಕ್ಷಿಯು

ಆಶಂಕಿಸಬಹುದು. ಆದರೆ ಯಾವುದೇ ವೇದವಿದ್ಯೆಯನ್ನು ಓದಬೇಕಾದರೂ ರಥಸಂಬಂಧವು ಇರಲೇಬೇಕು. ರಥಸಂಬಂಧವಿರುವವನಿಗೆ ಮಾತ್ರ ವೇದಾಧಿಕಾರವನ್ನು ಶ್ರುತಿಯು ಹೇಳಿದೆ. ಪ್ರಕೃತ ಪೌತ್ರಾಯಣನಿಗೆ ರಥದ ಸಂಬಂಧವಿರುವ ಪ್ರಯುಕ್ತ ವೇದಾಧಿಕಾರವಿರುವುದು ನಿಶ್ಚಿತವಾಗಿದೆ. ವೇದಾಧಿಕಾರವು ಯಾರಿಗೆ ಇರುತ್ತದೋ, ಅವರಿಗೆ ಮಾತ್ರ ರಥದಲ್ಲಿ ಕುಳಿತುಕೊಳ್ಳುವ ಅರ್ಹತೆಯಿರುತ್ತದೆ. ಆದ್ದರಿಂದಲೇ ಒಂದು ವೇಳೆ ಶೂದ್ರಾದಿಗಳು ಯುದ್ಧದಲ್ಲಿ ಪಾಲ್ಗೊಂಡರೂ ಅವರು ಕೇವಲ ಕಾಲಾಳುಗಳಾಗಿ ಯುದ್ಧ ಮಾಡಬೇಕೇ ಹೊರತು, ರಥಾರೂಢರಾಗಲು ಅವರಿಗೆ ಅಧಿಕಾರವನ್ನು ನೀಡಿರುವುದಿಲ್ಲ. ಪ್ರಕೃತ ರಥಾರೂಢನಾಗಿ ಬಂದಿರುವಂತಹ ಪೌತ್ರಾಯಣನು ವೇದಾಧಿಕಾರವನ್ನು ಹೊಂದಿರುವಂತಹ ಕ್ಷತ್ರಿಯನೇ ಆಗಿದ್ದಾನೆಂದು ಇದರಿಂದ ಸ್ಪಷ್ಟವಾಗುತ್ತದೆ. ಮತ್ತೊಬ್ಬರ ರಥದಲ್ಲಿ ಕುಳಿತುಕೊಂಡು ಬಂದಿದ್ದಾನೆಂದೂ ಸಹ ಹೇಳಬಾರದು. ಮುಂದೆ ಅವುಗಳೆಲ್ಲವನ್ನು ದಾನ ಮಾಡುತ್ತಾನೆ. ತನ್ನ ಪ್ರಭುತ್ವವಿಲ್ಲದ ವಸ್ತುಗಳನ್ನು ದಾನ ಮಾಡಲು ಹೇಗೆ ಸಾಧ್ಯ ? ರೈಕ್ವಮುನಿಗಳೂ ಸಹ ಈ ಹಸು, ರಥ ಮೊದಲಾದವುಗಳೆಲ್ಲವೂ ನಿನ್ನದಾಗಿವೆ ಎಂದು ಹೇಳಿರುತ್ತಾರೆ. ಇದರಿಂದ ಪೌತ್ರಯಣನು ತನ್ನದೇ ಆದ ರಥದಲ್ಲಿ ಬಂದಿರುತ್ತಾನೆಂದು ತಿಳಿಯುತ್ತದೆ. ಆದ್ದರಿಂದ ಶೂದ್ರಶಬ್ದಕ್ಕೆ ರೂಢ್ಯರ್ಥವನ್ನು ವಿವಕ್ಷಿಸಲು ಬಾಧಕವಿರುವ ಕಾರಣ ದುಃಖದಿಂದ ಓಡಿಬಂದಿದ್ದಾನೆಂಬ ಯೌಗಿಕಾರ್ಥವನ್ನೇ ಸ್ವೀಕರಿಸಬೇಕು.

ಅದ್ವೈತಿಗಳು ಶೂದ್ರಶಬ್ದಕ್ಕೆ ರೂಢ್ಯರ್ಥವನ್ನು ಬಿಟ್ಟು ಯೌಗಿಕಾರ್ಥವನ್ನೇ ಸ್ವೀಕರಿಸಬೇಕೆನ್ನಲು ಬೇರೆ ಕಾರಣವನ್ನೇ ನೀಡುತ್ತಾರೆ. ಸಂವರ್ಗವಿದ್ಯೆಯು ಆಖ್ಯಾಯಿಕೆ ಎನಿಸಿದ್ದರಿಂದ ಅರ್ಥವಾದ ರೂಪವಾಗಿದೆ. ಪೂರ್ವಮೀಮಾಂಸೆಯ ರಥಕಾರಪ್ರಕರಣದಲ್ಲಿರುವ ರಥಕಾರಶಬ್ದವು ಇಷ್ಟವಿಶೇಷವನ್ನು ವಿಧಾನ ಮಾಡಲು ಹೊರಟಿದ್ದರಿಂದ ವಿಧಿರೂಪವಾಗಿದೆ. ಅರ್ಥವಾದ ವಾಕ್ಯದಲ್ಲಿ ರೂಢ್ಯರ್ಥವನ್ನು ಬಿಡಬಹುದು. ಆದರೆ ವಿಧಿವಾಕ್ಯದಲ್ಲಿ ರೂಢ್ಯರ್ಥವನ್ನು ಬಿಟ್ಟು ಗೌಣಾರ್ಥವನ್ನು ಮಾಡಬಾರದು. ಹಾಗಾಗಿ ರಥಕಾರಾದಿ ಶಬ್ದಗಳಲ್ಲಿ ರೂಢ್ಯರ್ಥವನ್ನು ಬಿಡದಿರಲು ಕಾರಣವಿರುವಂತೆ ಪ್ರಕೃತ ಅಂತಹ ಕಾರಣಗಳಿರುವುದಿಲ್ಲ. ಆದ್ದರಿಂದ ರೂಢ್ಯರ್ಥವನ್ನು ಬಿಟ್ಟು ಯೌಗಿಕಾರ್ಥವನ್ನು ಶೂದ್ರಶಬ್ದಕ್ಕೆ ಹೇಳಬಹುದು ಎಂದು ಅದ್ವೈತಿಗಳ ವಾದ.

ಇದು ಸರಿಯಲ್ಲ. ಮೀಮಾಂಸಕರು ಹೀಗೆ ಉತ್ತರಿಸಬಹುದೇ ಹೊರತು, ಅದ್ವೈತಿಗಳು ಉತ್ತರಿಸಬಾರದು. ಏಕೆಂದರೆ ಮೀಮಾಂಸಕರ ಮತದಲ್ಲಿ ಅರ್ಥವಾದಕ್ಕೆ ಸ್ವಾರ್ಥದಲ್ಲಿ ತಾತ್ಪರ್ಯವಿರುವುದಿಲ್ಲ. ಆದರೆ ಅದ್ವೈತಮತದಲ್ಲಿ ಸ್ವಾರ್ಥದಲ್ಲಿಯೂ ತಾತ್ಪರ್ಯವನ್ನು ಒಪ್ಪಲಾಗಿದೆ. ಆದ್ದರಿಂದ ಬಾಧಕವಿರುವುದು, ಇಲ್ಲದಿರುವುದೇ ರೂಢ್ಯರ್ಥತ್ಯಾಗ ಹಾಗೂ ಅತ್ಯಾಗಕ್ಕೆ ಕಾರಣಗಳು ಹೊರತು, ಅರ್ಥವಾದವಾಗಿರುವಿಕೆ, ಆಗದಿರುವಿಕೆ ಎಂಬುದಲ್ಲ. ಆದ್ದರಿಂದ ಅದ್ವೈತಿಗಳ ನಿಲುವು ಸರಿಯಿಲ್ಲ.

ಶೂದ್ರರಿಗೆ ಉಪನಯನಸಂಸ್ಕಾರವೇ ಇರುವುದಿಲ್ಲ. ಆದ್ದರಿಂದ ವೇದಾಧ್ಯಯನದಲ್ಲೂ ಅಧಿಕಾರವಿರುವುದಿಲ್ಲ.

'ಅಷ್ಟವರ್ಷಂ ಬ್ರಾಹ್ಮಣಮ್ ಉಪನಯೀತ' ಎಂಬ ವಾಕ್ಯದಲ್ಲಿ ಬ್ರಾಹ್ಮಣನಾಗಿದ್ದರೆ ಮಾತ್ರ ಉಪನಯನ ಮಾಡಬೇಕು. ಬೇರೆ ಜಾತಿಯವರಾಗಿದ್ದರೆ ಉಪನಯನ ಮಾಡದಿದ್ದರೂ ವೇದಾಧ್ಯಯನವನ್ನು ಮಾಡಿಸಬಹುದೆಂದು ಹೇಳಲಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. 'ತಮಧ್ಯಾಯಪಯೀತ' ಎಂಬ ಮುಂದಿನ ವಾಕ್ಯದಲ್ಲಿ 'ತತ್' ಶಬ್ದದಿಂದ ಉಪನೀತನಾದವನನ್ನೇ ಪರಾಮರ್ಶ ಮಾಡಬೇಕು. ಆದ್ದರಿಂದ ಉಪನೀತನಾದವನಿಗೆ ಮಾತ್ರ, ಅಧ್ಯಯನವನ್ನು ಮಾಡಿಸಬೇಕಾದ ಕಾರಣ ಉಪನಯನಸಂಸ್ಕಾರವಿಲ್ಲದ ಶೂದ್ರಾದಿಗಳಿಗೆ ವೇದಾಧ್ಯಯನದಲ್ಲಿ ಅಧಿಕಾರ ಬರಲು ಸಾಧ್ಯವೇ ಇಲ್ಲ. ಮತ್ತು 'ಸ್ವಾಧ್ಯಾಯೋऽಧ್ಯೇತವ್ಯಃ' ಎಂಬ ವಾಕ್ಯವು ಯಾವ ಕರ್ತೃವನ್ನೂ ಕೂಡ ಹೇಳಿಲ್ಲ. ಇದರಿಂದ ಹಿಂದೆ ಪ್ರಕೃತನಾದ ಉಪನೀತನನ್ನೇ ಕರ್ತೃತ್ವೇನ ವಿವಕ್ಷಿಸಬೇಕು. 'ವೇದಃ ಕೃತ್ಸ್ನೋऽಧಿಗಂತವ್ಯಃ

ಸರಹಸ್ಯೋ ದ್ವಿಜನ್ಮಾ:' ಎಂಬ ಶ್ರುತಿಯೂ ಸಹ ಉಪನಯನವೆಂಬ ಎರಡನೆಯ ಜನ್ಮವನ್ನು ಹೊಂದಿದವನಿಗೆ ಮಾತ್ರ ವೇದಾಧಿಕಾರವನ್ನು ಘೋಷಣೆ ಮಾಡುತ್ತಿದೆ.

'ನಾಗ್ನಿರ್ನ ಯಜ್ಞೋ ನ ಸಂಸ್ಕಾರ:' ಎಂಬ ವಾಕ್ಯವು ಶೂದ್ರನಿಗೆ ಸಂಸ್ಕಾರವಿಲ್ಲವೆಂದು ಹೇಳುತ್ತಿದೆ ಹೊರತು, ಸಂಸ್ಕಾರ ಮಾಡಬಾರದೆಂದೇನೂ ಹೇಳುತ್ತಿಲ್ಲವಲ್ಲ ಎಂದೂ ಸಹ ಪ್ರಶ್ನಿಸಬಾರದು. ಸಂಸ್ಕಾರವಿಲ್ಲವೆಂದರೆ ಸಂಸ್ಕಾರವನ್ನು ಮಾಡಬಾರದೆಂದೇ ಅಭಿಪ್ರಾಯ. ಸಾಮಾನ್ಯವಿಧಿಯಿಂದ ಪ್ರಾಪ್ತವಾದ ಯಜ್ಞಾದಿಗಳನ್ನು ಶೂದ್ರಾದಿಗಳಿಗೆ ಇಲ್ಲವೆಂದು ಹೇಳಿದರೆ ಶೂದ್ರಾದಿಗಳು ಯಜ್ಞಾದಿಗಳನ್ನು ಮಾಡಲು ಅರ್ಹರಲ್ಲ ಎಂದೇ ಅಭಿಪ್ರಾಯವಾಗುತ್ತದೆ. ಇನ್ನು ಅಧ್ಯಯನ ಮಾಡದಿದ್ದರೂ ಪುಸ್ತಕ ಮೊದಲಾದವುಗಳನ್ನು ಓದಿಕೊಂಡು ವೇದಾರ್ಥತತ್ವಜ್ಞಾನವನ್ನು ಶೂದ್ರರು ಪಡೆಯಬಹುದಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಆದರೆ ಶ್ರುತಿಯು ಸ್ಪಷ್ಟವಾಗಿ ಶೂದ್ರನಿಗೆ ವೇದಾಧ್ಯಯನವಿಲ್ಲವೆಂದಷ್ಟೇ ಹೇಳಿಲ್ಲ. ವೇದವನ್ನು ಕಿವಿಯಿಂದ ಕೇಳಲೂ ಬಾರದು. ಅದರ ಅರ್ಥವನ್ನೂ ಸಹ ತಿಳಿದುಕೊಳ್ಳಬಾರದೆಂದು ಸ್ಪಷ್ಟವಾಗಿ ನಿಷೇಧ ಮಾಡುತ್ತಿದೆ. ವಿದುರ, ಧರ್ಮವ್ಯಾಧ ಮೊದಲಾದವರು ವೇದಾರ್ಥತತ್ವಜ್ಞಾನವನ್ನು ತಿಳಿದಿರುವುದು ಮಹಾಭಾರತಾದಿಗಳಲ್ಲಿ ಉಲ್ಲೇಖವಿರಬಹುದು. ಆದರೆ ಅವರು ಈ ಶೂದ್ರರಿಗಿಂತ ಅತ್ಯಂತ ವಿಲಕ್ಷಣರಾಗಿದ್ದಾರೆ ಜಾತಾಪರೋಕ್ಷಿಗಳಾದ್ದರಿಂದ ಜನ್ಮಾಂತರ ಸಂಸ್ಕಾರಗಳಿಂದ ಅವರಿಗೆ ಹಾಗೇ ತಿಳಿದುಕೊಳ್ಳುವಂತಹ, ಈ ಜನ್ಮದಲ್ಲಿ ತಿಳಿದುಕೊಳ್ಳದಿದ್ದರೂ ಹಿಂದಿನ ಜನ್ಮದ ಸಂಸ್ಕಾರದಿಂದ ವೇದಾರ್ಥತತ್ವಜ್ಞಾನವನ್ನು ಅವರು ಪಡೆದಿರುತ್ತಾರೆ

ಉಪನಯನ ಸಂಸ್ಕಾರವಿದ್ದವರಿಗೆ ಮಾತ್ರ ವೇದಾಧ್ಯಯನ. ಯಾರಿಗೆ ಉಪನಯನ ಸಂಸ್ಕಾರವಿಲ್ಲವೋ ಅವರಿಗೆ ವೇದಾಧ್ಯಯನವಿಲ್ಲ. ಆದ್ದರಿಂದಲೇ ಸ್ತ್ರೀಯರಿಗೂ ವೇದಾಧಿಕಾರವು ಇರುವುದಿಲ್ಲ. ಆದರೆ ಉತ್ತಮ ಸ್ತ್ರೀಯರಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುತ್ತದೆ. ಪರಮತದವರು ಯಾವುದೇ ಸ್ತ್ರೀಯರಿಗೂ ಸಹ ವೇದಾಧಿಕಾರವಿಲ್ಲವೆನ್ನುತ್ತಾರೆ. ಇದು ತಪ್ಪು. ಶಚಿದೇವಿಯೇ ಸಾಕ್ಷಾತ್ತಾಗಿ 'ಸಪತ್ನೀಂ ಮೇ ಪರಾಧಮ' ಇತ್ಯಾದಿ ವೇದಗಳನ್ನು ಸಾಕ್ಷಾತ್ಕಾರ ಮಾಡಿಕೊಂಡಿರುತ್ತಾಳೆ. ಇದರಿಂದ ಊರ್ವಶೀ, ಶಚೀ ಮೊದಲಾದ ಉತ್ತಮ ಸ್ತ್ರೀಯರಿಗೆ ವೇದವಿದ್ಯಾಧಿಕಾರವಿರುತ್ತದೆಂದು ಸ್ಪಷ್ಟವಾಗುತ್ತದೆ. ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಯಾಜ್ಞವಲ್ಕ್ಯರು ಗಾರ್ಗಿಯನ್ನು ಕುರಿತು ಸಂಬೋಧನೆ ಮಾಡಿ ಅಕ್ಷರವಿದ್ಯೆಯನ್ನು ಉಪದೇಶ ಮಾಡಿದ್ದಾರೆ. ಮೈತ್ರೇಯಿಗೆ ಆತ್ಮೋಪದೇಶವನ್ನು ಮಾಡಿದ್ದಾರೆ. ಮತ್ತು 'ಭವತಿ ತೇ ವ್ಯಾಖ್ಯಾಸ್ಯಾಮಿ' ಎಂದು ಮೈತ್ರೇಯಿಯನ್ನು ಸಂಬೋಧನೆ ಮಾಡಿ, 'ವ್ಯಾಚಕ್ಷಾಣಸ್ಯ ತು ಮೇ ನಿದಿಧ್ಯಾಸಸ್ವ' 'ನಾನು ವ್ಯಾಖ್ಯಾನ ಮಾಡಿದ್ದನ್ನು ನೀನು ನಿದಿಧ್ಯಾಸನ ಮಾಡು' ಎಂದು ಉಪದೇಶ ಮಾಡಿದ್ದಾರೆ. ಆದ್ದರಿಂದ ಉತ್ತಮ ಸ್ತ್ರೀಯರಿಗೆ ವೇದಾಧ್ಯಯನದಲ್ಲಿ ಮಾತ್ರ ಅಧಿಕಾರವಲ್ಲ. ಅದರ ಅನುಷ್ಠಾನದ ವಿಷಯದಲ್ಲಿಯೂ ಅಧಿಕಾರವಿದ್ದೇ ಇರುತ್ತದೆ. 'ವಿವಾಹ' ಎಂಬ ಸಂಸ್ಕಾರವೇ ಉಪನಯನ ಪ್ರತಿನಿಧಿಯಾಗಿರುತ್ತದೆ. ಆದ್ದರಿಂದ ಅವರಿಗೂ ವಿವಾಹವೆಂಬ ಸಂಸ್ಕಾರವಿರುವ ಕಾರಣ ವೇದಾಧ್ಯಯನದಲ್ಲಿ ಅಧಿಕಾರವನ್ನು ಹೇಳಬೇಕು. ಆದರೆ ಸಾಮಾನ್ಯ ಸ್ತ್ರೀಯರಿಗೆ ವೇದದ ಶ್ರವಣ-ಪಠಣ ಮೊದಲಾದವುಗಳವುಗಳಲ್ಲಿ ಸರ್ವಥಾ ಅಧಿಕಾರವಿರುವುದಿಲ್ಲ. ಇಷ್ಟು ಅಪಶೂದ್ರಾಧಿಕರಣದ ಸಾರ.

'ನಾಗ್ನಿರ್ನಯಜ್ಞ:' ಎಂಬ ಶ್ರುತಿಯು ಯಾಗಾದಿಕರ್ಮಗಳಲ್ಲಿಯೂ ಶೂದ್ರರಿಗೆ ಅಧಿಕಾರವಿಲ್ಲವೆಂದು ನಿಷೇಧ ಮಾಡುತ್ತಿದೆ. ಹೀಗೆ ನಿಷೇಧವಿರುವ ಕಾರಣದಿಂದಲೇ ಶೂದ್ರರಿಗೆ ಯಾಗಾದಿಕರ್ಮಗಳಲ್ಲಿ ಅಧಿಕಾರವಿಲ್ಲವೆಂದು ಹೇಳಬೇಕು ಆದರೆ ಮೀಮಾಂಸಕರು ತ್ರೈವರ್ಣಿಕರಿಗೆ ಮಾತ್ರ ಆಗ್ನ್ಯಾಧಾನ ಸಂಸ್ಕಾರವನ್ನು ವಿಧಾನ ಮಾಡಿದ್ದರಿಂದ ಶೂದ್ರರಿಗೆ ಅಧಿಕಾರವಿಲ್ಲವೆಂದು ಹೇಳುತ್ತಾರೆ. ಇದು ಸರಿಯಲ್ಲ. ಏಕೆಂದರೆ ಆಗ್ನ್ಯಾಧಾನ ಸಂಸ್ಕಾರವಿಲ್ಲದಿದ್ದರೆ ಯಾಗಾದಿಕರ್ಮಗಳಲ್ಲಿ

ಅಧಿಕಾರವಿಲ್ಲವೆಂದು ಹೇಳುವುದೇ ತಪ್ಪು. ರಥಕಾರನು ತ್ರೈವರ್ಣಿಕರಲ್ಲಿ ಸೇರಿಲ್ಲ. ಆದರೂ ಯಾಗಕರ್ಮದಲ್ಲಿ ಅಧಿಕಾರವನ್ನು ಪಡೆದಿರುತ್ತಾನೆ. ಮತ್ತು 'ವಸಂತೇ ಬ್ರಾಹ್ಮಣಮುಪನಯೀತ ಗ್ರೀಷ್ಮೇ ರಾಜನ್ಯಂ ಶರದಿ ವೈಶ್ಯಮ್' ಎಂಬ ವಾಕ್ಯವು ಬ್ರಾಹ್ಮಣಾದಿಗಳಿಗೆ ವಸಂತ ಮೊದಲಾದ ಕಾಲಗಳಲ್ಲಿ ಉಪನಯನ ಸಂಸ್ಕಾರವನ್ನು ವಿಧಾನ ಮಾಡುತ್ತಿದೆ. ಶೂದ್ರರಿಗೆ ಹಾಗೇ ವಿಧಾನ ಮಾಡದ ಕಾರಣ ಉಪನಯನಸಂಸ್ಕಾರವಿಲ್ಲವೆಂದು ಹೇಳಲಾಗದು. ಏಕೆಂದರೆ ಬ್ರಾಹ್ಮಣಾದಿಗಳಿಗೆ ಉಪನಯನವಾಗಲು ಕಾಲದ ನಿಯಮವಿದೆ. ಶೂದ್ರಾದಿಗಳಿಗೆ ಉಪನಯನ ಮಾಡಲು ಕಾಲನಿಯಮವಿಲ್ಲವೆಂದೂ ಸಹ ಕೂಡಿಸಲು ಬರುತ್ತದೆ.

ತ್ರೈವರ್ಣಿಕರಿಗಿಂತ ಭಿನ್ನರಾದವರಿಗೆ ಯಾಗದಲ್ಲಿ ಅಧಿಕಾರವಿಲ್ಲವೆಂದು ಪೂರ್ವಮೀಮಾಂಸಕರು ಹೇಳಿದರು. ಆದರೆ ರಥಕಾರರಿಗೆ ಯಾಗಾಧಿಕಾರವನ್ನು ಮೀಮಾಂಸಕರೇ ಒಪ್ಪಿದ್ದರಿಂದ 'ಅಂಶೇ ಬಾಧ' ಮತ್ತು 'ಭಾಗಾಸಿದ್ಧಿ' ಎಂಬೆರಡು ದೋಷಗಳು ಬರುತ್ತವೆಂದು ಸಮರ್ಥಿಸಲಾಯಿತು. ಮತ್ತು ಶೂದ್ರರಿಗೂ ಕೂಡ ಸಂಸ್ಕೃತವಾದ ಅಗ್ನಿಯಲ್ಲಿಯೇ ಯಾಗಾಧಿಕಾರವನ್ನು ಹೇಳಬಹುದು. ವಸಂತಾದಿ ವಾಕ್ಯಗಳು ಕೇವಲ ಕಾಲವನ್ನಷ್ಟೇ ವಿಧಾನ ಮಾಡುತ್ತಿದೆ ಹೊರತು, ತ್ರೈವರ್ಣಿಕರಿಗೆ ಮಾತ್ರ ಅಗ್ನ್ಯಾಧಾನ ಬೇರೆಯವರಿಗೆ ಇಲ್ಲವೆಂದೇನೂ ಹೇಳುತ್ತಿಲ್ಲ. ಬೇರೆ ವಾಕ್ಯದಿಂದ ಶೂದ್ರರಿಗೂ ಅಗ್ನ್ಯಾದಾನದ ವಿಧಿಯಿದೆ. ಆದ್ದರಿಂದ ಬ್ರಾಹ್ಮಣಾದಿಗಳಾದಲ್ಲಿ ವಸಂತಾದಿಕಾಲಗಳಲ್ಲೇ ಅಗ್ನ್ಯಾಧಾನದ ವಿಧಾನವಿದೆ. ಶೂದ್ರನಾದರೆ ಋತುವಿನ ನಿಯಮವಿಲ್ಲದೇ ಬೇರೆ ಋತುಗಳಲ್ಲಿ ಆಧಾನ ಮಾಡಬೇಕೆಂದು ತಿಳಿಯುತ್ತದೆ. ಹಾಗಾಗಿ ಶೂದ್ರನಿಗೆ ಸಂಸ್ಕೃತವಾದ ಅಗ್ನಿಯಲ್ಲಿ ಅಧಿಕಾರವನ್ನು ಹೇಳಬಹುದು.

ಅಥವಾ ಸಂಸ್ಕೃತವಾದ ಅಗ್ನಿಯಲ್ಲಿ ಯಾಗಾಧಿಕಾರವನ್ನು ಒಪ್ಪದಿದ್ದರೂ ಲೌಕಿಕಾಗ್ನಿಯಲ್ಲಿ ಯಾಗಾಧಿಕಾರವನ್ನು ಹೇಳಬಹುದು. ಉದಾಹರಣೆ : ಉಪಯನ ಮಾಡುವ ಮೊದಲು ಮಾಣವಕನು ಹೋಮವನ್ನು ಆಚರಿಸಬೇಕು. ಮತ್ತು ಬೇಡಜಾತಿಯವನು ಸ್ಥಪತೀಷ್ಟಿಯನ್ನು ಆಚರಿಸುತ್ತಾನೆ. ಚರಮಧಾತು ವಿಸರ್ಗಮಾಡಿದ ಬ್ರಹ್ಮಚಾರಿಗೂ ಪ್ರಾಯಶ್ಚಿತ್ತಹೋಮವನ್ನು ವಿಧಿಸಲಾಗಿದೆ. ಇವೆಲ್ಲವೂ ಲೌಕಿಕಾಗ್ನಿಯಲ್ಲಿಯೇ ಮಾಡಬೇಕೆಂದು ಪೂರ್ವಮೀಮಾಂಸೆಯಲ್ಲಿ ನಿರ್ಣಯಿಸಿದ್ದಾರೆ. ಅದರಂತೆ ಶೂದ್ರನೂ ಕೂಡ ಲೌಕಿಕಾಗ್ನಿಯಲ್ಲಿ ಹೋಮವನ್ನು ಮಾಡಬಹುದು. ಅಥವಾ ಶೂದ್ರನಿಗೆ ಅಗ್ನಿಯೂ ಬೇಡ, ಅಗ್ನ್ಯಾಧಾನವೂ ಬೇಡ, ಲೌಕಿಕಾಗ್ನಿಯಲ್ಲಿ ಅಧಿಕಾರವೂ ಬೇಡ. ಆದರೆ ಸಂಧ್ಯಾವಂದನಾದಿಗಳಲ್ಲಿ ಅಧಿಕಾರವಿರಬಹುದು. ಉಪನಯನ ಮಾಡಿಕೊಂಡ ನಂತರ ಉಪಾಕರ್ಮದ ತನಕ ಗುರುಕುಲವಾಸವನ್ನು ಮಾಡಬಾರದೆಂಬ ನಿಯಮವಿದೆ. ಆದರೂ ಅಲ್ಲಿಯ ತನಕ ಸಂಧ್ಯಾವಂದನಾದಿಗಳಲ್ಲಿ ಬ್ರಾಹ್ಮಣನು ಅಧಿಕಾರವು ಪಡೆಯುವಂತೆ ಶೂದ್ರನೂ ಸಹ ಸಂಧ್ಯಾವಂದನಾದಿಗಳಲ್ಲಿ ಅಧಿಕಾರವನ್ನು ಪಡೆಯಬಹುದಲ್ಲವೇ? ಆದ್ದರಿಂದ ಮೀಮಾಂಸಕರಿಗೆ ಶೂದ್ರಾದಿಗಳು ವೇದಾಧ್ಯಯನದಲ್ಲಿ ಅಧಿಕಾರವನ್ನು ಹೊಂದಲಾರರೆಂದು ಸಮರ್ಥಿಸಲಾಗದು.

ಮೀಮಾಂಸಕರು ಶೂದ್ರರಿಗೆ ಕರ್ಮಾಧಿಕಾರವಿಲ್ಲವೆನ್ನಲು ಅವಿದ್ವತ್ವವು ಕಾರಣವೆನ್ನುತ್ತಾರೆ. ಇದೂ ಸಹ ತಪ್ಪು. ವೇದಗಳಲ್ಲಿ ಹೇಳಿದ ಕರ್ಮವಿಚಾರವು ಯಾರಿಗೆ ತಿಳಿದಿರುತ್ತದೋ ಅವನು ಮಾತ್ರ ಯಾಗಾದಿಕರ್ಮಗಳಲ್ಲಿ ಅಧಿಕಾರವನ್ನು ಪಡೆಯುತ್ತಾನೆ. ಆದರೆ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವೇ ಇಲ್ಲದ ಕಾರಣ ಅದರಲ್ಲಿ ಹೇಳಿರುವ ಕರ್ಮಗಳ ಜ್ಞಾನವೂ ಸಹ ಅವನಿಗಿರುವುದಿಲ್ಲವೆಂಬುದು ಮೀಮಾಂಸಕರ ಅಭಿಪ್ರಾಯ. ಆದರೆ ನೀಚಜಾತಿಯಲ್ಲಿ ಹುಟ್ಟಿದ ರಥಕಾರನಿಗೆ ಇದೇ ಮೀಮಾಂಸಕರು ಅಗ್ನ್ಯಾಧಾನವನ್ನು ಹೇಳಿರುತ್ತಾರೆ. ಮತ್ತು ಬ್ರಾಹ್ಮಣಾದಿಗಳು ಕೇವಲ ತಮ್ಮ ಶಾಖೆಯನ್ನಷ್ಟೇ ಅಧ್ಯಯನ ಮಾಡಬೇಕು. ಬೇರೆ ಶಾಖೆಗಳನ್ನು ಅಧ್ಯಯನ ಮಾಡಬಾರದೆನ್ನುತ್ತಾರೆ. ಬೇರೆ ಶಾಖೆಗಳಲ್ಲಿ ಹೇಳಿದ, ಕರ್ಮಾಂಗಗಳ ಜ್ಞಾನವು ಬ್ರಾಹ್ಮಣನಿಗೆ ಹೇಗೆ ಬರುತ್ತದೆ? ರಥಕಾರನಿಗೂ ಸಹ ಅಗ್ನ್ಯಾಧಾನ ಮಾಡಬೇಕೆಂಬ

ಜ್ಞಾನವು ಹೇಗೆ ಬರುತ್ತದೆ ? ಅಷ್ಟೇ ಅಲ್ಲದೇ ಶೂದ್ರನು 'ಬ್ರಾಹ್ಮಣೋ ನ ಹಂತವ್ಯಃ' ಎಂಬ ನಿಷೇಧವನ್ನು ಅರಿತಿರುತ್ತಾನೆ. ವೇದಾಧ್ಯಯನ ಮಾಡದ ಶೂದ್ರನಿಗೆ ಈ ನಿಷೇಧವಾಕ್ಯಾರ್ಥಜ್ಞಾನವೂ ಸಹ ಹೇಗೆ ಬಂದಿರುತ್ತದೆ? ಆದ್ದರಿಂದ ಮತ್ತೊಬ್ಬರ ಉಪದೇಶದಿಂದ ಆಯಾ ಸಂದರ್ಭಕ್ಕನುಗುಣವಾಗಿ ಅಂಗಕರ್ಮಗಳನ್ನು ತಿಳಿಯುತ್ತಾರೆಂದೇ ಹೇಳಬೇಕು. ಅದರಂತೆ ಶೂದ್ರನಿಗೂ ಸಹ ಜ್ಯೋತಿಷ್ಟೋಮಾದಿ ಯಾಗಗಳನ್ನು ಹೇಗೆ ಅನುಷ್ಠಾನ ಮಾಡಬೇಕೆಂಬ ಅರಿವು ಮತ್ತೊಬ್ಬರ ಉಪದೇಶದಿಂದ ಬರಬಹುದಲ್ಲವೇ?

ಶೂದ್ರನಿಗೆ ಅಗ್ನಿವಿದ್ಯೆಯಾಗಲೀ, ಅಗ್ನ್ಯಾಧಾನವಾಗಲೀ ವಿಹಿತವಲ್ಲ. ಆದ್ದರಿಂದ ನಿತ್ಯಕರ್ಮದಲ್ಲಿ ಅನುಷ್ಠಾನವು ಯುಕ್ತವಾಗುವುದಿಲ್ಲವೆಂದು ಹೇಳಬಾರದು. ಏಕೆಂದರೆ ಸ್ವತಃ ಮೀಮಾಂಸಕರೇ ಸರ್ವಶಕ್ತ್ಯಧಿಕರಣದಲ್ಲಿ ಅಂಧರಿಗೂ ಕೂಡ ನಿತ್ಯಕರ್ಮವನ್ನು ಹೇಳಿರುತ್ತಾರೆ. ಅಂದರೆ ನಿತ್ಯಕರ್ಮಕ್ಕೆ ಅಧಿಕಾರಿಗಳೆನಿಸಿದ ಬ್ರಾಹ್ಮಣರು ಕುರುಡರಾಗಿದ್ದಲ್ಲಿ ಯಜ್ಞದ ಸಂದರ್ಭದಲ್ಲಿ ಆಜ್ಯಾವೇಕ್ಷಣವನ್ನು ನೋಡಲು ಸಾಧ್ಯವಾಗುವುದಿಲ್ಲ. ಆದರೂ ಸಹ ಆ ಆಜ್ಯಾವೇಕ್ಷಣೆಯೆಂಬ ಕರ್ಮವನ್ನು ಬಿಟ್ಟು ಉಳಿದ ಕರ್ಮಗಳನ್ನು ಅನುಷ್ಠಾನ ಮಾಡಬೇಕೆಂದು ಸಿದ್ಧಾಂತ ಮಾಡಿದ್ದಾರೆ. ಅದರಂತೆ ಶೂದ್ರನಿಗೂ ಸಹ ಅಗ್ನಿವಿದ್ಯೆಯೆಂಬ ಒಂದು ಕರ್ಮದಲ್ಲಿ ಅಧಿಕಾರವಿಲ್ಲದಿದ್ದರೂ ಉಳಿದ ಅಂಗಕರ್ಮಗಳನ್ನು ಅನುಷ್ಠಾನ ಮಾಡುವ ಮೂಲಕ ನಿತ್ಯಕರ್ಮಗಳಲ್ಲಿ ಅಧಿಕಾರವನ್ನು ಪಡೆಯಬಹುದು.

ಶೂದ್ರನಿಗೆ ಅಗ್ನಿವಿದ್ಯೆಯಲ್ಲಿ ಅಧಿಕಾರವಿಲ್ಲದಿದ್ದರೂ 'ಯಾವಜ್ಜೀವಂ ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯದಲ್ಲಿ ಹೇಳಿದ ನಿತ್ಯಕರ್ಮವನ್ನು ಅನುಷ್ಠಾನ ಮಾಡಬಹುದು. ಹಾಗಾಗಿ ಶೂದ್ರಾದಿಗಳಿಗೆ ವೈದುಷ್ಯಾದಿಗಳಿಲ್ಲದ ಕಾರಣ ಕರ್ಮಾಧಿಕಾರವಿಲ್ಲವೆಂಬ ಮೀಮಾಂಸಕರ ಧೋರಣೆ ಅತ್ಯಂತ ಅಸಾಧುವಾಗಿದೆ ಹೊರತಾಗಿ, 'ನಾಗ್ನಿರ್ನ ಯಜ್ಞಃ' ಎಂಬ ನಿಷೇಧವಾಕ್ಯವಿರುವ ಪ್ರಯುಕ್ತವಾಗಷ್ಟೇ ಕರ್ಮದಲ್ಲಿ ಅಧಿಕಾರವಿಲ್ಲವೆಂದು ಹೇಳಬೇಕು.

ಈ ಅಧಿಕರಣದಲ್ಲಿ ಒಟ್ಟು ಐದು ಸೂತ್ರಗಳಿವೆ. ಸಾಮಾನ್ಯವಾಗಿ ಪ್ರತಿಯೊಂದು ಅಧಿಕರಣಗಳ ಪ್ರಾರಂಭದಲ್ಲಿ ಸ್ವಪಕ್ಷಸಾಧಕಪ್ರಮಾಣಗಳನ್ನು ಹೇಳಿ, ಅನಂತರ ಪರಪಕ್ಷ ನಿರಾಕರಣೆಯನ್ನು ಮಾಡುತ್ತಾರೆ. ಆದರೆ ಈ ಅಧಿಕರಣದಲ್ಲಿ ಪರಪಕ್ಷನಿರಾಸವನ್ನು ಪ್ರಥಮಸೂತ್ರದಲ್ಲಿ ಮಾಡಿ, ಮುಂದಿನ ಸೂತ್ರಗಳಲ್ಲಿ ಸ್ವಪಕ್ಷ ಸಾಧಕಪ್ರಮಾಣಗಳನ್ನು ಹೇಳಿರುತ್ತಾರೆ. ಏಕೆಂದರೆ 'ಶೂದ್ರ' ಶಬ್ದವು ರೂಢವಾಗಿ ಬಿಟ್ಟರೆ ಸಿದ್ಧಾಂತ ಹೇತುಗಳೆಲ್ಲವೂ ಅಸಿದ್ಧವಾಗುತ್ತವೆ. ಹಾಗಾಗಿ ಪೂರ್ವಪಕ್ಷಕಾರನು ಹೇಳುವಂತೆ ಶೂದ್ರಶಬ್ದವು ರೂಢವಲ್ಲ. ಯೌಗಿಕವೇ ಆಗಿವೆಯೆಂದು ಮೊದಲು ಪರಪಕ್ಷವನ್ನು ನಿರಾಕರಣೆ ಮಾಡುವುದು ಅತ್ಯಂತ ಅನಿವಾರ್ಯವಾಗಿದೆ. ಮತ್ತು ಪರಪಕ್ಷ ನಿರಾಕರಣೆಯಲ್ಲಿ ಹೆಚ್ಚು ಪ್ರಯತ್ನ ಬೇಕು. ಆದ್ದರಿಂದ ಮೊದಲು ಪರಪಕ್ಷವನ್ನು ನಿರಾಕರಣೆ ಮಾಡಿ ಅನಂತರ ಸುಲಭವಾದ ಸ್ವಪಕ್ಷಸಾಧಕಪ್ರಮಾಣಗಳನ್ನು ಮುಂದಿನ ಸೂತ್ರಗಳಲ್ಲಿ ಸಮರ್ಥನೆ ಮಾಡಿದ್ದಾರೆ.

'ಶುಗಸ್ಯ ತದನಾದರಶ್ರವಣಾತ್ತದಾದ್ರವಣಾತ್ ಸೂಚ್ಯತೇ ಹಿ' ಎಂಬ ಮೊದಲನೆಯ ಸೂತ್ರದಲ್ಲಿ ಶೂದ್ರಶಬ್ದವನ್ನು ಯೌಗಿಕಾರ್ಥವೆಂದೇ ವಿವಕ್ಷಿಸಲು ಕಾರಣವನ್ನು ನಿರೂಪಣೆ ಮಾಡಿದ್ದಾರೆ. ಉಪನಿಷತ್ತಿನಲ್ಲಿರುವ ಶೂದ್ರಶಬ್ದವು ರೂಢಿಯಿಂದ ಶೂದ್ರಜಾತಿಯಲ್ಲಿ ಹುಟ್ಟಿದವನನ್ನು ಏಕೆ ಹೇಳಬಾರದು? ಎಂಬ ಆಶಂಕೆಗೆ 'ಕ್ಷತ್ರಿಯತ್ವಾಗತೇಶ್ಚೋತ್ತರತ್ರ ಚೈತ್ರರಥೇನ ಲಿಂಗಾತ್' ಎಂಬ ಎರಡನೆಯ ಸೂತ್ರವು ಉತ್ತರಿಸುತ್ತಿದೆ. ಸ್ವಾಭಾವಿಕವಾದ ರಥದ ಸಂಬಂಧವು ಕ್ಷತ್ರಿಯರಲ್ಲಿ ಮಾತ್ರ ಯುಕ್ತವಾಗುತ್ತದೆ. ಶ್ರುತಿಯು ಸ್ವಾಭಾವಿಕರಥಸಂಬಂಧವನ್ನು ಪೌತ್ರಾಯಣನಿಗೆ ಹೇಳಿರುವ ಕಾರಣ ಶೂದ್ರ ಶಬ್ದವು ರೂಢಿಯಿಂದ ಪೌತ್ರಾಯಣನಿಗೆ ಶೂದ್ರತ್ವವನ್ನು ಹೇಳಲು ಸಾಧ್ಯವಿಲ್ಲವೆಂದು ಈ ಸೂತ್ರವು ಸಮರ್ಥನೆ ಮಾಡಿದೆ. ಮತ್ತೊಂದು ಕಾರಣದಿಂದಲೂ ಶೂದ್ರನಿಗೆ ವೇದಾಧಿಕಾರವಿಲ್ಲವೆಂದು ಸಮರ್ಥಿಸಲು 'ಸಂಸ್ಕಾರ- ಪರಾಮರ್ಶಾತ್ತದಭಾವಾಭಿಲಾಪಾಚ್ಚ'

ಎಂಬ ಮೂರನೆಯ ಸೂತ್ರವು ಹೊರಟಿದೆ. 'ಅಷ್ಟವರ್ಷಂ ಬ್ರಾಹ್ಮಣಮುಪನಯೀತ ತಮಧ್ಯಾಪಯೀತ' ಎಂಬಲ್ಲಿ 'ತಮ್' ಎಂಬ ಪದದಿಂದ ಅಧ್ಯಯನಕ್ಕೆ ಅಂಗವಾದ ಉಪನಯನಸಂಸ್ಕಾರವನ್ನು ಪರಾಮರ್ಶ ಮಾಡಬೇಕು. ಶೂದ್ರನಿಗೆ 'ನಾಗ್ನಿರ್ನ ಯಜ್ಞಃ ನ ಸಂಸ್ಕಾರಃ' ಎಂಬ ಪೈಂಗಿಶ್ರುತಿಯಿಂದ ಸಂಸ್ಕಾರದ ನಿಷೇಧವೂ ಶ್ರುತವಾಗಿದೆ. ಆದ್ದರಿಂದ ವೇದಾಧಿಕಾರವಿಲ್ಲವೆಂದು ಇದರ ಅಭಿಪ್ರಾಯ. ಇದೇ ವಿಷಯದಲ್ಲಿ ಮತ್ತೊಂದು ಕಾರಣವನ್ನು ಹೇಳಲು 'ತದಭಾವನಿರ್ಧಾರಣೇ ಚ ಪ್ರವೃತ್ತೇಃ' ಎಂಬುದು ನಾಲ್ಕನೆಯ ಸೂತ್ರವು ಹೊರಟಿದೆ. ಗೌತಮರ ಬಳಿ ಸತ್ಯಕಾಮನು ವೇದಾಧ್ಯಯನಕ್ಕಾಗಿ ಬಂದಾಗ 'ನೈತದಬ್ರಾಹ್ಮಣೋ ವಿವಕ್ತುಮರ್ಹತಿ' ಬ್ರಾಹ್ಮಣನಲ್ಲದವನು ಇಂತಹ ಸತ್ಯ ವಚನವನ್ನು ಸರ್ವಥಾ ಹೇಳಲಾರ ಎಂದು ಸತ್ಯಕಾಮನು ಶೂದ್ರನಲ್ಲವೆಂದು ನಿರ್ಧಾರ ಮಾಡಿ, ಅನಂತರವೇ ಅವನ ಉಪನಯನದಲ್ಲಿ ಪ್ರವೃತ್ತಿ ಮಾಡಿದ್ದಾರೆ. ಇದರಿಂದಲೂ ಶೂದ್ರನಿಗೆ ಉಪನಯನಸಂಸ್ಕಾರವಿಲ್ಲವೆಂದು ಸ್ಪಷ್ಟವಾಗುತ್ತದೆ. ಶೂದ್ರಾದಿಗಳಿಗೆ ಸಂಸ್ಕಾರವಿಲ್ಲದಿದ್ದರೂ ವಿಶಿಷ್ಟಬುದ್ಧ್ಯಾದಿಗಳಿರುವ ಕಾರಣ ವೇದಾಧಿಕಾರವನ್ನು ಹೇಳಬಹುದಲ್ಲವೇ? ಎಂಬ ಆಕ್ಷೇಪಕ್ಕೆ ಉತ್ತರಿಸಲು ಮುಂದಿನ 'ಶ್ರವಣಾಧ್ಯಯನಾರ್ಥಪ್ರತಿಷೇಧಾತ್ ಸ್ಮೃತೇಶ್ಚ' ಎಂಬ ಕೊನೆಯ ಸೂತ್ರವು ಹೊರಟಿದೆ. 'ಶ್ರವಣೇತ್ರಪುಜ್ಯತುಭ್ಯಾಂ' ಇತ್ಯಾದಿ ವಾಕ್ಯದಿಂದ ಶೂದ್ರನಾದವನು ವೇದಶ್ರವಣ, ವೇದಾಧ್ಯಯನ, ವೇದಾರ್ಥನಿರ್ಣಯ ಇವುಗಳನ್ನು ಮಾಡಲು ಅರ್ಹನಲ್ಲ. ಮತ್ತು 'ನಾಗ್ನಿರ್ನಃ ಯಜ್ಞಃ ಶೂದ್ರಸ್ಯ' ಎಂಬ ಸ್ಮೃತಿಯ ಆಧಾರದಿಂದಲೂ ಶೂದ್ರನಿಗೆ ವೇದಾಧಿಕಾರವಿಲ್ಲವೆಂದು ತಿಳಿಯುತ್ತದೆ. ಆದ್ದರಿಂದ ಶೂದ್ರನಿಗೆ ಉಪನಯನಾದಿಸಂಸ್ಕಾರಗಳಿಲ್ಲದಿದ್ದರೂ ವೇದಾಧ್ಯಯನಾದಿಗಳನ್ನು ಹೇಳಬಹುದಲ್ಲವೇ? ಎಂಬ ಆಶಂಕೆಯು ನಿರಾಕೃತವಾಯಿತು. ಹೀಗೆ ಸೂತ್ರಗಳ ವಿನ್ಯಾಸಕ್ರಮವು ಅತ್ಯಂತ ಸ್ವರಸವಾಗಿದೆ.

ಇಲ್ಲಿಗೆ ಅಪಶೂದ್ರಾಧಿಕರಣದ ಸಾರವು ಮುಗಿಯಿತು.

ಕಂಪನಾಧಿಕರಣ .

ಕಂಪನಾಧಿಕರಣದಲ್ಲಿ 'ವಜ್ರ' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡುತ್ತಿದ್ದಾರೆ. ಮುಂದಿನ ಸುಷುಪ್ತಧಿಕರಣದಲ್ಲಿ 'ಸ್ವಪ್ನದ್ರಷ್ಟೃತ್ವ' ಎಂಬ ಲಿಂಗವನ್ನು ಸಮನ್ವಯ ಮಾಡುತ್ತಾರೆ. ಪ್ರಥಮ ಪಾದದಲ್ಲಿ 'ವಜ್ರ' ಎಂಬ ಶಬ್ದದ ಸಮನ್ವಯವು ಅಲ್ಲಿರುವ ಸಮಾನನ್ಯಾಯಗಳಿಂದ ಮಹಾವಿಷ್ಣುವಿನಲ್ಲಿ ಒಮ್ಮೆ ಸಮನ್ವಯಗೊಂಡಿದೆ. ಸ್ವಪ್ನಾದಿದ್ರಷ್ಟೃತ್ವಲಿಂಗವೂ ಸಹ ದ್ವಿತೀಯಪಾದದ ಸಮಾನನ್ಯಾಯದಿಂದ ವಿಷ್ಣುವಿನಲ್ಲಿ ಸಮನ್ವಯಗೊಂಡಿದೆ. ಆದರೆ ಇಂದ್ರದೇವರ ವಜ್ರಾಯುಧದಲ್ಲಿಯೂ ಸಹ 'ವಜ್ರ' ಶಬ್ದದ ಪ್ರಯೋಗವಿದೆ. ಜೀವನಲ್ಲಿಯೂ ಸ್ವಪ್ನದ್ರಷ್ಟೃತ್ವಲಿಂಗವು ಪ್ರಸಿದ್ಧವಾಗಿವೆ. ಆ ಕಾರಣದಿಂದ ಈ 'ವಜ್ರ' ಶಬ್ದ ಹಾಗೂ ಸ್ವಪ್ನದ್ರಷ್ಟೃತ್ವ ಲಿಂಗಗಳೆರಡೂ ಉಭಯತ್ರಪ್ರಸಿದ್ಧವೆನಿಸುತ್ತವೆ. ಈ ಪಾದದಲ್ಲಿ ಕೆಲವು ಸ್ವತಃಸಿದ್ಧವಾದ ಉಭಯತ್ರಶಬ್ದಗಳಾಗಿರುತ್ತದೆ. ಇನ್ನು ಕೆಲವು ಪಾದದ್ವಯಾಪಾದಿತವಾಗಿ ಉಭಯತ್ರಪ್ರಸಿದ್ಧವಾಗಿರುತ್ತವೆ. ಅಂತು ಯಾವುದೇ ಒಂದು ವಸ್ತುವನ್ನು ನಿರ್ಧಾರವಾಗಿ ಪ್ರತಿಪಾದನೆ ಮಾಡಲು ಆ ಶಬ್ದಗಳಿಗೆ ಸಾಮರ್ಥ್ಯವಿರುವುದಿಲ್ಲ. ಅಂತಹ ಶಬ್ದಗಳು ಬ್ರಹ್ಮನನ್ನು ಮಾತ್ರ ಪ್ರತಿಪಾದಿಸುತ್ತವೆಂದು ಸಮರ್ಥನೆ ಮಾಡಲು ತೃತೀಯಪಾದವು ಹೊರಟಿದೆ. ಹೀಗೆ ಹೇಳಿದ್ದರಿಂದ ಪ್ರಥಮಪಾದದಲ್ಲಿ ಸಮನ್ವಯ ಮಾಡಿರುವ ಆಕಾಶಾದಿಶಬ್ದಗಳೂ ಕೂಡ ಉಭಯತ್ರಪ್ರಸಿದ್ಧವಾಗಲಿ ಎಂಬ ಆಶಂಕೆಗೆ ಅವಕಾಶವಿಲ್ಲ.

'ವಜ್ರ' ಶಬ್ದವು 'ಉದ್ಯತತ್ವ' ಎಂಬ ಲಿಂಗದಿಂದ ಇಂದ್ರಾಯುಧದಲ್ಲಿ ಪ್ರಸಿದ್ಧವಾಗಿದೆ. ಹಾಗಾಗಿ ಅನ್ಯತ್ರಪ್ರಸಿದ್ಧವಾಗಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಈಗಾಗಲೇ ಹಿಂದಿನ ಲಿಂಗಪಾದದಲ್ಲಿ 'ಉದ್ಯತತ್ವ' ಎಂಬ ಲಿಂಗವೂ

ಕೂಡ ಸಮಾನನ್ಯಾಯದಿಂದ ವಿಷ್ಣುವಿನಲ್ಲಿ ಸಮನ್ವಯ ಮಾಡಿದಂತಾಗಿದೆ. ಇಂತಹ ಲಿಂಗವು ವಿಷ್ಣುವನ್ನು ಬಿಟ್ಟು ಬೇರೆಕಡೆ ಬರುವುದಿಲ್ಲ. ಇದರ ಬಲದಿಂದ ವಜ್ರಾದಿಶಬ್ದಗಳಿಗೆ ಅನ್ಯತ್ರಪ್ರಸಿದ್ಧತ್ವವನ್ನು ಸಮರ್ಥನೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವಜ್ರಶಬ್ದವು ಲಿಂಗದ ಬಲದಿಂದಲೂ ಅನ್ಯತ್ರಪ್ರಸಿದ್ಧವೆಂದು ಸಿದ್ಧವಾಗುವುದಿಲ್ಲ. ಆದರೆ ಹಿಂದಿನ ಪಾದದಲ್ಲಿ ಸಮನ್ವಯ ಮಾಡಿದ ಆದಿತ್ಯಾದಿಶಬ್ದಗಳು ಅನ್ಯತ್ರಪ್ರಸಿದ್ಧವಾಗುತ್ತವೆ. ಏಕೆಂದರೆ ಅದಕ್ಕಿಂತ ಹಿಂದಿನ ಪಾದದಲ್ಲಿ ಲಿಂಗಸಮನ್ವಯವನ್ನು ಮಾಡದ ಕಾರಣ ಸರ್ವಪುರುಷಾಭಮುಖ್ಯ ಮೊದಲಾದ ಲಿಂಗಗಳೇ ಅನ್ಯತ್ರಪ್ರಸಿದ್ಧವಾಗಿವೆ. ಅದರ ಬಲದಿಂದ ಆದಿತ್ಯಾದಿಶಬ್ದಗಳೂ ಸಹ ಅನ್ಯತ್ರಪ್ರಸಿದ್ಧವೇ ಆಗುತ್ತದೆ. ಹೀಗೆ ಅನ್ಯತ್ರಪ್ರಸಿದ್ಧವಾದ ಆದಿತ್ಯಾದಿಶಬ್ದಗಳ ಬಲದಿಂದ ಸರ್ವಗತತ್ವಾದಿಲಿಂಗಗಳು ಅನ್ಯತ್ರಪ್ರಸಿದ್ಧವೇ ಆಗುತ್ತವೆ ಹೊರತು, ವಜ್ರಶಬ್ದದಂತೆ ಉಭಯತ್ರಪ್ರಸಿದ್ಧವಾಗಲಿ ಎಂದು ಆಕ್ಷೇಪ ಮಾಡಲಾಗದು.

ಅಥವಾ ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ 'ವಜ್ರ' ಶಬ್ದವಾಗಲೀ, ಸುಷುಪ್ತ್ಯಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ 'ಸ್ವಪ್ನದ್ರಷ್ಟೃತ್ವ' ಎಂಬ ಲಿಂಗವಾಗಲಿ ಅನ್ಯತ್ರಪ್ರಸಿದ್ಧವೆಂದೇ ವಿವಕ್ಷಿಸೋಣ. ಆದರೂ ಕೂಡ ಉಭಯತ್ರಪ್ರಸಿದ್ಧವಾದ ಪಾದದಲ್ಲಿ ಸಮನ್ವಯ ಮಾಡುವುದು ಅಸಂಗತವಲ್ಲ. ಶ್ರೀಮದಾಚಾರ್ಯರು ನಾಲ್ಕನೆಯ ಅಧ್ಯಾಯದ ಪ್ರಥಮಪಾದದಲ್ಲಿ 'ಪ್ರಾಯಿಕತ್ವಾಚ್ಚ ಅಧ್ಯಾಯಾನಾಂ ಪಾದಾನಾಂಚ ನ ವಿರೋಧಃ' ಪ್ರತಿಯೊಂದು ಅಧ್ಯಾಯಗಳು ಹಾಗೂ ಪಾದಗಳಲ್ಲಿ ಆಯಾ ವಿಷಯಗಳನ್ನು ಹೆಚ್ಚಾಗಿ ಸಮನ್ವಯ ಮಾಡುವುದರಿಂದಷ್ಟೇ ಅಧ್ಯಾಯವ್ಯವಸ್ಥೆ ಹಾಗೂ ಪಾದವ್ಯವಸ್ಥೆಗಳಿರುತ್ತವೆಂದು ಹೇಳಿರುತ್ತಾರೆ. ಅದರಂತೆ ಮೂರನೆಯ ಪಾದದಲ್ಲಿಯೂ ಉಭಯತ್ರಪ್ರಸಿದ್ಧವಾದ ನಾಮಲಿಂಗಾತ್ಮಕ ಶಬ್ದಗಳನ್ನು ಹೆಚ್ಚಾಗಿ ಸಮನ್ವಯ ಮಾಡುವ ಕಾರಣದಿಂದ, ನಾಮಲಿಂಗಪಾದ ಎಂದು ಕರೆಸಿಕೊಳ್ಳುತ್ತದೆ. ತನ್ಮಾತ್ರದಿಂದ ಅನ್ಯತ್ರಪ್ರಸಿದ್ಧವಾದ ಶಬ್ದವನ್ನು ಸಮನ್ವಯ ಮಾಡಲೇಬಾರದೆಂಬ ನಿಯಮವೇನೂ ಇರುವುದಿಲ್ಲ. ಅಥವಾ ಅನ್ಯತ್ರಪ್ರಸಿದ್ಧವಾದ ಶಬ್ದವನ್ನು ಇಲ್ಲಿ ಸಮನ್ವಯ ಮಾಡಿದ್ದರಿಂದ ಹೊಸದೊಂದು ಸಮನ್ವಯವನ್ನು ತಿಳಿಸಿದ್ದಾರೆ - ಹಿಂದಿನೆರಡು ಪಾದಗಳಲ್ಲಿ ಕೆಲವು ನಾಮಾತ್ಮಕವಾದ ಹಾಗೂ ಲಿಂಗಾತ್ಮಕವಾದ ಶಬ್ದಗಳನ್ನಷ್ಟೇ ಸಮನ್ವಯ ಮಾಡಿದ್ದಾರೆ. ಎಲ್ಲವನ್ನೂ ಕೂಡ ಕಂಠತಃ ಹೇಳಿಲ್ಲ. ಹೇಳದ ನಾಮಲಿಂಗಶಬ್ದಗಳೂ ಕೂಡ ಸಮಾನನ್ಯಾಯದಿಂದ ಮಹಾವಿಷ್ಣುವಿನಲ್ಲಿ ಸಮನ್ವಯಗೊಂಡಿವೆ. ಆದ್ದರಿಂದಲೇ ವಜ್ರಶಬ್ದವು ಉಭಯತ್ರಪ್ರಸಿದ್ಧವಾಗುತ್ತದೆ. ಮಹಾವಿಷ್ಣುವಿನಲ್ಲಿ ಸಮಾನನ್ಯಾಯದಿಂದ ವಜ್ರಶಬ್ದವು ಸಮನ್ವಯವಾಗದಿದ್ದಲ್ಲಿ, ಉಭಯತ್ರಪ್ರಸಿದ್ಧವೆಂದು ಹೇಳಲು ಹೇಗೆ ತಾನೆ ಸಾಧ್ಯವಾಗುತ್ತಿತ್ತು. ಈ ಎಲ್ಲಾ ಕಾರಣಗಳಿಂದ 'ವಜ್ರ' ಶಬ್ದದ ಸಮನ್ವಯವನ್ನು ತೃತೀಯಪಾದದಲ್ಲೇ ಮಾಡುತ್ತಿರುವುದು ಅತ್ಯಂತ ಸಂಗತವಾಗಿರುತ್ತದೆ. ಅದರಂತೆ ಸುಷುಪ್ತ್ಯಧಿಕರಣದ 'ಸ್ವಪ್ನದ್ರಷ್ಟೃತ್ವ' ಎಂಬ ಲಿಂಗಸಮನ್ವಯವೂ ಕೂಡ ಸುಸಂಗತವಾಗಿದೆ.

'ಮಹದ್ಭಯಂ ವಜ್ರಮುದ್ಯತಮ್' ಎಂಬ ಶ್ರುತಿಯಲ್ಲಿ ಉದ್ಯತತ್ವ, ಭಯಂಕರತ್ವ ಮೊದಲಾದ ಲಿಂಗಗಳು ಶ್ರುತವಾಗಿವೆ. ಇವುಗಳು ಉಭಯತ್ರಪ್ರಸಿದ್ಧವಾದ ಕಾರಣ, ಇದರ ಸಾಹಚರ್ಯದಿಂದ ಜೊತೆಗಿರುವ ವಜ್ರಶಬ್ದವೂ ಕೂಡ ಉಭಯತ್ರಪ್ರಸಿದ್ಧವೇ ಆಗುತ್ತದೆ. ಇದು ಟೀಕೆಯಲ್ಲಿ ಹೇಳಿದ ಪಕ್ಷ. ಆದರೆ ಕೆಲವರು ಅನ್ಯತ್ರಪ್ರಸಿದ್ಧವಾದ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧಿಯನ್ನು ಹೇಳುವಂತೆ ಉಭಯತ್ರಪ್ರಸಿದ್ಧಿಯ ಸಾಹಚರ್ಯದಿಂದ ಉಭಯತ್ರಪ್ರಸಿದ್ಧವಾದ ಶಬ್ದವನ್ನು ಸಮನ್ವಯ ಮಾಡಲಾಗದು. ಸರ್ವಗತತ್ವಾದಿಗಳೆಲ್ಲವೂ ಅನ್ಯತ್ರಪ್ರಸಿದ್ಧವಾದ ಸರ್ವಪುರುಷಾಭಮುಖ್ಯಾದಿಲಿಂಗಗಳ ಸಾಹಚರ್ಯದಿಂದಷ್ಟೇ ಅನ್ಯತ್ರಪ್ರಸಿದ್ಧವೆನಿಸುತ್ತದೆ ಎನ್ನುತ್ತಾರೆ. ಈ ಪಕ್ಷವು ಟೀಕೆಗೆ ವಿರುದ್ಧವಾಗಿದೆ.

ಇನ್ನು ಕೆಲವರು 'ಮಹದ್ಭಯಂ ವಜ್ರಮುದ್ಯತ್ಯಮ್' ಎಂಬಲ್ಲಿ ಶ್ರುತವಾದ ಲಿಂಗವು ಭಯಂಕರತ್ವ, ಉದ್ಯತತ್ವ ಮೊದಲಾದ ಅನೇಕ ಲಿಂಗಗಳ ಸಮನ್ವಯವು ಈ ಅಧಿಕರಣದ ಉದ್ದೇಶವಾಗಿದೆ. ಅದಕ್ಕಾಗಿ ಅನ್ಯತ್ರಪ್ರಸಿದ್ಧವಾದ 'ವಜ್ರ' ಎಂಬ

ಒಂದು ನಾಮಾತ್ಮಕಶಬ್ದವನ್ನು ಸಮನ್ವಯ ಮಾಡಲಾಗಿದೆ. ಅಂತಸ್ಥ್ವಾಧಿ- ಕರಣಕ್ಕೆ ಪ್ರಥಮಪಾದದಲ್ಲಿ ಸಂಗತಿಯಿರುವಂತೆ ಈ ಅಧಿಕರಣಕ್ಕೂ ಕೂಡ ಸಂಗತಿಯಿರುತ್ತದೆ.

ಅಥವಾ ಉಭಯತ್ರಪ್ರಸಿದ್ಧವಾದ ಭಯಂಕರತ್ವ ಎಂಬ ಲಿಂಗದ ಸಾಹಚರ್ಯದಿಂದ ವಜ್ರಶಬ್ದವು ಉಭಯತ್ರಪ್ರಸಿದ್ಧವಾಗುತ್ತದೆ. ಅಥವಾ ವಜ್ರಶಬ್ದವು ಅನ್ಯತ್ರಪ್ರಸಿದ್ಧವಾಗಿದ್ದರೂ ಕೂಡ ಅದನ್ನು ಪರಿಗಣಿಸದ ಉಭಯತ್ರಪ್ರಸಿದ್ಧವೆಂದಷ್ಟೇ ಪರಿಗಣಿಸಿ ಇಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಅಥವಾ ಪ್ರಾಣಶಬ್ದವು ಉಭಯತ್ರ-ಪ್ರಸಿದ್ಧವಾದ್ದರಿಂದ ಅದರ ಸಾಹಚರ್ಯದಿಂದ ವಜ್ರಶಬ್ದವೂ ಕೂಡ ಉಭಯತ್ರಪ್ರಸಿದ್ಧವಾಗಿದೆಯೆಂದು ಹೇಳುತ್ತಾರೆ.

'ಯದಿದಂ ಕಿಂಚ ಜಗತ್ಸರ್ವಂ ಪ್ರಾಣ ಏಜತಿ ನಿಃಸೃತಮ್ । ಮಹದ್ಭಯಂ ವಜ್ರಮುದ್ಯತಂ ಯ ಏತದ್ವಿದುರಮೃತಾಸ್ತೇ ಭವಂತಿ ।' ಎಂಬ ಕಾಠಕೋಪನಿಷತ್ತಿನ ಶ್ರುತಿವಾಕ್ಯವು ಈ ಅಧಿಕರಣಕ್ಕೆ ವಿಷಯವಾಗಿದೆ. ಸಮಸ್ತ ಜಗತ್ತು ಪ್ರಾಣಶಬ್ದವಾಚ್ಯನಾದ ಯಾವ ಭಗವಂತನನ್ನು ಆಶ್ರಯಿಸಿದೆಯೋ, ಯಾರಿಂದ ಹುಟ್ಟಿದೆಯೋ, ಮತ್ತು ಕ್ರಿಯಾಶೀಲವಾಗಿದೆಯೋ, ಅಂತಹ ಶ್ರೇಷ್ಠನಾದ, ದುಷ್ಟಭಯಂಕರನಾದ, ದೋಷವರ್ಜಿತನಾದ ಸರ್ವಪ್ರೇರಕನಾದ ಭಗವಂತನನ್ನು ಯಾರೂ ಸಾಕ್ಷಾತ್ಕಾರಮಾಡಿಕೊಳ್ಳುತ್ತಾರೋ, ಅವರು ಮೋಕ್ಷವನ್ನೇ ಪಡೆಯುತ್ತಾರೆ ಎಂದು ಈ ಶ್ರುತಿಗೆ ಸಿದ್ಧಾಂತಪರವಾದ ಅರ್ಥ. ಇಲ್ಲಿ 'ಉದ್ಯತವಜ್ರ' ಎಂದರೆ ಎತ್ತಲ್ಪಟ್ಟಿರುವ ವಜ್ರವೆಂದು ಅದರ ಜ್ಞಾನದಿಂದಲೇ ಮೋಕ್ಷವು ದೊರೆಯುತ್ತದೆಂದು ಪೂರ್ವಪಕ್ಷ. 'ಯ ಏಜತಿ' ಎಂಬುದಾಗಿ ವಜ್ರಶಬ್ದವನ್ನು ಸರ್ವಜಗಚ್ಚೇಷ್ಟಕನೆಂದು ಹೇಳಿರುವುದರಿಂದ ಬ್ರಹ್ಮನೇ ವಜ್ರಶಬ್ದ ಪ್ರತಿಪಾದ್ಯನಾಗುತ್ತಾನೆಂದು ಸಿದ್ಧಾಂತ.

ಸ್ಮೃತಿಗೆ ಅನುಸಾರಿಯಾಗಿ ಶ್ರುತಿಯನ್ನು ಅರ್ಥೈಸಿ ವ್ಯಾಖ್ಯಾನ ಮಾಡುವುದು ಸರಿಯಲ್ಲ. ಆದ್ದರಿಂದ ವಜ್ರಶಬ್ದಕ್ಕೆ ಇಂದ್ರಾಯುಧವೆಂಬ ರೂಢ್ಯರ್ಥವನ್ನು ಬಿಡಬಾರದು. ವಜ್ರಶ್ರುತಿಯ ಆಧಾರದಿಂದ ಭಗವಂತನಲ್ಲಿ ಪ್ರಸಿದ್ಧವಾದ ಕಂಪಕತ್ವಾದಿಲಿಂಗಗಳನ್ನೇ ಸಾವಕಾಶ ಮಾಡಬೇಕು ಎಂಬುದು ಪೂರ್ವಪಕ್ಷಕಾರರ ಧೋರಣೆ.

ಸ್ಮೃತಿಗೆ ಅನುಸಾರಿಯಾಗಿ ಶ್ರುತಿಯನ್ನು ಅರ್ಥೈಸಬೇಕಾದ್ದರಿಂದ ರೂಢ್ಯರ್ಥವನ್ನು ಬಿಟ್ಟು, ಯೌಗಿಕಾರ್ಥವನ್ನೇ ಸ್ವೀಕರಿಸಬೇಕು. ಆವಾಗ ವಜ್ರಶಬ್ದಕ್ಕೆ ವಿಷ್ಣುವೆಂಬರ್ಥವೇ ಸಿದ್ಧವಾಗುತ್ತದೆಂಬುದು ಸಿದ್ಧಾಂತಿಗಳ ಧೋರಣೆ.

'ಮಹದ್ಭಯಂ ವಜ್ರಮುದ್ಯತಂ' ಎಂಬ ಕಾಠಕೋಪನಿಷತ್ತಿನಲ್ಲಿ ಭಯಂಕರವಾದ ಎತ್ತಲ್ಪಟ್ಟ ವಜ್ರಾಯುಧವನ್ನು ವರ್ಣಿಸಲಾಗಿದೆ. ಶ್ರುತಿಯಲ್ಲಿರುವ 'ವಜ್ರ' ಎಂಬ ನಾಮಾತ್ಮಕ ಶಬ್ದವು ಇಂದ್ರನ ವಜ್ರಾಯುಧವನ್ನೇ ಪ್ರತಿಪಾದನೆ ಮಾಡುತ್ತದೆ. ವಜ್ರಶಬ್ದವು ವಜ್ರಾಯುಧದಲ್ಲಿ ರೂಢವಾದ ನಾಮ. ರೂಢವಾದ ಪದಗಳಿಗೆಲ್ಲಾ ಯೌಗಿಕಾರ್ಥವನ್ನು ಸ್ವೀಕರಿಸಿ, ವಿಷ್ಣುವಿನಲ್ಲಿ ಸಮನ್ವಯ ಮಾಡುವುದಾದರೆ, ಜಗತ್ತಿನಲ್ಲಿ ಈ ಶಬ್ದವು ಈ ಅರ್ಥವನ್ನೇ ಪ್ರತಿಪಾದನೆ ಮಾಡುತ್ತದೆಂಬ ವ್ಯವಸ್ಥೆ ಹಾಳಾಗುತ್ತದೆ. ವಾಸ್ತವಿಕವಾಗಿ 'ವಜ್ರಮುದ್ಯತಮ್' ಎಂಬ ಶ್ರುತಿಯ ಹಿಂದಿನ-ಮುಂದಿನ ಪ್ರಕರಣಗಳಲ್ಲಿ ಕಂಪಕತ್ವವೇ ಮೊದಲಾದ ಬ್ರಹ್ಮನ ಲಿಂಗಗಳು ಕೇಳಿಸುತ್ತಿರಬಹುದು. ಆದರೆ ರೂಢವಾದ ಶ್ರುತಿಯ ಬಲದಿಂದ 'ಉದ್ಯತತ್ವ' ಎಂಬ ಲಿಂಗದ ಬಲದಿಂದ ಆ ಎಲ್ಲಾ ಬ್ರಹ್ಮನ ಲಿಂಗಗಳನ್ನು ಇಂದ್ರಾಯುಧದಲ್ಲೇ ಸಾವಕಾಶ ಮಾಡಬೇಕು. ಕಾರಣವಿಲ್ಲದೇ ರೂಢಾರ್ಥವನ್ನು ಬಿಡಬಾರದು.

ಹಿಂದಿನ ಅಧಿಕರಣದಲ್ಲಿ ಶೂದ್ರಶಬ್ದಕ್ಕೆ ಯೌಗಿಕಾರ್ಥವನ್ನು ಸ್ವೀಕರಿಸಿದ್ದು ತಪ್ಪಲ್ಲ. ಏಕೆಂದರೆ ಶ್ರುತಿಯೇ ಸ್ವತಃ ವಾಕ್ಯಶೇಷದಲ್ಲಿ ಯೋಗಾರ್ಥವನ್ನು ಶೂದ್ರಶಬ್ದಕ್ಕೆ ಹೇಳಿದೆ. ಅದರಂತೆ ಇಲ್ಲಿ ವಜ್ರಶಬ್ದಕ್ಕೆ ಶ್ರುತಿಯು ಯೋಗಾರ್ಥವನ್ನೇನೂ ಹೇಳುತ್ತಿಲ್ಲ. ಹಾಗಾದರೆ ಜ್ಯೋತಿರುಪಾದಿಕ್ರಮದ ನ್ಯಾಯದಂತೆ 'ಜ್ಯೋತಿಃ' ಮೊದಲಾದ ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯಗೊಳಿಸಿದಂತೆ ಇಲ್ಲಿಯೂ ಸಹ ವಾಕ್ಯಶೇಷದ ಆಧಾರವಿಲ್ಲದಿದ್ದರೂ ವಿಷ್ಣುವಿನಲ್ಲಿ ವಜ್ರಶಬ್ದವನ್ನು

ಸಮನ್ವಯ ಮಾಡಬಹುದಲ್ಲವೇ? ಎಂಬ ಶಂಕೆಯು ಪ್ರಾಪ್ತವಾಗುತ್ತದೆ. ಆದರೆ ಜ್ಯೋತಿರುಪಕ್ರಮಾಧಿಕರಣದಲ್ಲಿ ಪದಸಮನ್ವಯವೇ ಮುಖ್ಯಉದ್ದೇಶ. ಈ ಅಧಿಕರಣದಲ್ಲಿ ವಾಕ್ಯಸಮನ್ವಯವು ಉದ್ದೇಶವಾಗಿದೆ. ಅಲ್ಲಿ ವಾಕ್ಯಕ್ಕೆ ಅನ್ಯಪರತ್ವವನ್ನು ಒಪ್ಪಿ ಪದಗಳನ್ನು ಮಾತ್ರ ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ ಇಲ್ಲೇನೂ ಹಾಗೇ ಮಾಡುತ್ತಿಲ್ಲ. ಆಕಾಶಾದ್ಯಧಿಕರಣದಲ್ಲಿ ನಿರವಕಾಶವಾದ ಲಿಂಗಗಳಿಲ್ಲದ ಕಾರಣ ಭೂತಾಕಾಶವೆಂಬರ್ಥವನ್ನು ಬಿಡಬೇಕಾಯಿತು. ಆದರೆ ಇಲ್ಲಿ ಉದ್ಯತತ್ವವೆಂಬ ಲಿಂಗವು ವಜ್ರಾಯುಧದಲ್ಲೇ ಪ್ರಸಿದ್ಧವಾದ್ದರಿಂದ ಶ್ರುತಿಗೆ ರೂಢಾರ್ಥವನ್ನೇನೂ ಬಿಡಬೇಕಾಗಿಲ್ಲ. ಆದ್ದರಿಂದ ನಿರವಕಾಶವಾದ ಉದ್ಯತತ್ವವೆಂಬ ಲಿಂಗದ ಸಹಕಾರದಿಂದ ವಜ್ರಶ್ರುತಿಯೂ ಕೂಡ ನಿರವಕಾಶವಾಗುತ್ತದೆ. ವಿಷ್ಣುವಿನಲ್ಲಿರುವ ಲಿಂಗಗಳೆಲ್ಲವೂ ವಜ್ರಾಯುಧದಲ್ಲೇ ಸಾವಕಾಶವಾಗುತ್ತವೆ.

ಅಥವಾ ವಿಷ್ಣುಲಿಂಗಗಳನ್ನು ವಜ್ರಾಯುಧದಲ್ಲಿ ಸಾವಕಾಶ ಮಾಡುವುದೇ ಬೇಡ. ಅಂದರೆ ಕಾಠಕದ ಹಿಂದಿನ-ಮುಂದಿನವಾಕ್ಯಗಳೆಲ್ಲವೂ ವಿಷ್ಣುಪರವೇ ಆಗಲಿ. 'ಮಹದ್ಭಯಂ ವಜ್ರಮುದ್ಯತಮ್' ಎಂಬ ವಾಕ್ಯವಷ್ಟೇ ವಜ್ರಾಯುಧವನ್ನು ಪ್ರತಿಪಾದನೆ ಮಾಡುತ್ತದೆ. ಅಂದರೆ ವಜ್ರಶ್ರುತಿಯು ಉದ್ಯತತ್ವವೆಂಬ ಲಿಂಗವನ್ನೂ ಕೂಡ ಅಪೇಕ್ಷೆ ಪಡದೆ ಸ್ವತಃ ನಿರವಕಾಶವಾಗಿ ವಜ್ರಾಯುಧವನ್ನು ಪ್ರತಿಪಾದನೆ ಮಾಡುತ್ತದೆ. ಶ್ರುತಿಯಲ್ಲಿರುವ ಮೋಕ್ಷಹೇತುಜ್ಞಾನವಿಷಯತ್ವವನ್ನು ಇದರ ಬಲದಿಂದ ವಜ್ರಾಯುಧದಲ್ಲೇ ಕೂಡಿಸಬೇಕು. ಏಕೆಂದರೆ ನಿರಕವಾಶವಾದ ಶ್ರುತಿಗೆ ಬಾಧ ಹೇಳುವುದು ತಪ್ಪಾಗುತ್ತದೆ. ಕಂಪಕತ್ವವೂ ಕೂಡ ಭಯಕಾರಣವಾದ ವಜ್ರಾಯುಧದಲ್ಲಿ ಯುಕ್ತವಾಗುತ್ತದೆ. ಹಾಗಾಗಿ ವಜ್ರಾಯುಧದ ಜ್ಞಾನದಿಂದ ಮೋಕ್ಷವಾಗುವಾಗ ಹಿಂದಿನ ಅಧಿಕರಣದಲ್ಲಿತ್ರೈವರ್ಣಿಕರಿಗೆ ಬ್ರಹ್ಮಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳಿದ್ದು ಅಯುಕ್ತವಾಗಿದೆಯೆಂದು ಈ ಅಧಿಕರಣದ ಎರಡನೆಯ ಪೂರ್ವಪಕ್ಷ.

'ಪ್ರಾಣ ಏಜತಿ ನಿಶ್ಚಿತಮ್' ಎಂಬ ವಿಷಯವಾಕ್ಯದಲ್ಲಿಸರ್ವಚೇಷ್ಟಕತ್ವ ಲಿಂಗವು ಸ್ಪಷ್ಟವಾಗಿ ಕೇಳಿಸುತ್ತಿದೆ. ಈಗಾಗಲೇ ಆನಂದಮಯಾಧಿಕರಣದಲ್ಲಿ ಸರ್ವಚೇಷ್ಟಕತ್ವವನ್ನು ವಿಷ್ಣುವಿನ ಅಸಾಧಾರಣ ಧರ್ಮವೆಂದು ಸಮರ್ಥಿಸಿದ್ದಾಗಿದೆ. ಆದರ ಆಧಾರದಿಂದ ವಜ್ರಶಬ್ದವು ಈಗ ವಿಷ್ಣುಪರವೆಂದು ಸಿದ್ಧವಾಗುತ್ತದೆ. ಇನ್ನು 'ಉದ್ಯತತ್ವ' ಎಂಬ ಲಿಂಗದ ಆಧಾರದಿಂದ ವಜ್ರಶ್ರುತಿಯು ವಜ್ರಾಯುಧ ಪರವಾಗಿದೆಯೆಂದು ಹಿಂದೆ ಮಾಡಿದ ಪೂರ್ವಪಕ್ಷಕ್ಕೆ ಈಗ ಆಸ್ಪದವಿಲ್ಲ. ಏಕೆಂದರೆ 'ವರ್ಜನಾದ್ವಜ್ರಮುಚ್ಯತೇ' ಎಂಬ ಸ್ಮೃತಿಯು ವಜ್ರಶಬ್ದದ ನಿರುಕ್ತಿಯನ್ನು ವಿಷ್ಣುವಿನಲ್ಲಿ ಹೇಳಿದಂತೆ ಪೂರ್ವಪಕ್ಷಕಾರರು ಉದ್ಯತಶಬ್ದದ ನಿರುಕ್ತಿಯನ್ನು ಆಯುಧದಲ್ಲಿ ತೋರಿಸಿಲ್ಲ. ಮತ್ತು ಸರ್ವಚೇಷ್ಟಕತ್ವವು ಬೇರೆಯವರಲ್ಲಿ ಬರುವುದಿಲ್ಲವೆಂದು 'ಕೋಹ್ಯೇವಾನ್ಯಾತ್ಕಃ' ಇತ್ಯಾದಿ ಶ್ರುತಿಯು ಸಾಧನೆ ಮಾಡುವಂತೆ ಉದ್ಯತತ್ವಲಿಂಗವು ಬೇರೆಯವರಲ್ಲಿ ಬರುವುದಿಲ್ಲವೆಂದು ಸಾಧಿಸಲು ಪೂರ್ವಪಕ್ಷಕಾರರು ಯಾವುದೇ ಶ್ರುತಿಗಳನ್ನು ಆಧಾರವನ್ನಾಗಿ ತೋರಿಸಿಲ್ಲ.

ಸ್ಮೃತಿಗಳೆಲ್ಲವೂ ಶ್ರುತ್ಯರ್ಥದ ನಿರ್ಣಯಕ್ಕೋಸ್ಕರ ಹೊರಟಿದೆ. ಆದ್ದರಿಂದ ಸ್ಮೃತಿಗೆ ಅನುಸಾರಿಯಾಗಿಯೇ ಶ್ರುತಿಯನ್ನು ಅರ್ಥೈಸಬೇಕು ಹೊರತು, ಅದಕ್ಕೆ ವಿರುದ್ಧವಾಗಿ ಅರ್ಥೈಸುವುದು ತಪ್ಪಾಗುತ್ತದೆ. ಆದ್ದರಿಂದ ಪ್ರಕೃತ 'ವರ್ಜನಾದ್ವಜ್ರಮುಚ್ಯತೇ' ಎಂಬ ಶ್ರುತಿಯು ವಜ್ರಶಬ್ದದ ನಿರುಕ್ತಿಯನ್ನು ಹೇಳುತ್ತಿರುವಾಗ ಅದರ ಆಧಾರದಿಂದ ಶ್ರುತಿಯಲ್ಲಿರುವ ವಜ್ರಶಬ್ದಕ್ಕೆ ವಿಷ್ಣುಪರತ್ವವನ್ನೇ ಹೇಳಬೇಕು. 'ಅಸಮಂತಾತ್ ಕಾಶತೇ ಯದಾಕಾಶಃ' ಎಂಬ ಸ್ಮೃತಿಯು ಆಕಾಶಶಬ್ದವನ್ನು ವಿಷ್ಣುವಿನಲ್ಲಿ ನಿರ್ವಚನ ಮಾಡುತ್ತಿದೆ. 'ಪ್ರಾಣಃ ಪ್ರಣಯನಾದೇಷಃ' ಎಂಬ ಶ್ರುತಿಯು ಪ್ರಾಣಶಬ್ದವನ್ನು ವಿಷ್ಣುವಿನಲ್ಲಿ ನಿರ್ವಚನ ಮಾಡುತ್ತಿದೆ. ಅದರಂತೆ ಇಲ್ಲಿಯೂ ಕೂಡ 'ವರ್ಜನಾದ್ವಜ್ರಮ್' ಎಂಬ ಸ್ಮೃತಿಯು ವಜ್ರಶಬ್ದದ ನಿರ್ವಚನವನ್ನು ವಿಷ್ಣುವಿನಲ್ಲಿ ಮಾಡುತ್ತಿರುವುದರಿಂದ ಅದಕ್ಕನುಸಾರಿಯಾಗಿಯೇ ಶ್ರುತ್ಯರ್ಥವನ್ನು ಸ್ವೀಕರಿಸಬೇಕು. ಆದ್ದರಿಂದ ಸ್ಮೃತಿಯು ಶ್ರುತಿಗಿಂತ ದುರ್ಬಲವಾಗಿದೆ ಎಂಬ ಪೂರ್ವಪಕ್ಷವಾಗಲೀ, ಅಥವಾ ಯೋಗಕ್ಕಿಂತಲೂ ರೂಢಿಯು

ಪ್ರಬಲವಾಗಿದೆಯೆಂಬ ಪೂರ್ವಪಕ್ಷವಾಗಲೀ, ಯುಕ್ತವಾಗುವುದಿಲ್ಲವೆಂದು ಸಮರ್ಥನೆ ಮಾಡಿದಂತಾಯಿತು.

'ವರ್ಜನಾದ್ವಜ್ರಮುಚ್ಯತೇ' ಎಂಬ ಸ್ಮೃತಿಗೆ ಅನುಸಾರಿಯಾಗಿ 'ಮಹದ್ಭಯಂ ವಜ್ರಮುದ್ಯತಮ್' ಎಂಬ ಶ್ರುತಿಯನ್ನು ವ್ಯಾಖ್ಯಾನ ಮಾಡಬೇಕೆಂದು ಸಿದ್ಧಾಂತ ಮಾಡಲಾಗಿದೆ. ಆದರೆ ಸ್ಮೃತಿಯ ಸಂದರ್ಭವೇ ಬೇರೆ, ಶ್ರುತಿಯ ಸಂದರ್ಭವೇ ಬೇರೆ, ಎಲ್ಲೋ ಸ್ಮೃತಿಯಲ್ಲಿ ಹೇಳಿದ ನಿರ್ವಚನವನ್ನು ಶ್ರುತಿಯಲ್ಲಿ ವಿವಕ್ಷಿಸಲು ಹೇಗೆ ಸಾಧ್ಯ ? 'ಯದಾಜಮೀಯುಃ ತದಾಜ್ಯಾನಾಂ ಆಜ್ಯತ್ವಂ' ಎಂಬುದಾಗಿ ಶ್ರುತಿಯು ಆಜ್ಯಶಬ್ದವನ್ನು ಯುದ್ಧದ ಮಂತ್ರಗಳೆಂದು ನಿರ್ವಚನ ಮಾಡುತ್ತಿದೆ. ಈ ನಿರ್ವಚನವು ಅದೇ ಪ್ರಕರಣದಲ್ಲಿರುವ 'ಆಜ್ಯೈಃ ಸ್ತುವತೇ' ಎಂಬಲ್ಲಿ ಅನ್ವಯವನ್ನು ಹೊಂದುತ್ತದೆ. ಹೊರತು, ಎಲ್ಲೋ ಇರುವ ಆಜ್ಯಶಬ್ದದಲ್ಲಿ ಅನ್ವಯವನ್ನು ಹೊಂದುವುದಿಲ್ಲ. ಹೀಗಿರುವಾಗ ಸ್ಮೃತಿಯ ಆಧಾರದಿಂದ ಶ್ರುತಿಯನ್ನು ಹೇಗೆ ವ್ಯಾಖ್ಯಾನ ಮಾಡುವುದು ಹೇಗೆ ಸರಿ? ಎಂಬ ಗೊಂದಲವು ಬರುತ್ತದೆ. ಇದಕ್ಕೆ ಉತ್ತರವಿಷ್ಟು. 'ಆರಭ್ಯಾಧೀತ' 'ಅನಾರಭ್ಯಾಧೀತ' ಎಂಬುದಾಗಿ ಎರಡು ಬಗೆಯ ನಿರ್ವಚನಗಳಿವೆ. ಯಾವುದಾದರೂ ಕರ್ಮವನ್ನು ಅಥವಾ ವಾಕ್ಯವಿಶೇಷವನ್ನು ಉದ್ದೇಶಿಸಿ, ನಿರ್ವಚನ ಮಾಡಿದರೆ, ಅದು ಆರಭ್ಯಾಧೀತವೆನಿಸುತ್ತದೆ. ಯಾವುದೇ ಕರ್ಮವಿಶೇಷವನ್ನು ಅಥವಾ ವಾಕ್ಯವಿಶೇಷವನ್ನು ಉದ್ದೇಶಿಸದೆ ಸಾಮಾನ್ಯವಾಗಿ ಮಾಡುವ ನಿರ್ವಚನವು ಅನಾರಭ್ಯಾಧೀತವೆನಿಸುತ್ತದೆ. ಆ ಪ್ರಕರಣ ಬಿಟ್ಟು ಎಲ್ಲಾಕಡೆಯೂ ಕೂಡ ಅನ್ವಯವನ್ನು ಹೊಂದಬಹುದು. ಪ್ರಕೃತ ಸ್ಮೃತಿಯಲ್ಲಿ ಹೇಳಿದ ವಜ್ರಶಬ್ದದ ನಿರ್ವಚನವು ಅನಾರಭ್ಯಾಧೀತ ಎನಿಸುವುದರಿಂದ ಆ ಸ್ಮೃತಿ ಪ್ರಕರಣದಲ್ಲಷ್ಟೇ ಅಲ್ಲದೇ, ಬೇರೆ ಶ್ರುತ್ಯಾದಿಗಳಲ್ಲಿಯೂ ಅನ್ವಯವನ್ನು ಹೊಂದುತ್ತದೆ. 'ಯದಾಜಮೀಯುಃ ತದಾಜ್ಯಾನಾಂ ಆಜ್ಯತ್ವಂ' ಎಂಬ ನಿರ್ವಚನವು 'ಆಜ್ಯೈಃ ಸ್ತುವತೇ' ಎಂಬಲ್ಲಿರುವ ಆಜ್ಯಶಬ್ದವನ್ನು ಉದ್ದೇಶಿಸಿ, ಹೊರಟಿದ್ದರಿಂದ ಆರಭ್ಯಾಧೀತವಾಗಿದೆ. ಬೇರೆ ಕಡೆ ಇದಕ್ಕೆ ಅನ್ವಯ ಮಾಡಲು ಬರುವುದಿಲ್ಲ. ಈ ವ್ಯತ್ಯಾಸವನ್ನು ಗಮನಿಸಬೇಕು.

ಶ್ರುತಿಗಿಂತಲೂ ಸ್ಮೃತಿಯು ದುರ್ಬಲ. ಹೀಗಿರುವಾಗ ಸ್ಮೃತಿಯ ಆಧಾರದಿಂದ ಶ್ರುತಿಯನ್ನು ಅರ್ಥೈಸುವುದು ಹೇಗೆ ಸರಿ? ಎಂಬುದು ಮುಂದಿನ ಪ್ರಶ್ನೆ. ಆದರೆ ಮೂರು ಕಾರಣಗಳಿಂದ ಇಲ್ಲಿ ಸ್ಮೃತಿಗೆ ಅನುಗುಣವಾಗಿ ಸ್ಮೃತಿಯನ್ನು ವ್ಯಾಖ್ಯಾನಿಸಬಹುದೆಂದು ತಿಳಿಯುತ್ತದೆ. ಶ್ರುತಿವಿರುದ್ಧವಾದ ವಿಷಯದಲ್ಲಿ ಸ್ಮೃತಿಯು ಪ್ರವೃತ್ತಿ ಮಾಡುತ್ತಿಲ್ಲ. ಮತ್ತು ಶ್ರುತ್ಯರ್ಥನಿರ್ಣಾಯಕವಾಗಿ ಸ್ಮೃತಿಗಳು ಶ್ರುತಿಗೆ ಅನುಗ್ರಾಹಕವಾಗಿವೆ. ಅಷ್ಟೇ ಅಲ್ಲದೇ ಮುಂದಿನ ಜ್ಯೋತಿರಧಿಕರಣದಲ್ಲಿ ಉದಾಹರಿಸುವ ಶ್ರುತ್ಯಂತರ ಮೂಲಕವೂ ಆಗಿದೆ. ಆದ್ದರಿಂದ 'ವರ್ಜನಾದ್ವಜ್ರಮುಚ್ಯತೇ' ಎಂಬ ಸ್ಮೃತಿಗೆ ಅನುಗುಣವಾಗಿ ಶ್ರುತಿಯನ್ನು ವ್ಯಾಖ್ಯಾನ ಮಾಡಬಹುದು.

ಪೂರ್ವಪಕ್ಷಕಾರರು ಹೇಳಿದ ಉದ್ಯತತ್ವಲಿಂಗವೂ ಕೂಡ ಸಾವಕಾಶವಾಗಿದೆ. ಉತ್ಪೂರ್ವಕವಾದ 'ಯತೀ ಪ್ರಯತ್ನೇ' ಎಂಬ ಧಾತುವಿನಿಂದ ನಿಷ್ಪನ್ನವಾದ ಉದ್ಯತಶಬ್ದಕ್ಕೆ ಪ್ರಯತ್ನಶೀಲನೆಂದರ್ಥ. ಪರಮಾತ್ಮನು ನಿರಂತರ ಪ್ರಯತ್ನಶೀಲನಾದ ಕಾರಣ ಉದ್ಯತತ್ವವು ಮುಖ್ಯವಾಗಿ ಅವನಲ್ಲೇ ಬರುತ್ತದೆ. ಹಾಗಾಗಿ ಪೂರ್ವಪಕ್ಷಕಾರರು ಹೇಳಿದ ವಜ್ರಶ್ರುತಿ ಹಾಗೂ ಉದ್ಯತತ್ವಲಿಂಗಗಳೆರಡೂ ಸಾವಕಾಶವಾದವು. ಮಹಾವಿಷ್ಣುನಲ್ಲಿಯೇ ಉದ್ಯತತ್ವ, ಕಂಪಕತ್ವ ಮೊದಲಾದ ಲಿಂಗಗಳು ಬರುವುದರಿಂದ ಅವನೇ ವಜ್ರಶಬ್ದಪ್ರತಿಪಾದ್ಯನೆಂದು ಸಿದ್ಧವಾಯಿತು.

ಇಲ್ಲಿಗೆ ಕಂಪನಾಧಿಕರಣದ ಸಾರವು ಮುಗಿಯಿತು

ಜ್ಯೋತಿರಧಿಕರಣ

ಈ ಅಧಿಕರಣದಲ್ಲಿ 'ಜ್ಯೋತಿಃ' ಎಂಬ ನಾಮಾತ್ಮಕ ಶಬ್ದವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡಲಾಗಿದೆ. ಪ್ರಕಾಶತ್ವವು 'ಜ್ಯೋತಿಃ' ಶಬ್ದದ ಪ್ರವೃತ್ತಿನಿಮಿತ್ತ. ಜ್ಞಾನರೂಪವಾಗಿರುವಿಕೆಯೆಂದು ಇದರರ್ಥ. ಇದು ಕೇವಲ ಜೀವ ಹಾಗೂ ಈಶ್ವರರಲ್ಲಿ ಮಾತ್ರವಿರುತ್ತದೆ. ಆ ಕಾರಣದಿಂದಲೇ 'ಜ್ಯೋತಿಃ' ಶಬ್ದವು ಉಭಯತ್ರಪ್ರಸಿದ್ಧವಾಗುತ್ತದೆ. ಅಗ್ನಿ, ಆದಿತ್ಯ ಮೊದಲಾದವರಲ್ಲಿ ಜ್ಞಾನಸ್ವರೂಪವಾಗಿರುವಿಕೆ ಎಂಬ ಪ್ರವೃತ್ತಿನಿಮಿತ್ತವು ಬರುವುದಿಲ್ಲವಾದ್ದರಿಂದ ಅವರನ್ನು ಇಲ್ಲಿ 'ಜ್ಯೋತಿ' ಎಂದು ಪರಿಗಣಿಸಲಾಗದು.

ಬೃಹದಾರಣ್ಯಕೋಪನಿಷತ್ತಿನಲ್ಲಿ ಇರುವ 'ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ' ಎಂಬ ವಾಕ್ಯವೇ ಈ ಅಧಿಕರಣದ ವಿಷಯವಾಗಿದೆ ಹೊರತು, ಅದೇ ಪ್ರಕರಣದ ಹಿಂದಿನ 'ಆದಿತ್ಯೇನೈವಾಯಂ ಜ್ಯೋತಿಷಾऽऽಸ್ತೇ' ಇತ್ಯಾದಿ ವಾಕ್ಯಗಳು ಈ ಅಧಿಕರಣದ ವಿಷಯಗಳಲ್ಲ. ಏಕೆಂದರೆ ಆದಿತ್ಯಾದಿಗಳ ಜ್ಯೋತಿಗೆ ಅಸ್ತಮಯವಾಗುವಿಕೆಯನ್ನು ಹೇಳಿ ಕೊನೆಯಲ್ಲಿ ಆತ್ಮನ ಜ್ಯೋತಿಯು ಅಸ್ತಮಯವಾಗುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಹಿಂದಿನ ಜ್ಯೋತಿಶಬ್ದಗಳ ವಿಚಾರವನ್ನು ಮಾಡಬೇಕಾಗಿಲ್ಲ. ಕೊನೆಯಲ್ಲಿರುವ ಆತ್ಮಜ್ಯೋತಿಯ ಬಗ್ಗೆ ವಿಚಾರ ಮಾಡುವುದು ಅನಿವಾರ್ಯವಾಗಿದೆ. ಆತ್ಮ ಜ್ಯೋತಿಯು ವಿಚಾರಕ್ಕೆ ವಿಷಯವಾದ್ದರಿಂದಲೇ, ಜ್ಞಾನರೂಪತ್ವವೇ 'ಜ್ಯೋತಿಃ' ಶಬ್ದದ ಪ್ರವೃತ್ತಿನಿಮಿತ್ತವಾಗುತ್ತದೆ ಹೊರತು, ಜ್ಞಾನಸಾಧನತ್ವವು ಪ್ರವೃತ್ತಿನಿಮಿತ್ತವಾಗುವುದಿಲ್ಲ. ಒಂದು ವೇಳೆ ಜ್ಞಾನಸಾಧನತ್ವವು ಪ್ರವೃತ್ತಿನಿಮಿತ್ತವಾಗಿದ್ದಲ್ಲಿ, ಆದಿತ್ಯಾದಿಗಳಲ್ಲಿಯೂ ಜ್ಯೋತಿಶ್ಶಶಬ್ದವು ಪ್ರಸಿದ್ಧವಾದ ಕಾರಣ, ಅನ್ಯತ್ರಪ್ರಸಿದ್ಧವಾಗುತ್ತಿತ್ತು. ಪ್ರಥಮಪಾದದಲ್ಲಿ ಈ ಅಧಿಕರಣವನ್ನು ಸೇರಿಸಬೇಕಾದ ಪ್ರಸಂಗ ಬರುತ್ತಿತ್ತು.

ಈ ಅಧಿಕರಣವು ಹಿಂದಿನ ಅಧಿಕರಣದ ಸಿದ್ಧಾಂತನ್ಯಾಯವನ್ನು ಅವಲಂಬಿಸಿ ಹೊರಟಿದೆ. ಅಂದರೆ ನಿರವಕಾಶವಾದ ಲಿಂಗಗಳ ಬಲದಿಂದ ವಿಷ್ಣುವು ಜ್ಯೋತಿಯಾಗುವುದಿಲ್ಲವೆಂದು ಪೂರ್ವಪಕ್ಷ ಮಾಡಲಾಗಿದೆ. ಆದ್ದರಿಂದ ಆನಂತರ್ಯಸಂಗತಿಯನ್ನು ತಿಳಿಯಬೇಕು. ಅಥವಾ ಹಿಂದೆ ವಾಮನಾಧಿಕರಣದಲ್ಲಿ ಕೇವಲ ಪ್ರಾಣವ್ಯವಸ್ಥಾಪಕತ್ವವೆಂಬ ಲಿಂಗದಿಂದ ಪೂರ್ವಪಕ್ಷ ಮಾಡಿದರೂ, ಕಂಪನಾಧಿಕರಣದಲ್ಲಿ ವಜ್ರಶ್ರುತಿ ಸಹಿತವಾದ ಉದ್ಯತತ್ವಲಿಂಗದಿಂದ ಪೂರ್ವಪಕ್ಷ ಮಾಡಿದರು. ಈಗ ನಿರವಕಾಶವಾದ ಅನೇಕ ಲಿಂಗಗಳಿಂದ ಪೂರ್ವಪಕ್ಷ ಮಾಡುತ್ತಿದ್ದಾರೆ. ಹಿಂದಿನ ಅಧಿಕರಣಗಳ ಪೂರ್ವಪಕ್ಷಕ್ಕಿಂತ ಈ ಅಧಿಕರಣದ ಪೂರ್ವಪಕ್ಷವು ಹೆಚ್ಚು ಬಲಿಷ್ಠವಾದ್ದರಿಂದ ಸೋಪಾನಾರೋಹಣ ಕ್ರಮದಿಂದ ಆನಂತರ್ಯಸಂಗತಿಯು ಇರುತ್ತದೆ.

'ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ' ಎಂಬ ಬೃಹದಾರಣ್ಯಕದಲ್ಲಿರುವ ವಾಕ್ಯವು ಈ ಅಧಿಕರಣದ ವಿಷಯವಾಗಿದೆ. ಜನಕಮಹಾರಾಜರು ಯಾಜ್ಞವಲ್ಕ್ಯಮಹರ್ಷಿಗಳನ್ನು ಕುರಿತು ಪ್ರಶ್ನಿಸುತ್ತಾರೆ. ಜೀವನಿಗೆ ಜ್ಞಾನಸಾಧನವಾದದ್ದು ಯಾವುದು ಎಂದು? ಅದಕ್ಕೆ ಯಾಜ್ಞವಲ್ಕ್ಯರು ಉತ್ತರಿಸುವಾಗ ಆದಿತ್ಯ, ಚಂದ್ರ ಅಗ್ನಿ ಮತ್ತು ಮಾತು ಇವುಗಳಲ್ಲಿ ಹಿಂದಿನದ್ದು ಅಸ್ತಮಯವಾದಾಗ ಮುಂದಿನವುಗಳು ಜಾಗ್ರತ್ಕಾಲದಲ್ಲಿ ಜೀವನಿಗೆ ಜ್ಞಾನಸಾಧನಗಳಾಗುತ್ತವೆ ಎನ್ನುತ್ತಾರೆ. ಆದರೆ ಸುಷುಪ್ತಿ ಮತ್ತು ಸ್ವಪ್ನಾವಸ್ಥೆಗಳಲ್ಲಿ ಆದಿತ್ಯ, ಚಂದ್ರ, ಅಗ್ನಿ, ವಾಕ್ ನಾಲ್ಕೂ ಕೂಡ ಅಸ್ತವಾಗುವುದರಿಂದ ಆ ಸಂದರ್ಭದಲ್ಲಿ ಜೀವನಿಗೆ ಜ್ಞಾನಸಾಧನವಾದದ್ದು ಯಾವುದು? ಎಂದು ಪುನಃ ಜನಕರಾಜರು ಯಾಜ್ಞವಲ್ಕ್ಯಮಹರ್ಷಿಗಳನ್ನು ಪ್ರಶ್ನಿಸುತ್ತಾರೆ. ಆವಾಗ ಯಾಜ್ಞವಲ್ಕ್ಯರು ಆತ್ಮನೇ ಜ್ಞಾನಸಾಧನನೆಂದು ಉತ್ತರಿಸುತ್ತಾರೆ. ಪುನಃ ಜನಕರಾಜರು ಆತ್ಮನೆಂದರೆ ಯಾರು? ಎಂದು ಪ್ರಶ್ನಿಸಿದಾಗ ಯಾಜ್ಞವಲ್ಕ್ಯರು 'ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ

L

ಪುರುಷಃ' ಎಂದು ಉತ್ತರಿಸುತ್ತಾರೆ. ಅಂದರೆ ಯಾವ ಆತ್ಮನಿದ್ದಾನೋ, ಅವನು ವಿಜ್ಞಾನಮಯನಾಗಿದ್ದಾನೆ. ಇಂದ್ರಿಯ ಹಾಗೂ ಮನಸ್ಸುಗಳಿಗೆ ನಿಯಾಮಕನಾಗಿದ್ದಾನೆ. ಹೃದಯಗುಹೆಯಲ್ಲಿ ಸ್ಥಿತನಾಗಿದ್ದಾನೆ. ಇವನು ಪೂರ್ಣಷಡ್ಗುಣನಾದ ಚೇತನನಾಗಿದ್ದಾನೆಂದು ಹೇಳುತ್ತಾರೆ. ಈ ವಾಕ್ಯವೇ ಅಧಿಕರಣದ ವಿಷಯವಾಗಿದೆ.

ಇಲ್ಲಿರುವ ಆತ್ಮಶಬ್ದಕ್ಕೆ ಜೀವನೆಂದರ್ಥವೋ, ಅಥವಾ ಬ್ರಹ್ಮನೆಂದರ್ಥವೋ? ಉಪಕ್ರಮ ಹಾಗೂ ಉಪಸಂಹಾರಗಳಲ್ಲಿ ಜೀವನ ಬಗ್ಗೆ ವಿಚಾರ ಬಂದಿರುವುದರಿಂದ ಆತ್ಮಶಬ್ದವು ಜೀವಪರವೇ ಆಗುತ್ತದೆ. ಜಾಯಮಾನತ್ವ ಮೊದಲಾದ ಲಿಂಗಗಳು ಕೇಳಿಸುತ್ತಿರುವುದರಿಂದ 'ಹೃದ್ಯಂತರ್ಜ್ಯೋತಿಃ' ಎಂಬ ವಾಕ್ಯದಲ್ಲಿರುವ 'ಜ್ಯೋತಿಃ' ಶಬ್ದದಿಂದಲೂ ಜೀವನೇ ಪ್ರತಿಪಾದ್ಯನಾಗುತ್ತಾನೆಂಬುದು ಈ ಅಧಿಕರಣದ ಪೂರ್ವಪಕ್ಷ.

ಆತ್ಮಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನು. ಏಕೆಂದರೆ ಉಪಸಂಹಾರದಲ್ಲಿ ಪರಮಾತ್ಮನ ಬಗ್ಗೆ ಪ್ರಸಕ್ತಿಯಿರುವುದರಿಂದ ಆತ್ಮಶಬ್ದಕ್ಕೆ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನೆಂದು ಈಗಾಗಲೇ ಸಿದ್ಧವಾಗಿರುವುದರಿಂದ ಬ್ರಹ್ಮಪರವಾದ ವಾಕ್ಯಗಳ ಮಧ್ಯದಲ್ಲಿರುವ 'ಜಾಯಮಾನತ್ವ' ಎಂಬ ಲಿಂಗವನ್ನು ಪರಮಾತ್ಮನಲ್ಲಿ ಸಾವಕಾಶಮಾಡಬಹುದಾದ್ದರಿಂದ 'ಹೃದ್ಯಂತರ್ಜ್ಯೋತಿಃ' ಎಂಬ ಲ್ಲಿರುವ ಜ್ಯೋತಿಶಬ್ದದಿಂದ ಮುಖ್ಯವಾಗಿ ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆಂಬುದು ಈ ಅಧಿಕರಣದ ಸಿದ್ಧಾಂತ.

'ಆತ್ಮೈವಾಸ್ಯ ಜ್ಯೋತಿಃ' ಎಂಬಲ್ಲಿರುವ ಜ್ಯೋತಿಯು ಜೀವನೇ ಆಗಿದ್ದಾನೆಂಬುದು ಪೂರ್ವಪಕ್ಷ. ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದ ಜ್ಯೋತಿಯು ವಿಷ್ಣುವಲ್ಲ. ಏಕೆಂದರೆ ಉಭಯಲೋಕಸಂಚಾರವನ್ನು ಕರ್ಮಾಧೀನವಾಗಿ ಮಾಡುತ್ತಾನೆ. ಹುಟ್ಟು-ಸಾವು ಮೊದಲಾದ ಧರ್ಮಗಳಿಂದ ಕೂಡಿದ್ದಾನೆ ಇತ್ಯಾದಿಯಾಗಿ ಅವನ ವರ್ಣನೆಯಿದೆ. ಪರಮಾತ್ಮನಲ್ಲಿ ಜಾಯಮಾನತ್ವ, ಮ್ರಿಯಮಾಣತ್ವ, ಉಭಯಲೋಕಸಂಚಾರ ಈ ಯಾವ ಲಿಂಗಗಳೂ ಕೂಡ ಉಪಪನ್ನವಾಗುವುದಿಲ್ಲ. ಈಗಾಗಲೇ ಹಿಂದಿನ ದ್ಯುಭ್ವಾದ್ಯಧಿ- ಕರಣದಲ್ಲಿ ಜಾಯಮಾನತ್ವಲಿಂಗವನ್ನು ಭೂಮಾಧಿಕರಣದಲ್ಲಿ ಉತ್ಕ್ರಮಣಲಿಂಗವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡಿರಬಹುದು. ಆದರೆ ಮ್ರಿಯಮಾಣತ್ವವನ್ನಂತೂ ಎಲ್ಲಿಯೂ ಸಮನ್ವಯ ಮಾಡಿಲ್ಲ. ಈ ಮ್ರಿಯಮಾಣತ್ವ ಲಿಂಗದ ಆಧಾರದಿಂದ ಜಾಯಮಾನತ್ವಾದಿಲಿಂಗಗಳಿಗೂ ಕೂಡ ಜೀವನಲ್ಲಿ ನಿರವಕಾಶವಾಗುತ್ತದೆ.

ಮತ್ತು 'ಕಿಂ ಜ್ಯೋತಿರಯಂ ಪುರುಷಃ' ಎಂದು ಜನಕರಾಜರು ಪ್ರಶ್ನಿಸಿದಾಗ 'ಆದಿತ್ಯಜ್ಯೋತಿರಾದಿತ್ಯೇನೈವಾಯಂ ಜ್ಯೋತಿಷಾSSಸ್ತೇ' ಇತ್ಯಾದಿಯಾಗಿಯಾಜ್ಞವಲ್ಕ್ಯರುಉತ್ತರಿಸಿದ್ದಾರೆ.ಅಂದರೆಆದಿತ್ಯಾದಿಗಳುಯಾರಿಗೆಪ್ರಕಾಶಕರಾಗಿದ್ದಾರೋ, ಅವನನ್ನೇ 'ಜ್ಯೋತಿ' ಎಂದು ತಿಳಿ ಎಂದಿದ್ದಾರೆ. 'ನ ತತ್ರ ಸೂರ್ಯೋ ಭಾತಿ' ಎಂಬ ಶ್ರುತಿಯು ಸೂರ್ಯಾದಿಗಳು ಪರಮಾತ್ಮನಿಗೆ ಪ್ರಕಾಶಕರಲ್ಲ ಎಂದು ಹೇಳುತ್ತಿರುವಾಗ ಪ್ರಕೃತ 'ಆದಿತ್ಯಜ್ಯೋತಿಃ' ಇತ್ಯಾದಿ ಶ್ರುತಿಯು ಪರಮಾತ್ಮನಿಗೆ ಆದಿತ್ಯಾದಿಗಳು ಪ್ರಕಾಶಕರಾಗಿದ್ದಾರೆಂದು ಹೇಳಲು ಹೇಗೆ ಸಾಧ್ಯ ? ಹಾಗಾಗಿ ಜೀವನೇ ಇಲ್ಲಿ ಪ್ರತಿಪಾದ್ಯನಾಗಬೇಕು. ಮತ್ತು ಅಂತಹ ಜೀವನಿಗೆ 'ಆತ್ಮೈವಾಸ್ಯ ಜ್ಯೋತಿಃ' ಎಂಬುದಾಗಿಸ್ವಪ್ನ, ಸುಷುಪ್ತಿ, ಪ್ರಳಯಕಾಲದಲ್ಲಿಸ್ವಪ್ರಕಾಶತ್ವವನ್ನುಹೇಳಲಾಗಿದೆ.'ಅಸ್ಯ' ಎಂಬುದಾಗಿ ಜೀವನು ಪ್ರಕೃತನಾದ ಕಾರಣ, ಆತ್ಮಶಬ್ದಕ್ಕೆ ಕೇವಲ ಸ್ವರೂಪನೆಂದಷ್ಟೇ ಅರ್ಥೈಸಬೇಕು. 'ಜ್ಯೋತಿಃ' ಎಂಬ ಶಬ್ದಕ್ಕೆ ಜ್ಞಾನವೆಂದು ಅರ್ಥೈಸಬೇಕು. ಇಂತಹ ಸ್ವಪ್ರಕಾಶನಾದ ಆತ್ಮನು ಪ್ರಸಕ್ತನಾದಾಗ ಜನಕರಾಜರು 'ಕತಮ ಆತ್ಮಾ' ಎಂದು ಪ್ರಶ್ನಿಸಿದ್ದಾರೆ. ಅದಕ್ಕನುಗುಣವಾಗಿ ಯಾಜ್ಞವಲ್ಕ್ಯರು ಜೀವನ ಬಗ್ಗೆಯೇ ಉತ್ತರಿಸಿದ್ದಾರೆ ಹೊರತು, ಪರಮಾತ್ಮನ ಬಗ್ಗೆ ಉತ್ತರಿಸುವುದು ವ್ಯಧಿಕರಣವಾಗುತ್ತದೆ.

'ಆತ್ಮೈವಾಸ್ಯ ಜ್ಯೋತಿಃ' ಎಂಬ ವಾಕ್ಯದಲ್ಲಿರುವ 'ಇದಂ' ಶಬ್ದವು ಜೀವಪರವೇ ಆಗಲಿ. ಆದರೆ ಆತ್ಮಶಬ್ದವು 'ಗೌಣಶ್ಚೇನ್ನಾತ್ಮಶಬ್ದಾತ್' ಎಂಬ ಸೂತ್ರದಂತೆ ಪರಮಾತ್ಮಪರವಾಗಬಹುದು. ಆದ್ದರಿಂದ ಪರಮಾತ್ಮನು ಪ್ರಸಕ್ತನಾದ ಕಾರಣ ಅವನ ಬಗ್ಗೆ ಯಾಜ್ಞವಲ್ಕ್ಯರು ಉತ್ತರಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಪ್ರಾರಂಭದಲ್ಲಿ 'ಕಂ ಜ್ಯೋತಿರಯಂ ಪುರುಷಃ' ಎಂದು ಜ್ಞಾನಸಾಧನನಾದ ಜೀವನೇ ಪ್ರಕೃತನಾಗಿದ್ದಾನೆ. ಕೊನೆಯಲ್ಲಿ 'ಅಯಂ ಪುರುಷ ಸ್ವಯಂ ಜ್ಯೋತಿಃ' ಎಂದು ಪುರುಷಾದಿಶಬ್ದಗಳಿಂದ ಪ್ರಾರಂಭದಲ್ಲಿ ಪ್ರಕೃತನಾದ ಜೀವನೇ ಪ್ರತ್ಯಭಿಜ್ಞಾಯಮಾನನಾಗಿದ್ದಾನೆ. ಹೀಗೆ ಉಪಕ್ರಮ ಹಾಗೂ ಉಪಸಂಹಾರಗಳೆರಡರಲ್ಲಿಯೂ ಜೀವನೇ ಪ್ರತಿಪಾದ್ಯನಾಗಿರವಾಗ ಮಧ್ಯದಲ್ಲಿರುವ 'ಆತ್ಮೈವಾಸ್ಯ ಜ್ಯೋತಿಃ' ಎಂಬ ವಾಕ್ಯವೂ ಕೂಡ ಜೀವಪರವೇ ಆಗುತ್ತದೆ. ಹೀಗೆ ಪುರುಷಾದಿಶಬ್ದಗಳಿಂದ ಪ್ರಕೃತನಾದ ಜೀವನನ್ನು ಬಿಟ್ಟು, ಪುರುಷಾದಿ ಶಬ್ದಗಳಿಂದ ಅಪ್ರಕೃತನಾದ ಬ್ರಹ್ಮಪರತ್ವವನ್ನು ಒಪ್ಪುವುದು ತಪ್ಪಾಗುತ್ತದೆಂದು ಪೂರ್ವಪಕ್ಷ.

ಉಪನಿಷತ್ತು 'ವಿಷ್ಣುರೇವ ಜ್ಯೋತಿಃ' ವಿಷ್ಣು ಒಬ್ಬನೇ ಜ್ಯೋತಿಯೆನಿಸಿದ್ದಾನೆಂದು ಬೇರೆಯವರನ್ನು ನಿರಾಕರಣೆ ಮಾಡಿ, ಅವಧಾರಣಪೂರಕವಾಗಿ ವಿಷ್ಣುವನ್ನು ಜ್ಯೋತಿಯೆಂದು ಹೇಳುತ್ತಿದೆ. ಮತ್ತು 'ನಾರಾಯಣ ಪರಂಜ್ಯೋತಿಃ ಪರಂಜ್ಯೋತಿರುಪಸಂಪದ್ಯ' ಇತ್ಯಾದಿ ಶ್ರುತಿಗಳಲ್ಲಿ ಪರತ್ವವನ್ನು ವಿಶೇಷಣವನ್ನಾಗಿ ಹೇಳಿರುವ ಕಾರಣ, ವಿಷ್ಣುವೇ 'ಜ್ಯೋತಿಃ' ಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಬೃಹದಾರಣ್ಯಕದಲ್ಲಿರುವ 'ಹೃದ್ಯಂತರ್ಜ್ಯೋತಿಃ' ಎಂಬ ಉಪಕ್ರಮ 'ಸ್ವಯಂ ಜ್ಯೋತಿಃ' ಎಂಬ ಉಪಸಂಹಾರ ವಾಕ್ಯ 'ಸ್ವಪಿತಿ ಅತ್ರಾಯಂ ಪುರುಷಃ ಸ್ವಯಂ ಜ್ಯೋತಿಃ' ಎಂಬ ಮಧ್ಯದಲ್ಲಿರುವ ವಾಕ್ಯ, ಇವುಗಳಲ್ಲಿಯೂ ಇರುವಂತಹ 'ಜ್ಯೋತಿಃ' ಶಬ್ದವು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿವೆ. ಮೊದಲು ಕೊನೆಯಲ್ಲಿ, ಮಧ್ಯದಲ್ಲಿ ಎಲ್ಲೆಡೆಯು ಪರಮಾತ್ಮನೇ ಪ್ರತಿಪಾದ್ಯನಾಗಿರುವಾಗ ಮಧ್ಯದಲ್ಲಿರುವ ಲಿಂಗಗಳನ್ನು ಪರಮಾತ್ಮನಲ್ಲಿ ಸಾವಕಾಶ ಮಾಡಬೇಕು.

ಶ್ರುತಿಯಲ್ಲಿರುವ 'ಮ್ರಿಯಮಾಣ' ಎಂಬ ಪದಕ್ಕೆ ಅಂತರ್ಭಾವಿತ ಣಜರ್ಥತ್ವವನ್ನು ಒಪ್ಪಿ, ಸಾಯಿಸುವವನು ಎಂಬರ್ಥವನ್ನು ಹೇಳಬೇಕು. ಇದರಂತೆ ಜಾಯಮಾನ ಶಬ್ದಕ್ಕೆ ಹುಟ್ಟಿಸುವವನು ಎಂದು ಅರ್ಥೈಸಿ, ಎಲ್ಲ ಲಿಂಗಗಳನ್ನು ಪರಮಾತ್ಮನಲ್ಲಿಯೇ ಕೂಡಿಸಬೇಕು. 'ಲೋಕಾವನುಸಂಚರತಿ' ಎಂಬಲ್ಲಿ ಹೇಳಿದ ಉಭಯಲೋಕಸಂಚಾರವನ್ನು ಮಾತ್ರ, ಅಂತರ್ಭಾವಿತಣಜರ್ಥತ್ವವನ್ನು ಹೇಳಿ, ಸಮನ್ವಯ ಮಾಡಬೇಕಾಗಿಲ್ಲ. ಹೊರತಾಗಿ, ಸ್ವತಃ ಪರಮಾತ್ಮನೇ ಜೀವನನ್ನು ತೆಗೆದುಕೊಂಡು, ಉಭಯಲೋಕದ ಸಂಚಾರವನ್ನು ಮಾಡುತ್ತಾನೆ. ಆದರೆ ಸ್ವಾತಂತ್ರ್ಯವಿರುವ ಕಾರಣ, ಅವನಿಗೆ ಯಾವುದೇ ದುಃಖಾದಿಗಳ ಲೇಪವು ಉಂಟಾಗುವುದಿಲ್ಲ. ಇದರಂತೆ 'ಪಾಪ್ಮಭಿಃ ಸಂಸೃಜ್ಯತೇ' ಎಂಬ ಶ್ರುತಿಗೂ ಕೂಡ ಪರಮಾತ್ಮನು ಜೀವನಿಗೆ ಪುಣ್ಯ-ಪಾಪಾದಿಗಳನ್ನು ಫಲೋನ್ಮುಖವಾಗುವಂತೆ ಮಾಡುತ್ತಾನೆ ಹೊರತು, ಆ ಪುಣ್ಯಪಾಪಗಳ ಸಂಪರ್ಕದಿಂದ ತನ್ನಲ್ಲೇನೂ ಉಚ್ಚತ್ವ-ನೀಚತ್ವಗಳು ಉಂಟಾಗುವುದಿಲ್ಲ. ಆದ್ದರಿಂದ ಸಮಗ್ರ 'ಜ್ಯೋತಿರ್ಬ್ರಾಹ್ಮಣ' ಪ್ರಕರಣವು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತದೆಂದು ಸಿದ್ಧವಾಗುತ್ತದೆ.

ಶ್ರುತಿಯಲ್ಲಿರುವ ಪುರುಷಶಬ್ದವು ಪುರುಷೋತ್ತಮನಾದ ಪರಮಾತ್ಮನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತದೆಂಬ ವಿಚಾರವನ್ನು ಗಾಯತ್ರ್ಯಧಿಕರಣದಲ್ಲಿ ಸಮರ್ಥಿಸಲಾಗಿದೆ. ಮತ್ತು ಉಪಕ್ರಮದಲ್ಲಿ ಜೀವನು ಪ್ರಕೃತನಾದ್ದರಿಂದ ಉಪಸಂಹಾರದಲ್ಲಿಯೂ ಅವನನ್ನೇ ಪರಾಮರ್ಶ ಮಾಡಬೇಕೆಂದು ಪೂರ್ವಪಕ್ಷದಲ್ಲಿ ಹೇಳಲಾಗಿತ್ತು. ಇದೂ ಸಹ ತಪ್ಪು. ಪ್ರಕೃತ ಪರತ್ವವನ್ನು ಆಶ್ರಯಿಸುವುದಕ್ಕಿಂತ ಮುಖ್ಯಪರತ್ವವನ್ನು ಆಶ್ರಯಿಸುವುದೇ ಶ್ರೇಷ್ಠ. ಅಂದರೆ ಜ್ಯೋತಿ ಹಾಗೂ ಪುರುಷ ಶಬ್ದಗಳಿಗೆ ಪರಮಾತ್ಮ ಎಂಬ ಅರ್ಥವನ್ನು ಹೇಳಿದಾಗ ಮುಖ್ಯಾರ್ಥತ್ವವನ್ನು ಇಟ್ಟುಕೊಂಡಂತಾಗುತ್ತದೆ. ಆದರೆ ಜೀವನೆಂಬರ್ಥವನ್ನು ವಿವಕ್ಷಿಸಿದಾಗ, ಕೇವಲ ಪ್ರಕೃತಪರತ್ವವನ್ನು ಇಟ್ಟುಕೊಂಡಂತಾಗುತ್ತದೆ ಹೊರತು, ಮುಖ್ಯಾರ್ಥತ್ವವನ್ನು

ಇಟ್ಟುಕೊಂಡಂತಾಗುವುದಿಲ್ಲ. ಮತ್ತು ಬ್ರಹ್ಮನೂ ಸಹ 'ಹಿರಣ್ಮಯಃಪುರುಷಃ' ಎಂಬಲ್ಲಿ ಹಿಂದೆ ಪ್ರಕೃತನಾಗಿದ್ದಾನೆ. ವಿಚಾರ ಮಾಡಿದರೆ ಜೀವನು ಉಪಕ್ರಮದಲ್ಲಿ ಪ್ರಕೃತನಾಗಿರಬಹುದು. ಆದರೆ ಬ್ರಹ್ಮನು ಉಪಕ್ರಮವಾಕ್ಯಕ್ಕಿಂತ ಅತ್ಯಂತ ಸಮೀಪದಲ್ಲೇ ಪ್ರಕೃತನಾಗಿದ್ದಾನೆ. ಪರಾಮರ್ಶ ಮಾಡುವಂತಹ 'ಇದಂ' ಮೊದಲಾದ ಶಬ್ದಗಳು ಬುದ್ಧಿಯಲ್ಲಿ ಸನ್ನಿಹಿತವಾದದ್ದನ್ನೇ ಪರಾಮರ್ಶ ಮಾಡುತ್ತವೆ ಹೊರತು, ದೂರದಲ್ಲಿರುವುದನ್ನು ಪರಾಮರ್ಶ ಮಾಡುವುದಿಲ್ಲ. ಪ್ರಕೃತ 'ಸ್ವಪ್ನೇನ ಶಾರೀರಮಭಿಪ್ರಹೃತ್ಯಾಸುಪ್ತಃ ಸುಪ್ತಾನಭಿಚಾಕಶೀತಿ' ಎಂಬ ಹಿಂದಿನ ವಾಕ್ಯದಲ್ಲಿ ಪರಮಾತ್ಮನೇ ಸನ್ನಿಹಿತನಾದ್ದರಿಂದ, ಅವನನ್ನೇ ಪರಾಮರ್ಶ ಮಾಡಬೇಕು.

'ಅಸ್ಯ' ಎಂಬ ಪದವನ್ನು ಅಧ್ಯಾಹಾರ ಮಾಡಬೇಕಾಗಿಲ್ಲ. ಸ್ವಪ್ನಾದ್ಯವಸ್ಥೆಗಳಲ್ಲಿ ಜೀವನಿಗೆ ಪರಮಾತ್ಮನೇ ಜ್ಞಾನಕಾರಣನಾದ್ದರಿಂದ, 'ಆತ್ಮೈವಾಸ್ಯಜ್ಯೋತಿಃ' ಎಂಬಲ್ಲಿ ಅವಧಾರಣವನ್ನು ಶ್ರುತಿಯು ಹೇಳಿದೆ. ಇಂತಹ ಆತ್ಮನ ಬಗ್ಗೆ ಪ್ರಶ್ನೋತ್ತರಗಳನ್ನು ಮಾಡಿದ ಮೇಲೆ 'ಜ್ಯೋತಿಃ' ಶಬ್ದದಿಂದ ಜ್ಞಾನಸಾಧನತ್ವವನ್ನು ಹೇಳಿ, ಹೇಗೆ ಜ್ಞಾನಸಾಧನನಾಗಿದ್ದಾನೆ? ಎಂಬ ಪ್ರಶ್ನೆಗೆ 'ಸ್ವಯಂ ವಿಹೃತ್ಯ' ಇತ್ಯಾದಿ ವಾಕ್ಯದಿಂದ ಸ್ವಪ್ನಪದಾರ್ಥಗಳನ್ನು ಸೃಷ್ಟಿಸುವ ಮೂಲಕ ಜ್ಞಾನಸಾಧನನಾಗಿದ್ದಾನೆಂದು ಉತ್ತರಿಸಲಾಗಿದೆ. ಆದ್ದರಿಂದ 'ಅತ್ರಾಯಂ ಪುರುಷಃ ಸ್ವಯಂಜ್ಯೋತಿಃ ಎಂಬಲ್ಲಿ 'ಅಸ್ಯ' ಎಂಬ ಪದದಿಂದ ಜೀವನೇ ಅನ್ವಿತನಾಗುತ್ತಾನೆ. ಮತ್ತು 'ಆತ್ಮೈವಾಸ್ಯಜ್ಯೋತಿಃ' ಎಂಬ ವಾಕ್ಯದಲ್ಲಿರುವ ಆತ್ಮಶಬ್ದದ ಅರ್ಥವನ್ನು 'ಅತ್ರಾಯಂ ಪುರುಷ ಸ್ವಯಂ' ಎಂಬಲ್ಲಿ ಪುರುಷ ಶಬ್ದವು ಹೇಳುತ್ತಿದೆ. ಅವಧಾರಣದ ಅರ್ಥವನ್ನು 'ಸ್ವಯಂ' ಶಬ್ದವು ಹೇಳುತ್ತಿರುವುದರಿಂದ, ಪರಮಾತ್ಮ ಪರತ್ವ ಪಕ್ಷದಲ್ಲಿಯೇ ಐಕಾರ್ಥ್ಯವು ಇರುತ್ತದೆ.

ವಿಚಾರ ಮಾಡಿದರೆ ಜೀವಪಕ್ಷದಲ್ಲಿ ಪ್ರಶ್ನೆಯೇ ಕೂಡುವುದಿಲ್ಲ. ಜೀವನು ಹುಟ್ಟು-ಸಾವು ಮೊದಲಾದವುಗಳಿಂದ ಯುಕ್ತನಾಗಿದ್ದಾನೆಂಬುದು ಪ್ರತ್ಯಕ್ಷದಿಂದಲೇ ಸಿದ್ಧವಾಗುವಾಗ ಅದನ್ನೇ ಶ್ರುತಿಯು ಪುನಃ ಹೇಳುವುದರಲ್ಲಿ ಅರ್ಥವಿಲ್ಲ. ಮತ್ತು ಜೀವಪಕ್ಷದಲ್ಲಿ ಸುಖ-ದುಃಖಗಳಿಗೆ ಆಶ್ರಯನಾದ ಕಾರಣ ಸಮಾನತ್ವವಾಗಲೀ, 'ಸ್ವಯಂವಿಹೃತ್ಯ' ಎಂಬಲ್ಲಿ ಹೇಳಲ್ಪಟ್ಟ ಸ್ವಾತಂತ್ರ್ಯವಾಗಲೀ, 'ಅಥ ರಥಾನ್ ರಥಯೋಗಾನ್ ಪಥಃ ಸೃಜತೇ' ಎಂಬಲ್ಲಿ ಹೇಳಲ್ಪಟ್ಟ ಸ್ವಾಪ್ನಪದಾರ್ಥಸ್ರಷ್ಟೃತ್ವವಾಗಲೀ ಕೂಡುವುದಿಲ್ಲ. ಆದ್ದರಿಂದ ಬೃಹದಾರಣ್ಯಕೋಪನಿಷತ್ತಿನ ಜ್ಯೋತಿರ್ಬ್ರಾಹ್ಮಣದಲ್ಲಿ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ ಹೊರತು ಜೀವನಲ್ಲ.

ಇಲ್ಲಿಗೆ ಜ್ಯೋತಿರಧಿಕರಣದ ಸಾರ ಮುಗಿಯಿತು.

ಆಕಾಶಾಧಿಕರಣ

ಆಕಾಶಾಧಿಕರಣವು ಪ್ರಾರಂಭವಾಗುತ್ತಿದೆ. ಪ್ರಥಮಪಾದದಲ್ಲಿ ಒಮ್ಮೆ ಆಕಾಶಾಧಿಕರಣವು ಪ್ರಸಕ್ತವಾಗಿ ಬ್ರಹ್ಮನಲ್ಲಿ ಆಕಾಶಶಬ್ದವನ್ನು ಸಮನ್ವಯಮಾಡಿದ್ದಾಗಿದೆ. ಪುನಃ ಮೂರನೆಯ ಪಾದದಲ್ಲಿಯೂ ಕೂಡ ಆಕಾಶಾಧಿಕರಣವೇ ಪ್ರಾಪ್ತವಾಗುತ್ತಿದೆ. ಆದರೆ ಪ್ರಥಮಪಾದದಲ್ಲಿ ಭೂತಾಕಾಶದಲ್ಲಿ ಪ್ರಸಿದ್ಧವಾದ ಆಕಾಶಶಬ್ದವನ್ನು ಸಮನ್ವಯ ಮಾಡಿದರು. ಈ ಪಾದದಲ್ಲಿ ಅವ್ಯಾಕೃತಾಕಾಶದಲ್ಲಿ ಪ್ರಸಿದ್ಧವಾದ ಆಕಾಶಶಬ್ದವನ್ನು ಸಮನ್ವಯ ಮಾಡುತ್ತಿದ್ದಾರೆ. ಮತ್ತು ಪ್ರಥಮಪಾದದ ಆಕಾಶಾಧಿಕರಣಕ್ಕೆ 'ಅಸ್ಯ ಲೋಕಸ್ಯ ಕಾಗತಿಃ' ಎಂಬ ಛಾಂದೋಗ್ಯದ ವಾಕ್ಯವು ವಿಷಯವಾಗಿದೆ. ಈ ಅಧಿಕರಣದಲ್ಲಿ 'ಆಕಾಶೋ ವೈ ನಾಮರೂಪಯೋರ್ನಿರ್ವಹಿತ' ಎಂಬ ಮತ್ತೊಂದು ಛಾಂದೋಗ್ಯದ ವಾಕ್ಯವು ವಿಷಯವಾಗಿದೆ. ಹೀಗೆ ಸಮನ್ವಯ ಮಾಡುತ್ತಿರುವ ವಿಷಯವಾಕ್ಯಗಳ ಭೇದದಿಂದಲೂ ಅಧಿಕರಣಭೇದವು ಯುಕ್ತವಾಗಿದೆ.

'ಆಕಾಶಸ್ತಲ್ಲಿಂಗಾತ್' ಎಂಬ ಪ್ರಥಮಪಾದದ ಅಧಿಕರಣದಿಂದ ಶ್ರುತಿಯಲ್ಲಿರುವ ಆಕಾಶಬ್ದಗಳೆಲ್ಲವೂ ಭಗವತ್ಪರವಾಗಿವೆಯೆಂದು ಸಮರ್ಥನೆಮಾಡಿದ್ದಾರೆ. ಅದರಿಂದ ಪ್ರಕೃತ 'ಆಕಾಶೋ ವೈ ನಾಮ' ಇತ್ಯಾದಿ ಶ್ರುತಿಯಲ್ಲಿರುವ ಆಕಾಶಶಬ್ದವೂ ಕೂಡ ಭಗವತ್ಪರವೆಂದಂತಾಯಿತು. ಆದರೆ ಅವ್ಯಾಕೃತಾಕಾಶದಲ್ಲಿಯೂ ಆಕಾಶಶಬ್ದದ ಪ್ರಯೋಗವಿದೆ. ಹಾಗಾಗಿ ಪ್ರಥಮಪಾದದ ನ್ಯಾಯದಿಂದ ಹಾಗೂ ಲೋಕಪ್ರಸಿದ್ಧಿಯಿಂದ ಇಲ್ಲಿ ಸಮನ್ವಯ ಮಾಡುತ್ತಿರುವ ಆಕಾಶಶಬ್ದವು ಉಭಯತ್ರಪ್ರಸಿದ್ಧವೆನಿಸುತ್ತದೆ. ಆದ್ದರಿಂದ ಈ ಅಧಿಕರಣಕ್ಕೆ ಪಾದಸಂಗತಿಯಿರುತ್ತದೆಂದು ತಿಳಿಯಬೇಕು.

ಹಿಂದಿನ ಜ್ಯೋತಿರಧಿಕರಣದಲ್ಲಿ ಅಮೃತತ್ವಾದಿ ಧರ್ಮಗಳಿಂದ ಯುಕ್ತನಾದವನೇ ಜ್ಯೋತಿಯೆಂದು ಶ್ರುತಿಯು ಹೇಳುತ್ತಿರುವುದರಿಂದ ಮಹಾವಿಷ್ಣುವಿನಲ್ಲಿ 'ಜ್ಯೋತಿ' ಎಂಬ ಶಬ್ದವನ್ನು ಸಮನ್ವಯ ಮಾಡಲಾಯಿತು. ಆದರೆ ಆಕಾಶಶ್ರುತಿಯಲ್ಲಿ ಅದೇ ಅಮೃತತ್ವಲಿಂಗವನ್ನು ಆಕಾಶವನ್ನಲ್ಲಿ ಶ್ರುತಿಯು ಹೇಳುತ್ತಿದೆ. ಒಂದು ವೇಳೆ ಆಕಾಶಶಬ್ದವಾಚ್ಯವಾದ ಪದಾರ್ಥವು ಬೇರೆಯಾದಲ್ಲಿ, ಹಿಂದಿನ ಅಧಿಕರಣದ ಜ್ಯೋತಿಯೂ ಕೂಡ ಬೇರೆ ಪದಾರ್ಥವೇ ಆಗುತ್ತದೆ. ಹಾಗಾಗಿ ಹಿಂದಿನ ಜ್ಯೋತಿರಧಿಕರಣದಿಂದ ಈ ಅಧಿಕರಣಕ್ಕೆ ಆಕ್ಷೇಪಿಕೀ ಸಂಗತಿಯಿರುತ್ತದೆಂದೂ ಭಾವಿಸಬೇಕು

'ಆಕಾಶೋ ವೈನಾಮ ನಾಮರೂಪಯೋರ್ನಿರ್ವಹಿತ' ಎಂಬ ಛಾಂದೋಗ್ಯೋಪನಿಷತ್ತಿನ ಎಂಟನೇ ಅಧ್ಯಾಯದ ವಾಕ್ಯವು ಈ ಅಧಿಕರಣದ ವಿಷಯವಾಗಿದೆ. 'ವೈ ನಾಮ' ಎಂಬ ಪದಗಳು ಆಕಾಶವು ಪ್ರಸಿದ್ಧವಾದುದೆಂದು ಹೇಳುತ್ತಿವೆ. ನಾಮರೂಪಾತ್ಮಕವಾದ ಪ್ರಪಂಚಕ್ಕೆ ಅಂತಹ ಆಕಾಶವು ಆಶ್ರಯವಾಗಿದೆಯೆಂದೂ ಕೂಡ ಹೇಳುತ್ತಿದೆ. ಪ್ರತ್ಯಕ್ಷಾನುಭವದಂತೆ ಅವ್ಯಾಕೃತಾಕಾಶವೇ ನಾಮರೂಪಾತ್ಮಕವಾದ ಪ್ರಪಂಚಕ್ಕೆ ಆಶ್ರಯವಾದ ಕಾರಣ ಮತ್ತು ಆಕಾಶಶಬ್ದದ ಪ್ರಸಿದ್ಧಿಯೂ ಕೂಡ ಅವ್ಯಾಕೃತಾಕಾಶದಲ್ಲೇ ಇರುವ ಕಾರಣದಿಂದಲೂ ಅವ್ಯಾಕೃತಾಕಾಶವೇ 'ಆಕಾಶೋ ವೈ ನಾಮ' ಇತ್ಯಾದಿ ಶ್ರುತಿಯಿಂದ ಪ್ರತಿಪಾದ್ಯವಾಗುತ್ತದೆಂದು ಪೂರ್ವಪಕ್ಷ. 'ತೇ ಯದಂತರ ತದ್ಬ್ರಹ್ಮ' ಎಂಬ ಮುಂದಿನ ವಾಕ್ಯದಲ್ಲಿ ಶ್ರುತವಾದ ಆಕಾಶವನ್ನು ನಾಮರೂಪಾತ್ಮಕವಾದ ಪ್ರಪಂಚಕ್ಕಿಂತಲೂ ಭಿನ್ನವೆಂದು ಅಥವಾ ಪ್ರಾಕೃತನಾಮರಹಿತರೆಂದು ಹೇಳಿರುವ ಕಾರಣ ಬ್ರಹ್ಮಶಬ್ದವಿರುವುದರಿಂದಲೂ ಆಕಾಶವು ಬ್ರಹ್ಮನೇ ಆಗುತ್ತಾನೆಂಬುದು ಈ ಅಧಿಕರಣದ ಸಿದ್ಧಾಂತ.

'ಆಕಾಶೋ ವೈನಾಮ ನಾಮರೂಪಯೋ ನಿರ್ವಹಿತ ತೇ ಯದಂತ ತದ್ಬ್ರಹ್ಮ ತದಮೃತಂ' ಎಂಬ ವಾಕ್ಯದಿಂದ ಪ್ರಸಿದ್ಧವಾದದ್ದು ಅವ್ಯಾಕೃತಾಕಾಶವೇ ಆಗಿದೆ. ಏಕೆಂದರೆ 'ವೈ ನಾಮ' ಎಂಬೆರಡು ಅವ್ಯಯಗಳು 'ಪ್ರಸಿದ್ಧ' ಎಂಬರ್ಥವನ್ನು ಹೇಳುತ್ತವೆ. ಅವ್ಯಾಕೃತಾಕಾಶವು ಆಕಾಶಶಬ್ದದಿಂದ ಪ್ರತಿಪಾದ್ಯವಾಗಿದೆಯೆಂಬುದು ಲೋಕಪ್ರಸಿದ್ಧವಾದ ವಿಚಾರ. ಮತ್ತು ನಾಮರೂಪವಾದ ಪ್ರಪಂಚಕ್ಕೂ ಆಶ್ರಯವಾಗಿರುವಿಕೆಯು ಅವ್ಯಾಕೃತಾಕಾಶದಲ್ಲಿ ಪ್ರತ್ಯಕ್ಷಸಿದ್ಧವಾದ ವಿಚಾರವೇ ಆಗಿದೆ. ಹೀಗೆ ಲೋಕಪ್ರಸಿದ್ಧಿ ಮತ್ತು ನಾಮರೂಪ ಪ್ರಪಂಚಕ್ಕೆ ಆಶ್ರಯವಾಗಿರುವಿಕೆ ಎಂಬೆರಡು ನಿರವಕಾಶಲಿಂಗಗಳಿಂದ ಆಕಾಶಪದದಿಂದ ಅವ್ಯಾಕೃತಾಕಾಶವೇ ಪ್ರತಿಪಾದ್ಯವಾಗುತ್ತದೆ. 'ವೈ ನಾಮ' ಎಂಬೆರಡು ನಿಪಾತಗಳೇ ಪೂರ್ವಪಕ್ಷಕ್ಕೆ ಪ್ರಧಾನವಾದ ಲಿಂಗ. ವಿಷಯವಾಕ್ಯದಲ್ಲಿ ಬ್ರಹ್ಮಶ್ರುತಿ, ಆತ್ಮಶ್ರುತಿ ಮೊದಲಾದ ಶ್ರುತಿಗಳು, ಅಮೃತತ್ವ, ನಾಮರೂಪರಾಹಿತ್ಯ ಮೊದಲಾದ ಲಿಂಗಗಳು ವಿಷ್ಣುವಿಷಯಕವಾಗಿ ಶ್ರುತವಾಗಿವೆ. ಆದರೂ ಸಹ ಪ್ರಸಿದ್ಧಿದ್ಯೋತಕವಾದ 'ವೈ ನಾಮ' ಎಂಬೆರಡು ನಿಪಾತಗಳು ಆ ಎಲ್ಲಾ ಶ್ರುತಿ ಹಾಗೂ ಲಿಂಗಗಳನ್ನು ಬಾಧಿಸುತ್ತವೆ. ನಿಪಾತದಿಂದ ದ್ಯೋತಿತವಾದ ಪ್ರಸಿದ್ಧಿಯೆಂದರೆ ಲೌಕಪ್ರಸಿದ್ಧಿಯನ್ನೇ ವಿವಕ್ಷಿಸಬೇಕು. ಒಂದುವೇಳೆ ವೈದಿಕಪ್ರಸಿದ್ಧಿಯನ್ನು ಇಟ್ಟುಕೊಂಡರೆ, ವ್ಯಾವರ್ತ್ಯವಾದ ಅಪ್ರಸಿದ್ಧವಾದ ಆಕಾಶವೇ ಇರುವುದಿಲ್ಲ. ಏಕೆಂದರೆ ಗಗನವೂ ಸಹ ವೇದಪ್ರಸಿದ್ಧವೇ ಆಗಿದೆ.

LIV

ಮತ್ತು ಅಸಂಕುಚಿತ ಪ್ರವೃತ್ತಿಯು ವಿಷ್ಣುವಿಗಿಂತ ಗಗನದಲ್ಲೇ ಇರುತ್ತದೆ. ಏಕೆಂದರೆ ಸ್ವರೂಪೇಣ ಮತ್ತು ನಾಮರೂಪನಿರ್ವಾಹಕತ್ವೇನ ಲೋಕದಿಂದಲೂ, ವೇದದಿಂದಲೂ ಪ್ರಸಿದ್ಧವಾಗಿದೆ. ಆದರೆ ಬ್ರಹ್ಮನು ಸ್ವರೂಪದಿಂದಷ್ಟೇ ವೇದದಲ್ಲಿ ಪ್ರಸಿದ್ಧವಾಗಿದ್ದಾನೆ. ನಾಮರೂಪನಿರ್ವಾಹಕತ್ವೇನ ಪ್ರಸಿದ್ಧಿಯನ್ನಂತೂ ಬ್ರಹ್ಮನಲ್ಲಿ ಲೋಕದಿಂದಾಗಲೀ, ವೇದದಿಂದಾಗಲೀ ಹೇಳಲು ಸಾಧ್ಯವಿಲ್ಲ. ಹಾಗಾಗಿ ಬ್ರಹ್ಮಪಕ್ಷದಲ್ಲಿರುವ ಪ್ರವೃತ್ತಿಯು ಸಂಕುಚಿತವಾಗಿವೆ. ಗಗನಪಕ್ಷದಲ್ಲಿರುವ ಪ್ರವೃತ್ತಿಯು ಅಸಂಕುಚಿತವಾಗಿದೆ. ಅಸಂಕುಚಿತ ಪ್ರವೃತ್ತಿಯನ್ನೇ ವಿವಕ್ಷಿಸಲು ಬರುವಾಗ, ಸಂಕುಚಿತಪ್ರವೃತ್ತಿಯನ್ನು ವಿವಕ್ಷಿಸಬೇಕಾಗಿಲ್ಲ. ಹೀಗೆ 'ವೈ ನಾಮ' ಎಂಬ ನಿಪಾತಗಳನ್ನು 'ಆಕಾಶಃ' ಎಂಬ ಉದ್ದೇಶದಲ್ಲಾಗಲೀ, 'ನಾಮರೂಪನಿರ್ವಹಿತ' ಎಂಬ ವಿಧೇಯದಲ್ಲಾಗಲೀ ಅನ್ವಯ ಮಾಡಿದರೂ ಗಗನವೇ ಆಕಾಶಶಬ್ದ ಪ್ರತಿಪಾದ್ಯವಾಗುತ್ತದೆ.

'ವೈ ನಾಮ' ಎಂಬೆರಡು ನಿಪಾತಗಳು ಲೋಕಪ್ರಸಿದ್ಧಿಯನ್ನು ಹೇಳುತ್ತಿವೆ. ಆದ್ದರಿಂದ ಗಗನವನ್ನೇ ಆಕಾಶಶಬ್ದ ಪ್ರತಿಪಾದ್ಯವೆಂದು ವಿವಕ್ಷಿಸಬೇಕು. ನಾಮರೂಪನಿರ್ವಾಹಕತ್ವವು ಗಗನದಲ್ಲಿ ಅಪ್ರಸಿದ್ಧವಾಗಿರಬಹುದು. ಆದರೆ ಸ್ವರೂಪತಃ ಪ್ರಸಿದ್ಧಿಯನ್ನಷ್ಟೇ ವಿವಕ್ಷಿಸಿ, ಆಕಾಶಶಬ್ದ ಪ್ರತಿಪಾದ್ಯವನ್ನು ನಿರ್ವಹಿಸಬಹುದು. ಅಂದರೆ 'ವೈ ನಾಮ' ಎಂಬ ನಿಪಾತವನ್ನು ಉದ್ದೇಶ್ಯದಲ್ಲಿ ಮಾತ್ರ ಅನ್ವಯ ಮಾಡಿ ವಿಧೇಯವಾದ ನಾಮರೂಪನಿರ್ವಾಹಕತ್ವದಲ್ಲಿ ಅನ್ವಯ ಮಾಡದೇ ಅರ್ಥವನ್ನು ತಿಳಿಯಬೇಕು.

ಬ್ರಹ್ಮನನ್ನು ವಿಧೇಯನೆಂದು ಒಪ್ಪಿದರೂ ಸಹ ಯಾವುದೇ ಬಗೆಯ ಪ್ರಸಿದ್ಧಿಯನ್ನು ಅವನಲ್ಲಿ ತೋರಿಸಲಾಗದು. ಏಕೆಂದರೆ ಈಕ್ಷತ್ಯಧಿಕರಣದಲ್ಲಿ 'ಅಪ್ರಸಿದ್ಧೇರವಾಚ್ಯಂ ತತ್' ಎಂಬುದಾಗಿ ಹೇಳಿದಂತೆ ಪ್ರಸಿದ್ಧಿಶಬ್ದಕ್ಕೆ ಲೋಕಪ್ರಸಿದ್ಧಿಯೆಂದೇ ಸ್ವಾಭಾವಿಕವಾದ ಅರ್ಥ. ಬ್ರಹ್ಮನಲ್ಲಿ ಇಂತಹ ಲೋಕಪ್ರಸಿದ್ಧಿಯನ್ನು ಹೇಳಲು ಸಾಧ್ಯವೇ ಇಲ್ಲ. ಆದ್ದರಿಂದ ಗಗನದಲ್ಲಿರುವ ಪ್ರಸಿದ್ಧಿಯನ್ನೇ 'ವೈ ನಾಮ' ಎಂಬೆರಡು ನಿಪಾತಗಳು ಹೇಳುತ್ತಿವೆ.

'ಆಕಾಶೋ ವೈನಾಮ ನಾಮರೂಪಯೋಃ ನಿರ್ವಹಿತ' ಎಂಬ ಛಾಂದೋಗ್ಯದ ವಾಕ್ಯದಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಈ ವಾಕ್ಯದಲ್ಲಿರುವ ನಾಮರಾಹಿತ್ಯ-ರೂಪರಾಹಿತ್ಯಗಳೆರಡೂ ವಿಷ್ಣುವಿನ ಅಸಾಧಾರಣ ನಿರವಕಾಶಲಿಂಗಗಳೇ ಆಗಿವೆ ಹೊರತು, ಅವ್ಯಾಕೃತಾಕಾಶದ್ದಲ್ಲ. 'ಯತೋ ವಾಚೋ ನಿವರ್ತಂತೇ' ಇತ್ಯಾದಿ ಶ್ರುತಿಗಳು ಪರಮಾತ್ಮನು ಸಾಕಲ್ಯೇನ ಶಬ್ದಗೋಚರನಲ್ಲವೆಂದು ಸಮರ್ಥನೆ ಮಾಡುತ್ತಿವೆ. ಆದ್ದರಿಂದ ಅವನನ್ನು ನಾಮರಹಿತನೆಂದು ಶ್ರುತಿಯು ಕರೆದಿದೆ.

ಇದರಂತೆ 'ತೇ ಯದಂತರಾ' ಎಂಬ ಶ್ರುತಿಯಲ್ಲಿ ರೂಪರಾಹಿತ್ಯವನ್ನೂ ಕೂಡ ತಿಳಿಯಬೇಕು. ಅಂದರೆ ಬ್ರಹ್ಮನಲ್ಲಿ 'ಯದಾಪಶ್ಯಃ ಪಶ್ಯತೇ ರುಗ್ಮವರ್ಣಮ್' ಇತ್ಯಾದಿ ಶ್ರುತಿಗಳ ಆಧಾರದಿಂದ ಪ್ರಾಕೃತರೂಪವಿರಬಹುದೆಂಬ ಸಂಶಯವೂ ಉಂಟಾಗುತ್ತದೆ. ಅದನ್ನು 'ಅಶಬ್ದಸ್ಪರ್ಶಮರೂಪವ್ಯಯಮ್' ಎಂಬ ಶ್ರುತಿಯು ಪ್ರಾಕೃತರೂಪವಿಲ್ಲವೆಂದು ವ್ಯಾಖ್ಯಾನ ಮಾಡುವ ಮೂಲಕ, ಅಪ್ರಾಕೃತರೂಪವನ್ನಷ್ಟೇ ಅಂತಹ ಶ್ರುತಿಗಳು ಹೇಳುತ್ತಿವೆಯೆಂದು ಸ್ಪಷ್ಟಪಡಿಸುತ್ತದೆ. ಪರಮಾತ್ಮನಲ್ಲಿ ಪ್ರಾಕೃತರೂಪವಿಲ್ಲದ ಕಾರಣ, ರೂಪರಾಹಿತ್ಯವನ್ನು ಶ್ರುತಿಯು ಹೇಳುತ್ತಿದೆ. ಆದ್ದರಿಂದ ನಾಮರಾಹಿತ್ಯ-ರೂಪರಾಹಿತ್ಯಗಳೆರಡೂ ಪರಮಾತ್ಮನ ನಿರವಕಾಶಲಿಂಗಗಳಾಗಿವೆ. ಏಕೆಂದರೆ ಗಗನದಲ್ಲಿ ಶಬ್ದಗಳಿಂದ ಸಂಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲವೆಂಬ ಅನಾಮತ್ವವನ್ನಾಗಲೀ, ರೂಪವೇ ಇಲ್ಲವೆಂಬ ಅರೂಪವತ್ವವನ್ನಾಗಲೀ, ಹೇಳಲು ಸಾಧ್ಯವಿಲ್ಲ. ಗಗನದಲ್ಲಿ ಶಬ್ದಪ್ರತಿಪಾದ್ಯತ್ವವೂ ಇರುತ್ತದೆ. ಮತ್ತು ನೈಲ್ಯಾದಿರೂಪಗಳೂ ಕೂಡ ಇರುತ್ತದೆ.

ಪೂರ್ವಪಕ್ಷ ಮಾಡುವಾಗ 'ವೈ ನಾಮ' ಎಂಬೆರಡು ನಿಪಾತಗಳೇ ಅವ್ಯಾಕೃತಾಕಾಶವನ್ನು ವಿವಕ್ಷಿಸಲು ಆಧಾರವಾಗಿವೆಯೆಂದು ಸಮರ್ಥಿಸಿದ್ದರು. ವಿಚಾರ ಮಾಡಿದರೆ, ಈ ಎರಡು ನಿಪಾತಗಳೇ ವಿಷ್ಣು ಆಕಾಶಶಬ್ದವಾಚ್ಯವೆನ್ನಲು ಮುಖ್ಯವಾದ ಆಧಾರಗಳಾಗಿವೆ. ಏಕೆಂದರೆ -

ವೈದಿಕೇಷು ಪ್ರಯೋಗೇಷು ವೈದಿಕ್ಯೇವ ಪ್ರಸಿದ್ಧತಾ ।
ಗ್ರಾಹ್ಯಾಂತರಂಗಭೂತತ್ವಾತ್ತದಯೋಗೇ ತ್ವವೈದಿಕೀ ॥೧॥

ವೈದಿಕಪ್ರಯೋಗದಲ್ಲಿ ವೈದಿಕಪ್ರಸಿದ್ಧಿಯನ್ನೇ ವಿವಕ್ಷಿಸಬೇಕು. ಏಕೆಂದರೆ ಅಂತರಂಗ ಬಹಿರಂಗಗಳಲ್ಲಿ ಅಂತರಂಗವನ್ನೇ ಸ್ವೀಕರಿಸುವುದು ಶ್ರೇಷ್ಠವಾದ್ದರಿಂದ, ವೈದಿಕಪ್ರಸಿದ್ಧಿಯೆಂಬ ಅಂತರಂಗವನ್ನು ಬಿಟ್ಟು, ಬಹಿರಂಗವೆನಿಸಿದ ಲೌಕಿಕಪ್ರಸಿದ್ಧಿಯನ್ನು ವಿವಕ್ಷಿಸಬಾರದು. ಆದ್ದರಿಂದ ಪರಮಾತ್ಮನು ವೇದಗಳಲ್ಲಿ ಸ್ವರೂಪತಃ ಪ್ರಸಿದ್ಧನಾಗಿದ್ದಷ್ಟೇ ಅಲ್ಲದೇ ಆಕಾಶಶಬ್ದದಿಂದಲೂ ಕೂಡ ಪ್ರಸಿದ್ಧನಾಗಿದ್ದಾನೆ.

ಮತ್ತು 'ವೈ ನಾಮ' ಎಂಬೆರಡು ನಿಪಾತಗಳು ವಿಧೇಯದಲ್ಲೇ ಅನ್ವಯವನ್ನು ಹೊಂದುತ್ತವೆ. ಏಕೆಂದರೆ ಶ್ರುತಿಗಳಲ್ಲಿ ಪರಮಾತ್ಮನು ನಾಮರೂಪ ಪ್ರಪಂಚಕ್ಕೆ ಆಧಾರನಾಗಿದ್ದಾನೆಂದು ಪ್ರಸಿದ್ಧವಾಗಿದೆ. 'ಏಕೋ ದಾಧಾರ ಭುವನಾನಿ ವಿಶ್ವಾ' ಎಂಬ ಶ್ರುತಿಯು ಸಮಸ್ತಪ್ರಪಂಚಕ್ಕೆ ಪರಮಾತ್ಮನೇ ಆಧಾರನೆಂದು ಹೇಳಿದರೆ 'ನಾಮರೂಪೇ ವ್ಯಾಕರೋತ್' ಎಂಬ ಶ್ರುತಿಯು ಸಮಸ್ತಜಗತ್ತಿಗೆ ಪರಮಾತ್ಮನೇ ಕಾರಣನಾಗಿದ್ದಾನೆಂದು ಹೇಳುತ್ತಿದೆ. ಹೀಗೆ ನಾಮಾತ್ಮಕವಾದ ಹಾಗೂ ರೂಪಾತ್ಮಕವಾದ ಪ್ರಪಂಚಕ್ಕೆ ಆಶ್ರಯನಾದವನು ಪರಮಾತ್ಮನೇ ಆಗಿದ್ದಾನೆ. ಇದನ್ನೇ ಪ್ರಕೃತ ಆಕಾಶಶ್ರುತಿಯು ನಾಮರೂಪನಿರ್ವಹಿತೃತ್ವವನ್ನು ಪರಮಾತ್ಮನಲ್ಲಿ ಹೇಳುತ್ತಿದೆ. ಸ್ವತಂತ್ರವಾದ ನಾಮರೂಪಗಳಿಗೆ ಆಧಾರವಾಗಿರುವಿಕೆ ಪರಮಾತ್ಮನಲ್ಲಿ ಮಾತ್ರ ಇರುತ್ತದೆ ಹೊರತು, ಅವ್ಯಾಕೃತಾಕಾಶದಲ್ಲಿ ಇರುವುದಿಲ್ಲ. ಅವಕಾಶಾದಿಗಳನ್ನು ಅವ್ಯಾಕೃತಾಕಾಶವು ನೀಡಿದರೂ ಸಹ ಪರಮಾತ್ಮನ ಅಧೀನವಾಗಿ ಮಾತ್ರ ನೀಡಲು ಸಾಧ್ಯ . ಆದ್ದರಿಂದ ನಾಮರೂಪ- ನಿರ್ವಾಹಕತ್ವವು ಪರಮಾತ್ಮನಲ್ಲೇ ಬರುತ್ತದ

ಸೂತ್ರದಲ್ಲಿರುವ 'ಅರ್ಥಾಂತರತ್ವಾದಿವ್ಯಪದೇಶಾತ್' ಎಂಬ ಹೇತುವಿನ ಅಭಿಪ್ರಾಯವು ಹೀಗಿದೆ - ಅರ್ಥಾಂತರ ಶಬ್ದವು ವೈಲಕ್ಷಣ್ಯವನ್ನಷ್ಟೇ ಹೇಳಿದರೂ 'ತೇ ಯದಂತರಾ' ಎಂಬ ವಿಷಯವಾಕ್ಯದ ಸನ್ನಿಧಾನದಿಂದ ನಾಮರೂಪರಾಹಿತ್ಯವೆಂಬ ವೈಲಕ್ಷಣ್ಯವನ್ನು ತಿಳಿಸುತ್ತಿದೆ. ಜಗತ್ತಿನಲ್ಲಿರುವ ಯಾವುದೇ ಪದಾರ್ಥಗಳಾದರೂ ಶಬ್ದದಿಂದ ತಿಳಿಯಲು ಸಾಧ್ಯವಾಗುತ್ತವೆ. ಮತ್ತು ಪ್ರಾಕೃತರೂಪಗಳನ್ನು ಹೊಂದಿರುತ್ತವೆ. ಆದರೆ ಪರಮಾತ್ಮನನ್ನು ಸಂಪೂರ್ಣವಾಗಿ ತಿಳಿಸುವ ಶಬ್ದಗಳು ಜಗತ್ತಿನಲ್ಲಿ ಇಲ್ಲವೇ ಇಲ್ಲ. ಈ ಕಾರಣದಿಂದ ನಾಮರಾಹಿತ್ಯವೆಂಬ ವೈಲಕ್ಷಣ್ಯವು ಅವನಲ್ಲಿದೆ. ಮತ್ತು ಪ್ರಾಕೃತರೂಪವಿಲ್ಲದ ಕಾರಣ ರೂಪರಾಹಿತ್ಯವೆಂಬ ವೈಲಕ್ಷಣ್ಯವೂ ಕೂಡ ಅವನಲ್ಲಿದೆ. ಅಷ್ಟೇ ಅಲ್ಲದೇ ಬ್ರಹ್ಮತ್ವ, ಅಮೃತತ್ವ ಮೊದಲಾದ ಬ್ರಹ್ಮನ ಅಸಾಧಾರಣ ಲಿಂಗಗಳನ್ನು ಶ್ರುತಿ ಹೇಳುತ್ತಿರುವುದರಿಂದಲೂ ಆಕಾಶಶಬ್ದದಿಂದ ಪ್ರತಿಪಾದ್ಯನಾದವನು ಪರಮಾತ್ಮನೇ ಆಗುತ್ತಾನೆಂದು ಶ್ರುತಿಯಲ್ಲಿರುವ ಲಿಂಗಗಳಿಂದಲೇ ಸ್ಪಷ್ಟವಾಗಿ ತಿಳಿಯುತ್ತದೆ. ಅಥವಾ ನಾಮರೂಪ- ರಾಹಿತ್ಯವೆಂಬುದನ್ನು ಒಟ್ಟಿಗೆ ವಿವಕ್ಷಿಸದೇ ಪ್ರತ್ಯೇಕವಾಗಿಯೇ ನಾಮರಾಹಿತ್ಯ ರೂಪರಾಹಿತ್ಯಗಳು ಬ್ರಹ್ಮತ್ವಕ್ಕೆ ಸಾಧಕವಾಗಿವೆ. ಅಂದರೆ ಬ್ರಹ್ಮನೇ ಆಕಾಶಶಬ್ದ ಪ್ರತಿಪಾದ್ಯನಾಗಿದ್ದಾನೆನ್ನಲು ಕೇವಲ ನಾಮರಾಹಿತ್ಯವೆಂಬ ವೈಲಕ್ಷಣ್ಯವನ್ನು ಹೇಳಿದರೆ ಸಾಕು. ಅಥವಾ ರೂಪರಾಹಿತ್ಯವೆಂಬ ವೈಲಕ್ಷಣ್ಯವನ್ನು ಹೇಳಿದರೆ ಸಾಕು. ಎರಡೂ ಹೇತುಗಳು ಯಾವುದೇ ದೋಷವನ್ನು ಹೊಂದದೇ ಬ್ರಹ್ಮತ್ವಕ್ಕೆ ಸಾಧಕವಾಗಿವೆ. ಆದ್ದರಿಂದ ಸೂತ್ರದಲ್ಲಿರುವ ಅರ್ಥಾಂತರ ಶಬ್ದವು ಕೇವಲ ರೂಪರಾಹಿತ್ಯವೆಂಬ ವೈಲಕ್ಷಣ್ಯವನ್ನು ಹೇಳುತ್ತಿದೆ. ನಾಮರಾಹಿತ್ಯವನ್ನು ಆದಿಪದವು ಹೇಳುತ್ತಿದೆಯೆಂದು ತಿಳಿಯಬೇಕು. ಮೊದಲನೆಯ ಪಕ್ಷದಲ್ಲಿ ಆದಿಪದದಿಂದ ಬ್ರಹ್ಮತ್ವಾದಿಗಳನ್ನು ವಿವಕ್ಷಿಸಲಾಗಿತ್ತು. ಈ ಪಕ್ಷದಲ್ಲಿ ಆದಿಪದದಿಂದ ನಾಮರಾಹಿತ್ಯವನ್ನು ವಿವಕ್ಷಿಸಿ, ಬ್ರಹ್ಮತ್ವಾದಿಗಳನ್ನು ಸ್ವತಃ ಶಿಷ್ಯಂದಿರೇ ಊಹಿಸಿಕೊಳ್ಳಬಹುದೆಂದು ತಿಳಿಯಬೇಕು. ಇಷ್ಟು ಸೂತ್ರಾರ್ಥ.

ಇಲ್ಲಿಗೆ ಆಕಾಶಾಧಿಕರಣದ ಸಾರವು ಮುಗಿಯಿತು.

LVI

ಸುಷುಪ್ತ್ಯಧಿಕರಣ

ಸುಷುಪ್ತ್ಯಧಿಕರಣದಲ್ಲಿ ಸ್ವಪ್ನದ್ರಷ್ಟೃತ್ವವೆಂಬ ಲಿಂಗವನ್ನು ಭಗವಂತನಲ್ಲಿ ಸಮನ್ವಯ ಮಾಡಲಾಗಿದೆ. ಲಿಂಗಪಾದದ ನ್ಯಾಯದಿಂದ ಈ ಲಿಂಗವು ಭಗವತ್ಪರವಾಗಿದೆಯೆಂದು ತಿಳಿಯುತ್ತದೆ. ಆದರೆ ಲೋಕದಲ್ಲಿ ಹೆಚ್ಚಾಗಿ ಜೀವನಲ್ಲೇ ಇದು ಪ್ರಸಿದ್ಧವಾದ ಕಾರಣ ಉಭಯತ್ರಪ್ರಸಿದ್ಧವಾಗಿದೆ.

ಹಿಂದಿನ ಆಕಾಶಾಧಿಕರಣದಲ್ಲಿ ಶ್ರುತಿಪ್ರಸಿದ್ಧವಾದ ಕಾರಣ, ಆಕಾಶಶಬ್ದವು ಬ್ರಹ್ಮನಲ್ಲಿ ಸಮನ್ವಯವಾಗುತ್ತದೆಂದು ಸಮರ್ಥಿಸಲಾಯಿತು. ಆದರೆ ಇಲ್ಲಿ ಸಮನ್ವಯ ಮಾಡುತ್ತಿರುವ ಸ್ವಪ್ನದ್ರಷ್ಟೃತ್ವಲಿಂಗವು ಶ್ರುತಿಪ್ರಸಿದ್ಧವೇ ಆಗಿಲ್ಲ. ಆದ್ದರಿಂದ ಇದನ್ನು ಶ್ರೀಹರಿಯಲ್ಲಿ ಸಮನ್ವಯ ಮಾಡಲು ಹೇಗೆ ಸಾಧ್ಯ ? ಅಥವಾ ಅವ್ಯಾಕೃತಾಕಾಶವು ಜಡವಾದ್ದರಿಂದ ಪರಮಾತ್ಮನಿಂದ ಅಭೇದವನ್ನು ಹೇಳಲು ಬರುವುದಿಲ್ಲ. ಆದರೆ ಜೀವನು ಪರಮಾತ್ಮನಿಗಿಂತ ಅಭಿನ್ನನಾದ ಕಾರಣ, ಪರಮಾತ್ಮನಲಿಂಗವನ್ನು ಜೀವನಲ್ಲಿ ಹೇಳಬಹುದೆಂದು ಪೂರ್ವವೈಷಮ್ಯದಿಂದ ಸಂಗತಿಯನ್ನು ತಿಳಿಯಬೇಕು. ಅಥವಾ ಅವ್ಯಾಕೃತಾಕಾಶವು ರೂಪರಹಿತವಾಗಿದ್ದರೂ ರೂಪರಹಿತನೆಂದು ಪ್ರಸಿದ್ಧನಾದ ಕಾರಣದಿಂದಲೇ ಬ್ರಹ್ಮನು ಆಕಾಶಶಬ್ದ ಪ್ರತಿಪಾದ್ಯನೆಂದು ಹೇಗೆ ಸಿದ್ಧಾಂತ ಮಾಡಿದಿರೋ, ಅದರಂತೆ ಇಲ್ಲಿ ಸ್ವಪ್ನದ್ರಷ್ಟೃತ್ವವು ಜೀವನಲ್ಲೇ ಪ್ರಸಿದ್ಧವಾದ ಕಾರಣ ಜೀವನನ್ನೇ ವಿವಕ್ಷಿಸಬೇಕೆಂದು ಪೂರ್ವಸಿದ್ಧಾಂತ ನ್ಯಾಯದಿಂದಲೇ ಸಂಗತಿಯನ್ನು ತೋರಿಸಬೇಕು. ಭಾಷ್ಯದಲ್ಲಿ ಅಕ್ಷರಾಧಿಕರಣದ ಜೊತೆ ಸಂಗತಿ ಹೇಳಿದ್ದಲ್ಲ, ಹೊರತಾಗಿ ಅಕ್ಷರಾಧಿಕರಣದಲ್ಲಿ ಹೇಳಲ್ಪಟ್ಟ ಅಸಂಗತ್ವವನ್ನು ಸ್ವಪ್ನದ್ರಷ್ಟವಾದ ಜೀವನಲ್ಲಿ ಶ್ರುತಿ ಹೇಳಿದ್ದರಿಂದ, ಅಕ್ಷರಾಧಿ ಕರಣದ ವಿಷಯವನ್ನು ಕೇವಲ ಆಕ್ಷೇಪ ಮಾಡಿದ್ದಾರೆಂದು ತಿಳಿಯಬೇಕು. ಆದ್ದರಿಂದ ಅದು ಕೇವಲ ಫಲಪರವಾಗಿದೆ.

ಬೃಹದಾರಣ್ಯಕೋಪನಿಷತ್ತಿನ ಆರನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣದಲ್ಲಿ 'ಸವಾ ಏಷ ಏತಸ್ಮಿನ್ ಸಂಪ್ರಸಾದೇ' ಇತ್ಯಾದಿ ವಾಕ್ಯವು ಶ್ರುತವಾಗಿದೆ. 'ಸ ಯತ್ತತ್ರ ಕಿಂಚಿತ್ಪಶ್ಯತ್ಯನನ್ವಾಗತಸ್ತೇನ ಭವತಿ' ಎಂಬುದೇ ಈ ಅಧಿಕರಣದ ವಿಷಯವಾಕ್ಯ. ಸ್ವಪ್ನಾವಸ್ಥೆಯಲ್ಲಿ ಯಾವ ಅನಿಷ್ಟವನ್ನು ನೋಡಿದರೂ ಅದರಿಂದ ದುಃಖದ ಸ್ಪರ್ಶವು ಅವನಿಗೆ ಉಂಟಾಗುವುದಿಲ್ಲ ಎಂದು ಶ್ರುತಿಯ ಅರ್ಥ. ಇಲ್ಲಿ ಹೇಳಿರುವ ಸ್ವಪ್ನದ್ರಷ್ಟವು ಜೀವನೇ ಆಗಿದ್ದಾನೆಂದು ಪೂರ್ವಪಕ್ಷ. 'ಅಸಂಗೋ ಹ್ಯಯಂ ಪುರುಷ' ಎಂಬ ಮುಂದಿನ ವಾಕ್ಯದಲ್ಲಿ ಸ್ವಪ್ನಾದಿದ್ರಷ್ಟವಿಗೆ ದುಃಖಸ್ಪರ್ಶವು ಆಗದಿರುವುದು ಬ್ರಹ್ಮನ ಅಸಾಧಾರಣಧರ್ಮವಾದ ಅಸಂಗತ್ವವನ್ನು ಕಾರಣವನ್ನಾಗಿ ಹೇಳಿರುವುದರಿಂದ ಸ್ವಪ್ನಾದಿದ್ರಷ್ಟವು ಬ್ರಹ್ಮನೇ ಆಗುತ್ತಾನೆಂದು ಸಿದ್ಧಾಂತ.

ಪೂರ್ವಪಕ್ಷದ ಫಲ - ಒಂದು ವೇಳೆ ಜೀವಬ್ರಹ್ಮರಿಗಿರುವ ಭೇದವು ಮಿಥ್ಯಾಭೂತವಾದಲ್ಲಿ, ಬ್ರಹ್ಮನಲ್ಲಿರುವ ಅಸಂಗತ್ವವು ಜೀವನಲ್ಲೂ ಬರುತ್ತದೆ. ಜೀವನಲ್ಲಿ ಇರುವ ಸ್ವಪ್ನದ್ರಷ್ಟೃತ್ವದ ಪ್ರಸಿದ್ಧಿಗೆ ಬಾಧವನ್ನು ಹೇಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸ್ವಪ್ನದ್ರಷ್ಟೃತ್ವಾದಿಲಿಂಗಗಳು ಜೀವನದ್ದೇ ಆಗುತ್ತದೆ.

ಸಿದ್ಧಾಂತದ ಫಲ - ಒಂದುವೇಳೆ ಜೀವಬ್ರಹ್ಮರ ಭೇದವು ಸತ್ಯವಾದಲ್ಲಿ, ಅಸಂಗತ್ವವು ಬ್ರಹ್ಮನ ಧರ್ಮವೇ ಆಗುತ್ತದೆ. ಆವಾಗ ಲೋಕಪ್ರಸಿದ್ಧಿಯನ್ನು ಬಾಧಿಸಿ, ಬ್ರಹ್ಮನಲ್ಲೇ ಸ್ವಪ್ನದ್ರಷ್ಟೃತ್ವಲಿಂಗವು ಬರುತ್ತದೆ.

'ದ್ರವತಿ ಸ್ವಪ್ನಾಯೈವ ಸ ಯತ್ತತ್ರ ಕಿಂಚಿತ್ಪಶ್ಯತ್ಯನನ್ವಾಗತಸ್ತೇನ ಭವತ್ಯಸಂಗೋಹ್ಯಯಂ ಪುರುಷಃ' ಎಂಬ ಶ್ರುತಿಯು ಸ್ವಪ್ನಾವಸ್ಥೆಯಲ್ಲಿ ಯಾವಾತನು ಪದಾರ್ಥಗಳನ್ನೆಲ್ಲಾ ನೋಡುತ್ತಾನೋ, ಅವನು ಅಸಂಗನಾಗಿದ್ದಾನೆಂದು

ಹೇಳುತ್ತಿದೆ. ಇಂತಹ ವ್ಯಕ್ತಿ ಜೀವನೇ ಹೊರತು, ಪರಮಾತ್ಮನಲ್ಲ. ಪ್ರತಿಯೊಬ್ಬರೂ ಕೂಡ ಲೋಕದಲ್ಲಿ ಜೀವನೇ 'ಸ್ವಪ್ನದ್ರಷ್ಟ' ಎಂದು ವ್ಯವಹರಿಸುತ್ತಾರೆ. ಮತ್ತು ವೇದದಲ್ಲಿ ಎಲ್ಲಿಯೂ ಕೂಡ ಪರಮಾತ್ಮನು 'ಸ್ವಪ್ನದ್ರಷ್ಟ' ಎಂಬ ಪ್ರಸಿದ್ಧಿಯಿಲ್ಲ. ಹೀಗೆ ಲೋಕದಲ್ಲಾಗಲೀ, ವೇದದಲ್ಲಾಗಲೀ, ಪರಮಾತ್ಮನಲ್ಲಿ ಸ್ವಪ್ನದ್ರಷ್ಟತ್ವವು ಪ್ರಸಿದ್ಧವೇ ಆಗಿರುವುದಿಲ್ಲ. ಆದ್ದರಿಂದ ಲೋಕಪ್ರಸಿದ್ಧಿಯಿರುವ ಜೀವನನ್ನೇ ಸ್ವಪ್ನದ್ರಷ್ಟ ಎನ್ನಬೇಕು. ಹಿಂದಿನ ಅಧಿಕರಣದಲ್ಲಿ ಸಮನ್ವಯ ಮಾಡಿದ ಆಕಾಶಶಬ್ದದಲ್ಲಾದರೆ ಪರಮಾತ್ಮನಲ್ಲಿ ವೇದಪ್ರಸಿದ್ಧಿಯಾದರೂ ಇತ್ತು. ಪ್ರಕೃತ ಹಾಗೇ ವೇದಪ್ರಸಿದ್ಧಿಯೂ ಕೂಡ ಇರುವುದಿಲ್ಲ.

ಇನ್ನು ವಜ್ರ, ಆಕಾಶ ಮೊದಲಾದ ಶಬ್ದಗಳಲ್ಲಿ ಯೌಗಿಕಾರ್ಥವನ್ನು ಸ್ವೀಕರಿಸಿ, ಪರಮಾತ್ಮನಲ್ಲಿ ಸಮನ್ವಯ ಮಾಡಿದಂತೆ ಇಲ್ಲಿಯೂ ಕೂಡ 'ಪಶ್ಯತಿ' ಮೊದಲಾದ ಪದಗಳನ್ನು ವಿಭಾಗ ಮಾಡಿ, ಯೋಗದಿಂದ ಬ್ರಹ್ಮಪರತ್ವವನ್ನು ಸಮರ್ಥನೆ ಮಾಡಬೇಕು. ಆದರೆ ಇದನ್ನು ಸಿದ್ಧಾಂತಿಗಳೇ ಒಪ್ಪುವುದಿಲ್ಲ. ನಾಲ್ಕನೆಯ ಪಾದದಲ್ಲಿ ಪ್ರತಿಯೊಂದು ಪದಗಳಿಗೂ ಯೌಗಾರ್ಥವನ್ನು ಹೇಳುವ ಮೂಲಕ ಸಮನ್ವಯ ಮಾಡಬೇಕೆಂಬುದೇ ಸಿದ್ಧಾಂತಿಗಳ ಅಭಿಪ್ರಾಯ. ಇಲ್ಲಿ ಅದರ ಸಮನ್ವಯವು ಅನುಪಯುಕ್ತ. ಮತ್ತು ಸರ್ವಜ್ಞನಾದ ಬ್ರಹ್ಮನು ಎಲ್ಲವನ್ನೂ ನೋಡುತ್ತಾನಾದ್ದರಿಂದ, ಸ್ವಾಪ್ನಪದಾರ್ಥಗಳನ್ನೂ ಕೂಡ ನೋಡುತ್ತಾನೆಂದು ಹೇಳಬಹುದು. ಆದರೆ ಹಿಂದಿನ ಅಧಿಕರಣದಲ್ಲಿ ಅವ್ಯಾಕೃತಾಕಾಶಕ್ಕೆ ರೂಪಸಾಮಾನ್ಯವಿಲ್ಲದಿದ್ದರೂ ಪ್ರಾಕೃತರೂಪವಿಲ್ಲದ ಕಾರಣ, ಬ್ರಹ್ಮನನ್ನೇ ರೂಪರಹಿತನೆಂದು ಹೇಗೆ ಸ್ವೀಕರಿಸಿದರೋ, ಅದರಂತೆ ಇಲ್ಲಿಯೂ ಕೂಡ ಸಕಲ ವಸ್ತುಗಳನ್ನು ಪರಮಾತ್ಮನು ನೋಡುವವನಾದರೂ, ಸ್ವಪ್ನಾದಿದ್ರಷ್ಟೃತ್ವೇನ ಪ್ರಸಿದ್ಧನಾದ ಜೀವನನ್ನೇ ವಿವಕ್ಷಿಸುವುದು ಸೂಕ್ತ.

'ಅಸಂಗೋಹ್ಯಯಂ ಪುರುಷಃ' ಎಂಬುದಾಗಿ ಶ್ರುತಿಯು ಅಸಂಗತ್ವಧರ್ಮವನ್ನು ಹೇಳುತ್ತಿದೆ. ಈ ಅಸಂಗತ್ವವು ಬ್ರಹ್ಮನ ಧರ್ಮವಾದ್ದರಿಂದ, ಸ್ವಪ್ನಾದಿದ್ರಷ್ಟೃತ್ವವನ್ನು ಅವನಲ್ಲಿ ಜಿಜರ್ಥತ್ವವನ್ನು ಕಲ್ಪನೆ ಮಾಡುವ ಮೂಲಕ ಕೂಡಿಸಬೇಕು. ಅಂದರೆ ಜೀವರುಗಳಿಗೆ ಸ್ವಾಪ್ನಪದಾರ್ಥಗಳನ್ನು ತೋರಿಸುತ್ತಾನಾದ್ದರಿಂದ ಶ್ರುತಿಯು ಪರಮಾತ್ಮನನ್ನು ಸ್ವಪ್ನಾದಿದ್ರಷ್ಟವೆನ್ನುತ್ತಿದೆ ಎನ್ನಬೇಕು. ಆದರೆ ಇದೂ ಕೂಡ ಸರಿಯಲ್ಲ. ಅಸಂಗತ್ವವು ಪ್ರಾಪ್ತವಾದದ್ದೇ ಸ್ವಪ್ನಾದಿದ್ರಷ್ಟೃತ್ವದಿಂದ. ಸ್ವಾಪ್ನಪದಾರ್ಥಗಳನ್ನು ನೋಡುತ್ತಾನೆ ಎಂದು ಹೇಳಿದಾಗ, ಆಯಾ ಪದಾರ್ಥಗಳ ಸಂಪರ್ಕವನ್ನು ನೋಡುವ ವ್ಯಕ್ತಿಯಲ್ಲಿ ಹೇಳಿದಂತಾಗುತ್ತದೆ. ಆವಾಗ ಶ್ರುತಿಯು ಅಸಂಗತ್ವಧರ್ಮವನ್ನು ಹೇಳುವ ಮೂಲಕ ನೋಡುವ ವ್ಯಕ್ತಿಗೆ ಯಾವುದೇ ಸಂಗವಿರುವುದಿಲ್ಲವೆಂದು ನಿಷೇಧ ಮಾಡುತ್ತಿದೆ. ಹೀಗೆ ಅಸಂಗತ್ವಧರ್ಮಕ್ಕೆ ಸ್ವಪ್ನಾದಿದ್ರಷ್ಟೃತ್ವವೇ ಉಪಜೀವ್ಯವೆಂದಂತಾಯಿತು. ಉಪಜೀವ್ಯವಾದ ದ್ರಷ್ಟೃತ್ವವನ್ನು ಆದೇ ಅಸಂಗತ್ವಧರ್ಮವು ನಿಷೇಧಿಸಲು ಸಾಧ್ಯವಿಲ್ಲ. 'ಸನ್ನಿಪಾತಲಕ್ಷಣೋ ವಿಧಿಃ ಅನಿಮಿತ್ತಂ ತದ್ವಿಘಾತಸ್ಯ' ಎಂಬ ವ್ಯಾಕರಣ ನಿಯಮವು ಉಪಜೀವ್ಯಕ್ಕೆ ಉಪಜೀವಕವು ಮಾರಕವಾಗುವುದಿಲ್ಲ ಎಂದು ಸಿದ್ಧಾಂತ ಮಾಡಿದೆ. ಆದ್ದರಿಂದ ಉಪಜೀವಕವಾದ ಅಸಂಗತ್ವಧರ್ಮವು ತನಗೆ ಉಪಜೀವ್ಯವಾದ ಸ್ವಪ್ನಾದಿದ್ರಷ್ಟೃತ್ವವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆದ್ದರಿಂದ ಜೀವನಿಗೆ ಬ್ರಹ್ಮನಿಂದ ಅಭೇದವಿರುವ ಪ್ರಯುಕ್ತ ಬ್ರಹ್ಮನಲ್ಲಿರುವ ಅಸಂಗತ್ವಧರ್ಮವನ್ನು ಜೀವನಲ್ಲಿ ಶ್ರುತಿಯು ಗೌಣವಾಗಿ ಹೇಳುತ್ತಿದೆಯೆಂದೇ ಅರ್ಥೈಸಬೇಕು. ಹಾಗಾಗಿ ಸ್ವಪ್ನಾದಿದ್ರಷ್ಟೃತ್ವವು ಜೀವನಲ್ಲೇ ಬರುತ್ತದೆ.

ಪೂರ್ವಪಕ್ಷಿಯು ಅಭೇದವಾದಿಯಾಗಿರುವುದರಿಂದ, ಬ್ರಹ್ಮಾಭೇದಪ್ರಯುಕ್ತವಾಗಿ ಜೀವನಲ್ಲಿ ಬ್ರಹ್ಮನ ಧರ್ಮವನ್ನು ಕೂಡಿಸುತ್ತಾನೆ. ಆದರೆ ಸಿದ್ಧಾಂತಿಗಳು ಭೇದವಾದಿಗಳಾದ್ದರಿಂದ ಜೀವನ ಧರ್ಮವೆನಿಸಿದ ಸ್ವಪ್ನಾದಿದ್ರಷ್ಟೃತ್ವವನ್ನು ಜೀವಾಭೇದವಿರುವ ಪ್ರಯುಕ್ತ ಬ್ರಹ್ಮನಲ್ಲಿ ಕೂಡಿಸುತ್ತೇವೆಂದು ಹೇಳಲು ಸಾಧ್ಯವಿಲ್ಲ.

ಸ್ವಪ್ನಕಾಲದಲ್ಲಿ ಸೃಷ್ಟಿಯಾದ ವಸ್ತುಗಳನ್ನು ಸಂಪೂರ್ಣವಾಗಿ ನೋಡಲು ನಮ್ಮಿಂದ ಸಾಧ್ಯವಿಲ್ಲ. ಆದರೆ ಪರಮಾತ್ಮನು ಎಲ್ಲವನ್ನೂ ಕೂಡ ಸಂಪೂರ್ಣವಾಗಿ ನೋಡುತ್ತಾನೆ. ಅಷ್ಟೇ ಅಲ್ಲದೇ, ಇನ್ನೊಬ್ಬರ ಸ್ವಾಪ್ನಪದಾರ್ಥವನ್ನು ನೋಡಲು

ಸಾಧ್ಯವೇ ಇಲ್ಲ. ಆದರೆ ಪರಮಾತ್ಮನು ಸಕಲಜೀವರುಗಳ ಸ್ವಾಪ್ನಪದಾರ್ಥಗಳನ್ನು ಸಂಪೂರ್ಣವಾಗಿ ನೋಡುತ್ತಾನೆ. ಆದ್ದರಿಂದ ಸ್ವಪ್ನದ್ರಷ್ಟೃತ್ವವು ಪರಮಾತ್ಮನಲ್ಲೇ ಮುಖ್ಯವಾಗಿ ಬರುತ್ತದೆ.

ಈ ಅಧಿಕರಣದ ವಿಷಯವಾಕ್ಯವನ್ನು ನೋಡಿದಾಗಲೇ ಸ್ಪಷ್ಟವಾಗಿ ಪರಮಾತ್ಮನೇ ಸ್ವಪ್ನದ್ರಷ್ಟವೆಂದು ತಿಳಿಯುತ್ತದೆ. 'ಸವಾ ಏಷ ಏತಸ್ಮಿನ್ ಸಂಪ್ರಸಾದೇ ರತ್ವಾ ಚರಿತ್ವಾ ದೃಷ್ಟ್ವೈವ ಪುಣ್ಯಂ ಚ, ಪಾಪಂ ಚ ಪುನಃ ಪ್ರತಿನ್ಯಾಯಂ ಪ್ರತಿಯೋನ್ಯಾದ್ರವತಿ ಸ್ವಪ್ನಾಯೈವ ಸ ಯತ್ ತತ್ರ ಕಿಂಚಿತ್ ಪಶ್ಯತಿ ಅನನ್ವಾಗತಃ ತೇನ ಭವತಿ ಅಸಂಗೋ ಹ್ಯಯಂ ಪುರುಷಃ' ಎಂಬ ಬೃಹದಾರಣ್ಯಕದ ಈ ವಾಕ್ಯದ ಅಭಿಪ್ರಾಯ ಹೀಗಿದೆ - ಪರಮಾತ್ಮನು ಜೀವಾತ್ಮನ ನಿದ್ರಾವಸ್ಥೆಯಲ್ಲಿ ರಮಿಸುತ್ತಾ ಸಂಚರಿಸುತ್ತಾನೆ. ಜೀವನಿಗೆ ಉಂಟಾಗುವ ಪುಣ್ಯಪಾಪಗಳನ್ನು ಕೇವಲ ನೋಡುತ್ತಾ ಪುನಃ ಜೀವರುಗಳ ಪುಣ್ಯಪಾಪಗಳಿಗೆ ಅನುಗುಣವಾಗಿ ಆಯಾಯ ನಾಡಿಗಳನ್ನು ಅನುಸರಿಸಿ, ಸ್ವಪ್ನ ಸ್ಥಾನಕ್ಕೆ ಜೀವನ ಜೊತೆಗೆ ಹೋಗುತ್ತಾನೆ. ಆಮಾಗ ಪರಮಾತ್ಮನು ಸ್ವಪ್ನಾವಸ್ಥೆಯಲ್ಲಿ ಏನನ್ನು ನೋಡುತ್ತಾನೋ, ಆ ಜೀವನು ಸ್ವಾಪ್ನದರ್ಶನದಿಂದ ಪರಮಾತ್ಮನು ಯಾವುದೇ ದುಃಖಕ್ಕೆ ಒಳಗಾಗದೇ ಇರುತ್ತಾನೆ. ಏಕೆಂದರೆ ಪರಮಾತ್ಮನು ಪುಣ್ಯಪಾಪಗಳ ಸಂಪರ್ಕದಿಂದ ರಹಿತನಾಗಿದ್ದಾನೆ. ಹೀಗೆ ಪರಮಾತ್ಮನನ್ನು ಪ್ರತಿಪಾದನೆ ಮಾಡಲು ಹೊರಟಿರುವ ಈ ವಾಕ್ಯವು ಜೀವನ ಸ್ವಪ್ನದ್ರಷ್ಟೃತ್ವವನ್ನು ಸರ್ವಥಾ ಪ್ರತಿಪಾದನೆ ಮಾಡಲು ಸಾಧ್ಯವಿಲ್ಲ.

ಲೋಕದಲ್ಲಿ ಜೀವನೇ ಸ್ವಾಪ್ನಪದಾರ್ಥಗಳನ್ನು ನೋಡುತ್ತಾನೆಂದು ಪ್ರಸಿದ್ಧಿಯಿರಬಹುದು. ಆದರೆ ಬ್ರಹ್ಮನಲ್ಲಿ ಶ್ರುತಿಪ್ರಸಿದ್ಧಿಯಿದೆ. ಜೀವನಲ್ಲಿ ಲೋಕಪ್ರಸಿದ್ಧಿಯಿದ್ದರೂ ಕೂಡ ಸಂಪೂರ್ಣವಾದ ಸ್ವಾಪ್ನಪದಾರ್ಥಗಳನ್ನು ನೋಡುತ್ತಾನೆಂಬ ಪ್ರಸಿದ್ಧಿಯಿರುವುದಿಲ್ಲ. ಸಂಪೂರ್ಣವಾಗಿ ಸ್ವಾಪ್ನಪದಾರ್ಥಗಳನ್ನು ನೋಡುತ್ತಾನೆಂಬ ಲೋಕಪ್ರಸಿದ್ಧಿಯೂ ಕೂಡ ಪರಮಾತ್ಮನಲ್ಲೇ ಇರುತ್ತದೆ.

ಈ ಪ್ರಕರಣದಲ್ಲಿ ಜೀವೇಶ್ವರರಿಗೆ ಭೇದವನ್ನೇ ಹೇಳಲಾಗಿದೆ. ಸುಷುಪ್ತವಸ್ಥೆಯಲ್ಲಿ 'ಪ್ರಜ್ಞಾನಾತ್ಮನಾ ಸಂಪರಿಷ್ವಕ್ತಃ' ಎಂದು ಪ್ರಾಜ್ಞನಾಮಕ ಪರಮಾತ್ಮನು ಜೀವನನ್ನು ಆಲಿಂಗನ ಮಾಡಿಕೊಳ್ಳುತ್ತಾನೆಂದು ಹೇಳಲಾಗಿದೆ. ಜೀವಾತ್ಮನು ದೇಹವನ್ನು ಬಿಟ್ಟು ಹೊರಡುವ ಪ್ರಸಂಗದಲ್ಲಿಯೂ 'ಪ್ರಾಜ್ಞೇನಾತ್ಮನಾ ಅನ್ವಾರೂಢಃ' ಎಂದು ಪ್ರಾಜ್ಞನಾಮಕ ಪರಮಾತ್ಮನು ಜೀವನನ್ನು ಹೊತ್ತು ಹೊರಡುತ್ತಾನೆಂದು ಆಧಾರಾಧೇಯ ಭಾವವನ್ನು ಹೇಳಲಾಗಿದೆ. ಆಲಿಂಗನ ಮಾಡಬೇಕೆಂದರೆ ಮತ್ತು ಆಧಾರಾಧೇಯ ಭಾವವನ್ನು ಕೂಡಿಸಬೇಕೆಂದರೆ ಜೀವೇಶ್ವರಿಬ್ಬರಿಗೆ ಭೇದವನ್ನೇ ಒಪ್ಪಬೇಕು. ಇಂತಹ ಪರಮಾತ್ಮನು ಅಸಂಗನಾಗಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಸ್ವಪ್ನದ್ರಷ್ಟೃಗಳು ಸ್ವಪ್ನವನ್ನು ಕಾಣುವಂತಹ ಪರಮಾತ್ಮನು ಅಸಂಗನಾಗಿದ್ದಾನೆ ಎಂದರೆ ಸರ್ವಜ್ಞನಾದ್ದರಿಂದ ನಿರ್ಲಿಪ್ತನಾಗಿ ಜೀವನ ಸ್ವಾಪ್ನವಸ್ತುಗಳನ್ನು ನೋಡುತ್ತಾನೆಂದರ್ಥ. ಹೀಗೆ ಶ್ರುತಿಯಲ್ಲಿ ಭೇದವ್ಯಪದೇಶವಿರುವುದರಿಂದ 'ಸ ಯತ್ತತ್ರ ಕಿಂಚಿತ್ಪಶ್ಯತಿ' ಎಂಬ ಬೃಹದಾರಣ್ಯಕದಲ್ಲಿ ಹೇಳಲ್ಪಟ್ಟ ಸ್ವಪ್ನದರ್ಶಕನೂ ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಸುಷುಪ್ತ್ಯಧಿಕರಣದಲ್ಲಿ ಹಾಗೂ ಉತ್ಕ್ರಾಂತಿಪ್ರಕರಣದಲ್ಲಿ ಜೀವೇಶ್ವರರಿಗೆ ಭೇದವನ್ನೇ ಹೇಳಲಾಗಿದೆ ಎಂದು ಸಿದ್ಧಾಂತ.

ಇಲ್ಲಿಗೆ ಸುಷುಪ್ತ್ಯಧಿಕರಣದ ಸಾರವು ಮುಗಿಯಿತು

ಬ್ರಾಹ್ಮಣಾಧಿಕರಣ

ಬ್ರಾಹ್ಮಣಾಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದಲ್ಲಿ 'ಬ್ರಾಹ್ಮಣ' ಎಂಬ ನಾಮಾತ್ಮಕಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ವಾಸ್ತವಿಕವಾಗಿ 'ಬ್ರಾಹ್ಮಣ' ಶಬ್ದವು ಬ್ರಾಹ್ಮಣ ವರ್ಗದಲ್ಲಿ ಎಲ್ಲರೂ ವ್ಯವಹರಿಸುತ್ತಾರೆ. ಆದ್ದರಿಂದ ಪ್ರಥಮಪಾದದಲ್ಲಿ ಇದರ ಸಮನ್ವಯವು ಪ್ರಸಕ್ತವಾಗುತ್ತದೆಂದೆನಿಸುತ್ತದೆ. ಆದರೆ ಶ್ರುತಿಯು ಅಜಶಬ್ದದ ಜೊತೆಗೆ ಬ್ರಾಹ್ಮಣಶಬ್ದವನ್ನು ಪ್ರಯೋಗಿಸಿದೆ. ಹಾಗಾಗಿ ಚತುರ್ಮುಖಬ್ರಹ್ಮದೇವನನ್ನು ಬ್ರಾಹ್ಮಣಶಬ್ದವು ಪ್ರತಿಪಾದನೆ ಮಾಡುತ್ತಿದೆಯೆಂದು ಇಲ್ಲಿ ವಿವಕ್ಷಿಸುತ್ತಿದ್ದಾರೆ. ಹಾಗಾದರೆ ಅದೇ ಶ್ರುತಿಯಲ್ಲೇ ನಿತ್ಯಮಹಿಮತ್ವವೆಂಬ ವಿಷ್ಣುವಿನ ಲಿಂಗವಿರುವುದರಿಂದ ಬ್ರಾಹ್ಮಣಶಬ್ದವು ವಿಷ್ಣುವನ್ನು ಪ್ರತಿಪಾದನೆ ಮಾಡಬಹುದಲ್ಲವೇ? ಎಂಬ ಗೊಂದಲವುಂಟಾಗುತ್ತದೆ. ಹೀಗೆ ಒಂದೇ ಬ್ರಾಹ್ಮಣಶಬ್ದವು ಚತುರ್ಮುಖ ಬ್ರಹ್ಮನಲ್ಲಿ ಮತ್ತು ವಿಷ್ಣುವಿನಲ್ಲಿ ಪ್ರಯೋಗಸಾಧಾರಣ್ಯವನ್ನು ಹೊಂದಿರುವ ಕಾರಣ ಉಭಯಪ್ರಸಿದ್ಧವೆನಿಸುತ್ತದೆಂದು ವಿವಕ್ಷಿಸಿ, ಮೂರನೆಯ ಈ ಪಾದದಲ್ಲಿ ಸಮನ್ವಯ ಮಾಡಲು ಹೊರಟಿದ್ದಾರೆ.

ಹಿಂದಿನ ಅಧಿಕರಣದಲ್ಲಿ ಬ್ರಹ್ಮನನ್ನು ಅಸಂಗನೆಂದು ಸಮರ್ಥಿಸಲಾಯಿತು. ಆದರೆ 'ಅಸಂಗೋ ನಹಿ ಸಜ್ಯತೇ' ಎಂಬಲ್ಲಿ ಮತ್ತೊಬ್ಬ ಪುರುಷನು ಅಸಂಗನೆಂದು ಹೇಳಿದಂತಿದೆ. ಇವನು ಬೇರೆಯವನಾದಲ್ಲಿ, 'ಅಸಂಗೋ ಹ್ಯಯಂ ಪುರುಷಃ' ಎಂಬಲ್ಲಿ ಹೇಳಲ್ಪಟ್ಟ ಅಸಂಗನೂ ಕೂಡ ಬೇರೆಯವನೇ ಆಗುತ್ತಾನೆಂದು ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪಮಾಡಿದ ಅನಂತರವೇ ಈ ಅಧಿಕರಣವು ಹೊರಟಿದೆ.

ಜಿಜ್ಞಾಸಾಧಿಕರಣದಿಂದ ಪ್ರಾರಂಭ ಮಾಡಿ, ಹಿಂದಿನ ಸುಷುಪ್ತ್ಯಧಿಕರಣದ ತನಕ, ಪ್ರತಿಯೊಂದು ಅಧಿಕರಣಗಳಲ್ಲಿಯೂ ಪರಮಾತ್ಮನ ಮಹಿಮೆಯು ನಿತ್ಯನೂತನವಾಗಿದೆಯೆಂದು ಸಮರ್ಥಿಸಲಾಯಿತು. 'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂಬ ಶ್ರುತಿಯಲ್ಲಿ ಅಂತಹ ಪರಮಾತ್ಮನ ಮಹಿಮೆಯೇ ನಿತ್ಯವಾಗಿದೆಯೆಂದು ಹೇಳಲಾಗಿದೆ. ಒಂದು ವೇಳೆ 'ಏಷ ನಿತ್ಯೋ ಮಹಿಮಾ' ಎಂಬ ಶ್ರುತಿಯು ಬೇರೆಯವರ ಮಹಿಮೆಯನ್ನು ನಿತ್ಯವೆಂದು ಹೇಳಿದರೆ, ಹಿಂದಿನ ಎಲ್ಲಾ ಅಧಿಕರಣಗಳಲ್ಲಿ ಸಮರ್ಥಿಸಲ್ಪಟ್ಟ ವಿಷ್ಣುವಿನ ಮಹಿಮೆಗೆ ನಿತ್ಯತ್ವವು ಸಿದ್ಧವಾಗುವುದಿಲ್ಲ. ಅದಕ್ಕೋಸ್ಕರ ಈ ಅಧಿಕರಣವು 'ಏಷ ನಿತ್ಯೋ ಮಹಿಮಾ' ಎಂಬ ಶ್ರುತಿಯಿಂದಲೂ ಕೂಡ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಸಮರ್ಥಿಸಲು ಹೊರಟಿದೆ.

'ಏಷನಿತ್ಯೋಮಹಿಮಾಬ್ರಾಹ್ಮಣಸ್ಯ' ಎಂಬಶ್ರುತಿಯೇಈಅಧಿಕರಣದವಿಷಯವಾಕ್ಯ.ನಿತ್ಯಮಹಿಮೆಯುಳ್ಳವನೆಂದು ಬ್ರಾಹ್ಮಣನನ್ನುಶ್ರುತಿಯಲ್ಲಿಪ್ರಸಿದ್ಧನಾಗಿದ್ದಾನೆ.'ಸವಾ ಏಷಮಹಾನಜ ಆತ್ಮಾ' ಎಂಬಮುಂದಿನವಾಕ್ಯದಲ್ಲಿಚತುರ್ಮುಖನಲ್ಲಿ ಪ್ರಸಿದ್ಧವಾದ ಅಜಶಬ್ದವಿದೆ. ಇದರ ಬಲದಿಂದ ಚತುರ್ಮುಖನೇ ಬ್ರಾಹ್ಮಣನಾಗುತ್ತಾನೆಂದು ಪೂರ್ವಪಕ್ಷ.

ಬ್ರಹ್ಮನ ಅಸಾಧಾರಣಧರ್ಮಗಳೆನಿಸಿದ ಸರ್ವಾಧಿಪತ್ಯ ಮೊದಲಾದ ಧರ್ಮಗಳನ್ನು 'ಸರ್ವಸ್ಯಾಧಿಪತಿಃ ಸರ್ವಸ್ಯೇನಾಃ' ಇತ್ಯಾದಿ ಶ್ರುತಿಯು ಸಾರುತ್ತಿದೆ. ಈ ಲಿಂಗದ ಬಲದಿಂದ ಬ್ರಾಹ್ಮಣಶಬ್ದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗುತ್ತಾನೆಂಬುದು ಸಿದ್ಧಾಂತ.

'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂಬ ವಾಕ್ಯದಿಂದ ಪ್ರತಿಪಾದ್ಯನಾದವನು ವಿರಿಂಚನೇ ಆಗಿದ್ದಾನೆಂದು ಪೂರ್ವಪಕ್ಷ. ಚತುರ್ಮುಖಬ್ರಹ್ಮನಲ್ಲಿ ಪ್ರಸಿದ್ಧವಾದ ಅಜಶಬ್ದವನ್ನು ಶ್ರುತಿಯು ಹೇಳುತ್ತಿದೆ. ಅಜಶಬ್ದವು ಯೌಗಿಕವಾಗಿ ಮತ್ತು ರೂಢವಾಗಿ ಚತುರ್ಮುಖನಲ್ಲೇ ಪ್ರಸಿದ್ಧವಾಗಿದೆ. ಇಂತಹ ಅಜಶಬ್ದದ ಜೊತೆಗೆ ಪಠಿತವಾದ ಕಾರಣ. ಬ್ರಾಹ್ಮಣಶಬ್ದವೂ

ಕೂಡ ಚತುರ್ಮುಖನನ್ನೇ ಪ್ರತಿಪಾದನೆ ಮಾಡುತ್ತದೆ. ಮತ್ತು ಶ್ರುತಿಯಲ್ಲಿ 'ಮಹಾನ್' ಎಂಬ ಪದವಿದೆ. 'ಆತ್ಮಾ' ಎಂಬ ಪದವಿದೆ. 'ಮಹಾನ್' ಎಂಬ ಪದವು ಅಭಿಮಾನ್ಯಧಿಕರಣದ ನ್ಯಾಯದಂತೆ ಮಹತ್ತತ್ತ್ವಾಭಿಮಾನಿಯಾದ ಚತುರ್ಮುಖನನ್ನೇ ಮುಖ್ಯವನ್ನಾಗಿ ಪ್ರತಿಪಾದನೆ ಮಾಡುತ್ತದೆ. ಆತ್ಮಶಬ್ದವೂ ಕೂಡ 'ಆತ್ಮಾವಿರಿಂಚ ಸುಮನಾಃ' ಇತ್ಯಾದಿ ಕಾಠಕದ ಮಾತಿನಂತೆ ವಿರಿಂಚನನ್ನೇ ಪ್ರತಿಪಾದನೆ ಮಾಡುತ್ತದೆ.

ಹಾಗಾದರೆ ಅದೇ ಶ್ರುತಿಯಲ್ಲಿ 'ಸರ್ವಸ್ಯ ವಶೀ ಸರ್ವಸ್ಯೇಶಾನಃ ಸರ್ವಸ್ಯಾಧಿಪತಿ' ಇತ್ಯಾದಿಯಾಗಿ ಸರ್ವಾಧಿಪತಿತ್ವವೇ ಮೊದಲಾದ ವಿಷ್ಣುವಿನ ಲಿಂಗಗಳು ಕೇಳಿಸುತ್ತಿವೆಯಲ್ಲವೇ? ಎಂದು ಪ್ರಶ್ನಿಸಬಾರದು. ವಿರಿಂಚನಿಗೆ ವಿಷ್ಣುವಿನಿಂದ ಅಭೇದವನ್ನು ಒಪ್ಪಿ, ಈ ಎಲ್ಲಾ ಲಿಂಗಗಳನ್ನು ವಿರಿಂಚನಲ್ಲಿ ಸಾವಕಾಶ ಮಾಡಬೇಕು. ಇದರಿಂದ ಶ್ರುತಿಗೆ ಹಾಗೂ ಲಿಂಗಗಳಿಗೆ ನ್ಯಾಯವನ್ನು ಒದಗಿಸಿದಂತಾಗುತ್ತದೆ. ಎರಡರಲ್ಲಿ ಒಂದಕ್ಕೆ ಬಾಧವನ್ನು ಹೇಳುವ ಪ್ರಸಂಗ ಬರುವುದಿಲ್ಲ. 'ಸ್ಥಿತ್ಯಾದಯೇ ಹರಿವಿರಿಂಚಹರೇತಿ ಸಂಜ್ಞಾ' ಇತ್ಯಾದಿ ಸ್ಮೃತಿಗಳು 'ವಿಷ್ಣೋರ್ನೀರ್ವಾವ ಸತ್ತಸ್ಯ ರಜಸೋ ಬ್ರಹ್ಮೋ ಈಶಾನಃ' ಇತ್ಯಾದಿ ಶ್ರುತಿಗಳು ವಿರಿಂಚ, ಪರಮಾತ್ಮ, ರುದ್ರ ಈ ಮೂವರು ಒಬ್ಬನೇ ವಿಷ್ಣುವಾಗಿದ್ದಾನೆಂದು ಅಭೇದವನ್ನು ಹೇಳುತ್ತಿವೆ. ಆದ್ದರಿಂದ ಶ್ರುತಿಲಿಂಗಗಳೆಲ್ಲವೂ ಚತುರ್ಮುಖನಲ್ಲೇ ಬರುತ್ತದೆಂದು ಬ್ರಾಹ್ಮಣಶಬ್ದಪ್ರತಿಪಾದ್ಯನು ವಿರಿಂಚನೇ ಆಗುತ್ತಾನೆ ಹೊರತು, ವಿಷ್ಣುವಲ್ಲವೆಂಬ ಪೂರ್ವಪಕ್ಷವು ಸ್ಥಾಪಿತವಾಯಿತು.

ಚತುರ್ಮುಖನು ಬ್ರಾಹ್ಮಣಶಬ್ದವಾಚ್ಯನಾಗಲು ಸಾಧ್ಯವಿಲ್ಲ. ಹೊರತು, ಮಹಾವಿಷ್ಣುವೇ ಬ್ರಾಹ್ಮಣಶಬ್ದವಾಚ್ಯ-ನಾಗುತ್ತಾನೆ. 'ಉತಾಮೃತತ್ವಸ್ಯೇಶಾನಃ' ಇತ್ಯಾದಿ ಶ್ರುತಿಗಳು ಸರ್ವಾಧಿಪತಿತ್ವ ಧರ್ಮವು ವಿಷ್ಣುವಿನಲ್ಲಿ ಮಾತ್ರವಿದೆಯೆಂದು ಘೋಷಣೆ ಮಾಡುತ್ತಿವೆ. ಅದೇ ಸರ್ವಾಧಿಪತಿತ್ವಧರ್ಮವನ್ನು ಬ್ರಾಹ್ಮಣನಲ್ಲಿ ಶ್ರುತಿಹೇಳಿದ್ದರಿಂದ, ಬ್ರಾಹ್ಮಣನೂ ಕೂಡ ಮಹಾವಿಷ್ಣುವೇ ಆಗುತ್ತಾನೆ. ಹಾಗಾದರೆ ಅಜಶ್ರುತಿಯಿಂದ ವಿರೋಧಪರಿಹರಿಸಲು ಮಹಾವಿಷ್ಣುವಿಗೂ ಚತುರ್ಮುಖನಿಗೂ ಅಭೇದವನ್ನು ಹೇಳಬಹುದಲ್ಲವೇ? ಎಂದು ಆಕ್ಷೇಪ ಮಾಡಬಾರದು. ಒಂದು ವೇಳೆ ಪರಸ್ಪರ ವಿರೋಧ ಬಂದಾಗ ಅದರ ಪರಿಹಾರಕ್ಕೆ ಅಭೇದವನ್ನು ಆಶ್ರಯಿಸುವುದಾದರೆ ವ್ರೀಹಿಯಿಂದ ಹೋಮಿಸಬೇಕೋ, ಯವದಿಂದ ಹೋಮಿಸಬೇಕೋ? ಎಂಬ ಗೊಂದಲವುಂಟಾದಾಗ ವಿರುದ್ಧಧರ್ಮಗಳಿಗೆ ಆಶ್ರಯವಾದ ವ್ರೀಹಿ ಹಾಗೂ ಯವಗಳಿಗೂ ಅಭೇದವನ್ನೇ ಒಪ್ಪಬೇಕಾಗುತ್ತದೆ. ಅದರಂತೆ ಸೋಮಕ್ರಯಣವನ್ನು ಧೇನುವನ್ನು ಕೊಟ್ಟು ಮಾಡಬೇಕೋ, ಅಥವಾ ಬಟ್ಟೆಯನ್ನು ಕೊಟ್ಟು ಮಾಡಬೇಕೋ? ಎಂಬ ಸಂಶಯವು ಉಂಟಾದಾಗ. ಧೇನು ಹಾಗೂ ಬಟ್ಟೆ ಎರಡಕ್ಕೂ ಅಭೇದವನ್ನು ಒಪ್ಪಬೇಕಾಗುತ್ತದೆ. ಹೀಗೆ ಒಪ್ಪುತ್ತಾ ಹೋದರೆ, ಲೋಕದಲ್ಲಿ ಹಾಗೂ ವೇದದಲ್ಲಿ ವಿಕಲ್ಪ ಎಂಬ ವಾರ್ತೆಯೇ ಸುಳ್ಳಾಗುತ್ತದೆ. ಆದ್ದರಿಂದ ಯಾವ ಎರಡು ಪದಾರ್ಥಗಳು ವಿರುದ್ಧಧರ್ಮಗಳಿಗೆ ಆಶ್ರಯವಾಗಿದೆಯೋ, ಅವುಗಳಿಗೆ ಅಭೇದವನ್ನು ಸರ್ವಥಾ ಒಪ್ಪಬಾರದು.

ಮತ್ತು ಸ್ಪಷ್ಟವಾಗಿ ಯಾವ ಶ್ರುತಿಯಿಂದ ಚತುರ್ಮುಖನು ಸಿದ್ಧನಾಗಿದ್ದಾನೋ, ಅಂತಹ 'ತತ ಏತೇ ವ್ಯಜಾಯಂತ ವಿಶ್ವೋ ಹಿರಣಗರ್ಭ' ಎಂಬ ಶ್ರುತಿಯೇ ವಿಷ್ಣುವಿನಿಂದ ಚತುರ್ಮುಖನಿಗೆ ಭೇದವನ್ನು ಸ್ಪಷ್ಟವಾಗಿ ಹೇಳುತ್ತಿದೆ. ಕೆಲವೊಮ್ಮೆ ವೇದದಲ್ಲಿ ಬ್ರಹ್ಮ, ರುದ್ರ ಇವರನ್ನು ವಿಷ್ಣುವೆಂಬ ವ್ಯವಹಾರ ಕಂಡರೆ, ಅಂತರ್ಯಾಮಿ ರೂಪದಿಂದ ಅವುಗಳನ್ನು ಕೂಡಿಸಬೇಕು. ಏಕೆಂದರೆ ಚತುರ್ಮುಖಬ್ರಹ್ಮದೇವರೇ ಸ್ಪಷ್ಟವಾಗಿ ರುದ್ರದೇವರ ಬಳಿ 'ಯೋಽಸ್ಮಿ ಯೇ ಸ್ಥ ಯಃ' ಎಂದು ತಮಗೂ, ಪರಮಾತ್ಮನಿಗೂ ಭೇದವಿದೆಯೆಂದು ಹೇಳಿಕೊಂಡಿದ್ದಾರೆ. ತಮಗಿಂತಲೂ ಪರಮಾತ್ಮನು ಅತ್ಯಂತ ಉತ್ಕೃಷ್ಟನಾಗಿದ್ದಾನೆಂದು ಸಾರಿದ್ದಾರೆ. ಹೀಗಿರುವಾಗ ಅಭೇದವನ್ನು ಒಪ್ಪಿ, ಸರ್ವಾಧಿಪತಿತ್ವ ಮೊದಲಾದ ವಿಷ್ಣುವಿನ ಲಿಂಗಗಳನ್ನು ಚತುರ್ಮುಖಬ್ರಹ್ಮದೇವರಲ್ಲಿ ಕೂಡಿಸಲು ಸಾಧ್ಯವಿಲ್ಲ. ವಿಷ್ಣುವಿನಲ್ಲಿರುವ ಸರ್ವಾಧಿಪತಿತ್ವ ಮೊದಲಾದ ಧರ್ಮಗಳು ಬೇರೆ ಎಲ್ಲಿಯೂ ಕೂಡ ಬರುವುದಿಲ್ಲವಾದ್ದರಿಂದ ನಿರವಕಾಶವಾಗಿವೆ. ಇಂತಹ ನಿರವಕಾಶಲಿಂಗಗಳಿಂದ ಮಹಾವಿಷ್ಣುವೇ ಬ್ರಾಹ್ಮಣಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

ಹಿಂದಿನ ಅಧಿಕರಣದಲ್ಲಿಯೂ ಜೀವಬ್ರಹ್ಮರಿಗೆ ಅಭೇದವನ್ನು ನಿರಾಕರಣೆ ಮಾಡಿ, ಭೇದವನ್ನು ಸಮರ್ಥಿಸಿದ್ದಾಗಿದೆ. ಪುನಃ ಈ ಅಧಿಕರಣದಲ್ಲಿಯೂ ವಿರಿಂಚನು ಬ್ರಹ್ಮನಿಂದ ಭಿನ್ನನಾಗಿದ್ದಾನೆಂದು ಸಮರ್ಥಿಸುತ್ತಿದ್ದಾರೆ. ಹಾಗಾಗಿ ಹೇಳಿದ ಭೇದವನ್ನೇ ಪುನಃ ಪುನಃ ಸಮರ್ಥನೆ ಮಾಡಿದರೆ, ಪುನರುಕ್ತಿ ದೋಷ ಬರುತ್ತದಲ್ಲವೇ? ಎಂಬ ಆಶಂಕೆಗೆ ಗ್ರಂಥಕಾರರು ಕೂಲಂಕಷವಾಗಿ ವಿಮರ್ಶೆ ಮಾಡಿದ್ದಾರೆ.

ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಭೇದಪ್ರತಿಪಾದಕವಾದ ಸೂತ್ರಗಳು ಅನೇಕ ಬಾರಿ ಕೇಳಿಸುತ್ತಿವೆ. ಆದರೆ ಒಂದೇ ವಿಷಯದ ಭೇದವನ್ನು ಎಲ್ಲಾ ಅಧಿಕರಣಗಳಲ್ಲಿ ಸಮರ್ಥನೆ ಮಾಡುತ್ತಿಲ್ಲ. ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟ ಭೇದವನ್ನು ಭೇದಪ್ರತಿಪಾದಕ ಸೂತ್ರಗಳು ನಿರಾಕರಣೆ ಮಾಡುತ್ತಿವೆ. ಉದಾ - ಆನಂದಮಯಾಧಿಕರಣದಲ್ಲಿ 'ಭೇದವ್ಯಪದೇಶಾಚ್ಚ' ಎಂಬ ಸೂತ್ರವು ಜೀವಬ್ರಹ್ಮರ ಭೇದವನ್ನು ಸಮರ್ಥನೆ ಮಾಡುತ್ತಿದೆಯೆಂದು ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ ವಿಚಾರ ಮಾಡಿದಾಗ, ಜೀವನಿಗೂ ವಿಷ್ಣುವಿಗೂ ಭೇದವನ್ನು ಒಪ್ಪಿ, ಆನಂದಮಯನ ಜೊತೆ ಅಭೇದವನ್ನು ಮಾತ್ರ ಪೂರ್ವಪಕ್ಷಿಯು ಆಕ್ಷೇಪ ಮಾಡಿದ್ದಾನೆ. ಅದನ್ನು ಸೂತ್ರವು ನಿರಾಕರಣೆ ಮಾಡಿದೆ. ಅದರಂತೆ 'ಶಾರೀರಾಶ್ಚೋಭಯೇऽಪಿಹಿಭೇದೇನೈನಮಧೀಯತೇ' ಎಂಬ ಅಂತರ್ಯಾಮಿ ಗುಣಸೂತ್ರದಲ್ಲಿ, ಅಂತರ್ಯಾಮಿಗೂ ಜೀವನಿಗೂ ಅಭೇದವನ್ನು ಆಕ್ಷೇಪಿಸಿ, ಭೇದವನ್ನು ಸ್ಥಾಪನೆ ಮಾಡಲಾಗಿದೆ ಹೊರತು, ಸಾಮಾನ್ಯವಾಗಿ ಜೀವಬ್ರಹ್ಮರ ಭೇದವನ್ನು ಸಮರ್ಥನೆ ಮಾಡಿಯೇ ಇಲ್ಲ.

ಮತ್ತು ದ್ಯುಭ್ವಾದ್ಯಧಿಕರಣದ 'ಭೇದವ್ಯಪದೇಶಾಚ್ಚನ್ಯಃ' ಎಂಬ ಸೂತ್ರದಲ್ಲಿ ಆ ಪ್ರಕರಣದಲ್ಲಿ ಮಾತ್ರ ಜೀವಬ್ರಹ್ಮರ ಅಭೇದವು ಪ್ರಸಕ್ತವಾಗಿದೆ. ಅದೇ ಪ್ರಕರಣದಲ್ಲಿರುವ ಭೇದಸಾಧಕಲಿಂಗಗಳಿಂದ ಅಭೇದವನ್ನು ನಿರಾಕರಣೆ ಮಾಡಿ, ಭೇದವನ್ನು ಸ್ಥಾಪನೆ ಮಾಡಿದ್ದಾರೆ ಹೊರತು, ಶ್ರುತಿಯಲ್ಲಿ ಎಲ್ಲಾ ವಾಕ್ಯಗಳಲ್ಲಿರುವ ಅಭೇದದ ನಿರಾಕರಣೆಯನ್ನಾಗಲೀ, ಭೇದದ ಸ್ಥಾಪನೆಯನ್ನಾಗಲೀ ಮಾಡಿರುವುದಿಲ್ಲ. ಹಿಂದಿನ ಅಧಿಕರಣದಲ್ಲಿ ಜೀವನಿಗೆ ಈಶನಿಂದ ಅಭೇದವನ್ನು ಸ್ವೀಕರಿಸಿ, ಭೇದವನ್ನು ಸ್ಥಾಪನೆ ಮಾಡಿದ್ದು, ಕೇವಲ ಆ ವಿಷಯವಾಕ್ಯಕ್ಕೆ ಸಂಬಂಧಪಟ್ಟಂತೆ ಮಾತ್ರ. ಈ ಅಧಿಕರಣದಲ್ಲಿ ವಿರಿಂಚನಿಗೆ ಬ್ರಹ್ಮನಿಂದ ಭೇದವನ್ನು ಸ್ಥಾಪನೆ ಮಾಡುತ್ತಿರುವುದೂ ಕೂಡ ವಾಕ್ಯವಿಶೇಷಕ್ಕೆ ಸಂಬಂಧಪಟ್ಟಂತೆ ಮಾತ್ರ. ಆದ್ದರಿಂದ ಭೇದಪ್ರತಿಪಾದಕವಾದ ಯಾವುದೇ ಸೂತ್ರಗಳನ್ನು ತೆಗೆದುಕೊಂಡರೂ ವಾಕ್ಯವಿಶೇಷದಲ್ಲಿ ಮಾತ್ರ ಭೇದಸ್ಥಾಪನೆಯನ್ನು ಮಾಡಿರುತ್ತಾರೆ ಹೊರತು ಎಲ್ಲಾ ಶ್ರುತಿವಾಕ್ಯಗಳಲ್ಲಿ ಭೇದವನ್ನು ಸ್ಥಾಪನೆ ಮಾಡಿರುವುದಿಲ್ಲ. 'ಪೃಥಗುಪದೇಶಾತ್' ಎಂಬ ಅಧಿಕರಣದಲ್ಲಿ ಮಾತ್ರ ಸಕಲ ಶ್ರುತಿವಾಕ್ಯಗಳಲ್ಲಿರುವ ಅಭೇದಪರವಾದ ವಾಕ್ಯಗಳನ್ನು ವಿಮರ್ಶೆ ಮಾಡಿ, ಭೇದವನ್ನು ಸ್ಥಾಪನೆ ಮಾಡಿದ್ದಾರೆ. ಆದ್ದರಿಂದ ವಾಕ್ಯವಿಶೇಷವನ್ನು ತೆಗೆದುಕೊಳ್ಳದೇ ಸಾಮಾನ್ಯವಾಗಿ ಜೀವಬ್ರಹ್ಮರ ಅಭೇದವನ್ನು ಆಕ್ಷೇಪಿಸಿ ಭೇದವನ್ನು ಸ್ಥಾಪನೆಮಾಡಿದ್ದು ಪೃಥಗುಪದೇಶಾಧಿಕರಣದಲ್ಲಿ ಮಾತ್ರ. ಭೇದಸ್ಥಾಪನೆಯ ಪೂರ್ಣತೆಯು ಪೃಥಗುಪದೇಶಾಧಿಕರಣದಲ್ಲಿ ಪರ್ಯವಸಾನವಾಗುತ್ತದೆ. ಆದ್ದರಿಂದ ಭೇದಸಾಧಕವಾದ ಸೂತ್ರಗಳಿಗೆ ಪುನರುಕ್ತಿ ದೋಷವನ್ನು ಹೇಳಲು ಸಾಧ್ಯವಿಲ್ಲ.

ಸೂತ್ರದಲ್ಲಿ 'ಅಧಿಪತಿತ್ವ' ಎಂಬ ವಿಷ್ಣುವಿನ ನಿರವಕಾಶಲಿಂಗವನ್ನು ಹೇಳಿದ್ದರಿಂದ ವಿರಿಂಚನನ್ನು ವಿಷ್ಣುವೆಂದು ಹೇಳಲು ಸಾಧ್ಯವಿಲ್ಲ. ಇಬ್ಬರಿಗೂ ಅಭೇದವನ್ನು ಒಪ್ಪಿ, ಹೊರಟ ಪೂರ್ವಪಕ್ಷವು ನಿರಾಕೃತವಾಗುತ್ತದೆ. 'ಸರ್ವಾಧಿಪತಿತ್ವ,' ಎಂಬ ವಿಷ್ಣುವಿನ ಧರ್ಮವನ್ನು ವಿರಿಂಚನಲ್ಲಿ ಅಭೇದವನ್ನು ಹೇಳಿದಾಗ ಮಾತ್ರ ಕೂಡಿಸಬಹುದು. ಆದರೆ ವಿಷ್ಣುವಿನಿಂದ ವಿರಿಂಚನಿಗೆ ಅಭೇದ ಹೇಳಬೇಕೆಂದರೆ 'ಸರ್ವಾಧಿಪತಿತ್ವ' ಎಂಬುದು ಇಬ್ಬರಿಗೂ ಭೇದವನ್ನು ತಂದುಕೊಡುವುದಿಲ್ಲವೆಂಬುದು ಮೊದಲು ಸಿದ್ಧವಾಗಬೇಕು. ಹಾಗಾಗಿ ಅಭೇದ ಸಿದ್ಧವಾದರೆ ಮಾತ್ರ

ಸರ್ವಾಧಿಪತಿತ್ವಾದಿಗಳಿಗೆ ಅಭೇದ ತಂದುಕೊಡುವಿಕೆಯು ಸಿದ್ಧವಾಗುವುದಿಲ್ಲ. ಅಭೇದಕ ತಂದುಕೊಡುವಿಕೆಯು ಸಿದ್ಧವಾಗದಿದ್ದಾಗ ಮಾತ್ರ ಪರಸ್ಪರ ವಿರಿಂಚನಿಗೆ ಬ್ರಹ್ಮನಿಂದ ಅಭೇದವು ಸಿದ್ಧವಾಗುತ್ತದೆ. ಹೀಗೆ ಅನ್ಯೋನ್ಯಾಶ್ರಯದೋಷ ಬರುವ ಕಾರಣ, ಅನಿವಾರ್ಯವಾಗಿ ಸರ್ವಾಧಿಪತಿತ್ವವನ್ನು ವಿಷ್ಣುವಿನಲ್ಲಿ ಮಾತ್ರ ಹೇಳಬೇಕು. 'ಯಂ ಕಾಮಯೇ ತಂ ತಮುಗ್ರಂ ಕೃಣೋಮಿ' ಇತ್ಯಾದಿ ಶ್ರುತಿಗಳಂತೂ ಸ್ಪಷ್ಟವಾಗಿ ವಿರಿಂಚಾದಿಗಳಿಗೆ ಸರ್ವಾಧಿಪತಿತ್ವವಿಲ್ಲವೆಂದು ನಿಷೇಧ ಮಾಡುತ್ತಿವೆ.

ಸೂತ್ರದಲ್ಲಿ 'ಸರ್ವಸ್ಯ ವಶೀ' ಎಂಬ ಶ್ರುತಿಗೆ ಅನುಗುಣವಾಗಿ 'ವಶ್ಯಾದಿಶಬ್ದೇಭ್ಯಃ' ಎಂದು ಹೇಳಬೇಕಿತ್ತು. ಆದರೆ ಭಾಷ್ಯದಲ್ಲಿ ಉದಾಹರಿಸಿದ 'ಸರ್ವಸ್ಯಾಧಿಪತಿಃ ಸರ್ವಸ್ಯೇಶಾನಃ' ಎಂಬ ವಾಕ್ಯದಲ್ಲಿ ಪತಿಶಬ್ದವಿರುವುದರಿಂದ, ಅದಕ್ಕನುಗುಣವಾಗಿ ಸೂತ್ರಕಾರರು 'ಪತ್ಯಾದಿಶಬ್ದೇಭ್ಯಃ' ಎಂದೇ ಹೇಳಿದ್ದಾರೆ. 'ಅಧಿಪತ್ಯಾದಿಶಬ್ದೇಭ್ಯಃ' ಎಂದೂ ಕೂಡ ಹೇಳಬಹುದಿತ್ತು. ಆದರೆ ಉಪಸರ್ಗವು ಯಾವುದೇ ಅರ್ಥಗಳಿಗೆ ವಾಚಕವಲ್ಲ. ಕೇವಲ ದ್ಯೋತಕವಾಗಿರುವ ಕಾರಣ ಉಪಸರ್ಗವನ್ನು ಬಿಟ್ಟು ಕೇವಲ ಪತಿಶಬ್ದವನ್ನಷ್ಟೇ ಸೂತ್ರಕಾರರು ಉಲ್ಲೇಖ ಮಾಡಿದ್ದಾರೆ.

ಇಲ್ಲಿಗೆ ಬ್ರಾಹ್ಮಣಾಧಿಕರಣದ ಸಾರವು ಮುಗಿಯಿತು

ಚತುರ್ಥಪಾದದ ಸಾರಾಂಶ

ಅನ್ಯತ್ರೈವಪ್ರಸಿದ್ಧ ಶಬ್ದ ಸಮನ್ವಯವನ್ನು ಮಾಡಲು ಹೊರಟಿರುವ ನಾಕನೆಯ ಪಾದವು ಪ್ರಾರಂಭವಾಗುತ್ತಿದೆ. ಮೊದಲಿನ ಎರಡು ಪಾದಗಳಲ್ಲಿ ಅನ್ಯತ್ರಪ್ರಸಿದ್ಧವಾದ ನಾಮಲಿಂಗಾತ್ಮಕಶಬ್ದಗಳ ಸಮನ್ವಯವನ್ನು ಮಾಡಲಾಯಿತು. ಮೂರನೆಯ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ನಾಮಲಿಂಗಾತ್ಮಕಶಬ್ದಗಳ ಸಮನ್ವಯವನ್ನು ಮಾಡಿದ್ದಾಯಿತು. ಪ್ರಕೃತ ಈ ಅಧಿಕರಣದಲ್ಲಿ ಅನ್ಯತ್ರೈವಪ್ರಸಿದ್ಧವಾದ ಅವ್ಯಕ್ತಾದಿ ಶಬ್ದಗಳ ಸಮನ್ವಯವನ್ನು ಮಾಡುತ್ತಿದ್ದಾರೆ.

ವಾಸ್ತವಿಕವಾಗಿ ಶಬ್ದಗಳಲ್ಲಿ 'ಅನ್ಯತ್ರಪ್ರಸಿದ್ಧ' ಹಾಗೂ 'ಉಭಯತ್ರಪ್ರಸಿದ್ಧ' ಮತ್ತು 'ತತ್ರಪ್ರಸಿದ್ಧ' ಎಂಬ ಮೂರು ಬಗೆಯ ವಿಭಾಗಗಳನ್ನಷ್ಟೇ ಹೇಳಲು ಸಾಧ್ಯ. 'ತತ್ರಪ್ರಸಿದ್ಧ' ಎಂದರೆ ವಿಷ್ಣು ನಾರಾಯಣ ಮೊದಲಾದ ಶಬ್ದಗಳು ಇವುಗಳ ಸಮನ್ವಯ ಮಾಡುವ ಅವಶ್ಯಕತೆಯಿರುವುದಿಲ್ಲ. ಅನ್ಯತ್ರಪ್ರಸಿದ್ಧವಾದ ಶಬ್ದಗಳೆಂದರೆ ಇಂದ್ರಾದಿ ಶಬ್ದಗಳು ಇವುಗಳನ್ನು ಮೊದಲಿನೆರಡು ಪಾದದಲ್ಲಿ ಸಮನ್ವಯ ಮಾಡಿದ್ದಾಗಿದೆ. ಉಭಯತ್ರಪ್ರಸಿದ್ಧವೆಂದರೆ ವಿಷ್ಣು ಹಾಗೂ ಬೇರೆ ಪದಾರ್ಥಗಳಲ್ಲಿ ಪ್ರಸಿದ್ಧವಾಗಿರುವ ಶಬ್ದಗಳು ಇದನ್ನು ಮೂರನೆಯ ಪಾದದಲ್ಲಿ ಸಮನ್ವಯ ಮಾಡಲಾಗಿದೆ. ಈ ಮೂರು ಬಗೆಯ ಶಬ್ದಗಳನ್ನು ಬಿಟ್ಟು, ಪುನಃ ಅನ್ಯತ್ರಪ್ರಸಿದ್ಧ ಎಂಬ ನಾಲ್ಕನೆಯ ಪ್ರಕಾರವು ಇರುವುದಿಲ್ಲ. ಇದು ಅನ್ಯತ್ರಪ್ರಸಿದ್ಧದಲ್ಲೇ ಗತಾರ್ಥವಾಗುತ್ತದೆ. ಏಕೆಂದರೆ ಅನ್ಯತ್ರಪ್ರಸಿದ್ಧ ಶಬ್ದವೆಂದರೂ ಅನ್ಯತ್ರೈವಪ್ರಸಿದ್ಧ ಶಬ್ದವೆಂದರೂ ಒಂದೇ ಅರ್ಥ. ಒಂದು ವೇಳೆ ಅನ್ಯತ್ರಪ್ರಸಿದ್ಧ ಎಂಬುದಕ್ಕೆ ಜಗತ್ತಿನಲ್ಲೂ ಪ್ರಸಿದ್ಧವಾಗಿದೆ, ವಿಷ್ಣುವಿನಲ್ಲೂ ಪ್ರಸಿದ್ಧವಾಗಿದೆ ಎಂಬರ್ಥವನ್ನೇನಾದರೂ ಹೇಳುವುದಾದರೆ ಆವಾಗ ಅದು ಅನ್ಯತ್ರಾಪಿಪ್ರಸಿದ್ಧ ಎಂದೇ ಅರ್ಥವನ್ನು ನೀಡುತ್ತದೆ. ಆವಾಗ ಉಭಯತ್ರಪ್ರಸಿದ್ಧದಲ್ಲೇ ಸೇರಿಸಿದಂತಾಗುತ್ತದೆ. ಹೀಗೆ ಅನ್ಯತ್ರೈವಪ್ರಸಿದ್ಧವೆಂಬ ಪ್ರತ್ಯೇಕ ವಿಭಾಗವೇ ಇಲ್ಲದ ಕಾರಣ, ಈ ಪಾದವನ್ನು ಸೂತ್ರಕಾರರು ಏಕೆ ಪ್ರತ್ಯೇಕವಾಗಿ ರಚನೆ ಮಾಡುತ್ತಿದ್ದಾರೆ? ಎಂಬ ಪ್ರಬಲವಾದ ಪ್ರಶ್ನೆ ಬರುತ್ತದೆ.

ಈ ಪ್ರಶ್ನೆಗೆ ಟೀಕೆಯಲ್ಲಿ ಎರಡು ರೀತಿಯ ಸಮಾಧಾನಗಳನ್ನು ನೀಡಿರುತ್ತಾರೆ. ಅಂದರೆ ಅನ್ಯತ್ರಪ್ರಸಿದ್ಧವೆಂದರೂ, ಅನ್ಯತ್ರೈವಪ್ರಸಿದ್ಧಶಬ್ದವೆಂದರೂ ಒಂದೇ ಅರ್ಥ ಎಂಬುದು ಸರಿಯಾದ ವಿಚಾರವೇ ಆಗಿದೆ. ಆದರೆ ಪ್ರಥಮ ಪಾದದಲ್ಲಿ

ಯಾವ ಇಂದ್ರಾದಿ ಶಬ್ದಗಳನ್ನು ಸಮನ್ವಯ ಮಾಡಲಾಯಿತೋ, ಅವುಗಳನ್ನು ಅನ್ಯತ್ರಪ್ರಸಿದ್ಧವೆನ್ನಲು ಶ್ರುತಿಲಿಂಗಾದಿಗಳು ಪ್ರಮಾಣವಾಗಿರಲಿಲ್ಲ. ಆದರೆ ಈ ಪಾದದಲ್ಲಿ ಸಮನ್ವಯ ಮಾಡುತ್ತಿರುವ ಅವ್ಯಕ್ತಾದಿ ಶಬ್ದಗಳು, ಶ್ರುತಿಲಿಂಗಾದಿಗಳ ಬಲದಿಂದಲೇ ಅನ್ಯತ್ರಪ್ರಸಿದ್ಧವೆಂದು ಕಾಣಿಸುತ್ತಿವೆ. ಈ ದೃಷ್ಟಿಯಿಂದ 'ಅನ್ಯತ್ರೈವಪ್ರಸಿದ್ಧಿ' ಎಂಬುದನ್ನು ಪ್ರತ್ಯೇಕವಾಗಿ ಪರಿಗಣಿಸಲಾಗಿದೆ. ಅಥವಾ ಇಂದ್ರಾದಿ ಶಬ್ದಗಳು ಅನ್ಯತ್ರಪ್ರಸಿದ್ಧವೆನ್ನಲು ಶ್ರುತಿಲಿಂಗಾದಿ ಪ್ರಮಾಣಗಳಿರಬಹುದು. ಆದರೆ ಈ ಪಾದದಲ್ಲಿ ಸಮನ್ವಯ ಮಾಡುತ್ತಿರುವ ಅವ್ಯಕ್ತಾದಿ ಶಬ್ದಗಳು ಅನ್ಯತ್ರಪ್ರಸಿದ್ಧವೆನ್ನಲು ಬಲಿಷ್ಠವಾದ ಶ್ರುತಿಲಿಂಗಾದಿಗಳು ಪ್ರಮಾಣವಾಗಿವೆ. ಈ ದೃಷ್ಟಿಯಿಂದಲೂ ಅನ್ಯತ್ರಪ್ರಸಿದ್ಧವೆಂಬ ವಿಭಾಗವನ್ನು ಮಾಡಲಾಗಿದೆ. ಆದ್ದರಿಂದ ಈ ಪಾದವು ಸಾರ್ಥಕವಾಗಿದೆ.

ಅಥವಾ ಮತ್ತೊಂದು ಬಗೆಯಲ್ಲಿ ಈ ಪಾದಕ್ಕೆ ಸಾರ್ಥಕ್ಯವನ್ನು ತಿಳಿಯಬಹುದು. ಹಿಂದಿನ ಮೂರು ಪಾದಗಳಲ್ಲಿ ಜಗತ್ಕಾರಣತ್ವಕ್ಕೆ ಉಪಯುಕ್ತವಾದ ಪ್ರತಿಯೊಂದು ಶ್ರುತಿವಾಕ್ಯಗಳ ಸಮನ್ವಯವನ್ನು ತಿಳಿದಿದ್ದಾಯಿತು. ಈ ಪಾದದಲ್ಲಿ ಗುಣಪೂರ್ಣತ್ವಕ್ಕೆ ಉಪಯುಕ್ತವಾದ ಅವ್ಯಕ್ತಾದಿಶಬ್ದಗಳ ಸಮನ್ವಯವನ್ನು ತಿಳಿಸಲಾಗಿದೆ. ಪ್ರಥಮ ಸೂತ್ರದಲ್ಲಿ ಗುಣಪರಿಪೂರ್ಣತ್ವವೇ ಬ್ರಹ್ಮನ ಮುಖ್ಯಲಕ್ಷಣವೆಂದು ಹೇಳಿದ್ದಾರೆ. ಅದನ್ನು ಸಮರ್ಥಿಸಲು ಎರಡನೆಯ 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರವು ಹೊರಟಿದೆ. ಅದೇ ವಿಷಯದಲ್ಲಿ ಶಾಸ್ತ್ರಗಳು ಪ್ರಮಾಣವಾಗಿವೆ ಎಂದು ಮೂರನೆಯ ಸೂತ್ರವು ಸಮರ್ಥನೆ ಮಾಡಿದರೆ, ನಾಲ್ಕನೇ ಸೂತ್ರವು ಗುಣಪರಿಪೂರ್ಣತ್ವಕ್ಕಾಗಿಯೇ ಸಕಲಶಬ್ದಗಳ ಸಮನ್ವಯವನ್ನು ಪ್ರತಿಜ್ಞೆಮಾಡಿದೆ. ಜಗತ್ಕಾರಣತ್ವಕ್ಕೆ ಉಪಯುಕ್ತವಾದ ಶಬ್ದಗಳ ಸಮನ್ವಯವನ್ನು ಮೊದಲಿನ ಮೂರು ಪಾದಗಳಲ್ಲಿ ತಿಳಿದ ಮಾತ್ರಕ್ಕೆ ಸಮನ್ವಯಾಧಿಕರಣದ ಪ್ರತಿಜ್ಞೆಯು ಪೂರ್ತಿಯಾಗುವುದಿಲ್ಲ. ಅದಕ್ಕೋಸ್ಕರ ಈ ಪಾದವು ಸ್ವರ, ವರ್ಣ, ಪದ ಮೊದಲಾದ ಸಕಲಶಬ್ದಗಳ ಸಮನ್ವಯವನ್ನು ಮಾಡಲು ಹೊರಟಿರುವುದರಿಂದ, ವಿಷ್ಣುವಿನ ಗುಣಪರಿಪೂರ್ಣತ್ವ ಎಂಬ ಲಕ್ಷಣವು ಸಿದ್ಧವಾಗುತ್ತದೆ. ಆದ್ದರಿಂದಲೂ ಈ ಪಾದವು ಸಾರ್ಥಕ.

ವಾಸ್ತವಿಕವಾಗಿ ಮಹಾವಿಷ್ಣುವು ಒಂದು ಗುಣದಿಂದ ಪೂರ್ಣನಾಗಿದ್ದಾನೆಂದು ಹೇಳಿದರೂ ಸಾಕು. ಆ ಗುಣದಲ್ಲಿ ನಿರತಿಶಯತ್ವಾದಿಗಳು ಇರುವ ಕಾರಣ ಅತಿವ್ಯಾಪ್ತಾದಿದೋಷಗಳು ಬರುವುದಿಲ್ಲ. ಆದರಿಂದಲೇ ಜೀವಭೇದವು ಸಿದ್ಧವಾಗುತ್ತದೆ. ಆದರೆ ಮುಮುಕ್ಷುವಾದವನು ಒಂದೇ ಗುಣದಿಂದ ಪೂರ್ಣನೆಂದು ತಿಳಿದರೆ ಸಾಲದು, ಎಲ್ಲಾ ಗುಣಗಳಿಂದಲೂ ಕೂಡ ಭಗವಂತನು ಪೂರ್ಣನಾಗಿದ್ದಾನೆಂದು ತಿಳಿಯಬೇಕು. ಆದ್ದರಿಂದಲೇ ಸೂತ್ರಕಾರರು 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿ ಜನ್ಯಕರ್ತೃತ್ವ ಎಂಬ ಲಕ್ಷಣವನ್ನು ಹೇಳದೇ ಅಪ್ಯಕರ್ತೃತ್ವ ಲಕ್ಷಣವನ್ನು ಹೇಳಿರುತ್ತಾರೆ. ಆದ್ದರಿಂದ ಸಕಲಗುಣಪರಿಪೂರ್ಣತ್ವವನ್ನು ತಿಳಿಯಬೇಕೆಂದರೆ ಸಕಲಶಬ್ದವಾಚ್ಯತ್ವವನ್ನು ಪರಮಾತ್ಮನಲ್ಲಿ ಅತ್ಯವಶ್ಯವಾಗಿ ತಿಳಿಯಲೇ ಬೇಕು.

'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿ ಯಾವ ಜಗಜ್ಜನ್ಮಾದಿಕಾರಣತ್ವ ಲಕ್ಷಣವನ್ನು ಹೇಳಿರುತ್ತಾರೋ ಅದಕ್ಕೋಸ್ಕರವೇ ಈ ಸಮಸ್ತ ಅಧ್ಯಾಯವು ಹೊರಟಿದೆ ಎಂದು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಅಂತಸ್ತದ್ಧರ್ಮೋಪದೇಶಾತ್, ಜ್ಯೋತಿಶ್ಚರಣಾಭಿಧಾನಾತ್, ಸರ್ವತ್ರಪ್ರಸಿದ್ಧೋಪದೇಶಾತ್ ಇವೇ ಮೊದಲಾದ ಸೂತ್ರಗಳಲ್ಲಿ ಯಾವ ವಿಷಯವಾಕ್ಯವನ್ನು ಸಮನ್ವಯ ಮಾಡಲಾಗಿದೆಯೋ, ಆ ವಾಕ್ಯಗಳಲ್ಲಿ ಜನ್ಮಕಾರಣತ್ವಲಕ್ಷಣವು ಕಾಣಿಸುತ್ತಲೇ ಇಲ್ಲ. ಆದ್ದರಿಂದ ಅನಿವಾರ್ಯವಾಗಿ ಗುಣಪರಿಪೂರ್ಣತ್ವದ ಉದ್ದೇಶವೇ ಈ ಅಧ್ಯಾಯಕ್ಕೆ ಇರುತ್ತದೆಂಬುದನ್ನು ತಿಳಿಯಬೇಕು.

ವಿರೋಧಿಸರ್ವಬಾಹುಲ್ಯಕಾರಣಸ್ಯೇನಿಷೇಧಿನಾಮ್ ।
ಪೃಥಕ್‌ಸಮನ್ವಯಾರ್ಥಾನಿ ಸ್ಥಾನಾನ್ಯೇತಾನಿ ಸರ್ವಶಃ ॥

LXIV

ವಿರೋಧಿ, ಸರ್ವ, ಬಾಹುಲ್ಯ, ಕಾರಣ, ಸ್ತ್ರೀ, ನಿಷೇಧ ಈ ಅರ್ಥಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳ ಸಮನ್ವಯವನ್ನು ಈ ಅಧಿಕರಣದಲ್ಲಿ ಪ್ರತ್ಯೇಕ, ಪ್ರತ್ಯೇಕವಾಗಿ ಮಾಡಲಾಗಿದೆ. ಅನುವ್ಯಾಖ್ಯಾನದ ಈ ಶ್ಲೋಕವನ್ನು ಗಮನಿಸಿದಾಗ ಆರು ಉಪಾಧಿಗಳು ಕಾಣಿಸುತ್ತಿವೆ. ಆದ್ದರಿಂದ ಈ ಪಾದದಲ್ಲಿ ಆರು ಅಧಿಕರಣಗಳಿವೆ ಎಂದೇ ತಿಳಿಯುತ್ತದೆ. ತ್ರಿವಿಕ್ರಮಾಪಂಡಿತಾಚಾರ್ಯರೂ ಕೂಡ ಹಾಗೆಯೇ ಆರು ಅಧಿಕರಣಗಳೆಂದು ವ್ಯಾಖ್ಯಾನ ಮಾಡಿದ್ದಾರೆ. ಆದರೆ ಸುಧಾಕಾರರು ಏಳು ಅಧಿಕರಣಗಳೆಂದು ಪರಿಗಣಿಸಿದ್ದಾರೆ 'ಸಮಾಕರ್ಷಾತ್' ಇತ್ಯಾದಿ ಎಂಟುಸೂತ್ರಗಳು ಹಿಂದಿನ ಆಕಾಶಾಧಿಕರಣದ ಗುಣಸೂತ್ರವಲ್ಲ. ಪ್ರತ್ಯೇಕ ಅಧಿಕರಣವೆಂಬುದು ಸುಧಾಕಾರರ ಪಕ್ಷ. ಅನುವ್ಯಾಖ್ಯಾನದಲ್ಲಿ ಎರಡನೆಯ ಅಧಿಕರಣದ 'ಸರ್ವ' ಎಂಬ ಉಪಾಧಿಯೇ ಐದನೆಯ ಸಮಾಕರ್ಷಾಧಿಕರಣಕ್ಕೂ ಸಂಬಂಧ ಪಡುವುದರಿಂದ ಪ್ರತ್ಯೇಕವಾಗಿ ಉಪಾಧಿಯನ್ನು ಉಲ್ಲೇಖಿಸಿಲ್ಲ. ಕೇವಲ ಉಪಾಧಿಯು ಒಂದೇ ಆಗಿದ್ದರೂ, ನ್ಯಾಯದಲ್ಲಿ ವ್ಯತ್ಯಾಸವಿರುವ ಕಾರಣ ಅಧಿಕರಣ ಭೇದವನ್ನು ಸಮರ್ಥಿಸಬೇಕು.

ಎರಡನೆಯ ಅಧಿಕರಣದಲ್ಲಿ ಎಲ್ಲಾ ಶಬ್ದಗಳನ್ನೂ ಸಮನ್ವಯ ಮಾಡುತ್ತಾರೆಂದರೆ ಶ್ರುತಿಯಲ್ಲಿರುವ ಪದ, ವರ್ಣಗಳ ಸಮನ್ವಯವೆಂದು ತಿಳಿಯಬೇಕು. ಹೊರತು, ವಾಕ್ಯಗಳ ಸಮನ್ವಯವು ಉದ್ದೇಶವಾಗಿಲ್ಲ. ಅಂದರೆ ಯಾವಶ್ರುತಿಗಳನ್ನು ವಾಕ್ಯರೂಪದಿಂದ ಹಿಂದಿನ, ಮುಂದಿನ ಅಧಿಕರಣಗಳಲ್ಲಿ ಸಮನ್ವಯ ಮಾಡಿರುತ್ತಾರೋ, ಅದೇ ಶ್ರುತಿಗಳಲ್ಲಿರುವ ಪ್ರತಿಯೊಂದು ಪದಗಳನ್ನು, ವರ್ಣಗಳನ್ನು ಸಮನ್ವಯ ಮಾಡಲು ಎರಡನೆಯ ಜ್ಯೋತಿರುಪಕ್ರಮಾಧಿಕರಣವು ಹೊರಟಿರುತ್ತದೆ.

ನಾಲ್ಕನೆಯ ಈ ಪಾದದಲ್ಲಿ ದೋಷವಾಚಕಶಬ್ದಗಳ ಸಮನ್ವಯವನ್ನು ಮಾಡಲಾಗಿದೆ. ಆದರೆ ಇಂಥ ಶಬ್ದಗಳ ಸಮನ್ವಯವು ಆವಶ್ಯಕವೇ? ಎಂಬುದನ್ನು ವಿಚಾರ ಮಾಡಬೇಕು. ಪರಮಾತ್ಮನು ಗುಣಪರಿಪೂರ್ಣನಾಗಿದ್ದಾನೆಂಬ ಅರಿವಿಗಾಗಿ 'ದುಃಖೀ', 'ಬದ್ಧಃ' ಮೊದಲಾದ ಶಬ್ದಗಳ ಸಮನ್ವಯವು ಅನಾವಶ್ಯಕ.

ಅಪೂರ್ವವಾದ ಯೋಗವೃತ್ತಿಯನ್ನು 'ದುಃಖೀ' ಮೊದಲಾದ ಶಬ್ದಗಳಿಗೆ ಕಲ್ಪನೆ ಮಾಡಿ, ಇವುಗಳೂ ಕೂಡ ಗುಣವಾಚಕವಾಗಿವೆಯೆಂದು ಸಮರ್ಥನೆ ಮಾಡಬೇಕು. ಆದರೆ ಈ ಶಬ್ದಗಳು ದೋಷವಾಚಕಗಳೇ ಆಗಿವೆ. ಈ ದೋಷಗಳೆಲ್ಲವೂ ವಿಷ್ಣುವಿನ ಅಧೀನವಾಗಿವೆ ಎಂದು ಸಿದ್ಧಾಂತಿಗಳಾದ ನೀವೇ ಸಮರ್ಥನೆ ಮಾಡುತ್ತೀರಿ. ಹೀಗಿರುವಾಗ ಬೇರೆ ಪ್ರವೃತ್ತಿನಿಮಿತ್ತವನ್ನು ಒಪ್ಪಿ ಗುಣವಾಚಕಗಳೆಂದು ಸಮರ್ಥನೆ ಮಾಡಲು ಸಾಧ್ಯವಿಲ್ಲ.

ಇತರರಲ್ಲಿರುವ ದುಃಖಕ್ಕೆ ಭಗವಂತನು ಸ್ವಾಮಿಯಾಗಿರುವುದರಿಂದ ಸರ್ವನಿಯಾಮಕತ್ವ ಎಂಬ ಮಹಿಮೆಯ ಸಿದ್ಧಿಗೋಸ್ಕರ ಇಂಥ ದೋಷವಾಚಕಶಬ್ದಗಳ ಸಮನ್ವಯವನ್ನು ಮಾಡುವುದು ಸಾರ್ಥಕವಲ್ಲವೇ? ಎಂಬ ಪ್ರಶ್ನೆಯೂ ಕೂಡ ಅಸಾಧುವಾಗಿದೆ. ಈ ಸರ್ವನಿಯಾಮಕತ್ವವೆಂಬ ಗುಣವು ಅಂತರ್ಯಾಮ್ಯಧಿಕರಣದ ನ್ಯಾಯದಿಂದಲೇ ಮಹಾವಿಷ್ಣುವಿನಲ್ಲಿ ಸಿದ್ಧವಾಗಿದೆ. ಪುನಃ ಅನುಮಾನಿಕಾಧಿಕರಣದಲ್ಲಿ ಇತರ ಸಮರ್ಥನೆ ಅನಾವಶ್ಯಕ. ಇಷ್ಟು ಆಕ್ಷೇಪ.

ಈ ಆಕ್ಷೇಪವು ಅಸಾಧುವಾಗಿವೆ. ಪರಮಾತ್ಮನಲ್ಲಿ ಸಕಲಗುಣಪರಿಪೂರ್ಣತ್ವವನ್ನು· ತಿಳಿಯುವುದೇ ಮುಖ್ಯ ಉದ್ದೇಶವಲ್ಲ. ಸಕಲಶಬ್ದಗಳಿಂದ ವಾಚ್ಯನಾಗಿದ್ದಾನೆ ಎಂಬುದನ್ನೂ ಕೂಡ ತಿಳಿದುಕೊಳ್ಳಬೇಕು. ವೇದದಲ್ಲಿರುವ ಪ್ರತಿಯೊಂದು ಶಬ್ದಗಳ ಸಮನ್ವಯವನ್ನು ಪರಮಾತ್ಮನಲ್ಲಿ ತಿಳಿದಾಗ ಮಾತ್ರ ಮೋಕ್ಷವಾಗಲು ಸಾಧ್ಯ. ಈ ಕಾರಣಕ್ಕಾಗಿ ದೋಷವಾಚಕಶಬ್ದಗಳ ಸಮನ್ವಯಕ್ಕಾಗಿ ಈ ಅಧಿಕರಣವು ಹೊರಟಿದೆ. ಆದ್ದರಿಂದ ಅನುಮಾನಿಕಾಧಿಕರಣದ ಪ್ರಾರಂಭವನ್ನು ಅನಾವಶ್ಯಕವೆಂದು ಹೇಳಬಾರದು.

ಮೋಕ್ಷವನ್ನು ಬಯಸುವ ಸಾಧಕನು ಪ್ರತಿಯೊಂದು ಶಬ್ದಗಳೂ ಕೂಡ ಹರಿನಾಮಗಳಾಗಿವೆ ಎಂಬುದನ್ನು ಅವಶ್ಯವಾಗಿ ತಿಳಿಯಲೇ ಬೇಕು. 'ನಾಮಾಯತ್ತಾ ಸಮತೃಪ್ಯಂಚ್ಛ್ರೃತೇಧಿ' ಎಂಬ ಶ್ರುತಿಯು ಇದನ್ನು ಸಾರುತ್ತಿದೆ. ಇದನ್ನು ತಿಳಿಯಬೇಕೆಂದರೆ 'ದುಃಖೀ', 'ಬದ್ಧಃ' 'ಅವ್ಯಕ್ತ' ಮೊದಲಾದ ಶಬ್ದಗಳೂ ಕೂಡ ಹರಿನಾಮಗಳೇ ಆಗಿವೆಯೆಂದು ತಿಳಿಯಲೇ ಬೇಕು.

'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯು ಎಲ್ಲಾ ವಿಧವಾದ ವೈದಿಕಶಬ್ದಗಳು ಭಗವಂತನಲ್ಲೇ ಸಮನ್ವಯ ಹೊಂದುತ್ತವೆಂದು ಹೇಳುತ್ತಿದೆ. ಈ ಶ್ರುತಿಯಲ್ಲಿರುವ ಸರ್ವಶಬ್ದಕ್ಕೆ ದೋಷವಾಚಕಶಬ್ದಗಳನ್ನು ಬಿಟ್ಟು, ಉಳಿದ ಶಬ್ದಗಳು ಮಾತ್ರ ಸಮನ್ವಯವಾಗುತ್ತವೆಂದು ಸಂಕೋಚ ಮಾಡಬಾರದು. ಹಾಗಾದಲ್ಲಿ ಇಂದ್ರಾದಿ ಶಬ್ದಗಳ ಸಮನ್ವಯವನ್ನೂ ಕೂಡ ಕೈ ಬಿಡಬೇಕಾಗುತ್ತದೆ. ಇಂದ್ರಾದಿಶಬ್ದಗಳನ್ನು ಸಮನ್ವಯ ಮಾಡುವಾಗ ದೇವೇಂದ್ರಾದಿಗಳಲ್ಲಿರುವ ಐಶ್ವರ್ಯಾದಿಗಳು ಭಗವದಧೀನವಾಗಿವೆ ಎಂದು ಹೇಗೆ ವ್ಯಾಖ್ಯಾನ ಮಾಡಿ, ಸಮನ್ವಯ ಮಾಡಲಾಗುತ್ತದೋ, ಅದೇ ರೀತಿಯಾಗಿ ಇತರರಲ್ಲಿರುವ ದುಃಖ, ಬಂಧನ ಮೊದಲಾದವೂ ಕೂಡ ಭಗವದಧೀನವಾದ್ದರಿಂದ ಭಗವಂತನು 'ದುಃಖೀ', 'ಬದ್ಧಃ' ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆಂದು ತಿಳಿಯಬೇಕು.

'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯನ್ನು ಇಂದ್ರಾದಿಶಬ್ದಗಳ ಸಮನ್ವಯ ವಿಷಯದಲ್ಲಿ ಬಿಟ್ಟು, ಉಳಿದ ಶಬ್ದಗಳ ಸಮನ್ವಯ ವಿಷಯದಲ್ಲಿ ಸಂಕೋಚ ಮಾಡಲು ಸಾಧ್ಯವಿಲ್ಲ. ಏಕೆಂದರೆ 'ಇಂದ್ರೋ ರಾಜಾ' ಎಂಬ ಶ್ರುತಿಯು ವಿಷ್ಣುವಿನಲ್ಲಿ ಇಂದ್ರಾದಿಶಬ್ದಗಳ ಸಮನ್ವಯವನ್ನು ಹೇಳುತ್ತಿದೆ. ಮತ್ತು 'ಯೋ ದೇವಾನಾಮ್ ನಾಮಧಾ' ಎಂಬ ಶ್ರುತಿಯೂ ಕೂಡ ಇಂದ್ರಾದಿಶಬ್ದಗಳ ಸಮನ್ವಯವು ವಿಷ್ಣುವಿನಲ್ಲಿ ತಿಳಿಸುತ್ತಿದೆ. ಆದ್ದರಿಂದ ಸಂಕೋಚ ಮಾಡಲಾಗದೆಂದು ಹೇಳಿದರೆ, ಅದೇ ಕಾರಣದಿಂದಲೇ 'ದುಃಖೀ' 'ಬದ್ಧಃ' ಇತ್ಯಾದಿ ಶಬ್ದಗಳ ಸಮನ್ವಯ ವಿಷಯದಲ್ಲಿಯೂ ಸಂಕೋಚ ಮಾಡಬಾರದು. ಏಕೆಂದರೆ 'ಸ ಬದ್ಧಃ ಸ ದುಃಖೀ ಸ ಬಂಧಯತಿ' ಎಂಬ ಶ್ರುತಿಯು 'ದುಃಖೀ', 'ಬದ್ಧಃ' ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತವನ್ನು ವಿಷ್ಣುವಿನಲ್ಲಿ ಹೇಳುವ ಮೂಲಕ ಆಯಾ ಶಬ್ದಗಳ ಸಮನ್ವಯವನ್ನು ತಿಳಿಸುತ್ತಿದೆ. ಆದ್ದರಿಂದ ಈ ವಿಷಯದಲ್ಲಿಯೂ ಸಂಕೋಚ ಮಾಡಬಾರದು.

ಶ್ರುತಿಯಲ್ಲಿರುವ 'ಅವ್ಯಕ್ತಾತ್ ಪುರುಷಃ ಪರಃ' 'ಜೀವಾ ಏವ ತು ದುಃಖಿನಃ' ಎಂಬಲ್ಲಿ ಅವ್ಯಕ್ತ ಮೊದಲಾದ ಶಬ್ದಗಳಿಂದ ಪ್ರಕೃತಿ, ಜೀವ ಇವರೇ ಪ್ರತಿಪಾದ್ಯರಾಗುತ್ತಾರೆ ಹೊರತು, ಬ್ರಹ್ಮನಲ್ಲ. ಏಕೆಂದರೆ ಅವ್ಯಕ್ತ, ಜೀವ ಮೊದಲಾದ ಶಬ್ದಗಳು ಪ್ರಕೃತಿ ಜೀವಾದಿಗಳಲ್ಲಿಯೇ ಪ್ರಸಿದ್ಧವಾಗಿವೆ. ಅನೇಕ ಪ್ರಮಾಣಗಳಿಂದ ಇವರೇ ಪ್ರತಿಪಾದ್ಯರಾಗುತ್ತಾರೆಂದು ಸಿದ್ಧವಾಗಿದೆ. 'ಅಕ್ಷರಾತ್ ಪರತಃ ಪರಃ' ಎಂಬಲ್ಲಿ ಪಂಚಮ್ಯಂತವಾದ ಅಕ್ಷರಶಬ್ದವು ಪರಮಾತ್ಮನನ್ನು ಪ್ರತಿಪಾದನೆ ಮಾಡಿದಂತೆ, ಇಲ್ಲಿಯೂ 'ಅವ್ಯಕ್ತಾತ್' ಎಂಬ ಪಂಚಮ್ಯಂತ ಪದವು ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತದೆನ್ನಬಾರದು. ಅಕ್ಷರಾಧಿಕರಣದಲ್ಲಿ ಪಂಚಮ್ಯಂತವಾದ ಅಕ್ಷರಶಬ್ದದ ಸಮನ್ವಯವನ್ನು ಮಾಡಿಯೇ ಇಲ್ಲ. , 'ತದಕ್ಷರಮಧಿಗಮ್ಯತೇ' ಎಂಬಲ್ಲಿರುವ ಅಕ್ಷರಶಬ್ದದ ಸಮನ್ವಯವನ್ನು ಮಾಡಿದ್ದಾರೆ.

'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿ ಪಂಚಮೀವಿಭಕ್ತಿಯು ಕೇಳಿಸುತ್ತಿದೆ. ಅವ್ಯಕ್ತವು ಪುರುಷನಿಗಿಂತ 'ಅವರ' ಎಂದು ಇದರಿಂದ ಸೂಚಿತವಾಗಿದೆ. ಒಂದುವೇಳೆ ಅವ್ಯಕ್ತಶಬ್ದದಿಂದ ಬ್ರಹ್ಮನು ಪ್ರತಿಪಾದ್ಯನಾದರೆ, ಅವರತ್ವವು ಬ್ರಹ್ಮನಲ್ಲಿ ಬಂದಂತಾಗುತ್ತದೆ. ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತದಿಂದ ಈ ಅವಧಿತ್ವವು ಬ್ರಹ್ಮನಲ್ಲಿ ಬರುತ್ತದೆನ್ನಬಾರದು. ಒಂದುವೇಳೆ ಸ್ವಾತಂತ್ರ್ಯವನ್ನು ಪ್ರವೃತ್ತಿನಿಮಿತ್ತವೆಂದು ಪರಿಗಣಿಸುವುದಾದರೆ, ಭೃತ್ಯನಲ್ಲಿರುವ ಅಪಜಯ, ಬಂಧನ ಮೊದಲಾದವುಗಳು ರಾಜನ ಅಧೀನವಾದ್ದರಿಂದ ರಾಜನಲ್ಲಿಯೂ 'ಬದ್ಧಃ' 'ಪರಾಜಿತಃ' ಮೊದಲಾದ ಶಬ್ದಪ್ರಯೋಗಗಳು ಬರಬೇಕಾಗುತ್ತದೆ.

ಒಂದು ವೇಳೆ ಅಮಂಗಲವಾದ್ದರಿಂದ ರಾಜನಲ್ಲಿ ಇಂತಹ ಶಬ್ದಗಳನ್ನು ಪ್ರಯೋಗಿಸಬಾರದು ಎನ್ನುವುದಾದರೆ, ಬ್ರಹ್ಮನಲ್ಲಿಯೂ ಕೂಡ ಇಂತಹ ಪ್ರಯೋಗಗಳನ್ನು ಮಾಡಬಾರದು.

ಸ್ವಾತಂತ್ರ್ಯಮ್ ತದ್ಗತತ್ವಂ ಚ ಶಬ್ದವೃತ್ತೇರ್ಹಿ ಕಾರಣಮ್ ।
ಸ್ವಾತಂತ್ರ್ಯಂ ತತ್ರ ಮುಖ್ಯಂ ಸ್ಯಾತ್ ಕುತೋ ರಾಜ್ಞಿ ಜಯೋऽನ್ಯಥಾ ॥

ಸ್ವಾತಂತ್ರ್ಯ ಮತ್ತು ಆಶ್ರಯತ್ವ ಇವೆರಡೂ ಶಬ್ದವೃತ್ತಿಯಲ್ಲಿ ಕಾರಣವಾಗಿವೆ. ಆದರೆ ಸ್ವಾತಂತ್ರ್ಯವೇ ಇವೆರಡರಲ್ಲಿ ಬಹಳ ಮುಖ್ಯವಾದದ್ದು. ಇಲ್ಲದಿದ್ದರೆ ರಾಜನಲ್ಲಿ 'ಜಯಿ' ಎಂಬ ಪ್ರಯೋಗವು ಹೇಗೆ ತಾನೇ ಬರುತ್ತದೆ ಎಂಬ ಈ ಅನುವ್ಯಾಖ್ಯಾನದ ಶ್ಲೋಕದಲ್ಲಿ ಈ ಅಧಿಕರಣದ ಸಂಪೂರ್ಣ ಸಿದ್ಧಾಂತವನ್ನು ಸಂಗ್ರಹಿಸಿದ್ದಾರೆ. ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತದಿಂದ ಎಲ್ಲಾ ಶಬ್ದಗಳನ್ನು ಶ್ರೀಹರಿಯಲ್ಲಿ ಸಮನ್ವಯ ಮಾಡಬೇಕು. ಸ್ವಾತಂತ್ರ್ಯವನ್ನು ಪ್ರವೃತ್ತಿನಿಮಿತ್ತವೆನ್ನುವುದಾದರೆ ಭೃತ್ಯನನ್ನು ಬಂಧಿಸುವ ರಾಜನಲ್ಲಿಯೂ 'ಬದ್ಧಃ' ಎಂಬ ಪ್ರಯೋಗವು ಬರಬೇಕಾಗುತ್ತದಲ್ಲವೇ? ಎಂದು ಆಕ್ಷೇಪಿಸಬಾರದು. ಸ್ವಾತಂತ್ರ್ಯ ಶಬ್ದಕ್ಕೆ 'ನಿಯಾಮಕತ್ವೇ ಸತಿ ತದಾಶ್ರಯತ್ವಪ್ರಯುಕ್ತ ನೀಚತ್ವಾಯೋಗ್ಯತ್ವಮ್' ಎಂಬರ್ಥವನ್ನು ವಿವಕ್ಷಿಸುತ್ತೇವೆ. ನಿಯಾಮಕನಾಗಿರಬೇಕು. ಮತ್ತು ಅಂತಹ ಪ್ರವೃತ್ತಿನಿಮಿತ್ತ ಬರುವುದರಿಂದ ತಾನು ನೀಚನಾಗಬಾರದು. ಅಂತಹ ಸ್ವಾತಂತ್ರ್ಯವಷ್ಟೇ ಶಬ್ದಪ್ರಯೋಗಕ್ಕೆ ಕಾರಣವಾಗುತ್ತದೆ. ಭೃತ್ಯನಲ್ಲಿರುವ ದುಃಖಕ್ಕೆ ರಾಜನು ನಿಯಾಮಕನಾಗಿರಬಹುದು. ಆದರೆ ಅಂತಹ ದುಃಖವು ರಾಜನಲ್ಲಿ ಬಂದಾಗ ನೀಚತ್ವಕ್ಕೆ ಯೋಗ್ಯನೇ ಆಗುತ್ತಾನೆ. ಆದ್ದರಿಂದ ಸ್ವಾತಂತ್ರ್ಯದ ಲಕ್ಷಣವು ಬಾರದ ಕಾರಣ, ರಾಜನಲ್ಲಿ 'ದುಃಖೀ' ಎಂಬ ಶಬ್ದವನ್ನು ಪ್ರಯೋಗಿಸಲು ಸಾಧ್ಯವಾಗುವುದಿಲ್ಲ. ಆದರೆ ದುಃಖಕ್ಕೆ ನಿಯಾಮಕನಾದ ಪರಮಾತ್ಮನಲ್ಲಿ 'ದುಃಖೀ' ಎಂಬ ಶಬ್ದವನ್ನು ಹೇಳಿದಾಗ ಯಾವುದೇ ಬಗೆಯ ನೀಚತ್ವವು ಸರ್ವಥಾ ಬರುವುದಿಲ್ಲ. ಆದ್ದರಿಂದ 'ನಿಯಾಮಕತ್ವೇ ಸತಿ ತದಾಶ್ರಯತ್ವಪ್ರಯುಕ್ತ ನೀಚತ್ವಾಯೋಗ್ಯತ್ವಮ್' ಎಂಬ ಲಕ್ಷಣವು ಬರುವುದರಿಂದ ಪರಮಾತ್ಮನಲ್ಲಿ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತದಿಂದ 'ದುಃಖೀ' ಇತ್ಯಾದಿ ಶಬ್ದಗಳನ್ನು ನಿರಾತಂಕವಾಗಿ ವ್ಯವಹರಿಸಬಹುದು. ಭೃತ್ಯನು ಗೆದ್ದಾಗ ರಾಜನನ್ನು 'ಜಯಿ' ಎನ್ನಲು ತೊಂದರೆಯಿಲ್ಲ. ಏಕೆಂದರೆ ಭೃತ್ಯನಲ್ಲಿರುವ ಜಯಕ್ಕೆ ರಾಜನು ನಿಯಾಮಕನಾಗಿದ್ದಾನೆ. ಅಂಥ ಜಯಕ್ಕೆ ರಾಜನು ಆಶ್ರಯನಾಗಿದ್ದಾನೆಂದು ಹೇಳಿದಾಗ, ತಾನು ನೀಚನೂ ಕೂಡ ಆಗುವುದಿಲ್ಲ. ಆದ್ದರಿಂದ ಸ್ವಾತಂತ್ರ್ಯಲಕ್ಷಣವು ಎಲ್ಲಿ ಬರುತ್ತದೋ, ಅಲ್ಲಿ ಮಾತ್ರ ಆ ಶಬ್ದಪ್ರಯೋಗಗಳನ್ನು ಮಾಡಬೇಕು. ಮತ್ತು ಆಶ್ರಯತ್ವವನ್ನೇ ಪ್ರವೃತ್ತಿನಿಮಿತ್ತವೆನ್ನುವುದಾದರೂ ದೋಷವು ತಪ್ಪಿದ್ದಲ್ಲ. ಸಕಲ ಪದಾರ್ಥಗಳಿಗೆ ಆಧಾರವಾದ ಕಾಲದಲ್ಲಿ ರೂಪ ಹಾಗೂ ದಂಡಗಳು ಇರುತ್ತವೆ. ಆಶ್ರಯತ್ವವೆಂಬ ಪ್ರವೃತ್ತಿನಿಮಿತ್ತದಿಂದ ಕಾಲವನ್ನು 'ರೂಪೀ', 'ದಂಡೀ' ಇತ್ಯಾದಿಯಾಗಿ ವ್ಯವಹರಿಸಬೇಕಾದ ಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಅಲ್ಲಿಯೂ ಕೂಡ ಪರಿಷ್ಕಾರದ ಅವಶ್ಯಕತೆ ಇದ್ದೇ ಇದೆ.

ಅಥವಾ 'ಸ್ವಗತತ್ವಯೋಗ್ಯತ್ವೇ ಸತಿ ಯದ್ದೋಷತ್ವಂ ತದ್ರಹಿತಂ ಪ್ರತಿ ಸ್ವಾತಂತ್ರ್ಯಂ ನಿಮಿತ್ತಮ್' ಎಂದು ಹೇಳುತ್ತೇವೆ. ಯಾವ ಪ್ರವೃತ್ತಿನಿಮಿತ್ತವನ್ನು ವಿವಕ್ಷಿಸುತ್ತೇವೋ, ಅದು ಎರಡು ಕಾರಣಗಳಿಂದ ಶಬ್ದದ ವ್ಯವಹಾರಕ್ಕೆ ಹೇತುವಾಗುತ್ತದೆ. ರಾಜನಲ್ಲಿ 'ಜಯೀ' ಎಂಬ ಶಬ್ದವನ್ನು ಪ್ರಯೋಗಿಸಬಹುದು. ಏಕೆಂದರೆ ಜಯವು ರಾಜನಲ್ಲಿರಲು ಯೋಗ್ಯವಾಗಿದೆ. ಆದರೆ ಅದು ದೋಷವಲ್ಲ. ಆದ್ದರಿಂದ ತದ್ರಾಹಿತ್ಯವು ಬರುವುದರಿಂದ ಸ್ವಾತಂತ್ರ್ಯವನ್ನು ಇಲ್ಲಿ ಪ್ರವೃತ್ತಿನಿಮಿತ್ತವೆಂದು ಪರಿಗಣಿಸಬಹುದು. ಆದರೆ 'ಬದ್ಧಃ' ಎಂಬ ಪ್ರಯೋಗವನ್ನು ರಾಜನಲ್ಲಿ ಮಾಡಲಾಗದು. ಬದ್ಧಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಬಂಧನವು ರಾಜನಲ್ಲಿರಲು ಯೋಗ್ಯವೇ ಆಗಿದೆ. ಮತ್ತು ದೋಷವೂ ಆಗಿದೆ. ಹಾಗಾಗಿ ತದಭಾವವು ಬಾರದ ಕಾರಣ ಸ್ವಾತಂತ್ರ್ಯವನ್ನು ಅಲ್ಲಿ ಪ್ರವೃತ್ತಿನಿಮಿತ್ತವೆಂದು ಪರಿಗಣಿಸಲು ಬರುವುದಿಲ್ಲ. ಆದರೆ ವಿಷ್ಣುವಿನ ವಿಷಯದಲ್ಲಿ ಸಕಲಶಬ್ದಗಳನ್ನು

ಈ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತದಿಂದ ವ್ಯವಹರಿಸಲು ಬರುತ್ತದೆ. ಇಂದ್ರಾದಿಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಪರಮೈಶ್ವರ್ಯಾದಿಗಳು ವಿಷ್ಣುವಿನಲ್ಲಿರಲು ಯೋಗ್ಯವಾಗಿವೆ. ಆದರೆ ದೋಷವಲ್ಲದ ಕಾರಣ ತದ್ರಾಹಿತ್ಯವು ಬರುವುದಿಲ್ಲ. ಆದ್ದರಿಂದ ಸ್ವಾತಂತ್ರ್ಯವನ್ನು ಇಂದ್ರಾದಿಶಬ್ದಗಳ ವಿಷಯದಲ್ಲಿಯೂ ಪ್ರವೃತ್ತಿನಿಮಿತ್ತವೆನ್ನಬಹುದು. ಇದರಂತೆ 'ದುಃಖೀ' 'ಬದ್ಧಃ' ಮೊದಲಾದ ಶಬ್ದಗಳ ಪ್ರಯೋಗವಿಷಯದಲ್ಲಿಯೂ ಪ್ರವೃತ್ತಿನಿಮಿತ್ತ- ವೆನ್ನಬಹುದು. ಏಕೆಂದರೆ ಇವುಗಳ ಪ್ರವೃತ್ತಿನಿಮಿತ್ತವೆನಿಸಿದ ದುಃಖ, ಬಂಧನ ಮೊದಲಾದವು ವಿಷ್ಣುವಿನಲ್ಲಿರಲು ಯೋಗ್ಯವಾಗಿರುವುದಿಲ್ಲ. ಆದ್ದರಿಂದ ದೋಷವಾಗಿದ್ದರೂ ಸ್ವಗತತ್ವ-ಯೋಗ್ಯತ್ವ ಎಂಬ ವಿಶೇಷ್ಯವಿಲ್ಲದ ಕಾರಣ ಸ್ವಾತಂತ್ರ್ಯವನ್ನು ಪ್ರವೃತ್ತಿನಿಮಿತ್ತವೆನ್ನಬಹುದು. ಹೀಗೆ ಪರಿಷ್ಕಾರ ಮಾಡುವುದರಿಂದ ವಿಷ್ಣುವಿನಲ್ಲಿ 'ದುಃಖೀ'-'ಬದ್ಧ' ಮೊದಲಾದ ಶಬ್ದಪ್ರಯೋಗದಂತೆ ರಾಜನಲ್ಲಿಯೂ ಅಂತಹ ಶಬ್ದಪ್ರಯೋಗವು ಬರಲಿ ಎಂಬ ಅತಿಪ್ರಸಂಗಕ್ಕೆ ಲವಲೇಶವೂ ಅವಕಾಶವಿರುವುದಿಲ್ಲ.

ಪ್ರತಿಯೊಂದು ಶಬ್ದಗಳ ಪ್ರಯೋಗಕ್ಕೆ ಸ್ವಾತಂತ್ರ್ಯವೇ ಪ್ರವೃತ್ತಿನಿಮಿತ್ತವಾಗಿದೆ. ಆದ್ದರಿಂದ ಸಕಲ- ಶಬ್ದಗಳಿಂದ ಶ್ರೀಹರಿಯೇ ಪ್ರತಿಪಾದ್ಯನಾಗುತ್ತಾನೆ. ಸ್ವಾತಂತ್ರ್ಯವನ್ನು ಪ್ರವೃತ್ತಿನಿಮಿತ್ತವೆಂದು ಹೇಳಿದಾಗ ರಾಜನಲ್ಲಿಯೂ ಬದ್ಧಾದಿ ಶಬ್ದಪ್ರಯೋಗಗಳು ಬರಬೇಕಾದೀತು ಎಂಬ ಅತಿಪ್ರಸಂಗಕ್ಕೆ ಅವಕಾಶವಿಲ್ಲ. ಏಕೆಂದರೆ ಲೋಕದಲ್ಲಿ ದೋಷವಾಚಕ ಶಬ್ದಗಳ ಪ್ರಯೋಗಕ್ಕೆ ತದ್ಗತತ್ವವು ಪ್ರವೃತ್ತಿನಿಮಿತ್ತವಾಗಿದೆ. ಗುಣವಾಚಕ ಶಬ್ದಪ್ರಯೋಗಗಳಿಗೆ ಸ್ವಾತಂತ್ರ್ಯವು ಪ್ರವೃತ್ತಿನಿಮಿತ್ತವಾಗಿದೆ. ಬ್ರಹ್ಮನ ವಿಷಯದಲ್ಲಿ ಮಾತ್ರ ಪ್ರತಿಯೊಂದು ಶಬ್ದಗಳ ಪ್ರಯೋಗಕ್ಕೆ ಸ್ವಾತಂತ್ರ್ಯವೇ ಪ್ರವೃತ್ತಿನಿಮಿತ್ತ ಹೊರತು, ತದ್ಗತತ್ವವಲ್ಲ. ಹಾಗಾಗಿ ಲೋಕದ ದೃಷ್ಟಾಂತವನ್ನು ವಿವಕ್ಷಿಸಿ, ಬ್ರಹ್ಮನಲ್ಲಿ ಸ್ವಾತಂತ್ರ್ಯವು ಪ್ರವೃತ್ತಿನಿಮಿತ್ತವಾಗುವುದಿಲ್ಲವೆಂದು ಆಕ್ಷೇಪಿಸಲಾಗದು. ಸ್ವಾತಂತ್ರ್ಯವೇ ಬ್ರಹ್ಮನ ವಿಷಯದಲ್ಲಿ ಪ್ರವೃತ್ತಿನಿಮಿತ್ತವೆನ್ನಲು 'ಸ ಬದ್ಧಃ ಸ ದುಃಖೀ ಸ ಬಂಧಯತಿ ಸ ದುಃಖಯತಿ' ಇವೇ ಮೊದಲಾದ ಅನೇಕ ಶ್ರುತಿಗಳು ಆಧಾರವಾಗಿವೆ.

ಬದ್ಧಾದಿ ಶಬ್ದಗಳಿಗೆ ಸ್ವಾತಂತ್ರ್ಯವೇ ಪ್ರವೃತ್ತಿನಿಮಿತ್ತವಾದಲ್ಲಿ, ರಾಜನನ್ನೂ ಕೂಡ 'ಬದ್ಧಃ', 'ದುಃಖೀ' ಇತ್ಯಾದಿಯಾಗಿ ವ್ಯವಹರಿಸಬೇಕಲ್ಲವೇ? ಎಂಬ ಪ್ರಶ್ನೆಗೆ ಮತ್ತೊಂದು ಬಗೆಯಲ್ಲಿ ಉತ್ತರಿಸುತ್ತಿದ್ದಾರೆ. ಲೋಕಪ್ರಯೋಗವನ್ನು ನೋಡಿಕೊಂಡು ಶಬ್ದಗಳ ಪ್ರವೃತ್ತಿನಿಮಿತ್ತವನ್ನು ಹುಡುಕಬೇಕು ಹೊರತು, ಪ್ರವೃತ್ತಿನಿಮಿತ್ತವಿದೆಯೆಂದ ಮಾತ್ರದಿಂದ ಶಬ್ದಗಳನ್ನು ಅಯಾ ಪದಾರ್ಥಗಳಲ್ಲಿ ಪ್ರಯೋಗಿಸುವುದು ಮೂರ್ಖತನ. ಏಕೆಂದರೆ ಮಣ್ಣು ಎಂಬುದು ದ್ರವ್ಯವಾಗಿದ್ದರೂ ಸುವರ್ಣಾದಿಗಳನ್ನೇ ದ್ರವ್ಯವೆನ್ನುತ್ತಾರೆ. ಅಥವಾ ತಾರ್ಕಿಕರು ದ್ವೇಷವನ್ನು ಗುಣವೆಂದು ಒಪ್ಪಿದರೂ ಲೋಕದಲ್ಲಿ ಯಾರೂ ಸಹ ದ್ವೇಷವನ್ನು ಗುಣವೆಂದು ಹೇಳುವುದಿಲ್ಲ ಜ್ಞಾನಾದಿಗಳನ್ನೇ ಗುಣವೆನ್ನುತ್ತಾರೆ. ಅಥವಾ 'ಧಾನಕರ್ಮತ್ವ' ಎಂಬ ಧೇನುಶಬ್ದದ ಪ್ರವೃತ್ತಿನಿಮಿತ್ತವು ಮಹಿಷ್ಯಾದಿಗಳಲ್ಲಿದ್ದರೂ ಹಸುಗಳನ್ನಷ್ಟೇ ಧೇನುವೆಂದು ವ್ಯವಹರಿಸುತ್ತಾರೆ. ಕುಂಬಾರನಲ್ಲಿ ಉದಂಚನ ಕರ್ತೃತ್ವ ಎಂಬ ಪ್ರವೃತ್ತಿನಿಮಿತ್ತವಿದ್ದರೂ ಉದಂಚನಕಾರನೆಂದು ಯಾರೂ ವ್ಯವಹರಿಸುವುದಿಲ್ಲ. ಆದ್ದರಿಂದ ಲೋಕವ್ಯವಹಾರ ಹೇಗಿರುತ್ತದೋ, ಅದಕ್ಕನುಗುಣವಾಗಿ ಪ್ರವೃತ್ತಿನಿಮಿತ್ತವನ್ನು ಹುಡುಕಬೇಕಾಗುತ್ತದೆ. ಹೊರತು ಪ್ರವೃತ್ತಿನಿಮಿತ್ತವಿದ್ದ ಮಾತ್ರದಿಂದ ವ್ಯವಹರಿಸಲು ಹೊರಟರೆ, ಎಮ್ಮೆಯನ್ನೂ ಕೂಡ ಧೇನುವೆಂದು ಕರೆಯಬೇಕಾಗುತ್ತದೆ. ದ್ವೇಷವನ್ನೂ ಕೂಡ ಗುಣವೆಂದು ಕರೆಯಬೇಕಾಗುತ್ತದೆ.

ವ್ಯಾಕರಣಶಾಸ್ತ್ರದಲ್ಲಿ 'ಅತಿತ್ವಾಕಮ್ ಅತಿತ್ವಯಾಮ್' 'ನಿನ್ನನ್ನು ಮೀರಿಸಿದವರಿಗೆ' ಇತ್ಯಾದಿ ಶಬ್ದಗಳನ್ನು ನಿಷ್ಪತ್ತಿಮಾಡಿದ್ದಾರೆ. ಆದರೆ ಲೋಕದಲ್ಲಿ ಎಲ್ಲಿಯೂ ಸಹ ಇಂತಹ ಪ್ರಯೋಗಗಳನ್ನು ನಾವು ಕಾಣುತ್ತಿಲ್ಲ. ಅದರಂತೆ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವಿದ್ದರೂ ರಾಜನಲ್ಲಿ ಬದ್ಧಾದಿ ಶಬ್ದಗಳನ್ನು ಪ್ರಯೋಗಿಸಬೇಕಾಗಿಲ್ಲ. ಒಂದು ವೇಳೆ ವ್ಯಾಕರಣಶಾಸ್ತ್ರದಲ್ಲಿ ಉದಾಹರಿಸಿದ 'ಅತಿತ್ವಾಕಮ್' ಇತ್ಯಾದಿ ಪ್ರಯೋಗಗಳು ಎಲ್ಲಿಯಾದರೂ ಇದ್ದೇ ಇರುತ್ತವೆಂದು

ಊಹಿಸುವುದಾದಲ್ಲಿ, ನಾವೂ ಸಹ ಹಿಂದೆ ಉಲ್ಲೇಖಿಸಿದ ಶ್ರುತಿ-ಸ್ಮೃತಿಗಳ ಆಧಾರದಿಂದ ಭೃತ್ಯನಲ್ಲಿರುವ ಬಂಧಾದಿಗಳಿಗೆ ರಾಜನು ಸ್ವಾಮಿಯಾದ್ದರಿಂದ ಬದ್ಧಾದಿ ಶಬ್ದಗಳ ಪ್ರಯೋಗದ ಯೋಗ್ಯತೆಯು ಇದ್ದೇ ಇರುತ್ತದೆ.

ವ್ಯಾಕರಣಶಾಸ್ತ್ರದಲ್ಲಿ ದ್ವಂದ್ವಸಮಾಸವನ್ನು ವಿಧಿಸುವಾಗ ಪ್ರಾಣ್ಯಂಗಾದಿಗಳಲ್ಲಿ ಸಮಾಹಾರ- ದ್ವಂದ್ವಸಮಾಸವನ್ನೇ ಮಾಡಬೇಕು. 'ದಧಿಪಯೇ' ಎಂಬಲ್ಲಿ 'ಇತರೇತರಯೋಗ' ಸಮಾಸವನ್ನೇ ಮಾಡಬೇಕು ಎಂಬ ನಿಯಮವನ್ನು ಮಾಡಿದ್ದಾರೆ. ವಾಸ್ತವಿಕವಾಗಿ 'ದಧಿಪಯೇ' ಎಂಬಲ್ಲಿಯೂ ಸಮಾಹಾರ ದ್ವಂದ್ವವನ್ನು ಮಾಡಬಹುದು. ಪ್ರಾಣ್ಯಂಗಾದಿಗಳಲ್ಲಿ 'ಇತರೇತರಯೋಗ' ದ್ವಂದ್ವಸಮಾಸವನ್ನು ಮಾಡಬಹುದು. ಇದನ್ನು ನಿಷೇಧಿಸಿ ಪ್ರಾಣ್ಯಂಗಾದಿಗಳಲ್ಲಿ ಸಮಾಹಾರ ದ್ವಂದ್ವಸಮಾಸವನ್ನೇ ಮಾಡಬೇಕು. 'ದಧಿಪಯೇ' ಎಂಬಲ್ಲಿ ಇತರೇತರೇ ಸಮಾಸವನ್ನೇ ಮಾಡಬೇಕೆಂದು ನಿಯಮ ಮಾಡಿರುತ್ತಾರೆ. ಆದರಂತೆ ಪ್ರಕೃತ 'ದುಃಖೀ' ಎಂಬ ಶಬ್ದದಲ್ಲಿ ದುಃಖವುಳ್ಳವನು ಹಾಗೂ ದುಃಖಕ್ಕೆ ಸ್ವಾಮಿಯು ಎಂಬೆರಡರ್ಥವು ಇದ್ದರೂ ಲೋಕದಲ್ಲಿರುವ ಜನರಲ್ಲಿ ದುಃಖವುಳ್ಳವನು ಎಂಬರ್ಥದಲ್ಲಿಯೇ 'ದುಃಖೀ' ಎಂಬ ಶಬ್ದವನ್ನು ಪ್ರಯೋಗಿಸಬೇಕು. ಪರಮಾತ್ಮನು ದುಃಖಕ್ಕೆ ಸ್ವಾಮಿಯಾದ್ದರಿಂದ 'ದುಃಖೀ' ಎಂಬ ಶಬ್ದವನ್ನು ಪ್ರಯೋಗಿಸಬೇಕು ಹೊರತು, ಲೋಕದಲ್ಲಿ ದುಃಖಸ್ವಾಮಿಯೆಂಬರ್ಥದಲ್ಲಿ 'ದುಃಖೀ' ಶಬ್ದವನ್ನು ದುಃಖಕ್ಕೆ ಆಶ್ರಯನು ಎಂಬರ್ಥದಿಂದ ಪರಮಾತ್ಮನಲ್ಲಿ 'ದುಃಖೀ' ಎಂಬರ್ಥವನ್ನು ಪ್ರಯೋಗಿಸಬಾರದು.

'ದುಃಖೀ' 'ಬದ್ಧಃ' ಇತ್ಯಾದಿ ಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗಲು ಸ್ವಾತಂತ್ರ್ಯವನ್ನು ಪ್ರವೃತ್ತಿನಿಮಿತ್ತ-ವೆನ್ನಲಾಯಿತು. ಹಾಗಾದಲ್ಲಿ ರಾಜನಲ್ಲಿಯೂ 'ಬದ್ಧಃ' ಇತ್ಯಾದಿ ಪ್ರಯೋಗಗಳು ಬರಬೇಕಲ್ಲವೆ? ಎಂಬ ಅತಿಪ್ರಸಂಗವನ್ನು ಆಕ್ಷೇಪಿಸಬಾರದು. ಏಕೆಂದರೆ ರಾಜನಿಗೂ ಪರಮಾತ್ಮನಿಗೂ ವ್ಯತ್ಯಾಸವಿದೆ. ಒಂದು ವೇಳೆ ಭೃತ್ಯನು ಬಂಧಿತನಾದಾಗ ರಾಜನಲ್ಲಿ 'ಬದ್ಧಃ' ಎಂಬ ಪದವನ್ನು ಪ್ರಯೋಗಿಸಿದರೆ ರಾಜನಲ್ಲಿ ಬಂಧನಾದಿ ಯೋಗ್ಯತೆಗಳು ಇರುವುದರಿಂದ ಅಮಂಗಳ ಪ್ರಯೋಗವೆನಿಸುತ್ತವೆ. ಆ ಮಂಗಳ ಶಬ್ದಗಳನ್ನು ಕೇಳಿದ ರಾಜನಿಗೆ ಕೋಪ ಮೊದಲಾದವುಗಳು ಬರಬಹುದು. ಆದರೆ ಯಾವುದೇ ದೋಷಗಳಿಗೆ ಅವಕಾಶವಿಲ್ಲದ ಪರಮಾತ್ಮನಲ್ಲಿ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತದಿಂದ ಇಂತಹ 'ದುಃಖೀ' 'ಬದ್ಧಃ' ಮೊದಲಾದ ಶಬ್ದಗಳನ್ನು ಪ್ರಯೋಗಿಸಲು ಯಾವುದೇ ತೊಂದರೆಯಿರುವುದಿಲ್ಲ. ರಾಜನಲ್ಲಿ ಬಂಧನಾದಿಗಳ ಯೋಗ್ಯತೆಯಿರುವಂತೆ ಪರಮಾತ್ಮನಲ್ಲಿ ಅಂತಹ ಬಂಧನಾದಿಗಳ ಯೋಗ್ಯತೆ ಸರ್ವಥಾ ಇರುವುದಿಲ್ಲ.

ಉದಾಹರಣೆ - ಶಿಷ್ಯನು ಬಹಳ ಚೆನ್ನಾಗಿ ಸಭೆಗಳಲ್ಲಿ ತನ್ನ ವಿದ್ಯಾಚಾತುರ್ಯವನ್ನು ಪ್ರದರ್ಶನ ಮಾಡಿದಾಗ ಎಲ್ಲರೂ ಗುರುಗಳನ್ನೇ ಪ್ರಶಂಸಿಸುತ್ತಾರೆ. ಆದರೆ ಶಿಷ್ಯನು ಏನಾದರೂ ತಪ್ಪು ಹೇಳಿದರೆ, ಶಿಷ್ಯನ ತಪ್ಪೆಂದು. ಇದು ಲೋಕದಲ್ಲಿರುವ ನಿಯಮ. ಸಣ್ಣ ಮಗು ಉತ್ತಮವಾದ ಗುಣಗಳಿಂದ ಬೇರೆಯವರನ್ನು ಆಕರ್ಷಿಸಿದಾಗ ತಂದೆ-ತಾಯಿಯಂದಿರನ್ನು ಪ್ರಶಂಸಿಸುತ್ತಾರೆ. ಅದೇ ಮಗು ಕೆಟ್ಟ ವರ್ತನೆಯನ್ನು ಮಾಡಿದಾಗ ಯಾರೂ ಸಹ ತಂದೆ-ತಾಯಿಯಂದಿರನ್ನು ನಿಂದಿಸುವುದಿಲ್ಲ. ಅದರಂತೆ ಇಲ್ಲಿಯೂ ಕೂಡ ಭೃತ್ಯರು ಯುದ್ಧದಲ್ಲಿ ಗೆದ್ದಾಗ ರಾಜನು ಗೆದ್ದಿದ್ದಾನೆಂದು ಹೇಳಬಹುದು. ಆದರೆ ಭೃತ್ಯರು ಸೋತಾಗ, ರಾಜನು ಸೋತನೆಂದು ಸರ್ವಥಾ ಹೇಳಬಾರದು. ಇದು ಲೋಕದ ನೀತಿ. ಆದರೆ ಪರಮಾತ್ಮನ ವಿಷಯದಲ್ಲಿ ಇದು ಸಂಬಂಧಪಡುವುದಿಲ್ಲ. ಅವನು ಲೋಕವಿಲಕ್ಷಣನಾದ್ದರಿಂದ ಉಳಿದವರ ದುಃಖ ಬಂಧನ ಮೊದಲಾದವುಗಳಿಗೆ ನಿಯಾಮಕನಾದ್ದರಿಂದ 'ದುಃಖೀ' 'ಬದ್ಧಃ' ಇತ್ಯಾದಿ ಶಬ್ದಗಳನ್ನು ಪ್ರಯೋಗಿಸಬಹುದು.

ದುಃಖಾದೇರ್ಜೀವಗಾಪ್ಯಸ್ಯಾಧೀನತ್ವೇನ ಹೇತುನಾ ।
- ದುಃಖೀತಿ ಗೀಯತೇ ಬ್ರಹ್ಮ ಧನಸ್ವಾಮೀ ಧನೀ ಯಥಾ ॥೧॥

ಧನಕ್ಕೆ ಸ್ವಾಮಿಯಾದ ಕಾರಣದಿಂದ 'ಧನೀ' ಎಂಬ ವ್ಯವಹಾರವನ್ನು ಲೋಕದಲ್ಲಿ ಮಾಡುವುದು ಕಂಡಿದೆ. ಅದರಂತೆ ದುಃಖಾದಿಗಳು ಜೀವನಲ್ಲೇ ಇರುತ್ತವೆ. ಆ ದುಃಖಾದಿಗಳಿಗೆ ಪರಮಾತ್ಮನು ಸ್ವಾಮಿಯಾದ್ದರಿಂದ ಅವನನ್ನು 'ದುಃಖೀ' ಎಂದು ಶ್ರುತಿಗಳಲ್ಲಿ ಕರೆಯಲಾಗುತ್ತದೆ.

ಇಲ್ಲಿಯ ತನಕ ಸ್ವಾತಂತ್ರ್ಯ ಹಾಗೂ ತದ್ಗತತ್ವ ಎರಡೂ ಸಹ ಶಬ್ದಗಳ ಪ್ರವೃತ್ತಿನಿಮಿತ್ತವಾಗಿರುತ್ತವೆಂದು ಸಮರ್ಥಿಸಲಾಯಿತು. ಹಾಗಾದರೆ ಎರಡು ಪ್ರವೃತ್ತಿನಿಮಿತ್ತಗಳಿಂದ ಪ್ರತಿಯೊಂದು ಶಬ್ದಗಳೂ ನಾನಾರ್ಥಕವಾಗಬೇಕಲ್ಲವೇ? ಎಂಬ ಪ್ರಶ್ನೆಗೆ ಮತ್ತೊಂದು ಬಗೆಯಲ್ಲಿ ಈಗ ಸಮಾಧಾನ ನೀಡುತ್ತಿದ್ದಾರೆ - 'ದುಃಖೀ' 'ಬದ್ಧಃ' ಇತ್ಯಾದಿ ಶಬ್ದಗಳಲ್ಲಿ ಸ್ವಾತಂತ್ರ್ಯವಾಗಲೀ, ತದ್ಗತತ್ವವಾಗಲೀ ಪ್ರವೃತ್ತಿನಿಮಿತ್ತವೆಂದು ಹೇಳುವುದೇ ಇಲ್ಲ. ದುಃಖ-ಬಂಧನ ಮೊದಲಾದವುಗಳೇ ಪ್ರವೃತ್ತಿನಿಮಿತ್ತವಾಗುತ್ತವೆ. ಇಂತಹ ಪ್ರವೃತ್ತಿನಿಮಿತ್ತಗಳು ಆಯಾ ಪದಾರ್ಥಗಳಲ್ಲಿ ಬೇರೆ ಬೇರೆ ಸಂಬಂಧಗಳಿಂದ ಬರುತ್ತವೆ. ಅಂದರೆ ಪರಮಾತ್ಮನಲ್ಲಿ ದುಃಖವು ಸ್ವಾತಂತ್ರ್ಯವೆಂಬ ಸಂಬಂಧದಿಂದ ಜೀವನಲ್ಲಿ ತದ್ಗತತ್ವ ಎಂಬ ಸಂಬಂಧದಿಂದ ಬರುತ್ತದೆ. ಆದರೆ ತದ್ಗತತ್ವವಿರುವ ಜೀವನಲ್ಲಿಯೂ ಸ್ವಾತಂತ್ರ್ಯವಿದ್ದೇ ಇರುತ್ತದಾದ್ದರಿಂದ ಶಬ್ದಗಳು ನಾನಾರ್ಥಕವಾಗುವುದಿಲ್ಲ. ಜೀವನಲ್ಲಿ ದುಃಖವು ಆಶ್ರಿತವಾಗಿದ್ದರೂ ಅಂತಹ ದುಃಖಕ್ಕೆ ಜೀವನು ನಿಯಾಮಕನೇ ಆಗಿದ್ದಾನೆ. ಹಾಗಾಗಿ ರೂಢವಾದ ಶಬ್ದವಾಗಲೀ, ಯೌಗಿಕವಾದ ಶಬ್ದವಾಗಲೀ ತದ್ಗತತ್ವವೆಂಬ ಸಂಬಂಧವನ್ನು ಹೊಂದಿದ್ದರೆ, ಅಮುಖ್ಯವಾದ ಅರ್ಥವನ್ನು ಪ್ರತಿಪಾದನೆ ಮಾಡುತ್ತವೆ. ಯಥೇಷ್ಟವಿನಿಯೋಕ್ತೃತ್ವರೂಪಸ್ವಾತಂತ್ರ್ಯವೆಂಬ ಸಂಬಂಧವನ್ನು ಹೊಂದಿದ್ದರೆ ಮುಖ್ಯವಾಗುತ್ತವೆ. ಆಶ್ರಯತ್ವವೆಂಬ ಸಂಬಂಧವಿರುವ ಜೊತೆಗೆ ತದಧೀನತ್ವವಿದ್ದರೂ ಕೂಡ ಗೌಣವಾಗಿರುವ ಕಾರಣ, ಶಬ್ದವು ಆಯಾ ಪದಾರ್ಥಗಳನ್ನು ಗೌಣವಾಗಿಯೇ ಪ್ರತಿಪಾದನೆ ಮಾಡುತ್ತವೆಂದು ತಿಳಿಯಬೇಕು.

ಅವ್ಯಕ್ತಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಅವ್ಯಕ್ತತ್ವವು ಪರಮ ಸೂಕ್ಷ್ಮನಾದ ಬ್ರಹ್ಮನಲ್ಲಿ ಮುಖ್ಯವಾಗಿರುತ್ತದೆ. ಪ್ರಕೃತಿಯು ಎಷ್ಟು ಸೂಕ್ಷ್ಮವಾಗಿದೆಯೋ, ಅದಕ್ಕಿಂತ ಹೆಚ್ಚು ಪರಮಾತ್ಮನು ಸೂಕ್ಷ್ಮನಾದ್ದರಿಂದ ಅವ್ಯಕ್ತಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯನಾದವನು ಪರಮಾತ್ಮನೇ ಆಗುತ್ತಾನೆ. ಪ್ರವೃತ್ತಿನಿಮಿತ್ತವು ಎಲ್ಲಿ ಹೆಚ್ಚಾಗಿರುತ್ತದೋ, ಅದೇ ಶಬ್ದದ ಮುಖ್ಯತ್ವಕ್ಕೆ ಪ್ರಯೋಜಕವಾಗುತ್ತದೆ. ಉದಾಹರಣೆ - ನೂರಾರು ವಿದ್ವಾಂಸರಲ್ಲಿ 'ವಿದ್ವಾನ್' ಎಂಬ ಶಬ್ದವನ್ನು ಪ್ರಯೋಗಿಸಲಾಗುತ್ತದೆ. ಕೇವಲ ವ್ಯಾಕರಣಶಾಸ್ತ್ರವನ್ನು ಓದಿದವನನ್ನೂ 'ವಿದ್ವಾನ್' ಎನ್ನುತ್ತಾರೆ. 'ತರ್ಕ-ವ್ಯಾಕರಣ' ಎರಡು ಶಾಸ್ತ್ರಗಳನ್ನು ಓದಿದವನನ್ನೂ 'ವಿದ್ವಾನ್' ಎನ್ನುತ್ತಾರೆ 'ಚತುಃಶಾಸ್ತ್ರಪಾರಂಗತನನ್ನೂ 'ವಿದ್ವಾನ್' ಎನ್ನುತ್ತಾರೆ. ಆದರೆ ಚತುಃಶಾಸ್ತ್ರಪರಾಂಗತನಲ್ಲಿ 'ವಿದ್ವಾನ್' ಎಂಬ ಶಬ್ದವನ್ನು ಎಷ್ಟು ಮುಖ್ಯವಾಗಿ ಪ್ರಯೋಗಿಸಲಾಗುತ್ತದೋ, ಅಷ್ಟು ಮುಖ್ಯವಾದ ಪ್ರಯೋಗವನ್ನು ಒಂದೇ ಶಾಸ್ತ್ರವನ್ನು ಓದಿದವನಲ್ಲಿ ಮಾಡುವುದಿಲ್ಲ. ಸಣ್ಣ ಪ್ರದೇಶಕ್ಕೆ ಮಂತ್ರಿಯಾದವನನ್ನು ಮಂತ್ರಿಯೆನ್ನುತ್ತಾರೆ. ಸಮಗ್ರ ದೇಶಕ್ಕೆ ಮಂತ್ರಿಯಾದವನನ್ನು ಮಂತ್ರಿಯೆನ್ನುತ್ತಾರೆ. ಎಲ್ಲರೂ ಮಂತ್ರಿಯಾಗಿದ್ದರೂ ಪ್ರತಿಯೊಬ್ಬ ಮಂತ್ರಿಯಲ್ಲಿಯೂ ಪ್ರವೃತ್ತಿನಿಮಿತ್ತದ ತಾರತಮ್ಯದಿಂದ ಶಬ್ದದ ಮುಖ್ಯಾರ್ಥದಲ್ಲಿ ತಾರತಮ್ಯವನ್ನು ನಾವು ಅನುಭವಿಸಿದ್ದೇವೆ. ಆದ್ದರಿಂದ ಪ್ರವೃತ್ತಿನಿಮಿತ್ತದ ಮುಖ್ಯವಾಗಿರುವಿಕೆಯೇ ಶಬ್ದದ ಮುಖ್ಯತ್ವಕ್ಕೆ ಪ್ರಯೋಜಕ ಹೊರತು, ಪ್ರಯೋಗಪ್ರಾಚುರ್ಯವಲ್ಲ. ಪ್ರಯೋಗ ಪ್ರಾಚುರ್ಯವೇ ಶಬ್ದದ ಮುಖ್ಯತ್ವಕ್ಕೆ ಪ್ರಯೋಜಕವಾಗಿದ್ದಲ್ಲಿ 'ಮಂಚಾಃ ಕ್ರೋಶಂತಿ' ಇತ್ಯಾದಿ ರೂಢಲಕ್ಷಣವಾದ ವಾಕ್ಯಗಳಲ್ಲಿಯೂ ಪ್ರಯೋಗಪ್ರಾಚುರ್ಯವಿರುವ ಕಾರಣ ಶಬ್ದದ ಮುಖ್ಯತ್ವವನ್ನು ಒಪ್ಪಬೇಕಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಶಬ್ದದ ಮುಖ್ಯಾರ್ಥತ್ವಕ್ಕೆ ಪ್ರವೃತ್ತಿನಿಮಿತ್ತದ ಮುಖ್ಯತ್ವವೇ ಕಾರಣವೆಂದು ಸಿದ್ಧವಾಯಿತು.

ಪ್ರಯೋಗೋ ಜ್ಞಾಪಕಃ ಶಕ್ತೇರ್ನಿಮಿತ್ತಂ ತು ನಿಯಾಮಕಮ್ ।
ನಿಯಾಮಕಾನುಸಾರಿತ್ವಂ ನಿಯಮ್ಯಸ್ಯ ಚ ಶೋಭತೇ ॥೧॥

ಪ್ರಯೋಗಪ್ರಾಚುರ್ಯವು ಶಬ್ದಶಕ್ತಿಗೆ ಕೇವಲ ಜ್ಞಾಪಕವಾಗಿರುತ್ತದೆ. ಆದರೆ ಪ್ರವೃತ್ತಿನಿಮಿತ್ತವು ಮುಖ್ಯವಾದ ನಿಯಾಮಕ. ನಿಯಮ್ಯವಾದ ಶಕ್ತಿಯು ನಿಯಾಮಕವಾದ ಶಬ್ದಶಕ್ತಿಗೆ ಅನುಸಾರಿಯಾಗಿರುತ್ತದೆಂದು ಹೇಳುವುದೇ ಶೋಭಸುತ್ತದೆ.

'ಕಾರ್ಯಾಣಾಂ ಕಾರಣಂ ಪೂರ್ವಂ ವಚಸಾಂ ವಾಚ್ಯಮುತ್ತಮ್' ಇವೇ ಮೊದಲಾದ ಸ್ಮೃತಿಗಳಿಂದ 'ನಾಮಾನಿ ಸರ್ವಾಣಿ ಯಮಾವಿಶಂತಿ' ಇತ್ಯಾದಿ ಶ್ರುತಿಗಳಿಂದ ಪರಮಾತ್ಮನಲ್ಲಿ ಎಲ್ಲಾ ಶಬ್ದಗಳೂ ಮುಖ್ಯವೃತ್ತಿಯಿಂದ ಇರುತ್ತವೆಂದು ಸಿದ್ಧವಾಗಿವೆ. ಲೋಕದಲ್ಲಿ ಯಾರೂ ಸಹ ಪರಮಾತ್ಮನನ್ನು 'ದುಃಖೀ' 'ಬದ್ಧಃ' ಇತ್ಯಾದಿಯಾಗಿ ಕರೆಯುವುದಿಲ್ಲ. ಹೀಗಿರುವಾಗ ಇಂತಹ ದೋಷವಾಚಕಶಬ್ದಗಳನ್ನು ಪರಮಾತ್ಮನಲ್ಲಿ ಹೇಗೆ ಸಮನ್ವಯ ಮಾಡುತ್ತೀರಿ? ಎಂದು ಪ್ರಶ್ನಿಸಬಾರದು. 'ಚಮಸ' ಶಬ್ದವನ್ನು ಯಾರೂ ಸಹ ಶಿರಸ್ಸಿನಲ್ಲಿ ಪ್ರಯೋಗ ಮಾಡುವುದಿಲ್ಲ. ಆದರೆ ಶ್ರುತಿಯಲ್ಲಿ 'ಇದಂ ತಚ್ಛಿರ ಏಷ ಹ್ಯರ್ವಾಗ್ಬಿಲಶ್ಚಮಸಃ' ಎಂಬುದಾಗಿ ಕೆಳಮುಖವುಳ್ಳ ಪಾತ್ರಾವಿಶೇಷವನ್ನು 'ಚಮಸ' ಎಂದು ಕರೆಯಲಾಗಿದೆ. ಅದರಂತೆ ಸ್ವರ್ಗಶಬ್ದವನ್ನು ಸುಖ ಎಂಬರ್ಥದಲ್ಲಿ ಯಾರೂ ಪ್ರಯೋಗ ಮಾಡುವುದಿಲ್ಲ. ಆದರೆ 'ಸುಖಂ ಸ್ವರ್ಗಪದಾಸ್ಪದಂ' ಎಂಬ ವಾಕ್ಯವನ್ನು ಸುಖವನ್ನೇ ಸ್ವರ್ಗವೆಂದು ಕರೆಯುತ್ತಿದೆ. ಹೀಗೆ ಲೋಕದಲ್ಲಿರುವ ಪ್ರಯೋಗಗಳು ಶಬ್ದಾರ್ಥನಿರ್ಣಯಕ್ಕೆ ಜ್ಞಾಪಕಗಳಾಗಿರುವುದಿಲ್ಲವೆಂದು ಸಿದ್ಧವಾಗುತ್ತದೆ. ಅದರಂತೆ ಪ್ರಕೃತ 'ದುಃಖೀ' 'ಬದ್ಧಃ' ಮೊದಲಾದ ಪ್ರಯೋಗಗಳು ಪರಮಾತ್ಮನಲ್ಲಿ ಇಲ್ಲವೆನ್ನಲು ಲೋಕದಲ್ಲಿ ಪ್ರಯೋಗವಿಲ್ಲವೆಂಬುದು ಕಾರಣವಾಗುವುದಿಲ್ಲ. ಆದ್ದರಿಂದ ಅವರ ಶಬ್ದದ ಮೇಲೆ ಪಚಾದಿಗಣದಲ್ಲಿ ಪಠಿತವಾದ ಕಾರಣ 'ಣಚ್' ಪ್ರತ್ಯಯ ಮುಂದಿರುವಾಗ 'ಅಚ್' ಪ್ರತ್ಯಯವನ್ನು ಹೇಳಿದರೆ 'ಅವರಯತಿ ಇತಿ ಅವರಃ' ಎಂಬ ರೂಪವು ಸಿದ್ಧವಾಗುತ್ತದೆ. ಇಂತಹ ಅವರ ಮೊದಲಾದ ಶಬ್ದಗಳು ಬ್ರಹ್ಮನಲ್ಲಿ ಸುಲಭವಾಗಿ ಸಮನ್ವಯಗೊಳ್ಳುತ್ತವೆ. ಅಂದರೆ ಮತ್ತೊಬ್ಬರನ್ನು ನೀಚರನ್ನಾಗಿ ಮಾಡುತ್ತಾನಾದ್ದರಿಂದ ಪರಮಾತ್ಮನು ನೀಚನೆನಿಸುತ್ತಾನೆ. ಮತ್ತೊಬ್ಬರಿಗೆ ದುಃಖಗಳನ್ನು ನೀಡುತ್ತಾನಾದ್ದರಿಂದ 'ದುಃಖೀ' ಎನಿಸುತ್ತಾನೆ. ಹೀಗೆ ಪ್ರತಿಯೊಂದು ದೋಷವಾಚಕ ಶಬ್ದಗಳು ಪರಮಾತ್ಮನಲ್ಲಿ ಮುಖ್ಯವೃತ್ತಿಯಿಂದ ಸಮನ್ವಯಗೊಳ್ಳುತ್ತವೆನ್ನಲು ಯಾವುದೇ ಬಾಧಕಗಳಿರುವುದಿಲ್ಲ.

'ಆನುಮಾನಿಕಮಪ್ಯೇಕೇಷಾಮ್ ಇತಿ ಚೇನ್ನ ಶರೀರರೂಪಕವಿನ್ಯಸ್ತಗೃಹೀತೇರ್ದರ್ಶಯತಿ ಚ' ಎಂಬುದು ಮೊದಲನೆಯ ಸೂತ್ರ. ಇದನ್ನು ಸೂತ್ರಕಾರರು ಮೊದಲೇ ನಿರ್ದೇಶಿಸಲು ಕಾರಣ ಹೀಗಿದೆ - 'ಅವ್ಯಕ್ತಾತ್ ಪುರುಷಃ ಪರಃ' ಎಂಬ ಕಾಠಕೋಪನಿಷತ್ತಿನ ವಾಕ್ಯದಲ್ಲಿ ಶ್ರುತವಾದ ಅವ್ಯಕ್ತಶಬ್ದವು ಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತಿದೆ. ಇಂತಹ ಬ್ರಹ್ಮನ ಸಂಪರ್ಕದಿಂದ ಪ್ರಕೃತಿಯು ಅವ್ಯಕ್ತಶಬ್ದಪ್ರತಿಪಾದ್ಯವಾಗಿದೆ ಹೊರತು, ಪ್ರಕೃತಿಯ ಸಂಬಂಧದಿಂದ ಬ್ರಹ್ಮನು ಅವ್ಯಕ್ತಶಬ್ದವಾಚ್ಯನಾಗಿಲ್ಲ. ಏಕೆಂದರೆ ಅವ್ಯಕ್ತಶಬ್ದವು ಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತದೆನ್ನಲು 'ಅವ್ಯಕ್ತಮಚಲಂ ಶಾಂತಮ್' ಎಂಬ ಶ್ರೌತ ಪ್ರಯೋಗವು 'ಅವ್ಯಕ್ತೋಽಕ್ಷರ ಉಚ್ಯತೇ' ಎಂಬ ಸ್ಮಾರ್ತ ಪ್ರಯೋಗವು ಆಧಾರವಾಗಿದೆ. ಹೀಗೆ ಅವ್ಯಕ್ತಶಬ್ದಪ್ರತಿಪಾದ್ಯತ್ವವನ್ನು ಮೊದಲು ಸಮನ್ವಯ ಮಾಡಲು ಈ ಸೂತ್ರವನ್ನು ಮೊದಲು ನಿರ್ದೇಶಿಸಿದ್ದಾರೆ.

'ಸೂಕ್ಷ್ಮಂ ತು ತದರ್ಹತ್ವಾತ್' ಎಂಬುದು ಎರಡನೆಯ ಸೂತ್ರ. ಪ್ರಥಮಸೂತ್ರದಲ್ಲಿ ಅವ್ಯಕ್ತಶಬ್ದದ ಪ್ರಯೋಗವು ಬ್ರಹ್ಮನಲ್ಲೇ ಇರುತ್ತದೆಂದು ಹೇಳಿದ ಮೇಲೆ ಮುಖ್ಯವೃತ್ತಿಯಿಂದಲೇ ಬ್ರಹ್ಮನಲ್ಲಿರುತ್ತದೆಂದು ಸಮರ್ಥಿಸಲು ಈ ಸೂತ್ರ ಹೊರಟಿದೆ. ಅವ್ಯಕ್ತಶಬ್ದಕ್ಕೆ ಅವ್ಯಕ್ತತ್ವ ಎಂಬುದು ಪ್ರವೃತ್ತಿನಿಮಿತ್ತವಾಗಿದೆ. ಅತಿಸೂಕ್ಷ್ಮವಾದ ವಸ್ತುವಿನಲ್ಲೇ ಈ ಪ್ರವೃತ್ತಿನಿಮಿತ್ತವು ಬರುವುದರಿಂದ ಪರಮಾತ್ಮನೇ ಮುಖ್ಯವಾಗಿ ಅವ್ಯಕ್ತಶಬ್ದ ಪ್ರತಿಪಾದ್ಯನಾಗುತ್ತಾನೆಂಬುದು ಈ ಸೂತ್ರದ ಅಭಿಪ್ರಾಯ.

'ತದಧೀನತ್ವಾತ್ ಅರ್ಥವತ್' ಎಂಬುದು ಮೂರನೆಯ ಸೂತ್ರ. ಎರಡನೆಯ ಸೂತ್ರದಲ್ಲಿ ಅವ್ಯಕ್ತ ಎಂಬ ಪ್ರಾತಿಪದಿಕ ಶಬ್ದವನ್ನು ಸಮನ್ವಯ ಮಾಡಿದ ಮೇಲೆ 'ಅವ್ಯಕ್ತಾತ್' ಎಂಬಲ್ಲಿರುವ ಪಂಚಮೀ ವಿಭಕ್ತಿಯಿಂದ ತಿಳಿಯುವ ಅರ್ಥವನ್ನೂ

ಕೂಡ ಈ ಸೂತ್ರದಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಪ್ರಾತಿಪದಿಕ ಸಮನ್ವಯದ ಅನಂತರ ವಿಭಕ್ತಿಯ ಸಮನ್ವಯ ಮಾಡುವುದು ಸಂಗತವಾಗುವ ಕಾರಣ, ಎರಡನೆಯ ಸೂತ್ರದ ಅನಂತರ ಈ ಸೂತ್ರ ಹೊರಟದ್ದು ಅರ್ಥಪೂರ್ಣವಾಗಿದೆ. 'ಅವ್ಯಕ್ತಾತ್' ಎಂಬಲ್ಲಿರುವ ಪಂಚಮೀ ವಿಭಕ್ತಿಯು ಅವರತ್ವವನ್ನು ಹೇಳುತ್ತದೆ. ಪರಮಾತ್ಮನಲ್ಲಿ ಅವರತ್ವ ಇಲ್ಲದಿದ್ದರೂ ಇತರ ಪದಾರ್ಥಗಳಲ್ಲಿರುವ ಅವರತ್ವಕ್ಕೆ ಸ್ವಾಮಿಯಾದ್ದರಿಂದ ಇವನೂ ಕೂಡ ಅವರನೆನಿಸುತ್ತಾನೆಂಬುದು ಈ ಸೂತ್ರದ ಹೃದಯ.

'ಜ್ಞೇಯತ್ವಾವಚನಾಚ್ಚ ' ಎಂಬುದು ನಾಲ್ಕನೆಯ ಸೂತ್ರ. ಭಾವರೂಪವಾದ ಆಂತರಂಗವಾದ ಹೇತುಗಳನ್ನು ಮೊದಲಿನ ಮೂರು ಸೂತ್ರಗಳಲ್ಲಿ ಪ್ರತಿಪಾದನೆ ಮಾಡಿ, ಬಹಿರಂಗವಾದ ಅಭಾವರೂಪವಾದ ಜ್ಞೇಯತ್ವಾವಚನವೆಂಬ ಹೇತುವನ್ನು ಈ ಸೂತ್ರದಲ್ಲಿ ಹೇಳುತ್ತಿದ್ದಾರೆ. ಆದ್ದರಿಂದ ನಾಲ್ಕನೆಯ ಸ್ಥಾನವು ಯುಕ್ತವಾಗಿದೆ. 'ತಮೇವೈಕಂ ಜಾನಥ' ಎಂಬ ಶ್ರುತಿಯಲ್ಲಿ ಮುಮುಕ್ಷುಗಳಿಂದ ಪರಮಾತ್ಮನೇ ಜ್ಞೇಯನಾಗಿದ್ದಾನೆ. ಇತರ ಯಾವುದೇ ಪದಾರ್ಥಗಳೂ ಕೂಡ ಜ್ಞೇಯವಲ್ಲವೆಂದು ಹೇಳಿದ್ದರಿಂದ ಮೋಕ್ಷಫಲಕವಾದ ವೇದವಾಕ್ಯಗಳೆಲ್ಲವೂ ಬ್ರಹ್ಮಪರವಾಗಿವೆಯೆಂದು ಸಿದ್ಧವಾಗುತ್ತದೆ. ಆದ್ದರಿಂದ ಕಾಠಕೋಪನಿಷತ್ತಿನ ಸಂಪೂರ್ಣಪ್ರಕರಣವು ಬ್ರಹ್ಮನನ್ನು ಪ್ರತಿಪಾದನೆ ಮಾಡಬೇಕು. ಮಧ್ಯದಲ್ಲಿರುವ ಅವ್ಯಕ್ತ ಮೊದಲಾದ ಶಬ್ದಗಳೂ ಕೂಡ 'ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ' ಎಂಬ ಶ್ರುತಿಯ ಆಧಾರದಂತೆ ಬ್ರಹ್ಮನನ್ನೇ ಪ್ರತಿಪಾದನೆ ಮಾಡಬೇಕು ಎಂಬುದೇ ಈ ಸೂತ್ರದ ಅಭಿಪ್ರಾಯ.

'ವದತೀತಿ ಚೇನ್ನ ಪ್ರಾಜ್ಞೋ ಹಿ' ಎಂಬುದು ಐದನೆಯ ಸೂತ್ರ. ಹಿಂದಿನ ನಾಲ್ಕನೆಯ ಸೂತ್ರದಲ್ಲಿ ಜ್ಞೇಯತ್ವದ ಅವಚನವನ್ನು ಹೇಳಿದ್ದು ಅಸಿದ್ಧವಾಗಿದೆ. ಏಕೆಂದರೆ 'ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ' ಎಂಬ ಶ್ರುತಿಯಲ್ಲಿ ಮಹತ್‌ಪರತ್ವವೆಂಬ ಲಿಂಗವುಳ್ಳ ಪ್ರಧಾನದಲ್ಲೇ ಮುಮುಕ್ಷು ಜ್ಞೇಯತ್ವವನ್ನು ಹೇಳಿರುತ್ತಾರೆ. ಆದ್ದರಿಂದ ಹಿಂದಿನ ಸೂತ್ರದಲ್ಲಿ ಹೇಳಿದ ಜ್ಞೇಯತ್ವದ ಅವಚನವು ಅಸಿದ್ಧವಲ್ಲವೇ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಎಲ್ಲಾ ತತ್ವಗಳಿಗಿಂತಲೂ ಉತ್ತಮನಾದ ಬ್ರಹ್ಮನು ಮಹತ್ತತ್ವಕ್ಕಿಂತಲೂ ಉತ್ತಮನೆಂದು ಅರ್ಥಾತ್ ಸಿದ್ಧವಾಗುತ್ತದೆ. ಆದ್ದರಿಂದ 'ನಿಚಾಯ್ಯ ತಂ' ಎಂಬ ವಾಕ್ಯದಿಂದಲೂ ವಿಷ್ಣುವೇ ಜ್ಞೇಯನೆಂದು ಕರೆಸಿಕೊಳ್ಳುತ್ತಾನೆ. ಹಾಗಾಗಿ, ಹೇತ್ವಸಿದ್ಧಿದೋಷಕ್ಕೆ ಅವಕಾಶವಿರುವುದಿಲ್ಲ.

'ಪ್ರಕರಣಾತ್' ಎಂಬುದು ಆರನೆಯ ಸೂತ್ರ. ನಿಚಾಯ್ಯ ವಾಕ್ಯದಲ್ಲಿ ಪ್ರಧಾನವೇ ಪ್ರತಿಪಾದ್ಯವಾದಲ್ಲಿ, ಬಾಧಕವನ್ನು ಹೇಳಲಾಗಿದೆ. ಏಕೆಂದರೆ 'ಸೋऽಧ್ವನಃ ಪಾರಮಾಪ್ನೋತಿ' ಎಂಬುದು ವಿಷ್ಣುವಿನ ಪ್ರಕರಣವಾದ್ದರಿಂದ ವಿಷ್ಣುವೇ ಇಲ್ಲಿ ಪ್ರತಿಪಾದ್ಯನಾಗಿದ್ದಾನೆ.

'ತ್ರಯಾಣಾಮೇವ ಚೈವಮುಪನ್ಯಾಸಃ ಪ್ರಶ್ನಶ್ಚ' ಎಂಬುದು ಏಳನೆಯ ಸೂತ್ರ. ಉಪನಿಷತ್ತಿನಲ್ಲಿ ಮುಮುಕ್ಷುಗಳಿಂದ ಜ್ಞೇಯವೆಂದು ಹೇಳಲ್ಪಟ್ಟದ್ದು ಪ್ರಧಾನವೇ ಆಗಬಹುದಿಲ್ಲವೇ? ಎಂಬ ಪ್ರಶ್ನೆಗೆ ಬಾಧಕವನ್ನು ಈ ಸೂತ್ರದಲ್ಲಿ ಹೇಳಲಾಗಿದೆ. ನಚಿಕೇತನು ಪಿತೃಸೌಮನಸ್ಯ, ಅಗ್ನಿ, ಬ್ರಹ್ಮ ಮೂವರ ಬಗ್ಗೆ ಮಾತ್ರ ಪ್ರಶ್ನಿಸಿರುತ್ತಾನೆ. ಅದಕ್ಕನುಸಾರಿಯಾಗಿ ಯಮದೇವರು ಬ್ರಹ್ಮನ ಬಗ್ಗೆ ಉತ್ತರಿಸುತ್ತಾರೆ ಹೊರತು, ಪ್ರಕೃತಿಯ ಬಗ್ಗೆ ಉತ್ತರಿಸುವುದು ಸೂಕ್ತವಾಗುವುದಿಲ್ಲ. ಆದ್ದರಿಂದ 'ಪ್ರಕರಣಾತ್' ಎಂಬ ಸೂತ್ರದ ಮೇಲೆ ಬರುವಂತಹ ಆಕ್ಷೇಪಕ್ಕೆ ಉತ್ತರಿಸಲು ಏಳನೆಯ ಸೂತ್ರ ಹೊರಟದ್ದರಿಂದ ಏಳನೆಯ ಸ್ಥಾನವು ಇದಕ್ಕೆ ಅತ್ಯಂತ ಸಮಂಜಸವಾಗಿದೆ.

'ಜ್ಞೇಯತ್ವಾವಚನಾಚ್ಚ' ಎಂಬ ನಾಲ್ಕನೆಯ ಸೂತ್ರದಲ್ಲಿ ಹೇಳಿದ ಸ್ವಪಕ್ಷಸಾಧಕ ಪ್ರಮಾಣವನ್ನು ಮುಂದಿನ ಮೂರು ಸೂತ್ರಗಳಲ್ಲಿ ಸಾಧಿಸಲಾಯಿತು. ಎಂಟನೆಯದ್ದು 'ಮಹದ್ವಚ್ಚ' ಎಂಬ ಸೂತ್ರ. ಅವ್ಯಕ್ತಾದಿಶಬ್ದಗಳ ಪ್ರಯೋಗಪ್ರಾಚುರ್ಯವು ಮಹಾವಿಷ್ಣುವಿನಲ್ಲಿ ಇಲ್ಲದಿರುವಾಗ ಮಹಾವಿಷ್ಣುವೇ ಅವ್ಯಕ್ತಾದಿಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆಂದು ಹೇಗೆ ಹೇಳುತ್ತೀರಿ? ಎಂಬುದಾಗಿ ಸ್ವಪಕ್ಷ ಸ್ಥಾಪನೆಯಲ್ಲಿ ಬಾಧಕಪ್ರಮಾಣವನ್ನು ಆಕ್ಷೇಪಿಸುತ್ತಾರೆ. ಇದಕ್ಕೆ ಉತ್ತರಿಸುವುದಕ್ಕಾಗಿ

ಈ ಸೂತ್ರ ಹೊರಟಿದೆ. ಪ್ರಯೋಗಪ್ರಾಚುರ್ಯವಿಲ್ಲದಿದ್ದರೂ ಪ್ರವೃತ್ತಿನಿಮಿತ್ತವು ಅತಿಶಯವಾಗಿದ್ದರೆ ಸಾಕು. ಆ ಶಬ್ದವು ಮಹಾವಿಷ್ಣುವನ್ನು ಮುಖ್ಯವಾಗಿ ಹೇಳುತ್ತದೆ. ಉದಾಹರಣೆ- 'ಮಹಾನ್' ಎಂಬ ಶಬ್ದವು ಮಹತ್ತತ್ವವನ್ನೇ ಮುಖ್ಯವಾಗಿ ಹೇಳುವುದಾದರೆ, ಪ್ರವೃತ್ತಿನಿಮಿತ್ತದ ಅತಿಶಯದಿಂದ ವಿಷ್ಣುವನ್ನೂ ಮುಖ್ಯವಾಗಿ ಹೇಳುತ್ತದೆ. ಅದರಂತೆ ಅವ್ಯಕ್ತಾದಿಶಬ್ದಗಳೂ ಕೂಡ ವಿಷ್ಣುವನ್ನು ಮುಖ್ಯವಾಗಿ ಹೇಳಬಹುದು. ಸ್ವಪಕ್ಷಸಾಧಕಪ್ರಮಾಣಗಳನ್ನು ಹಿಂದಿನ ಸೂತ್ರಗಳಲ್ಲಿ ಸ್ಥಾಪನೆ ಮಾಡಿದ ಮೇಲೆ ಈ ಸೂತ್ರದಲ್ಲಿ ಸ್ವಪಕ್ಷಬಾಧಕಪ್ರಮಾಣವನ್ನು ಉದ್ಧಾರ ಮಾಡುತ್ತಿರುವ ಕಾರಣ ಎಂಟನೆಯ ಸ್ಥಾನವು ಇದಕ್ಕೆ ಯುಕ್ತವಾಗಿದೆ.

'ಚಮಸವದವಿಶೇಷಾತ್' ಎಂಬುದು ಈ ಅಧಿಕರಣದ ಒಂಭತ್ತನೆಯ ಅಂತಿಮ ಸೂತ್ರ. ಮಹಾವಿಷ್ಣುವಿನಲ್ಲಿ 'ಮಹತ್' ಶಬ್ದವು ಮುಖ್ಯವಾಗಿರುತ್ತದೆ ಎಂದು ಇದುವರೆಗೂ ಸಿದ್ಧವಾಗಿಲ್ಲ. ಒಂದು ವೇಳೆ ಈ ಅಧಿಕರಣದ ಪ್ರಮೇಯವು ಸಿದ್ಧವಾದರೆ ಅವ್ಯಕ್ತಾದಿ ಶಬ್ದಗಳಂತೆ 'ಮಹತ್' ಶಬ್ದವೂ ಕೂಡ ಮಹಾವಿಷ್ಣುವನ್ನು ಹೇಳುತ್ತದೆಂದು ಸಿದ್ಧವಾಗುತ್ತಿತ್ತು. ಹಾಗಾಗಿ 'ಮಹತ್' ಶಬ್ದದ ದೃಷ್ಟಾಂತವನ್ನು ಎಂಟನೆಯ ಸೂತ್ರದಲ್ಲಿ ಹೇಳಿದ್ದು ತಪ್ಪಲ್ಲವೇ? ಎಂಬ ಪ್ರಶ್ನೆಗೆ ಮತ್ತೊಂದು ಉದಾಹರಣೆಯನ್ನು ಈ ಸೂತ್ರವು ನೀಡುತ್ತಿದೆ. ಅನುಶಾಸನದ ಬಲದಿಂದ 'ಚಮಸ' ಶಬ್ದವನ್ನು ಶಿರಸ್ಸಿನಲ್ಲಿ ಪ್ರಯೋಗಿಸಲಾಗಿದೆ. ಆದರೆ ಲೋಕದಲ್ಲಿ ಎಲ್ಲಿಯೂ ಕೂಡ ಶಿರಸ್ಸಿನಲ್ಲಿ 'ಚಮಸ' ಶಬ್ದವನ್ನು ಪ್ರಯೋಗಿಸುತ್ತಿಲ್ಲ. ಅದರಂತೆ ಅವ್ಯಕ್ತಾದಿಶಬ್ದಗಳೂ ಕೂಡ ಮಹಾವಿಷ್ಣುವನ್ನು ಹೇಳುತ್ತದೆಂದು ಅನುಶಾಸನವಿರುವಾಗ ಮುಖ್ಯವಾಚಕತ್ವವು ಮಹಾವಿಷ್ಣುವಿಗಿರುವುದಿಲ್ಲವೆಂದು ಹೇಳುವುದು ತಪ್ಪು. ಹಾಗಾಗಿ ಅನುಮಾನಿಕಾಧಿಕರಣದ ಒಂಭತ್ತು ಸೂತ್ರಗಳಿಂದ 'ದುಃಖೀ' 'ಬದ್ಧಃ' 'ಅವರಃ' 'ಅವ್ಯಕ್ತಃ' ಮೊದಲಾದ ಎಲ್ಲಾ ಶಬ್ದಗಳಿಂದಲೂ ಪರಮಾತ್ಮನು ಮುಖ್ಯವಾಗಿ ಪ್ರತಿಪಾದ್ಯನೆಂದು ಸಿದ್ಧವಾಯಿತು.

'ತದಧೀನತ್ವಾದರ್ಥವತ್' ಎಂಬ ಮೂರನೆಯ ಸೂತ್ರಕ್ಕೆ ಪರವಾದಿಗಳ ವ್ಯಾಖ್ಯಾನ ಹೀಗಿದೆ - ದೇಹಕ್ಕೆ ಕಾರಣವಾದ ಭೂತಸೂಕ್ಷ್ಮಗಳು ಅವ್ಯಕ್ತವಾದ್ದರಿಂದ ಅವ್ಯಕ್ತಶಬ್ದಪ್ರತಿಪಾದ್ಯವಾಗಿವೆ. ಹಾಗಾದರೆ ಸಾಂಖ್ಯರು ಒಪ್ಪುವ ಪ್ರಕೃತಿಯನ್ನು ನೀವೂ ಕೂಡ ಒಪ್ಪಿದಂತಾಯಿತಲ್ಲವೇ? ಎಂದು ಪ್ರಶ್ನಿಸಬಾರದು. ಸಾಂಖ್ಯರು ಈಶ್ವರನ ಅನಧೀನವಾದ ಸ್ವತಂತ್ರವಾದ ಪ್ರಕೃತಿತತ್ವವನ್ನು ಒಪ್ಪುತ್ತಾರೆ. ಆದರೆ ನಾವು ಈಶ್ವರನ ಅಧೀನವಾದ ಪ್ರಕೃತಿಯನ್ನು ಒಪ್ಪುತ್ತೇವೆ. ಪ್ರಕೃತಿಯೆಂಬ ಉಪಾದಾನಕಾರಣವಿಲ್ಲದೇ, ಜಗತ್ತನ್ನು ಸೃಷ್ಟಿ ಮಾಡಲೂ ಕೂಡ ಸಾಧ್ಯವಿಲ್ಲ. ಹೀಗೆ ವ್ಯಾಖ್ಯಾನ ಮಾಡುತ್ತಾರೆ. ಈ ವ್ಯಾಖ್ಯಾನವೂ ಕೂಡ ಸರಿಯಲ್ಲ. ಏಕೆಂದರೆ ಹಿಂದಿನ ಎರಡು ಸೂತ್ರಗಳಲ್ಲಿ ಈಶ್ವರನು ಅಪ್ರಕೃತನಾಗಿರುವಾಗ ಮೂರನೆಯ ಸೂತ್ರದಲ್ಲಿರುವ 'ತತ್' ಶಬ್ದದಿಂದ ಈಶ್ವರನನ್ನು ಪರಾಮರ್ಶಿಸುವುದು ತಪ್ಪಾಗುತ್ತದೆ. ಮತ್ತು 'ಯಸ್ಯಾವ್ಯಕ್ತಮ್ ಶರೀರಂ' ಇತ್ಯಾದಿ ಸೂತ್ರದಿಂದ ಪ್ರಧಾನಕ್ಕೆ ಸ್ವಾತಂತ್ರ್ಯವನ್ನೇ ನೀವು ನಿರಾಕರಣೆ ಮಾಡಬೇಕು. ಅದನ್ನು ಬಿಟ್ಟು ಅವ್ಯಕ್ತಶಬ್ದಾರ್ಥತ್ವವನ್ನು ನಿರಾಕರಣೆ ಮಾಡುವುದೂ ಕೂಡ ತಪ್ಪಾಗುತ್ತದೆ.

'ಜ್ಞೇಯತ್ವಾವಚನಾಚ್ಚ' ಎಂಬ ನಾಲ್ಕನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನ ಮಾಡುತ್ತಾರೆ - ಸಾಂಖ್ಯರು ಪ್ರಕೃತಿ-ಪುರುಷ ವಿವೇಕಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳುತ್ತಾರೆ. ಇದರಿಂದ ಪ್ರಕೃತಿಯನ್ನು ಅವಶ್ಯ ತಿಳಿಯಬೇಕೆಂಬುದು ಸಾಂಖ್ಯರ ಅಭಿಪ್ರಾಯ. ಆದರೆ ಉಪನಿಷತ್ತಿನಲ್ಲೆಲ್ಲೂ ಕೂಡ ಪ್ರಕೃತಿಯನ್ನು ತಿಳಿಯಬೇಕೆಂದು ಹೇಳಿರುವುದಿಲ್ಲ. ಆದ್ದರಿಂದ ಸಾಂಖ್ಯರಿಗೆ ಅಭಿಮತವಾದ ಪ್ರಕೃತಿಯು ಇಲ್ಲಿರುವ ಶ್ರುತಿಯಿಂದ ಪ್ರತಿಪಾದ್ಯವಾಗಲು ಸಾಧ್ಯವಿಲ್ಲವೆಂದು. ಈ ವ್ಯಾಖ್ಯಾನವೂ ಕೂಡ ಸರಿಯಲ್ಲ. ಏಕೆಂದರೆ ಪ್ರಕೃತಿಯನ್ನು ತಿಳಿಯಬೇಕೆಂದು ಹೇಳದಿದ್ದರೂ ಕೂಡ 'ಮಹತಃ ಪರಮವ್ಯಕ್ತಮ್' ಎಂಬ ತಿಳಿಸುವಿಕೆಯಿಂದಲೇ ಪ್ರಕೃತಿಯನ್ನು ತಿಳಿಯಬೇಕೆಂದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೇ 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿ ಪ್ರಕೃತಿ ಪುರುಷರ ವಿವೇಕವನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಅಷ್ಟೇ ಅಲ್ಲದೇ ಯಾವ ಅವಿದ್ಯೆಯು ಈ ಶ್ರುತಿಯಲ್ಲಿ ಪ್ರತಿಪಾದ್ಯವೆಂದು ನೀನು ಒಪ್ಪುತ್ತೀಯೋ, ಅಂತಹ ಅವಿದ್ಯೆಯಲ್ಲಿ ಅವಿದ್ಯೆಯ ಲಕ್ಷಣವೇ ಇರುವುದಿಲ್ಲ. ಆದ್ದರಿಂದ ಅವಿದ್ಯೆಯೂ ಕೂಡ ಇಲ್ಲಿ ಪ್ರತಿಪಾದ್ಯವಾಗದೇ ಇರಬೇಕಾದೀತು.

ಇಲ್ಲಿಗೆ ಅನುಮಾನಿಕಾಧಿಕರಣದ ಸಾರವು ಮುಗಿಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ದೇವತಾಧಿಕರಣ

ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ
ತತ್ವಪ್ರದೀಪ, ತತ್ವಪ್ರಕಾಶಿಕಾ
ಭಾವದೀಪ

ವಿಶೇಷ ವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ದೇವತಾಧಿಕರಣ

ಬ್ರಹ್ಮಸೂತ್ರ

॥ अथ देवताधिकरणम् ॥

'ತದುಪರ್ಯಪಿ ಬಾದರಾಯಣಃ ಸಂಭವಾತ್' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – ॥ तदुपर्यपि बादरायणः सम्भवात् ॥ २६ ॥

ಸೂತ್ರಾರ್ಥ -- ದೇವತಾಪದವಿಯನ್ನು ಹೊಂದಲು ಅರ್ಹರಾದ ಮನುಷ್ಯರಿಗೆ ದೇವತಾಪದವಿಯು ದೊರೆತನಂತರವೂ, ಮನುಷ್ಯರಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುತ್ತದೆ. ಏಕೆಂದರೆ ವಿಶಿಷ್ಟವಾದ ಬುದ್ಧಿಸಾಮರ್ಥ್ಯವಿರುವುದರಿಂದ.

ಅರ್ಥ - ತದುಪರ್ಯಪಿ = ದೇವತಾಪದವಿಗೆ ಯೋಗ್ಯರಾದ ಮನುಷ್ಯರಿಗೆ, ಮನುಷ್ಯರಾಗಿದ್ದಾಗಷ್ಟೇ ಅಲ್ಲ; ದೇವತಾಪದವಿಯು ಪ್ರಾಪ್ತವಾದ ಅನಂತರವೂ, ವೇದವಿದ್ಯೆಯಲ್ಲಿ ಅಧಿಕಾರವಿರುತ್ತದೆ. ಏಕೆಂದರೆ, ಸಂಭವಾತ್ = ಅಧಿಕಾರಕ್ಕೆ ಪ್ರಯೋಜಕವಾದ ವಿಶಿಷ್ಟವಾದ ಬೌದ್ಧಿಕಸಾಮರ್ಥ್ಯವಿರುತ್ತದೆ ಎಂದು, ಬಾದರಾಯಣಃ = ಬಾದರಾಯಣರು ಹೇಳುತ್ತಾರೆ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಹಿಂದಿನ ಸೂತ್ರದಲ್ಲಿ ಹೇಳಿದ ಪ್ರಮೇಯ

ब्रह्मसूत्रभाष्यम् — मनुष्याणामेव वेदविद्याधिकार इत्युक्तम् ।

ಅನುವಾದ - ಹಿಂದಿನ ಸೂತ್ರದಲ್ಲಿ ಮನುಷ್ಯರಿಗೆ ಮಾತ್ರ ವೇದವಿದ್ಯಾಧಿಕಾರವಿರುತ್ತದೆಂದು ಹೇಳಲಾಯಿತು.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ದೇವತೆಗಳಿಗೆ ಬ್ರಹ್ಮವಿದ್ಯಾಧಿಕಾರವಿರುತ್ತದೆಂದು ಸಮರ್ಥಿಸುತ್ತಿದ್ದಾರೆ. ಪ್ರಾಸಂಗಿಕವಾಗಿಯೇ ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳನ್ನು ತಿಳಿಯಬೇಕು -

ಮನುಷ್ಯಾಣಾಮೇವ = ಮನುಷ್ಯರಿಗೆ ಮಾತ್ರ, ವೇದವಿದ್ಯಾಧಿಕಾರಃ = ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿರುತ್ತದೆ, ಇತಿ = ಹೀಗೆ , ಉಕ್ತಮ್ = ಹಿಂದಿನಸೂತ್ರದಲ್ಲಿ ಹೇಳಲಾಯಿತು.

'ಮನುಷ್ಯಾಧಿಕಾರತ್ವಾತ್' ಎಂಬಲ್ಲಿ ಮನುಷ್ಯ ಪದವನ್ನೇಕೆ ಹೇಳಿದರು ?

ब्रह्मसूत्रभाष्यम्—तिर्यगाद्यपेक्षयैव मनुष्यत्वविशेषणमुक्तं, नतु देवाद्यपेक्षयेत्याह—

ಅನುವಾದ - 'ಮನುಷ್ಯಾಧಿಕಾರತ್ವಾತ್' ಎಂಬ ಹಿಂದಿನ ಸೂತ್ರದಲ್ಲಿ, ಪ್ರಾಣೆ ಮೊದಲಾದವುಗಳನ್ನು ಬಿಡಬೇಕೆಂಬ ಉದ್ದೇಶದಿಂದಲೇ ಅಧಿಕಾರ ಪದಕ್ಕೆ ಮನುಷ್ಯ ಎಂಬ ವಿಶೇಷಣವನ್ನು ನೀಡಲಾಗಿದೆ ಹೊರತು ದೇವತೆಗಳಿಗೆ ಬ್ರಹ್ಮವಿದ್ಯಾಧಿಕಾರವನ್ನು ನಿಷೇಧ ಮಾಡುವುದಕ್ಕಾಗಿ ಮನುಷ್ಯ ಎಂಬ ವಿಶೇಷಣವನ್ನು ನೀಡಲಾಗಿಲ್ಲ. ಈ ವಿಷಯವನ್ನೇ ಸೂತ್ರಾಕಾರರು ಹೇಳುತ್ತಿದ್ದಾರೆ. ಇದರಿಂದೇನಾಯಿತು ? ಎಂಬ ಸಂಶಯವನ್ನು ಪರಿಹರಿಸುತ್ತಾ ಸಿದ್ಧಾಂತಸ್ಥಾಪಕವಾದ ಸೂತ್ರವನ್ನು ಪಠಿಸುತ್ತಿದ್ದಾರೆ -

ಪ್ರತಿಪದಾರ್ಥ -- ತಿರ್ಯಗಾದ್ಯಪೇಕ್ಷಯೈವ = ಪಶು ಮೊದಲಾದವುಗಳನ್ನು ವ್ಯಾವೃತ್ತಿ ಮಾಡುವುದಕ್ಕಾಗಿಯೇ. ಮನುಷ್ಯತ್ವವಿಶೇಷಣಂ = ಅಧಿಕಾರದಲ್ಲಿ

ಮನುಷ್ಯತ್ವವೆಂಬ ವಿಶೇಷಣವು, ಉಕ್ತಮ್ = ಹೇಳಲ್ಪಟ್ಟಿದೆ. ಮತ್ತು ದೇವಾದ್ಯಪೇಕ್ಷಯಾ = ದೇವತೆಗಳನ್ನು ವ್ಯಾವೃತ್ತಿ ಮಾಡುವುದಕ್ಕೆ ಅಲ್ಲ. ಇತ್ಯಾಹ = ಇದನ್ನೇ ಸೂತ್ರಕಾರರು ಹೇಳುತ್ತಿದ್ದಾರೆ.

ವೇದಾಧಿಕಾರವಿಲ್ಲದವರು ಯಾರು ?

ಬ್ರಹ್ಮಸೂತ್ರಭಾಷ್ಯಮ್ – ।। तदुपर्यपि बादरायणः सम्भवात् ।।२६।।

तदुपरि मनुष्याणां सतां देवादित्वप्राप्त्युपरि ।
सम्भवति हि तेषां विशिष्टबुद्ध्यादिभावात् ।

ಅನುವಾದ - ಸೂತ್ರದಲ್ಲಿರುವ 'ತದುಪರಿ' ಎಂಬ ಶಬ್ದಕ್ಕೆ ಸಜ್ಜನರಾದ ಮನುಷ್ಯೋತ್ತಮರಿಗೆ ದೇವತಾಪದವಿಯು ದೊರೆತನಂತರವೂ ಸಹ ಎಂದರ್ಥ, ದೇವತೆಗಳಿಗೂ ಸಹ ವೇದದಲ್ಲಿ ಹೇಳಿರುವ ಅರ್ಥವನ್ನು ತಿಳಿದು ಅನುಷ್ಠಾನ ಮಾಡುವ ಬುದ್ಧಿಶಕ್ತಿ ಇರುವುದರಿಂದ ವೇದವಿದ್ಯೆಯಲ್ಲಿ ಅಧಿಕಾರವಿರುತ್ತದೆ.

ಪ್ರತಿಪದಾರ್ಥ -- ಸೂತ್ರವನ್ನು ಪಠಿಸುತ್ತಿದ್ದಾರೆ -

ಮನುಷ್ಯಾಣಾಂ = ಮನುಷ್ಯೋತ್ತಮರಿಗೆ, ತದುಪರಿ-ಅಪಿ = ದೇವತಾ-ಪದವಿಯ ಪ್ರಾಪ್ತಿ ಎಂಬ ಉತ್ತಮಯೋನಿಯು ದೊರೆತನಂತರವೂ, ವೇದವಿದ್ಯಾಧಿಕಾರವು, ಸಂಭವತಿ = ಪ್ರಾಪ್ತವಾಗುತ್ತದೆ. ಹಿ = ಏಕೆಂದರೆ, ತೇಷಾಂ = ಅಂತಹ ದೇವತೆಗಳಿಗೆ, ವಿಶಿಷ್ಟಬುದ್ಧ್ಯಾದಿಭಾವಾತ್ = ಅಧ್ಯಯನಕ್ಕೆ ಉಪಯುಕ್ತವಾದ ವಿಶಿಷ್ಟಬುದ್ಧಿಯು ಇರುವುದರಿಂದ.

ಪ್ರಾಣಿಗಳಿಗೆ ವೇದಾಧಿಕಾರ ಏಕಿಲ್ಲ ?

ಬ್ರಹ್ಮಸೂತ್ರಭಾಷ್ಯಮ್ – तिर्यगादीनां तदभावादभावः । तेषामपि यत्र विशिष्टबुद्ध्यादि-भावस्तत्राविरोधः ।

ಅನುವಾದ - ಪ್ರಾಣಿಗಳಿಗೆ ಇಂತಹ ಬುದ್ಧಿಸಾಮರ್ಥ್ಯವು ಇರುವುದಿಲ್ಲ. ಆದ್ದರಿಂದಲೇ ವೇದವಿದ್ಯಾಧಿಕಾರವೂ ಸಹ ಅವರಿಗೆ ಇರುವುದಿಲ್ಲ. ಪ್ರಾಣಿಗಳಿಗೂ ಅಂತಹ ವಿಶಿಷ್ಟವಾದ ಬುದ್ಧಿಶಕ್ತಿ ಇರುವುದಾದಲ್ಲಿ ವೇದವಿದ್ಯಾಧಿಕಾರವನ್ನು ಒಪ್ಪಲು ಏನೂ ತೊಂದರೆ ಇಲ್ಲ.

ಪ್ರತಿಪದಾರ್ಥ -- ದೇವತೆಗಳಿಗೆ ಮಾತ್ರ ವೇದವಿದ್ಯಾಧಿಕಾರ-ವಿರುವುದಲ್ಲ; ವಿಶಿಷ್ಟವಾದ ಬುದ್ಧಿಶಕ್ತಿ ಇರುವವರೆಲ್ಲರಿಗೂ ವೇದವಿದ್ಯಾಧಿಕಾರವಿದೆ ಎಂದು ಸಮರ್ಥಿಸುತ್ತಿದ್ದಾರೆ -

ತಿರ್ಯಗಾದೀನಾಂ = ಪಶುಪ್ರಾಣಿಗಳಿಗೆ, ತದಭಾವಾತ್ = ಅಧ್ಯಯನಕ್ಕೆ ಉಪಯುಕ್ತವಾದ ಬುದ್ಧಿಶಕ್ತಿ ಇಲ್ಲದ ಕಾರಣ, ಅಭಾವಃ = ವೇದಾಧ್ಯಯನವು ಇರುವುದಿಲ್ಲ, ತೇಷಾಮ್ ಅಪಿ = ಅಂತಹ ಪ್ರಾಣಿಗಳಿಗೂ ಸಹ, ಯತ್ರ = ಯಾವ ಸಂದರ್ಭದಲ್ಲಿ, ವಿಶಿಷ್ಟಬುದ್ಧ್ಯಾದಿಭಾವಃ = ಹೆಚ್ಚಿನ ಬುದ್ಧಿಶಕ್ತಿ ಇರುತ್ತದೋ, ತತ್ರ = ಆ ಸಂದರ್ಭದಲ್ಲಿ, ಅವಿರೋಧಃ = ವೇದಾಧಿಕಾರವನ್ನು ಒಪ್ಪಿದರೆ ವಿರೋಧವು ಬರುವುದಿಲ್ಲ.

ಜರಿತಾರಿ ಪಕ್ಷಿಗಳು ವೇದಾಧ್ಯಯನ ಮಾಡಿರುತ್ತವೆ

ब्रह्मसूत्रभाष्यम् — निषेधाभावात् । दृश्यन्ते हि जरितार्यादयः ॥२६॥

ಅನುವಾದ - ಪ್ರಾಣಿಗಳಿಗೂ ಬುದ್ಧಿಶಕ್ತಿ ಇದ್ದಾಗ ವೇದಾಧಿಕಾರ ಒಪ್ಪಿದರೆ ವಿರೋಧ ಬರುವುದಿಲ್ಲ ಏಕೆಂದರೆ ಜರಿತಾರಿ ಮೊದಲಾದ ಪಕ್ಷಿಗಳು ವೇದಾಧ್ಯಯನ ಮಾಡಿದ್ದು ಇತಿಹಾಸದಲ್ಲಿ ದೃಷ್ಟಾಂತವಿದೆ.

ಪ್ರತಿಪದಾರ್ಥ -- ನಿಷೇಧಾಭಾವಾತ್ = ನಿಷೇಧವಿಲ್ಲದ ಕಾರಣ ವೇದಾಧಿಕಾರವನ್ನು ಒಪ್ಪಿದರೆ ವಿರೋಧವಿಲ್ಲ. ಹೀಗೇಕೆಂದರೆ, ಜರಿತಾರ್ಯಾದಯಃ = ಜರಿತಾರಿ ಮೊದಲಾದ ಪಕ್ಷಿಗಳಿಗೆ, ದೃಶ್ಯಂತೇ = ವೇದಾಧಿಕಾರವಿರುವ ದೃಷ್ಟಾಂತವು, ಹಿ = ಭಾರತಾದಿಗಳಲ್ಲಿ ಕಂಡಿದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ದೇವತೆಗಳಿಗೂ ವೇದಾಧಿಕಾರವಿದೆ

ಸತ್ತರ್ಕದೀಪಾವಳಿಃ –

ತದುಪರ್ಯಪಿ ಬಾದರಾಯಣಃ ಸಮ್ಭವಾತ್ ।।

ಅತ್ರ ಮನುಷ್ಯಾಧಿಕಾರತ್ವಾದಿತ್ಯುಕ್ತೇऽಪ್ಯರ್ಥಿತ್ವಸಾಮರ್ಥ್ಯಾದಿಮತ್ತ್ವೇನ ದೇವಾದೀನಾಂ ವೇದೋಕ್ತ-ಬ್ರಹ್ಮೋಪಾಸನಾಧಿಕಾರಸಮ್ಭವಾತ್ 'ಮಧ್ಯೇ ವಾಮನಮಾಸೀನಮ್' ಇತ್ಯಾದಿಶ್ರುತ್ಯುಕ್ತತ್ವಾಚ್ಚ ನಾತ್ರಾಧಿಕಾರಸ್ತೇಷಾಂ ವಾರ್ಯಃ ।

ವೇದಾಧ್ಯಯನದಲ್ಲಿ ಮನುಷ್ಯರು ಅಧಿಕಾರಿಗಳು ಎಂದು ಹೇಳಿದ್ದರೂ ಸಹ, ಅರ್ಥಿತ್ವ, ಸಾಮರ್ಥ್ಯ, ಇವುಗಳು ಇರುವ ಕಾರಣ ದೇವತೆಗಳೂ ಸಹ ವೇದವಿದ್ಯೆಗೆ ಅಧಿಕಾರಿಗಳೇ ಆಗಿರುತ್ತಾರೆ. ಆದ್ದರಿಂದ ವೇದದಲ್ಲಿ ಹೇಳಲ್ಪಟ್ಟ ಬ್ರಹ್ಮೋಪಾಸನೆಯು ದೇವತೆಗಳಿಗೂ ವಿಹಿತವಾಗಿದೆ. ಮತ್ತು 'ಮಧ್ಯೇ ವಾಮನಮಾಸೀನಮ್' ಇತ್ಯಾದಿ ಶ್ರುತಿಯಲ್ಲಿ ಹೇಳಿದ್ದರಿಂದಲೂ ದೇವತೆಗಳಿಗೆ ವೇದವಿದ್ಯಾಧಿಕಾರವಿಲ್ಲವೆಂದು ನಿರಾಕರಣೆ ಮಾಡಬಾರದು.

ಮೊದಲೂ ಕೂಡ ದೇವತೆಗಳಿದ್ದರು

ಸತ್ತರ್ಕದೀಪಾವಳಿಃ – ಇದಾನೀನ್ತನದೇವಾನಾಮುತ್ಪತ್ತಿಮತ್ತ್ವಾದುತ್ಪತ್ತೇಃ ಪ್ರಾಕ್ 'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ' ಇತ್ಯಾದಿಶಾಸ್ತ್ರಂ ಕಥಂ ತಾನಧಿಕರೋತಿ? ಕಥಞ್ಚ ತದುದ್ದೇಶೇನ ಹವಿರ್ದಾನಂ ತದಾನೀಮ್? ಇತಿ ನಾಶಙ್ಕನೀಯಮ್ । 'ಯತ್ರ ಪೂರ್ವೇ ಸಾಧ್ಯಾಃ ಸನ್ತಿ ದೇವಾಃ' ಇತಿ ಪೂರ್ವಮಪಿ ದೇವತಾನ್ತರಸದ್ಭಾವಶ್ರುತಿವಿರೋಧಾತ್ ।

ಈಗ ಇರುವಂತಹ ದೇವತೆಗಳಿಗೆ ಉತ್ಪತ್ತಿಯಿದೆ. ಉತ್ಪತ್ತಿಗಿಂತ ಮೊದಲು 'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯಃ ಮಂತವ್ಯಃ ನಿದಿಧ್ಯಾಸಿತವ್ಯಃ' ಇತ್ಯಾದಿ ವೇದವಾಕ್ಯಗಳು ದೇವತೆಗಳನ್ನು

ಉದ್ದೇಶಿಸಿ ಶ್ರವಣ-ಮನನಾದಿಗಳನ್ನು ವಿಧಿಸಲು ಹೇಗೆ ಸಾಧ್ಯವಾಗುತ್ತದೆ? ಮತ್ತು ಇನ್ನೂ ಉತ್ಪತ್ತಿಯನ್ನೇ ಹೊಂದದ ದೇವತೆಗಳನ್ನು ಉದ್ದೇಶಿಸಿ ಹವಿರ್ದಾನಾದಿಗಳೂ ಕೂಡ ಹೇಗೆ ಕೂಡುತ್ತವೆ? ಎಂದು ಆಕ್ಷೇಪಿಸಬಾರದು. ಏಕೆಂದರೆ, 'ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ' ಎಂಬ ಪುರುಷಸೂಕ್ತವಾಣಿಯಂತೆ, ಈ ದೇವತೆಗಿಂತ ಮೊದಲು ಮತ್ತೊಬ್ಬ ದೇವತೆಯು ಇದ್ದೇ ಇರುತ್ತಾನೆ. ಅಂತಹ ದೇವತೆಯನ್ನು ಉದ್ದೇಶಿಸಿ 'ಆತ್ಮಾ ವಾ ಅರೇ' ಮೊದಲಾದ ಶ್ರುತಿಗಳು ಪ್ರವೃತ್ತವಾಗಿವೆ, ಮತ್ತು ಹವಿರ್ದಾನಾದಿಗಳೂ ಯುಕ್ತವಾಗುತ್ತವೆ.

ಮನುಷ್ಯರೇ ದೇವತಾಪದವಿಯನ್ನು ಹೊಂದುತ್ತಾರೆ

सत्तर्कदीपावलिः – तदाह – मनुष्याणां सतां देवादित्वप्राप्त्युपरीति ।। अस्य देवादिपदयोग्यानां मनुष्यादीनां तत्तत्साधनानुष्ठानेन देवादिपदप्राप्तेः उपर्यपि वेदोक्तब्रह्मोपासनाधिकारोऽस्तीत्यर्थः ।

ಇದನ್ನೇ ಸೂತ್ರಕಾರರು 'ತದುಪರ್ಯಪಿ' ಇತ್ಯಾದಿಯಾಗಿ ಹೇಳಿದ್ದಾರೆ. ಅದನ್ನು ಭಾಷ್ಯದಲ್ಲಿ 'ಮನುಷ್ಯಾಣಾಂ' ಎಂದು ವಿವರಿಸಿದ್ದಾರೆ. ಉತ್ತಮರಾದ ಮನುಷ್ಯರು ಸಾಧನಾನುಷ್ಠಾನದಿಂದ ದೇವತಾಪದವಿಯನ್ನು ಹೊಂದುತ್ತಾರೆ. ಅಂತಹ ದೇವತಾಪದಕ್ಕೆ ಯೋಗ್ಯರಾದ ಮನುಷ್ಯರು ದೇವತಾಪದವಿಯನ್ನು ಹೊಂದಿದ ಮೇಲೆಯೂ, ಅವರು ವೇದದಲ್ಲಿ ಹೇಳಲ್ಪಟ್ಟ ಬ್ರಹ್ಮೋಪಾಸನೆಗೆ ಅಧಿಕಾರಿಗಳಾಗಿರುತ್ತಾರೆ ಎಂದು ಅಭಿಪ್ರಾಯ.

ಪಕ್ಷಿಗೂ ವೇದದ್ರಷ್ಟೃತ್ವವಿದೆ

सत्तर्कदीपावलिः – तिर्यगादीनाम् इत्यत्रादिशब्देन स्थावरग्रहणम् । दृश्यन्ते हि जातिस्मरणयोगात् सूक्तद्रष्टृत्वेन भारतादिषु जरितार्यादयः पक्षिणः।

'ತಿರ್ಯಗಾದೀನಾಂ' ಎಂಬಲ್ಲಿರುವ ಆದಿಶಬ್ದದಿಂದ ಸ್ಥಾವರ ಪದಾರ್ಥಗಳನ್ನು ವಿವಕ್ಷಿಸಬೇಕು. ಮಹಾಭಾರತದಲ್ಲಿ ಜರಿತಾರಿ ಪಕ್ಷಿಯ ಕಥೆಯನ್ನು ಗಮನಿಸಿದಾಗ ಜಾತಿಸ್ಮರಣೆ ಮೊದಲಾದವುಗಳು ಆ ಪಕ್ಷಿಗೆ ಇರುವುದರಿಂದ 'ಅಯಮಗ್ನೇ ಜರಿತಾ' ಇತ್ಯಾದಿ ಸೂಕ್ತಗಳ ದ್ರಷ್ಟೃತ್ವವೂ ಕೂಡ ಆ ಪಕ್ಷಿಗೆ ಸಿದ್ಧವಾಗಿದೆ.

ಮನುಷ್ಯರಿಗಿಂತ ಭಿನ್ನರಾದವರಿಗೂ ವೇದಾಧಿಕಾರವಿದೆ

सत्तर्कदीपावलिः – अतो मनुष्येभ्योऽन्योऽपि वेदोक्तब्रह्मोपासनाधिकारि देवताङ्गीकारो न घटते । वेदानां नित्यत्वादेवानां विनाशित्वात् ।।

ಆದ್ದರಿಂದ ಮನುಷ್ಯರಿಗಿಂತಲೂ ಭಿನ್ನರಾದ ಜರಿತಾರಿ ಮೊದಲಾದ ಪಕ್ಷಿಗಳಲ್ಲಿ ವೇದೋಕ್ತವಾದ ಬ್ರಹ್ಮೋಪಾಸನೆ ಇರುವುದು ಕಂಡಿದೆ. ಆದರೆ ಯಾವ ಪಕ್ಷಿಗಳಿಗೆ ವಿಶಿಷ್ಟಬುದ್ಧಿಯಿರುವುದಿಲ್ಲವೋ, ಅಂಥಹ ತಿರ್ಯಗಾದಿ ಪಕ್ಷಿಗಳಿಗೆ ವೇದವಿದ್ಯಾಧಿಕಾರ-ವಿಲ್ಲವೆಂದು ನಿಷೇಧಿಸಲಾಗಿದೆ. ಹೊರತು, ದೇವತೆಗಳಿಗೆ ವೇದವಿದ್ಯಾಧಿಕಾರವಿಲ್ಲವೆಂದು ನಿಷೇಧ ಮಾಡಿಲ್ಲ. ವೇದಗಳು ನಿತ್ಯವಾಗಿವೆ, ದೇವತೆಗಳು ಅನಿತ್ಯರಾದ್ದರಿಂದ ವೇದವಿದ್ಯೆಯಲ್ಲಿ ಅಧಿಕಾರಿಗಳಾಗುತ್ತಾರೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ವಪ್ರದೀಪ

'ಮನುಷ್ಯಾಧಿಕಾರತ್ವಾತ್' ಎಂಬಲ್ಲಿ ಮನುಷ್ಯತ್ವ ವಿಶೇಷಣದ ಅರ್ಥವೇನು ?

तत्वप्रदीपः – अथेदानीं प्रसङ्गादधिकारचिन्ता क्रियते । तिर्यगादिव्या-वृत्त्यपेक्षयैव मनुष्यत्वविशेषणमुक्तम् । नतु देवादिव्यावृत्त्यपेक्षयाऽपीति मन्तव्यम् ।

ಈ ಅಧಿಕರಣದಲ್ಲಿ ಪ್ರಾಸಂಗಿವಾಗಿ ವೇದವಿದ್ಯೆಯಲ್ಲಿ ಯಾರು ಅಧಿಕಾರಿಗಳು ? ಎಂಬ ಚಿಂತನೆಯನ್ನು ಮಾಡಲಾಗಿದೆ. ಹಿಂದಿನ ಅಧಿಕರಣವನ್ನು 'ಮನುಷ್ಯಾಧಿಕಾರತ್ವಾತ್' ಎಂಬ ಸೂತ್ರದಲ್ಲಿ ಮನುಷ್ಯತ್ವವನ್ನು ವಿಶೇಷಣವನ್ನಾಗಿ ನೀಡಿದ್ದಕ್ಕೆ ಮನುಷ್ಯರಿಗಿಂತ ನೀಚವಾದ ಪ್ರಾಣಿಗಳನ್ನಷ್ಟೇ ವ್ಯಾವೃತ್ತಿ ಮಾಡಬೇಕು. ಹೊರತು, ಮನುಷ್ಯರಿಗಿಂತಲೂ ಉತ್ತಮರಾದ ದೇವಾದಿಗಳನ್ನು ವ್ಯಾವೃತ್ತಿ ಮಾಡಬಾರದೆಂದು ತಿಳಿಯಬೇಕು.

ಎಲ್ಲಾ ಮನುಷ್ಯರು ಅಧಿಕಾರಿಗಳಲ್ಲ

तत्वप्रदीपः – न खत्र मनुष्यशब्देन मनुष्यमात्रविवक्षा । मर्त्योत्तमानामपि साधकानां मननादिशीलानां मनुष्यत्वात् । अत एव हि तदुपरीति सूत्रपदं मनुष्यत्वादुपरीति व्याचष्टे – तदुपर्यपि बादरायणः सम्भवात् ।।

ಮನುಷ್ಯಾಧಿಕಾರತ್ವಾತ್ ಎಂಬಲ್ಲಿರುವ ಮನುಷ್ಯ ಶಬ್ದದಿಂದ ಸಕಲ ಮನುಷ್ಯರನ್ನೂ ಕೂಡ ವಿವಕ್ಷಿಸಬಾರದು. ಮನುಷ್ಯೋತ್ತಮರಲ್ಲಿಯೂ ಸಾಧಕರಾದ ಮನನಾದಿಶೀಲರಾದ ಮನುಷ್ಯರನ್ನಷ್ಟೇ ವಿವಕ್ಷಿಸಬೇಕು. ಆದ್ದರಿಂದಲೇ 'ತದುಪರ್ಯಪಿ ಬಾದರಾಯಣಃ ಸಂಭವಾತ್' ಎಂಬ ಸೂತ್ರದಲ್ಲಿರುವ 'ತದುಪರಿ' ಎಂಬ ಪದಕ್ಕೆ 'ಮನುಷ್ಯತ್ವಾತ್ ಉಪರಿ' ಎಂಬರ್ಥವನ್ನು ಭಾಷ್ಯಕಾರರು ಹೇಳಿದ್ದಾರೆ. 'ತದುಪರ್ಯಪಿ ಬಾದರಾಯಣಃ ಸಂಭವಾತ್' ಇತ್ಯಾದಿಯಾಗಿ.

ದೇವತಾ ಪದವಿಯ ಅನಂತರವೂ ಅಧಿಕಾರವಿದೆ

तत्वप्रदीपः – साधकानां सतां इन्द्रादिपदयोग्यानां स्वपदप्राप्तिकारणभूत-विद्याकर्मसामग्रीयोगेन तत्तत्पदप्राप्तेरुपरितनकालेऽपि वेदविद्यायामधिकरोऽस्तीति भगवान्बादरायणो वक्ति ।

'ತದುಪರ್ಯಪಿ ಬಾದರಾಯಣಃ ಸಂಭವಾತ್' ಎಂಬ ಸೂತ್ರಭಾಷ್ಯದಲ್ಲಿ 'ತದುಪರಿ' ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾರೆ. ಇದರ ಅಭಿಪ್ರಾಯ ಹೀಗಿದೆ - ಸಾಧಕರಾದ ಇಂದ್ರಾದಿಪದವಿಗಳಿಗೆ ಯೋಗ್ಯರಾದ ದೇವತೆಗಳಿಗೆ ತಮ್ಮ ಪದವಿಯ ಪ್ರಾಪ್ತಿಗೆ ಕಾರಣೀಭೂತವಾದ ವಿದ್ಯೆ, ಕರ್ಮ ಮೊದಲಾದ ಸಾಮಗ್ರಿಗಳಿಂದ ಆಯಾ ಪದವಿಗಳು ಪ್ರಾಪ್ತವಾಗಿವೆ. ತದನಂತರದ ಕಾಲದಲ್ಲಿಯೂ ವೇದವಿದ್ಯೆಯಲ್ಲಿ ಆಯಾ ದೇವತೆಗಳಿಗೆ ಅಧಿಕಾರವಿದೆ ಎಂಬುದಾಗಿ ಭಗವಾನ್ ಬಾದರಾಯಣರು ಹೇಳುತ್ತಿದ್ದಾರೆ ಎಂದು.

'ಬಾದರಾಯಣಃ' ಎಂಬ ಪದಪ್ರಯೋಗದ ಸ್ವಾರಸ್ಯ

तत्वप्रदीपः – तदधिकारसन्देहापोहातितात्पर्यज्ञापनार्थमधिकाराधिक्य-

ज्ञप्तिदार्ढ्यार्थं च बादरायणः स्वयमेव वक्तीत्याह – ननु नैवं भाष्यकार आह। सत्यम् । अनुक्तोऽपि तदभिप्रायो वर्ण्यते । सूत्रसिद्धं हि बादरायणपदम् । ''यत्रानवसोऽन्यत्र'' इत्युक्तन्यायसिद्धं वक्तिपदम् । नहि महतामतिस्पष्टार्थ-व्याख्यानचापलशीलता भवति । सर्वत्र चानुसन्धेयोऽयं न्यायः, यत्र सूत्रपदानि मुखतः सिद्धार्थानि ।

ಸೂತ್ರದಲ್ಲಿ 'ಬಾದರಾಯಣಃ' ಎಂಬ ಪದಪ್ರಯೋಗದ ಸ್ವಾರಸ್ಯ ಹೀಗಿದೆ - ದೇವತೆಗಳಿಗೆ ವೇದವಿದ್ಯೆಯ ಅಧಿಕಾರದಲ್ಲಿ ಸಂದೇಹದ ಲೇಶವನ್ನೂ ಕೂಡ ಮಾಡಬಾರದೆಂಬ ಮಹಾತಾತ್ಪರ್ಯವನ್ನು ತಿಳಿಸುವ ಮೂಲಕ ಮನುಷ್ಯರಿಗಿಂತಲೂ ಹೆಚ್ಚಿನ ಅಧಿಕಾರವು ದೇವತೆಗಳಿಗಿದೆ ಎಂಬುದರ ದಾರ್ಢ್ಯಕ್ಕಾಗಿ 'ಬಾದರಾಯಣಃ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಸ್ವತಃ ಬಾದರಾಯಣರೇ ದೇವತೆಗಳಿಗೆ ಅಧಿಕಾರವಿದೆ ಎಂದು ಹೇಳಿದ ಮೇಲೆ ವೇದವಿದ್ಯೆಯಲ್ಲಿ ದೇವತೆಗಳಿಗೆ ಅಧಿಕಾರವಿಲ್ಲವೆಂಬ ವಿಷಯದಲ್ಲಿ ಸಂದೇಹಲೇಶವೂ ಕೂಡ ಇಲ್ಲ ಎಂದಭಿಪ್ರಾಯ.

ಭಾಷ್ಯಕಾರರು 'ಬಾದರಾಯಣಃ' ಎಂಬ ಪದಕ್ಕೆ ಹೀಗೆ ವ್ಯಾಖ್ಯಾನ ಮಾಡಿಲ್ಲವಲ್ಲ ? ಹೌದು ! ಭಾಷ್ಯಕಾರರು ಹೇಳದಿದ್ದರೂ ಅವರ ಅಭಿಪ್ರಾಯವನ್ನು ನಾವು ವರ್ಣಿಸುತ್ತಿದ್ದೇವೆ. ಸೂತ್ರದಲ್ಲಿರುವ 'ಬಾದರಾಯಣಃ' ಎಂಬ ಪದದಿಂದಲೇ ಈ ವಿಷಯವು ಮನದಟ್ಟಾಗುತ್ತಿದೆ. 'ಯತ್ರಾನವಸರೋऽನ್ಯತ್ರ' ಎಂಬ ನ್ಯಾಯದಿಂದ ಇದು ಸ್ಪಷ್ಟವಾಗುತ್ತದೆ. ಮಹಾಜನರಿಗೆ ಅತ್ಯಂತ ಸ್ಪಷ್ಟವಾದ ಅರ್ಥವನ್ನು ವ್ಯಾಖ್ಯಾನ ಮಾಡುವ ಚಾಪಲ್ಯಸ್ವಭಾವ ಇರುವುದಿಲ್ಲವಷ್ಟೇ. ಈ ನ್ಯಾಯವನ್ನು ಎಲ್ಲೆಡೆಯೂ ಅನುಸಂಧಾನ ಮಾಡಿಕೊಳ್ಳಬೇಕು. ಎಲ್ಲಿ ಸೂತ್ರದಲ್ಲಿರುವ ಪದದಿಂದ ಅರ್ಥವು ಮುಖತಃ ಸಿದ್ಧವಾಗುತ್ತದೋ, ಅದು ಭಾಷ್ಯಕಾರರಿಗೆ ಸಮ್ಮತವೇ ಆಗಿರುತ್ತದೆಂದು ತಿಳಿಯಬೇಕು.

ವಿಶೇಷ ವಿಚಾರ - ಒಂದು ವಿಮರ್ಶೆ

ಕ್ಲಿಷ್ಟ ಪ್ರಶ್ನೆ - ತತ್ತ್ವಪ್ರಕಾಶಿಕಾದಲ್ಲಿ 'ವಿಪ್ರತಿಪತ್ತಿಸೂಚನಾಯ ಬಾದರಾಯಣಪದಮ್' ಎಂಬ ವಾಕ್ಯವನ್ನುಪ್ರಯೋಗಿಸಿದ್ದಾರೆ. ಇದನ್ನು ನೋಡಿದಾಗ ಸೂತ್ರಕಾರರು 'ಬಾದರಾಯಣಃ' ಎಂಬ ಪದದಿಂದ ವಿಪ್ರತಿಪತ್ತಿಯನ್ನು ಸೂಚನೆ ಮಾಡಿದ್ದಾರೆ ಎಂಬರ್ಥವು ತಿಳಿಯುತ್ತದೆ.

ಆದರೆ ಇದಕ್ಕೆ ಗುರ್ವರ್ಥದೀಪಿಕೆಯಲ್ಲಿ ಶ್ರೀವಾದಿರಾಜರು 'ವಿಪ್ರತಿಪತ್ತಿ' ಎಂಬ ಪದಕ್ಕೆ 'ವಿವಿಧಾ ಪ್ರತಿಪತ್ತಿಃ' ಎಂದು ವ್ಯಾಖ್ಯಾನ ಮಾಡಿದ್ದಾರೆ. ಬಾದರಾಯಣರ ಅಭಿಪ್ರಾಯವು ಒಂದು ಥರ. ಜೈಮಿನ್ಯಾದಿಗಳ ಅಭಿಪ್ರಾಯ ಮತ್ತೊಂದು ಥರ. ಎಂದು ಗುರ್ವರ್ಥದೀಪಿಕೆಯ ವಾಕ್ಯವನ್ನು ನೋಡಿದಾಗ ತಿಳಿಯುತ್ತದೆ. ಆದರೆ ಪಂಡಿತಾಚಾರ್ಯರ ಅಭಿಪ್ರಾಯವೇ ಬೇರೆ ಇದೆ - 'ದೇವತೆಗಳಿಗೆ ವೇದವಿದ್ಯಾಧಿಕಾರ ಇದಯೆಂಬುದನ್ನು ಸ್ವತಃ ಬಾದರಾಯಣರೇ ಹೇಳುತ್ತಿದ್ದಾರೆ. ಹೀಗಿರುವಾಗ ಅವರಿಗೆ ಅಧಿಕಾರವಿದೆಯೋ, ಇಲ್ಲವೋ ? ಎಂಬ ವಿಷಯದಲ್ಲಿ ಸಂದೇಹಲೇಶವೂ ಬೇಡ ಎಂದು ತಿಳಿಸಲು 'ಬಾದರಾಯಣಃ' ಎಂಬ ಪದವನ್ನು ಪ್ರಯೋಗಿಸಲಾಗಿದೆ ಎಂದು. ಹಾಗಾದರೆ ತತ್ವಪ್ರಕಾಶಿಕೆಯ ಮಾತು ತತ್ವಪ್ರದೀಪಕ್ಕೆ ವಿರುದ್ಧವಾಗುತ್ತದೆ ಅಲ್ಲವೇ?

ಸಮಾಧಾನ - ತತ್ವಪ್ರಕಾಶಿಕೆಯಲ್ಲಿರುವ 'ವಿಪ್ರತಿಪತ್ತಿಸೂಚನಾಯ' ಎಂಬ ಪದಕ್ಕೆ 'ವಿಶೇಷಾ ಪ್ರತಿಪತ್ತಿಃ' ಎಂಬ ನಿಷ್ಪತ್ತಿಯನ್ನು ಮಾಡಿದಾಗ ವಿರೋಧವಿಲ್ಲ. 'ಬಾದರಾಯಣಃ' ಎಂಬ ಪದದಿಂದ ವಿಶೇಷ ಪ್ರತಿಪತ್ತಿಯನ್ನು ಸೂಚನೆ ಮಾಡಿದ್ದಾರೆಂಬ ಅರ್ಥವು ತಿಳಿಯುತ್ತದೆ. ಇದರಿಂದ ದೇವತೆಗಳಿಗೆ ವೇದವಿದ್ಯಾಧಿಕಾರವಿದೆ ಎಂಬ ವಿಷಯದಲ್ಲಿ ಬಾದರಾಯಣರೇ ಸ್ವತಃ ಹೇಳಿದ್ದಾರೆ. ಈ ವಿಶೇಷಪ್ರತಿಪತ್ತಿಯನ್ನು ತೋರಿಸುವುದಕ್ಕಾಗಿ 'ಬಾದರಾಯಣ' ಪದವು ಸಾರ್ಥಕವಾಗಿದೆ ಎಂಬರ್ಥವನ್ನೇ ತತ್ವಪ್ರಕಾಶಿಕೆಗೂ ಹೇಳಿದಂತಾಗುತ್ತದೆ. ಆದ್ದರಿಂದ ತತ್ವಪ್ರಕಾಶಿಕಾಕ್ಕೂ, ತತ್ವಪ್ರದೀಪಕ್ಕೂ ವಿರೋಧವು ಬರುವುದಿಲ್ಲ.

ಇನ್ನೂ ಹೆಚ್ಚಿನ ವಿಚಾರವನ್ನು ವಿದ್ವಾಂಸರು ಮಾಡಬೇಕು.

ಕೆಲವು ತಿರ್ಯಕ್ ಪ್ರಾಣಿಗಳಿಗೂ ವೇದವಿದ್ಯಾಧಿಕಾರವಿದೆ

तत्वप्रदीपः – तिर्यगादीनां तिर्यक्स्थावाराणाम् । तेषामपीत्यादिरपिपदव्याख्या । तेषां मध्येऽपि येषु विशिष्टबुद्धिवागादि-भावस्तेष्वविरोधो विशेषलक्षणभावे निषेधाभवात् । दृश्यन्ते हि जरितार्यादयस्तिर्यञ्चोऽपि अयमग्ने जरिता'' इत्यादिसूक्तद्रष्टारः ।।

'ತಿರ್ಯಗಾದೀನಾಂ' ಎಂಬ ಭಾಷ್ಯದಲ್ಲಿರುವ ಆದಿಪದದಿಂದ ತಿರ್ಯಕ್ ಪ್ರಾಣಿಗಳ ಜೊತೆ ವೃಕ್ಷಾದಿ ಸ್ಥಾವರಗಳನ್ನೂ ಕೂಡ ವಿವಕ್ಷಿಸಬೇಕು. 'ತೇಷಾಮಪಿ' ಎಂಬ ಭಾಷ್ಯದಲ್ಲಿರುವ ಅಪಿ

ಪದವು ಸೂತ್ರದಲ್ಲಿರುವ ಅಪಿ ಪದದ ವ್ಯಾಖ್ಯಾನ ರೂಪವಾಗಿದೆ. ಆ ತಿರ್ಯಗಾದಿ ಪ್ರಾಣಿಗಳ ಮಧ್ಯದಲ್ಲೂ ಕೂಡ ಯಾವ ಪ್ರಾಣಿಗಳಿಗೆ ವಿಶಿಷ್ಟಬುದ್ಧಿ, ವಾಕ್‌ಶಕ್ತಿ ಮೊದಲಾದವುಗಳು ಇವೆಯೋ, ಅಂಥ ಪ್ರಾಣಿಗಳಿಗೆ ವೇದವಿದ್ಯಾಧಿಕಾರವನ್ನು ಹೇಳಲು ಯಾವುದೇ ವಿರೋಧವಿಲ್ಲ. ವೇದವಿದ್ಯಾಧಿಕಾರಕ್ಕೆ ವಿಶೇಷ ಲಕ್ಷಣವಿದ್ದರೆ ನಿಷೇಧವಿಲ್ಲವೆಂದು ತಿಳಿಯಬೇಕು. ಜರಿತಾರಿಪಕ್ಷಿ, ಮೊದಲಾದ ತಿರ್ಯಕ್ ಪ್ರಾಣಿಗಳಲ್ಲೂ 'ಅಯಮಗ್ನಿ ಜರಿತಾ' ಇತ್ಯಾದಿ ವೇದದ್ರಷ್ಟೃತ್ವವು ಕಂಡಿದೆ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ತ್ವಪ್ರಕಾಶಿಕಾ

ಈ ಅಧಿಕರಣದಲ್ಲಿ ದೇವತೆಗಳಿಗೆ ವೇದಾಧಿಕಾರತ್ವವನ್ನು ಸಮರ್ಥಿಸಲಾಗುತ್ತಿದೆ

तत्त्वप्रकाशिका – ।। तदुपर्यपि बादरायणः सम्भवात् ।।

अत्र देवानां ब्रह्मविद्याऽधिकारसमर्थनादस्ति शास्त्रसङ्गतिः । प्रासङ्गिकत्वान्नाध्यायादिसङ्गतिर्गवेषणीया । श्रुत्यादिसङ्गतिं विषयसंशय-तद्बीजानि सूचयति ।। मनुष्याणामिति ।।

ಈ ಅಧಿಕರಣದಲ್ಲಿ ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆಯೆಂದು ಸಮರ್ಥಿಸುತ್ತಿದ್ದಾರೆ. ಆದ್ದರಿಂದಲೇ ಶಾಸ್ತ್ರಸಂಗತಿಯಿರುತ್ತದೆ ಎಂದು ತಿಳಿಯಬೇಕು. ಪ್ರಾಸಂಗಿಕವಾಗಿ ದೇವತೆಗಳಿಗೆ ವೇದವಿದ್ಯಾಧಿಕಾರವಿದೆ ಎಂದು ಸಮರ್ಥನೆ ಮಾಡುತ್ತಿರುವುದರಿಂದ ಯಾವುದೇ ಶಬ್ದಗಳ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡದಿರುವುದರಿಂದ, ಅಧ್ಯಾಯಸಂಗತಿಯನ್ನಾಗಲಿ, ಪಾದಸಂಗತಿಯನ್ನಾಗಲಿ ಅನ್ವೇಷಣೆ ಮಾಡಬೇಕಾಗಿಲ್ಲ. ಆದರೆ, ಶ್ರುತಿಸಂಗತಿ-ಅಧಿಕರಣಸಂಗತಿಗಳು ಇರುತ್ತವೆ. ಭಾಷ್ಯಕಾರರು 'ಮನುಷ್ಯಾಣಾಮ್' ಇತ್ಯಾದಿ ವಾಕ್ಯಗಳಿಂದ ಶ್ರುತಿಸಂಗತಿ, ಅಧಿಕರಣಸಂಗತಿ, ವಿಷಯ, ಸಂಶಯ, ಸಂಶಯಬೀಜ ಇವುಗಳನ್ನು ಸೂಚನೆ ಮಾಡುತ್ತಿದ್ದಾರೆ.

'ವಿಶ್ವೇದೇವಾ ಉಪಾಸತೇ' ಎಂಬ ವಾಕ್ಯಕ್ಕೆ ಪ್ರಾಮಾಣ್ಯ ಸಮರ್ಥನೆ

तत्वप्रकाशिका – ''मनुष्याधिकारत्वात्'' इति मनुष्याणामेव वेदविद्याधिकार इत्युक्तम् । स च यदि न देवानां स्यात्तदा 'विश्वेदेवा उपासते' इत्यादिश्रुत्यप्रमाण्यं प्रसज्येत इत्यवश्यं विचार्यः । स वेदविद्याधिकारो विषयः।

ಹಿಂದಿನ ಅಧಿಕರಣದಲ್ಲಿ 'ಮನುಷ್ಯಾಧಿಕಾರತ್ವಾತ್' ಎಂಬ ಪದದಿಂದ, ಮನುಷ್ಯರಿಗೆ ಮಾತ್ರ ವೇದವಿದ್ಯೆಯಲ್ಲಿ ಅಧಿಕಾರ ಎಂದು ಹೇಳಿದರು. ಒಂದು ವೇಳೆ ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ಹೇಳಿದರೆ, 'ವಿಶ್ವೇದೇವಾ ಉಪಾಸತೇ' ಇತ್ಯಾದಿ ಶ್ರುತಿಗಳಿಗೆ ಅಪ್ರಾಮಾಣ್ಯದೋಷವು ಬರುತ್ತದೆ. ಆದ್ದರಿಂದ ಅವಶ್ಯವಾಗಿ ದೇವತೆಗಳಿಗೆ ಅಧಿಕಾರವಿದೆಯೋ, ಇಲ್ಲವೋ ? ಎಂಬುದನ್ನು ವಿಚಾರ ಮಾಡಬೇಕು. ಅಂತಹ ವೇದವಿದ್ಯಾಧಿಕಾರವೇ ಈ ಅಧಿಕರಣದ ವಿಷಯವಾಗಿದೆ.

ಅಧಿಕರಣದ ಸಂದೇಹ

तत्वप्रकाशिका – देवानामस्ति न वेति सन्देहः । मनुष्याणामेवेत्युक्तिर्विश्वेदेवा उपासत इति श्रुतिश्च सन्देहबीजमिति भावः ।

ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆಯೋ, ಇಲ್ಲವೋ ? ಎಂಬುದೇ ಸಂದೇಹ. 'ಮನುಷ್ಯಾಣಾಮೇವ' ಎಂಬ ವಚನವು ಮನುಷ್ಯರಿಗೆ ಮಾತ್ರ ಅಧಿಕಾರವಿದೆ ಎನ್ನುತ್ತಿದೆ. 'ವಿಶ್ವೇದೇವಾ ಉಪಾಸತೇ' ಎಂಬ ಶ್ರುತಿಯು ದೇವತೆಗಳಿಗೂ ವೇದವಿದ್ಯೆಯಲ್ಲಿ ಅಧಿಕಾರವಿದೆ ಎಂದು ಹೇಳುತ್ತಿದೆ. ಹೀಗೆ ವಿರುದ್ಧವಾದ ಎರಡು ವಾಕ್ಯಗಳು ಸಂದೇಹಕ್ಕೆ ಕಾರಣವಾಗಿದೆ.

ವಾಕ್ಯ ಹಾಗೂ ಶ್ರುತ್ಯುಕ್ತಿಗಳು

तत्वप्रकाशिका – नच श्रुत्युक्त्योरसाम्यादसन्देहबीजत्वम् । उक्तेरप्यङ्गुष्ठमात्रश्रुतिमूलत्वात् ।

'ಮನುಷ್ಯಾಣಾಮೇವ' ಎಂಬ ಕೇವಲ ವಾಕ್ಯಕ್ಕೂ 'ವಿಶ್ವೇದೇವಾ ಉಪಾಸತೇ' ಎಂಬ ಶ್ರುತ್ಯುಕ್ತಿಗೂ ಸಾಮ್ಯವಿಲ್ಲದ ಕಾರಣ, ಸಂದೇಹಬೀಜವಿಲ್ಲವೆಂದು ಹೇಳಬಾರದು. ಏಕೆಂದರೆ, ಭಾಷ್ಯೋಕ್ತವಾದ ವಚನಕ್ಕೆ 'ಅಂಗುಷ್ಠಮಾತ್ರಃ ಪುರುಷಃ' ಎಂಬ ಶ್ರುತಿಮೂಲತ್ವವಿರುತ್ತದೆ.

ದೇವತೆಗಳಿಗೆ ವೇದಾಧಿಕಾರವಿಲ್ಲವೆಂದು ಪೂರ್ವಪಕ್ಷ

तत्वप्रकाशिका – न देवानां वेदविद्याधिकार इति पूर्वः पक्षः । तथाहि । किं देवा अनादिनित्या उत विद्यादिना पदप्राप्तिमुक्तिमन्तः ।

ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ಪೂರ್ವಪಕ್ಷ. ಅದು ಹೀಗೆ - ದೇವತೆಗಳು ಅನಾದಿನಿತ್ಯರೋ, ಅಥವಾ ಬ್ರಹ್ಮವಿದ್ಯೆ ಮೊದಲಾದ ಸಾಧನಾನುಷ್ಠಾನಗಳಿಂದ ದೇವತಾಪದವನ್ನು ಮತ್ತು ಮುಕ್ತಿಯನ್ನು ಅವರು ಹೊಂದುತ್ತಾರೋ? ಎಂಬ ಪ್ರಶ್ನೆಗೆ ಉತ್ತರಿಸಬೇಕು.

'ಅರ್ಥೀ ಸಮರ್ಥೋ ವಿದ್ವಾನಧಿಕ್ರಿಯತೇ'

तत्वप्रकाशिका – आद्ये न वेदविद्याधिकारः । अर्थी समर्थो विद्वानधिक्रियत इति न्यायात् । तेषां चार्थित्वाभावात् । न ह्यनादितः प्राप्तपदानां मोक्षशून्यानां च विद्याभिः प्रयोजनमस्ति येनार्थिता स्यात् ।

ಪ್ರಥಮಪಕ್ಷದಲ್ಲಿ ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವನ್ನು ನಿರ್ವಹಿಸಲಾಗದು. ಏಕೆಂದರೆ, 'ಅರ್ಥೀ ಸಮರ್ಥೋ ವಿದ್ವಾನ್ ಅಧಿಕ್ರಿಯತೇ' ಎಂದರೆ ಪುರುಷಾರ್ಥವನ್ನು ಅಪೇಕ್ಷಿಸುವ, ಅನುಷ್ಠಾನವನ್ನು ಮಾಡಲು ಸಮರ್ಥನಾದ, ಜ್ಞಾನಿಯಾದ ವ್ಯಕ್ತಿಯೇ ವೇದವಿದ್ಯೆಯಲ್ಲಿ ಅಧಿಕಾರಿಯಾಗುತ್ತಾನೆ ಎಂಬ ನ್ಯಾಯವಿರುತ್ತದೆ. ದೇವತೆಗಳಿಗೆ ಪುರುಷಾರ್ಥದ ಅಪೇಕ್ಷೆಯೇ ಕೂಡುವುದಿಲ್ಲ. ಏಕೆಂದರೆ, ಅನಾದಿಕಾಲದಿಂದಲೇ ದೇವತಾಪದವಿಯನ್ನು ಅವರು ಪಡೆದಿರುತ್ತಾರೆ. ಮತ್ತು, ದೇವತಾಪದವಿಯೂ ನಿತ್ಯವಾಗಿರುವುದರಿಂದ ಮೋಕ್ಷವೂ ಸಹ ಅವರಿಗೆ ಇರುವುದಿಲ್ಲ. ಹೀಗಿರುವಾಗ, ಬ್ರಹ್ಮವಿದ್ಯೆಯಿಂದ ದೇವತೆಗಳಿಗೆ ಯಾವುದೇ ಪ್ರಯೋಜನವಿಲ್ಲ. ಆದ್ದರಿಂದಲೇ ಅವರಿಗೆ ಅರ್ಥಿತ್ವವು ಕೂಡುವುದಿಲ್ಲ.

ದೇವೋಪಾಸ್ಯತ್ವಲಿಂಗವು ವಿಷ್ಣುವಿನಲ್ಲಿ ಕೂಡುವುದಿಲ್ಲವೆಂದು ಪೂರ್ವಪಕ್ಷ

तत्वप्रकाशिका – न द्वितीयः । अमराणां मुक्त्याद्यङ्गीकारे कर्मादिविरोधापातात् । अतो देवानां वेदविद्याधिकाराभावान्न तदुपास्यत्वलिङ्गं विष्णोः सम्भवति।

ಇನ್ನು ಸಾಧನಾನುಷ್ಠಾನದಿಂದ ದೇವತಾಪದವಿಯನ್ನು ಹೊಂದಿರುತ್ತಾರೆಂಬ ಎಂಬ ಎರಡನೇ ಪಕ್ಷವೂ ಸಹ ಕೂಡುವುದಿಲ್ಲ. ಏಕೆಂದರೆ, ದೇವತೆಗಳಿಗೆ ದೇವತಾಪದವಿ, ಮುಕ್ತಿ ಮೊದಲಾದವುಗಳನ್ನು ಅಂಗೀಕಾರ ಮಾಡಿದರೆ, ಕರ್ಮಾದಿಗಳ ವಿರೋಧವು ಬರುತ್ತದೆ. ಇಲ್ಲಿಯ ತನಕ ದೇವತಾಪದವಿಯನ್ನು ಹೊಂದಿಲ್ಲ, ಮೋಕ್ಷವನ್ನು ಹೊಂದಿಲ್ಲ ಎಂದು ಹೇಳುವುದಾದರೆ ದೇವತಾಪದವಿಯನ್ನೇ ಹೊಂದದ ದೇವತೆಯನ್ನು ಉದ್ದೇಶಿಸಿ ಮಾಡುವಂತಹ ಕರ್ಮಗಳೆಲ್ಲವೂ ವ್ಯರ್ಥವಾಗುತ್ತವೆ. ಆದ್ದರಿಂದ ದೇವತೆಗಳಿಗೆ ವೇದವಿದ್ಯಾಧಿಕಾರವು ಕೂಡುವುದಿಲ್ಲ. ಆದ್ದರಿಂದಲೇ, 'ದೇವೋಪಾಸ್ಯತ್ವ' ಎಂಬ ಲಿಂಗವನ್ನು ವಿಷ್ಣುವಿನಲ್ಲಿ ಸಮರ್ಥಿಸಲಾಗದು.

ಸಿದ್ಧಾಂತಸ್ಥಾಪನೆಗಾಗಿ ಸೂತ್ರಪ್ರವೃತ್ತಿ

तत्वप्रकाशिका – अथ सन्देहबीजं विघटयन् सिद्धान्तयितुं सूत्रमवतारयति – तिर्यगादीति ।।

ಹೀಗೆ ಭಾಷ್ಯಕಾರರು ಸಂದೇಹಬೀಜವನ್ನು ಪರಿಹಾರ ಮಾಡಿ ಸಿದ್ಧಾಂತವನ್ನು ಸ್ಥಾಪಿಸುವುದಕ್ಕಾಗಿ ಸೂತ್ರಕ್ಕೆ ಅವತಾರಿಕೆ ನೀಡುತ್ತಿದ್ದಾರೆ, 'ತಿರ್ಯಗಾದಿ' ಎಂಬುದರಿಂದ.

ವಿಶಿಷ್ಟಬುದ್ಧಿ ಇಲ್ಲದ ಪ್ರಾಣಿಗಳಿಗಷ್ಟೇ ವೇದಾಧಿಕಾರವಿಲ್ಲ

तत्वप्रकाशिका – मनुष्यपदं विशिष्टबुद्ध्यादिरहिततिर्यगादिव्यावृत्त्यर्थं प्रयुक्तं, नतु देवतादिव्यावृत्त्यर्थमित्यभिप्रेत्य देवानामधिकारमाहाऽचार्यो बादरायण इत्यर्थः ।

ಹಿಂದಿನ ಸೂತ್ರದಲ್ಲಿ 'ಮನುಷ್ಯ' ಎಂಬ ಪದವನ್ನು ಬಳಸಲು ಕಾರಣ ಹೀಗಿದೆ - 'ಯಾವ ಪಶು-ಪಕ್ಷಿಗಳಿಗೆ ವಿಶಿಷ್ಟಬುದ್ಧಿಯು ಇರುವುದಿಲ್ಲವೋ, ಅಂಥಹ ಪ್ರಾಣಿಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲ' ಹೀಗೆ ತಿರ್ಯಗ್-ಜಂತುಗಳಿಗೆ ವೇದವಿದ್ಯಾಧಿಕಾರವನ್ನು ನಿರಾಕರಿಸುವುದಕ್ಕಾಗಿಯೇ 'ಮನುಷ್ಯ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಹೊರತು, ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂಬುದನ್ನು ಸಮರ್ಥಿಸುವುದಕ್ಕಾಗಿ ಅಲ್ಲ. ಈ ಅಭಿಪ್ರಾಯದಿಂದಲೇ, ದೇವತೆಗಳಿಗೆ ವೇದವಿದ್ಯಾಧಿಕಾರವಿದೆ ಎಂದು ಶ್ರೀಬಾದರಾಯಣರು ಹೇಳಿರುತ್ತಾರೆ.

ಭಾಷ್ಯದಲ್ಲಿ ಸೂತ್ರದ ವ್ಯಾಖ್ಯಾನ

तत्वप्रकाशिका – सूत्रं व्याचष्टे – तदिति ।। देवानामपि वेदविद्याधिकारो विद्यत एव । विशिष्टबुद्ध्यादेरधिकारोपयोगिनो देवेषु विद्यमानत्वेन तेषामधिकारसम्भवात् ।

ಸೂತ್ರವನ್ನು ಸ್ವತಃ ಭಾಷ್ಯಕಾರರು ವ್ಯಾಖ್ಯಾನ ಮಾಡುತ್ತಿದ್ದಾರೆ, 'ತತ್' ಇತ್ಯಾದಿಯಾಗಿ. ದೇವತೆಗಳಿಗೂ ಸಹ ವೇದವಿದ್ಯೆಯಲ್ಲಿ ಅಧಿಕಾರವಿದ್ದೇ ಇರುತ್ತದೆ. ಏಕೆಂದರೆ, ವೇದವಿದ್ಯೆಗೆ ಉಪಯೋಗಿಯಾದ ವಿಶಿಷ್ಟಬುದ್ಧಿಯು ದೇವತೆಗಳಲ್ಲಿ ಇರುತ್ತದೆ. ಆದ್ದರಿಂದ ಅವರಿಗೆ ಅಧಿಕಾರವಿದೆ.

ದೇವತೆಗಳಿಗೆ ಅರ್ಥಿತ್ವವೇ ಇಲ್ಲ

तत्वप्रकाशिका – नचोक्तप्रकारेण देवानामर्थित्वाभावात् सामर्थ्यविद्वत्ता-सत्त्वेऽप्यधिकाराभाव इति वाच्यम् ।

ಹಾಗಾದರೆ ಪೂರ್ವಪಕ್ಷದಲ್ಲಿ ಹೇಳಿದಂತೆ ದೇವತೆಗಳಿಗೆ ಅರ್ಥಿತ್ವವೇ ಇರುವುದಿಲ್ಲ. ಅವರಲ್ಲಿ ಸಾಮರ್ಥ್ಯ ಮತ್ತು ವಿದ್ವತ್ತುಗಳು ಇದ್ದರೂ, ಅರ್ಥಿತ್ವವಿಲ್ಲದ ಕಾರಣ ವೇದಾಧಿಕಾರ ಹೇಗೆ ಕೂಡುತ್ತದೆ? ಎಂಬ ಪ್ರಶ್ನೆಗೆ ಏನು ಉತ್ತರ ಎಂದು ಶಂಕಿಸಬಾರದು.

ಒಟ್ಟು ಸೂತ್ರದ ಅಭಿಪ್ರಾಯ

तत्वप्रकाशिका – विद्याकर्मभ्यां योग्यमनुष्याणां देवादित्वप्राप्त्यभ्युपगमेन विद्याभिस्तेषां मोक्षसिद्धेरिति भगवान् बादरायणो मन्यत इत्यर्थः ।

ಏಕೆಂದರೆ ಯೋಗ್ಯನಾದ ಮನುಷ್ಯನಿಗೆ ವಿದ್ಯೆ ಮತ್ತು ಕರ್ಮಾನುಷ್ಠಾನ ಇವುಗಳಿಂದ ದೇವತಾಪದವಿಯು ಪ್ರಾಪ್ತವಾಗುತ್ತದೆ ಎಂದು ಸಿದ್ಧಾಂತದಲ್ಲಿ ಅಂಗೀಕರಿಸಲಾಗಿದೆ. ಅಂತಹ ದೇವತಾಪದವಿಯನ್ನು ಹೊಂದಿರುವ ಮನುಷ್ಯನಿಗೆ ವೇದವಿದ್ಯೆಯಿಂದಲೇ ಮೋಕ್ಷವು ಪ್ರಾಪ್ತವಾಗುತ್ತದೆಂದು ಭಗವಾನ್ ಬಾದರಾಯಣರು ಅಭಿಪ್ರಾಯಪಡುತ್ತಾರೆ. ಇಷ್ಟು ಸೂತ್ರದ ಅಭಿಪ್ರಾಯ.

ಮತಭೇದ ಸೂಚನೆಗಾಗಿ 'ಬಾದರಾಯಣ' ಪದ ಪ್ರಯೋಗ

तत्वप्रकाशिका – विप्रतिपत्तिसूचनाय बादरायणपदम् । न देवा वेदविद्याधिकारिणोऽमनुष्यत्वात्तिर्यगादिवदित्यत आह – तिर्यगादीनामिति ।।

ಈ ವಿಷಯದಲ್ಲಿ ಮತಭೇದ ಸೂಚನೆಗಾಗಿ (ವಿಶೇಷಪ್ರತಿಪತ್ತಿಯನ್ನು ಸೂಚನೆ ಮಾಡುವುದಕ್ಕಾಗಿ) 'ಬಾದರಾಯಣ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. (ಇದರ ಬಗ್ಗೆ ತತ್ವಪ್ರದೀಪ ಅನುವಾದದಲ್ಲಿ ವಿಚಾರವಿದೆ)

'ದೇವಾಃ ನ ವೇದವಿದ್ಯಾಧಿಕಾರಿಣಃ, ಅಮನುಷ್ಯತ್ವಾತ್, ತಿರ್ಯಗಾದಿವತ್', ತಿರ್ಯಗಾದಿ ಪ್ರಾಣಿಗಳು ಮನುಷ್ಯರಾಗಿಲ್ಲ, ವೇದವಿದ್ಯೆಯಲ್ಲೂ ಸಹ ಅಧಿಕಾರವನ್ನು ಹೊಂದಿಲ್ಲ. ಅದರಂತೆ ದೇವತೆಗಳಲ್ಲೂ ಅಮನುಷ್ಯತ್ವವಿರುವ ಪ್ರಯುಕ್ತ ವೇದವಿದ್ಯೆಯಲ್ಲಿ ಅಧಿಕಾರವು ಕೂಡುವುದಿಲ್ಲ. ಹೀಗೆ, ಅನುಮಾನದಿಂದ ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂಬುದನ್ನು ಸಾಧಿಸ-ಬಹುದಲ್ಲವೆ? ಎಂಬ ಪ್ರಶ್ನೆಗೆ 'ತಿರ್ಯಗಾದೀನಾಂ' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ.

ಅಮನುಷ್ಯತ್ವ ಪ್ರಯುಕ್ತವಾಗಿ ಅಧಿಕಾರವನ್ನು ಅಲ್ಲಗಳೆಯಬಾರದು

तत्वप्रकाशिका – न तिर्यगादीनाममनुष्यत्वप्रयुक्तोऽधिकाराभावोऽपि तु विशिष्टबुद्ध्यादिराहित्यनिबन्धन एव । तथा च विशिष्टबुद्ध्यादिराहित्यं व्यावर्तमानं पक्षात्स्वव्याप्यमधिकाराभावं च व्यावर्तयतीति भावः ।

ಪಶುಪಕ್ಷಿಗಳಿಗೆ ಅಮನುಷ್ಯತ್ವಪ್ರಯುಕ್ತವಾಗಿ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ನಾವು ಹೇಳುತ್ತಿಲ್ಲ. ಹೊರತಾಗಿ ವೇದವಿದ್ಯೆಗೆ ಪ್ರಯೋಜಕವಾದ ವಿಶಿಷ್ಟಬುದ್ಧ್ಯಾದಿಗಳು ಅವುಗಳಿಗೆ ಇಲ್ಲದ ಕಾರಣ, ಅಧಿಕಾರವಿಲ್ಲವೆಂದು ಹೇಳುತ್ತಿದ್ದೇವೆ. ಆದ್ದರಿಂದ ವೇದವಿದ್ಯಾಧಿಕಾರವಿಲ್ಲವೆನ್ನಲು ಅಮನುಷ್ಯತ್ವವು ಪ್ರಯೋಜಕವಲ್ಲ. ವಿಶಿಷ್ಟಬುದ್ಧ್ಯಾದಿರಾಹಿತ್ಯವೇ ಪ್ರಯೋಜಕವಾಗಿದೆ.

ಇಂಥಹ ವಿಶಿಷ್ಟಬುದ್ಧಿರಾಹಿತ್ಯವು ದೇವತೆಗಳೆಂಬ ಪಕ್ಷದಿಂದ ವ್ಯಾವೃತ್ತವಾಗಿ ತನ್ನಿಂದ ವ್ಯಾಪ್ಯವಾದ ಅಧಿಕಾರಾಭಾವವನ್ನೂ ಕೂಡ ವ್ಯಾವೃತ್ತಿಮಾಡುತ್ತದೆ. ಅಂದರೆ, ಸಾಧ್ಯದ ಜೊತೆಗೆ ವ್ಯಾಪ್ತಿಯನ್ನು ಹೊಂದಿರುವ ವಿಶಿಷ್ಟಬುದ್ಧಿರಾಹಿತ್ಯವೆಂಬ ಉಪಾಧಿಯು ಪಕ್ಷದಲ್ಲಿಲ್ಲದ ಕಾರಣ, ಪಕ್ಷದಲ್ಲಿ ಸಾಧ್ಯವನ್ನೂ ಸಹ ಇಲ್ಲವೆಂದೇ ಸಾಧನೆ ಮಾಡುತ್ತದೆ. ಆದ್ದರಿಂದ ದೇವತೆಗಳಿಗೆ ವೇದಾಧಿಕಾರವಿದೆಯೆಂದೇ ಸಿದ್ಧವಾಗುತ್ತದೆ.

ವಿಶಿಷ್ಟಬುದ್ಧಿರಾಹಿತ್ಯವು ಉಪಾಧಿಯಾಗಲು ಸಾಧ್ಯವಿಲ್ಲ

तत्वप्रकाशिका – विशिष्टबुद्ध्यादिमतामपि तिरश्चां न वेदविद्याधिकार इति व्याप्तिविधुरोऽयमुपाधिरित्यत आह – तेषामिति ।।

ವಿಶಿಷ್ಟಬುದ್ಧಿಯಿರುವಂತಹ ಪಶುಪಕ್ಷಿಗಳಿಗೆ ವೇದವಿದ್ಯಾಧಿಕಾರವಿರುವುದಿಲ್ಲ. ಆದ್ದರಿಂದ, ವ್ಯಾಪ್ತಿರಹಿತವಾದ ಉಪಾಧಿಯು ಪಕ್ಷದಲ್ಲಿ ಸಾಧ್ಯವನ್ನು ವ್ಯಾವೃತ್ತಿ ಮಾಡಲು ಸಮರ್ಥವಾಗುವುದಿಲ್ಲವಲ್ಲವೇ?

ಅಭಿಪ್ರಾಯ ಹೀಗಿದೆ - ಸಾಧ್ಯ ಮತ್ತು ಉಪಾಧಿಗಳಿಗೆ ವ್ಯಾಪ್ತಿಯಿದ್ದಾಗ, ಉಪಾಧಿಯಿಲ್ಲದ ಪಕ್ಷದಲ್ಲಿ ಸಾಧ್ಯವನ್ನು ವ್ಯಾವೃತ್ತಿ ಮಾಡಬಹುದು. ಪ್ರಕೃತ, ಸಾಧ್ಯ ಮತ್ತು ಉಪಾಧಿಗಳಿಗೆ ವ್ಯಾಪ್ತಿಯೇ ಇಲ್ಲ. ಎಲ್ಲೆಲ್ಲಿ ವೇದವಿದ್ಯಾಧಿಕಾರಾಭಾವವಿದೆಯೋ, ಅಲ್ಲಲ್ಲಿ ವಿಶಿಷ್ಟಬುದ್ಧ್ಯಾದಿ-

ರಾಹಿತ್ಯವಿರುತ್ತದೆ ಎಂದು ಹೇಳಬೇಕು. ಆದರೆ ಪಶು-ಪಕ್ಷಿಗಳಲ್ಲಿ ವೇದವಿದ್ಯಾಧಿಕಾರವಿಲ್ಲದಿದ್ದರೂ ವಿಶಿಷ್ಟಬುದ್ಧಿ ಇರುವುದು ಕಂಡಿದೆ. ಹೀಗೆ, ವ್ಯಾಪ್ತಿಯು ವ್ಯಭಿಚರಿತವಾಗಿದೆ. ಆದ್ದರಿಂದ ವಿಶಿಷ್ಟಬುದ್ಧಿರಾಹಿತ್ಯವು ಉಪಾಧಿಯಾಗಲು ಸಾಧ್ಯವಿಲ್ಲ. ಈ ಶಂಕೆಯ ಪರಿಹಾರಕ್ಕಾಗಿ 'ತೇಷಾಮ್' ಇತ್ಯಾದಿ ಭಾಷ್ಯವು ಹೊರಟಿದೆ.

'ಅಧಿಕಾರಾಂಗೀಕಾರೇऽಪಿ' ಎಂಬುದನ್ನು ವಿವಕ್ಷಿಸಬೇಕು

तत्त्वप्रकाशिका – अविरोधोऽधिकाराङ्गीकारेऽपीति शेषः ।

ಭಾಷ್ಯದಲ್ಲಿ 'ಅವಿರೋಧಃ' ಎಂಬ ಪದದ ಮುಂದೆ 'ಅಧಿಕಾರಾಂಗೀಕಾರೇऽಪಿ' ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಅಂದರೆ ಪಶು-ಪಕ್ಷ್ಯಾದಿಗಳಿಗೆ ವೇದವಿದ್ಯಾಧಿಕಾರವನ್ನು ಒಪ್ಪಿದರೂ ಸಹ ವಿರೋಧವಿಲ್ಲವೆಂದು ಹೇಳಿದಂತಾಗುತ್ತದೆ.

ವಿರೋಧ ಏಕಿಲ್ಲ ?

तत्त्वप्रकाशिका – कथं तिरश्चां वेदविद्याधिकाराविरोध इति चेत् ।

ಪಶು-ಪಕ್ಷ್ಯಾದಿಗಳಿಗೆ ವೇದವಿದ್ಯಾಧಿಕಾರವನ್ನು ಒಪ್ಪಿದರೆ ವಿರೋಧವಿಲ್ಲವೆಂದು ಹೇಳುತ್ತಿದ್ದೀರಿ. ಇದು ಹೇಗೆ?

ಪಶ್ವಾದಿಗಳಿಗೆ ಅಧಿಕಾರವಿಲ್ಲವೆಂಬುದಕ್ಕೆ ಏನರ್ಥ ?

तत्त्वप्रकाशिका – किं निषेधात्तिरश्चामधिकारायोगोऽदर्शनाद्वा ।

ಈ ಪ್ರಶ್ನೆ ಮಾಡುವವರ ಅಭಿಪ್ರಾಯವೇನು ? ಪಶು-ಪಕ್ಷ್ಯಾದಿಗಳಿಗೆ ವೇದವಿದ್ಯಾಧಿಕಾರದ ನಿಷೇಧವಿರುವುದರಿಂದ ಅಧಿಕಾರವಿಲ್ಲವೆಂದೋ? ಅಥವಾ ವೇದವಿದ್ಯೆಯಲ್ಲಿ ಅಧಿಕಾರವಿರುವುದು ಎಲ್ಲೂ ಕಂಡಿಲ್ಲವೆಂದೋ? ಈ ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕು.

ವೇದವಿದ್ಯಾಧಿಕಾರಕ್ಕೆ ಪ್ರಯೋಜಕಧರ್ಮ ಯಾವುದು ?

तत्त्वप्रकाशिका – आद्यं दूषयति – निषेधेति ।। अनेन 'निषेधराहित्ये सति विशिष्टबुद्ध्यादिमत्त्वमधिकारे प्रयोजकम्' इति सूचितं भवति ।

ಪ್ರಥಮಪಕ್ಷವನ್ನು 'ನಿಷೇಧಾಭಾವಾತ್' ಎಂಬ ಭಾಷ್ಯದಿಂದ ದೂಷಿಸುತ್ತಿದ್ದಾರೆ. ಹೀಗೆ ಹೇಳಿದ್ದರಿಂದ, ನಿಷೇಧವಿಲ್ಲದಿದ್ದರೂ ವಿಶಿಷ್ಟಬುದ್ಧ್ಯಾದಿಮತ್ತ್ವವಿರುವುದೇ ವೇದವಿದ್ಯಾಧಿಕಾರಕ್ಕೆ ಪ್ರಯೋಜಕ ಧರ್ಮವೆಂದು ಸೂಚಿಸಿದಂತಾಗುತ್ತದೆ.

ವೇದಾಧಿಕಾರ ಶೂದ್ರಾದಿಗಳಿಗೆ ಹೇಗೆ ?

तत्वप्रकाशिका – तेन शूद्रादौ व्यभिचारपरिहारः । द्वितीयं निराह – दृश्यन्ते हीति ।। वेदाधिकारितयेति शेषः ।

ಇದರಿಂದ ವಿಶಿಷ್ಟಬುದ್ಧ್ಯಾದಿಗಳಿದ್ದರೂ ಶೂದ್ರಾದಿಗಳಿಗೂ ವೇದವಿದ್ಯಾಧಿಕಾರವನ್ನು ಒಪ್ಪಬಹುದಲ್ಲವೇ? ಎಂಬ ವ್ಯಭಿಚಾರವನ್ನು ಪರಿಹರಿಸಿದಂತಾಯಿತು. ಎರಡನೇ ಪಕ್ಷವನ್ನು 'ದೃಶ್ಯಂತೇ ಹಿ' ಎಂಬ ಭಾಷ್ಯದಿಂದ ನಿರಾಕರಿಸುತ್ತಿದ್ದಾರೆ. 'ವೇದವಿದ್ಯಾಧಿಕಾರಿತಯಾ' ಎಂಬುದನ್ನು ಇಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕು.

ಮನುಷ್ಯತ್ವವು ಉಪಾಧಿಯಾಗದು

तत्वप्रकाशिका – अनेनैव स्वप्रयुक्तानुमानस्य मनुष्यत्वोपाधिरप्यपोढो भवति ।। २६ ।।

ವಿಶಿಷ್ಟಬುದ್ಧ್ಯಾದಿಗಳನ್ನು ಹೊಂದಿರುವ ಪಶು-ಪಕ್ಷ್ಯಾದಿಗಳಿಗೂ ವೇದವಿದ್ಯಾಧಿಕಾರವಿದೆ ಎಂದು ಸಮರ್ಥನೆ ಮಾಡಿದ್ದರಿಂದಲೇ 'ದೇವಾಃ ವೇದವಿದ್ಯಾಧಿಕಾರಿಣಃ ವಿಶಿಷ್ಟಬುದ್ಧ್ಯಾದಿ-ಮತ್ತ್ವಾತ್' ಎಂಬ ಸಿದ್ಧಾಂತಿಗಳು ಪ್ರಯೋಗಿಸಿದ ಅನುಮಾನಕ್ಕೆ 'ಮನುಷ್ಯತ್ವ'ವು ಉಪಾಧಿಯಾಗಿದೆ ಎಂಬ ದೋಷವನ್ನೂ ನಿರಾಕರಿಸಿದಂತಾಯಿತು.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಹಿಂದಿನ ಸೂತ್ರದಲ್ಲಿ ಮನುಷ್ಯವನ್ನೇಕೆ ಪ್ರಯೋಗಿಸಿದರು ?

ಭಾವದೀಪಃ – तदुपर्यपि बादरायणः सम्भवात् ।।

अधिकारेति ।। योग्यतेत्यर्थः ।। प्रासङ्गिकत्वादिति ।। मनुष्येत्युक्त्या तिर्यगादिवद्देवानामपि नेति प्रसक्तस्य निवृत्त्यर्थत्वादित्यर्थः ।

'तदुपर्यपि बादरायणः संभवात्' ಎಂಬುದಾಗಿ ದೇವತಾಧಿಕರಣವು ಪ್ರಾರಂಭವಾಗುತ್ತಿದೆ. ತತ್ವಪ್ರಕಾಶಿಕೆಯಲ್ಲಿ 'ಅಧಿಕಾರಸಂವರ್ಧನಾತ್' ಎಂಬಲ್ಲಿರುವ ಅಧಿಕಾರಪದಕ್ಕೆ ಯೋಗ್ಯತೆ ಎಂದರ್ಥ. 'ಪ್ರಾಸಂಗಿಕತ್ವಾತ್' ಎಂಬುದಕ್ಕೆ ಹೀಗರ್ಥ - ಹಿಂದಿನ ವಾಮನಾಧಿಕರಣದ ಕೊನೆಯ ಸೂತ್ರದಲ್ಲಿ ಮನುಷ್ಯ ಪದದಿಂದ ತಿರ್ಯಗ್ ಪ್ರಾಣಿಗಳಿಗೆ ಹೇಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೋ, ಅದರಂತೆ ದೇವತೆಗಳಿಗೂ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂಬ ವಿಚಾರವು ಪ್ರಸಕ್ತವಾಗಿದೆ. ಇದನ್ನು ನಿರಾಕರಣೆ ಮಾಡುವುದು ಪ್ರಾಸಂಗಿಕವಾಗಿದೆ ಎಂದರ್ಥ.

ಮನುಷ್ಯಪದಕ್ಕೆ ವಿಸ್ತಾರ ವ್ಯಾಖ್ಯಾನ

ಭಾವದೀಪಃ – 'अधिकारश्च तद्वानिः प्रसङ्गादेव चिन्तितौ ।' इत्यनुभाष्योक्तेरिति भावः ।। नाध्यायादीति ।। साक्षादिति भावः । फलतस्तस्य सत्त्वात् । सङ्गतिपरत्वेन भाष्यं व्याचष्टे – मनुष्येति ।। मनुष्यपदस्य मनुष्यमात्रपरत्वेन व्याख्यानादाह – मनुष्याणामेवेति ।। तिर्यगादीत्यादेस्तात्पर्यम् – स चेति ।।

'ಅಧಿಕಾರಶ್ಚ ತದ್ವಾನಿಃ ಪ್ರಸಂಗಾದೇವ ಚಿಂತಿತೌ ।' ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆ. ಶೂದ್ರರಿಗೆ ಅಧಿಕಾರವಿಲ್ಲ ಎಂಬ ಎರಡು ವಿಚಾರಗಳು ಪ್ರಾಸಂಗಿಕವಾಗಿ ಪ್ರಸಕ್ತವಾಗಿವೆ ಎಂದು ಅನುವ್ಯಾಖ್ಯಾನದಲ್ಲಿಯೂ ಹೇಳಿದ್ದಾರೆ. ಟೀಕೆಯಲ್ಲಿ ಅಧ್ಯಾಯಾದಿಸಂಗತಿಗಳನ್ನು ಅನ್ವೇಷಣೆ

ಮಾಡಬೇಕಾಗಿಲ್ಲ ಎಂದು ಹೇಳಿದ್ದಾರೆ. ಅಂದರೆ, ನೇರವಾಗಿ ಅಧ್ಯಾಯಸಂಗತಿ, ಪಾದಗಳ ಸಂಗತಿಗಳಿರುವುದಿಲ್ಲ. ಆದರೆ, ಪರಂಪರೆಯಿಂದ ಫಲತಃ ಸಂಗತಿಗಳು ಇದ್ದೇ ಇರುತ್ತವೆ. ಭಾಷ್ಯವನ್ನು ಸಂಗತಿಪರವಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಮನುಷ್ಯಾಧಿಕಾರತ್ವಾತ್' ಇತ್ಯಾದಿ ಟೀಕೆಯಿಂದ. ಸೂತ್ರದಲ್ಲಿ 'ಮನುಷ್ಯಾಧಿಕಾರತ್ವಾತ್' ಎಂದು ಹೇಳಿದ್ದಾರೆ. ಇಲ್ಲಿರುವ ಮನುಷ್ಯಪದವು ಕೇವಲ ಮನುಷ್ಯರಿಗಷ್ಟೇ ಅಧಿಕಾರವಿರುತ್ತದೆಂದು ಹೇಳುತ್ತಿದೆಯೆಂದು ಹಿಂದೆ ವ್ಯಾಖ್ಯಾನ ಮಾಡಲಾಯಿತು. ಆದ್ದರಿಂದ 'ಮನುಷ್ಯಾಣಾಮೇವ' ಎಂದು ಟೀಕೆಯಲ್ಲಿ ಹೇಳಿದ್ದಾರೆ. 'ತಿರ್ಯಗಾದ್ಯಪೇಕ್ಷಯೈವ' ಇತ್ಯಾದಿ ಭಾಷ್ಯದ ವಾಕ್ಯವನ್ನು 'ಸ ಚ' ಎಂಬ ಟೀಕಾವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ.

ವ್ಯಾವರ್ತ್ಯವಾದ ಅಧಿಕರಣಕ್ಕಾಗಿ ಪೂರ್ವಪಕ್ಷ

ಭಾವದೀಪಃ – ಶ್ರುತೀತಿ ।। ಏತೇನಾಸ್ಯ ಪೂರ್ವೇಣಾಕ್ಷೇಪಿಕೀ ಸಙ್ಗತಿರ್ದರ್ಶಿತಾ । ತದುಪರೀತಿ ಸೌತ್ರೋಕ್ತಿಸೂಚಿತಸಾದಿತ್ವವ್ಯಾವರ್ತ್ಯಯುಕ್ತಿಂ ವಕ್ತುಂ ವಿಕಲ್ಪಯತಿ – **ಕಿಮಿತಿ ।।** ವಿಧ್ಯಾದಿನಾ ವಿಧ್ಯಾಕರ್ಮಭ್ಯಾಮ್ । 'ವಿರೋಧಃ ಕರ್ಮಣಿ' ಇತಿ ಸೂತ್ರಭಾಷ್ಯೋಕ್ತಮಾಹ – **ಅಮರಾಣಾಮಿತಿ ।।**

'ಶ್ರುತ್ಯಪ್ರಾಮಾಣ್ಯಂ' ಎಂದು ಹೇಳಿದ್ದರಿಂದ ಹಿಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ಆಕ್ಷೇಪಿಕೀ ಸಂಗತಿಯನ್ನು ತೋರಿಸಿದಂತಾಯಿತು. 'ತದುಪರಿ' ಎಂಬ ಸೂತ್ರದಿಂದ ಸೂಚಿತವಾಗಿದೆ. ಆದರಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ತೋರಿಸಲು ವಿಕಲ್ಪ ಮಾಡುತ್ತಿದ್ದಾರೆ, 'ಕಿಂ' ಇತ್ಯಾದಿ ವಾಕ್ಯದಿಂದ. 'ವಿದ್ಯಾದಿನಾ' ಎಂದರೆ ವಿದ್ಯೆ ಹಾಗೂ ಕರ್ಮಗಳಿಂದ ಎಂದರ್ಥ. 'ವಿರೋಧಃ ಕರ್ಮಣಿ' ಎಂಬ ಸೂತ್ರದ ಭಾಷ್ಯದಲ್ಲಿ ಹೇಳಿದ್ದನ್ನೇ 'ಅಮರಾಣಾಂ' ಎಂಬ ವಾಕ್ಯದಲ್ಲಿ ಹೇಳಿದ್ದಾರೆ.

'ಮುಕ್ತ್ಯಾದಿ' 'ಕರ್ಮಾದಿ' ಇತ್ಯಾದಿ ವ್ಯಾಖ್ಯಾನ

ಭಾವದೀಪಃ – ಮುಕ್ತೀತಿ ।। ಪದಪ್ರಾಪೇರಪ್ಯುಪಲಕ್ಷಣಮ್ । ಕಚಿನ್ಮುಕ್ತ್ಯಾದೀತ್ಯೇವ ಪಾಠಃ । ಇನ್ದ್ರಾದಿಪದಪ್ರಾಪೇಃ ಪೂರ್ವಂ ಪಶ್ಚಾಚ್ಚೇನ್ದ್ರಾದಿದೇವತಾಭಾವೇನ ತದುದ್ದೇಶೇನ ದ್ರವ್ಯತ್ಯಾಗಾತ್ಮಕಯಾಗಾಯೋಗಾದಿತ್ಯರ್ಥಃ । ವಕ್ಷ್ಯಮಾಣಶಾಬ್ದವಿರೋಧ ಆದಿಪದಾರ್ಥಃ ।

अमराणामित्युक्त्या तेषां मरणवर्जितत्वप्रसिद्धेर्मुक्त्यङ्गीकारोऽनुचित इति सूचयति ।

'मुक्त्यंगीकारे' ಎಂಬಲ್ಲಿ ಮುಕ್ತಿ ಎಂಬ ಪದದಿಂದ ದೇವತಾಪದಪ್ರಾಪ್ತಿಯನ್ನು ಉಪಲಕ್ಷಣಯಾ ಇಟ್ಟುಕೊಳ್ಳಬೇಕು. ಕೆಲವು ಪುಸ್ತಕಗಳಲ್ಲಿ 'मुक्त्यादि' ಎಂದೇ ಪಾಠವಿದೆ. ಆವಾಗ ಆದಿಪದದಿಂದ ದೇವತಾಪದವಿಯ ಪ್ರಾಪ್ತಿಯನ್ನು ಇಟ್ಟುಕೊಳ್ಳಬೇಕು. ಇಂದ್ರಾದಿ ದೇವತೆಗಳಿಗೆ ತಮ್ಮ ಪದವಿಯು ದೊರೆಯುವುದಕ್ಕಿಂತ ಮೊದಲು ಮತ್ತು ಅನಂತರ ಆಯಾ ಪದವಿಗಳಲ್ಲಿ ಬೇರೆ ಯಾವ ದೇವತೆಗಳೂ ಇರುವುದಿಲ್ಲವೆಂದಂತಾಯಿತು. ಆವಾಗ, ಇಂದ್ರಾದಿದೇವತೆಗಳನ್ನು ಉದ್ದೇಶಿಸಿ ಮಾಡುವ ದ್ರವ್ಯತ್ಯಾಗಾತ್ಮಕವಾದ ಯಾಗವೇ ವ್ಯರ್ಥವಾಗುತ್ತದೆ ಎಂದರ್ಥ. ಕರ್ಮಾದಿ ಎಂಬಲ್ಲಿರುವ ಆದಿಪದದಿಂದ ಶಬ್ದವಿರೋಧವನ್ನು ಇಟ್ಟುಕೊಳ್ಳಬೇಕು. ಅಂದರೆ, ಕರ್ಮವಿರೋಧ ಹಾಗೂ ಶಬ್ದವಿರೋಧಗಳು ಬರುತ್ತವೆ ಎಂದರ್ಥ. 'अमराणाम्' ಎಂದು ಹೇಳಿದ್ದರಿಂದ ದೇವತೆಗಳಿಗೆ ಮರಣವಿಲ್ಲವೆಂಬುದು ಪ್ರಸಿದ್ಧವಾದ್ದರಿಂದ ಮುಕ್ತಿಯನ್ನು ಅಂಗೀಕರಿಸುವುದು ಅನುಚಿತವಾಗಿದೆ ಎಂದು ಸೂಚನೆ ಮಾಡಿದ್ದಾರೆ.

ಪೂರ್ವಪಕ್ಷಫಲದ ಉಪಸಂಹಾರ

भावदीपः – फलोक्त्योपसंहरति – अत इति ।। अनित्यत्वे कर्मादिविरोधेनानादि-नित्यत्वाङ्गीकारेऽर्थित्वादेरसम्भवादित्यर्थः ।। न तद्उपास्यत्वलिङ्गं विष्णोः सम्भवतीति ।। नचेष्टापत्तिः । श्रुत्यप्रामाण्यापत्तेरुक्तत्वादिति भावः ।

ಪೂರ್ವಪಕ್ಷದ ಫಲವನ್ನು ಹೇಳುತ್ತಾ ಉಪಸಂಹಾರ ಮಾಡುತ್ತಿದ್ದಾರೆ, 'अतः' ಇತ್ಯಾದಿ ವಾಕ್ಯದಿಂದ. ದೇವತೆಗಳು ಅನಿತ್ಯರಾದಲ್ಲಿ ಮಾಡುವಂತಹ ಕರ್ಮಗಳ ವಿರೋಧವು ಬರುತ್ತದೆ. ಆದ್ದರಿಂದ ಅವರನ್ನು ಅನಾದಿನಿತ್ಯರೆಂದೇ ಒಪ್ಪಬೇಕು. ಆವಾಗ, ವಿದ್ಯೆಗೆ ಪ್ರಯೋಜಕವಾದ ಅರ್ಥಿತ್ವಾದಿಗಳು ದೇವತೆಗಳಲ್ಲಿ ಅಸಂಭಾವಿತವಾಗುತ್ತವೆ ಎಂಬುದು 'अतः' ಎಂಬ ವಾಕ್ಯದ ಅಭಿಪ್ರಾಯ. 'न तदुपास्यत्वलिंगं विष्णोः संभवति' ಆದ್ದರಿಂದ ದೇವತೆಗಳಿಂದ ವಿಷ್ಣು ಉಪಾಸ್ಯನಾಗಿದ್ದಾನೆಂಬುದು ಕೂಡುವುದಿಲ್ಲ ಎಂದು ಟೀಕೆಯಲ್ಲಿ ಹೇಳಿದ್ದಾರೆ. ಇದು ಇಷ್ಟವೆಂದು ಹೇಳಬಾರದು. ಏಕೆಂದರೆ, ದೇವತೆಗಳಿಂದ ವಿಷ್ಣು ಉಪಾಸ್ಯನಾಗಿದ್ದಾನೆಂದು ಶ್ರುತಿಯಲ್ಲಿ ಹೇಳಲಾಗಿದೆ. ಅದಕ್ಕೆ ಅಪ್ರಾಮಾಣ್ಯದೋಷವು ಬರಬೇಕಾದೀತು.

ದೇವತಾಧಿಕರಣವು ಪ್ರಾಸಂಗಿಕ

ಭಾವದೀಪಃ – लिङ्गपदोक्त्या न प्रासङ्गिकत्वमेव किं तर्हि, अत्र देवानामधिकारसिद्धौ तदुपास्यत्वरूपलिङ्गसमन्वयस्यापि सिद्ध्या अन्तर्नयवैश्वानरनययोरिव फलतोऽध्यायपादसङ्गतिरप्यस्तीति सूचितम् । 'प्रसङ्गादेव चिन्तितौ' इत्यनुभाष्योक्तिः तमेव समन्वयं प्रकटयति समस्तेनाध्यायेन प्रायेणेत्येतद्भाष्योक्तिश्च साक्षात् समन्वयानुक्त्यभिप्रायेति भावः ।।

ಲಿಂಗಪದವನ್ನು ಹೇಳಿದ್ದರಿಂದ ಈ ಅಧಿಕರಣವು ಕೇವಲ ಪ್ರಾಸಂಗಿಕವಾಗಿ ಹೊರಟಿರುವುದಲ್ಲ. ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವು ಸಿದ್ಧವಾದ ಮೇಲೆ ವಿಷ್ಣುವಿನಲ್ಲಿ ದೇವೋಪಾಸ್ಯತ್ವವೆಂಬ ಲಿಂಗಸಮನ್ವಯವನ್ನು ಮಾಡಿದಂತಾಗುತ್ತದೆ. ಆದ್ದರಿಂದ, ಪ್ರಥಮ ಪಾದದಲ್ಲಿರುವ ಅಂತಃಸ್ಥಾಧಿಕರಣಕ್ಕೆ ತೃತೀಯಪಾದದಲ್ಲಿರುವ ವೈಶ್ವಾನರಾಧಿಕರಣಕ್ಕೆ ಫಲತಃ ಪಾದಸಂಗತಿಯು ಕೂಡುವಂತೆ, ಇದಕ್ಕೂ ಕೂಡ ಫಲತಃ ಅಧ್ಯಾಯಸಂಗತಿ-ಪಾದಸಂಗತಿಗಳು ಉಪಪನ್ನವಾಗುತ್ತವೆಂದು ಸೂಚಿಸಿದಂತಾಯಿತು. 'ಪ್ರಸಂಗಾದೇವ ಚಿಂತಿತೌ' ಎಂಬ ಅನುವ್ಯಾಖ್ಯಾನವು ಮತ್ತು 'ಸಮನ್ವಯಂ ಪ್ರಕಟಯತಿ ಸಮಸ್ತೇನಾಧ್ಯಾಯೇನ ಪ್ರಾಯೇಣ' ಎಂಬ ಭಾಷ್ಯವು ನೇರವಾಗಿ ಸಮನ್ವಯವನ್ನು ಮಾಡುತ್ತಿಲ್ಲವೆಂಬ ಅಭಿಪ್ರಾಯದಿಂದಷ್ಟೇ ಹೊರಟಿರುತ್ತದೆ.

ಟೀಕೆಯಲ್ಲಿರುವ 'ಅಥ' ಎಂಬ ಪದದ ವ್ಯಾಖ್ಯಾನ

ಭಾವದೀಪಃ – अथ देवानामधिकारसद्भावरूपमर्थान्तरं साधयितुमित्यथ-शब्दस्य प्रकृतादनधिकारादर्थान्तरपरत्वमर्थः । मनुष्याधिकारेत्युक्तिरूपसंशयबीजविघटनप्रकारमेव भाष्यव्याख्यानेन व्यनक्ति – **मनुष्येति** ।।

ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆ ಎಂಬ ಮತ್ತೊಂದು ಅರ್ಥವನ್ನು ಸಮರ್ಥನೆ ಮಾಡುವುದಕ್ಕಾಗಿ ಟೀಕೆಯಲ್ಲಿರುವ ಅಥಶಬ್ದವು ಅನಧಿಕಾರವೆಂಬ ಅರ್ಥಾಂತರವನ್ನು ಹೇಳುತ್ತಿದೆ. 'ಮನುಷ್ಯಾಧಿಕಾರ' ಎಂಬುದರಿಂದ ತಿಳಿಯುವ ಸಂಶಯಬೀಜವನ್ನು ನಿರಾಕರಣೆ ಮಾಡುವುದಕ್ಕಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಾ ಸ್ಪಷ್ಟಪಡಿಸುತ್ತಿದ್ದಾರೆ, 'ಮನುಷ್ಯಪದಂ' ಇತ್ಯಾದಿ ಟೀಕೆಯಿಂದ.

ತಿರ್ಯಕ್ ಪ್ರಾಣಿಗಳಿಗೇಕೆ ಅಧಿಕಾರವಿಲ್ಲ

भावदीपः – ननु मनुष्येत्युक्त्या तद्भिन्ना मनुष्यमात्रव्यावृत्तिप्रतीतेः कथं तिर्यगित्युक्तिरित्यतः सूत्रे मनुष्यत्वं व्यावर्तकत्वेन न विवक्षितम्, किन्तु विशिष्टबुद्ध्यादिमत्त्वमेव विवक्षितमिति भावेनोक्तम् – विशिष्टबुद्धीति ।।

ಮನುಷ್ಯ ಎಂದು ಹೇಳಿದ್ದರಿಂದ ಮನುಷ್ಯರಿಗಿಂತ ಭಿನ್ನರಾದ ಯಾರಿಗೂ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ತಿಳಿಯುತ್ತದೆ. ಹೀಗಿರುವಾಗ, ತಿರ್ಯಕ್ ಪ್ರಾಣಿಗಳಿಗಷ್ಟೇ ಅಧಿಕಾರವಿಲ್ಲವೆಂದು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ, ಸೂತ್ರದಲ್ಲಿರುವ ಮನುಷ್ಯಪದವು ಬೇರೆಯವರನ್ನು ವ್ಯಾವೃತ್ತಿ ಮಾಡುವುದಕ್ಕಾಗಿ ನಿವಿಷ್ಟವಾಗಿಲ್ಲ. ಹೊರತಾಗಿ, ವಿಶಿಷ್ಟಬುದ್ಧ್ಯಾದಿಗಳಿರುವವರಿಗೆ ಮಾತ್ರ ವೇದವಿದ್ಯಾಧಿಕಾರವಿರುತ್ತದೆ ಎಂದು ತಿಳಿಸುವುದಕ್ಕಾಗಿ. ಈ ಅಭಿಪ್ರಾಯದಿಂದ 'ವಿಶಿಷ್ಟಬುದ್ಧ್ಯಾದಿ' ಎಂಬ ಟೀಕಾ ಮಾತು ಹೊರಟಿದೆ.

ಎಲ್ಲಾ ತಿರ್ಯಕ್‌ಪ್ರಾಣಿಗಳಿಗೂ ಅಧಿಕಾರವಿಲ್ಲವೆನ್ನುವುದು ತಪ್ಪು

भावदीपः – यद्वा तिर्यगाद्यपेक्षयेत्युक्तिः तेषामपीत्यग्रेतनवाक्यविरुद्धेत्यत उक्तम् – विशिष्टेति ।। न सर्वतिर्यगाद्यपेक्षयेत्यर्थः । पूर्वस्माद् बुद्ध्या विभागेनाधिकारपदमनुवर्त्य सम्भवति तेषामिति भाष्यार्थमाह – देवानामिति ।।

ಅಥವಾ, ಮನುಷ್ಯಪದವು ತಿರ್ಯಕ್ ಪ್ರಾಣಿಗಳನ್ನು ವ್ಯಾವೃತ್ತಿ ಮಾಡುವುದಕ್ಕಾಗಿ ನಿವಿಷ್ಟವಾಗಿದೆ ಎಂಬ ಮುಂದಿನ ವಾಕ್ಯಕ್ಕೆ ಇದು ವಿರುದ್ಧವಾಗುತ್ತದಲ್ಲವೇ? ಎಂಬ ಪ್ರಶ್ನೆಗೆ 'ವಿಶಿಷ್ಟಬುದ್ಧ್ಯಾದಿ' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ. ಅದರಲ್ಲಿಯೂ, ಎಲ್ಲಾ ತಿರ್ಯಕ್ ಪ್ರಾಣಿಗಳಿಗೂ ಅಧಿಕಾರವಿಲ್ಲವೆನ್ನಬಾರದು. ಹಿಂದಿನ ಸೂತ್ರದಿಂದ ಬುದ್ಧಿಯಿಂದ ವಿಭಾಗ ಮಾಡಿಕೊಂಡು ಅಧಿಕಾರಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕು. ತೇಷಾಮಿತ್ಯಾದಿ ಭಾಷ್ಯದ ಅಭಿಪ್ರಾಯವನ್ನು 'ದೇವಾನಾಂ' ಎಂಬ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

'ವಿಶಿಷ್ಟಬುದ್ಧ್ಯಾದಿ' ಇತ್ಯಾದಿ ಟೀಕೆಯ ವ್ಯಾಖ್ಯಾನ

ಭಾವದೀಪಃ – विशिष्टेत्यादिभाष्यं व्याकुर्वन् तेषां सम्भवतीत्येतद्धेतुगर्भत याऽपि व्याचष्टे – विशिष्टेति ।। तदुपरीत्यादि भाष्यं शङ्कानिरासकतया व्यनक्ति – नचेति।।

'ವಿಶಿಷ್ಟ' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಾ 'ತೇಷಾಂ ಸಂಭವತಿ' ಎಂಬುದು ಹೇತುಗರ್ಭಿತವಾಗಿದೆ ಎಂದೂ ಸಹ ವ್ಯಾಖ್ಯಾನ ಮಾಡುತ್ತಿದ್ದಾರೆ, 'ವಿಶಿಷ್ಟಬುದ್ಧ್ಯಾದಿ' ಎಂಬ ಟೀಕೆಯಿಂದ. 'ತದುಪರಿ' ಇತ್ಯಾದಿ ಭಾಷ್ಯವು ಶಂಕೆಯನ್ನು ನಿರಾಸ ಮಾಡಲು ಹೊರಟಿದೆಯೆಂದು 'ನಚ' ಇತ್ಯಾದಿ ಟೀಕೆಯು ಸ್ಪಷ್ಟಪಡಿಸುತ್ತಿದೆ.

'ಯೋಗ್ಯಮನುಷ್ಯಾಣಾಮ್' ಎಂಬುದರ ಅರ್ಥ

ಭಾವದೀಪಃ – नहि अनादित इत्यादिनोक्तेत्यर्थः ।। योग्येति ।। देवतापदयोग्यानां मनुष्यत्वेन भूमौ जातानामित्यर्थः ।।

'ಉಕ್ತಪ್ರಕಾರೇಣ' ಎಂದರೆ 'ನಹಿ ಅನಾದಿತಃ' ಇತ್ಯಾದಿಯಾಗಿ ಹೇಳಿದ ಪ್ರಕಾರದಲ್ಲಿ ಎಂದರ್ಥ. 'ಯೋಗ್ಯಮನುಷ್ಯಾಣಾಮ್' ಎಂದರೆ ದೇವತಾಪದವಿಗೆ ಯೋಗ್ಯರಾಗಿ ಭೂಮಿಯಲ್ಲಿ ಮನುಷ್ಯ ರೂಪದಿಂದ ಹುಟ್ಟಿರುವವರಿಗೆ ಎಂದರ್ಥ.

ಅನುಮಾನಕ್ಕೆ ಸತ್ಪ್ರತಿಪಕ್ಷ ದೋಷ

ಭಾವದೀಪಃ – मोक्षेति ।। विद्याकर्मभ्यां देवत्वप्राप्त्युक्त्या सादित्वस्य तद्ध्यासन्तत्वस्यापि लब्धत्वादिति भावः ।। विप्रतिपत्तीति ।। अनधिकारं जैमिनिरित्यनेनेत्यर्थः । देवानामधिकारो विद्यते विशिष्टबुद्ध्यादिमत्त्वात् सम्मतवदिति स्वप्रयुक्तानुमाने प्रतिपक्षमाशङ्कते – न देवा इति ।। अपितु विशिष्टेति ।।

ವಿದ್ಯೆ ಹಾಗೂ ಕರ್ಮಗಳಿಂದ ದೇವತಾಪದವಿಯು ಪ್ರಾಪ್ತವಾಗುತ್ತದೆಂದು ಹೇಳಿದ್ದರಿಂದ, ಸಾದಿತ್ವವು ಅದರಿಂದ ವ್ಯಾಪ್ತವಾದ ಸಾಂತತ್ವವೂ ಕೂಡ ಸಿದ್ಧವಾಗುತ್ತದೆ ಎಂದು ತಿಳಿಸಿದ್ದಾರೆ. ವಿಪ್ರತಿಪತ್ತಿಸೂಚನಾಯ ಎಂದು ಹೇಳಿದ್ದರಿಂದ ಜೈಮಿನಿ ಋಷಿಗಳು ಅನಧಿಕಾರವನ್ನು ಹೇಳಿದ್ದರಿಂದ ಬಾದರಾಯಣರು ಅಧಿಕಾರವನ್ನು ಹೇಳಿದ್ದರಿಂದ ಪರಸ್ಪರ ವಿಪ್ರತಿಪತ್ತಿಯಿದೆ ಎಂದು ಹೇಳಿದಂತಾಯಿತು. 'ದೇವಾನಾಂ ಅಧಿಕಾರಃ ವಿದ್ಯತೇ ವಿಶಿಷ್ಟಬುದ್ಧ್ಯಾದಿಮತ್ತ್ವಾತ್ ಸಮ್ಮತವತ್' ಎಂಬ ತಾವೇ ಪ್ರಯೋಗಿಸಿದ ಅನುಮಾನದಲ್ಲಿ ಸತ್ಪ್ರತಿಪಕ್ಷವನ್ನು ಆಶಂಕಿಸುತ್ತಿದ್ದಾರೆ, 'ನ ದೇವಾನಾಮ್' ಇತ್ಯಾದಿ ವಾಕ್ಯದಿಂದ.

ಸತ್ಪ್ರತಿಪಕ್ಷಾನುಮಾನದಲ್ಲಿಯೂ ಉಪಾಧಿ ಹೇಳಬಹುದು

भावदीपः – प्रतिपक्षे प्रतिपक्षान्तरवद् उपाधिरपि न वाच्य इति कस्यचिदुक्तिर्नादर्तव्या । हेतोर्व्यभिचारव्याप्यत्वासिद्ध्याश्रयेण तदुक्ति-सम्भवादिति भावः ।।

ಸತ್ಪ್ರತಿಪಕ್ಷಾನುಮಾನಕ್ಕೆ ಪುನಃ ಸತ್ಪ್ರತಿಪಕ್ಷಾನುಮಾನವನ್ನು ಹೇಗೆ ಮಾಡಬಾರದೋ, ಅದರಂತೆ ಉಪಾಧಿಯನ್ನೂ ಹೇಳಬಾರದು ಎಂದು ಕೆಲವರ ವಾದವಿದೆ. ಈ ವಾದವು ಹುರುಳಿಲ್ಲದ್ದು. ಹೇತುವಿಗೆ ವ್ಯಭಿಚಾರವನ್ನು ವ್ಯಾಪ್ಯತ್ವಾಸಿದ್ಧಿಯನ್ನು ಹೇಳುವ ಮೂಲಕ ಉಪಾಧಿ ದೋಷವನ್ನು ಸತ್ಪ್ರತಿಪಕ್ಷಾನುಮಾನ-ದಲ್ಲಿಯೂ ಹೇಳಬಹುದು ಎಂದಭಿಪ್ರಾಯ.

ಉಪಾಧಿಗೆ ವ್ಯಭಿಚಾರವಿಲ್ಲ

भावदीपः – अयमुपाधिरिति ।। विशिष्टबुद्ध्यादिराहित्यरूपः ।। तेन शूद्रादाविति ।। सम्भवति हि तेषां विशिष्टबुद्ध्यादिभावादित्यत्र स्वप्रयुक्त-विशिष्टबुद्ध्यादिमत्त्वरूपहेतोर्वा प्रतिपक्षानुमानेऽभिहितिविशिष्टबुद्ध्यादि-राहित्यरूपोपाधेर्वेत्यर्थः ।

'ಉಪಾಧಿ' ಎಂದರೆ 'ವಿಶಿಷ್ಟಬುದ್ಧ್ಯಾದಿರಾಹಿತ್ಯ' ಎಂಬ ಉಪಾಧಿಯು ಎಂದರ್ಥ. 'ಸಂಭವತಿ ಹಿ ತೇಷಾಂ ವಿಶಿಷ್ಟಬುದ್ಧ್ಯಾದಿಭಾವಾತ್' ಎಂಬ ಭಾಷ್ಯದ ಮಾತಿನಲ್ಲಿ 'ವಿಶಿಷ್ಟಬುದ್ಧ್ಯಾದಿಮತ್ವ' ಎಂಬ

ಹೇತುವಿಗೆ ಅಥವಾ ಸತ್ಪ್ರತಿಪಕ್ಷಾನುಮಾನದಲ್ಲಿ ಹೇಳಲ್ಪಟ್ಟ ವಿಶಿಷ್ಟಬುದ್ಧ್ಯಾದಿರಾಹಿತ್ಯವೆಂಬ ಉಪಾಧಿಗೆ ವ್ಯಭಿಚಾರವು ಬರುವುದಿಲ್ಲವೆಂದು ಹೇಳಿದ್ದಾರೆ.

'ಅನಿಷಿದ್ಧತ್ವೇ ಸತಿ ವಿಶಿಷ್ಟಬುದ್ಧ್ಯಾದಿಮತ್ತ್ವಾಭಾವಾತ್' ಎಂಬುದು ಉಪಾಧಿ

ಭಾವದೀಪಃ – शूद्रादेश्चाग्रे निषिद्धत्वं व्यक्तमित्यनिषिद्धत्वे सति विशिष्ट बुद्ध्यादिमत्त्वाभावरूपोपाधेः तत्रापि सत्त्वेन न व्यभिचार इति भावः ।।

ಶೂದ್ರರಿಗೆ ವೇದವಿದ್ಯಾಧಿಕಾರದ ನಿಷೇಧವಿರುವುದರಿಂದ ನಿಷಿದ್ಧತ್ವವು ಮುಂದೆ ಸ್ಪಷ್ಟಪಡಿಸುತ್ತಾರೆ. ಆದ್ದರಿಂದ, 'ಅನಿಷಿದ್ಧತ್ವೇ ಸತಿ ವಿಶಿಷ್ಟಬುದ್ಧ್ಯಾದಿಮತ್ತ್ವಾಭಾವಾತ್' ಎಂಬ ಉಪಾಧಿಯು ಅಲ್ಲಿಯೂ ಇರುವುದರಿಂದ ವ್ಯಭಿಚಾರವಿಲ್ಲವೆಂದು ತಿಳಿಯಬೇಕು.

'ಅಯಮಗ್ನೇ ಜರಿತಾ' ಎಂಬ ಪಕ್ಷಿಯ ವೇದಮಂತ್ರ

ಭಾವದೀಪಃ – वेदाधिकारितयेति ।। खाण्डववनस्थानां जरितारिसारि-सृक्कस्तम्बमित्रद्रोणाख्यानां चतुर्णां पक्षिणः समातृकाणां कृत्स्नवनं परिलेलिहानेन वह्निना स्वदाहप्रसक्तौ भ्रातृभिः प्रार्थितो जरितारिरग्निमयमग्ने जरितेत्यादिमन्त्रैः स्तुत्वा प्रीतेनाग्निना तान् मोचयामासेति ।

ಖಾಂಡವವನದಾಹ ಪ್ರಸಂಗದಲ್ಲಿ ಬೆಂಕಿಯು ಇಡೀ ಖಾಂಡವವನವನ್ನೇ ಸುಡುತ್ತದೆ. ಆಗ ಜರಿತಾರಿ, ಸಾರಿಸೃಕ್ಕ, ಸ್ತಂಭಮಿತ್ರ, ದ್ರೋಣ ಎಂಬ ನಾಕು ಪಕ್ಷಿಗಳು ತಮ್ಮ ತಾಯಿಯ ಜೊತೆಗೆ ಸಾಯುವಂತಹ ಪರಿಸ್ಥಿತಿ ಬರುತ್ತದೆ. ಅಂತಹ ಸಂದರ್ಭದಲ್ಲಿ ಸಹೋದರರಾದ ಆ ಪಕ್ಷಿಗಳು ಅಗ್ನಿಯನ್ನು ಕುರಿತು ವೇದಮಂತ್ರದಿಂದ 'ಅಯಮಗ್ನೇ ಜರಿತಾ' ಇತ್ಯಾದಿಯಾಗಿ ಪ್ರಾರ್ಥನೆ ಮಾಡುತ್ತವೆ. ಇದರಿಂದ ಪ್ರೀತನಾದ ಅಗ್ನಿ ದೇವತೆಯು ಆ ನಾಕು ಪಕ್ಷಿಗಳನ್ನು ಸುಡುವುದಿಲ್ಲ.

ಉಪಾಧಿಯು ಸಾಧ್ಯವ್ಯಾಪಕವಲ್ಲ

ಭಾವದೀಪಃ – 'एवमुक्तो भ्रातृभिस्तु जरितारिर्विभावसुम् । तुष्टाव प्राञ्जलिर्भूत्वा यत्तच्छृणु नराधिप ।।' इत्यादिना भारते प्रसिद्धत्वादिति

भावः ।। अनेनैवेति ।। जरितर्यादयोऽधिकारितया दृश्यन्त इति वचनेनैवेत्यर्थः । साध्यव्यापकत्वादिति भावः ।। २६ ।।

'एवमुक्तो भ्रातृभिस्तु जरितारिर्विभावसुम् ।
तुष्टाव प्राञ्जलिर्भूत्वायत्तत् शृणु नराधिप ॥

ಹೀಗೆ ಅಗ್ನಿಯನ್ನು ಕುರಿತು ಜರಿತಾರಿ ಪಕ್ಷಿಯು ಪ್ರಾರ್ಥನೆ ಮಾಡಿ, ಕೈಮುಗಿದು ಸಂತೋಷ ಪಡಿಸಿದನು. ಈ ಕಥೆಯನ್ನು ಕೇಳು ಎಂದು ಮಹಾಭಾರತದಲ್ಲಿ ತಿರ್ಯಕ್ ಪ್ರಾಣಿಗಳಿಗೂ ವೇದಾಧಿಕಾರವಿರುವುದನ್ನು ಉಲ್ಲೇಖ ಮಾಡಲಾಗಿದೆ ಎಂದರ್ಥ. 'ಅನೇನೈವ' ಎಂದು ಹೇಳಿದ್ದರಿಂದ ಜರಿತಾರಿ ಮೊದಲಾದ ತಿರ್ಯಕ್ ಪ್ರಾಣಿಗಳಿಗೂ ವೇದಾಧಿಕಾರವಿರುತ್ತದೆಂದು ಹೇಳಿದ್ದರಿಂದ ಉಪಾಧಿಯು ಸಾಧ್ಯವ್ಯಾಪಕವಾಗುವುದಿಲ್ಲ ಎಂದಂತಾಯಿತು.

ಬ್ರಹ್ಮಸೂತ್ರ

'ವಿರೋಧಃ ಕರ್ಮಣೀತಿ' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – ।। विरोधः कर्मणीति चेन्नानेकप्रतिपत्तेर्दर्शनात् ।। २७ ।।

ಸೂತ್ರಾರ್ಥ - ಮನುಷ್ಯರು ದೇವತೆಗಳಾಗುತ್ತಾರೆ ಎಂದು ಹೇಳಿದಾಗ, ದೇವತೆಗಳಾಗುವ ಮೊದಲು ಆ ಸ್ಥಾನದಲ್ಲಿ ಬೇರೆ ದೇವತೆ ಇರುವುದಿಲ್ಲ. ಆದ್ದರಿಂದ ದೇವತೆಗಳನ್ನು ಪ್ರತಿಪಾದಿಸುವ ಮತ್ತು ಅವರ ವಿಷಯದಲ್ಲಿ ವಿಧಿಸುವ ಯಜ್ಞಾದಿ ಕರ್ಮಗಳಿಗೆ, ವೈಯರ್ಥ್ಯ ದೋಷ ಬರುತ್ತದಲ್ಲವೆ ? ಎಂದು ಪ್ರಶ್ನಿಸಬಾರದು. ಏಕೆಂದರೆ ಯಾವ ಮನುಷ್ಯನು ಯಾವ ದೇವತಾಪದವಿಯನ್ನು ಹೊಂದುತ್ತಾನೋ ಆದಕ್ಕಿಂತಲೂ ಮೊದಲು ಮತ್ತೊಬ್ಬ ದೇವತೆಯು ಆ ಸ್ಥಾನದಲ್ಲಿರುತ್ತಾನೆ. ಆದ್ದರಿಂದ ವಿರೋಧವಿರುವುದಿಲ್ಲ. ಅನೇಕ ಮನುಷ್ಯರಿಗೆ ದೇವತಾಪದವಿಯು ದೊರೆಯುತ್ತದೆ ಎಂಬುದು 'ಯಜ್ಞೇನ ಯಜ್ಞಂ' ಎಂಬ ಶ್ರುತಿಯಿಂದ ಸಿದ್ಧವಾಗಿದೆ.

ಅರ್ಥ -- ದೇವತ್ವವು ಸಾದಿ ಆದರೆ ಕರ್ಮಣಿ = ಯಜ್ಞಾದಿ ಕರ್ಮವಿಷಯದಲ್ಲಿ ವಿರೋಧಃ = ವೈಯರ್ಥ್ಯವೆಂಬ ದೋಷವು ಬರುತ್ತದೆ. ಇತಿಚೇನ್ನ = ಹೀಗೆ ಹೇಳಬಾರದು. ಏಕೆಂದರೆ ಅನೇಕ ಪ್ರತಿಪತ್ತೇಃ

= ಯೋಗ್ಯರಾದ ಅನೇಕ ಮನುಷ್ಯರಿಗೆ ದೇವತಾಪದವು ಪ್ರಾಪ್ತವಾಗುತ್ತದೆ ಎಂಬುದು, ದರ್ಶನಾತ್ = 'ಯತ್ರಪೂರ್ವೇ' ಇತ್ಯಾದಿ ಶ್ರುತಿಯಿಂದ ಪ್ರಸಿದ್ಧವಾಗಿದೆ.

ಬ್ರಹ್ಮಸೂತ್ರಭಾಷ್ಯ

ಸೂತ್ರದಲ್ಲಿರುವ 'ತದುಪರಿ' ಎಂಬುದರ ವ್ಯಾಖ್ಯಾನ

ब्रह्मसूत्रभाष्यम् – ।। विरोधः कर्मणीति चेन्नानेकप्रतिपत्तेर्दर्शनात् ।।२७।।

मनुष्या एव देवादयो भवन्तीति तदुपरीत्युक्तम् । तत्र यदि मनुष्याः सन्तो देवादयो भवन्ति तत्पूर्वं देवताभावाद्देवतोद्दिष्टकर्मणि विरोध इति चेत् ।

ಅನುವಾದ - ಮನುಷ್ಯರೇ ಮುಂದೆ ದೇವತೆಗಳಾಗುತ್ತಾರೆಂದು ಹಿಂದಿನ ಸೂತ್ರದಲ್ಲಿ 'ತದುಪರಿ' ಎಂಬ ಪದದಿಂದ ಹೇಳಲಾಯಿತು. ಹಾಗಾದರೆ ಮನುಷ್ಯರೇ ಮುಂದೆ ದೇವತೆಗಳಾಗುವುದಾದರೆ, ದೇವತೆಗಳಾಗುವ ಮೊದಲು ದೇವತಾಉದ್ದೇಶಕವಾದ ಕರ್ಮ ಹಾಗೂ ವೇದಗಳು ವ್ಯರ್ಥವಾಗುತ್ತವಲ್ಲವೆ ?

ಪ್ರತಿಪದಾರ್ಥ -- ದೇವತೆಗಳಿಗೆ ವೇದವಿದ್ಯಾಧಿಕಾರವು ಇರುತ್ತದೆಂದು ಸಾಧಿಸುವುದಕ್ಕಾಗಿ 'ತದುಪರಿ' ಎಂಬುದರಿಂದ ದೇವತಾಪದವಿಯು 'ಸಾದಿ' ಎಂದು ಹೇಳಲಾಯಿತು. ಇದರ ಮೇಲೆ ಬರುವ ಆಕ್ಷೇಪವನ್ನು ತೋರಿಸುತ್ತಾ ಸೂತ್ರದ ಆಕ್ಷೇಪಭಾಗಕ್ಕೆ ವ್ಯಾಖ್ಯಾನಿಸುತ್ತಿದ್ದಾರೆ -

ತದುಪರಿ = ಹಿಂದಿನ ಸೂತ್ರದಲ್ಲಿರುವ 'ತದುಪರಿ' ಎಂಬ ಪದದಿಂದ, ಮನುಷ್ಯಾಃಏವ = ಮನುಷ್ಯೋತ್ತಮರೇ, ದೇವಾದಯಃ = ದೇವತಾಪದವಿಯನ್ನು, ಭವಂತಿ = ಹೊಂದುತ್ತಾರೆ, ಇತಿ = ಹೀಗೆ, ಉಕ್ತಂ = ಹೇಳಲಾಯಿತು, ತತ್ರ = ಆ ವಿಷಯದಲ್ಲಿ, ಯದಿ = ಒಂದುವೇಳೆ, ಮನುಷ್ಯಾಃ ಸಂತಃ = ಯೋಗ್ಯರಾದ ಮನುಷ್ಯರೇ, ದೇವಾದಯಃ = ದೇವತಾ ಮೊದಲಾದವರು, ಭವಂತಿ = ಆಗುತ್ತಾರೆಂದು

ಹೇಳಿದರೆ, ತತ್ ಪೂರ್ವಂ = ದೇವತಾಪದವಿಯು ದೊರೆಯುವುದಕ್ಕಿಂತ ಮೊದಲು, ದೇವತಾ ಅಭಾವಾತ್ = ದೇವತಾತ್ವವು ಇಲ್ಲದ ಕಾರಣ, ದೇವತೋದ್ದಿಷ್ಟ ಕರ್ಮಣಿ = ದೇವತಾ ಉದ್ದೇಶ್ಯಕವಾದ ಯಜ್ಞಯಾಗಾದಿ ಕರ್ಮಗಳಲ್ಲಿ, ವಿರೋಧಃ = ವಿರೋಧವು ಬರುತ್ತದೆ. ಇತಿ ಚೇತ್ = ಹೀಗೆ ಆಕ್ಷೇಪವು ಪ್ರಾಪ್ತವಾಗುತ್ತದೆ.

ದೇವತಾಪದವಿಯು ಪ್ರವಾಹತಃ ಅನಾದಿಯಾದ್ದರಿಂದ ಕರ್ಮಗಳಿಗೆ ವೈಯರ್ಥ್ಯವಿಲ್ಲ

ಬ್ರಹ್ಮಸೂತ್ರಭಾಷ್ಯಮ್ – ನ, ಅನೇಕೇಷಾಂ ದೇವತಾಪದಪ್ರತಿಪತ್ತೇರ್ದರ್ಶನಾತ್ ।

‘ತೇ ಹ ನಾಕಂ ಮಹಿಮಾನಸ್ಸಚನ್ತೇ ।
ಯತ್ರ ಪೂರ್ವೇ ಸಾಧ್ಯಾಸ್ಸನ್ತಿ ದೇವಾಃ’ ಇತಿ ।।೨೭।।

ಅನುವಾದ - ಇದು ತಪ್ಪು, ಏಕೆಂದರೆ ಅನೇಕ ಮನುಷ್ಯೋತ್ತಮರಿಗೆ ದೇವತಾಪದವಿಯು ಪ್ರಾಪ್ತವಾಗುತ್ತದೆಂದು ಶ್ರುತಿಯು ಹೇಳುತ್ತಿದೆ. ''ತೇಹ ನಾಕಮ್'' ಎಂಬ ಪುರುಷಸೂಕ್ತವು ಅತ್ಯಂತಗುಣಶಾಲಿಗಳಾದ ದೇವತೆಗಳು ಆವಾಗಲೇ ಮೋಕ್ಷವನ್ನು ಹೊಂದಿರುವ ‘ಸಾಧ್ಯ’ ಎಂಬ ದೇವತೆಗಳಿರುವ ಮೋಕ್ಷವನ್ನು ಹೊಂದಿದರು, ಎಂದು ಹೇಳುತ್ತಿದೆ.

ಪ್ರತಿಪದಾರ್ಥ -- ಸೂತ್ರದ ಪರಿಹಾರ ಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ -

ನ = ಈ ವಿರೋಧವಿಲ್ಲ, ಅನೇಕೇಷಾಂ = ಅನೇಕ ಸಜ್ಜೀವರಿಗೆ, ದೇವತಾಪದ- ಪ್ರತಿಪತ್ತೇಃ = ದೇವತಾಪದದ ಪ್ರಾಪ್ತಿಯು ದೊರೆಯುತ್ತದೆಂದು, ದರ್ಶನಾತ್ = ತಿಳಿಯುವುದರಿಂದ ಮತ್ತು ಪುರುಷಸೂಕ್ತದಲ್ಲಿಯೂ, ತೇ = ದೇವತೆಗಳು, ಪೂರ್ವೇ = ಹಿಂದಿನಕಲ್ಪದಲ್ಲಿ, ಸಾಧ್ಯಾಃ = ಸಾಧ್ಯ ಎಂಬ, ದೇವಾಃ = ದೇವತೆಗಳು, ಯತ್ರ = ಯಾವ ಮೋಕ್ಷದಲ್ಲಿ, ಸಂತಿ = ಇದ್ದಾರೋ, ನಾಕಂ = ಮೋಕ್ಷವನ್ನು, ಹ = ಸಾಧನಾನನಂತರದಲ್ಲಿ, ಸಂಚತೇ = ಪಡೆದರು ಇತಿ = ಹೀಗೆ

ತತ್ವಪ್ರದೀಪ

'ತದುಪರ್ಯಪಿ' ಎಂಬುದರ ಮೇಲೆ ಅಧಿಕಾಕ್ಷೇಪ

तत्वप्रदीपः – विरोधः कर्मणीति चेन्नानेकप्रतिपत्तेर्दर्शनात् ।। किञ्चित्कालं मनुष्या एव सन्तः पश्चाद्देवोपदेवादयो भवन्तीति हि तदुपरीत्यत्रोक्तम् । मनुष्याणां सतां देवादित्वप्राप्त्युपरीति विवरणात् । यद्येतदेवं तर्हि तत्पूर्वं तेषां देवादित्वप्राप्तेः पूर्वं, देवतानामभावात्तत्तद्देवतोद्देशेन चोद्यमानेषु क्रर्मसु विरोधः। उद्देश्याभावात्

'ವಿರೋಧಃ ಕರ್ಮಣೀತಿ ಚೇನ್ನಾನೇಕಪ್ರತಿಪತ್ತೇರ್ದರ್ಶನಾತ್' ಇತ್ಯಾದಿ ಸೂತ್ರದ ಅಭಿಪ್ರಾಯ ಹೀಗಿದೆ - ಹಿಂದಿನ ಸೂತ್ರದಲ್ಲಿ 'ತದುಪರಿ' ಎಂಬುದರಿಂದ ಸ್ವಲ್ಪಕಾಲ ಮನುಷ್ಯರಾಗಿ ಅನಂತರ ದೇವತಾಪದವಿಯನ್ನು ಪಡೆಯುತ್ತಾರೆಂದು ಹೇಳಲಾಯಿತು. 'ಮನುಷ್ಯಾಣಾಂ ಸತಾಂ ದೇವಾದಿತ್ಯಪ್ರಾಪ್ತ್ಯುಪರಿ' 'ತದುಪರಿ' ಎಂಬುದಕ್ಕೆ ಮನುಷ್ಯರಾದವರಿಗೆ ದೇವತೆ ಮೊದಲಾದ ಪದವಿಗಳು ದೊರೆತ ಅನಂತರ ಎಂಬುದಾಗಿ ವಿವರಣೆ ಮಾಡಿದ್ದರಿಂದ.

ಹೀಗೆ ಹೇಳುವುದಾದರೆ ದೇವತಾಪದವಿಯನ್ನು ಹೊಂದುವ ಮೊದಲು ಯಾರೊಬ್ಬ ದೇವತೆಯು ಆ ಪದವಿಯಲ್ಲಿ ಇಲ್ಲವೆಂದು ಹೇಳಿದಂತಾಗುತ್ತದೆ. ಆಗ ಆಯಾ ದೇವತೆಗಳ ಉದ್ದೇಶದಿಂದ ಮಾಡಲ್ಪಡುವ ಕರ್ಮಗಳಿಗೆ ವಿರೋಧವು ಬರುತ್ತವೆ. ಏಕೆಂದರೆ ಉದ್ದೇಶವೇ ಇಲ್ಲದ್ದರಿಂದ.

ವಿವರಣೆ - 'ತದುಪರ್ಯಪಿ' ಇತ್ಯಾದಿ ಸೂತ್ರದಲ್ಲಿ ಸಮರ್ಥಿಸಿದ ಪ್ರಮೇಯದ ಮೇಲೆ ಬರುವ ಅಧಿಕಾಕ್ಷೇಪದ ನಿರಾಕರಣೆಗಾಗಿ 'ವಿರೋಧಃ ಕರ್ಮಣೀತಿ' ಇತ್ಯಾದಿ ಮುಂದಿನ ಸೂತ್ರವು ಹೊರಟಿದೆ.

'ತದುಪರ್ಯಪಿ' ಎಂಬಲ್ಲಿರುವ 'ಅಪಿ' ಪದಕ್ಕೆ ದೇವತೆಗಳಿಗೆ ಪದವಿಯು ದೊರೆತ ಅನಂತರವೂ ಕೂಡ ಎಂದರ್ಥ. ಮನುಷ್ಯರಿಗಿಂತ ಹೀನರಾದ ತಿರ್ಯಗಾದಿ ಪ್ರಾಣಿಗಳ ಅವಸ್ಥೆಯಲ್ಲೂ ಕೂಡ ಎಂಬುದು ಎರಡನೆಯ ಅರ್ಥ.

ಈಗ ಇದರ ಮೇಲೆ ಆಕ್ಷೇಪವನ್ನು ಮಾಡುತ್ತಿದ್ದಾರೆ. ಮನುಷ್ಯರಾದವರೇ ಮುಂದೆ ದೇವತಾಪದವಿಯನ್ನು ಪಡೆಯುತ್ತಾರೆಂದು 'ತದುಪರ್ಯಪಿ' ಎಂಬುದರಿಂದ ಹೇಳಲಾಯಿತು. ಆ ದೇವತೆಗಳು ತಮ್ಮ ಪದವಿಯನ್ನು ಪಡೆಯುವ ಮೊದಲು ಆ ಪದವಿಯಲ್ಲಿ ಯಾರೂ ಇರಲಿಲ್ಲ ಎಂದು ಇದರಿಂದ ಹೇಳಿದಂತಾಗುತ್ತದೆ. ಯಾವಾಗ ದೇವತೆಗಳು ತಮ್ಮ ಪದವಿಗೆ ಇನ್ನೂ ಬಂದಿರುವುದಿಲ್ಲವೋ, ಆ ಸಮಯದಲ್ಲಿ ಮಾಡಲ್ಪಡುವ ಇಂದ್ರಾದಿದೇವತಾಕವಾದ ಯಜ್ಞಗಳೆಲ್ಲವೂ ವ್ಯರ್ಥವಾಗುತ್ತವೆ. ಏಕೆಂದರೆ ಇಂದ್ರಾದಿಗಳನ್ನು ಕುರಿತು ಹೋಮಿಸಬೇಕೆಂದರೆ ಆಯಾ ದೇವತೆಗಳು ಆಯಾ ಪದವಿಗಳಲ್ಲಿರಬೇಕು. ಆದರೆ ಅವರಿನ್ನು ಮನುಷ್ಯಾವಸ್ಥೆಯಲ್ಲಿಯೇ ಇರುವುದರಿಂದ ಉದ್ದೇಶವೇ ಇಲ್ಲದೇ ಯಾಗವನ್ನು ಆಚರಿಸಿದಂತಾಗುತ್ತದೆ. ಆದ್ದರಿಂದ ವಿಹಿತವಾದ ಕರ್ಮಗಳಿಗೆ ವಿರೋಧವು ಪ್ರಾಪ್ತವಾಗುತ್ತದೆ ಎಂಬುದು 'ವಿರೋಧಃ ಕರ್ಮಣಿ ಇತಿ' ಎಂಬ ಪೂರ್ವಪಕ್ಷ ಭಾಗದ ಅಭಿಪ್ರಾಯ.

ಇಂದ್ರಾದಿದೇವತಾಗಣವು ಅನಂತ

तत्वप्रदीपः – इति चेन्न । केषाञ्चिदिन्द्रादीनां देवानां स्वस्वपदात्ययेऽन्येषामिन्द्रादीनां तत्तत्पदप्रतिपत्तिः । तेषामत्यये वाऽपरेषामित्यनेन क्रमेणानेकेषामधिकारिणामेकैकगणशोऽनन्तानां देवतापदप्रतिपत्तेर्दर्शनात् ।

ಕೆಲವು ಇಂದ್ರಾದಿದೇವತೆಗಳು ತಮ್ಮ ತಮ್ಮ ಪದವಿಯನ್ನು ಪಡೆಯುವ ಮೊದಲು ಬೇರೆ ಇಂದ್ರಾದಿ ದೇವತೆಗಳು ಆಯಾ ಪದವಿಯಲ್ಲಿ ಇರುತ್ತಾರೆ. ಆದ್ದರಿಂದ ಉದ್ದೇಶವಿಲ್ಲದೇ ಕರ್ಮವನ್ನು ಆಚರಿಸದಂತಾಗುತ್ತದೆ ಎಂಬ ವಿರೋಧಕ್ಕೆ ಅವಕಾಶವಿಲ್ಲ. ಈ ದೇವತೆಗಳೂ ಕೂಡ ತಮ್ಮ ಪದವಿಯ ಕಾಲವನ್ನು ಮುಗಿಸಿ ತೆರಳಿದಾಗ ಮತ್ತೊಬ್ಬರು ಆ ದೇವತಾ ಪದವಿಗೆ ಬರುತ್ತಾರೆ. ಹೀಗೆ ಒಂದೊಂದು ಪದವಿಗಳ ಗಣವು ಅನಂತವಾಗಿರುವುದರಿಂದ ಅನೇಕ ಅಧಿಕಾರಿಗಳಿದ್ದಾರೆಂದು ಹೇಳಿದಂತಾಗುತ್ತದೆ. ಆದ್ದರಿಂದ ದೇವತಾಪದ ಪ್ರತಿಪತ್ತಿಯು ಇರುವುದರಿಂದ ವಿರೋಧಕ್ಕೆ ಅವಕಾಶವಿಲ್ಲ.

ವಿವರಣೆ - ಮನುಷ್ಯಾವಸ್ಥೆಯಲ್ಲಿ ಇಂದ್ರನಿದ್ದಾಗ ಮತ್ತೊಂದು ಪದವಿಯಲ್ಲಿ ಮತ್ತೊಬ್ಬ ಇಂದ್ರನಿರುತ್ತಾನೆ. ಈ ಮನುಷ್ಯನು ಇಂದ್ರನಾಗಿದ್ದಾಗ ಮತ್ತೊಬ್ಬನು ಮನುಷ್ಯಾವಸ್ಥೆಯಲ್ಲಿರುತ್ತಾನೆ. ಹೀಗೆ ದೇವತಾಪದವಿಯಲ್ಲಿ ಯಾರು ಇಲ್ಲದ ಅವಸ್ಥೆಯೇ ಇರುವುದಿಲ್ಲ. ಆದುದರಿಂದ ಕರ್ಮವಾಕ್ಯಗಳ ವಿರೋಧಕ್ಕೆ ಅವಕಾಶವಿಲ್ಲ.

'ತೇ ಹ ನಾಕಂ' ಇತ್ಯಾದಿ ಶ್ರುತ್ಯರ್ಥ

तत्वप्रदीपः – ''ते ह नाकं महिमानः सचन्त'' इत्यादिवाक्यात् । 'ते' देवा 'नाकं' मोक्षं महिमगुणात्मकाः 'सचन्त'आप्नुवन् । यत्र नाके पूर्वे साध्या वस्वादयो देवाः सन्ति ।

ಸೂತ್ರದಲ್ಲಿರುವ 'ದರ್ಶನಾತ್' ಎಂಬ ಪದಕ್ಕೆ 'ತೇ ಹ ನಾಕಂ ಮಹಿಮಾನಃ ಸಚಂತ' ಇತ್ಯಾದಿ ವಾಕ್ಯಗಳಿಂದ ದೇವತಾಪದಪ್ರತಿಪತ್ತಿಯು ತಿಳಿಯುವುದರಿಂದ ಎಂದರ್ಥ. ಈ ಶ್ರುತಿಯ ಅರ್ಥ ಹೀಗಿದೆ - ತೇ = ಆ ದೇವತೆಗಳು, ನಾಕಂ = ಮೋಕ್ಷವನ್ನು, ಮಹಿಮಾನಃ = ಮಹಿಮಾತ್ಮಕವಾದ ಗುಣವುಳ್ಳವರಾಗಿ, ಸಚಂತ = ಹೊಂದಿದರು. ಯತ್ರ = ಯಾವ ಮೋಕ್ಷದಲ್ಲಿ ಪೂರ್ವೇ = ಮೊದಲು, ಸಾಧ್ಯಾಃ = ವಸ್ವಾದಿ ದೇವತೆಗಳು, ಸಂತಿ = ಇದ್ದಾರೋ (ಆ ಮೋಕ್ಷವನ್ನು ಈಗಿನ ದೇವತೆಗಳು ಪಡೆದರು.)

ವಿವರಣೆ - ಪುರುಷಸೂಕ್ತದ ಕೊನೆಯ ಮಂತ್ರವು ಹೀಗೆ ಹೇಳುತ್ತಿದೆ - ಈಗಿನ ದೇವತೆಗಳು ಮೋಕ್ಷವನ್ನು ಹೊಂದಿದಾಗ ಹಿಂದಿನ ಕಲ್ಪದ ದೇವತೆಗಳು ಅಲ್ಲಿದ್ದರು ಎಂದು. ಇದರಿಂದ ಆಯಾಪದವಿಗಳ ಗಣಜೀವರು ಅನಂತರಾಗಿದ್ದಾರೆಂದು ಪುರುಷಸೂಕ್ತದಲ್ಲಿ ತಿಳಿಯುತ್ತದೆ.

'ಯತ್ರ ಪೂರ್ವೇ' ಎಂಬ ಶ್ರುತಿಗೆ ಮತ್ತೊಂದು ಅರ್ಥ

तत्वप्रदीपः – अथवा यत्र पूर्वे सिद्धा मुक्ताः सन्तीत्यर्थः । नचात्र नाकः स्वर्गः । नहि स्वर्गे पूर्वसिद्धानां पश्चात्तनानां च देवानां सहभावः सम्भवति । नाकशब्दश्चादुःखवाची मोक्षं वदन्नेव स्वार्थं पूर्णं लभते ।।

ಅಥವಾ 'ಯತ್ರ ಪೂರ್ವೇ' ಇತ್ಯಾದಿ ಶ್ರುತಿಗೆ ಮತ್ತೊಂದು ಅರ್ಥ - ಯತ್ರ = ಎಲ್ಲಿ, ಪೂರ್ವೇ = ಮೊದಲೇ, ಸಿದ್ಧಾಃ = ಕದೇವತೆಗಳು ಮುಕ್ತರಾಗಿರುವರು ಎಂದರ್ಥ.

ಈ ಪುರುಷಸೂಕ್ತದಲ್ಲಿರುವ 'ನಾಕ' ಶಬ್ದಕ್ಕೆ ಸ್ವರ್ಗವೆಂಬರ್ಥವನ್ನು ವಿವಕ್ಷಿಸಬಾರದು. ಏಕೆಂದರೆ ಸ್ವರ್ಗದಲ್ಲಿ ಹಿಂದಿನ ಕಲ್ಪದಲ್ಲಿರುವ ದೇವತೆಗಳು ಹಾಗೂ ಈಗಿನ ಕಲ್ಪದಲ್ಲಿರುವ ದೇವತೆಗಳು ಒಟ್ಟಿಗೆ ಇರಲು ಸಾಧ್ಯವಿಲ್ಲ. ಆದ್ದರಿಂದ ಸ್ವಲ್ಪವೂ ದುಃಖಕ್ಕೆ ಅವಕಾಶವಿಲ್ಲದ

ಮೋಕ್ಷವನ್ನೇ ನಾಕ ಶಬ್ದದಿಂದ ವಿವಕ್ಷಿಸಬೇಕು. ಆಗ ನಾಕಶಬ್ದದ ಸ್ವಾರ್ಥವನ್ನು ಪೂರ್ಣವಾಗಿ ಹೇಳಿದಂತಾಗುತ್ತದೆ.

ತತ್ವಪ್ರಕಾಶಿಕಾ

ಸೂತ್ರದ ಆಕ್ಷೇಪ ಭಾಗದ ವ್ಯಾಖ್ಯಾನ

तत्वप्रकाशिका – ।। विरोधः कर्मणीति चेन्नानेकप्रतिपत्तेर्दर्शनात् ।।

देवानां वेदविद्याधिकारमाक्षिप्य समादधत्सूत्रं पठित्वाऽऽक्षेपांशं तावद्व्याचष्टे – विरोध इति ।।

ದೇವತೆಗಳಿಗೆ ವೇದವಿದ್ಯಾಧಿಕಾರವಿದೆ ಎಂದು ಹಿಂದಿನ ಸೂತ್ರದಲ್ಲಿ ಸಮರ್ಥಿಸಲಾಯಿತು. ಅದನ್ನು ಆಕ್ಷೇಪ ಮಾಡಿ, ಸಮಾಧಾನ ಮಾಡುವಂತಹ ಸೂತ್ರವನ್ನು ಪಠಿಸಿ ಸೂತ್ರದಲ್ಲಿರುವ ಆಕ್ಷೇಪಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ - 'ವಿರೋಧಃ' ಇತ್ಯಾದಿಯಾಗಿ.

ದೇವತೆಗಳಿಗೆ ಅನಾದಿನಿತ್ಯತ್ವವಿದೆ

तत्वप्रकाशिका – यदुक्तं देवानां वेदविद्याधिकारसिद्ध्यर्थं सादिविनाशित्वम्, तदयुक्तम् । तथात्वे तेभ्यः पूर्वं देवताऽभावेन पूर्वकल्प-प्रयुक्तकर्मण्युद्देश्याभावाद्वैयर्थ्यास्व्यविरोधापत्तेः । अतः कर्मविरोधपरिहाराय देव ानामनादिनित्यत्वमेवाभ्युपेयम् ।

ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆಯೆಂದು ಸಮರ್ಥಿಸಲು ಉತ್ಪತ್ತಿ ಮತ್ತು ನಾಶವನ್ನು ಹೇಳಲಾಯಿತು. ಇದು ತಪ್ಪು. ಹಾಗಾದಲ್ಲಿ, ಯಾವ ದೇವತೆಗಳು ಈಗ ಉತ್ಪನ್ನರಾಗಿದ್ದಾರೋ, ಅವರಿಗಿಂತ ಹಿಂದೆ ದೇವತೆಗಳೇ ಇಲ್ಲದ ಕಾರಣ ಪೂರ್ವಕಲ್ಪದಲ್ಲಿ ಮಾಡಲ್ಪಟ್ಟ ಯಜ್ಞ-ಯಾಗಾದಿ ಕರ್ಮಗಳಿಗೆ ಉದ್ದಿಷ್ಟರಾದ ದೇವತೆಗಳೇ ಇಲ್ಲವೆಂದಂತಾಯಿತು.

ಅಂತಹ ಯಜ್ಞ-ಯಾಗಾದಿ ಕರ್ಮಗಳಿಗೆ ವೈಯ್ಯರ್ಥ್ಯವೆಂಬ ವಿರೋಧ ಬರುತ್ತದೆ. ಆದ್ದರಿಂದ ಕರ್ಮಗಳ ವಿರೋಧವನ್ನು ಪರಿಹಾರ ಮಾಡುವುದಕ್ಕಾಗಿ ದೇವತೆಗಳಿಗೆ ಅನಾದಿ-ನಿತ್ಯತ್ವವನ್ನೇ ಅಂಗೀಕರಿಸಬೇಕು.

ಅಸ್ತಿತ್ವವೇ ದೇವತೆಗಳಿಗೆ ಕೂಡುವುದಿಲ್ಲ

तत्वप्रकाशिका – तथा चार्थित्वाभावेनानधिकार एवेत्यर्थः ।

ಹೀಗೆ ಅನಾದಿನಿತ್ಯತ್ವವನ್ನು ದೇವತೆಗಳಿಗೆ ಒಪ್ಪಿದಾಗ, ಅವರಿಗೆ ಅರ್ಥಿತ್ವವನ್ನು ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ವೇದವಿದ್ಯೆಯಲ್ಲೂ ಸಹ ದೇವತೆಗಳಿಗೆ ಅಧಿಕಾರವು ಸಿದ್ಧಿಸುವುದಿಲ್ಲ.

ದೇವತಾಪದವಿಗೆ ಬರುವ ಮೊದಲು ದೇವತೆಗಳಿದ್ದರು

तत्वप्रकाशिका – परिहारांशं व्याचष्टे – नेति ।। भवेदयं विरोधो यदि पूर्वं देवताऽभावः ।

ಈ ಆಕ್ಷೇಪವನ್ನು ಪರಿಹಾರ ಮಾಡುವ ಸೂತ್ರಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ - 'ನ' ಇತ್ಯಾದಿ ಭಾಷ್ಯದಿಂದ. ಒಂದು ವೇಳೆ ಈ ದೇವತೆಗಳು ದೇವತಾಪದವಿಗೆ ಬರುವ ಮೊದಲು ಬೇರೆ ದೇವತೆಗಳೇ ಇಲ್ಲವೆಂದು ಹೇಳಿದ್ದಲ್ಲಿ ಮೇಲೆ ಹೇಳಿದ ವಿರೋಧಕ್ಕೆ ಅವಕಾಶವಿರುತ್ತಿತ್ತು.

ಹಿಂದಿನ ಕಲ್ಪದಲ್ಲಿ ಬೇರೆ ದೇವತೆಗಳಿದ್ದರು

तत्वप्रकाशिका – न चासावस्ति । एतद्देवानां पूर्वमभावेऽपि देवान्तरसद्भावात्।

ಆದರೆ ದೇವತೆಗಳು ಇಲ್ಲದ ಸಂದರ್ಭವೇ ಇಲ್ಲ. ಇದೇ ದೇವತೆಗಳು ಹಿಂದಿನ ಕಲ್ಪದಲ್ಲಿ ಇಲ್ಲದಿದ್ದರೂ, ಆವಾಗ ಬೇರೆ ದೇವತೆಗಳು ಇರುತ್ತಾರೆ.

ಈ ವಿಷಯದಲ್ಲಿ ಪ್ರಮಾಣವಿದೆ

तत्वप्रकाशिका – नच तत्र प्रमाणाभावः । अनेकेषां योग्यमनुष्याणां पूर्वं पूर्वं देवतापदप्राप्तेः श्रुत्युक्तत्वादित्यर्थः ।

ಈ ವಿಷಯದಲ್ಲಿ ಪ್ರಮಾಣವಿಲ್ಲವೆಂದು ಶಂಕಿಸಬಾರದು. ಯೋಗ್ಯರಾದ ಅನೇಕ ಪುರುಷರಿಗೆ ಅವರವರ ಮೊದಲು ದೇವತಾಪದವಿಯು ಪ್ರಾಪ್ತವಾಗಿದೆ ಎಂಬ ವಿಷಯದಲ್ಲಿ ಶ್ರುತಿಪ್ರಮಾಣವಿರುತ್ತದೆ.

'ಯಜ್ಞೇನ ಯಜ್ಞಮಯಜಂತ' ಎಂಬುದರ ಅರ್ಥ

तत्वप्रकाशिका – 'देवा देवत्वयोग्या मनुष्याः यज्ञेन ज्ञानकर्मात्मकेन यज्ञं भगवन्तमयजन्त ।

ಭಾಷ್ಯದಲ್ಲಿ ಉದಾಹರಿಸಿದ ಶ್ರುತ್ಯರ್ಥ ಹೀಗಿದೆ - ದೇವಾಃ = ದೇವತಾಪದವಿಗೆ ಯೋಗ್ಯರಾದ ಮನುಷ್ಯರು, ಯಜ್ಞೇನ = ಜ್ಞಾನ-ಕರ್ಮವೆಂಬ ಯಜ್ಞದಿಂದ, ಯಜ್ಞಂ = ಭಗವಂತನನ್ನು, ಅಯಜಂತ = ಪೂಜೆ ಮಾಡಿದರು.

ಹಿಂದಿನ ಕಲ್ಪದಲ್ಲಿ ದೇವತೆಗಳಿದ್ದಾರೆ ಎಂಬಲ್ಲಿ ಪ್ರಮಾಣ

तत्वप्रकाशिका – ततस्ते ज्ञानपूर्वकर्मणा स्वपदं प्राप्य मुख्यलोकधारका आसन् । ते पुनर्महात्मानो देवाः स्वाधिकारावसाने पूर्णसुखात्मकं मोक्षं प्राप्नुवन्, यत्र मोक्षे पूर्वकल्पे मुक्ताः साध्या देवाः सन्ति' इति मन्त्रार्थः ।।२७।।

ಅನಂತರ ತೇ = ಅವರು, ಜ್ಞಾನಪೂರ್ವಕವಾದ ಕರ್ಮದಿಂದ ತಮ್ಮ ತಮ್ಮ ಸ್ಥಾನವನ್ನು ಹೊಂದಿ ಈ ಲೋಕಕ್ಕೆ ಮುಖ್ಯ ಉದ್ಧಾರಕರು ಆಗಿದ್ದಾರೆ. ಅಂತಹ ಮಹಾತ್ಮರಾದ ದೇವತೆಗಳು ತಮ್ಮ ಅಧಿಕಾರವು ಮುಗಿಯುವಾಗ ಪೂರ್ಣಸುಖಾತ್ಮಕವಾದ ಮೋಕ್ಷವನ್ನು ಹೊಂದಿದರು. ಯಾವ ಮೋಕ್ಷದಲ್ಲಿ ಪೂರ್ವಕಲ್ಪದಲ್ಲಿ ಮುಕ್ತರಾಗಿರುವ ಸಾಧ್ಯನಾಮಕರಾದ ದೇವತೆಗಳು ಇರುತ್ತಾರೋ, ಎಂಬುದು ಮಂತ್ರದ ಅರ್ಥ.

ಭಾವದೀಪ

'ಯದುಕ್ತಮ್' ಇತ್ಯಾದಿ ಟೀಕೆಯಲ್ಲಿ ಭಾಷ್ಯದ ಪೂರ್ಣ ಅಭಿಪ್ರಾಯ

ಭಾವದೀಪಃ –

।। विरोधः कर्मणीति चेन्नानेकप्रतिपत्तेर्दर्शनात् ।।

भवन्तीत्यन्तभाष्यभावमाह – **यदुक्तमिति ।।** तत्पूर्वमित्यादि व्याचष्टे – **तथात्व इति ।।** सादित्व इत्यर्थः । नेत्येतद् व्याचष्टे – **नचासाविति ।।** पूर्वं देवताभावो नास्तीत्यर्थः ।

'ವಿರೋಧಃ ಕರ್ಮಣೀತಿ ಚೇನ್ನಾನೇಕಪ್ರತಿಪತ್ತೇರ್ದರ್ಶನಾತ್' ಎಂಬ ಸೂತ್ರವು ಪ್ರಾರಂಭವಾಗುತ್ತಿದೆ. 'ಮನುಷ್ಯಾಃ ಏವ ದೇವಾದಯೋ ಭವಂತಿ' ಎಂಬ ಭಾಷ್ಯದ ಅಭಿಪ್ರಾಯವನ್ನು ಟೀಕೆಯಲ್ಲಿ 'ಯದುಕ್ತಮ್' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ. 'ತತ್ಪೂರ್ವಮ್' ಇತ್ಯಾದಿ ಭಾಷ್ಯವನ್ನು 'ತಥಾತ್ವೇ' ಎಂಬ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ತಥಾತ್ವೇ' ಎಂದರೆ ದೇವತೆಗಳಿಗೆ ಉತ್ಪತ್ತಿಯಿರುವುದಾದಲ್ಲಿ ಎಂದರ್ಥ. 'ನ' ಇತ್ಯಾದಿ ಭಾಷ್ಯವನ್ನು 'ನಚಾಸು' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. ಹಿಂದೆ ದೇವತೆಗಳ ಇಲ್ಲದಿರುವಿಕೆಯು ಇರಲಿಲ್ಲ ಎಂದು ಇದರ ಅರ್ಥ.

ಪ್ರಕೃತಕ್ಕೆ ಉಪಯೋಗವಾಗುವಂತೆ ಶ್ರುತ್ಯರ್ಥ

ಭಾವದೀಪಃ – अनेकेषामित्यादि व्याचष्टे – **एतदिति ।। योग्येति ।।** देवत्व-योग्यमनुष्याणामित्यर्थः । प्रकृतोपयोगितयाऽर्थमाह – **देवा इति ।।**

'ಅನೇಕೇಷಾಂ' ಇತ್ಯಾದಿ ಭಾಷ್ಯವನ್ನು 'ಏತದ್ದೇವಾನಾಂ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ಯೋಗ್ಯಮನುಷ್ಯಾಣಾಮ್' ಎಂದರೆ ದೇವತಾಪದವಿಗೆ ಯೋಗ್ಯರಾದ ಮನುಷ್ಯರಿಗೆ ಎಂದರ್ಥ. ಪ್ರಕೃತಕ್ಕೆ ಉಪಯೋಗವಾಗುವಂತೆ ಶ್ರುತಿಯ ಅರ್ಥವನ್ನು 'ದೇವಾಃ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

'ಯಜ್ಞೋ ವೈ ವಿಷ್ಣುಃ' ಎಂಬುದರ ಅರ್ಥ

ಭಾವದೀಪಃ – ಭಗವನ್ತಮಿತಿ।। 'यज्ञो वै विष्णुः' इति श्रुतेरिति भावः । पूर्वोक्तं हेतूकृत्य तानीत्यादेरर्थमाह – ततस्ते इत्यादिना ।।

'ಯಜ್ಞೋ ವೈ ವಿಷ್ಣುಃ' ಎಂಬ ಶ್ರುತಿಯಿರುವುದರಿಂದ ಭಗವಂತನನ್ನು ಕುರಿತು ಯಾಗವನ್ನು ಮಾಡಿದರು ಎಂದರ್ಥ. ಹಿಂದೆ ಹೇಳಿದ್ದನ್ನು ಹೇತುವನ್ನಾಗಿ ವಿವಕ್ಷಿಸಿ 'ತಾನಿ' ಇತ್ಯಾದಿ ವಾಕ್ಯದ ಅಭಿಪ್ರಾಯವನ್ನು 'ತತಸ್ತೇ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

'ತೇ ಹ ನಾಕಮ್' ಇತ್ಯಾದಿ ಶ್ರುತಿಯ ಅರ್ಥ

ಭಾವದೀಪಃ –'ते ह नाकम्' इत्यादेरर्थः – ते पुनरिति ।। कं सुखम्, तदन्यद् अकम्, नेति नाकम् इति नञ्द्वयार्थमाह – पूर्णसुखेति ।। ೨೭ ।।

'ತೇ ಹ ನಾಕಮ್' ಇತ್ಯಾದಿ ಶ್ರುತಿಯ ಅರ್ಥವನ್ನು 'ತೇ ಪುನಃ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. 'ನಾಕಮ್' ಎಂಬುದಕ್ಕೆ ಮೋಕ್ಷವೆಂದರ್ಥ. ಏಕೆಂದರೆ, 'ಕಂ' ಎಂದರೆ ಸುಖವೆಂದರ್ಥ. ಸುಖಕ್ಕಿಂತ ಅನ್ಯವಾದ ದುಃಖವು ಅಕ ಎನಿಸುತ್ತದೆ. 'ನ ಅಕಮ್' ಎಂದರೆ ಸ್ವಲ್ಪವೂ ದುಃಖವಿಲ್ಲದ್ದು, ಅಂದರೆ ಪೂರ್ಣಸುಖಸ್ವರೂಪವಾದದ್ದು, ಮೋಕ್ಷವೇ ಆಗಿದೆ ಎಂಬುದಾಗಿ ಎರಡು ನಞ್‌ಗಳಿಂದ ಪೂರ್ಣಸುಖವೆಂಬರ್ಥವು ದೊರೆಯುತ್ತದೆ.

ಬ್ರಹ್ಮಸೂತ್ರ

'ಶಬ್ದ ಇತಿ ಚೇನ್ನಾತಃ' ಇತ್ಯಾದಿ ಸೂತ್ರವ್ಯಾಖ್ಯಾನ

ब्रह्मसूत्रम् – ।। शब्द इति चेन्नातः प्रभवात्प्रत्यक्षानुमानाभ्याम् ।। ೨೮ ।।

ಸೂತ್ರಾರ್ಥ -- 'ದೇವತ್ವವು ಸಾದಿಯಾದರೆ ವೇದಕ್ಕೆ ದೇವತೆಗಳೇ ಇಲ್ಲದ್ದರಿಂದ ಅಪ್ರಾಮಾಣ್ಯದೋಷ ಬರುತ್ತದಲ್ಲವೆ? ಎಂದು ಪ್ರಶ್ನಿಸಬಾರದು, 'ಧಾತಾ ಯಥಾ ಪೂರ್ವಮಕಲ್ಪಯತ್' ಎಂಬ ಪ್ರಮಾಣದಿಂದ ದೇವತಾಪ್ರವಾಹವು ನಿತ್ಯ ಎಂದು

ತಿಳಿಯುತ್ತದೆ. ಆದ್ದರಿಂದ ಒಬ್ಬದೇವತೆ ಇಲ್ಲದಿದ್ದರೂ ಮತ್ತೊಬ್ಬ ದೇವತೆ ಆ ಸ್ಥಾನದಲ್ಲಿರುವುದರಿಂದ ವೇದವು ಅಪ್ರಮಾಣವಾಗುವುದಿಲ್ಲ. ಈ ವಿಷಯದಲ್ಲಿ ಪ್ರತ್ಯಕ್ಷ, ಅನುಮಾನಗಳು ಪ್ರಮಾಣವಾಗಿವೆ.

ಅರ್ಥ -- ವಿರೋಧಃ ಎಂಬುದನ್ನು ಇಲ್ಲಿ ಆವೃತ್ತಿ ಮಾಡಿಕೊಳ್ಳಬೇಕು. ದೇವತೆಗಳಿಗೆ ಆದಿ ಮತ್ತು ಅಂತ್ಯವನ್ನು ಒಪ್ಪುವುದಾದರೆ, ಶಬ್ದೇ = ವೇದರೂಪವಾದ ಶಬ್ದದ ವಿಷಯದಲ್ಲಿ ಅಪ್ರಾಮಾಣ್ಯದೋಷವನ್ನು ಹೇಳಬೇಕಾದೀತು. ಇತಿಚೇನ್ನ = ಇದುತಪ್ಪು, ಅತಃ = 'ಧಾತಾ ಯಥಾ ಪೂರ್ವಮಕಲ್ಪಯತ್' ಎಂಬ ಪ್ರಮಾಣದಿಂದ, ಪ್ರಭವಾತ್ = ದೇವತೆಗಳ, ಪ್ರವಾಹವು ನಿತ್ಯ ಎಂದು ತಿಳಿಯುವುದರಿಂದ, ಪ್ರತ್ಯಕ್ಷಾನುಮಾನಾಭ್ಯಾಂ = ಮಹಾತ್ಮರ ಪ್ರತ್ಯಕ್ಷ ಹಾಗೂ ಬೇರೆಯವರಿಗೆ ಅನುಮಾನಪ್ರಮಾಣದಿಂದ ದೇವತೆಗಳ ಉತ್ಪತ್ತಿಯು ಪ್ರವಾಹತಃ ಸಿದ್ಧವಾಗಿದೆ. ಆದ್ದರಿಂದ 'ಧಾತಾ ಯಥಾ ಪೂರ್ವಮಕಲ್ಪಯತ್' ಎಂಬ ಶ್ರುತಿಯಲ್ಲಿ ಹೇಳಿದಂತೆ ದೇವತೆಗಳು ಪ್ರತಿಕಲ್ಪದಲ್ಲಿಯೂ ಇದ್ದೇ ಇರುತ್ತಾರೆಂದು ಹೇಳಬೇಕು.

ಬ್ರಹ್ಮಸೂತ್ರಭಾಷ್ಯ

ನಿತ್ಯವಾದ ವೇದವು ಸ್ವತಃ ಪ್ರಮಾಣ

ब्रह्मसूत्रभाष्यम् – 'वाचा विरूप नित्यया' (ऋ. ८-६४-६) इत्यादिश्रुतेरास्य-निश्चयान्नित्यत्वापेक्षत्वाच्च मूलप्रमाणस्य ।

ಅನುವಾದ - 'ವಾಚಾ ವಿರೂಪ ನಿತ್ಯಯಾ ' ಇತ್ಯಾದಿ ಶ್ರುತಿಯ ಆಧಾರದಂತೆ ವೇದವು ನಿತ್ಯವಾಗಿದೆ. ಒಂದು ವೇಳೆ ವೇದವು ಅನಿತ್ಯವಾದರೆ ಅದನ್ನು ಬರೆದ ವ್ಯಕ್ತಿ ಪ್ರಾಮಾಣಿಕ ಎಂದು ನಿಶ್ಚಯಿಸಲು ಸಾಧ್ಯವಿಲ್ಲ. ಅದರ ರಚನೆಗೆ ಮೂಲವಾದ ಪ್ರಮಾಣವೂ ಸಹ ನಿತ್ಯವೇ ಆಗುತ್ತದೆ.

ಪ್ರತಿಪದಾರ್ಥ -- ಮನುಷ್ಯರು ದೇವತೆಗಳಾಗಿ ಮುಕ್ತಿಯನ್ನು ಹೊಂದುವುದಾದರೆ ಅನಿತ್ಯರೆಂದಂತಾಯಿತು. ಅಂತಹ ಅನಿತ್ಯರಾದ ದೇವತೆಗಳನ್ನು ಪ್ರತಿಪಾದಿಸುವ ವೇದಗಳಿಗೆ ನಿತ್ಯತ್ವವು ಹೇಗೆ ಪ್ರಾಪ್ತವಾಗುತ್ತದೆ? ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ.

'ವಾಚಾ ವಿರೂಪ ನಿತ್ಯಯಾ' = ಋಗ್ವೇದಲ್ಲಿರುವ 'ವಾಚಾ ವಿರೂಪ ನಿತ್ಯಯಾ', ಇತ್ಯಾದಿ = ಇವೇ ಮೊದಲಾದ, ಶ್ರುತೇಃ = ಶ್ರುತಿಗಳಿಗೆ,

ಆಪ್ತಿ ಅನಿಶ್ಚಯಾತ್ = ಯಥಾರ್ಥವಾದ ವಕ್ಕವಿನ ನಿಶ್ಚಯವಿಲ್ಲದಿರುವುದರಿಂದ, ಮೂಲಪ್ರಮಾಣಸ್ಯ = ಮೂಲ ಪ್ರಮಾಣಕ್ಕೆ, ನಿತ್ಯತ್ವಾಪೇಕ್ಷತ್ವಾಚ್ಚ = ನಿತ್ಯತ್ವದ ಅಪೇಕ್ಷೆ ಇರುವುದರಿಂದಲೂ

ನಿತ್ಯವಾದ ವೇದದಿಂದ ಪ್ರತಿಪಾದ್ಯರಾದ ದೇವತೆಗಳು ಅನಿತ್ಯರಾಗಬಹುದು

ಬ್ರಹ್ಮಸೂತ್ರಭಾಷ್ಯಮ್ – स्वतः प्रामाण्यप्रसिद्धेश्च नित्यत्वाद्वेदस्य तद्वदितानां देवानामनित्यत्वात् ।

ಅನುವಾದ - ವೇದದ ಪ್ರಾಮಾಣ್ಯವು ಮತ್ತೊಂದನ್ನು ಅಪೇಕ್ಷಿಸುವುದಿಲ್ಲವೆಂದು ಪ್ರಸಿದ್ಧವಾಗಿದೆ. ಆದ್ದರಿಂದ ವೇದಗಳು ಸ್ವತಃ ಪ್ರಮಾಣವಾಗಿವೆ. ಆದ್ದರಿಂದಲೇ ನಿತ್ಯಗಳಾಗಿವೆ, ಅವುಗಳಲ್ಲಿ ಹೇಳಲ್ಪಟ್ಟ ದೇವತೆಗಳು ಅನಿತ್ಯರಾಗಬಹುದು.

ಪ್ರತಿಪದಾರ್ಥ -- ವೇದಗಳು ನಿತ್ಯವಾದರೆ ಆಪ್ತೋಕ್ತತ್ವ ಎಂಬ ಧರ್ಮದಿಂದ ಪ್ರಾಮಾಣ್ಯವನ್ನು ಹೇಳಲು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಸ್ವತಃ ಪ್ರಾಮಾಣ್ಯಪ್ರಸಿದ್ಧೇಃ = ವೇದದ ಪ್ರಾಮಾಣ್ಯವು ಸ್ವಾಭಾವಿಕವೆಂದು ಪ್ರಸಿದ್ಧವಾದ್ದರಿಂದ, ತದುದಿತಾನಾಂ = ವೇದದಲ್ಲಿ ಹೇಳಲ್ಪಟ್ಟ, ದೇವಾನಾಂ = ದೇವತೆಗಳಿಗೆ, ಅನಿತ್ಯತ್ವಾತ್ = ಅನಿತ್ಯತ್ವವು ಇರುವುದರಿಂದ.

ವೇದಕ್ಕೆ ವಿರೋಧ ಬರುತ್ತದೆ

ಬ್ರಹ್ಮಸೂತ್ರಭಾಷ್ಯಮ್ – पुनरन्यभावनियमाभावाच्च शब्दे विरोध इति चेत् –

ಅನುವಾದ - ಮತ್ತು ದೇವತೆಗಳ ಸ್ಥಾನದಲ್ಲಿ ಮತ್ತೊಬ್ಬರು ಇರಲೇಬೇಕು ಎಂಬ ನಿಯಮವಿಲ್ಲವಾದ ಕಾರಣ ವೇದ ರೂಪವಾದ ಶಬ್ದಕ್ಕೆ ವಿರೋಧ ಬರುತ್ತದೆ. ಇತಿ ಚೇತ್ - ಹೀಗೆ ಆಕ್ಷೇಪ.

ಪ್ರತಿಪದಾರ್ಥ -- ಪ್ರತಿಯೊಂದು ಕಲ್ಪಗಳಲ್ಲಿಯೂ ದೇವತೆಗಳು ಬೇರೆ ಬೇರೆಯಾದ್ದರಿಂದ ವಿರೋಧವಿಲ್ಲ. ಏಕೆಂದರೆ ಆ ಸ್ಥಾನದಲ್ಲಿ ಒಬ್ಬ ದೇವತೆಯೂ ಇಲ್ಲದಿದ್ದರೆ ಮತ್ತೊಬ್ಬ ದೇವತೆ ಇರುತ್ತಾನೆ. ಅಂತಹ ದೇವತೆಯನ್ನು ವೇದವು ಪ್ರತಿಪಾದಿಸಬಹುದು.

ಸ್ವತಃಪ್ರಾಮಾಣ್ಯಪ್ರಸಿದ್ಧೇಶ್ಚ = ವೇದವು ಸ್ವತಃ ಪ್ರಮಾಣವೆಂದು ಪ್ರಸಿದ್ಧವಾದ್ದರಿಂದ, ಹಾಗೂ ನಿತ್ಯತ್ವಾತ್ = ನಿತ್ಯವಾಗಿರುವುದರಿಂದ, ತದುದಿತಾನಾಂ = ವೇದದಲ್ಲಿ ಹೇಳಲ್ಪಟ್ಟ, ದೇವಾನಾಂ = ದೇವತೆಗಳಿಗೆ, ಅನಿತ್ಯತ್ವಾತ್ = ಅನಿತ್ಯತ್ವವಿರುವುದರಿಂದ.

ಬೇರೆ ಬೇರೆ ಜೀವಿಗಳು ದೇವತಾಪದವಿಯಲ್ಲಿರುವುದರಿಂದ ವೇದಕ್ಕೆ ಅಪ್ರಾಮಾಣ್ಯವೂ ಬರುವುದಿಲ್ಲ

ಬ್ರಹ್ಮಸೂತ್ರಭಾಷ್ಯಮ್ – ನ,

'सूर्याचन्द्रमसौ धाता यथापूर्वमकल्पयत्' (महाना. ९-७)
यथैव नियमः काले सुरादिनियमस्तथा ।
तस्मान्नानीदृशं कापि विश्वमेतद्भविष्यति ।।
इत्यादेः, अत एव शब्दात्तेषां प्रभवनियमात् महतां प्रत्यक्षात् ।
यथेदानीं तथोपर्यपि देवा भविष्यन्तीतीतरेषामनुमानाच्च ।।२८।।

ಅನುವಾದ - ಇದು ತಪ್ಪು. ಏಕೆಂದರೆ ಪರಮಾತ್ಮನು ಹಿಂದಿನ ಕಲ್ಪದಂತೆ ಸೂರ್ಯ ಚಂದ್ರಾದಿಗಳನ್ನು ಸೃಷ್ಟಿಮಾಡಿದನು, ಒಂದು ಯುಗವು ಮುಗಿದ ಮೇಲೆ ಮತ್ತೊಂದು ಯುಗವು ಪ್ರಾಪ್ತವಾಗುತ್ತದೆ ಎಂಬ ನಿಯಮ ಇದ್ದಂತೆ ಒಬ್ಬ ದೇವತೆಯು ಮೋಕ್ಷ ಹೊಂದಿದ ಮೇಲೆ ಮತ್ತೊಂದು ದೇವತೆಯು ಅದೇ ಸ್ಥಾನದಲ್ಲಿ ಬರುತ್ತಾನೆ ಎಂಬ ನಿಯಮವಿದೆ. ಆದ್ದರಿಂದ ಈ ಸಮಗ್ರ ಪ್ರಪಂಚವು ಹಿಂದೆ ಎಂದೂ ಸಹ ಹೀಗೆ ಇರುವುದಿಲ್ಲ ಇವೇ ಮೊದಲಾದ ಶಬ್ದಪ್ರಮಾಣಗಳಿಂದ ಮತ್ತು 'ಈ ವಿಶ್ವ ಎಂದೂ ಸಹ ಹೀಗೇ ಇರುವುದಿಲ್ಲ' ಮೊದಲಾದ ಶಬ್ದಪ್ರಮಾಣಗಳಿಂದ ಮತ್ತು ಮಹಾತ್ಮರ ಪ್ರತ್ಯಕ್ಷದಿಂದ 'ಈಗ ಇರುವಂತೆ ಮುಂದೆಯೂ ಸಹ ದೇವತೆಗಳು ಇರುತ್ತಾರೆ' ಎಂಬ ಅನುಮಾನ ಪ್ರಮಾಣದಿಂದಲೂ ದೇವತೆಗಳ ಜನನವನ್ನು ಒಪ್ಪಬೇಕು.

ಪ್ರತಿಪದಾರ್ಥ -- ಸೂತ್ರದಲ್ಲಿರುವ ಪರಿಹಾರಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ -

ನ = ಈ ಆಕ್ಷೇಪವು ತಪ್ಪು, ಏಕೆಂದರೆ ಧಾತಾ = ಚತುರ್ಮುಖಬ್ರಹ್ಮನು, ಪೂರ್ವಂ = ಹಿಂದಿನಕಲ್ಪದಲ್ಲಿ, ಯಥಾ = ಹೀಗೆ, ಸೂರ್ಯಾಚಂದ್ರಮಸೌ

= ಸೂರ್ಯ ಚಂದ್ರರನ್ನು, ಅಕಲ್ಪಯತ್ = ಸೃಷ್ಟಿಮಾಡಿದನು, ಯಥೈವ = ಯಾವರೀತಿಯಾಗಿ, ಕಾಲೇ = ಕಾಲಪ್ರವಾಹದಲ್ಲಿ, ನಿಯಮಃ = ದಿನ, ಮಾಸ ಇತ್ಯಾದಿ ನಿಯಮಗಳು ಇರುತ್ತವೋ, ತಥೈವ = ಹಾಗೆಯೇ, ಸುರಾದಿನಿಯಮಃ = ಒಬ್ಬ ದೇವತೆಯ ನಂತರ ಮತ್ತೊಬ್ಬ ದೇವತೆಯು ಬರುತ್ತಾನೆಂಬ ನಿಯಮವು ಇರುತ್ತದೆ.

ತಸ್ಮಾತ್ = ಆದ್ದರಿಂದ, ಏತತ್ = ಈ, ವಿಶ್ವಂ = ಜಗತ್ತು, ಅನೀದೃಶಂ = ಹಿಂದಿನ ಜಗತ್ತಿಗೆ ವಿಸದೃಶವು, ಕ್ವ = ಎಲ್ಲಿಯೂ, ನ ಭವಿಷ್ಯತಿ = ಆಗುವುದಿಲ್ಲ, ಇತ್ಯಾದೇಃ = ಇವೇ ಮೊದಲಾದ, ಶಬ್ದಾತ್ = ಪ್ರಮಾಣ ವಾಕ್ಯಗಳಿಂದ, ಪ್ರಭವನಿಯಮಾತ್ = 'ಯಥಾಪೂರ್ವಮಕಲ್ಪಯತ್' ಎಂಬಂತೆ ಪ್ರವಾಹದಂತೆ ಹುಟ್ಟುವ ಕ್ರಮವು ಇದ್ದೇ ಇರುವುದರಿಂದ, ಮಹತಾಂ = ಯೋಗಿಗಳ, ಪ್ರತ್ಯಕ್ಷಾತ್ = ಪ್ರತ್ಯಕ್ಷ ಪ್ರಮಾಣದಿಂದಲೂ, ಮತ್ತು ಯಥಾ = ಹೀಗೆ, ಇದಾನೀಮ್ = ಈ ಕಲ್ಪದಲ್ಲಿ ದೇವತೆಗಳಿದ್ದಾರೋ, ಹಾಗೆ ಉಪರ್ಯಪಿ = ಮುಂದಿನ ಕಲ್ಪದಲ್ಲಿಯೂ, ಭವಿಷ್ಯಂತಿ = ದೇವತೆಗಳು ಇರುತ್ತಾರೆ, ಇತಿ = ಹೀಗೆ, ಇತರೇಷಾಂ = ಜ್ಞಾನಿಗಳ, ಅನುಮಾನಾಚ್ಚ = ಅನುಮಾನಗಳಿಂದಲೂ ದೇವತೆಗಳಿಗೆ ಹುಟ್ಟನ್ನು ಒಪ್ಪಬಹುದು. ಆದರೂ ಸಹ ವೇದಗಳು ನಿತ್ಯವೂ ಆಗುತ್ತವೆ ಮತ್ತು ಪ್ರಮಾಣವೂ ಆಗುತ್ತವೆ.

ಸತ್ತರ್ಕದೀಪಾವಳಿ

'ಶಬ್ದ ಇತಿ ಚೇನ್ನಾತಃ' ಇತ್ಯಾದಿ ಸೂತ್ರದ ಟೀಕೆ

सत्तर्कदीपावलिः –

।। शब्द इति चेन्नातः प्रभवात्प्रत्यक्षानुमानाभ्याम् ।।

वेदानां नित्यत्वं च वाचा विरूप नित्ययेत्यादिश्रुत्या, तत्कर्तुरसिध्या च

सिद्धम् । कृतकत्वे प्रामाण्यं न स्यात् । वेदकर्तुराप्तत्वानिश्चयात् । विप्रलम्भादिसम्भवात् । स्मृतिपुराणादीनां पौरुषेयाणां श्रुतिमूलत्वेन प्रामाण्यस्य वेदनित्यत्वमन्तरेणासिद्धेः तद्वन्नित्यानां वैदिकेन्द्रादि शब्दानामिदानीन्तनेन्द्रादिनाशानन्तरं वाच्याभावेन विरोधापत्तिरिति वाच्यम् । घटादिशब्द वाच्यघटादिनाशेऽपि घटाद्यन्तरसृष्टिवत् सूर्यादिशब्दवाच्यसूर्यादिनाशेऽपि सूर्याद्यन्तरसृष्टिश्रुतेः । सूर्याचन्द्रमसौ धाता यथापूर्वकमल्पयदिति । तदाह । शब्देत्यादिना । यथर्तुष्वृतुलिङ्गानि नानारूपाणि पर्यये । दृश्यन्ते तानि तान्येव तथा तावद्युगादिष्वित्यनेन वचनेन यथैव कालनियमः इत्यस्यार्थो ज्ञातव्यः । तथा चोक्तम् । स हि विश्वसृजो विभुशम्भुपुरन्दरसूर्यमुखानपरानमारान् । सृजतीङ्यतमोऽवति हन्ति निजं पदमापयति प्रणतान् सुधिया । अतीतानागतकालयोः देवादिमत्वं दिव्यदृष्टीनां प्रत्यक्षात्सिध्यति । उपरितनकालो देवादिमान् कालत्वात्संमतवदित्यन्येषामनुमानात्सिध्यति । प्रलयकालस्य पक्षैकदेशत्वान्न तत्र कालत्वहेतोर्व्यभिचारः शङ्कनीयः । पर्वतैकदेशस्य अनग्निमत्वेऽपि नहि तत्र धूमवत्वहेतुर्व्यभिचरितो भवतीत्यर्थः।

'वाचा विरूप नित्यया' ಇತ್ಯಾದಿ ಶ್ರುತಿಯಿಂದ ವೇದಗಳು ನಿತ್ಯವೆಂದು ಸಿದ್ಧವಾಗಿದೆ. ಮತ್ತು ವೇದವನ್ನು ರಚನೆ ಮಾಡಿದ ವ್ಯಕ್ತಿಯು ಇದುವರೆಗೂ ಸಿದ್ಧವಾಗದ ಕಾರಣದಿಂದಲೂ ವೇದನಿತ್ಯತ್ವವು ಸಿದ್ಧವಾಗುತ್ತದೆ. ಒಂದು ವೇಳೆ ವೇದವು ನಿತ್ಯವಾಗದಿದ್ದಲ್ಲಿ, ಪ್ರಾಮಾಣ್ಯವೇ ಕೂಡುತ್ತಿರಲಿಲ್ಲ. ಏಕೆಂದರೆ ಯಾವ ವ್ಯಕ್ತಿಯು ವೇದಗಳನ್ನು ರಚಿಸಿದ್ದಾನೋ, ಅವನಲ್ಲಿ ಆಪ್ತತ್ವವನ್ನು ನಿಶ್ಚಯಿಸಲಾಗದು. ವಿಪ್ರಲಂಭ ಮೊದಲಾದ ದೋಷಗಳು ಅವನಲ್ಲಿ ಇರಬಹುದೆಂಬ ಸಂಶಯವುಂಟಾಗುತ್ತದೆ.

ಹಾಗಾದರೆ ಸ್ಮೃತಿ, ಪುರಾಣ ಮೊದಲಾದ ಪೌರುಷೇಯ ಶಾಸ್ತ್ರಗಳಿಗೆ ಪ್ರಾಮಾಣ್ಯವು ಹೇಗೆಂದು ಪ್ರಶ್ನಿಸಬಾರದು? ಅವುಗಳು ವೇದಮೂಲಕವಾದ್ದರಿಂದ, ವೇದಪ್ರಾಮಾಣ್ಯದ್ವಾರಾ

ಸ್ಮೃತಿಪುರಾಣಾದಿಗಳ ಪ್ರಾಮಾಣ್ಯವು ಸಿದ್ಧವಾಗಿದೆ. ವೇದಪ್ರಾಮಾಣ್ಯ ಸಿದ್ಧವಾಗಬೇಕೆಂದರೆ ವೇದನಿತ್ಯತ್ವದ ಸಮರ್ಥನೆ ಅನಿವಾರ್ಯ. ಇದರಂತೆ ವೇದದಲ್ಲಿರುವ ಇಂದ್ರ, ಸೂರ್ಯ ಮೊದಲಾದ ನಿತ್ಯವಾದ ಶಬ್ದಗಳಿಗೆ ಇಂದ್ರ-ಸೂರ್ಯಾದಿಗಳ ಮರಣದ ಅನಂತರ ವಾಚ್ಯವಾದ ಪದಾರ್ಥವೇ ಇಲ್ಲವೆಂದಾಗುತ್ತದೆ. ಹಾಗಾಗಿ ವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಘಟಶಬ್ದವಾಚ್ಯವಾದ ಒಂದು ಘಟ ನಾಶವಾದ ಮಾತ್ರದಿಂದ, ಘಟಶಬ್ದಕ್ಕೆ ಪ್ರತಿಪಾದ್ಯವಾದ ವಸ್ತುವೇ ಇಲ್ಲವೆಂದಾಗುವುದಿಲ್ಲ. ಸೃಷ್ಟವಾದ ಮತ್ತೊಂದು ಘಟವು ಪ್ರತಿಪಾದ್ಯವಾಗುತ್ತದೆ. ಅದರಂತೆ ಇಂದ್ರ ಸೂರ್ಯ ಮೊದಲಾದ ದೇವತೆಗಳು ನಾಶವಾದ ಮೇಲೆ ಬೇರೆ ಇಂದ್ರ-ಸೂರ್ಯಾದಿ ದೇವತೆಗಳು ಹುಟ್ಟುತ್ತಾರೆ. ಅವರು ಆಯಾ ಶಬ್ದಗಳಿಂದ ಪ್ರತಿಪಾದ್ಯರಾಗುತ್ತಾರೆ. 'ಸೂರ್ಯಚಂದ್ರಮಸೌ ಧಾತಾ ಯಥಾ ಪೂರ್ವಮಕಲ್ಪಯತ್' ಎಂಬ ಶ್ರುತಿ ಈ ವಿಷಯದಲ್ಲಿ ಆಧಾರವಾಗಿದೆ. ಇದನ್ನೇ ಸೂತ್ರದಲ್ಲಿ 'ಶಬ್ದಃ' ಇತ್ಯಾದಿಯಾಗಿ ಹೇಳಿದ್ದಾರೆ.

ಯಥರ್ತುಷ್ವೃತುಲಿಂಗಾನಿ ನಾನಾರೂಪಾಣಿ ಪರ್ಯಯೇ ।
ದೃಶ್ಯಂತೇ ತಾನಿ ತಾನ್ಯೇವ ತಥಾ ತಾವದ್ಯುಗಾದಿಷು ॥

ಎಂಬ ವಚನದಂತೆ ಪ್ರತಿಕಲ್ಪಗಳಲ್ಲಿಯೂ ಒಂದೇ ವಿಧವಾದ ದೇವತೆಗಳಿರುತ್ತಾರೆಂದು ಸ್ಪಷ್ಟವಾಗುತ್ತದೆ. ಇದನ್ನೇ ದ್ವಾದಶಸ್ತೋತ್ರದಲ್ಲಿ ಶ್ರೀಮದಾಚಾರ್ಯರು ಹೀಗೆ ಹೇಳಿದ್ದಾರೆ -

ಸ ಹಿ ವಿಶ್ವಸೃಜೋ ವಿಭುಶಂಭುಪುರಂದರ ಸೂರ್ಯಮುಖಾನಪರಾಮರಾನ್ ।
ಸೃಜತೀದ್ಯತವೋऽವತಿ ಹಂತಿ ನಿಜಂ ಪದಮಾಪಯತಿ ಪ್ರಣತಾನ್ ಸುಧಿಯಾ ॥

ಹಿಂದಿನ ಹಾಗೂ ಮುಂದಿನ ಕಾಲದಲ್ಲಿ ದೇವತೆಗಳ ಆಕಾರ ಮತ್ತು ಕೃತಿಗಳು ಒಂದೇ ಬಗೆಯಲ್ಲಿರುತ್ತವೆನ್ನಲು ಜ್ಞಾನಿಗಳ ದಿವ್ಯದೃಷ್ಟಿಯಿಂದಲೂ ಸಿದ್ಧವಾಗಿದೆ. ಉಳಿದವರಿಗೆ 'ಉಪರಿತನ ಕಾಲಃ ದೇವಾದಿಮಾನ್ ಕಾಲತ್ವಾತ್ ಸಂಮತವತ್' ಎಂಬ ಅನುಮಾನದಿಂದ ಸಿದ್ಧವಾಗುತ್ತದೆ. ಪ್ರಳಯಕಾಲವು ಪಕ್ಷೈಕದೇಶವಾದ್ದರಿಂದ ಅಲ್ಲಿ ಕಾಲತ್ವಹೇತುವಿಗೆ ವ್ಯಭಿಚಾರ ಬರುವುದಿಲ್ಲ. ಯಾವರೀತಿಯಾಗಿ ಪರ್ವತದ ಏಕದೇಶದಲ್ಲಿ ಅಗ್ನಿಯಿಲ್ಲದಿದ್ದರೂ ಅಲ್ಲಿ ಧೂಮವೆಂಬ ಹೇತು ಇರುತ್ತದೆಂದು ವ್ಯಭಿಚಾರವನ್ನು ಯಾರೂ ಹೇಳುವುದಿಲ್ಲ.

ತತ್ವಪ್ರದೀಪ

ವೇದನಿತ್ಯತ್ವವು ವೇದದಿಂದಲೇ ಸಿದ್ಧ

तत्वप्रदीपः – शब्द इति चेन्नातः प्रभवात्प्रत्यक्षानुमानाभ्याम् ।। ''वाचा विरूप नित्यया'' इति श्रुतेरेव वेदस्य नित्यत्वमुक्त्वा युक्तिं चाऽह - आप्तनिश्चयादित्यादिना ।

'ಶಬ್ದ ಇತಿ ಚೇನ್ನಾತಃ ಪ್ರಭವಾತ್‌ಪ್ರತ್ಯಕ್ಷಾನುಮಾನಾಭ್ಯಾಮ್' ಎಂಬ ಸೂತ್ರದ ವ್ಯಾಖ್ಯಾನ ಹೀಗಿದೆ - 'ವಾಚಾ ವಿರೂಪನಿತ್ಯಯಾ' ಎಂಬ ಶ್ರುತಿಯಿಂದಲೇ ವೇದಕ್ಕೆ ನಿತ್ಯತ್ವವನ್ನು ಹೇಳಿ, ಯುಕ್ತಿಯನ್ನೂ ಕೂಡ ಆಪ್ತನಿಶ್ಚಯಾತ್' ಎಂಬುದಾಗಿ ಹೇಳುತ್ತಿದ್ದಾರೆ.

ವಿವರಣೆ - ವೇದಕ್ಕೆ ನಿತ್ಯತ್ವವನ್ನು ಶ್ರುತಿಯಿಂದಲೇ ಸಮರ್ಥನೆ ಮಾಡಬೇಕು ಹೊರತು, ಯುಕ್ತ್ಯಾದಿಗಳಿಂದ ಮಾಡಬಾರದು. ಹೇಗೆ ಈಶ್ವರನನ್ನು ಯುಕ್ತಿಯಿಂದ ಸಾಧನೆ ಮಾಡುವುದು ಅತ್ಯಂತ ಅಯುಕ್ತವಾಗುತ್ತದೋ, ಅದರಂತೆ ಕೇವಲ ಯುಕ್ತಿಯಿಂದ ವೇದದ ಅಪೌರುಷೇಯತ್ವವನ್ನು ಅಥವಾ ಪ್ರಾಮಾಣ್ಯವನ್ನು ಸಮರ್ಥನೆ ಮಾಡುವುದು ಅಯುಕ್ತವಾಗುತ್ತದೆ. ಆದ್ದರಿಂದ ವೇದ ನಿತ್ಯತ್ವವಿಷಯದಲ್ಲಿ ಶ್ರುತಿಪ್ರಾಮಾಣ್ಯವನ್ನೇ ಹೇಳಬೇಕು. ಅದಕ್ಕೆ ಉಪೋದ್ಬಲಕವಾಗಿ 'ಆಪ್ತನಿಶ್ಚಯಾತ್' ಎಂದು ಹೇಳಿದ್ದಾರೆ.

ಧರ್ಮಾದಿಗಳು ಪ್ರತ್ಯಕ್ಷಾನುಮಾನದಿಂದ ಸಿದ್ಧವಲ್ಲ

तत्वप्रदीपः – अयं भावः - न तावद्धर्माद्यनङ्गीकारे शास्त्रस्यार्थवत्त्वम् । अर्थान्तराभावात् । अङ्गीकारे च न प्रत्यक्षादनुमानाद्वा तत्सिद्धिरिष्यते । तदगोचरत्वात्तेषाम् ।

ಭಾಷ್ಯದ ಅಭಿಪ್ರಾಯ ಇಷ್ಟು - ಧರ್ಮ-ಅಧರ್ಮ ಇವುಗಳನ್ನು ಅಂಗೀಕಾರ ಮಾಡದಿದ್ದರೆ, ಶಾಸ್ತ್ರಕ್ಕೆ ಪ್ರಯೋಜನವೇ ಇಲ್ಲದಂತಾಗುತ್ತದೆ. ಬೇರೆ ಪ್ರಯೋಜನವನ್ನಂತೂ ಹೇಳಲು ಸಾಧ್ಯವಾಗುವುದಿಲ್ಲ. ಧರ್ಮಾದಿಗಳನ್ನು ತಿಳಿಸುವುದೇ ಪ್ರಯೋಜನವೆಂದು ಅಂಗೀಕಾರ

ಮಾಡಲೇಬೇಕು. ಅಂಥ ಧರ್ಮಾದಿಗಳು ಪ್ರತ್ಯಕ್ಷದಿಂದ ಅಥವಾ ಅನುಮಾನದಿಂದ ಸಿದ್ಧವಾಗಲು ಸಾಧ್ಯವಿಲ್ಲ. ಏಕೆಂದರೆ ಪ್ರತ್ಯಕ್ಷದಿಂದಾಗಲೀ, ಅನುಮಾನದಿಂದಾಗಲೀ ಧರ್ಮ-ಅಧರ್ಮಗಳು ಗೋಚರವೇ ಅಲ್ಲ.

ಅಪೌರುಷೇಯಪ್ರಮಾಣವನ್ನು ಶರಣೆನ್ನಲೇಬೇಕು

तत्वप्रदीपः – नच पौरुषेयवाक्यात् तदवगमः सुलभः । पुरुषाणामाप्तिनिश्चये प्रमाणाभावात् । तन्निश्चयाकप्रमाणान्तराभ्युपगमे तस्यापि पौरुषेयत्वे तत्प्रामाण्यनिश्चयस्य पूर्वावस्थत्वादपौरुषेयमेषणीयं मूलप्रमाणम् ।

ಧರ್ಮ-ಅಧರ್ಮಗಳು ಆಗಮದಿಂದಲೇ ಗೋಚರವೆಂದು ಹೇಳಬೇಕು. ಅದರಲ್ಲೂ ಪೌರುಷೇಯಾಗಮದಿಂದ ಗೋಚರವೆಂದು ಹೇಳುವುದು ಸುಲಭವಲ್ಲ. ಏಕೆಂದರೆ ಪುರುಷರಲ್ಲಿ ಆಪ್ತಿನಿಶ್ಚಯವಿದೆ ಎನ್ನಲು ಯಾವುದೇ ಪ್ರಮಾಣವಿಲ್ಲ. ಆಪ್ತಿನಿಶ್ಚಯಕ್ಕಾಗಿ ಮತ್ತೊಂದು ಪ್ರಮಾಣವನ್ನು ಒಪ್ಪಿದರೆ ಆ ಪ್ರಮಾಣವೂ ಕೂಡ ಪೌರುಷೇಯವೆಂದೇ ನೀವು ಹೇಳುತ್ತೀರಿ. ಆಗ ವಾಕ್ಯದ ಪ್ರಾಮಾಣ್ಯನಿಶ್ಚಯಕ್ಕಾಗಿ ಮತ್ತೊಂದು ಪೌರುಷೇಯಪ್ರಮಾಣವನ್ನೇ ಒಪ್ಪಬೇಕು. ಹೀಗೆ ಅನವಸ್ಥಾದೋಷವು ಪ್ರಾಪ್ತವಾಗುವುದರಿಂದ ಇದರ ಪರಿಹಾರಕ್ಕಾಗಿ ಅಪೌರುಷೇಯವಾದ ಮೂಲಪ್ರಮಾಣವನ್ನು ಅನ್ವೇಷಣೆ ಮಾಡಬೇಕು.

ವೇದವನ್ನು ನಿತ್ಯವೆನ್ನಬೇಕು

तत्वप्रदीपः – प्रसिद्धं च वेदस्य स्वतःप्रमाण्यं, वेदत्वादेव । ''वेदा ह्येवैनं वेदयन्ति'' इत्यन्यनिरपेक्षप्रामाण्यश्रुतेश्च । न तद्युज्यते पौरुषेयत्वे । पुरुषज्ञानाधीनत्वप्रसङ्गात् । तस्य चाज्ञानविप्रलम्भसम्भवात् । तस्मान्नित्यो वेदोऽभ्युपगन्तव्यः ।।

ಅಪೌರುಷೇಯವಾದ ವೇದವು ಸ್ವತಃಪ್ರಮಾಣವೇ ಆಗಿದೆ. ವೇದವೆಂಬ ಶಬ್ದಕ್ಕೆ ಇದನ್ನು ಹೇಳುತ್ತಿದೆ. 'ವೇದಾ ಹ್ಯೇವೈನಂ ವೇದಯಂತಿ' ವೇದವು ಮತ್ತೊಂದರ ಅಪೇಕ್ಷೆಯನ್ನು ಪಡದೇ

ಸ್ವತಃ ಇದನ್ನು ತಿಳಿಸುತ್ತಿದೆ ಎಂಬ ಮಾತಿನಿಂದ ನಿರಪೇಕ್ಷಿತವಾದ ಪ್ರಮಾಣವೆಂಬುದು ಸಿದ್ಧವಾದ ವಿಚಾರ. ಇಂಥ ವೇದವನ್ನು ಪೌರುಷೇಯವೆಂದು ಹೇಳಿದರೆ ಅನ್ಯನಿರಪೇಕ್ಷವಾದ ಪ್ರಮಾಣವನ್ನು ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಪುರುಷಜ್ಞಾನಾಧೀನ್ಯವನ್ನು ಒಪ್ಪುವ ಪರಿಸ್ಥಿತಿ ಬರುತ್ತದೆ. ಹಾಗೇ ಒಪ್ಪಿದರೆ ಆ ಪುರುಷನಲ್ಲಿ ಅಜ್ಞಾನ, ವಿಪ್ರಲಂಭ ಮೊದಲಾದ ದೋಷಗಳಿರುವುದರಿಂದ ವಾಕ್ಯವೂ ಕೂಡ ದುಷ್ಟವಾಗುತ್ತದೆ. ಹಾಗಾಗಿ ವೇದವನ್ನು ನಿತ್ಯವೆಂದು ಅಂಗೀಕಾರ ಮಾಡಬೇಕು.

ವೇದವು ಅಪ್ರಮಾಣವೆಂದು ಪೂರ್ವಪಕ್ಷ

तत्वप्रदीपः – न तस्य नित्यस्यानित्यैर्देवैर्वाच्यवाचकभावः सम्बोभवीति। तस्माच्छब्दे प्रामाण्यविरोधः । कञ्चित्कालं वाच्याभावेनाप्रामाण्यात् सर्वदाऽपि तथात्वप्राप्तेः

ಹೀಗೆ ವೇದವು ನಿತ್ಯವೆಂದು ಸಿದ್ಧವಾಯಿತು. ಇಂಥ ನಿತ್ಯವಾದ ವೇದವಾಕ್ಯಗಳಿಂದ ಅನಿತ್ಯವಾದ ದೇವತೆಗಳಿಗೆ ವಾಚ್ಯವಾಚಕಭಾವಸಂಬಂಧವು ಸರ್ವಥಾ ಕೂಡುವುದಿಲ್ಲ. ಆದ್ದರಿಂದ ಶಬ್ದರೂಪವಾದ ವೇದಕ್ಕೆ ಪ್ರಾಮಾಣ್ಯವಿರೋಧವು ಪ್ರಾಪ್ತವಾಗುತ್ತದೆ. ಏಕೆಂದರೆ ಪ್ರಳಯಕಾಲದಲ್ಲಿ ವಾಚ್ಯವೇ ಇಲ್ಲದ್ದರಿಂದ ಅಪ್ರಾಮಾಣ್ಯ ಬರುತ್ತದೆ. ಆ ಉದಾಹರಣೆಯಿಂದ ಉಳಿದ ಕಾಲದಲ್ಲಿರುವ ವೇದಕ್ಕೂ ಅಪ್ರಾಮಾಣ್ಯವಿದೆಯೆಂದು ಅನುಮಾನ ಮಾಡುತ್ತೇವೆಂದು ಈ ಸೂತ್ರದ ಪೂರ್ವಪಕ್ಷ.

ವಿಶೇಷವಿಚಾರ- ಪಂಡಿತಾಚಾರ್ಯರುನಿತ್ಯವಾದವೇದವುಅನಿತ್ಯವಾದದೇವತೆಗಳನ್ನು ಪ್ರತಿಪಾದಿಸಲು ಹೇಗೆ ಸಾಧ್ಯ, ಪ್ರಳಯಕಾಲದಲ್ಲಿ ದೇವತೆಗಳೇ ಇರುವುದಿಲ್ಲವಲ್ಲ? ಎಂದು ಈ ಸೂತ್ರದ ಪೂರ್ವಪಕ್ಷವನ್ನು ತೋರಿಸಿದ್ದಾರೆ. ತತ್ವಪ್ರಕಾಶಿಕೆಯಲ್ಲಿಯೂ ಇದಕ್ಕೆ ಅನುಗುಣವಾಗಿಯೇ ಪೂರ್ವಪಕ್ಷದ ಪ್ರಸಕ್ತಿಯಿದೆ. ಆದರೆ 'ದೇವಾನಾಂ ಆದ್ಯಂತವತ್ತ್ವೇ ವೇದಾಪ್ರಾಮಾಣ್ಯವಿರೋಧಾಪಾತಾತ್' ದೇವತೆಗಳಿಗೆ ಉತ್ಪತ್ತಿನಾಶವನ್ನು ಅಂಗೀಕಾರ ಮಾಡಿದರೆ ವೇದಪ್ರಾಮಾಣ್ಯಕ್ಕೆ ವಿರೋಧ ಬರುತ್ತದಲ್ಲವೇ? ಎಂದು ತತ್ವಪ್ರಕಾಶಿಕೆಯಲ್ಲಿ ಪೂರ್ವಪಕ್ಷ ಮಾಡಿದ್ದಾರೆ. ಪ್ರಕೃತ ತತ್ವಪ್ರದೀಪದಲ್ಲಿ ವೇದವು ನಿತ್ಯವಾದರೆ, ಅನಿತ್ಯವಾದ ದೇವತೆಗಳನ್ನು ಪ್ರತಿಪಾದನೆ ಮಾಡಲು ಸಾಧ್ಯವಿಲ್ಲದ ಕಾರಣ ಅಪ್ರಾಮಾಣ್ಯ ಬರುತ್ತದೆಂದು ಹೇಳಿದ್ದಾರೆ. ಇಬ್ಬರ ಅಭಿಪ್ರಾಯವೂ ಒಂದೇ ಎಂಬುದು ಸ್ಪಷ್ಟ.

ಪಾಠಾಂತರದ ಬಗ್ಗೆ

ಮುದ್ರಿತ ಪುಸಕ್ತಗಳಲ್ಲಿ 'ದೇವಾನಾಮ್ ಅನಿತ್ಯತ್ವಾತ್' 'ಪುನಃ ಅನ್ಯಭಾವ-ನಿಯಮಾಭಾವಾಚ್ಚ ಶಬ್ದೈವಿರೋಧಃ' ಎಂಬುದಾಗಿ ಭಾಷ್ಯದ ವಾಕ್ಯವಿದೆ. ಆದರೆ ಇಲ್ಲಿ 'ಪುನಃ ಅನ್ಯಭಾವ ನಿಯಮಾಭಾವಚ್ಚ' ಎಂಬುದು ಅನಗತ್ಯ. ತತ್ವಪ್ರದೀಪದಲ್ಲಿ ಈ ಭಾಷ್ಯವಾಕ್ಯಕ್ಕೆ ವ್ಯಾಖ್ಯಾನ ಮಾಡುವಾಗ 'ಅನಿತ್ಯತ್ವಾತ್' ಎಂಬುದಕ್ಕೆ ವ್ಯಾಖ್ಯಾನ ಮಾಡಿ, ಅನಂತರ 'ಶಬ್ದೈವಿರೋಧಃ ಇತಿಚೇತ್' ಎಂಬುದಕ್ಕೆ ವ್ಯಾಖ್ಯಾನವನ್ನು ಮಾಡಿದ್ದಾರೆ. ಅನ್ಯಭಾವನಿಯಮಾಭಾವಚ್ಚ ಎಂಬುದನ್ನು ಪ್ರತೀಕಗ್ರಹಣ ಮಾಡಿ ವ್ಯಾಖ್ಯಾನ ಮಾಡಿಯೇ ಇಲ್ಲ. ಮತ್ತು ತತ್ವಪ್ರಕಾಶಿಕೆಯಲ್ಲಿಯೂ ಕೂಡ ಇದರ ವ್ಯಾಖ್ಯಾನ ಕಾಣಿಸುತ್ತಿಲ್ಲ. ಆದ್ದರಿಂದ ಈ ವಾಕ್ಯ ಪ್ರಕ್ಷಿಪ್ತವಾಗಿರಬಹುದು. 'ದೇವಾನಾಮ್ ಅನಿತ್ಯತ್ವಾತ್ ಶಬ್ದೈವಿರೋಧಃ ಇತಿ ಚೇತ್' ಎಂಬ ವಾಕ್ಯದಿಂದಲೇ ಸ್ವರಸವಾದ ಅರ್ಥವು ತಿಳಿಯುತ್ತದೆ.

ದೇವತೆಗಳು ನಿತ್ಯರಾದ್ದರಿಂದ ವೇದವೂ ನಿತ್ಯ

तत्वप्रदीपः – इति चेन्न । ''सूर्याचन्द्रमसौ धाता'', ''यथैव कालनियमः'' इत्यादेरत एव शब्दात्तेषां प्रभवनियमावगमात् ।

ಈ ಆಕ್ಷೇಪವು ತಪ್ಪು. ಏಕೆಂದರೆ 'ಸೂರ್ಯಾಚಂದ್ರಮಸೌ ಧಾತಾ', 'ಯಥೈವ ಕಾಲನಿಯಮಃ' ಇತ್ಯಾದಿ ಶ್ರುತಿಗಳಿಂದ 'ಅಥ' ಹಿಂದೆ ದೇವತೆಗಳು ಹೇಗಿದ್ದರೋ, ಹಾಗೇ ಮುಂದೆಯೂ ಇರುತ್ತಾರೆ ಎಂಬ ನಿಯಮದಿಂದ ದೇವತೆಗಳು ನಿತ್ಯರೆಂದು ಸ್ಪಷ್ಟವಾಗುತ್ತದೆ.

तत्वप्रदीपः – अयं हि शब्दोऽत एव धातुर्विष्णोस्तेषां तेषां देवानां पूर्वपूर्वप्रकारेण प्रभवनियमं व्यपदिशति । महतामतीतानागतार्थदर्शिनां पूर्वपूर्वावगमे पुनरन्यान्यस्य प्रभवनियमस्य प्रत्यक्षसिद्धत्वादितरेषामनुमान-सिद्धत्वाच्च विमतः कालो देववानप्रलयकालत्वादिदानीन्तनकालवदिति ।।

ಈ ಶ್ರುತಿಪ್ರಮಾಣವು ವಿಷ್ಣುವಿನ ದೆಸೆಯಿಂದ ದೇವತೆಗಳು ಹಿಂದಿನ ಕಲ್ಪದ ಕ್ರಮದಲ್ಲಿಯೇ ಸೃಷ್ಟರಾದರು ಎಂಬ ಪ್ರಭವನಿಯಮವನ್ನು ಹೇಳುತ್ತಿದೆ. ಆದ್ದರಿಂದ ದೇವತಾನಿತ್ಯತ್ವವಿಷಯದಲ್ಲಿ

ಶ್ರುತಿಪ್ರಮಾಣವಿದೆ. ಅಷ್ಟೇ ಅಲ್ಲದೇ ಮಾರ್ಕಂಡೆಯರೇ ಮೊದಲಾದ ಮಹಾತ್ಮರಿಗೆ ಅತೀತಾನಾಗತಪದಾರ್ಥಗಳ ದರ್ಶನವಿರುವುದರಿಂದ ಅವರು ಹಿಂದಿನ ಮುಂದಿನ ಕಲ್ಪದಲ್ಲಿರುವ ದೇವತೆಗಳನ್ನು ಪ್ರತ್ಯಕ್ಷವಾಗಿ ಕಾಣುತ್ತಾರೆ. ಮಹಾತ್ಮರಲ್ಲದ ಉಳಿದವರಿಗೆ ಅನುಮಾನದಿಂದ ಈ ದೇವತಾನಿತ್ಯತ್ವವು ಸಿದ್ಧವಾಗುತ್ತದೆ. ಮತ್ತು ಈ ವಿಷಯದಲ್ಲಿ ಅನುಮಾನ ಪ್ರಮಾಣ ಹೀಗಿದೆ - 'ವಿಮತಃ ಕಾಲಃ ದೇವವಾನ್ ಅಪ್ರಳಯಕಾಲತ್ವಾತ್ ಇದಾನೀಂತನಕಾಲವತ್' ಈ ವರ್ತಮಾನ ಕಾಲವು ಪ್ರಳಯಕಾಲವಲ್ಲದ್ದರಿಂದ ಹೇಗೆ ದೇವತೆಗಳುಳ್ಳದ್ದಾಗಿಯೋ, ಅದರಂತೆ ಮುಂದಿನ ಕಾಲವೂ ಕೂಡ ಪ್ರಳಯಕಾಲವಲ್ಲದ್ದರಿಂದ ದೇವತೆಗಳಿಂದ ಕೂಡಿದ್ದೇ ಆಗಿರುತ್ತದೆ ಎಂದು.

ವಿಶೇಷವಿಚಾರ - ಈ ಕಲ್ಪದಲ್ಲಿ ದೇವತೆಗಳು ಹೇಗಿದ್ದಾರೋ, ಅದರಂತೆ ಮುಂದಿನ ಕಲ್ಪದಲ್ಲಿಯೂ ಕೂಡ ದೇವತೆಗಳು ಇರುವುದರಿಂದ ವಾಚ್ಯವಾದ ಪದಾರ್ಥ ಇಲ್ಲದೇ ವಾಚಕವಾದ ಪದಮಾತ್ರ ಇರುವ ಪರಿಸ್ಥಿತಿ ಇಲ್ಲ. ಆದ್ದರಿಂದ ವೇದನಿತ್ಯತ್ವಕ್ಕೆ ಹಾನಿಯಿಲ್ಲ ಎಂಬ ಸಮರ್ಥನೆ ಈ ಸೂತ್ರದ ಉದ್ದೇಶ. ಆದರೆ ಇಲ್ಲಿ ಬರುವ ಸಮಸ್ಯೆ ಹೀಗಿದೆ -

ಪ್ರಳಯಕಾಲದಲ್ಲಿ ದೇವತೆಗಳೇ ಇರುವುದಿಲ್ಲ. ಆಗ ವಾಚ್ಯವಾದ ಪದಾರ್ಥವಿಲ್ಲದ್ದರಿಂದ ವೇದಕ್ಕೆ ಅಪ್ರಾಮಾಣ್ಯ ಬರುತ್ತದಲ್ಲವೇ? ಎಂದು. ಒಂದು ವೇಳೆ ಪ್ರಳಯಕಾಲದಲ್ಲಿ ವೇದಕ್ಕೆ ಅಪ್ರಾಮಾಣ್ಯ ಬಂದರೆ ಆ ಕಾಲದ ವೇದ ಅಪ್ರಾಮಾಣ್ಯದ ಉದಾಹರಣೆಯಿಂದ ಉಳಿದ ಕಾಲದಲ್ಲಿರುವ ವೇದಕ್ಕೂ ಕೂಡ ಅಪ್ರಾಮಾಣ್ಯವನ್ನು ಸಾಧಿಸಬಹುದು ಎಂಬುದನ್ನು 'ಕಂಚಿತ್ಕಾಲಂ ವಾಚ್ಯಾಭಾವೇನಾಪ್ರಾಮಾಣ್ಯಾತ್ ಸರ್ವದಾऽಪಿ ತಥಾತ್ವಪ್ರಾಪ್ತೇಃ' ಎಂಬ ವಾಕ್ಯದಿಂದ ಪಂಡಿತಾಚಾರ್ಯರು ಆಕ್ಷೇಪವನ್ನು ತೋರಿಸಿದ್ದಾರೆ.

ಈ ಆಕ್ಷೇಪಕ್ಕೆ ಸಮಾಧಾನವನ್ನು ಹೀಗೆ ತಿಳಿಯಬೇಕು - ಪಂಡಿತಾಚಾರ್ಯರು ಪ್ರಳಯಕಾಲದಲ್ಲಿ ದೇವತೆಗಳು ಇಲ್ಲದಿದ್ದರೂ ಕೂಡ ಪರಮಾತ್ಮನು ಭೂತಭವಿಷ್ಯದ್ ವಿಷಯಕವಾಗಿ ವೇದಾರ್ಥವನ್ನು ತಿಳಿದಿರುತ್ತಾನೆ. ಇಂದ್ರ, ಸೂರ್ಯ, ಚಂದ್ರ ಮೊದಲಾದ ದೇವತೆಗಳು ಪ್ರಳಯಕಾಲದಲ್ಲಿ ಇರುವುದಿಲ್ಲ. ತತ್‌ಪ್ರತಿಪಾದಕವಾದ ಮಂತ್ರಗಳನ್ನು ಭಗವಂತನು ಭೂತಭವಿಷ್ಯದ್ ವಿಷಯಕವಾಗಿ ತಿಳಿಯುತ್ತಾನಾದ್ದರಿಂದ ವೇದಾಪ್ರಾಮಾಣ್ಯಕ್ಕೆ ಅವಕಾಶವೇ ಇಲ್ಲ ಎಂದು.

ಮತ್ತೊಂದು ಸಮಸ್ಯೆ ಹೀಗಿದೆ - ಸತ್ತರ್ಕದೀಪಾವಳಿಯಲ್ಲಿ ಶ್ರೀಪದ್ಮನಾಭತೀರ್ಥರು 'ಉಪರಿತನಕಾಲಃ ದೇವಾದಿಮಾನ್ ಕಾಲತ್ವಾತ್ ಸಮ್ಮತವತ್' ಎಂಬ ಅನುಮಾನದಿಂದ

ಮುಂದಿನ ಕಾಲದಲ್ಲಿ ದೇವತೆಗಳಿದ್ದಾರೆಂದು ಸಮರ್ಥನೆ ಮಾಡಿದ್ದಾರೆ. ಉಪರಿತನ ಕಾಲವೆಂದರೆ ಪ್ರಳಯಕಾಲವನ್ನೂ ಕೂಡ ವಿವಕ್ಷಿಸಬಹುದಾದ್ದರಿಂದ ಪ್ರಳಯಕಾಲವು ಪಕ್ಷೈಕದೇಶವಾಗುವುದರಿಂದ ಕಾಲತ್ವ ಹೇತುವಿಗೆ ವ್ಯಭಿಚಾರ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ ಶ್ರೀಪದ್ಮನಾಭತೀರ್ಥರು 'ಪರ್ವತೈಕದೇಶಸ್ಯ ಅನಗ್ನಿಮತ್ತ್ವೇऽಪಿ ನಹಿ ತತ್ರ ಧೂಮವತ್ತ್ವಹೇತುಃ ವ್ಯಭಿಚರಿತೋ ಭವತಿ' ಪರ್ವತದ ಏಕದೇಶವು ಅಗ್ನಿವುಳ್ಳದ್ದಾಗದಿದ್ದರೂ ಅಲ್ಲಿ ಧೂಮವತ್ತ್ವಹೇತುವಿಗೆ ವ್ಯಭಿಚಾರವಿಲ್ಲ ಎಂದು ಉತ್ತರಿಸಿದ್ದಾರೆ. ಅಭಿಪ್ರಾಯವಿಷ್ಟು - 'ಪರ್ವತೋ ವಹ್ನಿಮಾನ್ ಧೂಮಾತ್' ಎಂದು ಅನುಮಾನ ಮಾಡಿದಾಗ ಪರ್ವತದ ಎಲ್ಲಾ ಭಾಗವೂ ಕೂಡ ಪಕ್ಷಕೋಟಿಯಲ್ಲೇ ಸೇರಿದೆ. ಆ ಎಲ್ಲಾ ಭಾಗದಲ್ಲಿಯೂ ಅಗ್ನಿ ಇರಲು ಸಾಧ್ಯವಿಲ್ಲ. ಅಗ್ನಿಯಿಲ್ಲದ ಭಾಗದಲ್ಲಿ ಧೂಮವತ್ತ್ವ ಎಂಬ ಹೇತುವಿರುವುದರಿಂದ ವ್ಯಭಿಚಾರ ಬರುತ್ತದಲ್ಲವೇ? ಎಂದು ಹೇಗೆ ಪ್ರಶ್ನಿಸುವುದಿಲ್ಲವೋ, ಅದರಂತೆ ಸಮಸ್ತ ಭವಿಷ್ಯತ್ ಕಾಲವನ್ನು ಪಕ್ಷವನ್ನಾಗಿ ಮಾಡುತ್ತೇವೆ. ಆಗ ಪ್ರಳಯಕಾಲವೆಂಬ ಪಕ್ಷದ ಒಂದು ಭಾಗದಲ್ಲಿ ಹೇತುವಿಲ್ಲವೆಂದು ವ್ಯಭಿಚಾರ ಹೇಳಬಾರದೆಂದು ಉತ್ತರಿಸಿದ್ದಾರೆ.

ಆದರೆ ಪಂಡಿತಾಚಾರ್ಯರ ಉತ್ತರಕ್ಕೂ ಶ್ರೀಪದ್ಮನಾಭತೀರ್ಥರು ಹೇಳುವ ಉತ್ತರಕ್ಕೂ ವ್ಯತ್ಯಾಸವಿದೆ. ಪಂಡಿತಾಚಾರ್ಯರು ಪ್ರಳಯಕಾಲದಲ್ಲಿಯೂ ಈಶ್ವರನ ಬುದ್ಧಿಯಲ್ಲಿ ಎಲ್ಲವೂ ವಿಷಯವಾಗಿರುವುದರಿಂದ ಭೂತಭವಿಷ್ಯತ್ ವಿಷಯಕವಾಗಿ ಏತತ್‌ಪ್ರಾಮಾಣ್ಯವಿದೆಯೆಂದು ಹೇಳುತ್ತಾರೆ. ಆದರೆ ಪದ್ಮನಾಭತೀರ್ಥರು ಪ್ರಳಯಕಾಲದಲ್ಲಿ ವಾಚ್ಯವಾದ ಪದಾರ್ಥ ಇಲ್ಲದಿದ್ದರೂ ಪ್ರಾಮಾಣ್ಯಕ್ಕೆ ಹಾನಿಯಿಲ್ಲವೆಂದು ಹೇಳಿದ್ದಾರೆ. ಈ ಎರಡು ವಾಕ್ಯಗಳ ಬಗ್ಗೆ ವಿದ್ವಾಂಸರು ಇನ್ನೂ ಹೆಚ್ಚು ವಿಚಾರ ಮಾಡಬೇಕು.

ಪಾಠಾಂತರದ ಬಗ್ಗೆ

'ಯಥೇವ ನಿಯಮತ್ ಕಾಲೇ' ಎಂಬುದು ಪ್ರಚಲಿತಪಾಠ. ಆದರೆ ಪಂಡಿತಾಚಾರ್ಯರು 'ಯಥೈವ ಕಾಲನಿಯಮಃ' ಎಂಬ ಪ್ರತೀಕವನ್ನು ಸ್ವೀಕಾರ ಮಾಡಿದ್ದರಿಂದ ಮೂಲದಲ್ಲೂ 'ಯಥೈವ ಕಾಲನಿಯಮಃ' ಎಂದೇ ಆಗಬೇಕು. ಇದೇ ಪ್ರಾಚೀನಪಾಠವೆಂದು ಸ್ಪಷ್ಟವಾಗುತ್ತದೆ.

ತತ್ವಪ್ರಕಾಶಿಕಾ

ಸೂತ್ರದಲ್ಲಿರುವ ಆಕ್ಷೇಪ ಭಾಗದ ವಿವರಣೆ

तत्वप्रकाशिका –

।। शब्द इति चेन्नातः प्रभवात्प्रत्यक्षानुमानाभ्याम् ।।

पुनरुक्तमाक्षिप्य समादधत्सूत्रं पठित्वाऽऽक्षेपांशं विवृणोति – शब्द इति।।

ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆ ಎಂಬ ಹಿಂದೆ ಹೇಳಿದ ಪ್ರಮೇಯದ ಬಗ್ಗೆ ಆಕ್ಷೇಪ ಮಾಡಿ ಸಮಾಧಾನ ನೀಡುವ ಸೂತ್ರವನ್ನು ಪಠಿಸಿ, ಸೂತ್ರದಲ್ಲಿರುವ ಆಕ್ಷೇಪಭಾಗವನ್ನು ವಿವರಿಸುತ್ತಿದ್ದಾರೆ - 'ಶಬ್ದ' ಇತ್ಯಾದಿ ಭಾಷ್ಯದಿಂದ.

ವೇದಪ್ರಾಮಾಣ್ಯಕ್ಕೆ ವಿರೋಧ

तत्वप्रकाशिका – अत्रापि विरोधपदाकर्षणम् । यद्देवानामधिकार-सिद्ध्यर्थमाद्यन्तवत्त्वमुक्तम् । न तद्युक्तम् । देवानामाद्यन्तवत्त्वे वेदाप्रामाण्याख्यविरोधापातात् ।

ಹಿಂದಿನ ಸೂತ್ರದಲ್ಲಿರುವ 'ವಿರೋಧ' ಎಂಬ ಪದವನ್ನು ಈ ಸೂತ್ರದಲ್ಲಿಯೂ ಅನುವೃತ್ತಿ ಮಾಡಿಕೊಳ್ಳಬೇಕು. ದೇವತೆಗಳಿಗೆ ವೇದವಿದ್ಯಾಧಿಕಾರವು ಇರುತ್ತದೆಂಬುದನ್ನು ಸಮರ್ಥಿಸಲು ಉತ್ಪತ್ತಿ ಹಾಗೂ ನಾಶಗಳನ್ನು ಅವರಿಗೆ ಸಮರ್ಥಿಸಲಾಯಿತು. ಇದು ಸರಿಯಲ್ಲ. ಏಕೆಂದರೆ, ಒಂದು ವೇಳೆ ದೇವತೆಗಳಿಗೆ ಉತ್ಪತ್ತಿ ಮತ್ತು ನಾಶಗಳನ್ನು ಅಂಗೀಕಾರ ಮಾಡಿದರೆ, ವೇದಪ್ರಾಮಾಣ್ಯಕ್ಕೆ ವಿರೋಧ ಬರುತ್ತದೆ.

ನಿತ್ಯವಾದ ವೇದದಿಂದ ಅನಿತ್ಯದೇವತೆಗಳು ಹೇಗೆ ಪ್ರತಿಪಾದ್ಯರಾಗುತ್ತಾರೆ ?

तत्वप्रकाशिका – वेदस्य नित्यत्वादनित्यदेवानां तद्वाच्यत्वात् । वाच्यहीनाया वाचः प्रामाण्यासम्भवात् ।

ವೇದವು ನಿತ್ಯವಾಗಿದೆ. ದೇವತೆಗಳು ಅನಿತ್ಯರಾಗಿದ್ದಾರೆ. ನಿತ್ಯವಾದ ವೇದದಿಂದ, ಅನಿತ್ಯರಾದ ದೇವತೆಗಳು ವಾಚ್ಯರಾಗಲು ಸಾಧ್ಯವಿಲ್ಲ. ಏಕೆಂದರೆ, ಯಾವ ಕಾಲದಲ್ಲಿ ದೇವತೆಗಳು ಇರುವುದಿಲ್ಲವೋ, ಆ ಕಾಲದಲ್ಲಿ ಆ ಶಬ್ದಕ್ಕೆ ವಾಚ್ಯವಾದ ಪದಾರ್ಥವೇ ಇಲ್ಲವೆಂದಂತಾಗುತ್ತದೆ. ವಾಚ್ಯಾರ್ಥಶೂನ್ಯವಾದ ಶಬ್ದಕ್ಕೆ ಪ್ರಾಮಾಣ್ಯವೇ ಸಂಭವಿಸುವುದಿಲ್ಲ.

ವಾಚ್ಯವಾದದ್ದೇ ಇಲ್ಲದಿದ್ದಾಗ ವಾಚಕಕ್ಕೆ ಪ್ರಾಮಾಣ್ಯ ಹೇಗೆ ?

तत्वप्रकाशिका – यावता तदेव वाक्यस्याप्रामाण्यम् ।

ವಾಚ್ಯವಾದ ಪದಾರ್ಥವಿಲ್ಲದಿದ್ದಾಗ ಮಾತ್ರ ವಾಕ್ಯಕ್ಕೆ ಅಪ್ರಾಮಾಣ್ಯವು ಬರುತ್ತದೆ. ವಾಚ್ಯವಾದ ಪದಾರ್ಥವಿಲ್ಲದಾಗಲೇ ವಾಕ್ಯಕ್ಕೆ ಅಪ್ರಾಮಾಣ್ಯದೋಷವು ಬರುತ್ತದೆ. ಅಂದರೆ, ಅಪ್ರಾಮಾಣ್ಯಕ್ಕೆ ಕಾರಣವಾದದ್ದು ವಾಚ್ಯವಾದ ಪದಾರ್ಥವಿಲ್ಲದಿರುವಿಕೆ. ಈಗ ದೇವತೆಗಳೆಂಬ ವಾಚ್ಯವಾದ ಪದಾರ್ಥವಿಲ್ಲದ ಕಾರಣ, ತತ್ಪ್ರತಿಪಾದಕವಾದ ಶ್ರುತಿಗಳಿಗೆ ಅಪ್ರಾಮಾಣ್ಯದೋಷ ಸಂಭವಿಸುತ್ತದೆ.

ವೇದವೇಕೆ ಅನಿತ್ಯವಾಗಬಾರದು ?

तत्वप्रकाशिका – वेदस्य नित्यत्वमेव कुतः? इति चेत् ।

ವೇದವೂ ಕೂಡ ಅನಿತ್ಯವೇ ಆಗಿರಬಹುದು. ನಿತ್ಯವೇ ಆಗಿದೆ ಎಂದು ಹೇಳಲು ಏನು ಪ್ರಮಾಣ? ಹೀಗೆ ಪ್ರಶ್ನಿಸಬಾರದು.

ವೇದವಾಕ್ಯಗಳೆಲ್ಲವೂ ನಿತ್ಯ

तत्वप्रकाशिका – 'वाचा विरुप नित्यया' इत्यादिश्रुतेः ।

ಹೀಗೆ ಪ್ರಶ್ನಿಸಬಾರದು. 'ವಾಚಾ ವಿರೂಪ ನಿತ್ಯಯಾ' ಎಂಬ ಶ್ರುತಿಯು ವೇದವಾಕ್ಯಗಳೆಲ್ಲವೂ ನಿತ್ಯವಾಗಿವೆ ಎಂದು ಸಮರ್ಥಿಸುತ್ತಿದೆ.

ಶ್ರುತಿಯಲ್ಲಿ ಹೇಳಲ್ಪಟ್ಟ ನಿತ್ಯತ್ವವು ಔಪಚಾರಿಕ

तत्वप्रकाशिका – नच वाच्यमनित्य एव वेदो नित्य इत्युपचारमात्रमिति।

ವೇದವು ಅನಿತ್ಯವೇ ಆಗಿದೆ. ಶ್ರುತಿಯಲ್ಲಿ ಹೇಳಲ್ಪಟ್ಟ ನಿತ್ಯತ್ವವು ಕೇವಲ ಔಪಚಾರಿಕ. ಅಂದರೆ, ಬಹಳ ಕಾಲದ ತನಕ ವೇದವು ಇರುವುದರಿಂದ ಅದನ್ನು ನಿತ್ಯವೆಂದು ಹೇಳಿದೆ ಹೊರತು, ನಾಶವೇ ಇಲ್ಲವೆಂಬ ಅಭಿಪ್ರಾಯದಿಂದ 'ವಾಚಾ ವಿರೂಪ ನಿತ್ಯಯಾ' ಎಂಬ ಶ್ರುತಿಯು ಹೊರಟಿಲ್ಲ. ಹೀಗೆ ಶಂಕಿಸಬಾರದು.

ವೇದವು ಅನಿತ್ಯವಾದರೆ ಅಪ್ರಾಮಾಣವಾದೀತು

तत्वप्रकाशिका – वेदानित्यत्वे प्रामाण्याभावापत्तेः ।

ವೇದವು ಅನಿತ್ಯವೆಂದು ಹೇಳಿದರೆ, ಅಪ್ರಾಮಾಣ್ಯದೋಷವು ಬರುತ್ತದೆ. ಏಕೆಂದರೆ, ಪುರುಷಕರ್ತೃಕವಾದ ಪೌರುಷೇಯ ಗ್ರಂಥಗಳೆಲ್ಲವೂ ಪುರುಷರ ಅಜ್ಞಾನಾದಿದೋಷನಿಮಿತ್ತವಾಗಿರುವುದರಿಂದ ಅಪ್ರಮಾಣವಾಗುತ್ತವೆ.

ಆಪ್ತಮೂಲಕವಾದ್ದರಿಂದ ಪ್ರಾಮಾಣ್ಯ ಹೇಳಬೇಕೇ ?

तत्वप्रकाशिका – आप्तिमूलत्वेन प्रामाण्यम् ? इति चेन्न ।

ಆಪ್ತರಿಂದ ರಚಿತವಾದ ವಾಕ್ಯದಲ್ಲಿ ಪ್ರಾಮಾಣ್ಯವಿರುವ ಕಾರಣ, ವೇದವು ಆಪ್ತಮೂಲಕವಾಗಿರುವುದರಿಂದ ಪ್ರಾಮಾಣ್ಯವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು.

ವೇದಕರ್ತೃವಿಗೆ ಆಪ್ತತ್ವವು ಅನಿಶ್ಚಿತ

तत्वप्रकाशिका – कर्तृसार्वज्ञादौ मानाभावेनास्यनिश्चयात् ।

ವೇದವನ್ನು ರಚನೆ ಮಾಡಿದ ವ್ಯಕ್ತಿಯಲ್ಲಿ ಸರ್ವಜ್ಞತ್ವವನ್ನು ಒಪ್ಪಲು ಯಾವುದೇ ಪ್ರಮಾಣವಿಲ್ಲ. ಆದ್ದರಿಂದ ಅವರಿಗೆ ಆಪ್ತತ್ವವು ಕೂಡ ನಿಶ್ಚಯವಾಗುವುದಿಲ್ಲ.

ಕರ್ತೃವಿನಲ್ಲಿ ಸಾರ್ವಜ್ಞ್ಯದ ಅನುಮಾನ

तत्वप्रकाशिका – 'विवादपदं कस्यचित्प्रत्यक्षं प्रमेयत्वात्' इति सार्वज्ञे मानम्' इति चेन्न ।

'ವಿವಾದಪದಂ ಕಸ್ಯಚಿತ್ ಪ್ರತ್ಯಕ್ಷಮ್, ಪ್ರಮೇಯತ್ವಾತ್'. ಯಥಾರ್ಥಜ್ಞಾನಕ್ಕೆ ವಿಷಯವಾದ್ದರಿಂದ, ವಿವಾದವಿಷಯವಾದ ಈ ಜಗತ್ತು ಯಾರಾದರೊಬ್ಬರ ಪ್ರತ್ಯಕ್ಷಕ್ಕೆ ವಿಷಯವಾಗಿದೆ ಎಂದು ಸಾರ್ವಜ್ಞ್ಯವನ್ನು ಕರ್ತೃವಿನಲ್ಲಿ ಅನುಮಾನದಿಂದ ಸಾಧಿಸಬಹುದಲ್ಲವೆ? ಎಂದು ಪ್ರಶ್ನಿಸಬಾರದು.

ಅನಿತ್ಯವಾದ ಜ್ಞಾನವುಳ್ಳವನೆಂದು ಸಾಧಿಸಬಹುದು

तत्वप्रकाशिका – प्रमेयत्वेन विप्रतिपन्नधर्मान्तरसाधनापातात् ।

ಪ್ರಮೇಯತ್ವಹೇತುವಿನಿಂದ ವಿಪ್ರತಿಪನ್ನವಾದ ಸ್ಥಳದಲ್ಲಿ ಮತ್ತೊಂದು ಧರ್ಮವನ್ನು ಕೂಡ ಸಾಧನೆ ಮಾಡಲು ಬರುತ್ತದೆ. ಅಂದರೆ, ಅನಿತ್ಯವಾದ ಜ್ಞಾನವುಳ್ಳವನೆಂದು ಕೂಡ ಅನುಮಾನ ಮಾಡಲು ಬರುತ್ತದೆಂದು ಅಭಿಪ್ರಾಯ.

ಪ್ರಮೇಯತ್ವವು ಕೇವಲಾನ್ವಯಿಯಾಗಿದೆ

तत्वप्रकाशिका – किञ्चेदं प्रमेयत्वं न तावत्सामान्यं केवलान्वयिधर्मत्वात्।

ಮತ್ತು ಪ್ರಮೇಯತ್ವವೆಂಬ ಹೇತು ಜಾತಿರೂಪವಾಗಿದೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ, ಅದು ಕೇವಲಾನ್ವಯಿಯಾದ ಧರ್ಮರೂಪವಾಗಿದೆ. ಯಾವ ಧರ್ಮಕ್ಕೆ ಅಭಾವಪ್ರತಿಯೋಗಿತ್ವವನ್ನು ತೋರಿಸಲು ಬರುವುದಿಲ್ಲವೋ, ಅಂತಹ ರೂಪವುಳ್ಳದ್ದಾಗಿದೆ.

ಪ್ರಮೇಯತ್ವವನ್ನು ಎಲ್ಲಿ ಸೇರಿಸಬೇಕು ?

तत्वप्रकाशिका – उपाधित्वेऽपि क्वचिदन्तर्भावस्यापेक्षितत्वात् ।

ಹೇತುರೂಪವಾದ ಪ್ರಮೇಯತ್ವ ಜಾತಿರೂಪವಲ್ಲ, ಉಪಾಧಿರೂಪವಾಗಿದೆ ಎಂದು ಹೇಳಬೇಕು. ಹಾಗೆ ಹೇಳಿದರೆ, ತಾರ್ಕಿಕರು ಹೇಳುವ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ ಈ ಏಳು ಪದಾರ್ಥಗಳಲ್ಲಿ ಎಲ್ಲಾದರೂ ಅಂತರ್ಭಾವ ಮಾಡಬೇಕಾಗಿ ಬರುತ್ತದೆ.

ಪ್ರಮೇಯತ್ವವು ದ್ರವ್ಯವಲ್ಲವೆನ್ನಲು ಕಾರಣ

तत्वप्रकाशिका – न तावद् द्रव्यम् । निर्गुणत्वादस्वतन्त्रत्वाच्च । नापि गुणकर्मणी । गुणादावपि वृत्तेः । न समवायः । असम्बन्धत्वात् ।

ಪ್ರಮೇಯತ್ವವು ದ್ರವ್ಯರೂಪವಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ, ದ್ರವ್ಯವು ಗುಣವುಳ್ಳದ್ದಾಗಿದೆ, ಆದರೆ ಪ್ರಮೇಯತ್ವದಲ್ಲಿ ಯಾವುದೇ ಗುಣಗಳಿರುವುದಿಲ್ಲ. ಮತ್ತು ಪ್ರಮಾಪರತಂತ್ರವಾಗಿದೆ. ಇದರಂತೆ ಗುಣ ಮತ್ತು ಕರ್ಮಗಳಲ್ಲಿಯೂ ಪ್ರಮೇಯತ್ವವು ಅಂತರ್ಭಾವ ಹೊಂದುವುದಿಲ್ಲ. ಏಕೆಂದರೆ, ಪ್ರಮೇಯತ್ವವು ಗುಣದಲ್ಲೂ ಇರುತ್ತದೆ. ಗುಣ-ಕರ್ಮಗಳು ಗುಣದಲ್ಲಿರಲು ಸಾಧ್ಯವಿಲ್ಲ. ಸಮವಾಯದಲ್ಲೂ ಕೂಡ ಅಂತರ್ಭಾವ ಹೊಂದುವುದಿಲ್ಲ. ಸಮವಾಯವು ಸಂಬಂಧರೂಪವಾಗಿದೆ, ಪ್ರಮೇಯತ್ವವು ಸಂಬಂಧರೂಪವಾಗಿಲ್ಲ.

ವಿಶೇಷವು ನಿತ್ಯಪದಾರ್ಥದಲ್ಲಿ ಮಾತ್ರವಿದೆ

तत्वप्रकाशिका – नच विशेषोऽनित्येऽपि वृत्तेः । न चाभावः, अप्रतियोगिसापेक्षत्वात् ।

ವಿಶೇಷದಲ್ಲೂ ಪ್ರಮೇಯತ್ವವು ಅಂತರ್ಭಾವ ಹೊಂದುವುದಿಲ್ಲ. ವಿಶೇಷವು ನಿತ್ಯಪದಾರ್ಥದಲ್ಲಷ್ಟೇ ಇರುತ್ತದೆ, ಆದರೆ ಪ್ರಮೇಯತ್ವವು ಅನಿತ್ಯಪದಾರ್ಥಗಳಲ್ಲೂ ಇದೆ.

ಅಭಾವದಲ್ಲೂ ಸಹ ಅಂತರ್ಭಾವ ಹೊಂದುವುದಿಲ್ಲ. ಏಕೆಂದರೆ, ಅಭಾವವು ಪ್ರತಿಯೋಗಿಯ ಅಪೇಕ್ಷೆಯನ್ನು ಹೊಂದಿರುತ್ತದೆ, ಪ್ರಮೇಯತ್ವವು ಪ್ರತಿಯೋಗಿಯನ್ನು ಅಪೇಕ್ಷಿಸಿಲ್ಲ.

ಪ್ರಮೇಯತ್ವ ಎಂದರೇನು ?

तत्वप्रकाशिका – प्रमेयस्य भाव एव प्रमेयत्वं नतु ततोऽतिरिक्तम् ? इति चेत् ।

ಪ್ರಮೇಯದ ಭಾವವೇ ಪ್ರಮೇಯತ್ವ ಹೊರತು, ಬೇರೆಯಲ್ಲ. ದ್ರವ್ಯಗುಣಾದಿಗಳ ಸ್ವರೂಪವೆಂದು ಹೇಳುವುದೇ ಇಲ್ಲ ಎಂದು ಪ್ರಶ್ನಿಸಿದರೆ,

ಪ್ರಮಾ ಹಾಗೂ ಪ್ರಮೇಯತ್ವಗಳಿಗೆ ಭೇದವಿದೆಯೇ ?

तत्वप्रकाशिका – सत्यम् । भावभवित्रोर्भेदे पुनरुक्तानतिवृत्तेः ।

ಹಾಗಾದರೆ, ಪ್ರಮಾ ಮತ್ತು ಪ್ರಮೇಯತ್ವ, ಇವೆರಡೂ ಭಿನ್ನವೋ, ಅಭಿನ್ನವೋ? ಭಿನ್ನವೆಂದರೆ ಇದುವರೆಗೂ ಹೇಳಿದಂತೆ ಏಳು ಪದಾರ್ಥಗಳಲ್ಲಿ ಪ್ರಮೇಯತ್ವವು ಅಂತರ್ಭಾವವನ್ನು ಹೊಂದಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆ ಎಲ್ಲ ದೋಷಗಳಿಂದ ಬಿಡುಗಡೆಯಾಗಲು ಸಾಧ್ಯವಿಲ್ಲ.

ಅಭಿನ್ನ ಹೇಳಲು ಸಾಧ್ಯವಿಲ್ಲ

तत्वप्रकाशिका – भावस्य भवित्रः पृथगभावे तच्छब्दयोः पर्यायतापातात्।

ಇನ್ನು ಪ್ರಮಾ ಮತ್ತು ಪ್ರಮೇಯತ್ವ ಇವೆರಡೂ ಅಭಿನ್ನವೆಂದು ಹೇಳಿದರೆ, ಪ್ರಮೇಯ ಮತ್ತು ಪ್ರಮೇಯತ್ವಗಳೆರಡೂ ಪರ್ಯಾಯಶಬ್ದಗಳಾಗುತ್ತವೆ.

ಪ್ರಮೇಯದ ಭಾವವನ್ನೇ ಪ್ರಮೇಯತ್ವ ಎನ್ನಲಾಗದು

तत्वप्रकाशिका – एवं परत्वापरत्वादिगुणानां च दत्तजलाञ्जलिता स्यात्।

ಪ್ರಮೇಯದ ಭಾವವನ್ನೇ ಪ್ರಮೇಯತ್ವವೆಂದು ಹೇಳುವುದಾದರೆ, ಪರತ್ವ-ಅಪರತ್ವ-ಗುರುತ್ವ-ದ್ರವತ್ವ ಮೊದಲಾದವುಗಳೂ ಪ್ರತ್ಯೇಕ ಗುಣವೆಂಬುದಕ್ಕೆ ತಿಲಾಂಜಲಿ

ನೀಡಬೇಕಾಗುತ್ತದೆ. ಏಕೆಂದರೆ, 'परस्य भावः परत्वम्' 'अपरस्य भावः अपरत्वम्' ಇತ್ಯಾದಿಯಾಗಿಯೇ ಹೇಳಲು ಸಾಧ್ಯವಿದೆ.

ಪ್ರಮೇಯತ್ವವು ಎಲ್ಲಿ ಅಂತರ್ಭಾವ ಹೊಂದುತ್ತದೆ

तत्वप्रकाशिका – प्रमा-तद्विषय-तत्सम्बन्धेष्वन्तर्भावोऽस्तीति चेन्न ।

ಪ್ರಮಾ, ಪ್ರಮಾವಿಷಯ, ಪ್ರಮಾ ಹಾಗೂ ವಿಷಯಗಳ ಸಂಬಂಧ, ಈ ಮೂರರಲ್ಲಿ ಪ್ರಮೇಯತ್ವವು ಅಂತರ್ಭಾವ ಹೊಂದುತ್ತದೆ ಎಂದು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು.

ಪ್ರಮಾ ಹಾಗೂ ಪ್ರಮೇಯಗಳ ಸಂಬಂಧವೇ ದುರ್ನಿರೂಪ

तत्वप्रकाशिका – प्रमाप्रमेययोः सम्बन्धस्यैव दुर्निरूपत्वात् ।

ಏಕೆಂದರೆ, ಪ್ರಮಾ ಹಾಗೂ ಪ್ರಮೇಯ ಇವೆರಡರಲ್ಲಿ ಇರುವಂತಹ ಸಂಬಂಧವನ್ನೇ ಹೇಳಲು ಸಾಧ್ಯವಿಲ್ಲ.

ವಿಷಯ-ವಿಷಯೀಭಾವ ಸಂಬಂಧವನ್ನು ಹೇಳಬಹುದೇ ?

तत्वप्रकाशिका – न ह्यात्मगुणस्यान्येन समवायः संयोगो वा सम्भवति। विषयविषयिभाव इति चेन्न ।

'ಪ್ರಮಾ' ಎಂಬುದು ಆತ್ಮನ ಗುಣವಾಗಿದೆ. ಇದಕ್ಕೂ ಪ್ರಮಾಕ್ಕೆ ವಿಷಯವಾದ ಪ್ರಮೇಯಕ್ಕೂ ಸಮವಾಯ ಅಥವಾ ಸಂಯೋಗ ಸಂಬಂಧವನ್ನು ಹೇಳಲು ಬರುವುದಿಲ್ಲ. ಒಂದುವೇಳೆ ಹೇಳುವುದಾದರೆ ವಿಷಯ-ವಿಷಯಿಭಾವ ಸಂಬಂಧವನ್ನು ಹೇಳಬಹುದು. ಆದರೆ,

ಸಪ್ತಪದಾರ್ಥಗಳಲ್ಲಿ ಅಂತರ್ಭಾವ ಸಾಧ್ಯವಿಲ್ಲ

तत्वप्रकाशिका – तस्याप्यन्तर्भाव्यत्वात् । अन्तर्भावस्य चोक्तदोषलक्षनाजक्षालत्वात् ।

ಅದೂ ಸಹ ದ್ರವ್ಯಾದಿ ಸಪ್ತ ಪದಾರ್ಥಗಳಲ್ಲಿ ಅಂತರ್ಭಾವವನ್ನು ಹೊಂದಬೇಕು. ಏಕೆಂದರೆ, ವಿಷಯ-ವಿಷಯಿಭಾವ ಸಂಬಂಧವು ಸಪ್ತ ಪದಾರ್ಥಗಳಲ್ಲಿರುವುದಷ್ಟೇ ಕಂಡಿದೆ. ಆದರೆ, ಪ್ರಮೇಯತ್ವವು ಈ ಹಿಂದೆ ಹೇಳಿದಂತೆ, ದ್ರವ್ಯಾದಿ ಸಪ್ತ ಪದಾರ್ಥಗಳಲ್ಲಿ ಅಂತರ್ಭೂತವಾಗುವುದಿಲ್ಲ. ಹಾಗೆ ಅಂತರ್ಭಾವ ಮಾಡಲು ಹೊರಟರೆ, ಹಿಂದಿನ ದೋಷಗಳೆಲ್ಲವೂ ಪುನಃ ಅಂಟಿಕೊಳ್ಳುತ್ತವೆ. ಅಂತರ್ಭಾವವು ಹಿಂದಿನ ದೋಷಗಳನ್ನು ದಾಟಲು ಜಂಘಾಬಲವನ್ನು ಹೊಂದಿರುವುದಿಲ್ಲ.

ಅಭಿಧೇಯತ್ವಾದಿಗಳಲ್ಲೂ ಇದು ಸಮಾನ

तत्वप्रकाशिका – एषैव दिगन्यसमये धर्मान्तरेऽपीति । प्रमेयत्वानिर्वचनान्न तेन सार्वज्ञसिद्धिः ।

ಇದೇ ಮಾರ್ಗದಲ್ಲಿ ಬೇರೆ ಸಿದ್ಧಾಂತಿಗಳು ಹೇಳುವ ಅಭಿಧೇಯತ್ವ, ಜ್ಞೇಯತ್ವ ಮೊದಲಾದ ಧರ್ಮಗಳ ವಿಷಯದಲ್ಲೂ ದೋಷವನ್ನು ತಿಳಿಯಬೇಕು. ಪ್ರಮೇಯತ್ವದ ನಿರ್ವಚನವು ಸಾಧ್ಯವಿಲ್ಲದ ಕಾರಣದಿಂದಲೇ ಅಂತಹ ಹೇತುವಿನಿಂದ ಸರ್ವಜ್ಞತ್ವಧರ್ಮವನ್ನೂ ಸಾಧಿಸಲು ಬರುವುದಿಲ್ಲ.

ಅನುಮಾನದಿಂದ ಜಗತ್‌ಕರ್ತೃತ್ವದ ಸಾಧನೆ

तत्वप्रकाशिका – विप्रतिपन्नं सकर्तृकं कार्यत्वात् घटवदित्यनुमानेन जगत्कर्तरि सिद्धे तस्य सार्वज्ञादिसिद्धिः? इति चेन्न ।

ವಿಪ್ರತಿಪನ್ನವಾದ ಜಗತ್ತು ಸಕರ್ತೃಕವಾಗಿದೆ, ಕಾರ್ಯವಾದ್ದರಿಂದ, ಘಟದಂತೆ. ಘಟವು ಹೇಗೆ ಕಾರ್ಯವಾದ್ದರಿಂದ ಕುಲಾಲನೆಂಬ ಕರ್ತೃಸಹಿತವಾಗಿದೆಯೋ, ಅದರಂತೆ ಜಗತ್ತು ಕೂಡ ಕಾರ್ಯವಾಗಿದ್ದರಿಂದ ಕರ್ತೃವಿನಿಂದ ಸಹಿತವಾಗಿರಬೇಕು. ಹೀಗೆ ಅನುಮಾನದಿಂದ ಒಬ್ಬ ಜಗತ್ಕರ್ತೃವು ಸಿದ್ಧನಾಗುತ್ತಾನೆ. ಅಂಥಹ ಜಗತ್ಕರ್ತೃವಿಗೆ ಸಾರ್ವಜ್ಞವು ಶತಃಸಿದ್ಧವಾಗುತ್ತದೆಂದು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು.

ಅನುಮಾನಕ್ಕೆ ಶರೀರಿಜನ್ಯತ್ವವೆಂಬ ಉಪಾಧಿ

तत्वप्रकाशिका – शरीरिजन्यत्वोपाधेः । शरीर्यजन्यत्वेन सत्प्रतिपक्षत्वाच्च।

ಈ ಅನುಮಾನಕ್ಕೆ ಶರೀರಿಜನ್ಯತ್ವವೆಂಬ ಉಪಾಧಿದೋಷವಿದೆ. ಅಂದರೆ, ಸಕರ್ತೃತ್ವಕ್ಕೆ ಪ್ರಯೋಜಕವಾದದ್ದು ಶರೀರಿಜನ್ಯತ್ವವೇ ಹೊರತು, ಕಾರ್ಯತ್ವವಲ್ಲ. ಜಗತ್ತಿನಲ್ಲಿ ಶರೀರಿಜನ್ಯತ್ವವಿಲ್ಲದ ಕಾರಣ, ಸಕರ್ತೃಕತ್ವವಿಲ್ಲವೆಂದೇ ಸಾಧಿಸಬಹುದು. ಆದ್ದರಿಂದ 'ವಿಪ್ರತಿಪನ್ನಂ ವಿಕರ್ತೃಕಂ ಶರೀರ್ಯಜನ್ಯತ್ವಾತ್' ಎಂದು ಸತ್ಪ್ರತಿಪಕ್ಷಾನುಮಾನವನ್ನು ಮಾಡಬಹುದಾದ್ದರಿಂದ, ನಿಮ್ಮ ಅನುಮಾನವು ಸತ್ಪ್ರತಿಪಕ್ಷಿತವಾಗಿದೆ.

ಶರೀರಿಪದವು ವ್ಯರ್ಥವೇ ?

तत्वप्रकाशिका – शरीरिविशेषणं व्यर्थम् ? इति चेन्न । उपाधौ पक्षव्या-वृत्त्यर्थत्वात् । प्रतिपक्षेऽसिद्धिपरिहारार्थत्वात् ।

ಶರೀರಿಜನ್ಯತ್ವವೆಂಬ ಉಪಾಧಿಯಲ್ಲಿ ಶರೀರಿಪದವು ವ್ಯರ್ಥವಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ, ಶರೀರಿಜನ್ಯತ್ವವೆಂಬ ಉಪಾಧಿಯಲ್ಲಿರುವ ಶರೀರಿಪದವು ಪಕ್ಷದಿಂದ ಉಪಾಧಿಯು ವ್ಯಾವೃತ್ತವಾಗಿದೆ ಎಂದು ತಿಳಿಸಲು ಸಾರ್ಥಕವಾಗಿದೆ. ಸತ್ಪ್ರತಿಪಕ್ಷಾನುಮಾನದಲ್ಲಿ ಅಸಿದ್ಧಿಪರಿಹಾರವನ್ನು ಮಾಡಲು ಸಾರ್ಥಕವಾಗಿದೆ. ಅಂದರೆ, 'ವಿಮತಂ ಅಕರ್ತೃಕಂ ಶರೀರಿಅಜನ್ಯತ್ವಾತ್' ಎಂಬ 'ಸತ್ಪ್ರತಿಪಕ್ಷಾನುಮಾನದಲ್ಲಿ ಶರೀರಿ' ಎಂಬ ವಿಶೇಷಣವು ವ್ಯರ್ಥವಾದಾಗ 'ಅಜನ್ಯತ್ವಾತ್' ಎಂದಷ್ಟೇ ಹೇತು ಹೇಳಿದಂತಾಗುತ್ತದೆ. ಇಂಥ ಹೇತು ವಿಶ್ವವೆಂಬ ಪಕ್ಷದಲ್ಲಿಲ್ಲದ ಕಾರಣ, ಅಸಿದ್ಧಿ ದೋಷ ಬರುತ್ತದೆ. ಅದಕ್ಕೋಸ್ಕರ 'ಶರೀರಿ' ಎಂಬ ವಿಶೇಷಣವನ್ನು ನೀಡಬೇಕು. ಅಶರೀರಿಯಾದ ಪರಮಾತ್ಮನಿಂದ ಜಗತ್ತು ಸೃಷ್ಟವಾದ್ದರಿಂದ ಶರೀರಿಅಜನ್ಯತ್ವವನ್ನು ಹೇಳಲು ಬರುತ್ತದೆ.

ಪಕ್ಷೇತರತ್ವವು ಉಪಾಧಿಯಾಗಬಹುದೇ ?

तत्वप्रकाशिका – पक्षव्यावृत्त्यर्थविशेषणवतोऽप्युपाधित्वे पक्षेतरत्वस्याप्यापाद्यते तत् ?इति चेत्का नो हानिः ।

ಪಕ್ಷದಿಂದ ವ್ಯಾವೃತ್ತಿಮಾಡುವುದಕ್ಕಾಗಿ ಉಪಾಧಿಯಲ್ಲಿ 'ಶರೀರಿ' ಎಂಬ ವಿಶೇಷಣವನ್ನು ನೀಡಬೇಕೆಂದು ಹೇಳುವುದಾದರೆ ಪಕ್ಷೇತರತ್ವವನ್ನು ಉಪಾಧಿಯೆಂದಂತಾಯಿತು. ಇಂತಹ ಉಪಾಧಿಯನ್ನು ಸಕಲಾನುಮಾನಗಳಲ್ಲಿಯೂ ಹೇಳಬಹುದಲ್ಲವೇ? ಎಂದರೆ, ಹೀಗೆ ಪಕ್ಷೇತರತ್ವಕ್ಕೆ ಉಪಾಧಿಯನ್ನು ಆರೋಪಿಸಿದರೆ ನಮಗೇನೂ ಹಾನಿಯಿಲ್ಲ.

ಹಾಗಾದರೆ ಪರ್ವತೇತರತ್ವವೂ ಉಪಾಧಿಯಾಗಲಿ

तत्वप्रकाशिका – पर्वतेतरत्वादीनामपि व्याप्तिरस्ति चेत् अनुमानोपजीव्येन बाधादव्याप्तौ स्वयं दुष्टत्वात् ।

ಏಕೆಂದರೆ, 'ಪರ್ವತೋ ವಹ್ನಿಮಾನ್ ಧೂಮಾತ್' ಎಂಬ ಅನುಮಾನದಲ್ಲಿ ಪರ್ವತೇತರತ್ವವೂ ಕೂಡ ಉಪಾಧಿಯಾಗುತ್ತದೆ ಎಂದು ನೀವು ಆಕ್ಷೇಪಿಸಬೇಕು. ಆದರೆ, 'ಪರ್ವತೋ ವಹ್ನಿಮಾನ್ ಧೂಮಾತ್' ಎಂಬ ಅನುಮಾನದಲ್ಲಿ ಪರ್ವತೇತರತ್ವವನ್ನು ಉಪಾಧಿಯೆಂದು ಹೇಳಿದರೆ, ಉಪಾಧಿ ಮತ್ತು ಸಾಧ್ಯಗಳಿಗೆ ವ್ಯಾಪ್ತಿಯಿದ್ದಾಗ ಏನೂ ದೋಷವಿಲ್ಲ. ಒಂದು ವೇಳೆ, ಅನುಮಾನೋಪಜೀವ್ಯಪ್ರಮಾಣದಿಂದ ಸಾಧ್ಯ ಮತ್ತು ಉಪಾಧಿ ಇವುಗಳ ವ್ಯಾಪ್ತಿಗೆ ಬಾಧವಿದ್ದರೆ, ಆವಾಗ ಉಪಾಧಿಯು ಸ್ವತಃ ದುಷ್ಟವಾಗುವುದರಿಂದ, ಆವಾಗಲೂ ನಮಗೆ ಅನಿಷ್ಟವಿಲ್ಲ.

ವ್ಯಭಿಚಾರವಾರಣೆಗಾಗಿ ಮಾತ್ರ ಹೇತುವಿಶೇಷಣ

तत्वप्रकाशिका – नचासिद्धिपरिहारार्थं विशेषणासम्भव इति राज्ञामाज्ञाऽस्ति।

ಇನ್ನು ಸತ್ಪ್ರತಿಪಕ್ಷಾನುಮಾನದಲ್ಲಿ ಅಸಿದ್ಧಿಯೆಂಬ ದೋಷವನ್ನು ಪರಿಹಾರ ಮಾಡಲು, 'ಅಜನ್ಯತ್ವ' ಎಂಬ ವಿಶೇಷಣವನ್ನು ನೀಡುವುದು ಸರಿಯಲ್ಲ. ವ್ಯಭಿಚಾರದೋಷದ ನಿವೃತ್ತಿಗಾಗಿ ಮಾತ್ರ ಹೇತುವಿನಲ್ಲಿ ವಿಶೇಷಣವನ್ನು ನೀಡುವುದು ಸರ್ವಸಮ್ಮತವಾಗಿದೆ. ಕೇವಲ ಅಸಿದ್ಧಿಪರಿಹಾರಕ್ಕಾಗಿ ವಿಶೇಷಣವನ್ನು ನೀಡಬೇಕೆಂದು ಯಾವ ರಾಜಾಜ್ಞೆಯೂ ಇಲ್ಲ ಎಂದು.

ವ್ಯಭಿಚಾರದೋಷ ಪರಿಹಾರಕ್ಕಾಗಿಯೂ ಹೇತುವಿಶೇಷಣ ಬೇಡ

तत्वप्रकाशिका – तथात्वे व्यभिचारनिवृत्त्यर्थमपि न प्रयोक्तव्यम् ।

ಹಾಗಾದಲ್ಲಿ ವ್ಯಭಿಚಾರದೋಷದ ಪರಿಹಾರಕ್ಕಾಗಿಯೂ ಹೇತುವಿನಲ್ಲಿ ವಿಶೇಷಣವನ್ನು ಕೊಡಬಾರದೆಂದು ನಾವು ಹೇಳುತ್ತೇವೆ.

ಅಸಿದ್ಧಿ ಪರಿಹಾರಕ್ಕಾಗಿ ನೀಡುವ ವಿಶೇಷಣ ವ್ಯರ್ಥವಲ್ಲ

तत्वप्रकाशिका – व्याप्तिवत् पक्षधर्मताया आवश्यकत्वात् ।

ಏಕೆಂದರೆ ವ್ಯಾಪ್ತಿಯು ಅನುಮಾನಕ್ಕೆ ಸಾಧಕವಾದ್ದರಿಂದ, ವ್ಯಭಿಚಾರಿಯಾದ ಹೇತುವಿಗೆ ವಿಶೇಷಣವನ್ನು ನೀಡಿ ದೋಷವನ್ನು ಪರಿಹರಿಸುವುದು ನ್ಯಾಯವಾಗಿದೆ ಎಂದು ಉತ್ತರಿಸಿದರೆ, ಪಕ್ಷಧರ್ಮತಾ ಎಂಬುವುದು ಕೂಡ ಅನುಮಾನಕ್ಕೆ ಸಾಧಕವಾಗಿರುವುದರಿಂದ, ಅದರ ಸಮರ್ಥನೆಗಾಗಿ ಹೇತುವಿಗೆ ವಿಶೇಷಣ ನೀಡುವುದು ಯುಕ್ತವೇ ಆಗಿದೆ. ಆದ್ದರಿಂದ ಅಸಿದ್ಧಿಪರಿಹಾರಕ್ಕಾಗಿ ವಿಶೇಷಣ ನೀಡುವುದು ತಪ್ಪಾಗುವುದಿಲ್ಲ.

ನೈಯ್ಯಾಯಿಕ ಮತ ನಿರಾಕರಣೆ

तत्वप्रकाशिका – सकर्तृकत्वे कार्यत्वमेव प्रयोजकम् । शरीरमपि तत्र सन्निहितमित्युत्तरत्र निरसिष्यते ।

ಸಕರ್ತೃಕತ್ವವೆಂಬ ಸಾಧ್ಯದ ವಿಷಯದಲ್ಲಿ ಕಾರ್ಯತ್ವವಷ್ಟೇ ಪ್ರಯೋಜಕವಾಗಿದೆ. ಶರೀರವು ಅಲ್ಲಿ ಸನ್ನಿಹಿತವಾಗಿರುತ್ತದಷ್ಟೇ ಎಂಬ ನೈಯ್ಯಾಯಿಕರ ಮತವನ್ನು ಮುಂದೆ ನಿರಾಕರಿಸುವವರಿದ್ದೇವೆ.

ಸಕರ್ತೃಕತ್ವ ಸಿದ್ಧವಾದರೂ ಸರ್ವಜ್ಞತ್ವ ಸಿದ್ಧವಾಗದು

तत्वप्रकाशिका – अस्तु वा सकर्तृकत्वम् । कथं सार्वज्ञसिद्धिः ? बहुकर्तृत्वेनाप्युपपत्तेः । लाघवादेकाङ्गीकारः? इति चेन्न ।

ಅಥವಾ ಅನುಮಾನದಿಂದ ಸಕರ್ತೃಕತ್ವವು ಸಿದ್ಧವಾದರೆ, ಇದರಿಂದ ಸರ್ವಜ್ಞತ್ವವನ್ನು ಸಾಧಿಸಿದಂತಾಗುವುದಿಲ್ಲ. ಏಕೆಂದರೆ, ಅನೇಕರು ಕರ್ತೃಗಳಾಗಿದ್ದಾರೆಂದು ಅಂಗೀಕರಿಸಿದರೂ ಸಹ, ಸಕರ್ತೃಕತ್ವವೆಂಬ ಸಾಧ್ಯವನ್ನು ಪಕ್ಷದಲ್ಲಿ ಪರ್ಯವಸಾನ ಮಾಡಬಹುದು.

ಲಾಘವವಿರುವುದರಿಂದ ಒಬ್ಬನೇ ಕರ್ತೃವನ್ನು ಅಂಗೀಕರಿಸುವುದು ಸೂಕ್ತವಲ್ಲವೇ? ಎಂದು ಪ್ರಶ್ನಿಸಬಾರದು.

ಬಹುಕರ್ತೃಕತ್ವವನ್ನು ಒಪ್ಪುವುದೇ ಅನುಕೂಲ

तत्वप्रकाशिका – बहूङ्गीकारस्य लोकानुकूल्येनागौरवात् । अतो न सार्वज्ञसिद्धिः। अविप्रलम्भादि चातिदुरवगमम् ।

ಅನೇಕಕರ್ತೃಗಳನ್ನು ಅಂಗೀಕಾರ ಮಾಡುವುದರಿಂದ ಲೋಕವ್ಯವಹಾರವು ಅನುಕೂಲವಾಗುತ್ತದೆ. ಆದ್ದರಿಂದ ಬಹುಕರ್ತೃತ್ವವನ್ನು ಅಂಗೀಕರಿಸುವುದು ಗೌರವವಲ್ಲ. ಆದ್ದರಿಂದ, ಸರ್ವಕರ್ತೃತ್ವದಿಂದ ಸರ್ವಜ್ಞತ್ವವು ಸಿದ್ಧವಾಗುವುದಿಲ್ಲ. ವಿಶ್ವಕರ್ತೃವಿನಲ್ಲಿ ವಂಚನೆ ಮಾಡದಿರುವಿಕೆ ಮೊದಲಾದ ಧರ್ಮಗಳನ್ನು ಸಾಧಿಸುವುದೂ ಸಹ ಅತ್ಯಂತ ಕಠಿಣವಾಗಿದೆ.

ವೇದವು ಸಕರ್ತೃಕವೇ ?

तत्वप्रकाशिका – अस्तु वा आप्तिनिश्चयस्तन्मूलत्वं कुतो वेदस्य । वेदः सार्वज्ञादिमता प्रणीतो वेदत्वादिति व्यतिरेक्यनुमानादिति चेन्न ।

ಅಥವಾ ವಿಶ್ವಕರ್ತನಾದ ಭಗವಂತನು ಆಪ್ತನೆಂದು ಅಂಗೀಕಾರ ಮಾಡೋಣ. ಇಷ್ಟುಮಾತ್ರದಿಂದ ಅವನೇ ವೇದಕ್ಕೆ ಕಾರಣನಾದವನೆಂದು ನಿಶ್ಚಯಿಸಲು ಹೇಗೆ ಸಾಧ್ಯ ? 'ವೇದಃ ಸಾರ್ವಜ್ಞಾದಿಮತಾ ಪ್ರಣೀತಃ, ವೇದತ್ವಾತ್' ಎಂಬುದಾಗಿ ವ್ಯತಿರೇಕಿ ಅನುಮಾನದಿಂದ ಸರ್ವಜ್ಞತ್ವವುಳ್ಳ ಈಶ್ವರನೇ ವೇದಕ್ಕೆ ಕರ್ತೃವಾಗಿದ್ದಾನೆಂದು ಸಾಧಿಸಬೇಕು. ಇದು ಸರಿಯಲ್ಲ.

ಪಾಮರಪ್ರಣೀತತ್ವವನ್ನು ಸಾಧಿಸಬಹುದು

तत्वप्रकाशिका – वेदत्वस्य पामरप्रणीतत्वादौ साम्यात् ।

ಏಕೆಂದರೆ, ಇದೇ ವೇದತ್ವಹೇತುವಿನಿಂದ ಪಾಮರಪ್ರಣೀತತ್ವವನ್ನು ಸಮಾನವಾಗಿ ಸಾಧಿಸಬಹುದು.

ಅಸಾಧಾರಣ್ಯವೆಂಬ ಹೇತ್ವಾಭಾಸ

तत्वप्रकाशिका – असाधारण्यस्यापि साम्यात् ।

ವೇದತ್ವಹೇತುವಿನಿಂದ ಪಾಮರಪ್ರಣೀತತ್ವವನ್ನು ಸಾಧನೆಮಾಡಿದಾಗ ಅಸಾಧಾರಣ್ಯವೆಂಬ ಹೇತ್ವಾಭಾಸದೋಷವು ಬರುತ್ತದೆಂದು ಹೇಳಿದರೆ, ಸರ್ವಜ್ಞಪ್ರಣೀತತ್ವವನ್ನು ಸಾಧನೆ ಮಾಡಿದಾಗಲೂ ಪಕ್ಷ ಬಿಟ್ಟು ಬೇರೆ ಎಲ್ಲಿಯೂ ಹೇತುವಿಲ್ಲದ ಕಾರಣ, ಅಸಾಧಾರಣ್ಯದೋಷವು ಸಮಾನವಾಗಿ ಬರುತ್ತದೆ.

ವೇದಕ್ಕೆ ಆಪ್ತಪ್ರಣೀತತ್ವ ಸಾಧಿಸುವುದು ಕಠಿಣ

तत्वप्रकाशिका – 'वेद आप्तप्रणीतः प्रमाणवाक्यत्वात्' इति चेन्न । वेदानित्यत्वे प्रामाण्यविवादात् ।

'ವೇದಃ ಆಪ್ತಪ್ರಣೀತಃ ಪ್ರಮಾಣವಾಕ್ಯತ್ವಾತ್', ವೇದವು ಪ್ರಮಾಣವಾಕ್ಯವಾದ್ದರಿಂದ ಆಪ್ತಪ್ರಣೀತವಾಗಿದೆ ಎಂದು ಸಾಧಿಸಬಹುದಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ, ವೇದದ ಅನಿತ್ಯತ್ವವಿಷಯದ ಪ್ರಮಾಣದಲ್ಲಿ ವಿವಾದವಿದೆ. ಇಂತಹ ವಿವಾದಗ್ರಸ್ತವಾದ ಹೇತುವಿನಿಂದ ವೇದಕ್ಕೆ ಆಪ್ತಪ್ರಣೀತತ್ವವನ್ನು ಸಾಧಿಸಲು ಆಗುವುದಿಲ್ಲ.

ವೇದನಿತ್ಯತ್ವವಿಷಯದಲ್ಲಿ ವಿವಾದವಿದೆ

तत्वप्रकाशिका – 'तस्माद्यज्ञात्' इति सर्वज्ञेश्वरप्रणीतत्वं श्रूयते इति चेन्न । उक्तदोषात् ।

'ತಸ್ಮಾದ್ಯಜ್ಞಾತ್ ಸರ್ವಹುತಃ ಋಚಃ ಸಾಮಾನಿ ಜಜ್ಞಿರೇ' ಯಜ್ಞನಾಮಕನಾದ ಪರಮಾತ್ಮನ ದೆಸೆಯಿಂದ ಋಗ್ವೇದಾದಿಗಳು ಹುಟ್ಟಿದವು ಎಂಬ ಪುರುಷಸೂಕ್ತದ ಮಾತಿನಿಂದ ವೇದವು ಈಶ್ವರಪ್ರಣೀತವಾಗಿದೆ ಎಂದು ಸಿದ್ಧವಾಗುತ್ತದಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ, ವೇದನಿತ್ಯತ್ವವಿಷಯದಲ್ಲಿ ವಿವಾದವಿದೆ ಎಂಬ ಹಿಂದಿನ ದೋಷವು ಬಂದೇ ಬರುತ್ತದೆ.

ಅಗ್ನಿಯಿಂದ ಋಗ್ವೇದ ಹುಟ್ಟಿತು

तत्वप्रकाशिका –'ऋग्वेद एवाग्नेरजायत' इत्यसर्वज्ञप्रणीतत्वोक्तेश्च ।

'ಋಗ್ವೇದ ಏವ ಅಗ್ನೇರಜಾಯತ' ಅಗ್ನಿಯಿಂದ ಋಗ್ವೇದವು ಹುಟ್ಟಿತು ಎಂಬುದಾಗಿ ಅಸರ್ವಜ್ಞನಾದ ಅಗ್ನಿಯಿಂದಲೇ ಋಗ್ವೇದದ ಹುಟ್ಟುವಿಕೆಯನ್ನು ಹೇಳಲಾಗಿದೆ. ಹೀಗಿರುವಾಗ ನಿಮಗೆ ಸರ್ವಜ್ಞಪ್ರಣೀತತ್ವವನ್ನು ಸಾಧಿಸಲಾಗದು.

'ಅಜಾಯತ' ಎಂಬುದಕ್ಕೆ ಗೌಣಾರ್ಥ ಮಾಡಬಾರದು

तत्वप्रकाशिका – सम्प्रदायप्रवर्तकतया तद्वाक्यमुपचरितम् ? इति चेन्न। कारणाभावात् ।

'ಅಜಾಯತ' ಎಂಬ ಪದಕ್ಕೆ ಲಕ್ಷಣಾ ಮಾಡಿ, ಸಂಪ್ರದಾಯಪ್ರವರ್ತಕನಾಗಿದ್ದಾನೆ ಎಂಬರ್ಥವನ್ನು ಒಪ್ಪಿ, ಔಪಚಾರಿಕಾರ್ಥವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಹಾಗೆ, ಲಕ್ಷಣಾ ಮಾಡಲು ಕಾರಣವಿಲ್ಲ. ಕಾರಣವಿದ್ದರೆ ಮಾತ್ರ ಲಕ್ಷಣಾ ಮಾಡುವ ಪ್ರಸಂಗ ಬರುತ್ತದೆ.

'ಅಜಾಯತ' ಪದಕ್ಕೆ ಹುಟ್ಟಿತು ಎಂದರ್ಥವಲ್ಲ

तत्वप्रकाशिका – ईश्वरविरचितत्ववाक्यात् ? इति चेन्न । तद्वाक्यादस्य सम्प्रदायप्रवर्तकत्वाद्यर्थोपपत्तेः ।

ಈಶ್ವರನೇ ಋಗ್ವೇದಾದಿಗಳನ್ನು ರಚನೆ ಮಾಡಿದ್ದಾನೆ ಎಂದೇಕೆ ಹೇಳಬಾರದು? ಎಂದು ಪ್ರಶ್ನಿಸಬಾರದು. 'ಈಶ್ವರನಿಂದ ಪ್ರಣೀತವಾಗಿದೆ' ಎಂಬ ವಾಕ್ಯದ ಬಲದಿಂದ 'ಋಗ್ವೇದ ಏವ ಅಗ್ನೇರಜಾಯತ' ಎಂಬ ವಾಕ್ಯಕ್ಕೆ ಸಂಪ್ರದಾಯಪ್ರವರ್ತಕತ್ವಾದ್ಯರ್ಥವನ್ನೇ ಹೇಳಬೇಕಾಗುತ್ತದೆ.

ಹುಟ್ಟಿತು ಎಂದಲ್ಲಿ ಚಕ್ರಕಾಪತ್ತಿದೋಷ

तत्वप्रकाशिका – तेषामसार्वज्ञादेतत् ? इति चेन्न । चक्रकापातात् ।

ಅಗ್ನಿ ಮೊದಲಾದವರಿಗೆ ಸಾರ್ವಜ್ಞ್ಯವಿಲ್ಲದ ಕಾರಣ, ಈಶ್ವರನೇ ವೇದಪ್ರಣೇತೃ-ವಾಗಿದ್ದಾನೆಂದು ಹೇಳಬಹುದಲ್ಲವೆ? ಎಂದು ಶಂಕಿಸಬಾರದು. ಹಾಗಾದಲ್ಲಿ ಚಕ್ರಕಾಪತ್ತಿದೋಷ ಬರುತ್ತದೆ. ಈಶ್ವರನು ಸರ್ವಜ್ಞನೆಂದು ಸಿದ್ಧವಾದರೆ 'ತಸ್ಮಾದ್ಯಜ್ಞಾತ್' ಇತ್ಯಾದಿ ವಾಕ್ಯದ ಬಲದಿಂದ ವೇದಕ್ಕೆ ಸರ್ವಜ್ಞಪ್ರಣೀತೃತ್ವವು ಸಿದ್ಧವಾಗುತ್ತದೆ. ವೇದಕ್ಕೆ ಸರ್ವಜ್ಞಪ್ರಣೀತೃತ್ವವು ಸಿದ್ಧವಾದರೆ ವೇದಪ್ರಾಮಾಣ್ಯವು ಸಿದ್ಧವಾಗುತ್ತದೆ. ವೇದಪ್ರಾಮಾಣ್ಯವು ಸಿದ್ಧವಾದರೆ ವೇದದಿಂದ ಈಶ್ವರನಿಗೆ ಸರ್ವಜ್ಞತ್ವವು ಸಿದ್ಧವಾಗುತ್ತದೆ. ಹೀಗೆ, ಚಕ್ರಕಾಪತ್ತಿದೋಷವು ಬರುತ್ತದೆಂದು ತಿಳಿಯಬೇಕು.

ನಿತ್ಯತ್ವಶ್ರುತಿಗೆ ಗೌಣಾರ್ಥ ಮಾಡಬಾರದು

तत्वप्रकाशिका – तस्मादाप्तितन्मूलत्वानिश्चयाद्वेदानित्यत्वे तत्प्रामाण्याभावापत्तेर्न नित्यत्वश्रुतेरुपचरितार्थत्वं वाच्यम् ।

ಆದ್ದರಿಂದ, ವೇದಕ್ಕೆ ಆಪ್ತಿಮೂಲತ್ವವು ಸಿದ್ಧವಾಗುವುದಿಲ್ಲ. ಮತ್ತು ವೇದವು ಅನಿತ್ಯವಾದರೆ, ವೇದಪ್ರಾಮಾಣ್ಯವೂ ಕೂಡ ಸಿದ್ಧವಾಗದ ಕಾರಣ, ನಿತ್ಯತ್ವಶ್ರುತಿಗೆ ಲಾಕ್ಷಣಿಕಾರ್ಥವನ್ನು ಒಪ್ಪಬಾರದು.

ವೇದಕ್ಕೆ ಆಪ್ತಪ್ರಣೀತತ್ವವನ್ನು ಒಪ್ಪಬಾರದು

तत्वप्रकाशिका – किञ्च वेदस्याप्तप्रणीतत्वे मूलप्रमाणेन भाव्यम् । पौरुषेयस्य मूलप्रमाणसापेक्षतानियमात् ।

ಮತ್ತು, ವೇದಕ್ಕೆ ಆಪ್ತಪ್ರಣೀತತ್ವವನ್ನು ಅಂಗೀಕಾರ ಮಾಡಿದರೆ, ಮೂಲಭೂತವಾದ ಮತ್ತೊಂದು ಪ್ರಮಾಣವನ್ನು ಒಪ್ಪಬೇಕಾಗುತ್ತದೆ. ಏಕೆಂದರೆ, ಲೋಕದಲ್ಲಿ ಪೌರುಷೇಯ ಗ್ರಂಥಗಳಿಗೆಲ್ಲ ಮೂಲಭೂತವಾದ ಮತ್ತೊಂದು ಪ್ರಮಾಣವು ಇರುವುದು ಕಂಡಿದೆ.

ಈಶ್ವರನ ಪ್ರತ್ಯಕ್ಷವೂ ಮೂಲವಲ್ಲ

तत्वप्रकाशिका – नच तत्प्रत्यक्षम्, अदृष्टादौ तदप्रवेशात् । नच कस्यचित्प्रत्यक्षं तादृशम्, अत्र प्रमाणाभावात् ।

ಈಶ್ವರನ ಪ್ರತ್ಯಕ್ಷವನ್ನೇ ಮೂಲವೆಂದು ಹೇಳಲಾಗದು. ಏಕೆಂದರೆ, ಅದೃಷ್ಟಾದಿ ವಿಷಯದಲ್ಲಿ ಪ್ರತ್ಯಕ್ಷವನ್ನು ಹೇಳಲು ಸಾಧ್ಯವಿಲ್ಲ. ಇನ್ನು ಈಶ್ವರನ ಪ್ರತ್ಯಕ್ಷಕ್ಕೆ ಅದೃಷ್ಟಾದಿಗಳೂ ಕೂಡ ವಿಷಯಗಳಾಗುತ್ತವೆಂದು ಹೇಳಬೇಕು. ಆದರೆ, ಈ ವಿಷಯದಲ್ಲಿ ಯಾವುದೇ ಪ್ರಮಾಣಗಳಿರುವುದಿಲ್ಲ.

ಅನುಮಾನವೂ ಕೂಡ ದುಷ್ಪವಾಗಿದೆ

तत्वप्रकाशिका – नाप्यनुमानम्, तस्य प्रतिपक्षादिदुष्टत्वात् । कथञ्चित्तेनादृष्टसम्भावनेऽपि तद्विशेषासिद्धेः ।

ಅದೃಷ್ಟಾದಿಗಳ ವಿಷಯದಲ್ಲಿ ಅನುಮಾನವೇ ಪ್ರಮಾಣವಾಗಿದೆ, ಎಂದು ಶಂಕಿಸಬಾರದು. ಅನುಮಾನವು ಸತ್ಪ್ರತಿಪಕ್ಷಾದಿದೋಷಗಳಿಂದ ದುಷ್ಟವಾದ್ದರಿಂದ ಅದೃಷ್ಟಾದಿ ವಿಷಯದಲ್ಲಿ ಪ್ರಮಾಣವಾಗಲು ಸಾಧ್ಯವಿಲ್ಲ.

ಅದೃಷ್ಟದ ಸಾಧನೆಯಲ್ಲಿ ಅನುಮಾನವು ಅಪ್ರಯೋಜಕ

तत्वप्रकाशिका – नहि लशुनगृञ्जनाद्यदनस्य पापहेतुत्वं, यज्ञादेः पुण्यसाधनत्वं वाऽनुमानेन शक्यसाधनम् ।

ಅದು ಹೀಗೆ. ಬೆಳ್ಳುಳ್ಳಿ ಮೊದಲಾದವುಗಳನ್ನು ಭಕ್ಷಿಸುವುದು ಪಾಪಸಾಧನವಾಗಿದೆ. ಯಜ್ಞ-ಯಾಗಾದಿಗಳಲ್ಲಿ ತೊಡಗುವುದು ಪುಣ್ಯಸಾಧನವಾಗಿದೆ. ಇದನ್ನು ಅನುಮಾನದಿಂದ ಸಾಧನೆ ಮಾಡಲು ಸಾಧ್ಯವೇ ಇಲ್ಲ. ಆದ್ದರಿಂದ, ಅದೃಷ್ಟವಿಶೇಷವನ್ನು ಸಾಧಿಸಲು ಅನುಮಾನವು ಅಸಮರ್ಥವಾಗುತ್ತದೆ.

ಅದೃಷ್ಟಾರ್ಥವಿಷಯದಲ್ಲಿ ವಾಕ್ಯವೇ ಪ್ರಮಾಣ

तत्वप्रकाशिका – अतो वाक्यमेवेति वक्तव्यम् । तदपि न तावत्पौरुषेयम्, मूलान्तरान्वेषणेनानवस्थानात् ।

ಆದ್ದರಿಂದ, ಅದೃಷ್ಟಾರ್ಥವಿಷಯದಲ್ಲಿ ವಾಕ್ಯವನ್ನೇ ಪ್ರಮಾಣವೆನ್ನಬೇಕು. ಅಂತಹ ವಾಕ್ಯವಾದರೋ, ಪೌರುಷೇಯವಾದಲ್ಲಿ, ಆ ಪೌರುಷೇಯವಾಕ್ಯಕ್ಕೂ ಮತ್ತೊಂದು ಮೂಲ ಪ್ರಮಾಣದ ಆವಶ್ಯಕತೆ ಇರುತ್ತದೆ. ಆ ಮೂಲ ಪ್ರಮಾಣವೂ ಸಹ ಪೌರುಷೇಯವಾದರೆ, ಅದಕ್ಕೂ ಮತ್ತೊಂದು ಮೂಲ ಪ್ರಮಾಣ ಬೇಕಾಗುತ್ತದೆ. ಅದೂ ಸಹ ಪೌರುಷೇಯವಾದರೆ, ಹೀಗೆ ಅನವಸ್ಥಾದೋಷವು ಬರುತ್ತದೆ.

ಮೂಲ ಪ್ರಮಾಣವು ಅಪೌರುಷೇಯವೇ ಆಗಿದೆ

तत्वप्रकाशिका – अतस्तन्नित्यमेवापेक्षितम् । तथा च किमनया कल्पनया; श्रुतिसिद्धं वेदनित्यत्वमेवाङ्गीक्रियताम् ।

ಆದ್ದರಿಂದ, ಅನವಸ್ಥಾದೋಷವನ್ನು ಪರಿಹಾರ ಮಾಡುವುದಕ್ಕಾಗಿ, ಮೂಲಪ್ರಮಾಣವನ್ನು ಅಪೌರುಷೇಯವೆಂದೇ ಹೇಳಬೇಕು. ಆದ್ದರಿಂದ ಹೀಗೆ ಕಲ್ಪನೆ ಮಾಡುವುದರ ಬದಲಿಗೆ ಶ್ರುತಿಯಲ್ಲಿ ಹೇಳಿದ ವೇದನಿತ್ಯತ್ವವನ್ನೇ ಒಪ್ಪಿದರೆ ಲಾಘವವಿದೆ.

ವೇದಕ್ಕೆ ಆಪ್ತೋಕ್ತತ್ವವು ಅನಾವಶ್ಯಕ

तत्वप्रकाशिका – ननु वेदस्य नित्यत्वेऽपि न प्रामाण्यम् ? आप्तोक्तत्वाभावादिति ।

ವೇದವು ನಿತ್ಯವಾದರೂ ಸಹ ಪ್ರಾಮಾಣ್ಯವನ್ನು ಸಾಧಿಸಲಾಗದು. ಏಕೆಂದರೆ, ಆಪ್ತೋಕ್ತವಾದ ವಾಕ್ಯವಷ್ಟೇ ಪ್ರಮಾಣವಾಗುತ್ತದೆ. ಅಪೌರುಷೇಯವೆಂದು ಹೇಳಿದಲ್ಲಿ ಆಪ್ತೋಕ್ತತ್ವವೆಂಬ ಗುಣವನ್ನು ಹೇಳಲು ಹೇಗೆ ಸಾಧ್ಯ ?

ವೇದವು ಸ್ವತಪ್ರಮಾಣ

तत्वप्रकाशिका – मैवम् । प्रामाण्यस्य स्वतस्त्वे न गुणानपेक्षणात् ।

ತಾರ್ಕಿಕರ ಈ ಶಂಕೆಯು ತಪ್ಪು. ಏಕೆಂದರೆ, ಪ್ರಾಮಾಣ್ಯವು ಸ್ವತಃಸಿದ್ಧವಾಗಿದೆ ಹೊರತು, ಆಪ್ತೋಕ್ತತ್ವಾದಿ ಗುಣವನ್ನು ಅಪೇಕ್ಷಿಸಿರುವುದಿಲ್ಲ.

ಪ್ರಾಮಾಣ್ಯ ಎಂದರೆ ?

तत्वप्रकाशिका – प्रामाण्यं नाम यथार्थज्ञानकरणत्वम् ।

ಏಕೆಂದರೆ, ಪ್ರಾಮಾಣ್ಯಶಬ್ದಕ್ಕೆ, ಯಥಾರ್ಥಜ್ಞಾನಕರಣ ಎಂದರ್ಥ.

'ಯಾಥಾರ್ಥ್ಯಂ' ಎದರೆ ?

तत्वप्रकाशिका – नच यथार्थ्यं ज्ञानकारणातिरिक्तकारणमपेक्षते । याथार्थ्यं ज्ञानकारणातिरिक्तकारणनिरपेक्षम् अयथार्थतातिरिक्तत्वे सति ज्ञानधर्मत्वात्, ज्ञानत्ववत् ।

ಅಂದರೆ, ಜ್ಞಾನಕ್ಕೆ ಯಾವುದು ಕಾರಣವಾಗಿದೆಯೋ, ಅದನ್ನು ಬಿಟ್ಟು ಮತ್ತೊಂದು ಕಾರಣವನ್ನು ಅಪೇಕ್ಷಿಸುವುದಿಲ್ಲ. ಆದ್ದರಿಂದ 'ಯಾಥಾರ್ಥ್ಯಂ ಜ್ಞಾನಕಾರಣಾತಿರಿಕ್ತಕಾರಣ-ನಿರಪೇಕ್ಷಮ್, ಅಯಥಾರ್ಥತಾತಿರಿಕ್ತತ್ವೇ ಸತಿ ಜ್ಞಾನಧರ್ಮತ್ವಾತ್, ಜ್ಞಾನತ್ವವತ್' ಎಂಬುದಾಗಿ ಯಾಥಾರ್ಥ್ಯವು ಅಯಥಾರ್ಥಕ್ಕಿಂತ ಭಿನ್ನವಾಗಿದ್ದು ಜ್ಞಾನದ ಧರ್ಮವಾಗಿರುವುದರಿಂದ, ಜ್ಞಾನಕಾರಣವನ್ನು ಬಿಟ್ಟು ಅತಿರಿಕ್ತವಾದ ಮತ್ತೊಂದು ಕಾರಣವನ್ನು ಅಪೇಕ್ಷಿಸುವುದಿಲ್ಲವೆಂದು ಸಾಧಿಸುತ್ತೇವೆ. ಈ ವಿಷಯದಲ್ಲಿ ಜ್ಞಾನತ್ವವೇ ದೃಷ್ಟಾಂತವಾಗಿದೆ.

ಅನುಮಾನದಿಂದ ಗುಣೋತ್ಪನ್ನವಲ್ಲವೆಂದು ಸಾಧನೆ

तत्वप्रकाशिका – याथार्थ्यं न गुणोत्पन्नं ज्ञानधर्मत्वादप्रामाण्यवदित्या-द्यनुमानात् ।

ಅಥವಾ, 'ಯಾಥಾರ್ಥ್ಯಂ ನ ಗುಣೋತ್ಪನ್ನಂ ಜ್ಞಾನಧರ್ಮತ್ವಾತ್, ಅಪ್ರಾಮಾಣ್ಯವತ್', ಅಪ್ರಾಮಾಣ್ಯವು ಜ್ಞಾನದ ಧರ್ಮವಾದ್ದರಿಂದ ಹೇಗೆ ಗುಣಜನ್ಯವಲ್ಲವೋ, ಅದರಂತೆ ಯಾಥಾರ್ಥ್ಯವೂ ಸಹ ಜ್ಞಾನಧರ್ಮವಾಗಿರುವುದರಿಂದ ಆಪ್ತೋಕ್ತತ್ವಾದಿ ಗುಣಗಳಿಂದ ಜನ್ಯವಾಗಲು ಸಾಧ್ಯವಿಲ್ಲ ಎಂದೂ ಸಹ ಅನುಮಾನ ಮಾಡುತ್ತೇವೆ.

ಅಪ್ರಾಮಾಣ್ಯಕ್ಕೆ ದೋಷವೇ ಕಾರಣ

तत्वप्रकाशिका – नच ज्ञानधर्मत्वेन अयथार्थत्वस्यापि स्वतस्त्वं वाच्यम्। दोषाभावे तदभावनियमात् ।

ಅಯಥಾರ್ಥತ್ವವು ಕೂಡ ಜ್ಞಾನದ ಧರ್ಮವೇ ಆಗಿರುವುದರಿಂದ, ಜ್ಞಾನಪ್ರಾಮಾಣ್ಯದಂತೆ ಅಪ್ರಾಮಾಣ್ಯದಲ್ಲಿಯೂ ಸ್ವತಸ್ತ್ವವನ್ನು ಏಕೆ ಒಪ್ಪಬಾರದು? ಎಂದು ಪ್ರಶ್ನಿಸಬಾರದು. ಏಕೆಂದರೆ, ಯಾವ ಸಂದರ್ಭದಲ್ಲಿ ದೋಷಾಭಾವವಿರುತ್ತದೋ, ಆವಾಗಲೇ ಅಪ್ರಾಮಾಣ್ಯಾಭಾವವೂ ಇರುತ್ತದೆಂಬ ನಿಯಮವಿದೆ. ಆದ್ದರಿಂದ ದೋಷವೇ ಅಪ್ರಾಮಾಣ್ಯಕ್ಕೆ ಕಾರಣವೆಂದಂತಾಯಿತು.

ಅನುಮಾನದ ಸ್ವರೂಪ ಹೇಗೆ ?

तत्वप्रकाशिका – 'प्रमा ज्ञानसामग्रीव्यतिरिक्तकारणजन्या कार्यत्वात्'

इति चेन्न । प्रमाया ज्ञानकारणातिरिक्तकारणजन्यत्वं नाम प्रमात्वस्य एवंविधत्वेन वा ज्ञानस्य वा तत्सम्बन्धस्य वा ।

ಇನ್ನು 'ಪ್ರಮಾ ಜ್ಞಾನಸಾಮಗ್ರೀವ್ಯತಿರಿಕ್ತಕಾರಣಜನ್ಯಾ, ಕಾರ್ಯತ್ವಾತ್' ಕಾರ್ಯತ್ವ-ವಿರುವುದರಿಂದ ಯಥಾರ್ಥಜ್ಞಾನವು ಜ್ಞಾನಸಾಮಗ್ರಿಗಿಂತ ಅತಿರಿಕ್ತವಾದ ಕಾರಣದಿಂದಲೇ ಜನ್ಯವಾಗಿದೆ ಎಂದು ಅನುಮಾನ ಮಾಡಬೇಕು. ಆದರೆ, ಯಥಾರ್ಥಜ್ಞಾನವು ಜ್ಞಾನಕಾರಣಾತಿರಿಕ್ತ-ಕಾರಣದಿಂದ ಹುಟ್ಟುತ್ತದೆಂಬುದಕ್ಕೆ ಏನು ಅರ್ಥ? ಪ್ರಮಾತ್ವ ಆಗಿರುವುದರಿಂದ ಅತಿರಿಕ್ತ ಕಾರಣದಿಂದ ಹುಟ್ಟುತ್ತದೆಂದು ಹೇಳುತ್ತಿರುವುದೋ? ಅಥವಾ ಜ್ಞಾನ ಆಗಿರುವುದರಿಂದ ಹೀಗೆ ಹುಟ್ಟುತ್ತದೆಂದೋ, ಅಥವಾ ಅವೆರಡರ ಸಂಬಂಧವಾಗಿರುವುದರಿಂದ ಎಂದೋ?

ಸಾಧ್ಯದ ಅರ್ಥವೇನು ?

तत्वप्रकाशिका – नाद्यः अजन्यत्वात् । न द्वितीयः, व्याहतेः । न तृतीयः, तस्य समवायत्वेनाजन्यत्वादेव ।

ಪ್ರಮಾತ್ವವು ಜಾತಿಯಾಗಿರುವುದರಿಂದ ನೈಯ್ಯಾಯಿಕರ ಮತದ ಪ್ರಕಾರ ಅದು ಹುಟ್ಟಲು ಸಾಧ್ಯವಿಲ್ಲ. ಎರಡನೆಯ ಪಕ್ಷದಲ್ಲಿ ವ್ಯಾಹತಿದೋಷ ಬರುತ್ತದೆ. ಏಕೆಂದರೆ, ಜ್ಞಾನವು ಜ್ಞಾನಕಾರಣಕ್ಕಿಂತ ಅತಿರಿಕ್ತವಾದ ಕಾರಣದಿಂದ ಹುಟ್ಟುತ್ತದೆಂಬುದು ಹೇಗೆ ಸಾಧ್ಯ? ಇನ್ನು ಸಂಬಂಧರೂಪವೆಂದರೆ, ಪ್ರಮಾ ಹಾಗೂ ಪ್ರಮಾತ್ವಗಳ ಸಂಬಂಧ ಎಂದಂತಾಯಿತು. ಇವೆರಡೂ ವ್ಯಕ್ತಿ ಹಾಗೂ ಜಾತಿರೂಪವಾದ್ದರಿಂದ, ಅವುಗಳ ಸಂಬಂಧವನ್ನು ಸಮವಾಯ-ರೂಪವೆಂದು ನೈಯ್ಯಾಯಿಕರು ಒಪ್ಪಿದ್ದಾರೆ. ಆದರೆ ಸಮವಾಯವು ನಿತ್ಯವಾದ್ದರಿಂದ ಅಜನ್ಯವಾಗಿದೆ.

ವ್ಯಾಹತಿ ದೋಷ

तत्वप्रकाशिका – प्रमात्वयुक्तज्ञानस्यैवंविधत्वं साध्यते ? इति चेन्न । तादृशज्ञानस्यापि ज्ञानकारणातिरिक्तकारणजन्यत्वसाधने व्याघातानिस्तारात् ।

ಇನ್ನು ಪ್ರಮಾತ್ವದಿಂದ ಸಹಿತವಾದ ಜ್ಞಾನಕ್ಕೆ ಮಾತ್ರ ಜ್ಞಾನಕಾರಣಾತಿರಿಕ್ತಕಾರಣಜನ್ಯತ್ವವನ್ನು ಸಾಧಿಸುತ್ತೇವೆಂದು ಹೇಳಬೇಕು. ಆವಾಗ, ಅಂತಹ ವಿಶಿಷ್ಟಜ್ಞಾನಕ್ಕೂ ಕೂಡ ಜ್ಞಾನಕಾರಣಾತಿರಿಕ್ತ-ಕಾರಣಜನ್ಯತ್ವವನ್ನು ಸಾಧನೆ ಮಾಡಿದರೆ, ವ್ಯಾಘಾತದೋಷವು ಬಂದೇ ಬರುತ್ತದೆ.

ಜ್ಞಾನಕಾರಣತದಿರಿಕ್ತಜನ್ಯತ್ವವನ್ನು ಸಾಧಿಸಿದರೆ ಬಾಧ ದೋಷ

तत्वप्रकाशिका – ज्ञानकारणतदतिरिक्तजन्यत्वं साध्यते ? इति चेन्न । ईशप्रमायां बाधात् ।

ಈ ದೋಷವನ್ನು ಪರಿಹಾರ ಮಾಡುವುದಕ್ಕಾಗಿ ಪ್ರಮಾ ಎಂಬುದು ಜ್ಞಾನಕಾರಣ ಮತ್ತು ತದತಿರಿಕ್ತಕಾರಣದಿಂದ ಜನ್ಯವಾಗುತ್ತದೆಂದು ಹೇಳಿದರೆ, ವಿಷಯೇಂದ್ರಿಯಸನ್ನಿಕರ್ಷ ಮತ್ತು ತದತಿರಿಕ್ತವಾದ ಅನುಮಾನಾದಿಗಳಿಂದ ಹುಟ್ಟುತ್ತದೆಂದು ಹೇಳಿದರೆ, ಈಶ್ವರಪ್ರಮಾ ಎಂಬುದು ಜನ್ಯವಾಗದ ಕಾರಣ ಅದರಲ್ಲಿ ಜ್ಞಾನಕಾರಣಾತಿರಿಕ್ತಕಾರಣಜನ್ಯತ್ವಕ್ಕೆ ಬಾಧವು ಬರುತ್ತದೆ.

ಈಶ್ವರಪ್ರಮಾವನ್ನು ಸೇರಿಸದಿದ್ದರೆ ವ್ಯಭಿಚಾರ

तत्वप्रकाशिका – तदतिरिक्तप्रमापक्षीकारान्नैवमिति चेन्न । तथापि घटादौ व्यभिचारात् ।

ಈಶ್ವರಪ್ರಮಾ ಅತಿರಿಕ್ತತ್ವವನ್ನು ಪ್ರಮಾದಲ್ಲಿ ವಿಶೇಷಣ ನೀಡಿದರೆ, ಘಟ-ಪಟ ಮೊದಲಾದ ಪದಾರ್ಥಗಳಲ್ಲಿ ಕಾರ್ಯತ್ವವಿದ್ದು ಸಾಧ್ಯದ ಏಕದೇಶವಾದ ಜ್ಞಾನಕಾರಣಜನ್ಯತ್ವವೂ ಇಲ್ಲದ ಕಾರಣ ವ್ಯಭಿಚಾರದೋಷವು ಬರುತ್ತದೆ.

ಜ್ಞಾನಕಾರಣಮಾತ್ರಜನ್ಯತ್ವಾಭಾವವನ್ನು ಸಾಧಿಸಿದರೂ ವ್ಯಭಿಚಾರ

तत्वप्रकाशिका – ज्ञानकारणमात्रजन्यत्वाभावः साध्यते? इति चेन्न । ज्ञाने व्यभिचारापरिहारात् ।

ಇನ್ನು ಜ್ಞಾನಕಾರಣಮಾತ್ರಜನ್ಯತ್ವಾಭಾವವನ್ನು ಸಾಧ್ಯವನ್ನಾಗಿ ಮಾಡುತ್ತೇವೆಂದು ಉತ್ತರಿಸಬೇಕು. ಅಂದರೆ, ಕೇವಲ ಜ್ಞಾನಕಾರಣದಿಂದಲೇ ಉತ್ಪನ್ನವಾಗದಿರುವುದನ್ನು ಸಾಧಿಸಿದರೆ

ವ್ಯಭಿಚಾರವು ತಪ್ಪಿದ್ದಲ್ಲ. ಏಕೆಂದರೆ, ಘಟ-ಪಟಾದಿಗಳಲ್ಲಿ ವ್ಯಭಿಚಾರ ಬಾರದಿದ್ದರೂ ಜ್ಞಾನದಲ್ಲಿ ವ್ಯಭಿಚಾರ ಬರುತ್ತದೆ. ಏಕೆಂದರೆ, ಸಾಧ್ಯವು ಜ್ಞಾನದಲ್ಲಿರುವುದಿಲ್ಲ. ಆದರೆ ಕಾರ್ಯತ್ವವೆಂಬ ಹೇತು ಜ್ಞಾನದಲ್ಲಿರುವುದರಿಂದ ದೋಷವಿರುತ್ತದೆ.

ವ್ಯಭಿಚಾರ ಪರಿಹಾರವು ಅಸಾಧ್ಯ

तत्वप्रकाशिका – ज्ञानातिरिक्तत्वेन हेतुर्विशेष्यते? इति चेन्न । ज्ञानेऽपि कार्यत्वेन तत्साधनसौलभ्यात् ।

ಈ ವ್ಯಭಿಚಾರವನ್ನು ಪರಿಹಾರ ಮಾಡುವುದಕ್ಕಾಗಿ ಜ್ಞಾನಭಿನ್ನವಾದ ಕಾರ್ಯವಾಗಿರಬೇಕೆಂದು ಹೇತುವಿನಲ್ಲಿ ಜ್ಞಾನಾತಿರಿಕ್ತತ್ವವನ್ನು ವಿಶೇಷಣವನ್ನಾಗಿ ಹೇಳಬೇಕು. ಆವಾಗ, ಜ್ಞಾನದಲ್ಲಿಯೂ ಕಾರ್ಯತ್ವವಿರುವುದರಿಂದ ಅದರಲ್ಲಿಯೂ ಜ್ಞಾನಕಾರಣಮಾತ್ರಜನ್ಯತ್ವಾಭಾವಧರ್ಮವನ್ನು ಸಾಧನೆ ಮಾಡುವುದು ಸುಲಭವಾಗುತ್ತದೆ.

ಮತ್ತೊಂದು ಅನುಮಾನವು ನಿರಾಕೃತವಾಯಿತು

तत्वप्रकाशिका – विशिष्टाभावविकल्पेन व्याघातस्य समीकरणात् । 'प्रमा गुणजन्या तदन्वयव्यतिरेकित्वात्' इत्येतदपि प्रतिज्ञानिरासेन निरस्तम् ।

ಜ್ಞಾನಕಾರಣಮಾತ್ರಜನ್ಯತ್ವಾಭಾವವೆಂಬ ವಿಶಿಷ್ಟಾಭಾವವಿಷಯದಲ್ಲಿ ವಿಕಲ್ಪವನ್ನು ತೋರಿಸಿ, ವ್ಯಾಘಾತದೋಷವನ್ನು ಹೇಳಿದರೆ 'ಪ್ರಮಾ ಜ್ಞಾನಕಾರಣಮಾತ್ರಜನ್ಯಾಭಾವವತೀ' ಎಂಬ ಅನುಮಾನದಲ್ಲಿಯೂ ವ್ಯಾಘಾತದೋಷವನ್ನು ತೋರಿಸಬಹುದು. 'ಪ್ರಮಾ ಗುಣಜನ್ಯಾನ್ವಯ ತದನ್ವಯವ್ಯತಿರೇಕಿತ್ವಾತ್' ಎಂಬ ಅನುಮಾನವೂ ಸಹ ಪ್ರತಿಜ್ಞೆಯ ನಿರಾಕರಣೆಯಿಂದಲೇ ನಿರಸ್ತವಾಯಿತು.

ಗುಣಾನ್ವಯವ್ಯತಿರೇಕಿತ್ವವನ್ನು ನಿರೂಪಣೆ ಮಾಡಲಾಗದು

तत्वप्रकाशिका – किं चेदं गुणान्वयव्यतिरेकित्वमन्यत्रानुपक्षीणं सामान्यं वा । न द्वितीयः । व्यभिचारात् । नाद्यः । दोषनिरासोपक्षीणत्वात् ।

ಮತ್ತು ಪ್ರಮಾದಲ್ಲಿ ಗುಣಾನ್ವಯವ್ಯತಿರೇಕಿತ್ವವು ಇರುತ್ತದೆಂದು ಹೇಳಿದಿರಿ. ಈ ಗುಣಾನ್ವಯವ್ಯತಿರೇಕಿತ್ವವು ಅನ್ಯತ್ರ ಉಪಕ್ಷೀಣವಾಗಿಲ್ಲವೋ? ಅಂದರೆ ಅನನ್ಯಥಾಸಿದ್ಧವಾಗಿದೆಯೋ?, ಅಥವಾ ಸಾಮಾನ್ಯರೀತಿಯಾಗಿದೆಯೋ ಎಂದರೆ ಅನ್ಯಥಾಸಿದ್ಧವಾಗಿದೆಯೋ? ಎಂಬ ಪ್ರಶ್ನೆಗೆ ಉತ್ತರಿಸಬೇಕು. ಅನ್ಯಥಾಸಿದ್ಧವಾಗಿದೆ ಎಂಬ ಎರಡನೆಯ ಪಕ್ಷ ಕೂಡುವುದಿಲ್ಲ. ಏಕೆಂದರೆ, ಈ ಹೇತುವಿಗೆ ವ್ಯಭಿಚಾರದೋಷವು ಬರುತ್ತದೆ. ಇನ್ನು ಅನನ್ಯಥಾಸಿದ್ಧವಾಗಿದೆ ಎಂದು ಮೊದಲನೆಯ ಪಕ್ಷವನ್ನು ಸ್ವೀಕರಿಸಿದರೆ, ಅದು ಗುಣದೋಷ ನಿರಾಸ ಮಾಡಲು ಉಪಯುಕ್ತವಾಗಿರುತ್ತದೆ. ಅಂದರೆ ಅನ್ಯಥಾಸಿದ್ಧವೇ ಆಗಿರುತ್ತದೆ. ಆದ್ದರಿಂದ, ಪ್ರಮೋತ್ಪತ್ತಿಗೆ ಕಾರಣವೆಂದು ಹೇಳಲು ಸಾಧ್ಯವಿಲ್ಲ.

ಉಭಯಕಾರಣವೆನ್ನಲು ಕಲ್ಪಕವಿಲ್ಲ

तत्वप्रकाशिका – न चोभयकारणत्वे कल्पकमस्ति । न चैवमप्रमाया अपि स्वतस्त्वम् । तत्र दोषान्वयव्यतिरेकनियमेन दोषाणामुभयकारणत्व-कल्पनोपपत्तेः ।

ಏಕೆಂದರೆ ದೋಷನಿರಾಸ ಮತ್ತು ಪ್ರಮೋತ್ಪತ್ತಿ ಎರಡಕ್ಕೂ ಕಾರಣವಾಗಿದೆ ಎಂದು ಹೇಳಲು ಯಾವುದೇ ಯುಕ್ತಿಗಳು ಇರುವುದಿಲ್ಲ. ಇನ್ನು ಪ್ರಾಮಾಣ್ಯವು ಹೇಗೆ ಸ್ವತಃಸಿದ್ಧವಾಗಿದೆಯೋ, ಹಾಗೆಯೇ ಅಪ್ರಾಮಾಣ್ಯವೂ ಸಹ ಸ್ವತಃಸಿದ್ಧವಾಗಿದೆ ಎಂದು ಹೇಳಬಾರದು. ಏಕೆಂದರೆ, ಅಪ್ರಾಮಾಣ್ಯದಲ್ಲಿ ದೋಷದ ಅನ್ವಯವ್ಯತಿರೇಕವು ನಿಯಮೇನ ಇರುತ್ತದೆ. ಆದ್ದರಿಂದ, ಈ ಗುಣದೋಷ-ನಿರಾಕರಣ ಮತ್ತು ಅಪ್ರಾಮಾಣ್ಯೋತ್ಪತ್ತಿ ಉಭಯಕ್ಕೂ ಕಾರಣವಾಗಿದೆ ಎಂದು ಹೇಳಬೇಕು. ಆದರೆ ಪ್ರಾಮಾಣ್ಯವಿಷಯದಲ್ಲಿ ಗುಣದ ಅನ್ವಯ-ವ್ಯತಿರೇಕವನ್ನು ತೋರಿಸಲು ಸಾಧ್ಯವಿಲ್ಲ. ಹಾಗಾಗಿ ಗುಣದೋಷನಿರಾಸ ಹಾಗೂ ಪ್ರಮೋತ್ಪತ್ತಿಗೆ ಉಭಯಕ್ಕೂ ಕಾರಣವಾಗಿದೆ ಎಂದು ಹೇಳಲಾಗದು.

ಪ್ರಾಮಾಣ್ಯವಿಷಯದಲ್ಲಿ ದೋಷಗಳು ಸಮಾನವಲ್ಲ

तत्वप्रकाशिका – न चैतत्समं प्रकृतेऽपि । यादृच्छिकायथार्थवाक्यजनित-प्रमायां व्यभिचारात् ।

ಈ ಎಲ್ಲ ದೋಷಗಳು ಪ್ರಾಮಾಣ್ಯದ ವಿಷಯದಲ್ಲಿ ಸಮ ಎಂದು ಹೇಳಲು ಬರುವುದಿಲ್ಲ. ಯಾದೃಚ್ಛಿಕವಾದ ಅಯಥಾರ್ಥವಾಕ್ಯದಿಂದ ಹುಟ್ಟಿದ ಪ್ರಮಾದಲ್ಲಿ ವ್ಯಭಿಚಾರವು ಬರುತ್ತದೆ. ಅಂದರೆ, ಯಾವನೋ ಒಬ್ಬ ಪ್ರತಾರಕನು ಅಯಥಾರ್ಥವಾಕ್ಯವನ್ನು ಪ್ರಯೋಗಿಸುತ್ತಾನೆ. ಅವನ ವಾಕ್ಯವನ್ನು ಕೇಳಿದಾಗ, ಅಕಸ್ಮಾತ್ತಾಗಿ ಯಥಾರ್ಥಜ್ಞಾನವೂ ಸಹ ಬರಬಹುದು. ಅಂತಹ ಸಮಯದಲ್ಲಿ ಆಪ್ತೋಕ್ತವಾಕ್ಯತ್ವವೆಂಬ ಗುಣವಿಲ್ಲದ ಕಾರಣ ವ್ಯಭಿಚಾರದೋಷವು ಬರುತ್ತದೆ.

ದೋಷಾಭಾವವು ಪ್ರಮಾಣಕ್ಕೆ ಕಾರಣವಲ್ಲ

तत्वप्रकाशिका – गुणानां दोषनिरसनव्यापारत्वे दोषाभावोऽपि कारणतयाऽपन्नः? इति चेन्न । प्रदीपावरणनिवृत्त्यादीनामपि प्रकाशनादिकारणत्वापत्तेः।

ಗುಣವು ದೋಷವನ್ನು ನಿರಾಸ ಮಾಡುವುದರಲ್ಲೇ ವ್ಯಾಪಾರವುಳ್ಳದ್ದಾಗಿರುವುದರಿಂದ, ದೋಷಾಭಾವವು ಜ್ಞಾನಪ್ರಾಮಾಣ್ಯಕ್ಕೂ ಕಾರಣವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ, ಕಾರ್ಯಕ್ಕೆ ಕಾರಣವು ಇದ್ದೇ ಇರುತ್ತದೆಂದು ಒಪ್ಪಿದಾಗ, ದೀಪದ ಆವರಣನಿವೃತ್ತಿಯೂ ಸಹ ದೀಪದ ಪ್ರಕಾಶಕ್ಕೆ ಕಾರಣವೆಂದು ಹೇಳಬೇಕಾದೀತು.

ದೋಷಾಭಾವವನ್ನು ಕಾರಣವೆಂದರೂ ನನಗೆ ಬಾಧಕವಿಲ್ಲ

तत्वप्रकाशिका – दोषाभावस्य कारणत्वे च नास्माकमनिष्टम् । तावता वेदापौरुषेयताऽव्याघातात् ।

ಅಷ್ಟೇ ಅಲ್ಲದೆ, ಜ್ಞಾನಪ್ರಾಮಾಣ್ಯವಿಷಯದಲ್ಲಿ ದೋಷಾಭಾವಕ್ಕೆ ಕಾರಣತ್ವವಿದೆಯೆಂದು ಒಪ್ಪಿದರೆ, ಅದರಿಂದ ನಮಗೆ ಅನಿಷ್ಟವಾದದ್ದು ಏನೂ ಇಲ್ಲ. ಏಕೆಂದರೆ, ಅಷ್ಟುಮಾತ್ರದಿಂದ ವೇದಾಪೌರುಷೇಯತ್ವಕ್ಕೆ ವ್ಯಾಹತಿಯು ಬರುವುದಿಲ್ಲ.

ಈಶ್ವರ ಪ್ರಮೆಯಲ್ಲಿ ಬಾಧದೋಷ

तत्वप्रकाशिका – 'प्रमा गुणजन्या प्रमात्वात्' इति चेन्न । ईशप्रमायां बाधात् ।

ಯಥಾರ್ಥಜ್ಞಾನದಲ್ಲಿ ಪ್ರಮಾತ್ವವು ಇರುವುದರಿಂದ, ಅದು ಗುಣಜನ್ಯವಾಗಿದೆ ಎಂದು ಸಾಧಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಈಶಪ್ರಮಾದಲ್ಲಿ ಪ್ರಮಾತ್ವವಿದ್ದರೂ ಸಹ ಗುಣಜನ್ಯತ್ವವು ಇರುವುದಿಲ್ಲ. ಆದ್ದರಿಂದ ಬಾಧದೋಷವು ಬರುತ್ತದೆ.

ಈಶ್ವರ ಪ್ರಮೆಯನ್ನು ಬಿಟ್ಟರೆ ವ್ಯಭಿಚಾರದೋಷ

तत्वप्रकाशिका – तदतिरिक्तप्रमाः पक्षी क्रियन्ते ? इति चेन्न । तत्रैव व्यभिचारात् ।

ಹಿಂದಿನ ದೋಷದ ಪರಿಹಾರಕ್ಕಾಗಿ ಜನ್ಯಪ್ರಮಾತ್ವವನ್ನು ಹೇತುವನ್ನಾಗಿ ಮಾಡುತ್ತೇವೆಂದು ಉತ್ತರಿಸಬಹುದು. ಆದರೆ, ಪುನಃ ಅಲ್ಲಿಯೇ ವ್ಯಭಿಚಾರದೋಷವು ಬರುತ್ತದೆ.

ಜನ್ಯಪ್ರಮಾತ್ವವನ್ನು ಹೇತು ಮಾಡಿದರೆ ಸತ್‌ಪ್ರತಿಪಕ್ಷ ದೋಷ

तत्वप्रकाशिका – जन्यप्रमात्वं हेतुः ? इति चेन्न । 'प्रमा गुणजन्या न भवति, प्रमात्वादीश्वरप्रमावत्' इति प्रतिपक्षसाधनात् । न चाजन्यत्वमुपाधिः। घटादौ व्यभिचारात् । अजन्यप्रमात्वमुपाधिः ? इति चेन्न । व्याप्यभावात् ।

ಜನ್ಯಪ್ರಮಾತ್ವವನ್ನು ಹೇತು ಮಾಡುತ್ತೇವೆಂದು ಹೇಳಿದರೆ ಸತ್ಪ್ರತಿಪಕ್ಷದೋಷವು ಬರುತ್ತದೆ. ಏಕೆಂದರೆ, 'ಪ್ರಮಾ ಗುಣಜನ್ಯಾ ನ ಭವತಿ, ಪ್ರಮಾತ್ವಾತ್, ಈಶ್ವರಪ್ರಮಾವತ್', ಈಶ್ವರಪ್ರಮಾ ಎಂಬುದು ಹೇಗೆ ಗುಣಜನ್ಯವಾಗಿಲ್ಲವೋ, ಅದರಂತೆ ಬೇರೆ ಪ್ರಮಾ ಎಂಬುದು ಸಹ ಪ್ರಮಾ ಆಗಿರುವುದರಿಂದ ಗುಣಜನ್ಯವಾಗುವುದಿಲ್ಲವೆಂದು ಸತ್ಪ್ರತಿಪಕ್ಷಾನುಮಾನವನ್ನು ಮಾಡಬಹುದು. ಇನ್ನು ಅಜನ್ಯತ್ವವನ್ನು ಉಪಾಧಿಯೆಂದು ಹೇಳಲಾಗದು. ಏಕೆಂದರೆ, ಘಟಾದಿಗಳಲ್ಲಿ ವ್ಯಭಿಚಾರದೋಷವು ಬರುತ್ತದೆ. ಅಜನ್ಯಪ್ರಮಾತ್ವವನ್ನು ಉಪಾಧಿಯೆಂದು ಹೇಳಿದರೆ, ವ್ಯಾಪ್ತಿಯೇ ಇರುವುದಿಲ್ಲ.

ದೇವತೆಗಳು ಅನಿತ್ಯರೆಂದು ಹೇಳಬಾರದು

तत्वप्रकाशिका – अतः प्रमाया ज्ञानकारणातिरिक्तकारणनिरपेक्षत्वेन

वेदस्य कर्तृगुणनिरपेक्षस्यापि प्रामाण्यसिद्धेर्युक्तमेव तन्नित्यत्वम् । तस्यैवं नित्यत्वात् तद्वाच्यदेवानां चानित्यत्वेऽप्रामाण्यमेव स्यात् ।

ಹೀಗೆ ಯಥಾರ್ಥಜ್ಞಾನಕ್ಕೆ ಜ್ಞಾನಕಾರಣಾತಿರಿಕ್ತವಾದ ಆಪ್ತೋಕ್ತತ್ವಾದಿ ಗುಣಗಳ ಅಪೇಕ್ಷೆಯಿಲ್ಲದ ಕಾರಣ, ವೇದಗಳಿಗೆ ಗುಣನಿರಪೇಕ್ಷೆಯಿಂದಲೇ ಪ್ರಾಮಾಣ್ಯವು ಸಿದ್ಧವಾಗುತ್ತದೆ. ಆದ್ದರಿಂದಲೇ ನಿತ್ಯತ್ವವೂ ಸಹ ಸಿದ್ಧವಾಗುತ್ತದೆ. ವೇದಗಳು ನಿತ್ಯವಾದ್ದರಿಂದ ತತ್ಪ್ರತಿಪಾದ್ಯವಾದ ದೇವತೆಗಳು ಅನಿತ್ಯವೆಂದು ಹೇಳಿದರೆ, ವೇದಕ್ಕೆ ಅಪ್ರಾಮಾಣ್ಯದೋಷವೇ ಬರುತ್ತದೆ.

ವೇದಪ್ರಮಾಣ್ಯಕ್ಕಾಗಿ ದೇವತೆಯನ್ನು ನಿತ್ಯರೆನ್ನಬೇಕು

तत्वप्रकाशिका – नच तद्युक्तम् । अतस्तत्सिध्यर्थं देवानां नित्यत्वमेवाभ्युपेयम् । तथा च न तेषां वेदविद्याधिकारः ।

ಆದರೆ ವೇದಕ್ಕೆ ಅಪ್ರಾಮಾಣ್ಯವನ್ನು ಒಪ್ಪುವುದು ಯುಕ್ತವಲ್ಲದ ಕಾರಣ ಪ್ರಾಮಾಣ್ಯದ ಸಿದ್ಧಿಗಾಗಿ ದೇವತೆಗಳಿಗೆ ನಿತ್ಯತ್ವವನ್ನೇ ಅಂಗೀಕರಿಸಬೇಕು. ಹೀಗೆ ನಿತ್ಯತ್ವವನ್ನು ಒಪ್ಪಿದಾಗ, ಯಾವುದೇ ಪ್ರಯೋಜನವಿಲ್ಲದ ಕಾರಣ ದೇವತೆಗಳಿಗೆ ವೇದವಿದ್ಯಾಧಿಕಾರವನ್ನು ಇಲ್ಲವೆಂದೇ ಹೇಳಬೇಕು.

ಭೂತಭವಿಷ್ಯದ್ ವರ್ತಮಾನ ಕಾಲಗಳಲ್ಲಿ ದೇವತಾಪ್ರವಾಹವು ನಿತ್ಯ

तत्वप्रकाशिका – नच वाच्यं कर्मविधाभाववदयमपि विरोधः परिहर्तव्य इति । अतीतदेवताप्रवाहे प्रमाणसद्भावेनातीतकालीनविरोधस्यैव परिहर्तुं शक्यत्वात्। उत्तरकालेऽन्यदेवताभावनियमे प्रमाणाभावेन विरोधस्य कर्मण्यपि साम्यात् ।

ಯಾವ ರೀತಿಯಾಗಿ ಕರ್ಮವಿರೋಧವಿಲ್ಲವೆಂದು ಪ್ರತಿಪಾದಿಸಿದ್ದೇವೋ, ಅದರಂತೆ ಈ ವಿರೋಧವೂ ಸಹ ಪರಿಹಾರವಾಗುತ್ತದಲ್ಲವೆ? ಎಂದು ಪ್ರಶ್ನಿಸಬಾರದು. ಭೂತಕಾಲದ

ದೇವತಾಪ್ರವಾಹವಿಷಯದಲ್ಲಿ ಪ್ರಮಾಣವಿರುವುದರಿಂದ, ಆ ಕಾಲದ ದೇವತಾವಿಷಯದಲ್ಲಿ ವಿರೋಧವು ಪರಿಹಾರವಾಗಬಹುದು. ಆದರೆ ಮುಂದಿನ ಕಾಲದ ದೇವತೋತ್ಪತ್ತಿವಿಷಯದಲ್ಲಿ ಪ್ರಮಾಣವಿಲ್ಲದ ಕಾರಣ, ಆ ಸಂದರ್ಭದಲ್ಲಿ ವೇದನಿತ್ಯತ್ವವನ್ನು ಸಾಧಿಸುವುದು ಕಷ್ಟವಾಗುತ್ತದೆ. ಮತ್ತು, ವರ್ತಮಾನ, ಭವಿಷ್ಯತ್‌ಕಾಲೀನ ದೇವತಾಪ್ರವಾಹವಿಷಯದಲ್ಲಿ ಪ್ರಮಾಣವಿಲ್ಲದ ಕಾರಣ, ಕರ್ಮವಿಷಯದಲ್ಲೂ ಸಹ ಈ ವಿರೋಧವು ಬಂದೇ ಬರುತ್ತದೆ.

ದೇವತೆಗಳಿಗೆ ವೇದವಿದ್ಯಾಧಿಕಾರವಿಲ್ಲವೆಂದು ಪೂರ್ವಪಕ್ಷ

तत्वप्रकाशिका – नच भारतादिवदतीतविषयतया वेदस्य प्रामाण्योपपत्तिः तस्य देवताह्वानादिरूपस्य वर्तमानविषयतया अवश्यम्भावात् । अतो देवानां नानित्यत्वं युक्तमिति न तेषां वेदाधिकारः इति भावः ।

ಇನ್ನು ವೇದವು ಮಹಾಭಾರತಾದಿಗಳಂತೆ ಅತೀತಕಾಲವಿಷಯಕವಾದ್ದರಿಂದ ಅದಕ್ಕೆ ಪ್ರಾಮಾಣ್ಯವನ್ನು ಸಮರ್ಥಿಸಲು ಬರುವುದಿಲ್ಲ. ಏಕೆಂದರೆ, 'ಏಹ್ಯಗ್ನೇ' ಇತ್ಯಾದಿ ಮಂತ್ರಗಳಲ್ಲಿ ವರ್ತಮಾನಕಾಲದಲ್ಲಿ ದೇವತೆಗಳನ್ನು ಆಹ್ವಾನ ಮಾಡುವಂತಹ ಕ್ರಿಯಾಪದವು ಕೇಳಿಸುತ್ತಿರುವುದರಿಂದ, ಅತೀತದೇವತಾವಿಷಯಕವೆಂದು ಹೇಳಲು ಸಾಧ್ಯವಿಲ್ಲ. ಹೊರತಾಗಿ, ವರ್ತಮಾನವಿಷಯಕವೆಂದೇ ಅವಶ್ಯವಾಗಿ ಒಪ್ಪಬೇಕು. ಆದ್ದರಿಂದ ದೇವತೆಗಳಿಗೆ ವೇದವಿದ್ಯಾಧಿಕಾರವು ಇಲ್ಲವೆಂದು ಪೂರ್ವಪಕ್ಷದ ಅಭಿಪ್ರಾಯ.

ಪೂರ್ವಪಕ್ಷದ ನಿರಾಕರಣೆ

तत्वप्रकाशिका – परिहारं व्याख्याति – नेति ।। यदुदितं 'वेदो नित्यः' इति तत्सत्यमेव । तथापि न तस्याप्रामाण्यम्

ಸಿದ್ಧಾಂತವನ್ನು ಸ್ಥಾಪನೆ ಮಾಡುವುದಕ್ಕಾಗಿ ಪೂರ್ವಪಕ್ಷವನ್ನು ನಿರಾಕರಿಸುತ್ತಿದ್ದಾರೆ – 'ನ' ಇತ್ಯಾದಿಯಾಗಿ. ವೇದವು ನಿತ್ಯವೆಂದು ಏನು ಪ್ರತಿಪಾದಿಸಲ್ಪಟ್ಟಿತೋ, ಅದು ಸತ್ಯವೇ ಆಗಿದೆ. ಆದರೂ ಸಹ, ದೇವತೆಗಳು ಅನಿತ್ಯವೆಂದರೆ, ವೇದಕ್ಕೆ ಅಪ್ರಾಮಾಣ್ಯದೋಷವು ಬರುವುದಿಲ್ಲ.

ದೇವತೆಗಳಿಗೆ ಪ್ರವಾಹತಃ ನಿತ್ಯತ್ವವಿದೆ

तत्वप्रकाशिका – तद्वाच्यानां देवानां स्वरूपनित्यत्वाभावेऽपि प्रवाहरूपेण नित्यत्वात् ।

ಏಕೆಂದರೆ ವೇದಪ್ರತಿಪಾದ್ಯವಾದ ದೇವತೆಗಳಿಗೆ ಸ್ವರೂಪತಃ ನಿತ್ಯತ್ವವಿಲ್ಲದಿದ್ದರೂ ಪ್ರವಾಹತಃ ನಿತ್ಯತ್ವವಿರುತ್ತದೆ.

ಈ ವಿಷಯದಲ್ಲಿ ಧಾತಾಯತಾ ಎಂಬ ಪ್ರಮಾಣವಿದೆ

तत्वप्रकाशिका – नच तत्र प्रमाणाभावः । 'सूर्याचन्द्रमसौ' इति श्रुतेरेव।

ಈ ವಿಷಯದಲ್ಲಿ ಪ್ರಮಾಣವಿಲ್ಲವೆಂದು ಹೇಳಬಾರದು. 'ಸೂರ್ಯಾಚಂದ್ರಮಸೌ' ಎಂಬ ಶ್ರುತಿಯೇ ಪ್ರಮಾಣವಾಗಿದೆ.

ದೇವತೆಗಳಿಗೆ ಪ್ರತಿಕಲ್ಪಗಳಲ್ಲಿಯೂ ಅಸ್ತಿತ್ವವಿದೆ

तत्वप्रकाशिका – न चेयं श्रुतिरतीतविषयैव देवप्रभवनियमं न प्रमापयतीति वाच्यम् । प्रतिकल्पमपि श्रुत्या यथा विष्णुः पूर्वकल्पे सूर्याचन्द्रमसावकल्पयत् तथाऽस्मिन्कल्पेऽपीति कथने देवानां सर्वकल्पेषु सद्भावसिद्धेः ।

ಈ ಶ್ರುತಿಯು ಅತೀತವಿಷಯಕವೇ ಆಗಿದೆ. ಆದ್ದರಿಂದ, ವರ್ತಮಾನಕಾಲದಲ್ಲಿ ದೇವತೆಗಳ ಉತ್ಪತ್ತಿಯನ್ನು ಹುಟ್ಟಿಸುತ್ತಿಲ್ಲವೆಂದು ಪ್ರಶ್ನಿಸಬಾರದು. ಪ್ರತಿಕಲ್ಪದಲ್ಲಿಯೂ ಸೂರ್ಯ-ಚಂದ್ರರನ್ನು ಉತ್ಪತ್ತಿ ಮಾಡಿದನೋ, ಅದೇ ರೀತಿಯಲ್ಲಿ ಈ ಕಲ್ಪದಲ್ಲಿಯೂ ಸಹ ಸೃಷ್ಟಿಮಾಡಿದ್ದೇನೆ ಎಂದು ಹೇಳಿದಾಗ, ದೇವತೆಗಳಿಗೆ ಪ್ರತಿಕಲ್ಪಗಳಲ್ಲಿಯೂ ಅಸ್ತಿತ್ವವು ಸಿದ್ಧವಾಗುತ್ತದೆ.

ದೇವತೆಗಳ ಜನನವು ಔಪಚಾರಿಕ

तत्वप्रकाशिका – यथैवेति स्पष्टस्मृत्या च देवानां सर्वकल्पेषु प्रभवसिद्धेः। नच वाच्यं श्रुतावुपचारेणाप्युक्तिः संभवतीति न देवप्रभवनियम इति ।

'ಯಥೈವ' ಇತ್ಯಾದಿ ಸ್ಪಷ್ಟವಾದ ಸ್ಮೃತಿಯಿಂದಲೂ ಸಹ ಸಕಲ ಕಲ್ಪಗಳಲ್ಲಿ ದೇವತೆಗಳ ಉತ್ಪತ್ತಿಯು ಇರುತ್ತದೆಂದು ಸಿದ್ಧವಾಗಿದೆ. ಇನ್ನು ಶ್ರುತಿಯಲ್ಲಿ ಹೇಳಿದ ದೇವತೆಗಳ ಜನನವು ಔಪಚಾರಿಕವಾಗಿಯೂ ಕೂಡಿಸಬಹುದು. ಇದರಿಂದ, ದೇವತೆಗಳ ಪ್ರವಾಹವು ಇದ್ದೇ ಇರುತ್ತದೆಂದು ಶ್ರುತಿಯಿಂದ ಸಿದ್ಧವಾಗುವುದಿಲ್ಲವೆಂದು ಶಂಕಿಸಬಾರದು.

ಸೂತ್ರಕಾರರ ಪ್ರತ್ಯಕ್ಷವು ಶ್ರುತಿಸಂವಾದಿಯಾಗಿದೆ

तत्वप्रकाशिका – अतीतानागतविदां महतां श्रुतिसंवादिनो देवप्रभव-नियमग्राहकप्रत्यक्षस्य सत्त्वात् ।

ಏಕೆಂದರೆ, ಅತೀತ-ಅನಾಗತ ಕಾಲವನ್ನು ತಿಳಿದ ಸೂತ್ರಕಾರರ ಪ್ರತ್ಯಕ್ಷವು ಶ್ರುತಿಸಂವಾದಿಯಾಗಿಯೇ ಇರುತ್ತದೆ. ಇವರ ಪ್ರತ್ಯಕ್ಷವೂ ದೇವತೆಗಳ ಉತ್ಪತ್ತಿಯ ವಿಷಯದಲ್ಲಿ ಶ್ರುತಿಗೆ ಸಂವಾದಿಯಾಗಿದೆ ಎಂದು ತಿಳಿಯಬೇಕು.

ಮಹಾತ್ಮರ ಪ್ರತ್ಯಕ್ಷವನ್ನು ನಾವು ಹೇಗೆ ತಿಳಿಯಬೇಕು ?

तत्वप्रकाशिका – नच परप्रत्यक्षस्याप्रत्यक्षत्वात्तदनिश्चयः । 'यथर्तुष्वृतु-लिङ्गानि नानारूपाणि पर्यये । दृश्यन्ते तानि तान्येव तथा भावा युगादिषु' इति तद्वचनात् निश्चयोपपत्तेः ।

ಮಹಾತ್ಮರ ಪ್ರತ್ಯಕ್ಷವು ಹೀಗೆ ಇರುತ್ತದೆಂದು ನಮ್ಮಿಂದ ತಿಳಿಯಲು ಹೇಗೆ ಸಾಧ್ಯ ? ಎಂದು ಪ್ರಶ್ನಿಸಬಾರದು.

'ಯಥರ್ತುಷ್ವೃತುಲಿಂಗಾನಿ ನಾನಾರೂಪಾಣಿ ಪರ್ಯಯೇ ।
ದೃಶ್ಯಂತೇ ತಾನಿ ತಾನ್ಯೇವ ತಥಾ ಭಾವಾ ಯುಗಾದಿಷು ॥'

ಆಯಾ ಋತುಗಳ ಅನೇಕವಿಧವಾದ ಚಿಹ್ನೆಗಳು ಋತುಪರ್ಯಾಯದ ಮೇಲೆ ಹೇಗೆ ನಮಗೆ ಪ್ರತೀತವಾಗುತ್ತವೋ, ಹಾಗೆ ಪ್ರತಿಯೊಂದು ಯುಗಗಳಲ್ಲಿ ಅದೇ ದೇವಾದಿ ಪದಾರ್ಥಗಳು ದೃಷ್ಟಿಗೆ ಬೀಳುತ್ತವೆ. ಎಂಬುದಾಗಿ ಮಹಾತ್ಮರ ವಚನದಿಂದ ಈ ವಿಷಯವು ಸ್ಪಷ್ಟವಾಗುತ್ತದೆ.

ದೇವತಾ ಪ್ರವಾಹದ ಸಾಧನೆ

तत्वप्रकाशिका – न चायोगिनां श्रुतिप्रत्यक्षयोरविश्वासेनोक्तानिश्चयः । 'उपरितनकालो देववान् कालत्वात् सम्प्रतिपन्नकालवत्' इति श्रुतिसंवाद्यनुमानेन तेषां देवप्रभवनियमसिद्धेरिति भावः ।

ಅಯೋಗಿ ಜನರ ಶ್ರುತಿ ಮತ್ತು ಪ್ರತ್ಯಕ್ಷಗಳಲ್ಲಿ ವಿಶ್ವಾಸವಿಲ್ಲದ ಕಾರಣ, ದೇವತಾಪ್ರವಾಹ-ವಿಷಯದಲ್ಲಿ ಅನಿಶ್ಚಯವೇ ಬರುತ್ತದೆಂದು ಹೇಳಬಾರದು. ಏಕೆಂದರೆ, ಭವಿಷ್ಯತ್‌ಕಾಲವು ದೇವತೆಗಳಿಂದ ಹೇಗೆ ಕಾಲವಾದ್ದರಿಂದ ಯುಕ್ತವಾಗಿದೆಯೋ, ಅದೇ ರೀತಿಯಾಗಿ ಅತೀತ ಕಾಲವೂ ಕೂಡ ಕಾಲವಾಗಿರುವುದರಿಂದ ದೇವತೆಗಳಿಂದ ಯುಕ್ತವಾಗಿದೆ ಎಂಬುದಾಗಿ ಶ್ರುತ್ಯನುಸಾರಿಯಾದ ಅನುಮಾನದಿಂದ ದೇವತಾಪ್ರವಾಹವನ್ನು ಸಾಧಿಸಿ ತೋರಿಸಬಹುದು.

ಪ್ರಳಯವು ಶಬ್ದಪ್ರಮಾಣದಿಂದ ಗಮ್ಯ

तत्वप्रकाशिका – नच वाच्यं प्रलयकाले कालत्वहेतोर्व्यभिचारः अप्रलयकालत्वहेतोः परं प्रति व्यर्थविशेषणत्वमिति । प्रलयस्य प्रमाणसिद्धत्वात् ॥२८॥

ಈ ಅನುಮಾನದಲ್ಲಿ ಕಾಲತ್ವಹೇತುವು ಪ್ರಳಯಕಾಲದಲ್ಲಿ ವ್ಯಭಿಚರಿತವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಅಪ್ರಳಯಕಾಲತ್ವವೇ ನಮಗೆ ಅಭಿಪ್ರೇತವಾದ ಹೇತುವಾಗಿದೆ. ಯಾರು ಶ್ರುತಿಗೆ ಅಪ್ರಾಮಾಣ್ಯವನ್ನು ಹೇಳುತ್ತಾರೋ, ಅವರ ಪಕ್ಷದಲ್ಲಿ ಪ್ರಳಯಕಾಲವೇ ಇಲ್ಲದ ಕಾರಣ ಅವರನ್ನು ಕುರಿತು ಹೇಳುವಾಗ, ಅಪ್ರಳಯವೆಂಬ ವಿಶೇಷಣ ವ್ಯರ್ಥವಾಗುತ್ತದೆಂದು ಮೊದಲ ಅನುಮಾನದಲ್ಲಿ ಅಪ್ರಳಯತ್ವವನ್ನು ವಿಶೇಷಣವಾಗಿ ನೀಡಿಲ್ಲ. ಏಕೆಂದರೆ, ಪ್ರಳಯವು ಕೇವಲ ಶಬ್ದಪ್ರಮಾಣದಿಂದಷ್ಟೇ ತಿಳಿಯುತ್ತದಷ್ಟೇ ಹೊರತು, ಬೇರೆ ಪ್ರಮಾಣದಿಂದ ತಿಳಿಯುವುದಿಲ್ಲ.

ಭಾವದೀಪ

'ಶಬ್ದೇ ವಿರೋಧಃ' ಎಂಬ ಭಾಷ್ಯದ ವ್ಯಾಖ್ಯಾನ

ಭಾವದೀಪಃ – ।। शब्द इति चेन्नातः प्रभवात्प्रत्यक्षानुमानाभ्याम् ।। ೨೮ ।।

शब्दे विरोध इति भाष्यं व्याचष्टे – **अत्रापीत्यादिना** ।। आद्यन्तवत्त्व इति शेषोक्तिः ।

'ಶಬ್ದ ಇತಿ ಚೇನ್ನ ಅತಃ ಪ್ರಭವಾತ್ ಪ್ರತ್ಯಕ್ಷಾನುಮಾನಾಭ್ಯಾಮ್' ಎಂಬ ಸೂತ್ರವು ಪ್ರಾರಂಭವಾಗುತ್ತಿದೆ. 'ಶಬ್ದೇ ವಿರೋಧಃ' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅತ್ರಾಪಿ' ಇತ್ಯಾದಿ ಟೀಕೆಯಿಂದ. ಟೀಕಾವಾಕ್ಯದಲ್ಲಿರುವ 'ಆದ್ಯಂತವತ್ವಮ್' ಎಂಬುದು ಶೇಷೋಕ್ತಿಯಾಗಿದೆ.

ದೇವತೆಗಳಿಗೆ ಅನಿತ್ಯತ್ವವಿದೆಯೇ ?

ಭಾವದೀಪಃ – यद्यप्यतीतदेवताप्रवाहे प्रमाणसद्भावेनेत्यादिना वक्ष्यमाणदिशा विरोधसूत्रं सादित्वप्रयुक्तशङ्काव्यावर्तकमिति तदनुरोधेन पूर्वत्र सादित्व इति, अत्र तु अनित्यत्व इत्येव वाच्यम् ।

ಪ್ರಶ್ನೆ - 'ಅತೀತದೇವತಾಪ್ರವಾಹೇ ಪ್ರಮಾಣಸದ್ಭಾವೇನ' ಅತೀತದೇವತಾಪ್ರವಾಹವಿಷಯದಲ್ಲಿ ಪ್ರಮಾಣವಿರುವುದರಿಂದ ಇತ್ಯಾದಿಯಾಗಿ ಮುಂದೆ ಹೇಳುವಂತೆ ಹಿಂದಿನ 'ವಿರೋಧಃ ಕರ್ಮಣಿ' ಎಂಬ ಸೂತ್ರವು ದೇವತೆಗಳಿಗೆ ಉತ್ಪತ್ತಿಯಿರುತ್ತದೆಂಬ ಆಶಂಕೆಯನ್ನು ಮಾತ್ರ ಪರಿಹರಿಸುತ್ತಿದೆ. ಅದಕ್ಕನುಸಾರಿಯಾಗಿ ಹಿಂದೆ 'ಸಾದಿತ್ವಮ್' ಹಿಂದೆ ಸಾದಿತ್ವವನ್ನಷ್ಟೇ ಹೇಳಲಾಗಿದೆ, ಎಂದು ಟೀಕೆಯಲ್ಲಿ ಹೇಳಬೇಕಿತ್ತು. ಮತ್ತು ಈ ಸೂತ್ರದಲ್ಲಿ ದೇವತೆಗಳಿಗೆ ಅನಿತ್ಯತ್ವವನ್ನು ಸಾಧಿಸಲಾಗಿದೆ ಎಂದು ಹೇಳಬೇಕಲ್ಲವೇ?

ನಾಶಪ್ರಯುಕ್ತವಾದ ಆಶಂಕೆಯ ಪರಿಹಾರ

ಭಾವದೀಪಃ – तथापि आद्यन्तवत्त्वे इति द्वयोरप्युक्तिः पूर्वत्रोक्तसादित्व-चोद्योत्तरयोः अत्र । अत्रोक्तसान्तत्वचोद्योत्तरयोः पूर्वत्रानुसन्धेयत्वं सूचयितुमित्याहुः।

ಹೌದು. ಆದರೆ, ಹಿಂದಿನ ಸೂತ್ರದಲ್ಲಿ ಸಾದಿತ್ವಪ್ರಯುಕ್ತವಾದ ಆಶಂಕೆಯನ್ನಷ್ಟೇ ಪರಿಹರಿಸಿದ್ದರೂ ನಾಶಪ್ರಯುಕ್ತವಾದ ಆಶಂಕೆಯನ್ನೂ ಸಹ ಪರಿಹರಿಸಬೇಕು. ಈ ಸೂತ್ರದಲ್ಲಿ ನಾಶಪ್ರಯುಕ್ತವಾದ ಆಶಂಕೆಯನ್ನು ಪರಿಹರಿಸಿದ್ದರೂ ಸಾದಿತ್ವಪ್ರಯುಕ್ತವಾದ ಆಶಂಕೆಯನ್ನು ಕೂಡ ಪರಿಹರಿಸಬೇಕು. ಆದ್ದರಿಂದ, ಹಿಂದೆ ಹೇಳಿದ ಸಾದಿತ್ವಪ್ರಯುಕ್ತವಾದ ಆಶಂಕೆ ಹಾಗೂ ಸಮಾಧಾನಗಳನ್ನು ಈ ಸೂತ್ರದಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು. ಈ ಸೂತ್ರದಲ್ಲಿರುವ ಸಾಂತತ್ವಪ್ರಯುಕ್ತವಾದ ಆಶಂಕೆ ಮತ್ತು ಉತ್ತರಗಳನ್ನು ಹಿಂದಿನ ಸೂತ್ರದಲ್ಲಿ ಅನುಸಂಧಾನ ಮಾಡಿಕೊಳ್ಳಬೇಕೆಂದು ಸೂಚಿಸಿದಂತಾಯಿತು.

'ವಾಚಾ ವಿರೂಪನಿತ್ಯಯಾ' ಎಂಬ ಶ್ರುತಿಗೆ ಅನ್ಯಥಾಸಿದ್ಧಿ ಪರಿಹಾರ

भावदीपः – नित्यत्वाद् वेदस्येत्यादि व्याचष्टे – वेदस्येति ।। यावता यस्मादित्यर्थः । वाचेत्यादि व्याचष्टे – वेदस्येति ।। आप्तनिश्चयादित्येतदवतार्य व्याख्यातुं श्रुतेरन्यथासिद्धिं शङ्कते – नचेति।।

'ನಿತ್ಯತ್ವಾದ್ ವೇದಸ್ಯ' ಇತ್ಯಾದಿ ಭಾಷ್ಯವನ್ನು 'ವೇದಸ್ಯ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ಯಾವತಾ' ಎಂದರೆ 'ಯಾವ ಕಾರಣದಿಂದ' ಎಂದರ್ಥ. 'ವಾಚಾ' ಇತ್ಯಾದಿ ಭಾಷ್ಯವನ್ನು 'ಭೇದಸ್ಯ ನಿತ್ಯತ್ವಮೇವ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ಆಪ್ತನಿಶ್ಚಯಾತ್' ಎಂಬ ಭಾಷ್ಯಕ್ಕೆ ಅವತಾರಿಕೆ ನೀಡಿ ವ್ಯಾಖ್ಯಾನ ಮಾಡುವುದಕ್ಕಾಗಿ 'ವಾಚಾ ವಿರೂಪನಿತ್ಯಯಾ' ಎಂಬ ಶ್ರುತಿಗೆ ಅನ್ಯಥಾಸಿದ್ಧಿಯನ್ನು ಆಶಂಕೆ ಮಾಡುತ್ತಿದ್ದಾರೆ, 'ನಚ' ಇತ್ಯಾದಿ ಟೀಕೆಯಿಂದ.

ಅತೀಂದ್ರಿಯವಸ್ತುಗಳ ಪ್ರತ್ಯಕ್ಷದ ಬಗ್ಗೆ

भावदीपः – 'अविप्रलम्भस्तज्ज्ञानं तत्कृतत्वादयोऽपि च' । कल्प्या इति 'प्रत्यक्षः कस्यचिद्धर्मो वस्तुत्वादिति चोदितः ।' इति चानुभाष्यं हृदि कृत्वाऽह – विवादेति ।। विवादपदं धर्माधर्मादिकमित्यर्थः । अतीन्द्रियापरोक्षिणः सार्वज्ञ्यं कैमुत्यसिद्धमिति भावः ।।

'ಅವಿಪ್ರಲಂಭಸ್ತಜ್ಜ್ಞಾನಂ ತತ್ಕೃತತ್ವಾದಯೋಽಪಿ ಚ ಕಲ್ಪ್ಯಾಃ' ಎಂಬ, ಹಾಗೂ

'ಪ್ರತ್ಯಕ್ಷಃ ಕಸ್ಯಚಿದ್ಧರ್ಮೋ ವಸ್ತುತ್ವಾದಿತಿ ಚೋದಿತಃ' ಎಂಬ

ಅನುಭಾಷ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ವ್ಯಾಖ್ಯಾನ ಮಾಡುತ್ತಿದ್ದಾರೆ, 'ವಿವಾದಪದಂ' ಇತ್ಯಾದಿಯಾಗಿ. 'ವಿವಾದಪದಂ' ಎಂದರೆ ಧರ್ಮಾಧರ್ಮಾದಿಗಳು ಎಂದರ್ಥ. ಅತೀಂದ್ರಿಯವಸ್ತುಗಳನ್ನೇ ಪ್ರತ್ಯಕ್ಷವಾಗಿ ನೋಡಿದ ಮೇಲೆ ಉಳಿದ ಎಲ್ಲ ವಸ್ತುಗಳ ಜ್ಞಾನವು ಸ್ವತಃಸಿದ್ಧವಾಗಿ ಸಾರ್ವಜ್ಞ್ಯವು ಕೈಮುತ್ಯ ನ್ಯಾಯದಿಂದ ಸಿದ್ಧವಾಗುತ್ತದೆಂದು ತಿಳಿಯಬೇಕು.

ಪ್ರಮೇಯತ್ವ ಹೇತುವಿನಿಂದ ಹೇತುತ್ವವನ್ನು ಸಾಧಿಸಬಹುದೇ ?

ಭಾವದೀಪಃ – विप्रतिपन्नेति ।। विवादास्पदं धर्मादिकं कस्यचिच्छरीरिणः प्रत्यक्षम्। कस्यचित् सुखिनः प्रत्यक्षं प्रमेयत्वाद् घटवदित्यादेरपि सम्भवेनेश्वरे सार्वज्ञ्यसाधनवद् विप्रतिपन्नशरीरसुखदुःखादृष्टानित्यज्ञानादि-रूपधर्मान्तरसाधनापातादित्यर्थः ।।

ಟೀಕೆಯಲ್ಲಿ 'ವಿಪ್ರತಿಪನ್ನಧರ್ಮಾಂತರಸಾಧನಾಪಾತಾತ್' ಎಂದು ಹೇಳಿದ್ದಾರೆ. ಎಂದರೆ ಪ್ರಮೇಯತ್ವ ಹೇತುವಿನಿಂದ ಸಾರ್ವಜ್ಞ್ಯವನ್ನು ಸಾಧನೆ ಮಾಡುವುದಾದರೆ ಏನನ್ನು ಬೇಕಾದರೂ ಸಾಧನೆ ಮಾಡಬಹುದು. 'ವಿವಾದಾಸ್ಪದಂ ಧರ್ಮಾದಿಕಂ ಕಸ್ಯಚಿತ್ ಶರೀರಿಣಃ ಪ್ರತ್ಯಕ್ಷಮ್, ಪ್ರಮೇಯತ್ವಾತ್' ಎಂಬುದಾಗಿ ಪ್ರಮೇಯತ್ವಹೇತುವಿನಿಂದ ನಮ್ಮಂತೆ ಈಶ್ವರನಿಗೂ ಶರೀರವಿದೆ ಎಂದು ಸಾಧಿಸಬಹುದು. ಅದರಂತೆ, 'ವಿವಾದಪದಂ ಧರ್ಮಾದಿಕಂ ಕಸ್ಯಚಿತ್ ಸುಖಿನಃ ಪ್ರತ್ಯಕ್ಷಮ್ ಪ್ರಮೇಯತ್ವಾತ್' ಎಂಬ ಅನುಮಾನದಿಂದ ಸುಖದುಃಖಾದಿಗಳು ಕೂಡ ಈಶ್ವರನಲ್ಲಿವೆ ಎಂದು ಆಗಬೇಕಾದೀತು. ಇದರಂತೆ ಅನಿತ್ಯ ಜ್ಞಾನಾದಿಗಳು ಕೂಡ ಪ್ರಮೇಯತ್ವ ಹೇತುವಿನಿಂದ ಈಶ್ವರನಲ್ಲಿ ಬರಬೇಕಾದೀತು.

ಕೇವಲಾನ್ವಯಿ ಧರ್ಮದಲ್ಲಿ ಜಾತಿಯಿಲ್ಲ

ಭಾವದೀಪಃ – केवलान्वयीति ।। केवलान्वयिनः सामान्यहीनत्वेन प्रसिद्धेषु सामान्यविशेषसमवायाभावेष्वपि सत्त्वादित्यर्थः ।। क्वचिदिति ।। अन्यथा सप्तपदार्थनियमभङ्गापत्तेरिति भावः ।।

ಟೀಕೆಯಲ್ಲಿ 'ಕೇವಲಾನ್ವಯಿಧರ್ಮತ್ವಾತ್' ಎಂದು ಹೇಳಿದ್ದಾರೆ. ಅಂದರೆ ಪ್ರಮೇಯತ್ವವು ಜಾತಿ ಎಂದು ಹೇಳಲಾಗದು. ಯಾವುದು ಕೇವಲಾನ್ವಯಿಧರ್ಮವೋ, ಅದರಲ್ಲಿ ಜಾತಿಯಿರುವುದಿಲ್ಲ. ಮತ್ತು

ಜಾತಿಯಿಲ್ಲವೆಂದು ಪ್ರಸಿದ್ಧವಾದ ಸಾಮಾನ್ಯ, ವಿಶೇಷ, ಸಮವಾಯ, ಅಭಾವಗಳಲ್ಲಿಯೂ ಪ್ರಮೇಯತ್ವವಿದೆ. ಆದ್ದರಿಂದ, ಇದರಲ್ಲಿ ಜಾತಿಯನ್ನು ಒಪ್ಪಲಾಗದು. 'ಕ್ವಚಿದಂತರ್ಭಾವಸ್ಯ ಅಪೇಕ್ಷಿತತ್ವಾತ್' ಎಂದು ಟೀಕೆಯಲ್ಲಿದೆ. ಅಂದರೆ, ಪ್ರಮೇಯತ್ವವನ್ನು ಉಪಾಧಿಯೆಂದು ಒಪ್ಪಿದರೂ ಸಪ್ತ ಪದಾರ್ಥಗಳಲ್ಲೇ ಅಂತರ್ಭಾವ ಮಾಡಬೇಕು. ಇಲ್ಲದಿದ್ದರೆ, ಅತಿರಿಕ್ತವಾದ ಪದಾರ್ಥವೆಂದು ಒಪ್ಪಿದಂತಾಗಿ ಸಪ್ತ ಪದಾರ್ಥನಿಯಮಕ್ಕೆ ಭಂಗ ಬರುತ್ತದೆ.

ಪರತ್ವ, ಅಪರತ್ವ, ಗುರುತ್ವ ಇವುಗಳ ಲಕ್ಷಣವೇನು ?

ಭಾವದೀಪಃ – अस्वतन्त्रत्वाच्चेति ।। प्रमापरतन्त्रत्वात् प्रमेयरूपाश्रय-परतन्त्रत्वाच्चेत्यर्थः ।। एवमिति ।। परत्वापरत्वगुरुत्वद्रवत्वादावपि परस्य भाव एव परत्वम्, नतु ततोऽतिरिक्तमित्यापत्त्या परत्वादेरपि गुणत्वेन पृथग्गणनं न स्यादित्यर्थः ।।

ಟೀಕೆಯಲ್ಲಿ 'ಅಸ್ವತಂತ್ರತ್ವಾಚ್ಚ' ಎಂದು ಹೇಳಿದ್ದಾರೆ. ಅಂದರೆ, ಪ್ರಮೇಯತ್ವವು ಪ್ರಮೇಯಾಧೀನವಾದ್ದರಿಂದ ಪ್ರಮೇಯರೂಪವಾದ ಆಶ್ರಯದ ಅಧೀನವಾದ್ದರಿಂದಲೂ ದ್ರವ್ಯವೆಂದು ಹೇಳಲಾಗದೆಂದರ್ಥ. 'ಏವಂ ಪರತ್ವಾಪರತ್ವಾದಿಗುಣಾನಾಂ' ಇತ್ಯಾದಿ ಟೀಕೆಯ ಅಭಿಪ್ರಾಯ ಹೀಗಿದೆ - ಪ್ರಮೇಯದ ಧರ್ಮವೇ ಪ್ರಮೇಯತ್ವ ಎಂದು ಹೇಳುವುದಾದಲ್ಲಿ ಪರ ಎಂಬುದರ ಧರ್ಮವೇ ಪರತ್ವ. ಗುರುವಿನ ಧರ್ಮವೇ ಗುರುತ್ವ. ದ್ರವದ ಧರ್ಮವೇ ದ್ರವತ್ವ ಎಂದಂತಾಗಿ ಪರತ್ವ, ಅಪರತ್ವ, ಗುರುತ್ವ, ದ್ರವತ್ವ ಮೊದಲಾದವುಗಳೆಲ್ಲ ಪ್ರತ್ಯೇಕ ಗುಣಗಳೆಂದು ಪರಿಗಣಿಸದೇ ಇರಬೇಕಾದೀತು.

'ಉಕ್ತದೋಷಲಂಘನಾಜಂಘಾಲತ್ವಾತ್' ಎಂಬ ಟೀಕಾ ಮಾತಿನ ಅರ್ಥ

ಭಾವದೀಪಃ – लङ्घनेति ।। लङ्घने जङ्घाशून्यत्वादित्यर्थः । प्राणिस्थादातो लजन्यतरस्याम्' इति जङ्घाशब्दान्मत्वर्थे लच्प्रत्ययः । 'जङ्घालोऽतिजवस्तुल्यौ' इत्यमरोक्तेः ।।

ಟೀಕೆಯಲ್ಲಿ 'ಉಕ್ತದೋಷಲಂಘನಾಜಂಘಾಲತ್ವಾತ್' ಎಂದಿದೆ. 'ನ ತಾವದ್ ದ್ರವ್ಯಮ್' ಇತ್ಯಾದಿ ಟೀಕೆಯಿಂದ ಹಿಂದೆ ದ್ರವ್ಯಾದಿಗಳಲ್ಲಿ ಅಂತರ್ಭಾವ ಮಾಡಿದರೆ ಏನೇನು ದೋಷಗಳು ಬರುತ್ತವೆಂದು

ಹೇಳಲಾಯಿತೋ, ಆ ಎಲ್ಲ ದೋಷಗಳನ್ನು ದಾಟಲು ಮೊಣಕಾಲು ಇಲ್ಲ ಎಂದು ಇದರ ಅರ್ಥ. ಪ್ರಾಣಿಸ್ಥಾದಾತೋಲಜದನ್ಯತರಸ್ಯಾಂ' ಎಂಬ ಸೂತ್ರದಿಂದ ಜಂಘಾ ಶಬ್ದದ ಮೇಲೆ ಮತ್ವರ್ಥದಲ್ಲಿ 'ಲಚ್' ಪ್ರತ್ಯಯವನ್ನು ವಿಧಿಸಲಾಗಿದೆ. 'ಜಂಘಾಲೋ ಅತಿಜವಸ್ತುಲ್ಯೌ ಜಂಘಾಕರಿಖಜಾಂಕಿಕೌ' ಎಂದು ಅಮರಕೋಶದಲ್ಲಿ 'ಜಂಘಾಲ' ಮತ್ತು 'ಅತಿಜವ' ಎಂಬ ಎರಡು ಶಬ್ದಗಳಿಗೆ ಜಂಘಾಬಲದಿಂದ ಬೇಗನೆ ನಡೆಯುವವನು ಎಂಬರ್ಥವನ್ನು ಹೇಳಲಾಗಿದೆ. ಪ್ರಕೃತ ದ್ರವ್ಯಾದಿಗಳಲ್ಲಿ ಅಂತರ್ಭಾವ ಮಾಡಿದಾಗ, ಹಿಂದೆ ಹೇಳಿದ ದೋಷಗಳನ್ನು ನಿಮಗೆ ತಪ್ಪಿಸಿಕೊಳ್ಳಲಾಗುವುದಿಲ್ಲ ಎಂದರ್ಥವಾಗುತ್ತದೆ.

ಶರೀರಜನ್ಯತ್ವವು ಉಪಾಧಿಯಾಗಬಹುದೇ ?

भावदीपः – धर्मान्तरेऽपीति ।। अभिधेयत्वव्यापकत्वादिरूपेऽयमेव खण्डनमार्ग इत्यर्थः । पर्वतेतरत्वादीनां व्याप्तिरस्ति नवा । आद्यं निराह – का नो हानिरिति।।

ಹೀಗೆ ಪ್ರಮೇಯತ್ವದಿಂದ ಸರ್ವಜ್ಞತ್ವವನ್ನು ಸಾಧಿಸಲು ಹೊರಟಾಗ ಏನೇನು ದೋಷಗಳನ್ನು ಹೇಳಲಾಯಿತೋ, ಇದೇ ದೋಷಗಳು ಅಭಿಧೇಯತ್ವ ಅಥವಾ ಜ್ಞೇಯತ್ವಗಳನ್ನು ಹೇತುವನ್ನು ಮಾಡಿದಾಗಲೂ ಬರುತ್ತವೆಂದು ತಿಳಿಯಬೇಕು.

'ಶರೀರ್ಯಜನ್ಯತ್ವಾತ್' ಎಂಬುದು ಉಪಾಧಿಯಾಗುವುದಾದರೆ, ಪರ್ವತೇತರತ್ವಾದಿಗಳು ಕೂಡ ಉಪಾಧಿಯಾಗಬೇಕಾದೀತು. ಹಾಗೆ ಹೇಳಿದರೆ, ಪರ್ವತೇತರತ್ವಾದಿಗಳಿಗೆ ವ್ಯಾಪ್ತಿಯಿದೆಯೋ ಇಲ್ಲವೋ ಎಂಬ ಪ್ರಶ್ನೆಯು ಪ್ರಾಪ್ತವಾಗುತ್ತದೆ. ವ್ಯಾಪ್ತಿಯಿದೆ ಎಂಬ ಪಕ್ಷವನ್ನು 'ಕಾ ನೋ ಹಾನಿಃ' ಎಂಬ ಟೀಕೆಯಿಂದ ನಿರಾಕರಿಸಿದ್ದಾರೆ.

ಅನುಕೂಲ ತರ್ಕವಿದ್ದಾಗ ಉಪಾಧಿಯು ದೋಷವಾಗುತ್ತದೆಯೇ ?

भावदीपः – द्वितीयं प्रत्याह – अनुमानेति ।। अनुमानं प्रत्युपजीव्येन व्याप्तिग्राहकानुकूलतर्केणेत्यर्थः । 'अनुकूलेन तर्केण सनाथे सति साधने । साध्यव्यापकताभङ्गात् पक्षे नोपाधिसम्भवः ।।' इति न्यायादिति भावः ।

ವ್ಯಾಪ್ತಿಯಿಲ್ಲವೆಂಬ ಪಕ್ಷವನ್ನು 'ಅನುಮಾನೋಪಜೀವ್ಯೇನ ಬಾಧಾತ್' ಎಂಬ ಟೀಕೆಯಿಂದ ನಿರಾಕರಿಸಿದ್ದಾರೆ. ಪರ್ವತೇತರತ್ವಾದಿಗಳಿಗೆ ವ್ಯಾಪ್ತಿಯಿರುವುದಾದರೆ ಅನುಮಾನಕ್ಕೆ ಉಪಜೀವ್ಯವಾದ ಅನುಕೂಲ ತರ್ಕದಿಂದ ಬಾಧವು ಬರುತ್ತದೆ. ಆದ್ದರಿಂದಲೇ, ಪರ್ವತೇತರತ್ವಾದಿಗಳು ಆ ಸಂದರ್ಭದಲ್ಲಿ ಉಪಾಧಿಯಾಗುವುದಿಲ್ಲ ಎಂದರ್ಥ. ಏಕೆಂದರೆ, ಅನುಮಾನಕ್ಕೆ ಉಪಜೀವ್ಯವಾದದ್ದು ವ್ಯಾಪ್ತಿ. ವ್ಯಾಪ್ತಿಗೆ ಗ್ರಾಹಕವಾದದ್ದು ಅನುಕೂಲ ತರ್ಕವಾಗಿರುತ್ತದೆ.

ಅನುಕೂಲೇನ ತರ್ಕೇಣ ಸನಾಥೇ ಸತಿ ಸಾಧನೇ।
ಸಾಧ್ಯವ್ಯಾಪಕತಾಭಂಗಾತ್ ಪಕ್ಷೇ ನೋಪಾಧಿಸಂಭವಃ॥

ಅನುಕೂಲ ತರ್ಕವಿದ್ದಾಗ ಸಾಧ್ಯವ್ಯಾಪಕತ್ವಕ್ಕೆ ಭಂಗ ಬರುತ್ತದೆ. ಆದ್ದರಿಂದ, ಪಕ್ಷದಲ್ಲಿ ಉಪಾಧಿಯೇ ಬರುವುದಿಲ್ಲ ಎಂಬ ನ್ಯಾಯದಂತೆ ಇಲ್ಲಿ ಬಾಧದೋಷವನ್ನು ತಿಳಿಯಬೇಕು.

'ಅಸಿದ್ಧಿಪರಿಹಾರಾರ್ಥತ್ವಾತ್' ಎಂಬುದರ ಸಮರ್ಥನೆ

ಭಾವದೀಪಃ – ಪಕ್ಷವ್ಯಾವೃತ್ತ್ಯರ್ಥತ್ವಾದಿತ್ಯೇತದ್ಉಪಪಾದ್ಯ ಅಸಿದ್ಧಿಪರಿಹಾರಾರ್ಥತ್ವಾದಿತ್ಯೇತದ್ಉಪಪಾದಯತಿ – ನಚೇತ್ಯಾದಿನಾ ।।

'ಪಕ್ಷವ್ಯಾವೃತ್ತ್ಯರ್ಥತ್ವಾತ್' ಎಂಬುದನ್ನು ಉಪಪಾದನೆ ಮಾಡಿ 'ಅಸಿದ್ಧಿಪರಿಹಾರಾರ್ಥತ್ವಾತ್' ಎಂಬುದನ್ನು ಸಮರ್ಥಿಸಲು 'ನಚ' ಇತ್ಯಾದಿ ವಾಕ್ಯವು ಹೊರಟಿದೆ.

ಸಮಯಪಾದದಲ್ಲಿ ಅನುಮಾನದ ಬಗ್ಗೆ

ಭಾವದೀಪಃ – ಸನ್ನಿಹಿತಮಿತಿ ।। ಅವರ್ಜನೀಯಸನ್ನಿಧಿ, ನತ್ತು ಕಾರ್ಯಕಾರೀತಿ ತ್ತರತ್ರ ಸಮಯಪಾದೇ 'ಸಮ್ಬನ್ಧಾನುಪಪತ್ತೇಶ್ಚ' 'ಅನ್ತವತ್ತ್ವಮಸರ್ವಜ್ಞತಾ ವಾ' ಇತ್ಯತ್ರ ನಿರಸಿಷ್ಯತ ಇತ್ಯರ್ಥಃ।।

ಶರೀರವು ಕೇವಲ ಅವರ್ಜನೀಯ ಸನ್ನಿಧಿ ಎನಿಸುತ್ತದೆ ಹೊರತು, ಕಾರ್ಯಕಾರಿಯಾಗುವುದಿಲ್ಲವೆಂದು ಮುಂದೆ ಸಮಯಪಾದದಲ್ಲಿ 'ಸಂಬಂಧಾನುಪಪತ್ತೇಶ್ಚ' 'ಅಂತವತ್ತ್ವಮಸರ್ವಜ್ಞತಾ ವಾ' ಎಂಬ ಸೂತ್ರಗಳಲ್ಲಿ ನಿರಾಕರಿಸಲಾಗುತ್ತದೆ.

ವೇದತ್ವ ಹೇತುವು ಅಸಾಧಾರಣ್ಯದೋಷಗ್ರಸ್ತವಾಗಿದೆ

ಭಾವದೀಪಃ – ಪಾಮರೇತಿ ।। ವೇದಃ ಪಾಮರಪ್ರಣೀತಃ ವೇದತ್ವಾದ್, ವ್ಯತಿರೇಕೇಣ ಗಗನವದಿತ್ಯಪಿ ಪ್ರಯೋಕ್ತುಂ ಶಕ್ಯತ್ವಾದಿತ್ಯರ್ಥಃ । ಪಾಮರಪ್ರಣೀತಲೌಕಿಕವಾಕ್ಯಾತ್ ಸಪಕ್ಷಾದ್ ವ್ಯಾವೃತ್ತ್ಯಾ ಪಕ್ಷಮಾತ್ರವೃತ್ತೇರಸಾಧಾರಣ್ಯಂ ಚೇತ್ ಸರ್ವಜ್ಞಪ್ರಣೀತಪುರಾಣಾದಿತೋ ವ್ಯಾವೃತ್ತ್ಯಾ ಪಕ್ಷಮಾತ್ರವೃತ್ತೇರಸಾಧಾರಣಾನೈಕಾನ್ತ್ಯಂ ತವಾಪಿ ತುಲ್ಯಮಿತ್ಯಾಹ – ಅಸಾಧಾರಣ್ಯಸ್ಯೇತಿ ।।

'ವೇದಃ ಪಾಮರಪ್ರಣೀತಃ ವೇದತ್ವಾತ್, ವ್ಯತಿರೇಕೇಣ ಗಗನವತ್' ಎಂದು ಸಹ ಅನುಮಾನ ಮಾಡಲು ಬರುತ್ತದೆ. ಈ ಅನುಮಾನದಲ್ಲಿ ವೇದತ್ವ ಎಂಬ ಹೇತುವು ಅಸಾಧಾರಣ್ಯದೋಷಗ್ರಸ್ತವಾಗಿದೆ. ಏಕೆಂದರೆ ಪಾಮರಪ್ರಣೀತವಾದ ಲೌಕಿಕ ವಾಕ್ಯವೆಂಬ ಸಪಕ್ಷದಲ್ಲಿ ವೇದತ್ವವಿಲ್ಲ. ಕೇವಲ ಪಕ್ಷಮಾತ್ರದಲ್ಲಿ ಇರುತ್ತದೆ. ಆದ್ದರಿಂದ, ಈ ಅನುಮಾನವು ದುಷ್ಟವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಹಾಗಾದರೆ, ನಿಮಗೂ ಕೂಡ ಇದೇ ದೋಷವು ಪ್ರಾಪ್ತವಾಗುತ್ತದೆ. ಏಕೆಂದರೆ, ಸರ್ವಜ್ಞಪ್ರಣೀತವಾದ ಪುರಾಣಾದಿಗಳಲ್ಲಿ ವೇದತ್ವಹೇತುವು ಇರುವುದಿಲ್ಲ. ಕೇವಲ ಪಕ್ಷದಲ್ಲಷ್ಟೇ ಹೇತುವು ಇರುತ್ತದೆ. ಆದ್ದರಿಂದ ಅಸಾಧಾರಣ್ಯ ಅನೈಕಾಂತ್ಯ ದೋಷವು ನಿಮಗೂ ಸಮಾನವಾಗಿದೆ ಎಂದು 'ಅಸಾಧಾರಣ್ಯಸ್ಯ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

ಈಶ್ವರನಿಗೆ ಸಾರ್ವಜ್ಞ್ಯವು ಹೇಗೆ ಸಿದ್ಧವಾಗುತ್ತದೆ ?

ಭಾವದೀಪಃ – ಉಕ್ತೇತಿ ।। ಈಶ್ವರಸಾರ್ವಜ್ಞ್ಯಾಸಿದ್ಧಿರೂಪೋಕ್ತದೋಷಾದಿತ್ಯರ್ಥಃ । ವೇದಪ್ರಣೇತೃತ್ವೋಕ್ತ್ಯನ್ಯಥಾನುಪಪತ್ತ್ಯಾ ಸಾರ್ವಜ್ಞಂ ಸೇತ್ಸ್ಯತೀತ್ಯತೋ ವ್ಯಭಿಚಾರಾನ್ನೈವಮಿತ್ಯಾಹ – ಋಗ್ವೇದ ಏವೇತಿ ।। ತದ್ವಾಕ್ಯಾದಿತಿ ।। ಋಗ್ವೇದ ಇತಿ ವಾಕ್ಯಾದಿತ್ಯರ್ಥಃ ।

ಈಶ್ವರನಿಗೆ ಸಾರ್ವಜ್ಞ್ಯವು ಸಿದ್ಧವಾಗುವುದಿಲ್ಲ ಎಂದು ಹಿಂದೆ ಹೇಳಿದ ದೋಷವು ಪುನಃ ಪ್ರಾಪ್ತವಾಗುತ್ತದೆಂದರ್ಥ. ವೇದಪ್ರಣೇತೃತ್ವೋಕ್ತಿಯ ಅನ್ಯಥಾನುಪಪತ್ತಿಯಿಂದ ಸಾರ್ವಜ್ಞ್ಯವು ಸಿದ್ಧವಾಗುತ್ತದಲ್ಲವೇ? ಎಂಬ ಪ್ರಶ್ನೆಗೆ ವ್ಯಭಿಚಾರ ಬರುವ ಕಾರಣ ಹೀಗೆ ಹೇಳಬಾರದೆಂದು 'ಋಗ್ವೇದ ಏವ' ಎಂಬ ವಾಕ್ಯದಿಂದ ಹೇಳಿದ್ದಾರೆ. 'ತದ್ವಾಕ್ಯಾತ್' ಎಂದರೆ 'ಋಗ್ವೇದಃ' ಎಂಬ ವಾಕ್ಯದಿಂದ ಎಂದರ್ಥ. ಯಾವುದೇ ವಿಶೇಷವಿಲ್ಲವೆಂದು ಇದರ ಅಭಿಪ್ರಾಯ.

ಅಸಾರ್ವಜ್ಞದೋಷವು ಇಬ್ಬರಿಗೂ ಸಮಾನ

ಭಾವದೀಪಃ – अविशेषादिति भावः । विशेषमाशङ्कते – तेषामिति ।। समं प्रकृतेऽपि । उक्तदिशा ईश्वरसार्वज्ञस्याप्यसिद्धेरिति भावः । 'यः सर्वज्ञः' इत्यादि वेदेनैव तत्सार्वज्ञसिद्धिरस्त्वित्यत आह – चक्रकेति ।।

ವಿಶೇಷ ಕಾರಣವನ್ನು ಹೇಳುವ ಮೂಲಕ ಆಶಂಕಿಸುತ್ತಿದ್ದಾನೆ, ತೇಷಾಮಿತ್ಯಾದಿ ಟೀಕೆಯಿಂದ. ಅಸಾರ್ವಜ್ಞ ದೋಷವು ಪ್ರಕೃತ ನಿಮಗೂ ಸಮಾನ. ಏಕೆಂದರೆ, ಹಿಂದೆ ಹೇಳಿದಂತೆ ಈಶ್ವರನಿಗೆ ಸಾರ್ವಜ್ಞ್ಯವು ಇಲ್ಲಿಯ ತನಕ ಸಿದ್ಧವೇ ಆಗಿಲ್ಲವೆಂದು ಅಭಿಪ್ರಾಯ. 'ಯಃ ಸರ್ವಜ್ಞಃ' ಇತ್ಯಾದಿ ವೇದವಾಕ್ಯದಿಂದಲೇ ಈಶ್ವರನಿಗೆ ಸಾರ್ವಜ್ಞ್ಯ ಸಿದ್ಧವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ 'ಚಕ್ರಕ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಸರ್ವಜ್ಞಪ್ರಣೀತತ್ವವು ವೇದಕ್ಕೆ ಸಿದ್ಧವಾಗುತ್ತದಲ್ಲವೇ ?

ಭಾವದೀಪಃ – ईश्वरस्य सर्वज्ञत्वे सिद्धे 'तस्माद् यज्ञाद्' इत्यादिना वेदस्य सर्वज्ञप्रणीतत्वसिद्धिः, तत्सिद्धौ च वेदस्य प्रामाण्यसिद्धिः, तत्सिद्धौ च वेदेनेश्वर-सर्वज्ञत्वसिद्धिरिति चक्रकापातादित्यर्थः । नित्यत्वापेक्षत्वाच्च मूलप्रमाणस्येत्येतद् व्याचष्टे – किञ्चेति ।।

ಈಶ್ವರನು ಸರ್ವಜ್ಞನೆಂದು ಸಿದ್ಧವಾದರೆ 'ತಸ್ಮಾದ್ ಯಜ್ಞಾತ್' ಎಂಬ ವೇದವಾಕ್ಯದಿಂದ ಸರ್ವಜ್ಞಪ್ರಣೀತೃತ್ವವು ವೇದಕ್ಕೆ ಸಿದ್ಧವಾಗುತ್ತದೆ. ವೇದವು ಸರ್ವಜ್ಞಪ್ರಣೀತವೆಂದು ಸಿದ್ಧವಾದರೆ ವೇದವು ಪ್ರಮಾಣವೆಂದು ಸಿದ್ಧವಾಗುತ್ತದೆ. ಅಂತಹ ವೇದದಿಂದ ಈಶ್ವರನು ಸರ್ವಜ್ಞನೆಂದು ಸಿದ್ಧನಾಗುತ್ತಾನೆ. ಹೀಗೆ, ಚಕ್ರಕಾಶ್ರಯ ದೋಷವು ಬರುತ್ತದೆ. 'ನಿತ್ಯತ್ವಾಪೇಕ್ಷತ್ವಾಚ್ಚ ಮೂಲಪ್ರಮಾಣಸ್ಯ' ಎಂಬ ಭಾಷ್ಯವನ್ನು 'ಕಿಂಚ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಮೂಲ ಪ್ರಮಾಣವೆಂದರೆ ಯಾವುದು ?

ಭಾವದೀಪಃ – मूलेति ।। अर्थमुपलभ्य रचितत्वं प्रणीतत्वमिति

वाच्यत्वादिति भावः। तत्किं प्रत्यक्षमनुमानं पौरुषेयवाक्यं वा? न त्रयमपीति क्रमेण निराह – नचेति ।।

ವೇದವು ಆಪ್ತಪ್ರಣೀತವಾದಲ್ಲಿ ಅದಕ್ಕೊಂದು ಮೂಲ ಪ್ರಮಾಣ ಬೇಕಾಗುತ್ತದೆ. ಅಂದರೆ, ಮತ್ತೊಂದು ಪ್ರಮಾಣದಿಂದ ಅರ್ಥವನ್ನು ತಿಳಿದು ವೇದವನ್ನು ರಚನೆ ಮಾಡಿದ್ದಾರೆಂದು ಹೇಳಬೇಕಾಗುತ್ತದೆ. ಆ ಮೂಲ ಪ್ರಮಾಣವೆಂದರೆ ಪ್ರತ್ಯಕ್ಷವೋ ಅನುಮಾನವೋ, ಪೌರುಷೇಯ ವಾಕ್ಯವೋ, ಮೂರನ್ನು ಸಹ ಕ್ರಮವಾಗಿ ನಿರಾಕರಿಸುತ್ತಿದ್ದಾರೆ, 'ನಚ' ಇತ್ಯಾದಿ ಟೀಕೆಯಿಂದ.

ನಿತ್ಯತ್ವವಿಷಯದಲ್ಲೂ ಪ್ರಾಮಾಣ್ಯವಿಲ್ಲ

भावदीपः – स्वतःप्रामाण्यप्रसिद्धेश्चेत्येतदवतार्य व्याचष्टे – नन्विति ।। न केवलमनित्यत्व इत्यपेरर्थः । स्वतस्त्वेन ज्ञानजनकसहजशक्त्यैव प्रमात्वजनकत्वेनेत्यर्थः।। प्रामाण्यं नामेति ।। वेदस्येत्यनुषङ्गः ।

'स्वतःप्रामाण्यप्रसिद्धेश्च' ಎಂಬುದಕ್ಕೆ ಅವತಾರಿಕೆ ನೀಡಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ನನು' ಇತ್ಯಾದಿ ಟೀಕೆಯಿಂದ. 'ಅಪಿ' ಶಬ್ದಕ್ಕೆ 'ನನು ವೇದಸ್ಯ ನಿತ್ಯತ್ವೇऽಪಿ' ಎಂಬಲ್ಲಿರುವ 'ಅಪಿ' ಶಬ್ದಕ್ಕೆ ಅನಿತ್ಯತ್ವವಿಷಯದಲ್ಲಷ್ಟೇ ಅಲ್ಲ, ನಿತ್ಯತ್ವವಿಷಯದಲ್ಲೂ ಪ್ರಾಮಾಣ್ಯವಿಲ್ಲ ಎಂದರ್ಥ. ಏಕೆಂದರೆ, ಪ್ರಾಮಾಣ್ಯವು ಸ್ವತಃಸಿದ್ಧವಾದ್ದರಿಂದ ಜ್ಞಾನಜನಕ ಸಹಜಶಕ್ತಿಯಿಂದಲೇ ಯಥಾರ್ಥಜ್ಞಾನಜನಕವಾಗಿದೆ. 'ಪ್ರಾಮಾಣ್ಯಂ ನಾಮ' ಎಂಬಲ್ಲಿ 'ವೇದಸ್ಯ' ಎಂಬುದನ್ನು ಅನುಷಂಗ ಮಾಡಿಕೊಳ್ಳಬೇಕು.

ಯಾಥಾರ್ಥ್ಯವೆಂದರೆ ಏನು ?

भावदीपः – तादृशप्रामाण्यस्य स्वतस्त्वं ज्ञानयाथार्थ्यस्वतस्त्वायत्तमिति भावेन व्यनक्ति – नचेति ।। ज्ञाननिष्ठमित्यर्थः ।। याथार्थ्यमिति ।। प्रमात्वरूपम् ।। ज्ञानकारणेति ।। कारणपदं समग्रकारणपरम् ।

ವೇದಕ್ಕೆ ಹೇಳುವಂತಹ ಪ್ರಾಮಾಣ್ಯವು ಸ್ವತಃಸಿದ್ಧವಾಗಿದೆ. ಅಂದರೆ, ಜ್ಞಾನದ ಯಾಥಾರ್ಥ್ಯವು ಜ್ಞಾನಕಾರಣಕ್ಕಿಂತ ವ್ಯತಿರಿಕ್ತ ಕಾರಣವನ್ನು ಅಪೇಕ್ಷಿಸುವುದಿಲ್ಲ. ಈ ಅಭಿಪ್ರಾಯದಿಂದ 'ನಚ' ಇತ್ಯಾದಿ

ಗ್ರಂಥವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. ಯಾಥಾರ್ಥ್ಯವೆಂದರೆ ಜ್ಞಾನದಲ್ಲಿ ಇರುವ ಯಥಾರ್ಥತ್ವ ಎಂದರ್ಥ. ಅದು ಪ್ರಮಾತ್ವರೂಪವಾಗಿದೆ. ಜ್ಞಾನಕಾರಣ ಎಂಬಲ್ಲಿರುವ ಕಾರಣಪದವು ಸಮಗ್ರ ಕಾರಣಗಳನ್ನು ಹೇಳುತ್ತಿದೆ.

ದೋಷಾಭಾವವನ್ನು ಪ್ರಾಮಾಣ್ಯಕ್ಕೆ ಕಾರಣವೆನ್ನಬಹುದೇ ?

ಭಾವದೀಪಃ – ननु दोषाभावस्य कारणत्वेऽपि नास्माकमनिष्टमित्युपरितन वाक्याद् दोषाभावस्य याथार्थ्ये कारणत्वेन एवंरूपसाध्यस्य साधने बाध इति चेन्न ।

ಟೀಕೆಯಲ್ಲಿ 'ಯಾಥಾರ್ಥ್ಯಂ ಜ್ಞಾನಕಾರಣ ಅತಿರಿಕ್ತಕಾರಣನಿರಪೇಕ್ಷಮ್, ಅಯಾಥಾರ್ಥ ಅತಿರಕ್ತತ್ವೇऽಪಿ ಜ್ಞಾನಧರ್ಮತ್ವಾತ್ ಜ್ಞಾನತ್ವವತ್' ಎಂಬ ಅನುಮಾನದಿಂದ ಯಾಥಾರ್ಥ್ಯವು ಜ್ಞಾನಕಾರಣಕ್ಕಿಂತ ಅತಿರಿಕ್ತವಾದ ಕಾರಣವನ್ನು ಅಪೇಕ್ಷೆ ಪಡುವುದಿಲ್ಲವೆಂದು ಸಾಧನೆ ಮಾಡಿದ್ದಾರೆ. ಆದರೆ ದೋಷಾಭಾವವನ್ನು ಕಾರಣವೆಂದು ನಾವೂ ಸಹ ಹೇಳುತ್ತೇವೆ. ಮುಂದೆ ದೋಷಾಭಾವವನ್ನು ಕಾರಣವೆಂದು ಸಮರ್ಥಿಸಲಾಗುತ್ತದೆ. ಹೀಗಿರುವಾಗ ಜ್ಞಾನಕಾರಣಕ್ಕಿಂತ ಅತಿರಿಕ್ತವಾದ ಮತ್ತೊಂದು ಕಾರಣವನ್ನು ಅಪೇಕ್ಷೆ ಪಡುವುದಿಲ್ಲವೆಂದು ಸಾಧನೆ ಮಾಡಿದರೆ, ಬಾಧದೋಷವು ಬರುತ್ತದಲ್ಲವೇ?

ದೋಷಾಭಾವವನ್ನು ಕಾರಣವೆಂದಾಗ ಬಾಧವಿಲ್ಲ

ಭಾವದೀಪಃ – भावकारणानपेक्षमिति तात्पर्यात् ।

ಭಾವರೂಪವಾದ ಕಾರಣವನ್ನು ಅಪೇಕ್ಷೆ ಪಡುವುದಿಲ್ಲವೆಂದಷ್ಟೇ ಅನುಮಾನದ ಅಭಿಪ್ರಾಯ. ದೋಷಾಭಾವವು ಅಭಾವರೂಪವಾದ್ದರಿಂದ, ಇದನ್ನು ಕಾರಣವನ್ನಾಗಿ ಮುಂದೆ ಹೇಳಿದರೂ ಕೂಡ, ಬಾಧದೋಷಕ್ಕೆ ಅವಕಾಶವಿರುವುದಿಲ್ಲ.

ದೋಷಾಭಾವವು ಪ್ರಾಮಾಣ್ಯಕ್ಕೆ ಕಾರಣವೇ ಅಲ್ಲ

ಭಾವದೀಪಃ – यद्वा दोषाभावोऽपि न प्रामाण्यकारणम् । यादृच्छिकसंवादिषु सत्यपि दोषो प्रमाणज्ञानोदयादिति तत्त्वनिर्णयटीकोक्त्या तर्हि दोषाभावः

कारणमित्यायातमिति चेन्न । तथा सत्युत्सर्गापवादयोः काप्यभावप्रसङ्गादिति सुधोक्त्या च दोषाभावः कारणं नेति भावेन एवं साध्योक्तिः ।

ಅಥವಾ, ದೋಷಾಭಾವವು ಪ್ರಾಮಾಣ್ಯಕ್ಕೆ ಕಾರಣವೇ ಅಲ್ಲ. ಏಕೆಂದರೆ 'ದೋಷಾಭಾವೋऽಪಿ ನ ಪ್ರಾಮಾಣ್ಯಕಾರಣಮ್, ಯಾದೃಚ್ಛಿಕಸಂವಾದಿಷು ಸತ್ಯಪಿ ದೋಷೇ ಪ್ರಮಾಣಜ್ಞಾನೋದಯಾತ್' ಎಂದು ತತ್ವನಿರ್ಣಯಟೀಕೆಯಲ್ಲಿ ಹೇಳಿದ್ದಾರೆ. ಅಂದರೆ ದೋಷಾಭಾವವನ್ನು ಕಾರಣವೆಂದು ಹೇಳಬೇಕಾದರೆ ಅನ್ವಯವ್ಯತಿರೇಕವನ್ನು ಹೇಳಬೇಕು. 'ದೋಷಾಭಾವವಿದ್ದರೆ, ಪ್ರಾಮಾಣ್ಯವಿರುವುದಿಲ್ಲ. ದೋಷಾಭಾವವಿಲ್ಲದಿದ್ದಲ್ಲಿ, ಪ್ರಾಮಾಣ್ಯವಿರುತ್ತದೆ' ಎಂದು ಹೇಳಬೇಕು. ಆದರೆ ಯಾದೃಚ್ಛಿಕಸಂವಾದಿ ಸ್ಥಳದಲ್ಲಿ 'ನದೀತೀರೇ ಪಂಚಫಲಾನಿ ಸಂತಿ' ಎಂಬ ವಾಕ್ಯವನ್ನು ಪ್ರಯೋಗಿಸುತ್ತಾನೆ. ಈ ವಾಕ್ಯದಲ್ಲಿ ವಿಪ್ರಲಿಪ್ಸ ಎಂಬ ದೋಷವೇ ಇದೆ. ಆದರೆ ಪ್ರಾಮಾಣ್ಯವು ಕೂಡ ಇರುತ್ತದೆ. ಆದ್ದರಿಂದ ದೋಷಾಭಾವವಿದ್ದರೆ ಮಾತ್ರ ಪ್ರಾಮಾಣ್ಯವಿರುತ್ತದೆಂಬ ಅನ್ವಯವ್ಯಾಪ್ತಿಯನ್ನು ಇಲ್ಲಿ ಹೇಳಲಾಗದು. ಆದ್ದರಿಂದ ದೋಷಾಭಾವವನ್ನು ಪ್ರಾಮಾಣ್ಯಕ್ಕೆ ಕಾರಣವೆಂದು ಹೇಳಲು ಬರುವುದಿಲ್ಲ. ಮತ್ತು ನ್ಯಾಯಸುಧೆಯಲ್ಲಿ 'ತರ್ಹಿ ದೋಷಾಭಾವಃ ಕಾರಣಮಿತ್ಯಾಯಾತಮಿತಿ ಚೇನ್ನ, ತಥಾ ಸತಿ ಉತ್ಸರ್ಗಾಪವಾದಯೋಃ ಕ್ವಾಪ್ಯಭಾವಪ್ರಸಂಗಾತ್' ಹಾಗಾದರೆ ದೋಷಾಭಾವವನ್ನು ಕಾರಣವೆಂದು ಹೇಳುತ್ತಿರೋ? ಎಂದು ಪ್ರಶ್ನಿಸಿಕೊಂಡು, ದೋಷಾಭಾವವನ್ನು ಕಾರಣವೆಂದು ಹೇಳಿದರೆ, ಉತ್ಸರ್ಗಾಪವಾದನ್ಯಾಯವೇ ಎಲ್ಲಿಯೂ ಇಲ್ಲವೆಂದು ಹೇಳಬೇಕಾದೀತು ಎಂದು ಉತ್ತರಿಸಿದ್ದಾರೆ. ಸುಧೆಯ ಈ ಮಾತಿನಿಂದಲೂ ದೋಷಾಭಾವವು ಕಾರಣವಲ್ಲವೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಪ್ರಕೃತ ಅನುಮಾನದಲ್ಲಿ ಯಾಥಾರ್ಥ್ಯಕ್ಕೆ ಜ್ಞಾನಕಾರಣಕ್ಕಿಂತ ಅತಿರಿಕ್ತವಾದ ಮತ್ತೊಂದು ಕಾರಣದ ಅಪೇಕ್ಷೆಯಿರುವುದಿಲ್ಲವೆಂದು ಸಾಧನೆ ಮಾಡಿದರೆ, ಬಾಧದೋಷಕ್ಕೆ ಸರ್ವಥಾ ಅವಕಾಶವಿರುವುದಿಲ್ಲ.

ಹಾಗೇನಾದರೂ ಹೇಳಿದ್ದರೆ ಅದು ಅಂಗೀಕಾರವಾದ

भावदीपः – अग्रे कारणत्वोक्तिस्तु तावता प्रकृतवेदनित्यत्वाक्षतेरभ्युपेत्य वादेन वा 'निर्दोषः शब्द आगमः' इति प्रमाणलक्षणे 'आगमोऽदुष्टवाक्यं च' इति तत्त्वनिर्णयादौ च दोषाभावस्याप्युक्त्या दण्डगतदार्ढ्यादिवत् प्रयोजकत्वाभिप्राया वा

ಹಾಗಾದರೆ ಮುಂದೆ ಟೀಕೆಯಲ್ಲಿಯೇ ದೋಷಾಭಾವವನ್ನು ಕಾರಣವೆಂದು ಹೇಳಿದ್ದಾರಲ್ಲವೇ? ಎಂದರೆ, ಅಭ್ಯುಪೇತ್ಯವಾದದಿಂದ ಹಾಗೆ ಹೇಳಿದ್ದು. ಅಂದರೆ ವೇದಾಪೌರುಷೇಯತ್ವವನ್ನು ಸಾಧನೆ ಮಾಡುವಾಗ ದೋಷಾಭಾವವನ್ನು ಪ್ರಾಮಾಣ್ಯಕ್ಕೆ ಕಾರಣವೆಂದು ಒಪ್ಪುವುದರಿಂದ ಏನೂ ಹಾನಿಯಿರುವುದಿಲ್ಲ. ಒಂದುವೇಳೆ ದೋಷಾಭಾವವನ್ನು ಕಾರಣವೆಂದು ಒಪ್ಪಿದರೂ ಸಹ ವೇದಾಪೌರುಷೇಯತ್ವಕ್ಕೆ ಏನೂ ಭಂಗವಿಲ್ಲ ಎಂಬ ಅಭಿಪ್ರಾಯದಿಂದಷ್ಟೇ ಟೀಕೆಯ ಮಾತು ಹೊರಟಿದೆ. ಅಥವಾ ಪ್ರಮಾಣಲಕ್ಷಣದಲ್ಲಿ 'ನಿರ್ದೋಷಃ ಶಬ್ದಃ ಆಗಮಃ' ಎಂದು ದೋಷಾಭಾವವನ್ನು ಸೇರಿಸಿಕೊಂಡೇ ಲಕ್ಷಣವನ್ನು ಹೇಳಿರುತ್ತಾರೆ. ತತ್ವನಿರ್ಣಯದಲ್ಲಿಯೂ 'ಆಗಮೋऽದುಷ್ಟವಾಕ್ಯಂ ಚ' ಎಂದು ದೋಷಾಭಾವವನ್ನು ಸೇರಿಸಿಕೊಂಡೇ ಲಕ್ಷಣವನ್ನು ಹೇಳಿದ್ದಾರೆ. ಈ ವಾಕ್ಯಗಳು ಕೇವಲ ಪ್ರಯೋಜಕತ್ವಾಭಿಪ್ರಾಯದಿಂದ ಹೊರಟಿವೆ. ಹೇಗೆಂದರೆ ಘಟಕ್ಕೆ ದಂಡವೇ ಕಾರಣ. ಆದರೆ ದಂಡದಲ್ಲಿ ದಾರ್ಢ್ಯವಿಲ್ಲದಿದ್ದರೆ ಘಟ ಹುಟ್ಟುವುದಿಲ್ಲ. ಅಂದಮಾತ್ರಕ್ಕೆ ದಂಡದಲ್ಲಿರುವ ದಾರ್ಢ್ಯವನ್ನು ಕಾರಣವೆಂದು ಯಾರೂ ಹೇಳುವುದಿಲ್ಲ. ಹೊರತಾಗಿ, ದಂಡವೇ ಕಾರಣ, ದಂಡದಲ್ಲಿರುವ ದಾರ್ಢ್ಯವು ಕೇವಲ ಪ್ರಯೋಜಕವೆಂದು ಹೇಗೆ ಹೇಳುತ್ತಾರೋ? ಅದರಂತೆ ದೋಷಾಭಾವವು ಕೇವಲ ಪ್ರಯೋಜಕವಾಗಿದೆ ಎಂಬ ಅಭಿಪ್ರಾಯವನ್ನು ತಿಳಿಯಬೇಕು.

ಪ್ರಾಮಾಣ್ಯಸ್ವತಸ್ತ್ವ ವಿಚಾರ

भावदीपः – ज्ञानजनकत्वशक्तिरेव प्रामाण्यजनकत्वशक्तिरिति पक्षत्युक्त्या ज्ञानजनकशक्तियाथार्थ्यजनकशक्त्योरेकत्वपक्षे चायं साध्यनिर्देशो बोध्यः ।

ಕರಣಗಳಲ್ಲಿ ಯಾವ ಜ್ಞಾನಜನಕತ್ವಶಕ್ತಿಯಿದೆಯೋ, ಅದೇ ಪ್ರಾಮಾಣ್ಯಜನಕಶಕ್ತಿಯಾಗಿದೆ ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಜ್ಞಾನಜನಕತ್ವ ಶಕ್ತಿಯು ಹೇಗೆ ಸಹಜವೋ, ಅದರಂತೆ ಪ್ರಾಮಾಣ್ಯಜನಕಶಕ್ತಿಯೂ ಕೂಡ ಸಹಜ. ಅಂದರೆ ಪ್ರಾಮಾಣ್ಯಜನನಶಕ್ತಿಯೇ ಬೇರೆ, ಜ್ಞಾನಜನಕಶಕ್ತಿಯೇ ಬೇರೆ ಎಂದು ಇನ್ನು ಕೆಲವರು ಹೇಳುತ್ತಾರೆ. ಈ ಎರಡು ಮತಗಳಲ್ಲಿ ಎರಡನೆಯ ಮತವನ್ನು ವಿವಕ್ಷಿಸಿದಾಗ, 'ಜ್ಞಾನಕಾರಣಾತಿರಿಕ್ತಕಾರಣನಿರಪೇಕ್ಷಂ' ಎಂಬ ಸಾಧ್ಯವು ಬಾಧಿತವೇ ಆಗುತ್ತದೆ. ಏಕೆಂದರೆ ಜ್ಞಾನಕಾರಣವಾದ ಯಾವ ಶಕ್ತಿಯಿದೆಯೋ, ಅದಕ್ಕಿಂತ ಬೇರೆಯಾದ ಶಕ್ತಿಯಿಂದಲೇ ಪ್ರಾಮಾಣ್ಯ ಹುಟ್ಟುತ್ತದೆ. ಆದ್ದರಿಂದ ಬಾಧದೋಷವು ಬರುತ್ತದೆ. ಆದ್ದರಿಂದ ಈ ಮತವನ್ನು ಬಿಟ್ಟು ಮೊದಲನೆಯ

ಮತದ ಪ್ರಕಾರ ಅನುಮಾನವನ್ನು ಪ್ರಯೋಗಿಸಲಾಗಿದೆ ಎಂದು ತಿಳಿಯಬೇಕು. ಅಂದರೆ ಕರಣಗಳಲ್ಲಿ ಯಾವ ಜ್ಞಾನಜನಕತ್ವಶಕ್ತಿಯಿದೆಯೋ, ಅದೇ ಪ್ರಾಮಾಣ್ಯಜನಕಶಕ್ತಿಯಾಗಿದೆ ಎಂಬ ಮತದ ಪ್ರಕಾರ ಸಾಧ್ಯಕ್ಕೆ ಬಾಧದೋಷ ಬರಲು ಸಾಧ್ಯವಿಲ್ಲ.

ಯಥಾರ್ಥ್ಯಜನನಶಕ್ತಿಯು ಸಹಜವೆಂದು ಒಪ್ಪಬೇಕು

भावदीपः – यदा तु दोषवशात् प्रमाजननशक्तिप्रतिबन्धेऽपि ज्ञानजनन-शक्तेरप्रतिबन्धाज्ज्ञानप्रमाऽपीत्यादिना याथार्थ्यज्ञानजननशक्त्योर्भिन्नत्व-मभ्युपेत्य द्वयोः सहजत्वमात्रेण स्वतस्त्वमिति मतम्, तदाऽतिरिक्तागन्तुक ानपेक्षमिति साध्यार्थो बोध्यः ।

ಯಾವ ಮತದ ಪ್ರಕಾರ ದೋಷದಿಂದ ಪ್ರಮಾಜನನಶಕ್ತಿಯು ಪ್ರತಿಬಂಧವಾದರೂ ಜ್ಞಾನಜನನ ಶಕ್ತಿಯು ಪ್ರತಿಬಂಧವಾಗುವುದಿಲ್ಲವೋ ಆ ಮತದ ಪ್ರಕಾರ ಯಾಥಾರ್ಥ್ಯಜನನಶಕ್ತಿ ಹಾಗೂ ಜ್ಞಾನಜನನಶಕ್ತಿ ಎರಡು ಬೇರೆ ಬೇರೆಯಾದರೂ ಸಹಜವಾಗಿದೆ ಎಂದು ಹೇಳಬೇಕು. ಆದ್ದರಿಂದ ಟೀಕೆಯಲ್ಲಿ 'ಜ್ಞಾನಕಾರಣಾತಿರಿಕ್ತಕಾರಣನಿರಪೇಕ್ಷಮ್' ಎಂಬ ಸಾಧ್ಯಕ್ಕೆ ಜ್ಞಾನಕಾರಣಕ್ಕಿಂತ ಅತಿರಿಕ್ತವಾದ ಆಗಂತುಕಕಾರಣನಿರಪೇಕ್ಷವಾಗಿದೆಯೆಂದರ್ಥ. ಇವರು ಯಾಥಾರ್ಥ್ಯಜನನಶಕ್ತಿಯನ್ನು ಸಹಜವೆಂದು ಒಪ್ಪಿರುವುದರಿಂದ ಆಗಂತುಕಕಾರಣದ ಅಪೇಕ್ಷೆಯಿದೆಯೆಂದು ಹೇಳುವುದಿಲ್ಲ. ಸಹಜವೆಂದು ಒಪ್ಪುವುದರಿಂದಲೇ ಪ್ರಾಮಾಣ್ಯಸ್ವತಸ್ತ್ವವು ಇವರ ಮತದಲ್ಲಿ ಯುಕ್ತವಾಗುತ್ತದೆ.

ಯಥಾರ್ಥ್ಯವು ಗುಣೋತ್ಪನ್ನವಲ್ಲ

भावदीपः – न गुणोत्पन्नमिति साध्ये तु न कापि विवक्षा । दोषसापेक्षाप्रामाण्ये व्यभिचारनिरासाय हेतौ सत्यन्तम् ।।

ಅಥವಾ 'ಯಾಥಾರ್ಥ್ಯಂ ಜ್ಞಾನಕಾರಣಾತಿರಿಕ್ತಕಾರಣನಿರಪೇಕ್ಷಮ್' ಎಂಬ ಸಾಧ್ಯದ ಅಭಿಪ್ರಾಯ ಹೀಗಿದೆ - ತಾರ್ಕಿಕಾದಿಗಳು ಹೇಳುವಂತೆ ಯಾಥಾರ್ಥ್ಯವು ಗುಣೋತ್ಪನ್ನವಲ್ಲ ಎಂದು. ಹೀಗೆ ವಿವಕ್ಷಿಸಿದಾಗ ದೋಷಾಭಾವವು ಕಾರಣವೆಂಬ ಚರ್ಚೆಗೆ ಅವಕಾಶವೇ ಇರುವುದಿಲ್ಲ. ಇನ್ನು 'ಅಯಥಾರ್ಥತಾತಿರಿಕ್ತ ತ್ವೇಸತಿ ಜ್ಞಾನಧರ್ಮತ್ವಾತ್' ಎಂಬ ಹೇತುವಿನಲ್ಲಿ ಸತ್ಯಂತ ಪದವನ್ನು ಹೇಳದಿದ್ದರೆ ಅಪ್ರಾಮಾಣ್ಯದಲ್ಲಿ ವ್ಯಭಿಚಾರ ಬರುತ್ತದೆ. ಏಕೆಂದರೆ ಅಪ್ರಾಮಾಣ್ಯವು ಜ್ಞಾನಧರ್ಮವಾಗಿದೆ. ಆದರೆ ಜ್ಞಾನಕಾರಣಾತಿರಿಕ್ತವಾದ

ದೋಷವನ್ನು ಅಪೇಕ್ಷೆ ಪಡುವುದರಿಂದ ಸಾಧ್ಯಬರುವುದಿಲ್ಲ. ಅದಕ್ಕಾಗಿ 'ಅಯಥಾರ್ಥತಾತಿರಿಕ್ತತ್ವೇಸತಿ' ಎಂಬ ವಿಶೇಷಣವನ್ನು ನೀಡಬೇಕು. ಅಪ್ರಾಮಾಣ್ಯವು ಅಯಥಾರ್ಥವೇ ಆಗಿರುವುದರಿಂದ ಹೇತುವು ಬರುವುದಿಲ್ಲವೆಂದು ವ್ಯಭಿಚಾರಕ್ಕೆ ಅವಕಾಶವಿಲ್ಲ.

ಅಯಥಾರ್ಥದಲ್ಲಿ ಸ್ವತಸ್ತ್ವವಿಲ್ಲ

भावदीपः – स्वतस्त्वमिति ।। अयाथार्थ्यं ज्ञानकारणातिरिक्तकारणान पेक्षम् । न दोषोत्पन्नं वा । ज्ञानधर्मत्वाद् याथार्थ्यवदित्यर्थः । उभयत्र साध्ये सकृदेव दोषमाह – दोषाभाव इति ।।

'ಸ್ವತಸ್ತ್ವಂ ವಾಚ್ಯಮ್' ಎಂಬುದರ ಅಭಿಪ್ರಾಯ ಹೀಗಿದೆ - ಯಾಥಾರ್ಥ್ಯದಲ್ಲಿ ಸ್ವತಸ್ತ್ವವನ್ನು ಉಪಪಾದನೆ ಮಾಡಿದಂತೆ ಅಯಥಾರ್ಥದಲ್ಲಿಯೂ ಕೂಡ ಸ್ವತಸ್ತ್ವವನ್ನು ಅನುಮಾನದಿಂದಲೇ ಉಪಪಾದನೆ ಮಾಡಬಹುದು. 'ಅಯಾಥಾರ್ಥ್ಯಂ ಜ್ಞಾನಕಾರಣಾತಿರಿಕ್ತಾಕಾರಣಾನಪೇಕ್ಷಂ ಜ್ಞಾನಧರ್ಮತ್ವಾತ್ ಯಾಥಾರ್ಥ್ಯವತ್' ಎಂದು ಅಥವಾ 'ಅಯಾಥಾರ್ಥ್ಯಂ ನ ದೋಷೋತ್ಪನ್ನಂ ಜ್ಞಾನಧರ್ಮತ್ವಾತ್ ಯಾಥಾರ್ಥ್ಯವತ್' ಎಂದೂ ಕೂಡ ಪ್ರಯೋಗಿಸಬಹುದಲ್ಲವೇ? ಎಂದು ಪ್ರಶ್ನಿಸಿದರೆ ಎರಡು ಬಗೆಯ ಸಾಧ್ಯಗಳಲ್ಲಿಯೂ ಒಟ್ಟಿಗೆ ದೋಷವನ್ನು ಹೇಳುತ್ತಿದ್ದಾರೆ 'ದೋಷಾಭಾವೇ' ಎಂಬ ವಾಕ್ಯದಿಂದ.

ದೋಷವಿಲ್ಲದಿದ್ದರೆ ಅಪ್ರಾಮಾಣ್ಯವಿರುವುದಿಲ್ಲ ಎಂಬ ವ್ಯಾಪ್ತಿಯ ಬಗ್ಗೆ

भावदीपः – यादृच्छिकसंवादीति सत्यपि दोषेऽयाथार्थ्यादर्शनेना न्वयमनुक्त्वा दोषाभावेऽयाथार्थ्याभाव इति व्यतिरेक एवोक्तः । दोषकारणताग्राहकमानबाध इत्यर्थः।

ಟೀಕೆಯಲ್ಲಿ 'ದೋಷವಿಲ್ಲದಿದ್ದರೆ ಅಪ್ರಾಮಾಣ್ಯವಿರುವುದಿಲ್ಲ' ಎಂದು ವ್ಯತಿರೇಕವ್ಯಾಪ್ತಿಯನ್ನೇ ಹೇಳಿದ್ದಾರೆ ಅನ್ವಯವ್ಯಾಪ್ತಿಯನ್ನೇಕೆ ? ಹೇಳಿಲ್ಲ ಎಂದರೆ ಯಾದೃಚ್ಛಿಕಸಂವಾದಿ ಸ್ಥಳದಲ್ಲಿ ದೋಷವಿದ್ದರೆ ಅಯಥಾರ್ಥವೇ ಇರುವುದು ಕಂಡಿದೆ. ಆದ್ದರಿಂದ ಅನ್ವಯವ್ಯಾಪ್ತಿಗೆ ವ್ಯಭಿಚಾರ ಬರುವುದರಿಂದ ಕೇವಲ ವ್ಯತಿರೇಕವ್ಯಾಪ್ತಿಯನ್ನಷ್ಟೇ ಟೀಕೆಯಲ್ಲಿ ಹೇಳಿದ್ದಾರೆ. ಆದ್ದರಿಂದ ದೋಷಕಾರಣತಾಗ್ರಾಹಕವಾದ ಪ್ರಮಾಣವೆಂದರೆ ವ್ಯತಿರೇಕವ್ಯಾಪ್ತಿ, ಇದರಿಂದ ಬಾಧ ಬರುತ್ತದೆಂದು ಅಭಿಪ್ರಾಯ.

ಪ್ರಾಮಾಣ್ಯಮ್ ಸ್ವತಃ ಅಪ್ರಾಮಾಣ್ಯಮ್ ಪರತಃ

ಭಾವದೀಪಃ – ನಚೈವಂ ಗುಣೇऽಸ್ತಿ । ಗುಣಾಭಾವೇऽಪಿ ಯಾದೃಚ್ಛಿಕಸ್ಥಲೇ ಯಾಥಾರ್ಥ್ಯೋಪಲಮ್ಭೇನ ವ್ಯತಿರೇಕವ್ಯಭಿಚಾರಾದಿತಿ ಭಾವಃ ।।

ಇದರಂತೆ ಗುಣದಲ್ಲಿಯೂ ಕೂಡ ಹೇಳಲು ಸಾಧ್ಯವಿಲ್ಲ. ಏಕೆಂದರೆ ಗುಣ ಇದ್ದರೆ ಪ್ರಾಮಾಣ್ಯ ಹುಟ್ಟುತ್ತದೆ. ಗುಣವಿಲ್ಲದಿದ್ದರೆ ಪ್ರಾಮಾಣ್ಯ ಹುಟ್ಟುವುದಿಲ್ಲವೆನ್ನಬೇಕು. ಆದ್ದರಿಂದ ಯಾದೃಚ್ಛಿಕಸಂವಾದಿ - ಸ್ಥಳದಲ್ಲಿ ಗುಣವಿಲ್ಲದಿದ್ದರೂ ಪ್ರಾಮಾಣ್ಯ ಹುಟ್ಟುವುದು ಕಂಡಿದ್ದರಿಂದ ವ್ಯತಿರೇಕವ್ಯಭಿಚಾರ ಬರುತ್ತದೆ. ಆದ್ದರಿಂದ 'ಪ್ರಾಮಾಣ್ಯಮ್ ಸ್ವತಃ ಅಪ್ರಾಮಾಣ್ಯಮ್ ಪರತಃ' ಎಂಬ ನಿಯಮಕ್ಕೆ ಯಾವುದೇ ದೋಷವಿರುವುದಿಲ್ಲ.

ಮೂರು ವಿಕಲ್ಪಗಳು

ಭಾವದೀಪಃ – ಪ್ರಮೇತಿ ।। ಅತ್ರ ಪ್ರಮಾತ್ವತದಾಶ್ರಯತತ್ಸಮ್ಬನ್ಧಾನಾಮನ್ಯತಮಸ್ಯೈತತ್ ಸಾಧ್ಯತೇ । ತ್ರಯಾಣಾಂ ವಿಶೇಷಣವಿಶೇಷ್ಯಭಾವಾಪತ್ತ್ಯಾ ವಿಶಿಷ್ಟಸ್ಯ ವೇತಿ ವಿಕಲ್ಪ್ಯಾऽಽದ್ಯेऽಪಿ ಕಸ್ಯೇತಿ ವಿಕಲ್ಪ್ಯ ದೋಷಮಾಹ – ಪ್ರಮಾತ್ವಸ್ಯೇತಿ ।।

ಪ್ರಮಾತ್ವವನ್ನು ಅಥವಾ ಪ್ರಮಾತ್ವಕ್ಕೆ ಆಶ್ರಯವಾದದ್ದನ್ನು ಹಾಗೂ ಅವುಗಳಿಗಿರುವ ಸಂಬಂಧವನ್ನು ಸಾಧನೆ ಮಾಡುವುದಾದರೆ ಎಂದು 'ಪ್ರಮಾ' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಈ ಮೂರೂ ಸಹ ವಿಶೇಷಣ ವಿಶೇಷ್ಯಭಾವವನ್ನು ಹೊಂದುವುದರಿಂದ ಅಥವಾ ವಿಶಿಷ್ಟವಾಗುವುದರಿಂದಲೂ ಎಂದು ವಿಕಲ್ಪ ಮಾಡಿ, ಪ್ರಥಮಪಕ್ಷದಲ್ಲಿ ಯಾವುದಕ್ಕೆ ಎಂದು ವಿಕಲ್ಪ ಮಾಡಿ, ದೋಷವನ್ನು ಹೇಳುತ್ತಿದ್ದಾರೆ 'ಪ್ರಮಾತ್ವಸ್ಯ' ಇತ್ಯಾದಿಯಾಗಿ.

ಜ್ಞಾನಕಾರಣಮಾತ್ರಜನ್ಯತ್ವವು ಸಾಧ್ಯವೋ,
ಜ್ಞಾನಕಾರಣಜನ್ಯತ್ವೇ ಸತಿ ಅತಿರಿಕ್ತಕಾರಣಜನ್ಯತ್ವಮ್ ಎಂಬುದು ಸಾಧ್ಯವೋ ?

ಭಾವದೀಪಃ – ದ್ವಿತೀಯಂ ಶಙ್ಕತೇ – ಪ್ರಮಾತ್ವೇತಿ ।। ಕಿಂ ಜ್ಞಾನಕಾರಣಾತಿರಿಕ್ತಮಾತ್ರ ಜನ್ಯತ್ವಂ ಸಾಧ್ಯಮ್? ಕಿಂ ವಾ ಜ್ಞಾನತ್ವಪ್ರಯೋಜಕಕಾರಣಜನ್ಯತ್ವೇ ಸತ್ಯತಿರಿಕ್ತ-ಕಾರಣಜನ್ಯತ್ವಮ್ । ಆದ್ಯे ಆಹ – ತಾದೃಶೇತಿ ।। ದ್ವಿತೀಯಂ ಶಙ್ಕತೇ – ಜ್ಞಾನೇತಿ ।।

ಎರಡನೆಯ ವಿಶಿಷ್ಟಪಕ್ಷವನ್ನು 'ಪ್ರಮಾತ್ವಯುಕ್ತ' ಎಂಬ ವಾಕ್ಯದಿಂದ ಆಶಂಕಿಸುತ್ತಿದ್ದಾರೆ. ಅಂದರೆ ಜ್ಞಾನಕಾರಣಾತಿರಿಕ್ತಮಾತ್ರ ಜನ್ಯತ್ವವು ಸಾಧ್ಯವಾಗಿದೆಯೋ, ಅಥವಾ 'ಜ್ಞಾನತ್ವಪ್ರಯೋಜಕ ಕಾರಣಜನ್ಯತ್ವೇ ಸತಿ ಅತಿರಿಕ್ತಕಾರಣಜನ್ಯತ್ವಮ್' ಎಂಬುದು ಸಾಧ್ಯವಾಗಿದೆಯೋ, ಪ್ರಥಮಪಕ್ಷದಲ್ಲಿ 'ತಾದೃಶಜ್ಞಾನಸ್ಯಾಪಿ' ಎಂಬುದರಿಂದ ಉತ್ತರಿಸಿದ್ದಾರೆ. ಎರಡನೆಯ ಪಕ್ಷವನ್ನು 'ಜ್ಞಾನಕಾರಣ' ಇತ್ಯಾದಿ ವಾಕ್ಯದಿಂದ ಆಶಂಕಿಸಿದ್ದಾರೆ.

ಕಾರ್ಯತ್ವಹೇತುವಿಗೆ ವ್ಯಭಿಚಾರ

भावदीपः – व्यभिचारात् कार्यत्वहेतोरित्यर्थः । बाधव्याहतिनिरासाय शङ्कते – ज्ञानकारणेति ।।

'ವ್ಯಭಿಚಾರಾತ್' ಎಂದರೆ ಕಾರ್ಯತ್ವಹೇತುವಿಗೆ ವ್ಯಭಿಚಾರ ಬರುತ್ತದೆ ಎಂದರ್ಥ. ಬಾಧ ಮತ್ತು ವ್ಯಾಹತಿದೋಷಗಳನ್ನು ಪರಿಹರಿಸಲು ಶಂಕಿಸುತ್ತಿದ್ದಾರೆ 'ಜ್ಞಾನಕಾರಣ' ಇತ್ಯಾದಿ ವಾಕ್ಯದಿಂದ.

ವ್ಯಾಘಾತದೋಷಕ್ಕೆ ಅವಕಾಶವಿಲ್ಲ

भावदीपः – विशिष्टाभावश्च अतज्जन्यत्वेन वा तज्जन्यत्वेऽप्यधिक-जन्यत्वेन वा सर्वथैवाजन्यत्वेन वा त्रेधा घटते । दृष्टान्ते घटादावाद्यमादाय पक्षे द्वितीयमादाय ईश्वरज्ञाने त्वन्त्यपक्षमादाय पर्यवसानाद् इष्टसिद्धिव्याघातो नेश्वरज्ञाने बाधश्चेति भावः।

ವಿಶಿಷ್ಟಾಭಾವವು ಅತಜ್ಜನ್ಯತ್ವದಿಂದ ಅಥವಾ ತಜ್ಜನ್ಯತ್ವೇऽಪ್ಯಧಿಕಜನ್ಯತ್ವದಿಂದ ಅಥವಾ ಸರ್ವಥೈವಾಜನ್ಯತ್ವದಿಂದ ಕೂಡುತ್ತದೆ. ದೃಷ್ಟಾಂತವಾದ ಘಟದಲ್ಲಿ ಮೊದಲನೆಯ ಪಕ್ಷವನ್ನು ಒಪ್ಪಿ, ಪಕ್ಷದಲ್ಲಿ ಎರಡನೆಯ ಪಕ್ಷವನ್ನು ಒಪ್ಪಿ, ಈಶ್ವರಜ್ಞಾನದಲ್ಲಿ ಮೂರನೆಯ ಪಕ್ಷವನ್ನು ಒಪ್ಪಿ, ಸಾಧ್ಯವನ್ನು ಪರ್ಯವಸಾನ ಮಾಡಬಹುದು. ಆದ್ದರಿಂದ ವ್ಯಾಘಾತದೋಷವು ಬರುವುದಿಲ್ಲ. ಮತ್ತು ಈಶ್ವರಜ್ಞಾನದಲ್ಲಿ ಬಾಧದೋಷವೂ ಕೂಡ ಬರುವುದಿಲ್ಲವೆಂದು ತಿಳಿಯಬೇಕು.

ಜ್ಞಾನದಲ್ಲಿಯೂ ಜ್ಞಾನಜನ್ಯಹೇತುಮಾತ್ರ ಜನ್ಯತ್ವವನ್ನು ಸಾಧನೆ ಮಾಡಬಹುದೇ ?

भावदीपः – हेतुः कार्यत्वम् । ज्ञानव्यावृत्तिर्व्यर्था प्रमायामिव

तत्राप्युक्तसाधन-सम्भवादित्याह – ज्ञानेऽपीति ।। ननु ज्ञानेऽपि ज्ञानहेतुमात्रजन्यत्वाभावसाधने व्याघात इत्यत आह – विशिष्टेति ।।

ಹೇತುವೆಂದರೆ 'ಕಾರ್ಯತ್ವ' ಎಂದರ್ಥ. ಜ್ಞಾನವನ್ನು ವ್ಯಾವೃತ್ತಿ ಮಾಡುವುದು ವ್ಯರ್ಥವಾಗಿದೆ. ಏಕೆಂದರೆ ಪ್ರಮಾದಲ್ಲಿ ಹೇಳಿದಂತೆ ಜ್ಞಾನದಲ್ಲಿಯೂ ಕೂಡ ಸಾಧಿಸಬಹುದು ಎಂದು 'ಜ್ಞಾನೇಪಿ' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಜ್ಞಾನದಲ್ಲಿಯೂ ಜ್ಞಾನಹೇತುಮಾತ್ರಜನ್ಯತ್ವಾಭಾವವನ್ನು ಸಾಧನೆ ಮಾಡಿದರೆ ವ್ಯಾಘಾತ ಬರುತ್ತದಲ್ಲವೇ ? ಎಂಬ ಪ್ರಶ್ನೆಗೆ 'ವಿಶಿಷ್ಟಾಭಾವವಿಕಲ್ಪೇನ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಜ್ಞಾನದಲ್ಲಿಯೂ ಅಧಿಕಜನ್ಯತ್ವದ ಪರ್ಯವಸಾನ ಪ್ರಯುಕ್ತ ವ್ಯಾಘಾತವಿಲ್ಲ

भावदीपः – यथा विशिष्टाभावः प्रमायामधिकजन्यत्वाभावेन पर्यवस्यतीति न व्याघात इत्युच्यते । तथा ज्ञानेऽप्यधिकजन्यत्वेन पर्यवसानोक्त्या व्याघातस्य समाधातुं शक्यत्वादित्यर्थः ।

ಯಾವರೀತಿಯಾಗಿ ವಿಶಿಷ್ಟಾಭಾವವು ಯಥಾರ್ಥಜ್ಞಾನದಲ್ಲಿ ಅಧಿಕಜನ್ಯತ್ವಾಭಾವಪ್ರಯುಕ್ತವಾಗಿ ಪರ್ಯವಸಾನವಾಗುವುದರಿಂದ ವ್ಯಾಘಾತ ಬರುವುದಿಲ್ಲವೆಂದು ಹೇಳಲಾಗುತ್ತದೋ, ಅದರಂತೆ ಜ್ಞಾನದಲ್ಲಿಯೂ ಅಧಿಕಜನ್ಯತ್ವದಿಂದ ಪರ್ಯವಸಾನವಾಗುವ ಕಾರಣ ವ್ಯಾಘಾತದೋಷವು ಬರುವುದಿಲ್ಲವೆಂದು ಹೇಳಬಹುದು ಎಂದರ್ಥ.

ಯಾದೃಚ್ಛಿಕಸಂವಾದಿಸ್ಥಳದಲ್ಲಿ ಗುಣವ್ಯಭಿಚಾರಿಯು ಸಮಾನ

भावदीपः – भ्रमेऽपि धर्म्यंशे प्रमात्वस्य सत्त्वेन ज्ञानत्वसमनियतस्य प्रमात्वस्याधिकप्रयोज्यत्वे ज्ञानत्वेऽपि तथात्वस्य सम्भवात् । ज्ञानत्वं भ्रमे गुणव्यभिचारि चेत्, प्रमात्वमपि यादृच्छिकसंवादीति, तथेति सममिति भावः ।

ಭ್ರಮೆಯಲ್ಲಿಯೂ ಕೂಡ ಧರ್ಮಿಯ ಅಂಶದಲ್ಲಿ ಪ್ರಮಾತ್ವವಿರುವುದರಿಂದ ಜ್ಞಾನತ್ವಸಮನಿಯತವಾದ ಪ್ರಮಾತ್ವಕ್ಕೆ ಅಧಿಕಪ್ರಯೋಜ್ಯತ್ವವಿರುವುದಾದರೆ ಜ್ಞಾನತ್ವದಲ್ಲಿಯೂ ಕೂಡ ಅಧಿಕಪ್ರಯೋಜ್ಯತ್ವವಿರುತ್ತದೆ.

ಜ್ಞಾನತ್ವವು ಭ್ರಮದಲ್ಲಿ ಗುಣವ್ಯಭಿಚಾರಿಯಾಗಿದೆಯೆಂದರೆ ಪ್ರಮಾತ್ವವೂ ಕೂಡ ಯಾದೃಚ್ಛಿಕ ಸಂವಾದಿಸ್ಥಳದಲ್ಲಿ ಗುಣವ್ಯಭಿಚಾರಿಯಾಗಿದೆಯೆಂಬುದು ಸಮಾನವಾಗಿದೆಯೆಂದು ತಿಳಿಯಬೇಕು.

ಗುಣಪದದಿಂದ ಜ್ಞಾನಕಾರಣಾತಿರಿಕ್ತಕಾರಣವನ್ನು ವಿವಕ್ಷಿಸಬೇಕು

ಭಾವದೀಪಃ – व्याघातस्येत्युपलक्षण् । ईशज्ञाने बाधस्यापि समाधातुं शक्यत्वादित्यपि ध्येयम् ।। प्रतिज्ञेति ।। परेणापि गुणत्वजातेरनङ्गीकारेण गुणपदेन ज्ञानकारणातिरिक्तकारणस्यैव वाच्यत्वेन पूर्वोक्तव्याघाताद्यापत्ते-रित्यर्थः । हेतुं च निराह – किञ्चेति ।। व्यभिचाराद् दण्डरूपादौ घटं प्रति कारणत्वाभावादित्यर्थः ।

'व्याघातस्य' ಎಂಬುದು ಉಪಲಕ್ಷಣವಾಗಿದೆ. ಈಶಜ್ಞಾನದಲ್ಲಿ ಬರುವಂತಹ ಬಾಧವೂ ಕೂಡ ಪರಿಹಾರವಾಗುತ್ತದೆಂಬುದನ್ನೂ ಕೂಡ ತಿಳಿದುಕೊಳ್ಳಬೇಕು. 'ಪ್ರತಿಜ್ಞಾನಿರಾಸೇನ' ಎಂಬುದರ ಅಭಿಪ್ರಾಯ ಹೀಗಿದೆ - ಪರರೂ ಸಹ ಗುಣತ್ವಜಾತಿಯನ್ನು ಅಂಗೀಕಾರ ಮಾಡದ ಕಾರಣ ಗುಣಪದದಿಂದ ಜ್ಞಾನಕಾರಣಾತಿರಿಕ್ತಕಾರಣವನ್ನೇ ವಿವಕ್ಷಿಸಬೇಕು. ಆದ್ದರಿಂದ ಹಿಂದೆ ಹೇಳಿದ ವ್ಯಾಘಾತಾದಿದೋಷಗಳು ಪುನಃ ಬರುತ್ತವೆಂದು ಅಭಿಪ್ರಾಯ. ಹೇತುವನ್ನು ನಿರಾಕರಣೆ ಮಾಡುತ್ತಿದ್ದಾರೆ 'ಕಿಂಚ' ಇತ್ಯಾದಿ ವಾಕ್ಯದಿಂದ. 'ವ್ಯಭಿಚಾರಾತ್' ಎಂದರೆ ದಂಡರೂಪದಲ್ಲಿ ಘಟಕ್ಕೆ ಕಾರಣತ್ವವು ಇರುವುದಿಲ್ಲ ಎಂದರ್ಥ.

ಉಭಯಕಾರಣತ್ವೇ ಎಂದರೇನು ?

ಭಾವದೀಪಃ – 'तस्माद् गुणेभ्यो दोषाणामभावस्तदभावतः । अप्रामाण्यादयो भावास्तेनोत्सर्गोऽनयोदितः ।।' इत्युक्त्यनुरोधेनाहऽह – दोषनिरासेति ।। उभयेति ।। प्रामाण्यजननदोषनिरासरूपोभयेत्यर्थः ।।

'तस्मात् गुणेभ्योदोषाणामभावस्तदभावतः ।
अप्रामाण्यादयो भावास्तेनोत्सर्गोऽनयोदितः ।।'

ಎಂಬ ವಚನಕ್ಕೆ ಅನುಸಾರಿಯಾಗಿ 'ದೋಷನಿರಾಸೋಪಕ್ಷಿಣತ್ವಾತ್' ಎಂದು ಹೇಳಿದ್ದಾರೆ. 'ಉಭಯಕಾರಣತ್ವೇ' ಎಂದರೆ ಪ್ರಾಮಾಣ್ಯಜನನ ಹಾಗೂ ದೋಷನಿರಾಸವೆಂಬ ಎರಡು ಕಾರಣಗಳಿದ್ದಾಗ ಎಂದರ್ಥ.

ಜ್ಞಾನಕಾರಣಮಾತ್ರಜನ್ಯತ್ವರೂಪವಾದ ಸ್ವತಸ್ತ್ವ

ಭಾವದೀಪಃ – ನಚೈವಮಿತಿ ।। ಗುಣಾನಾಂ ದೋಷನಿರಾಸೋಪಕ್ಷೀಣತ್ವೇ ದೋಷಾಣಾಮಪಿ ಗುಣನಿರಾಸೋಪಕ್ಷೀಣತ್ವಸಮ್ಭವಾತ್ ಜ್ಞಾನಕಾರಣಮಾತ್ರಜನ್ಯತ್ವರೂಪಂ ಸ್ವತಸ್ತ್ವಂ ಸ್ಯಾದಿತ್ಯರ್ಥಃ ।।

'ನಚೈವಮ್' ಇತ್ಯಾದಿ ವಾಕ್ಯದ ಅಭಿಪ್ರಾಯ ಹೀಗಿದೆ - ಗುಣಗಳು ದೋಷನಿರಾಸ ಮಾಡುವುದರಲ್ಲಿ ಉಪಕ್ಷೀಣವಾಗಿದ್ದರೆ, ದೋಷಗಳೂ ಸಹ ಗುಣಗಳನ್ನು ನಿರಾಸ ಮಾಡುವುದರಲ್ಲಿ ಉಪಕ್ಷೀಣವಾಗಿವೆ. ಆದ್ದರಿಂದ ಜ್ಞಾನಕಾರಣಮಾತ್ರಜನ್ಯತ್ವರೂಪವಾದ ಸ್ವತಸ್ತ್ವವು ಯುಕ್ತವಾಗುತ್ತದೆಂದರ್ಥ.

ಯಾದೃಚ್ಛಿಸಂವಾದಿಸ್ಥಳದಲ್ಲಿ ಏಕೆ ಅಪ್ರಾಮಾಣ್ಯಬುದ್ಧಿಯಿಲ್ಲ

ಭಾವದೀಪಃ – ದೋಷಾನ್ವಯೇತಿ ।। ದೋಷೇ ಸತ್ಯೇವಾಪ್ರಾಮಾಣ್ಯಮ್, ತದಭಾವೇ ತದಭಾವ ಇತ್ಯನ್ವಯವ್ಯತಿರೇಕನಿಯಮೇನೇತ್ಯರ್ಥಃ । ಯಾದೃಚ್ಛಿಕಸಂವಾದಿನಿ ಸತ್ಯಪಿ ದೋಷೇऽಪ್ರಾಮಾಣ್ಯಾನುತ್ಪತ್ತಿಸ್ತು ವಿಷಯಸತ್ತ್ವಾದೇರ್ದೋಷಪ್ರತಿಬನ್ಧಕಸ್ಯಸತ್ತ್ವಾದಿತಿ ಭಾವಃ ।।

'ದೋಷಾನ್ವಯವ್ಯತಿರೇಕನಿಯಮೇನ' ಎಂದರೆ ದೋಷವಿದ್ದರೆ ಅಪ್ರಾಮಾಣ್ಯವಿರುತ್ತದೆ. ದೋಷವಿಲ್ಲದಿದ್ದರೆ ಅಪ್ರಾಮಾಣ್ಯವಿರುವುದಿಲ್ಲವೆಂಬ ಅನ್ವಯವ್ಯತಿರೇಕನಿಯಮವಿರುವುದರಿಂದ ಎಂದರ್ಥ. ಯಾದೃಚ್ಛಿಕಸಂವಾದಿಸ್ಥಳದಲ್ಲಿ ದೋಷವಿದ್ದರೂ ಕೂಡ ಅಪ್ರಾಮಾಣ್ಯಬುದ್ಧಿಯು ಏಕೆ ಹುಟ್ಟುತ್ತಿಲ್ಲ? ಎಂದರೆ. ವಿಷಯವಿರುವ ಪ್ರಯುಕ್ತ ದೋಷಪ್ರತಿಬಂಧಕವು ಇರುತ್ತದೆಂದು ತಿಳಿಯಬೇಕು.

'ಗುಣಾಸ್ತ್ವಕಿಂಚಿತ್ಕರಾಃ'

ಭಾವದೀಪಃ – ಉಭಯೇತಿ ।। 'ಗುಣಾಸ್ತ್ವಕಿಞ್ಚಿತ್ಕರಾಃ' ಇತಿ ಪದ್ಧತ್ಯುಕ್ತ್ಯಾ ದೋಷಾಣಾಂ ಗುಣನಿರಾಸಕತ್ವೇऽಪಿ ನ ಹಾನಿಸ್ತಥಾಪ್ಯಭ್ಯುಪಗಮೋಕ್ತಿರಿಯಮ್ ।। **ವ್ಯಭಿಚಾರಾದಿತಿ ।।** ಗುಣಾಭಾವೇऽಪಿ ಪ್ರಮಾಯಾ ಜಾಯಮಾನತ್ವಾದಿತಿ ಭಾವಃ ।

'ಉಭಯಕಾರಣತ್ವೇ' ಇತ್ಯಾದಿ ವಾಕ್ಯದ ಅಭಿಪ್ರಾಯ ಹೀಗಿದೆ - 'ಗುಣಾಸ್ತ್ವಕಿಂಚಿತ್ಕರಾಃ' ಎಂಬುದಾಗಿ ಪ್ರಮಾಣಪದ್ಧತಿಯಲ್ಲಿ ಹೇಳಿದಂತೆ ದೋಷಗಳು ಗುಣವನ್ನು ನಿರಾಸ ಮಾಡಿದರೂ

ಯಾವುದೇ ಹಾನಿಯಿರುವುದಿಲ್ಲ. ಆದರೂ ಸಹ ಅಭ್ಯುಪಗಮವಾದದಿಂದ ಹೀಗೆ ಹೇಳಿದ್ದಾರೆಂದು ತಿಳಿಯಬೇಕು. 'ವ್ಯಭಿಚಾರಾತ್' ಎಂದರೆ ಗುಣವಿಲ್ಲದಿದ್ದರೂ ಯಥಾರ್ಥಜ್ಞಾನವು ಹುಟ್ಟುವುದರಿಂದ ಎಂದಭಿಪ್ರಾಯ.

ವಿಷಯದ ಇರುವಿಕೆಯೇ ಗುಣವಲ್ಲ

भावदीपः – तत्र विषयसत्त्वादिकमेव गुण इति त्वन्यत्र निरस्तं बोध्यम्। अभ्युपेत्य वादेनाऽह – **दोषाभावस्येति** ।। कारणतावच्छेदकप्रतिबन्धकाभावसाधारणप्रयोजकत्वमात्राभिप्रयेण वा कारणत्वोक्तिः । अन्यथा प्रागुक्ततत्त्वनिर्णयटीका-सुधावाक्याभ्यां विरोधापातात् ।

ವಿಷಯದ ಇರುವಿಕೆಯೇ ಗುಣವೆಂಬುದನ್ನು ಬೇರೆಕಡೆ ನಿರಾಕರಣೆ ಮಾಡಲಾಗಿದೆ. ಅಂಗೀಕಾರವಾದದಿಂದ ಹೇಳುತ್ತಿದ್ದಾರೆ 'ದೋಷಾಭಾವಸ್ಯ' ಇತ್ಯಾದಿಯಾಗಿ. ಕಾರಣತಾವಚ್ಛೇದಕಪ್ರತಿಬಂಧಕಾಭಾವಸಾಧಾರಣಪ್ರಯೋಜಕತ್ವಮಾತ್ರದ ಅಭಿಪ್ರಾಯದಿಂದ ಕಾರಣತ್ವವನ್ನು ಹೇಳಲಾಗಿದೆ. ಇಲ್ಲದಿದ್ದರೆ ಹಿಂದೆ ತತ್ವನಿರ್ಣಯಟೀಕೆ ಹಾಗೂ ಸುಧಾವಾಕ್ಯಗಳ ವಿರೋಧ ಬರುತ್ತದೆ.

ಪ್ರಾಮಾಣ್ಯ ಸ್ವತಸ್ತ್ವಕ್ಕೆ ಭಂಗವಿಲ್ಲ

भावदीपः – नच स्वतस्त्वभङ्गः । ज्ञानजननशक्तिवत् प्रमाजननशक्तेः सहजत्वमात्रेण स्वतस्त्वोपपत्तेः । अप्रामाण्यं तु दोषाहितशक्त्येति वैषम्यम् । उक्तञ्च प्रथमपादीयसुधायाम् – **इन्द्रियादीनामौत्सर्गिकी** शक्तिः प्रामाण्यजनने दोषापवादादप्रामाण्यमुपजनयतीति । व्यतिरेकिणमाशङ्कते – **प्रमेति** ।।

ಹೀಗೆ ಹೇಳಿದರೆ ಪ್ರಮಾಣಸ್ವತಸ್ತ್ವಕ್ಕೆ ಭಂಗವಿಲ್ಲ. ಏಕೆಂದರೆ ಜ್ಞಾನಜನನಶಕ್ತಿಯಂತೆ ಪ್ರಮಾಜನನ ಶಕ್ತಿಯೂ ಕೂಡ ಸಹಜವೆಂದು ಹೇಳಿದ್ದರಿಂದ ಪ್ರಾಮಾಣಸ್ವತಸ್ತ್ವವು ಯುಕ್ತವಾಗುತ್ತದೆ. ಅಪ್ರಾಮಾಣ್ಯವಾದರೂ ಅಹಿತವಾದ ದೋಷದಿಂದ ಬರುತ್ತದಾದ್ದರಿಂದ, 'ಪರತಃ' ಎಂದು ಹೇಳಬೇಕು. ಪ್ರಥಮಪಾದದ ಸುಧೆಯಲ್ಲಿ ಇಂದ್ರಿಯಗಳಿಗೆ ಔತ್ಸರ್ಗಿಕವಾದ ಶಕ್ತಿಯಿದೆ. ಪ್ರಾಮಾಣ್ಯವನ್ನು ಹುಟ್ಟಿಸುವಾಗ ಔತ್ಸರ್ಗಿಕವಾದ ಶಕ್ತಿಯಿರುತ್ತದೆ. ದೋಷ ಅಪವಾದಗಳಿಂದ ಅಪ್ರಾಮಾಣ್ಯವನ್ನು ಹುಟ್ಟಿಸುತ್ತದೆಂದು ಹೇಳಲಾಗಿದೆ. ವ್ಯತಿರೇಕಿಯನ್ನು ಆಶಂಕಿಸುತ್ತಿದ್ದಾರೆ 'ಪ್ರಮಾ' ಇತ್ಯಾದಿಯಾಗಿ.

ಗುಣಜನ್ಯವೆಂಬ ವಿಷಯದಲ್ಲಿ ಆಧಾರವಿಲ್ಲ

ಭಾವದೀಪಃ – अजन्यप्रमात्वमिति ।। जन्यप्रमात्वाभाव इत्यर्थः ।। व्याप्तीति ।। यादृच्छिकसंवादिदुष्टवाक्यजन्यप्रमायां साध्ये सत्युपाध्यभावादित्यर्थः । अतो गुणजन्यत्वे मानाभावात् तदजन्यत्वे मानाभावाच्चेत्यर्थः ।।

'ಅಜನ್ಯಪ್ರಮಾತ್ವಮ್' ಎಂದರೆ 'ಜನ್ಯಪ್ರಮಾತ್ವಾಭಾವ' ಎಂದರ್ಥ. ಯಾದೃಚ್ಛಿಕಸಂವಾದಿಯಾದ ದುಷ್ಟವಾಕ್ಯಜನ್ಯಪ್ರಮಾದಲ್ಲಿ ಸಾಧ್ಯವಿದ್ದರೂ ಉಪಾಧಿಯಿರುವುದಿಲ್ಲವೆಂದು ವ್ಯಾಪ್ತಿ ಇತ್ಯಾದಿಯಾಗಿ ಹೇಳಿದ್ದಾರೆ. ಆದ್ದರಿಂದ ಗುಣಜನ್ಯವೆಂಬ ವಿಷಯದಲ್ಲಿ ಯಾವುದೇ ಪ್ರಮಾಣವಿಲ್ಲ. ಗುಣಜನ್ಯವಲ್ಲವೆಂಬ ವಿಷಯದಲ್ಲಿ ಪ್ರಮಾಣವಿರುತ್ತದೆಂದು ಪ್ರಮಾಣಸ್ವತಸ್ತ್ವವು ಸಿದ್ಧವಾಗುತ್ತದೆ.

'ಕರ್ಮಣಿ' ಎಂಬ ಶಬ್ದವು ಉಪಲಕ್ಷಣಯಾ ಗ್ರಾಹ್ಯ

ಭಾವದೀಪಃ – ಭಾಷ್ಯೇ ದೇವಾನಾಮನಾದಿನಿತ್ಯತ್ವಾದಿತ್ಯನುಕ್ತ್ವಾನಿತ್ಯತ್ವಾದಿತ್ಯುಕ್ತೇರಭಿಪ್ರಾಯಂ ವ್ಯಞ್ಜಯಿತುಮಾಹ – **नच वाच्यमिति ।। प्रमाणेति ।।** 'ते ह नाकम्' इति प्रमाणेत्यर्थः।। **अतीतेति।।** शब्दे कर्मणि चोभयत्रेत्यर्थः । तथाच पूर्वत्र 'कर्मणि' इति शब्दे इत्यस्याप्युपलक्षणमिति भावः ।।

ಭಾಷ್ಯದಲ್ಲಿ ದೇವತೆಗಳು ಅನಾದಿನಿತ್ಯರಾಗಿದ್ದಾರೆಂದು ಹೇಳದೆ ಅನಿತ್ಯರಾಗಿದ್ದಾರೆಂದು ಹೇಳಿದ್ದಾರೆ. ಇದರ ಅಭಿಪ್ರಾಯವನ್ನು ಸ್ಪಷ್ಟಪಡಿಸಲು 'ನಚವಾಚ್ಯಮ್' ಎಂಬ ವಾಕ್ಯವು ಹೊರಟಿದೆ. ಪ್ರಮಾಣವೆಂದರೆ 'ತೇ ಹ ನಾಕಮ್' ಎಂಬ ಪ್ರಮಾಣವೆಂದರ್ಥ. 'ಅತೀತದೇವತಾಪ್ರವಾಹ' ಎಂದರೆ 'ಶಬ್ದೇ' 'ಕರ್ಮಣಿ' ಎಂಬೆರಡು ಸೂತ್ರಗಳಲ್ಲಿ ಹೇಳಿದಂತೆ ದೇವತೆಗಳ ಪ್ರವಾಹವು ಅನಾದಿನಿತ್ಯವಾಗಿದೆಯೆಂದು ತಿಳಿಯಬೇಕು. ಆದ್ದರಿಂದ ಹಿಂದಿನ ಸೂತ್ರದಲ್ಲಿ 'ಕರ್ಮಣಿ' ಎಂಬ ಶಬ್ದವನ್ನು ಉಪಲಕ್ಷಣಯಾ ತಿಳಿಯಬೇಕು.

'ದೇವತಾಹ್ವಾನ' ಎಂದರೇನು ?

ಭಾವದೀಪಃ – कर्मण्यपि साम्यादिति ।। शब्द इति सूत्रे कर्मणि चेत्यनुवर्त्यं वा उपलक्ष्यं वेति भावः ।। **देवताह्वानेति ।।** 'इन्द्रागच्छ हरिवो आगच्छ' इत्यादिरूपस्येत्यर्थः । नेति नञा निषेध्यं दर्शयन् तेषां प्रभवनियमादिति

भाष्यं व्याचष्टे – यदिति ।। न तस्याप्रामाण्यमिति ।। विरोध इति पदं नञाऽन्वेतीति सूचितम् । सूर्येत्यादिभाष्यं व्याचष्टे – नच तत्रेति ।।

'ಕರ್ಮಣ್ಯಪಿ ಸಾಮ್ಯಾತ್' ಎಂದರೆ 'ಶಬ್ದೇ' ಎಂಬ ಸೂತ್ರದಲ್ಲಿ 'ಕರ್ಮಣಿಚ' ಎಂಬುದನ್ನು ಅನುವೃತ್ತಿಮಾಡಿಕೊಳ್ಳಬೇಕು. ಅಥವಾ ಉಪಲಕ್ಷಣಯಾ ಇಟ್ಟುಕೊಳ್ಳಬೇಕು ಎಂದಭಿಪ್ರಾಯ. ದೇವತಾಹ್ವಾನವೆಂದರೆ 'ಎಲೈ ! ಇಂದ್ರನೇ ಬಾ' ಇತ್ಯಾದಿ ರೂಪವಾದ ದೇವತಾಹ್ವಾನರೂಪವಾದ ವಾಕ್ಯವೆಂದರ್ಥ. 'ನ' ಎಂಬಲ್ಲಿರುವ 'ನಞ್' ಎಂಬುದು ನಿಷೇಧ್ಯವನ್ನು ತೋರಿಸುತ್ತಿದೆಯೆಂದು ವ್ಯಾಖ್ಯಾನ ಮಾಡುತ್ತಾ 'ತೇಷಾಂ ಪ್ರಭವನಿಯಮಾತ್' ಎಂಬ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಯತ್' ಇತ್ಯಾದಿಯಾಗಿ. 'ನ ತಸ್ಯಾಪ್ರಾಮಾಣ್ಯಮ್' ಎಂದರೆ 'ವಿರೋಧೇ' ಎಂಬ ಪದವನ್ನು 'ನಞ್' ಎಂಬುದರ ಜೊತೆಗೆ ಅನ್ವಯ ಮಾಡಿಕೊಳ್ಳಬೇಕು ಎಂದು ಸೂಚಿಸಿದ್ದಾರೆ. 'ಸೂರ್ಯ' ಇತ್ಯಾದಿ ಭಾಷ್ಯವನ್ನು 'ನಚ ತತ್ರ' ಎಂಬುದರಿಂದ ವ್ಯಾಖ್ಯಾನ ಮಾಡಿದ್ದಾರೆ.

ಹಿಂದಿನ ಕಲ್ಪದಲ್ಲಿರುವ ದೇವತೆಗಳನ್ನೇ ಪುನಃ ಹುಟ್ಟಿಸುತ್ತಾನೆಯೇ ?

भावदीपः – तथैवेति ।। वचनोक्तेरुपयोगं वक्तुमाह – नच वाच्यं श्रुताविति ।। तामेव सूर्यादिव्यक्तिं पूर्वप्रकारेणाकल्पयदित्यादिरूपेणेत्यर्थः। यथर्तुष्विति सम्भवपर्वण्याद्येऽध्याये सौतिवचनम् । यथेत्यादेरुपयोगम् इतरेषामिति पदार्थं वदन्नाह – नचायोगिनामिति ।।

'ತಥೈವ' ವಚನದ ಉಕ್ತಿಗೆ ಉಪಯೋಗವನ್ನು ತೋರಿಸಲು 'ನಚ ವಾಚ್ಯಮ್' ಇತ್ಯಾದಿ ವಾಕ್ಯವು ಹೊರಟಿದೆ. ಹಿಂದಿನ ಕಲ್ಪದಲ್ಲಿರುವ ಸೂರ್ಯಾದಿವ್ಯಕ್ತಿಗಳನ್ನೇ ಪುನಃ ಸೃಷ್ಟಿಮಾಡಿದನು ಎಂಬುದಾಗಿ ಔಪಚಾರಿಕವಾಗಿ ಅರ್ಥವನ್ನು ತಿಳಿಯಬೇಕು. 'ಯಥರ್ತುಷ್ವಿತಿ' ಎಂಬ ಶ್ಲೋಕವು ಸಂಭವಪರ್ವದ ಪ್ರಥಮಾಧ್ಯಾಯದಲ್ಲಿ ಸೂತಪುರಾಣಿಕರು ಹೇಳುವ ವಚನವಾಗಿದೆ. 'ಯಥಾ' ಇತ್ಯಾದಿಯಾಗಿ ಹೇಳಿದ್ದರ ಉಪಯೋಗವನ್ನು 'ಇತರೇಷಾಮ್' ಎಂಬ ಪದದ ಅರ್ಥವನ್ನು 'ನಚ ಅಯೋಗಿನಾಂ' ಎಂಬ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಾ ಹೇಳುತ್ತಿದ್ದಾರೆ.

ಪ್ರಳಯ ಇದೆ ಎಂಬ ವಿಷಯದಲ್ಲಿ ಪ್ರಮಾಣ

भावदीपः – परं प्रति अप्रलयवादिनं पूर्वपक्षिणं प्रति ।। प्रलयस्येति ।।

'अपश्यमप्यये मायया यत्प्रयन्ति', 'आकाशं प्रत्यस्तं यन्ति', 'नासदासीन्नो सदासीत्तदानीम्', 'यमप्येति भुवनं य इदं सर्वं विलापयति', 'स रुद्रेण विलापयति', 'क्रमाद् विलीयते व्युत्क्रमाद्विलयश्चेत्यादिश्रुतिभिः 'ब्रह्मणा सह ते सर्वे सम्प्राप्ते प्रति सञ्चर' इति 'यस्मिंश्च प्रलयं यान्ति' इत्यादिस्मृतिभिस्सिद्धत्वादित्यर्थः ।।२८।।

'परं प्रति' ಎಂದರೆ ಪ್ರಳಯವಿಲ್ಲವೆಂದು ಹೇಳುವ ಪೂರ್ವಪಕ್ಷಿಯನ್ನು ಕುರಿತು ಎಂದರ್ಥ. 'ಪ್ರಳಯಸ್ಯ' ಎಂಬುದರ ಅಭಿಪ್ರಾಯ ಹೀಗಿದೆ - 'ಅಪಶ್ಯಮಪ್ಯಯೇ ಮಾಯಯಾ ಯತ್ಪ್ರಯಂತಿ', 'ಆಕಾಶಂ ಪ್ರತ್ಯಸ್ತಂ ಯಂತಿ', 'ನಾಸದಾಸೀನ್ನೋ ಸದಾಸೀತ್ತದಾನೀಮ್', 'ಯಮಪ್ಯೇತಿ ಭುವನಂ ಯ ಇದಂ ಸರ್ವಂ ವಿಲಾಪಯತಿ', 'ಸ ರುದ್ರೇಣ ವಿಲಾಪಯತಿ', 'ಕ್ರಮಾದ್ ವಿಲೀಯತೇ ವ್ಯತ್ಕ್ರಮಾದ್ ವಿಲಯಶ್ಚ ಇವೇ ಮೊದಲಾದ ಶ್ರುತಿಗಳಿಂದ 'ಬ್ರಾಹ್ಮಣಾ ಸಹ ತೇ ಸರ್ವೇ ಸಂಪ್ರಾಪ್ತೇ ಪ್ರತಿ ಸಂಚರ' 'ಯಸ್ಮಿಂಶ್ಚ ಪ್ರಳಯಂ ಯಾಂತಿ' ಇತ್ಯಾದಿ ಸ್ಮೃತಿಗಳಿಂದಲೂ ಪ್ರಳಯದ ಇರುವಿಕೆಯು ಸಿದ್ಧವಾಗಿದೆ ಎಂದರ್ಥ.

ಬ್ರಹ್ಮಸೂತ್ರ

'अत एव च नित्यत्वम्' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। अत एव च नित्यत्वम् ।। २९ ।।

ಸೂತ್ರಾರ್ಥ - ದೇವತಾಪ್ರವಾಹವು ಅನಿತ್ಯವಾದರೆ ವೇದಗಳ ನಿತ್ಯತ್ವವು ಸಿದ್ಧವಾಗುವುದಿಲ್ಲ, ಹೀಗೆ ವೇದ ನಿತ್ಯತ್ವದ ಅನ್ಯಥಾ ಉಪಪತ್ತಿಯಿಂದ ದೇವತಾಪ್ರವಾಹಕ್ಕೆ ನಿತ್ಯತ್ವವು ಸಿದ್ಧವಾಗುತ್ತದೆ.

ಅರ್ಥ -- ಅತ ಏವಚ = ವೇದವು ನಿತ್ಯವಾದ್ದರಿಂದಲೇ ದೇವತಾ ಪ್ರವಾಹಕ್ಕೂಸಹ, ನಿತ್ಯತ್ವಮ್ = ನಿತ್ಯತ್ವವು ಸಿದ್ಧವಾಗುತ್ತದೆ.

ಬ್ರಹ್ಮಸೂತ್ರಭಾಷ್ಯ

ವೇದ ನಿತ್ಯವಾದ್ದರಿಂದಲೇ ದೇವತಾಪ್ರವಾಹವೂ ನಿತ್ಯ

ब्रह्मसूत्रभाष्यम् – अत एव शब्दस्य नित्यत्वादेव च देवप्रवाहनित्यत्वं युक्तम् ॥२९॥

ಅನುವಾದ - ವೇದವು ನಿತ್ಯವಾದ ಕಾರಣದಿಂದಲೇ ದೇವತೆಗಳ ಪ್ರವಾಹವು ನಿತ್ಯವಾಗಿರುವುದು ಯುಕ್ತವಾಗಿದೆ.

ಪ್ರತಿಪದಾರ್ಥ -- ಮತ್ತೊಂದು ಯುಕ್ತಿಯಿಂದ ದೇವಪ್ರವಾಹಕ್ಕೆ ನಿತ್ಯತ್ವವನ್ನು ಸಮರ್ಥಿಸುವಂತಹ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ. -

ಅತ ಏವ = ಸೂತ್ರದಲ್ಲಿರುವ, ಅತ ಏವ ಎಂಬ ಪದದಿಂದ ಶಬ್ದಸ್ಯ = ವೇದಕ್ಕೆ, ನಿತ್ಯತ್ವಾದೇವ = ನಿತ್ಯತ್ವ ಇರುವುದರಿಂದಲೂ, ದೇವಪ್ರವಾಹನಿತ್ಯತ್ವಮ್ = ದೇವತೆಗಳ ಪ್ರವಾಹವು ನಿತ್ಯವಾಗಿದೆ ಎಂಬುದು, ಯುಕ್ತಮ್ = ಪ್ರಮಿತವಾಗಿದೆ.

ಸತ್ತರ್ಕದೀಪಾವಳಿ

सत्तर्कदीपावलिः –

।। अत एव च नित्यत्वम् ।।

वैदिकेन्द्रादिना तदर्थप्रवाहोच्छेद इत्याह – अत इति ।। गतैर्देवैः समाननामरूपत्वाद् वर्तमानानां मुक्त्यनन्तरमपि अपुनरावृत्तावपि भविष्यद्देवेषु पूर्वेष्विव ब्रह्मरुद्रादिव्यवहाराविरोधः । तथाच श्रुतिः 'यथा पूर्वमकल्पयद्' इति ।।

ವೇದಪ್ರತಿಪಾದ್ಯರಾದ ಇಂದ್ರಾದಿಗಳ ಪ್ರವಾಹವು ನಿತ್ಯವಾಗಿದೆ ಎಂದು ಸಮರ್ಥಿಸಲು 'ಅತ ಏವ' ಇತ್ಯಾದಿ ಭಾಷ್ಯವು ಹೊರಟಿದೆ. ಹಿಂದಿನ ಕಲ್ಪದಲ್ಲಿ ಯಾವ ದೇವತೆಗಳು ಇಂದ್ರ, ರುದ್ರ ಮೊದಲಾದ ನಾಮ-ರೂಪಗಳನ್ನು ಹೊಂದಿದ್ದರೂ, ಈ ಕಲ್ಪದಲ್ಲಿರುವ ಇಂದ್ರ-ರುದ್ರ ಮೊದಲಾದ ದೇವತೆಗಳೂ ಸಹ ಅದೇ ಹೆಸರನ್ನು ಪಡೆದಿರುತ್ತಾರೆ. ಆದ್ದರಿಂದ, ಹಿಂದಿನ ಕಲ್ಪದ ದೇವತೆಗಳಿಗೆ ಮೋಕ್ಷವಾದ ಮೇಲೆ ಪುನರಾವೃತ್ತಿ ಇಲ್ಲದಿದ್ದರೂ ಬಾಧಕವಿರುವುದಿಲ್ಲ. ಅಂದರೆ ಬ್ರಹ್ಮ-ರುದ್ರ-ಇಂದ್ರ ಮೊದಲಾದ ವ್ಯವಹಾರಗಳ ವಿರೋಧವು ಬರುವುದಿಲ್ಲ. ಈ ವಿಷಯದಲ್ಲಿ 'ಯಥಾಪೂರ್ವಮಕಲ್ಪಯತ್' ಎಂಬ ಶ್ರುತಿಯೇ ಆಧಾರವಾಗಿದೆ.

ತತ್ತ್ವಪ್ರದೀಪ

ವೇದನಿತ್ಯತ್ವಹೇತುವಿನಿಂದ ದೇವಪ್ರವಾಹನಿತ್ಯತ್ವಸಾಧನೆ

तत्वप्रदीपः – अत एव नित्यत्वम् ।। अत एव शब्दस्य नित्यत्वहेतोरेव च देवप्रवाहनित्यत्वं सुसाधं भवति विनाऽपि हेत्वन्तरान्वेषणेन । यस्माद्धेतोः प्रामाण्यविरोध आशङ्क्यते । नह्यनित्यत्वे वाच्यस्य शब्दनित्यत्वं समञ्जसं स्यात् ।

'ಅತ ಏವ ನಿತ್ಯತ್ವಮ್' ಎಂಬ ಸೂತ್ರದ ವ್ಯಾಖ್ಯಾನ ಹೀಗಿದೆ - ಅತ ಏವ = ಶಬ್ದವು ನಿತ್ಯವಾಗಿರುವ ಕಾರಣದಿಂದಲೇ, ನಿತ್ಯತ್ವಮ್ = ದೇವಪ್ರವಾಹವು ನಿತ್ಯವೆಂದು ಸಾಧಿಸಿದಂತಾಗುತ್ತದೆ. ಇದಕ್ಕೆ ಮತ್ತೊಂದು ಹೇತುವಿನ ಅನ್ವೇಷಣೆ ಅನಗತ್ಯ.

ಯಾವ ಕಾರಣದಿಂದ ಪ್ರಾಮಾಣ್ಯವಿರೋಧವನ್ನು ಆಶಂಕಿಸಲಾಗುತ್ತದೋ, ಆ ಕಾರಣದಿಂದ ದೇವಪ್ರವಾಹನಿತ್ಯತ್ವವನ್ನು ಒಪ್ಪಬೇಕು. ಒಂದುವೇಳೆ ವಾಚ್ಯರಾದ ದೇವತೆಗಳು ಅನಿತ್ಯರಾದರೆ, ವಾಚಕವಾದ ಶಬ್ದವು ನಿತ್ಯವಾಗುವುದು ಸಮಂಜಸವಾಗುವುದಿಲ್ಲ.

ಪದವಿಗಳಲ್ಲಿರುವ ದೇವತೆಗಳು ನಿತ್ಯರಲ್ಲ

तत्वप्रदीपः – नच पदस्थानां देवादीनामेव नित्यत्वमाशङ्कनीयम् । अप्रलयप्रसङ्गात् । नच सर्गप्रलयाभावो वाच्यः । श्रुतिविरोधात् ।

ಆಯಾ ಪದವಿಗಳಲ್ಲಿರುವ ದೇವತೆಗಳೇ ನಿತ್ಯರಾಗಿದ್ದಾರೆಂದು ಆಶಂಕಿಸಬಾರದು. ಹಾಗಾದಲ್ಲಿ ಪ್ರಳಯವೇ ಇಲ್ಲವೆಂದಾಗುತ್ತದೆ. ಸೃಷ್ಟಿ ಪ್ರಳಯಗಳೇ ಇಲ್ಲವೆಂದು ಹೇಳಬಾರದು. ಸೃಷ್ಟಿ, ಪ್ರಳಯಗಳನ್ನು ಪ್ರತಿಪಾದನೆ ಮಾಡುವ ಶ್ರುತಿಗೆ ವಿರೋಧ ಬರುತ್ತದೆ.

ಶ್ರುತಿಗಳು ಕೇವಲ ವಿಧಿಪರವೆಂಬ ಮೀಮಾಂಸಕಮತ ವಿಮರ್ಶೆ

तत्वप्रदीपः – अथापि स्यात्, नालं श्रुतिः सृष्ट्यादिकं वेदादिकं च प्रमापयितुं, विधिपरत्वादिति । मा भूत्तर्ह्यग्निहोत्रं जुहोतीत्यादिवाक्यानामग्निहोत्रादिसिद्धार्थवाचकत्वम् । ततश्चाग्निहोत्रहोमादौ प्रमाणाभावाद्वैदिकक्रियालोपः प्रसज्येत ।

ಮೀಮಾಂಸಕರು - 'ಸೃಷ್ಟಿಕಾಲದಲ್ಲಿ ವೇದಗಳಿವೆ', 'ಪ್ರಳಯಕಾಲದಲ್ಲೂ ವೇದಗಳಿವೆ' ಹೀಗೆ ಪ್ರಮಾತೃಕಜ್ಞಾನವನ್ನು ಸೃಷ್ಟಿಸಲು ಶ್ರುತಿಯು ಸಮರ್ಥವಲ್ಲ. ಏಕೆಂದರೆ ಶ್ರುತಿಯು ಕೇವಲ ವಿಧಿಪರವಾಗಿದೆ. ಸೃಷ್ಟ್ಯಾದಿಗಳು ವಿಧಿರೂಪವಲ್ಲದ ಕಾರಣ ಶ್ರುತಿಯು ಇವುಗಳನ್ನು ಸಮರ್ಥನೆ ಮಾಡುವುದಿಲ್ಲ.

ತತ್ವವಾದಿಗಳು - ಶ್ರುತಿಯು ಕೇವಲ ವಿದ್ಯರ್ಥಕದಲ್ಲಿಯೇ ಪ್ರಾಮಾಣ್ಯವನ್ನು ಹೊಂದಿದೆ ಎಂದು ಮೀಮಾಂಸಕರಾದ ನೀವು ಹೇಳುತ್ತಿರುವಿರಿ. ಹಾಗಾದರೆ 'ಅಗ್ನಿಹೋತ್ರಂ ಜುಹೋತಿ' ಇದೇ ಮೊದಲಾದ ವಾಕ್ಯಗಳಿಂದ ಅಗ್ನಿಹೋತ್ರಾದಿಗಳ ಸ್ವರೂಪವೇ ಸಿದ್ಧವಾಗದೇ ಇರಬೇಕಾದೀತು. ಆಗ ಅಗ್ನಿಹೋತ್ರಾದಿ ಹೋಮದಲ್ಲಿ ಪ್ರಮಾಣವೇ ಇಲ್ಲದಂತಾಯಿದ್ದಾರಿಂದ ವೈದಿಕಕ್ರಿಯೆಯೇ ಲೋಪವಾಗುವ ಪರಿಸ್ಥಿತಿ ಬರುತ್ತದೆ.

ಸಿದ್ಧದಲ್ಲೇ ಶ್ರುತಿಗಳಿಗೆ ತಾತ್ಪರ್ಯವೆಂದೇಕೆ ಹೇಳಬಾರದು ?

तत्वप्रदीपः – नाग्निहोत्रादिसिद्धे तात्पर्यं कार्य एवेति वदतस्तद्विपरीतमेवोत्तरं स्यात् । तथा सति क्रियालोपः स्यादिति चेन्नैवम् । उच्छ्वासादिक्रियाकरणात् ।

ಮೀಮಾಂಸಕರು - ಅಗ್ನಿಹೋತ್ರಾದಿ ಸಿದ್ಧ ವಿಷಯದಲ್ಲಿ ಶ್ರುತಿಗೆ ತಾತ್ಪರ್ಯ ಇರುವುದೇ ಇಲ್ಲ. ಅಗ್ನಿಹೋತ್ರಾದಿ ಕಾರ್ಯದಲ್ಲಿಯೇ ಶ್ರುತಿಗೆ ತಾತ್ಪರ್ಯ ಇರುತ್ತದೆ.

ತತ್ವವಾದಿಗಳು - ವಿಪರೀತವಾಗಿ ನಾವು ಹೇಳುತ್ತೇವೆ. ಶ್ರುತಿಗೆ ಸಿದ್ಧದಲ್ಲಿಯೇ ತಾತ್ಪರ್ಯ ಕಾರ್ಯದಲ್ಲಲ್ಲ ಎಂದು.

ಮೀಮಾಂಸಕರು - ಹಾಗಾದರೆ ಎಲ್ಲಾ ಕ್ರಿಯೆಗಳು ಲೋಪವಾಗಲಿ ?

ತತ್ವವಾದಿಗಳು - ಇದು ತಪ್ಪು. ಶ್ವಾಸೋಛ್ವಾಸ, ಗಮನಾಗಮನ ಮೊದಲಾದ ಕ್ರಿಯೆಗಳನ್ನು ನಾವು ಮಾಡುತ್ತಿದ್ದೇವೆ. ಇವುಗಳ ಲೋಪ ಹೇಗೆ ತಾನೆ ಬರುತ್ತದೆ ?

ಚಂಡಮತಿಗಳು ಚಂಡಾಲನಿಗೆ ಯಜ್ಞಾಧಿಕಾರ ನೀಡಿದರು

तत्वप्रदीपः – विहितक्रियालोपः स्यादित्युक्तमिति चेत्, कस्य विहिता क्रिया? ब्राह्मणो यजेतेत्यादौ विहिता हि ब्राह्मणादिवर्णाश्रमिणामिति चेन्न । यजनविधिमात्रपरस्य वाक्यस्य ब्राह्मणादावमानत्वात् । अतश्चायं चण्डमतिश्च ण्डालादेर्यज्ञाधिकारमप्यनुजज्ञिवान् ।

ಮೀಮಾಂಸಕರು - ಕ್ರಿಯೆ ಲೋಪವಾಗಲಿ ಎಂದರೆ ವಿಹಿತವಾದ ಕ್ರಿಯೆಯು ಲೋಪವಾಗಲಿ ಎಂಬುದು ಆಕ್ಷೇಪದ ಅಭಿಪ್ರಾಯ.

ತತ್ವವಾದಿಗಳು - ಕ್ರಿಯಾವಿಧಾನವು ಯಾರನ್ನು ಕುರಿತು ? ಎಂಬ ಪ್ರಶ್ನೆಗೆ ನೀವು ಉತ್ತರಿಸಬೇಕು.

ಮೀಮಾಂಸಕರು - 'ಬ್ರಾಹ್ಮಣೋ ಯಜೇತ' ಇತ್ಯಾದಿ ಶ್ರುತಿಗಳಲ್ಲಿ ಬ್ರಾಹ್ಮಣ ಮೊದಲಾದ ವರ್ಣಾಶ್ರಮವುಳ್ಳ ದ್ವಿಜರಿಗೆ ಮಾತ್ರ ವಿಹಿತಕ್ರಿಯೆಯ ವಿಧಾನವೆಂದು ಉತ್ತರಿಸುತ್ತೇವೆ.

ತತ್ವವಾದಿಗಳು - ಯಜನವಿಧಿವಾಕ್ಯಗಳು ಯಜ್ಞದ ವಿಧಿಯನ್ನಷ್ಟೇ ವಿಧಿ ಮಾಡುತ್ತಿದೆ. ಬ್ರಾಹ್ಮಣಾದಿಗಳೇ ಯಜ್ಞ ಮಾಡಬೇಕೆಂದೇನೂ ಹೇಳುತ್ತಿಲ್ಲ. ಆದ್ದರಿಂದ ಬ್ರಾಹ್ಮಣಾದಿಗಳೇ

ಯಜನ ಮಾಡಬೇಕೆಂಬ ವಿಷಯದಲ್ಲಿ ಶ್ರುತಿಯು ಪ್ರಮಾಣವಾಗದು. ಆದ್ದರಿಂದ ಈ ದುಷ್ಟಬುದ್ಧಿಯುಳ್ಳ ಮೀಮಾಂಸಕನು (ಚಂಡಮತಿಃ = ದುಷ್ಟಬುದ್ಧಿಯುಳ್ಳವನು) ಚಂಡಾಲಾದಿಗಳಿಗೂ ಕೂಡ ಯಜ್ಞಾಧಿಕಾರವನ್ನು ನೀಡಿದನು.

ಮೀಮಾಂಸಕನ ವೇದತಾತ್ಪರ್ಯ ವಿಚಾರಾಕೌಶಲ್ಯದ ಪರಿಪಾಕ

तत्वप्रदीपः – नचाग्निहोत्रमेव सायामादावेव हुतवह एव तत्तन्मन्त्रेणैवेत्थमेव होतव्यमिति नियमः । कस्यचित्कदाचित्कुहचिद्यथाकथञ्चित्केनचित्करणस्य यज्ञत्वं स्यात् । अहो यथोद्गतस्य कर्मतत्वमीमांसापरिखिन्नमनसो वेदतात्पर्यविचारणाकौशलपरिपाकः । उक्तं च ''यत्किञ्चित्करणस्यापि यज्ञतैवान्यथा भवेत्'' इति भगवतैवानुभाष्ये ।।

ಮೀಮಾಂಸಕರು - 'ಅಗ್ನಿಹೋತ್ರವನ್ನು ಮಾಡಲೇಬೇಕು', 'ಸಾಯಂಕಾಲವೇ ಮಾಡಬೇಕು' 'ಪ್ರಾತಃಕಾಲದಲ್ಲೇ ಮಾಡಬೇಕು' 'ಇಂಥ ಮಂತ್ರಗಳಿಂದ ಮಾಡಬೇಕು', 'ಹೀಗೆ ಮಾಡಬೇಕು' ಎಂಬ ನಿಯಮವನ್ನೇಕೆ ಒಪ್ಪಬೇಕು ? ನಾವು ಆ ನಿಯಮವನ್ನು ಒಪ್ಪುವುದಿಲ್ಲ.

ತತ್ವವಾದಿಗಳು - ಹಾಗಾದರೆ ಯಾರು ಬೇಕಾದರೂ ಯಜ್ಞ ಮಾಡಬಹುದೆಂದಾಯಿತು. ಕಾಲನಿಯಮವಿಲ್ಲದೆ ಯಾವಾಗ ಬೇಕಾದರೂ ಮಾಡಬಹುದೆಂದಾಯಿತು. ಎಲ್ಲಿ ಬೇಕಾದರೂ, ಹೇಗೆ ಬೇಕಾದರೂ, ಯಾರಿಂದ ಬೇಕಾದರೂ ಯಜ್ಞ ಮಾಡಿಸಬಹುದು ಎಂದಂತಾಯಿತು. ಏನಾಶ್ಚರ್ಯ ! ಕರ್ಮತತ್ವದ ಮೀಮಾಂಸೆಯಿಂದ ದುಃಖಿತನಾದ ಮನಸ್ಸುಳ್ಳ ಮೀಮಾಂಸಕನ ವೇದತಾತ್ಪರ್ಯ ವಿಚಾರದ ಅಕೌಶಲ್ಯದ ಪರಿಪಾಕ ಎಷ್ಟು ಆಶ್ಚರ್ಯಕರ !

ಈ ಎಲ್ಲಾ ದೋಷವನ್ನು ಅನುವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರು 'ಯತ್ಕಿಂಚಿತ್ಕರಣಸ್ಯಾಪಿ ಯಜ್ಞತ್ವೈವಾನ್ಯಥಾ ಭವೇತ್' 'ಸಿದ್ಧಬೋಧಕತ್ವವನ್ನು ಒಪ್ಪದಿದ್ದರೆ ಮಾಡಿದ ಕಾರ್ಯಗಳೆಲ್ಲವೂ ಯಾಗವೆಂದಾಗಬೇಕಾದೀತು' ಎಂದು ಹೇಳಿದ್ದಾರೆ.

ಎದೆನೋವಿನಿಂದ ಕೆಮ್ಮುತ್ತಿರುವ ಮೀಮಾಂಸಕನ ಪರಿಸ್ಥಿತಿ ಶೋಚನಿಯ

तत्वप्रदीपः – अथ मतं न यजिविधिमात्रपरं वाक्यं ब्रूमः, किन्तु द्रव्यकालकर्तृकरणादिकारकविशिष्टविधिपरं, अतो नोक्तदोष इति । तदपि हन्त

तापसस्य हृदयतापातिरेकादुत्कासितमिव । सिद्धान्विते लिङादिपदशक्ति-स्वीकारापत्तेः ।

ಮೀಮಾಂಸಕರು - ವಾಕ್ಯವು ಕೇವಲ ಯಾಗವಿಧಿಯನ್ನು ಮಾಡುವ ತಾತ್ಪರ್ಯವನ್ನಷ್ಟೇ ಹೊಂದಿಲ್ಲ. ದ್ರವ್ಯ, ಕಾಲ, ಕರ್ತೃ, ಕರಣ ಮೊದಲಾದ ಕಾರಕಗಳಿಂದ ವಿಶಿಷ್ಟವಾದ ಯಾಗವಿದ್ಯೆಯನ್ನು ಮಾಡುವುದರಲ್ಲಿ ತಾತ್ಪರ್ಯವನ್ನು ಹೊಂದಿದೆ. ಆದ್ದರಿಂದ ಯಾರು ಬೇಕಾದರೂ, ಎಲ್ಲಿ ಬೇಕಾದರೂ ಯಾಗ ಮಾಡಬೇಕಾದೀತು ಇತ್ಯಾದಿ ದೋಷಗಳಿಗೆ ಅವಕಾಶವಿಲ್ಲ.

ತತ್ವವಾದಿಗಳು - ಬಹಳ ಕಷ್ಟ. ಮೀಮಾಂಸಕನ ಶೋಚನೀಯ ಪರಿಸ್ಥಿತಿ ನೋಡಲಾಗದು. ಹೃದಯತಾಪದ ಅತಿರೇಕದಿಂದ ಕಫವನ್ನು ಕಾರುವಂತೆ ಇವನ ಪರಿಸ್ಥಿತಿಯೇ ಆಗಿದೆ. ಏಕೆಂದರೆ ಕಾರ್ಯದಲ್ಲಿಯೇ ತಾತ್ಪರ್ಯವೆಂದು ಹೇಳಲು ಹೊರಟ ಮೀಮಾಂಸಕನು ಈಗ ಸಿದ್ಧಾನ್ವಿತದಲ್ಲಿ ಲಿಙಾದಿ ಪದಗಳಿಗೆ ಶಕ್ತಿಯನ್ನು ಸ್ವೀಕಾರ ಮಾಡಿದಂತಾಯಿತು. ಆದ್ದರಿಂದ ಮೀಮಾಂಸಕರಿಗೆ ಅಪಸಿದ್ಧಾಂತದೋಷ ಬರುತ್ತದೆ.

ಕಠಿಣಪದಾರ್ಥ - ತಾಪಸಸ್ಯ = ಶೋಚನೀಯ ಪರಿಸ್ಥಿತಿಗೆ ಒಳಗಾದ, ಹೃದಯತಾಪಾತಿರೇಕಾತ್ = ಹೃದಯಬೇನೆಯ ಅತಿರೇಕದಿಂದ ಬಳಲಿ, ಉತ್ಕಾಸಿತಮಿವ = ಕಫದಿಂದ ಕೆಮ್ಮುವನಂತೆ.

ಸ್ವರ್ಗವೆಂಬ ಸಿದ್ಧಾರ್ಥವೇ ಮುಖ್ಯತಾತ್ಪರ್ಯವೆಂದು ಒಪ್ಪಿರಿ

तत्त्वप्रदीपः – ननु यद्यपि विध्यर्थतया सिद्धवस्तुकथनं न निषिद्ध्यते । कार्य एव तात्पर्यं पर्यवसितम् । अतो माऽपसिद्धान्त इति चेन्मैवम् । स्वर्गाद्यनुभावार्थत्वात्क्रियाविधेः सिद्धपरत्वं क्रियावाचिनामपि किं न स्यात् ।

ಮೀಮಾಂಸಕರು - ವಿಧಿಗೋಸ್ಕರ ಸಿದ್ಧವಸ್ತುವನ್ನು ಪ್ರತಿಪಾದನೆ ಮಾಡುವುದನ್ನು ನಾವು ನಿಷೇಧ ಮಾಡಿಯೇ ಇಲ್ಲ. (ವಿದ್ಯರ್ಥತಯಾ = ವಿಧಿಯ ಶೇಷವಾಗಿ) ವೇದಗಳಿಗೆ ಕಾರ್ಯದಲ್ಲಿಯೇ ಮುಖ್ಯತಾತ್ಪರ್ಯ. ಆ ಕಾರ್ಯದ ಅಂಗಭೂತವಾಗಿ ಸಿದ್ಧವಸ್ತುವನ್ನೂ ಕೂಡ ಪ್ರತಿಪಾದನೆ ಮಾಡುತ್ತವೆ ಎಂದು ಹೇಳುತ್ತೇವೆ. ಆದ್ದರಿಂದ ನಮಗೆ ಅಪಸಿದ್ಧಾಂತದೋಷವನ್ನು ಹೇಗೆ ಹೇಳುವಿರಿ ?

ತತ್ವವಾದಿಗಳು - ಇದು ತಪ್ಪು. ಹಾಗಾದರೆ ಸಕಲ ಕ್ರಿಯೆಗಳ ವಿಧಿಯೂ ಕೂಡ ಸ್ವರ್ಗಾದಿಸುಖಗಳಿಗೋಸ್ಕರವೇ ಇರುತ್ತವೆ. ಆಗ ಕ್ರಿಯಾವಾಚಿಯಾದ ವಾಕ್ಯಗಳಿಗೆ ಸಿದ್ಧಾರ್ಥದಲ್ಲಿಯೇ ಮುಖ್ಯತಾತ್ಪರ್ಯವೆಂದೇಕೆ ಹೇಳಬಾರದು ?

ವಿವರಣೆ - ಮೀಮಾಂಸಕರು ಕಾರ್ಯದಲ್ಲಿಯೇ ಮುಖ್ಯತಾತ್ಪರ್ಯ, ಅದಕ್ಕೆ ಅಂಗಭೂತವಾಗಿ ಸಿದ್ಧದಲ್ಲಿ ತಾತ್ಪರ್ಯವನ್ನು ಒಪ್ಪುತ್ತೇವೆಂದು ಉತ್ತರಿಸಿದರು. ಅದಕ್ಕೆ ಪಂಡಿತಾಚಾರ್ಯರು ಬಹಳ ಅಪೂರ್ವವಾದ ಸ್ವರಸವಾದ ದೋಷವನ್ನು ಹೇಳುತ್ತಿದ್ದಾರೆ. ಕಾರ್ಯವೂ ಕೂಡ ಮುಖ್ಯವೆಂದು ನಿಮಗೆ ಹೇಳಲು ಆಗುವುದಿಲ್ಲ. ಏಕೆಂದರೆ ಅಂತಿಮವಾದ ಪ್ರಯೋಜನ ಸ್ವರ್ಗವೇ ಆಗಿದೆ. ಆ ಸ್ವರ್ಗವೆಂಬ ಪ್ರಯೋಜನಕ್ಕಾಗಿ ಯಜ್ಞಾದಿ ಕಾರ್ಯಗಳು ನಡೆಯುತ್ತಿವೆ. ಆದ್ದರಿಂದ ವೇದದ ಮುಖ್ಯತಾತ್ಪರ್ಯ ಸ್ವರ್ಗವೆಂಬ ಸಿದ್ಧವಿಷಯದಲ್ಲೇ ನೀವು ಹೇಳಬೇಕು. ಅವಾಂತರ ಪ್ರಯೋಜನವಾದ ಯಜ್ಞಾದಿ ಕ್ರಿಯೆಗಳೇ ಮುಖ್ಯತಾತ್ಪರ್ಯವೆಂದು ಹೇಳಲು ಬರುವುದಿಲ್ಲ. ಆದ್ದರಿಂದ ಮೀಮಾಂಸಕರಾದ ನೀವು ಕಾರ್ಯದಲ್ಲೇ ಮುಖ್ಯತಾತ್ಪರ್ಯ, ಸಿದ್ಧಾರ್ಥದಲ್ಲಿ ಅಲ್ಲವೆಂದು ಹೇಳಿದರೆ, ನಾವು ಸಿದ್ಧಾರ್ಥದಲ್ಲೇ ಮುಖ್ಯತಾತ್ಪರ್ಯ, ಕಾರ್ಯದಲ್ಲಿ ಅಲ್ಲವೆಂದು ಉತ್ತರಿಸುತ್ತೇವೆ.

ಅಥವಾ ಪ್ರತ್ಯವಾಯಪರಿಹಾರವೇ ಅಂತಿಮತಾತ್ಪರ್ಯವೆಂದು ಒಪ್ಪಿರಿ

तत्वप्रदीपः – प्रयोजनानुद्देशेनाधिकारिणः कर्तव्यतामात्रविधि-परत्वाभ्युपगमे वेदस्य, तदादिष्टमकुर्वतः किं स्यात् । प्रत्यवायः स्यादिति चेत्, तत्परिजिहीर्षवस्तर्हि विहितमनुतिष्ठन्तीति तत्परिहारार्थता विधेरभ्युपगता।

ಮೀಮಾಂಸಕರು - 'ಅಧಿಕಾರಿಯು ಪ್ರಯೋಜನವನ್ನು ಅಪೇಕ್ಷೆ ಪಡದೇ ಕರ್ತವ್ಯದಲ್ಲಿ ತೊಡಗಬೇಕು' ಎಂದು ವೇದಗಳು ವಿಧಿಸುತ್ತಿವೆ. ಆದ್ದರಿಂದ ಸ್ವರ್ಗವೆಂಬ ಸಿದ್ಧಾರ್ಥದಲ್ಲಿ ವೇದಕ್ಕೆ ತಾತ್ಪರ್ಯ ಹೇಳಲಾಗದು.

ತತ್ವವಾದಿಗಳು - ಹಾಗಾದರೆ ವೇದದ ಆದೇಶವನ್ನು ಪಾಲಿಸದವನಿಗೆ ಏನಾಗುತ್ತದೆ ? (ತದಾದಿಷ್ಟಮ್ = ವೇದದಲ್ಲಿ ಆದೇಶಿಸಿದ್ದನ್ನು, ಅಪೂರ್ವತಃ = ಆಚರಣೆ ಮಾಡದವನಿಗೆ)

ಮೀಮಾಂಸಕರು - ಪ್ರತ್ಯವಾಯ ಬರುತ್ತದೆ.

ತತ್ವವಾದಿಗಳು - ಹಾಗಾದರೆ ಪ್ರತ್ಯವಾಯವನ್ನು ಪರಿಹರಿಸಿಕೊಳುವ ಬಯಕೆಯುಳ್ಳವನು ಏಹಿತವಾದದ್ದನ್ನು ಅನುಷ್ಠಾನ ಮಾಡುತ್ತಾನೆ ಎಂದು ಹೇಳಿದಂತಾಯಿತು. ಆಗ ವಿಧಿವಾಕ್ಯಕ್ಕೆ ಪ್ರತ್ಯವಾಯದ ಪರಿಹಾರದಲ್ಲಿ ತಾತ್ಪರ್ಯವೆಂದು ನೀವು ಒಪ್ಪಿದಿರಿ.

ವಿವರಣೆ - ಮೀಮಾಂಸಕರು ಸ್ವರ್ಗದಲ್ಲಿ ಮುಖ್ಯತಾತ್ಪರ್ಯವಲ್ಲವೆಂದು ಹೇಳಲು ಯಾಗಾದಿ ಕರ್ತವ್ಯತ್ವದಲ್ಲಷ್ಟೇ ಮುಖ್ಯತಾತ್ಪರ್ಯವೆಂದು ಒಪ್ಪಿದರು. ಆಗಲೂ ಕೂಡ ವೇದದ ಆದೇಶವನ್ನು ಪಾಲಿಸದೇ ಯಜ್ಞಾದಿಪ್ರಕ್ರಿಯೆಗಳಲ್ಲಿ ತೊಡಗದಿದ್ದರೆ ಪ್ರತ್ಯವಾಯ ಬರುತ್ತದೆ ಎಂದು ಮೀಮಾಂಸಕರು ಹೇಳಲೇಬೇಕು. ಆಗ ಯಾಗವೇ ಅಂತಿಮಪ್ರಯೋಜನವೆಂಬ ಮಾತು ಭಗ್ನವಾಯಿತು. ಯಾಗ ಮಾಡುವುದು ಪ್ರತ್ಯವಾಯದ ಪರಿಹಾರಕ್ಕಾಗಿ ಎಂದು ಹೇಳಿದ್ದರಿಂದ ಪ್ರತ್ಯವಾಯ ಪರಿಹಾರವೇ ಅಂತಿಮತಾತ್ಪರ್ಯವೆಂದು ಮೀಮಾಂಸಕರು ಒಪ್ಪಿದಂತಾಯಿತು.

ಅದರಂತೆ ದೇವತಾಸ್ವರೂಪವನ್ನೂ ಕೂಡ ಒಪ್ಪಿರಿ

तत्वप्रदीपः – अतः सिद्धपरताऽपि पदानां बलादाश्रयणीया । तस्माच्छ्रुतिसिद्धं देवतादिकमपि नापलपनीयम् ।।

ಆದ್ದರಿಂದ ಪದಗಳಿಗೆ ಸಿದ್ಧಪರತ್ವವನ್ನೂ ಕೂಡ ನೀವು ಅಂಗೀಕಾರ ಮಾಡಲೇ ಬೇಕು. ಹೀಗೆ ಒಪ್ಪಿದಾಗ ಶ್ರುತಿಸಿದ್ಧವಾದ ದೇವತಾದಿಗಳ ಸ್ವರೂಪವನ್ನೂ ಕೂಡ ನೀವು ಅಪಲಾಪ ಮಾಡಬಾರದು.

ವಿವರಣೆ - ಮೀಮಾಂಸಕರು ದೇವತಾಸ್ವರೂಪ, ಸೃಷ್ಟಿಸ್ವರೂಪ, ವೇದಸ್ವರೂಪ ಮೊದಲಾದವುಗಳನ್ನು ಅಪಲಾಪ ಮಾಡುತ್ತಾರೆ. ವೇದಗಳ ತಾತ್ಪರ್ಯ ಕಾರ್ಯದಲ್ಲೇ ಇರುವುದರಿಂದ ದೇವತಾದಿ ಸ್ವರೂಪವನ್ನು ವೇದವು ಪ್ರತಿಪಾದನೆ ಮಾಡುವುದಿಲ್ಲವೆಂಬುದು ಅವರ ಧೋರಣೆ. ಆದರೆ ಅಂತಿಮವಾಗಿ ಸ್ವರ್ಗ ಅಥವಾ ಪ್ರತ್ಯವಾಯ ಪರಿಹಾರ ಎಂಬ ಸಿದ್ಧಬೋಧಕತ್ವವನ್ನು ಒಪ್ಪುವುದು ಮೀಮಾಂಸಕರಿಗೆ ಅನಿವಾರ್ಯವಾದ್ದರಿಂದ ಪ್ರಕೃತ ದೇವತಾಸ್ವರೂಪ, ಸೃಷ್ಟಿಸ್ವರೂಪ ಮೊದಲಾದ ಸಿದ್ಧಬೋಧಕತ್ವವನ್ನೂ ಒಪ್ಪಬೇಕು. ಇದು ಮೀಮಾಂಸರಿಕೆ ಅನಿವಾರ್ಯ.

ಮೀಮಾಂಸಕರಿಗೆ ಜೈಮಿನಿಸೂತ್ರ ವಿರೋಧ

तत्वप्रदीपः – ''आम्नायस्य क्रियार्थत्वादानर्थक्यमतदर्थानाम्'' इति

सूत्रविरोधश्च तत्पक्ष एव भवति । क्रियातिरिक्तस्य कस्यचित्कार्यस्य लिङाद्यर्थत्वाभ्युमगमात्।

ತತ್ವವಾದಿಗಳು - 'ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮತದರ್ಥಾನಾಮ್' 'ವೇದವು ಕ್ರಿಯೆಯಲ್ಲಿಯೇ ತಾತ್ಪರ್ಯವನ್ನು ಹೊಂದಿದೆ. ಕ್ರಿಯಾವಾಚಿಯಾಗದ ಅರ್ಥವಾದ ಮಂತ್ರ ಇತ್ಯಾದಿ ವಾಕ್ಯಗಳಿಗೆ ಮಂತ್ರಗಳು ವ್ಯರ್ಥ' ಎಂಬ ಸೂತ್ರದಿಂದ ಮೀಮಾಂಸಕರಿಗೆ ವಿರೋಧವು ಬರುತ್ತದೆ. ಏಕೆಂದರೆ ಕ್ರಿಯೆಗಿಂತ ಅತಿರಿಕ್ತವಾದ ಕಾರ್ಯವು ಲಿಙಾದ್ಯರ್ಥವೆಂದು ಮೀಮಾಂಸಕರು ಒಪ್ಪಿರುತ್ತಾರೆ.

ವಿವರಣೆ - 'ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮತದರ್ಥಾನಾಮ್' ಎಂಬ ಜೈಮಿನಿಸೂತ್ರವು ಕ್ರಿಯಾವಾಚಕವಿದ್ದರೆ ಮಾತ್ರ ಪ್ರಾಮಾಣ್ಯ ಒಪ್ಪಬೇಕು. ಕ್ರಿಯಾವಾಚಕವಿಲ್ಲದ ಮಂತ್ರಾದಿಭಾಗಗಳಿಗೆ ಪ್ರಾಮಾಣ್ಯ ಒಪ್ಪಬಾರದು ಎಂದು ಹೇಳುತ್ತಿದೆ. ಈ ಅರ್ಥವು ಮೀಮಾಂಸಕರ ಮತಪ್ರಕಾರ ತಿಳಿಯಬೇಕು. ನಮ್ಮ ಸಿದ್ಧಾಂತದಂತೆ ಈ ಸೂತ್ರಕ್ಕೆ ಈ ಅರ್ಥವಿಲ್ಲ. ಮೀಮಾಂಸಕರ ವ್ಯಾಖ್ಯಾನವನ್ನು ಅನುಸರಿಸಿಯೇ ಮೀಮಾಂಸಕರಿಗೆ ಹೇಳಲು ಈ ವಾಕ್ಯಸಂದರ್ಭ ಹೊರಟಿದೆ.

ಮೀಮಾಂಸಕರು ಕಾರ್ಯವನ್ನೇ ಅಪೂರ್ವವತ್ವವೆಂದು ಹೇಳುತ್ತಾರೆ. ಕ್ರಿಯೆ ಬೇರೆ, ಕಾರ್ಯ ಬೇರೆ. ಕ್ರಿಯೆಯಿಂದ ಹುಟ್ಟಿದ ಅಪೂರ್ವವು ಕಾರ್ಯವೆಂದು ಕರೆಸಿಕೊಳ್ಳುತ್ತದೆ. ಲಿಙ್‌ಲೋಟ್ ತವ್ಯಪ್ರತ್ಯಯಗಳಿಂದ ಕ್ರಿಯಾಜನ್ಯವಾದ ಕಾರ್ಯರೂಪವಾದ ಅಪೂರ್ವವು ಪ್ರತಿಪಾದ್ಯವಾಗುತ್ತದೆ ಹೊರತು, ಕ್ರಿಯೆಯು ಪ್ರತಿಪಾದ್ಯವಾಗುವುದಿಲ್ಲವೆಂಬುದು ಮೀಮಾಂಸಕರ ಅಭಿಪ್ರಾಯ. ಅದನ್ನು ಪ್ರಕೃತ ನಿರಾಕರಣೆ ಮಾಡುತ್ತಿದ್ದಾರೆಂದು ತಿಳಿಯಬೇಕು.

ಸ್ಥಾಯಿಯಾದ ಅಪೂರ್ವವತ್ವವನ್ನು ಒಪ್ಪುವುದು ಅನಿವಾರ್ಯವೇ ?

तत्वप्रदीपः – ननु ''स्वर्गकामो यजेत'' इत्यादिवाक्यप्रामाण्यार्थमेव क्रियातिरिक्तं किञ्चित्स्थायि कार्यं विध्यर्थत्वेनाभ्युपगन्तव्यम् । क्रियायाः क्षणविनाशित्वेन देहान्तरोपभोग्यस्वर्गादिफलदानायोगादिति ।

ಮೀಮಾಂಸಕರು - 'ಸ್ವರ್ಗಕಾಮೋ ಯಜೇತ' ಇತ್ಯಾದಿ ವಾಕ್ಯಗಳ ಪ್ರಾಮಾಣ್ಯಕ್ಕೋಸ್ಕರವೇ ಕ್ರಿಯೆಗಿಂತಲೂ ಅತಿರಿಕ್ತವಾದ ಸ್ಥಾಯಿಯಾದ ಕಾರ್ಯವನ್ನೇ ವಿಧಿಪ್ರತ್ಯಯಗಳ ಅರ್ಥವೆಂದು ಅಂಗೀಕಾರ ಮಾಡಬೇಕು. ಕ್ರಿಯೆಯು ಕ್ಷಣಿಕವಾದ್ದರಿಂದ ದೇಹಾಂತರದಲ್ಲಿ ಉಪಭೋಗ್ಯವಾದ ಸ್ವರ್ಗಾದಿಫಲವನ್ನು ಕೊಡಲು ಅಸಮರ್ಥವಾಗಿದೆ.

ವಿವರಣೆ - 'ಸ್ವರ್ಗಕಾಮೋ ಯಜೇತ' ಎಂಬ ವಾಕ್ಯವು ಸ್ವರ್ಗಕಾಮನೆಗೋಸ್ಕರ ಜ್ಯೋತಿಷ್ಟೋಮಯಾಗವನ್ನು ವಿಧಾನ ಮಾಡುತ್ತಿದೆ. 'ಯಜೇತ' ಎಂಬಲ್ಲಿರುವ ವಿಧಿಪ್ರಯತ್ಯವು ಕೇವಲ ಕ್ರಿಯೆಯನ್ನೇ ಪ್ರತಿಪಾದನೆ ಮಾಡುವುದಾದರೆ ಕ್ರಿಯೆಯು ಕ್ಷಣಿಕವಾದ್ದರಿಂದ ದೇಹಾಂತರದಲ್ಲಿ ಉಪಭೋಗಿಸುವ ಸ್ವರ್ಗಾದಿ ಫಲಗಳಿಗೆ ಕಾರಣವಾಗಲು ಸಾಧ್ಯವಿಲ್ಲ. ಈಗಿರುವ ಕ್ರಿಯೆಯು ದೇಹಾಂತರದಲ್ಲಿರುವ ಉಪಭೋಗಕ್ಕೆ ಸಾಧನವಾಗಲು ಹೇಗೆ ಸಮರ್ಥವಾಗುತ್ತದೆ ? ಆದ್ದರಿಂದ ಯಾಗಕ್ರಿಯೆಯಿಂದ ಸ್ಥಾಯಿಯಾದ ಅಪೂರ್ವತಾರೂಪವಾದ ಕಾರ್ಯವನ್ನು ಒಪ್ಪಲೇ ಬೇಕು. ಇದು ದೇಹಾಂತರದ ಉಪಭೋಗಕ್ಕೆ ಕಾರಣವಾಗುತ್ತದೆ.

ಅಪೂರ್ವತ್ವವಾಚಕವಾದ ಯಾವುದೇ ಪದಗಳಿಲ್ಲ

तत्वप्रदीपः – मैवम् । क्रियातिरिक्ते व्युत्पत्त्यसम्भवात् । न तावल्लोकतस्तत्र व्युत्पत्तिः । अलौकिकत्वात्तस्य । नापि जिह्मादाविव प्रसिद्धपदसमभिव्याहारात् । ज्योतिष्टोमादिवाक्येषु तद्वाचकपदाभावात् । क्रियामात्रवाचिनो हि धातवः । लिङादयस्तु कर्तव्यतामात्रनिष्ठाः । अतो नात्र कार्याभिधायि पदं पश्यामः ।

ತತ್ವವಾದಿಗಳು - ಮೀಮಾಂಸಕರ ಈ ಅಭಿಪ್ರಾಯ ತಪ್ಪು. ಕ್ರಿಯೆಗಿಂತ ಅತಿರಿಕ್ತವಾದ ಕಾರ್ಯತ್ವದಲ್ಲಿ ವಿಧಿಪ್ರತ್ಯಯಕ್ಕೆ ವ್ಯುತ್ಪತ್ತಿಯೇ ಕೂಡುವುದಿಲ್ಲ. ಲೋಕರೂಢಿಯಿಂದಲೂ ಈ ವ್ಯುತ್ಪತ್ತಿ ಅಸಾಧುವಾಗಿದೆ. ಏಕೆಂದರೆ ಅಪೂರ್ವವೆಂಬ ಶಬ್ದವೇ ಇದು ಅಲೌಕಿಕವೆಂದು ತಿಳಿಸುತ್ತಿದೆ.

सूत्रविरोधश्च तत्पक्ष एव भवति । क्रियातिरिक्तस्य कस्यचित्कार्यस्य लिङाद्यर्थत्वाभ्युमगमात्।

ತತ್ವವಾದಿಗಳು - 'ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮತದರ್ಥಾನಾಮ್' 'ವೇದವು ಕ್ರಿಯೆಯಲ್ಲಿಯೇ ತಾತ್ಪರ್ಯವನ್ನು ಹೊಂದಿದೆ. ಕ್ರಿಯಾವಾಚಿಯಾಗದ ಅರ್ಥವಾದ ಮಂತ್ರ ಇತ್ಯಾದಿ ವಾಕ್ಯಗಳಿಗೆ ಮಂತ್ರಗಳು ವ್ಯರ್ಥ' ಎಂಬ ಸೂತ್ರದಿಂದ ಮೀಮಾಂಸಕರಿಗೆ ವಿರೋಧವು ಬರುತ್ತದೆ. ಏಕೆಂದರೆ ಕ್ರಿಯೆಗಿಂತ ಅತಿರಿಕ್ತವಾದ ಕಾರ್ಯವು ಲಿಙಾದ್ಯರ್ಥವೆಂದು ಮೀಮಾಂಸಕರು ಒಪ್ಪಿರುತ್ತಾರೆ.

ವಿವರಣೆ - 'ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮತದರ್ಥಾನಾಮ್' ಎಂಬ ಜೈಮಿನಿಸೂತ್ರವು ಕ್ರಿಯಾವಾಚಕವಿದ್ದರೆ ಮಾತ್ರ ಪ್ರಾಮಾಣ್ಯ ಒಪ್ಪಬೇಕು. ಕ್ರಿಯಾವಾಚಕವಿಲ್ಲದ ಮಂತ್ರಾದಿಭಾಗಗಳಿಗೆ ಪ್ರಾಮಾಣ್ಯ ಒಪ್ಪಬಾರದು ಎಂದು ಹೇಳುತ್ತಿದೆ. ಈ ಅರ್ಥವು ಮೀಮಾಂಸಕರ ಮತಪ್ರಕಾರ ತಿಳಿಯಬೇಕು. ನಮ್ಮ ಸಿದ್ಧಾಂತದಂತೆ ಈ ಸೂತ್ರಕ್ಕೆ ಈ ಅರ್ಥವಿಲ್ಲ. ಮೀಮಾಂಸಕರ ವ್ಯಾಖ್ಯಾನವನ್ನು ಅನುಸರಿಸಿಯೇ ಮೀಮಾಂಸಕರಿಗೆ ಹೇಳಲು ಈ ವಾಕ್ಯಸಂದರ್ಭ ಹೊರಟಿದೆ.

ಮೀಮಾಂಸಕರು ಕಾರ್ಯವನ್ನೇ ಅಪೂರ್ವವತ್ವವೆಂದು ಹೇಳುತ್ತಾರೆ. ಕ್ರಿಯೆ ಬೇರೆ, ಕಾರ್ಯ ಬೇರೆ. ಕ್ರಿಯೆಯಿಂದ ಹುಟ್ಟಿದ ಅಪೂರ್ವವು ಕಾರ್ಯವೆಂದು ಕರೆಸಿಕೊಳ್ಳುತ್ತದೆ. ಲಿಙ್‌ಲೋಟ್ ತವ್ಯಪ್ರತ್ಯಯಗಳಿಂದ ಕ್ರಿಯಾಜನ್ಯವಾದ ಕಾರ್ಯರೂಪವಾದ ಅಪೂರ್ವವು ಪ್ರತಿಪಾದ್ಯವಾಗುತ್ತದೆ ಹೊರತು, ಕ್ರಿಯೆಯು ಪ್ರತಿಪಾದ್ಯವಾಗುವುದಿಲ್ಲವೆಂಬುದು ಮೀಮಾಂಸಕರ ಅಭಿಪ್ರಾಯ. ಅದನ್ನು ಪ್ರಕೃತ ನಿರಾಕರಣೆ ಮಾಡುತ್ತಿದ್ದಾರೆಂದು ತಿಳಿಯಬೇಕು.

ಸ್ಥಾಯಿಯಾದ ಅಪೂರ್ವವತ್ವವನ್ನು ಒಪ್ಪುವುದು ಅನಿವಾರ್ಯವೇ ?

तत्वप्रदीपः – ननु ''स्वर्गकामो यजेत'' इत्यादिवाक्यप्रामाण्यार्थमेव क्रियातिरिक्तं किञ्चित्स्थायि कार्यं विध्यर्थत्वेनाभ्युपगन्तव्यम् । क्रियायाः क्षणविनाशित्वेन देहान्तरोपभोग्यस्वर्गादिफलदानायोगादिति ।

ಮೀಮಾಂಸಕರು - 'ಸ್ವರ್ಗಕಾಮೋ ಯಜೇತ' ಇತ್ಯಾದಿ ವಾಕ್ಯಗಳ ಪ್ರಾಮಾಣ್ಯಕ್ಕೋಸ್ಕರವೇ ಕ್ರಿಯೆಗಿಂತಲೂ ಅತಿರಿಕ್ತವಾದ ಸ್ಥಾಯಿಯಾದ ಕಾರ್ಯವನ್ನೇ ವಿಧಿಪ್ರತ್ಯಯಗಳ ಅರ್ಥವೆಂದು ಅಂಗೀಕಾರ ಮಾಡಬೇಕು. ಕ್ರಿಯೆಯು ಕ್ಷಣಿಕವಾದ್ದರಿಂದ ದೇಹಾಂತರದಲ್ಲಿ ಉಪಭೋಗ್ಯವಾದ ಸ್ವರ್ಗಾದಿಫಲವನ್ನು ಕೊಡಲು ಅಸಮರ್ಥವಾಗಿದೆ.

ವಿವರಣೆ - 'ಸ್ವರ್ಗಕಾಮೋ ಯಜೇತ' ಎಂಬ ವಾಕ್ಯವು ಸ್ವರ್ಗಕಾಮನೆಗೋಸ್ಕರ ಜ್ಯೋತಿಷ್ಟೋಮಯಾಗವನ್ನು ವಿಧಾನ ಮಾಡುತ್ತಿದೆ. 'ಯಜೇತ' ಎಂಬಲ್ಲಿರುವ ವಿಧಿಪ್ರಯತ್ಯವು ಕೇವಲ ಕ್ರಿಯೆಯನ್ನೇ ಪ್ರತಿಪಾದನೆ ಮಾಡುವುದಾದರೆ ಕ್ರಿಯೆಯು ಕ್ಷಣಿಕವಾದ್ದರಿಂದ ದೇಹಾಂತರದಲ್ಲಿ ಉಪಭೋಗಿಸುವ ಸ್ವರ್ಗಾದಿ ಫಲಗಳಿಗೆ ಕಾರಣವಾಗಲು ಸಾಧ್ಯವಿಲ್ಲ. ಈಗಿರುವ ಕ್ರಿಯೆಯು ದೇಹಾಂತರದಲ್ಲಿರುವ ಉಪಭೋಗಕ್ಕೆ ಸಾಧನವಾಗಲು ಹೇಗೆ ಸಮರ್ಥವಾಗುತ್ತದೆ ? ಆದ್ದರಿಂದ ಯಾಗಕ್ರಿಯೆಯಿಂದ ಸ್ಥಾಯಿಯಾದ ಅಪೂರ್ವತಾರೂಪವಾದ ಕಾರ್ಯವನ್ನು ಒಪ್ಪಲೇ ಬೇಕು. ಇದು ದೇಹಾಂತರದ ಉಪಭೋಗಕ್ಕೆ ಕಾರಣವಾಗುತ್ತದೆ.

ಅಪೂರ್ವತ್ವವಾಚಕವಾದ ಯಾವುದೇ ಪದಗಳಿಲ್ಲ

तत्वप्रदीपः – मैवम् । क्रियातिरिक्ते व्युत्पत्त्यसम्भवात् । न तावल्लोकतस्तत्र व्युत्पत्तिः । अलौकिकत्वात्तस्य । नापि जिह्मादाविव प्रसिद्धपदसमभिव्याहारात् । ज्योतिष्टोमादिवाक्येषु तद्वाचकपदाभावात् । क्रियामात्रवाचिनो हि धातवः । लिङादयस्तु कर्तव्यतामात्रनिष्ठाः । अतो नात्र कार्याभिधायि पदं पश्यामः ।

ತತ್ವವಾದಿಗಳು - ಮೀಮಾಂಸಕರ ಈ ಅಭಿಪ್ರಾಯ ತಪ್ಪು. ಕ್ರಿಯೆಗಿಂತ ಅತಿರಿಕ್ತವಾದ ಕಾರ್ಯತ್ವದಲ್ಲಿ ವಿಧಿಪ್ರತ್ಯಯಕ್ಕೆ ವ್ಯುತ್ಪತ್ತಿಯೇ ಕೂಡುವುದಿಲ್ಲ. ಲೋಕರೂಢಿಯಿಂದಲೂ ಈ ವ್ಯುತ್ಪತ್ತಿ ಅಸಾಧುವಾಗಿದೆ. ಏಕೆಂದರೆ ಅಪೂರ್ವವೆಂಬ ಶಬ್ದವೇ ಇದು ಅಲೌಕಿಕವೆಂದು ತಿಳಿಸುತ್ತಿದೆ.

ಮೀಮಾಂಸಕರು - ಜಿಹ್ವಾ ಶಬ್ದಕ್ಕೆ ದಹತಿ ಇತ್ಯಾದಿ ಶಬ್ದಗಳ ಸಮಭಿವ್ಯಹಾರವಿದ್ದಾಗ ಅಗ್ನಿಯ ಜ್ವಾಲೆ ಎಂಬರ್ಥವು ತಿಳಿಯುತ್ತದೆ. ಆಸ್ವಾದಯತಿ ಇತ್ಯಾದಿ ಶಬ್ದಗಳ ಸಮಭಿವ್ಯಹಾರವಿದ್ದಾಗ ನಾಲಿಗೆ ಎಂಬ ಅರ್ಥವು ತಿಳಿಯುತ್ತದೆ. ಅದರಂತೆ ಪ್ರಕೃತದಲ್ಲೂ ಪ್ರಸಿದ್ಧಪದ ಸಮಭಿವ್ಯಾಹಾರದಿಂದ ಅಲೌಕಿಕವಾದ ಅಪೂರ್ವತ್ವದಲ್ಲಿ ವಿಧಿಪ್ರತ್ಯಯಕ್ಕೆ ವ್ಯುತ್ಪತ್ತಿಯನ್ನು ಅಂಗೀಕರಿಸುತ್ತೇವೆ.

ತತ್ವವಾದಿಗಳು - 'ಜ್ಯೋತಿಷ್ಟೋಮಾದಿ' ವಾಕ್ಯಗಳಲ್ಲಿ ಅಂಥ ಪ್ರಸಿದ್ಧ ಪದ ಸಮಭಿವ್ಯಾಹಾರವೇ ಕಾಣಿಸುತ್ತಿಲ್ಲ. ಕಾರ್ಯತ್ವವಾಚಕವಾದ ಯಾವುದೇ ಪದಗಳಿಲ್ಲದ ಕಾರಣ ಪ್ರಸಿದ್ಧಪದಸಮಭಿವ್ಯಾಹಾರದಿಂದಲೂ ಕೂಡ ವಿಧಿಪ್ರತ್ಯಯಗಳಿಗೆ ಅಪೌರ್ವತ್ವವನ್ನು ಅರ್ಥವನ್ನಾಗಿ ಜಿಹ್ವಾದಿಗಳಂತೆ ಹೇಳಲು ಬರುವುದಿಲ್ಲ.

ಧಾತುಗಳು ಕ್ರಿಯೆಯನ್ನಷ್ಟೇ ಪ್ರತಿಪಾದನೆ ಮಾಡುತ್ತವೆ. ಲಿಙಾದಿಗಳು ಕರ್ತವ್ಯತ್ವವನ್ನು ಮಾತ್ರ ಪ್ರತಿಪಾದನೆ ಮಾಡುತ್ತವೆ. ಇವೆರಡಕ್ಕಿಂತ ಅತಿರಿಕ್ತವಾಗಿ ಕಾರ್ಯವನ್ನು ಪ್ರತಿಪಾದನೆ ಮಾಡುವ ಯಾವುದೇ ಪದವನ್ನು ಜ್ಯೋತಿಷ್ಟೋಮಾದಿ ವಾಕ್ಯಗಳಲ್ಲಿ ಕಾಣಲು ನಮಗೆ ಸಾಧ್ಯವಿಲ್ಲ.

ವೇದೈಕಗಮ್ಯವಾದ ಅಪೂರ್ವತ್ವವು ತರ್ಕಗಮ್ಯವಲ್ಲ

तत्वप्रदीपः – प्रामाण्यानुपपत्तितर्कावगम्यं कार्यं लिङाद्यर्थं ब्रूम इति चेत्तर्हि क्रियाकर्तव्यतायां प्रमाणाभावात् क्रियालोपः स्यात् । तर्कगम्यत्वे चापूर्वत्वं प्रत्यादिष्टं स्यात् । तथाच न वेदैकगम्यो नियोगः ।

ಮೀಮಾಂಸಕರು - 'ಯಜೇತ' ಇತ್ಯಾದಿ ಲಿಙಾದಿ ವಿಧಿವಾಕ್ಯಗಳಿಂದ ಕಾರ್ಯತ್ವವು ಬೋಧ್ಯವಾಗುತ್ತದೆಂದು ಒಪ್ಪದಿದ್ದರೆ ಸ್ವರ್ಗಕಾಮೋ ಯಜೇತ' ಇತ್ಯಾದಿ ವಾಕ್ಯಗಳಿಗೆ ಪ್ರಾಮಾಣ್ಯವೇ ಅನುಪಪನ್ನವಾಗುತ್ತದೆ. ಇಲ್ಲಿ ಪ್ರಾಮಾಣ್ಯಾನ್ಯಥಾನುಪಪತ್ತಿ ಎಂಬ ತರ್ಕದಿಂದ ಕಾರ್ಯತ್ವರೂಪವಾದ ಅಪೂರ್ವತಾವು ಲಿಙಾದ್ಯರ್ಥವೆಂದು ಹೇಳುತ್ತೇವೆ.

ತತ್ವವಾದಿಗಳು - ಹಾಗಾದಲ್ಲಿ ಲಿಙಾದಿ ಪ್ರತ್ಯಯಗಳು ಕಾರ್ಯತ್ವವನ್ನೇ ಬೋಧಿಸುತ್ತವೆ ಎಂದು ಹೇಳಿದಂತಾಯಿತು. ಕ್ರಿಯಾಕರ್ತವ್ಯತ್ವದಲ್ಲಿ ಪ್ರಮಾಣವೇ ಇಲ್ಲವೆಂದಾಯಿತು. ಆಗ ಕ್ರಿಯೆಯೇ ಲೋಪವಾಗುವ ಪರಿಸ್ಥಿತಿ ಬರುತ್ತದೆ.

ಮತ್ತು ಅಪೂರ್ವತ್ವವು 'ಪ್ರಾಮಾಣ್ಯಾನ್ಯಥಾನುಪಪತ್ತಿ' ಎಂಬ ತರ್ಕದಿಂದ ಗಮ್ಯವೆಂದು ಹೇಳುತ್ತಿದ್ದೀರಿ. ಹೀಗೆ ಹೇಳಿದರೆ ಅಪೂರ್ವತ್ವವನ್ನೇ ಬಿಟ್ಟಂತಾಗುತ್ತದೆ. ಏಕೆಂದರೆ ಅಪೂರ್ವತ್ವವು ವೇದೈಕಗಮ್ಯವೆಂಬುದು ಮೀಮಾಂಸಕರ ಮತ. ಈಗ ವೇದಕ್ಕಿಂತಲೂ ಅತಿರಿಕ್ತವಾದ ತರ್ಕವೆಂಬ ಪ್ರಮಾಣದಿಂದ ಗಮ್ಯವೆಂದು ಮೀಮಾಂಸಕರಾದ ನೀವು ಹೇಳುತ್ತಿರುವುದರಿಂದ ಅಪೂರ್ವತ್ವವನ್ನೇ ಬಿಟ್ಟಂತಾಗುತ್ತದೆ. (ಪ್ರತ್ಯಾದಿಷ್ಟಂ ಸ್ಯಾತ್ = ಕೈಬಿಟ್ಟಂತಾಗುತ್ತದೆ.)

ತರ್ಕವು ಸ್ಮೃತಿರೂಪವಲ್ಲ

तत्वप्रदीपः – नच वाच्यं तर्कस्य स्मृतिरूपत्वान्न प्रमाणान्तरतापत्तिरिति। अनुभूतविषयत्वादिपरोक्षरूपत्वाच्च स्मृतेः । तर्कस्य लैङ्गिकत्वात् । सापेक्षज्ञानत्वं स्मृतिलक्षणं लक्षणविदो वदन्ति । अतो भाविभूतप्रमाणान्तर-सापेक्षत्वान्न तर्कस्मृत्योर्भेद इति चेन्न । पूर्वानुभूतसंस्कारमात्रजं ज्ञानं स्मृतिरिति स्वाभ्युपगमविरोधात् । नच तर्कस्यानुमानादधिकं प्रमाणान्तरसापेक्षत्वं लक्ष्यते ।

ಮೀಮಾಂಸಕರು - ತರ್ಕವು ಪ್ರತ್ಯೇಕ ಪ್ರಮಾಣವೇ ಅಲ್ಲ. ಅದು ಸ್ಮೃತಿರೂಪವಾಗಿದೆ. ಆದ್ದರಿಂದ ಅಪೂರ್ವತ್ವಕ್ಕೆ ವೇದೈಕಗಮ್ಯತ್ವವು ಇದ್ದೇ ಇರುತ್ತದೆ.

ತತ್ವವಾದಿಗಳು - ಇದು ಸರಿಯಲ್ಲ. ಸ್ಮೃತಿಯು ಅನುಭೂತವಿಷಯಕವಾಗಿದೆ ಹಾಗೂ ಅಪರೋಕ್ಷರೂಪವಾಗಿದೆ. ತರ್ಕವು ಲೈಂಗಿಕವಾಗಿದೆ. ಆದ್ದರಿಂದ ಸ್ಮೃತಿಯೇ ಬೇರೆ ಪ್ರಮಾಣ, ತರ್ಕವೇ ಬೇರೆ ಪ್ರಮಾಣ. ಎರಡನ್ನು ಒಂದೇ ಎಂದು ಹೇಳಲು ಸಾಧ್ಯವಿಲ್ಲ. ಹಾಗಾಗಿ ಅಪೂರ್ವತಾವು ತರ್ಕಗಮ್ಯವೆಂದು ಹೇಳಿದರೆ ವೇದೈಕಗಮ್ಯತ್ವಕ್ಕೆ ಚ್ಯುತಿ ಬಂದೇ ಬರುತ್ತದೆ.

ಮೀಮಾಂಸಕರು - ಲಕ್ಷಣಜ್ಞಾನಿಗಳು ಸಾಪೇಕ್ಷಜ್ಞಾನತ್ವವನ್ನು ಸ್ಮೃತಿಲಕ್ಷಣವೆನ್ನುತ್ತಾರೆ. ತರ್ಕವೂ ಕೂಡ ಸ್ವತಃ ಪ್ರಮಾಣವಲ್ಲದ ಕಾರಣ ಹಿಂದಿನ ಅಥವಾ ಮುಂದಿನ ಮತ್ತೊಂದು ಪ್ರಮಾಣವನ್ನು ಅಪೇಕ್ಷಿಸಿಯೇ ಜ್ಞಾನಜನಕವಾಗುತ್ತದೆ. ಆದ್ದರಿಂದ ತರ್ಕದ ಲಕ್ಷಣವು ಸಾಪೇಕ್ಷಜ್ಞಾನತ್ವ ಇಲ್ಲಿ ಹೇಳಿದಂತಾಯಿತು. ಹೀಗೆ ಸ್ಮೃತಿ ಹಾಗೂ ತರ್ಕಗಳಿಗೆ ವೈಲಕ್ಷಣ್ಯವಿಲ್ಲವೆಂದು ಹೇಳುತ್ತೇವೆ.

ತತ್ವವಾದಿಗಳು - ಇದೂ ಕೂಡ ತಪ್ಪು. 'ಪೂರ್ವಾನುಭೂತಸಂಸ್ಕಾರಮಾತ್ರಜಂ ಜ್ಞಾನಂ ಸ್ಮೃತಿಃ' ಹಿಂದಿನ ಅನುಭವದಿಂದ ಹುಟ್ಟಿದ ಸಂಸ್ಕಾರದಿಂದಷ್ಟೇ ಹುಟ್ಟುವ ಜ್ಞಾನವನ್ನು ಸ್ಮೃತಿ ಎನ್ನಬೇಕು ಎಂಬುದಾಗಿ ಮೀಮಾಂಸಕರಾದ ನೀವೇ ಒಪ್ಪಿರುತ್ತೀರಿ. ಪ್ರಕೃತ ಸಾಪೇಕ್ಷಜ್ಞಾನತ್ವವನ್ನು ಸ್ಮೃತಿಲಕ್ಷಣವೆಂದು ಹೇಳಿದರೆ ಸ್ವಾಭ್ಯುಪಗಮವಿರೋಧವು ನಿಮಗೆ ಬರುತ್ತದೆ. ಅನುಮಾನವು ತನಗೆ ಉಪಜೀವ್ಯವಾದ ಪ್ರತ್ಯಕ್ಷ ಹಾಗೂ ಆಗಮವೆಂಬ ಪ್ರಮಾಣಾಂತರದ ಅಪೇಕ್ಷೆಯುಳ್ಳದ್ದಾಗಿದೆ. ತರ್ಕವೂ ಕೂಡ ಅದೇ ಪ್ರತ್ಯಕ್ಷ ಹಾಗೂ ಆಗಮಗಳ ಅಪೆಕ್ಷೆಯುಳ್ಳದ್ದಾಗಿದೆ. ಆದ್ದರಿಂದ ಅನುಮಾನಕ್ಕಿಂತ ಹೆಚ್ಚಿನ ಪ್ರಮಾಣದ ಅಪೇಕ್ಷೆ ತರ್ಕದಲ್ಲಿ ಇರುವುದಿಲ್ಲವೆಂದೇ ತರ್ಕದ ಲಕ್ಷಣವನ್ನು ಹೇಳುತ್ತಾರೆ.

ತರ್ಕಕ್ಕೆ ಪ್ರಮಾಣಾನುಗ್ರಹಕತ್ವವಿದೆಯೇ ?

तत्वप्रदीपः – अथ प्रमाणानुग्राहकत्वात्तर्कस्य स्वविषयभाविप्रमाणान्तर-सापेक्षत्वमस्तितरामिति, तदयुक्तम् । व्याप्तिमतस्तस्य स्वयमनुमानात्मकत्वेन प्रमाणानुग्राहकत्वमात्राभावात् । व्याप्तिविरहिणस्तु तदाभासत्वेनाननुग्राहकत्वात् ।

ಮೀಮಾಂಸಕರು - ತರ್ಕವು ಪ್ರಮಾಣಕ್ಕೆ ಅನುಗ್ರಾಹಕವಾಗಿದೆ. ಆದ್ದರಿಂದ ಅನುಗ್ರಾಹ್ಯವಾದ ತನಗೆ ವಿಷಯವಾದ ಮತ್ತೊಂದು ಪ್ರಮಾಣದ ಅಪೇಕ್ಷೆಯು ಇರುತ್ತದಲ್ಲವೇ ? ಆದ್ದರಿಂದ ಅನುಮಾನಕ್ಕಿಂತ ಹೆಚ್ಚಿನ ಪ್ರಮಾಣದ ಅಪೇಕ್ಷೆಯಿಲ್ಲವೆಂದು ಹೇಗೆ ಹೇಳುವಿರಿ ?

ತತ್ವವಾದಿಗಳು - ಇದು ಅಯುಕ್ತ. ತರ್ಕವು ಎರಡುವಿಧ - ೧. ವ್ಯಾಪ್ತಿಯುಳ್ಳದ್ದು, ೨. ವ್ಯಾಪ್ತಿಯಿಲ್ಲದ್ದು. ಇವೆರಡರಲ್ಲಿ ವ್ಯಾಪ್ತಿಯುಳ್ಳ ತರ್ಕವು ಸ್ವಯಂ ಅನುಮಾನಸ್ವರೂಪವೇ ಆಗಿದೆ. ಆದ್ದರಿಂದ ಪ್ರಮಾಣಾನುಗ್ರಾಹಕತ್ವವಷ್ಟೇ ಇದರಲ್ಲಿ ಇರುವುದಿಲ್ಲ. ಸ್ವತಃ ತಾನೂ ಕೂಡ ಪ್ರಮಾಣವೇ ಆಗಿದೆ. ವ್ಯಾಪ್ತಿರಹಿತವಾದ ತರ್ಕವಾದರೂ ಕೂಡ ತರ್ಕಾಭಾಸವೇ ಹೊರತು, ತರ್ಕರೂಪವಲ್ಲ. ಆದ್ದರಿಂದ ಪ್ರಮಾಣವೇ ಅಲ್ಲದ ಕಾರಣ ಪ್ರಮಾಣಾನುಗ್ರಾಹಕವೂ ಕೂಡ ಆಗಲು ಸಾಧ್ಯವಿಲ್ಲ.

ಅನುಮಾನವು ನಿಯತಾವಯವ ಉಳ್ಳದ್ದಲ್ಲ

तत्वप्रदीपः – नच नियतावयवमेवानुमानं प्रमाणमिति नियमः । निजसमयनियमितावयवरहितेनापि तेन परपरिजल्पितेन साध्यार्थावगमात् । नियमसाधकप्रमाणाभावाच्च । नचानुमानात् तत् सिद्धिः । तत् साधकस्यानुमानस्य नियतावयवत्वाङ्गीकारेऽनवस्थाप्रसक्तेः । तर्कमात्रत्वे तत्प्रामाण्यं प्रथमत एव समाश्रयणीयम् । अतः किमनेनाजागलस्तनायमानेनावयवनियमकल्पनेन ।

ಮೀಮಾಂಸಕರು - ಅನುಮಾನವು ಮೂರೇ ಅವಯವಗಳಿಂದ ಕೂಡಿರಬೇಕೆಂಬ ನಿಯಮವನ್ನು ಹೊಂದಿದೆ. ಆದರೆ ತರ್ಕಕ್ಕೆ ಇಷ್ಟೇ ಅವಯವಗಳಿರಬೇಕೆಂಬ ನಿಯಮವಿರುವುದಿಲ್ಲ. ಆದ್ದರಿಂದ ತರ್ಕವನ್ನು ಅನುಮಾನಸ್ವರೂಪವೆಂದು ಹೇಗೆ ಹೇಳುವಿರಿ ?

ತತ್ವವಾದಿಗಳು - ಇದು ತಪ್ಪು. ಮೀಮಾಂಸಕರಾದ ನೀವು ಅನುಮಾನಕ್ಕೆ ಮೂರು ಅವಯವಗಳು ನಿಯತವೆನ್ನುವಿರಿ. ತಾರ್ಕಿಕರು ಐದು ಅವಯವಗಳು ನಿಯತವೆನ್ನುವರು. ಐದು ಅವಯವಗಳಿದ್ದರೆ ಅಂಥ ಅನುಮಾನವು ಸಾಧ್ಯಸಾಧನೆಗೆ ಸಮರ್ಥವಾಗುತ್ತದೆಂದು ತಾರ್ಕಿಕರು ಒಪ್ಪಿದ್ದರೂ ಕೂಡ ಅಂಥ ತಾರ್ಕಿಕರನ್ನು ಕುರಿತು ಮೀಮಾಂಸಕರಾದ ನೀವು ಮೂರೇ ಅವಯವಗಳುಳ್ಳ ಅನುಮಾನಗಳನ್ನು ಪ್ರಯೋಗ ಮಾಡಿದಾಗ ತಾರ್ಕಿಕರಿಗೆ ಸಾಧ್ಯದ ಅರ್ಥಾವಗಮವು ಆಗಿಯೇ ಆಗುತ್ತದೆ. ಆದ್ದರಿಂದ ತಮ್ಮ ಸಿದ್ಧಾಂತದಲ್ಲಿ ನಿಯಮೇನ ಒಪ್ಪಿದ ಐದೇ ಅವಯವಗಳು ಇಲ್ಲದಿದ್ದರೂ ಅಕೂಡ ತಾರ್ಕಿಕರಿಗೆ ನೀವು ಪ್ರಯೋಗಿಸುವ ಅನುಮಾನದಿಂದ ಸಾಧ್ಯದ ಅರ್ಥಾವಗಮವು ಆಗುತ್ತದೆ. ಆದ್ದರಿಂದ ಅನುಮಾನವು ಇಷ್ಟೇ ಅವಯವಗಳಿಂದ ಕೂಡಿರಬೇಕೆಂಬ ನಿಯಮವು ತಪ್ಪು. ಹೇಗೆ ಅನುಮಾನವು ನಿಯತ ಅವಯವಗಳುಳ್ಳದ್ದು ಆಗುವುದಿಲ್ಲವೋ, ಅದರಂತೆ ತರ್ಕವೂ ಕೂಡ ನಿಯತ ಅವಯವುಗಳುಳ್ಳದ್ದು ಆಗುವುದಿಲ್ಲ. ಆದ್ದರಿಂದ ತರ್ಕ ಹಾಗೂ ಅನುಮಾನ ಎರಡೂ ಒಂದೇ ಎಂದು ಹೇಳಬಹುದು.

ಮತ್ತೊಂದು ದೋಷ - ಅನುಮಾನವು ನಿಯತವಾದ ಅವಯವವುಳ್ಳದ್ದಾಗಿರಬೇಕೆಂಬ ವಿಷಯದಲ್ಲಿ ಸಾಧಕಪ್ರಮಾಣವೂ ಕೂಡ ಇರುವುದಿಲ್ಲ.

ಮೀಮಾಂಸಕರು - ಅನುಮಾನವೇ ಸಾಧಕಪ್ರಮಾಣವಾಗಿದೆ. ಅನುಮಾನದಿಂದ ನಾವು ಅನುಮಾನವು ನಿಯತವಾದ ಅವಯವವುಳ್ಳದ್ದೆಂದು ಸಾಧಿಸುತ್ತೇವೆ.

ತತ್ವವಾದಿಗಳು - ನಿಯತಾವಯವವುಳ್ಳದ್ದೆಂದು ಸಾಧಿಸುವ ಅನುಮಾನವೂ ಕೂಡ ನಿಯತ ಅವಯವವುಳ್ಳದ್ದಾಗಿರಬೇಕೆಂದು ಒಪ್ಪಿದರೆ ಅನವಸ್ಥಾದೋಷ ಬರುತ್ತದೆ. ಏಕೆಂದರೆ ಈ ಅನುಮಾನವೂ ಕೂಡ ಏಕೆ ನಿಯತ ಅವಯವವುಳ್ಳದ್ದಾಗಿರಬೇಕು ? ಎಂಬ ಪ್ರಶ್ನೆಗೆ ನೀವು ಮತ್ತೊಂದು ಅನುಮಾನಪ್ರಮಾಣವನ್ನೇ ನೀವು ಹೇಳಬೇಕು. ಆಗ ಆ ಅನುಮಾನವೂ ಕೂಡ ಮತ್ತೊಂದು ಅನುಮಾನವನ್ನು ಅಪೇಕ್ಷೆ ಪಡುವುದರಿಂದ ಅನವಸ್ಥಾದೋಷವು ಮೀಮಾಂಸಕರಿಗೆ ತಪ್ಪಿದ್ದಲ್ಲ.

ಮೀಮಾಂಸಕರು - ನಿಯತಾವಯವವುಳ್ಳದ್ದಾಗಿರಬೇಕೆಂದು ಸಾಧಿಸುವುದು ಅನುಮಾನವಲ್ಲ. ತರ್ಕವೆಂದು ಹೇಳುತ್ತೇವೆ. ಆದ್ದರಿಂದ ಅನವಸ್ಥಾದೋಷವು ಬರುವುದಿಲ್ಲ.

ತತ್ವವಾದಿಗಳು - ಹಾಗಾದರೆ ಅಂತಿಮವಾಗಿ ತರ್ಕವನ್ನು ನೀವು ಅನುಮಾನಕ್ಕಿಂತ ಪ್ರತ್ಯೇಕ ಪ್ರಮಾಣವೆಂದು ಒಪ್ಪಲೇ ಬೇಕಾಯಿತು. ಇದನ್ನು ಮೊದಲೇ ಒಪ್ಪಿದ್ದರೆ ಜಾಣರಾಗುತ್ತಿದ್ದಿರಿ. ಆದ್ದರಿಂದ ಅಜಾಗಲಸ್ತನದಂತೆ ಅವಯವನಿಯಮಕಲ್ಪನವು ವ್ಯರ್ಥವಾಗಿದೆ.

ದೂಷಣಾನುಮಾನದಂತೆ ಸಾಧನಾನುಮಾನದಲ್ಲಿಯೂ ಅವಯವಗಳ ನಿಯಮವಿಲ್ಲ

तत्वप्रदीपः – नन्वसति नियमे प्रयोजकाङ्गस्यभावान्न्यूनाधिकता-विवेकानुपपत्तिरिति । मैवम् । दूषणोक्तिवदुपपत्तेः । नहि परप्रयुक्ते साधने दूषणं सनियममुपन्यस्यते। नचानवस्थादिदोषोक्तिरवयवनियमवती भवति । नच तत्र न्यूनाधिकविवेको दूरबोधः । एवमिहापि द्रष्टव्यम् ।

ಮೀಮಾಂಸಕರು - ಅನುಮಾನದಲ್ಲಿ ನಿಯತವಾದ ಅವಯವವನ್ನು ಒಪ್ಪದಿದ್ದರೆ ನ್ಯೂನ ಹಾಗೂ ಆಧಿಕ್ಯವೆಂಬ ನಿಗ್ರಹಸ್ಥಾನವನ್ನು ಹೇಳುವುದೇ ಅನುಪಪನ್ನವಾಗಬೇಕಾದೀತು ?

ತತ್ತ್ವವಾದಿಗಳು - ಹಾಗೇನಿಲ್ಲ. ದೂಷಣಾನುಮಾನದಲ್ಲಿ ನೀವು ನಿಯತವಾದ ಅವಯವ-ಗಳಿರಬೇಕೆಂಬ ನಿಯಮವನ್ನು ಒಪ್ಪಿಲ್ಲ. ಅದರಂತೆ ಸಾಧನಾನುಮಾನದಲ್ಲಿಯೂ ಕೂಡ ನಿಯತ ಅವಯವವನ್ನು ಒಪ್ಪುವ ಅವಶ್ಯಕತೆಯಿಲ್ಲ ಎಂಬುದೇ ನಮ್ಮ ಅಭಿಪ್ರಾಯ.

ದೂಷಣಾನುಮಾನದಲ್ಲಿ ಅನವಸ್ಥಾದಿದೋಷಗಳನ್ನು ಹೇಳುವ ಮೂಲಕ ಅವಯವ ನಿಯಮವನ್ನು ನೀವೂ ಕೂಡ ಒಪ್ಪಿರುವುದಿಲ್ಲ. ಮತ್ತು ನ್ಯೂನ, ಅಧಿಕ್ಯ ಎಂಬ ವಿವೇಕವನ್ನೂ ಕೂಡ ದೂಷಣಾನುಮಾನದಲ್ಲಿ ಮಾಡಲು ಸಾಧ್ಯವಿಲ್ಲ. ಅದರಂತೆ ಸಾಧನಾನುಮಾನದಲ್ಲಿಯೂ ಕೂಡ ತಿಳಿಯಬೇಕು.

ವಿವರಣೆ - 'ಅವಶ್ಯವಕ್ತವ್ಯೇ ಏಕದೇಶ ಪ್ರಯೋಗಃ ನ್ಯೂನಃ' ಎಷ್ಟು ಹೇಳಿದರೆ ಪರರಿಗೆ ಶಾಬ್ದಬೋಧ ಬರುತ್ತದೋ, ಅಷ್ಟನ್ನು ಮಾತ್ರ ಹೇಳಬೇಕು. ಕಮ್ಮಿ ಹೇಳಿದರೆ ನ್ಯೂನತಾ ಎಂಬ ನಿಗ್ರಹಸ್ಥಾನ ಬರುತ್ತದೆ. ಹೆಚ್ಚು ಹೇಳಿದರೆ ಆದಿಕ್ಯವೆಂಬ ನಿಗ್ರಹ ಸ್ಥಾನ ಬರುತ್ತದೆಂದು ಪ್ರಮಾಣಲಕ್ಷಣದಲ್ಲಿ ಶ್ರೀಮಟ್ಟೀಕಾರಾಯರು ಹೇಳಿರುತ್ತಾರೆ. ಆದ್ದರಿಂದ ಪಂಚಾಯವವನ್ನು ಪ್ರಯೋಗಿಸಲೇಬೇಕೆಂಬ ನಿಯಮವಿಲ್ಲ. ಒಂದು ವೇಳೆ ಎರಡೇ ಅವಯವಗಳನ್ನು ಬೋಧಿಸಿದಾಗ ಪರರಿಗೆ ಶಾಬ್ದಬೋಧ ಬರುವ ಪ್ರಸಂಗವಿದ್ದಾಗ ಒಂದು ಅವಯವವನ್ನು ಪ್ರಯೋಗಿಸಿದರೆ ನ್ಯೂನತಾ ಎಂಬ ನಿಗ್ರಹಸ್ಥಾನವನ್ನು ಮೂರು ಅವಯವಗಳನ್ನು ಪ್ರಯೋಗಿಸಿದರೆ ಆಧಿಕ್ಯವೆಂಬ ನಿಗ್ರಹಸ್ಥಾನವನ್ನು ಹೇಳಬೇಕು ಎಂಬುದು ನಮ್ಮ ಸಿದ್ಧಾಂತ.

ಕಾಲಾಂತರಭಾವಿಫಲದಾತೃವು ಈಶ್ವರನೆಂದು ಜೈಮಿನಿಗಳು

तत्त्वप्रदीपः – नच वेदप्रामाण्यानुपपत्त्या क्रियातिरिक्तस्थायिकार्यान्वेषणं युक्तम् । कालान्तरभाविफलदायिनः सर्वज्ञस्येश्वरस्य वेदसिद्धत्वोक्तेः ।

ವೇದಪ್ರಾಮಾಣ್ಯಾನುಪಪತ್ತಿಯಿಂದ ಕ್ರಿಯೆಯಿಂದ ಅತಿರಿಕ್ತವಾದ ಸ್ಥಾಯಿಯಾದ ಅಪೂರ್ವವೆಂಬ ಕಾರ್ಯತ್ವವನ್ನು ಮೀಮಾಂಸಕರಾದ ನೀವು ಅನ್ವೇಷಣೆಯನ್ನು ಮಾಡುತ್ತಿದ್ದೀರಿ. ಇದು ಯುಕ್ತವಲ್ಲ. ಏಕೆಂದರೆ ಈಗ ಆಚರಿಸಿದ ಕ್ರಿಯೆಯಿಂದ ಕಾಲಾಂತರದಲ್ಲಿ ಹೇಗೆ ಫಲ ದೊರೆಯುತ್ತದೆ ಎಂಬ ಪ್ರಶ್ನೆಗೆ ನಿಮ್ಮ ಮೂಲಪುರುಷರಾದ ಜೈಮಿನಿಋಷಿಗಳೇ ಉತ್ತರಿಸಿದ್ದಾರೆ - 'ಸರ್ವಜ್ಞನಾದ ಈಶ್ವರನು ಕಾಲಾಂತರಭಾವಿಯಾದ ಫಲವನ್ನು ನೀಡುತ್ತಾನೆಂಬುದು ವೇದಸಿದ್ಧವಾಗಿದೆ' ಎಂದು.

ವೇದಪ್ರಾಮಾಣ್ಯದಿಂದಲೇ ಚೇತನಸ್ವರೂಪರಾದ ದೇವತೆಗಳು ಸಿದ್ಧರಾಗುತ್ತಾರೆ

तत्वप्रदीपः – एतेनैवेतदप्यपास्तं, यताहुरेते जैमिनिमतसमाश्रयमानेन देवताद्यभावम् । वेदप्रमाणादेव देवतातद्देहदेशभेदसंवेदनस्य सौलभ्यसम्पादनात्।

ಹೀಗೆ ಹೇಳಿದ್ದರಿಂದ ಮತ್ತೊಂದನ್ನು ನಿರಾಕರಣೆ ಮಾಡಿದಂತಾಯಿತು. ಜೈಮಿನಿಮತವನ್ನು ಚೆನ್ನಾಗಿ ಆಶ್ರಯಿಸಿದ ಮೀಮಾಂಸಕರು ಹೀಗೆ ಹೇಳುತ್ತಾರೆ - ''ಚತುರ್ಥೀವಿಭಕ್ತ್ಯಂತವಾದ ಪದವೇ ದೇವತಾಸ್ವರೂಪ, ಚೇತನರೂಪವಾದ ಮತ್ತೊಬ್ಬ ದೇವತೆ ಇರುವುದಿಲ್ಲ'' ಎಂದು.

ಜೈಮಿನಿಋಷಿಗಳು ವೇದವನ್ನು ಪ್ರಮಾಣವೆಂದು ಒಪ್ಪಿರುವುದರಿಂದಲೇ ತತ್‌ಪ್ರತಿಪಾದ್ಯರಾದ ದೇವತೆಗಳು ಹಾಗೂ ಅವರ ಶರೀರ ಬೇರೆ ಬೇರೆ ಪ್ರದೇಶಗಳಲ್ಲಿರುವ ಅವರ ಸನ್ನಿಧಾನ ಇವೆಲ್ಲವೂ ಕೂಡ ಸುಲಭವಾಗಿ ತಿಳಿಯುತ್ತದೆ.

ಉಪಾಸನೆಯಧಿಕಾರದಿಂದ ದೇವತಾಸಮರ್ಥನೆ

तत्वप्रदीपः – मध्वाद्युपास्तिषु प्राप्तपदत्वेन तत्प्राप्त्यसम्भवात्तद्दर्शित्वाच्च तत्फलाय देवानामनधिकारं ब्रुवता जैमिनिनाऽन्यत्राधिकारमभ्यनुजानता देवतासद्भावोऽभ्युपगतः ।

ಜೈಮಿನಿಋಷಿಗಳು ಚೇತನಸ್ವರೂಪರಾದ ದೇವತೆಗಳನ್ನು ಒಪ್ಪಿರುತ್ತಾರೆಂಬ ವಿಷಯದಲ್ಲಿ ಮತ್ತೊಂದು ಪ್ರಮಾಣ ಹೀಗಿದೆ - ಮಧು ಮೊದಲಾದ ವಿದ್ಯೆಗಳಲ್ಲಿ ಪ್ರಾಪ್ತಪದರಾದ ದೇವತೆಗಳಿಗೆ ಅಧಿಕಾರವಿರುವುದಿಲ್ಲ. ಏಕೆಂದರೆ ಈಗಾಗಲೇ ಅವರಿಗೆ ಪ್ರಯೋಜನವು ದೊರೆತದ್ದರಿಂದ ಅಧಿಕಾರದ ಲಕ್ಷಣದಲ್ಲಿ ಗರ್ಭಿತವಾದ ಅರ್ಥಿತ್ವವು ಅಂಥ ದೇವತೆಗಳಲ್ಲಿ ಬರುವುದಿಲ್ಲ. ಹೀಗೆ ಜೈಮಿನಿಋಷಿಗಳು ಮಧ್ವಾದಿವಿದ್ಯೆಗಳಲ್ಲಿ ಕೆಲವು ದೇವತೆಗಳಿಗೆ ಅಧಿಕಾರವಿಲ್ಲವೆಂದು ಹೇಳಿ, ಬೇರೆ ವಿದ್ಯೆಗಳಲ್ಲಿ ಅದೇ ದೇವತೆಗಳಿಗೆ ಅಧಿಕಾರವನ್ನು ಸಮರ್ಥಿಸುತ್ತಾರೆ. ಇದರಿಂದ ದೇವತೆಗಳನ್ನು ಒಪ್ಪಬೇಕೆಂಬುದು ಜೈಮಿನಿಋಷಿಗಳ ಅಭಿಪ್ರಾಯವೆಂಬುದು ಸ್ಪಷ್ಟವಾಗುತ್ತದೆ.

ಜೈಮಿನಿಋಷಿಗಳಿಗೆ ಸರ್ವೋತ್ತಮನಾದ ಭಗವಂತನೂ ಸಮ್ಮತ

तत्वप्रदीपः – ''धर्मं जैमिनिरत एव'' इत्यादिना चेश्वरवादित्वमावेदितं जैमिनेः । अतः सुसाधीयः साधितं देवतोत्पत्त्यङ्गीकारेऽपि शब्दे प्रामाण्याविरोध इति ।।

ತೃತೀಯಾಧ್ಯಾಯದಲ್ಲಿ 'ಧರ್ಮಂ ಜೈಮಿನಿರತ ಏವ' ಇತ್ಯಾದಿ ಶ್ರುತಿಯಿಂದ ಜೈಮಿನಿಋಷಿಗಳು ಈಶ್ವರನನ್ನು ಸ್ಪಷ್ಟವಾಗಿ ಸಮರ್ಥಿಸಿದ್ದಾರೆ. ಆದ್ದರಿಂದ ದೇವತೆಗಳಷ್ಟೇ ಅಲ್ಲದೇ ಸರ್ವೋತ್ತಮನಾದ ಈಶ್ವರನು ಇದ್ದಾನೆಂಬುದೂ ಕೂಡ ಜೈಮಿನಿಋಷಿಗಳಿಗೆ ಸಮ್ಮತವಾಗಿದೆ. ಆದ್ದರಿಂದ ದೇವತೆಗಳಿಗೆ ಉತ್ಪತ್ತಿಯನ್ನು ಅಂಗೀಕರಿಸಿದರೂ ಕೂಡ ಶಬ್ದಕ್ಕೆ ಪ್ರಾಮಾಣ್ಯದ ವಿರೋಧವು ಬರುವುದಿಲ್ಲ ಎಂಬುದನ್ನು ಸಾಧನೆ ಮಾಡಲೇ ಬೇಕಾಗಿದೆ. ಅದನ್ನು ಸಾಧಿಸಿದೆವು.

ಪ್ರತಿ ಕಲ್ಪದಲ್ಲಿ ದೇವತೆಗಳ ಧರ್ಮ ಸಮಾನ

तत्वप्रदीपः – अथ कथमेतर्हि तेषूद्भवाभिभवैः पूर्वपरीभावं गतेषु विभिद्यमानरूपनामकर्मसु रुद्रेन्द्रादिनाम्नां नीललोहिततुविग्रीववज्रधरवृत्रवधादि शब्दानां च वृत्तिनियम; सम्भाव्यत इत्यत आह - समाननामरूपत्वाच्चाऽऽवृत्तावप्यविरोधो दर्शनात्स्मृतेश्च ।।

ಹಿಂದಿನ ಕಲ್ಪದಲ್ಲಿರುವ ದೇವತೆಗಳು ನಾಶವಾಗುತ್ತಾರೆ. ಮುಂದಿನ ಕಲ್ಪದಲ್ಲಿರುವ ದೇವತೆಗಳು ಉತ್ಪನ್ನಮರಾಗುತ್ತಾರೆ. ಈ ದೇವತೆಗಳು ಬೇರೆಯೇ ಆಗಿದ್ದಾರೆ. ಮತ್ತು ಪ್ರತಿಯೊಬ್ಬರಲ್ಲಿಯೂ ವಿಭಿನ್ನವಾದ ರೂಪ, ವಿಭಿನ್ನವಾದ ನಾಮ, ವಿಭಿನ್ನವಾದ ಕರ್ಮಗಳೇ ಇರುತ್ತವೆ. ರುದ್ರನಲ್ಲಿ ನೀಲಲೋಹಿತತ್ವ, ವಿಷಗ್ರೀವತ್ವ ಮೊದಲಾದ ಧರ್ಮಗಳನ್ನು ಇಂದ್ರನಲ್ಲಿ ವಜ್ರಧರತ್ವ, ವೃತ್ರವಧತ್ವ ಮೊದಲಾದ ಧರ್ಮಗಳು ಪ್ರತಿಕಲ್ಪದಲ್ಲಿಯೂ ಒಂದೇ ಥರ ಇರುತ್ತದೆ ಎಂದು ನಿಯಮ ಮಾಡುವುದು ಹೇಗೆ ಸಂಭಾವಿತವಾಗುತ್ತದೆ ?

ಈ ಆಶಂಕೆಗೆ 'ಸಮಾನನಾಮರೂಪತ್ವಾಚ್ಚಾವೃತ್ತಾವಪ್ಯವಿರೋಧೋ ದರ್ಶನಾತ್ ಸ್ಮೃತೇಶ್ಚ' ಎಂಬ ಸೂತ್ರವು ಉತ್ತರ ನೀಡುತ್ತಿದೆ.

ವಿವರಣೆ - ಆಕ್ಷೇಪ - ವೇದವು ಅಪ್ರಮಾಣವಾಗುತ್ತದೆಂದು ಆಕ್ಷೇಪ ಮಾಡಿದಾಗ ದೇವತಾಪದವಿಯಲ್ಲಿ ಯಾರಾದರೂ ಒಬ್ಬರು ಇದ್ದೇ ಇರುತ್ತಾರಾದ್ದರಿಂದ ಅಪ್ರಾಮಾಣ್ಯದೋಷ ಬರುವುದಿಲ್ಲ ಎಂದು ಸಮರ್ಥಿಸಲಾಯಿತು. ಆದರೂ ಕೂಡ ಮತ್ತೊಂದು ಆಕ್ಷೇಪ ಪ್ರಾಪ್ತವಾಗುತ್ತದೆ. ಅದೇನೆಂದರೆ ಈ ಕಲ್ಪದಲ್ಲಿ ಯಾವ ದೇವತೆಗಳಿದ್ದಾರೋ, ಅವರೇ ಮುಂದಿನ ಕಲ್ಪದಲ್ಲಿ ಇರುತ್ತಾರೆ ಎಂದು ಸಾಧ್ಯವಾಗುವುದಿಲ್ಲ. ಏಕೆಂದರೆ ಮುಕ್ತರಾದ ದೇವತೆಗಳು ಪುನಃ ಬರುವುದಿಲ್ಲ. ಆದ್ದರಿಂದ ಹಿಂದಿನ ಕಲ್ಪದಲ್ಲಿ ಇಂದ್ರಾದಿದೇವತೆಗಳಿಗೆ, ಯಾವ ಹೆಸರು, ಯಾವ ಆಕಾರ, ಯಾವ ಕರ್ಮಗಳು ಇದ್ದವೋ, ಅದೇ ಆಕಾರ, ಅದೇ ಹೆಸರು, ಅದೇ ಕರ್ಮ ಮುಂದಿನ ಕಲ್ಪದಲ್ಲಿರುವ ದೇವತೆಗಳಿಗೂ ಕೂಡ ಇರಬೇಕೆಂಬ ನಿಯಮವಿಲ್ಲ. ಆದ್ದರಿಂದ ಈ ಕಲ್ಪದಲ್ಲಿ ರುದ್ರನಲ್ಲಿ ನೀಲಲೋಹಿತ, ವಿಷಗ್ರೀವ ಇತ್ಯಾದಿಯಾಗಿ ಸ್ತೋತ್ರ ಮಾಡುವ ಮಂತ್ರಗಳು ಮುಂದಿನ ಕಲ್ಪದಲ್ಲಿ ಅಪ್ರಮಾಣವಾಗುತ್ತವೆ. ಇನ್ನು ಮುಂದಿನ ಕಲ್ಪದಲ್ಲಿ ಬೇರೆ ರೀತಿಯಾಗಿ ವೇದಮಂತ್ರವು ಆಯಾ ದೇವತೆಗಳನ್ನು ಪ್ರತಿಪಾದಿಸುತ್ತವೆಂದು ಹೇಳಿದರೆ ದೇವತಾಸ್ವರೂಪವು ವಿಭಿನ್ನವಾದಂತೆ, ವೇದವೂ ಕೂಡ ವಿಭಿನ್ನವಾಯಿತು. ಆಗ ವೇದನಿತ್ಯತ್ವವೇ ಭಗ್ನವಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ವೇದಪ್ರಾಮಾಣ್ಯವನ್ನು ಹೇಗೆ ಸಮರ್ಥಿಸುವಿರಿ ?

ಸಮಾಧಾನ - ಪ್ರತಿಕಲ್ಪದಲ್ಲಿರುವ ದೇವತೆಗಳ ಹೆಸರು ಆಕಾರ, ಕರ್ಮ ಎಲ್ಲವೂ ಕೂಡ ಒಂದೇ ರೀತಿಯಲ್ಲಿಯೇ ಇರುತ್ತದೆ. ಈ ಕಲ್ಪದಲ್ಲಿ ರುದ್ರನು ನೀಲಲೋಹಿತ, ಭಸ್ಮಧರ, ವಿಷಗ್ರೀವ ಇತ್ಯಾದಿಯಾಗಿ ಕರೆಸಿಕೊಳ್ಳುವಂತೆ ಮುಂದಿನ ಕಲ್ಪದಲ್ಲಿರುವ ರುದ್ರನೂ ಕೂಡ ಹೀಗೆಯೇ ಕರೆಸಿಕೊಳ್ಳುತ್ತಾನೆ. ಇವನಲ್ಲಿರುವ ಧರ್ಮಕರ್ಮಗಳೆಲ್ಲವೂ ಕೂಡ ಮುಂದಿನ ಕಲ್ಪದಲ್ಲಿರುವ ರುದ್ರನಲ್ಲಿಯೂ ಇರುತ್ತದೆ. ಆದ್ದರಿಂದ ವೇದದ ಅಪ್ರಾಮಾಣ್ಯಕ್ಕೆ ಅವಕಾಶವಿಲ್ಲ.

'ಆವೃತ್ತಾವಪ್ಯವಿರೋಧಃ' ಎಂಬುದಕ್ಕೆ ಎರಡು ವ್ಯಾಖ್ಯಾನ

तत्वप्रदीपः – पौरस्त्यानां पाश्चात्यानां च देवानां समाननामरूपत्वात् समानधर्मकर्मत्वाच्च प्राप्तपदानां मुक्त्या स्वस्वपदादावृत्तावपि न तच्छब्दवाच्यत्वविरोधः । स्वपदेष्ववृत्तावपीति वार्थः । यथापूर्वमिति समाननामरूपत्वेऽपि तामेव श्रुतिं प्रमाणीकरोति ।।

ಸೂತ್ರದ ಅರ್ಥ - ಹಿಂದಿನ ಕಲ್ಪದ, ಹಾಗೂ ಮುಂದಿನ ಕಲ್ಪದ ದೇವತೆಗಳು ಸಮಾನವಾದ ನಾಮ ಹಾಗೂ ರೂಪಗಳಲ್ಲಿ, ಸಮಾನವಾದ ಧರ್ಮ-ಕರ್ಮಗಳನ್ನು ಹೊಂದಿರುತ್ತಾರೆ. ಆದ್ದರಿಂದ ಈ ಪದವಿಯಲ್ಲಿರುವ ದೇವತೆಗಳಿಗೆ ಮುಕ್ತಿಯಾಗುವುದರಿಂದ ಆವೃತ್ತಾವಪಿ = ತಮ್ಮ ಪದವಿಯಲ್ಲಿ ಆವೃತ್ತರಾದರೂ ಕೂಡ ಆಯಾ ದೇವತೆಗಳನ್ನು ಪ್ರತಿಪಾದನೆ ಮಾಡುವ ಶಬ್ದವಾಚ್ಯತ್ವದ ವಿರೋಧವು ಇರುವುದಿಲ್ಲ.

ಅಥವಾ ಅವೃತ್ತಾವಪಿ ಎಂಬ ಪದಚ್ಛೇದವನ್ನು ಮಾಡಬಹುದು. ಮುಖ್ಯ = ಪ್ರಾಪ್ತಪದರಾದ ದೇವತೆಗಳಿಗೆ ಮುಕ್ತಿಯಾಗುವುದರಿಂದ, ಅವೃತ್ತಾವಪಿ = ತಮ್ಮ ಪದವಿಯಲ್ಲಿ ಇಲ್ಲದಿದ್ದರೂ ಕೂಡ, ಅವಿರೋಧಃ = ಬೇರೆ ಅಪ್ರಾಮಾಣ್ಯದ ವಿರೋಧ ಇಲ್ಲ. ಏಕೆಂದರೆ 'ಯಥಾ ಪೂರ್ವಂ ಅಕಲ್ಪಯತ್' ಎಂಬ ಶ್ರುತಿಯು ಎಲ್ಲಾ ಕಲ್ಪದ ದೇವತೆಗಳಿಗೆ ಸಮಾನನಾಮರೂಪತ್ವವನ್ನು ಹೇಳುತ್ತಿದೆ. ಇದೇ ವಿಷಯವನ್ನು ಅನಾದಿನಿಧನಾ ಇತ್ಯಾದಿ ಸ್ಮೃತಿವಾಕ್ಯವು ಸ್ಪಷ್ಟಪಡಿಸುತ್ತಿದೆ.

ವಿಶೇಷವಿಚಾರ -

ಒಂದು ವಿಮರ್ಶೆ

ಪ್ರತಿಕಲ್ಪದಲ್ಲಿರುವ ಇಂದ್ರಾದಿದೇವತೆಗಳು ಸಮಾನನಾಮರೂಪರಾಗಿರಬಹುದು. ಆದರೆ ಒಂದೇ ಕಲ್ಪದಲ್ಲಿ ಅನೇಕ ಮನ್ವಂತರಗಳಿವೆ. ಆ ಪ್ರತಿಯೊಂದು ಮನ್ವಂತರಗಳಲ್ಲಿಯೂ ಇಂದ್ರಾದಿದೇವತೆಗಳು ವಿಭಿನ್ನರಾಗಿರುತ್ತಾರೆ. ಆಗ ಪರಿಹಾರವನ್ನು ಹೇಗೆ ಹೇಳುವುದು ? ಏಕೆಂದರೆ ಈಗಿನ ಮನ್ವಂತರದಲ್ಲಿ ಶಚೀಪತಿಯಾದ ಇಂದ್ರನಿದ್ದಾನೆ. ಮುಂದಿನ ಮನ್ವಂತರದಲ್ಲಿ ಬಲಿಯು ಇಂದ್ರಪದವಿಯಲ್ಲಿರುತ್ತಾನೆ. ಆಗ ಮುಂದಿನ ಕಲ್ಪದಲ್ಲಿ ಈ ಶಚೀಪತಿಯಾದ ಇಂದ್ರನನ್ನು ಪ್ರತಿಪಾದನೆ ಮಾಡುವ ವೇದವಾಕ್ಯವು ಬಲಿಯನ್ನು ಹೇಗೆ ಪ್ರತಿಪಾದನೆ ಮಾಡುತ್ತದೆ ?

ಸಮಾಧಾನ - ಶಚೀಪತಿಯಾದ ಪುರಂದರನನ್ನು ಪ್ರತಿಪಾದನೆ ಮಾಡುವ ವೇದವಾಕ್ಯವು ಎಲ್ಲಾ ಮನ್ವಂತರದಲ್ಲಿಯೂ ಇವನೇ ಇಂದ್ರನಾಗಿದ್ದಾನೆಂದೇನೂ ಹೇಳುತ್ತಿಲ್ಲ. ಇವನು ಇಂದ್ರಪದವಿಯಲ್ಲಿ ಇರಲಿ ಬಿಡಲಿ, ಸಮಗ್ರ ಕಲ್ಪದಲ್ಲಿ ಈ ಪುರಂದರನನ್ನೇ ಆ ಮಂತ್ರವು ಪ್ರತಿಪಾದನೆ ಮಾಡುತ್ತದೆ. ಆದರೆ ಯಜ್ಞದಲ್ಲಿ ನಾವು 'ಇಂದ್ರಾಯ ಸ್ವಾಹಾ' ಇತ್ಯಾದಿಯಾಗಿ ಆಹುತಿ ನೀಡಿದಾಗ ಅದು ಈ ಕಲ್ಪದಲ್ಲಿ ಪುರಂದರನಿಗೆ, ಮುಂದಿನ ಕಲ್ಪದಲ್ಲಿ ಬಲಿಗೆ ತಲುಪುತ್ತದೆ. ಮುಂದಿನ ಮನ್ವಂತರದಲ್ಲಿ ಪುರಂದರನಿಗೆ ಇಂದ್ರ ಎಂಬ ಪದವಿ ಇರುವುದಿಲ್ಲ ಎಂದಷ್ಟೇ

ಹೊರತು, ಉಳಿದ ಇಂದ್ರಿಯಾದ್ಯಭಿಮಾನಿತ್ವ ಮೊದಲಾದ ಧರ್ಮಗಳು ನಾಶವಾಗುವುದಿಲ್ಲ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

ಮೂರು ಸೂತ್ರಗಳಿಗೆ ಹರಿ ಪರವಾಗಿ ಅಪೂರ್ವ ವ್ಯಾಖ್ಯಾನ

तत्वप्रदीपः – मुख्यवाच्यस्य विष्णोः सर्वदा विद्यमानत्वाच्च न शब्दे विरोधः । तथाच योजना, अत एव शब्दात्तेषां प्रभवनियमात् शब्दादेव देवानां प्रभवनियमनादिकर्ताऽवगम्यते । अतस्तस्मादेव शब्दे विरोधः परिहृतः।

ಮುಖ್ಯವಾಚ್ಯನಾದ ಮಹಾವಿಷ್ಣುವು ಯಾವಾಗಲೂ ಇರುವುದರಿಂದ ಶಬ್ದದಲ್ಲಿ ವಿರೋಧವಿಲ್ಲ. ಆದ್ದರಿಂದ ಹೀಗೆ ಯೋಜನೆ ಮಾಡಿಕೊಳ್ಳಬೇಕು. 'ಶಬ್ದ ಇತಿ ಚೇನ್ನಾತಃ ಪ್ರಭವಾತ್' ಎಂಬ ಸೂತ್ರದ ಅಭಿಪ್ರಾಯ ಹೀಗಿದೆ - ಆದ್ದರಿಂದಲೇ ಶಬ್ದಪ್ರಮಾಣದಿಂದ ದೇವತೆಗಳ ಪ್ರಭವನಿಯಮಕ್ಕೆ ವಿಷ್ಣು ಕಾರಣನಾದ್ದರಿಂದ ವೇದವು ಪ್ರಮಾಣವಾಗುತ್ತದೆ. ಆದ್ದರಿಂದ ಶಬ್ದದ ವಿರೋಧವನ್ನು ಪರಿಹರಿಸಿದಂತಾಯಿತು.

ವಿವರಣೆ - ಪ್ರಳಯಕಾಲದಲ್ಲಿ ದೇವತೆಗಳು ಇಲ್ಲದ ಕಾರಣ ಆ ಕಾಲದಲ್ಲಿರುವ ವೇದವು ಅಪ್ರಮಾಣವಾಗುತ್ತದೆ ಅಲ್ಲವೇ ?

ಈ ಆಶಂಕೆಗೆ ಪರಮಾತ್ಮನ ಬುದ್ಧಿಯಲ್ಲಿ ವೇದವು ನಿತ್ಯವಾಗಿರುವುರರಿಂದ ಅಪ್ರಮಾಣವಾಗುವುದಿಲ್ಲ ಎಂಬ ಉತ್ತರವನ್ನು ಹೇಳಲಾಯಿತು. 'ಶನ್ನೋ ಮಿತ್ರಃ' ಇತ್ಯಾದಿಯಾಗಿ ಭೃಗು ಎಂಬ ಋಷಿಯು ತಿಳಿದನು ಎಂಬ ಆಲೋಚನೆಯನ್ನು ಪ್ರಳಯಕಾಲದಲ್ಲಿ ಪರಮಾತ್ಮನು ಮಾಡುತ್ತಾನಾದ್ದರಿಂದ ವೇದಕ್ಕೆ ಅಪ್ರಾಮಾಣ್ಯವಿಲ್ಲ ಎಂಬ ಸಮಾಧಾನವು ಕೇವಲ ಮೇಲ್ನೋಟದ್ದು. ನಿಜವಾಗಿಯೂ ಕೂಡ ಪ್ರಳಯಕಾಲದಲ್ಲಿ ವೇದಕ್ಕೆ ಹೇಗೆ ಪ್ರಾಮಾಣ್ಯವನ್ನು ಹೇಳಬೇಕು ಎಂಬುದನ್ನು ಸೂತ್ರಾರೂಢವಾಗಿಯೇ ಪ್ರಕೃತ ಪಂಡಿತಾಚಾರ್ಯರು ಸಮರ್ಥಿಸುತ್ತಿದ್ದಾರೆ. ಇದೊಂದು ಪಂಡಿತಾಚಾರ್ಯರ ಅದ್ಭುತ ವ್ಯಾಖ್ಯಾನ ಕೌಶಲ್ಯವಾಗಿದೆ.

'ಶಬ್ದ ಇತಿ ಚೇನ್ನಾತಃ' ಎಂಬ ಸ್ಯೂದಿಂದ ಪ್ರಾರಂಭಿಸಿ, ಒಟ್ಟು ಮೂರು ಸೂತ್ರಗಳನ್ನು ಕೇವಲ ಹರಿಪರವಾಗಿ ಪಂಡಿತಾಚಾರ್ಯರು ವ್ಯಾಖ್ಯಾನ ಮಾಡುತ್ತಿದ್ದಾರೆ. ಇದು ಎರಡನೆಯ ವ್ಯಾಖ್ಯಾನವಾಗಿದೆ.

'ಶಬ್ದ ಇತಿ ಚೇನ್ನಾತಃ ಪ್ರಭವಾತ್ ಪ್ರತ್ಯಕ್ಷಾನುಮಾನಾಭ್ಯಾಮ್' ಎಂಬ ಸೂತ್ರವು ಪ್ರಳಯ ಕಾಲದಲ್ಲಿ ವೇದಪ್ರಾಮಾಣ್ಯವನ್ನು ಸಮರ್ಥಿಸುತ್ತಿದೆ. ಈ ಸೂತ್ರದಲ್ಲಿರುವ 'ಅತಃ' ಎಂಬ ಪದಕ್ಕೆ ವಿಷ್ಣುವಿನ ದೆಸೆಯಿಂದ ಎಂದರ್ಥ. 'ಪ್ರಭವಾತ್' ಎಂಬ ಶಬ್ದಕ್ಕೆ ವಿಶ್ವದ ಪ್ರಭವಕ್ಕೆ ಕಾರಣನಾಗಿದ್ದಾನೆ. ಹಾಗೂ ನಿಯಮನಕ್ಕೆ ಕಾರಣನಾಗಿದ್ದಾನೆ ಎಂದರ್ಥ. ಆದ್ದರಿಂದಲೇ ಶಬ್ದದಲ್ಲಿ ವಿರೋಧ ಬರುತ್ತದೆ ಎಂಬ ಆಶಂಕೆಯು ಪರಿಹಾರವಾಯಿತು. ಏಕೆಂದರೆ ಪ್ರತ್ಯಕ್ಷಾನುಮಾನಾಭ್ಯಾಂ = ಪ್ರಳಯಕಾಲದಲ್ಲೂ ಪರಮಾತ್ಮನಿರುವುದನ್ನು ಮಹಾತ್ಮರು ಕಂಡಿರುತ್ತಾರೆ. ಈ ವಿಷಯದಲ್ಲಿ 'ಯಮಂತಃ ಸಮುದ್ರೇ' ಇತ್ಯಾದಿ ಶ್ರುತಿಗಳು ಆಧಾರವಾಗಿವೆ.

ಈ ವಿಷಯದಲ್ಲಿ ಪ್ರತ್ಯಕ್ಷಾನುಮಾನಗಳು ಪ್ರಮಾಣ

तत्वप्रदीपः – प्रत्यक्षश्चासौ महताम् । ''पुरुषमीक्षते'' ''यमन्तः समुद्रे कवयोऽवयन्ति'' इत्यादिश्रुतेः । यया येन प्रकारेणेदानीं देवा भवन्ति तथाऽन्यदाऽपीत्यनुमानाच्च तदवगमः ।।

'ಪ್ರತ್ಯಕ್ಷಾನುಮಾನಾಭ್ಯಾಂ' ಎಂಬ ಸೂತ್ರ ಭಾಗಕ್ಕೆ ಹೀಗರ್ಥ - ಪರಮಾತ್ಮನು ಪ್ರಳಯಕಾಲವದಲ್ಲಿ ಇದ್ದಾನೆಂಬುದು ಮಹಾತ್ಮರ ಪ್ರತ್ಯಕ್ಷಕ್ಕೆ ತಿಳಿಯಲ್ಪಟ್ಟಿದೆ. ಈ ವಿಷಯವನ್ನು 'ಪುರುಷಮೀಕ್ಷತೇ', 'ಯಮಂತಃ ಸಮುದ್ರೇ ಕವಯೋऽವಯಂತಿ' ಇತ್ಯಾದಿ ಶ್ರುತಿಗಳು ಸಮರ್ಥಿಸುತ್ತಿವೆ. ಮತ್ತು ಯಾವರೀತಿಯಲ್ಲಿ ಉಳಿದ ದೇವತೆಗಳಿದ್ದಾರೋ, ಹಾಗೇ ಮುಂದೆಯೂ ಕೂಡ ಇರುತ್ತಾರೆ ಎಂಬ ವಿಷಯದಲ್ಲಿ ಅನುಮಾನ ಪ್ರಮಾಣವೂ ಕೂಡ ಇರುತ್ತದೆ.

ದೇವಪ್ರವಾಹ ಶಬ್ದಕ್ಕೆ ದೇವತಾಧಾರಕನಾದ ಪರಮಾತ್ಮನೆಂದರ್ಥ

तत्वप्रदीपः – अत एव च नित्यत्वम् ।। अत एव शब्दनित्यत्वादेव देवप्रवोढुर्नित्यत्वम्।।

'ಅತ ಏವ ಚ ನಿತ್ಯತ್ವಮ್' ಎಂಬ ಸೂತ್ರವೂ ಕೂಡ ಹರಿಪರವಾಗಿದೆ. 'ಅತ ಏವ' ಎಂಬ ಪದಕ್ಕೆ ಶಬ್ದವು ನಿತ್ಯವಾಗಿರುವುದರಿಂದಲೇ ದೇವಪ್ರವಾಹವು ನಿತ್ಯವಾಗಿದೆ ಎಂದರ್ಥ. ಇಲ್ಲಿ

ದೇವಪ್ರವಾಹ ಎಂಬ ಪದಕ್ಕೆ ದೇವತೆಗಳನ್ನು ಪ್ರಕೃಷ್ಟವಾಗಿ ಧಾರಣೆ ಮಾಡಿದ ಪರಮಾತ್ಮನೆಂದರ್ಥ. ವೇದಗಳು ನಿತ್ಯವಾಗಿರುವುದರಿಂದ ದೇವತಾಧಾರಕನಾದ ಮಹಾವಿಷ್ಣುವೂ ಕೂಡ ನಿತ್ಯನಾಗಿದ್ದಾನೆಂದು ತಿಳಿಯುತ್ತದೆ. ಆದ್ದರಿಂದ ಪ್ರಳಯಕಾಲದಲ್ಲಿಯೂ ಪರಮಾತ್ಮನಿರುವುದರಿಂದ ಅವನನ್ನು ವೇದಗಳು ಪ್ರತಿಪಾದಿಸುತ್ತವೆ.

तत्वप्रकाशिका

ದೇವತಾಪ್ರವಾಹನಿತ್ಯತ್ವ ಸಮರ್ಥನೆ

तत्वप्रकाशिका –

।। अत एव च नित्यत्वम् ।।

युक्त्यन्तरेण देवप्रवाहनित्यतां साधयत्सूत्रं पठित्वा व्याचष्टे – अत एवेति ।।

ಮತ್ತೊಂದು ಯುಕ್ತಿಯಿಂದ ದೇವತೆಗಳ ಪ್ರವಾಹವು ನಿತ್ಯವಾಗಿದೆ ಎಂದು ಸಾಧಿಸುವಂತಹ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅತ ಏವ' ಇತ್ಯಾದಿ ಭಾಷ್ಯದಿಂದ. ದೇವತೆಗಳ ಪ್ರವಾಹವು ನಿತ್ಯವಾಗಿದೆ ಎಂದು ಸಮರ್ಥಿಸಲು ಬೇರೆ ಯಾವ ಯುಕ್ತಿಯನ್ನೂ ಸಹ ಹುಡುಕಬೇಕಾಗಿಲ್ಲ, ಹೊರತಾಗಿ ಪ್ರತಿಪಕ್ಷಿಯಾದ ಮೀಮಾಂಸಕನು ವೇದಕ್ಕೆ ಯಾವ ನಿತ್ಯತ್ವವನ್ನು ಹೇಳುತ್ತಾನೋ, ಅದರ ಅನ್ಯಥಾನುಪಪತ್ತಿಯಿಂದಲೇ ದೇವತಾಪ್ರವಾಹಕ್ಕೆ ನಿತ್ಯತ್ವವು ಸಿದ್ಧವಾಗುತ್ತದೆ. ಅಂದರೆ, ದೇವತೆಗಳ ಪ್ರವಾಹವು ನಿತ್ಯವಾಗದಿದ್ದರೆ, ವೇದಗಳಿಗೆ ನಿತ್ಯತ್ವವೂ ಸಹ ಸಿದ್ಧವಾಗುವುದಿಲ್ಲ.

ವೇದನಿತ್ಯತ್ವಕ್ಕೆ ದೇವತಾಪ್ರವಾಹ ನಿತ್ಯತ್ವವು ಆವಶ್ಯಕ

तत्वप्रकाशिका – न देवप्रवाहनित्यत्वसिद्ध्यर्थं युक्त्यन्तरं गवेषणीयं किन्तु यत्परेण प्रतिपादितं वेदस्य नित्यत्वं तदन्यथानुपपत्त्यैव तत्सिद्ध्यति ।

नहि वाच्यानित्यत्वे वाचो नित्यत्वमुपपद्यत इति भावः । न चाप्रामाण्येनोपपत्तिः । तदभावादेव ।

ಶಬ್ದಪ್ರತಿಪಾದ್ಯವಾದ ಅರ್ಥವು ಅನಿತ್ಯವಾದಾಗ ಶಬ್ದಕ್ಕೆ ನಿತ್ಯತ್ವವು ಎಂದೂ ಸಹ ಸಿದ್ಧವಾಗುವುದಿಲ್ಲ. ಆದ್ದರಿಂದಲೇ, ದೇವತೆಗಳ ಪ್ರವಾಹವು ನಿತ್ಯವಾದರೆ ಮಾತ್ರ ವೇದರೂಪವಾದ ಶಬ್ದಕ್ಕೆ ನಿತ್ಯತ್ವವನ್ನು ಸಮರ್ಥಿಸಲು ಸಾಧ್ಯ. ಇನ್ನು ವೇದವು ಅಪ್ರಮಾಣವಾದ್ದರಿಂದ ವಾಚ್ಯಾರ್ಥವಿಲ್ಲದಿದ್ದರೂ ವೇದದ ನಿತ್ಯತ್ವವು ಸಿದ್ಧವಾಗುತ್ತದೆಂದು ಹೇಳಬಾರದು. ವೇದವು ಅಪ್ರಮಾಣವಾಗಲು ಸಾಧ್ಯವೇ ಇಲ್ಲ.

ಅತೀತವಿಷಯ ಪ್ರತಿಪಾದನೆ ಮಾಡಿದರೂ ಬಾಧಕವಿಲ್ಲ

तत्वप्रकाशिका – नापि भारतादिवदतीतविषयत्वेन । अनुपपत्तेरुक्तत्वात् ।

ಇನ್ನು ಮಹಾಭಾರತಾದಿ ಗ್ರಂಥಗಳಲ್ಲಿ ಹೇಗೆ ಅತೀತವಿಷಯವನ್ನು ಪ್ರತಿಪಾದನೆ ಮಾಡಲಾಗುತ್ತದೋ, ಅದರಂತೆ ವೇದವೂ ಸಹ ಅತೀತವಿಷಯವನ್ನು ಪ್ರತಿಪಾದನೆ ಮಾಡುವ ಪ್ರಯುಕ್ತ ಪ್ರಮಾಣವಾಗುತ್ತದೆಂದು ಹೇಳಬಾರದು. ಏಕೆಂದರೆ, ಈ ವಿಷಯದಲ್ಲಿ ಅನುಪಪತ್ತಿಯನ್ನು ಹೇಳಿದ್ದಾಗಿದೆ. ಅಂದರೆ, ಕೇವಲ ಅತೀತವಿಷಯಕವಾಗದೆ, ಯಾಗ ಮೊದಲಾದವುಗಳಲ್ಲಿ ವರ್ತಮಾನಕಾಲದ ವಿಷಯಪ್ರತಿಪಾದನೆಯನ್ನೂ ಸಹ ಮಾಡಲಾಗಿದೆ.

ದೇವತೆಗಳ ಸ್ವರೂಪವು ನಿತ್ಯವೆಂದಭಿಪ್ರಾಯವಲ್ಲ

तत्वप्रकाशिका – नच तद्वाच्यदेवतास्वरूपस्यैव नित्यत्वेनान्यथोपपत्तिः। 'सूर्याचन्द्रमसौ' इत्याद्युत्पत्तिश्रुतेः, प्रलयश्रुतिबाहुल्याच्च ।

ವೇದಪ್ರತಿಪಾದ್ಯರಾದ ದೇವತೆಗಳ ಸ್ವರೂಪವೇ ನಿತ್ಯವಾದ್ದರಿಂದ ಅನ್ಯಥಾ ಉಪಪತ್ತಿ ಮಾಡಬಹುದಲ್ಲವೇ? ಎಂದು ಪ್ರಶ್ನಿಸಬಾರದು. 'ಸೂರ್ಯಾಚಂದ್ರಮಸೌ' ಇತ್ಯಾದಿ ಶ್ರುತಿಯು ದೇವತೆಗಳಿಗೆ ಉತ್ಪತ್ತಿಯನ್ನು ಹೇಳುವ ಮೂಲಕ ನಿತ್ಯತ್ವವನ್ನು ಅಲ್ಲಗಳೆಯುತ್ತಿದೆ. ಮತ್ತು, ದೇವತೆಗಳಿಗೆ ನಾಶವಿರುತ್ತದೆಯೆಂದು ಅನೇಕ ಪ್ರಳಯಶ್ರುತಿಗಳು ಪ್ರತಿಪಾದನೆ ಮಾಡುತ್ತಿವೆ.

ಇಂತಹ ಉತ್ಪತ್ತಿಯನ್ನು ಹೇಳುವ ಶ್ರುತಿಗಳಿಗಾಗಲಿ, ಪ್ರಳಯ ಶ್ರುತಿಗಳಿಗಾಗಲಿ ಬಾಧಕವನ್ನು ಹೇಳಲು ಸಾಧ್ಯವಿಲ್ಲ.

ಉತ್ಪತ್ತಿ ಪ್ರಳಯಶ್ರುತಿಗಳಿಗೆ ಅಯಥಾರ್ಥಪ್ರತಿಪಾದಕತ್ವವನ್ನು ಒಪ್ಪಬೇಕೇ ?

तत्वप्रकाशिका – नच प्रलयश्रुतीनामयथार्थत्वम् । बाधकाभावात् ।

ಇನ್ನು ಪ್ರಳಯಶ್ರುತಿಗಳಿಗೆ ಹಾಗೂ ಉತ್ಪತ್ತಿಶ್ರುತಿಗಳಿಗೆ ಅಯಥಾರ್ಥಪ್ರತಿಪಾದಕತ್ವವನ್ನು ಒಪ್ಪಬೇಕು. ಹಾಗೆ ಹೇಳಲು ಯಾವುದೇ ಬಾಧಕಗಳಿರುವುದಿಲ್ಲ.

ಎಲ್ಲವೂ ಈಶ್ವರನಿಂದ ರಚಿತವಾದ್ದರಿಂದ ದೋಷವಿಲ್ಲ

तत्वप्रकाशिका – जातिसङ्केताद्यनुपपत्तेरिति चेन्न । ईश्वरविरचितत्वेनोपपत्तेः ।

ಬ್ರಾಹ್ಮಣ ಮೊದಲಾದ ಜಾತಿ ಮತ್ತು ಸಂಕೇತ ಇವುಗಳ ಅನುಪಪತ್ತಿಯಿಂದ ಪ್ರಳಯಕಾಲದಲ್ಲಿ ಬ್ರಾಹ್ಮಣ ಮೊದಲಾದವರು ಇರುವುದೇ ಇಲ್ಲ. ಆದ್ದರಿಂದ 'ಬ್ರಾಹ್ಮಣಾದ್ ಬ್ರಾಹ್ಮಣೋ ಜಾತಃ' – ಬ್ರಾಹ್ಮಣರಿಂದ ಬ್ರಾಹ್ಮಣರು ಹುಟ್ಟಿದರು ಇತ್ಯಾದಿ ವ್ಯವಹಾರಗಳು ಹೇಗೆ ಉಪಪನ್ನವಾಗುತ್ತವೆ? ಎಂದು ಪ್ರಶ್ನಿಸಬಾರದು. ಬ್ರಾಹ್ಮಣ ಮೊದಲಾದ ಜಾತಿ ಮತ್ತು ಆಯಾ ಪದಗಳಿಗೆ, ಆಯಾ ಅರ್ಥ ಇವುಗಳು ಅನ್ಯಥಾ ಉಪಪನ್ನ ಆಗುವುದರಿಂದ, ಇದೂ ಸಹ ಸರಿಯಲ್ಲ. ಏಕೆಂದರೆ, ಎಲ್ಲವೂ ಈಶ್ವರನಿಂದಲೇ ರಚಿತವಾದ್ದರಿಂದ ಉಪಪನ್ನವಾಗುತ್ತದೆ.

ಪರಮಾತ್ಮನ ಮುಖದಿಂದ ಬ್ರಾಹ್ಮಣಾದಿಗಳ ಉತ್ಪತ್ತಿ

तत्वप्रकाशिका – 'ब्राह्मणादेव ब्राह्मणः' इति नियमस्य क्वचिदन्यथा-त्वोपपत्तेर्वृश्चिक ताण्ड्वलीयकादिवदिति ।।२९।।

ಬ್ರಾಹ್ಮಣನಿಂದಲೇ ಬ್ರಾಹ್ಮಣನು ಹುಟ್ಟುತ್ತಾನಲ್ಲವೇ? ಹೀಗಿರುವಾಗ ಈಶ್ವರನಿಂದ ಬ್ರಾಹ್ಮಣನು ಹೇಗೆ ಹುಟ್ಟುತ್ತಾನೆಂದು ಹೇಗೆ ಹೇಳುತ್ತೀರಿ? ಎಂದು ನಿಯಮದಿಂದ ಪ್ರಶ್ನಿಸಬಾರದು. ಏಕೆಂದರೆ ಕೆಲವೊಮ್ಮೆ ವೃಶ್ಚಿಕದಿಂದಲೇ ವೃಶ್ಚಿಕವು ಹುಟ್ಟುವುದಾದರೂ, ಸೆಗಣಿಯಿಂದಲೂ ವೃಶ್ಚಿಕ-ಕೀಟ ಮೊದಲಾದವುಗಳು ಹುಟ್ಟುವುದು ಕಂಡಿದೆ. ಅದರಂತೆ ಪರಮಾತ್ಮನ ಮುಖದಿಂದ ಬ್ರಾಹ್ಮಣಾದಿಗಳ ಉತ್ಪತ್ತಿಯನ್ನು ಹೇಳಬಹುದು.

ಭಾವದೀಪ

ಮತ್ತೊಂದು ಯುಕ್ತಿಯಿಂದ ದೇವಪ್ರವಾಹನಿತ್ಯತ್ವ ಸಮರ್ಥನೆ

भावदीपः – ।। अत एव च नित्यत्वम् ।।

युक्त्यन्तरेणेति ।। पूर्वमनुमानपदेन युक्तेरुक्तत्वाद्युक्त्यन्तरेणेत्युक्तम् । सौत्रश्चकारः समुच्चय इति भावः । एवकारतात्पर्यमाह – न देवेति ।।

'ಯುಕ್ಯಂತರೇಣ' ಎಂಬ ಪದದಿಂದ ಮತ್ತೊಂದು ಯುಕ್ತಿಯಿಂದ ಎಂಬರ್ಥವನ್ನು ವಿವಕ್ಷಿಸಬೇಕು. ಹಿಂದೆ 'ಪ್ರತ್ಯಕ್ಷಾನುಮಾನಾಭ್ಯಾಂ' ಎಂಬುದಾಗಿ ಅನುಮಾನ ಪದದಿಂದ ಒಂದು ಬಗೆಯ ಯುಕ್ತಿಯನ್ನು ಹೇಳಿ, ಪ್ರಕೃತ ಮತ್ತೊಂದು ಯುಕ್ತಿಯನ್ನು ಹೇಳುತ್ತಿದ್ದಾರೆ. ಹಿಂದಿನ ಯುಕ್ತಿಯನ್ನು ಸಮುಚ್ಚಯ ಮಾಡುವುದಕ್ಕಾಗಿ ಸೂತ್ರದಲ್ಲಿ ಚಕಾರವು ನಿಯುಕ್ತವಾಗಿದೆ. 'ಅತ ಏವ' ಎಂಬಲ್ಲಿರುವ ಏವಕಾರದ ತಾತ್ಪರ್ಯವನ್ನು 'ನ ದೇವಪ್ರವಾಹತ್ವನಿತ್ಯತ್ವಸಿದ್ಧ್ಯರ್ಥಂ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಮಹಾಭಾರತಾದಿಗಳಂತೆ ವೇದಗಳಿಗೂ ಪ್ರಾಮಾಣ್ಯ

भावदीपः – यत्परेणेति ।। 'वाचा विरूप नित्यया' इत्यादिनेत्यर्थः । अनुपपत्तिं व्यनक्ति – नहीति ।। यद्यपि शब्दशक्तिविषयस्य वाच्यस्य नाशेऽपि शक्तेस्तदाश्रयशब्दस्य चानाश उपपद्यते, शक्यनाशे शक्तितदाश्रय-योर्नाशानियमात् । प्रलये वाच्यस्य देवतादेरभावेऽपि वाचकसद्भावाद् भारतादिवदतीतविषयत्वोपपत्तेश्च ।

'ಪರೇಣ ಪ್ರತಿಪಾದಿತಂ' ಎಂದರೆ 'ವಾಚಾ ವಿರೂಪನಿತ್ಯಯಾ' ಎಂಬ ಶ್ರುತಿಯಿಂದ ಪ್ರತಿಪಾದಿಸಲ್ಪಟ್ಟ ಎಂದರ್ಥ. ಅನುಪಪತ್ತಿಯನ್ನು ಸ್ಪಷ್ಟಪಡಿಸುತ್ತಿದ್ದಾರೆ. 'ನಹಿ' ಇತ್ಯಾದಿ ವಾಕ್ಯದಿಂದ.

ಪ್ರಶ್ನೆ- ಶಬ್ದಶಕ್ತಿಗೆ ವಿಷಯವಾದ ವಾಚ್ಯ ಪದಾರ್ಥವು ನಷ್ಟವಾದರೂ ಸಹ ಶಬ್ದದ ಶಕ್ತಿಯಾಗಲಿ, ಶಕ್ತಿಗೆ ಆಶ್ರಯವಾದ ಶಬ್ದವಾಗಲಿ ನಾಶವಾಗಬೇಕಾಗಿಲ್ಲ. ಏಕೆಂದರೆ, 'ಶಕ್ಯನಾಶೇ ಶಕ್ತಿತದಾಶ್ರಯನಾಶಾ-ನಿಯಮಾತ್' ಶಕ್ಯವು ನಷ್ಟವಾದ ಮಾತ್ರಕ್ಕೆ ಶಕ್ತಿಯಾಗಲಿ, ತದಾಶ್ರಯವಾದ ಶಬ್ದವಾಗಲಿ

ನಾಶವಾಗಬೇಕೆಂಬ ನಿಯಮವಿಲ್ಲ. ಪ್ರಳಯಕಾಲದಲ್ಲಿ ವಾಚ್ಯರಾದ ದೇವತೆಗಳಿಲ್ಲದಿದ್ದರೂ ವಾಚಕವಾದ ಪದಗಳಿರುವುದರಿಂದ ಮತ್ತು ಮಹಾಭಾರತಾದಿಗಳು ಹೇಗೆ ಅತೀತವಿಷಯಕವಾಗಿವೆಯೋ, ಅದರಂತೆ ವೇದಗಳೂ ಕೂಡ ಅತೀತವಿಷಯಕವಾಗಿ ಉಪಪನ್ನವಾಗುತ್ತವೆ.

ದೇವತಾಹ್ವಾನ ಶ್ರುತಿಯ ಬಗ್ಗೆ

भावदीपः – तथापि प्रागुक्तदिशा 'इन्द्र आगच्छ' इत्यादिदेवताह्वानादि-रूपाया वाचो नित्यत्वं वाच्यानित्यत्वेऽनुपपन्नमिति भावः । अत एव वक्ष्यति – नापि भारतादीत्यादि ।।

ಉತ್ತರ - ಹಿಂದೆ ಹೇಳಿದಂತೆ 'ಇಂದ್ರ! ಆಗಚ್ಛ' 'ಎಲೈ ಇಂದ್ರನೇ! ಬಾ' ಇತ್ಯಾದಿಯಾದ ದೇವತಾಹ್ವಾನರೂಪವಾದ ವೇದಗಳಿಗೆ ವಾಚ್ಯವಾದ ಪದಾರ್ಥಗಳು ಅನಿತ್ಯವಾದಲ್ಲಿ ನಿತ್ಯತ್ವವು ಉಪಪನ್ನವಾಗುವುದಿಲ್ಲ. ಆದ್ದರಿಂದಲೇ, ಮುಂದೇ 'ನಾಪಿ ಭಾರತಾದಿ' ಇತ್ಯಾದಿಯಾಗಿ ಹೇಳುತ್ತಾರೆ.

'ಅನುಪಪತ್ತೇಃ ಉಕ್ತತ್ವಾತ್' ಎಂಬುದರ ವ್ಯಾಖ್ಯಾನ

भावदीपः – तदिति ।। प्रामाण्यस्य साधितत्वेन अप्रामाण्यस्याभावाद-वेत्यर्थः।। अनुपपत्तेरिति ।। देवताह्वानादिरूपस्य वर्तमानविषयत्वं विनाऽनुपपत्तेरुक्तत्वादित्यर्थः ।

'ತದಭಾವಾದೇವ' ಎಂದರೆ 'ಪ್ರಾಮಾಣ್ಯವನ್ನು ಪ್ರತಿಪಾದನೆ ಮಾಡಿ ಅಪ್ರಾಮಾಣ್ಯವು ಇಲ್ಲವೆಂದು ಹೇಳಿದ್ದರಿಂದಲೇ' ಎಂದರ್ಥ. 'ಅನುಪಪತ್ತೇಃ ಉಕ್ತತ್ವಾತ್' ಎಂದರೆ ದೇವತೆಗಳ ಆಹ್ವಾನರೂಪವಾದ ವಾಕ್ಯಕ್ಕೆ ವರ್ತಮಾನವಿಷಯತ್ವವನ್ನು ಬಿಟ್ಟು ಬೇರೆ ಅರ್ಥವು ಉಪಪನ್ನವಾಗುವುದಿಲ್ಲವೆಂದು ಹೇಳಿದ್ದರಿಂದ ಎಂದರ್ಥ.

'ಸೂರ್ಯಾಚಂದ್ರಮಸೌ' ಎಂಬ ಶ್ರುತಿಯ ವ್ಯಾಖ್ಯಾನ

भावदीपः –'सूर्य' इति श्रुतेरपि स्वरूपैक्यपरत्वोपपत्तेराह – प्रलयेति ।। ननु प्रलये ब्राह्मणादेरभावेन 'ब्राह्मण्यां ब्राह्मणाज्जातो ब्राह्मणः परिकीर्तितः' ।

इत्याद्युक्तजातिभेदः देवर्ष्यादिशब्दसङ्केतः वेदोक्तरूपकर्मलिङ्गादिव्यवस्था च नोपपद्यत इति शङ्कते – जातीति ।।

'ಸೂರ್ಯಾಚಂದ್ರಮಸೌ' ಎಂಬ ಶ್ರುತಿಯು ಬೇರೆ ಬೇರೆ ಸೂರ್ಯರನ್ನೇನು ಪ್ರತಿಪಾದನೆ ಮಾಡಬೇಕಾಗಿಲ್ಲ. ಒಬ್ಬನೇ ಸೂರ್ಯನೆ ಪ್ರತಿಕಲ್ಪದಲ್ಲಿಯೂ ಹುಟ್ಟುತ್ತಾನೆಂದು ಹೇಳಬಹುದಲ್ಲವೇ? ಆದ್ದರಿಂದ 'ಪ್ರಳಯಶ್ರುತಿಬಾಹುಲ್ಯಾಚ್ಚ' ಎಂದು ಹೇಳಿದ್ದಾರೆ.

ಪ್ರಳಯಕಾಲದಲ್ಲಿ ಬ್ರಾಹ್ಮಣಾದಿಗಳೇ ಇಲ್ಲದಿದ್ದಾಗ ಬ್ರಾಹ್ಮಣಿಯಲ್ಲಿ ಬ್ರಾಹ್ಮಣಪುರುಷನಿಂದ ಹುಟ್ಟಿದವನಿಗೆ 'ಬ್ರಾಹ್ಮಣ' ಎಂಬ ಜಾತಿಯು ಬರುತ್ತದೆಂದು ಹೇಳುವುದು ಹೇಗೆ ಯುಕ್ತವಾಗುತ್ತದೆ? ಇದರಂತೆ ದೇವತೆಗಳು, ಋಷಿಗಳು ಇತ್ಯಾದಿಯಾದ ಸಂಕೇತವು ವೇದದಲ್ಲಿ ಹೇಳಲ್ಪಟ್ಟ ಕರ್ಮಲಿಂಗಾದಿ ವ್ಯವಸ್ಥೆಗಳೆಲ್ಲವೂ ಹೇಗೆ ಯುಕ್ತವಾಗುತ್ತವೆ? ಎಂಬ ಶಂಕೆಯನ್ನು ಜಾತಿಸಂಕೇತ ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ವಿಜಾತೀಯಜನ್ಯತ್ವವನ್ನು ಒಪ್ಪಬಹುದೇ ?

भावदीपः – वृश्चिकेति ।। यथा गोमयतण्डुलकणादिविजातीयजन्यानामपि वृश्चिकताण्डुलीयकत्वादिस्तथैवाब्राह्मणाज्जातस्यापि सर्गादिकालीनस्य ब्राह्मणत्वादिजातिरित्यर्थः । सङ्केताद्यनुपपत्तिरग्रे 'ऋषीणाम्' इति स्मृतौ निरसिष्यत इत्यर्थः ।।२९।।

ಯಾವ ರೀತಿಯಾಗಿ ಗೋಮಯ, ತಂಡುಲಕಣ ಇವುಗಳಿಂದ ವಿಜಾತೀಯವಾದ ವೃಶ್ಚಿಕ-ತಾಂಡುಲೀಯಕಗಳು ಹುಟ್ಟುತ್ತವೋ, ಅದರಂತೆ ಸೃಷ್ಟಿಯ ಆದಿಕಾಲದಲ್ಲಿ ಅಬ್ರಾಹ್ಮಣನಿಂದ ಹುಟ್ಟಿದವನಿಗೂ 'ಬ್ರಾಹ್ಮಣ' ಎಂದು ಕರೆಯಬಹುದು. ಸಂಕೇತಾದ್ಯನುಪಪತ್ತಿಯನ್ನು ಮುಂದೆ 'ಋಷೀಣಾಂ' ಎಂಬ ಸ್ಮೃತಿಯಿಂದ ನಿರಾಕರಿಸಲಾಗುತ್ತದೆ.

ಬ್ರಹ್ಮಸೂತ್ರ

'ಸಮಾನನಾಮರೂಪತ್ವಾತ್' ಇತ್ಯಾದಿ ಸೂತ್ರವ್ಯಾಖ್ಯಾನ

ब्रह्मसूत्रम् — ।। समाननामरूपत्वाच्चावृत्तावप्यविरोधो दर्शनात्स्मृतेश्च ।।३०।।

ಸೂತ್ರಾರ್ಥ - ದೇವತಾಪದವಿಗೆ ಯಾರು ಬರುತ್ತಾರೋ ಅವರಿಗೆ ಹಿಂದಿನ ದೇವತೆಗಳ ಹೆಸರು ಆಕೃತಿಗಳೆಲ್ಲವೂ ಸಮಾನವಾಗಿಯೇ ಇರುತ್ತದೆ. ಆದ್ದರಿಂದ ಹಿಂದಿನ ದೇವತೆಗಳು ಮುಕ್ತರಾದ ಮೇಲೆ ದೇವತಾಪದವಿಯಲ್ಲಿ ಅವರಿಲ್ಲದಿದ್ದರೂ ದೇವತೆಗಳನ್ನು ಪ್ರತಿಪಾದಿಸುವ ವೇದಕ್ಕೆ ಅಪ್ರಾಮಾಣ್ಯದೋಷ ಬರುವುದಿಲ್ಲವೆಂದು ಶ್ರುತಿ ಸ್ಮೃತಿಗಳು ಹೇಳುತ್ತವೆ.

ಅರ್ಥ -- ಆವೃತ್ತಾವಪಿ = ಹಿಂದಿನಕಲ್ಪದಲ್ಲಿ ಯಾವ ದೇವತೆಗಳು ಮುಕ್ತರಾಗಿದ್ದಾರೋ, ಅವರು ಪುನಃ ತಮ್ಮ ಸ್ಥಾನದಲ್ಲಿ ಇಲ್ಲದಿದ್ದರೂ, ಅವಿರೋಧಃ = ಅವರನ್ನು ಒಂದೇ ನಾಮರೂಪಗಳಿಂದ ಪ್ರತಿಪಾದಿಸುವ ವೇದಕ್ಕೆ ಅಪ್ರಾಮಾಣ್ಯವೆಂಬ ವಿರೋಧವು ಬರುವುದಿಲ್ಲ. ಏಕೆಂದರೆ, ಸಮಾನನಾಮರೂಪತ್ವಾತ್ = ಹಿಂದಿನಕಲ್ಪದಲ್ಲಿ ದೇವತೆಗಳಿಗೆ ಯಾವ ಹೆಸರು ಹಾಗೂ ರೂಪಗಳು ಇದ್ದವೋ ಈ ಕಲ್ಪದಲ್ಲಿ ಬಂದಿರುವ ದೇವತೆಗಳಿಗೂ ಅದೇ ಹೆಸರು ಅದೇ ರೂಪಗಳು ಇರುತ್ತವೆ. ಆದ್ದರಿಂದ ವೇದಪ್ರತಿಪಾದ್ಯರಾದ ದೇವತೆಗಳು ಒಂದೇವಿಧವಾದ್ದರಿಂದ ದೇವತಾಪ್ರತಿಪಾದಕವಾದ ವೇದಗಳಿಗೆ ಅಪ್ರಾಮಾಣ್ಯವು ಬರುವುದಿಲ್ಲವೆಂದು ತಿಳಿಯಬೇಕು. ಸಮಾನವಾದ ನಾಮರೂಪಗಳನ್ನು ಏಕೆ ಹೇಳಬೇಕು? ಅಂದರೆ ದರ್ಶನಾತ್ = 'ಯಥಾಪೂರ್ವಮ್' ಎಂಬ ಮಹಾನಾರಾಯಣೋಪನಿಷತ್ತು ಪ್ರಮಾಣವಾಗಿರುವುದರಿಂದ, ಸ್ಮೃತೇಶ್ಚ = 'ಅನಾದಿನಿಧನಾದೇವ' ಎಂಬ ಸ್ಮೃತಿಯೂ ಸಹ ಪ್ರಮಾಣವಾಗಿರುವುದರಿಂದ.

ಬ್ರಹ್ಮಸೂತ್ರಭಾಷ್ಯ

ಪ್ರತಿಕಲ್ಪದ ದೇವತೆಗಳ ಹೆಸರು - ಆಕಾರ-ಕಾರ್ಯಗಳು ಸಮಾನ

ब्रह्मसूत्रभाष्यम् — अतीतानागतानां देवानां समाननामरूपत्वात्प्राप्तपदानां मुक्त्याऽऽवृत्तावप्यविरोधः ।

ಅನುವಾದ - ಹಿಂದಿನ ಹಾಗೂ ಈಗಿನ ಮತ್ತು ಮುಂದಿನ ಕಾಲಗಳಲ್ಲಿರುವ ದೇವತೆಗಳು ಮೋಕ್ಷಕ್ಕೆ ತಲುಪಿದ ಮೇಲೆ ತಮ್ಮ ಸ್ಥಾನದಲ್ಲಿ ಅವರು ಇರುವುದಿಲ್ಲ. ಆದರೂ ಸಹ ಮತ್ತೊಬ್ಬ ಜೀವಿಯು ಅದೇ ಸ್ಥಾನದಲ್ಲಿ ಸಮಾನವಾದ ಅದೇ ಹೆಸರನ್ನು ಹಾಗೂ ಅಂತಹ ರೂಪವನ್ನು

ಹೊಂದಿರುತ್ತಾರೆ. ಆದ್ದರಿಂದ ವೇದವು ಅಪ್ರಮಾಣವಾಗಬೇಕಾಗಿಲ್ಲ,

ಪ್ರತಿಪದಾರ್ಥ -- ದೇವತೆಗಳು ಪ್ರವಾಹತಃ ನಿತ್ಯರಾಗಿದ್ದರೂ, ವೇದವು ಪ್ರಮಾಣವಾಗಬೇಕಾಗಿಲ್ಲ, ಏಕೆಂದರೆ ಪ್ರತಿಕಲ್ಪದಲ್ಲಿಯೂ ಬೇರೆ ಬೇರೆ ದೇವತೆಗಳು ಇರುವುದರಿಂದ ಅವರನ್ನು ಪ್ರತಿಪಾದಿಸುವ ವೇದವೂ ಸಹ ಭಿನ್ನವೇ ಆಗಬೇಕಾಗುತ್ತದಲ್ಲವೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಪ್ರಾಪ್ತಪದಾನಾಂ = ಮೊಕ್ಷವನ್ನು ತಲುಪಿದ, ದೇವಾನಾಂ = ಚತುರ್ಮುಖಾದಿ ದೇವತೆಗಳಿಗೆ, ಮುಕ್ತ್ಯಾ = ಮೋಕ್ಷವಾಗಿ, ಅವೃತ್ತಾವಪಿ = ತಮ್ಮ ಪದವಿಯಲ್ಲಿ ಇಲ್ಲದಿದ್ದರೂ, ಅತೀತಾನಾಗತಾನಾಂ = ಹಿಂದಿನ ಈಗಿನ ಅಥವಾ ಮುಂದಿನ, ದೇವಾನಾಂ = ದೇವತೆಗಳಿಗೆ, ಸಮಾನನಾಮರೂಪತ್ವಾತ್ = ಒಂದೇ ಹೆಸರು ಮತ್ತು ಆಕೃತಿ ಹಾಗೂ ಕಾರ್ಯಗಳು ಇರುವುದರಿಂದ, ಅವಿರೋಧಃ = ವೇದವು ಅಪ್ರಮಾಣವಾಗಬೇಕೆಂಬ ಅವಕಾಶವಿಲ್ಲ .

ಸಮಾನವಾದ ನಾಮರೂಪಗಳುಳ್ಳವರು ದೇವತೆಗಳು

ब्रह्मसूत्रभाष्यम् – 'यथापूर्वम्' (महाना. ५-७.) इति दर्शनात् ।

ಅನುವಾದ - ಆಯಾ ಸ್ಥಾನದಲ್ಲಿ ಬರುವ ದೇವತೆಗಳಿಗೆ ಸಮಾನವಾದ ನಾಮರೂಪಗಳಿವೆ ಎಂಬುದು, 'ಯಥಾ ಪೂರ್ವಂ' ಎಂಬ ಶ್ರುತಿಯಿಂದ ಸಿದ್ಧವಾಗಿದೆ.

ಪ್ರತಿಪದಾರ್ಥ -- ಸಕಲದೇವತೆಗಳಿಗೆ ಸಮಾನವಾದ ನಾಮ ರೂಪಗಳಿವೆ ಎಂಬ ವಿಷಯದಲ್ಲಿ ಪ್ರಮಾಣವಿದೆ.

ಯಥಾ ಪೂರ್ವಂ = ಯಥಾ ಪೂರ್ವಂ ಅಕಲ್ಪಯತ್, ಇತಿ = ಎಂಬ, ದರ್ಶನಾತ್ = ವೇದಗಳಲ್ಲಿ ಹೇಳಿದ್ದು ಕಾಣಿಸುವುದರಿಂದ.

ಪರಮಾತ್ಮನ ಮುಖದಿಂದ ಹೊರಹೊಮ್ಮಿತು ವೇದ

ब्रह्मसूत्रभाष्यम् – अनादिनिधना नित्या वागुत्सृष्टा स्वयम्भुवा ।
ऋषीणां नामधेयानि याश्च वेदेषु दृष्टयः ।।

वेदशब्देभ्य एवादौ निर्ममे स महेश्वरः ।।

इति स्मृतेश्च ।।३०।।

ಅನುವಾದ - 'ಅನಾದಿನಿಧನಾ' ಇತ್ಯಾದಿ ಸ್ಮೃತಿಯೂ ಸಹ ದೇವತೆಗಳಿಗೆ ಸಮಾನ ನಾಮರೂಪಗಳನ್ನು ಹೇಳುತ್ತದೆ. ಪರಮಾತ್ಮನ ಮುಖದಿಂದ ಹೊರಹೊಮ್ಮಿದ ವೇದವಾಕ್ಯಕ್ಕೆ ಆದಿ-ಅಂತ್ಯಗಳು ಇಲ್ಲದ್ದರಿಂದ ನಿತ್ಯವಾಗಿದೆ, ಅಂತಹ ವಿಷ್ಣುವು ವೇದಗಳಲ್ಲಿ ಹೇಳಿದ ಪದಗಳಿಂದಲೇ ಬ್ರಹ್ಮಾದಿಜ್ಞಾನಿಗಳಿಗೆ ಹೆಸರನ್ನು, ವೇದದಲ್ಲಿ ಹೇಳಿರುವ ರೂಪಗಳನ್ನೂ, ನೀಡಲಾಗಿದೆ.

ಪ್ರತಿಪದಾರ್ಥ -- ಶ್ರುತಿ ಪ್ರಮಾಣವಲ್ಲದೆ ಸ್ಮೃತಿ ಪ್ರಮಾಣವೂ ಸಹ ಇರುತ್ತದೆಂದು ಸಾಧಿಸುತ್ತಿದ್ದಾರೆ. -

ಅನಾದಿನಿಧನಾ = ಆದಿಯೂ ಇಲ್ಲದ ಅಂತ್ಯವೂ ಇಲ್ಲದ, ನಿತ್ಯಾಃ = ನಿತ್ಯವೆನಿಸಿದ, ವಾಕ್ = ವರ್ಣಾತ್ಮಕವಾದ ವೇದವು, ಸ್ವಯಂಭುವಾ = ಭಗವಂತನಿಂದಲೇ ಉತ್ಸೃಷ್ಟಾ = ಹೊರಹೊಮ್ಮಿತು, ಆ ವೇದದಲ್ಲಿ, ಋಷೀಣಾಂ = ಋಷಿಗಳ, ನಾಮಧೇಯಾನಿ = ಹೆಸರುಗಳು, ಯಾಶ್ಚ = ಯಾವ ದೇವತೆಗಳ ಹೆಸರೂ ಸಹ, ವೇದೇಷು = ವೇದಗಳಲ್ಲಿ, ದೃಷ್ಟಯಃ = ಕಂಡಿದೆಯೋ, ಅವೆಲ್ಲವೂ, ವೇದಶಬ್ದೇಭ್ಯಃ ಏವ = ವೇದದಲ್ಲಿರುವ ಶಬ್ದಗಳಿಂದಲೇ, ಮಹೇಶ್ವರಃ = ಮಹೇಶ್ವರನಾದ ವಿಷ್ಣು, ಆದೌ = ಆದಿಕಾಲದಲ್ಲಿ, ನಿರ್ಮಮೇ = ನಿರ್ಮಾಣಮಾಡಿದನು, ಇತಿ = ಹೀಗೆ, ಸ್ಮೃತೇಶ್ಚ = ಸ್ಮೃತಿ ಪ್ರಮಾಣವೂ ಇರುತ್ತದೆ.

ಸತ್ತರ್ಕದೀಪಾವಳಿ

ವೇದವು ನಿತ್ಯವಾಣಿ

सत्तर्कदीपावलिः –।। समाननामरूपत्वाच्चावृत्तावप्यविरोधो दर्शनात्स्मृतेश्च ।।

समानेत्यादिना ।। स्वयम्भुवा महेश्वरेण विष्णुना वा वेदवागादि-निधनोत्सृष्टोच्चरिता तस्यामृषीणां ब्रह्मादीनां यानि नामानि स्थितानि, यानि च दृश्यत्वाद् दृश्याख्यानि रूपाण्युक्तानि, तान्येव कल्पे स्वसृष्टानां ब्रह्मादीनां स महेश्वरो निर्ममे चकार । यन्नामरूपा ब्रह्मादयो वेदोक्तास्तन्नामरूपांस्तत्र कल्पे सृजतीत्यर्थः ।।

ಚತುರ್ಮುಖ ಬ್ರಹ್ಮನಿಂದ ಅಥವಾ ರುದ್ರನಿಂದ ಅಥವಾ ವಿಷ್ಣುವಿನಿಂದ ಮೊದಲು ಯಾವ ವೇದವಾಣಿಯು ಉಚ್ಚರಿಸಲ್ಪಟ್ಟಿತೋ, ಅಂತಹ ವೇದವು ಆದ್ಯಂತಶೂನ್ಯವಾದ ನಿತ್ಯವಾಣಿಯಾಗಿದೆ. ಅದರಲ್ಲಿ ಯಾವ ಋಷಿಗಳ ಅಥವಾ ಬ್ರಹ್ಮಾದಿಗಳ ನಾಮ-ರೂಪಗಳೆಲ್ಲವೂ ಹೇಳಲ್ಪಟ್ಟಿದೆಯೋ, ಅಂತಹ ನಾಮ-ರೂಪಗಳಿಂದಲೇ ಋಷಿ, ಬ್ರಹ್ಮ ಮೊದಲಾದವರನ್ನು ಪರಮೇಶ್ವರನು ಸೃಷ್ಟಿ ಮಾಡುತ್ತಾನೆ. ಪ್ರತಿಕಲ್ಪದಲ್ಲಿಯೂ ಹೀಗೆ ಸೃಷ್ಟಿ ಮಾಡುವುದರಿಂದ ದೇವತಾಪದದಲ್ಲಿರುವ ದೇವತೆಗಳಿಗೆ ಮುಕ್ತಿಯಾಗುವುದರಿಂದ ಯಾವುದೇ ಬಾಧಕಗಳಿರುವುದಿಲ್ಲ.

ತತ್ತ್ವಪ್ರದೀಪ

ಸಮಾನವಾದ ನಾಮರೂಪಗಳುಳ್ಳವನು ಶ್ರೀಹರಿ ಮಾತ್ರ

तत्वप्रदीपः – समाननामरूपत्वाच्चाऽवृत्तावप्यविरोधो दर्शनात्स्मृतेश्च ।। ''समानानि' सदृशानि नामानि येषां रूपाणां तानि 'समाननामानि' समाननामानि रूपाणि यस्य स भगवान् 'समाननामरूपः' योग्यनामरूप इत्यर्थः ।

'ಸಮಾನನಾಮರೂಪತ್ವಾಚ್ಚಾನವೃತ್ತಾವಪ್ಯವಿರೋಧೋ ದರ್ಶನಾತ್ ಸ್ಮೃತೇಶ್ಚ' ಎಂಬ ಸೂತ್ರವೂ ಕೂಡ ಹರಿಪರವಾಗಿದೆ. 'ಸಮಾನವಾದ' ಎಂದರೆ ಸದೃಶವಾದ ಹೆಸರು, ರೂಪ ಇವುಗಳಿರುವುದು ಪರಮಾತ್ಮನಲ್ಲಿ ಮಾತ್ರ. 'ಸಮಾನನಾಮಾನಿ ರೂಪಾಣಿ ಯಸ್ಯ ಸಃ ಸಮಾನನಾಮರೂಪಃ' ಎಂಬ ನಿಷ್ಪತ್ತಿಯನ್ನು ಇಲ್ಲಿ ತಿಳಿಯಬೇಕು.

ವಿವರಣೆ - ಪ್ರತೀಕಲ್ಪದಲ್ಲಿರುವ ದೇವತೆಗಳು ಸಮಾನವಾದ ನಾಮ ಹಾಗೂ ರೂಪಗಳನ್ನು ಹೊಂದಿರುತ್ತಾರೆ ಎಂದು ಹಿಂದೆ ವ್ಯಾಖ್ಯಾನ ಮಾಡಲಾಯಿತು. ಪ್ರಕೃತ ಸಮಾನವಾದ ನಾಮರೂಪಗಳುಳ್ಳವನು ಭಗವಂತನೇ ಆಗಿದ್ದಾನೆಂದು ವ್ಯಾಖ್ಯಾನ ಮಾಡಲಾಗುತ್ತಿದೆ. ಭಗವಂತನ ಪ್ರತಿಯೊಂದು ನಾಮಗಳು, ರೂಪಗಳು ಪರಿಪೂರ್ಣವಾಗಿರುವುದರಿಂದ ಸಂಪೂರ್ಣವಾಗಿ ಸಾದೃಶ್ಯವನ್ನು ಹೊಂದಿರುವುದು ಭಗವಂತನ ನಾಮಗಳು ಹಾಗೂ ರೂಪಗಳು. ಉಳಿದ ದೇವತೆಗಳಲ್ಲಿ ಪ್ರತೀಕಲ್ಪದಲ್ಲಿಯೂ ಒಂದೇ ಹೆಸರು, ಧರ್ಮ, ಕರ್ಮಗಳನ್ನು ಹೊಂದಿದ್ದರೂ ಪರಿಪೂರ್ಣತ್ವವಿಲ್ಲದ ಕಾರಣ ಸಂಪೂರ್ಣಸಾದೃಶ್ಯವನ್ನು ಹೇಳಲು ಸಾಧ್ಯವಿಲ್ಲ. ಪರಮಾತ್ಮನಲ್ಲಿ ಮಾತ್ರ ಇಂಥ ಸಂಪೂರ್ಣ ಸಾದೃಶ್ಯವನ್ನು ಹೇಳಬಹುದು. ಆದ್ದರಿಂದ ಹರಿಪರವಾಗಿ ಹೀಗೆ ವ್ಯಾಖ್ಯಾನ ಮಾಡುವುದು ಬಹಳ ಸ್ವರಸವಾಗಿದೆ.

ಸರ್ವಶಬ್ದವಾಚ್ಯತ್ವಕ್ಕೆ ಎಂದೆಂದೂ ವಿರೋಧವಿಲ್ಲ

तत्वप्रदीपः – 'नाम' इति सामान्यनामोक्तेरखिलनामविवक्षा । नहि विष्ण्वन्वरूपाणां सदृशनामत्वम् । शब्दप्रवृत्तिहेतुवैकल्यादकात् स्न र्न्यपारतन्त्राभ्याम् । तत्साकल्याद्विष्णुरेव समाननामरूपः । अतो विष्णोः समाननामरूपत्वात्तदभावाच्चान्येषां न तस्य सर्वशब्दवाच्यत्वविरोधः ।

'ನಾಮ' ಎಂಬುದಾಗಿ ಸಾಮಾನ್ಯವಾದ ನಾಮವನ್ನು ಹೇಳಿರುವುದರಿಂದ ಎಲ್ಲಾ ನಾಮಗಳನ್ನೂ ಕೂಡ ವಿವಕ್ಷಿಸಬೇಕು. ಭಗವಂತನನ್ನು ಬಿಟ್ಟು ಉಳಿದ ರೂಪಗಳಿಗೆ ಸದೃಶವಾದ ನಾಮತ್ವವನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಶಬ್ದದ ಪ್ರವೃತ್ತಿನಿಮಿತ್ತವು ದೇವತೆಗಳಲ್ಲಿ ಸಂಪೂರ್ಣವಾಗಿ ಇರುವುದಿಲ್ಲ ಮತ್ತು ಸ್ವತಂತ್ರವಾಗಿ ಇರುವುದಿಲ್ಲ. ಶ್ರೀಹರಿಯಲ್ಲಿ ಸಂಪೂರ್ಣವಾಗಿದೆ ಮತ್ತು ಸ್ವತಂತ್ರವಾಗಿಯೂ ಇರುತ್ತವೆ. ಆದ್ದರಿಂದ ವಿಷ್ಣು ಸಮಾನವಾದ

ನಾಮರೂಪಗಳನ್ನು ಹೊಂದಿರುವುದರಿಂದ ಉಳಿದ ದೇವತೆಗಳು ಹೊಂದದೆ ಇರುವುದರಿಂದ ಭಗವಂತನಲ್ಲಿ ಸರ್ವಶಬ್ದವಾಚ್ಯತ್ವದ ವಿರೋಧಕ್ಕೆ ಅವಕಾಶವಿಲ್ಲ.

'ಧಾತಾ ಯಥಾಪೂರ್ವಮ್' ಎಂಬ ಶ್ರುತಿಗೂ ಹರಿಪರತ್ವ ಸಮರ್ಥನೆ

तत्वप्रदीपः – यथापूर्वमिति दर्शनात् । यथापूर्वं पूर्णज्ञानः सर्वस्वतन्त्रः, अतः समाननामरूपः स्थितस्तथैव सन् धाता सूर्यादीनकल्पयत् । अतः सूर्यादिकृतेः प्रागपि शब्दप्रामाण्याविरोध इति सिद्धम् ।।

'ದರ್ಶನಾತ್ ಸ್ಮೃತೇಶ್ಚ' ಎಂಬ ಸೂತ್ರಭಾಗಕ್ಕೆ ಹೀಗರ್ಥ - 'ಯಥಾಪೂರ್ವಮ್' ಎಂಬ ಶ್ರುತಿ ಪ್ರಮಾಣವಿರುವುದರಿಂದ ಪ್ರಳಯಕಾಲದಲ್ಲಿ ಭಗವಂತನು ಸಮಾನವಾದ ನಾಮರೂಪಗಳುಳ್ಳವನಾಗಿದ್ದಾನೆ ಎಂದು. ಇಲ್ಲಿ 'ಯಥಾಪೂರ್ವಮ್' ಎಂಬುದಕ್ಕೆ ಪೂರ್ಣವಾದ ಜ್ಞಾನವುಳ್ಳವನು ಸರ್ವತಂತ್ರಸ್ವತಂತ್ರನು ಆದ್ದರಿಂದ ಸಮಾನವಾದ ನಾಮರೂಪಗಳುಳ್ಳವನು ಆಗಿಯೇ 'ಧಾತಾ' = ವಿಷ್ಣುವು ಸೂರ್ಯಾದಿಗಳನ್ನು ಅಕಲ್ಪಯತ್ = ಸೃಷ್ಟಿಮಾಡಿದನು. ಆದ್ದರಿಂದ ಸೂರ್ಯಾದಿಗಳನ್ನು ಮೊದಲು ಸೃಷ್ಟಿ ಮಾಡಿಯೂ ಕೂಡ ಪರಮಾತ್ಮನು ಪರಿಪೂರ್ಣನಾಗಿರುವ ಕಾರಣ ಶಬ್ದಪ್ರಾಮಾಣ್ಯದ ವಿರೋಧಕ್ಕೆ ಅವಕಾಶವಿಲ್ಲ ಎಂಬ ಪ್ರಮೇಯವು ಸಿದ್ಧವಾಯಿತು.

तत्वप्रकाशिका

ದೇವತಾಪದವಿಯಲ್ಲಿ ಬರುವವರು ಯಾರು ?

तत्वप्रकाशिका –

।। समाननामरूपत्वाच्चावृत्तावप्यविरोधो दर्शनात्स्मृतेश्च ।।

न देवानां प्रवाहनित्यत्वेनापि वेदप्रामाण्योपपत्तिः । तथा हि – किं पूर्वकल्पे मुक्ता एव देवा उत्तरकल्पे पुनरावर्तन्ते, तदन्ये एव वा ।

ದೇವತೆಗಳ ಪ್ರವಾಹವು ನಿತ್ಯವಾಗಿದ್ದರೂ ಸಹ ವೇದಪ್ರಾಮಾಣ್ಯವು ಉಪಪನ್ನವಾಗುವುದಿಲ್ಲ. ಅದು ಏಕೆಂದರೆ, ಹಿಂದಿನ ಕಲ್ಪದಲ್ಲಿ ಯಾವ ದೇವತೆಗಳಿಗೆ ಮೋಕ್ಷವಾಗಿದೆಯೋ, ಅದೇ ದೇವತೆಗಳೇ ಮುಂದಿನ ಕಲ್ಪದಲ್ಲಿಯೂ ದೇವತಾಪದವಿಗೆ ಬರುತ್ತಾರೋ? ಅಥವಾ ಬೇರೆ ದೇವತೆಗಳು ದೇವತೆಗಳ ಪದವಿಗೆ ಬರುತ್ತಾರೋ?

ಒಮ್ಮೆ ಮೋಕ್ಷವಾದ ಮೇಲೆ ಪುನಃ ಜನ್ಮ ಹೇಗೆ ?

तत्वप्रकाशिका – नाद्यः । मुक्तेरपुनरावृत्तित्वात् ।

ಮೊದಲನೇ ಪಕ್ಷವು ತಪ್ಪು. ಏಕೆಂದರೆ, ಒಮ್ಮೆ ಮೋಕ್ಷವಾದ ಮೇಲೆ ಪುನಃ ಜನ್ಮವಾಗಲು ಸಾಧ್ಯವಿಲ್ಲ.

ಬೇರೆಯವರು ಪದವಿಗೆ ಬರುವ ಕ್ರಮ ಹೇಗೆ ?

तत्वप्रकाशिका – अतस्तदन्य एवेति वाच्यम् । तथा च तेषां नानाविधनामरूपवतां वाचकवेदस्य कथं नाप्रामाण्यम् ।

ಆದ್ದರಿಂದ, ಬೇರೆ ದೇವತೆಗಳೇ ದೇವತಾಪದವಿಗೆ ಬರುತ್ತಾರೆಂದು ಹೇಳಬೇಕು. ಹಾಗಾದರೆ, ಹಿಂದಿನ ಕಲ್ಪದಲ್ಲಿರುವ ದೇವತೆಗಳ ನಾಮ ಹಾಗೂ ಸ್ವರೂಪಗಳಿಗಿಂತ ಭಿನ್ನವಾದ ನಾಮ ಹಾಗೂ ಸ್ವರೂಪಗಳನ್ನು ಈ ಕಲ್ಪದ ದೇವತೆಗಳು ಹೊಂದುವುದರಿಂದ ವಾಚಕವಾದ ವೇದಕ್ಕೆ ಏಕಪ್ರಕಾರತ್ವವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ, ವೇದವು ಹೇಗೆ ಅಪ್ರಮಾಣವಾಗದೇ ಇದ್ದೀತು?

ವೇದಕ್ಕೆ ಪಾಠಭೇದವಿದೆಯೇ ?

तत्वप्रकाशिका – तस्य प्रतिकल्पं पाठभेदाभावात् । तद्भावे नित्यत्व-व्याघातात् इत्याशङ्कां परिहरत्सूत्रमुपन्यस्य व्याचष्टे – समानेति ।।

ಇನ್ನು ಪ್ರತಿಕಲ್ಪದಲ್ಲಿಯೂ ಪಾಠಭೇದದಿಂದ ವೇದವು ದೇವತೆಗಳನ್ನು ಪ್ರತಿಪಾದಿಸುತ್ತದೆಂದು ಹೇಳಬೇಕು. ಆದರೆ, ನಿತ್ಯವಾದ ವೇದಕ್ಕೆ ಪಾಠಭೇದವೇ ಇರುವುದಿಲ್ಲ. ಹಾಗೇನಾದರೂ

ಪಾಠಭೇದವನ್ನು ಒಪ್ಪಿದರೆ, ನಿತ್ಯತ್ವಕ್ಕೆ ಹಾನಿ ಬರುತ್ತದೆ. ವ್ಯಾಹತಿ ದೋಷವೂ ಸಹ ಬರುತ್ತದೆ. ಈ ಬಗೆಯ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಸಮಾನ' ಇತ್ಯಾದಿ ಭಾಷ್ಯದಿಂದ.

ದೇವತಾಪದವಿಯಲ್ಲಿ ಬರುವ ಎಲ್ಲಾ ಚೇತನರು ಸಮಾನನಾಮರೂಪವುಳ್ಳವರು

तत्वप्रकाशिका – सम्भवत्येव देवप्रवाहनित्यत्वेन वेदप्रामाण्यम् । प्राचीनानां प्राप्तमुक्तित्वेन पुनः स्वपदेष्ववृत्तावपि तदन्येषां प्राचीनसमाननाम-रूपत्वात् तत्प्रतिपादकैकविधस्यापि वेदस्याप्रामाण्याप्राप्तेः ।

ದೇವತೆಗಳ ಪ್ರವಾಹವು ನಿತ್ಯವಾದ್ದರಿಂದ ವೇದಪ್ರಾಮಾಣ್ಯವು ಯುಕ್ತವೇ ಆಗುತ್ತದೆ. ಏಕೆಂದರೆ, ಹಿಂದಿನ ಕಲ್ಪದ ದೇವತೆಗಳಿಗೆ ಮೋಕ್ಷವಾದ ಮೇಲೆ ಪುನಃ ಅದೇ ದೇವತೆಗಳೇ ತಮ್ಮ ಸ್ಥಾನಕ್ಕೆ ಬಾರದಿದ್ದರೂ ಅವರಿಗಿಂತ ಭಿನ್ನರಾದ ಮತ್ತು ಅವರ ಹೆಸರು ಮತ್ತು ರೂಪಗಳನ್ನೇ ಹೊಂದಿರುವ ಬೇರೆ ದೇವತೆಗಳು ಆಯಾ ಸ್ಥಾನಗಳಲ್ಲಿ ಬರುತ್ತಾರೆ. ಅಂತಹ ದೇವತೆಗಳನ್ನು ಪ್ರತಿಪಾದಿಸುವ ವೇದಕ್ಕೆ ಅಪ್ರಾಮಾಣ್ಯ ಬರಲು ಸಾಧ್ಯವಿಲ್ಲ.

'ಧಾತಾ ಯಥಾಪೂರ್ವಮ್' ಎಂಬ ಶ್ರುತಿಯೇ ಇದರಲ್ಲಿ ಪ್ರಮಾಣ

तत्वप्रकाशिका – नच सर्वदेवानां समाननामरूपत्वे प्रमाणाभावः । 'यथापूर्वम्' इति श्रुतेः ।

ಪ್ರತಿಕಲ್ಪದಲ್ಲಿಯೂ ಆಯಾ ಸ್ಥಾನಗಳಿಗೆ ಬರುವಂತಹ ದೇವತೆಗಳ ನಾಮ ಹಾಗೂ ರೂಪಗಳು ಒಂದೇ ರೀತಿಯಾಗಿರುತ್ತದೆ ಎಂಬ ವಿಷಯದಲ್ಲಿ ಯಾವುದೇ ಪ್ರಮಾಣವು ಇಲ್ಲವೆಂದು ಹೇಳಬಾರದು. 'ಧಾತಾ ಯಥಾಪೂರ್ವಮ್' ಎಂಬ ಶ್ರುತಿಯೇ ಈ ವಿಷಯದಲ್ಲಿ ಪ್ರಮಾಣವಾಗಿದೆ.

'ಅನಾದಿನಿಧನಾ' ಎಂಬ ಶ್ರುತಿಯ ಸಂವಾದ

तत्वप्रकाशिका – एतच्छ्रुतेस्तत्स्वरूपकल्पनानियमपरत्वमपि सम्भवतीति। नानया तन्निश्चयश्च ? इति चेत् स्मृतिसंवादेन निश्चयोपपत्तेरिति भावः ।

ಈ ಶ್ರುತಿಯು ಪ್ರತಿಯೊಂದು ದೇವತೆಗಳು ಇರುತ್ತಾರೆಂಬ ನಿಯಮವನ್ನಷ್ಟೇ ಹೇಳುತ್ತಿದೆ ಹೊರತು ಅವರ ನಾಮ-ರೂಪಗಳು ಸಮಾನವಾಗಿರುತ್ತದೆ ಎಂದು ಹೇಳುತ್ತಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. 'ಅನಾದಿನಿಧನಾ' ಎಂಬ ಸ್ಮೃತಿಸಂವಾದವಿರುವ ಪ್ರಯುಕ್ತ 'ಧಾತಾ ಯಥಾಪೂರ್ವಮ್' ಎಂಬ ಶ್ರುತಿಗೆ ಸಮಾನ ನಾಮರೂಪವಿಷಯಕವಾಗಿಯೇ ವ್ಯಾಖ್ಯಾನ ಮಾಡಬೇಕು. ಅಂದರೆ, ಪ್ರತಿಕಲ್ಪದಲ್ಲಿಯೂ ಬರುವಂತಹ ದೇವತೆಗಳ ನಾಮ ಹಾಗೂ ರೂಪಗಳು ಸದೃಶವಾಗಿರುತ್ತವೆಯೆಂದು ನಿಶ್ಚಯಿಸಬಹುದು.

ವೇದಕ್ಕೆ ಪ್ರಾಮಾಣ್ಯ ಹೇಗೆ ?

तत्वप्रकाशिका – ननु कथं देवप्रवाहनित्यत्वे समाननामरूपत्वे वा नित्यवेदप्रामाण्योपपत्तिः । तद्वाचित्वेन ? इति चेन्न ।

ದೇವತೆಗಳ ಪ್ರವಾಹವು ನಿತ್ಯವಾದರೆ, ಮತ್ತು ನಾಮ ಹಾಗೂ ರೂಪಗಳು ಸದೃಶವಾಗಿದ್ದರೆ ನಿತ್ಯವಾದ ವೇದಕ್ಕೆ ಪ್ರಾಮಾಣ್ಯವು ಹೇಗೆ ತಾನೇ ಉಪಪನ್ನವಾಗುತ್ತದೆ? ಪ್ರವಾಹತಃ ದೇವತೆಗಳು ನಿತ್ಯವಾದ್ದರಿಂದ ಅವರನ್ನು ಪ್ರತಿಪಾದಿಸುವ ಪ್ರಯುಕ್ತ ವೇದವು ಪ್ರಮಾಣವಾಗುತ್ತದೆಂದು ಶಂಕಿಸಬಾರದು.

ದೇವತೆಗಳಿಗೆ ವೇದಪ್ರತಿಪಾದ್ಯತ್ವ ಹೇಗೆ ?

तत्वप्रकाशिका – तस्यैवासम्भवात् । न हि 'एतावत्कालमयं देवो मयोक्तः, अतः परमेनं वक्ष्यामि' इत्यपौरुषेयस्य विमृश्य वृत्तिः सम्भवति ? इत्याशङ्काऽपि स्मृत्यैव परिहृता ।

ಏಕೆಂದರೆ, ದೇವತೆಗಳಿಗೆ ವೇದಪ್ರತಿಪಾದ್ಯತ್ವವೇ ಉಪಪನ್ನವಾಗುವುದಿಲ್ಲ. ಅಪೌರುಷೇಯವಾದ ವೇದದಲ್ಲಿ 'ನಾನು ಇಲ್ಲಿಯ ತನಕ ಈ ದೇವತೆಯನ್ನು ಪ್ರತಿಪಾದನೆ ಮಾಡಿದ್ದೇನೆ. ಈಗ ಆ ದೇವತೆಗಿಂತ ಭಿನ್ನನಾದ ಆ ದೇವತೆಗೇ ಸಮಾನವಾದ ನಾಮ-ರೂಪಗಳನ್ನು ಹೊಂದಿರುವ ಮತ್ತೊಬ್ಬ ದೇವತೆಯನ್ನು ವರ್ಣಿಸುತ್ತೇನೆ' ಎಂಬ ವಿಚಾರಪೂರ್ವಕವಾದ ಪ್ರವೃತ್ತಿಯು ಸರ್ವಥಾ ಉಪಪನ್ನವಾಗುವುದಿಲ್ಲ.

ಈ ಆಶಂಕೆಯನ್ನು ಸ್ಮೃತಿಯಿಂದಲೇ ಪರಿಹರಿಸಿದಂತಾಯಿತು.

ಸ್ವತಂತ್ರನಾದ ವಿಷ್ಣುವಿನಿಂದ ಇವೆಲ್ಲವೂ ಉಪಪನ್ನ

तत्वप्रकाशिका – स्वयम्भुवा = स्वतन्त्रेण विष्णुना, या वेदवागुच्चारिता तद्वेदगतशब्देभ्यो ब्रह्मादिविबुधानां नामानि निर्ममे तान् शब्दांस्तेषु सङ्केतितवान्। याश्च तेषां वेदेषूक्ताः 'दृश्यन्ते इति दृष्टयः' = रूपाणि, तानि च तथैव निर्ममे ।

'ಸ್ವಯಂಭುವಾ' ಎಂದರೆ 'ಸ್ವತಂತ್ರನಾದ ವಿಷ್ಣುವಿನಿಂದ' ಎಂದರ್ಥ. ಯಾವ ವಿಷ್ಣುವಿನ ದೆಸೆಯಿಂದ ಯಾವ ವೇದವಾಣಿ ಉಚ್ಚರಿಸಲ್ಪಟ್ಟಿತೋ ಅಂತಹ ವೇದಗತವಾದ ಶಬ್ದಗಳಿಂದ ಬ್ರಹ್ಮಾದಿ ದೇವತೆಗಳ ನಾಮ-ರೂಪಗಳು ನಿರ್ಮಾಣವಾದವೋ, ಆಯಾ ಶಬ್ದಗಳನ್ನು ಆಯಾ ದೇವತೆಗಳಲ್ಲೇ ವಿಷ್ಣುವು ಸಂಕೇತ ಮಾಡಿದನು. ಮತ್ತು ವೇದಗಳಲ್ಲಿ ಯಾವ ರೀತಿಯಾಗಿ ಅವರ ರೂಪಗಳು ವರ್ಣಿತವಾಗಿದೆಯೋ, ಅದರಂತೆ ಸೃಷ್ಟಿ ಮಾಡಿದನು.

ಶ್ರುತಿ-ಸ್ಮೃತಿಗಳು ಈ ವಿಷಯದಲ್ಲಿ ಆಧಾರ

तत्वप्रकाशिका – इति सर्वदेवानां समाननामरूपत्वस्यापौरुषेयवेदस्यापि स्वतन्त्रेण भगवता प्रतिकल्पं देवेषु सङ्केतितत्वस्य चोक्तेः ।

ಈ ರೀತಿಯಾಗಿ ಸಕಲ ದೇವತೆಗಳ ಸಮಾನವಾದ ನಾಮ-ರೂಪಗಳಿರುವಿಕೆ ಮತ್ತು ವೇದಾಪೌರುಷೇಯತ್ವವಿದ್ದರೂ ಪ್ರತ್ಯೇಕ ಕಲ್ಪದಲ್ಲಿ ಭಗವಂತನೇ ಆಯಾ ಶಬ್ದಗಳನ್ನು ದೇವತೆಗಳಲ್ಲಿ ಸಂಕೇತ ಮಾಡಿದ್ದಾನೆಂಬುದನ್ನು ಶ್ರುತಿ-ಸ್ಮೃತಿಯು ಹೇಳುತ್ತಿದೆ.

ಪ್ರಳಯಕಾಲದಲ್ಲಿಯೂ ವೇದಕ್ಕೆ ಅಪ್ರಾಮಾಣ್ಯವಿಲ್ಲ

तत्वप्रकाशिका – नच प्रलये वेदाप्रामाण्यं शङ्क्यम् । तदाऽतीतविषयत्वस्य भगवन्मात्रविषयत्वस्य चोपपत्तेः ।। ३० ।।

ಹಾಗಾದರೆ ಪ್ರಳಯಕಾಲದಲ್ಲಿ ವೇದವು ಅಪ್ರಮಾಣವಾಗುತ್ತದಲ್ಲವೇ? ಎಂದು ಶಂಕಿಸಬಾರದು. ವೇದವು ಅತೀತ ವಸ್ತುಗಳನ್ನು ಪ್ರತಿಪಾದನೆ ಮಾಡುವುದರಿಂದ, ಅಥವಾ

ಈಶ್ವರನನ್ನಷ್ಟೇ ಪ್ರತಿಪಾದನೆ ಮಾಡುವುದರಿಂದ ಅದರ ಅಪ್ರಾಮಾಣ್ಯಕ್ಕೆ ಅವಕಾಶವಿರುವುದಿಲ್ಲ. ಅಂದರೆ, ನಿರರ್ಥಕತ್ವಪ್ರಯುಕ್ತವಾಗಿ ಅಪ್ರಾಮಾಣ್ಯವನ್ನು ಪ್ರಳಯಕಾಲದಲ್ಲಿಯೂ ಹೇಳಲಾಗದು ಎಂದು ಅಭಿಪ್ರಾಯ.

ಭಾವದೀಪ

ಸೂತ್ರದಲ್ಲಿರುವ ವಿರೋಧಪದಕ್ಕೆ ವ್ಯಾಖ್ಯಾನ

भावदीपः –

।। समाननामरूपत्वाच्चावृत्तावप्यविरोधो दर्शनात्स्मृतेश्च ।।

सूत्रमवतारयितुं शङ्कामाह – **नेति** ।। सौत्रविरोधपदार्थो न प्रामाण्योपपत्तिरिति समानेत्यादेर्व्यावर्त्योक्तिः – **तथाचेत्यादि** ।। तस्य वेदस्य । आम्नायोऽनन्यथापाठादिति स्मृतेरिति भावः ।

ಸೂತ್ರಕ್ಕೆ ಅವತಾರಿಕೆ ನೀಡಲು ಆಶಂಕಿಸುತ್ತಿದ್ದಾರೆ, 'न देवानाम्' ಇತ್ಯಾದಿ ಟೀಕೆಯಿಂದ. ಸೂತ್ರದಲ್ಲಿರುವ 'ವಿರೋಧ' ಎಂಬ ಪದದ ಅರ್ಥವನ್ನು 'न प्रामाण्योपपत्तिः ।' ಎಂದು ಹೇಳಿದ್ದಾರೆ. 'ಸಮಾನನಾಮರೂಪತ್ವಾಚ್ಚ' ಎಂಬ ಸೂತ್ರದಲ್ಲಿರುವ ಪದದಿಂದ ವ್ಯಾವರ್ತ್ಯವಾದ ಅರ್ಥವನ್ನು 'तथाच' ಇತ್ಯಾದಿಯಾಗಿ ಹೇಳುತ್ತಿದ್ದಾರೆ. 'तच्च' ವೇದಕ್ಕೆ ಎಂದರ್ಥ. ವೇದಕ್ಕೆ ಪ್ರತಿಕಲ್ಪದಲ್ಲಿ ಪಾಠಭೇದವಿರುವುದಿಲ್ಲ. ಏಕೆಂದರೆ, 'ಆಮ್ನಾಯೋ ಅನನ್ಯಪಾಠಾತ್' ಎಂಬ ಸ್ಮೃತಿಪ್ರಮಾಣವಿರುವುದರಿಂದ.

ಸೂತ್ರದಲ್ಲಿರುವ ಚಶಬ್ದಕ್ಕೆ ತತ್ತ್ವಪ್ರದೀಪದಲ್ಲಿರುವ ವ್ಯಾಖ್ಯಾನ

भावदीपः – अविरोध इत्यस्यार्थमाह – **सम्भवत्येवेति** ।। प्राप्तेत्यादेरर्थः – **प्राचीनानामिति** ।। अनागतानामित्यस्यार्थः – **अन्येषामिति** ।। अतीतपदार्थः – **प्राचीनेति** ।। सौत्रश्चशब्दः समानधर्मकर्मत्वाच्चेत्यर्थ इति तत्त्वप्रदीपे ।

'ಅವಿರೋಧಃ' ಎಂಬ ಸೂತ್ರದ ಅರ್ಥವನ್ನು 'ಸಂಭವತ್ಯೇವ' ಎಂಬುದರಿಂದ ಹೇಳಿದ್ದಾರೆ. 'ಪ್ರಾಪ್ತಪದಾನಾಂ' ಇತ್ಯಾದಿ ಭಾಷ್ಯದ ಅರ್ಥವನ್ನು 'ಪ್ರಾಚೀನಾನಾಂ' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ. 'ಅನಾಗತಾನಾಂ' ಎಂಬುದರ ಅರ್ಥವನ್ನು 'ಅನ್ಯೇಷಾಂ' ಎಂಬುದರಿಂದ ಹೇಳಿದ್ದಾರೆ. 'ಅತೀತ' ಎಂಬ ಪದದ ಅರ್ಥವನ್ನು 'ಪ್ರಾಚೀನಾನಾಂ' ಎಂಬುದರಿಂದ ಹೇಳಿದ್ದಾರೆ. ಸೂತ್ರದಲ್ಲಿರುವ 'ಚ' ಶಬ್ದವು ಸಮಾನಧರ್ಮಕರ್ಮಸಾಧ್ಯ ಎಂಬರ್ಥದಲ್ಲಿದೆಯೆಂದು ತತ್ತ್ವಪ್ರದೀಪದಲ್ಲಿ ಹೇಳಿದ್ದಾರೆ.

'ಸ್ವಯಂಭುವ' ಎಂದರೇನು ?

भावदीपः – स्मृत्युक्तेरुपयोगं वक्तुमाह – एतत्श्रुतेरिति ।। स्वरूपेति ।। तामेव सूर्यादिव्यक्तिं पूर्वप्रकारेण अकल्पयदित्यर्थपरत्वेनेत्यर्थः । परिहृतेत्युक्तमेव स्मृत्यर्थोक्त्या व्यनक्ति – **स्वयम्भुवेति ।।** स्वयमेव भवति परापेक्षां विना वर्तत इति स्वयम्भूः स्वतन्त्रः ।

'ಅನಾದಿನಿಧನಾ' ಇತ್ಯಾದಿಯಾದ ಸ್ಮೃತಿಯನ್ನು ಹೇಳಿದರ ಉಪಯೋಗವನ್ನು ತೋರಿಸಲು 'ಏತಚ್ಛ್ರುತೇಃ' ಇತ್ಯಾದಿ ಟೀಕೆಯು ಹೊರಟಿದೆ. 'ಸ್ವರೂಪಕಲ್ಪನಾನಿಯಮಪರತ್ವಮಪಿ' ಎಂದರೆ ಹಿಂದಿನ ಕಲ್ಪದಲ್ಲಿ ಯಾವ ಸೂರ್ಯನು ಹುಟ್ಟಿದ್ದನೋ, ಅವನೇ ಪುನಃ ಅದೇ ಪ್ರಕಾರದಲ್ಲಿ ಹುಟ್ಟಿದನು ಎಂಬರ್ಥವನ್ನು 'ಯಥಾಪೂರ್ವಂ' ಎಂಬ ಶ್ರುತಿಗೆ ಹೇಳಬಹುದೆಂದರ್ಥ. 'ತದೇತತ್' ಎಂಬುದರಿಂದ ಹೇಳಲ್ಪಟ್ಟ ವಿಷಯವನ್ನೇ ಸ್ಮೃತ್ಯರ್ಥವನ್ನು ಹೇಳುವ ಮೂಲಕ ಸ್ಪಷ್ಟಪಡಿಸುತ್ತಿದ್ದಾರೆ, 'ಸ್ವಯಂಭುವಾ' ಇತ್ಯಾದಿಯಾಗಿ. 'ಸ್ವಯಂಭುವಾ' ಎಂದರೆ ಇನ್ನೊಬ್ಬರ ಅಪೇಕ್ಷೆಯಿಲ್ಲದೆ ಸ್ವತಃ ತಾನೇ ಇರುತ್ತಾನೆಂಬ ಅರ್ಥವನ್ನು ವಿವಕ್ಷಿಸಿದಾಗ ವಿಷ್ಣು ಎಂಬರ್ಥವು ಲಭಿಸುತ್ತದೆ.

ದೇವತಾಹ್ವಾನ ರೂಪವಾದ ಮಂತ್ರಕ್ಕೆ ಹೇಗೆ ಅರ್ಥೈಸಬೇಕು ?

भावदीपः – उत्सृष्टेत्यस्य उत्पन्नेत्यर्थत्वे प्रागुक्तनित्यत्वविरोधादाह – **उच्चारितेति ।। सङ्केतितानिति ।।** अयं शब्दोऽत्र वाक्त इति ज्ञापितवानित्यर्थः। देवताह्वानादिरूपस्य कथमतीतविषयत्वमित्यत आह – **भगवन्मात्रेति ।।३०।।**

'ಉತ್ಸೃಷ್ಟ' ಎಂಬುದಕ್ಕೆ 'ಉತ್ಪನ್ನ' ಎಂದರ್ಥ. ಇದು ಹಿಂದೆ ಹೇಳಿದ ನಿತ್ಯತ್ವಕ್ಕೆ ವಿರುದ್ಧವಾಗುತ್ತದೆಂದು 'ಉಚ್ಚಾರಿತ' ಎಂದು ವ್ಯಾಖ್ಯಾನಿಸಿದ್ದಾರೆ. 'ಸಂಕೇತಿತವಾನ್' ಎಂದರೆ ಈ ಶಬ್ದವು ಇಂತಹ ಅರ್ಥದಲ್ಲಿ ಜ್ಞಾಪಕವಾಗಿದೆ ಎಂದರ್ಥ. ದೇವತಾಹ್ವಾನಾದಿ ರೂಪವಾದ ವೇದಮಂತ್ರವು ಹೇಗೆ ಅತೀತವಿಷಯಕವಾಗುತ್ತದೆ? ಎಂಬ ಪ್ರಶ್ನೆಗೆ, 'ಭಗವನ್ಮಾತ್ರವಿಷಯತ್ವಸ್ಯ' ಎಂಬ ಪದದಿಂದ ಉತ್ತರಿಸಿದ್ದಾರೆ.

ಬ್ರಹ್ಮಸೂತ್ರ

'ಮಧ್ವಾದಿಷ್ವಸಂಭವಾದನಧಿಕಾರಂ ಜೈಮಿನಿಃ' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – ।। मध्वादिष्वसम्भवादनधिकारं जैमिनिः ।। ३१ ।।

ಸೂತ್ರಾರ್ಥ - ಮಧುವಿದ್ಯೆ ಮತ್ತು ಜ್ಯೋತಿಷ್ಟೋಮಾದಿಕರ್ಮಗಳಲ್ಲಿ ದೇವತೆಗಳಿಗೆ ಅಧಿಕಾರವಿಲ್ಲವೆಂದು ಏಕೆ ಹೇಳಿದ್ದಾರೆಂದರೆ ಅದರಿಂದ ದೊರೆಯುವ ಫಲವು ದೇವತೆಗಳಿಗೆ ಈಗಾಗಲೇ ದೊರೆತದ್ದರಿಂದ ಮಧ್ವಾದಿವಿದ್ಯೆಗಳಲ್ಲಿ ಅಧಿಕಾರವಿಲ್ಲವೆಂದು ಜೈಮಿನ್ಯಾಚಾರ್ಯರು ಹೇಳಿರುತ್ತಾರೆ.

ಅರ್ಥ -- ಮಧ್ವಾದಿಷು 'ಅಸೌವಾ ಆದಿತ್ಯೋ ದೇವಮಧು' ಇತ್ಯಾದಿ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಮಧ್ವಾದಿವಿದ್ಯೆಗಳಲ್ಲಿ ಅನಧಿಕಾರಮ್ ದೇವತೆಗಳಿಗೆ ಅಧಿಕಾರವಿಲ್ಲವೆಂದು ಜೈಮಿನಿಃ = ಜೈಮಿನ್ಯಾಚಾರ್ಯರು ತಿಳಿದಿದ್ದಾರೆ ಏಕೆಂದರೆ, ಅಸಂಭವಾತ್ = ಅಂತಹ ದೇವತೆಗಳಿಗೆ ಅರ್ಥಿತ್ವ ಹಾಗೂ ಆ ಪದಕ್ಕೆ ಯೋಗ್ಯವಾದ ಅಧಿಕಾರವು ಇಲ್ಲದ್ದರಿಂದ.

ಬ್ರಹ್ಮಸೂತ್ರಭಾಷ್ಯ

ಮಧುವಿದ್ಯೆ ಮೊದಲಾದವುಗಳಲ್ಲಿ ದೇವತೆಗಳಿಗೆ ಅಧಿಕಾರವಿಲ್ಲವೆನ್ನುತ್ತಾರೆ ಜೈಮಿನಿಗಳು

ब्रह्मसूत्रभाष्यम् – 'वसूनामेवैको भूत्वा' (छां. ३-६-२.) इत्यादिना प्राप्यफलत्वात्प्राप्तपदानां देवानां मध्वादिविद्यास्वनधिकारं जैमिनिर्मन्यते ।।३१।।

ಅನುವಾದ - ಮಧುವಿದ್ಯೆ ಮೊದಲಾದ ವಿದ್ಯೆಯನ್ನು ಉಪಾಸನೆ ಮಾಡುವುದರಿಂದ ದೇವತಾಪದವಿಯು ದೊರೆಯುತ್ತದೆಂದು 'ವಸೂನಾಮೇವೈಕೋ ಭೂತ್ವಾ' ಇತ್ಯಾದಿ ಶ್ರುತಿಗಳು ಹೇಳುತ್ತಿವೆ. ಯಾವ ದೇವತೆಗಳಿಗೆ ಅಂತಹ ಪದವಿಗಳು ಈಗಾಗಲೇ ದೊರೆತಿದೆಯೋ ಅಂತಹ ದೇವತೆಗಳಿಗೆ ಪುನಃ ಮಧು ವಿದ್ಯೆಗಳಲ್ಲಿ ಅಧಿಕಾರವಿಲ್ಲವೆಂದು ಜೈಮಿನಿಆಚಾರ್ಯರು ಹೇಳಿರುತ್ತಾರೆ.

ಪ್ರತಿಪದಾರ್ಥ -- ಹಿಂದೆ ಹೇಳಿದ ವೇದವಿದ್ಯಾಧಿಕಾರವು ದೇವತೆಗಳಿಗೆ ಹೇಳಲು ಸಾಧ್ಯವಿಲ್ಲ. ಏಕೆಂದರೆ ಸಿದ್ಧಿಯು ಎರಡುವಿಧವಾಗಿದೆ, ಮೋಕ್ಷಫಲದಾಯಕವೆಂದು, ಮೋಕ್ಷೇತರಫಲದಾಯಕವೆಂದು. ಭಗವಂತನ ಪ್ರೀತಿಯನ್ನು ಬಿಟ್ಟು ಬೇರೆಫಲವನ್ನು ಅಪೇಕ್ಷೆಪಡದ ದೇವತೆಗಳಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿರಬಹುದು, ಆದರೆ ಭಗವಂತನ ಪ್ರೀತಿಯನ್ನು ಬಿಟ್ಟು ಬೇರೆಫಲವನ್ನು ನೀಡುವ ಮಧ್ವಾದಿ ವಿದ್ಯೆಯಲ್ಲಿ ಅಧಿಕಾರವು ದೇವತೆಗಳಿಗೆ ಯುಕ್ತವಾಗುವುದಿಲ್ಲವಲ್ಲಾ! ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ.

'ವಸೂನಾಮೇವೈಕೋ ಭೂತ್ವಾ' ಮಧ್ವಾದಿವಿದ್ಯೆಗಳಿಂದ ಸ್ವರ್ಗಾದಿ-ಫಲಗಳು ದೊರೆಯುತ್ತದೆ, ಮೊದಲಾದ ಪ್ರಮಾಣಗಳಿಂದ 'ವಸೂನಾಮೇವೈಕೋ ಭೂತ್ವಾ' = ವಸುಗಳಲ್ಲಿ ಒಬ್ಬನಾಗಿ ಅಧಿಕಾರ-ವನ್ನು ಹೊಂದಿ, ಇತ್ಯಾದಿನಾ = ಇವೇ ಮೊದಲಾದ, ಪ್ರಮಾಣಗಳಿಂದ, ಪ್ರಾಪ್ಯಫಲತ್ವಾತ್ = ಸ್ಥಾನವನ್ನುಹೊಂದಿರುವಿಕೆ ಎಂಬ ಫಲ ಉಳ್ಳವರಾದ್ದರಿಂದ, ಪ್ರಾಪ್ತಪದಾನಾಂ = ತಮ್ಮ ತಮ್ಮ ಸ್ಥಾನದಲ್ಲಿರುವ, ದೇವಾನಾಂ = ದೇವತೆಗಳಿಗೆ, ಮಧ್ವಾದಿವಿದ್ಯಾಸು = ಮಧು ಮೊದಲಾದ ವಿದ್ಯೆಗಳಲ್ಲಿ, ಅನಧಿಕಾರಂ = ಅಧಿಕಾರವಿಲ್ಲವೆಂದು, ಜೈಮಿನಿಃ = ಜೈಮಿನಿ ಆಚಾರ್ಯರು, ಮನ್ಯತೇ = ತಿಳಿಯುತ್ತಾರೆ.

ಸತ್ತರ್ಕದೀಪಾವಳಿ

ದೇವತೆಗಳ ಬ್ರಹ್ಮವಿದ್ಯಾಧಿಕಾರದಲ್ಲಿ ಅಧಿಕಾಕ್ಷೇಪ

सत्तर्कदीपावलिः – ।। मध्वादिष्वसम्भवादनधिकारं जैमिनिः ।।

यदुक्तं देवादीनां ब्रह्मविद्यायामधिकारोऽस्तीति, तन्न । मध्वादिब्रह्मविद्यायां नाधिकारः सम्भवति । तथाहि – 'असौ वा आदित्यो देवमधु' इत्यारभ्य 'एतदेवममृतं वेद वसूनामेवैको भूत्वाऽग्निनैव मुखेनैतदेवामृतं दृष्ट्वा तुष्यति' इत्यादिश्रुत्या मध्विति वसुरुद्रादित्यपदं श्रूयते । नहि तस्यां विद्यायां प्राप्तवस्वादिपदानां देवानामधिकारः सम्भवति मध्वित्यादि ।।

ಹಿಂದೆ, ದೇವತೆಗಳಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿದೆಯೆಂದು ಹೇಳಲಾಯಿತು. ಇದು ಸರಿಯಲ್ಲ. ಏಕೆಂದರೆ, ಮಧ್ವಾದಿ ವಿದ್ಯೆಯೆನಿಸಿದ ಬ್ರಹ್ಮವಿದ್ಯೆಯಲ್ಲಿ ಅಧಿಕಾರವೇ ಕೂಡುವುದಿಲ್ಲ. ಅದು ಹೀಗೆ - 'ಅಸೌ ವಾ ಆದಿತ್ಯೋ ದೇವಮಧು' ಎಂಬುದಾಗಿ ಪ್ರಾರಂಭವಾಗುವ ಪ್ರಕರಣದಲ್ಲಿ 'ಏತದೇವಾಮೃತಂ ವೇದ ವಸೂನಾಮೇವೈಕೋ ಭೂತ್ವಾऽಗ್ನಿನೈವ ಮುಖೇನೈತದೇವಾಮೃತಂ ದೃಷ್ಟ್ವಾ ತುಷ್ಯತಿ' ಇತ್ಯಾದಿ ಶ್ರುತಿಯಿಂದ ವಸು-ರುದ್ರ-ಆದಿತ್ಯ ಮೊದಲಾದ ಸ್ಥಾನಗಳು ಪ್ರಾಪ್ತವಾಗುತ್ತವೆಂದು ಹೇಳಲಾಗಿದೆ. ಯಾವ ದೇವತೆಗಳು ಈಗಾಗಲೇ ವಸು-ರುದ್ರ-ಆದಿತ್ಯ ಮೊದಲಾದ ಪದವಿಗಳನ್ನು ಪಡೆದಿದ್ದಾರೋ, ಅಂತಹ ದೇವತೆಗಳಿಗೆ ಪುನಃ ತತ್ಫಲಕವಾದ ಬ್ರಹ್ಮವಿದ್ಯೆಯಲ್ಲಿ ಅಧಿಕಾರವು ಕೂಡುವುದಿಲ್ಲವೆಂದು ಸೂತ್ರದ ಅಭಿಪ್ರಾಯ.

ತತ್ತ್ವಪ್ರದೀಪ

ಯಾವ ದೇವತೆಗಳಿಗೆ ಯಾವುದರಲ್ಲಿ ಅಧಿಕಾರ ?

तत्वप्रदीपः – मध्वादिष्वसम्भवादनधिकारं जैमिनिः ।। ''असौ वा आदित्यो देवमधु'' इत्याद्या मधुविद्या श्रूयते । तत्र ''स य एतदेवममृतं वेद

वसूनामेवैको भूत्वाऽग्निनैष मुखेनैतदेवामृतं दृष्ट्वा तृप्यति'' इत्यादिना तद्वतां वस्वादिपदं प्राप्यफलमवगम्यते। न च तत्प्राप्तपदानां वस्वादीनां सम्भवति । तस्मात् तत्रानधिकारं जैमिनिर्मन्यते ।।

।। इति देवतऽधिकरणम् ।।

'असौ वा आदित्यो देवमधु' ಇತ್ಯಾದಿಯಾಗಿ ಮಧುವಿದ್ಯೆಯು ಶ್ರುತವಾಗಿದೆ. ಇದರಲ್ಲಿ 'स य एतदेवममृतं वेद वसूनामेवैको भूत्वाऽग्निनैष मुखेनैतदेवामृतं दृष्ट्वा तृप्यति' ಇತ್ಯಾದಿಯಾಗಿ ದೇವತೆಗಳು ಈಗಾಗಲೇ ವಸು ಮೊದಲಾದ ಪದವಿಗಳನ್ನು ಹೊಂದಿದ್ದಾರೆಂದು ಸ್ಪಷ್ಟವಾಗುತ್ತದೆ. ಈ ವಸ್ವಾದಿ ದೇವತೆಗಳು ಪ್ರಾಪ್ತಪದರಾದ್ದರಿಂದ ಮಧುವಿದ್ಯೆ ಮೊದಲಾದವುಗಳಲ್ಲಿ ಅವರಿಗೆ ಅಧಿಕಾರವಿರುವುದಿಲ್ಲ. ಏಕೆಂದರೆ ಫಲವು ಈಗಾಗಲೇ ಅವರಿಗೆ ದೊರೆತಿದೆ.

ವಿವರಣೆ - ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆ ಎಂಬ ವಿಚಾರವನ್ನು ಇಲ್ಲಿಯ ತನಕ ಹೇಳಿದ್ದಾಯಿತು. ಆದರೆ ಜೈಮಿನ್ಯಾಚಾರ್ಯರು ಯಾವ ವೇದವಿದ್ಯೆಯಲ್ಲಿ ದೇವತೆಗಳಿಗೆ ಅಧಿಕಾರವಿದೆ, ಯಾವುದರಲ್ಲಿ ಇಲ್ಲ ಎಂಬುದನ್ನು ವಿಭಾಗ ಮಾಡಿ ತೋರಿಸುತ್ತಿದ್ದಾರೆ.

ಯಾವ ದೇವತೆಗಳಿಗೆ ಈಗಾಗಲೇ ಯಾವ ಪದವಿಯು ಪಡೆದಿದೆಯೋ, ಅದೇ ಪದವಿಯನ್ನು ನೀಡುವ ವೇದವಿದ್ಯೆಯ ಉಪಾಸನೆಯಲ್ಲಿ ಆ ದೇವತೆಗಳಿಗೆ ಅಧಿಕಾರವಿರುವುದಿಲ್ಲ. ಏಕೆಂದರೆ 'ಅರ್ಥೀ' ಎಂಬುದು ಅಧಿಕಾರದ ಲಕ್ಷಣದಲ್ಲಿ ಸೇರಿರುವ ವಿಶೇಷಣ. ಈಗಾಗಲೇ ಪದವಿಯು ದೊರತ ಮೇಲೆ ಅರ್ಥಿತ್ವವೇ ಆ ದೇವತೆಗಳಲ್ಲಿ ಇರುವುದಿಲ್ಲ. ಆದ್ದರಿಂದ ಕೆಲವು ವಿದ್ಯೆಗಳಲ್ಲಿ ದೇವತೆಗಳಿಗೆ ಅಧಿಕಾರವಿಲ್ಲ. ಉಳಿದ ವಿದ್ಯೆಯಲ್ಲಿ ಅಧಿಕಾರವಿದೆ ಎಂಬುದು ಜೈಮಿನ್ಯಾಚಾರ್ಯರ ಅಭಿಪ್ರಾಯ.

'य एतदेवामृतं वेद वसूनामेवैको भूत्वाऽग्निनैव मुखेनैतदेवामृतं दृष्ट्वा तृप्यति' ಎಂಬ ಶ್ರುತಿಗೆ ಹೀಗರ್ಥ -

स = ಅಧಿಕಾರಿಯಾದವನು, एतदेव = ಸೂರ್ಯಮಂಡಲದ ಪೂರ್ವಭಾಗದ ಕಿರಣಗಳಲ್ಲಿರು, अमृतं = ಅಮೃತಪದವಾಚ್ಯನಾದ ವಾಸುದೇವನನ್ನು, एवं = ಹಿಂದೆ ಹೇಳಿದಂತೆ, वेद = ತಿಳಿಯುವನೋ ಅವನು, वसूनामेवैको भूत्वा = ವಸುಗಳಲ್ಲಿ ಒಬ್ಬನಾಗಿ ಅಧಿಕಾರದಲ್ಲಿದ್ದು,

ಅಗ್ನಿನಾಮುಖೇನ = ಅಗ್ನಿಯ ಉಪದೇಶದಿಂದ, ಏತದೇವಾಮೃತಂ = ವಾಸುದೇವನನ್ನು, ದೃಷ್ಟ್ವಾ = ನೋಡಿ, ತೃಪ್ಯತಿ = ತೃಪ್ತನಾಗುತ್ತಾನೆ ಎಂದು.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ ದೇವತಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ದೇವತೆಗಳಿಗೆ ಉತ್ಪತ್ತಿನಾಶಗಳಿದ್ದರೂ ವೇದಕ್ಕೆ ಅಪ್ರಾಮಾಣ್ಯವಿಲ್ಲ

तत्वप्रकाशिका –

॥ मध्वादिष्वसम्भवादनधिकारं जैमिनिः ॥

अतो देवानामाद्यन्तवत्वेऽपि विरोधाभावाद्युक्तस्तेषां वेदविद्याधिकार इति स्थिते, पुनस्तमाक्षिपत्सूत्रमुपन्यस्य व्याचष्टे – मध्वादिष्विति ॥

ಹಿಂದಿನ ಸೂತ್ರಗಳಲ್ಲಿ ವಿಚಾರ ಮಾಡಿದಂತೆ ದೇವತೆಗಳಿಗೆ ಉತ್ಪತ್ತಿ-ನಾಶಗಳಿರಬಹುದು. ಯಾವ ವಿರೋಧವೂ ಬರುವುದಿಲ್ಲ. ಆದ್ದರಿಂದಲೇ, ಆ ವೇದವಿದ್ಯೆಯಲ್ಲಿ ಅಧಿಕಾರವು ಸಿದ್ಧವಾಗುತ್ತದೆ. ಇದರ ಮೇಲೆ ಬರುವಂತಹ ಆಕ್ಷೇಪವನ್ನು ತೋರಿಸುತ್ತಾ, ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಮಧ್ವಾದಿಷು' ಇತ್ಯಾದಿಯಿಂದ.

ವೇದವಿದ್ಯೆಯು ಎರಡು ವಿಧ

तत्वप्रकाशिका – वेदविद्या द्विविधाः – मुक्तिफलार्थास्तदितरफलार्था इति। मोक्षेतरफलार्थाश्च द्विविधाः । ब्रह्मकर्मविद्याभेदात् ।

ವೇದವಿದ್ಯೆಯ ಎರಡು ವಿಧ. ಮೋಕ್ಷವೇ ಫಲವಾಗಿಯುಳ್ಳದ್ದು. ಮತ್ತೊಂದು ಮೋಕ್ಷಕ್ಕಿಂತ ಇತರವಾದ ಫಲವುಳ್ಳದ್ದು ಎಂದು. ಮೋಕ್ಷೇತರವಾದ ಫಲವನ್ನು ನೀಡುವಂತಹ ವಿದ್ಯೆಯೂ ಸಹ ಎರಡು ವಿಧ. ಒಂದು ಬ್ರಹ್ಮವಿದ್ಯೆ, ಮತ್ತೊಂದು ಕರ್ಮವಿದ್ಯೆ ಎಂದು.

ವೇದವಿದ್ಯಾ ಫಲದಲ್ಲಿ ದೇವತೆಗಳಿಗೆ ಅಪೇಕ್ಷೆಯಿಲ್ಲ

तत्वप्रकाशिका – यथा मधुविद्या – यथा चाग्निष्टोमविद्या । तत्र न तावन्मोतरफलार्थद्विविधविद्यास्वधिकारो देवानां युज्यते । तत्रार्थित्वाभावात्।

ಉದಾಹರಣೆ ಮಧುವಿದ್ಯೆಯೂ ಬ್ರಹ್ಮವಿದ್ಯೆಯೆನಿಸುತ್ತದೆ. ಅಗ್ನಿಷ್ಟೋಮವಿದ್ಯೆಯು ಕರ್ಮವಿದ್ಯೆಯೆನಿಸುತ್ತದೆ. ಇವುಗಳಲ್ಲಿ ಮೋಕ್ಷೇತರಫಲಕವಾದ ಮಧುವಿದ್ಯೆ ಹಾಗೂ ಅಗ್ನಿಷ್ಟೋಮ ವಿದ್ಯೆಗಳಲ್ಲಿ ದೇವತೆಗಳಿಗೆ ಅಧಿಕಾರವಿರುವುದಿಲ್ಲ. ಏಕೆಂದರೆ, ಆ ವಿದ್ಯೆಯ ಫಲವಿಷಯದಲ್ಲಿ ಆ ದೇವತೆಗಳಿಗೆ ಅಪೇಕ್ಷೆಯೇ ಇರುವುದಿಲ್ಲ.

ಮಧು ಮೊದಲಾದ ವಿದ್ಯೆಗಳಿಂದ ವಸು ಮೊದಲಾದ ಸ್ಥಾನಗಳ ಪ್ರಾಪ್ತಿ

तत्वप्रकाशिका – 'स य एतदेवममृतं वेद वसूनामेवैको भूत्वाऽग्निनैव मुखेनैतदेवामृतं दृष्ट्वा तृप्यति । देवो भूत्वा देवानप्येति । स ऊर्जमुपगच्छति' इत्यादिना मध्वादिविद्यासु वस्वादिपदानामुपासनाप्राप्यफलत्वश्रवणात्,

'स य एतदेवममृतं वेद वसूनामेवैको भूत्वाऽग्निनैव मुखेनैत-देवामृतं दृष्ट्वा तृप्यति । देवो भूत्वा देवानप्येति । स ऊर्जमुपगच्छति' 'ಯಾವ ಪುರುಷನು ವಿನಾಶವಿಲ್ಲದ ಪರಮಾತ್ಮನನ್ನು ತಿಳಿಯುತ್ತಾನೋ, ಅವನು ಅಗ್ನಿಯ ಉಪದೇಶದಿಂದ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ಸ್ವತಃ ದೇವತೆಯಾಗಿ ದೇವತೆಗಳನ್ನೇ ಹೊಂದುತ್ತಾನೆ. ಅವನಿಗೆ ಅಕ್ಷಯವಾದ ಅನ್ನವು ಪ್ರಾಪ್ತವಾಗುತ್ತದೆ.' ಈ ಶ್ರುತಿವಾಕ್ಯದಿಂದ ಮಧು ಮೊದಲಾದ ವಿದ್ಯೆಗಳನ್ನು ಉಪಾಸನೆ ಮಾಡಿದರೆ, ಆ ಉಪಾಸನೆಗೆ ವಸು-ಆದಿತ್ಯ ಮೊದಲಾದ ಪದಗಳು ಪ್ರಾಪ್ತವಾಗುತ್ತವೆಂದು ತಿಳಿಯುತ್ತದೆ.

ಪ್ರಾಪ್ತಪದರಾದ ದೇವತೆಗಳಿಗೆ ಫಲದಲ್ಲಿ ಅಪೇಕ್ಷೆಯಿರುವುದಿಲ್ಲ

तत्वप्रकाशिका – देवानां च प्राप्ततत्पदत्वात् । नहि प्राप्तेऽर्थिता सम्भवति । एवं कर्मविद्यास्वपि वस्वादिपदानां फलत्वोक्तेर्नार्थिता सम्भवति ।

ದೇವತೆಗಳಿಗಾದರೋ ವಸು-ಆದಿತ್ಯ ಮೊದಲಾದ ಪದಗಳು ಮೊದಲೇ ಪ್ರಾಪ್ತವಾಗಿವೆ. ಯಾವ ಫಲವು ಮೊದಲೇ ದೊರೆತಿರುತ್ತದೋ, ಆ ಫಲದಲ್ಲಿ ಪುನಃ ಅಪೇಕ್ಷೆಯು ಉಂಟಾಗುವುದಿಲ್ಲ. ಇದರಂತೆ ಕರ್ಮವಿದ್ಯೆಯಿಂದಲೂ ಸಹ ವಸು-ಆದಿತ್ಯ ಮೊದಲಾದ ಪದಗಳ ಪ್ರಾಪ್ತಿಯೆಂಬ ಫಲವನ್ನು ಹೇಳಿರುವುದರಿಂದ ಅಂತಹ ವಿದ್ಯೆಯಲ್ಲಿಯೂ ಅರ್ಥಿತ್ವವು ಉಪಪನ್ನವಾಗುವುದಿಲ್ಲ.

ರುದ್ರಾದಿ ಪದವಿಗಳಿಗೆ ವಸ್ವಾದಿ ದೇವತೆಗಳು ಅನರ್ಹರು

तत्वप्रकाशिका – नच द्वितीयाद्यमृतविद्यादिषु वस्वादीनामधिकारः सम्भवतीति वाच्यम् । तास्वपि रुद्रादिपदस्य फलत्वेन श्रवणात् । तत्र चायोग्यतया अर्थितायोगात्।

ಇನ್ನು ಯಾವ ವಿದ್ಯೆಯ ಫಲದಲ್ಲಿ ವಸುಪದಪ್ರಾಪ್ತಿಯು ಪ್ರಾಪ್ತವಾಗಿಲ್ಲವೋ, ಅಂತಹ ದ್ವಿತೀಯಾದಿ ಅಮೃತವಿದ್ಯೆಗಳಲ್ಲಿ ದೇವತೆಗಳಿಗೆ ಅಧಿಕಾರವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಆ ವಿದ್ಯೆಗಳಲ್ಲೂ ರುದ್ರಾದಿಪದಪ್ರಾಪ್ತಿಯನ್ನು ಫಲವನ್ನಾಗಿ ಹೇಳಲಾಗಿದೆ. ಆದರೆ, ಆ ರುದ್ರಾದಿ ಪದವಿಗಳಿಗೆ ವಸು ಮೊದಲಾದ ದೇವತೆಗಳು ಅನರ್ಹರಾದ್ದರಿಂದ ಅವರಿಗೆ ಅರ್ಥಿತ್ವವು ಉಪಪನ್ನವಾಗುವುದಿಲ್ಲ.

ಕರ್ಮವಿದ್ಯೆಯಲ್ಲಿಯೂ ಕೂಡ ಹೀಗೆಯೂ ತಿಳಿಯಬೇಕು

तत्वप्रकाशिका – एवं कर्मविद्यास्वपि रुद्रादिपदफलाभिधात्रीषु वस्वादीनामधिकारायोगः ।

ಇದೇ ರೀತಿಯಾಗಿ ಕರ್ಮವಿದ್ಯೆಯಲ್ಲಿಯೂ ಸಹ ಯಾವುದರ ಫಲವು ರುದ್ರಾದಿಪದವಿಯ ಪ್ರಾಪ್ತಿರೂಪವಾಗಿದೆಯೋ, ಅಂಥಹ ವಿದ್ಯೆಗಳಲ್ಲಿ ವಸು ಮೊದಲಾದ ದೇವತೆಗಳಿಗೆ ಅಧಿಕಾರವಿರುವುದಿಲ್ಲ.

ಸ್ವೇತರಪದಫಲ ಪ್ರಾಪ್ತಿಯನ್ನೇ ಅಪೇಕ್ಷಿಸುತ್ತಾರೆ

तत्वप्रकाशिका – न चास्त्वेवं स्वस्वेतरपदफलाभिधात्रीषु ब्रह्मकर्म-विद्यास्वनधिकारः, तथापि मोक्षेतरसामान्यफलाभिधायकविद्यासुस्यादिति वाच्यम् । सामान्यफलानां च 'प्रकाशवानस्मिल्लोके भवति' इत्यादीनां तत्फलेऽतर्भावात् ।

ಹೀಗೆ, ವಸು ಮೊದಲಾದ ದೇವತೆಗಳಿಗೆ ಸ್ವೇತರಪದಪ್ರಾಪ್ತಿರೂಪವಾದ ಯಾವ ಫಲವಿದೆಯೋ, ಅಂಥಹ ಬ್ರಹ್ಮವಿದ್ಯೆ ಹಾಗೂ ಕರ್ಮವಿದ್ಯೆಗಳಲ್ಲಿ ಅಧಿಕಾರವಿಲ್ಲದಿದ್ದರೂ ಮೋಕ್ಷೇತರಫಲಕವಾದ ಸಾಮಾನ್ಯವಿಷಯದಲ್ಲಿ ಅಧಿಕಾರವನ್ನು ಏಕೆ ಹೇಳಬಾರದು? ಎಂದು ಪ್ರಶ್ನಿಸಬಾರದು. ಏಕೆಂದರೆ, 'ಪ್ರಕಾಶವಾನಸ್ಮಿಂಲ್ಲೋಕೇ' 'ಈ ಲೋಕದಲ್ಲಿ ಪ್ರಕಾಶಿತನಾಗುತ್ತಾನೆ', ಇತ್ಯಾದಿ ಸಾಮಾನ್ಯ ಫಲಗಳು ಆಯಾ ವಸ್ವಾದಿ ಪದಪ್ರಾಪ್ತಿಯ ಫಲದಲ್ಲಿಯೇ ಅಂತರ್ಭೂತವಾಗಿವೆ. ಅಂದರೆ, ಪ್ರತ್ಯೇಕವಾಗಿ ಅಂಥಹ ಸಾಮಾನ್ಯ ಫಲದಲ್ಲಿ ಅರ್ಥಿತ್ವವನ್ನು ಒಪ್ಪುವ ಅವಶ್ಯಕತೆ ಇಲ್ಲ.

ಯೋಗ್ಯರಾದ ರುದ್ರಾದಿಗಳಿಗೆ ಫಲವು ಪ್ರಾಪ್ತವಾಗಿದೆ

तत्वप्रकाशिका – 'न ह वा एवंविदि किञ्चनानन्नं भवति' इत्यादीनां सर्वायोग्यत्वात्, योग्यैश्च रुद्रादिभिः प्राप्तत्वाच्च ।

'ಸ ಹ ವಾ ಏವಂವಿದಿ ಕಿಂಚನಾನನ್ನಂ ಭವತಿ' 'ಯಾವಾತನು ಪ್ರಾಣನನ್ನು ಸಕಲಭೋಕ್ತನೆಂದು ತಿಳಿಯುತ್ತಾನೋ, ಅವನಿಗೆ ಎಲ್ಲಾ ಭೋಗ್ಯ ಪದಾರ್ಥಗಳು ದೊರೆಯುತ್ತವೆ'. ಎಂದು ಪ್ರಾಣವಿದ್ಯೆಯ ಫಲವನ್ನು ಹೇಳಲಾಗಿದೆ. ಈ ಫಲಕ್ಕೆ ಸಕಲ

ದೇವತೆಗಳೂ ಯೋಗ್ಯರಾಗಲು ಸಾಧ್ಯವಿಲ್ಲ. ಯೋಗ್ಯರಾದ ರುದ್ರಾದಿಗಳಿಗೆ ಅಂತಹ ಫಲವು ಪ್ರಾಪ್ತವಾಗಿರುತ್ತದೆ.

ಅರ್ಥಿತ್ವವಿಲ್ಲದ್ದರಿಂದ ಅಧಿಕಾರವಿಲ್ಲವೆಂದು ಜೈಮಿನ್ಯಾಚಾರ್ಯರು

तत्वप्रकाशिका – अतो मोक्षेतरफलार्थे विद्याविचारे देवानामर्थित्वाभावात् न तास्वधिकारः । किं चैवमाप्ततमो जैमिनिराचार्योऽपि मन्यत इत्यर्थः ॥३१॥

ಆದ್ದರಿಂದ, ಮೋಕ್ಷೇತರವಾದ ಫಲಕ್ಕೋಸ್ಕರ ಬ್ರಹ್ಮವಿದ್ಯೆಯನ್ನು ವಿಚಾರ ಮಾಡುವುದಾದರೆ ದೇವತೆಗಳಿಗೆ ಅರ್ಥಿತ್ವವಿಲ್ಲದ ಕಾರಣ, ಅಧಿಕಾರವು ಕೂಡುವುದಿಲ್ಲ. ಹೀಗೆ ಅತ್ಯಂತ ಆಪ್ತರಾದ ಜೈಮಿನ್ಯಾಚಾರ್ಯರು ಹೇಳಿರುತ್ತಾರೆ ಎಂದು ಸೂತ್ರದ ಅಭಿಪ್ರಾಯ.

ಭಾವದೀಪ

ದೇವತೆಗಳ ನಾಮರೂಪಗಳು ಪ್ರವಾಹತಃ ನಿತ್ಯ

ಭಾವದೀಪಃ –

॥ मध्वादिष्वसम्भवादनधिकारं जैमिनिः ॥

अतो देवानां प्रवाहतोऽनादिनित्यत्वात् समाननामरूपत्वाच्चेत्यर्थः ॥ तमाक्षिपदिति॥ श्रुतफलोद्देशेनेति भावः ॥

ದೇವತೆಗಳಿಗೆ ಪ್ರವಾಹತಃ ಅನಾದಿನಿತ್ಯತ್ವವಿರುವುದರಿಂದ ಸಮಾನವಾದ ನಾಮರೂಪಗಳಿರುವುದರಿಂದಲೂ ಎಂದು 'ಅತಃ' ಎಂಬ ಪದದ ಅರ್ಥ. 'ತಮಾಕ್ಷಿಪತ್' ಎಂದರೆ ಶ್ರುತಿಯಲ್ಲಿ ಕೇಳಿಸುತ್ತಿರುವ ಫಲವನ್ನು ಆಕ್ಷೇಪ ಮಾಡುವ ಮೂಲಕ ಎಂದರ್ಥ.

'ಅಸೌ ವಾ ಆದಿತ್ಯೋ ದೇವಮಧು' ಎಂಬ ಛಾಂದೋಗ್ಯದ ಪ್ರಕರಣ

ಭಾವದೀಪಃ – यथा मधुविद्येति ।। छान्दोग्ये तृतीयाध्याये 'असौ वा आदित्यो देवमधु' इति आदित्यस्थविष्णोः परमानन्दरूपत्वेन मधुत्वमुक्त्वा तस्य पूर्वदक्षिण पश्चिमोत्तरोर्ध्वरश्मिषुस्थितानाममृतशब्दितवासुदेव-सङ्कर्षणप्रद्युम्नानिरुद्धनारायणाख्य पञ्चरूपाणां प्राच्यादिरश्मिषु स्थितैर्वसुरुद्रादित्यमरुद्गुनामकमञ्चगणस्थैर्देवैः क्रमेणाग्निवाय्विन्द्रसोम-विरिञ्चमुखेनोपासनायां कृतायां तदपरोक्षद्वारा वसुरुद्रादिपद-प्राप्तिस्तद्गणस्थानामुच्यते – **यथाऽग्निष्टोमेति ।।**

'ಯಥಾ ಮಧುವಿದ್ಯಾ' ಇತ್ಯಾದಿ ಟೀಕೆಯ ಅಭಿಪ್ರಾಯ ಹೀಗಿದೆ - ಛಾಂದೋಗ್ಯೋಪನಿಷತ್ತಿನ ಮೂರನೆಯ ಅಧ್ಯಾಯದಲ್ಲಿ 'ಅಸೌ ವಾ ಆದಿತ್ಯೋ ದೇವಮಧು' ಇತ್ಯಾದಿಯಾಗಿ ಪ್ರಕರಣವು ಪ್ರಾರಂಭವಾಗಿದೆ. ಸೂರ್ಯಮಂಡಲದ ಅಂತರ್ಯಾಮಿಯಾದ ಭಗವಂತನು ದೇವಮಧು ಎಂದೆನಿಸಿದ್ದಾನೆ. ಅಂದರೆ ದೇವತೆಗಳಿಗೆ ಮಧುರವಾದ ಜೇನಿನಂತೆ ಇದ್ದಾನೆ ಎಂಬುದಾಗಿ ಪರಮಾನಂದರೂಪನಾದ್ದರಿಂದ ಮಧುತ್ವವನ್ನು ಹೇಳಲಾಗಿದೆ. ಅಂತಹ ಸೂರ್ಯನ ಪೂರ್ವ-ದಕ್ಷಿಣ-ಪಶ್ಚಿಮ-ಉತ್ತರ ಮತ್ತು ಊರ್ಧ್ವ ಕಿರಣಗಳಲ್ಲಿ ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ-ನಾರಾಯಣ ರೂಪಗಳು ನೆಲೆಸಿವೆ. ಇವುಗಳೆಲ್ಲವೂ ಅಮೃತಮಯವಾಗಿವೆ. ಈ ಪಂಚ ರೂಪಗಳನ್ನು ವಸು-ರುದ್ರ-ಆದಿತ್ಯ-ಮರುತ್-ಋಜು ನಾಮಕರಾದ ದೇವತೆಗಳಿಂದ ಅಗ್ನಿ-ವಾಯು-ಇಂದ್ರ-ಸೋಮ-ವಿರಿಂಚ ಎಂಬ ರೂಪದಿಂದ ಉಪಾಸನೆ ಮಾಡಲಾಗಿದೆ. ಇಂತಹ ಭಗವದ್ರೂಪಗಳ ಅಪರೋಕ್ಷದಿಂದ ವಸು-ರುದ್ರಾದಿಗಳೆಲ್ಲರೂ ವಸು-ರುದ್ರ ಮೊದಲಾದ ತಮ್ಮ ತಮ್ಮ ಪದವಿಗಳನ್ನು ಪಡೆದುಕೊಳ್ಳುತ್ತಾರೆ ಎಂದು ಹೇಳಲಾಗಿದೆ.

ಭಾವದೀಪಃ – तत्र स्वर्गादिफलकत्वश्रवणादिति भावः । मध्वादीत्यादिभाष्यं व्याचष्टे – **तत्रेति ।।** वसूनामित्यादि व्याचष्टे – **एतदेवामृतमिति ।।** वासुदेवाख्यं रूपमित्यर्थः । ऊर्जमन्नं प्राप्तेत्यादिभ्याष्यं व्याचष्टे – **देवानामिति ।।**

ಅಗ್ನಿಷ್ಟೋಮಾದಿ ವಿದ್ಯೆಗಳಿಂದ ಸ್ವರ್ಗಾದಿ ಫಲಗಳು ಶ್ರುತವಾಗಿವೆ. 'ಮಧ್ವಾದಿ' ಇತ್ಯಾದಿ ಭಾಷ್ಯವನ್ನು ತತ್ರ ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ವಸೂನಾಮ್' ಇತ್ಯಾದಿ ಭಾಷ್ಯವನ್ನು 'ಏತದೇವಾಮೃತಂ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ವಾಸುದೇವ' ಎಂಬ ರೂಪವನ್ನು ಎಂದು ಇದರ ಅರ್ಥ. 'ಪ್ರಾಪ್ತ' ಇತ್ಯಾದಿ ಭಾಷ್ಯವನ್ನು 'ದೇವಾನಾಂ' ಎಂಬುದರಿಂದ ವ್ಯಾಖ್ಯಾನ ಮಾಡಿದ್ದಾರೆ.

ಸ್ವರ್ಗಫಲವೆಂಬುದು ಉಪಲಕ್ಷಣ

ಭಾವದೀಪಃ – 'सर्वयज्ञादिकर्म च' इत्युत्तरस्मृत्यनुरोधादिपदेन कर्मविद्यापि ग्राह्येति भावेनाऽह – एवं कर्मेति ।। यद्यप्यग्निष्टोमादौ स्वर्गादिः फलत्वेन श्रूयते न वस्वादिपदप्राप्तिः । तथापि यज्ञेनेति प्रागुक्तश्रुत्या यज्ञादिकर्मणो देवतापद-प्राप्तिहेतुत्वोक्तेः स्वर्गादिशब्दस्योपलक्षणत्वं वा वस्वादिपदस्यापि स्वर्गत्वेन स्वर्गपदेनैव वा ग्रहणोपपत्तेरिति भावः ।

'ಸರ್ವಯಜ್ಞಾದಿಕರ್ಮ ಚ' ಎಂಬ ಮುಂದೆ ಹೇಳುವ ಸ್ಮೃತಿಯ ಅನುಸಾರಿಯಾಗಿ ಆದಿಪದದಿಂದ ಕರ್ಮವಿದ್ಯೆಯನ್ನು ಕೂಡ ಸ್ವೀಕರಿಸಬೇಕೆಂಬ ಅಭಿಪ್ರಾಯದಿಂದ 'ಏವಂ ಕರ್ಮವಿದ್ಯಾಸ್ವಪಿ' ಎಂದು ಟೀಕೆಯಲ್ಲಿ ಹೇಳಿದ್ದಾರೆ.

ವಾಸ್ತವಿಕವಾಗಿ ಅಗ್ನಿಷ್ಟೋಮಾದಿ ಯಾಗಗಳಿಗೆ ಸ್ವರ್ಗಾದಿಗಳೇ ಫಲವಾಗಿ ಶ್ರುತವಾಗಿವೆ. ಹೊರತು, ವಸ್ವಾದಿ ಪದಗಳು ಫಲವಾಗಿ ಶ್ರುತವಾಗಿಲ್ಲ. ಆದರೂ ಸಹ 'ಯಜ್ಞೇನ ಯಜ್ಞಮಯಜಂತ' ಎಂಬ ಹಿಂದೆ ಹೇಳಿದ ಶ್ರುತಿಯಿಂದ ಯಜ್ಞಾದಿಕರ್ಮಗಳಿಗೆ ದೇವತಾ ಪದವಿಯು ಕೂಡ ಫಲವಾಗಿದೆ ಎಂದು ಹೇಳಿದ್ದರಿಂದ ಸ್ವರ್ಗಫಲವೆಂಬುದು ಉಪಲಕ್ಷಣವೆಂದು ತಿಳಿಯುತ್ತದೆ. ಅಥವಾ, ವಸ್ವಾದಿ ಪದಗಳು ಸ್ವರ್ಗವೇ ಆದ್ದರಿಂದ ಸ್ವರ್ಗ ಪದದಿಂದಲೇ ವಸು ಮೊದಲಾದ ಪದವಿಗಳನ್ನು ಸ್ವೀಕರಿಸಬಹುದು ಎಂದು ಅಭಿಪ್ರಾಯ.

'ನಚ ದ್ವಿತೀಯ' ಇತ್ಯಾದಿ ಟೀಕೆಯ ಅಭಿಪ್ರಾಯ

ಭಾವದೀಪಃ – यद्वा वस्वादिफलकासाधारणकर्मविशेषपरो वाऽत्र कर्मशब्दः।। नच द्वितीयेति ।। 'यद् यत्प्रथममृतं तद्वसव उपजीवन्ति'

इत्युक्तप्रथमामृतविद्याया वसुत्वफलकत्वेन तत्र वसूनामधिकारेऽपि 'अथ तद् द्वितीयममृतं तद् रुद्रा उपजीवन्ति' इत्यादिनोक्तद्वितीयाद्यमृतविद्यासु-रुद्रत्वादेः फलत्वेन तत्राधिकारोऽस्त्विति न वाच्यमित्यर्थः ।।

ಅಥವಾ, ವಸು ಮೊದಲಾದ ಪದವಿಗಳೇ ಫಲವಾಗಿಯುಳ್ಳ ಅಸಾಧಾರಣಕರ್ಮವಿಶೇಷವನ್ನು ಇಲ್ಲಿರುವ ಕರ್ಮಶಬ್ದವು ಹೇಳುತ್ತಿದೆ. 'ಯದ್ಯತ್ ಪ್ರಥಮಂ ಅಮೃತಂ ತದ್ವಸವ ಉಪಜೀವಂತಿ' ಎಂಬಲ್ಲಿ ಪ್ರಥಮವಾದ ಅಮೃತವಿದ್ಯೆಯಿಂದ ವಸುಪದವಿಯು ಫಲವೆಂದು ಹೇಳಲಾಗಿದೆ. ಆದರೆ ದೇವತೆಗಳಿಗೆ ಈಗಾಗಲೇ ವಸುಪದವಿಯು ದೊರೆತದ್ದರಿಂದ ಅಂಥಹ ವಸುಗಳಿಗೆ ಆ ವಿದ್ಯೆಯಲ್ಲಿ ಅಧಿಕಾರವಿಲ್ಲದಿರಬಹುದು. ಆದರೆ, 'ಅಥ ತದ್ ದ್ವಿತೀಯಂ ಅಮೃತಂ ತದ್ರುದ್ರಾ ಉಪಜೀವಂತಿ' ಎಂಬಲ್ಲಿ ದ್ವಿತೀಯವಾದ ಅಮೃತ ವಿದ್ಯೆಯಿಂದ ರುದ್ರಪದವಿಯು ಫಲವೆಂದು ಹೇಳಲಾಗಿದೆ. ಆ ಪದವಿಯು ವಸು ದೇವತೆಗಳಿಗೆ ದೊರೆಯದ ಕಾರಣ ಅಂತಹ ವಿದ್ಯೆಯಲ್ಲಿ ಅಧಿಕಾರವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು ಎಂಬುದು 'ನಚ ದ್ವಿತೀಯ' ಇತ್ಯಾದಿ ಟೀಕೆಯ ಅಭಿಪ್ರಾಯವಾಗಿದೆ.

'स्वेतरयोग्य पदफलाभिदात्रिषु' ಎಂಬುದರ ವ್ಯಾಖ್ಯಾನ

भावदीपः – स्वस्वेति ।। स्वयोग्यफलाभिधात्रीषु स्वेतरयोग्यफलाभिधात्रीषु प्रथमद्वितीयाद्यमृतविद्यास्वित्यर्थः ।। **मोक्षेतरेति** ।। छान्दोग्य एव चतुर्थेऽध्याये सत्यकामं प्रति वृषभाद्याविष्टवाय्वादिभिरुपदिष्टायाम् 'एष वै सोम्य चतुष्कलः पादो ब्रह्मणः प्रकाशवान्नाम' इत्यादिविद्यायां 'य एवं विद्वान् चतुष्कलं पादं ब्रह्मणः प्रकाशवानित्युपास्ते प्रकाशवानस्मिंल्लोके भवति प्रकाशवतो ह लोकान् जयति' इत्यादिनोक्तानामस्मिंल्लोके प्रकाशवत्त्वादीनां सर्वसाधारण्यात्तत्रास्त्वधिकार इति न वाच्यमित्यर्थः ।।

ತಮ್ಮ ಯೋಗ್ಯತೆಗೆ ತಕ್ಕಂತೆ ಫಲವನ್ನು ಹೇಳುವಂತಹ ಅಥವಾ ಸ್ವೇತರವಾದ ರುದ್ರಾದಿ ಪದವಿಗಳನ್ನೇ ಫಲವನ್ನಾಗಿ ಹೇಳುವಂತಹ ಬ್ರಹ್ಮವಿದ್ಯೆ ಹಾಗೂ ಕರ್ಮ ವಿದ್ಯೆಗಳಲ್ಲಿ ಎಂದು 'ಸ್ವೇತರಯೋಗ್ಯ ಪದಫಲಾಭಿದಾತ್ರಿಷು' ಎಂಬುದರ ಅರ್ಥವಾಗಿದೆ. 'ಮೋಕ್ಷೇತರ' ಟೀಕೆಯಲ್ಲಿ 'ಮೋಕ್ಷೇತರಸಾಮಾನ್ಯ-

ಫಲಾಭಿಧಾಯಕವಿದ್ಯಾಸು' ಎಂದು ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗಿದೆ. ಛಾಂದೋಗ್ಯದ ನಾಲ್ಕನೆಯ ಅಧ್ಯಾಯದ ಪ್ರಕರಣ ಹೀಗಿದೆ - ಸತ್ಯಕಾಮನನ್ನು ಕುರಿತು ವೃಷಭ, ಹಂಸ ಮೊದಲಾದವುಗಳಲ್ಲಿ ಆವಿಷ್ಟರಾದ ದೇವತೆಗಳಿಂದ ತತ್ತ್ವೋಪದೇಶವು ದೊರೆಯುತ್ತದೆ. ಅನಂತರ 'ಏಷ ವೈ ಸೋಮೇ ಚತುಷ್ಕಲಃ ಪಾದೋ ಬ್ರಾಹ್ಮಣೋ ಪ್ರಕಾಶವಾನ್ ನಾಮ' ಇತ್ಯಾದಿಯಾಗಿ ಮತ್ತು 'ಯ ಏವಂ ವಿದ್ವಾನ್ ಚತುಷ್ಕಲಂ ಪಾದಂ ಬ್ರಹ್ಮಣಃ ಪ್ರಕಾಶವಾನ್ ಇತ್ಯುಪಾಸ್ತೇ ಪ್ರಕಾಶವಾನ್ ಅಸ್ಮಿನ್ ಲೋಕೇ ಭವತಿ ಪ್ರಕಾಶೋ ವಾ ಲೋಕಾನ್ ಜಯತಿ' ಇತ್ಯಾದಿಯಾಗಿ ಪ್ರಕಾಶವತ್ತ್ವವನ್ನೇ ಫಲವನ್ನಾಗಿ ಹೇಳಲಾಗಿದೆ. ಅಂದರೆ, ಈ ಲೋಕದಲ್ಲಿಯೂ ಕೀರ್ತಿಶಾಲಿಗಳಾಗುತ್ತಾರೆ, ಪರಲೋಕದಲ್ಲಿಯೂ ಕೀರ್ತಿಶಾಲಿಗಳಾಗುತ್ತಾರೆ ಎಂದು ಎಲ್ಲರಿಗೂ ಈ ವಿದ್ಯೆಯಲ್ಲಿ ಅಧಿಕಾರವಿದೆಯೆಂದು ಹೇಳಿರುವುದರಿಂದ ಮೋಕ್ಷೇತರವಾದ ಸಾಮಾನ್ಯ ಫಲವನ್ನು ಹೇಳುವಂತಹ ವಿದ್ಯೆಗಳಲ್ಲಿ ಎಲ್ಲರಿಗೂ ಅಧಿಕಾರವನ್ನು ಹೇಳಬಹುದಲ್ಲವೆ? ಎಂದು ಪ್ರಶ್ನಿಸಬಾರದು. ಎಂಬುದಾಗಿ 'ಮೋಕ್ಷೇತರಸಾಮಾನ್ಯಫಲಾಭಿಧಾಯಕ-ವಿದ್ಯಾಸು' ಇತ್ಯಾದಿ ಟೀಕೆಯಿಂದ ಹೇಳಿದ್ದಾರೆ.

'ತೇ ಹ ಪ್ರಾಣಾ ಅಹಂ ಶ್ರೇಯಸಿ ವ್ಯೂದಿರೇ' ಎಂಬುದರ ವ್ಯಾಖ್ಯಾನ

भावदीपः – तत्फलेति।। मधुविद्याफलभूतवसुत्वादावित्यर्थः ।। न ह वा इति ।। तत्रैव पञ्चमे 'नह वा एवंविदि' इत्यादिनोक्तेषु 'ते ह प्राणा अहं श्रेयसि व्यूदिरे' इत्यादिप्राणविद्याफलेषु सर्वभोक्तृत्वादिरूपेषु रुद्रादेरेव योग्यत्वेन सर्वेषामयोग्यत्वादित्यर्थः । एवं युक्तिभिरुपपादितस्य सर्वैरङ्गीकार्यत्वात् जैमिनिरिति कस्यचिन्मतत्वेनोक्तिः कथमित्यतो व्याचष्टे – किञ्चेति ।। ३१ ।।

'ತತ್ಫಲೇನ' ಎಂದರೆ ಮಧುವಿದ್ಯೆಗೆ ಫಲವೆನಿಸಿದ ವಸುಪದವಿಯ ಪ್ರಾಪ್ತಿ ಮೊದಲಾದ ಫಲಗಳು ಎಂದರ್ಥ. 'ನ ಹ ವಾ' ಎಂದರೆ ಅದೇ ಛಾಂದೋಗ್ಯದ ಐದನೆಯ ಅಧ್ಯಾಯದಲ್ಲಿ 'ನಹ ವಾ ಏವಂವಿತ್' ಇತ್ಯಾದಿಯಾಗಿ ಹೇಳಲ್ಪಟ್ಟ 'ತೇ ಹ ಪ್ರಾಣಾ ಅಹಂ ಶ್ರೇಯಸಿ ವ್ಯೂದಿರೇ' ಇತ್ಯಾದಿಯಾದ ಪ್ರಾಣವಿದ್ಯೆಯ ಫಲಗಳಲ್ಲಿ ಸರ್ವಭೋಕ್ತೃತ್ವಕ್ಕೆ ಅಧಿಕಾರಿಗಳಾದ ರುದ್ರ ಮೊದಲಾದವರೇ ಯೋಗ್ಯರು, ಹೊರತು ಬೇರೆಯವರು ಯೋಗ್ಯರಲ್ಲವೆಂದು ಹೇಳಲಾಗಿದೆ. ಇಲ್ಲಿಯ ತನಕ ಯುಕ್ತಿಯ ಮೂಲಕ ಉಪಪಾದಿತವಾದ ವಿಚಾರವನ್ನು ಎಲ್ಲರೂ ಕೂಡ ಅಂಗೀಕರಿಸಬೇಕೆಂದು ತಿಳಿದದ್ದರಿಂದ, 'ಜೈಮಿನಿಃ'

ಎಂದು ಸೂತ್ರಕಾರರು ಏಕೆ ಉಲ್ಲೇಖ ಮಾಡಿದ್ದಾರೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಾ 'ಕಿಂಚ' ಇತ್ಯಾದಿ ವಾಕ್ಯವು ಹೊರಟಿದೆ.

ಬ್ರಹ್ಮಸೂತ್ರ

'ಜ್ಯೋತಿಷಿ ಭಾವಾಚ್ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। ज्योतिषि भावाच्च ।। ३२ ।।

ಸೂತ್ರಾರ್ಥ - ದೇವತೆಗಳ ಜ್ಞಾನದಲ್ಲಿ ಸಕಲವಸ್ತುಗಳೂ ಇರುವುದರಿಂದ ಸಿದ್ಧ ಜ್ಞಾನಿಗಳಾದ ದೇವತೆಗಳಿಗೆ ಜ್ಞಾನಾರ್ಥತ್ವವು ಕೂಡುವುದಿಲ್ಲ.

ಅರ್ಥ -- ಜ್ಯೋತಿಷಿ = ದೇವತೆಗಳ ಜ್ಞಾನದಲ್ಲಿ, ಭಾವಾತ್ = ಸಕಲವಸ್ತುಗಳೂ ಅಂತರ್ಭೂತವಾದ್ದರಿಂದ ಸಿದ್ಧ ಜ್ಞಾನವುಳ್ಳ ದೇವತೆಗಳಿಗೆ ಜ್ಞಾನಾರ್ಥಿತ್ವವು ಕೂಡುವುದಿಲ್ಲ. ಆದ್ದರಿಂದ ಮೋಕ್ಷಕ್ಕೆ ಕಾರಣವಾದ ಉಪಾಸನಾದಿಗಳಲ್ಲೂ ಸಹ ಅವರಿಗೆ ಅಧಿಕಾರವಿರುವುದಿಲ್ಲ.

ಬ್ರಹ್ಮಸೂತ್ರಭಾಷ್ಯ

ಸಕಲ ವಿದ್ಯೆಗಳು ದೇವತೆಗಳಿಗೆ ಸದಾ ಸಿದ್ಧ

ब्रह्मसूत्रभाष्यम् – ज्योतिषि सर्वज्ञत्वे भावाच्च । आदित्यप्रकाशेऽन्तर्भाववत्त-ज्ज्ञाने सर्ववस्तूनामन्तर्भावात् । नित्यसिद्धत्वाच्च विद्यानाम् ।।३२।।

ಅನುವಾದ - 'ಜ್ಯೋತಿಷಿ' ಎಂದರೆ ದೇವತೆಗಳ ಜ್ಞಾನದಲ್ಲಿ ಸಕಲ ಪದಾರ್ಥಗಳು ವಿಷಯವಾಗುವುದರಿಂದ ಎಂದರ್ಥ. ಸೂರ್ಯನ ಪ್ರಕಾಶದಲ್ಲಿ ಎಲ್ಲ ಪದಾರ್ಥಗಳೂ ಹೇಗೆ ತೋರುತ್ತವೋ ಅದರಂತೆ , ದೇವತೆಗಳ ಜ್ಞಾನದಲ್ಲಿಯೂ ಸಹ ಸಕಲ ಪದಾರ್ಥಗಳೂ ತೋರುತ್ತವೆ. ಜ್ಞಾನ ಸಾಧನವಾದ ಸಕಲ ವಿದ್ಯೆಗಳೂ ಅವರಿಗೆ ಯಾವಾಗಲೂ ಸಿದ್ಧವಾಗಿವೆ.-

ಪ್ರತಿಪದಾರ್ಥ -- ಮೋಕ್ಷಕ್ಕಿಂತ ಇತರವಾದ ಫಲವನ್ನು ನೀಡುವ ಮಧ್ವಾದಿ ವಿದ್ಯೆಗಳಲ್ಲಿ ದೇವತೆಗಳಿಗೆ ಅಧಿಕಾರವಿಲ್ಲವೆಂದು ಒಪ್ಪೋಣ. ಆದರೂ ಮೋಕ್ಷಫಲಕವಾದ ಬ್ರಹ್ಮವಿದ್ಯೆಯಲ್ಲಿ ಅಧಿಕಾರ-ವಿದೆಯಲ್ಲವೇ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಜ್ಯೋತಿಷಿ, ಸೂತ್ರದಲ್ಲಿರುವ 'ಜ್ಯೋತಿಷಿ' ಎಂಬ ಪದಕ್ಕೆ, ಸರ್ವಜ್ಞತ್ವೇ = ಸರ್ವವಿಷಯಕವಾದ ದೇವತೆಗಳ ಜ್ಞಾನದಲ್ಲಿ, ಭಾವಾಚ್ಚ = ಸಕಲಪದಾರ್ಥಗಳು ವಿಷಯವಾಗಿರುವುದರಿಂದ, ಹೇಗೆಂದರೆ, ಆದಿತ್ಯಪ್ರಕಾಶೇ = ಸೂರ್ಯನಕಾಂತಿಯಲ್ಲಿ, ಅಂತರ್ಭಾವವತ್ = ಸಕಲಪದಾರ್ಥಗಳೂ ತೋರುವಂತೆ, ತಜ್ಜ್ಞಾನೇ = ದೇವತೆಗಳ ಜ್ಞಾನದಲ್ಲಿ, ಸರ್ವವಸ್ತೂನಾಂ = ಸಕಲ ಪದಾರ್ಥಗಳೂ, ಅಂತರ್ಭಾವಾತ್ = ಒಳಗೊಂಡಿವೆ, ವಿದ್ಯಾನಾಂ = ಸಕಲವಿದ್ಯೆಗಳು, ನಿತ್ಯಸಿದ್ಧತ್ವಾಚ್ಚ = ದೇವತೆಗಳಿಗೆ ನಿತ್ಯಸಿದ್ಧವಾಗಿರುವುದರಿಂದ, ದೇವತೆಗಳಿಗೆ ಸಕಲವೇದವಿದ್ಯಾಕಾರವು ಇರುತ್ತದೆ ಎಂದು ತಿಳಿಯಬೇಕು.

ಸತ್ತರ್ಕದೀಪಾವಳಿ

ದೇವತೆಗಳ ಬ್ರಹ್ಮವಿದ್ಯಾಧಿಕಾರದಲ್ಲಿ ಮತ್ತೊಂದು ಹೇತು

।। ज्योतिषि भावाच्च ।।

हेत्वन्तरेणैतत् साधयति – ज्योतिरित्यादिना ।।

ಮತ್ತೊಂದು ಹೇತುವಿನಿಂದಲೂ ದೇವತೆಗಳಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರ-ವಿರುತ್ತದೆಂಬುದನ್ನು ಸಾಧಿಸುತ್ತಿದ್ದಾರೆ – 'ಜ್ಯೋತಿಷಿ ಭಾವಾಚ್ಚ' ಎಂಬ ಸೂತ್ರದಿಂದ.

ತತ್ತ್ವಪ್ರಕಾಶಿಕಾ

ದೇವತೆಗಳಿಗೆ ಮೋಕ್ಷವು ಅಪೇಕ್ಷಿತವೇ ?

तत्वप्रकाशिका –

।। ज्योतिषि भावाच्च ।।

मास्तु मोक्षेतरफलार्थविद्यास्वधिकारो देवानाम् । 'सत्यं ज्ञानमनन्तं ब्रह्म' इत्यादिमोक्षार्थविद्यासु भविष्यति? अर्थित्वसम्भवात्, इत्याशङ्कां परिहरत्सूत्रमुपन्यस्य व्याचष्टे – ज्योतिषीति ।।

ದೇವತೆಗಳಿಗೆ ಮೋಕ್ಷೇತರಫಲಕವಾದ ವಿದ್ಯೆಯಲ್ಲಿ ಅಧಿಕಾರವಿರುವುದು ಬೇಡ. ಆದರೆ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ಮೋಕ್ಷಪ್ರಯೋಜನವುಳ್ಳಂತಹ ವಿದ್ಯೆಯಲ್ಲಿ ಅಧಿಕಾರವನ್ನು ಹೇಳಬಹುದು. ಏಕೆಂದರೆ, ಮೋಕ್ಷವು ದೇವತೆಗಳಿಗೆ ಅಪೇಕ್ಷಿತವಾಗಿರುತ್ತದಲ್ಲವೇ? ಎಂಬ ಆಶಂಕೆಯನ್ನು ಪರಿಹರಿಸುವಂತಹ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಜ್ಯೋತಿಷಿ' ಇತ್ಯಾದಿ ಭಾಷ್ಯದಿಂದ.

'ಸರ್ವಜ್ಞತ್ವಾಭಾವಚ್ಚ' ಎಂಬ ಭಾಷ್ಯದ ವ್ಯಾಖ್ಯಾನ

तत्वप्रकाशिका – भावात् 'वस्तूनाम्' इति शेषः । कथं वस्तूनां ज्ञानेऽन्तर्भावः? इत्यतः स्वपदेन वर्णयति – आदित्येति ।। अभिप्रायं वक्ति – नित्येति ।।

'ಭಾವಾತ್' ಎಂಬ ಪದದ ಮುಂದೆ 'ವಸ್ತೂನಾಂ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಸಕಲ ವಸ್ತುಗಳು ದೇವತೆಗಳ ಜ್ಞಾನದಲ್ಲಿ ಹೇಗೆ ಅಂತರ್ಭಾವವಾಗುತ್ತದೆ? ಎಂಬ ಪ್ರಶ್ನೆಗೆ ಭಾಷ್ಯಕಾರರು 'ಸರ್ವಜ್ಞತ್ವಾಭಾವಾಚ್ಚ' ಎಂಬ ತಮ್ಮ ವಾಕ್ಯಗಳನ್ನೇ ವ್ಯಾಖ್ಯಾನ

ಮಾಡುತ್ತಿದ್ದಾರೆ, 'ಆದಿತ್ಯ' ಇತ್ಯಾದಿ ಮುಂದಿನ ಮಾತುಗಳಿಂದ. ಅದರ ಅಭಿಪ್ರಾಯವನ್ನು ಸ್ಪಷ್ಟ ಪಡಿಸಿದ್ದಾರೆ, 'ನಿತ್ಯ' ಎಂಬ ಕೊನೆಯ ವಾಕ್ಯದಿಂದ.

ದೇವತೆಗಳಿಗೆ ಎಲ್ಲಿ ಅರ್ಥಿತ್ವವಿರುವುದಿಲ್ಲ

तत्वप्रकाशिका – न मोक्षार्थविद्यास्वपि देवानामधिकारः सम्भवति । तदुक्तोपासनेऽर्थिताभावात् ।

ಮೋಕ್ಷವೇ ಪ್ರಯೋಜನವಾಗಿಯುಳ್ಳಂತ ವಿದ್ಯೆಯಲ್ಲಿಯೂ ಕೂಡ ದೇವತೆಗಳಿಗೆ ಅಧಿಕಾರವು ಕೂಡುವುದಿಲ್ಲ. ಏಕೆಂದರೆ, ಅದರಲ್ಲಿ ಹೇಳಿರುವ ಉಪಾಸನೆ ವಿಷಯದಲ್ಲಿ ದೇವತೆಗಳಿಗೆ ಅರ್ಥಿತ್ವವಿರುವುದಿಲ್ಲ.

ಎರಡು ಬಗೆಯ ಅರ್ಥಿತ್ವ

तत्वप्रकाशिका – विद्या हि अर्थिता द्विविधाविचारे भवति ज्ञानाय फलाय चेति । तत्र देवानां मोक्षार्थित्वेऽपि न तत्साधने विद्यासाध्ये ज्ञानेऽर्थिताऽस्ति ।

ಅರ್ಥಿತ್ವವನ್ನು ಎರಡು ಬಗೆಯಲ್ಲಿ ಹೇಳಬಹುದು. ೧. ಜ್ಞಾನಕ್ಕೋಸ್ಕರ ೨. ಫಲಕ್ಕೋಸ್ಕರ, ಎಂದು. ಇವೆರಡರಲ್ಲಿ ದೇವತೆಗಳಿಗೆ ಮೋಕ್ಷಾರ್ಥಿತ್ವವಿದ್ದರೂ, ಮೋಕ್ಷಸಾಧನೆಯೆನಿಸಿದ ಜ್ಞಾನದ ವಿಷಯದಲ್ಲಿ ಅರ್ಥಿತ್ವವು ಕೂಡುವುದಿಲ್ಲ.

ದೇವತೆಗಳು ಸರ್ವಜ್ಞರು

तत्वप्रकाशिका – तेषां सार्वज्ञेन सर्वविद्योक्तज्ञानित्वात् ।

ಏಕೆಂದರೆ, ದೇವತೆಗಳು ಸರ್ವಜ್ಞರಾದ್ದರಿಂದ ಸಕಲ ವೇದವಿದ್ಯೆಯಲ್ಲಿ ಹೇಳಲ್ಪಟ್ಟ ಜ್ಞಾನವು ದೇವತೆಗಳಿಗೆ ಇದ್ದೇ ಇರುತ್ತದೆ.

ಮೋಕ್ಷೇತರಫಲಕವಾದ ವೇದವಿದ್ಯೆಯಲ್ಲಿ ಅಧಿಕಾರವಿದೆಯೇ ?

तत्वप्रकाशिका – नहि स्वर्गार्थिनोऽपि कृतयज्ञस्य पुनर्यज्ञविद्याविचारेऽर्थिताऽस्तीति भावः । अनेन प्राचीनपक्षे दोषान्तरं चाक्तं भवति ।। ३२ ।।

ಯಾವ ವ್ಯಕ್ತಿಯು ಸ್ವರ್ಗವನ್ನು ಅಪೇಕ್ಷೆ ಪಟ್ಟು ಯಜ್ಞವನ್ನು ಆಚರಿಸಿರುತ್ತಾನೋ, ಅವನಿಗೆ ಪುನಃ ಯಜ್ಞವಿದ್ಯೆಯಲ್ಲಿ ಅರ್ಥಿತ್ವವು ಉಂಟಾಗುವುದಿಲ್ಲ. ಅದರಂತೆ ದೇವತೆಗಳಿಗೆ ಮೋಕ್ಷಫಲಕವಾದ ವಿದ್ಯೆಯಲ್ಲಿ ಅರ್ಥಿತ್ವವು ಉಪಪನ್ನವಾಗುವುದಿಲ್ಲ. ಹೀಗೆ ಹೇಳಿದ್ದರಿಂದ, ಮೋಕ್ಷೇತರಫಲಕವಾದ ವೇದವಿದ್ಯೆಯಲ್ಲಿ ಅಧಿಕಾರವಿರುತ್ತದೆಂಬ ಹಿಂದಿನ ಪಕ್ಷದಲ್ಲಿ ಮತ್ತೊಂದು ದೋಷವನ್ನು ಹೇಳಿದಂತಾಯಿತು.

ಭಾವದೀಪ

'ನ ಮೋಕ್ಷಾರ್ಥ' ಇತ್ಯಾದಿ ಟೀಕೆಯ ವ್ಯಾಖ್ಯಾನ

भावदीपः –

।। ज्योतिषि भावाच्च ।।

कथमनेन भाष्येण पूर्वोक्तशङ्कानिरास इत्यत आह – न मोक्षार्थेति ।। अनेनेति ।। नित्यसिद्धत्वाद् विद्यानामिति भाष्येणेत्यर्थः ।

'ಜ್ಯೋತಿಷಿ ಭಾವಾತ್' ಎಂಬ ಸೂತ್ರದ ಭಾಷ್ಯದಿಂದ ಹಿಂದೆ ಮಾಡಿದ ಆಶಂಕೆಯು ಹೇಗೆ ಪರಿಹಾರವಾಗುತ್ತದೆ? ಎಂಬ ಪ್ರಶ್ನೆಗೆ 'ನ ಮೋಕ್ಷಾರ್ಥ' ಇತ್ಯಾದಿ ಟೀಕೆಯಿಂದ ಉತ್ತರಿಸಿದ್ದಾರೆ. 'ಅನೇನ' ಎಂದರೆ 'ನಿತ್ಯಸಿದ್ಧತ್ವಾತ್ ವಿದ್ಯಾನಾಂ' ಎಂಬ ಭಾಷ್ಯದಿಂದ ಎಂದರ್ಥ.

ಮಧ್ವಾದಿವಿದ್ಯೆಗಳಲ್ಲಿ ದೇವತೆಗಳಿಗೆ ಅಧಿಕಾರವಿಲ್ಲ

भावदीपः – प्राचीनपक्षे मोक्षेतरफलार्थविद्यास्वधिकार इति पक्षे, वसुत्वादिफलस्य प्राप्तत्वेनार्थित्वाभावान्मधुविद्यायामनधिकार इत्येव दोषो

न, किन्तु वसुत्वादि-फलसाधनस्य ज्ञानस्य विद्यासाध्यस्य प्राप्तत्वाच्च न तत्राधिकार इति दोषान्तरं चोक्तमित्यर्थः । साधनफलयोर्द्वयोरपि प्राप्तत्वान्न मध्वादिविद्यास्वधिकार इत्युक्तं भवति ।। ३२ ।।

'प्राचीनपक्षे' ಎಂದರೆ ಮೋಕ್ಷೇತರವಾದ ಸ್ಥಳವನ್ನು ಹೇಳುವಂತಹ ವಿದ್ಯೆಗಳಲ್ಲಿ ಅಧಿಕಾರವಿರುತ್ತದೆ ಎಂಬ ಹಿಂದಿನ ಪಕ್ಷದಲ್ಲಿ ಎಂದರ್ಥ. ದೇವತೆಗಳಿಗೆ ಈಗಾಗಲೇ ವಸು ಮೊದಲಾದ ಪದವಿಗಳು ದೊರೆತದ್ದರಿಂದ ಅರ್ಥಿತ್ವವು ಅವರಲ್ಲಿರುವುದಿಲ್ಲ. ಆದ್ದರಿಂದ, ಮಧುವಿದ್ಯೆಯಲ್ಲಿ ಅಧಿಕಾರ-ವಿಲ್ಲವೆಂಬುದಷ್ಟೇ ದೋಷವಲ್ಲ. ಹೊರತಾಗಿ, ವಸು ಮೊದಲಾದ ಪದವಿಗಳೇ ಪ್ರಯೋಜನವಾಗಿಯುಳ್ಳ ಜ್ಞಾನವೂ ಸಹ ಈಗಾಗಲೇ ದೊರೆತಿದೆ. ಆದ್ದರಿಂದಲೂ ಅವರಿಗೆ ಅಧಿಕಾರವಿಲ್ಲವೆಂಬ ಮತ್ತೊಂದು ದೋಷವನ್ನು ಹೇಳಲಾಗಿದೆ ಎಂದರ್ಥ. ಸಾಧನ ಹಾಗೂ ಫಲಗಳೆರಡು ಈಗಾಗಲೇ ದೊರೆತದ್ದರಿಂದ ಮಧ್ವಾದಿ ವಿದ್ಯೆಗಳಲ್ಲಿ ದೇವತೆಗಳಿಗೆ ಅಧಿಕಾರವಿಲ್ಲವೆಂದು ಹೇಳಿದಂತಾಯಿತು.

ಬ್ರಹ್ಮಸೂತ್ರ

'ಭಾವಂ ತು ಬಾದರಾಯಣೋऽಸ್ತಿ ಹಿ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् — ।। भावं तु बादरायणोऽस्ति हि ।। ३३ ।।

ಸೂತ್ರಾರ್ಥ -- ದೇವತೆಗಳಿಗೆ ಮಧುವಿದ್ಯೆ ಮೊದಲಾದ ಎಲ್ಲ ವಿದ್ಯೆಗಳಲ್ಲಿ ಅಧಿಕಾರವಿರುತ್ತದೆ ಎಂದು ವೇದವ್ಯಾಸರು ಹೇಳುತ್ತಾರೆ.

ಅರ್ಥ -- हि = ಯಾವಕಾರಣದಿಂದ, ದೇವತೆಗಳಿಗೆ ಮೋಕ್ಷೇತರವಾದ ಫಲವನ್ನು ಹೊಂದಿ ಮೋಕ್ಷಯೋಗ್ಯವಾದ ಬ್ರಹ್ಮಜ್ಞಾನವನ್ನು ಹೊಂದಿದ್ದರೂ ಅರ್ಥಿತ್ವವು ಕೂಡುತ್ತದೆ. ಏಕೆಂದರೆ ಮೋಕ್ಷದಲ್ಲಿ ಆನಂದಾತಿಶಯವೆಂಬ ಫಲವಿರುವುದರಿಂದ. भावम् = ದೇವತೆಗಳಿಗೆ ಅಧಿಕಾರವಿರುತ್ತದೆ ಎಂದು, बादरायणः = ವೇದವ್ಯಾಸದೇವರು ಹೇಳುತ್ತಾರೆ. ಈಗಾಗಲೇ ದೇವತೆಗಳು ಬ್ರಹ್ಮಜ್ಞಾನವೆಂಬ ಫಲವನ್ನು ಪಡೆದಿದ್ದರಿಂದ ಅಧಿಕಾರಿಗಳಲ್ಲವೆಂದಷ್ಟೇ ಜೈಮಿನಿಗಳ ಅಭಿಪ್ರಾಯ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಸೂತ್ರದಲ್ಲಿ
ದೇವತಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಸಕಲ ವಿದ್ಯೆಗಳಲ್ಲಿಯೂ ದೇವತೆಗಳು ಅಧಿಕಾರಿಗಳೆನ್ನುತ್ತಾರೆ ಬಾದರಾಯಣರು

ब्रह्मसूत्रभाष्यम् — फलविशेषभावात्प्राप्तपदानामपि देवानां मध्वादिष्वप्यधिकारं बादरायणो मन्यते । अस्ति हि प्रकाशविशेषः ।

ಅನುವಾದ - ವಿದ್ಯೆಯ ಫಲವಾದ ಪದವಿ ಜ್ಞಾನಗಳನ್ನು ದೇವತೆಗಳು ಹೊಂದಿದ್ದರೂ ಸಹ ಫಲವಿಶೇಷವಿರುವುದರಿಂದ ವೇದದಲ್ಲಿ ಹೇಳಲ್ಪಟ್ಟ ಮಧುವಿದ್ಯಾದಿಗಳಲ್ಲಿಯೂ ಅಧಿಕಾರವಿರುತ್ತದೆ ಎಂದು ಬಾದರಾಯಣರು ತಿಳಿದಿದ್ದಾರೆ. ಏಕೆಂದರೆ ದೇವತೆಗಳಿಗೂ ಸಹ ಅಧ್ಯಯನಾದಿಗಳಿಂದ ಜ್ಞಾನದಲ್ಲಿ ಪ್ರಕಾಶವಿಶೇಷವು ಉಂಟಾಗುತ್ತದೆ.

ಪ್ರತಿಪದಾರ್ಥ -- ಬೇರೆ ಋಷಿಗಳ ಅಭಿಪ್ರಾಯವನ್ನು ಹೇಳಿ ಸೂತ್ರಕಾರರು ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ -

ಫಲೇ = ಫಲದಲ್ಲಿ, ಪ್ರಾಪ್ತಪದಾನಾಮಪಿ = ಸ್ಥಾನವನ್ನು ಹೊಂದಿದ್ದರೂ ಸಹ, ದೇವನಾಂ = ದೇವತೆಗಳಿಗೆ, ವಿಶೇಷಭಾವಾತ್ = ಹೆಚ್ಚಿನ ಫಲವಿರುವುದರಿಂದ, ಮಧ್ವಾದ್ವಿದಿಷ್ವಪಿ = ಮಧುವಿದ್ಯಾದಿಗಳಲ್ಲಿಯೂ, ಅಧಿಕಾರಂ = ಅಧಿಕಾರವನ್ನು, ಬಾದರಾಯಣಃ = ವೇದವ್ಯಾಸದೇವರು, ಮನ್ಯತೇ = ತಿಳಿಯುತ್ತಾರೆ, ಏಕೆಂದರೆ ದೇವತೆಗಳಿಗೂ ಸಹ, ಪ್ರಕಾಶ ವಿಶೇಷಃ = ಅಧ್ಯಯನದಿಂದ ಜ್ಞಾನದಲ್ಲಿ, ವಿಶೇಷವು, ಅಸ್ತಿ = ಇರುತ್ತದೆ.

ब्रह्मसूत्रभाष्यम् — यावत्सेवा परे तत्त्वे तावत्सुखविशेषता ।
सम्भवाच्च प्रकाशस्य परमेकमृते हरिम् ।।
तेषां सामर्थ्ययोगाच्च देवानामप्युपासनम् ।।
सर्वं विधीयते नित्यं सर्वयज्ञादिकर्म च ।
इति स्कान्दे ।

ಅನುವಾದ - ಸ್ಕಾಂದ ಪುರಾಣದಲ್ಲಿ ಹೀಗೆ ಹೇಳಲ್ಪಟ್ಟಿದೆ - ಪರತತ್ವವೆನಿಸಿದ ಶ್ರೀಹರಿಯಲ್ಲಿ ಶ್ರವಣಾದಿರೂಪವಾದ ಸೇವೆಯು ಎಷ್ಟು ಇರುತ್ತದೋ ಅಷ್ಟು ಸುಖಾನುಭವದಲ್ಲಿ ಹೆಚ್ಚುಗಾರಿಕೆಯು ಇರುತ್ತದೆ. ಪರತತ್ವವೆನಿಸಿದ ಶ್ರೀಹರಿಯಲ್ಲಿ ಎಷ್ಟು ಶ್ರವಣಾದಿರೂಪವಾದ ಸೇವೆಯು ನೆಡೆಯುತ್ತದೋ ಅಷ್ಟು ದೇವತೆಗಳಿಗೆ ಸುಖಾನುಭವದಲ್ಲಿ ಲಾಭವು ಉಂಟಾಗುತ್ತದೆ. ಪರಮಾತ್ಮನೊಬ್ಬನನ್ನು ಬಿಟ್ಟು, ಲಕ್ಷ್ಮೀದೇವಿ ಮೊದಲಾದ ಸಕಲ ಜೀವರಾಶಿಗಳಿಗೂ ಸಾಧನಕ್ಕೆ ಅನುಸಾರಿಯಾಗಿ ಜ್ಞಾನವು ಹೆಚ್ಚಾಗುತ್ತದೆ. ದೇವತೆಗಳಿಗೆ ಬುದ್ಧಿಸಾಮರ್ಥ್ಯವಿರುವುದರಿಂದ ನಿರಂತರವಾಗಿ ಉಪಾಸನೆಯು, ಯಜ್ಞಾದಿಕರ್ಮಗಳು ವಿಹಿತವಾಗಿವೆ.

ಪ್ರತಿಪದಾರ್ಥ -- ಪರೇ ತತ್ವೇ = ಪರ ತತ್ವವೆನಿಸಿದ, ಶ್ರೀಹರಿಯಲ್ಲಿ, ಯಾವತ್ ಸೇವಾ = ಶ್ರವಣಾದಿ ರೂಪವಾದ ಎಷ್ಟು ಸೇವೆಯು ನೆಡೆಯುತ್ತದೋ, ತಾವತ್ = ಅಷ್ಟು, ಸುಖವಿಶೇಷತಾ = ಸುಖಾನುಭವದಲ್ಲಿಯೂ ವೈಶಿಷ್ಟವು ಉಂಟಾಗುತ್ತವೆ, ಪರಮ್ = ಸರ್ವೋತ್ತಮನಾದ, ಹರಿಮೇಕಮ್ = ಪರಮಾತ್ಮನೊಬ್ಬನನ್ನು, ಪೃತೇ = ಬಿಟ್ಟು, ಪ್ರಕಾಶಸ್ಯ = ಲಕ್ಷ್ಮೀದೇವಿಯೇ ಮೊದಲಾದ ಸಕಲರ ಜ್ಞಾನವಿಶೇಷದಲ್ಲಿ, ಸಂಭವಾಚ್ಚ = ಹೆಚ್ಚುಗಾರಿಕೆಯು ಉಂಟಾಗುವುದರಿಂದ, ತೇಷಾಂ = ದೇವತೆಗಳಿಗೆ, ಸಾಮರ್ಥ್ಯಯೋಗಾಚ್ಚ = ಬುದ್ಧಿ ಸಾಮರ್ಥ್ಯಇರುವುದರಿಂದಲೂ, ದೇವಾನಾಮಪಿ = ದೇವತೆಗಳಿಗೂ, ಉಪಾಸನಮ್ = ಉಪಾಸನೆಯು, ನಿತ್ಯಂ = ನಿರಂತರವಾಗಿ, ಯಜ್ಞಾದಿಕರ್ಮ = ಯಜ್ಞಮೊದಲಾದ ಕರ್ಮಗಳು, ಸರ್ವಂ = ಇವೆಲ್ಲವೂ, ವಿಧೀಯತೇ = ವಿಧಿಸಲ್ಪಟ್ಟಿವೆ. ಇತಿ = ಹೀಗೆ, ಸ್ಕಾಂದೇ = ಸ್ಕಾಂದಪುರಾಣದಲ್ಲಿ ಹೇಳಲಾಗಿದೆ.

ಮಧುವಿದ್ಯೆಗೆ ಐಹಿಕ ಫಲವಿಲ್ಲ

ब्रह्मसूत्रभाष्यम् — उक्तफलानधिकारमात्रं जैमिनिमतमतो न तन्मतविरोधः ।

ಅನುವಾದ - ಮಧು ವಿದ್ಯೆಯಿಂದ ಐಹಿಕವಾದ ಫಲವು ದೊರೆಯುವುದಿಲ್ಲ, ಅಪ್ರಾಪ್ತವಾದ ಜ್ಞಾನವೂ ದೊರೆಯುವುದಿಲ್ಲವೆಂದೇ ಜೈಮಿನ್ಯಾಚಾರ್ಯರ ಅಭಿಪ್ರಾಯ, ಆದ್ದರಿಂದ ಬಾದರಾಯಣರ ಮತಕ್ಕೂ ಜೈಮಿನ್ಯಾಚಾರ್ಯರಮತಕ್ಕೂ ವಿರೋಧವು ಬರುವುದಿಲ್ಲ.

ಪ್ರತಿಪದಾರ್ಥ -- ಜೈಮಿನ್ಯಾಚಾರ್ಯರ ಅಭಿಪ್ರಾಯಕ್ಕೂ ಹಾಗೂ ಶ್ರೀವೇದವ್ಯಾಸರ ಅಭಿಪ್ರಾಯಕ್ಕೂ ವಿರೋಧವನ್ನು ಪರಿಹರಿಸುತ್ತಿದ್ದಾರೆ-

ಉಕ್ತಮಫಲ ಅನಧಿಕಾರಮಾತ್ರಂ = ಇದುವರೆಗೂ ಹೇಳಲ್ಪಟ್ಟ ಐಹಿಕವಾದ ಫಲವು ದೇವತೆಗಳಿಗೆ ಇರುವುದಿಲ್ಲ ಎಂಬ ವಿಷಯದಲ್ಲಿ ಮಾತ್ರ ಅನಧಿಕಾರವನ್ನು ದೇವತೆಗಳಿಗೆ ಜೈಮಿನ್ಯಾಚಾರ್ಯರು ಹೇಳಿದ್ದಾರೆ, ಅತಃ = ಆದ್ದರಿಂದ, ನ ತನ್ಮತವಿರೋಧಃ = ಬಾದರಾಯಣರಮತಕ್ಕೆ ಜೈಮಿನ್ಯಾಚಾರ್ಯರ ಮತದಿಂದ ವಿರೋಧವು ಬರುವುದಿಲ್ಲ.

ವೇದವ್ಯಾಸದೇವರ ಬುದ್ಧಿಯ ಒಂದಂಶವೇ ಜೈಮಿನ್ಯಾಚಾರ್ಯರ ಮತ

ಬ್ರಹ್ಮಸೂತ್ರಭಾಷ್ಯಮ್ – ಸರ್ವಜ್ಞಸ್ಯೈವ ಕೃಷ್ಣಸ್ಯ ತ್ವೇಕದೇಶವಿಚಿನ್ತಿತಮ್ ।
ಸ್ವೀಕೃತ್ಯ ಮುನಯೋ ಬ್ರೂಯುಸ್ತನ್ಮತಂ ನ ವಿರುಧ್ಯತೇ ।
ಇತಿ ಬ್ರಾಹ್ಮೇ ।।೩೩।।

।। ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತೇ
ಬ್ರಹ್ಮಸೂತ್ರಭಾಷ್ಯೇ ದೇವತಾಧಿಕರಣಮ್।। ೮।।

ಅನುವಾದ - ಸರ್ವಜ್ಞನಾದ ವೇದವ್ಯಾಸದೇವರ ಬುದ್ಧಿಯ ಒಂದು ಅಂಶವನ್ನು ಮಾತ್ರ ಸ್ವೀಕರಿಸಿ ಜೈಮಿನ್ಯಾಚಾರ್ಯರೇ ಮೊದಲಾದವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಆದ್ದರಿಂದ ವೇದವ್ಯಾಸರ ಮತಕ್ಕೆ ಇವರ ಮತವು ವಿರುದ್ಧವಾಗುವುದಿಲ್ಲ.

ಪ್ರತಿಪದಾರ್ಥ -- ಜೈಮಿನ್ಯಾಚಾರ್ಯರ ಮತಕ್ಕೂ ವೇದವ್ಯಾಸರ-ಮತಕ್ಕೂ ಪರಸ್ಪರ ವಿರೋಧವನ್ನು ಒಪ್ಪಬಹುದಲ್ಲವೇ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.-

ಸರ್ವಜ್ಞಸ್ಯೈವ = ಸರ್ವಜ್ಞ ಸ್ವರೂಪರಾದ, ಕೃಷ್ಣಸ್ಯ = ವೇದವ್ಯಾಸರ, ಏಕದೇಶ = ಒಂದು ಅಂಶದಲ್ಲಿ, ವಿಚಿಂತಿತಮ್ = ವಿಚಾರ ಮಾಡಲ್ಪಟ್ಟ ವಿಷಯವನ್ನೇ, ಸ್ವೀಕೃತ್ಯ = ಸ್ವೀಕರಿಸಿ, ಮುನಯಃ = ಜೈಮಿನಿ ಮೊದಲಾದ ಋಷಿಗಳು, ತನ್ಮತಂ = ವೇದವ್ಯಾಸದೇವರ ಅಭಿಪ್ರಾಯವನ್ನು, ಬ್ರೂಯುಃ =

ಹೇಳುತ್ತಾರೆ, ಅತಃ = ಆದ್ದರಿಂದ, ನ ವಿರುಧ್ಯತೇ = ವೇದವ್ಯಾಸರ ಅಭಿಪ್ರಾಯಕ್ಕೆ ವಿರೋಧ ಬರುವುದಿಲ್ಲ. ಇತಿ = ಹೀಗೆ, ಬ್ರಾಹ್ಮೇ = ಬ್ರಹ್ಮಪುರಾಣದಲ್ಲಿ ಹೇಳಲಾಗಿದೆ.

ಇಲ್ಲಿಗೆ ದೇವತಾಧಿಕರಣದಲ್ಲಿ ಭಾಷ್ಯ ಹಾಗೂ ಭಾಷ್ಯಾನುವಾದ ಮುಗಿಯಿತು.

ಸತ್ತರ್ಕದೀಪಾವಳಿ

ಜೈಮಿನಿಗಳ ಅಭಿಪ್ರಾಯ ವ್ಯಾಸರಿಗೆ ಸಮ್ಮತ

सत्तर्कदीपावलिः –

।। भावं तु बादरायणोऽस्ति हि ।।

यदुक्तं फलाभावात् सर्वापरोक्षदर्शित्वेनोपासनवैय्यर्थ्यद्देवानां मध्वादिविद्यास्वनधिकार इति तत्पुराणवचनेन दूषयति – यावदित्यादिना ।। आदित्य एव मध्वित्युक्तं परब्रह्म वस्वादयो देवाः यावद् यावदधिकमुपासते, तावदधिकं सुखं लभन्ते । सूर्यादिषु प्रकाशतारतम्यवद् देवेष्वपि ज्ञानप्रकाशतारतम्यात् परतत्त्वस्य ज्ञानांशोपासनविध्युपपत्तिरित्यर्थः । 'मध्वादिष्वसम्भवादनधिकारं जैमिनिः' इत्युपन्यस्तेन जैमिनिमतेन भगवद्बादरायणमतस्य विरोधमाशङ्क्य परिहरति – उक्तफलेत्यादिना ।। श्रुत्युक्त वसुरुद्रादित्यमात्रोद्देशेन देवानां ब्रह्मोपासनाधिकारो निषिद्धः, नतु फलान्तरोद्देशेनेति जैमिनिमतम् । तच्च कृष्णद्वैपायनमतैकदेशेनोक्तं सर्वज्ञस्येति वचनेन । अतो नास्ति विरोध इत्यर्थः ।।

।। इति सत्तर्कदीपावळ्याम् देवताधिकरणम् ।।

ಯಾವುದೇ ಫಲವಿಲ್ಲದ ಕಾರಣ, ಎಲ್ಲವನ್ನೂ ಅಪರೋಕ್ಷವಾಗಿ ತಿಳಿದವರಾದ್ದರಿಂದ ಉಪಾಸನೆ ಮಾಡುವುದು ವ್ಯರ್ಥವಾಗಿದೆ. ಆದ್ದರಿಂದಲೇ ಮಧ್ವಾದಿ ವಿದ್ಯೆಗಳಲ್ಲಿ ದೇವತೆಗಳಿಗೆ

ಅಧಿಕಾರವಿಲ್ಲವೆಂದು ಹಿಂದಿನ ಸೂತ್ರದಲ್ಲಿ ಸಮರ್ಥಿಸಲಾಯಿತು. ಅದನ್ನೇ ಪುರಾಣಗಳ ಆಧಾರದಿಂದ ದೂಷಣೆ ಮಾಡುತ್ತಿದ್ದಾರೆ, 'ಯಾವತ್' ಇತ್ಯಾದಿ ಭಾಷ್ಯದಿಂದ. ಮಧ್ವಾದಿದೇವತೆಗಳು ಪರಮಾತ್ಮನನ್ನು ಎಷ್ಟೆಷ್ಟು ಅಧಿಕವಾಗಿ ಉಪಾಸನೆ ಮಾಡುತ್ತಾರೋ, ಅಷ್ಟಷ್ಟು ಅಧಿಕವಾದ ಸುಖವನ್ನು ಪಡೆಯುತ್ತಾರೆ. ಯಾವ ರೀತಿಯಾಗಿ ಸೂರ್ಯಾದಿ ಪ್ರಕಾಶಗಳು ತಾರತಮ್ಯಾನುಸಾರಿಯಾಗಿ ಬೆಳಗುತ್ತವೋ, ಅದರಂತೆ ಜ್ಞಾನಪ್ರಕಾಶದ ತಾರತಮ್ಯವಿರುವುದರಿಂದ ಪರತತ್ವವಿಷಯದಲ್ಲಿ ಜ್ಞಾನಾಂಶೋಪಾಸನವಿಧಿಯು ಉಪಪನ್ನವಾಗುತ್ತದೆಂದರ್ಥ. 'ಮಧ್ವಾದಿಷ್ವಸಂಭವಾದನಧಿಕಾರಂ ಜೈಮಿನಿಃ' ಎಂದು ಹೇಳಿದ್ದರಿಂದ ಜೈಮಿನಿಮತದಿಂದ ಬಾದರಾಯಣರ ಮತಕ್ಕೆ ವಿರೋಧವನ್ನು ಆಶಂಕಿಸಿ ಪರಿಹರಿಸುತ್ತಿದ್ದಾರೆ, ಉಕ್ತಫಲ ಇತ್ಯಾದಿ ವಾಕ್ಯದಿಂದ. ಶ್ರುತಿಯಲ್ಲಿ ಹೇಳಲ್ಪಟ್ಟ ವಸು-ರುದ್ರ-ಆದಿತ್ಯ ಇವರನ್ನು ಮಾತ್ರ ಉದ್ದೇಶಿಸಿ ದೇವತೆಗಳಿಗೆ ಬ್ರಹ್ಮೋಪಾಸನೆಯ ಅಧಿಕಾರವನ್ನಷ್ಟೇ ನಿಷೇಧ ಮಾಡಲಾಗಿದೆ. ಹೊರತು, ಫಲಾಂತರ ಉದ್ದೇಶದಿಂದ ಬ್ರಹ್ಮೋಪಾಸನೆ ಅಧಿಕಾರವನ್ನು ನಿಷೇಧ ಮಾಡಿಲ್ಲ. ಇದು ಜೈಮಿನಿ ಋಷಿಗಳ ಮತ. ಈ ಜೈಮಿನಿ ಋಷಿಗಳ ಮತವೂ ಸಹ ಶ್ರೀಕೃಷ್ಣದ್ವೈಪಾಯನರ ಅಭಿಪ್ರಾಯದ ಏಕದೇಶವೇ ಆಗಿದೆಯೆಂದು 'ಸರ್ವಜ್ಞಸ್ಯ' ಎಂಬ ಮಾತಿನಿಂದ ಹೇಳಿದ್ದಾರೆ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲವೆಂದು ತಿಳಿಯಬೇಕು.

॥ ಇಲ್ಲಿಗೆ ಸತ್ತರ್ಕದೀಪಾವಳಿ ಕನ್ನಡಾನುವಾದದಲ್ಲಿ ದೇವತಾಧಿಕರಣವು ಮುಗಿಯಿತು ॥

ತತ್ತ್ವಪ್ರಕಾಶಿಕಾ

ಸ್ವತಃ ಬಾದರಾಯಣರೇ ಹೇಳುತ್ತಿದ್ದಾರೆ

तत्वप्रकाशिका –

॥ भावं तु बादरायणोऽस्ति हि ॥

एवं देवैर्मोक्षेतरयोग्यफलानां प्राप्तत्वात्, अयोग्यानां प्राप्तुमशक्यत्वत्, मोक्षस्याप्यर्थतो लब्धत्वात्, अर्थित्वाभावेन तेषां कास्वपि

विद्यास्वधिकाराभावे । जैमिनिमतावलम्बिना समर्थिते पुनस्तं समर्थयत्सूत्रं पठित्वा व्याचष्टे – भावमिति ।।

ದೇವತೆಗಳಿಗೆ ಮೋಕ್ಷೇತರವಾದ ಯೋಗ್ಯವಾದ ಫಲಗಳು ಈಗಾಗಲೇ ದೊರೆತದ್ದರಿಂದ, ಅಯೋಗ್ಯವಾದ ಫಲಗಳನ್ನು ಹೊಂದಲು ಸಾಧ್ಯವಿಲ್ಲವಾದ್ದರಿಂದ, ಮೋಕ್ಷವೂ ಸಹ ಲಬ್ಧಪ್ರಾಯವಾದ್ದರಿಂದ, ಅವರಿಗೆ ಯಾವುದೇ ವಿದ್ಯೆಯ ಫಲದಲ್ಲಿಯೂ ಸಹ ಅರ್ಥಿತ್ವವು ಉಪಪನ್ನವಾಗುವುದಿಲ್ಲ. ಹಾಗಾಗಿ, ಯಾವುದೇ ವಿದ್ಯೆಯಲ್ಲಿಯೂ ಸಹ ಅಧಿಕಾರವನ್ನು ಉಪಪಾದನೆ ಬರುವುದಿಲ್ಲ. ಹೀಗೆ, ಜೈಮಿನಿ ಋಷಿಗಳ ಅಭಿಪ್ರಾಯವನ್ನು ಅನುಸರಿಸುವವರ ಮತದಂತೆ ಸಮರ್ಥನೆ ಮಾಡಲಾಯಿತು. ಪುನಃ ದೇವತೆಗಳಿಗೆ, ಅಂಥಹ ವಿದ್ಯೆಯಲ್ಲಿ ಹೇಗೆ ಅಧಿಕಾರವಿದೆಯೆಂಬುದನ್ನು ಸಮರ್ಥಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಭಾವಮ್' ಇತ್ಯಾದಿಯಾಗಿ.

ದೇವತೆಗಳಿಗೆ ವಿಶೇಷಜ್ಞಾನಕ್ಕಾಗಿ ಉಪಾಸನೆ ಇದ್ದೇ ಇದೆ

तत्वप्रकाशिका – बादरायणस्तु भगवान् देवानामशेषविद्यास्वधिकारभावं मन्यते । मोक्षतदितरफलानां योग्यानां प्राप्तत्वे, अयोग्यानां प्राप्तुमशक्यत्वेऽपि विद्योक्तोपासनकर्मकरणाभ्यां योग्यस्य ज्ञानमात्रेणासाध्यस्य मोक्षफलोऽतिशयस्य सिद्ध्याऽर्थित्वसम्भवात् । नच विद्यानां नित्यसिद्धत्वात्तद्विचारेऽर्थित्वाभावः । भगवदितरेषां निरुपचरितसार्वज्ञाभावाद्विद्याविचारेण ज्ञानविशेषसम्भवादित्यर्थः ।

ಭಗವಾನ್ ವೇದವ್ಯಾಸದೇವರು ದೇವತೆಗಳಿಗೆ ಸಕಲ ವಿದ್ಯೆಗಳಲ್ಲಿ ಅಧಿಕಾರ-ವಿರುತ್ತದೆಂಬುದನ್ನು ಹೇಳಿರುತ್ತಾರೆ. ಮೋಕ್ಷ ಹಾಗೂ ಮೋಕ್ಷೇತರ ಫಲಗಳನ್ನು ಮತ್ತು ಯೋಗ್ಯವಾದ ಫಲಗಳನ್ನು ದೇವತೆಗಳು ಹೊಂದಿದ್ದರೂ ಸಹ ಅಯೋಗ್ಯವಾದ ಫಲಗಳನ್ನು ಹೊಂದಲು ಸಾಧ್ಯವಿಲ್ಲದಿದ್ದರೂ ಸಹ ವೇದವಿದ್ಯೆಯಲ್ಲಿ ಹೇಳಲ್ಪಟ್ಟ ಉಪಾಸನಾ ಮತ್ತು ಕರ್ಮಗಳ ಅನುಷ್ಠಾನದಿಂದ ಯೋಗ್ಯವಾದ ಅಧಿಕಾರಿಗಳಿಗೆ ಕೇವಲ ಜ್ಞಾನದಿಂದ ಪಡೆಯಲು

ಸಾಧ್ಯವಾಗದ ಮೋಕ್ಷಫಲದಲ್ಲಿಯೂ ಅತಿಶಯವು ಪ್ರಾಪ್ತವಾಗುತ್ತದೆ. ಅದಕ್ಕೋಸ್ಕರ ದೇವತೆಗಳಿಗೆ ಆಯಾ ವಿದ್ಯೆಯಲ್ಲಿ ಅರ್ಥಿತ್ವವು ಉಪಪನ್ನವಾಗುತ್ತದೆಂಬುದನ್ನು ತಿಳಿಯಬೇಕು.

ದೇವತೆಗಳಿಗೆ ಸರ್ವಜ್ಞತ್ವವು ನಿತ್ಯಸಿದ್ಧವಾಗಿರುವುದರಿಂದ ಅಂಥಹ ಜ್ಞಾನವನ್ನು ನೀಡುವಂತಹ ವಿದ್ಯೆಯಲ್ಲಿ ಅರ್ಥಿತ್ವವು ಹೇಗೆ ಕೂಡುತ್ತದೆ? ಎಂದು ಪ್ರಶ್ನಿಸಬಾರದು. ಭಗವಂತನನ್ನು ಬಿಟ್ಟು ಬೇರೆ ಯಾರಲ್ಲಿಯೂ ಸಹ ಸರ್ವಜ್ಞತ್ವವು ನಿರುಪಚರಿತವಾಗಿ, ಅಂದರೆ ಮುಖ್ಯವಾಗಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ, ದೇವತೆಗಳಿಗೆ ಆಯಾ ವಿದ್ಯೆಗಳಿಂದ ವಿಶೇಷ ಜ್ಞಾನವು ಪ್ರಾಪ್ತವಾಗುತ್ತದೆಂದು ಅಭಿಪ್ರಾಯ.

ದೇವತೆಗಳಿಗೆ ವಿಶೇಷ ಫಲ ಹಾಗೂ ವಿಶೇಷ ಜ್ಞಾನ

तत्वप्रकाशिका – ननु 'तत्तद्विद्योक्तानुष्ठानेन तत्रोक्तादन्यदपि फलं प्रकाशविशेषश्च भवति' इत्येतत्कुतः इत्याशङ्कां परिहर्तुं उक्तार्थे स्मृतिं दर्शयति – यावदिति ।।

ಆಯಾ ವಿದ್ಯೆಯಲ್ಲಿ ಹೇಳಿದ್ದನ್ನು ಅನುಷ್ಠಾನ ಮಾಡುವುದರಿಂದ ವಿದ್ಯೆಯಲ್ಲಿ ಹೇಳಲ್ಪಟ್ಟ ಫಲಕ್ಕಿಂತ ಬೇರೆ ವಿಶೇಷ ಫಲ ಮತ್ತು ವಿಶೇಷ ಜ್ಞಾನ ಪ್ರಾಪ್ತವಾಗುತ್ತದೆಂಬುದಕ್ಕೆ ಏನು ಪ್ರಮಾಣ? ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಹಿಂದೆ ಹೇಳಿದ ವಿಷಯದಲ್ಲೇ ಸ್ಮೃತಿಯನ್ನು ಆಧಾರವನ್ನಾಗಿ ಹೇಳುತ್ತಿದ್ದಾರೆ, 'ಯಾವತ್' ಇತ್ಯಾದಿ ಭಾಷ್ಯದಿಂದ.

ಜೈಮಿನಗಳ ಮತಕ್ಕೆ ವಿರೋಧವಿಲ್ಲವೇ?

तत्वप्रकाशिका – नन्वस्त्वेवमुक्तयुक्तिपराभवः, तथापि देवानामधिकारा-भ्युपगतावाप्ततमजैमिनिमतविरोधः? इत्यत आह – उक्तेति ।।

ಹಿಂದೆ ಹೇಳಿದ ಯುಕ್ತಿಯು ಪರಾಭವವಾಗಲಿ. ಆದರೂ ಸಹ ದೇವತೆಗಳಿಗೆ ವೇದವಿದ್ಯಾಧಿ-ಕಾರವಿದೆ ಎಂದರೆ, ಹಿಂದೆ ಹೇಳಿದ ಜೈಮಿನಿ ಋಷಿಗಳ ಮತಕ್ಕೆ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ಉಕ್ತ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಜೈಮಿನಿಗಳ ಅಭಿಪ್ರಾಯ

तत्वप्रकाशिका – न देवाधिकाराभ्युपगमे जैमिनिमतविरेधः । तत्तद्विद्या-सूक्तफलार्थं प्रागाप्तज्ञानार्थं च चैमिनिना देवाधिकारस्य निरस्तत्वात्,

ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವನ್ನು ಒಪ್ಪುವುದರಿಂದ ಜೈಮಿನಿ ಋಷಿಗಳ ಅಭಿಪ್ರಾಯಕ್ಕೆ ವಿರೋಧ ಬರುವುದಿಲ್ಲ. ಏಕೆಂದರೆ, ಆಯಾ ವಿದ್ಯಾವಿಷಯದಲ್ಲಿ ಹೇಳಿದ ಫಲಕ್ಕೋಸ್ಕರ, ಅಥವಾ ಮೊದಲೇ ಹೊಂದಲ್ಪಟ್ಟ ಜ್ಞಾನಕ್ಕೋಸ್ಕರ ಜೈಮಿನಿ ಋಷಿಗಳು ದೇವತೆಗಳಿಗೆ ಅಂತಹ ವಿದ್ಯೆಯಲ್ಲಿ ಅಧಿಕಾರ ಇಲ್ಲವೆಂದು ಹೇಳಿರುತ್ತಾರೆ.

ಬಾದರಾಯಣರಿಗೆ ಜೈಮಿನಿಗಳ ಅಭಿಪ್ರಾಯ ಸ್ವೀಕಾರಾರ್ಹ

तत्वप्रकाशिका – सूत्रकारेण च तदुक्तमङ्गीकृत्य प्रयोजनान्तराय तस्य समर्थितत्वादित्यर्थः । किमनयोर्मतयोर्विषयवैलक्षण्यकल्पनेन विरोध एव किं न स्यात् ? इत्यत आह – सर्वज्ञस्येति ।।

ಆದರೆ, ಸೂತ್ರಕಾರರಾದ ಶ್ರೀವೇದವ್ಯಾಸದೇವರು ಜೈಮಿನಿ ಋಷಿಗಳ ಅಭಿಪ್ರಾಯವನ್ನು ಸ್ವೀಕಾರ ಮಾಡಿ, ಬೇರೆ ಫಲವಿಶೇಷ ಅಥವಾ ಜ್ಞಾನವಿಶೇಷ ಎಂಬ ಪ್ರಯೋಜನಕ್ಕೋಸ್ಕರ ದೇವತೆಗಳಿಗೆ ಆಯಾ ವಿದ್ಯೆಯಲ್ಲಿ ಅಧಿಕಾರವು ಪ್ರಾಪ್ತವಾಗುತ್ತದೆಂದು ಸಮರ್ಥನೆ ಮಾಡಿರುತ್ತಾರೆ. ಹೀಗೆ, ಇಬ್ಬರ ಅಭಿಪ್ರಾಯದಲ್ಲಿಯೂ ವಿಷಯವೈಲಕ್ಷಣ್ಯವಿರುವುದಕ್ಕೋಸ್ಕರ ವಿರೋಧಕ್ಕೆ ಅವಕಾಶವಿಲ್ಲ.

ದೇವತೆಗಳಿಂದ ಶ್ರೀಹರಿಯು ಉಪಾಸ್ಯ

तत्वप्रकाशिका – अतो देवानां सर्वविद्याधिकारित्वात् तदुपास्यत्वं हरेर्युक्तमिति सिद्धम् ।। ३३ ।।

।। इति श्रीमज्जयतीर्थभिक्षुविरचितायां तत्वप्रकाशिकायाम् देवताधिकरणम् ।।

ಇಬ್ಬರ ಅಭಿಪ್ರಾಯದಲ್ಲಿಯೂ ವಿರೋಧವನ್ನೇ ಏಕೆ ಹೇಳಬಾರದು? ಎಂಬ ಪ್ರಶ್ನೆಗೆ 'ಸರ್ವಜ್ಞಸ್ಯ' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ. ಆದ್ದರಿಂದ, ಈ ಅಧಿಕರಣದಲ್ಲಿ ಇಲ್ಲಿಯ ತನಕ ವಿಚಾರ ಮಾಡಿದಂತೆ ದೇವತೆಗಳಿಗೆ ಸಕಲ ವಿದ್ಯೆಗಳಲ್ಲಿಯೂ ಅಧಿಕಾರವಿರುತ್ತದೆ. ಅಂತಹ ದೇವತೆಗಳಿಂದ ಶ್ರೀಹರಿಯು ಉಪಾಸ್ಯನಾಗುತ್ತಾನೆಂದು ಸಿದ್ಧವಾಯಿತು.

ಇಲ್ಲಿಗೆ ತತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ದೇವತಾಧಿಕರಣವು ಮುಗಿಯಿತು

ಭಾವದೀಪ

ಸೂತ್ರದಲ್ಲಿರುವ 'ತು' ಶಬ್ದದ ವ್ಯಾಖ್ಯಾನ

भावदीपः – ।। भावं तु बादरायणोऽस्ति हि ।।

समर्थयदिति ।। समाहितमेतस्य साधुत्वं प्राक् । भाष्ये फले विशेषाभावादित्येतत् सौत्रतुशब्दार्थ इति भावेन देवानामित्यादिभाष्यं व्याचष्टे – **देवानामिति ।।**

ಭಾಷ್ಯದಲ್ಲಿ 'ಫಲವಿಶೇಷಾಭಾವಾತ್' ಎಂದು ಹೇಳಿದ್ದಾರೆ. ಇದು ಸೂತ್ರದ 'ತು' ಶಬ್ದದ ಅರ್ಥವಾಗಿದೆ. ಇದನ್ನು 'ದೇವಾನಾಂ' ಇತ್ಯಾದಿ ಟೀಕೆಯಿಂದ ಹೇಳುತ್ತಾ, ಭಾಷ್ಯವನ್ನೂ ಕೂಡ ವ್ಯಾಖ್ಯಾನ ಮಾಡಿದ್ದಾರೆ.

ಬಾದರಾಯಣಪದವು ಗೌರವಾರ್ಥಕ

भावदीपः – भगवानित्युक्त्या बादरायणपदं पूजार्थमिति सूचितम् । विमतिसूचनार्थत्वस्यादावुक्तत्वात् । प्राप्तपदानाममपीत्यस्यार्थः – **मोक्षेति ।।** फले विशेषभावादित्यस्यार्थः – **विद्योक्तेति ।।** अस्ति हि प्रकाशविशेष इत्येतद् व्याचष्टे – **नचेति ।।**

ಟೀಕೆಯಲ್ಲಿ 'ಭಗವಾನ್' ಎಂಬ ಪದವನ್ನು ಪ್ರಯೋಗ ಮಾಡಿದ್ದರಿಂದ ಸೂತ್ರದಲ್ಲಿರುವ ಬಾದರಾಯಣ ಪದವು ಗೌರವಾರ್ಥದಲ್ಲಿದೆ ಎಂದು ಸೂಚಿಸಿದಂತಾಯಿತು. 'ಬಾದರಾಯಣತ್ವ' ಎಂಬುದನ್ನು ಮೊದಲು ಹೇಳಿದ್ದರಿಂದ ವಿಪ್ರತಿಪತ್ತಿಯನ್ನು ಸೂಚಿಸಿದ್ದಾರೆ. 'ಪ್ರಾಪ್ತಪದಾನಾಮಪಿ' ಎಂಬುದರ ಅರ್ಥವನ್ನು 'ಮೋಕ್ಷತದಿತರಫಲಾನಾಂ' ಎಂಬುದರಿಂದ ಹೇಳಿದ್ದಾರೆ.

'ಫಲೇ ವಿಶೇಷಾಭಾವಾತ್' ಎಂಬುದರ ಅರ್ಥವನ್ನು 'ವಿದ್ಯೋಕ್ತ ಉಪಾಸನಾಕರ್ಮಕರಣಾಭ್ಯಾಂ' ಎಂಬುದರಿಂದ ಹೇಳಿದ್ದಾರೆ. 'ಅಸ್ತಿ ಹಿ ಪ್ರಕಾಶವಿಶೇಷಃ' ಎಂಬುದನ್ನು 'ನಚ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ಜೈಮಿನಿಗಳೂ ಕೂಡ ಆಪ್ತರೇ

भावदीपः – ज्ञानविशेषेति ।। एतेन सूत्रे तुशब्दः फलविशेषद्योतकः । अस्ति हीति तु ज्ञानादिशयोक्तिपरमिति सूचितम् । अप्रामाण्यमेवानुक्त्वा तन्मताविरोधोक्ते- र्बीजोक्तिः – आप्ततमेति ।। फलोक्त्योपसंहरति – अत इति ।।

'ಜ್ಞಾನವಿಶೇಷಸಂಭವಾದಿತ್ಯರ್ಥಃ' ಎಂದು ಹೇಳಿದ್ದರಿಂದ ಸೂತ್ರದಲ್ಲಿ ಹೇಳಿದ 'ತು' ಪದವು ಫಲವಿಶೇಷಕ್ಕೆ ದ್ಯೋತಕವಾಗಿದೆ. 'ಅಸ್ತಿ ಹಿ' ಎಂಬ ಭಾಷ್ಯದ ಮಾತು ಜ್ಞಾನದಲ್ಲಿ ಅತಿಶಯವನ್ನು ಸೂಚಿಸುತ್ತಿದೆ. ಜ್ಞಾನವಿಶೇಷ ಎಂದು ಹೇಳಿದ್ದರಿಂದ ಸೂತ್ರದಲ್ಲಿರುವ 'ತು'ಶಬ್ದವು ಫಲವಿಶೇಷಕ್ಕೆ ದ್ಯೋತಕವಾಗಿದೆ ಎಂದು ತಿಳಿಸಿದ್ದಾರೆ. 'ಅಸ್ತಿ ಹಿ' ಎಂಬುದು ಜ್ಞಾನದಲ್ಲಿರುವ ಅತಿಶಯೋಕ್ತಿಯನ್ನು ತಿಳಿಸುತ್ತಿದೆ ಎಂದು ಸೂಚಿಸಿದಂತಾಯಿತು. ಅಪ್ರಾಮಾಣ್ಯವನ್ನೇ ಹೇಳದೆ, ಜೈಮಿನಿ ಮತಗಳ ಅವಿರೋಧವನ್ನು ಹೇಳಲು ಕಾರಣವನ್ನು 'ಆಪ್ತತಮ' ಎಂಬುದರಿಂದ ಹೇಳಿದ್ದಾರೆ. ಅಂದರೆ ಜೈಮಿನಿಗಳು ಆಪ್ತರೇ ಆದ್ದರಿಂದ ಅವರ ಮತಕ್ಕೆ ಅಪ್ರಾಮಾಣ್ಯವನ್ನು ಹೇಳಬಾರದೆಂದು ಅಭಿಪ್ರಾಯ. ಅಧಿಕರಣಗಳ ಫಲವನ್ನು ಹೇಳುತ್ತಾ ಉಪಸಂಹಾರ ಮಾಡುತ್ತಿದ್ದಾರೆ 'ಅತಃ' ಇತ್ಯಾದಿ ವಾಕ್ಯದಿಂದ.

ಅತಿಶಯಫಲಕ್ಕಾಗಿ ಅತಿಶಯ ಉಪಾಸನೆ

भावदीपः – स्वपदविशिष्टानां देवानामाद्यन्तवत्त्वेन प्राप्तफलतत्साधनानामपि मोक्षे ज्ञाने च विशेषस्य सत्त्वेन चार्थित्वसम्भवादाद्यन्तवत्त्वेऽपि

तेषां प्रवाहतोऽनादिनित्यत्वेन समाननामरूपत्वेन च शब्दकर्मणोर-प्रामाण्याननुष्ठानाख्यविरोधाभावाच्चेति समस्तसूत्रार्थः । तद्धेतुक-प्रतिज्ञांशार्थमाह – देवानामिति।।३३।।

।। इति श्रीराघवेन्द्रयतिकृते भावदीपे देवताधिकरणम् ।।

ತಮ್ಮ ಪದವಿಗಳಿಂದ ವಿಶಿಷ್ಟರಾದ ದೇವತೆಗಳು ಉತ್ಪತ್ತಿ-ನಾಶವುಳ್ಳವರಾದ್ದರಿಂದ ಮತ್ತು ಫಲ ಹಾಗೂ ಸಾಧನೆಗಳನ್ನು ಹೊಂದಿದ್ದರೂ ಕೂಡ ಮೋಕ್ಷದಲ್ಲಿ ಅತಿಶಯವಾದ ಫಲವಿರುವುದರಿಂದ ಜ್ಞಾನದಲ್ಲಿಯೂ ಕೂಡ ಅತಿಶಯವಾದ ಫಲವಿರುವುದರಿಂದ ಅರ್ಥಿತ್ವವು ದೇವತೆಗಳಿಗೆ ಯುಕ್ತವಾಗುತ್ತದೆ. ಉತ್ಪತ್ತಿ-ನಾಶಗಳಿದ್ದರೂ ಪ್ರವಾಹತಃ ಅನಾದಿನಿತ್ಯರಾದ್ದರಿಂದ ಪ್ರತಿಕಲ್ಪದಲ್ಲಿರುವ ದೇವತೆಗಳಿಗೆ ಸಮಾನವಾದ ನಾಮ-ರೂಪಗಳಿರುವುದರಿಂದ ಶಬ್ದವಿರೋಧ ಹಾಗೂ ಕರ್ಮವಿರೋಧಗಳ ಮೂಲಕ ಅಪ್ರಾಮಾಣ್ಯ-ದೋಷವು ಕೂಡ ಬರುವುದಿಲ್ಲ. ಮತ್ತು ಕರ್ಮವಿಲೋಪದ ಪ್ರಸಂಗವು ಕೂಡ ಬರುವುದಿಲ್ಲವೆಂದು ಈ ಅಧಿಕರಣದ ಎಲ್ಲ ಸೂತ್ರಗಳ ಅರ್ಥವಾಗಿದೆ. ಇದರಿಂದ, ಸಿದ್ಧವಾದ ವಿಚಾರವನ್ನು 'ದೇವಾನಾಂ' ಎಂಬುದಾಗಿ ಹೇಳಿದ್ದಾರೆ. ಅಂದರೆ, ಶ್ರೀಹರಿಯು ದೇವತೆಗಳಿಂದ ಉಪಾಸ್ಯನಾಗಿದ್ದಾನೆಂದು ಈ ಅಧಿಕರಣದಿಂದ ಸಿದ್ಧವಾಯಿತು.

ಇಲ್ಲಿಗೆ ದೇವತಾಧಿಕರಣವು ಸಮಾಪ್ತವಾಯಿತು.

ತಂತ್ರದೀಪಿಕೆಯಲ್ಲಿ ದೇವತಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

देवताधिकरणम् (१।३।८)

'ತದುಪರ್ಯಪಿ' ಇತ್ಯಾದಿ ಸೂತ್ರದ ಅರ್ಥ

।। तदुपर्यपि बादरायणः सम्भवात् ।। १-३-२६ ।।

अत्र देवानामधिकारोऽस्तीति प्रसङ्गादुच्यते । अधिकार इति विभागविपरिणामाभ्यामस्ति । तदुपरि तस्य प्रकृतस्य मनुष्यत्वस्योपरि विद्याकर्मभ्यां देवत्वप्राप्त्यनन्तरमपि । देवानामपीति यावत् । अधिकारोऽस्ति । कुतः ? सम्भवात् । विशिष्टबुद्ध्यादेः सम्भवादिति बादरायण आहेत्यर्थः ।

ಈ ಅಧಿಕರಣದಲ್ಲಿ ದೇವತೆಗಳಿಗೆ ವೇದವಿದ್ಯಾಧಿಕಾರವಿರುತ್ತದೆಂಬುದನ್ನು ಪ್ರಾಸಂಗಿಕವಾಗಿ ವಿಚಾರ ಮಾಡಲಾಗಿದೆ. ಅಧಿಕಾರ ಎಂಬ ಪದವು ವಿಭಾಗ ಮತ್ತು ವಿಭಕ್ತಿಗಳ ವಿಪರಿಣಾಮದಿಂದ ಅನ್ವಯವನ್ನು ಹೊಂದಿದೆ.

ಸೂತ್ರಾರ್ಥ – ತದುಪರಿ = ಪ್ರಸಕ್ತವಾದ ಮನುಷ್ಯತ್ವದೆಶೆಯ ಅನಂತರ, ವಿದ್ಯೆ ಹಾಗೂ ಕರ್ಮಗಳಿಂದ ದೇವತ್ವ ದೆಶೆಯನ್ನು ಹೊಂದಿದ ಮೇಲೂ ಕೂಡ, ಅಂದರೆ ದೇವತೆಗಳಿಗೂ ಕೂಡ, ಅಧಿಕಾರಃ = ಬ್ರಹ್ಮವಿದ್ಯಾಧಿಕಾರವು ಇರುತ್ತದೆ. ಏಕೆಂದರೆ, ಸಂಭವಾತ್ = ವಿಶಿಷ್ಟಬುದ್ಧಿ,

ಆರ್ಥಿತ್ವ, ಸಾಮರ್ಥ್ಯ ಮೊದಲಾದವುಗಳು ಇರುವುದರಿಂದ ಎಂಬುದಾಗಿ ಬಾದರಾಯಣಃ = ಬಾದರಾಯಣರು ಹೇಳುತ್ತಾರೆ, ಎಂದು.

ಬಾದರಾಯಣ ಪದದ ಬಗ್ಗೆ

बादरायण इति विमतिसूचनाय । देवानामिति वाच्ये तदुपरीत्युक्तिर्देवत्वस्य सादित्वादिना मोक्षार्थिता युक्तेति सूचयितुम् । अपीत्यनेन न केवलं तेषां मनुष्यत्वदशायामित्याह । पूरणगुणेत्यत्र सना तव्येन च साहचर्यात् कृदन्ताव्ययेनैव समासनिषेधात्तदुपरीति साधु ।।

ಸೂತ್ರದಲ್ಲಿ 'ಬಾದರಾಯಣಃ' ಎಂಬ ಪದವು ವಿಪ್ರತಿಪತ್ತಿಯನ್ನು ಸೂಚನೆ ಮಾಡುತ್ತಿದೆ. 'ದೇವಾನಾಂ' ಎಂದೇ ಹೇಳಬಹುದಿತ್ತು. ಆದರೂ ಸಹ 'ತದುಪರಿ' ಎಂದು ಹೇಳಿದ್ದರಿಂದ ದೇವತ್ವಕ್ಕೆ ಉತ್ಪತ್ತಿ ಮೊದಲಾದವುಗಳಿರುವುದರಿಂದ ಮೋಕ್ಷದ ವಿಷಯದಲ್ಲಿ ಆರ್ಥಿತ್ವವು ಯುಕ್ತವಾಗುತ್ತದೆಂದು ಸೂಚನೆ ಮಾಡಿದ್ದಾರೆ. 'ಅಪಿ' ಎಂಬ ಪದದಿಂದ ದೇವತೆಗಳಿಗೆ ಮನುಷ್ಯತ್ವಾವಸ್ಥೆಯಲ್ಲಿ ಮಾತ್ರ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿರುವುದಲ್ಲ. ದೇವತಾಪದವಿಯಲ್ಲೂ ಕೂಡ ಅಧಿಕಾರವಿರುತ್ತದೆ, ಎಂದು ಹೇಳಿರುತ್ತಾರೆ.

'ಪೂರಣಗುಣಸಹಿತಾರ್ಥಸದವ್ಯಯದ್ರವ್ಯಸಮಾನಾಧಿಕರಣೇನ' (೨-೨-೧೧) ಪೂರಣ-ಗುಣ-ತೃಪ್ತಿ ಈ ಮೂರನ್ನು ಹೇಳುವ ಪದಗಳ ಜೊತೆಗೆ 'ಸತ್', 'ಶತೃ' ಮತ್ತು 'ಶಾನಚ್' ಪ್ರತ್ಯಯಾಂತವಾದ ಪದದ ಜೊತೆಗೆ, 'ಅವ್ಯಯ', 'ತವ್ಯ' ಪ್ರತ್ಯಯಾಂತವಾದ ಪದಗಳ ಜೊತೆಗೆ, ಮತ್ತು ಸಮಾನವಿಭಕ್ತಿಕವಾದ ಪದಗಳ ಜೊತೆಗೆ ಷಷ್ಠ್ಯಂತವಾದ ಪದವು ಸಮಾಸವನ್ನು ಹೊಂದುವುದಿಲ್ಲವೆಂದು ಸೂತ್ರದಲ್ಲಿ ಹೇಳಲಾಗಿದೆ. 'ಸತ್' ಮತ್ತು 'ತವ್ಯ'ಗಳು ಕೃತ್‌ಪ್ರತ್ಯಯಾಂತವಾದ ಪದಗಳು. ಇವುಗಳ ಮಧ್ಯೆ ಇರುವ ಅವ್ಯಯ ಎಂಬುದೂ ಕೂಡ ಕೃದಂತವಾದದ್ದನ್ನೇ ಹೇಳುತ್ತದೆ. ಆದ್ದರಿಂದ, 'ಉಪರಿ' ಎಂಬುದು ಪ್ರಸಕ್ತ ತದ್ಧಿತಾವ್ಯಯ-ವಾಗಿರುವುದರಿಂದ, ಇದರ ಜೊತೆಗೆ 'ತಸ್ಯ' ಎಂಬ ಷಷ್ಠಂತ ಪದವು ಸಮಾಸವನ್ನು ಹೊಂದಬಹುದು. ಆದ್ದರಿಂದ, 'ಪೂರಣಗುಣ' ಎಂಬ ಸೂತ್ರದಲ್ಲಿ 'ಸನ್' ಮತ್ತು 'ತವ್ಯ'

ಎಂಬ ಪ್ರತ್ಯಯಗಳ ಜೊತೆಗೆ ಕೃದಂತ ಅವ್ಯಯದೊಂದಿಗೆ ಸಮಾಸವು ನಿಷೇಧಿಸಲ್ಪಟ್ಟಿದೆ. ಹಾಗಾಗಿ, 'ತಸ್ಯ ಉಪರಿ ತದುಪರಿ' ಎಂಬ ಷಷ್ಠೀ ಸಮಾಸಕ್ಕೆ ವಿರೋಧ ಬರುವುದಿಲ್ಲ.

ದೇವತಾಪದವಿಯು ಸಾದಿಯಲ್ಲವೇ?

तदुपरीत्यनेनोक्तं सादित्वं तावदाक्षिप्याह -

।। विरोधः कर्मणीति चेन्नानेकप्रतिपत्तेर्दर्शनात् ।। १-३-२७ ।।

तदुपरीत्युक्तदेवपदस्य सादित्वे कर्मणि कर्मविषये विरोधो व्यर्थता स्यात् । इन्द्रादिपदप्राप्तेः पूर्वमिन्द्रादिदेवताऽभावेन तदुद्देशेन हविस्त्यागायोगादिति चेन्न । अनेकप्रतिपत्तेर्दर्शनात् । अनेकेषां योग्यमनुष्याणां प्रतिपत्तेः पूर्वं पूर्वं देवतापदप्राप्तेः ''यज्ञेन यज्ञम्'' इति श्रुतौ दर्शनादित्यर्थः।

'ತದುಪರಿ' ಎಂದು ಹೇಳಿದ್ದರಿಂದ ದೇವತಾಪದವಿಯು ಸಾದಿಯೆಂದಂತಾಯಿತು. ಇದರ ಮೇಲೆ ಬರುವ ಆಕ್ಷೇಪವನ್ನು ತೋರಿಸಿ ಸಮಾಧಾನವನ್ನು ಹೇಳಲಾಗಿದೆ –

'ವಿರೋಧಃ ಕರ್ಮಣೀತಿ ಚೇನ್ನಾನೇಕಪ್ರತಿಪತ್ತೇರ್ದರ್ಶನಾತ್'

ಸೂತ್ರಾರ್ಥ ಹೀಗಿದೆ - ವಿರೋಧಃ = 'ತದುಪರಿ' ಎಂಬಲ್ಲಿ ಹೇಳಿದಂತೆ ದೇವತಾಪದವಿಯು ಸಾದಿಯಾದರೆ ಕರ್ಮವಿಷಯದಲ್ಲಿ ವಿರೋಧಃ = ವೈಯ್ಯರ್ಥ್ಯದೋಷವು, ಸ್ಯಾತ್ = ಬರುತ್ತದೆ. ಏಕೆಂದರೆ, ಇಂದ್ರಾದಿ ಪದವಿಗಳು ದೊರೆಯುವ ಮೊದಲು ಇಂದ್ರಾದಿ ದೇವತೆಗಳೇ ಇಲ್ಲದ ಕಾರಣ ಅವರನ್ನು ಉದ್ದೇಶಿಸಿ ಹವಿಸ್ಸನ್ನು ತ್ಯಾಗ ಮಾಡುವುದು ಯುಕ್ತವಾಗುವುದಿಲ್ಲವಲ್ಲವೇ? ಇತಿ ಚೇನ್ನ = ಹೀಗೆ ಆಕ್ಷೇಪ ಮಾಡಬಾರದು. ಅನೇಕಪ್ರತಿಪತ್ತೇಃ ದರ್ಶನಾತ್ = ಯೋಗ್ಯತೆಯುಳ್ಳ ಅನೇಕ ಮನುಷ್ಯರು ಹಿಂದಿನ ಕಲ್ಪಗಳಲ್ಲಿ ದೇವತಾಪದವಿಯನ್ನು ಹೊಂದಿರುತ್ತಾರೆ. 'ಯಜ್ಞೇನ ಯಜ್ಞಂ' ಎಂಬ ಶ್ರುತಿಯಲ್ಲಿ ಇದು ಹೀಗೆ ಇರುವುದು ಕಂಡಿದೆ ಎಂದು ಸೂತ್ರಾರ್ಥ.

ಕರ್ಮವಿರೋಧವಿಲ್ಲವೇ?

एतद्देवताभावेऽपि प्राप्तपददेवतान्तरसत्त्वान्न कर्मविरोध इति भावः ।।

ಹಿಂದಿನ ಕಲ್ಪಗಳಲ್ಲಿ ಈ ದೇವತೆ ಇಲ್ಲದಿದ್ದರೂ ಬೇರೆ ದೇವತೆಗಳು ಇರುತ್ತಾರೆ. ಆದ್ದರಿಂದ ಕರ್ಮವಿರೋಧವಿಲ್ಲವೆಂದು ಅಭಿಪ್ರಾಯ.

ದೇವತಾಪದವಿಯು ಸಾಂತವೇ?

सान्तत्वमाक्षिप्याह -

।। शब्द इति चेन्नातः प्रभवात्प्रत्यक्षानुमानाभ्याम् ।। १-३-२८ ।।

विरोध इत्यस्ति । अतःशब्दः प्रकृतशब्दपरः । प्रभवशब्दस्तन्नियमावगमपरः। तदुपरीत्युक्तिलब्धसान्तत्वे देवपदस्योपप्लवे सति शब्दे नित्ये वेदरूपशब्दे अप्रामाण्याख्यविरोधः स्यात् । पश्चादिन्द्रादिदेवताभावेन वाच्यहीनस्य प्रामाण्यायोगादिति चेन्न । अतः शब्दात् । धाता यथा पूर्वमकल्पयत्'' ''यथैव नियमः काले'' इत्यादिशब्दात् देवानां प्रभवनियमावगमात् प्रवाहरूपेण देवानां नित्यत्वान्न दोष इति भावः ।

ದೇವತಾಪದವಿಗೆ ನಾಶವಿದೆ ಎಂದು ಹೇಳಲಾಯಿತು. ಅದನ್ನು ಆಕ್ಷೇಪ ಮಾಡಿ ಉತ್ತರಿಸಲಾಗಿದೆ –

'ಶಬ್ದ ಇತಿ ಚೇನ್ನಾತಃ ಪ್ರಭವಾತ್ ಪ್ರತ್ಯಕ್ಷಾನುಮಾನಾಭ್ಯಾಮ್'

'ವಿರೋಧಃ' ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕು. 'ಅತಃ' ಎಂಬ ಪದವು ಪ್ರಕೃತವಾದ ಶಬ್ದವನ್ನು ಹೇಳುತ್ತಿದೆ. ಪ್ರಭವಶಬ್ದವು ಉತ್ಪತ್ತಿಯ ನಿಯಮವನ್ನು ಹೇಳುತ್ತಿದೆ. ಅಂದರೆ, ಒಂದು ಕಲ್ಪ ಮುಗಿದ ಅನಂತರ, ಮತ್ತೊಂದು ಕಲ್ಪದಲ್ಲಿ ಬೇರೆ ದೇವತೆ ಹುಟ್ಟಿಯೇ ಹುಟ್ಟುತ್ತಾರೆ. 'ತದುಪರಿ' ಎಂದು ಹೇಳಿದ್ದರಿಂದ ದೇವತಾಪದವಿಗೆ ನಾಶವಿದೆಯೆಂದು

ತಿಳಿಯುವುದಾದರೆ ಶಬ್ದೇ = ನಿತ್ಯವಾದ ವೇದರೂಪವಾದ ಶಬ್ದದಲ್ಲಿ, ವಿರೋಧಃ = ಅಪ್ರಾಮಾಣ್ಯರೂಪವಾದ ವಿರೋಧವು ಬರುತ್ತದೆ. ಏಕೆಂದರೆ, ಈ ದೇವತೆಯು ನಾಶವಾದ ಮೇಲೆ ಯಾವುದೇ ಇಂದ್ರಾದಿ ದೇವತೆಗಳಿಲ್ಲದ ಕಾರಣ, ವಾಚ್ಯಾರ್ಥವಿಲ್ಲದೆ ಶಬ್ದಕ್ಕೆ ಅಪ್ರಾಮಾಣ್ಯದೋಷವು ಬರುತ್ತದೆ. ಇತಿ ಚೇನ್ನ = ಹೀಗೆ ಆಕ್ಷೇಪ ಮಾಡಬಾರದು. ಅತಃ = ಶಬ್ದದಿಂದ, 'ಧಾತಾ ಯಥಾ ಪೂರ್ವಮಕಲ್ಪಯತ್' 'ಯಥೈವ ನಿಯಮಃ ಕಾಲೇ' ಇತ್ಯಾದಿ ಆಗಮವಾಕ್ಯಗಳಿಂದ ದೇವತೆಗಳಿಗೆ, ಪ್ರಭವಾತ್ = ಉತ್ಪತ್ತಿಯ ನಿಯಮವಿದೆಯೆಂದು ತಿಳಿದುಬರುತ್ತಿರುವುದರಿಂದ. ಅಂದರೆ ದೇವತೆಗಳು ಪ್ರವಾಹತಃ ನಿತ್ಯರಾದ್ದರಿಂದ, ನ ದೋಷಃ = ಯಾವುದೇ ದೋಷಗಳಿರುವುದಿಲ್ಲ.

ದೇವತೆಗಳು ಪ್ರವಾಹತಃ ನಿತ್ಯರು

शब्दे उपचरिताऽप्युक्तिः स्यादत उक्तं प्रत्यक्षेति । महतां प्रभवनियम-प्रत्यक्षादन्येषामुपरितनकालो देववान् कालत्वादित्यनुमानात्त-न्नियमावगमादित्यर्थः ।

ಆಗಮಗಳನ್ನು ಔಪಚಾರಿಕವಾಗಿಯೂ ಅರ್ಥೈಸಬಹುದಲ್ಲವೇ? ಎಂಬ ಆಶಂಕೆಗೆ 'ಪ್ರತ್ಯಕ್ಷ' ಎಂದು ಸೂತ್ರದಲ್ಲಿ ಹೇಳಿದ್ದಾರೆ. ಅಂದರೆ ಮಹಾತ್ಮರಿಗೆ ದೇವತೆಗಳಿಗೆ ಪ್ರವಾಹನಿತ್ಯತ್ವವು ಪ್ರತ್ಯಕ್ಷವಿರುತ್ತದೆ. ನಮ್ಮಂತಹ ಸಾಮಾನ್ಯರಿಗೆ ಅನುಮಾನದಿಂದ ದೇವತೆಗಳ ಪ್ರವಾಹನಿತ್ಯತ್ವವು ಸಿದ್ಧವಾಗುತ್ತದೆ.

'ಉಪರಿತನಕಾಲಃ ದೇವವಾನ್ ಕಾಲತ್ವಾತ್' 'ಮುಂದಿನ ಕಾಲವು ಕಾಲವಾದ್ದರಿಂದ ದೇವತೆಗಳನ್ನೊಳಗೊಂಡಿದೆ' ಎಂಬ ಅನುಮಾನದಿಂದ ಪ್ರಭವದ ನಿಯಮವು ತಿಳಿದುಬರುತ್ತದೆ, ಇಷ್ಟು ಸೂತ್ರಾರ್ಥ.

'ಪ್ರತ್ಯಾಕ್ಷಾನುಮಾಭ್ಯಾಂ' ಎಂಬುದರ ಕೃತ್ಯ

नन्वत इत्येवालं किं प्रत्यक्षाद्युक्त्या । मैवम् । श्रुतावुपचारोक्ति-निरासार्थ त्वादनुमानस्याप्ययोग्यजनार्थत्वात् । अत एव चशब्दाभावः ।

शब्दप्रत्यक्षानुमानेभ्य इत्यनुक्त्वा पृथगुक्तिश्च प्राङ्निर्देशश्च शब्दस्य जात्या प्रबल्यात् । कर्मणीव सादित्वयुक्तचोद्यसमाध्योः शब्दे, शब्द इव च सान्तत्वनिमित्तशङ्कोत्तरयोः कर्मण्यपि साम्येन विरोधः शब्दकर्मणोरिति चेदिति विन्यसितव्येऽपि कर्मणा देवत्वोक्तौ तर्हि कर्मणि विरोध इति तत्रैवोत्थिते चोद्ये शब्देनोद्धते तर्हि शब्दे विरोध इत्यनन्तरं शङ्कोत्थानादा काङ्क्षाक्रमाद्योगद्वयम् ।।

ಸೂತ್ರದಲ್ಲಿ 'ಪ್ರತ್ಯಕ್ಷಾನುಮಾನಾಭ್ಯಾಂ' ಎಂದು ಹೇಳುವುದು ಬೇಡ. 'ಅತಃ' ಎಂದು ಹೇಳಿದರಷ್ಟೇ ಸಾಕು. ಪ್ರತ್ಯಕ್ಷಾದಿಗಳನ್ನು ಹೇಳಿದ್ದಕ್ಕೆ ಏನು ಪ್ರಯೋಜನ? ಹೀಗೆ ಪ್ರಶ್ನಿಸಬಾರದು. ಶ್ರುತಿಯು ಔಪಚಾರಿಕವಾದ ಅರ್ಥವನ್ನೊಳಗೊಂಡಿದೆ ಎಂದು ಆಶಂಕೆ ಬಂದರೆ ದೇವತೆಗಳ ಪ್ರವಾಹವು ನಿತ್ಯವಾಗಿದೆ ಎಂಬುದನ್ನು ಮಹಾತ್ಮರು ಪ್ರತ್ಯಕ್ಷದಿಂದ ತಿಳಿದಿದ್ದಾರೆ. ಆದ್ದರಿಂದ, ದೇವತಾಪ್ರವಾಹವು ನಿತ್ಯವೆಂದು ಹೇಳುವ ಆಗಮಕ್ಕೆ ಗೌಣಾರ್ಥವನ್ನು ಮಾಡಬಾರದೆಂದು ಅಭಿಪ್ರಾಯ. ಪ್ರತ್ಯಕ್ಷದಿಂದ ತಿಳಿಯುವ ಅರ್ಹತೆ ಇಲ್ಲದ ನಮ್ಮಂತಹ ಸಾಮಾನ್ಯ ಜನರಿಗೆ ಅನುಮಾನ ಪ್ರಮಾಣದಿಂದ ನಿತ್ಯತ್ವವು ಸಿದ್ಧವಾಗುತ್ತದೆಂದು ಅಭಿಪ್ರಾಯ. ಅದಕ್ಕೋಸ್ಕರ, ಅನುಮಾನವನ್ನು ಹೇಳಿದ್ದು ಸಹ ಸಾರ್ಥಕ. ಆದ್ದರಿಂದಲೇ, ಸೂತ್ರದಲ್ಲಿ ಚಶಬ್ದವು ಇರುವುದಿಲ್ಲ. ಹಾಗಾದರೆ, 'ಶಬ್ದಪ್ರತ್ಯಕ್ಷಾನುಮಾನೇಭ್ಯಃ' ಎಂದೇ ಹೇಳಬಹುದಿತ್ತಲ್ಲವೇ? ಎಂದು ಪ್ರಶ್ನಿಸಬಾರದು. ಶಬ್ದಕ್ಕೆ ಜಾತ್ಯಾ ಪ್ರಾಬಲ್ಯವಿದೆ. ಇದನ್ನು ತಿಳಿಸುವುದಕ್ಕಾಗಿ ಶಬ್ದವನ್ನು ಪ್ರತ್ಯೇಕವಾಗಿ ಹೇಳಿದ್ದಾರೆ. ಮತ್ತು ಮೊದಲು ಉಲ್ಲೇಖ ಮಾಡಿದ್ದಾರೆ.

ಹಾಗಾದರೆ, 'ವಿರೋಧಃ ಶಬ್ದಕರ್ಮಣೋರಿತಿ ಚೇತ್' ಎಂದು ಒಂದೇ ಸೂತ್ರವನ್ನು ರಚನೆ ಮಾಡಿದರೆ ಸಾಕಾಗಿತ್ತು. ಎರಡು ಪ್ರತ್ಯೇಕ ಸೂತ್ರಗಳನ್ನು ರಚಿಸಲು ಏನು ಕಾರಣ? ಎಂದರೆ ದೇವತಾಪದವಿಯು ಸಾದಿಯಾಗಿದೆ ಎಂದು ಹೇಳಿದಾಗ ಕರ್ಮವಿಷಯದಲ್ಲಿ ಆಕ್ಷೇಪ-ಸಮಾಧಾನಗಳು ಹೇಗೆ ಇರುತ್ತವೋ, ಹಾಗೆಯೇ ಶಬ್ದದ ವಿಷಯದಲ್ಲೂ ಸಂದೇಹ ಎಂದರೆ ದೇವತಾ ಪದವಿಯೂ ಸಾಂತವಾಗಿದೆ ಎಂದು ಹೇಳಿದಾಗಲೂ ಶಬ್ದದ ವಿಷಯದಲ್ಲಿ ಶಂಕೆ ಹಾಗೂ ಸಮಾಧಾನಗಳು ಹೇಗೆ ಬರುತ್ತವೋ, ಅದರಂತೆ ಕರ್ಮದ ವಿಷಯದಲ್ಲೂ

ಸಮಾನವಾಗಿಯೇ ಬರುತ್ತದೆ. ಆದಕ್ಕೋಸ್ಕರ 'ವಿರೋಧಃ ಶಬ್ದಕರ್ಮಣೋರಿತಿ ಚೇತ್' ಎಂದು ಸೂತ್ರವನ್ನು ಹೇಳಬೇಕಾಗಿದ್ದರೂ, ಕರ್ಮದಿಂದ ದೇವತ್ವವು ಲಭಿಸುತ್ತದೆಂದು ಹೇಳಿದಾಗ ಕರ್ಮದ ವಿಷಯದಲ್ಲೂ ವಿರೋಧವು ಬರುತ್ತದಲ್ಲವೇ? ಎಂದು ಹುಟ್ಟಿದಂತಹ ಆಕ್ಷೇಪವನ್ನು ಶಬ್ದದಿಂದ ಪರಿಹರಿಸಬೇಕು. ಆಮಾಗ ಶಬ್ದದ ವಿಷಯದ ವಿರೋಧವು ಪ್ರಸಕ್ತವಾಗುತ್ತದೆ. ಅಂದರೆ, ಮೊದಲು ಕರ್ಮದ ವಿಷಯದಲ್ಲಿ ಆಕ್ಷೇಪವು ಹುಟ್ಟುತ್ತದೆ. ಅದರ ಆಧಾರದಲ್ಲಿ ಶಬ್ದವಿರೋಧವು ಪ್ರಸಕ್ತವಾಗುತ್ತದೆ. ಆದ್ದರಿಂದ, ಮೊದಲು ಕರ್ಮವಿರೋಧವನ್ನು ಹೇಳಿ, ನಂತರ ಶಬ್ದವಿರೋಧವನ್ನು ಆಶಂಕಿಸುವುದು ಆಕಾಂಕ್ಷೆಯ ಕ್ರಮಕ್ಕೆ ಅನುಗುಣವಾಗಿರುತ್ತದೆ. ಆದ್ದರಿಂದ, ಪ್ರತ್ಯೇಕವಾಗಿ ಎರಡು ಸೂತ್ರಗಳನ್ನು ರಚನೆ ಮಾಡಿದ್ದಾರೆ.

ಅರ್ಥಾಪತ್ತಿಯಿಂದ ದೇವಪ್ರವಾಹನಿತ್ಯತ್ವ ಸಮರ್ಥನೆ

अर्थापत्त्या देवप्रवाहनित्यत्वमाह -

।। अत एव च नित्यत्वम् ।। १-३-२९ ।।

अत एव शब्दनित्यत्वादेव । तदन्यथानुपपत्त्यावेत्यर्थः । नित्यत्वं देवप्रवाहस्येत्यर्थः । किं युक्त्यन्तरान्वेषणेनेत्येवार्थः । न केवलं शब्दात् किन्तु शब्दनित्यत्वान्यथानुपपत्त्या चेति चार्थः । न हीन्द्रागच्छेत्यादिवाचो नित्यत्वं वाच्यानित्यत्वे युज्यत इति भावः । अर्थापत्तेरनुमान-विशेषत्वात्पृथगुक्तिः ।।

ಅರ್ಥಾಪತ್ತಿ ಪ್ರಮಾಣದಿಂದ ದೇವತಾಪ್ರವಾಹವು ನಿತ್ಯವಾಗಿದೆ ಎಂದು ಸಮರ್ಥಿಸಲು ಮುಂದಿನ ಸೂತ್ರವು ಹೊರಟಿದೆ –

ಅತ ಏವ ಚ ನಿತ್ಯತ್ವಮ್ ।

ಅತ ಏವ = ಶಬ್ದವು ನಿತ್ಯವಾಗಿರುವುದರಿಂದಲೇ, ಅಂದರೆ ಶಬ್ದನಿತ್ಯತ್ವದ ಅನ್ಯಥಾನುಪಪತ್ತಿಯಿಂದಲೇ ಎಂದರ್ಥ. ನಿತ್ಯತ್ವಮ್ = ದೇವತಾಪ್ರವಾಹಕ್ಕೆ ನಿತ್ಯತ್ವವು ಸಿದ್ಧವಾಗುತ್ತದೆ, ಎಂದು ಸೂತ್ರಾರ್ಥ.

ದೇವತಾಪ್ರವಾಹವು ನಿತ್ಯವಾಗಿದೆ ಎಂದು ಸಮರ್ಥಿಸಲು ಪುನಃ ಬೇರೆ ಯುಕ್ತಿಗಳನ್ನು ಏಕೆ ಹುಡುಕಬೇಕು? ಎಂಬುದು ಏವಕಾರದ ಅಭಿಪ್ರಾಯ. ಕೇವಲ, ಶಬ್ದದಿಂದಷ್ಟೇ ಅಲ್ಲ. ಶಬ್ದನಿತ್ಯತ್ವದ ಅನ್ಯಥಾನುಪಪತ್ತಿಯಿಂದಲೂ ಕೂಡ ಎಂಬುದು 'ಚ' ಶಬ್ದದ ಅರ್ಥ. 'ಇಂದ್ರ ಆಗಚ್ಛ' 'ಎಲೈ ಇಂದ್ರನೇ, ಬಾ' ಇತ್ಯಾದಿ ವಾಕ್ಯಗಳ ನಿತ್ಯತ್ವವು ವಾಚ್ಯಾರ್ಥವು ಅನಿತ್ಯವಾದರೆ ಯುಕ್ತವಾಗುವುದಿಲ್ಲ, ಎಂದು ಅಭಿಪ್ರಾಯ. ಅರ್ಥಾಪತ್ತಿಯು ಬೇರೆ ಪ್ರಮಾಣವಲ್ಲ. ಅನುಮಾನರೂಪವೇ ಆಗಿದೆ, ಎಂಬುದು ನಮ್ಮ ಸಿದ್ಧಾಂತ. ಆದ್ದರಿಂದ, ಹಿಂದಿನ ಸೂತ್ರದಲ್ಲಿ ಹೇಳಿದ ಅನುಮಾನದಿಂದಲೇ ಈ ಸೂತ್ರದಲ್ಲಿ ಹೇಳಲ್ಪಡುವ ಅರ್ಥಾಪತ್ತಿಯ ಸಂಗ್ರಹವಾಗುತ್ತದಲ್ಲವೇ? ಎಂದು ಪ್ರಶ್ನೆ ಮಾಡಬಾರದು. ಅರ್ಥಾಪತ್ತಿಯು ಅನುಮಾನದ ವಿಶೇಷರೂಪವಾದ್ದರಿಂದ ಪ್ರತ್ಯೇಕವಾಗಿ ಹೇಳಿದ್ದು ತಪ್ಪಲ್ಲ.

ದೇವತೆಗಳ ನಾಮ ರೂಪಾದಿಗಳು ಸಮಾನ

ನನು ದೇವಾನಾಂ ಪ್ರವಾಹನಿತ್ಯತ್ವೇऽಪಿ ನಾನಾನಾಮರೂಪವತ್ತ್ವೇನೈಕಪ್ರಕಾರವೇದಸ್ಯಾ-ಪ್ರಾಮಾಣ್ಯಾಖ್ಯವಿರೋಧಃ ಸ್ಯಾದಿತ್ಯತ ಆಹ -

।। समाननामरूपत्वाच्चावृत्तावप्यविरोधो दर्शनात्स्मृतेश्च ।। १-३-३० ।।

ತದುಪರಿತ್ಯತೋ ದೇವಾನಾಮಿತ್ಯನ್ವೇತಿ । ಪ್ರಾಚೀನದೇವಾನಾಂ ಮುಕ್ತತ್ವೇನ ಸ್ವಸ್ವಪದೇಷ್ವವೃತ್ತಾವಪಿ ತದನ್ಯೇಷಾಂ ತತ್ಸಮಾನನಾಮರೂಪತ್ವಾತ್ । ತತ್ವಪ್ರದೀಪರೀತ್ಯಾ ಸಮಾನಧರ್ಮಕತ್ವಾಚ್ಚೇತಿ ಚಶಬ್ದಾರ್ಥಃ। ತತ್ಪ್ರತಿಪಾದಕೈಕವಿಧವೇದಸ್ಯಾಪ್ರಾಮಾಣ್ಯಾಖ್ಯ-ವಿರೋಧೋ ನಾಸ್ತಿ । ತದೇವ ಕುತ ಇತಿ ಚೇತ್ ದರ್ಶನಾತ್ । ''ಯಥಾ ಪೂರ್ವಮ್'' ಇತಿ ಶ್ರುತೇಃ । ''ಅನಾದಿನಿಧನಾ ನಿತ್ಯಾ'' ಇತ್ಯಾದಿಸ್ಮೃತೇಶ್ಚೇತ್ಯರ್ಥಃ। ಇನ್ದ್ರಾದಿಪದಸ್ಯತ್ವೋಪಾಧಿನಾ ತಾನೇವ ಪ್ರತಿಪಾದಯತೀತಿ ಭಾವಃ ।

ದೇವತೆಗಳು ಪ್ರವಾಹತಃ ಅನಾದಿನಿತ್ಯರಾಗಿದ್ದರೂ ಬೇರೆ ಬೇರೆ ಹೆಸರು, ರೂಪ, ಆಕೃತಿಗಳನ್ನು ಹೊಂದಿರುತ್ತಾರೆ. ಆದರೆ, ಒಂದೇ ಹೆಸರು, ರೂಪ, ಕೃತಿಗಳನ್ನು ಹೇಳುವಂತಹ ವೇದಕ್ಕೆ ಅಪ್ರಾಮಾಣ್ಯವೆಂಬ ವಿರೋಧವು ಬಂದೇ ಬರುತ್ತದಲ್ಲವೆ? ಎಂಬ ಆಕ್ಷೇಪಕ್ಕೆ ಮುಂದಿನ ಸೂತ್ರ ಉತ್ತರಿಸುತ್ತದೆ.

ಸಮಾನನಾಮರೂಪತ್ವಾಚ್ಚಾವೃತ್ತಾವಪ್ಯವಿರೋಧಃ ದರ್ಶನಾತ್ ಸ್ಮೃತೇಶ್ಚ

'ತದುಪರಿ' ಎಂಬ ಸೂತ್ರದಿಂದ 'ದೇವಾನಾಂ' ಎಂಬ ಪದವನ್ನು ಅನ್ವಯ ಮಾಡಿಕೊಳ್ಳಬೇಕು. ಹಿಂದಿನ ಕಲ್ಪದಲ್ಲಿರುವ ದೇವತೆಗಳು ಈಗ ಮುಕ್ತರಾಗಿರಬಹುದು. ಆದ್ದರಿಂದಲೇ ತಮ್ಮ ಪದವಿಯಲ್ಲಿ ಆ ದೇವತೆಗಳು ಇರುವುದಿಲ್ಲ. ಅಂದ ಮಾತ್ರಕ್ಕೆ, ದೇವತೆಗಳೇ ಇಲ್ಲವೆಂದಲ್ಲ. ಹಿಂದಿನ ಕಲ್ಪಗಳಲ್ಲಿರುವ ದೇವತೆಗಳ ನಾಮ, ರೂಪ ಮೊದಲಾದವನ್ನು ಹೊಂದಿರುವಂತಹ ಮತ್ತೊಬ್ಬ ದೇವತೆಯು ಈ ಕಲ್ಪದಲ್ಲಿ ಅದೇ ಪದವಿಯಲ್ಲಿ ಇರುತ್ತಾನೆ. ತತ್ತ್ವಪ್ರದೀಪದ ಪ್ರಕಾರ, ಸಮಾನ ಧರ್ಮಗಳನ್ನು ಹೊಂದಿರುವುದರಿಂದಲೂ ಎಂದು 'ಚ'ಶಬ್ದದ ಅರ್ಥವಾಗುತ್ತದೆ. ಅಂತಹ ದೇವತೆಗಳನ್ನು ಪ್ರತಿಪಾದಿಸುವ ಏಕವಿಧವಾದ ವೇದಕ್ಕೆ ಅಪ್ರಾಮಾಣ್ಯವೆಂಬ ವಿರೋಧಕ್ಕೆ ಅವಕಾಶವಿಲ್ಲ. ಪ್ರತಿ ಕಲ್ಪಗಳಲ್ಲಿಯೂ ಇರುವಂಥಹ ದೇವತೆಗಳಿಗೆ ಸಮಾನವಾದ ನಾಮ-ರೂಪಗಳಿರುತ್ತವೆಂದು ಹೇಗೆ ಸಿದ್ಧವಾಗುತ್ತದೆ? ಎಂದರೆ ದರ್ಶನಾತ್ = 'ಯಥಾಪೂರ್ವಮ್' ಎಂಬ ಶ್ರುತಿಯಿರುವುದರಿಂದ. ಸ್ಮೃತೇಶ್ಚ = 'ಅನಾದಿನಿಧನಾ ನಿತ್ಯಾ' ಇತ್ಯಾದಿ ಸ್ಮೃತಿಯು ಪ್ರಮಾಣವಾಗಿರುವುದರಿಂದ, ಎಂದು ಸೂತ್ರಾರ್ಥ. ಇಂದ್ರಾದಿ ಪದವಿಗಳಲ್ಲಿರುವ ಪ್ರಯುಕ್ತ, ಆ ಚೇತನರನ್ನು ಶ್ರುತಿಯು ಪ್ರತಿಪಾದನೆ ಮಾಡುತ್ತದೆಂದು ಅಭಿಪ್ರಾಯ.

'ಆವೃತ್ತಾವಪಿ' ಎಂಬುದಕ್ಕೆ ಮತ್ತೊಂದು ವ್ಯಾಖ್ಯಾನ

श्रुतेः स्वरूपकृप्तिनियमपरत्वरूपान्यथासिद्धिनिरासकत्वात् स्मृतेः पृथगुक्तिः । चन्द्रिकायान्तु प्राचीनानां तत्पदस्थानां मुक्तानां सतामन्येषां तत्पदप्राप्तिः पुनस्तेषामपि मुक्तिरित्येवं मुक्तेरावृत्तावपीत्येकमर्थमुक्त्वा प्राचीनानां मुक्तत्वेन स्वस्वपदावृत्तावपीति चेति तत्त्वप्रदीपोक्तमावृत्ता-वित्यस्यार्थान्तरमुक्तम् ।।

'ಧಾತಾ ಯಥಾ' ಇತ್ಯಾದಿ ಶ್ರುತಿಯು ಹಿಂದಿನ ಕಲ್ಪದಂತೆ ಈ ಕಲ್ಪದಲ್ಲಿಯೂ ದೇವತೆಗಳು ಇರುತ್ತಾರೆ ಎಂಬುದಷ್ಟನ್ನೇ ಹೇಳುತ್ತದೆ, ಹೊರತು ಹಿಂದಿನ ಕಲ್ಪದಲ್ಲಿರುವ ದೇವತೆಯ ನಾಮ, ರೂಪಗಳೆಲ್ಲವನ್ನು ಈ ಕಲ್ಪದಲ್ಲಿರುವ ದೇವತೆಯೂ ಕೂಡ ಹೊಂದಿರುತ್ತಾನೆ ಎಂಬುದನ್ನು

ಹೇಳುವುದಿಲ್ಲ. ಈ ಬಗೆಯ ಅನ್ಯಥಾಸಿದ್ಧಿ ಶಂಕೆಯನ್ನು ಹಿಂದಿನ ಕಲ್ಪದ ನಾಮ, ರೂಪಗಳೇ ಈ ಕಲ್ಪದ ದೇವತೆಗಳಲ್ಲಿಯೂ ಇರುತ್ತದೆಂದು ಸ್ಪಷ್ಟವಾಗಿ ಹೇಳುವ ಶ್ರುತಿಯು ನಿರಾಕರಣೆ ಮಾಡಿದೆ. ಆದ್ದರಿಂದ ಸ್ಮೃತಿಯನ್ನು ಪ್ರತ್ಯೇಕವಾಗಿ ಸೂತ್ರಕಾರರು ಹೇಳಿರುತ್ತಾರೆ.

ಸೂತ್ರದಲ್ಲಿರುವ 'ಆವೃತ್ತಾವಪಿ' ಎಂಬುದಕ್ಕೆ ಚಂದ್ರಿಕೆಯಲ್ಲಿ ಮತ್ತೊಂದು ಬಗೆಯ ವ್ಯಾಖ್ಯಾನವನ್ನು ಮಾಡಿದ್ದಾರೆ. ಆಯಾ ಪದವಿಗಳಲ್ಲಿರುವ ಹಿಂದಿನ ದೇವತೆಗಳು ಮುಕ್ತರಾದ ಮೇಲೆ ಬೇರೆ ಚೇತನರು ಪುನಃ ಆ ಪದವಿಯನ್ನು ಹೊಂದುತ್ತಾರೆ. ಅವರಿಗೂ ಕೂಡ ಮೋಕ್ಷವಾಗುತ್ತದೆ. ಹೀಗೆ, ಮುಕ್ತಿಯ ಆವೃತ್ತಿ ಇದ್ದರೂ ಕೂಡ ಎಂಬುದು ಒಂದು ಬಗೆಯ ಅರ್ಥ. ಮತ್ತು, ಹಿಂದಿನ ದೇವತೆಗಳು ಮುಕ್ತರಾದ ಮೇಲೆ ಆಯಾ ಪದವಿಗಳಿಂದ ಆವೃತ್ತಿಯಿದ್ದರೂ ಎಂದು 'ಆವೃತ್ತೌ' ಎಂಬ ತತ್ವಪ್ರದೀಪದಲ್ಲಿ ಹೇಳಿದ ಮತ್ತೊಂದು ಅರ್ಥವನ್ನು ಕೂಡ ಹೇಳಿರುತ್ತಾರೆ.

ದೇವತೆಗಳಿಗೆ ಅಧಿಕಾರವಿದೆಯೇ? ಎಂದು ಅಧಿಕಾಕ್ಷೇಪ

देवानामधिकारमाक्षिपति

।। मध्वादिष्वसम्भवादनधिकारं जैमिनिः ।। १-३-३१ ।।

देवानामित्यस्ति । ''असौ वा आदित्यो देवमधु'' इत्याद्युक्तमधु-ज्योतिष्टोमादिविद्यासु देवानामनधिकारं जैमिनिर्मन्यत इत्यर्थः। मोक्षेतरवसुत्वादिफलकासु योग्यानां वसुत्वादिफलानामाप्तत्वादयोग्यानाम-काम्यत्वेनार्थिताऽसम्भवादित्यर्थः ।।

ದೇವತೆಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದೆ ಎಂದು ಆಕ್ಷೇಪ ಮಾಡುವ ಸೂತ್ರ ಹೀಗಿದೆ-

'ಮಧ್ವಾದಿಷ್ವಸಂಭವಾದನಧಿಕಾರಂ ಜೈಮಿನಿಃ'

'ದೇವಾನಾಂ' ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕು. 'ಅಸೌ ವಾ ಆದಿತ್ಯೋ ದೇವಮಧು' ಎಂದು ಪ್ರಾರಂಭವಾಗುವ ಮಧುವಿದ್ಯೆಯಲ್ಲಿ ಮತ್ತು ಜ್ಯೋತಿಷ್ಟೋಮಾದಿ ವಿದ್ಯೆಗಳಲ್ಲಿ ದೇವತೆಗಳಿಗೆ ಅಧಿಕಾರವಿಲ್ಲವೆಂದು ಜೈಮಿನಿ ಋಷಿಗಳು ಭಾವಿಸುತ್ತಾರೆ ಎಂದು ಸೂತ್ರಾರ್ಥ.

ಮೋಕ್ಷಕ್ಕಿಂತ ಇತರವಾದ ವಸು ಮೊದಲಾದ ಪದವಿಗಳೇ ಫಲವಾಗಿ ಉಳ್ಳ ವಿದ್ಯೆಗಳಲ್ಲಿ ಆ ಪದವಿಯನ್ನು ಹೊಂದಿರುವಂತಹ ದೇವತೆಗಳಿಗೆ ಅಧಿಕಾರವಿರುವುದಿಲ್ಲ. ಏಕೆಂದರೆ, ಅಧಿಕಾರಕ್ಕೆ ಪ್ರಯೋಜಕವಾದ ಅರ್ಥಿತ್ವ ಅವರಲ್ಲಿ ಇರುವುದಿಲ್ಲ. ಅಂದರೆ, ಈಗಾಗಲೇ ಆಯಾ ಪದವಿಗಳನ್ನು ಹೊಂದಿರುವುದರಿಂದ ಪುನಃ ಆ ಪದವಿಗಳ ಬಯಕೆ ದೇವತೆಗಳಿಗಿರುವುದಿಲ್ಲ. ಅಂತಹ ಪದವಿಗಳೇ ಫಲವಾಗಿ ಉಳ್ಳ ವಿದ್ಯೆಯಲ್ಲೂ ಅಧಿಕಾರವನ್ನು ಹೊಂದಿರುವುದಿಲ್ಲ. ಯಾರಿಗೆ ಆ ಪದವಿಯನ್ನು ಹೊಂದುವಂತಹ ಯೋಗ್ಯತೆಯಿರುವುದಿಲ್ಲವೋ, ಅವರೂ ಅದನ್ನು ಬಯಸಬಾರದಾದ್ದರಿಂದ, ಅವರಿಗೂ ಕೂಡ ಮಧುವಿದ್ಯೆಗಳಲ್ಲಿ ಅಧಿಕಾರವಿರುವುದಿಲ್ಲ ಎಂದು ಸೂತ್ರದ ಅಭಿಪ್ರಾಯ.

'ಜ್ಯೋತಿಷಿ' ಎಂಬ ಪದದ ಬಗ್ಗೆ

मोक्षार्थविद्यास्वधिकारः स्यादित्यत आह -

।। ज्योतिषि भावाच्च ।। १-३-३२ ।।

चोऽप्यर्थे । देवानामित्यस्ति । ज्योतिःशब्दो ज्ञानपरः । देवानां ज्ञाने भावात्। वस्तूनामिति शेषः । समस्तवस्तुविषयीकरणादिति यावत् । देवानां सार्वज्ञ्येन मोक्षार्थविद्यास्वपि तत्साध्यज्ञानस्याप्तत्वेनाऽर्थिताऽसम्भवादनधिकारं मन्यत इत्यन्वयः । ज्ञाने भावादिति सर्वज्ञत्वादिति वा वाच्ये ज्योतिषीत्याद्युक्तिरादित्यप्रकाशे सर्ववस्तूनामन्तर्भाववदित्यर्थसूचनार्था ।

ಮೋಕ್ಷವನ್ನು ನೀಡುವಂತಹ ವಿದ್ಯೆಗಳಲ್ಲಿ ಅಧಿಕಾರವನ್ನು ಹೇಳಬಹುದಲ್ಲವೇ? ಎಂಬ ಆಶಂಕೆಗೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ.

ಜ್ಯೋತಿಷಿ ಭಾವಾಚ್ಚ

'ಚ' ಶಬ್ದವು 'ಅಪಿ' ಎಂಬರ್ಥದಲ್ಲಿದೆ. 'ದೇವಾನಾಂ' ಎಂಬುದು ಈ ಸೂತ್ರದಲ್ಲಿ ಅನುವೃತ್ತವಾಗುತ್ತದೆ. ಜ್ಯೋತಿ ಎಂಬ ಶಬ್ದವು ಜ್ಞಾನ ಎಂಬರ್ಥದಲ್ಲಿದೆ. 'ವಸ್ತೂನಾಂ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ಎಂದರೆ ದೇವತೆಗಳ ಜ್ಞಾನದಲ್ಲಿ ಸಕಲ ವಸ್ತುಗಳು ವಿಷಯವಾಗಿರುವುದರಿಂದ ಎಂದರ್ಥವಾಯಿತು. ಎಂದರೆ ದೇವತೆಗಳು

ಸರ್ವಜ್ಞರಾದ್ದರಿಂದ ಮೋಕ್ಷವನ್ನು ಕೊಡುವಂತಹ ಯಾವ ತತ್ತ್ವಜ್ಞಾನವಿದೆಯೋ, ಆ ಜ್ಞಾನವನ್ನು ಕೂಡ ದೇವತೆಗಳು ಈಗ ಹೊಂದಿರುತ್ತಾರೆ. ಪುನಃ ತತ್ಫಲಕವಾದ ಬ್ರಹ್ಮವಿದ್ಯೆಯಲ್ಲಿ ಅರ್ಥಿತ್ವವನ್ನು ಉಪಪಾದನೆ ಮಾಡಲು ಬರುವುದಿಲ್ಲ. ಆದ್ದರಿಂದಲೂ ಬ್ರಹ್ಮವಿದ್ಯೆಯಲ್ಲೂ ದೇವತೆಗಳು ಅಧಿಕಾರವನ್ನು ಹೊಂದಿರುವುದಿಲ್ಲವೆಂದು ಜೈಮಿನಿ ಋಷಿಗಳು ಭಾವಿಸುತ್ತಾರೆ.

ಸೂತ್ರದಲ್ಲಿ 'ಜ್ಞಾನೇ ಭಾವಾತ್' 'ಸರ್ವಜ್ಞತ್ವಾತ್' ಎಂದಾಗಲಿ ಹೇಳಬೇಕಾಗಿತ್ತು. 'ಜ್ಯೋತಿಷಿ' ಎಂದೇಕೆ ಹೇಳಿದರು? ಎಂದರೆ ಸೂರ್ಯನ ಪ್ರಕಾಶದಲ್ಲಿ ಸಕಲ ವಸ್ತುಗಳು ಅಂತರ್ಭೂತವಾಗುವಂತೆ ದೇವತೆಗಳ ಜ್ಞಾನದಲ್ಲಿ ಸಕಲ ವಸ್ತುಗಳು ಅಂತರ್ಭಾವವಾಗಿವೆ, ಎಂಬರ್ಥವನ್ನು ಸೂಚಿಸಬೇಕಾಗಿದೆ. ಆದಕ್ಕೋಸ್ಕರ, 'ಜ್ಯೋತಿಷಿ' ಎಂಬ ಪದವನ್ನೇ ಪ್ರಯೋಗಿಸಿದ್ದಾರೆ.

'ಭಾವಂ ತು ಬಾದರಾಯಣೋಽಸ್ತಿ' ಎಂಬ ಸೂತ್ರದ ಅರ್ಥ

योगद्वयोक्तमधिकारचोद्यं समाधत्ते

।। भावं तु बादरायणोऽस्ति हि ।। १-३-३३ ।।

मध्वादिष्विति अधिकारस्येति देवानामिति चास्ति । तुर्विशेषे । बादरायणस्त्वित्यन्वयः । भावं देवानां मध्वाद्यशेषविद्यास्वधिकारस्य भावं मन्यते । कुतः ? अस्ति हि । अतिशय इति शेषः । मोक्षफले तद्धेतुज्ञाने चातिशयोऽस्ति हि यतोऽतोऽतिशयार्थमित्यर्थः । अन्यथा योग्यस्य ज्ञानफलयोरतिशयस्यानवाप्त्यापत्तेरिति भावः । जैमिनिमतं तु प्राप्तज्ञान-फलयोरर्थेऽनधिकार इत्यविरोधो बोध्यः ।। ८ ।।

ಎರಡು ಸೂತ್ರಗಳಲ್ಲಿ ಹೇಳಿದ ದೇವತೆಗಳಿಗೆ ವೇದವಿದ್ಯಾಧಿಕಾರವಿಲ್ಲವೆಂಬ ಆಕ್ಷೇಪಕ್ಕೆ ಸಮಾಧಾನವನ್ನು ನೀಡಲು ಮುಂದಿನ ಸೂತ್ರ ಹೊರಟಿದೆ.

ಭಾವಂ ತು ಬಾದರಾಯಣೋಽಸ್ತಿ ಹಿ

'ಮಧ್ವಾದಿಷು' 'ಅಧಿಕಾರಸ್ಯ' 'ದೇವಾನಾಂ' ಎಂಬ ಮೂರು ಪದಗಳನ್ನು ಅನುವೃತ್ತಿ ಮಾಡಿಕೊಳ್ಳಬೇಕು. 'ತು'ಶಬ್ದವು ವಿಶೇಷಾರ್ಥದಲ್ಲಿ ಇದೆ. 'ಬಾದರಾಯಣಸ್ತು' ಎಂದನ್ವಯ

ಮಾಡಿಕೊಳ್ಳಬೇಕು. ಭಾವಂ = ದೇವತೆಗಳಿಗೆ ಮಧು ಮೊದಲಾದ ಸಕಲ ವಿದ್ಯೆಗಳಲ್ಲೂ ಅಧಿಕಾರವಿರುವುದನ್ನು, ಬಾದರಾಯಣಃ = ಬಾದರಾಯಣರು ಅಂಗೀಕರಿಸಿದ್ದಾರೆ. ಏಕೆಂದರೆ, ಅಸ್ತಿ ಹಿ = 'ಅತಿಶಯೇ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ಮೋಕ್ಷಫಲದಲ್ಲಿ ಮತ್ತು ಅದಕ್ಕೆ ಕಾರಣವಾದ ಜ್ಞಾನದಲ್ಲಿ ಅತಿಶಯವಿರುವುದರಿಂದ. ಅತಿಶಯಕ್ಕೋಸ್ಕರ ವೇದವಿದ್ಯೆಯನ್ನೋದಬೇಕು ಎಂದರ್ಥ. ಒಂದು ವೇಳೆ ಅಧಿಕಾರವಿಲ್ಲದಿದ್ದರೆ, ಹೀಗೆ ಅಧಿಕಾರವನ್ನು ಹೇಳದಿದ್ದರೆ, ಯೋಗ್ಯವಾದ ಜ್ಞಾನ ಮತ್ತು ಫಲಗಳ ಅತಿಶಯವು ಲಭಿಸದೇ ಇರಬೇಕಾದೀತು ಎಂದು ಅಭಿಪ್ರಾಯ.

ಹಾಗಾದರೆ ಜೈಮಿನಿಗಳ ಅಭಿಪ್ರಾಯಕ್ಕೆ ವಿರೋಧ ಬರುತ್ತದಲ್ಲವೇ? ಎಂದರೆ, ಈಗಾಗಲೇ ನಡೆದಿರುವಂತಹ ಜ್ಞಾನದ ವಿಷಯದಲ್ಲಾಗಲೀ, ಅಥವಾ ಫಲದ ವಿಷಯದಲ್ಲಾಗಲೀ ಪುನಃ ಅರ್ಥಿತ್ವವನ್ನು ಅವರು ಹೊಂದಿರುವುದಿಲ್ಲ. ಅಂತಹ ವಿದ್ಯೆಯಲ್ಲೂ ಕೂಡ ಅವರು ಅಧಿಕಾರಿಗಳಲ್ಲ ಎಂದಷ್ಟೇ ಜೈಮಿನಿಗಳ ಅಭಿಪ್ರಾಯ. ಆದ್ದರಿಂದ, ಯಾವುದೇ ವಿರೋಧಕ್ಕೆ ಅವಕಾಶವಿಲ್ಲವೆಂದು ತಿಳಿಯಬೇಕು.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ದೇವತಾಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ದೇವತಾಧಿಕರಣ ಮತ್ತು ವಿಮರ್ಶೆ

ಅದ್ವೈತಿಗಳ ಹಾಗೂ ರಾಮಾನುಜರ ಅಧಿಕರಣ ಶರೀರ ಹೀಗಿದೆ - ವೇದದಲ್ಲಿರುವ ಮಂತ್ರಭಾಗವು ಅನುಷ್ಠೇಯವಾದ ದೇವತಾದಿಗಳ ಪ್ರಕಾಶನಾದಿಗಳಲ್ಲಿ ತಾತ್ಪರ್ಯವುಳ್ಳದ್ದಾಗಿದೆ. ಅರ್ಥವಾದ ಭಾಗವು ಸ್ತುತಿಪರವಾಗಿದೆ. ವಿಧಿಭಾಗವು ವಿಧೇಯವಾದ ಅರ್ಥಪರವಾಗಿದೆ. ಒಟ್ಟಾರೆ ವೇದದಲ್ಲಿರುವ ಯಾವುದೇ ವಾಕ್ಯವೂ ಕೂಡ ದೇವತೆಗಳ ಶರೀರವನ್ನು ಪ್ರತಿಪಾದನೆ ಮಾಡುತ್ತಿಲ್ಲವೆಂದಂತಾಯಿತು. ಹಾಗಾಗಿ ದೇವತೆಗಳಿಗೆ ಚಿದ್ರೂಪವಾದ ಶರೀರವಿರುವುದಿಲ್ಲ ಹೊರತಾಗಿ ಅರ್ಥಾವಚ್ಛಿನ್ನವಾದ ಶಬ್ದವೆಂಬುದನ್ನೋ, ಅಥವಾ ಶಬ್ದವಿಶಿಷ್ಟವಾದ ಅರ್ಥ ಎಂಬುದನ್ನೋ? ದೇವತೆಗಳ ಶರೀರವೆನ್ನಬೇಕು. ಇದು ಜಡಭೂತವಾಗಿದೆ. ಇಂತಹ ಜಡವಾದ ದೇವತೆಗೆ ಬ್ರಹ್ಮವಿದ್ಯೆಯ ಅಧ್ಯಯನದಲ್ಲಿ ಅಧಿಕಾರವನ್ನು

ಹೇಳುವುದಂತೂ ಹೇಗೆ ಸಾಧ್ಯ ? ಹಾಗಾಗಿ ಜಡಭೂತರಾದ ದೇವತೆಗಳಿಗೆ ಸಾಮರ್ಥ್ಯವಿಲ್ಲದ ಕಾರಣ ವೇದವಿದ್ಯಾಧಿಕಾರವಿಲ್ಲವೆಂದು ಪೂರ್ವಪಕ್ಷ.

ಮಂತ್ರ ಮೊದಲಾದ ವೇದ ಭಾಗಗಳು ದೇವತೆಗಳ ಚಿದ್ರೂಪ ಶರೀರವನ್ನೇ ಪ್ರತಿಪಾದನೆ ಮಾಡುತ್ತಿದೆ. ಅಂತಹ ಚಿದ್ರೂಪರಾದ ದೇವತೆಗಳಿಗೆ ವೇದವಿದ್ಯಾಧಿಕಾರವನ್ನು ಹೇಳುವುದು ನ್ಯಾಯಸಮ್ಮತ-ವಾಗಿದೆಯೆಂಬುದು ಮೊದಲನೆಯ ಸೂತ್ರದ ಸಿದ್ಧಾಂತ.

ಅದ್ವೈತಿಗಳು ದೇವತೆಗಳನ್ನು ಜಡಭೂತರೆಂದು ಪೂರ್ವಪಕ್ಷ ಮಾಡಿದ್ದಾರೆ. ಇದೇ ಸರಿಯಲ್ಲ. ಏಕೆಂದರೆ ಹಿಂದಿನ ಸೂತ್ರದಲ್ಲಿ ಮನುಷ್ಯ ಪದವಿದೆ. ಇದರಿಂದ ಮನಷ್ಯರಿಗೆ ಸಜಾತೀಯರಾದ ಮತ್ತೊಬ್ಬ ಚೇತನರ ಉಪಸ್ಥಿತಿಯೇ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಅಂತಹ ಮತ್ತೊಬ್ಬ ಚೇತನರಿಗೆ ವೇದವಿದ್ಯೆಯಲ್ಲಿ ಅಧಿಕಾರವನ್ನು ಹೇಳುತ್ತಿಲ್ಲವೆಂಬ ಪೂರ್ವಪಕ್ಷವನ್ನು ಮಾಡಬೇಕೇ ಹೊರತು, ವಿಜಾತೀಯವಾದ ಜಡಕ್ಕೆ ಅಧಿಕಾರವಿಲ್ಲವೆಂಬ ಪೂರ್ವಪಕ್ಷವು ಅತ್ಯಂತ ಅಸಂಗತವಾಗುತ್ತವೆ.

ಮತ್ತು ನಾವು ಹೇಳುವಂತೆ ಅಭಿಮಾನಿಸೂತ್ರದ ನ್ಯಾಯದಂತೆ ಮಂತ್ರಾದಿಗಳಿಗೆ ಸ್ವಾರ್ಥಪರತ್ವವನ್ನೇ ಒಪ್ಪಿ, ದೇವತೆಗಳಿಗೆ ಶರೀರಾದಿಗಳನ್ನು ಒಪ್ಪುವ ಮೂಲಕವೇ ಪೂರ್ವಪಕ್ಷ ಮಾಡಲು ಬರುವಾಗ, ದೇವತೆಗಳಿಗೆ ಚಿದ್ರೂಪವಾದ ಶರೀರವಿಲ್ಲವೆಂದು ಹೇಳಿ ಮಂತ್ರಾದಿಗಳಿಗೆ ಸ್ವಾರ್ಥಪರತ್ವವನ್ನು ಬಿಟ್ಟು ಅರ್ಥೈಸಿ ಪೂರ್ವಪಕ್ಷ ಮಾಡುವುದು ಅತ್ಯಂತ ಜಘನ್ಯವಾಗಿದೆ.

ಮತ್ತು ಪೂರ್ವಪಕ್ಷ ಮಾಡುವಾಗ ಮಂತ್ರಾದಿಗಳಿಗೆ ಸ್ವಾರ್ಥದಲ್ಲಿ ಪ್ರಾಮಾಣ್ಯವಿಲ್ಲವೆಂದು ಹೇಳಿದಿರಿ. ಆ ಸಂದರ್ಭದಲ್ಲಿ ಉಪನಿಷತ್ತುಗಳಿಗೆ ಸ್ವಾರ್ಥದಲ್ಲಿ ಪ್ರಾಮಾಣ್ಯವನ್ನು ಒಪ್ಪುವುದಿಲ್ಲವೋ, ಅಥವಾ ಒಪ್ಪುತ್ತೀರೋ, ಸ್ವಾರ್ಥದಲ್ಲಿ ಪ್ರಾಮಾಣ್ಯವನ್ನು ಒಪ್ಪದಿದ್ದರೆ ಬ್ರಹ್ಮನೂ ಸಹ ಸಿದ್ಧನಾಗದಿರಬೇಕಾದೀತು. ಉಪನಿಷತ್ತುಗಳಿಗೆ ಸ್ವಾರ್ಥದಲ್ಲಿ ಪ್ರಾಮಾಣ್ಯವನ್ನು ಒಪ್ಪುವುದಾದರೆ ಅದೇ ಉಪನಿಷತ್ತುಗಳಿಂದ 'ತಾ ಏತಾ ದೇವತಾಃ ಸೃಷ್ಟಾ ಅಸ್ಮಿನ್ ಮಹತ್ಯರ್ಣವೇ ಪ್ರಾಪತಂಸ್ತಮಶ-ನಾಯಾಪಿಪಾಸಾಭ್ಯಾಮನ್ವವಾರ್ಜತ್ ತಾ ಏನಮಬ್ರುವನ್' ಎಂಬುದಾಗಿ ದೇವತೆಗಳಿಗೆ ಶರೀರವಿದೆಯೆಂದೂ ಸಹ ಸಿದ್ಧವಾಗುತ್ತದೆ. ಮತ್ತು 'ತತ ಏತೇ ವ್ಯಜಾಯಂತ ವಿಶ್ವೋ ಹಿರಣ್ಯಗರ್ಭೋ೭ಗ್ನಿರ್ಯಮೋ ವರುಣರುದ್ರೇಂದ್ರಾಃ' ಎಂಬ ಉಪನಿಷತ್ತಿನಿಂದಲೂ ಶರೀರವುಳ್ಳ ದೇವತೆಗಳ ಸೃಷ್ಟಿಯನ್ನು ಬ್ರಹ್ಮನು ಮಾಡಿದನೆಂದು ತಿಳಿಯುತ್ತದೆ. ಈ ಮಾತಿನಿಂದಲೂ ದೇವತೆಗಳಿಗೆ ಶರೀರವಿದೆಯೆಂದು ಸ್ಪಷ್ಟವಾಗುತ್ತದೆ. ಒಂದೇ ಉಪನಿಷತ್ತು ಸ್ಪಷ್ಟವಾದ ಬ್ರಹ್ಮನ ವಿಷಯದಲ್ಲಿ ಪ್ರಮಾಣವಾಗುತ್ತದೆ. ಸೃಜ್ಯವಾದ ದೇವತೆಗಳ ಶರೀರವಿಷಯದಲ್ಲಿ ಪ್ರಮಾಣವಾಗುವುದಿಲ್ಲವೆಂದು ಹೇಳುವುದು ಅಯುಕ್ತವಾಗಿದೆ.

ಮತ್ತು

ದೇವತಾವಿಗ್ರಹಾದಿಶ್ಚೇತ್ ಶ್ರುತಿತಾತ್ಪರ್ಯಗೋಚರಃ।
ಬಾಧ್ಯೋ ನ ಸ್ಯಾನ್ನ ಚೇನ್ನ ಸ್ಯಾದ್ವ್ಯಾವಹಾರಿಕಸನ್ನಪಿ ॥೧॥

ದೇವತಾದಿಗಳ ಶರೀರವು ಶ್ರುತಿತಾತ್ಪರ್ಯಕ್ಕೆ ವಿಷಯವಾಗದಿದ್ದರೆ, ಬಾಧ್ಯವಾಗದೇ ಪಾರಮಾರ್ಥಿಕವಾಗಬೇಕಾದೀತು. ಒಂದು ವೇಳೆ ಶ್ರುತಿತಾತ್ಪರ್ಯಗೋಚರವಲ್ಲದಿದ್ದರೆ, ವ್ಯಾವಹಾರಿಕ ಸತ್ವವನ್ನೂ ಸಹ ಹೇಳದೇ, ಪ್ರಾತಿಭಾಸಿಕಸತ್ವವನ್ನೇ ಹೇಳಬೇಕಾದೀತು.

ಅನ್ಯಥಾ ಚಿತಿಮಾತ್ರಂ ಚ ಬಾಧ್ಯೇತೈವ ಕದಾಚನ।
ಯಜಮಾನಪ್ರಸ್ತರತ್ವಮಪಿ ಸ್ಯಾದ್ವ್ಯಾವಹಾರಿಕಮ್ ॥೨॥

ಒಂದು ವೇಳೆ ಶ್ರುತಿ ತಾತ್ಪರ್ಯ ಗೋಚರವಾದರೂ ಸಹ ಪಾರಮಾರ್ಥಿಕವಾಗದಿದ್ದರೆ ಚಿನ್ಮಾತ್ರವೂ ಕೂಡ ಪಾರಮಾರ್ಥಿಕವಾಗದೇ ಬಾಧ್ಯವಾಗಬೇಕಾದೀತು. ಮತ್ತು ಶ್ರುತಿ ತಾತ್ಪರ್ಯಗೋಚರವಾಗದಿದ್ದಾಗ ವ್ಯವಾಹಾರಿಕವಾಗುವುದಾದರೆ, ಯಜಮಾನಕ್ಕೆ ಪ್ರಸ್ತರತ್ವವೂ ಸಹ ಪ್ರಾತಿಭಾಸಿಕವೆಂದಾಗದೇ, ವ್ಯವಹಾರಿಕವೆಂದಾಗಬೇಕಾದೀತು.

ಈ ವಿಷಯವನ್ನು ಈ ಹಿಂದೆ ಸಮರ್ಥಿಸಿದ್ದಾಗಿದೆ.

ಅದ್ವೈತಿಗಳ ಎರಡನೆಯ ಸೂತ್ರ ವ್ಯಾಖ್ಯಾನ ಹೀಗಿದೆ - ದೇವತೆಗಳಿಗೆ ಯಜ್ಞದಲ್ಲಿ ಅಧಿಕಾರವಿಲ್ಲ. ಸ್ವತಃ ತಾವೇ ದೇವತೆಗಳಾಗಿದ್ದರಿಂದ ಮತ್ತೊಬ್ಬ ದೇವತೆಯೇ ಇರುವುದಿಲ್ಲ. ಆದ್ದರಿಂದ ದೇವತೆಗಳಿಗೆ ದೇವತೋದ್ದೇಶಕವಾದ ಹವಿಸ್ಸಿನ ತ್ಯಾಗಾದಿ ರೂಪವಾದ ಯಜ್ಞಗಳಲ್ಲಿ ಅಧಿಕಾರವನ್ನು ಹೇಳಲಾಗದು. ಋಷಿಗಳಿಗೂ ಸಹ ಯಜ್ಞಾಧಿಕಾರವಿಲ್ಲ. ಏಕೆಂದರೆ ಯಜ್ಞದಲ್ಲಿ ಋಷಿಗಳನ್ನು ವರಣ ಮಾಡಬೇಕು. (ಪ್ರಾರ್ಥನೆಯಿಂದ ಯಜ್ಞಮಾಡಲು ಆಹ್ವಾನ ಮಾಡಬೇಕು). ಆದರೆ ಭೃಗು ಮೊದಲಾದವರೇ ಸ್ವತಃ ಋಷಿಗಳಾದ್ದರಿಂದ ಅವರಿಗೆ ಮತ್ತೊಬ್ಬ ಋಷಿಗಳಿರುವುದಿಲ್ಲ. ಆದ್ದರಿಂದ ಋಷಿವರಣವೂ ಕೂಡ ಅಯುಕ್ತವಾಗುತ್ತದೆ. ಹೀಗೆ ದೇವತೆಗಳಿಗೆ ಮತ್ತು ಋಷಿಗಳಿಗೆ ಯಜ್ಞಾದಿ ಕರ್ಮಗಳಲ್ಲಿ ಅಧಿಕಾರವಿರುವುದಿಲ್ಲ. ಆದರೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವನ್ನು ಹೇಳಬಹುದು.

ಇದು ತಪ್ಪು. ದೇವತೆಗಳಿಗೂ ಕೂಡ ಯಜ್ಞದಲ್ಲಿ ಅಧಿಕಾರವಿದೆಯೆನ್ನಲು ಅನೇಕ ಶ್ರುತಿಗಳು ಪ್ರಮಾಣವಾಗಿವೆ. ಪುರುಷಸೂಕ್ತದಲ್ಲಿ 'ಯಜ್ಞೇನ ಯಜ್ಞಮಯಜಂತ ದೇವಾಃ' ಎಂಬುದಾಗಿ ಯಜ್ಞನಾಮಕ ಪರಮಾತ್ಮನನ್ನು ಯಜ್ಞದಿಂದ ದೇವತೆಗಳು ಹೋಮಿಸಿದರು ಎಂದು ಹೇಳಲಾಗಿದೆ. ಮತ್ತು 'ದೇವಾ ವೈ ಸತ್ರಮಾಸತ' ಎಂಬುದಾಗಿ ಯರ್ಜುವೇದದಲ್ಲಿ ದೇವತೆಗಳು ಯಾಗವನ್ನು ಆಚರಣೆ ಮಾಡಿದ್ದರ ವರ್ಣನೆಯಿದೆ. 'ದೇವಾ ಯಜ್ಞಮತನ್ವತ' ಎಂಬ ದೇವತೆಗಳು ಹೋಮಿಸಿದರೆಂದು ಹೇಳುವ ಪುರುಷಸೂಕ್ತವು ಪುನಃ ಅದನ್ನೇ ವರ್ಣಿಸಿದೆ. 'ದೇವಾ ವೈ ಚತುರ್ಹೋತೃಭಿರ್ಯಜ್ಞಮತನ್ವತ' ಎಂದು

ಪುನಃ ತೈತ್ತಿರೀಯ ಉಪನಿಷತ್ತು ನಾಲ್ಕು ಮಂದಿ ಹೋತೃಗಳಿಂದ ದೇವತೆಗಳು ಹೋಮಿಸಿದರೆಂದು ಹೇಳಿದೆ. 'ಯದ್ವಿಶ್ವೇದೇವಾಃ ಸಮಯಜಂತ ತದ್ವೈಶ್ವದೇವಸ್ಯ ವೈಶ್ವದೇವತ್ವಮ್' ಎಂಬುದಾಗಿ ಸಕಲ ದೇವತೆಗಳು ವೈಶ್ವದೇವನಾಮಕವಾದ ಹೋಮವನ್ನು ಆಚರಣೆ ಮಾಡಿದರೆಂಬ ಉಲ್ಲೇಖವಿದೆ. 'ಪ್ರಜಾಪತಿರ್ವಾ ಏತೇನಾಗ್ರೇऽಯಜತ' ಬ್ರಹ್ಮದೇವರು ಹೋಮ ಮಾಡಿದ್ದರೆಂದು ಈ ಶ್ರುತಿಯು ಹೇಳಿದೆ. 'ಇಂದ್ರೋऽಶ್ವಮೇಧಾನ್‌ಶತಮಿಷ್ಟ್ವಾ' ಎಂಬ ಶ್ರುತಿಯು ನೂರು ಅಶ್ವಮೇಧಯಾಗಗಳನ್ನು ಇಂದ್ರನು ಮಾಡಿದನೆಂದು ಹೇಳಿದೆ. 'ದೇವಾ ವೈ ವರುಣಮಯಾಜಯನ್' 'ದೇವತೆಗಳು ವರುಣನನ್ನು ಯಾಗ ಮಾಡಿಸಿದರು' ಇವೇ ಮೊದಲಾದ ಶ್ರುತಿಗಳು ಸ್ಪಷ್ಟವಾಗಿ ದೇವತೆಗಳ ಯಜ್ಞಾಧಿಕಾರವನ್ನು ಸಮರ್ಥಿಸುತ್ತಿವೆ.

ತತಸ್ತು ದೇವತಾಃ ಸರ್ವಾ ಬ್ರಹ್ಮಾ ಚೈವ ಮಹರ್ಷಯಃ।
ವೇದದೃಷ್ಟೇನ ವಿಧಿನಾ ವೈಷ್ಣವಂ ಕ್ರತುಮಾಹರನ್ ॥

ಸಕಲ ದೇವತೆಗಳು, ಬ್ರಹ್ಮದೇವರು ಮತ್ತು ಮಹರ್ಷಿಗಳು ವಿಷ್ಣುವನ್ನು ಕುರಿತು ವೇದೋಕ್ತ ವಿಧಿಯಿಂದ ಹೋಮವನ್ನು ಆಚರಣೆ ಮಾಡಿದರು ಎಂಬುದಾಗಿ ಮಹಾಭಾರತದಲ್ಲಿ ವರ್ಣಿಸಲಾಗಿದೆ. ಇದರಿಂದಲೂ ದೇವತೆಗಳಿಗೆ ಯಜ್ಞಾದಿ ಕ್ರಿಯೆಗಳಲ್ಲಿ ಅಧಿಕಾರವಿದೆಯೆಂದು ಸ್ಪಷ್ಟವಾಗುತ್ತದೆ.

ಮತ್ತು ಶೂದ್ರಾದಿಗಳಿಗೆ ಹೇಗೆ ಯಜ್ಞಾಧಿಕಾರವಿಲ್ಲವೆಂಬ ನಿಷೇಧ ಮಾತುಗಳಿವೆಯೋ, ಅದರಂತೆ ದೇವತೆಗಳಲ್ಲಿ ಅಂತಹ ನಿಷೇಧ ಮಾತುಗಳು ಕಾಣಸುವುದಿಲ್ಲ.

ಹಾಗಾದರೆ ದೇವತೆಗಳಿಗೆ ಮತ್ತೊಬ್ಬ ದೇವತೆಗಳಿಲ್ಲದ ಕಾರಣ ಹೇಗೆ ದೇವತೋದ್ದೇಶಕವಾದ ಯಾಗವನ್ನು ಮಾಡುತ್ತಾರೆ ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ದೇವತೆಗಳು ಮಾಡುವಂತಹ ಯಾಗದಲ್ಲಿ ವಿಷ್ಣುವೇ ಉದ್ದೇಶ್ಯನಾಗಿರುತ್ತಾನೆ. ಈ ವಿಷಯದಲ್ಲಿ ಮಹಾಭಾರತದ ಮಾತು ಆಧಾರವಾಗಿದೆ.

ಯೋ ಮೇ ಯಥಾ ಕಲ್ಪಿತವಾನ್ ಭಾಗಮಸ್ಮಿನ್ ಮಹಾಕ್ರತೌ।
ಸ ತಥಾ ಯಜ್ಞಭಾಗಾರ್ಹೋ ವೇದಸೂತ್ರೇ ಮಯಾ ಕೃತಃ।
ಮಾಮೇವ ಯಜತಾಂ ಶಕ್ರಃ ಪಾವಯಿಷ್ಯಾಮಿ ವಜ್ರಿಣಮ್ ॥

ಯಾವ ದೇವತೆಯು ಈ ಮಹಾಕ್ರತುವಿನಲ್ಲಿ ದೊಡ್ಡಭಾಗವನ್ನು ನನಗಾಗಿ ಸಮರ್ಪಣೆ ಮಾಡುತ್ತಾನೋ, ಅಂತಹ ದೇವತೆಯೂ ಸಹ ಯಜ್ಞಭಾಗದಲ್ಲಿ ಅರ್ಹನಾಗುತ್ತಾನೆ. ಈ ವಿಷಯವನ್ನು ವೇದಾರ್ಥನಿರ್ಣಾಯಕವಾದ ಬ್ರಹ್ಮಸೂತ್ರಗಳಲ್ಲಿ ನಾನು ನಿರ್ಣಯಿಸಿದ್ದೇನೆ, ನನ್ನನ್ನು ಕುರಿತು ಯಾವ ದೇವೇಂದ್ರನು ಹೋಮವನ್ನು ಮಾಡುತ್ತಾನೋ, ಅವನನ್ನು ನಾನು ಪವಿತ್ರ ಮಾಡುತ್ತೇನೆ ಎಂದು.

ಹೀಗೆ ದೇವತೆಗಳನ್ನು ಕುರಿತು ಭಗವಂತನು ಹೇಳುವ ಮಾತು. ಆದ್ದರಿಂದ ಇಂದ್ರಾದಿ ಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯನಾದವನು ಭಗವಂತನೇ ಆಗಿದ್ದಾನೆ.

ಆದ್ದರಿಂದಲೇ 'ಇಂದ್ರೋ ವಾ ಅಕಾಮಯತ ಜ್ಯೇಷ್ಠ್ಯಂ ದೇವಾನಾಮಭಿಜಯೇಯಮಿತಿ । ಸ ಏತಮಿಂದ್ರಾಯ ಜ್ಯೇಷ್ಠಾಯ ಪುರೋಡಾಶಮೇಕಾದಶಕಪಾಲಂ ನಿರವಪತ್' ಇಂದ್ರನು ಇಂದ್ರನಾಮಕನಾದ ಪರಮಾತ್ಮನನ್ನು ಕುರಿತು ಹೋಮವನ್ನು ಆಚರಣೆ ಮಾಡಿ, ಎಲ್ಲರನ್ನು ಗೆಲ್ಲಲು ಉದ್ಯುಕ್ತನಾದನು. ಇತ್ಯಾದಿ ಶ್ರುತಿಗಳು ಈ ವಿಷಯದಲ್ಲಿ ಆಧಾರವಾಗಿವೆ.

ಹಿಂದೆ ಋಷಿಗಳಿಗೆ ವರಣವು ಹೇಗೆ ಯುಕ್ತವಾಗುತ್ತದೆಂದು ಪ್ರಶ್ನಿಸಲಾಗಿತ್ತು? ಅದೂ ಸಹ ತಪ್ಪು. ಏಕೆಂದರೆ ಭೃಗು ಮೊದಲಾದವರು ವರಣವನ್ನು ಮಾಡುತ್ತಾರೆ ಎಂಬ ಮಾತುಗಳು ಮನುಷ್ಯ ವಿಷಯಕವಾಗಿದೆಯೆಂದು ಅರ್ಥೈಸಬೇಕು. ಅಥವಾ ಅನಾದಿಯಾದ ಸಂಸಾರದಲ್ಲಿ ಮುಂದಿನ-ಮುಂದಿನ ಭೃಗು ಮೊದಲಾದ ಋಷಿಗಳನ್ನು ಹಿಂದಿನ ಭೃಗು ಮೊದಲಾದ ಋಷಿಗಳು ವರಣವನ್ನು ಮಾಡುತ್ತಾರೆ ಎಂದೂ ಸಹ ಅರ್ಥೈಸಬಹುದು.

ಆಕ್ಷೇಪ - 'ವಸಂತೇ ಬ್ರಾಹ್ಮಣೋऽಗ್ನೀನಾದಧೀತ, ಗ್ರೀಷ್ಮೇ ರಾಜನ್ಯಃ ಶರದಿ ವೈಶ್ಯಃ' ವಸಂತಋತುವಿನಲ್ಲಿ ಬ್ರಾಹ್ಮಣನು ಅಗ್ನ್ಯಾಧಾನ ಮಾಡಬೇಕು. ಗ್ರೀಷ್ಮ ಋತುವಿನಲ್ಲಿ ಕ್ಷತ್ರಿಯನು ಅಗ್ನ್ಯಾಧಾನ ಮಾಡಬೇಕು. ಶರದೃತುವಿನಲ್ಲಿ ವೈಶ್ಯನು ಅಗ್ನ್ಯಾಧಾನ ಮಾಡಬೇಕು ಎಂಬುದಾಗಿ ತ್ರೈವರ್ಣಿಕರಿಗೆ ಅಗ್ನ್ಯಾಧಾನವನ್ನು ಶ್ರುತಿಯು ವಿಧಾನ ಮಾಡುತ್ತಿದೆ. 'ವಸಂತೇ ಬ್ರಾಹ್ಮಣಮುಪನಯೀತ, ಗ್ರೀಷ್ಮೇ ರಾಜನ್ಯಂ ಶರದಿ ವೈಶ್ಯಮ್' ವಸಂತ ಋತುವಿನಲ್ಲಿ ಬ್ರಾಹ್ಮಣನಿಗೆ ಉಪನಯನ ಮಾಡಬೇಕು. ಗ್ರೀಷ್ಮಋತುವಿನಲ್ಲಿ ಕ್ಷತ್ರಿಯನಿಗೆ, ಶರದೃತುವಿನಲ್ಲಿ ವೈಶ್ಯನಿಗೆ ಉಪನಯನ ಮಾಡಬೇಕೆಂದು ಉಪನಯನವಿಧಿಯೂ ಕೂಡ ತ್ರೈವರ್ಣಿಕರಲ್ಲಿ ಮಾತ್ರ ಶ್ರುತವಾಗಿದೆ. ಆದರೆ ದೇವತೆಗಳು ತ್ರೈವರ್ಣಿಕರಲ್ಲಿ ಸೇರುವುದಿಲ್ಲ. ಆದ್ದರಿಂದ ತ್ರೈವರ್ಣಿಕರಿಂದಷ್ಟೇ ಮಾಡಬೇಕಾದ ಅಗ್ನ್ಯಾಧಾನವಾಗಲೀ, ಉಪನಯನ-ಸಂಸ್ಕಾರವಾಗಲೀ ದೇವತೆಗಳಿಗೆ ಹೇಳಲು ಸಾಧ್ಯವಿಲ್ಲ. ಅಗ್ನ್ಯಾಧಾನದಿಂದ ಸಾಧ್ಯವಾದ ಅಗ್ನಿಯೂ ಸಹ ದೇವತೆಗಳಿಗಿರುವುದಿಲ್ಲ. ಉಪನಯನದಿಂದ ಸಾಧ್ಯವಾದ ವಿದ್ಯೆಯೂ ಸಹ ದೇವತೆಗಳಿಗೆ ಇರುವುದಿಲ್ಲ. ಆದ್ದರಿಂದ ಕರ್ಮಾಧಿಕಾರವು ದೇವತೆಗಳಿಗೆ ಇದೆಯೆಂದು ಉಪಪಾದನೆ ಮಾಡಲು ಬರುವುದಿಲ್ಲವಲ್ಲವೇ?

ಸಮಾಧಾನ - 'ದೇವಾ ವೈ ಭದ್ರಾಃ ಸಂತೋऽಗ್ನಿಮಾಧಿತ್ಸಂತ' ಎಂದು ಪ್ರಾರಂಭವಾಗಿ 'ತೇ ಪುನರ್ವಸ್ವೋರಾದಧತ' ಎಂದು ಮತ್ತು 'ದೇವಾ ವಾ ಅಗ್ನಿಮಾದಧತ' ಇತ್ಯಾದಿಯಾಗಿ ದೇವತೆಗಳಿಗೂ ಕೂಡ ಅಗ್ನ್ಯಾಧಾನವನ್ನು ವಿಧಾನ ಮಾಡಲಾಗಿದೆ. ಮತ್ತು 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ' ಎಂಬುದಾಗಿ ಬ್ರಹ್ಮದೇವರೂ ಸಹ ಅಧ್ಯಯನಾದಿಗಳಲ್ಲಿ ತೊಡಗುತ್ತಾರೆಂದು ಹೇಳಲಾಗಿದೆ. ಇದರಂತೆ 'ಋಗ್ವೇದಂ ಭಗವೋऽಧ್ಯೇಮಿ ಯಜುರ್ವೇದಂ ಸಾಮವೇದಮಾಥರ್ವಣಮ್' ಇತ್ಯಾದಿ ವಾಕ್ಯಗಳಿಂದ ದೇವರ್ಷಿಗಳಾದ ನಾರದರು ತಾವು ಎಲ್ಲವನ್ನು

ಅಧ್ಯಯನ ಮಾಡಿರುತ್ತೇವೆಂದು ಹೇಳಿಕೊಂಡಿರುತ್ತಾರೆ.

ತ್ವತ್ಪ್ರಸಾದೇನ ಭಗವನ್ ! ಸ್ವಾಧ್ಯಾಯತಪಸೋರ್ಮಮ।
ಕುಶಲಂ ಚಾವ್ಯಯಂ ಚೈವ ಸರ್ವಸ್ಯ ಜಗತಸ್ತಥಾ ॥

ಎಲೈ! ಭಗವಂತನೇ ನಿನ್ನ ಪ್ರಸಾದದಿಂದಲೇ ಸ್ವಾಧ್ಯಾಯ ಮತ್ತು ತಪಸ್ಸುಗಳಲ್ಲಿ ನಾನು ಕುಶಲನಾಗಿದ್ದೇನೆ. ಮತ್ತು ಅವ್ಯಯನಾಗಿದ್ದೇನೆ. ಜಗತ್ತೂ ಸಹ ಕುಶಲವಾಗಿದೆ ಎಂದು ಚತುರ್ಮುಖ ಬ್ರಹ್ಮದೇವರನ್ನು ಕುರಿತು ರುದ್ರದೇವರು ಹೇಳುವಂತಹ ಮಾತನ್ನು ಮಹಾಭಾರತದ ಮೋಕ್ಷಧರ್ಮಪರ್ವದಲ್ಲಿ ನೋಡಬಹುದು.

ಮತ್ತು ಅದ್ವೈತಮತದಲ್ಲಿ ದೇವತೆಗಳಿಗೆ ಕರ್ಮಾಧಿಕಾರವನ್ನು ಒಪ್ಪಿರುವುದಿಲ್ಲ. ಆದರೂ ಸಹ ವೇದೋಕ್ತ ಜ್ಞಾನಾಧಿಕಾರವನ್ನು ಒಪ್ಪಲಾಗಿದೆ. ಅದರಂತೆ ದೇವತೆಗಳಿಗೆ ಉಪನಯನವನ್ನು ಒಪ್ಪದಿದ್ದರೂ ವೇದಾಧ್ಯಯನವನ್ನು ಹೇಳಬಹುದಲ್ಲವೇ?

ವಸ್ತುತಸ್ತು ದೇವತೆಗಳಿಗೆ ಅಧ್ಯಯನವೇ ಬೇಕಾಗಿಲ್ಲ. ಸ್ವತಃ ಅವರು ಎಲ್ಲವನ್ನೂ ಕೂಡ ತಿಳಿದಿರುತ್ತಾರೆ. ಆದರೂ ಸಹ 'ಅಥ ಪುರುಷಾರ್ಥಸಾಧನಾನ್ಯರ್ಥೋ ಧರ್ಮೋ ಜ್ಞಾನಮಿತ್ಯುತ್ತರೋತ್ತರಮ್। ತತ್ರಾಧಿಕಾರಿಣೋ ಮನುಷ್ಯಾ ಋಷಯೋ ದೇವಾ ಇತ್ಯುತ್ತರೋತ್ತರಮ್' ಪುರುಷಾರ್ಥಕ್ಕೆ ಸಾಧನವಾದವು ಅರ್ಥ, ಧರ್ಮ, ಜ್ಞಾನ ಈ ಮೂರು. ಇವುಗಳಲ್ಲಿ ಹಿಂದಿನ ಪುರುಷಾರ್ಥಗಳಿಗಿಂತ ಮುಂದಿನ ಪುರುಷಾರ್ಥಗಳು ಶ್ರೇಷ್ಠವಾಗಿವೆ. ಮನುಷ್ಯರಿಗೆ ಅರ್ಥದಲ್ಲಿ ಅಧಿಕಾರವಿರುತ್ತದೆ. ಋಷಿಗಳಿಗೆ ಧರ್ಮದಲ್ಲಿ ಅಧಿಕಾರವಿರುತ್ತದೆ. ದೇವತೆಗಳಿಗೆ ಜ್ಞಾನದಲ್ಲಿ ಅಧಿಕಾರವಿರುತ್ತದೆಂದು ಶ್ರುತಿಯು ಹೇಳಿದೆ. ವಸ್ತುತಃ ಮೂವರಿಗೂ ಮೂರರಲ್ಲಿಯೂ ಅಧಿಕಾರವಿರುತ್ತದೆ. ಆದರೆ ಮನುಷ್ಯರಿಗೆ ಕಡಿಮೆಪ್ರಮಾಣದಲ್ಲಿ, ಋಷಿಗಳಿಗೆ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ, ದೇವತೆಗಳಿಗೆ ಮತ್ತಷ್ಟು ಹೆಚ್ಚು ಪ್ರಮಾಣದಲ್ಲಿ ಅರ್ಥ, ಧರ್ಮ, ಜ್ಞಾನ ಇವುಗಳ ಸಂಪಾದನೆಯ ಅಧಿಕಾರವು ಇರುತ್ತದೆಂದು ತಿಳಿಯಬೇಕು. ಈ ವಾಕ್ಯದಿಂದ ದೇವತೆಗಳಿಗೆ ಕರ್ಮದಲ್ಲಿ ಅಧಿಕಾರವಿರುತ್ತದೆಂದು ಸ್ಪಷ್ಟವಾಗುತ್ತದೆ. ಪ್ರಕೃತ ದೇವತೆಗಳು ತ್ರೈವರ್ಣಿಕರಲ್ಲದ ಕಾರಣ ಕರ್ಮದಲ್ಲಿ ಅಧಿಕಾರವಿಲ್ಲವೆಂದು ಅಪಲಾಪಮಾಡುವುದಾದರೆ ಇದೇ ಕಾರಣದಿಂದಲೇ ಬ್ರಹ್ಮವಿದ್ಯೆಯಲ್ಲೂ ಕೂಡ ಅವರಿಗೆ ಅಧಿಕಾರವನ್ನು ಹೇಳಬಾರದು.

ಮತ್ತು 'ದೇವಾ ಏವ ಬ್ರಹ್ಮಚಾರಿಣಃ' ಎಂದು ಪ್ರಾರಂಭವಾಗಿ 'ಸರ್ವವರ್ಣಾಃ ಸರ್ವಾಶ್ರಮಿಣಃ ಸರ್ವಂ ಹ್ಯೇತೇ ಕರ್ಮ ಕುರ್ವಂತಿ' ಇತ್ಯಾದಿ ಶ್ರುತಿಯು ದೇವತೆಗಳಿಗೆ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಎಂಬ ಮೂರು ವರ್ಣಗಳನ್ನು ಒಟ್ಟಿಗೆ ವಿಧಾನ ಮಾಡಿದೆ. ಆದ್ದರಿಂದ ಈ ಶ್ರುತಿಯಿಂದ ದೇವತೆಗಳಿಗೆ ತ್ರೈವರ್ಣಿಕತ್ವವು ಸಿದ್ಧವಾಗುತ್ತದೆ. ಮತ್ತು 'ಏತಯಾ ನಿಷಾದಸ್ಥಪತಿಂ ಯಾಜಯೇತ್'

ಇತ್ಯಾದಿ ಶ್ರುತಿಯಿಂದ ತ್ರೈವರ್ಣಿಕರಲ್ಲದಿದ್ದರೂ ಅಗ್ನ್ಯಾಧಾನವನ್ನು ಮಾಡಿರುವ 'ನಿಷಾದಸ್ಥಪತಿ' ಎಂಬ ಬೇಡ ಜಾತಿಯವರಿಗೆ ಲೌಕಿಕಾಗ್ನಿಯಲ್ಲಿ ವೈದಿಕಕರ್ಮದ ಅಧಿಕಾರವನ್ನು ಒಪ್ಪಲಾಗಿದೆ. ಯಾವರೀತಿಯಾಗಿ ಬೇಡಜಾತಿಯವರಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲದಿದ್ದರೂ ಕರ್ಮಾಧಿಕಾರವನ್ನು ಒಪ್ಪಲಾಗಿದೆಯೋ, ಅದರಂತೆ ದೇವತೆಗಳಿಗೂ ಕೂಡ ಅವರಲ್ಲಿ ತ್ರೈವರ್ಣಿಕತ್ವವಿಲ್ಲದಿದ್ದರೂ ಕರ್ಮಾಧಿಕಾರವನ್ನು ಒಪ್ಪಬಹುದು.

ಮತ್ತು 'ದೇವಾ ವೈ ಸತ್ರಮಾಸತ' ಇತ್ಯಾದಿ ವಾಕ್ಯಗಳು ದೇವತೆಗಳಿಗೆ ಕರ್ಮಾಧಿಕಾರವಿದೆಯೆಂದು ಸಮರ್ಥಿಸುತ್ತಿವೆ. ಮೀಮಾಂಸಕರು ಇವುಗಳನ್ನು ಅರ್ಥವಾದವಾಕ್ಯವೆಂದು ಪರಿಗಣಿಸಿ ಸ್ವಾರ್ಥಪರತ್ವವನ್ನು ಒಪ್ಪಿರುವುದಿಲ್ಲ. ಅವರಂತೆ ನಿಮಗೆ ಹೇಳಲಾಗದು. ಏಕೆಂದರೆ ದೇವತೆಗಳಿಗೆ ಕರ್ಮಾಧಿಕಾರವಿಲ್ಲವೆಂಬ ನಿಷೇಧವಾಕ್ಯಗಳಾವುದೂ ಇರುವುದಿಲ್ಲ. ಆದ್ದರಿಂದ ಈ ಅಧಿಕರಣದಲ್ಲಿ ನೀವು ದೇವತೆಗಳಿಗೆ ಶರೀರವಿದೆಯೆಂದು ಯಾವಶ್ರುತಿಯಿಂದ ಸಾಧನೆ ಮಾಡುತ್ತೀರೋ, ಅಂತಹ ಶ್ರುತಿಯಿಂದಲೇ ಕರ್ಮಾಧಿಕಾರವನ್ನೂ ಕೂಡ ಒಪ್ಪಬೇಕಾಗುತ್ತದೆ. ಅಂದರೆ ಸ್ವಾರ್ಥದಲ್ಲಿ ಪ್ರಾಮಾಣ್ಯವನ್ನು ಒಪ್ಪುವುದು ನಿಮಗೆ ಅನಿವಾರ್ಯ.

ಮತ್ತು ದೇವತೆಗಳಿಗೆ ಉಪಾಸನೆಗೆ ಅಂಗವಾದ ಕರ್ಮದಲ್ಲಿ ಅಧಿಕಾರವನ್ನು ನೀವು ಒಪ್ಪದಿದ್ದರೆ ಅಂಗಿಯಾದ ಉಪಾಸನೆಯಲ್ಲೂ ಕೂಡ ಅಧಿಕಾರವನ್ನು ಒಪ್ಪದೇ ಇರಬೇಕಾದೀತು. ಹಾಗಾಗಿ ದೇವತೆಗಳಿಗೆ ಯಾಗಾಧಿಕಾರವಿದೆಯೆಂದು ಸಿದ್ಧವಾಗುತ್ತದೆ.

ಅದ್ವೈತಿಗಳು ಹಾಗೂ ವಿಶಿಷ್ಟಾದ್ವೈತಿಗಳು ತಿರ್ಯಕ್ಪ್ರಾಣಿಗಳಿಗೆ ವೇದಾವಿದ್ಯಾಧಿಕಾರವಿಲ್ಲವೆಂದು ಹೇಳಿರುತ್ತಾರೆ. ಅಧಿಕಾರಕ್ಕೆ ಪ್ರಯೋಜಕವಾದ ವಿಶಿಷ್ಟ ಬುದ್ಧಿ ಮೊದಲಾದ ಸಾಮರ್ಥ್ಯವಿಲ್ಲದ ಕಾರಣ ವೇದವಿದ್ಯೆಯಲ್ಲಿ ಅಧಿಕಾರವನ್ನು ಹೇಳಲಾಗದು. ಆದ್ದರಿಂದಲೇ ಕರ್ಮದಲ್ಲಿಯೂ ಅಧಿಕಾರವಿಲ್ಲವೆಂಬುದು ಇವರ ವಾದ.

ಇದು ಸರಿಯಲ್ಲ.

ಏಕೆಂದರೆ ಮಹಾಭಾರತದಲ್ಲಿ ಸ್ಪಷ್ಟವಾಗಿ ಪಕ್ಷಿಗಳಿಗೂ ಕೂಡ ವೇದವಿದ್ಯಾಧಿಕಾರವನ್ನು ವರ್ಣಿಸಲಾಗಿದೆ-

'ಏವಮುಕ್ತೋ ಭ್ರಾತೃಭಿಸ್ತು ಜರಿತಾರಿರ್ವಿಭಾವಸುಮ್ ।
ತುಷ್ಟಾವ ಪ್ರಾಂಜಲಿರ್ಭೂತ್ವಾ ಯತ್ತಚ್ಛೃಣು ನರಾಧಿಪ ॥

ಏಲೈ ! ನರಶ್ರೇಷ್ಠನೇ, ಪಕ್ಷಿಗಳ ಪವಾಡವನ್ನು ಕೇಳು. ದ್ರೋಣ ಮೊದಲಾದ ಸಹೋದರ ಪಕ್ಷಿಗಳು ಜರಿತಾರಿ ಪಕ್ಷಿಯನ್ನು ಕುರಿತು ಹೇಳಿದ ಮೇಲೆ, ಜರಿತಾರಿ ಪಕ್ಷಿಯು ಅಗ್ನಿಯನ್ನು ಸೂಕ್ತದ ಮೂಲಕ ಕೈಮುಗಿದು ಸ್ತೋತ್ರ ಮಾಡುತ್ತದೆ.

ಈ ಶ್ಲೋಕದಿಂದ ಜರಿತಾರಿ, ಸಾರಿಸೃಕ್ಕ, ಸ್ತಂಭಮಿತ್ರ, ದ್ರೋಣ ಎಂಬ ನಾಲ್ಕು ಬಗೆಯ ಪಕ್ಷಿಗಳು 'ಅಯಮಗ್ನೇ ಜರಿತಾ' ಎಂಬ ಆಗ್ನೇಯಸೂಕ್ತದಿಂದ, ಅಗ್ನಿಯನ್ನು ಸ್ತೋತ್ರ ಮಾಡುತ್ತವೆಂದು ಹೇಳಲಾಗಿದೆ.

ಮತ್ತು ಅದೇ ಸಂದರ್ಭದಲ್ಲಿ 'ಸ್ತಂಭಮಿತ್ರಸ್ತಪಃ ಕುರ್ಯಾದ್ ದ್ರೋಣೋ ಬ್ರಹ್ಮವಿದುತ್ತಮಃ' ಸ್ತಂಬಮಿತ್ರಪಕ್ಷಿಯು ತಪಸ್ಸನ್ನು ಆಚರಿಸಿತು. ಬ್ರಹ್ಮಜ್ಞಾನಿಗಳಲ್ಲಿ ದ್ರೋಣ ಪಕ್ಷಿಯೇ ಉತ್ತಮವಾಗಿದೆ ಎಂಬುದಾಗಿ ದ್ರೋಣಾದಿ ಪಕ್ಷಿಗಳಿಗೂ ಬ್ರಹ್ಮಜ್ಞಾನವನ್ನು ಸ್ಪಷ್ಟವಾಗಿ ಹೇಳಲಾಗಿದೆ.

'ಋಷೀನಸ್ಮಾನ್ ಬಾಲಕಾನ್ ಪಾಲಯಸ್ವ' ಋಷಿಗಳಾದ ಬಾಲಕರಾದ ನಮ್ಮನ್ನು ದಯವಿಟ್ಟು ರಕ್ಷಿಸು ಎಂಬುದಾಗಿ ನಾಲ್ಕು ಪಕ್ಷಿಗಳಲ್ಲಿಯೂ ಋಷಿಶಬ್ದದಿಂದ ಮಂತ್ರದ್ರಷ್ಟೃತ್ವವನ್ನು ಹೇಳಲಾಗಿದೆ.

ಮತ್ತು 'ಋಷಿರ್ದ್ರೋಣ ತ್ವಮಸಿ ವೈ ಬ್ರಹ್ಮೈತದ್ವ್ಯಾಹೃತಂ ತ್ವಯಾ' ಎಲೈ ! ಋಷಿಯೆನಿಸಿದ ದ್ರೋಣಪಕ್ಷಿಯೇ ಯಾವಕಾರಣದಿಂದ ನಿನ್ನಿಂದ ವೇದರೂಪವಾದ ಬ್ರಹ್ಮನು ಉಚ್ಚರಿಸಲ್ಪಟ್ಟಿದ್ದಾನೆಯೋ ಎಂಬುದಾಗಿ ವೇದದ ಉಚ್ಚಾರಣೆಯನ್ನು ದ್ರೋಣಪಕ್ಷಿಗೆ ಹೇಳಲಾಗಿದೆ.

'ಅಯಮಷ್ಟೌದ್ವ್ಯೃಚಾಃ ಶಾರ್ಙ್ಗಜರಿತಾದ್ರೋಣಸಾರಿಸೃಕ್ವಸ್ತಂಬಮಿತ್ರಾಶ್ಚ' ಎಂಬುದಾಗಿ ಅನುಕ್ರಮಣಿಕೆದಲ್ಲಿ 'ಅಯಮಗ್ನೇ ಜರಿತಾ' ಎಂಬ ಸೂಕ್ತದಲ್ಲಿ ಈ ಪಕ್ಷಿಗಳು ಈ ಸೂಕ್ತಕ್ಕೆ ಋಷಿಗಳು ಎಂದು ದ್ರೋಣಾದಿ ಪಕ್ಷಿಗಳಿಗೆ ಸ್ಪಷ್ಟವಾಗಿ ಋಷಿತ್ವವನ್ನು ಹೇಳಲಾಗಿದೆ.

ಅಷ್ಟೇ ಅಲ್ಲದೇ ರಾಮಾಯಣಾದಿಗಳಲ್ಲಿಯೂ ಹನುಮಂತ ಮೊದಲಾದ ಕಪಿಗಳಿಗೆ ವೇದಜ್ಞಾನವಿರುತ್ತೆಂದು ವರ್ಣಿಸಲಾಗಿದೆ. ಅಷ್ಟೇ ಅಲ್ಲದೇ ಶೂದ್ರಾದಿಗಳಿಗೆ ಹೇಗೆ ಅಧಿಕಾರವನ್ನು ನಿಷೇಧ ಮಾಡಲಾಗಿದಯೋ, ಅದರಂತೆ ತಿರ್ಯಕ್ ಪ್ರಾಣಿಗಳಿಗೆ ವೇದವಿದ್ಯಾಧಿಕಾರವನ್ನು ನಿಷೇಧ ಮಾಡಿರುವುದಿಲ್ಲ.

ಅರ್ವಾಚೀನವಾದ ತಿರ್ಯಕ್‌ಪ್ರಾಣಿಗಳಿಗೆ ವೇದವಿದ್ಯಾಧಿಕಾರವಿಲ್ಲವೆಂದು ನಾವೂ ಕೂಡ ಅಂಗೀಕರಿದ್ದೇವೆ. ಈ ಅರ್ವಾಚೀನವಾದ ತಿರ್ಯಗ್ ಪ್ರಾಣಿಗಳ ದೃಷ್ಟಾಂತದಿಂದ ಪ್ರಾಚೀನವಾದ ವಿಶಿಷ್ಟವಾದ ಪಕ್ಷಿಗಳಿಗೆ ವೇದವಿದ್ಯಾಧಿಕಾರವನ್ನು ನಿಷೇಧ ಮಾಡುವುದಾದರೆ ಅತಿಪ್ರಸಂಗದೋಷವು ಬರುತ್ತದೆ.

ಅದ್ವೈತಿಗಳು ಹಾಗೂ ರಾಮಾನುಜರು ಎರಡನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನ ಮಾಡುತ್ತಾರೆ - ಇಂದ್ರಾದಿ ದೇವತೆಗಳಿಗೆ ಶರೀರಾದಿಗಳನ್ನು ಒಪ್ಪುವುದಾದರೆ, ಯಾಗಮಾಡುವ ಸಂದರ್ಭದಲ್ಲಿ ಋತ್ವಿಕ್ ಮೊದಲಾದವರ ಸನ್ನಿಧಾನವಿದ್ದಂತೆ ದೇವತೆಗಳ ಸನ್ನಿಧಾನವನ್ನು ಒಪ್ಪಬೇಕಾಗುತ್ತದೆ. ಅಂದರೆ ಋತ್ವಿಕ್ ಮೊದಲಾದವರು ಹೇಗೆ ಕರ್ಮಕ್ಕೆ ಅಂಗರಾಗಿದ್ದಾರೋ, ಅದರಂತೆ ದೇವತೆಗಳೂ ಕೂಡ ಕರ್ಮಾಂಗರಾಗಬೇಕಾಗುತ್ತದೆ. ಇದು ವಿರುದ್ಧ. ಏಕೆಂದರೆ ಒಂದೇ ಸಮಯದಲ್ಲಿ ಇಂದ್ರನನ್ನು ಉದ್ದೇಶಿಸಿ ಮಾಡುವಂತಹ ಯಾಗಗಳು ಅನೇಕವಿರುತ್ತವೆ. ಆ ಎಲ್ಲಾ ಯಾಗಗಳಲ್ಲಿಯೂ ಒಬ್ಬನೇ ಇಂದ್ರನ

ಸನ್ನಿಧಾನವನ್ನು ಹೇಳುವುದು ಅತ್ಯಂತ ಅಯುಕ್ತವಾಗಿದೆ. ಆದ್ದರಿಂದ ವಿರೋಧಃ ಕರ್ಮಣಿ = ಯಜ್ಞಕರ್ಮದಲ್ಲಿ ದೇವತೆಗಳ ಉಪಸ್ಥಿತಿಯು ಸಾಧ್ಯವಿಲ್ಲದ್ದಾಗುತ್ತದೆ ಎಂಬುದು ಪ್ರಶ್ನೆ. ಅನೇಕ ಪ್ರತಿಪತ್ತೇಃ = ದೇವತೆಯು ಒಬ್ಬನೇ ಆಗಿದ್ದರೂ ಅವನಿಗೆ ಅನೇಕ ಶರೀರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವು, ದರ್ಶನಾತ್ = ಶ್ರುತಿ-ಸ್ಮೃತಿಗಳಿಂದ ಸಿದ್ಧವಾಗಿದೆ. ಹೀಗೆ ಸೂತ್ರವನ್ನು ವ್ಯಾಖ್ಯಾನ ಮಾಡುತ್ತಾರೆ.

ಇದು ಸರಿಯಲ್ಲ. ದೇವತೆಗಳಿಗೆ ಶರೀರವಿದ್ದರೆ ಅನೇಕ ಯಜ್ಞಗಳಲ್ಲಿ ಒಟ್ಟಿಗೆ ಹೋಗಲು ಸಾಧ್ಯವಾಗುವುದಿಲ್ಲವೆಂಬ ಪೂರ್ವಪಕ್ಷವೇ ತಪ್ಪು. ಶರೀರವಿದ್ದರೂ ಕೂಡ ಯಜ್ಞಮಂಟಪಕ್ಕೆ ಅವರು ಹೋಗಬೇಕಾಗಿಲ್ಲ. ಇದ್ದಲ್ಲೇ ಇದ್ದು ಅನೇಕರು ಮಾಡುವಂತಹ ಯಾಗದ ಭಾಗವನ್ನು ಸ್ವೀಕರಿಸಬಹುದು. ಆದ್ದರಿಂದ ಕರ್ಮದಲ್ಲಿ ವಿರೋಧಾಶಂಕೆ ಹುಟ್ಟುವುದಿಲ್ಲ.

ಬ್ರಹ್ಮವಿದ್ಯೆಯಲ್ಲಿ ಅಧಿಕಾರವನ್ನು ಹೇಳುವಾಗಲೂ ಕೂಡ ಅಧಿಕಾರಕ್ಕೆ ಪ್ರಯೋಜಕವಾದ ಸಾಮರ್ಥ್ಯಾದಿಗಳಿಗೋಸ್ಕರ ವಿಗ್ರಹಾದಿಗಳು ಅಪೇಕ್ಷಿತವಾಗಿವೆ. ಹೊರತು, ಋತ್ವಿಗಾದಿಗಳಂತೆ ಸನ್ನಿಧಾನವೂ ಅಪೇಕ್ಷಿತವಾಗಿಲ್ಲ.

'ಇಂದ್ರಾಗಚ್ಛ, ಹರಿವ ಆಗಚ್ಛ' ಇತ್ಯಾದಿಯಾಗಿ ಮಂತ್ರದಲ್ಲಿ ಇಂದ್ರಾದಿಗಳ ಆಹ್ವಾನವನ್ನು ಮಾಡಿರುವುದರಿಂದ ಯಜ್ಞಮಂಟಪಕ್ಕೆ ಇಂದ್ರಾದಿಗಳು ಹೋಗಬೇಕಾಗುತ್ತದಲ್ಲವೇ, ಆದ್ದರಿಂದ ವಿರೋಧಾಶಂಕೆಯು ಮಾಡಿದ್ದು ಹೇಗೆ ತಪ್ಪು? ಎಂದು ಪ್ರಶ್ನಿಸಬಾರದು. ಒಂದುವೇಳೆ ಆಹ್ವಾನವು ಆಗಮನಕ್ಕೋಸ್ಕರವೆಂದು ಹೇಳುವುದಾದರೆ, ಅದರಿಂದಲೇ ಅವರಿಗೆ ಶರೀರವು ಸಿದ್ಧವಾಗುತ್ತದೆ. ಹೀಗಿರುವಾಗ ಪೂರ್ವಪಕ್ಷಕ್ಕೆ ಅವಕಾಶವೇ ಇರುವುದಿಲ್ಲ. ಒಂದು ವೇಳೆ ಅದೃಷ್ಟಪ್ರಯೋಜನ-ಕ್ಕೋಸ್ಕರವೆಂದು ಹೇಳುವುದಾದರೆ ಸನ್ನಿಧಾನವು ಸಿದ್ಧವಾಗುವುದಿಲ್ಲ.

ಇದರಿಂದ 'ಕಸ್ಯ ವಾ ದೇವಾ ಯಜ್ಞಮಾಗಚ್ಛಂತಿ' 'ಯಾರ ಯಜ್ಞಕ್ಕೆ ದೇವತೆಗಳು ಬರುತ್ತಾರೆ' ಇತ್ಯಾದಿ ವಾಕ್ಯದಿಂದ ಸನ್ನಿಧಾನವು ಸಿದ್ಧವಾಗುತ್ತದಲ್ಲವೇ? ಎಂಬ ಶಂಕೆಯನ್ನೂ ಕೂಡ ನಿರಾಕರಿಸಿದಂತಾಯಿತು. ಏಕೆಂದರೆ ಇದ್ದಲ್ಲೇ ಇದ್ದು ಹವಿರ್ಭಾಗವನ್ನು ಅವರು ಸ್ವೀಕರಿಸಬಹುದು.

ಮತ್ತು 'ಕಸ್ಯ ವಾ ದೇವಾ' ಎಂಬ ವಾಕ್ಯಗಳಿಂದ ದೇವತೆಗಳ ಆಗಮನವು ಸಿದ್ಧವಾದರೆ ಇದರಿಂದಲೇ ಶರೀರವಿದೆಯೆಂದೂ ಕೂಡ ಸಿದ್ಧವಾಗುತ್ತದೆ. 'ಕಸ್ಯ ವಾ ದೇವಾ' ಎಂಬ ವಾಕ್ಯದಿಂದ ದೇವತೆಗಳ ಆಗಮನವು ಸಿದ್ಧವಾಗದಿದ್ದರೆ, ಕರ್ಮದಲ್ಲಿ ವಿರೆ

ವಿರೋಧಾಶಂಕೆಯೂ ಕೂಡ ಹುಟ್ಟುವುದಿಲ್ಲ. ಹೀಗೆ ಉಳಿದ ಸೂತ್ರಗಳಲ್ಲಿರುವ ಅನುಪಪತ್ತಿಯನ್ನೂ ಕೂಡ ಸ್ವತಃ ಊಹಿಸಿಕೊಳ್ಳಬೇಕು.

ಇಲ್ಲಿಗೆ ದೇವತಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಅಪಶೂದ್ರಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಅಪಶೂದ್ರಾಧಿಕರಣ

ಬ್ರಹ್ಮಸೂತ್ರ

॥ अथ अपशूद्राधिकरणम् ॥

'ಶುಗಸ್ಯ ತದನಾದರಶ್ರವಣಾತ್ತದಾತ್' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – ॥ शुगस्य तदनादरश्रवणात्तदाद्रवणात्सूच्यते ॥ ३४ ॥

ಸೂತ್ರಾರ್ಥ - ಹಂಸಗಳ ತಿರಸ್ಕಾರದ ಮಾತುಗಳಿಂದ ಪೌತ್ರಾಯಣನಿಗೆ ಬಹಳ ದುಃಖವಾಗಿದೆ. ದುಃಖದಿಂದ ಕರಗಿರುವುದರಿಂದಲೇ ರೈಕ್ವ ಮುನಿಯು ಅವನನ್ನು ಶೂದ್ರನೆಂದು ಸಂಬೋಧಿಸಿದ್ದಾನೆ. ರಾಜನಿಗೆ ದುಃಖವಾಗಿದೆ ಎಂಬ ವಿಷಯವು ಎದ್ದಕೂಡಲೇ ರೈಕ್ವಮುನಿಯ ಅನ್ವೇಷಣೆಗಾಗಿ ಸಾರಥಿಯನ್ನು ಆಜ್ಞೆಮಾಡಿದ್ದರಿಂದ ಸೂಚಿತವಾಗಿದೆ.

ಅರ್ಥ -- ಅಸ್ಯ = ಪೌತ್ರಾಯಣನೆಂಬ ರಾಜನಿಗೆ, ತದನಾದರಶ್ರವಣಾತ್ = ಹಂಸಗಳು ಮಾಡಿದ, 'ಕಂ ಉ ಅರೆ ಏನಂ' ಮುಂತಾದ ತಿರಸ್ಕಾರದ ಮಾತುಗಳನ್ನು ಕೇಳಿರುವ ಕಾರಣದಿಂದ, ಶುಕ್ = ರಾಜನಿಗೆ ದುಃಖ ಉಂಟಾಗಿದೆ ಎಂದು ನಮಗೆ ಹೇಗೆ ತಿಳಿಯುತ್ತದೆ? ಎಂದರೆ, ಸೂಚ್ಯತೇ ಹಿ = ಯಾವ ಕಾರಣದಿಂದ ಆ ರಾಜನು, ಸ ಹ ಸಂಜಿಹಾನ ಏವ = ಹಾಸಿಗೆಯಿಂದ ಎದ್ದ ಕೂಡಲೇ ರಾಜನು ಸಾರಥಿಯನ್ನು ಕುರಿತು ಹೇಳಿದನು ಎಂಬ ಮುಂದಿನ ವಾಕ್ಯದಿಂದ ರಾಜನ ವ್ಯಗ್ರತೆಯು ಸೂಚಿತವಾಗಿದೆ. ಈ ಕಾರಣದಿಂದಲೇ ರಾಜನಿಗೆ ಶೋಕ

ಉಂಟಾಗಿದೆ. ಈ ದುಃಖದಿಂದ ಕರಗಿರುವುದರಿಂದಲೇ ರಾಜನು ರೈಕ್ವಮುನಿಯಿಂದ ಶೂದ್ರನೆಂದು ಸಂಬೋಧಿಸಲ್ಪಟ್ಟದ್ದಾನೆ ಹೊರತು ನೀಚಜಾತಿಯವನು ಎಂಬ ಕಾರಣದಿಂದಲ್ಲ. ಹೀಗೆ ಛಾಂದೋಗ್ಯ ಉಪನಿಷತ್ತಿನ ಆಧಾರದಿಂದ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲವೆಂದು ತಿಳಿಯಬೇಕು.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಶೂದ್ರರಿಗೆ ವೇದಾಧಿಕಾರ ಇದೆಯಲ್ಲವೇ ?

ब्रह्मसूत्रभाष्यम्—मनुष्याधिकारत्वादित्युक्तेऽविशेषाच्छूद्रस्यापि 'अहहारेत्वा शूद्र' (छा. ४-२-३.) इति पौत्रायणोक्तेरधिकार इति ।.

ಅನುವಾದ - ವಾಮನಾಧಿಕರಣದ ಕೊನೆಯ ಸೂತ್ರದಲ್ಲಿ ಮನುಷ್ಯರಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವನ್ನು ಹೇಳಿದರು. ಹಾಗಾದಲ್ಲಿ, ಶೂದ್ರರೂ ಕೂಡ ಮನುಷ್ಯರಾದ್ದರಿಂದ, ಬ್ರಹ್ಮವಿದ್ಯೆಯಲ್ಲಿ ಇವರಿಗೂ ಅಧಿಕಾರವನ್ನು ಹೇಳಬೇಕಲ್ಲವೆ? ಮತ್ತು 'ಅಹ ಹಾರೇತ್ವಾ ಶೂದ್ರ' ಎಂಬುದಾಗಿ ಪೌತ್ರಾಯಣನನ್ನು ರೈಕ್ವ ಋಷಿಗಳು 'ಎಲೈ ಶೂದ್ರನೇ !' ಎಂದು ಸಂಬೋಧನೆ ಮಾಡಿದ್ದರಿಂದಲೂ ಶೂದ್ರರಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿದೆಯಲ್ಲವೇ?

ಪ್ರತಿಪದಾರ್ಥ -- ಶೂದ್ರರಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿದೆಯೆಂಬುದನ್ನು ಈ ಅಧಿಕರಣವು ನಿರಾಕರಣೆ ಮಾಡುತ್ತಿದೆ. ಪ್ರಾಸಂಗಿಕವಾಗಿ, ಈ ಅಧಿಕರಣ ಹೊರಟಿದ್ದರಿಂದ ಅಧ್ಯಾಯಸಂಗತಿಯನ್ನಾಗಲಿ ಪಾದಸಂಗತಿಯನ್ನಾಗಲಿ ಅನ್ವೇಷಣ ಮಾಡಬೇಕಾಗಿಲ್ಲ. ಆದರೆ, ಶ್ರುತಿಸಂಗತಿ, ಅಧಿಕರಣಸಂಗತಿಗಳು, ವಿಷಯಾದಿಗಳು ಕೂಡ ಇರುತ್ತವೆಂದು ಹೇಳುತ್ತಿದ್ದಾರೆ –

ಮನುಷ್ಯಾಧಿಕಾರತ್ವಾತ್ = ವೇದವಿದ್ಯೆಯಲ್ಲಿ ಮನುಷ್ಯರಿಗೆ ಅಧಿಕಾರವಿರುವುದರಿಂದ, ಇತ್ಯುಕ್ತೇ = ಹೀಗೆ ವಾಮನಾಧಿಕರಣದ ಕೊನೆಯ ಸೂತ್ರದಲ್ಲಿ ಹೇಳಿದ್ದರಿಂದ, ಅವಿಶೇಷಾತ್ = ಮನುಷ್ಯತ್ವವು ಶೂದ್ರರಲ್ಲಿಯೂ ಸಮಾನವಾದ ಕಾರಣ, ಶೂದ್ರಸ್ಯಾಪಿ = ಶೂದ್ರನಿಗೂ

ಕೂಡ ವೇದವಿದ್ಯೆಯಲ್ಲಿ ಅಧಿಕಾರವಿರುತ್ತದೆ. ಮತ್ತು, ಅಹ ಹಾರೇತ್ವಾ ಶೂದ್ರ ಇತಿ = ಛಾಂದೋಗ್ಯಶ್ರುತಿಯಲ್ಲಿ 'ಎಲೈ ಶೂದ್ರನೇ!' ಎಂದು ಪೌತ್ರಾಯಣೋಕ್ತೇಃ = ಪೌತ್ರಾಯಣರಾಜನನ್ನು ಸಂಬೋಧನೆ ಮಾಡಿದ್ದರಿಂದ, ಅಧಿಕಾರಃ = ವೇದವಿದ್ಯಾಧಿಕಾರವು ಶೂದ್ರರಿಗೂ ಕೂಡ ಇರುತ್ತದೆ. ಇತಿ = ಹೀಗೆಂದರೆ,

ಶೂದ್ರರಿಗೆ ವೇದಾಧಿಕಾರವಿಲ್ಲ

ब्रह्मसूत्रभाष्यम् — अत आह —

।। शुगस्य तदनादरश्रवणात्तदाद्रवणात्सूच्यते हि ।।

नासौ पौत्रायणश्शूद्रः शुचाऽऽद्रवणमेव शूद्रत्वम् ।

ಅನುವಾದ - ಈ ಆಕ್ಷೇಪಕ್ಕೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ. ಪೌತ್ರಾಯಣನು ಶೂದ್ರಜಾತಿಯವನಲ್ಲ. ಹೊರತಾಗಿ, ಶೋಕಪೂರ್ಣನಾಗಿ ಋಷಿಯ ಬಳಿ ಬಂದಿದ್ದರಿಂದ ಶೂದ್ರ ಎಂದು ಸಂಬೋಧಿಸಿದ್ದಾರೆ.

ಪ್ರತಿಪದಾರ್ಥ -- ಸಿದ್ಧಾಂತ ಸ್ಥಾಪನೆಗಾಗಿ ಸೂತ್ರ ಹೊರಟಿದೆ –

ಅತಃ ಆಹ = ಈ ಆಕ್ಷೇಪಕ್ಕೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ, ಅಸೌ ಪೌತ್ರಾಯಣಃ = ಈ ಪೌತ್ರಾಯಣನು, ನ ಶೂದ್ರಃ = ಶೂದ್ರಜಾತಿಯವನಲ್ಲ. ಏಕೆಂದರೆ, ಶುಚಾ = ಶೋಕಪೂರ್ಣನಾಗಿ, ಆದ್ರವಣಮೇವ = ಓಡಿ ಬಂದವನಾದ ಕಾರಣದಿಂದಲೇ, ಶೂದ್ರತ್ವಂ = ಶೂದ್ರ ಎಂದು ಸಂಬೋಧನೆ ಮಾಡಿದ್ದಾರೆ.

ಜಾನಶ್ರುತಿರಾಜನು ಏಕೆ ಶೂದ್ರನಾದ ?

ब्रह्मसूत्रभाष्यम् — 'कम्वर एनमेतत्सन्तम्' (छा. ४-१-३.) इत्यनादरश्रवणात्।

ಅನುವಾದ - 'ಕಂ ವರ' ಇತ್ಯಾದಿಯಾಗಿ ಹಂಸ ಪಕ್ಷಿಗಳು ರಾಜನ ಬಗ್ಗೆ ತಿರಸ್ಕಾರದ ಮಾತುಗಳನ್ನಾಡಿದ್ದರಿಂದ ಅವನಿಗೆ ಶೋಕವುಂಟಾಗಿದೆ.

ಪ್ರತಿಪದಾರ್ಥ -- ಯಾವ ಕಾರಣದಿಂದ ರಾಜನಿಗೆ ಶೋಕವಾಯಿತು? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ –

ಅರೇ = ಎಲೈ ಹಂಸಪಕ್ಷಿಯೇ, ಕಂ ಏನಂ = ಯಾವ ರಾಜನನ್ನು ಕುರಿತು, ಆಹ = ಹೇಳುತ್ತಿದ್ದೀಯೋ, ಸಂತಂ ಸಯುಗ್ಯಾನಂ = ಸಜ್ಜನನಾದ ಗಾಡಿಯ ಕೆಳಗೆ ಇರುವ ರೈಕ್ವನ ಮುಂದೆ ಇವನೆಲ್ಲಿ? ಎಂಬುದಾಗಿ, ಅನಾದರಶ್ರವಣಾತ್ = ಹಂಸಪಕ್ಷಿಯು ತನ್ನ ಬಗ್ಗೆ ಆಡಿದ ತಿರಸ್ಕಾರದ ಮಾತನ್ನು ಪೌತ್ರಾಯಣನು ಕೇಳಿದ್ದರಿಂದ.

ಹಂಸಪಕ್ಷಿಗಳ ಮಾತು ಕೇಳಿ ಶೂದ್ರನಾದನು

ब्रह्मसूत्रभाष्यम् – 'स ह संजिहान एव क्षत्तारमुवाच' (छा. ४-१-५.) इति सूच्यते हि ॥३४॥

ಅನುವಾದ - 'ಸಃ ಸಂಜಿಹಾನ ಏವ' ಎಂಬ ವಾಕ್ಯವನ್ನು ಕೇಳಿ ರಾಜನಿಗೆ ಶೋಕವುಂಟಾಗಿದೆ ಎಂದು ಸೂಚಿತವಾಗಿದೆ.

ಪ್ರತಿಪದಾರ್ಥ -- ಅನಾದರದ ಮಾತುಗಳನ್ನು ಕೇಳಿದ ಮಾತ್ರಕ್ಕೆ ರಾಜನಿಗೆ ಏಕೆ ಶೋಕವುಂಟಾಯಿತು? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ–

ಸಃ = ಆ ಪೌತ್ರಾಯಣನು, ಸಂಜಿಹಾನ ಏವ = ಹಾಸಿಗೆಯಿಂದ ಎದ್ದ ಕೂಡಲೇ, ಕ್ಷತ್ತಾರಂ = ಸಾರಥಿಯನ್ನು ಕುರಿತು, ಉವಾಚ = ಹೇಳಿದನು. ಇತಿ = ಈ ಮಾತಿನಿಂದ, ಸೂಚ್ಯತೇ ಹಿ = ರಾಜನಿಗೆ ದುಃಖವಾಗಿದೆ ಎಂಬುದು ಸೂಚಿತವಾಗಿದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಶೂದ್ರನೂ ಸಹ ಮನುಷ್ಯರಲ್ಲವೇ ?

सत्तर्कदीपावलिः –

।। शुगस्य तदनादरश्रवणात्तदाद्रवणात्सूच्यते ।।

ननु यदि वेदविद्याधिकारिणो मनुष्यत्वविशेषणेऽपि देवानां विशिष्टबुद्ध्यादि-भावेनाधिकारसम्भवान्निषेधाभावाच्च, न तत्र नाधिकारः तद्धीनतिर्यगादिवत् । तर्ह्यनेन न्यायेन शूद्राणां सुतराम् अधिकारः मनुष्यत्वाविशेषात् ।

ಹಿಂದಿನ ಅಧಿಕರಣದಲ್ಲಿ ಮನುಷ್ಯರು ಮಾತ್ರ ವೇದವಿದ್ಯೆಯಲ್ಲಿ ಅಧಿಕಾರಿಗಳು. ಆದರೂ ಸಹ ವಿಶಿಷ್ಟಬುದ್ಧಿಯನ್ನು ಹೊಂದಿರುವ ಪ್ರಯುಕ್ತ ದೇವತೆಗಳಿಗೆ ಅಧಿಕಾರವಿರುತ್ತದೆ. ಮತ್ತು ದೇವತೆಗಳು ಬ್ರಹ್ಮವಿದ್ಯೆಯಲ್ಲಿ ಅಧಿಕಾರಗಳಾಗುವುದಿಲ್ಲವೆನ್ನಲು ಯಾವುದೇ ನಿಷೇಧ-ಪ್ರಮಾಣಗಳಿರುವುದಿಲ್ಲ. ಆದ್ದರಿಂದ, ಹೇಗೆ ತಿರ್ಯಗಾದಿ ಪ್ರಾಣಿಗಳಿಗೆ ಮತ್ತು ಶೂದ್ರಾದಿ ಜನರಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲವೋ, ಅದರಂತೆಯೇ ದೇವತೆಗಳಿಗೆ ಅಧಿಕಾರವಿಲ್ಲವೆಂದು ಹೇಳಲಾಗದು, ಎಂದು ಸಮರ್ಥಿಸಲಾಯಿತು. ಹಾಗಾದರೆ, ಇದೇ ನ್ಯಾಯದಿಂದ ಶೂದ್ರರಿಗೂ ವೇದವಿದ್ಯೆಯಲ್ಲಿ ಅಧಿಕಾರವನ್ನು ಒಪ್ಪಬೇಕಾಗುತ್ತದೆ. ಏಕೆಂದರೆ, ಮನುಷ್ಯರು ಅಧಿಕಾರಗಳೆಂದ ಮೇಲೆ, ಶೂದ್ರರೂ ಸಹ ಮನುಷ್ಯರೇ ಆಗಿರುವುದರಿಂದ, ವೇದವಿದ್ಯೆಯಲ್ಲಿ ಅವರಿಗೆ ಏಕೆ ಅಧಿಕಾರವನ್ನು ಒಪ್ಪಬಾರದು?

ಶೂದ್ರ-ಪೌತ್ರಾಯಣನಿಗೇಕೆ ಅಧಿಕಾರ ?

सत्तर्कदीपावलिः – यदि निषिद्धस्तेषां तर्हि किमर्थं वैदिकाग्रणी रैकः शूद्रं पौत्रायणं वेदविद्यां श्रावयेत् । नचासावशूद्रः शूद्र इति तेन सम्बोधनादिति भावेनाशङ्क्यैतां परिहरत्सूत्रमुपन्यस्य व्याचष्टे – मनुष्येत्यादिना ।।

ಒಂದು ವೇಳೆ ಶೂದ್ರರಿಗೆ ವೇದವಿದ್ಯೆಯಲ್ಲಿ ಅಧಿಕಾರವನ್ನು ನಿಷೇಧ ಮಾಡುವುದಾದರೆ, ವೇದವಿದ್ಯೆಯಲ್ಲಿ ಅಗ್ರೇಸರರಾದ ರೈಕ್ವ ಮುನಿಗಳು ಶೂದ್ರನಾದ ಪೌತ್ರಾಯಣನಿಗೆ ವೇದವಿದ್ಯೋಪದೇಶವನ್ನು ಏಕೆ ಮಾಡುತ್ತಿದ್ದರು? ಪೌತ್ರಾಯಣನು ಶೂದ್ರನೇ ಅಲ್ಲವೆಂದು ಹೇಳಬಾರದು. ಏಕೆಂದರೆ, 'ಎಲೈ ಶೂದ್ರನೇ' ಎಂದು ರೈಕ್ವರು ಸಂಬೋಧನೆ ಮಾಡಿದ್ದಾರೆ. ಈ ಆಶಂಕೆಗೆ ಪರಿಹಾರ ನೀಡುವ ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ, 'ಮನುಷ್ಯ' ಇತ್ಯಾದಿ ಭಾಷ್ಯದಿಂದ.

ಪೌತ್ರಾಯಣನು ಶೂದ್ರನಲ್ಲ; ಕ್ಷತ್ರಿಯ

सत्तर्कदीपावलिः – अहेति सम्बोधनम् । हारो विष्णुः उरो भूषणं इत्वा रथः तदुभयं हि गोभिः सह तेनोपनीतम् । न पौत्रायणः चतुर्थवर्णः, किन्तु 'सन्तमुत्तमं सयुग्मानं रैकं प्रतीवकम्वेनम् एतद्वचनं आत्थ' इति हंसोक्तानाद रश्रवणादतिशोकोपहतत्वच्छूद्रेत्युक्तः । शोकाभावे शयनात् सञ्जिहान एव स कथं रैकान्वेषणे क्षत्तारं नियुञ्ज्यादित्यर्थः ।।

ಶ್ರುತಿಯಲ್ಲಿರುವ 'ಅಹ' ಎಂಬ ಪದವು 'ಎಲೈ' ಎಂಬ ಸಂಬೋಧನಾರ್ಥದಲ್ಲಿದೆ. ಪೌತ್ರಾಯಣನು ತಂದಿರುವಂತಹ ಮುತ್ತಿನ ಸರ, ರಥ ಇವುಗಳನ್ನೆಲ್ಲ ದೂರದಲ್ಲೇ ಬಿಡು. ಎಂದು ಶ್ರುತಿಯ ಅಭಿಪ್ರಾಯ.

ಪ್ರೌತಾಯಣ ರಾಜನು ಶೂದ್ರನಲ್ಲ. ಹೊರತಾಗಿ, 'ಸಂತಮುತ್ತಮಂ ಸಯುಗ್ಮಾನಂ ರೈಕ್ವಂ ಪ್ರತೀವಕಮ್ವೇನಂ ಏತದ್ವಚನಂ ಆತ್ಥ' ಎಂಬುದಾಗಿ ಹಂಸಗಳ ಸಂವಾದದಿಂದ ತಿರಸ್ಕೃತನಾಗಿ ಅತ್ಯಂತ ಶೋಕಪೀಡಿತನಾಗಿದ್ದಾನೆ. ಆದ್ದರಿಂದ 'ಶೂದ್ರ' ಎಂದು ರೈಕ್ವರು ಸಂಬೋಧನೆ

ಮಾಡುತ್ತಿದ್ದಾರೆ. ಒಂದು ವೇಳೆ ಪೌತ್ರಾಯಣ ರಾಜನಿಗೆ ದುಃಖವೇ ಆಗದಿದ್ದಲ್ಲಿ, ಎದ್ದ ಕೂಡಲೇ ರೈಕ್ವ ಮುನಿಗಳನ್ನು ಹುಡುಕಿಕೊಂಡು ಬಾ ಎಂಬುದಾಗಿ ಸಾರಥಿಯನ್ನು ಏಕೆ ಆದೇಶ ಮಾಡುತ್ತಿದ್ದನು. ಆದ್ದರಿಂದ, ಶೋಕಪೀಡಿತನಾಗಿದ್ದಾನೆಂದು ಸಿದ್ಧವಾಗುತ್ತದೆ. ಇಂತಹ ಶೋಕಪೀಡಿತನಾದ ಪೌತ್ರಾಯಣನು ಶೂದ್ರನೆಂದು ಕರೆಸಿಕೊಂಡಿದ್ದಾನೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ವಾಮನಾಧಿಕರಣದಲ್ಲಿ ಶೂದ್ರರಿಗೆ ವೇದವಿದ್ಯಾಧಿಕಾರ ಹೇಳಿದೆಯೇ ?

तत्वप्रदीपः – 'मनुष्याधिकारत्वात्' इत्युक्ते शूद्रस्यापि वेदविद्यायामधिकारः स्यात् । शूद्रस्यापि मनुष्यत्वाविशेषात् । ''अह हारेत्वा शूद्र तवैव सह गोभिरस्तु'' इति पौत्रायणं प्रति रैक्स्योक्तेश्च । पौत्रायणं वेदविद्यां श्रावयिष्यन्नेव हि रैकः शूद्रशब्देन सम्बोधयामास । अह शूद्र हार इत्वा च गोभिः सह तवैवास्तु इति । इत्वा = शकटः ।

ಹಿಂದಿನ ವಾಮನಾಧಿಕರಣದಲ್ಲಿ 'ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್' ಎಂಬ ಸೂತ್ರದಲ್ಲಿ ಮನುಷ್ಯಸಾಮಾನ್ಯರು ವೇದವಿದ್ಯೆಗೆ ಅಧಿಕಾರಿಗಳಾಗಿದ್ದಾರೆ ಎಂದು ಹೇಳಲಾಯಿತು. ಮನುಷ್ಯಸಾಮಾನ್ಯರಲ್ಲಿ ಶೂದ್ರನೂ ಕೂಡ ಸೇರುವುದರಿಂದ ಅರ್ಥಾತ್ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವನ್ನು ಹೇಳಿದಂತಾಗುತ್ತದೆ. ಮತ್ತು ಛಾಂದೋಗ್ಯೋಪನಿಷತ್ತಿನ ನಾಕನೆಯ ಅಧ್ಯಾಯದಲ್ಲಿ ಜಾನಶ್ರುತಿಯ ಉಪಾಖ್ಯಾನದಲ್ಲಿ ರೈಕ್ವಋಷಿಯು ಪೌತ್ರಾಯಣನನ್ನುಕುರಿತು 'ಅಹ ಹಾರೇತ್ವಾ ಶೂದ್ರ ತವೈವ ಸಹ ಗೋಭಿರಸ್ತು' ಓ ಶೂದ್ರನೇ ! ಈ ಗೋವುಗಳ ಜೊತೆಗೆ ಮುತ್ತಿನ ಸರ, ರಥ ಎಲ್ಲವನ್ನೂ ತೆಗೆದುಕೊಂಡು ಹಿಂತಿರುಗು. ನನಗೆ ಯಾವುದೂ ಬೇಡ' ಎಂಬುದಾಗಿ ಹೇಳಿದ್ದಾರೆ. ಪೌತ್ರಾಯಣನಿಗೆ ವೇದವಿದ್ಯೆಯನ್ನು ಕೇಳಿಸುವ ಮೂಲಕವೇ

ರೈಕ್ವಋಷಿಯು ''ಎಲೈ ಶೂದ್ರನೇ! ಎಂದು ಸಂಬೋಧನೆಯನ್ನು ಮಾಡಿದ್ದಾರೆ. ಅಹ = ಎಲೈ, ಶೂದ್ರ = ಶೂದ್ರನೇ ! ಹಾರ = ಮುತ್ತಿನಸರವು, ಇತ್ಯಾ ಚ = ಬಂಡಿಯು, ಗೋಭಿಃ ಸಹ = ಹಸುಗಳ ಜೊತೆಗೆ, ತವೈವಾಸ್ತು = ನಿನಗೇ ಇರಲಿ ಎಂಬುದಾಗಿ.

ವಿವರಣೆ - ವಾಮನಾಧಿಕರಣದ ಕೊನೆಯ ಸೂತ್ರದಲ್ಲಿ ಮನುಷ್ಯಸಾಮಾನ್ಯರು ವೇದವಿದ್ಯೆಗೆ ಅಧಿಕಾರಿಗಳಾಗಿದ್ದಾರೆಂದು ಹೇಳಲಾಯಿತು. ಹಾಗಾದರೆ ಶೂದ್ರನೂ ಕೂಡ ವೇದವಿದ್ಯೆಗೆ ಅಧಿಕಾರನಾಗುತ್ತಾನೆಂಬುದು ಸೂತ್ರಕಾರರಿಗೆ ಸಮ್ಮತವೆಂದು ತಿಳಿಯುತ್ತದೆ.

ಇಷ್ಟೇ ಅಲ್ಲದೇ ಛಾಂದೋಗ್ಯೋಪನಿಷತ್ತಿನಲ್ಲಿ ಶೂದ್ರರಿಗೂ ವೇದವಿದ್ಯಾಧಿಕಾರವಿದೆಯೆಂದು ಸ್ಪಷ್ಟವಾಗಿ ಹೇಳಲಾಗಿದೆ. ನಾಕನೆಯ ಅಧ್ಯಾಯದ ಜಾನಶ್ರುತಿಯ ಉಪಾಖ್ಯಾನದಲ್ಲಿ ರೈಕ್ವಮುನಿಗಳು ಪೌತ್ರಾಯಣನಿಗೆ ವೇದವಿದ್ಯೆಯನ್ನು ಉಪದೇಶ ಮಾಡಿದ್ದಾರೆ. ಆದ್ದರಿಂದ ವೇದವಿದ್ಯೆಯ-ಶ್ರವಣ-ಮನನಾದಿಗಳಲ್ಲಿ ಶೂದ್ರರಿಗೂ ಕೂಡ ಅಧಿಕಾರವಿದೆ ಇಷ್ಟು ಈ ಅಧಿಕರಣದ ಪೂರ್ವಪಕ್ಷ.

ತ್ರೈವರ್ಣಿಕರಿಗೆ ಮಾತ್ರ ವೇದವಿದ್ಯೆಯಲ್ಲಿ ಅಧಿಕಾರವಿದೆ. ಪೌತ್ರಾಯಣನು ಕ್ಷತ್ರಿಯನು ಹೊರತು, ಶೂದ್ರನಲ್ಲ. ರೈಕ್ವಮುನಿಯು ಪೌತ್ರಾಯಣನನ್ನು ಶೂದ್ರ ಎಂಬುದಾಗಿ ಸಂಬೋಧಿಸಿದ್ದು ಜಾತಿನಿಮಿತ್ತದಿಂದ ಅಲ್ಲ ಹೊರತು, ಶೋಕದಿಂದ ಸಂತಪ್ತನಾಗಿದ್ದಾನೆ ಎಂಬ ದೃಷ್ಟಿಯಿಂದ. ಇಷ್ಟು ಅಧಿಕರಣ ಸಿದ್ಧಾಂತ.

ವಿಶೇಷವಿಚಾರ - ಪ್ರಾಸಂಗಿಕವಾಗಿ ಛಾಂದೋಗ್ಯೋಪನಿಷತ್ತಿನ ನಾಕನೆಯ ಅಧ್ಯಾಯದ ಪ್ರಾರಂಭದಲ್ಲಿ ಬರುವ ಜಾನಶ್ರುತಿಯ ಉಪಾಖ್ಯಾನ ಹೀಗಿದೆ -

ಜಾನಶ್ರುತಿರ್ಹ ಪೌತ್ರಾಯಣಃ ಶ್ರದ್ಧಾದೇಯೋ ಬಹುದಾಯೀ ಬಹುಪಾಕ್ಯ ಆಸ। ಸ ಹ ಸರ್ವತ ಆವಸಥಾನ್ ಮಾಪಯಾಂಚಕ್ರೇ ಸರ್ವತ ಏವ ಮೇಽತ್ಸ್ಯಂತೀತಿ।

ಪುತ್ರಾಯಣನ ಗೋತ್ರೋತ್ಪನ್ನನೂ, ಜನಶ್ರುತಿಯ ಮಗನೂ ಆದ ಜಾನ ಶ್ರುತಿಯು ಶ್ರದ್ಧೆಯಿಂದ ದಾನಮಾಡುವವನೂ, ಯಥೇಷ್ಟ ದಾನ ಮಾಡುವವನೂ ಆಗಿದ್ದ. ಅನ್ನಾರ್ಥಿಗಳಿಗಾಗಿ ಬಹಳ ಅಡುಗೆ ಮಾಡಿಸುವವನೂ ಆಗಿದ್ದ. ಗೋದಾವರೀ ತೀರದ ಪ್ರತಿಷ್ಠಾನಪುರದ ಅರಸನಾಗಿದ್ದ. ಅವನು 'ಎಲ್ಲಕಡೆಯಿಂದ ಜನರು ಬಂದು ವಾಸಮಾಡಿ ನಾನು ನೀಡುವ ಅನ್ನ ಉಣಲಿ' ಎಂಬ ಉದ್ದೇಶದಿಂದ ಎಲ್ಲೆಡೆ ಗ್ರಾಮ-ನಗರಗಳಲ್ಲಿ ಮನಗೆಳನ್ನು ನಿರ್ಮಿಸಿದ.

ಅಥ ಹ ಹಂಸಾ ನಿಶಾಯಾಮತಿಪೇತು । ತದ್ಧ್ಯವಂ ಹಂಸೋ ಹಂಸಮಭ್ಯುವಾದ । ಹೋಹೋಯಿ ಭಲ್ಲಾಕ್ಷ ಭಲ್ಲಾಕ್ಷ । ಜಾನುಶ್ರುತೇಃ ಪೌತ್ರಾಯಣಸ್ಯ ಸಮಂ ದಿವಾ ಜ್ಯೋತಿರಾತತಂ ತನ್ಮಾ ಪಸಾಂಕ್ಷೀಃ । ತತ್ ತ್ವಾಮಾ ಪ್ರಧಾಕ್ಷೀಃ ಇತಿ ।

ಒಂದು ದಿನ ಜಾನಶ್ರುತಿಯು ರಾತ್ರಿಯಲ್ಲಿ ಬಹು ಎತ್ತರದ ಮಹಡಿಯ ಮೇಲೆ ಮಲಗಿರುವಾಗ ದೇವ ಹಂಸಗಳು ಆಕಾಶಮಾರ್ಗದಲ್ಲಿ ಹೊರಟವು. ಅವುಗಳಲ್ಲಿ ಕೆಲವು ವೇಗವಾಗಿ ಮುಂದೆ ಹೋದುವು. ಆಗ ಹಿಂದಿನಿಂದ ಬರುತ್ತಿದ್ದ ಹಂಸಗಳು ಮುಂದೆ ಹಾರುತ್ತಿದ್ದ ಹಂಸಗಳಿಗೆ ಈ ರೀತಿ ಹೇಳಿದುವು - 'ಏ ಕುರುಡರೇ ಕುರುಡರೇ, ಪೌತ್ರಾಯಣ ಜಾನಶ್ರುತಿಯು ನಡೆಸುತ್ತಿರುವ ದೀಪಾರಾಧನೆಯ ಬೆಳಕು ಹಗಲಿನ ಪ್ರಕಾಶದಂತೆ ಎಲ್ಲೆಡೆ ಹರಡಿರುವುದನ್ನು ಕಾಣಲಾರಿರಾ ? ಆ ದೀಪಜ್ವಾಲೆ ನಿಮ್ಮ ಮೈಗೆ ತಗಲೀತು. ಮೈ ಸುಟ್ಟೀತು ಜೋಕೆ !'

ಭಲ್ಲಾಕ್ಷ ಮಂದಾಕ್ಷ!

ಭಲ್ಲಾಕ್ಷ ಎಂದರೆ ಮಂದದೃಷ್ಟಿಯವನೇ ಎಂದರ್ಥ.

ತಮು ಹ ಪರಃ ಪ್ರತ್ಯುವಾಚ - ಕಮ್ವರ ಏನಮೇತತ್ ಸಂತಂ ಸಯುಗ್ವಾನಮಿವ ರೈಕ್ವಮಾತ್ಥ ಇತಿ । ಯೇನು ಕಥಂ ಸಯುಗ್ವಾ ರೈಕ್ವ ಇತಿ ।

ಈ ಮಾತಿಗೆ, ಮುಂದೆ ಹಾರುತ್ತಿದ್ದ ಹಂಸಗಳು ಹೀಗೆ ಪ್ರತಿಯಾಗಿ ಹೇಳಿದವು - 'ಏ ಹಂಸಗಳೇ ಈ ಜಾನಶ್ರುತಿ ಯಾವ ಮಹತ್ವದವನೆಂದು, ಬಂಡಿಯ ಕೆಳಗಿರುವ ರೈಕ್ವನ ಬಗ್ಗೆ ಹೇಳಬೇಕಾದ ಮಾತನ್ನು ಇವನ ಬಗ್ಗೆ ಹೇಳುತ್ತಿರುವಿರಿ ?' ಆಗ ಮೊದಲಿನ ಹಂಸಗಳು ಕೇಳಿದವು 'ಈಗ ನೀವು ಹೇಳಿದ ರೈಕ್ವ ಎಂಥ ಪ್ರಭಾವದವನು ?' ಎಂದು.

ಯಥಾ ಕೃತಾಯ ವಿಜಿತಾಯ ಆಧರೇಯಾಃ ಸಂಯಂತಿ ಏವಮೇನಂ ಸರ್ವಂ ತದಭಿಸಮೇತಿ ಯತ್ ಕಿಂಚ ಪ್ರಜಾಃ ಸಾಧು ಕುರ್ವಂತಿ । ಯಸ್ತದ್ವೇದ ಯತ್ ಸ ವೇದ। ಸರ್ವಂ ಸ ಮಯಾ ಏತದುಕ್ತ ಇತಿ ।

ಈ ಪ್ರಶ್ನೆಗೆ ಉತ್ತರ - ಸತ್ಕರ್ಮಾಚರಣೆಯಿಂದ ಕೃತಯುಗವನ್ನು ಗೆದ್ದವನಿಗೆ ಹೇಗೆ ತ್ರೇತಾದಿಯುಗಗಳನ್ನು ಜಯಿಸಿದ ಫಲವು ಬರುವುದೋ ಅದರಂತೆ, ಪ್ರಜೆಗಳು ಮಾಡಿದ ಎಲ್ಲ ಸತ್ಕರ್ಮಗಳ ಫಲವೂ ರೈಕ್ವನಿಗೆ ಬರುತ್ತದೆ. ಯಾರು ಯಾರು ಏನೇನನ್ನು ತಿಳಿದಿರುವರೋ ಅದೆಲ್ಲವನ್ನೂ ರೈಕ್ವನು ತಿಳಿದಿದ್ದಾನೆ. ನಾನು ಪ್ರಸ್ತಾಪಿಸಿದ ರೈಕ್ವ ಇಂಥ ಪ್ರಭಾವ ಉಳ್ಳವನು' ಎಂದು ಎರಡನೆಯ ಹಂಸ ಉತ್ತರಿಸಿತು.

ಯಥಾ ಕೃತೇ ಜಿತೇ ತ್ರೇತಾದಿಯುಗಜಯಫಲಂ ಚ ತಸ್ಯೈವ ಭವತಿ ಏವಮನ್ಯೇಷಾಂ ಪುಣ್ಯಫಲಂ ಪ್ರಾಧಾನ್ಯೇನ ತಸ್ಯೈವ ಭವತಿ।

'ಯಥಾ ಕೃತಾಯ' ಇತ್ಯಾದಿ ವಾಕ್ಯಕ್ಕೆ, ಕೃತಯುಗವನ್ನು ಜಯಿಸಿದವನಿಗೆ ತ್ರೇತಾಯುಗಜಯದ ಫಲವು ದೊರಕುವಂತೆ, ಬೇರೆಯವರು ಮಾಡಿದ ಪುಣ್ಯಕರ್ಮದ ಫಲವು ಪ್ರಧಾನವಾಗಿ ರೈಕ್ವನಿಗೆ ಸಿಗುವುದು ಎಂದರ್ಥ.

ತದು ಹ ಜಾನುಶ್ರುತಿಃ ಪೌತ್ರಾಯಣಃ ಉಪಶುಶ್ರಾವ । ಸ ಹ ಸಂಜಿಹಾನ ಏವ ಕ್ಷತ್ತಾರಮುವಾಚ - ಅಂಗ ಅರೇ ಹ । ಸಯುಗ್ವಾನಮಿವ ರೈಕ್ವಮಾತ್ಥೇತಿ । ಯೋ ನು ಕಥಂ ಸಯುಗ್ವಾ ರೈಕ್ವ ಇತಿ । ಯಥಾ ಕೃತಾಯ ವಿಜಿತಾಯಾಧರೇಯಾಃ ಸಂಯಂತಿ ಏವಮೇನಂ ಸರ್ವಂ ತದಭಿಸಮೇತಿ ಯತ್ ಕಿಂಚ ಪ್ರಜಾಃ ಸಾಧು ಕುರ್ವಂತಿ । ಯಸ್ತದ್ವೇದ ಯತ್ ಸ ವೇದ । ಸ ಸರ್ವಂ ಮಯ್ಯೇತದುಕ್ತ ಇತಿ।

ತನ್ನನ್ನು ಅನಾದರಿಸಿ ರೈಕ್ವನನ್ನು ಪ್ರಶಂಸೆ ಮಾಡಿದ ಹಂಸಗಳ ಮಾತನ್ನು ಪೌತ್ರಾಯಣ ಜಾನಶ್ರುತಿಯು ಕೇಳಿದ. ಅವನು ಹಾಸಿಗೆಯಿಂದ ಎದ್ದವನೇ ಸಾರಥಿಯನ್ನು ಕರೆದು ಹೇಳಿದ - ''ಪ್ರಿಯನೇ ! ಬಂಡಿಯ ಕೆಳಗಿರುವ ರೈಕ್ವನ ವಿಚಾರವನ್ನು ತಿಳಿದುಕೊಂಡು ಬಾ, ಏಕೆಂದರೆ ಹಂಸಗಳ ಪರಸ್ಪರ ಸಂಭಾಷಣೆಯಲ್ಲಿ ಕೆಲವು ಹಂಸಗಳು ನನ್ನಲ್ಲಿ ಅನಾದರದಿಂದ 'ಬಂಡಿಯ ಕೆಳಗೆ ಕುಳಿತುಕೊಳ್ಳುವ ಆ ರೈಕ್ವನ ಬಗ್ಗೆ ಹೇಳಬೇಕಾದ ಮಾತನ್ನು ಈ ಜಾನಶ್ರುತಿಯ ಬಗ್ಗೆ ಹೇಗೆ ಹೇಳುವಿರಿ ?' ಎಂದುದನ್ನು ನಾನು ಕೇಳಿದೆ'' ಆಗ ಸಾರಥಿಯು ಕೇಳಿದ. 'ರಾಜನೇ! ಆ ರೈಕ್ವನೆಂಥವನು?' ರಾಜನೆಂದು 'ಕರ್ಮಾಚರಣೆಯಿಂದ ಕೃತಯುಗವನ್ನು ಗೆದ್ದವನಿಗೆ ತ್ರೇತಾದಿ ಯುಗಗಳನ್ನು ಜಯಿಸಿದುದರ ಫಲ ಸಿಗುವಂತೆ, ಪ್ರಜೆಗಳು ಮಾಡುವ ಸರ್ವಸತ್ ಕರ್ಮಫಲವೂ ರೈಕ್ವನಿಗೆ ಸಿಗುವುದು. ಯಾರು ಯಾರು ತಿಳಿಯಬೇಕಾದ ತತ್ವವೇನೇನು ತಿಳಿದಿರುವನೋ, ಅದೆಲ್ಲವನ್ನೂ ರೈಕ್ವನು ಬಲ್ಲವನಾಗಿದ್ದಾನೆ. ಅವನೇ ನಾನು ಹೇಳಿದಂತಹ ರೈಕ್ವ' ಎಂದು.

ಅರೇ ಅಂಗ, ಇಷ್ಟ। ಸಯುಗ್ವಾ ರೈಕ್ವೋ ಜ್ಞಾತವ್ಯಃ।

'ಅರೇ ಅಂಗ' ಎಂದರೆ ಪ್ರಿಯನೇ ಎಂದರ್ಥ. ಇದಾದ ಬಳಿಕ 'ಬಂಡಿಯ ಕೆಳಗಿನ ರೈಕ್ವನನ್ನು ನೀನು ತಿಳಿದು ಬರಬೇಕು' ಎಂದು ವಾಕ್ಯಾಧ್ಯಾಹಾರ ಮಾಡಿಕೊಳ್ಳಬೇಕು. ಆಗ ಮುಂದಿನ ವಾಕ್ಯ ಅನನ್ವಿತವಾಗುವುದಿಲ್ಲ.

ಸ ಹ ಕ್ಷತ್ತಾ ಅನ್ವಿಷ್ಯ ನಾವಿದಮಿತಿ ಪ್ರತ್ಯೇಯಾಯ । ತಂ ಹೋವಾಚ. ಯತ್ರಾರೇ ಬ್ರಾಹ್ಮಣಸ್ಯಾನ್ವೇಷಣಾ ತದೇನಮೃಚ್ಛೇತಿ।

ಆ ಸಾರಥಿಯು ಎಲ್ಲ ಕಡೆ ಹುಡುಕಿ 'ರೈಕ್ವನು ಸಿಗಲಿಲ್ಲ' ಎಂದನು. ಆಗ ಜಾನಶ್ರುತಿಯು 'ಸಾರಥಿಯೇ ! ಎಲ್ಲಿ ಬ್ರಾಹ್ಮಣರ ಶಾಸ್ತ್ರವಿಚಾರ ನಡೆಯುತ್ತಿರುವುದು ಅಂಥ ಪ್ರದೇಶಕ್ಕೆ ಹೋಗಿ ಹುಡುಕು' ಎಂದನು.

ಸೋಽಧಸ್ತಾತ್ ಶಕಟಸ್ಯ ಪಾಮಾನಂ ಕಷಮಾಣಂ ಉಪೋಪವಿವೇಶ । ತಂ ಹಾಭ್ಯುವಾದ - ತ್ವಂ ನು ಭಗವಃ ಸಯುಗ್ವಾ ರೈಕ್ವ ಇತಿ । ಅಹಂ ಹ್ಯರಾಷಿ ಇತಿ ಹ ಪ್ರತಿ ಜಜ್ಞೇ। ಸ ಹ ಕ್ವತ್ತಾ ಅನ್ವಿಷ್ಯ ಅವಿದಮಿತಿ ಪ್ರತ್ಯೇಯಾಯಾ ॥

ಸಾರಥಿಯು ಎಲ್ಲ ಕಡೆ ಹುಡುಕಿ, ಕಾಶ್ಮೀರನಗರದ ಅರಮನೆಯ ದ್ವಾರದಲ್ಲಿ ಬಂಡಿಯ ಕೆಳಗೆ ಕಜ್ಜಿ ತುರಿಸುತ್ತ ಕುಳಿತಿದ್ದ ಒಬ್ಬನನ್ನು ಕಂಡು, ಇವನೇ ರೈಕ್ವನಿರಬೇಕೆಂದು ನಿಶ್ಚಯಿಸಿ ಅವನ ಬಳಿ ಬಂದು ಕುಳಿತು. ಅವನನ್ನು ಕೇಳಿದ 'ಪೂಜ್ಯರೇ ಬಂಡಿಯ ಕೆಳಗಿರುವ ರೈಕ್ವರೆಂದರೆ ನೀವೆಯೇ ?' 'ಹೌದು ನಾನೇ' ರೈಕ್ವಮುನಿ ಉತ್ತರಿಸಿದ. ಅನಂತರ ಸಾರಥಿಯು ರಾಜನ ಬಳಿಗೆ ಬಂದು 'ರೈಕ್ವನನ್ನು ಹುಡುಕಿ ನೋಡಿ ಬಂದೆ' ಎಂದು ಹೇಳಿದ.

ಅಹಂ ಹ್ಯರಾಷಿ ಇತಿ ಪ್ಲುತಿಃ ಪಾಮಕಷಣ ಭಾವೇನ ॥

ರೈಕ್ವನು ಕಜ್ಜಿಯ ತುರಿಕೆಯಲ್ಲಿ ತೊಡಗಿದ್ದುದರಿಂದ ಅಹಂ ಹ್ಯರಾಶಿ ಎಂಬಲ್ಲಿ ಪ್ಲುತಸ್ವರವನ್ನು ಪ್ರಯೋಗಿಸಿದ್ದಾನೆ ಹೊರತು ಸಾರಥಿಯ ಮೇಲಿನ ಅನಾದರದಿಂದಲ್ಲ.

ಅಥ ಹ ಜಾನಶ್ರುತಿಃ ಪೌತ್ರಾಯಃ ಷಟ್‌ಶತಾನಿ ಗವಾಂ ನಿಷ್ಕಮಶ್ವತರೀರಥಂ ತದಾದಾಯ ಪ್ರತಿಚಕ್ರಮೇ ।

ತಂ ಹಾಭ್ಯುವಾದ - ರೈಕ್ವ ಇಮಾನಿ ಷಟ್‌ಶತಾನಿ ಗವಾಂ ಅಯಂ ನಿಷ್ಕಃ ಅಯಮಶ್ವತರೀರಥಃ । ಅನು ಮ ಏತಾಂ ಭಗವೋ ದೇವತಾಂ ಶಾಧಿ ಯಾಂ ದೇವತಾಮುಪಾಸ್ಸೇ ಇತಿ ।

ತಮುಹ ಪರಃ ಪ್ರತ್ಯುವಾಚ - ಅಹ ಹಾರೇಶ್ವಾ ಶೂದ್ರ ತವೈವ ಸಹ ಗೋಭಿರಸ್ತ್ವಿತಿ ।

ತದು ಹ ಪುನರೇವ ಜಾನಶ್ರುತಿಃ ಪೌತ್ರಾಯಣಃ ಸಹಸ್ರಂ ಗವಾಂ ನಿಷ್ಕಮಶ್ವತರೀರಥಂ ದುಹಿತರಂ ತದದಾಯ ಪ್ರತಿಚಕ್ರಮೇ ।

ಸಾರಥಿಯು ರೈಕ್ವನ ವೃತ್ತಾಂತವನ್ನು ಹೀಗೆ ಹೇಳಿದ್ದರಿಂದ ಪೌತ್ರಾಯಣ ಜಾನಶ್ರುತಿಯು ಆರು ನೂರು ಗೋವುಗಳನ್ನೂ, ಮುತ್ತಿನ ಸರವನ್ನೂ ಕತ್ತೆಯಿಂದ ಕುದುರೆಯಲ್ಲಿ ಜನಿಸಿದ ಅಶ್ವತರಿಗಳಿಂದ ಕೂಡಿದ ರಥವನ್ನೂ ತೆಗೆದುಕೊಂಡು ರೈಕ್ವನ ಬಳಿ ಹೋಗಿ ಹೇಳಿದ.

'ರೈಕ್ವರೇ ಈ ಆರುನೂರು ಗೋವುಗಳು, ಈ ಮುತ್ತಿನಸರ, ಈ ಅಶ್ವತರೀರಥ ಇವುಗಳು ತಮಗೆ ಗುರುದಕ್ಷಿಣೆ, ಪೂಜ್ಯರೇ ! ನನಗೆ ನೀವು ಉಪಾಸನೆ ಮಾಡುವ ದೇವತೆಯ ವಿಷಯವನ್ನು ಉಪದೇಶಿಸಿರಿ' ಎಂದು.

ಲೋಕ ವಿಲಕ್ಷಣನಾದ ಆ ರೈಕ್ವನು, ಜಾನಶ್ರುತಿಗೆ ಹೇಳಿದ - 'ಹಂಸಗಳು ಮಾಡಿದ ಅನಾದರದಿಂದುಂಟಾದ ಶೋಕದಿಂದ ಇಲ್ಲಿಗೆ ಬಂದ ಜಾನಶ್ರುತಿಯೇ ! ಈ ಗೋವುಗಳ ಜೊತೆಗೆ ಈ ಮುತ್ತಿನಸರವೂ, ರಥವೂ ನಿನಗೇ ಇರಲಿ, ನನಗೆ ಬೇಡ' ಎಂದು.

ಹೀಗೆ ಮುನಿಯು ನಿರಾಕರಿಸಿದ್ದರಿಂದ ದಕ್ಷಿಣೆ ಕಡಿಮೆಯಾಯಿತೆಂದು ಭಯಗೊಂಡು ಜಾನಶ್ರುತಿಯು ಪುನಃ ಸಾವಿರ ಗೋವುಗಳನ್ನು, ಮುತ್ತಿನಸರವನ್ನೂ ಅಶ್ವತರೀರಥವನ್ನೂ, ಮುನಿಗೆ ಮದುವೆ ಮಾಡಿಕೊಡುವ ಅಭಿಪ್ರಾಯದಿಂದ ತನ್ನ ಮಗಳನ್ನೂ ಕರೆದುಕೊಂಡು ರೈಕ್ವನ ಬಳಿಗೆ ಹೋದನು.

ತಂ ಹ ಅಭ್ಯುವಾದ - ರೈಕ್ವ! ಇದಂ ಸಹಸ್ರಂ ಗವಾಂ ಅಯಂ ನಿಷ್ಕಃ ಅಯಮಶ್ವತರೀರಥಃ ಇಯಂ ಜಾಯಾ ಅಯಂ ಗ್ರಾಮೋ ಯಸ್ಮಿನ್ ಆಸ್ಸೇ। ಅನ್ವೇವ ಮಾ ಭಗವಃ ಶಾಧೀತಿ।

ಜಾನಶ್ರುತಿ ರೈಕ್ವನಿಗೆ ಹೇಳಿದ - ರೈಕ್ವರೇ ! ಈ ಸಾವಿರ ಗೋವುಗಳು, ಈ ಮುತ್ತಿನಸರ, ಈ ಅಶ್ವತರೀರಥ, ನಿಮಗೆ ಮಡದಿಯಾಗಲು ಯೋಗ್ಯಳಾದ ನನ್ನ ಈ ಮಗಳು, ನೀವು ಈಗ ವಾಸಮಾಡಿಕೊಂಡಿರುವ ಈ ಗ್ರಾಮ ಎಲ್ಲವೂ ನಿಮಗೆ ಗುರುದಕ್ಷಿಣೆ. ಪೂಜ್ಯರೇ ! ನಿಮ್ಮ ಉಪಾಸ್ಯ ದೇವತೆಯನ್ನು ನನಗೆ ಅವಶ್ಯ ಉಪದೇಶಿಸಿರಿ' ಎಂದು.

ತಸ್ಯಾ ಹ ಮುಖಮುಪೋದ್ಯಹ್ಲನ್ ಉವಾಚ - ಅ ಜಹಾರ ಇಮಾಃ ಶೂದ್ರ। ಅನೇನೈವ ಮುಖೇನ ಆಲಾಪಯಿಷ್ಯಥಾಃ ಇತಿ। ತೇ ಹೈತೇ ರೈಕ್ವಪರ್ಣಾ ನಾಮ ಮಹಾವೃಷೇಷು ಯತ್ರಾಸ್ಮಾ ಉವಾಸ। ತಸ್ಮೈವ ಹೋವಾಚ।

ರೈಕ್ವಮುನಿಯು ಆ ರಾಜಕನ್ಯೆಯ ಮುಖವನ್ನು ನೋಡುತ್ತಾ ಕೋಪದಿಂದ ಹೇಳಿದ 'ಹಂಸದ ಅನಾದರದಿಂದಾದ ಶೋಕದಿಂದ ಇಲ್ಲಿಗೆ ಬಂದಿರುವ ಜಾನಶ್ರುತಿಯೆ, ಈ ಎಲ್ಲ ಗುರುದಕ್ಷಿಣೆಯನ್ನೂ ನೀನೇ ಒಯ್ಯು. ನೀನು ಗುರುಶುಶ್ರೂಷೆ ಇಲ್ಲದೆ ಕೇವಲ ಗೋವು ರಥ ಮೊದಲಾದ ದಕ್ಷಿಣೆಯ ಮೂಲಕವೇ ನನ್ನನ್ನು ಮಾತನಾಡಿಸುತ್ತಿರುವಿ' ಎಂದು. ಅನಂತರ ಶಾಪಭೀತನಾದ ಜಾನಶ್ರುತಿ ಸೇವೆ ಮಾಡ ತೊಡಗಿದುದನ್ನು ಕಂಡು ಕರುಣೆಯಿಂದ ರೈಕ್ವನು ಉಪದೇಶಿಸಿದ. ಜಾನಶ್ರುತಿಗೆ ಉಪದೇಶಮಾಡಲು ರೈಕ್ವಮುನಿ ವಾಸಮಾಡಿದ 'ಮಹಾವೃಷ'

(ಕಾಶ್ಮೀರ) ದೇಶದಲ್ಲಿರುವ ಆ ಗ್ರಾಮಗಳು ರೈಕ್ವಪರ್ಣ ಎಂದು ಪ್ರಸಿದ್ಧವಾಗಿವೆ. ಆ ರೈಕ್ವ ಪರ್ಣಗ್ರಾಮಗಳಲ್ಲಿ ವಾಸವಾಗಿದ್ದು, ಮುಂದೆ ಹೇಳುವ ಸಂವರ್ಗವಿದ್ಯೆಯನ್ನು ರೈಕ್ವನು ಜಾನಶ್ರುತಿಗೆ ಉಪದೇಶಿಸಿದ.

ಶುಚಾ ಆದ್ರವಣಾತ್ ಶೂದ್ರಃ।
ರಾಜಾ ಪೌತ್ರಾಯಣಃ ಶೋಕಾತ್ ಶೂದ್ರೇತಿ ಮುನಿನೋದಿತಃ।
ಪ್ರಾಣವಿದ್ಯಾಮವಾಪ್ಯಾಸ್ಮಾತ್ ಪರಂ ಧರ್ಮಮವಾಪ್ತವಾನ್। ಇತಿ ಪಾದ್ಮೇ॥

ಅಹ ಹಾರೇತ್ವಾ ಶೂದ್ರ ಎಂಬಲ್ಲಿ, ಶೂದ್ರ ಎಂದು ಪೌತ್ರಾಯಣನನ್ನು ಸಂಬೋಧಿಸಿದ್ದರೂ ಅವನು ಶೂದ್ರನಲ್ಲ. ಶೋಕದಿಂದ ಮುನಿಯ ಬಳಿಗೆ ಧಾವಿಸಿ ಬಂದವನಾದ್ದರಿಂದ ಅವನನ್ನು ಶೂದ್ರ ಎನ್ನಲಾಗಿದೆ.

ಪೌತ್ರಾಯಣನು ರಾಜ, ಶೋಕವುಳ್ಳವನಾದ್ದರಿಂದ ಶೂದ್ರ ಎಂಬುದಾಗಿ ಸರ್ವಜ್ಞರಾದ ರೈಕ್ವಮುನಿಗಳಿಂದ ಸಂಬೋಧಿಸಲ್ಪಟ್ಟಿದ್ದಾನೆ. ಧರ್ಮಾತ್ಮನಾದ ಅವನು ಅವರಿಂದ ಪ್ರಾಣವಿದ್ಯೆಯ ಉಪದೇಶವನ್ನು ಪಡೆದು ಇನ್ನೂ ಹೆಚ್ಚು ಧರ್ಮ ಸಂಪಾದನೆ ಮಾಡಿದ ಎಂದು ಪಾದ್ಮಪುರಾಣದಲ್ಲಿದೆ. (ಸಂಗ್ರಹ)

ಶೂದ್ರಶಬ್ದದ ನಿಷ್ಪತ್ತಿ

तत्वप्रदीपः – अत्रोच्यते – शुगस्य तदनादरश्रवणात्तदाद्रवणात् सूच्यते हि ।। शुचाऽऽद्रवणमेव शूद्रशब्दप्रवृत्तिहेतुः । शुचं (शुचां) प्रत्याद्रवणं, शुचा वा क्षत्तारं प्रत्याद्रवणं, रैकं प्रत्याद्रवणं वा । तदाद्रवणाच्छूद्र इत्युच्यते । तृतीयात्तृतीयस्याप्यतिशयार्थत्वात् ।

ಪೂರ್ವಪಕ್ಷದ ನಿರಾಕರಣೆಗಾಗಿ 'ಶುಗಸ್ಯ ತದನಾರದಶ್ರವಣಾತ್ ತದಾದ್ರವಣಾತ್ ಸೂಚ್ಯತೇ ಹಿ' ಎಂಬ ಸೂತ್ರವು ಹೊರಟಿದೆ. ರೈಕ್ವಮುನಿಯು ಸಂಬೋಧಿಸಿದ ಶೂದ್ರಶಬ್ದಕ್ಕೆ ಶೂದ್ರಜಾತಿಯವನು ಎಂದರ್ಥವಲ್ಲ. ದುಃಖದಿಂದ ಓಡಿ ಬಂದವನಾದ್ದರಿಂದ 'ಶೂದ್ರ' ಎಂದು ಸಂಬೋಧಿಸಲಾಗಿದೆ. ಆದ್ದರಿಂದ 'ಶುಚಾ ಆದ್ರವಣಂ' ಎಂಬುದು ಶೂದ್ರಶಬ್ದದ ಪ್ರವೃತ್ತಿನಿಮಿತ್ತವಾಗಿದೆ.

೧. 'ದುಃಖವನ್ನು ಕುರಿತು ಬಂದವನಾದ್ದರಿಂದ ಶೂದ್ರ' ಎಂದು,

೨. 'ದುಃಖದಿಂದ ಸಾರಥಿಯನ್ನು ಕುರಿತು ಓಡಿ ಬಂದವನಾದ್ದರಿಂದ ಶೂದ್ರ' ಎಂದು,

೩. 'ದುಃಖದಿಂದ ರೈಕ್ವನನ್ನು ಕುರಿತು ಓಡಿ ಬಂದವನಾದ್ದರಿಂದ ಶೂದ್ರ' ಎಂದು ನಿಷ್ಪತ್ತಿಯನ್ನು ತಿಳಿಯಬೇಕು. ಶೂದ್ರ ಶಬ್ದದಲ್ಲಿ ಶುಕ್‌ಧಾತುವಿಗೆ ಮೂರನೆಯ ವರ್ಗದ ದಕಾರವು ಬಂದು 'ಶೂದ್ರ' ಎಂಬ ಶಬ್ದವು ನಿಷ್ಪನ್ನವಾಗಿದೆ. ಅತಿಶಯಾರ್ಥದಲ್ಲಿ ಮೂರನೆಯ ವರ್ಗವು ಪ್ರಾಪ್ತವಾಗಿದೆ.

ವಿಶೇಷವಿಚಾರ - ಪೌತ್ರಾಯಣನಲ್ಲಿ ಶೂದ್ರ ಎಂಬ ಶಬ್ದ ಪ್ರಯೋಗ ಮಾಡಲಾಗಿದೆ. ಇದಕ್ಕೆ ಶೂದ್ರಜಾತಿಯವನು ಎಂದರ್ಥವಲ್ಲ. 'ಶುಚಾ ದ್ರವತಿ ಇತಿ ಶೂದ್ರಃ' ಶೋಕದಿಂದ ಧಾವಿಸಿ ಬಂದವನೆಂದರ್ಥ. ಶುಕ್ ಎಂದರೆ ಶೋಕ, ದ್ರ ಎಂದರೆ ಧಾವಿಸಿ ಬಂದವನು. ಹಂಸವಾಕ್ಯ ಕೇಳಿ ಬಲು ಶೋಕದಿಂದ, ಧಾವಿಸಿ ಬಂದನೆಂದು ಶೋಕದ ಅತಿಶಯಾರ್ಥದಲ್ಲಿ ಉಕಾರಕ್ಕೆ ದೀರ್ಘ ಬಂದಿದೆ. ಮತ್ತು ವೇಗದ ಅತಿಶಯಾರ್ಥದಲ್ಲಿ ಕ್ ಎಂಬುದಕ್ಕೆ ತೃತೀಯವರ್ಗದ ಅಕ್ಷರವಾದ (ಕ ಚ ಟ ತ ಪ - ಇವು ಐದುವರ್ಗಗಳು, ಕ ವರ್ಗಕ್ಕೆ ಮುಂದೆ ಮೂರನೆಯ ವರ್ಗ ತ ವರ್ಗ) ದ್ ಎಂಬ ಅಕ್ಷರ ಬಂದಿದೆ. ಹೀಗಾಗ್ ಶುಕ್ + ದ್ರ ಎಂಬುದು ಶೂದ್ ದ್ರ = ಶೂದ್ರ ಎಂದಾಗಿದೆ. (ಸಂಗ್ರಹ)

ಹಂಸಗಳ ಅನಾದರದಿಂದ ರಾಜನಿಗೆ ದುಃಖ

तत्वप्रदीपः – कस्मात् शुचाऽऽद्रवणमित्यत आह – कम्वर इति । ''कम्वर एनमेतत्सन्तं सयुग्वानमिव रैकमात्थ'' इति हंसात् स्वानादरश्रवणात्। एतत्सन्तं निन्द्यं सन्तं, एतच्छब्देन दुःखादिरपरोक्षतयोच्यते । ''कचिद्भिक्षं कचिद्ब्रह्म कचिन्निन्द्यमुदीर्यते'' इति तन्त्रनिरुक्ते ।

'ಪೌತ್ರಾಯಣನು ದುಃಖದಿಂದ ಏಕೆ ಓಡಿ ಬಂದನು?' ಎಂಬ ಪ್ರಶ್ನೆಗೆ 'ಕಂ ವರ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ. 'ಕಂ ವರಃ ಏನಮೇತತ್ ಸಂತಂ ಸಯುಗ್ವಾನಮಿವ ರೈಕ್ವಮಾತ್ಥ' 'ಜಾನಶ್ರುತಿರಾಜನು ಯಾವ ಮಹತ್ವವುಳ್ಳವನು ಗಾಡಿಯ ಕೆಳಗೆ ಕುಳಿತ ಆ ರೈಕ್ವನ ಬಗ್ಗೆ ಹೇಳಬೇಕಾದ ಮಾತನ್ನು ಇವನ ವಿಷಯದಲ್ಲಿ ಏಕೆ ಹೇಳುತ್ತಿರುವಿ ?' ಹೀಗೆ ಹಂಸಗಳು ಪೌತ್ರಾಯಣನ ಬಗ್ಗೆ ಅನಾದರದ ಮಾತುಗಳನ್ನಾಡಿದವು. ಇದನ್ನು ಕೇಳಿದ್ದರಿಂದ ರಾಜನು ದುಃಖಿತನಾದನು.

ಭಾಷ್ಯದಲ್ಲಿರುವ 'ಏತತ್ ಸಂತಂ' ಎಂಬುದಕ್ಕೆ 'ಏತತ್' ಶಬ್ದಕ್ಕೆ 'ನಿಂದಿತನಾದ' ಎಂದರ್ಥ. 'ಏತತ್' ಶಬ್ದವು ದುಃಖಾದಿಗಳನ್ನು ಪ್ರತ್ಯಕ್ಷವಾಗಿ ನಿರ್ದೇಶಿಸುತ್ತಿದೆ. 'ಏತತ್' ಶಬ್ದಕ್ಕೆ ನಿಂದಿತವಾದ ಎಂಬರ್ಥವೂ ತಂತ್ರನಿರುಕ್ತದಲ್ಲಿ ಹೇಳಲ್ಪಟ್ಟಿದೆ.

'ಕ್ವಚಿದ್ವಿಶ್ವಂ ಕ್ವಚಿದ್‌ಬ್ರಹ್ಮ ಕ್ವಚಿನ್ನಿಂದ್ಯಮುದೀರ್ಯತೇ'

'ಏತತ್' ಶಬ್ದಕ್ಕೆ ಕೆಲವೆಡೆ 'ವಿಶ್ವ' ಎಂದರ್ಥ, ಕೆಲವೆಡೆ 'ಬ್ರಹ್ಮ 'ಎಂದರ್ಥ, ಕೆಲವೆಡೆ 'ನಿಂದ್ಯ' ಎಂದರ್ಥ.

ಪೌತ್ರಾಯಣನು ದುಃಖತಪ್ತನಾಗಿದ್ದನೆನ್ನಲು ಕಾರಣ

तत्वप्रदीपः – ''स ह सञ्जिहान एव क्षत्तारमुवाच'' इति वचनेनैव शुगस्य सूच्यते हि। अन्यथा नैवानादरश्रवणेऽपि शयनात् सञ्जिहान एव क्षत्तारं रैक्कोऽन्वेषणे नियुञ्जीत ।।

'ಸ ಹ ಸಂಜಿಹಾನ ಏವ ಕ್ಷತ್ತಾರಮುವಾಚ' 'ಆ ಪೌತ್ರಾಯಣನು ಹಾಸಿಗೆಯಿಂದ ಎದ್ದ ಕೂಡಲೇ ಸಾರಥಿಯನ್ನು ಕರೆದು ಹೇಳಿದನು' ಇದರಿಂದಲೇ ರಾಜನಿಗೆ ದುಃಖವಾಗಿತ್ತೆಂದು ಸೂಚಿತವಾಗುತ್ತದೆ. ಒಂದುವೇಳೆ ರಾಜನಿಗೆ ದುಃಖವಾಗಿಲ್ಲ ಎಂದಾದರೆ ಆಗ ಹಂಸಪಕ್ಷಿಗಳ ಅನಾದರವಾಕ್ಯಗಳನ್ನು ಕೇಳಿದರೂ ಕೂಡ ಹಾಸಿಗೆಯಿಂದ ಎದ್ದ ಕೂಡಲೇ ಸಾರಥಿಯನ್ನು ಕುರಿತು ರೈಕ್ವನ ಅನ್ವೇಷಣೆ ಮಾಡಲು ಆದೇಶಿಸುತ್ತಿರಲಿಲ್ಲ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ತ್ರಿವರ್ಣೇತರರಿಗೆ ವೇದಾಧಿಕಾರವಿಲ್ಲ

तत्वप्रकाशिका – ।। शुगस्य तदनादरश्रवणात्तदाद्रवणात्सूच्यते ।।

अत्र त्रिवर्णेतरस्य वेदोक्तब्रह्मविद्याधिकारनिरासादस्ति शास्त्रसङ्गतिः । प्रासङ्गिकत्वान्नाध्यायादिसङ्गतिरन्वेष्टव्या । श्रुत्यादिसङ्गतिं विषयादिकं च सूचयति – मनुष्येति ।।

ಈ ಅಧಿಕರಣದಲ್ಲಿ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ ಎಂಬ ಮೂರು ವರ್ಣದವರನ್ನು ಬಿಟ್ಟು, ಶೂದ್ರಾದಿಗಳಿಗೆ ವೇದೋಕ್ತವಾದ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ ಎಂದು ನಿರಾಕರಣೆ ಮಾಡುತ್ತಿರುವುದರಿಂದ ಶಾಸ್ತ್ರಸಂಗತಿಯು ಇರುತ್ತದೆಂದು ತಿಳಿಯಬೇಕು. ಈ ಅಧಿಕರಣವು ಪ್ರಾಸಂಗಿಕವಾದ್ದರಿಂದ ಅಧ್ಯಾಯಸಂಗತಿ, ಪಾದಸಂಗತಿಗಳನ್ನು ತೋರಿಸಬೇಕಾಗಿಲ್ಲ. ಶ್ರುತಿಸಂಗತಿ, ಅಧಿಕರಣಸಂಗತಿ ಹಾಗೂ ವಿಷಯಾದಿಗಳನ್ನು 'ಮನುಷ್ಯ' ಇತ್ಯಾದಿ ಭಾಷ್ಯದಿಂದ ಸೂಚನೆ ಮಾಡುತ್ತಿದ್ದಾರೆ.

ಶೂದ್ರರಲ್ಲೂ ಅಧಿಕಾರದ ಲಕ್ಷಣವಿದೆಯಲ್ಲವೇ ?

तत्वप्रकाशिका – 'वेदविद्यासु मनुष्याणामधिकृतत्वात्तेषां चाङ्गुष्ठसद्भावाद्युक्तं तान् प्रति विष्णोरङ्गुष्ठमात्रत्वाभिधानम्' इत्युक्तम् ।

ವೇದವಿದ್ಯೆಯಲ್ಲಿ ಮನುಷ್ಯರಿಗೆ ಅಧಿಕಾರವಿರುತ್ತದೆ. ಆದ್ದರಿಂದಲೇ, ಅಂಥಹ ಮನುಷ್ಯರಿಗೆ ಅಂಗುಷ್ಠಪರಿಮಾಣವಿರುವುದರಿಂದ ಮನುಷ್ಯರನ್ನು ಕುರಿತು 'ಅಂಗುಷ್ಠಮಾತ್ರಃ ಪುರುಷಃ' ಎಂಬುದಾಗಿ ಉಪಾಸ್ಯನಾದ ವಿಷ್ಣುವಿಗೂ ಅಂಗುಷ್ಠಪರಿಮಾಣವನ್ನು ಶ್ರುತಿಯು ಹೇಳುತ್ತಿದೆ.

ಶೂದ್ರರಿಗೆ ಅಧಿಕಾರನಿಷೇಧ ಮಾಡಲೇಬೇಕು

तत्वप्रकाशिका – स च वेदविद्याधिकारो यदि शूद्रादीनां स्यात्तदा श्रुत्यादिविरोधादसौ निषेध्य एव ।

ಅಂತಹ ವೇದವಿದ್ಯೆಯಲ್ಲಿ ಶೂದ್ರಾದಿಗಳಿಗೆ ಅಧಿಕಾರವಿರುವುದಾದರೆ, ಶ್ರುತ್ಯಾದಿ ಪ್ರಮಾಣಗಳಿಗೆ ವಿರೋಧ ಬರುತ್ತದೆ. ಆದ್ದರಿಂದ, ಶೂದ್ರಾದಿಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ನಿಷೇಧ ಮಾಡಲೇಬೇಕು.

ವೇದಾಧಿಕಾರಕ್ಕೆ ಪ್ರಯೋಜಕಧರ್ಮಗಳು

तत्वप्रकाशिका – न चोक्ते विरोधाभावादसङ्गतिः । स्वन्यायेन श्रुत्यादिविरोधप्राप्तेः । स एव ह्युक्ते विरोधो नाम यदुक्तं प्रमाणबाधितं स्यात्।

ಶೂದ್ರನೂ ಸಹ ಮನುಷ್ಯನಾದ್ದರಿಂದ ಮನುಷ್ಯಮಾತ್ರರು ವೇದವಿದ್ಯೆಯಲ್ಲಿ ಅಧಿಕಾರಿಗಳಾಗಿದ್ದಾರೆಂದು ಹಿಂದೆ ಹೇಳಿದ್ದಕ್ಕೆ ವಿರೋಧ ಬರುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಮನುಷ್ಯತ್ವ ಹಾಗೂ ವಿಶಿಷ್ಟಬುದ್ಧಿಮತ್ತ್ವ ಎಂಬುದು ವೇದವಿದ್ಯಾಧಿಕಾರಕ್ಕೆ ಪ್ರಯೋಜಕ ಧರ್ಮಗಳಾಗಿವೆಯೆಂದು ಹಿಂದಿನ ಅಧಿಕರಣದಲ್ಲಿ ಹೇಳಲಾಗಿದೆ. ಅಂತಹ ನ್ಯಾಯದಿಂದ ಶ್ರುತ್ಯಾದಿಗಳಿಗೆ ವಿರೋಧವು ಪ್ರಾಪ್ತವಾಗುತ್ತದೆ. ಹಿಂದಿನ ಅಧಿಕರಣದ ವಿಷಯದಲ್ಲಿ ವಿರೋಧ ಬರುತ್ತದೆಂದರೆ ಬೇರೆ ಪ್ರಮಾಣಗಳಿಂದ ಬಾಧಿತವಾಗುತ್ತದೆಂದರ್ಥ.

ಶೂದ್ರನಿಗೆ ಅಧಿಕಾರವಿದೆಯೆಂದು ಪೂರ್ವಪಕ್ಷ

तत्वप्रकाशिका – स वेदविद्याधिकारो विषयः । शूद्रस्यास्ति न वेति सन्देहः। मनुष्यत्वमदर्शनं च सन्देहबीजम् । अस्ति शूद्रस्यापि वेदविद्याधिकारे इति पूर्वः पक्षः ।

ಅಂತಹ ವೇದವಿದ್ಯಾಧಿಕಾರವೇ ಈ ಅಧಿಕರಣದ ವಿಷಯವಾಗಿದೆ. ಶೂದ್ರನಿಗೆ ಅಧಿಕಾರವಿದೆಯೋ, ಇಲ್ಲವೋ ? ಎಂಬುದೇ ಸಂದೇಹ. ಶೂದ್ರನಿಗೆ ಮನುಷ್ಯತ್ವವಿರುವುದು

ಮತ್ತು ಶ್ರುತಿಸ್ಮೃತ್ಯಾದಿಗಳಲ್ಲಿ ಅಧಿಕಾರವನ್ನು ನಿಷೇಧ ಮಾಡಿರುವುದು ಸಂದೇಹಕ್ಕೆ ಕಾರಣವಾಗಿದೆ. ಶೂದ್ರನಿಗೂ ವೇದವಿದ್ಯಾಧಿಕಾರವಿದೆ ಎಂಬುದೇ ಈ ಅಧಿಕರಣದ ಪೂರ್ವಪಕ್ಷ.

ಶೂದ್ರರಲ್ಲೂ ಮನುಷ್ಯತ್ವವಿದೆ

तत्वप्रकाशिका – 'मनुष्याधिकारत्वात्' इति मनुष्याणामधिकारस्योक्तत्वात्' मनुष्यत्वे च शूद्रस्य(अपि) द्विजातिभ्यो विशेषाभावात् ।

ಏಕೆಂದರೆ, 'ಮನುಷ್ಯಾಧಿಕಾರತ್ವಾತ್' ಎಂಬುದಾಗಿ ಸೂತ್ರದಲ್ಲಿ ವೇದವಿದ್ಯೆಯಲ್ಲಿ ಸಕಲ ಮನುಷ್ಯರಿಗೆ ಅಧಿಕಾರವಿರುತ್ತದೆಂದು ಹೇಳಿರುತ್ತಾರೆ. ಮನುಷ್ಯತ್ವವೆಂಬ ಧರ್ಮವು ದ್ವಿಜರೆನಿಸಿದ ತ್ರಿವರ್ಣರಿಗಿದ್ದಂತೆ ಶೂದ್ರನಿಗೂ ಸಹ ಇದ್ದೇ ಇರುತ್ತದೆ.

ಮನುಷ್ಯತ್ವವೇ ಅಧಿಕಾರಕ್ಕೆ ಪ್ರಯೋಜಕ

तत्वप्रकाशिका – न मनष्यत्वं वेदविद्याधिकारोपयोगि; किन्तु विशिष्टबुद्ध्यादिमत्त्वमेव? इति चेत् तथापि शूद्राधिकारसिद्धिः । विशिष्टबुद्ध्यादिमत्वेऽपि शूद्रस्यान्येभ्योऽविशेषात् ।

ಇನ್ನು ಕೇವಲ ಮನುಷ್ಯತ್ವವೇ ವೇದವಿದ್ಯಾಧಿಕಾರಕ್ಕೆ ಉಪಯುಕ್ತವಾದ ಧರ್ಮವೆಂದು ಹೇಳಬೇಕು. ಆದರೆ, ವಿಶಿಷ್ಟಬುದ್ಧಿಮತ್ವವೂ ಸಹ ಪ್ರಯೋಜಕಧರ್ಮವಾಗಿರುವುದರಿಂದ ಶೂದ್ರನಲ್ಲಿ ಇಂತಹ ವಿಶಿಷ್ಟಬುದ್ಧ್ಯಾದಿಮತ್ವಧರ್ಮವು ಬಾರದ ಕಾರಣ ವೇದವಿದ್ಯೆಗೆ ಅಧಿಕಾರಿಯಾಗುವುದಿಲ್ಲ. ಹೀಗೆ ಆಕ್ಷೇಪ ಮಾಡಿದರೆ, ಶೂದ್ರಾದಿಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿದ್ದೇ ಇರುತ್ತದೆ. ಏಕೆಂದರೆ, ವಿಶಿಷ್ಟಬುದ್ಧ್ಯಾದಿಮತ್ವವು ಬೇರೆಯವರಿಗೆ ಇರುವಂತೆ ಶೂದ್ರಾದಿಗಳಲ್ಲಿಯೂ ಸಹ ಇದ್ದೇ ಇರುತ್ತದೆ. ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ಶೂದ್ರರಿಗೂ ರೈಕ್ವರು ಉಪದೇಶಿಸಿರುವರು

तत्वप्रकाशिका – नच वाच्यं शूद्रस्य वेदविचारादर्शनादनधिकार इति । छन्दोगोपनिषदि पौत्रायणस्य वैदिकसंवार्गविद्याध्ययनदर्शनात् ।

ಶ್ರುತಿ-ಸ್ಮೃತಿಗಳಲ್ಲಿ ಶೂದ್ರನಿಗೆ ವೇದವಿದ್ಯಾಧಿಕಾರವಿದೆ ಎಂದು ಹೇಳಿದ್ದು ಎಲ್ಲಿಯೂ ಸಹ ಕಂಡಿಲ್ಲ. ಆದ್ದರಿಂದ ಶೂದ್ರನಿಗೆ ಅಧಿಕಾರವಿಲ್ಲ? ಎಂದು ಶಂಕಿಸಬಾರದು. ಛಾಂದೋಗ್ಯೋಪನಿಷತ್ತಿನಲ್ಲಿ ಪೌತ್ರಾಯಣನೆಂಬ ರಾಜನಿಗೆ ವೇದದಲ್ಲಿ ಬರುವಂತಹ ಸಂವರ್ಗವಿದ್ಯೆಯ ಉಪದೇಶವನ್ನು ರೈಕ್ವ ಮುನಿಗಳು ಮಾಡಿರುತ್ತಾರೆ.

ಎಲೈ ಶೂದ್ರನೇ ! ಎಂದೇ ಸಂಬೋಧಿಸಿದ್ದಾರೆ

तत्वप्रकाशिका – तस्य शूद्रत्वमेव कुतः? इति चेन्न । 'तमुह परः प्रत्युवाचाह हारेत्वा शूद्र तवैव सह गोभिरस्तु' इति पौत्रायणं प्रति रैक्वोक्तेरेव।

ಪೌತ್ರಾಯಣ ರಾಜನು ಶೂದ್ರನೆಂದು ಹೇಗೆ ನಿರ್ಣಯಿಸುತ್ತೀರಿ? ಎಂದು ಪ್ರಶ್ನಿಸಬಾರದು. 'ತಮುಹ ಪರಃ ಪ್ರತ್ಯುವಾಚ ಹಾರೇ ತ್ವಾ ಶೂದ್ರ ತವೈವ ಸಹ ಗೋಭಿರಸ್ತು' ಎಂಬುದಾಗಿ ಪೌತ್ರಾಯಣ ರಾಜನನ್ನು ಕುರಿತು ರೈಕ್ವರು 'ಎಲೈ ಶೂದ್ರನೇ' ಎಂಬುದಾಗಿ ಸಂಬೋಧನೆ ಮಾಡಿ ಉಪದೇಶ ಮಾಡಿದ್ದಾರೆ.

ಅನಧಿಕಾರಿಗೆ ಉಪದೇಶವು ಅನುಪಪನ್ನ

तत्वप्रकाशिका – न चाधिकाराभावेऽपि पौत्रायणो विद्यां विचारयामासेति किं न स्यादिति वाच्यम् । अनधिकारिणं प्रति मुनेरुपदेशासम्भवात् ।

ಅಧಿಕಾರವಿಲ್ಲದಿದ್ದರೂ ಪೌತ್ರಾಯಣ ರಾಜನು ವೇದವಿದ್ಯೆಯನ್ನು ವಿಚಾರ ಮಾಡಿದನೆಂದು ಏಕೆ ಹೇಳಬಾರದು? ಎಂದು ಪ್ರಶ್ನಿಸಬಾರದು. ಅನಧಿಕಾರಿಯಾದ ಪುರುಷನಿಗೆ ರೈಕ್ವಮುನಿಯ ಉಪದೇಶವೇ ಉಪಪನ್ನವಾಗುವುದಿಲ್ಲ.

ಕ್ಷುದ್ರ ಕಾಮನೆಗಾಗಿ ರೈಕ್ವರು ಉಪದೇಶಿಸಿಲ್ಲ

तत्वप्रकाशिका – नहि तस्यापरोक्षज्ञानिनो गवाद्याशयाऽप्यन्याय्या प्रवृत्तिः सम्भविता । अतो युक्त्या लिङ्गदर्शनेन च शूद्रस्य वेदाधिकारसिद्धिरिति भावः ।

ಗೋ-ರಥ ಮೊದಲಾದ ದ್ರವ್ಯದ ಆಸೆಗಳಿಗೋಸ್ಕರ ರೈಕ್ವಮುನಿಗಳು ಅನ್ಯಾಯ ಮಾರ್ಗದಲ್ಲಿ ಉಪದೇಶ ಮಾಡಿದ್ದಾರೆಂದು ಹೇಳಬಾರದು. ಅಪರೋಕ್ಷಜ್ಞಾನಿಗಳಾದ್ದರಿಂದ ಅವರಿಗೆ ಇಂತಹ ಆಸೆಗಳೇ ಇರುವುದಿಲ್ಲ. ಆದ್ದರಿಂದ, ಮನುಷ್ಯತ್ವ ಎಂಬ ಯುಕ್ತಿ ರೈಕ್ವಮುನಿ ಉಪದೇಶರೂಪವಾದ ಲಿಂಗ, ಇವುಗಳಿಂದ ಶೂದ್ರನಿಗೂ ಸಹ ವೇದವಿದ್ಯೆಯಲ್ಲಿ ಅಧಿಕಾರ-ವಿರುತ್ತದೆಂದು ಸಿದ್ಧವಾಗುತ್ತದೆ. ಇಷ್ಟು ಪೂರ್ವಪಕ್ಷದ ಅಭಿಪ್ರಾಯ.

ರಥ ಮೊದಲಾದವುಗಳನ್ನು ಸ್ವೀಕರಿಸಿಲ್ಲ

तत्वप्रकाशिका – उक्ते इति सप्तमी पञ्चम्यर्थे । अधिकारोपयोगितयोक्ते मनुष्यत्वेऽविशेषादिति वा । अहेति सम्बोधनम् । हारो रथश्च गोभिः सह तवैवास्त्वित्यर्थः ।

ಭಾಷ್ಯದಲ್ಲಿ 'ಉಕ್ತೇ' ಎಂಬ ಸಪ್ತಮೀ ವಿಭಕ್ತಿಯು 'ಹೇಳಲ್ಪಟ್ಟಿದ್ದರಿಂದ' ಎಂಬುದಾಗಿ ಪಂಚಮ್ಯರ್ಥದಲ್ಲಿ ಪ್ರಯುಕ್ತವಾಗಿದೆ. ವೇದವಿದ್ಯಾಧಿಕಾರಕ್ಕೆ ಉಪಯುಕ್ತವಾದ ಮನುಷ್ಯತ್ವ-ವಿರುವುದರಿಂದ ಎಂದು ಅನ್ವಯವನ್ನು ತಿಳಿದುಕೊಳ್ಳಬೇಕು. 'ಅಹ' ಎಂಬುದು ಸಂಬೋಧನಾರ್ಥದಲ್ಲಿದೆ. ಹಾರ = ಮುತ್ತಿನ ಹಾರ. ಇತ್ಯಾ, ರಥ, ಗೋಭಿಃ ಸಹ = ಎತ್ತುಗಳ ಜೊತೆಗೆ ಬಂದಿರುವ ನಿನಗೆ ಅಸ್ತು = ಇರಲಿ. (ಪೌತ್ರಾಯಣ ರಾಜನು ತಂದಂತಹ ಮುತ್ತಿನ ಹಾರ, ರಥ ಮೊದಲಾದ ಕಾಣಿಕೆಗಳನ್ನು ರೈಕ್ವಮುನಿಗಳು ತಿರಸ್ಕಾರ ಮಾಡಿದರು ಎಂದರ್ಥ.)

'ಹಾರೇತ್ವಾ' ಎಂಬ ಪ್ರಯೋಗದ ಬಗ್ಗೆ

तत्वप्रकाशिका – 'हारेत्वा' इति 'सेदुराजा' इत्यादिवद्विसर्गलोपेन भवति। 'हारेत्वा नौ' इति वा । तथात्वे पृथगन्वयः ।

ಶ್ರುತಿಯಲ್ಲಿ 'ಹಾರೇತ್ವಾ' ಎಂಬ ಪ್ರಯೋಗವು 'ಸೇದುರಾಜಾ' ಎಂಬಂತೆ ವಿಸರ್ಗವು ಲುಪ್ತವಾಗಿದೆ. ಅಂದರೆ, 'ಹಾರಃ ಇತ್ವಾ' ಎಂದಿರಬೇಕಿತ್ತು. 'ಹಾರೇ ತ್ವಾ' ಸಮಸ್ತವಾಗಿ ಶ್ರುತವಾಗಿದೆ. ಅಥವಾ 'ಹಾರೇ ತ್ವಾ ನೌ' ಎಂಬುದು ದ್ವಿವಚನ ಪದ ಎಂದು ತಿಳಿಯಬೇಕು. ಹೀಗೆ ಸಮಸ್ತ ಪದ ಮಾಡಿದರೂ, ಅದರಲ್ಲಿ ಪ್ರತ್ಯೇಕ ಪದಕ್ಕೆ 'ಅಸ್ತು' ಎಂಬ ಕ್ರಿಯಾಪದದ ಜೊತೆಗೆ ಅನ್ವಯವನ್ನು ಪ್ರತ್ಯೇಕವಾಗಿ ಹೇಳುವುದು ತಪ್ಪಾಗುವುದಿಲ್ಲ.

ಪೌತ್ರಾಯಣ ರಾಜನು ಶೂದ್ರನೇ ಅಲ್ಲವೆಂದು ಸಿದ್ಧಾಂತ

तत्वप्रकाशिका – सिद्धान्तयत्सूत्रमवतार्य तत्फलितार्थं तावदाह – अत इति ।। यदुक्तं 'शूद्रस्यापि पौत्रायणस्य वेदविचारदर्शनादस्ति शूद्रस्य वेदविद्याधिकारः' इति तद्भवेद्यदि पौत्रायणः शूद्रो भवेत्तु; नत्तु तदस्तीत्यर्थः ।

ಸಿದ್ಧಾಂತವನ್ನು ಸಮರ್ಥಿಸುವಂತಹ ಸೂತ್ರಕ್ಕೆ ಅವತಾರಿಕೆ ನೀಡಿ, ಫಲಿತಾರ್ಥವನ್ನು 'ಅತಃ' ಇತ್ಯಾದಿ ಭಾಷ್ಯದಿಂದ ಪ್ರತಿಪಾದನೆ ಮಾಡುತ್ತಿದ್ದಾರೆ.

ಪೌತ್ರಾಯಣ ರಾಜನು ಶೂದ್ರಜಾತಿಯವನಾದ್ದರಿಂದ ವೇದವಿಚಾರದಲ್ಲಿ ಅಧಿಕಾರ-ವಿರುವುದು ಕಂಡಿದೆ. ಆದ್ದರಿಂದ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವನ್ನು ಹೇಳಬಹುದು ಎಂದು ಯಾವ ಪೂರ್ವಪಕ್ಷವನ್ನು ಮಾಡಲಾಯಿತೋ, ಇದು ಪೌತ್ರಾಯಣ ರಾಜನು ಶೂದ್ರನಾಗಿದ್ದಲ್ಲಿ ಮಾತ್ರ ಯುಕ್ತವಾಗುತ್ತಿತ್ತು. ಆದರೆ, ಪೌತ್ರಾಯಣ ರಾಜನು ಶೂದ್ರನೇ ಅಲ್ಲ, ಎಂಬುದು ಭಾಷ್ಯದ ಅಭಿಪ್ರಾಯ.

ರಾಜನ ದುಃಖಕ್ಕೆ ಏನು ಕಾರಣ ?

तत्वप्रकाशिका – शूद्रेति सम्बोधितत्वात् कथमसौ न शूद्रः? इत्यतः तदनादरश्रवणात् इति सूत्रांशं व्याचष्टे – शुचेति ।। शोकेनाप्रवणं शूद्रशब्दप्रवृत्तिनिमित्तम् । अतः शुचा आद्रवणादेव 'शूद्र' इति सम्बोधितः, नत्तु वर्णावरत्वाभिप्रायेण इति नानेन पौत्रायणस्य शूद्रत्वसिद्धिरित्यर्थः प्रौत्रायणस्य शुगेव किं निमित्ता ? इत्यतः 'शुगस्य तदनादरश्रवणात्' इति सूत्रांशं व्याचष्टे – कम् इति ।।

ರೈಕ್ವ ಮುನಿಯು ಪೌತ್ರಾಯಣ ರಾಜನನ್ನು 'ಎಲೈ ಶೂದ್ರನೇ!' ಎಂದು ಸಂಬೋಧನೆ ಮಾಡಿರುತ್ತಾನೆ. ಹೀಗಿರುವಾಗ, ಶೂದ್ರನಲ್ಲವೆಂದು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಯನ್ನು ಪರಿಹಾರ ಮಾಡಲು, 'ತದಾದ್ರವಣಾತ್' ಎಂಬ ಸೂತ್ರದ ಭಾಗವನ್ನು 'ಶುಚಾ' ಇತ್ಯಾದಿ ಭಾಷ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ದುಃಖದಿಂದ ಪೌತ್ರಾಯಣ ರಾಜನು ಓಡುತ್ತಿದ್ದನು. ಆದ್ದರಿಂದ, ಶೂದ್ರಶಬ್ದದ ಪ್ರವೃತ್ತಿನಿಮಿತ್ತವು ಅವನಲ್ಲಿ ಯುಕ್ತವಾಗಿದೆ. (ಶೂದ್ರಜಾತಿಯವನಾದ್ದರಿಂದ ಪೌತ್ರಾಯಣ ರಾಜನು ಶೂದ್ರನೆನಿಸಿಲ್ಲ. ಹಂಸಪಕ್ಷಿಗಳ ಸಂವಾದದಿಂದ ದುಃಖತಪ್ತನಾಗಿ ರೈಕ್ವ ಮುನಿಗಳ ಬಳಿ ಓಡುತ್ತಿದ್ದಾನೆ. ಆ ಕಾರಣದಿಂದಲೇ ಶೂದ್ರ ಎನಿಸಿದ್ದಾನೆ.) ಆದ್ದರಿಂದ ಶೋಕದಿಂದ ಓಡುತ್ತಿರುವ ಕಾರಣದಿಂದ ರೈಕ್ವ ಮುನಿಯು 'ಎಲೈ ಶೂದ್ರನೇ!' ಎಂದು ಸಂಬೋಧನೆ ಮಾಡಿದ್ದಾನೆಯೇ ಹೊರತು, ನೀಚ ಜಾತಿಯಾದ ಶೂದ್ರವರ್ಣದಲ್ಲಿ ಸೇರಿರುವ ಕಾರಣದಿಂದಲ್ಲ. ಹಾಗಾಗಿ, ಪೌತ್ರಾಯಣ ರಾಜನಿಗೆ ಶೂದ್ರತ್ವವು ಸಿದ್ಧವಾಗುವುದಿಲ್ಲ ಎಂದು ಭಾಷ್ಯದ ಅಭಿಪ್ರಾಯ.

ಪೌತ್ರಾಯಣ ರಾಜನಿಗೆ ದುಃಖವಾಗಲು ಏನು ಕಾರಣ? ಎಂಬ ಪ್ರಶ್ನೆಗೆ 'ಶುಗಸ್ಯ ತದನಾದರಶ್ರವಣಾತ್' ಎಂಬ ಸೂತ್ರದ ಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ, 'ಕಮ್ವರಾ' ಇತ್ಯಾದಿ ಭಾಷ್ಯದಿಂದ.

ತಿರಸ್ಕಾರದ ಮಾತೇ ಕಾರಣ

तत्वप्रकाशिका – 'अरे हंसैतद्वचनं कमेनमुद्दिश्यात्थ सन्तं सयुग्वानं रैक्कमिव' इति हंसकृतानादरश्रवणादस्य पौत्रायणस्य शुगित्यर्थः । तदितिश्रुत्युक्तपरामर्शः।

ಅರೇ = ಎಲೈ ಹಂಸವೇ, ಸಂತಂ ಸಯುಗ್ವಾನಂ = ಸಜ್ಜನನಾದ ಗಾಡಿಯ ಕೆಳಗೆ ಕುಳಿತಿರುವ ರೈಕ್ವ ಋಷಿಯಂತೆ, ಕಮ್ ಏನಮ್ = ಯಾವ ರಾಜನನ್ನು ಕುರಿತು ದೊಡ್ಡದಾಗಿ ಹೇಳುತ್ತಿದ್ದೀಯೇ? ಎಂಬುದಾಗಿ ಒಂದು ಹಂಸಪಕ್ಷಿಯು ಮತ್ತೊಂದು ಹಂಸಪಕ್ಷಿಗೆ ಹೇಳುತ್ತಿದೆ. ಈ ಹಂಸಪಕ್ಷಿಗಳ ಸಂವಾದದಿಂದ ತನಗೆ ತಿರಸ್ಕಾರವು ಶ್ರುತವಾಗಿದೆ. ಇಂಥಹ ತಿರಸ್ಕೃತವಾದ ಮಾತುಗಳಿಂದ ಪೌತ್ರಾಯಣ ರಾಜನಿಗೆ ದುಃಖವಾಗಿದೆ ಎಂದು ಶ್ರುತಿಯ ಅಭಿಪ್ರಾಯ.

'ಪರಬುದ್ಧೇಃ ಅಪ್ರತ್ಯಕ್ಷತ್ವಾತ್'

तत्वप्रकाशिका – श्रुतानादरस्यापि तस्य कुतः शोकोत्पत्तिर्ज्ञायते ? परबुद्धेरप्रत्यक्षत्वात्, कारणस्य च कार्याविनाभावाभावात्, इत्यतः सूत्रशेषं व्याचष्टे – सहेति ।।

'ತತ್' ಎಂಬುದು ಶ್ರುತಿಯಲ್ಲಿ ಹೇಳಿದ 'ಹಂಸ' ಎಂಬ ಅರ್ಥವನ್ನು ಪರಾಮರ್ಶ ಮಾಡುತ್ತಿದೆ. ಈ ಅನಾದರದಿಂದಲಾದರೂ, ರಾಜನಿಗೆ ಏಕೆ ದುಃಖವುಂಟಾಗಬೇಕು? 'ಪರಬುದ್ಧೇಃ ಅಪ್ರತ್ಯಕ್ಷತ್ವಾತ್' ಮತ್ತೊಬ್ಬರ ಬುದ್ಧಿಯಲ್ಲಿ ನಡೆಯುವ ವ್ಯಾಪಾರವು ನಮ್ಮ ಪ್ರತ್ಯಕ್ಷಕ್ಕೆ ಗೋಚರವಾಗುವುದಿಲ್ಲ. ಮತ್ತು ಕಾರಣವಿದ್ದ ಮಾತ್ರದಿಂದ ಕಾರ್ಯವು ಉಂಟಾಗಲೇ ಬೇಕೆಂಬ ನಿಯಮವೂ ಸಹ ಇರುವುದಿಲ್ಲ. ಈ ಪ್ರಶ್ನೆಗೆ, ಉಳಿದ ಸೂತ್ರಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ, 'ಸಹ' ಇತ್ಯಾದಿ ಭಾಷ್ಯದಿಂದ.

ಶೂದ್ರ ! ಎಂಬ ಸಂಬೋಧನೆಯ ಅರ್ಥವೇನು ?

तत्वप्रकाशिका – 'स श्रुतानादरः पौत्रायण । शयनादुत्तिष्ठन्नेव क्षत्तारं रैक्वमवेषणायोवाच' इत्युक्तत्वाग्रतया शोको ज्ञायतेतोऽनादरश्रवणात् पौत्रायणस्य शुगासीत् तया शुचाऽऽद्रवणाच्छूद्रेति सम्बोधितो नतु वर्णावरत्वाभिप्रायेणेति नेदं शूद्राधिकारे लिङ्गमिति भावः ।

ತನ್ನ ಬಗ್ಗೆ ಅನಾದರವನ್ನು ಕೇಳಿರುವಂತಹ ಪೌತ್ರಾಯಣನು ಹಾಸಿಗೆಯಿಂದ ಎದ್ದ ಕೂಡಲೇ ತನ್ನ ಸಾರಥಿಗೆ ರೈಕ್ವ ಋಷಿಯನ್ನು ಹುಡುಕಿಕೊಂಡು ಬಾ ಎಂಬುದಾಗಿ ಆಜ್ಞೆ ಮಾಡುತ್ತಾನೆ. ಇದರಿಂದ, ಆ ರಾಜನ ಮನಸ್ಸಿನ ವ್ಯಗ್ರತೆಯು ಸ್ಪಷ್ಟವಾಗುತ್ತದೆ. ಇದರಿಂದಲೇ ಅವನಿಗೆ ಉಂಟಾದ ದುಃಖವೂ ಸಹ ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ, ತನ್ನ ಅವಮಾನವನ್ನು ಅನುಭವಿಸಿ, ದುಃಖತಪ್ತನಾಗಿ, ರೈಕ್ವ ಋಷಿಯ ಬಳಿ ಓಡುತ್ತಾ ಬಂದಿರುವುದರಿಂದ, ಅಂತಹ ಪೌತ್ರಾಯಣ ರಾಜನನ್ನು ಕುರಿತು ರೈಕ್ವಮುನಿಯು 'ಎಲೈ ಶೂದ್ರನೇ!' ಎಂದು ಸಂಬೋಧನೆ ಮಾಡಿದ್ದಾರೆ. ಹೊರತು, ನೀಚ ಜಾತಿಯವನಾದ್ದರಿಂದ ಶೂದ್ರನೆಂದು ಸಂಬೋಧನೆ ಮಾಡಿಲ್ಲ. ಆದ್ದರಿಂದ, ಶ್ರುತಿಯಲ್ಲಿರುವ ಶೂದ್ರಪದವು ಶೂದ್ರರಿಗೆ ವೇದವಿದ್ಯಾಧಿಕಾರವಿದೆ ಎಂಬ ವಿಷಯದಲ್ಲಿ ಲಿಂಗವಾಗುವುದಿಲ್ಲ ಎಂದು ತಿಳಿಯಬೇಕು.

ಶೋಕದಿಂದ ಓಡಿ ಬಂದನಾದ್ದರಿಂದ ಶೂದ್ರ

तत्वप्रकाशिका – शोकेनाऽऽद्रवणपरिज्ञानं च मुनेः सार्वज्ञादुपपद्यते । तदुक्तम् । 'राजा पौत्रायणः शोकाच्छूद्रेति मुनिनोदितः ।

प्राणविद्यामवाप्यस्मात्परं धर्ममवाप्तवान्' इति । दीर्घस्वरार्थत्वेनाऽऽद्रवणादित्युक्तम् । 'शुग्द्र एव शूद्रः' 'रुग्द्र एव रुद्रः' इतिवत् ।। ३४ ।।

ದುಃಖದಿಂದ ಪೌತ್ರಾಯಣ ರಾಜನು ಓಡಿ ಬಂದಿದ್ದಾನೆಂದು ರೈಕ್ವಮುನಿಗೆ ಹೇಗೆ ತಿಳಿಯಿತು? ಎಂಬುದು ಮುಂದಿನ ಪ್ರಶ್ನೆ. ಅಪರೋಕ್ಷ ಜ್ಞಾನಿಯಾದ ಮುನಿಗೆ ಪೌತ್ರಾಯಣನ ವಿಷಯದಲ್ಲಿ ಸಾರ್ವಜ್ಞ್ಯವಿರುವುದರಿಂದ ಉಪಪನ್ನವಾಗುತ್ತದೆ. 'ರಾಜಾ ಪೌತ್ರಾಯಣಃ ಶೋಕಾತ್ ಶೂದ್ರೇತಿ ಮುನಿನೋದಿತಃ । ಪ್ರಾಣವಿದ್ಯಾಮವಾಪ್ಯಸ್ಮಾತ್ ಪರಂ ಧರ್ಮಮವಾಪ್ತವಾನ್ ॥' 'ರೈಕ್ವಮುನಿಯ ಪೌತ್ರಾಯಣನನ್ನು ಶೋಕತಪ್ತನಾದ್ದರಿಂದ ಶೂದ್ರನೆಂದು ಕರೆದಿದ್ದಾನೆ. ಪೌತ್ರಾಯಣನು ಅಂತಹ ರೈಕ್ವ ಮುನಿಯಿಂದ ಸಂವರ್ಗ ವಿದ್ಯೆಯನ್ನು ಉಪದೇಶ ಪಡೆದು, ಶ್ರೇಷ್ಠ ಧರ್ಮಸ್ವರೂಪನಾದ ಪರಮಾತ್ಮನನ್ನು ಹೊಂದುತ್ತಾನೆ.' ಎಂದು.

ಶೂದ್ರ ಎಂಬಲ್ಲಿ 'ಊ' ಎಂಬ ದೀರ್ಘವಿದೆ. ಈ ದೀರ್ಘವು ಶೋಕಾತಿರೇಕವನ್ನು ಹೇಳುತ್ತಿದೆ. ಅದನ್ನು 'ಆದ್ರವಣಾತ್' ಎಂದು ಹೇಳಿದ್ದಾರೆ. ಎಂದರೆ, 'ಶುಚಾ ಆದ್ರವಣಾತ್' ಅತ್ಯಂತ ಶೋಕದಿಂದ ಓಡಿ ಬಂದಿದ್ದರಿಂದ ಎಂದು ಅಭಿಪ್ರಾಯ. ರುಕ್, ದ್ರವ ಎಂಬರ್ಥದಲ್ಲಿ ಹೇಗೆ 'ರುದ್ರ' ಎಂಬ ಪದವು ನಿಷ್ಪನ್ನವಾಗಿದೆಯೋ, ಅದೇ ರೀತಿಯಲ್ಲಿ, ಶುಗ್, ದ್ರವ ಎಂಬರ್ಥದಲ್ಲಿ ಶೂದ್ರಶಬ್ದವು ಇಲ್ಲಿ ನಿಷ್ಪನ್ನವಾಗಿದೆಯೆಂದು ತಿಳಿಯಬೇಕು.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಅಧಿಕರಣದ ಸಂಗತಿ ವಿಚಾರ

भावदीपः – ।। शुगस्य तदनादरश्रवणात्तदाद्रवणात्सूच्यते ।।

सङ्गतिपरत्वेन भाष्यं व्याचष्टे – वेदविद्यास्विति ।। अविशेषादित्यादेर्भावः – स चेति ।। वक्ष्यमाणदिशेत्यर्थः ।। श्रुत्यादीति ।। श्रवणाध्ययनेति सूत्रोक्तश्रुत्यादीत्यर्थः।।

ಈ ಅಧಿಕರಣಕ್ಕೆ ಸಂಗತಿಯನ್ನು ತಿಳಿಸುವಂತಹ ಭಾಷ್ಯವನ್ನು 'ವೇದವಿದ್ಯಾಸು' ಇತ್ಯಾದಿ ಟೀಕಾ ಮಾತಿನಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. ಭಾಷ್ಯದಲ್ಲಿರುವ 'ಅವಿಶೇಷಾತ್' ಎಂಬ ಪದದ ಅಭಿಪ್ರಾಯವನ್ನು 'ಸ ಚ' ಇತ್ಯಾದಿ ವಾಕ್ಯವು ಸ್ಪಷ್ಟಪಡಿಸುತ್ತಿದೆ. ಮುಂದೆ ಪೂರ್ವಪಕ್ಷದಲ್ಲಿ ಹೇಳುವಂತೆ ಎಂದಭಿಪ್ರಾಯ.

'ಶ್ರುತ್ಯಾದಿ' ಎಂದರೆ 'ಶ್ರವಣಾಧ್ಯಯನಾರ್ಥ' ಇತ್ಯಾದಿ ಸೂತ್ರದಲ್ಲಿ ಉಲ್ಲೇಖಿಸುವ ಶ್ರುತಿ-ಸ್ಮೃತಿಗಳಿಂದ ಎಂದರ್ಥ.

ಈ ಅಧಿಕರಣದ ವಿಚಾರವು ಅಪ್ರಸ್ತುತವಲ್ಲವೇ ?

भावदीपः – नचोक्त इति ।। शूद्रस्याधिकारे उक्ते मनुष्याधिकारे विरोधो नास्ति । शूद्रस्यापि मनुष्यत्वात् । तथाचोक्तानाक्षेपादफलोऽयं विचार इति न वाच्यमित्यर्थः।

'ನಚ ಉಕ್ತೇ' ಎಂದರೆ ಶೂದ್ರನಿಗೆ ಅಧಿಕಾರವನ್ನು ಹೇಳಿದರೂ ಕೂಡ ಮನುಷ್ಯರು ವೇದವಿದ್ಯೆಯಲ್ಲಿ ಅಧಿಕಾರವನ್ನು ಹೊಂದಿದ್ದಾರೆ ಎಂಬುದಕ್ಕೆ ವಿರೋಧ ಬರುವುದಿಲ್ಲ. ಏಕೆಂದರೆ ಶೂದ್ರನೂ ಕೂಡ ಮನುಷ್ಯನೇ ಆಗಿದ್ದಾನೆ. ಆದ್ದರಿಂದ, ವಾಮನಾಧಿಕರಣದ ಕೊನೆಯ ಸೂತ್ರದಲ್ಲಿ ಹೇಳಿದ ಪ್ರಮೇಯವನ್ನು ಆಕ್ಷೇಪ ಮಾಡಿದಂತಾಗದ ಕಾರಣ ಈ ಅಧಿಕರಣದಲ್ಲಿ ಮಾಡುತ್ತಿರುವ ವಿಚಾರವು ವ್ಯರ್ಥವಲ್ಲವೇ? ಎಂದು ಪ್ರಶ್ನಿಸಬಾರದು.

ಶ್ರುತಿ-ಸ್ಮೃತಿಗಳ ವಿರೋಧ

भावदीपः – स्वन्यायेन मनुष्यत्वविशिष्टबुद्ध्यादिमत्त्वरूपपूर्वोक्त-सूत्रकारीयन्यायेन शूद्रस्याप्यधिकारप्राप्तौ वक्ष्यमाणश्रुतिस्मृतियुक्ति-विरोधप्राप्तेरित्यर्थः ।

ಏಕೆಂದರೆ, 'ಮನುಷ್ಯಾಧಿಕಾರತ್ವಾತ್' ಎಂಬುದರಿಂದ ಮನುಷ್ಯತ್ವ, ವಿಶಿಷ್ಟಬುದ್ಧ್ಯಾದಿಮತ್ವ ಮೊದಲಾದ ಧರ್ಮವುಳ್ಳ ಪ್ರತಿಯೊಬ್ಬರೂ ವೇದವಿದ್ಯೆಯಲ್ಲಿ ಅಧಿಕಾರ ಹೊಂದುತ್ತಾರೆಂದು ಹೇಳಲಾಗಿದೆ. ಆವಾಗ ಶೂದ್ರನಿಗೂ ಕೂಡ ವೇದವಿದ್ಯೆಯಲ್ಲಿ ಅಧಿಕಾರವು ಪ್ರಾಪ್ತವಾಗುತ್ತದೆ. ಆದರೆ, ಮುಂದಿನ ಸೂತ್ರಗಳಲ್ಲಿ ಉಲ್ಲೇಖಿಸುವ ಶ್ರುತಿ-ಸ್ಮೃತಿಗಳಿಂದ ಅದಕ್ಕೆ ವಿರೋಧವು ಬರುತ್ತದೆ.

'ಮನುಷ್ಯಾಧಿಕಾರತ್ವಾತ್' ಎಂಬುದರ ವ್ಯಾಖ್ಯಾನ

ಭಾವದೀಪಃ – ಶೂದ್ರಸ್ಯಾನಧಿಕಾರೋಕ್ತೌ ಪ್ರಾಕ್ತನಸಾಮಾನ್ಯೋಕ್ತಿಃ ಶೂದ್ರೇತರಮನುಷ್ಯಪರಾ ಸ್ಯಾದಿತಿ ಭಾವಃ । ಪೂರ್ವಪಕ್ಷತದ್ಯುಕ್ತಿಪರತ್ವೇನಾಪಿ ಭಾಷ್ಯಂ ವ್ಯಾಚಷ್ಟೇ – ಅಸ್ತಿ ಶೂದ್ರಸ್ಯಾಪೀತಿ ।।

ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ಈ ಅಧಿಕರಣದಲ್ಲಿ ಸಮರ್ಥನೆ ಮಾಡಿದಾಗ 'ಮನುಷ್ಯಾಧಿಕಾರತ್ವಾತ್' ಎಂದು ಹೇಳಿದ್ದು ಶೂದ್ರರನ್ನು ಬಿಟ್ಟು ಇತರ ಮನುಷ್ಯರು ವೇದವಿದ್ಯೆಯಲ್ಲಿ ಅಧಿಕಾರವನ್ನು ಹೊಂದಿದ್ದಾರೆಂದು ಹೇಳಿದಂತಾಗುತ್ತದೆ.

ಪೂರ್ವಪಕ್ಷ ಹಾಗೂ ಪೂರ್ವಪಕ್ಷ ಯುಕ್ತಿಗಳನ್ನು ಹೇಳುವಂತಹ ಭಾಷ್ಯವನ್ನು 'ಅಸ್ತಿ ಶೂದ್ರಸ್ಯಾಪಿ' ಇತ್ಯಾದಿಯಾಗಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಸಪ್ತಮೀ ವಿಭಕ್ತಿಯು ಪಂಚಮ್ಯರ್ಥಕ

ಭಾವದೀಪಃ – ಸಪ್ತಮೀಯಂ ಪಞ್ಚಮ್ಯರ್ಥೇ ಇತ್ಯುಪೇತ್ಯಾऽಹ – ಉಕ್ತತ್ವಾದಿತಿ ।। ಅವಿಶೇಷಾಚ್ಛೂದ್ರಸ್ಯಾಪೀತ್ಯೇತನ್ಮನುಷ್ಯತ್ವಾವಿಶೇಷಾದಿತ್ಯೇವಂ ವ್ಯಾಖ್ಯಾಯ ದೇವತಾನಯೋಕ್ತನ್ಯಾಯಾವಿಶೇಷಾದಿತ್ಯರ್ಥಾನ್ತರಪರತಯಾऽಪಿ ವ್ಯಾಖ್ಯಾತುಮಾಹ – ನ ಮನುಷ್ಯತ್ವಮಿತಿ।।

ಸಪ್ತಮೀ ವಿಭಕ್ತಿಯು ಪಂಚಮ್ಯರ್ಥದಲ್ಲಿದೆ ಎಂದು ಒಪ್ಪಿ ಅರ್ಥವನ್ನು ಹೇಳುತ್ತಿದ್ದಾರೆ, 'ಉಕ್ತತ್ವಾತ್' ಇತ್ಯಾದಿಯಾಗಿ. 'ಅವಿಶೇಷಾತ್ ಶೂದ್ರಸ್ಯಾಪಿ' ಎಂಬ ಭಾಷ್ಯಕ್ಕೆ ಶೂದ್ರರೂ ಸಹ ಮನುಷ್ಯರೇ ಆಗಿರುವುದರಿಂದ ಎಂಬರ್ಥವನ್ನು ವಿವಕ್ಷಿಸಿ ವ್ಯಾಖ್ಯಾನ ಮಾಡಿದರೂ, ಈಗ ದೇವತಾಧಿಕರಣದ ನ್ಯಾಯದಿಂದ ವ್ಯತ್ಯಾಸವಿಲ್ಲದ ಕಾರಣ ಎಂಬ ಮತ್ತೊಂದು ಅರ್ಥವನ್ನು ವಿವಕ್ಷಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ನ ಮನುಷ್ಯತ್ವಮ್' ಇತ್ಯಾದಿ ಟೀಕೆಯಿಂದ.

ಶೂದ್ರನಿಗೆ ಅಧಿಕಾರವಿದೆಯೆನ್ನಲು ಶ್ರುತಿಯ ಉಲ್ಲೇಖ

ಭಾವದೀಪಃ – ಪೌತ್ರಾಯಣೋಕ್ತೇರಿತಿ ವಾಕ್ಯಂ ಪೌತ್ರಾಯಣಸ್ಯ ಶ್ರುತಾವಧಿಕಾರೋಕ್ತೇರಿತ್ಯರ್ಥಕಂ ವ್ಯಾಖ್ಯಾತುಮಾಹ – ನಚ ವಾಚ್ಯಂ ಶೂದ್ರಸ್ಯೇತಿ ।। ಪೌತ್ರಾಯಣಂ ಪ್ರತಿ ರೈಕೇಣ ಶೂದ್ರೇತ್ಯುಕ್ತೇರಿತ್ಯರ್ಥಾನ್ತರಂ ಚ ವ್ಯಾಖ್ಯಾತುಮಾಹ – ಹಾರೇ ತ್ವಾಶೂದ್ರೇತ್ಯಾದಿ ।। ವಾಕ್ಯಮವತಾರ್ಯ ವ್ಯನಕ್ತಿ – ತಸ್ಯೇತಿ ।।

'ಪೌತ್ರಾಯಣೋಕ್ತೇರಧಿಕಾರಃ' ಇತ್ಯಾದಿ ಭಾಷ್ಯದ ವಾಕ್ಯವನ್ನು ಪೌತ್ರಾಯಣನಿಗೆ ಶ್ರುತಿಯು ವೇದವಿದ್ಯಾಧಿಕಾರವನ್ನು ಹೇಳಿರುವುದರಿಂದ ಎಂದರ್ಥ. ಇದನ್ನು 'ನಚ ವಾಚ್ಯಂ ಶೂದ್ರಸ್ಯ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. ಪೌತ್ರಾಯಣನನ್ನು ಕುರಿತು ರೈಕ್ವ ಮುನಿಯು 'ಎಲೈ ಶೂದ್ರನೇ!' ಎಂದು ಸಂಬೋಧನೆ ಮಾಡಿದ್ದರಿಂದ ಎಂಬ ಮತ್ತೊಂದು ಅರ್ಥವನ್ನು ಹೇಳುವುದಕ್ಕಾಗಿ 'ಹಾರೇ ತ್ವಾ ಶೂದ್ರ' ಇತ್ಯಾದಿ ಶ್ರುತಿವಾಕ್ಯವನ್ನು ಉಲ್ಲೇಖಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ತಸ್ಯ' ಇತ್ಯಾದಿ ಟೀಕೆಯಿಂದ.

ನಾಕನೆಯ ಅಧ್ಯಾಯದಲ್ಲಿ ಶೂದ್ರನ ಬಗ್ಗೆ

भावदीपः – छान्दोग्ये चतुर्थे श्रुतसंवर्गविद्यायां प्रसादाग्रे शयानं पौत्रायणमुपर्युपरि पतन्तो हंसपक्षिणो रैकमुनिप्रशंसाकराणि पौत्रायणानादरकराणि च वाक्यानि परस्परं वदन्तोऽगमन् । तत् श्रुत्वा परितप्तमनाः पौत्रायणः प्रातस्तल्पादुत्थित एव क्षत्तृमुखेन रैकस्थानं निश्चित्य तत्त्वबुभुत्सुर्गुरुदक्षिणां गृहीत्वा तत्समीपमुपेत्य तं सम्बोद्ध्य दक्षिणां निवेद्य मह्यं विद्यां ब्रूहीत्युवाच । तदा तं पौत्रायणं परो रैकः प्रत्युवाच, किमिति? अह हारेत्वेत्यादि । हारः कण्ठमाला इत्वा रथः । तवैवास्त्विति स्वाभिमतानवाप्तेः पौत्रायणानीतां दक्षिणां मुनिः प्रत्याचख्यौ इति श्रुत्यर्थः ।

ಛಾಂದೋಗ್ಯೋಪನಿಷತ್ತಿನ ನಾಲ್ಕನೇ ಅಧ್ಯಾಯದಲ್ಲಿ ಬರುವ ಸಂವರ್ಗ ಪ್ರಕರಣದಲ್ಲಿ ಹೀಗೆ ಕಥೆಯಿದೆ. ಪೌತ್ರಾಯಣನೆಂಬ ರಾಜನು ಪ್ರಾಸಾದದ ಮೇಲ್ಭಾಗದ ಬಯಲಿನಲ್ಲಿ ಒಂದು ರಾತ್ರಿ ಮಲಗಿದ್ದನು. ಅವನ ಮೇಲೆ ಹಂಸ ಪಕ್ಷಿಗಳು ಹಾರಿ ಹೋದವು. ಮುಂದೆ ಹಾರುತ್ತಿದ್ದ ಹಂಸ ಪಕ್ಷಿಯನ್ನು ಕುರಿತು ಹಿಂದೆ ಇರುವ ಹಂಸ ಪಕ್ಷಿಯು ಹೇಳಿತು. 'ಎಲೈ ಮಂದದೃಷ್ಟಿಯುಳ್ಳವನೇ! ಪೌತ್ರಾಯಣನ ತೇಜಸ್ಸು ತಗಲುವಂತೆ ಅವನ ಮೇಲೆ ಹಾರಬೇಡ. ಸುಟ್ಟುಹೋಗುತ್ತಿ' ಎಂದು ಎಚ್ಚರಿಸಿತು. ಮುಂದಿರುವ ಹಂಸ ಪಕ್ಷಿಯು ಅದಕ್ಕೆ ಉತ್ತರವನ್ನು ನೀಡಲು, 'ಎಲೈ ಹಂಸವೇ! ಬಂಡಿಯ ಕೆಳಗೆ ಕುಳಿತಿರುವ ರೈಕ್ವನನ್ನು ಕುರಿತು ಮಾತನಾಡುವಂತೆ ಯಾರನ್ನು ಕುರಿತು ಮಾತನಾಡುತ್ತಿರುವಿ?' ಎಂಬುದಾಗಿ ಪೌತ್ರಾಯಣ ರಾಜನ ವಿಷಯದಲ್ಲಿ ತಿರಸ್ಕಾರದ ಮಾತುಗಳನ್ನಾಡಿತು. ಈ ಹಂಸ ಪಕ್ಷಿಗಳ ಪರಸ್ಪರ ಸಂವಾದವನ್ನು

ಪೌತ್ರಾಯಣ ರಾಜನು ಕೇಳಿದನು. ಬಹಳ ದುಃಖಿತನಾದನು. ಬೆಳಿಗ್ಗೆ ಎದ್ದ ಕೂಡಲೇ ತನ್ನ ಸಾರಥಿಯನ್ನು ಕರೆದು ರೈಕ್ವನನ್ನು ಹುಡುಕಲು ಆದೇಶ ಮಾಡಿದನು. ಒಮ್ಮೆ ಸಾರಥಿಯು ರೈಕ್ವ ಮುನಿಯು ಸಿಗಲಿಲ್ಲವೆಂದು ಬಂದರೂ, ಪುನಃ ರಾಜನು ರೈಕ್ವನ ಗುರುತನ್ನು ಹೇಳಿ ಕಳುಹಿಸಿದನು. ಕೊನೆಗೆ ಸಾರಥಿಯು ರೈಕ್ವನಿರುವ ಸ್ಥಳವನ್ನು ಹುಡುಕಿ ರಾಜನಿಗೆ ತಿಳಿಸಿದನು. ಆವಾಗ, ರಾಜನು ತತ್ವಜಿಜ್ಞಾಸೆಯಿಂದ ಆರು ನೂರು ಗೋವುಗಳನ್ನು, ಮುತ್ತಿನ ಹಾರವನ್ನು, ರಥವನ್ನು ತೆಗೆದುಕೊಂಡು ಗುರುದಕ್ಷಿಣೆಯಾಗಿ ಸಮರ್ಪಿಸಲು ರೈಕ್ವ ಮುನಿಯ ಬಳಿ ದುಃಖಿತನಾಗಿ ನಡೆದನು. ಗುರುದಕ್ಷಿಣೆಯಾಗಿ ಇವುಗಳನ್ನು ಸ್ವೀಕರಿಸಿ ನನಗೆ ವಿದ್ಯೋಪದೇಶ ಮಾಡಿ ಎಂದು ರೈಕ್ವ ಮುನಿಯ ಬಳಿ ಪ್ರಾರ್ಥಿಸಿದನು. ಆಗ ರೈಕ್ವ ಮುನಿಯು ದುಃಖಿತನಾಗಿ ಬಂದಿರುವ ಪೌತ್ರಾಯಣನನ್ನು ಕುರಿತು 'ಅಹ ಹಾರೇ ತ್ವಾ ಶೂದ್ರ!' ಎಂದು ಸಂಬೋಧನೆ ಮಾಡಿ ಮಾತುಗಳನ್ನಾಡಿದರು. ಹಾರ ಶಬ್ದಕ್ಕೆ ಕಂಠದಲ್ಲಿ ಧರಿಸುವ ಮುತ್ತಿನ ಮಾಲೆ ಎಂದರ್ಥ. 'ಇತ್ವಾ' ಎಂಬ ಶಬ್ದಕ್ಕೆ ರಥವೆಂದರ್ಥ. ಇವೆಲ್ಲವನ್ನು ನೀನೇ ಇಟ್ಟುಕೋ. ನನಗದರಿಂದ ಏನೂ ಉಪಯೋಗವಿಲ್ಲ, ಎಂದು ರೈಕ್ವ ಮುನಿಯು ಹೇಳಿದರು. ಇಷ್ಟು ಶ್ರುತಿಯ ಅರ್ಥ.

ಶೂದ್ರನಿಗೆ ರೈಕ್ವ ಮುನಿಯು ಏಕೆ ಉಪದೇಶಿಸಿದ ?

भावदीपः – पौत्रायणं प्रति रैकेण विद्योक्तेरित्यर्थान्तरं भाष्यस्य वक्तुमाह – नचाधिकारेति ।। अत इति ।। मनुष्यत्वाद् विशिष्टबुद्ध्यादिमत्त्वात् मुनेरन्यायप्रवृत्तेरसम्भवाच्चेत्यर्थः ।

ಪೌತ್ರಾಯಣನನ್ನು ಕುರಿತು ರೈಕ್ವ ಮುನಿಯು ವಿದ್ಯೋಪದೇಶವನ್ನು ಮಾಡಿದ್ದರಿಂದ ಎಂಬ ಮತ್ತೊಂದು ಅರ್ಥವನ್ನು ಭಾಷ್ಯಕ್ಕೆ ಹೇಳಲು 'ನಚಾಧಿಕಾರಾಭಾವೇऽಪಿ' ಇತ್ಯಾದಿ ಟೀಕೆಯು ಹೊರಟಿದೆ. 'ಅತಃ' ಎಂಬ ಪದಕ್ಕೆ ಮನುಷ್ಯನಾದ್ದರಿಂದ, ವಿಶಿಷ್ಟಬುದ್ಧ್ಯಾದಿಗಳಿರುವುದರಿಂದ ಮುನಿಯು ಅನ್ಯಾಯದಲ್ಲಿ ಪ್ರವೃತ್ತಿ ಮಾಡಲಾರನಾದ್ದರಿಂದ ಎಂದರ್ಥ.

ಯುಕ್ತಿಯಿಂದ ಸಮರ್ಥನೆ

भावदीपः – युक्त्या अविशेषादित्युक्तयुक्त्या । पौत्रायणं प्रति रैकस्य शूद्रेति शूद्रपदेन सम्बोधनेन विद्योपदेशनरूपलिङ्गदर्शनेन च ।। सप्तमीति ।। भाष्यगतेत्यर्थः।

'ಯುಕ್ತ್ಯಾ' ಎಂದರೆ 'ಅವಿಶೇಷಾತ್' ಎಂಬಲ್ಲಿ ಹೇಳಿದ ಯುಕ್ತಿಯಿಂದ ಎಂದರ್ಥ. ಪೌತ್ರಾಯಣನನ್ನು ಕುರಿತು ರೈಕ್ವ ಮುನಿಯು 'ಎಲೈ ಶೂದ್ರನೇ !' ಎಂದು ಶೂದ್ರಪದದಿಂದ ಸಂಬೋಧನೆ ಮಾಡಿ ವಿದ್ಯೋಪದೇಶವನ್ನು ಮಾಡಿರುತ್ತಾರೆ. ಈ ಯುಕ್ತಿಯಿಂದ ಎಂದಭಿಪ್ರಾಯ. 'ಉಕ್ತೇ' ಎಂದು ಭಾಷ್ಯದಲ್ಲಿ ಸಪ್ತಮ್ಯಂತವಾದ ಪದವು ಶ್ರುತವಾಗಿದೆ. ಇದು ಪಂಚಮ್ಯರ್ಥದಲ್ಲಿರುತ್ತದೆ ಎಂದು 'ಉಕ್ತೇ ಇತಿ' ಎಂಬ ಟೀಕೆಯಲ್ಲಿ ಹೇಳಿದ್ದಾರೆ.

'ಅಹ ಹಾರ' ಎಂಬ ಶ್ರುತಿಯ ಅರ್ಥ

ಭಾವದೀಪಃ – ಶ್ರುತ್ಯರ್ಥಮಾಹ – ಅಹೇತಿ ।। ಇತ್ವಶಬ್ದಾರ್ಥಮಾಹ – ರಥಶ್ಚೇತಿ ।। ಅಸ್ತ್ವಿತ್ಯೇಕವಚನಾನ್ವಯಾಯ ಹಾರೇತ್ವೇತ್ಯತ್ರ ಹಾರೋ ರಥಶ್ಚೇತಿ ಪೃಥಗನ್ವಯಃ ಕೃತಃ । ತರ್ಹಿ ಹಾರ ಇತ್ವೇತಿ ಸ್ಯಾತ್ । ನನು ಹಾರೇತ್ವೇತ್ಯಾಶಙ್ಕ್ಯೋಪಪತ್ತಿಮಾಹ – ಹಾರೇ ತ್ವಿತೀತಿ।।

ಶ್ರುತಿಯ ಅರ್ಥವನ್ನು ಟೀಕೆಯಲ್ಲಿ 'ಅಹ' ಎಂಬ ಮಾತಿನಿಂದ ಹೇಳುತ್ತಿದ್ದಾರೆ. 'ಇತ್ವಾ' ಶಬ್ದದ ಅರ್ಥವನ್ನು 'ರಥಶ್ಚ' ಎಂದು ಹೇಳಿದ್ದಾರೆ. 'ಅಸ್ತು' ಎಂಬಲ್ಲಿರುವ ಏಕವಚನದ ಜೊತೆಗೆ ಅನ್ವಯ ಮಾಡುವುದಕ್ಕಾಗಿ 'ಹಾರೇ ತ್ವಾ' ಎಂಬಲ್ಲಿ 'ಹಾರಃ ರಥಶ್ಚ' ಎಂದು ಪ್ರತ್ಯೇಕವಾಗಿ ಅನ್ವಯ ಮಾಡಿದ್ದಾರೆ. ಹಾಗಾದರೆ, 'ಹಾರ-ಇತ್ವಾ' ಎಂದೇ ಪ್ರಯೋಗಿಸಬೇಕಿತ್ತು. 'ಹಾರೇತ್ವಾ' ಎಂದು ಗುಣಸಂಧಿಯನ್ನು ಹೇಗೆ ಮಾಡಿದರು? ಎಂಬ ಆಶಂಕೆಗೆ 'ಹಾರೇತ್ವೇತಿ' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ.

'ಹಾರಃ ಇತ್ವಾ' ಎಂಬುದರ ಅರ್ಥ

ಭಾವದೀಪಃ – ಯಥಾ ಸ ಇದಿತ್ಯತ್ರ ಛಾನ್ದಸೇನ ವಿಸರ್ಗಲೋಪೇನ ಸೇದಿತಿ ಗುಣಸ್ತಥಾ ಹಾರೇ ತ್ವೇತ್ಯತ್ರಾಪಿ ಗುಣ ಇತ್ಯರ್ಥಃ । ಯದ್ವಾ ಹಾರೇ ತ್ವೇತ್ಯೇಕಂ ಪದಂ ವ್ಯತ್ಯಯೇನ ದ್ವಿವಚನಸ್ಯೈಕವಚನಮಿತ್ಯಾಹ – ಹಾರೇ ತ್ವಾ ನಾವಿತಿ ವೇತಿ ।। ತಥಾತ್ವೇ ಪೃಥಗ್ ಹಾರೋ ರಥಶ್ಚಾಸ್ತ್ವಿತಿ ಅನ್ವಯ ಇತ್ಯರ್ಥಃ ।

ಸೇದುರಾಜಾ ಎಂಬಲ್ಲಿ ಸ, ಇದ್, ಉ, ರಾಜಾ ಎಂದು ಪದಪಾಠವನ್ನು ಮಾಡಬೇಕು. ಛಾಂದಸಪ್ರಯೋಗದಿಂದ 'ಸಃ' ಎಂಬಲ್ಲಿ ವಿಸರ್ಗವು ಲೋಪವಾಗಿದೆ. ಅನಂತರ ಗುಣ ಬಂದು

'ಸೇದುರಾಜಾ' ಎಂಬ ವೈದಿಕ ಪ್ರಯೋಗವು ಹೇಗೆ ಕಾಣಸುತ್ತಿದೆಯೋ, ಅದರಂತೆ 'ಹಾರಃ ಇತ್ವಾ' ಎಂಬಲ್ಲಿಯೂ ಛಾಂದಸಪ್ರಯೋಗದಿಂದ ವಿಸರ್ಗವು ಲೋಪವಾಗಿದೆ. ಅನಂತರ ಗುಣ ಬಂದು 'ಹಾರೇತ್ವಾ' ಎಂಬ ಪ್ರಯೋಗವು ನಿಷ್ಪನ್ನವಾಗಿದೆ ಎಂದು ತಿಳಿಯಬೇಕು.

ಅಥವಾ, 'ಹಾರೇತ್ವಾ' ಎಂಬುದು ಒಂದೇ ಪದವಾಗಿದೆ. ವಚನವ್ಯತ್ಯಾಸದಿಂದ ದ್ವಿವಚನವನ್ನು ಏಕವಚನದಲ್ಲಿ ಪ್ರಯೋಗಿಸಲಾಗಿದೆ. ಆದ್ದರಿಂದ, 'ಹಾರಶ್ಚ ಇತ್ವಾ ಚ ಹಾರೇತ್ವಾನೌ' ಎಂಬರ್ಥದಲ್ಲಿ 'ಹಾರೇತ್ವಾ' ಎಂದು ಪ್ರಯೋಗಿಸಲಾಗಿದೆ. ಈ ಅರ್ಥದಲ್ಲಿ 'ಹಾರಃ ರಥಶ್ಚ ಅಸ್ತು' ಎಂದು ಅನ್ವಯವನ್ನು ತಿಳಿಯಬೇಕು.

ಭಾಷ್ಯದಲ್ಲಿ ಸೂತ್ರದ ವ್ಯಾಖ್ಯಾನ

ಭಾವದೀಪಃ – नेत्यादिभाष्यं व्याचष्टे – यदुक्तमिति ।। इति सूत्रांशमिति।। सूत्रे तदित्यत्सय प्रकृतशुक्परत्वमिति दर्शितम् । आङर्थोऽग्रे स्पष्टयिष्यते। भाष्ये शुगस्य तदिति पदत्रयस्यार्थाद् व्याख्यानं मत्वाऽह – इति सूत्रांशं व्याचष्टे इति ।।

'ನಾಸೌ ಪೌತ್ರಾಯಣಃ ಶೂದ್ರಃ' ಇತ್ಯಾದಿ ಭಾಷ್ಯವನ್ನು 'ಯದುಕ್ತಮ್' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ಇತಿ ಸೂತ್ರಾಂಶಂ' ಎಂದರೆ ಸೂತ್ರದಲ್ಲಿ 'ತತ್' ಎಂಬುದು ಪ್ರಕೃತವಾದ ಶೋಕವನ್ನು ಹೇಳುತ್ತಿದೆ ಎಂದರ್ಥ. 'ಆದ್ರವಣಾತ್' ಎಂಬಲ್ಲಿ 'ಆಙ್' ಎಂಬ ಉಪಸರ್ಗದ ಅರ್ಥವನ್ನು ಮುಂದೆ ಸ್ಪಷ್ಟ ಪಡಿಸುತ್ತಾರೆ. ಭಾಷ್ಯದಲ್ಲಿ 'ಶುಕ್ ಅಸ್ಯ ತತ್' ಎಂಬ ಮೂರು ಪದಗಳನ್ನು ಅರ್ಥಾತ್ ವ್ಯಾಖ್ಯಾನ ಮಾಡಿದಂತಾಯಿತೆಂದು 'ಇತಿ ಸೂತ್ರಾಂಶಂ ವ್ಯಾಚಷ್ಟೇ' ಎಂದು ಹೇಳಿದ್ದಾರೆ.

'ಅಯಿ ಭಲ್ಲಾಕ್ಷ' ಎಂಬ ಶ್ರುತ್ಯರ್ಥ

ಭಾವದೀಪಃ – 'अयि भल्लाक्ष भल्लाक्ष जानश्रुतेः पौत्रायणस्य समं दिवा ज्योतिराततं तन्मा प्रसाङ्क्षीः तत्त्वा मा प्रधाक्षीः' इत्येकेन हंसेनोक्तोऽन्यो हंसः प्रतिवक्ति – **कम्वर इति** ।। तदर्थम् 'अरे हंस' इति सूत्रे अस्यानादरेति षष्ठ्याः क्रियाकर्तृभावसम्बन्धलब्धार्थमाह – हंसकृतेति ।।

'ಅಯಿ ಭಲ್ಲಾಕ್ಷ ಭಲ್ಲಾಕ್ಷ ಜಾನಶ್ರುತೇಃ ಪೌತ್ರಾಯಣಸ್ಯ ಸಮಂ ದಿವಾ ಜ್ಯೋತಿರಿವಾತತಂ ತನ್ಮಾ ಪ್ರಸಾಂಕ್ಷೀಃ ತನ್ಮಾ ಮಾ ತತ್ಮಾ ಮಾ ಪ್ರಧಾಂಕ್ಷೀಃ' ಎಲೈ ಭಲ್ಲಾಕ್ಷನೇ ! ಜಾನಶ್ರುತಿಯೆನಿಸಿದ ಪೌತ್ರಾಯಣನ ತೇಜಸ್ಸನ್ನು ದಾಟಬೇಡ, ದಾಟಬೇಡ' ಎಂದು ಹಿಂದಿರುವ ಹಂಸ ಪಕ್ಷಿಯು ಮುಂದಿರುವ ಹಂಸಪಕ್ಷಿಯನ್ನು ಕುರಿತು ಹೇಳುತ್ತದೆ. ಆವಾಗ ಮುಂದಿರುವ ಹಂಸ ಪಕ್ಷಿಯು ಉತ್ತರಿಸುತ್ತದೆ. 'ಕಮ್ವರ' ಇತ್ಯಾದಿಯಾಗಿ.

ಅರೇ ಹಂಸ ! ಎಲೈ ಹಂಸವೇ ಎಂದು ಸೂತ್ರದಲ್ಲಿ 'ತಸ್ಯ' ಎಂದು ಅನಾದರವನ್ನು ಸೂಚಿಸಲಾಗಿದೆ. ಇದರಿಂದ ಕ್ರಿಯಾಕರ್ತೃಭಾವಸಂಬಂಧವು ಲಬ್ಧವಾಗುತ್ತದೆ. ಅದನ್ನೇ 'ಹಂಸಶ್ರುತೇಶ್ಚ' ಇತ್ಯಾದಿ ಟೀಕೆಯು ಹೇಳುತ್ತಿದೆ.

'ತದನಾದರಶ್ರವಣಾತ್' ಎಂಬ ಸೂತ್ರದ ವ್ಯಾಖ್ಯಾನ

ಭಾವದೀಪಃ – ಶೇಷಮಾಹ – ಅಸ್ಯೇತ್ಯಾದಿ ।। ಪೂರ್ವತ್ರ ಸೂತ್ರೇ ತದಿತಿ ತಚ್ಛಬ್ದೇನ ವ್ಯಾಖ್ಯೇಯಶ್ರುತಿಗತಹಂಸಪರಾಮರ್ಶ ಇತ್ಯರ್ಥಃ ।

ಉಳಿದ ಭಾಷ್ಯದ ಅಭಿಪ್ರಾಯವನ್ನು 'ಅತ' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ. ಹಿಂದಿನ ಸೂತ್ರದಲ್ಲೆಲ್ಲೂ ಸಹ ಪ್ರಕೃತವಾಗದ್ದನ್ನು 'ತತ್' ಎಂಬ ಪದದಿಂದ ಹೇಗೆ ಅನುವೃತ್ತಿ ಮಾಡಿಕೊಳ್ಳುತ್ತೀರಿ? ಹಂಸಕೃತ ಅನಾದರಶ್ರವಣದಿಂದ ಎಂದು ವ್ಯಾಖ್ಯಾನ ಮಾಡುವುದು ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆಗೆ 'ತದಿತಿ ಶ್ರುತ್ಯುಕ್ತಪರಾಮರ್ಶಃ' ಎಂದು ಉತ್ತರಿಸಿದ್ದಾರೆ. ಶ್ರುತಿಯಿಲ್ಲಿರುವುದನ್ನು ಪರಾಮರ್ಶ ಮಾಡಬಹುದು. 'ತದನಾದರಶ್ರವಣಾತ್' ಎಂದು ಸೂತ್ರದಲ್ಲಿ ಕೇಳಿಸುತ್ತಿರುವ 'ತತ್' ಎಂಬ ಪದದಿಂದ ಶ್ರುತಿಯಲ್ಲಿರುವ ಹಂಸವನ್ನು ಪರಾಮರ್ಶ ಮಾಡಬೇಕು.

ಅನಾದರಶ್ರವಣ ಎಂಬ ಕಾರಣದ ಬಗ್ಗೆ

ಭಾವದೀಪಃ – ಕಾರಣಸ್ಯ ಸಮಗ್ರಸ್ಯೇತ್ಯರ್ಥಃ । ಇಹ ಚ ಶೋಕೇ ಸತಿ ನ ಕಾರ್ಯಮುಪಲಭ್ಯತ ಇತಿ ಭಾವಃ । ಹಿಶಬ್ದೋ ಹೇತಾವಿತಿ ಮತ್ವಾऽಹ – ಅತ ಇತಿ ।। ವ್ಯಗ್ರತಾಖ್ಯಕಾರ್ಯ-ಲಿಙ್ಗದರ್ಶನೇನ ಶೋಕಸ್ಯ ಜ್ಞಾಪಿತತ್ವಾದ್ ಅನಾದರಶ್ರವಣಾತ್ಕಾರಣಾದಿತ್ಯರ್ಥಃ।।

'ಕಾರಣಸ್ಯ' ಎಂದರೆ ಸಮಗ್ರವಾದ ಕಾರಣವು ಎಂದರ್ಥ. ಶೋಕವಾದರೋ ಕಾರ್ಯವು ಉಪಲಬ್ಧವಾಗುತ್ತಿಲ್ಲ ಎಂದಭಿಪ್ರಾಯ. ಹಿ ಶಬ್ದವು ಹೇತ್ವರ್ಥದಲ್ಲಿದೆಯೆಂದು 'ಅತಃ' ಎಂಬುದರಿಂದ

ಹೇಳಿದ್ದಾರೆ. 'ವ್ಯಗ್ರತಾ' ಎಂಬ ಕಾರ್ಯಲಿಂಗದಿಂದ ಶೋಕವು ಇದೆಯೆಂದು ಊಹಿಸಬಹುದು. 'ಅನಾದರಶ್ರವಣ'ವೆಂಬ ಕಾರಣವಿರುವುದರಿಂದ.

ಸೂತ್ರ ಶಬ್ದದ ನಿಷ್ಪತ್ತಿ

ಭಾವದೀಪಃ – ತದುಕ್ತಮಿತಿ ।। ಛಾನ್ದೋಗ್ಯಭಾಷ್ಯೋಕ್ತಪಾದ್ಮಸ್ಮೃತಾವುಕ್ತಮಿತ್ಯರ್ಥಃ । ಶೋಕಾಚ್ಛೋಕೇನ ಆದ್ರವಣಾದಿತ್ಯರ್ಥಃ । ತಥಾಚ ಶುಗುಪಪದಾದ್ 'ದ್ರು ಗತೌ' ಇತಿ ಧಾತೋಃ ಡಪ್ರತ್ಯಯೇ ಗಕಾರಸ್ಯ ದಕಾರೇ ರೂಪಮಿತ್ಯರ್ಥಃ ।

'ತದುಕ್ತಮ್' ಎಂದರೆ ಛಾಂದೋಗ್ಯಭಾಷ್ಯದಲ್ಲಿ ಉದಾಹರಿಸಿದ ಪದ್ಮಪುರಾಣದ ಸ್ಮೃತಿಯಲ್ಲಿ ಹೇಳಲಾಗಿದೆ ಎಂದು ಅರ್ಥ. 'ಶೋಕಾತ್' ಎಂದರೆ 'ದುಃಖದಿಂದ ಬಂದಿದ್ದಾನೆ' ಎಂದರ್ಥ. ಆದ್ದರಿಂದ, 'ಶುಕ್' ಎಂಬ ಉಪಪದದ ಮುಂದೆ 'ದ್ರು ಗತೌ' ಎಂಬ ಧಾತುವಿಗೆ 'ಡ' ಪ್ರತ್ಯಯವು ಬಂದು, ಗಕಾರಕ್ಕೆ ದಕಾರವು ಬಂದರೆ 'ಶೂದ್ರ' ಎಂಬ ರೂಪವು ಸಿದ್ಧವಾಗಿದೆ.

'ಶೂದ್ರ' ಎಂಬಲ್ಲಿರುವ ದೀರ್ಘದ ಬಗ್ಗೆ

ಭಾವದೀಪಃ – ತರ್ಹಿ ಶ್ರುತೌ ಶುದ್ರೇತಿ ವಕ್ತವ್ಯೇ ಉಕಾರೇ ದೀರ್ಘೇಣ ಶೂದ್ರೇತಿ ಕಿಮರ್ಥಮುಕ್ತಮ್। ಸೂತ್ರೇ ಚ ತದ್ರವಣಾದಿತ್ಯೇವ ಪೂರ್ತೌ ತದಾದ್ರವಣಾದಿತ್ಯಾಙ್ಪ್ರಯೋಗಶ್ಚ ಕಿಮರ್ಥಮ್? ಇತ್ಯತ ಆಹ – ದೀರ್ಘೇತಿ ।।

ಶುಕ್, ದ್ರು, ಡ ಎಂಬಲ್ಲಿ ಉಕಾರಲೋಪವಾದ ಮೇಲೆ ಗಕಾರಕ್ಕೆ ದಕಾರ ಬಂದರೆ ಶುದ್ರ ಎಂದೇ ಆಗುತ್ತದೆ. 'ಶೂದ್ರ' ಎಂಬ ದೀರ್ಘವಾದ ಊಕಾರಪ್ರಯೋಗವು ಹೇಗೆ ಯುಕ್ತವಾಗುತ್ತದೆ? ಮತ್ತು ಸೂತ್ರದಲ್ಲಿ 'ತದ್ದ್ರವಣಾತ್' ಎಂದೇ ಹೇಳಬೇಕಿತ್ತು. 'ತದಾದ್ರವಣಾತ್' ಎಂಬ 'ಆ' ಪ್ರಯೋಗವಾದರೂ ಕೂಡ ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆಗೆ 'ದೀರ್ಘ' ಇತ್ಯಾದಿ ಟೀಕೆಯಿಂದ ಉತ್ತರಿಸಿದ್ದಾರೆ.

ಊಕಾರದಿಂದ ಶೋಕಾಧಿಕ್ಯ

ಭಾವದೀಪಃ – ದೀರ್ಘೋ ಯಃ ಸ್ವರಃ ಶೂದ್ರ ಇತ್ಯತ್ರ ಊಕಾರೋ ರೂಪೋ ವರ್ಣಃ । 'ಅಚಃ ಸ್ವರಾಃ' ಇತಿ ಶಿಕ್ಷಾಗ್ರನ್ಥೇऽಜಕ್ಷರಾಣಾಂ ಸ್ವರತ್ವೋಕ್ತೇಃ । ತಸ್ಯ ಯೋऽರ್ಥಃ ಶೋಕಾಧಿಕ್ಯರೂಪೋऽರ್ಥಃ ತದರ್ಥತ್ವೇನ ತದ್ವಚಕ್ತ್ಯರ್ಥತ್ವೇನ ಸೂತ್ರೇ ತದಾದ್ರವಣಾದಿತ್ಯುಕ್ತಮಿತ್ಯರ್ಥಃ।

'ಶೂದ್ರ' ಎಂಬಲ್ಲಿ ಯಾವ ದೀರ್ಘವಾದ ಊಕಾರ ಎಂಬ ಸ್ವರಾಕ್ಷರವಿದೆಯೋ, ಅದು ಆಧಿಕ್ಯಾರ್ಥದಲ್ಲಿದೆ. ಏಕೆಂದರೆ, 'ಅಚ ಸ್ವರಾಃ' ಎಂಬ ಶಿಕ್ಷಾ ಗ್ರಂಥದಲ್ಲಿ 'ಅಚ್' ಅಕ್ಷರಗಳಿಗೆ ಸ್ವರತ್ವವನ್ನು ಹೇಳಿದ್ದಾರೆ. ದೀರ್ಘವಿದ್ದರೆ ಆಧಿಕ್ಯವೆಂಬ ಅರ್ಥವನ್ನು ಹೇಳಬೇಕೆಂದು ಅಲ್ಲಿ ಹೇಳಿದ್ದರಿಂದ, 'ಶೂದ್ರ' ಎಂಬಲ್ಲಿರುವ ಊಕಾರವು ಶೋಕಾಧಿಕ್ಯವನ್ನು ತಿಳಿಸುತ್ತಿದೆ. ಹೀಗೆ ಶ್ರುತಿಗೆ ವ್ಯಾಖ್ಯಾನ ಮಾಡಬೇಕೆಂದು ತಿಳಿಸುವುದಕ್ಕಾಗಿ, ಸೂತ್ರಕಾರರು 'ತದ್‌ದ್ರವಣಾತ್' ಎಂದು ಹೇಳದೆ, 'ತದಾದ್ರವಣಾತ್' ಎಂಬುದಾಗಿ 'ಆಜ್' ಉಪಸರ್ಗವನ್ನು ಸೇರಿಸಿ ಪ್ರಯೋಗ ಮಾಡಿದ್ದಾರೆ.

ಸಂಹಿತಾ ಪಾಠದಲ್ಲಿ ಅರ್ಥವಿಶೇಷ

ಭಾವದೀಪಃ – 'संहितायां तत्र दैर्घ्यं पदे यत्र न विद्यते । उक्तार्थस्य महाधिक्यं श्रुतेस्तत्र विवक्षितम् ।।' इत्याद्यैतरेयभाष्योक्तेः ।। रुद्र इतिवदिति ।।

'ಸಂಹಿತಾಯಾಂ ತತ್ರ ದೈರ್ಘ್ಯಂ ಪದೇ ಯತ್ರ ನ ವಿದ್ಯತೇ।
ಉಕ್ತಾರ್ಥಸ್ಯ ಮಹಾಧಿಕ್ಯಂ ಶ್ರುತೇಸ್ತತ್ರ ವಿವಕ್ಷಿತಮ್ ।।'

ಸಂಹಿತಾದಲ್ಲಿ ದೀರ್ಘವು ಬಂದರೆ ಪದಪಾಠದಲ್ಲಿ ಹ್ರಸ್ವವಿದ್ದರೆ ಅರ್ಥದಲ್ಲಿ ಆಧಿಕ್ಯ ಬರುತ್ತದೆ ಎಂದು ಐತರೇಯ ಭಾಷ್ಯದಲ್ಲಿ ಹೇಳಿರುತ್ತಾರೆ. ಅದರಂತೆ, ಇಲ್ಲಿಯೂ ಸಹ ಶೂದ್ರ ಎಂಬಲ್ಲಿ ದೀರ್ಘವು ಆಧಿಕ್ಯಾರ್ಥವನ್ನು ತಿಳಿಸುತ್ತದೆ.

ರುದ್ರ ಶಬ್ದದ ಉದಾಹರಣೆ

ಭಾವದೀಪಃ – यथा 'रुजं द्रावयते यस्माद् रुद्रस्तस्माज्जनार्दनः' । इति निरुक्तत्वाद् गकारस्य दत्वेन रुद्र इति रूपम्, तथेत्यर्थः ।। ३४ ।।

'ರುಜಂ ದ್ರಾವಯತೇ ಯಸ್ಮಾತ್ ರುದ್ರಸ್ತಸ್ಮಾತ್ ಜನಾರ್ದನಃ' ಎಂಬ ನಿರುಕ್ತದಂತೆ ರುಗ್, ದ್ರ ಎಂಬಲ್ಲಿ ಗಕಾರಕ್ಕೆ ದಕಾರ ಬಂದು 'ರುದ್ರ' ಎಂಬ ರೂಪವು ಹೇಗೆ ನಿಷ್ಪನ್ನವಾಗಿದೆಯೋ, ಅದರಂತೆ ಇಲ್ಲಿಯೂ ಸಹ ಶುಗ್, ದ್ರ ಎಂಬಲ್ಲಿ ಗಕಾರಕ್ಕೆ ದಕಾರವು ಬಂದು 'ಶೂದ್ರ' ಎಂಬ ರೂಪವು ನಿರುಕ್ತದ ಬಲದಿಂದ ನಿಷ್ಪನ್ನವಾಗಿದೆ ಎಂದು ತಿಳಿಯಬೇಕು, ಹೊರತು, ಔಣಾದಿಕ ಪ್ರತ್ಯಯದಿಂದ ಶೂದ್ರ ಶಬ್ದವನ್ನು ನಿಷ್ಪನ್ನ ಮಾಡಬಾರದು.

ಬ್ರಹ್ಮಸೂತ್ರ

'ಕ್ಷತ್ರಿಯತ್ವಾವಗತೇಃ' ಇತ್ಯಾದಿ ಸೂತ್ರ ವ್ಯಾಖ್ಯಾನ

ಬ್ರಹ್ಮಸೂತ್ರಮ್ – ।। ಕ್ಷತ್ರಿಯತ್ವಾವಗತೇಶ್ಚೋತ್ತರತ್ರ ಚೈತ್ರರಥೇನ ಲಿಙ್ಗಾತ್ ।। ೩೫ ।।

ಸೂತ್ರಾರ್ಥ -- ಪೌತ್ರಾಯಣನಿಗೆ ಆದ್ರವಣವನ್ನು ಹೇಳಿ ಮುಂದಿನ ವಾಕ್ಯದಲ್ಲಿ 'ಅಯಮಶ್ವತರೀರಥಃ' ಎಂಬುದಾಗಿ ಹೇಸರಗತ್ತೆಗಳಿಂದ ಕಟ್ಟಲ್ಪಟ್ಟ ರಥದ ಸಂಬಂಧವು ಶ್ರುತವಾಗಿದೆ. ಇದು ಕ್ಷತ್ರಿಯರ ಲಿಂಗವಾದ್ದರಿಂದ ಪೌತ್ರಾಯಣನು ಕ್ಷತ್ರಿಯಜಾತಿಯವನೆಂದು ತಿಳಿಯಲ್ಪಡುತ್ತದೆ. ಆದ್ದರಿಂದಲೂ ಅವನು ಶೂದ್ರನಾಗುವುದಿಲ್ಲ.

ಅರ್ಥ -- ಚಶಬ್ದವು ಮತ್ತೊಂದು ಲಿಂಗವನ್ನು ಸಮುಚ್ಚಯ ಮಾಡುತ್ತಿದೆ. ಉತ್ತರತ್ರ = ಅಶ್ವತರೀರಥಃ ಎಂಬ ಮುಂದಿನ ವಾಕ್ಯದಲ್ಲಿ ಶ್ರುತೇನ ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ಚೈತ್ರರಥೇನ = ಚಿತ್ರಶಬ್ದಃ ಅರ್ಥವೆನಿಸಿದ ಹೇಸರಗತ್ತೆಗಳಿಂದ ಕಟ್ಟಲ್ಪಟ್ಟ ರಥದ ಸಂಬಂಧವೆಂಬ, ಲಿಂಗಾತ್ = ಲಿಂಗದಿಂದ, ಅಸ್ಯ = ಪೌತ್ರಾಯಣನಿಗೆ, ಕ್ಷತ್ರಿಯತ್ವಾವಗತೇಶ್ಚ = ಕ್ಷತ್ರಿಯತ್ವವು ತಿಳಿದು ಬರುವುದರಿಂದಲೂ, ಉಪನಿಷತ್ತಿನಲ್ಲಿರುವ ಶೂದ್ರಶಬ್ದವು ರೂಢಿಯಿಂದ ಶೂದ್ರಜಾತಿಯನ್ನು ಹೇಳುವುದಿಲ್ಲ. ಆದ್ದರಿಂದ ಪೌತ್ರಾಯಣನು ಶೂದ್ರನಲ್ಲ.

ಬ್ರಹ್ಮಸೂತ್ರಭಾಷ್ಯ

ರೈಕ್ವಮುನಿಯ ಉಪದೇಶ ಕ್ಷತ್ರಿಯನಾದ ಪೌತ್ರಾಯಣನಿಗೆ ಹೊರತು ಶೂದ್ರನಿಗಲ್ಲ

ಬ್ರಹ್ಮಸೂತ್ರಭಾಷ್ಯಮ್ – 'अयमश्वतरी रथः' इति चित्ररथसम्बन्धित्वेन लिङ्गेन पौत्रायणस्य क्षत्रियत्वावगतेश्च ।

ಅನುವಾದ - 'ಅಯಮಶ್ವತರೀರಥಃ' ಎಂಬ ವಾಕ್ಯದಲ್ಲಿ ಚಿತ್ರರಥದ ಸಂಬಂಧವನ್ನು ಪೌತ್ರಾಯಣನಿಗೆ ಹೇಳಲಾಗಿದೆ. ಈ ಲಿಂಗದಿಂದಲೂ ಪೌತ್ರಾಯಣನು ಕ್ಷತ್ರಿಯನೇ ಆಗಿದ್ದಾನೆಂದು ಸ್ಪಷ್ಟವಾಗುತ್ತದೆ.

ಪ್ರತಿಪದಾರ್ಥ -- ಶ್ರುತಿಯಲ್ಲಿರುವ ಸೂತ್ರಶಬ್ದಕ್ಕೆ ಯೌಗಿಕಾರ್ಥವನ್ನು ಏಕೆ ಸ್ವೀಕರಿಸುತ್ತೀರಿ? ರೂಢಾರ್ಥವನ್ನೇ ಹೇಳಬಹುದಲ್ಲವೇ?

ಏಕೆಂದರೆ, ಯೋಗರೂಢಿಗಳಲ್ಲಿ ರೂಢಾರ್ಥವೇ ಪ್ರಬಲವಾಗಿರುತ್ತದೆ. ಈ ಆಕ್ಷೇಪಕ್ಕೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ –

ಅಯಂ = ಈ ಪೌತ್ರಾಯಣನು, ಅಶ್ವತರೀರಥಃ = ಹೇಸರಗತ್ತೆಯ ರಥವುಳ್ಳವನು, ಇತಿ = ಹೀಗೆ, ಚಿತ್ರರಥಸಂಬಂಧಿತ್ವೇನ = ಚಿತ್ರರಥದ ಸಂಬಂಧವನ್ನು ಹೇಳುತ್ತಿರುವ, ಲಿಂಗೇನ = ಲಿಂಗದಿಂದ, ಪೌತ್ರಾಯಣಸ್ಯ = ಪೌತ್ರಾಯಣನು, ಕ್ಷತ್ರಿಯತ್ವಾವಗತೇಶ್ಚ = ಕ್ಷತ್ರಿಯನೇ ಆಗಿದ್ದಾನೆಂದು ತಿಳಿಯುತ್ತದೆ

ಚಿತ್ರರಥ ಸ್ವರೂಪದ ವರ್ಣನೆ

ಬ್ರಹ್ಮಸೂತ್ರಭಾಷ್ಯಮ್ – ರಥಸ್ತ್ವಶ್ವತರೀಯುಕ್ತಶ್ಚಿತ್ರ ಇತ್ಯಭಿಧೀಯತೇ । ಇತಿ ಬ್ರಾಹ್ಮೇ ।

ಅನುವಾದ - ''ಹೇಸರಗತ್ತೆಯಿಂದ ಕೂಡಿರುವ ರಥಕ್ಕೆ 'ಚಿತ್ರರಥ' ಎಂದು ಹೆಸರು''. ಹೀಗೆ ಬ್ರಹ್ಮಾಂಡಪುರಾಣದಲ್ಲಿ ಚಿತ್ರರಥದ ಸ್ವರೂಪವನ್ನು ನಿರ್ದೇಶಿಸಲಾಗಿದೆ.

ಪ್ರತಿಪದಾರ್ಥಜ -- ಶ್ರುತಿಯಲ್ಲಿ 'ಅಶ್ವತರೀರಥಃ' ಎಂಬ ಶಬ್ದವನ್ನು ಪ್ರಯೋಗಿಸಿದ್ದರಿಂದ ಸೂತ್ರದಲ್ಲಿಯೂ ಹಾಗೆಯೇ ಪ್ರಯೋಗಿಸಬೇಕು. ಇದನ್ನು ಬಿಟ್ಟು 'ಚೈತ್ರರಥೇನ' ಎಂದು ಏಕೆ ಹೇಳಿದರು? ಎಂಬ ಆಕ್ಷೇಪಕ್ಕೆ, ಎರಡೂ ಪದಗಳಿಗೂ ಒಂದೇ ಅರ್ಥವಿದೆ. ಆದ್ದರಿಂದ ವಿಸಂವಾದವಿಲ್ಲವೆಂದು ಸ್ಪಷ್ಟಪಡಿಸುತ್ತಿದ್ದಾರೆ –

ಅಶ್ವತರೀಯುಕ್ತಃ = ಹೇಸರಗತ್ತೆಯಿಂದ ಕೂಡಿದ, ರಥಸ್ತು = ರಥವಾದರೂ, ಚಿತ್ರ ಇತ್ಯಭಿಧೀಯತೇ = ಚಿತ್ರರಥವೆಂದೆನಿಸುತ್ತದೆ. ಇತಿ = ಹೀಗೆ, ಬ್ರಾಹ್ಮೇ = ಬ್ರಹ್ಮಾಂಡ ಪುರಾಣದಲ್ಲಿ ಸ್ಪಷ್ಟಪಡಿಸಲಾಗಿದೆ.

ವೇದದಲ್ಲಿ ಅಧಿಕಾರವಿರುವವರಿಗೆ ರಥ ಸಂಬಂಧ

ಬ್ರಹ್ಮಸೂತ್ರಭಾಷ್ಯಮ್ – ಯತ್ರ ದೇವೋ ರಥಸ್ತತ್ರ ನ ವೇದೋ ಯತ್ರ ನೋ ರಥಃ । ಇತಿ ಬ್ರಹ್ಮವೈವರ್ತೇ

॥೩೯॥

ಅನುವಾದ - ವೇದದಲ್ಲಿ ಅಧಿಕಾರವಿರುವವರಿಗೆ ಮಾತ್ರ ರಥದ ಸಂಬಂಧ. ವೇದದಲ್ಲಿ ಅಧಿಕಾರವಿಲ್ಲದವರಿಗೆ ರಥದ ಸಂಬಂಧವಿಲ್ಲ ಎಂಬುದಾಗಿ ಬ್ರಹ್ಮವೈವರ್ತ ಪುರಾಣವು ಹೇಳಿದೆ.

ಪ್ರತಿಪದಾರ್ಥ -- ಸ್ವಾಭಾವಿಕವಾದ ರಥದ ಸಂಬಂಧದಿಂದ ಪೌತ್ರಾಯಣನು ಕ್ಷತ್ರಿಯನಾಗಿದ್ದಾನೆಂದು ಸಾಧಿಸಲಾಯಿತು. ಸ್ವಾಭಾವಿಕವಾದ ರಥಸಂಬಂಧವಿದ್ದರೂ ಶೂದ್ರ ಜಾತಿಯವನೇಕೆ ಆಗಬಾರದು? ಎಂಬ ಅಪ್ರಯೋಜಕ ಆಶಂಕೆಗೆ ಆಗಂತುಕವಾದ ರಥದ ಸಂಬಂಧವೂ ಕೂಡ ಶೂದ್ರರಿಗಿರುವುದಿಲ್ಲ ಎಂದು ಸಾಧಿಸುತ್ತಿದ್ದಾರೆ –

ಯತ್ರ ವೇದಃ = ಎಲ್ಲಿ ವೇದಾಧಿಕಾರವಿದೆಯೋ, ತತ್ರ = ಅಲ್ಲಿ, ರಥಃ = ರಥದ ಸಂಬಂಧವಿರುತ್ತದೆ. ಯತ್ರ = ಎಲ್ಲಿ, ನ ವೇದಃ = ವೇದಾಧಿಕಾರವಿರುವುದಿಲ್ಲವೋ, ತತ್ರ = ಅಲ್ಲಿ, ನೋ ರಥಃ = ರಥದ ಸಂಬಂಧವೂ ಕೂಡ ಇರುವುದಿಲ್ಲ. ಇತಿ = ಹೀಗೆ, ಬ್ರಹ್ಮವೈವರ್ತೇ = ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಲಾಗಿದೆ.

ಸತ್ತರ್ಕದೀಪಾವಳಿ

ಶೂದ್ರನು ಚಿತ್ರರಥನಲ್ಲ

सत्तर्कदीपावलिः –

।। क्षत्रियत्वावगतेश्चोत्तरत्र चैत्ररथेन लिङ्गात् ।।

ननु पद्मे पङ्कजशब्दनिरुक्तिवच्चतुर्थवर्ण एवायं किन्न स्याद्? इत्याशङ्क्य परिहारोत्तरसूत्रमवतार्य व्याचष्टे – क्षत्रियत्वेत्यादिना ।। 'ध्रुवश्चित्ररथश्चराली' इत्यादौ क्षत्रियस्य चित्ररथः प्रतीयते । नहि तथा विप्रवैश्ययोः क्वचित् । शूद्रस्य तु वेदाभावाद् रथ एव नास्ति, कुतश्चित्ररथः इति भावः ।।

ಕಮಲದಲ್ಲಿ ಪಂಕಜ ಶಬ್ದದ ನಿರುಕ್ತಿಯಿರುವಂತೆ ಶೂದ್ರನಲ್ಲಿಯೇ ಶೂದ್ರಶಬ್ದದ ನಿರುಕ್ತಿಯನ್ನು ಏಕೆ ಹೇಳಬಾರದು? ಎಂದು ಆಶಂಕಿಸಿ, ಪರಿಹಾರಕ್ಕೋಸ್ಕರ, ಮುಂದಿನ ಸೂತ್ರಕ್ಕೆ

ಅವತಾರಿಕೆ ನೀಡಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಕ್ಷತ್ರಿಯತ್ವ' ಇತ್ಯಾದಿಯಾಗಿ. 'ಧ್ರುವಶ್ಚಿತ್ರರಥಶ್ಚಾಲೀ' ಎಂಬಲ್ಲಿ ಕ್ಷತ್ರಿಯನೇ ಚಿತ್ರರಥನೆಂದು ತಿಳಿಯುತ್ತಿದೆ. ಅಂತಹ ಚಿತ್ರರಥನು ಬ್ರಾಹ್ಮಣನಾಗಲಿ, ವೈಶ್ಯನಾಗಲಿ ಎಲ್ಲಿಯೂ ಹೇಳಿಲ್ಲ. ಶೂದ್ರನಿಗೆ ವೇದವೇ ಇಲ್ಲದ ಕಾರಣ, ರಥವೇ ಇಲ್ಲ. ಹೀಗಿರುವಾಗ ಚಿತ್ರರಥನೆಂದು ಹೇಳುವುದು ದೂರತೋऽಪಾಸ್ತ.

ತತ್ವಪ್ರದೀಪ

ಪೌತ್ರಾಯಣನು ಶೂದ್ರನಲ್ಲವೆನ್ನಲು ಮತ್ತೊಂದು ಕಾರಣ

तत्वप्रदीपः – क्षत्रियत्वगतेश्चोत्तरत्र चैत्ररथेन लिङ्गात् ।। इतश्च न पौत्रायणः शूद्रः । ''अयमश्वतरीरथः'' इत्युक्त्वा स्वकीयस्य चित्ररथस्य रैक्के निवेदनेन चित्ररथसम्बन्धित्वावगमात् । तेन लिङ्गेन क्षत्रियत्वावगमात् । अतो न शूद्रस्याधिकारः । गर्दभादश्वायां जाता 'अश्वतर्यः ।।

ಮತ್ತೊಂದು ಕಾರಣದಿಂದಲೂ ಪೌತ್ರಾಯಣರಾಜನು ಶೂದ್ರನಲ್ಲವೆಂದು ತಿಳಿಯುತ್ತದೆ. 'ಅಯಮಶ್ವತರೀರಥಃ' 'ಈ ಅಶ್ವತರೀರಥ ಮೊದಲಾದವು ತಮಗೆ ಗುರುದಕ್ಷಿಣೆ' ಎಂಬುದಾಗಿ ರೈಕ್ವಮುನಿಗಳಿಗೆ ರಾಜನು ಹೇಳಿರುವನು. ಅನಂತರ ತನ್ನ ಚಿತ್ರರಥವನ್ನು ರೈಕ್ವಮುನಿಗಳಿಗೆ ನಿವೇದಿಸಿದನು. ಇದರಿಂದ ಪೌತ್ರಾಯಣನು ಚಿತ್ರರಥಸಂಬಂಧಿಯಾದವನೆಂದು ತಿಳಿಯುತ್ತದೆ. ಈ ಲಿಂಗದಿಂದ ಪೌತ್ರಾಯಣನು ಕ್ಷತ್ರಿಯನೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಶೂದ್ರನಿಗೆ ವೇದವಿಷಯದಲ್ಲಿ ಅಧಿಕಾರವಿರುವುದಿಲ್ಲ.

ಕತ್ತೆಯಿಂದ ಕುದುರೆಯಲ್ಲಿ ಹುಟ್ಟಿದ ಪ್ರಾಣಿಗೆ 'ಅಶ್ವತರೀ' ಎಂದು ಹೆಸರು.

ವಿವರಣೆ – ಪೌತ್ರಾಯಣರಾಜನು ರೈಕ್ವಮುನಿಗಳಿಗೆ ಅನೇಕ ರೀತಿಯ ಗುರುಕಾಣಿಕೆಯನ್ನು ಮೊದಲು ಸಮರ್ಪಿಸಿದನು. ಅದನ್ನು ರೈಕ್ವಮುನಿಯು ತಿರಸ್ಕರಿಸಿದಾಗ ಮತ್ತಷ್ಟು ಗುರುದಕ್ಷಿಣೆಯನ್ನು ರಥವನ್ನು ತಂದು 'ಅಯಮಶ್ವತರೀರಥಃ' ಎಂದು ಸಮರ್ಪಿಸಿದನು. ಇದರಿಂದ ಪೌತ್ರಾಯಣನು ರಥಾರೂಢನಾಗಿದ್ದನೆಂದು ಸ್ಪಷ್ಟವಾಗುತ್ತದೆ. ಯಾರು ವೇದವಿದ್ಯೆಯಲ್ಲಿ ಅಧಿಕಾರಿಗಳೋ, ಅವರಿಗೆ ಮಾತ್ರ ರಥದಲ್ಲಿ ಏರುವ ಅರ್ಹತೆ

ಇರುತ್ತದೆ. ವೇದಾಧಿಕಾರವಿಲ್ಲದವರು ರಥದ ಒಡೆಯರಾಗಲು ಸಾಧ್ಯವಿಲ್ಲ. ಇದರಿಂದ ಪೌತ್ರಾಯಣನು ಕ್ಷತ್ರಿಯನಾಗಿದ್ದನೆಂಬುದು ನಿಶ್ಚಿತವಾಯಿತು. ಹಾಗಾಗಿ ಶೂದ್ರಶಬ್ದಕ್ಕೆ ಪ್ರಸಿದ್ಧವಾದ ಶೂದ್ರಜಾತಿ ಎಂಬರ್ಥವನ್ನು ಬಿಟ್ಟು, ದುಃಖಸಂತಪ್ತನಾಗಿ ಓಡಿಬಂದನು ಎಂಬರ್ಥವನ್ನು ಸ್ವೀಕರಿಸಬೇಕು.

ತತ್ತ್ವಪ್ರಕಾಶಿಕಾ

ಯೋಗಕ್ಕಿಂತಲೂ ರೂಢಿ ಪ್ರಬಲವಲ್ಲವೇ?

तत्वप्रकाशिका – ।। क्षत्रियत्वावगतेश्चोत्तरत्र चैत्ररथेन लिङ्गात् ।।

ननु शूद्रशब्दोऽयं कुतो यौगिकोऽङ्गीक्रियते ? रूढार्थ एव किं न स्यात् ? योगरूढ्यो रूढेरेव प्राबल्यात् । तथा च पौत्रायणनिंदर्शनेन शूद्रस्य वेदविद्याधिकारसिद्धिरित्याशङ्कां परिहरत्सूत्रमुपन्यस्य व्याचष्टे – क्षत्रियत्वेति।।

ಹಿಂದಿನ ಅಧಿಕರಣದಲ್ಲಿ ಉದಾಹರಿಸಲ್ಪಟ್ಟ ಶ್ರುತಿವಾಕ್ಯದಲ್ಲಿ ಶೂದ್ರಶಬ್ದವು ಯೌಗಿಕಾರ್ಥವೆಂದು ಹೇಳಲಾಯಿತು. ಆದರೆ, ರೂಢಾರ್ಥವುಳ್ಳದ್ದೆಂದು ಏಕೆ ಹೇಳಬಾರದು? ಯೋಗ ಮತ್ತು ರೂಢಿಗಳಲ್ಲಿ ರೂಢಿಯೇ ಪ್ರಬಲವಾಗಿರುತ್ತದೆ. ಆದ್ದರಿಂದ, ಶೂದ್ರಶಬ್ದಕ್ಕೆ ರೂಢ್ಯರ್ಥವನ್ನು ಸ್ವೀಕರಿಸಿದಾಗ, ಪೌತ್ರಾಯಣನ ದೃಷ್ಟಾಂತದಿಂದ ಶೂದ್ರನಿಗೂ ವೇದವಿದ್ಯಾಧಿಕಾರವಿದೆಯೆಂದು ಸಿದ್ಧವಾಗುತ್ತದಲ್ಲವೇ? ಈ ಆಶಂಕೆಯನ್ನು ಪರಿಹಾರ ಮಾಡುವಂತಹ ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ, 'ಕ್ಷತ್ರಿಯತ್ವ' ಇತ್ಯಾದಿಯಾಗಿ.

ಬಾಧಕವಿದ್ದಾಗ ಯೋಗವೇ ಪ್ರಬಲ

तत्वप्रकाशिका – 'अयमश्वतरीरथः' इति पौत्रायणस्याऽऽद्रवणात्, शूद्रशब्देन सम्बोधनाद्वोत्तरत्र चित्ररथसम्बन्धित्वलिङ्गंश्रूयते । तेन च लिङ्गेन तस्य क्षत्रियत्वमवगम्यते । अतो रूढेरेव प्राबल्येऽपि बादकाद् योगाङ्गीकारो युक्त इति भावः ।

ಈ ಶ್ರುತಿಯಲ್ಲಿ 'ಅಯಮಶ್ವತರೀರಥಃ' ಎಂಬುದಾಗಿ ಪೌತ್ರಾಯಣನಿಗೆ ಅಶ್ವತರೀ ಎಂಬ ರಥದ ಮೂಲಕ ಶೀಘ್ರಗಮನವನ್ನು ಹೇಳಲಾಗಿದೆ. ಅನಂತರ, ಶೂದ್ರಶಬ್ದದಿಂದ 'ಎಲೈ ಶೂದ್ರನೇ!' ಎಂದು ಸಂಬೋಧನೆಯನ್ನು ಮತ್ತು ಚಿತ್ರರಥಸಂಬಂಧಿತ್ವ ಎಂಬ ಲಿಂಗವನ್ನು ಹೇಳಲಾಗಿದೆ. ಈ ಲಿಂಗದಿಂದ ಪೌತ್ರಾಯಣನು ಕ್ಷತ್ರಿಯನೇ ಆಗಿದ್ದಾನೆಂದು ಸ್ಪಷ್ಟವಾಗುತ್ತದೆ. ಹಾಗಾಗಿ, ಯೋಗಕ್ಕಿಂತ ರೂಢಿಯು ಪ್ರಬಲವಾಗಿದ್ದರೂ ಬಾಧಕವಿರುವ ಪ್ರಯುಕ್ತ ಯೋಗಾರ್ಥವನ್ನೇ ಸ್ವೀಕರಿಸುವುದು ಸೂಕ್ತವಾಗುತ್ತದೆಂದು ಅಭಿಪ್ರಾಯ.

ಸೂತ್ರದಲ್ಲೇಕೆ ಅಶ್ವತರೀರಥ ಎನ್ನಲಿಲ್ಲ

तत्वप्रकाशिका – श्रुतावश्वतरीरथश्रवणात् कथं चित्ररथत्वमसूत्रयत् ? इत्यत आह – रथ इति ।।

ಶ್ರುತಿಯಲ್ಲಿ 'ಅಶ್ವತರೀ ರಥ' ಎಂಬುದು ಕೇಳಿಸುತ್ತಿರುವುದರಿಂದ ಸೂತ್ರದಲ್ಲಿಯೂ ಅದನ್ನೇ ಹೇಳಬೇಕಿತ್ತು. 'ಚಿತ್ರರಥ' ಎಂಬ ಶಬ್ದವನ್ನೇಕೆ ಪ್ರಯೋಗಿಸಿದ್ದಾರೆ? ಎಂಬ ಪ್ರಶ್ನೆಗೆ 'ರಥಸ್ತು' ಎಂಬ ಬ್ರಹ್ಮಾಂಡ ಪುರಾಣದ ಮಾತನ್ನು ಉಲ್ಲೇಖಿಸುತ್ತಿದ್ದಾರೆ.

ರಥವು ಪೌತ್ರಾಯಣನದ್ದೇ

तत्वप्रकाशिका – नच वाच्यं पौत्रायणेन दीयमानरथोऽत्रोच्यते, नतु तस्य तदीयत्वमिति । बाधकाभावे तदीयत्वस्यैव प्राप्तत्वात् ।

ಈ ಶ್ರುತಿವಾಕ್ಯದಲ್ಲಿ ಪೌತ್ರಾಯಣನಿಂದ ನೀಡಲ್ಪಟ್ಟ ರಥದ ಉಲ್ಲೇಖವಷ್ಟೇ ಇದೆ. ಹೊರತು, ಆ ರಥವು ಅವನದ್ದೇ ಎಂಬ ಉಲ್ಲೇಖವಿಲ್ಲವಲ್ಲ? ಎಂದು ಪ್ರಶ್ನಿಸಬಾರದು. ಆ ರಥವು ಪೌತ್ರಾಯಣನಿಗೆ ಸಂಬಂಧಪಟ್ಟಿಲ್ಲ ಎಂಬ ಯಾವುದೇ ಬಾಧಕ ಪ್ರಮಾಣಗಳು ಕಾಣಿಸುತ್ತಿಲ್ಲ. ಪರಿಶೇಷಾತ್ ಪೌತ್ರಾಯಣನ ರಥವೇ ಎಂದು ಸಿದ್ಧವಾಗುತ್ತದೆ.

ಚಿತ್ರರಥವಿದ್ದರೆ ಶೂದ್ರನೇಕಲ್ಲ

तत्वप्रकाशिका – ननु चित्ररथ(थि) त्वेऽपि पौत्रायणस्य वर्णावरत्वं किं न स्यात्? इत्यत आह – यत्रेति ।।

ಪೌತ್ರಾಯಣನಿಗೆ ಚಿತ್ರರಥವಿದ್ದರೂ ಶೂದ್ರನಾಗಬಹುದಲ್ಲವೇ? ಚಿತ್ರರಥನಿದ್ದ ಮಾತ್ರಕ್ಕೆ ಶೂದ್ರನೇಕಾಗಬಾರದು? ಎಂಬ ಪ್ರಶ್ನೆಗೆ, 'ಯತ್ರ' ಎಂಬ ಬ್ರಹ್ಮವೈವರ್ತ ಪುರಾಣದ ಪ್ರಮಾಣವನ್ನು ಉಲ್ಲೇಖಿಸುತ್ತಿದ್ದಾರೆ.

ವೇದಾಧಿಕಾರಿಗಳು ಮಾತ್ರ ರಥ ಹತ್ತಬೇಕು

तत्वप्रकाशिका – नच वर्णावरत्वे पौत्रायणस्य रथित्वं सम्भवति । रथस्य वेदाविनाभावाच्छूद्रे च वेदाभावादिति भावः ।

ಒಂದು ವೇಳೆ ಪೌತ್ರಾಯಣನು ಶೂದ್ರನಾಗಿದ್ದ ಪಕ್ಷದಲ್ಲಿ, ಅವನಿಗೆ ರಥಿತ್ವವೇ ಕೂಡುವುದಿಲ್ಲ. ಏಕೆಂದರೆ, ವೇದಾಧಿಕಾರವಿರುವವರಿಗೆ ಮಾತ್ರ ರಥಸಂಬಂಧವಿರುತ್ತದೆ. ಶೂದ್ರನಿಗೆ ವೇದಾಧಿಕಾರವೇ ಇಲ್ಲವೆಂದು ಒಟ್ಟು ತಾತ್ಪರ್ಯ.

ರಥಿತ್ವಲಿಂಗವು ಕ್ಷತ್ರಿಯರಲ್ಲಿ ಸ್ವಾಭಾವಿಕ

तत्वप्रकाशिका – नन्वेवं वैदिकमात्रे विद्यमानं रथित्वं कथं क्षत्रियत्वे लिङ्गम् । क्षत्रियस्य स्वाभाविकत्वात् । अन्येषां कादाचित्कत्वात् ।

ಪ್ರಶ್ನೆ - 'ಯತ್ರ ವೇದಾ ರಥಸ್ತತ್ರ' ಎಂಬ ಪ್ರಮಾಣದಂತೆ ವೇದಾಧಿಕಾರಿಯಾಗಿರುವ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ ಎಂಬ ಮೂರು ವರ್ಣದವರಲ್ಲಿಯೂ ರಥಿತ್ವವೆಂಬ ಲಿಂಗವು ಬರುತ್ತದೆ. ಹೀಗಿರುವಾಗ, ಕೇವಲ ಕ್ಷತ್ರಿಯತ್ವಕ್ಕೆ ಈ ಲಿಂಗವು ಹೇಗೆ ಸಾಧಕವಾಗುತ್ತದೆ?

ಉತ್ತರ - ರಥಿತ್ವಲಿಂಗವು ಕ್ಷತ್ರಿಯರಲ್ಲಿ ಸ್ವಾಭಾವಿಕವಾಗಿರುತ್ತದೆ. ಬ್ರಾಹ್ಮಣ ಮತ್ತು ವೈಶ್ಯರಲ್ಲಿ ಪ್ರಾಸಂಗಿಕವಾಗಿರುತ್ತದೆ.

ಶೂದ್ರನು ಕೇವಲ ಪದಾತಿ

तत्वप्रकाशिका – स्वाभाविकस्य नैमित्तिकादाधिक्यात् । 'अपलायनं च शूद्रस्य विप्ररक्षार्थम्' इत्येतदपि पदातितयेति गमयितव्यम् ।। ३५ ।।

ಸ್ವಾಭಾವಿಕ ಹಾಗೂ ನೈಮಿತ್ತಿಕ ಧರ್ಮಗಳ ಮಧ್ಯದಲ್ಲಿ, ಸ್ವಾಭಾವಿಕ ಧರ್ಮವೇ ಪ್ರಬಲವಾಗಿರುತ್ತದೆ. ರಥಿತ್ವ ಎಂಬ ಲಿಂಗವು ಕ್ಷತ್ರಿಯರಲ್ಲಿ ಸ್ವಾಭಾವಿಕವಾಗಿರುವುದರಿಂದ, ಕ್ಷತ್ರಿಯರ ಅಸಾಧಾರಣ ಲಿಂಗವೆಂದು ಹೇಳಬಹುದು. 'ಅಪಲಾಯನಂ ಚ ಶೂದ್ರಸ್ಯ ವಿಪ್ರರಕ್ಷಾರ್ಥಮ್' 'ಬ್ರಾಹ್ಮಣರ ರಕ್ಷಣೆಗೋಸ್ಕರ ಶೂದ್ರನು ಯುದ್ಧರಂಗದಿಂದ ಪಲಾಯನ ಮಾಡಬಾರದು.' ಎಂಬ ಪ್ರಮಾಣವನ್ನು ನೋಡಿದಾಗ, ಶೂದ್ರನು ರಥಿಕನಾಗಿರಬಹುದಲ್ಲವೇ? ಎಂಬ ಸಂಶಯ ಹುಟ್ಟುತ್ತದೆ. ಈ ಪ್ರಮಾಣದ ಅಭಿಪ್ರಾಯ ಶೂದ್ರನಿಗೆ ಪದಾತಿ ರೂಪದಿಂದಷ್ಟೇ ರಣರಂಗಪ್ರವೇಶ ಹೊರತು, ರಥಿಕನಾಗಿಯಲ್ಲವೆಂದು ಕೂಡಿಸಬೇಕು.

ಭಾವದೀಪ

ಭಾಷ್ಯದಲ್ಲಿ ಪದಗಳ ಯೋಜನೆ

भावदीपः – ।। क्षत्रियत्वावगतेश्चोत्तरत्र चैत्ररथेन लिङ्गात् ।।।

ಭಾಷ್ಯೇ 'अयमश्वतरीरथः' इत्यनन्तरम् उत्तरत्रेति सौत्रं पदं श्रुतेनेति शेषश्च योज्यत इति भावेन कस्मादुत्तरत्र इत्यतः तन्निरूपकं द्वेधाऽह – **पौत्रायणस्येति ।।**

ಭಾಷ್ಯದಲ್ಲಿ 'अयमश्वतरीरथः' ಎಂಬ ಪದದ ಅನಂತರ, 'ಉತ್ತರತ್ರ' ಎಂಬುದನ್ನು, 'ಪೌತ್ರಂ ಪದಂ ಶ್ರುತೇನ' ಎಂಬುದನ್ನು ಯೋಜನೆ ಮಾಡಿಕೊಳ್ಳಬೇಕು. ಈ ಅಭಿಪ್ರಾಯದಿಂದ ಯಾವುದರ ಮುಂದೆ ಎಂಬ ಪ್ರತಿಯೋಗಿನಿರೂಪಕವಾದದ್ದನ್ನು ತಿಳಿಸಲು 'ಪೌತ್ರಾಯಣಸ್ಯ' ಇತ್ಯಾದಿ ಟೀಕೆಯು ಹೊರಟಿದೆ.

ಹಿಂದಿನ-ಮುಂದಿನ ಸೂತ್ರಗಳಿಂದ ಅನುವೃತ್ತವಾದ ಪದಗಳು

भावदीपः – अनेन पूर्वसूत्रादयस्येति बुद्धिविभागेनाऽद्रवणादिति च पदद्वयमत्र सूत्रे उत्तरत्र इत्यतः पूर्वमनुवर्त्यमिति दर्शितम् । पौत्रायणस्य रैकं प्रत्यागमनोक्त्यनन्तरमिनत्यर्थः ।।

ಇದರಿಂದ, ಹಿಂದಿನ ಸೂತ್ರದಿಂದ ಬುದ್ಧಿಯಿಂದ ವಿಭಾಗ ಮಾಡಿಕೊಂಡು, 'ಅಸ್ಯ' ಮತ್ತು 'ಆದ್ರವಣಾತ್' ಎಂಬ ಎರಡು ಪದಗಳನ್ನು ಈ ಸೂತ್ರದಲ್ಲಿ ಮುಂದಿರುವ 'ಉತ್ತರತ್ರ' ಎಂಬ ಪದವನ್ನೂ ಸಹ ಇಲ್ಲಿ ಅನುವೃತ್ತಿ ಮಾಡಿಕೊಳ್ಳಬೇಕೆಂದು ಹೇಳಿದಂತಾಯಿತು. ಹೀಗೆ ಹೇಳಿದ್ದರಿಂದ, 'ಪೌತ್ರಾಯಣನು ರೈಕ್ವನ ಬಳಿ ಬಂದು ಮಾತನಾಡಿದ ಅನಂತರ' ಎಂದರ್ಥ ತಿಳಿಯುತ್ತದೆ.

'ಲಿಂಗಾತ್' ಎಂಬುದು ತೃತೀಯಾರ್ಥಕ

ಭಾವದೀಪಃ – शूद्रेति ।। अह हारेत्वा शूद्रेत्युक्त्यनन्तरमित्यर्थः ।। लिङ्गेनेति ।। सूत्रे तृतीयापञ्चम्योरेकार्थत्वाल्लिङ्गादित्युक्तमिति भावः ।

ಶೂದ್ರಶಬ್ದೇನ ಎಂದರೆ 'ಅಹ ಹಾರೇ ತ್ವಾ ಶೂದ್ರ' ಎಂದು ಸಂಬೋಧನೆ ಮಾಡಿದ ಅನಂತರ ಎಂದರ್ಥ. 'ಲಿಂಗೇನ' ಎಂದರೆ ತೃತೀಯಾ ಮತ್ತು ಪಂಚಮೀ ವಿಭಕ್ತಿಗಳಿಗೆ ಒಂದೇ ಅರ್ಥವಿರುವುದರಿಂದ 'ಲಿಂಗಾತ್' ಎಂಬ ಸೂತ್ರದಲ್ಲಿರುವುದನ್ನು 'ಲಿಂಗೇನ' ಎಂದು ತೃತೀಯಾಂತವಾಗಿ ಹೇಳಿದ್ದಾರೆ.

ಚೈತ್ರರಥ ಶಬ್ದದ ನಿಷ್ಪತ್ತಿ

ಭಾವದೀಪಃ – चैत्ररथेनेति सौत्रपदं भावप्रत्ययान्तं कृत्वा चित्ररथस्यायं चैत्ररथ इति सम्बन्धार्थाण्प्रत्ययस्य चित्ररथसम्बन्धित्वेनेति भाष्ये व्याख्यातम् । तस्यासिद्धिमाशङ्क्य च निराह – नच वाच्यमित्यादिना ।।

'ಚೈತ್ರರಥೇನ' ಎಂಬ ಸೂತ್ರದಲ್ಲಿರುವ ಪದವು ಭಾವಾರ್ಥದಲ್ಲಿರುವ ತದ್ಧಿತಪ್ರತ್ಯಯಾಂತವಾಗಿದೆ. 'ಚಿತ್ರರಥಸ್ಯ ಅಯಂ ಚೈತ್ರರಥಃ', ಎಂದು ಸಂಬಂಧಾರ್ಥದಲ್ಲಿ 'ಅಣ್'ಪ್ರತ್ಯಯವು ಬಂದು ಚಿತ್ರರಥಕ್ಕೆ ಸಂಬಂಧಪಟ್ಟವನು ಎಂಬರ್ಥವನ್ನು ಭಾಷ್ಯದಲ್ಲಿ ಹೇಳಿದ್ದಾರೆ. ಇದು ಅಸಿದ್ಧವಾಗಿದೆಯಲ್ಲವೇ? ಎಂಬ ಆಶಂಕೆಯನ್ನು 'ನಚ ವಾಚ್ಯಮ್' ಇತ್ಯಾದಿ ಟೀಕೆಯಿಂದ ಪರಿಹರಿಸಿದ್ದಾರೆ.

ರಥದಿಂದ ವ್ಯಾಪ್ತವಾದದ್ದು ವೇದ

ಭಾವದೀಪಃ – भाष्ये यत्रेति स्मृतौ 'यत्र वेदो रथस्तत्र' इत्युक्त्या वेदस्य रथव्याप्तत्वमुक्तम् । 'न वेदो यत्र नो रथः' तत्रेति व्यतिरेकोक्त्या वेदरथयोः समव्याप्तत्वोक्तेः प्रकृतोपयोग्यर्थमाह – रथस्येति ।।

ಭಾಷ್ಯದಲ್ಲಿ 'ಯತ್ರ ವೇದೋ' ಎಂಬ ಸ್ಮೃತಿಯನ್ನು ಉಲ್ಲೇಖ ಮಾಡಿದ್ದರಿಂದ, ವೇದವು ರಥದಿಂದ ವ್ಯಾಪ್ತವಾಗಿದೆ ಎಂದು ಹೇಳಿದಂತಾಯಿತು. 'ನ ವೇದೋ ಯತ್ರ ನೋ ರಥಃ' ಎಂದು ಹೇಳಿದ್ದರಿಂದ ವೇದ ಹಾಗೂ ರಥಗಳಿಗೆ ಸಮಾನ ವ್ಯಾಪ್ತಿಯನ್ನು ಹೇಳಿದಂತಾಯಿತು. ಇದರಿಂದ ಪ್ರಕೃತಕ್ಕೆ ಏನು ಲಾಭವಾಯಿತು ಎಂಬುದನ್ನು 'ರಥಸ್ಯ' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ.

ಈ ವಿಷಯದಲ್ಲಿ ಅನ್ವಯವ್ಯಾಪ್ತಿ ಹಾಗೂ ವ್ಯತಿರೇಕ ವ್ಯಾಪ್ತಿ

भावदीपः – यद्वा रथस्तत्र तत्रैवेत्यर्थः । एवकारार्थस्यैव व्यक्तीकरणम् – न वेदो यत्रेति ।। अन्वयव्यतिरेकाभ्यां रथस्य वेदव्याप्तत्वमेव लब्धमिति भावेनोक्तम् – रथस्येति ।।

ಅಥವಾ, ರಥಸ್ತತ್ರ ಎಂಬುದಕ್ಕೆ 'ತತ್ರ ಏವ ರಥಃ' ಎಂದರ್ಥ. ಏವಕಾರದ ಅರ್ಥವನ್ನೇ ಸ್ಪಷ್ಟಪಡಿಸಲು 'ನ ವೇದೋ ಯತ್ರ ನೋ ರಥಃ' ಎಂಬ ಮುಂದಿನ ವಾಕ್ಯವು ಹೊರಟಿದೆ. ಅನ್ವಯವ್ಯಾಪ್ತಿ ಹಾಗೂ ವ್ಯತಿರೇಕ ವ್ಯಾಪ್ತಿಗಳಿಂದ ರಥಕ್ಕೆ ವೇದವ್ಯಾಪ್ತತ್ವವು ಸಿದ್ಧವಾಗಿದೆ ಎಂಬರ್ಥದಿಂದ 'ರಥಸ್ಯ' ಇತ್ಯಾದಿ ಟೀಕೆಯು ಹೊರಟಿದೆ.

ಭಾಷ್ಯಕಾರರೂ ಸಹ ಚಿತ್ರರಥೇನ ಎಂದೇಕೆ ಹೇಳಲಿಲ್ಲ ?

भावदीपः – सूत्रभाष्ययोश्चित्ररथेनेत्येव पूर्तौ चित्ररथसम्बन्धित्वेनेत्युक्तात्पर्यं व्यनक्ति – नन्वेवमित्यादिना ।। नन्वपलायनं चेत्यष्टादशगीतातात्पर्योक्तवाक्येऽपलायनोक्त्या रथो गम्यते शूद्रेऽपीत्यत आह – अपलायनं चेति ।। ३५ ।।

ಸೂತ್ರ ಹಾಗೂ ಭಾಷ್ಯಗಳಲ್ಲಿ 'ಚಿತ್ರರಥೇನ' ಎಂದೇ ಹೇಳಬಹುದಿತ್ತು. ಆದರೂ, 'ಚೈತ್ರರಥೇನ' ಎಂದು ಚಿತ್ರರಥಸಂಬಂಧಿತ್ವವನ್ನು ಹೇಳಿದ್ದರ ಅಭಿಪ್ರಾಯವನ್ನು 'ನನ್ವಯಂ' ಇತ್ಯಾದಿ ಟೀಕೆಯಿಂದ ಸ್ಪಷ್ಟಪಡಿಸುತ್ತಿದ್ದಾರೆ. 'ಅಪಲಾಯನಂ ಚ' ಇತ್ಯಾದಿಯಾಗಿ ಹದಿನೆಂಟನೆಯ ಅಧ್ಯಾಯದ ಗೀತಾತಾತ್ಪರ್ಯದಲ್ಲಿ ಹೇಳಿರುತ್ತಾರೆ. ಶೂದ್ರನು ಯುದ್ಧದಿಂದ ಓಡಬಾರದೆಂದು ಹೇಳಿದ್ದರಿಂದ ಅವನಿಗೂ ಕೂಡ ರಥವಿರುತ್ತದೆಂದು ತಿಳಿಯುತ್ತದಲ್ಲವೇ? ಎಂಬ ಪ್ರಶ್ನೆಗೆ 'ಅಪಲಾಯನಂ ಚ' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ.

ಬ್ರಹ್ಮಸೂತ್ರ

'ಸಂಸ್ಕಾರಪರಾಮರ್ಶಾತ್' ಇತ್ಯಾದಿ ಸೂತ್ರ ವ್ಯಾಖ್ಯಾನ

ब्रह्मसूत्रम् – ।। संस्कारपरामर्शात्तदभावाभिलापाच्च ।। ३६ ।।

ಸೂತ್ರಾರ್ಥ -- 'ಅಷ್ಟವರ್ಷಂ ಬ್ರಾಹ್ಮಣಮುಪನಯೀತ। ತಮಧ್ಯಾಪಯೀತ', ಅಧ್ಯಯನದ ಅಂಗವಾಗಿ ಉಪನಯನ ಸಂಸ್ಕಾರವನ್ನು ಶ್ರುತಿಯು ಹೇಳಿದೆ. ಶೂದ್ರನಿಗಾದರೋ 'ನಾಗ್ನಿರ್ನ ಯಜ್ಞೋ ನ ಕ್ರಿಯಾ ನ ಸಂಸ್ಕಾರಃ', ಎಂಬುದಾಗಿ ಉಪನಯನ ಸಂಸ್ಕಾರದ ನಿಷೇಧವಿರುವುದರಿಂದ ವೇದಾಧ್ಯಯನದಲ್ಲಿ ಅಧಿಕಾರವಿಲ್ಲವೆಂದು ತಿಳಿಯುತ್ತದೆ.

ಅರ್ಥ -- ಸಾಧ್ಯವನ್ನು ಸಮುಚ್ಚಯ ಮಾಡುವುದಕ್ಕಾಗಿ ಚಶಬ್ದವಿದೆ. ಸಂಸ್ಕಾರಪರಾಮರ್ಶಾತ್ = 'ಅಷ್ಟವರ್ಷಂ ಬ್ರಾಹ್ಮಣಮುಪನಯೀತ। ತಮಧ್ಯಾಪಯೀತ' ಎಂಬಲ್ಲಿರುವ 'ತತ್' ಶಬ್ದದಿಂದ ಉಪನಯನವೆಂಬ ಸಂಸ್ಕಾರವನ್ನು ಪರಾಮರ್ಶಿಸಲಾಗಿದೆ, ತದಭಾವಾಭಿಲಾಪಾತ್ = 'ನಾಗ್ನಿರ್ನ ಯಜ್ಞಃ ನ ಸಂಸ್ಕಾರಃ' ಎಂಬ ಪೈಂಗಿ ಶ್ರುತಿಯಲ್ಲಿ ಶೂದ್ರನಿಗೆ ಉಪನಯನ ಸಂಸ್ಕಾರವಿಲ್ಲವೆಂದು ಹೇಳಿರುವುದರಿಂದ ಅವರಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ.

ಬ್ರಹ್ಮಸೂತ್ರಭಾಷ್ಯ

ಉಪನಯನವಾದವನಿಗೆ ಮಾತ್ರ ವೇದಾಧ್ಯಯನ

ब्रह्मसूत्रभाष्यम् – 'अष्टवर्षं ब्राह्मणमुपनयीत तमध्यापयीत' इत्याध्ययनार्थं संस्कारपरामर्शात् ।

ಅನುವಾದ - 'ಅಷ್ಟವರ್ಷಂ ಬ್ರಾಹ್ಮಣಮುಪನಯೀತ' ಎಂಬುದಾಗಿ ಅಧ್ಯಯನಕ್ಕೆ ಉಪನಯನ ಸಂಸ್ಕಾರವನ್ನು ಕಾರಣವನ್ನಾಗಿ ಹೇಳಲಾಗಿದೆ. ಈ ಕಾರಣದಿಂದಲೂ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ. ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ.

ಪ್ರತಿಪದಾರ್ಥ -- ರಥಿತ್ವಲಿಂಗದಿಂದ ಪೌತ್ರಾಯಣನು ಕ್ಷತ್ರಿಯನಾಗಿದ್ದಾನೆಂದು ತಿಳಿಯುತ್ತಿದೆ. ಆದ್ದರಿಂದ, ಶೂದ್ರನಿಗೆ ರಥಿತ್ವವಿಲ್ಲದ

ಕಾರಣ ವೇದಾಧಿಕಾರವಿಲ್ಲವೆಂದು ಹಿಂದೆ ಸಾಧಿಸಲಾಯಿತು. ಇದು ತಪ್ಪು. ಶೂದ್ರನಿಗೂ ಕೂಡ ರಥಿತ್ವವು ಯುಕ್ತವಾಗುತ್ತದೆ. ರಥವು ವೇದವ್ಯಾಪ್ಯವಾದ ಕಾರಣ, ಶೂದ್ರನಲ್ಲಿ ವೇದಾಧಿಕಾರವಿಲ್ಲದ ಕಾರಣ ರಥಿತ್ವವೂ ಕೂಡ ಬರುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ವೇದವಿದ್ಯಾಧಿಕಾರವನ್ನು ಶೂದ್ರನಿಗೆ ಒಪ್ಪುತ್ತೇವೆ. ಈ ಆಕ್ಷೇಪವನ್ನು ಪರಿಹರಿಸಲು ಮುಂದಿನ ಸೂತ್ರ ಹೊರಟಿದೆ –

ಅಷ್ಟವರ್ಷಂ = ಎಂಟು ವರ್ಷದ, ಬ್ರಾಹ್ಮಣಂ = ಬ್ರಾಹ್ಮಣನಿಗೆ, ಉಪನಯೀತ = ಉಪನಯನಸಂಸ್ಕಾರವನ್ನು ಮಾಡಬೇಕು, ತಂ = ಸಂಸ್ಕೃತನಾದ ಆ ಬ್ರಾಹ್ಮಣನಿಗೆ, ಅಧ್ಯಾಪಯೀತ = ಅಧ್ಯಯನವನ್ನು ಮಾಡಿಸಬೇಕು. ಇತಿ = ಹೀಗೆ, ಅಧ್ಯಯನಾರ್ಥಂ = ವೇದಾಧ್ಯಯನಕ್ಕೋಸ್ಕರ, ಸಂಸ್ಕಾರಪರಾಮರ್ಶಾತ್ = 'ತಂ' ಎಂಬ ಪದದಿಂದ ಸಂಸ್ಕಾರವನ್ನು ಪರಾಮರ್ಶಿಸಲಾಗಿದೆ.

ಶೂದ್ರನಿಗೆ ಉಪನಯನ ಸಂಸ್ಕಾರವಿಲ್ಲ

ಬ್ರಹ್ಮಸೂತ್ರಭಾಷ್ಯಮ್ – 'नाग्निर्न यज्ञो न क्रिया न संस्कारो न व्रतानिशूद्रस्य' इति पैङ्गिश्रुतौ संस्काराभावाभिलापाच्च ।

ಅನುವಾದ - ಶೂದ್ರನಿಗೆ 'ನಾಗ್ನಿರ್ನ ಯಜ್ಞಃ' ಇತ್ಯಾದಿ ಪೈಂಗಿ ಶ್ರುತಿಯು ಸಂಸ್ಕಾರವನ್ನು ನಿಷೇಧ ಮಾಡುತ್ತಿದೆ.

ಪ್ರತಿಪದಾರ್ಥ -- ಶೂದ್ರನಿಗೂ ಕೂಡ ಉಪನಯನ ಸಂಸ್ಕಾರವನ್ನು ಹೇಳುತ್ತೇವೆ. ಆದ್ದರಿಂದ, ವೇದಾಧ್ಯಯನವನ್ನು ಹೇಳಬಹುದಲ್ಲವೆ? ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಾ, 'ತದಭಾವಾಭಿಲಾಪಾತ್' ಎಂಬ ಸೂತ್ರಖಂಡಕ್ಕೆ ವ್ಯಾಖ್ಯಾನ ಮಾಡುತ್ತಿದ್ದಾರೆ –

ಶೂದ್ರಸ್ಯ = ಶೂದ್ರನಿಗೆ, ನಾಗ್ನಿಃ = ಅಗ್ನಿವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ, ನ ಯಜ್ಞಃ = ಜ್ಯೋತಿಷ್ಟೋಮಾದಿ ಯಜ್ಞಗಳಲ್ಲಿಯೂ ಅಧಿಕಾರವಿರುವುದಿಲ್ಲ, ನ ಕ್ರಿಯಾ = ಸಂಧ್ಯಾವಂದನಾದಿ ಕ್ರಿಯೆಗಳಲ್ಲಿಯೂ ಸಂಸ್ಕಾರವಿರುವುದಿಲ್ಲ, ನ ಸಂಸ್ಕಾರಃ =

ಉಪನಯನಾದಿ ಸಂಸ್ಕಾರಗಳಲ್ಲಿಯೂ ಕೂಡ ಅಧಿಕಾರವಿರುವುದಿಲ್ಲ, ನ ವ್ರತಾನಿ = ಚಾಂದ್ರಾಯಣಾದಿ ವ್ರತಗಳಲ್ಲಿಯೂ ಅಧಿಕಾರವಿರುವುದಿಲ್ಲ, ಇತಿ = ಹೀಗೆ, ಪೈಂಗಿಶ್ರುತೌ = ಪೈಂಗಿ ಶ್ರುತಿಯಲ್ಲಿ, ಸಂಸ್ಕಾರಾಭಾವಾಭಿಲಾಪಾಚ್ಚ = ಯಾವುದೇ ವಿಧದ ಸಂಸ್ಕಾರವಿಲ್ಲವೆಂದು ಹೇಳಲಾಗಿದೆ.

ಉತ್ತಮಸ್ತ್ರೀಯರಿಗೆ ವೇದಾಧಿಕಾರವಿದೆ

ब्रह्मसूत्रभाष्यम् — उत्तमस्त्रीणां तु न शूद्रवत् । 'सपत्नी मे पराधम' इत्यादिष्वधिकार-दर्शनात् ।

ಅನುವಾದ - ಆದರೆ, ಶಚ್ಯಾದಿ ಉತ್ತಮ ಸ್ತ್ರೀಯರಿಗೆ ಶೂದ್ರಾದಿಗಳಂತೆ ಅಧಿಕಾರವಿಲ್ಲವೆನ್ನಬಾರದು. 'ಸಪತ್ನೀಂ ಮೇ ಪರಾಧಮಾ' ಇತ್ಯಾದಿಯಾಗಿ ವೇದಮಂತ್ರಗಳಲ್ಲಿಯೇ ಅವರಿಗೆ ಅಧಿಕಾರವಿರುವುದು ಕಂಡಿದೆ.

ಪ್ರತಿಪದಾರ್ಥ -- ಸಂಸ್ಕಾರವಿಲ್ಲದ್ದರಿಂದ ವೇದಾಧಿಕಾರವಿಲ್ಲವೆನ್ನುವುದಾದರೆ ಉತ್ತಮ ಸ್ತ್ರೀಯರಿಗೂ ಕೂಡ ವೇದಾಧಿಕಾರವಿಲ್ಲದಿರಬೇಕಾದೀತು. ಒಂದು ವೇಳೆ ಸಂಸ್ಕಾರವಿಲ್ಲದಿದ್ದರೂ ವೇದಾಧಿಕಾರ ಒಪ್ಪುವುದಾದರೆ ಶೂದ್ರರಿಗೂ ಕೂಡ ವೇದಾಧಿಕಾರವಿರಬೇಕಾಗುತ್ತದಲ್ಲವೇ? ಈ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ –

ಉತ್ತಮಸ್ತ್ರೀಣಾಂ ತು = ಉತ್ತಮ ಸ್ತ್ರೀಯರ ವಿಷಯದಲ್ಲಾದರೋ, ನ ಶೂದ್ರವತ್= ಶೂದ್ರಾದಿಗಳಂತೆ ವೇದಾಧಿಕಾರವಿಲ್ಲವೆನ್ನಬಾರದು, ಏಕೆಂದರೆ, ಸಪತ್ನೀಂ ಮೇ ಪರಾಧಮಾ = ಸವತಿಯು ಸೋಲುವಂತೆ ಮಾಡು, ಇತ್ಯಾದಿಷು = ಇವೇ ಮೊದಲಾದ ಶ್ರುತಿಗಳಲ್ಲಿ ಉತ್ತಮ ಸ್ತ್ರೀಯರಿಗೆ, ಅಧಿಕಾರದರ್ಶನಾತ್ = ವೇದಾಧಿಕಾರವಿರುವುದು ಕಂಡಿದೆ.

ನಿಯಮವು ಸಾಪಕಾಶ

ब्रह्मसूत्रभाष्यम् — संस्कारभावेनाभावस्तु सामान्येन ।।

ಅನುವಾದ - ಸಂಸ್ಕಾರವಿಲ್ಲದವರಿಗೆ ವೇದಾಧಿಕಾರವಿಲ್ಲವೆಂಬ ನಿಯಮವು ಸಾಮಾನ್ಯವಾದುದು. ಬಾಧಕವಿದ್ದಾಗ ನಿಯಮವನ್ನು ಸಂಕೋಚ ಮಾಡಬೇಕಾಗುತ್ತದೆ.

ಪ್ರತಿಪದಾರ್ಥ -- ಸಂಸ್ಕಾರವಿಲ್ಲವೆಂಬ ಕಾರಣದಿಂದ ಉತ್ತಮ ಸ್ತ್ರೀಯರಲ್ಲಿ ವ್ಯಭಿಚಾರ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ –

ಸಂಸ್ಕಾರಾಭಾವೇನ = ಸಂಸ್ಕಾರವಿಲ್ಲದ್ದರಿಂದ, ತದಭಾವಃ = ವೇದಾಧಿಕಾರ-ವಿರುವುದಿಲ್ಲ. ತು = ಈ ನಿಯಮವಾದರೋ, ಸಾಮಾನ್ಯೇನ = ಸಾಮಾನ್ಯ ನಿಯಮವಾಗಿದೆ.

ಉತ್ತಮಸ್ತ್ರೀಯರಿಗೆ ವಿವಾಹವೇ ಸಂಸ್ಕಾರ

ब्रह्मसूत्रभाष्यम् –अस्ति च तासां संस्कारः -

स्त्रीणां प्रदनाकर्मैव यथोपनयनं तथा ।

इति स्मृतेः ।।३६।।

ಅನುವಾದ - ಅಥವಾ, ಸ್ತ್ರೀಯರಿಗೂ ಕೂಡ ಸಂಸ್ಕಾರವಿದೆ. ಸ್ತ್ರೀಯರಿಗೆ ವಿವಾಹ ಕರ್ಮವೇ ಉಪನಯನದಂತೆ ಸಂಸ್ಕಾರರೂಪವಾದುದು ಎಂಬ ಸ್ಮೃತಿಯು ಈ ವಿಷಯದಲ್ಲಿ ಆಧಾರವಾಗಿದೆ.

ಪ್ರತಿಪದಾರ್ಥ -- ಉಪನಯನವೆಂಬ ಸಂಸ್ಕಾರವಿಲ್ಲದಿದ್ದರೂ ತತ್ಪ್ರತಿನಿಧಿಯಾಗಿ ವಿವಾಹ ಸಂಸ್ಕಾರವಿರುವುದರಿಂದ ಸ್ತ್ರೀಯರಿಗೆ ಅಧಿಕಾರವಿರುತ್ತದೆಂದು ಸಮರ್ಥಿಸುತ್ತಿದ್ದಾರೆ –

ತಾಸಾಂ = ಆ ಸ್ತ್ರೀಯರಿಗೆ, ಅಸ್ತಿ ಚ ಸಂಸ್ಕಾರಃ = ಸಂಸ್ಕಾರವು ಕೂಡ ಇರುತ್ತದೆ, ಸ್ತ್ರೀಣಾಂ = ಸ್ತ್ರೀಯರಿಗೆ, ಪ್ರಧಾನಕರ್ಮೈವ = ವಿವಾಹವೆಂಬ ಕನ್ಯಾದಾನವೇ, ಯಥಾ = ಹೇಗೆ, ಉಪನಯನಂ = ಪುರುಷರಿಗೆ ಸಂಸ್ಕಾರವೋ, ತಥಾ = ಅದರಂತೆ ಸ್ತ್ರೀಯರಿಗೂ ಸಂಸ್ಕಾರರೂಪವಾಗಿದೆ, ಇತಿ = ಹೀಗೆ, ಸ್ಮೃತೇಃ = ಸ್ಮೃತಿಯು ಪ್ರಮಾಣವಾಗಿದೆ.

ಸತ್ತರ್ಕದೀಪಾವಳಿ

ಶೂದ್ರನೇಕೆ ವೇದ ಪಠಿಸಬಾರದು ?

सत्तर्कदीपावलिः –

।। संस्कारपरामर्शात्तदभावाभिलापाच्च ।।

ननु मास्तु पौत्रायणः शूद्रः, वेदस्तु शूद्रस्यापि भवत्येव, निषेधाभावादित्या-शङ्कापरिहाराय सूत्रमवतार्य व्याचष्टे – संस्कारेत्यादिना ।। 'नाग्निर्न यज्ञो न संस्कारः' इति श्रुतौ संस्काराभाव एव शूद्रस्योच्यते, नत्वसौ न कार्य इति । अतः स कर्तव्य एव श्रेयोऽर्थिभिः कलिजैरिव सदाचारस्तदभावो वेदादिना नैतदब्राह्मण इति ।।

ಪೌತ್ರಾಯಣನು ಶೂದ್ರನಾಗುವುದು ಬೇಡ. ಆದರೆ, ಶೂದ್ರನಿಗೂ ಸಹ ವೇದಾಧ್ಯಯನದಲ್ಲಿ ಅಧಿಕಾರವಿರುತ್ತದೆ. ಏಕೆಂದರೆ, ಶೂದ್ರನು ವೇದವನ್ನು ಪಠಿಸಬಾರದೆನ್ನಲು ಯಾವುದೇ ನಿಷೇಧಪ್ರಮಾಣವಿರುವುದಿಲ್ಲವಲ್ಲವೇ? ಎಂಬ ಆಶಂಕೆಯನ್ನು ಪರಿಹರಿಸುತ್ತಾ, ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, ಸಂಸ್ಕಾರ ಇತ್ಯಾದಿಯಾಗಿ. 'ನಾಗ್ನಿರ್ನ ಯಜ್ಞೋ ನ ಸಂಸ್ಕಾರಃ' ಎಂಬ ಶ್ರುತಿಯಲ್ಲಿ ಶೂದ್ರನಿಗೆ ಸಂಧ್ಯಾವಂದನಾದಿ ಸಂಸ್ಕಾರಗಳಲ್ಲಿ ಅಧಿಕಾರವಿಲ್ಲವೆಂದು ಹೇಳಲಾಗಿದೆ. ಹೀಗೆ ಸಂಸ್ಕಾರಾಭಾವವನ್ನು ಹೇಳಿದ್ದರಿಂದ, ಅವನಿಗೆ ಅಧಿಕಾರವಿಲ್ಲವೆಂದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ, ಪೌತ್ರಾಯಣನು ಅಬ್ರಾಹ್ಮಣನಲ್ಲವೆಂದು ಸ್ಪಷ್ಟವಾಗುತ್ತದೆ.

ತತ್ತ್ವಪ್ರದೀಪ

ಉತ್ತಮಸ್ತ್ರೀಯರಿಗೆ ವೇದಾಧಿಕಾರವಿದೆ

तत्त्वप्रदीपः – इतश्च न शूद्रस्याधिकारः । संस्कारपरामर्शा-त्तदभावाभिलापाच्च । अन्यार्थवचनं 'परामर्शः' । अध्ययनस्याङ्गत्वेनोपनयन-

संस्कारपरामर्शात् । शूद्रस्य संस्काराभावाच्च । पराधम = पराणुद । ''सपत्नीं मे पराधम'' ''किं भ्राता सद्यदनाथं भवति'' ''किमेता वाचा कृणवा तवाहम्'' इत्यादिषु शचीयम्यूर्वश्यादीनामधिकारदर्शनादुत्तमस्त्रीणां न शूद्रवदनधिकारः । यद्यपि स्त्रीणामुपनयनसंस्कारो नास्ति, तथाऽपि तत्प्रतिनिधिरन्योऽस्तीत्याह – अस्ति चेति । अस्ति च स्त्रीणां संस्कारः, स्त्रीणां प्रधानकर्मेत्यादि व्यासवाक्यं चास्ति तत्प्रमाणम् ।।

ಮತ್ತೊಂದು ಕಾರಣದಿಂದಲೂ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲವೆಂದು 'ಸಂಸ್ಕಾರಪರಾಮರ್ಶಾತ್ ತದಾಭಾವಾಭಿಲಾಪಾಚ್ಚ' ಎಂಬ ಸೂತ್ರದಿಂದ ಸಮರ್ಥನೆ ಮಾಡುತ್ತಿದ್ದಾರೆ.

ಒಂದು ಉದ್ದೇಶಕ್ಕಾಗಿ ಮತ್ತೊಂದನ್ನು ಹೇಳುವುದು 'ಪರಾಮರ್ಶ' ಎಂದು ಕರೆಯುತ್ತಾರೆ. ವೇದಾಧ್ಯಯನಕ್ಕೋಸ್ಕರ ಅಂಗವಾಗಿ ಉಪನಯನಸಂಸ್ಕಾರವನ್ನು ಪರಾಮರ್ಶ ಮಾಡಲಾಗಿದೆ. ಆದ್ದರಿಂದ ಉಪನಯನಸಂಸ್ಕಾರವಿದ್ದವನಿಗೆ ವೇದಾಧ್ಯಯನದಲ್ಲಿ ಅಧಿಕಾರವೆಂಬುದು ಸ್ಪಷ್ಟವಾಗುತ್ತದೆ. ಶೂದ್ರನಿಗೆ ಉಪನಯನಸಂಸ್ಕಾರವೇ ಇಲ್ಲದ ಕಾರಣ ವೇದಾಧ್ಯಯನದಲ್ಲಿಯೂ ಅಧಿಕಾರವಿರುವುದಿಲ್ಲ.

'ಸಪತ್ನೀಂ ಮೇ ಪರಾಧಮ' 'ನನ್ನ ಸವತಿಯನ್ನು ಪರಾಜಯಗೊಳಿಸು'. 'ಕಿಂ ಭ್ರಾತಾ ಸದ್ಯದನಾಥಂ ಭವತಿ' 'ಕಿಮೇತಾ ವಾಚಾ ಕೃಣವಾ ತವಾಹಮ್' ಇವೇ ಮೊದಲಾದ ವಾಕ್ಯಗಳಲ್ಲಿ ಶಚೀ, ಯಮೀ, ಊರ್ವಶೀ ಮೊದಲಾದವರಿಗೆ ಅಧಿಕಾರವಿರುವುದು ಸ್ಪಷ್ಟವಾಗಿದೆ. ಆದ್ದರಿಂದ ಉತ್ತಮಸ್ತ್ರೀಯರಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುತ್ತದೆ. ಶೂದ್ರರಂತೆ ಉತ್ತಮಸ್ತ್ರೀಯರು ವೇದವಿದ್ಯೆಯಲ್ಲಿ ಅನಧಿಕಾರಿಗಳಲ್ಲ.

ವೇದವಿದ್ಯೆಯಲ್ಲಿ ಅಧಿಕಾರವಿರಬೇಕಾದರೆ ಉಪನಯನಸಂಸ್ಕಾರ ಆಗಿರಲೇಬೇಕು. ಸ್ತ್ರೀಯರಿಗೆ ಉಪನಯನಸಂಸ್ಕಾರವು ವಾಸ್ತವಿಕವಾಗಿ ಇರುವುದಿಲ್ಲ. ಆದರೂ ಕೂಡ ಉಪನಯನಸಂಸ್ಕಾರಕ್ಕೆ ಪ್ರತಿನಿಧಿಯಾಗಿ 'ವಿವಾಹ' ಎಂಬ ಸಂಸ್ಕಾರವು ಇರುತ್ತದೆಂಬುದಾಗಿ 'ಅಸ್ತಿಚ' ಇತ್ಯಾದಿ ವಾಕ್ಯದಿಂದ ನಿರೂಪಣೆ ಮಾಡುತ್ತಿದ್ದಾರೆ.

ಸ್ತ್ರೀಯರಿಗೆ ಮಾಡಬೇಕಾದ ಸಂಸ್ಕಾರ ಎಂದರೆ ಪ್ರಧಾನಕರ್ಮವಾದ ವಿವಾಹವೇ ಆಗಿದೆ. ಈ ವಿಷಯದಲ್ಲಿ ಶ್ರೀವೇದವ್ಯಾಸದೇವರ ವಾಕ್ಯವೇ ಪ್ರಮಾಣ.

ತತ್ತ್ವಪ್ರಕಾಶಿಕಾ

ರಥಿತ್ವವು ಶೂದ್ರನಲ್ಲೇಕೆ ಕೂಡುವುದಿಲ್ಲ ?

तत्वप्रकाशिका – ।। संस्कारपरामर्शात्तदभावाभिलापाच्च ।।

यदुक्तं रथित्वलिङ्गेन पौत्रायणस्य क्षत्रियत्वावगमान्न तल्लिङ्गेन शूद्रस्य वेदाधिकारसिद्धिरिति, तदयुक्तम् । शूद्रस्यापि रथित्वसम्भवात् । तस्य वेदाविनाभावन्नेति चेन्न । शुद्रेऽपि वेदाधिकारशङ्कीकारात् ? इत्याशङ्कां परिहरत्सूत्रमुपन्यस्य व्याचष्टे – संस्कारेति ।।

ಶ್ರುತಿಯಲ್ಲಿ 'ರಥಿತ್ವ' ಎಂಬ ಲಿಂಗದಿಂದ ಪೌತ್ರಾಯಣನು ಕ್ಷತ್ರಿಯನೇ ಆಗಿದ್ದಾನೆಂದು ಸ್ಪಷ್ಟವಾಗುತ್ತದೆ. ಈ ದೃಷ್ಟಾಂತದಿಂದ ಶೂದ್ರನಿಗೆ ವೇದವಿದ್ಯಾಧಿಕಾರವಿದೆಯೆಂದು ಸಿದ್ಧವಾಗುವುದಿಲ್ಲವೆಂದು ಹಿಂದೆ ಹೇಳಲಾಯಿತು. ಇದು ತಪ್ಪು. ಏಕೆಂದರೆ, ಶೂದ್ರನಿಗೂ ಸಹ ರಥಿತ್ವವು ಉಪಪನ್ನವಾಗುತ್ತದೆ. 'ರಥಿತ್ವ' ಮತ್ತು 'ವೇದಾಧಿಕಾರ' ಇವೆರಡೂ ಪರಸ್ಪರ ಅವಿನಾಭೂತವಾಗಿವೆ. ಶೂದ್ರನಿಗೆ ರಥಿತ್ವವಿರುವುದರಿಂದ ವೇದಾಧಿಕಾರವನ್ನೂ ಸಹ ಹೇಳಬಹುದಲ್ಲವೇ?

ಇದು ತಪ್ಪು. ಶೂದ್ರನಿಗೂ ವೇದಾಧಿಕಾರವನ್ನು ಒಪ್ಪಬಹುದಲ್ಲವೇ? ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ, ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ, ಸಂಸ್ಕಾರ ಇತ್ಯಾದಿಯಾಗಿ.

ಪೂರ್ವಪಕ್ಷಿಯ ಆಕ್ಷೇಪ ತಪ್ಪು

तत्वप्रकाशिका – न परेणाङ्गीकृतोऽपि शूद्रस्य वेदाधिकारः सम्भवति । वेदाध्ययनादेरुपनयनादिसंस्कारसापेक्षत्वात् ।

ಪೂರ್ವಪಕ್ಷಿಯು ಶೂದ್ರನಿಗೆ ವೇದಾಧಿಕಾರವಿದೆಯೆಂದು ಸಮರ್ಥಿಸಿದ್ದು ತಪ್ಪು. ಏಕೆಂದರೆ, ವೇದಾಧ್ಯಯನ ಮಾಡಲು ಉಪನಯನವೇ ಮೊದಲಾದ ಸಂಸ್ಕಾರಗಳಾಗಬೇಕು.

ದ್ವಿಜನು ಮಾತ್ರ ವೇದ ಓದಬೇಕು

तत्वप्रकाशिका – 'अष्टवर्षं ब्रह्मणमुपनयीत' इति संस्कारमुक्त्वा, तमुपनीतमध्यापयीत' इत्यध्ययनार्थमुपनयनपरामर्शात् । वेदः कृत्स्नोऽधिगन्तव्यः सरहस्यो द्विजन्मना' इति स्मृतेश्च ।

'ಅಷ್ಟವರ್ಷಂ ಬ್ರಾಹ್ಮಣಮುಪನಯೀತ' ಎಂಟು ವರ್ಷಗಳಲ್ಲಿ ಬ್ರಾಹ್ಮಣನಿಗೆ ಉಪನಯನ ಮಾಡಬೇಕು ಎಂಬುದಾಗಿ ಶ್ರುತಿಯೇ ಸಂಸ್ಕಾರವನ್ನು ಹೇಳುತ್ತಿದೆ. ಅನಂತರ, 'ತಮಧ್ಯಾಪಯೀತ' ಅಂತಹ ಉಪನೀತನಾದ ವಟುವಿಗೆ ವೇದಾಧ್ಯಯನವನ್ನು ಮಾಡಿಸಬೇಕು ಎಂದು ವೇದಾಧ್ಯಯನಕ್ಕೋಸ್ಕರ 'ಉಪನಯನ' ಎಂಬ ಸಂಸ್ಕಾರವನ್ನು ಹೇಳಲಾಗಿದೆ. 'ವೇದಃ ಕೃತ್ಸ್ನೋ೭ಧಿಗಂತವ್ಯಃ ಸರಹಸ್ಯೋ ದ್ವಿಜನ್ಮನಾ' ರಹಸ್ಯಮಯವಾದ ವೇದವನ್ನು ಸಂಪೂರ್ಣವಾಗಿ ಉಪನೀತನಾದ ದ್ವಿಜನು ಅಧ್ಯಯನ ಮಾಡಬೇಕು ಎಂಬ ಸ್ಮೃತಿಯೂ ಸಹ ಈ ವಿಷಯದಲ್ಲಿ ಆಧಾರವಾಗಿದೆ.

ಶೂದ್ರನಿಗೆ ಉಪನಯನವಿಲ್ಲವೆನ್ನಲು ಆಧಾರ ?

तत्वप्रकाशिका – अस्तु तर्हि शूद्रस्यापि संस्कारः । मैवम् । 'नाग्निर्न यज्ञः' इति शूद्रस्य संस्काराभावाभिधानात् ।

ವೇದಾಧ್ಯಯನಕ್ಕೆ ಉಪನಯನ ಸಂಸ್ಕಾರವು ಆವಶ್ಯಕವೆಂದಂತಾಯಿತು. ಹಾಗಾದರೆ, ಶೂದ್ರನಿಗೂ ಸಹ ಅಂತಹ ಉಪನಯನ ಸಂಸ್ಕಾರವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. 'ನಾಗ್ನಿರ್ನ ಯಜ್ಞಃ' ಎಬ ಪ್ರಮಾಣವಚನದಲ್ಲಿ ಶೂದ್ರನಿಗೆ ಉಪನಯನ ಸಂಸ್ಕಾರದಲ್ಲಿ ಅಧಿಕಾರವಿಲ್ಲವೆಂದು ಸ್ಪಷ್ಟಪಡಿಸಲಾಗಿದೆ.

ರಥಿತ್ವವೂ ಕೂಡ ಶೂದ್ರನಲ್ಲಿಲ್ಲ

तत्वप्रकाशिका – अतः शूद्रस्य संस्काराभावेन वेदानधिकारान्न तस्य वेदाविनाभूतरथित्वमिति भावः ।

ಆದ್ದರಿಂದ, ಶೂದ್ರನಿಗೆ ಸಂಸ್ಕಾರವಿಲ್ಲದ ಕಾರಣ ವೇದಾಧಿಕಾರವು ಇರುವುದಿಲ್ಲ. ಆದ್ದರಿಂದಲೇ ವೇದದಿಂದ ಅವಿನಾಭೂತವಾದ ರಥಿತ್ವವೂ ಕೂಡ ಅವನಲ್ಲಿ ಬರುವುದಿಲ್ಲ.

ಸ್ತ್ರೀಯರಂತೆ ಶೂದ್ರನಿಗೇಕೆ ಹೇಳಬಾರದು ?

तत्वप्रकाशिका – नन्वेवं संस्काराभावेन वेदानधिकारश्चेदुत्तमस्त्रीणामनधिकारप्रसङ्गः ? संस्काराभावेऽपि तासामधिकारे शूद्रस्यापि तत्प्राप्तिः? इत्यत आह –उत्तमेति ।।

ಪ್ರಶ್ನೆ- ಉಪನಯನ ಸಂಸ್ಕಾರವಿಲ್ಲದ ಕಾರಣ ಶೂದ್ರನಿಗೆ ವೇದಾಧ್ಯಯನದಲ್ಲಿ ಅಧಿಕಾರವಿಲ್ಲವೆನ್ನುವುದಾದರೆ, ಉತ್ತಮ ಸ್ತ್ರೀಯರಿಗೂ ಸಹ ಉಪನಯನಸಂಸ್ಕಾರವಿಲ್ಲದ ಕಾರಣ ವೇದಾಧ್ಯಯನದಲ್ಲಿ ಅಧಿಕಾರವಿಲ್ಲವೆಂದಾಗಬೇಕಾದೀತು. ಒಂದು ವೇಳೆ ಸಂಸ್ಕಾರವಿಲ್ಲದಿದ್ದರೂ ವೇದಾಧ್ಯಯನದಲ್ಲಿ ಅಧಿಕಾರವನ್ನು ಉತ್ತಮ ಸ್ತ್ರೀಯರಿಗೆ ಒಪ್ಪುವುದಾದರೆ, ಅದೇ ದೃಷ್ಟಾಂತದಿಂದ ಶೂದ್ರನಿಗೂ ಕೂಡ ವೇದಾಧ್ಯಯನದಲ್ಲಿ ಅಧಿಕಾರವನ್ನು ಏಕೆ ಹೇಳಬಾರದು? ಎಂಬ ಆಶಂಕೆಯ ಪರಿಹಾರಕ್ಕೋಸ್ಕರ 'ಉತ್ತಮ' ಇತ್ಯಾದಿ ಭಾಷ್ಯದ ಮಾತು ಹೊರಟಿದೆ.

ಉತ್ತಮ ಸ್ತ್ರೀಯರಿಗೆ ವೇದಾಧಿಕಾರವಿದೆಯೆನ್ನಲು ಆಧಾರ

तत्वप्रकाशिका – नोत्तमस्त्रीणां शूद्रवत्संस्काराभावेन वेदविद्याधिकाराभावो वक्तवयः । 'सपत्नीं मे पराधम' इत्यादिविद्यासु शच्यादीनां तद्द्रष्टृत्वेनाधिकारदर्शनादित्यर्थः ।

ಉಪನಯನ ಸಂಸ್ಕಾರವಿಲ್ಲದ ಕಾರಣ, ಶೂದ್ರನಂತೆ ಉತ್ತಮ ಸ್ತ್ರೀಯರಿಗೆ ವೇದಾಧಿಕಾರವಿಲ್ಲವೆಂದು ಹೇಳಬಾರದು. 'ಸಪತ್ನೀಂ ಮೇ ಪರಾಧಮ' ಇತ್ಯಾದಿ ವೇದಮಂತ್ರಗಳಲ್ಲಿ ಶಚೀ ಮೊದಲಾದ ದೇವತಾ ಸ್ತ್ರೀಯರಿಗೆ ವೇದದ್ರಷ್ಟೃತ್ವವಿದೆಯೆಂದು ಹೇಳಲಾಗಿದೆ. ಇದರಿಂದ ಅವರಿಗೆ ವೇದಾಧಿಕಾರವಿಲ್ಲವೆಂದು ಹೇಳಬಾರದು. ಹಾಗಾದರೆ, ಉಪನಯನ ಸಂಸ್ಕಾರವಿಲ್ಲದೆ ವೇದಾಧಿಕಾರವಿಲ್ಲವೆಂಬ ನಿಯಮಕ್ಕೆ ಭಂಗ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ಸಂಸ್ಕಾರ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಸಾಮಾನ್ಯ ನಿಯಮಕ್ಕೆ ವಿಶೇಷ ಪ್ರಮಾಣದಿಂದ ಬಾಧ

तत्वप्रकाशिका – तर्हि उक्तन्यायभङ्गः? इत्यत आह – संस्कारेति ।। संस्काराभावेन वेदाधिकाराभावः सामान्यन्यायेनोक्तो नतु नियमेन । अतस्तस्य विशेषापवादे न दोष इति भावः ।

ಉಪನಯನ ಸಂಸ್ಕಾರವಿಲ್ಲದೆ, ವೇದಾಧ್ಯಾಯನದಲ್ಲಿ ಅಧಿಕಾರವಿಲ್ಲ ಎಂಬುದು ಸಾಮಾನ್ಯ ನಿಯಮ. ಹೊರತು ವಿಶೇಷ ನಿಯಮವಲ್ಲ. ಸಾಮಾನ್ಯ ನಿಯಮಕ್ಕೆ ವಿಶೇಷ ಪ್ರಮಾಣದಿಂದ ಅಪವಾದವನ್ನು ಹೇಳಬಹುದು. ಇದು ತಪ್ಪಾಗುವುದಿಲ್ಲವೆಂದು ಅಭಿಪ್ರಾಯ.

ಪ್ರತಿಬಂದಿಗೆ ಉತ್ತರ

तत्वप्रकाशिका – अनेनैव शूद्रप्रतिबन्दी विमोचिता भवति । सामान्यस्य बाधैकापोद्यत्वात् । एवं स्त्रीणामुपनयनाभावेऽपि पूर्वन्यायस्य सामान्यतयाऽपवादसम्भवादस्ति वेदाधिकार इत्युक्तम् ।

ಇದೇ ಭಾಷ್ಯದ ಮಾತಿನಿಂದ ಸ್ತ್ರೀಯರಿಗೆ ವೇದಾಧಿಕಾರವನ್ನು ಹೇಳಿದರೆ ಶೂದ್ರನಿಗೂ ವೇದಾಧಿಕಾರವನ್ನು ಹೇಳಬೇಕಾದೀತು ಎಂಬ ಪ್ರತಿಬಂದಿಗೆ ಉತ್ತರಿಸಿದಂತಾಯಿತು. ಏಕೆಂದರೆ ಸಾಮಾನ್ಯ ನಿಯಮವನ್ನು ಬಾಧಕ ಪ್ರಮಾಣದಿಂದ ನಿರಾಕರಿಸಬಹುದು. ಅಂದರೆ, ಸ್ತ್ರೀಯರಿಗೆ ವೇದಾಧಿಕಾರ ವಿಷಯದಲ್ಲಿ ಮಂತ್ರದ್ರಷ್ಟೃತ್ವವೆಂಬ ಬಾಧಕಪ್ರಮಾಣವಿರುವುದರಿಂದ ಈ ವಿಷಯದಲ್ಲಿ ಉಪನಯನ ಸಂಸ್ಕಾರವಾಗಲೇಬೇಕೆಂಬ ನಿಯಮವನ್ನು ಸಂಕೋಚ ಮಾಡಬೇಕಾಗುತ್ತದೆ. ಶೂದ್ರರ ವಿಷಯದಲ್ಲಿ ಈ ರೀತಿ ಬಾಧಕ ಪ್ರಮಾಣವಿಲ್ಲದ್ದರಿಂದ ಆ ನಿಯಮಕ್ಕೆ ಸಂಕೋಚ ಮಾಡಲು ಸಾಧ್ಯವಿಲ್ಲ.

ಹೀಗೆ ಸ್ತ್ರೀಯರಿಗೆ ಉಪನಯನ ಸಂಸ್ಕಾರವಿಲ್ಲದಿದ್ದರೂ ಉಪನಯನವಾದರೆ ಮಾತ್ರ ವೇದಾಧಿಕಾರ ಎಂಬ ಸಾಮಾನ್ಯ ನಿಯಮಕ್ಕೆ ಅಪವಾದವನ್ನು ಹೇಳಬಹುದಾದ್ದರಿಂದ ವೇದಾಧಿಕಾರವಿದೆಯೆಂದು ಹೇಳಿರುತ್ತಾರೆ.

ಉಪನಯನದ ಪ್ರತಿನಿಧಿ ವಿವಾಹ

तत्वप्रकाशिका – अथोपनयनप्रतिनिधिसद्भावाच्चास्त्यधिकार इत्याह – अस्ति चेति ।।

ಸ್ತ್ರೀಯರಿಗೆ ಉಪನಯನಪ್ರತಿನಿಧಿಯಾದ ಸಂಸ್ಕಾರವಿರುವುದರಿಂದ ವೇದಾಧಿಕಾರ-ವಿದೆಯೆಂದು 'ಅಸ್ತಿ ಚೇತಿ' ಇತ್ಯಾದಿ ಭಾಷ್ಯದಿಂದ ಸಮರ್ಥಿಸುತ್ತಿದ್ದಾರೆ.

ಉತ್ತಮ ಪಶುಪಕ್ಷಿಗಳಿಗೂ ವೇದಾಧಿಕಾರವಿದೆ

तत्वप्रकाशिका – यथा पुंसामुपनयनादिसंस्कारस्तथा स्त्रीणां प्रदानकर्मैव संस्कार इत्यर्थः । अत्रापवादोक्तिः प्रदानादिशून्यतिर्यगादीनामपि संग्रहार्था । तेषामपि 'अयमग्ने जरिता' इत्यादावधिकारदर्शनात् ।। ३६ ।।

ಯಾವ ರೀತಿಯಾಗಿ ಪುರುಷರಿಗೆ ಉಪನಯನಾದಿ ಸಂಸ್ಕಾರಗಳು ವೇದಾಧಿಕಾರಕ್ಕೆ ಪೂರಕವಾಗಿರುತ್ತವೋ, ಅದರಂತೆ ಸ್ತ್ರೀಯರಿಗೆ ವಿವಾಹವೆಂಬ ಪ್ರಧಾನಕರ್ಮವೇ ವೇದಾಧ್ಯಯನಕ್ಕೆ ಪೂರಕವಾಗಿರುತ್ತದೆಂದು ಅಭಿಪ್ರಾಯ.

'ಸಂಸ್ಕಾರಾಭಾವೇನ ಅಭಾವಸ್ತು ಸಾಮಾನ್ಯೇನ' ಎಂಬ ಭಾಷ್ಯದಲ್ಲಿರುವ ಅಪವಾದೋಕ್ತಿಯು ವಿವಾಹ ಮೊದಲಾದ ಪ್ರಧಾನ ಕರ್ಮವಿಲ್ಲದ ಪಶು-ಪಕ್ಷ್ಯಾದಿಗಳ ವೇದಾಧಿಕಾರವನ್ನು ಸಂಗ್ರಹ ಮಾಡುತ್ತದೆ. ಏಕೆಂದರೆ, ಅವುಗಳಿಗೂ ಕೆಲವೊಮ್ಮೆ 'ಅಯಮಗ್ನೇ ಜರಿತಾ' ಇತ್ಯಾದಿ ಮಂತ್ರಗಳಿಂದ ವೇದಾಧಿಕಾರವಿರುವುದು ಕಂಡಿರುತ್ತದೆ.

ಭಾವದೀಪ

ಸಾಧ್ಯ ಹೇತುಗಳ ಅಧ್ಯಾಹಾರ ಆವಶ್ಯಕ

ಭಾವದೀಪಃ –

।। संस्कारपरामर्शात्तदभावाभिलापाच्च ।।

साध्यहेतू अध्याहृत्य तद्धेतुसाधकत्वेन भाष्यसूत्रोक्तहेतुं परम्परया योजयति – न परेणेति ।। संस्कारमुक्त्वेति भाष्ये शेषोक्तिः । तमित्यनुवादः। उपनीतमिति व्याख्या ।

ಸಾಧ್ಯ ಮತ್ತು ಹೇತುಗಳನ್ನು ಅಧ್ಯಾಹಾರ ಮಾಡಿಕೊಂಡು, ಅಂತಹ ಹೇತುವಿಗೆ ಸಾಧಕವಾಗಿ ಭಾಷ್ಯ ಹಾಗೂ ಸೂತ್ರದಲ್ಲಿ ಹೇಳಿದ ಹೇತುವನ್ನು ಪರಂಪರೆಯಿಂದ ಯೋಜನೆ ಮಾಡುತ್ತಿದ್ದಾರೆ 'ನ ಪರೇಣ' ಇತ್ಯಾದಿ ವಾಕ್ಯದಿಂದ. ಭಾಷ್ಯದಲ್ಲಿ 'ಸಂಸ್ಕಾರಮುಕ್ತ್ವಾ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. 'ತಂ' ಎಂಬುದು ಅನುವಾದವಾಗಿದೆ. 'ಉಪನೀತಂ' ಎಂಬುದು ಅದರ ವ್ಯಾಖ್ಯಾನ.

ಉಪನಯನವು ಅಧ್ಯಾಪನಕ್ಕೆ ಅಂಗ

ಭಾವದೀಪಃ – नन्वध्यापयीतेत्यध्यापनाङ्गत्वमेव श्रूयते । नत्वध्ययनाङ्गत्वं स्कारस्य तत्कथमध्ययनार्थमित्युक्तिः । मैवम् । स्वहितानभिज्ञो बालो हितैषिपित्रादिना शासनीय इत्येवंपरत्वेन स्वाध्यायोऽध्येतव्य-इत्यध्ययनविधि श्रुत्यन्तरानुरोधेनाध्यापनवाक्यस्याप्यध्ययनार्थत्वादिति भावः।

'तमध्यापयीत' ಎಂಬ ವಾಕ್ಯದಿಂದ ಉಪನಯನವು ಅಧ್ಯಾಪನಕ್ಕೆ ಅಂಗವೆಂದೇ ಹೇಳಿದ್ದಾರೆ, ಹೊರತು ಅಧ್ಯಯನಕ್ಕೆ ಅಂಗವೆಂದು ಹೇಳಿಲ್ಲ. ಸಂಸ್ಕಾರವು ಅಧ್ಯಯನಕ್ಕೋಸ್ಕರವೆಂದು ಹೇಗೆ ಹೇಳುತ್ತೀರಿ? ಎಂದು ಪ್ರಶ್ನಿಸಬಾರದು. 'ತಮಧ್ಯಾಪಯೀತ' ಎಂಬ ಅಧ್ಯಾಪನವಾಕ್ಯಕ್ಕೂ ಕೂಡ ಅಧ್ಯಯನ ಮಾಡಬೇಕೆಂಬುದರಲ್ಲೇ ತಾತ್ಪರ್ಯವಿದೆ. ಏಕೆಂದರೆ, ತನ್ನ ಹಿತದ ಬಗ್ಗೆ ಅರಿವಿಲ್ಲದ ಬಾಲಕನಿಗೆ ಹಿತೈಷಿಗಳಾದ ತಂದೆ ಮೊದಲಾದವರು ಹಿತವಾದದ್ದನ್ನೇ ಹೇಳುತ್ತಾರೆ. ಆದ್ದರಿಂದ, 'ಸ್ವಾಧ್ಯಾಯೋ ಅಧ್ಯೇತವ್ಯಃ' ಎಂಬ ಶ್ರುತಿಯಲ್ಲಿರುವ ವಾಕ್ಯವನ್ನು ಉಪದೇಶಿಸಿ ಅಧ್ಯಯನದಲ್ಲಿ ತೊಡಗುವಂತೆ ಪ್ರೇರಣೆ

ಮಾಡುತ್ತಾರೆ. ಈ ಶ್ರುತಿಗೆ ಅನುಸಾರಿಯಾಗಿ 'ತಮಧ್ಯಾಪಯೀತ' ಎಂಬ ಅಧ್ಯಾಪನ ವಾಕ್ಯವೂ ಕೂಡ ಬಾಲಕನಿಗೆ ಅಧ್ಯಯನ ಮಾಡಿಸಬೇಕು ಎಂಬ ಅರ್ಥದಲ್ಲೇ ತಾತ್ಪರ್ಯವುಳ್ಳದ್ದಾಗಿದೆ.

ಅಧ್ಯಯನಕ್ಕೂ ಉಪನಯನ ಅಂಗ

ಭಾವದೀಪಃ – ನನು 'अष्टवर्षं ब्राह्मणं उपनीयत, तमध्यापयीत' इति श्रुतौ ब्राह्मणस्यैवाध्ययने उपनयनापेक्षा, नान्यस्योच्यत इत्यतः सर्वशाखानय-भाष्योक्तस्मृतिं चाऽह – वेद इति ।।

'ಅಷ್ಟವರ್ಷಂ ಬ್ರಾಹ್ಮಣಮುಪನಯೀತ, ತಮಧ್ಯಾಪಯೀತ' ಎಂಬಲ್ಲಿ ಬ್ರಾಹ್ಮಣನಾದವನು ಅಧ್ಯಯನ ಮಾಡಬೇಕಾದರೆ ಉಪನಯನ ಮಾಡಿಕೊಳ್ಳಬೇಕೆಂದಷ್ಟೇ ತಿಳಿಯುತ್ತದೆ. ಉಳಿದ ಜಾತಿಯವರು ಅಧ್ಯಯನ ಮಾಡಬೇಕಾದರೆ, ಉಪನಯನ ಮಾಡಿಕೊಳ್ಳಬೇಕಾಗಿಲ್ಲವಲ್ಲವೇ? ಎಂಬ ಪ್ರಶ್ನೆಗೆ ಸರ್ವಶಾಖಾಧಿಕರಣದ ಭಾಷ್ಯದಲ್ಲಿ ಹೇಳಿದ ಶ್ರುತಿಯಲ್ಲಿ ಉದಾಹರಿಸುತ್ತಾ ಉತ್ತರಿಸುತ್ತಾರೆ 'ವೇದ' ಇತ್ಯಾದಿ ಟೀಕೆಯಿಂದ.

ಉಪನಯನವು ಎರಡನೆಯ ಜನ್ಮ

ಭಾವದೀಪಃ – द्विजन्मना उपनयनाख्यद्वितीयजन्मवतेति त्रैवर्णिकमात्र-साधारण्यस्यैव स्मरणादित्यर्थः । नाग्निरित्यादिभाष्यं व्याचष्टे – अस्त्विति।। अतः संस्काराभावाभिधानादित्यर्थः ।

'ದ್ವಿಜನ್ಮನಾ' ಎಂಬ ಉಪನಯನವೆಂಬ ಎರಡನೇ ಜನ್ಮವನ್ನು ಪಡೆದ ತ್ರೈವರ್ಣಿಕರನ್ನು ಇಲ್ಲಿ ಸ್ಮೃತಿವಾಕ್ಯವು ವಿವಕ್ಷಿಸಿದೆ. 'ನಾಗ್ನಿಃ' ಇತ್ಯಾದಿ ಭಾಷ್ಯವನ್ನು 'ಅಸ್ತು' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ಅತಃ' ಎಂದರೆ ಸಂಸ್ಕಾರವಿಲ್ಲವೆಂದು ಹೇಳಿದ್ದರಿಂದ ಎಂದರ್ಥ.

ಸ್ತ್ರೀಯರು ಹೇಳಿದ ವೇದ

ಭಾವದೀಪಃ – संस्कारेति भाष्यव्यावर्त्यमाह – संस्कारेति ।। पराधम पराणुद । इत्यादीत्यादिपदेन ईंखयन्ति परस्यवः । इन्द्रं जातमित्यादिग्रहः। अनेन संस्कारेत्यादिभाष्येणेत्यर्थः ।

'ಸಂಸ್ಕಾರ' ಇತ್ಯಾದಿ ಭಾಷ್ಯದಿಂದ ವ್ಯಾವರ್ತ್ಯವಾದದ್ದನ್ನು 'ಸಂಸ್ಕಾರ' ಇತ್ಯಾದಿ ಟೀಕೆಯಲ್ಲಿ ಹೇಳಿದ್ದಾರೆ. 'ಪರಾಧಮ' ಎಂದರೆ 'ಸೋಲಿಸು' ಎಂದರ್ಥ. 'ಇತ್ಯಾದಿ' ಎಂಬಲ್ಲಿರುವ ಆದಿಪದದಿಂದ 'ಈಂಖಯಂತಿ ಪರಸ್ಕವಃ ಇಂದ್ರಂ ಜಾತಮ್' ಇತ್ಯಾದಿ ಶ್ರುತಿಯನ್ನು ವಿವಕ್ಷಿಸಬೇಕು. 'ಅನೇನ' ಎಂದರೆ 'ಸಂಸ್ಕಾರ' ಇತ್ಯಾದಿ ಭಾಷ್ಯದಿಂದ ಎಂದರ್ಥ.

ಶಚೀ ಮೊದಲಾದವರು ವೇದದ್ರಷ್ಟಾರರು

भावदीपः – शच्यादीनामिव शूद्राणां स्काराभावेऽपि अधिकारकल्पक-प्रमाणाभावादित्यर्थः । तर्हि स्त्रीणां संस्काराभावमभ्युपेत्य पूर्वभाष्येऽपवादोक्तिः किमर्था? इत्यतः कृतचिन्तायाः फलमन्यत्रेत्याह – अपवादेति ।।

'ಶಚೀ' ಮೊದಲಾದ ದೇವತೆಗಳಿಗೆ ಉಪನಯನವಿಲ್ಲದಿದ್ದರೂ ವೇದವಿದ್ಯೆ ಮೊದಲಾದವುಗಳಲ್ಲಿ ಅಧಿಕಾರವಿರುವಂತೆ, ಶೂದ್ರರಿಗೂ ಸಹ ಉಪನಯನ ಸಂಸ್ಕಾರವಿಲ್ಲದಿದ್ದರೂ ವೇದವಿದ್ಯೆಯಲ್ಲಿ ಅಧಿಕಾರವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. 'ಶಚೀ' ಮೊದಲಾದವರಿಗೆ ವೇದವಿದ್ಯೆ ಮೊದಲಾದವುಗಳಲ್ಲಿ ಅಧಿಕಾರವಿದೆ ಎನ್ನಲು ಪ್ರಮಾಣವಿದೆ. ಆದರಂತೆ, ಶೂದ್ರಾದಿಗಳ ವಿಷಯದಲ್ಲಿ ಪ್ರಮಾಣವಿರುವುದಿಲ್ಲ. ಹಾಗಾದರೆ, ಸ್ತ್ರೀಯರಿಗೆ ಸಂಸ್ಕಾರವಿಲ್ಲವೆಂದು ಒಪ್ಪಿ ಪೂರ್ವಭಾಷ್ಯದಲ್ಲಿ ಅಪವಾದವನ್ನು ಹೇಳಿದ್ದು ಏಕೆ? ಎಂದರೆ, ಕೃತ್ವಾಚಿಂತೆಯ ಫಲವನ್ನು ತೋರಿಸುವುದಕ್ಕಾಗಿ ಎಂದು 'ಅಪವಾದ' ಇತ್ಯಾದಿ ಟೀಕೆಯಿಂದ ಹೇಳಿದ್ದಾರೆ.

ಹೆಚ್ಚಿನ ವಿಷಯ ತಾತ್ಪರ್ಯಚಂದ್ರಿಕೆಯಲ್ಲಿ

भावदीपः – निषेधेति ।। शूद्रं नोपनयीतेति निषेधेनेत्यर्थः । निषेधाभावेऽपि संस्काराभावोक्तिमात्रेणैवाध्ययनाभावः सुवचः, तथाप्यभ्युपेत्य वाद इति चन्द्रिकोक्तिः ।। ३६ ।।

'ಶೂದ್ರಂ ನೋಪನಯೀತ' ಎಂಬ ನಿಷೇಧವಾಕ್ಯವಿರುವುದರಿಂದ ಶೂದ್ರರಿಗೆ ಉಪನಯನದಲ್ಲಿ ಅಧಿಕಾರವಿರುವುದಿಲ್ಲ. ನಿಷೇಧವಿಲ್ಲದಿದ್ದರೂ ಸಂಸ್ಕಾರವಿಲ್ಲವೆಂಬ ಮಾತ್ರದಿಂದಲೇ ಅಧ್ಯಯನವೂ ಕೂಡ ಶೂದ್ರಾದಿಗಳಿಗೆ ಇರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಆದರೂ ಸಹ ಅಂಗೀಕಾರವಾದ ಮಾಡಿ ಹೀಗೆ ಹೇಳಿದ್ದಾರೆಂದು ತಾತ್ಪರ್ಯಚಂದ್ರಿಕೆಯಲ್ಲಿ ಸಮರ್ಥನೆ ಮಾಡಿದ್ದಾರೆ.

ಬ್ರಹ್ಮಸೂತ್ರ

'ತದಭಾವನಿರ್ಧಾರಣೇ ಚ ಪ್ರವೃತ್ತೇಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। तदभावनिर्धारणे च प्रवृत्तेः ।। ३७ ।।

ಸೂತ್ರಾರ್ಥ -- ಗೌತಮ ಋಷಿಯು, 'ನೈತದಬ್ರಾಹ್ಮಣೋ ವಿವಿಕ್ತುಮರ್ಹತಿ', 'ಬ್ರಾಹ್ಮಣನಲ್ಲದವನು ಇಂತಹ ಸತ್ಯವಚನವನ್ನು ಸರ್ವಥಾ ಹೇಳಲಾರನು' ಎಂಬುದಾಗಿ ಸತ್ಯಕಾಮನು ಶೂದ್ರನಲ್ಲವೆಂದು ನಿರ್ಧಾರ ಮಾಡಿ ಅನಂತರವೇ ಅವನ ಉಪನಯನದಲ್ಲಿ ಪ್ರವೃತ್ತಿ ಮಾಡಿರುವರು. ಈ ಕಾರಣದಿಂದಲೂ ಶೂದ್ರನಿಗೆ ಉಪನಯನ ಸಂಸ್ಕಾರವಿಲ್ಲವೆಂದು ತಿಳಿದು ಬರುತ್ತದೆ.

ಅರ್ಥ -- ಚ ಶಬ್ದವು ಅವಧಾರಣಾರ್ಥದಲ್ಲಿದೆ, ತದಭಾವನಿರ್ಧಾರಣೇ = ಸತ್ಯಕಾಮನೆಂಬ ಪುರುಷನು ಶೂದ್ರನಲ್ಲವೆಂದು ನಿಶ್ಚಯ ಮಾಡಿದನಂತರವೇ, ಪ್ರವೃತ್ತೇಃ = ಗೌತಮಋಷಿಯು ಸತ್ಯಕಾಮನ ಉಪನಯನದಲ್ಲಿ ಪ್ರವೃತ್ತಿ ಮಾಡಿದನು, ಈ ಆಧಾರದಿಂದಲೂ ಶೂದ್ರನಿಗೆ ಉಪನಯನ ಸಂಸ್ಕಾರವಿಲ್ಲವೆಂದು ತಿಳಿಯುತ್ತದೆ.

ಬ್ರಹ್ಮಸೂತ್ರಭಾಷ್ಯ

ಸತ್ಯಕಾಮನು ಶೂದ್ರನಲ್ಲವೆಂದು ನಿರ್ಧರಿಸಿಯೇ ಗೌತಮರು ಉಪನಯನ ಮಾಡಿದ್ದಾರೆ

ब्रह्मसूत्रभाष्यम् – 'नाहमेतद्वेद भो यद्गोत्रोहमस्मि' (छा. ४-४.) इति सत्यवचनेन सत्यकामस्य शूद्रत्वाभावनिर्धारणे हारिद्रुमतस्य 'नैतदब्राह्मणो विवक्तुमर्हति' (छा. ४-५.) इति तत्संस्कारे प्रवृत्तेश्च ।।३७।।

ಅನುವಾದ - 'ನನ್ನ ಗೋತ್ರ ಯಾವುದೆಂದು ನನಗೇ ತಿಳಿದಿಲ್ಲ' ಹೀಗೆ ಸತ್ಯಕಾಮನ ಸತ್ಯವಾದ ಮಾತುಗಳಿಂದ ಶೂದ್ರನಲ್ಲವೆಂದು ಹರಿತ್ರ ಋಷಿಗಳ ಮಕ್ಕಳಾದ ಗೌತಮರು ನಿಶ್ಚಯಿಸುತ್ತಾರೆ. ಬ್ರಾಹ್ಮಣನಲ್ಲದವನು ಹೀಗೆ ಸತ್ಯವನ್ನು ಹೇಳಲಾರ ಎಂದು ನಿಶ್ಚಯಿಸಿ, ಅವನಿಗೆ ಉಪನಯನ ಸಂಸ್ಕಾರವನ್ನು ಮಾಡಲು ಪ್ರವೃತ್ತಿ ಮಾಡುತ್ತಾರೆ.

ಪ್ರತಿಪದಾರ್ಥ -- ಶೂದ್ರನಿಗೆ ಸಂಸ್ಕಾರವಿಲ್ಲದ್ದರಿಂದ ವೇದಾಧಿಕಾರವಿಲ್ಲವೆಂದು ಹೇಳಿದ್ದು ತಪ್ಪು. ಏಕೆಂದರೆ, 'ಶೂದ್ರಂ ನೋಪನಯೀತ' ಎಂಬ ಯಾವುದೇ ನಿಷೇಧವಿಲ್ಲದ ಕಾರಣ, ಸಂಸ್ಕಾರವನ್ನು ಮಾಡಬಹುದು. 'ನಾಗ್ನಿರ್ನ ಯಜ್ಞಃ' ಎಂಬ ಶ್ರುತಿಯಾದರೂ ಸಾಮಾನ್ಯವಾಗಿ ಶೂದ್ರನಿಗೆ ಸಂಸ್ಕಾರವಿಲ್ಲವೆಂದು ಹೇಳುತ್ತಿದೆ ಹೊರತು, ಉಪನಯನ ಸಂಸ್ಕಾರ ಮಾಡಬಾರದೆಂದು ನಿಷೇಧ ಮಾಡುತ್ತಿಲ್ಲ. ಆದ್ದರಿಂದ, ಈ ವಾಕ್ಯದ ವಿರೋಧಕ್ಕೂ ಅವಕಾಶವಿಲ್ಲವಲ್ಲವೇ? ಎಂಬ ಆಕ್ಷೇಪವನ್ನು ಪರಿಹರಿಸಲು ಮುಂದಿನ ಸೂತ್ರ ಹೊರಟಿದೆ–

ಭೋ = ಎಲೈ ಗೌತಮ ಮಹರ್ಷಿಗಳೇ, ಅಹಂ = ನಾನು, ಯದ್ಗೋತ್ರೋಽಸ್ಮಿ = ಯಾವ ಗೋತ್ರದಲ್ಲಿ ಹುಟ್ಟಿದ್ದೇನೆಂಬ, ಏತತ್ = ಈ ವಿಷಯವನ್ನು, ನ ವೇದ = ತಿಳಿದವನಲ್ಲ. ಇತಿ = ಹೀಗೆ, ಸತ್ಯವಚನೇನ = ಸತ್ಯವಾದ ಮಾತುಗಳಿಂದ, ಸತ್ಯಕಾಮಸ್ಯ = ಸತ್ಯಕಾಮನಿಗೆ, ಶೂದ್ರತ್ವಾಭಾವನಿರ್ಧಾರಣೇ = ಶೂದ್ರಜಾತಿಯವನಲ್ಲವೆಂದು ನಿರ್ಧಾರವಾದ ಮೇಲಷ್ಟೇ, ಹಾರಿದ್ರಸ್ಯ = ಹರಿತ ಋಷಿಗಳ ಮಕ್ಕಳಾದ ಗೌತಮರಿಗೆ, ಏತತ್ = ಇಂತಹ ಸತ್ಯವಚನವು, ಅಬ್ರಾಹ್ಮಣಃ = ಬ್ರಾಹ್ಮಣನಲ್ಲದವನು, ನ ವಿವಿಕ್ತುಮರ್ಹತಿ = ತಿಳಿಯಲು ಸಾಧ್ಯವಿಲ್ಲ. ಇತಿ = ಹೀಗೆ ನಿಶ್ಚಯಿಸಿ, ತತ್ಸಂಸ್ಕಾರೇ = ಸತ್ಯಕಾಮನಿಗೆ ಉಪನಯನ ಸಂಸ್ಕಾರ ಮಾಡುವುದರಲ್ಲಿ, ಪ್ರವೃತ್ತೇಶ್ಚ = ಪ್ರವೃತ್ತಿಯನ್ನು ಮಾಡಿದ್ದಾರಷ್ಟೆ.

ಸತ್ತರ್ಕದೀಪಾವಳಿ

ಜಾಬಾಲ ಋಷಿಗಳ ವಿವಕ್ಷೆ

सत्तर्कदीपावलिः – ।। तदभावनिर्धारणे च प्रवृत्तेः ।।

नैतद्ब्राह्मण इति शूद्र एव विवक्षितो न क्षत्रियादिः । तथाहि तद्भाष्ये सामसंहितालक्षण इति । यदि शूद्रस्याप्युपनयनादियोग्यत्वम्, तर्हि कथमाचार्यवर्यः शूद्राभावां निर्धार्य तत्र प्रवृत्त इत्यर्थः ।।

ಇವನು ಬ್ರಾಹ್ಮಣನಲ್ಲ, ಶೂದ್ರನೇ ಆಗಿದ್ದಾನೆಂದು ವಿವಕ್ಷಿತನಾಗಿದ್ದಾನೆ. ಕ್ಷತ್ರಿಯನೂ ಸಹ ಅಲ್ಲವೆಂದು ಪ್ರಶ್ನಿಸಬಾರದು. ಏಕೆಂದರೆ, ಒಂದು ವೇಳೆ ಶೂದ್ರನಿಗೂ ಉಪನಯನಾದಿ ಸಂಸ್ಕಾರಗಳು ಇದ್ದಿದ್ದಲ್ಲಿ ಜಾಬಾಲಿ ಋಷಿಗಳು ಶೂದ್ರನಲ್ಲವೆಂದು ನಿಶ್ಚಯ ಮಾಡಿಕೊಂಡು ಹೇಗೆ ತಾನೆ ಉಪದೇಶಿಸುತ್ತಿದ್ದರು.

ತತ್ತ್ವಪ್ರದೀಪ

ಉಪನಿಷತ್ತಿನಲ್ಲಿ ಸತ್ಯಕಾಮನ ಬಗ್ಗೆ

तत्वप्रदीपः – तदभावनिर्धारणे च प्रवृत्तेः ।। ''सोऽहं सत्यकामो जाबालोऽस्मि भो'' इति सत्यकामेनोक्ते नैतदब्राह्मणो विवक्तुमर्हतीति निर्धारणे सत्येव गौतमस्य तदुपनयनादौ प्रवृत्तेश्च न शूद्रोऽधिकारी ।।

'ತದಭಾವನಿರ್ಧಾರಣೇ ಚ ಪ್ರವೃತ್ತೇಃ' ಇತ್ಯಾದಿ ಸೂತ್ರ ಹಾಗೂ ಭಾಷ್ಯದ ಅಭಿಪ್ರಾಯ ಹೀಗಿದೆ - 'ಸೋಽಹಂ ಸತ್ಯಕಾಮೋ ಜಾಬಾಲೋಽಸ್ಮಿ ಭೋ' ಎಂಬುದಾಗಿ ಸತ್ಯಕಾಮನಿಂದ ಹೇಳಲ್ಪಟ್ಟಿದೆ. ಇದರಿಂದ 'ನೈತದಬ್ರಾಹ್ಮಣೋ ವಿವಕ್ತುಮರ್ಹತಿ' ಇವನನ್ನು ಅಬ್ರಾಹ್ಮಣನೆಂದು ನಿರ್ಣಯಿಸಲಾಗದು. ಹೀಗೆ ನಿರ್ಧಾರಣೆ ಮಾಡಿ, ಗೌತಮನಿಗೆ ಉಪನಯನವನ್ನು ಮಾಡಿದ್ದರಿಂದ ಶೂದ್ರನಿಗೆ ವೇದಾಧಿಕಾರವಿಲ್ಲವೆಂದು ಸ್ಪಷ್ಟವಾಗುತ್ತದೆ.

ಯಾರು ಬ್ರಾಹ್ಮಣ ?

तत्वप्रदीपः –

''आर्जवं ब्राह्मणे साक्षात् शूद्रोऽनार्जवलक्षणः ।
गौतमस्त्विति विज्ञाय सत्यकाममुपानयत् ।।'' इति सामसंहितायाम् ।।

ಆರ್ಜವಂ ಬ್ರಾಹ್ಮಣೇ ಸಾಕ್ಷಾತ್ ಶೂದ್ರೋಽನಾರ್ಜವಲಕ್ಷಣಃ ।
ಗೌತಮಸ್ತು ಇತಿ ವಿಜ್ಞಾಯ ಸತ್ಯಕಾಮಮುಪಾನಯತ್ ।।

ವೇದಾಧ್ಯಯನಕ್ಕೆ ಮುಖ್ಯವಾದ ಯೋಗ್ಯತೆ ಎಂದರೆ ಋಜುಮಾರ್ಗಾನುವರ್ತಿತ್ವ. ಶೂದ್ರನಾದರೂ ಋಜುಮಾರ್ಗಾನುವರ್ತಿ ಆಗಿರುವುದಿಲ್ಲ. ಹೀಗೆ ತಿಳಿದು ಗೌತಮರು ಸತ್ಯಕಾಮನಿಗೆ ಉಪನಯನಸಂಸ್ಕಾರವನ್ನು ಮಾಡಿದರು. ಇದನ್ನು ಸಾಮಸಂಹಿತೆಯು ಹೇಳುತ್ತಿದೆ.

ತತ್ವಪ್ರಕಾಶಿಕಾ

ಶೂದ್ರನಿಗೂ ಉಪನಯನ ಸಂಸ್ಕಾರ ಹೇಳೋಣ

तत्वप्रकाशिका – ।। तदभावनिर्धारणे च प्रवृत्तेः ।।

यदुक्तम् 'अध्ययनस्य संस्कारसापेत्वान्न शूद्रस्य वेदविद्याधिकारः' इति न तद्युक्तम् । शूद्रस्यापि संस्कारसम्भवात् । नच वाच्यं तदसम्भवोऽप्युक्त इति । संस्काराभावस्यैवोक्तेर्निषेधाभावात् । निषेधाभावेऽप्यभावोक्तिसम्भवात्, इत्याशङ्कां परिहरत्सूत्रं पठित्वा व्याचष्टे – तदभावेति ।।

ವೇದಾಧ್ಯಯನಕ್ಕೆ ಉಪನಯನ ಸಂಸ್ಕಾರವು ಅನಿವಾರ್ಯ. ಶೂದ್ರನಿಗೆ ಉಪನಯನ ಸಂಸ್ಕಾರವಿಲ್ಲದ ಕಾರಣ ವೇದಾಧಿಕಾರವಿಲ್ಲವೆಂದು ಹೇಳಿದ್ದು ತಪ್ಪು. ಏಕೆಂದರೆ, ಶೂದ್ರನಿಗೂ ಸಹ ಉಪನಯನ ಸಂಸ್ಕಾರವನ್ನು ಹೇಳಬಹುದು. 'ನಾಗ್ನಿರ್ನ ಯಜ್ಞಃ' ಎಂಬ ಪ್ರಮಾಣದಂತೆ

ಶೂದ್ರನಿಗೆ ಉಪನಯನ ಸಂಸ್ಕಾರದಲ್ಲಿ ಅಧಿಕಾರವಿಲ್ಲವೆಂದು ಪ್ರಶ್ನಿಸಬಾರದು. ಅವನಿಗೆ, ಸಂಸ್ಕಾರವಿಲ್ಲವೆಂದು ಹೇಳಿದ್ದಾರೆ, ಹೊರತು, ಉಪನಯನ ಸಂಸ್ಕಾರವಿಲ್ಲವೆಂದು ನಿಷೇಧ ಮಾಡಿಲ್ಲ. ನಿಷೇಧವಿಲ್ಲದಿದ್ದರೂ, ಕೆಲವೆಡೆ ಅದರ ಅಭಾವವನ್ನು ಹೇಳಬಹುದು. ಅಂದರೆ, ಉಪನಯನ ಸಂಸ್ಕಾರವಾಗಿಲ್ಲವೆಂದು ಹೇಳಿದ್ದಾರೆ, ಹೊರತು ಉಪನಯನ ಸಂಸ್ಕಾರ ಮಾಡಲೇಬಾರದೆಂಬ ನಿಷೇಧವಿರುವುದಿಲ್ಲ. ಈ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ, 'ತದಭಾವ' ಇತ್ಯಾದಿಯಾಗಿ.

ಗೌತಮ ಋಷಿಗಳು ಶೂದ್ರೋಪನಯನವನ್ನು ನಿಷೇಧಿಸಿದರು

तत्वप्रकाशिका – न शूद्रस्योपनयननिषेधाभावः । 'नाहमेतद्वेद भो यद्गोत्रोऽहमस्मि' इति वचनेन सत्यकामस्याऽऽर्जवं ज्ञात्वा 'न एतद् अब्राह्मणोविवक्तुमर्हति' इति शूद्रत्वाभावनिर्णय एव तदुपनयने गोतमस्य प्रवृत्तत्वात् । शूद्रोपनयननिषेधाभावे कथं तदभावनिर्धारण एव प्रवर्तेतेति भावः ।। ३७ ।।

ಶೂದ್ರನಿಗೆ ಉಪನಯನ ಸಂಸ್ಕಾರದ ನಿಷೇಧವಿಲ್ಲವೆಂದು ಹೇಳಬಾರದು. ಅಂದರೆ, ಉಪನಯನ ಸಂಸ್ಕಾರದ ನಿಷೇಧವು ಇದ್ದೇ ಇರುತ್ತದೆ. 'ನಾಹಮೇತದ್ವೇದ ಭೋ ಯದ್ಗೋತ್ರೋಽಹಮಸ್ಮಿ' 'ನಾನು ಯಾವ ಗೋತ್ರದವನೆಂದು ನನಗೆ ತಿಳಿದಿಲ್ಲ' ಎಂಬ ಮಾತಿನಿಂದ ಸತ್ಯಕಾಮನು ಋಜುವಾದ ಮಾತನ್ನು ಹೇಳುತ್ತಾನೆ. ಬ್ರಾಹ್ಮಣರು ಮಾತ್ರ ಋಜು ಮಾತನ್ನು ಹೇಳಲು ಸಾಧ್ಯ. ಬ್ರಾಹ್ಮಣನಲ್ಲದವನಿಗೆ ಹೀಗೆ ಸತ್ಯವನ್ನು ಹೇಳಲು ಸಾಧ್ಯವೇ ಇಲ್ಲ. ಹೀಗೆ ತಿಳಿದು ಗೌತಮರು ಅವನ ಉಪನಯನ ಸಂಸ್ಕಾರ ಮಾಡಲು ಪ್ರವೃತ್ತರಾಗುತ್ತಾರೆ. ಶೂದ್ರನಿಗೆ ಉಪನಯನ ಸಂಸ್ಕಾರದಲ್ಲಿ ನಿಷೇಧವಿಲ್ಲದಿದ್ದಲ್ಲಿ ಗೌತಮ ಋಷಿಗಳು ಸತ್ಯಕಾಮನೂ ಶೂದ್ರನಲ್ಲವೆಂದು ನಿಶ್ಚಯ ಮಾಡಿಕೊಳ್ಳುವ ಆವಶ್ಯಕತೆಯಾದರೂ ಏನಿರುತ್ತಿತ್ತು? ಹೀಗೆ ಶೂದ್ರನಲ್ಲವೆಂದು ನಿಶ್ಚಯ ಮಾಡಿಕೊಂಡು ಉಪನಯನ ಸಂಸ್ಕಾರವೆಂಬ ಕಾರ್ಯದಲ್ಲಿ ಪ್ರವೃತ್ತನಾದ್ದರಿಂದ ಶೂದ್ರನಿಗೆ ಉಪನಯನ ಸಂಸ್ಕಾರದಲ್ಲಿ ಅಧಿಕಾರವಿಲ್ಲವೆಂದು ಸ್ಪಷ್ಟವಾಗುತ್ತದೆ.

ಭಾವದೀಪ

ಸಾಧ್ಯದ ಅಧ್ಯಾಹಾರ

भावदीपः – ।। तदभावनिर्धारणे च प्रवृत्तेः ।।

साध्यमध्याहृत्य भाष्यं योजयति – **न शूद्रस्येति ।। नाहमिति ।।** छान्दोग्ये चतुर्थे गुरूपसत्त्यर्थं प्राप्तेन गौतमेन किंगोत्रस्त्वम्? इति पृष्टस्सत्यकामो वक्ति – **नाहमित्यादि ।।** वेदेत्युत्तमपुरुषैकवचनम् ।। **निर्णय एवेति ।।** चोऽवधारणे भिन्नक्रम इति दर्शितम् ।। **तदुपनयन इति ।।** अनेन पूर्वस्मात् संस्कारपदं सप्तम्यन्ततया विभानेनात्र सूत्रेऽनुवर्त्यमिति सूचितम् ।। ३७ ।।

ಟೀಕೆಯಲ್ಲಿ 'ಶೂದ್ರಸ್ಯ ನ ಉಪನಯನನಿಷೇಧಾಭಾವಃ' ಎಂದು ಹೇಳಿದ್ದರಿಂದ ಸಾಧ್ಯವನ್ನು ಅಧ್ಯಾಹಾರ ಮಾಡಿಕೊಂಡು ಭಾಷ್ಯವನ್ನು ಯೋಜನೆ ಮಾಡಿಕೊಳ್ಳಬೇಕೆಂದು ತಿಳಿಸಿದಂತಾಯಿತು. ಛಾಂದೋಗ್ಯೋಪನಿಷತ್ತಿನ ನಾಲ್ಕನೇ ಅಧ್ಯಾಯದಲ್ಲಿ ಗುರುಗಳನ್ನು ಉಪಸತ್ತಿ ಮಾಡುವುದಕ್ಕಾಗಿ ಬಂದಂತಹ ಶಿಷ್ಯನನ್ನು ಗೌತಮರು 'ನೀನು ಯಾವ ಗೋತ್ರದವನು?' ಎಂದು ಪ್ರಶ್ನಿಸುತ್ತಾರೆ. ಆವಾಗ, ಸತ್ಯಕಾಮನು ನನಗೆ ಗೋತ್ರವೇ ತಿಳಿದಿಲ್ಲ ಎಂದು ಉತ್ತರಿಸುತ್ತಾನೆ. ಅದನ್ನು 'ನಾಹಮ್' ಇತ್ಯಾದಿ ಟೀಕೆಯಿಂದ ಹೇಳಿದ್ದಾರೆ. ವೇದ ಎಂಬುದು 'ವಿದ್' ಧಾತುವಿನ ಉತ್ತಮ ಪುರುಷ ಏಕವಚನವಾಗಿದೆ. 'ನಿರ್ಣಯೇ ಏವ' ಎಂಬಲ್ಲಿರುವ 'ಚ' ಶಬ್ದವು ಅವಧಾರಣಾರ್ಥದಲ್ಲಿದ್ದು ಬೇರೆ ವಿಧದಿಂದ ಅನ್ವಯವನ್ನು ಹೊಂದುತ್ತದೆ. 'ತದುಪನಯನೇ' ಎಂದು ಹೇಳಿದ್ದರಿಂದ ಹಿಂದಿನ ಸೂತ್ರದಲ್ಲಿ ಸಂಸ್ಕಾರಪದವನ್ನು ಸಪ್ತಮ್ಯಂತವಾಗಿ ಅನುವೃತ್ತಿ ಮಾಡಿಕೊಳ್ಳಬೇಕು ಎಂದು ತಿಳಿಸಿದಂತಾಯಿತು.

ಬ್ರಹ್ಮಸೂತ್ರ

'ಶ್ರವಣಾಧ್ಯಾಯನಾರ್ಥಪ್ರತಿಷೇಧಾತ್' ಇತ್ಯಾದಿ ಸೂತ್ರ ವ್ಯಾಖ್ಯಾನ

ಬ್ರಹ್ಮಸೂತ್ರ –।। ಶ್ರವಣಾಧ್ಯಯನಾರ್ಥಪ್ರತಿಷೇಧಾತ್ ಸ್ಮೃತೇಶ್ಚ ।। ೩೮ ।।

ಸೂತ್ರಾರ್ಥ -- ಶೂದ್ರನು ವೇದಶ್ರವಣವನ್ನಾಗಲೀ, ಅಧ್ಯಯನವನ್ನಾಗಲೀ, ವೇದಾರ್ಥನಿರ್ಣಯವನ್ನಾಗಲೀ ಮಾಡಬಾರದೆಂದು 'ಶ್ರವಣೇ ತ್ರಪುಜತುಭ್ಯಾಂ' ಇತ್ಯಾದಿ ಶ್ರುತಿಯು ನಿಷೇಧ ಮಾಡುತ್ತಿದೆ. 'ನಾಗ್ನಿರ್ನ ಯಜ್ಞಃ ನ ಶೂದ್ರಸ್ಯ' ಎಂಬ ಸ್ಮೃತಿಯೂ ಕೂಡ ಸಂಸ್ಕಾರವಿಲ್ಲವೆಂದು ಹೇಳುತ್ತಿದೆ. ಇವುಗಳ ಆಧಾರದಿಂದ ಶೂದ್ರನಿಗೆ ವೇದಾಧಿ- ಕಾರವಿಲ್ಲವೆಂದು ಸ್ಪಷ್ಟವಾಗುತ್ತದೆ.

ಅರ್ಥ -- ಶ್ರವಣಾಧ್ಯಯನಾರ್ಥಪ್ರತಿಷೇಧಾತ್ = ಶೂದ್ರನಿಗೆ ವೇದಶ್ರವಣ, ವೇದಾಧ್ಯಯನ, ವೇದಾರ್ಥನಿರ್ಣಯ ಇವುಗಳನ್ನು 'ಶ್ರವಣೇ ತ್ರಪುಜತುಭ್ಯಾಂ ಶ್ರೋತ್ರಪರಿಪೂರಣಂ', ಇತ್ಯಾದಿ ವಾಕ್ಯಗಳಿಂದ ನಿಷೇಧಿಸಲಾಗಿದೆ, ಸ್ಮೃತೇಶ್ಚ = 'ನಾಗ್ನಿರ್ನ ಯಜ್ಞಃ ನ ಶೂದ್ರಸ್ಯ' ಇತ್ಯಾದಿ ಸ್ಮೃತಿಗಳೂ ಕೂಡ ಉಪನಯನಾದಿ ಸಂಸ್ಕಾರಗಳನ್ನು ನಿಷೇಧ ಮಾಡುತ್ತಿದೆ ಆದ್ದರಿಂದಲೂ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಅಪಶೂದ್ರಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಶೂದ್ರರು ವೇದಾಧ್ಯಯನ ಮಾಡಬಾರದೆನ್ನಲು ನಿಷೇಧವಿದೆ

ಬ್ರಹ್ಮಸೂತ್ರಭಾಷ್ಯಮ್ – 'श्रवणे त्रपुजतुभ्यां श्रोत्रपरिपूरणम् ।
अध्ययने जिह्वाच्छेदः । अर्थावधारणे हृदयविदारणम्'
(गौतमधर्म. १२-४.७.) इति प्रतिषेधात् ।

ಅನುವಾದ - ಸ್ತ್ರೀಶೂದ್ರಾದಿಗಳು ವೇದವನ್ನು ಶ್ರವಣ ಮಾಡಿದರೆ ಸೀಸ ಮತ್ತು ಕಾಸಿದ ಅರಗಿನಿಂದ ಕಿವಿಯನ್ನು ಮುಚ್ಚಬೇಕು. ಓದಿದರೆ ನಾಲಿಗೆಯನ್ನು ತುಂಡರಿಸಬೇಕು. ಅರ್ಥಾನುಸಂಧಾನ ಮಾಡಿದರೆ ಹೃದಯವನ್ನು ಸೀಳಬೇಕು. ಹೀಗೆ ನಿಷೇಧವಿರುವ ಕಾರಣ, ಶೂದ್ರಾದಿಗಳಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ.

ಪ್ರತಿಪದಾರ್ಥ -- ವೇದವಿದ್ಯೆಗೆ ಪೂರಕವಾದ ವಿಶಿಷ್ಟಬುದ್ಧ್ಯಾದಿಮತ್ವವು ಶೂದ್ರರಿಗೂ ಕೂಡ ಇರುತ್ತದೆ. ವಿಶಿಷ್ಟಬುದ್ಧ್ಯಾದಿಗಳು ಇದ್ದರೂ ವೇದವಿದ್ಯಾಧಿಕಾರವಿಲ್ಲವೆನ್ನುವುದಾದರೆ ದೇವತೆಗಳಿಗೂ ಕೂಡ ಅಧಿಕಾರವಿಲ್ಲದಿರಬೇಕಾಗುತ್ತಲ್ಲವೆ? ಈ ಆಕ್ಷೇಪಕ್ಕೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ –

ಶ್ರವಣೇ = ಶೂದ್ರರು ವೇದವನ್ನು ಶ್ರವಣ ಮಾಡಿದಲ್ಲಿ, ತ್ರಪು = ಕಾಸಿದ ಅರಗು, ಜತುಭ್ಯಾಂ = ಕಾಸಿದ ಸೀಸ, ಇವುಗಳಿಂದ, ಶ್ರೋತ್ರಪರಿಪೂರಣಂ = ಕಿವಿಯನ್ನು ತುಂಬಬೇಕು, ಅಧ್ಯಯನೇ = ವೇದಗಳನ್ನು ಉಚ್ಚರಿಸಿದಲ್ಲಿ, ಜಿಹ್ವಾಚ್ಛೇದಃ = ನಾಲಿಗೆಯನ್ನು ತುಂಡರಿಬೇಕು. ಅರ್ಥಾವಧಾರಣೇ = ವೇದಾರ್ಥವನ್ನು ತಿಳಿದಲ್ಲಿ, ಹೃದಯವಿದಾರಣಮ್ = ಹೃದಯವನ್ನು ಸೀಳಬೇಕು. ಇತಿ = ಹೀಗೆ ವೇದದಲ್ಲಿ, ಪ್ರತಿಷೇಧಾತ್ = ಶೂದ್ರರಿಗೆ ವೇದಾಧಿಕಾರವನ್ನು ನಿಷೇಧಿಸಲಾಗಿದೆ.

ಶೂದ್ರನಿಗೆ ಅಧಿಕಾರವಿಲ್ಲವೆನ್ನಲು ಆಧಾರ

ಬ್ರಹ್ಮಸೂತ್ರಭಾಷ್ಯಮ್ – ನಾಗ್ನಿರ್ನ ಯಜ್ಞಶ್ಶೂದ್ರಸ್ಯ ತಥೈವಾಧ್ಯಯನಂ ಕ್ರುತಃ ।

ಕೇವಲೈವ ತು ಶುಶ್ರೂಷಾ ತ್ರಿವರ್ಣಾನಾಂ ವಿಧೀಯತೇ ।। ಇತಿ ಸ್ಮೃತೇಶ್ಚ ।

ಅನುವಾದ - ಶೂದ್ರನಿಗೆ ಅಗ್ನಿಕಾರ್ಯಾದಿಗಳಲಿ, ಯಜ್ಞಾದಿ ಕರ್ಮಗಳಾಗಲಿ ಮಾಡಲು ಅಧಿಕಾರವಿರುವುದಿಲ್ಲ. ಹೀಗಿರುವಾಗ, ವೇದಾಧ್ಯಯನಕ್ಕೆ ಅವಕಾಶವಾದರೂ ಬರಲು ಹೇಗೆ ಸಾಧ್ಯ? ಕೇವಲ ತ್ರೈವರ್ಣಿಕರ ಸೇವೆಯನ್ನು ಮಾತ್ರ ಮಾಡುವ ಅಧಿಕಾರ ಶೂದ್ರರಿಗಿರುತ್ತದೆ ಎಂಬ ಸ್ಮೃತಿಯೂ ಕೂಡ ಈ ವಿಷಯದಲ್ಲಿ ಆಧಾರವಾಗಿದೆ.

ಪ್ರತಿಪದಾರ್ಥ -- 'ಶ್ರವಣೇ ತ್ರಪುಜತುಭ್ಯಾಂ' ಇತ್ಯಾದಿ ಶ್ರುತಿಯಲ್ಲಿ ಶೂದ್ರಶಬ್ದವಿರುವುದಿಲ್ಲ. ಆದ್ದರಿಂದ, ಚಾತುರ್ವರ್ಣ್ಯದವರಿಗಿಂತ ಅತಿರಿಕ್ತರಾದವರ ವಿಷಯದಲ್ಲಿ ಈ ಶ್ರುತಿಯು ಹೊರಟಿದೆ ಎಂದು ಏಕೆ ಹೇಳಬಾರದು? ಎಂಬ ಆಕ್ಷೇಪಕ್ಕೆ ಪರಿಹಾರಕವಾಗಿ ಸ್ಮೃತಿವಾಕ್ಯವನ್ನು ಆಧಾರವನ್ನಾಗಿ ನೀಡುತ್ತಿದ್ದಾರೆ --

ಶೂದ್ರಸ್ಯ = ಶೂದ್ರನಿಗೆ, ನಾಗ್ನಿಃ = ಅಗ್ನ್ಯಾಧಾನವು ಸರ್ವಥಾ ಇರುವುದಿಲ್ಲ, ನ ಯಜ್ಞಃ = ಐದು ಬಗೆಯ ಯಜ್ಞಾಧಿಕಾರವು ಕೂಡ ಸರ್ವಥಾ ಇರುವುದಿಲ್ಲ, ತಥೈವ = ಅದರಂತೆಯೇ, ಅಧ್ಯಯನಂ = ವೇದಾಧ್ಯಯನದಲ್ಲಿ ಅಧಿಕಾರವಾದರೋ, ಕುತಃ = ಹೇಗೆ ತಾನೆ ಬರಲು ಸಾಧ್ಯ ? ಹಾಗಾದರೆ ಅವರಿಗೆ ಪರಲೋಕಸಾಧನವು ಹೇಗೆ? ಎಂದರೆ, ತ್ರಿವರ್ಣಾನಾಂ = ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ಮೂರು ವರ್ಣದವರ, ಕೇವಲೈವ ತು ಶುಶ್ರೂಷಾ = ಸೇವಾಮಾತ್ರದಿಂದಲೇ ಪರಲೋಕಸಾಧನವೆಂದು, ವಿಧೀಯತೇ = ವಿಧಾನ ಮಾಡಲಾಗಿದೆ, ಇತಿ = ಹೀಗೆ, ಸ್ಮೃತೇಶ್ಚ = ಸ್ಮೃತಿಯ ಆಧಾರವಿದೆ.

ವಿದುರಾದಿಗಳಿಗೆ ಈ ನಿಯಮವಿಲ್ಲ

ब्रह्मसूत्रभाष्यम् – विदुरादीनां तु उत्पन्नज्ञानत्वात्कश्चिद्विशेषः ।।३८।।

।। इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये अपशूद्राधिकरणम्।। ९।।

ಅನುವಾದ - ವಿದುರ, ಧರ್ಮವ್ಯಾಧ ಮೊದಲಾದವರಿಗೆ ಹಿಂದಿನ ಜನ್ಮದಲ್ಲಿ ಭಗವಂತನ ಅಪರೋಕ್ಷ ಜ್ಞಾನವಾಗಿದೆ. ಆದ್ದರಿಂದ, ಶೂದ್ರರಿಗಿರುವ ನಿಯಮ ಅವರಿಗೆ ಸಂಬಂಧ ಪಡುವುದಿಲ್ಲ.

ಪ್ರತಿಪದಾರ್ಥ -- ಶೂದ್ರರಿಗೆ ವೇದಾರ್ಥದ ಜ್ಞಾನವನ್ನು ನಿಷೇಧ ಮಾಡುವುದಾದಲ್ಲಿ ವಿದುರಾದಿಗಳು ವೇದಾರ್ಥವನ್ನು ಹೇಗೆ ಕೇಳಿದರು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಾರೆ–

ವಿದುರಾದೀನಾಂ ತು = ವಿದುರ, ಧರ್ಮವ್ಯಾಧ ಮೊದಲಾದವರಿಗಾದರೂ, ಉತ್ಪನ್ನಜ್ಞಾನತ್ವಾತ್ = ಹಿಂದಿನ ಜನ್ಮದಲ್ಲಿ ಅಪರೋಕ್ಷ ಜ್ಞಾನವಾಗಿರುವುದರಿಂದ, ಕಶ್ಚಿತ್ ವಿಶೇಷಃ = ಶೂದ್ರರಿಗಿರುವ ನಿಯಮವು ಸಂಬಂಧ ಪಡುವುದಿಲ್ಲ. ಅವರಲ್ಲಿ ವೈಶಿಷ್ಟ್ಯವಿದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಅಪಶೂದ್ರಾಧಿಕರಣವು ಸಮಾಪ್ತವಾಯಿತು ॥

ಸತ್ತರ್ಕದೀಪಾವಳಿ

ಅಪರೋಕ್ಷಜ್ಞಾನವಿಲ್ಲದ ಶೂದ್ರರಿಗೆ ವೇದಾಧಿಕಾರವಿಲ್ಲ

सत्तर्कदीपावलिः –

॥ श्रवणाध्ययनार्थप्रतिषेधात् स्मृतेश्च ॥

न केवलमुपनयनप्रतिषेधाच्छूद्रस्याध्ययनाभावः, किन्तु प्रतिषेधादपीति भावेनोत्तरं सूत्रमवतार्य व्याचष्टे – श्रवणेत्यादिना ॥ नतु तर्हि कथं विदुरः सर्ववेत्ता त्रिषूच्यते? कथं चाक्षत्रसंस्कारयुतः कर्णो निखिलश्रुतीरधिजगौ? इत्युच्यत इत्यत आह – विदुरादीनामिति ॥ उत्पन्नापरोक्षज्ञानित्वात् कश्चिद् विशेषः इतरशूद्रादिभ्य इत्यर्थः । अतोऽन्येषां शूद्रादीनां मनुष्यत्वेऽपि न विद्याधिकारः इति सिद्धम् ॥

॥ इति सत्तर्कदीपावल्याम् अपशूद्राधिकरणम् ॥

ಕೇವಲ ಉಪನಯನ ಸಂಸ್ಕಾರದಲ್ಲಿ ಅಧಿಕಾರವಿಲ್ಲವೆನ್ನುವ ಕಾರಣದಿಂದಷ್ಟೇ ಶೂದ್ರನಿಗೆ ವೇದಾಧ್ಯಯನದಲ್ಲಿ ಅಧಿಕಾರವಿಲ್ಲವೆಂದಲ್ಲ. ಹೊರತಾಗಿ, ವೇದಾಧ್ಯಯನ ಮಾಡಬಾರದೆಂಬ ನಿಷೇಧ ಪ್ರಮಾಣವೂ ಇರುತ್ತದೆಂಬ ಅಭಿಪ್ರಾಯದಿಂದ ಮುಂದಿನ ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ, ಶ್ರವಣ ಇತ್ಯಾದಿಯಾಗಿ. ಹಾಗಾದರೆ, 'ವಿದುರಃ ಸರ್ವವೇತ್ತಾ

ತ್ರಿಷೂಚ್ಯತೇ' ವಿದುರನು ಎಲ್ಲವನ್ನೂ ತಿಳಿದಿದ್ದಾನೆ. ಮತ್ತು 'ಅಕ್ಷತ್ರಸಂಸ್ಕಾರಯುತಃ ಕರ್ಣೋ ನಿಖಿಲಶ್ರುತಿರಧಿಜಗೌ' ಕ್ಷತ್ರಿಯರ ಸಂಸ್ಕಾರವಿಲ್ಲದಿದ್ದರೂ ಎಲ್ಲಾ ಶ್ರುತಿಗಳನ್ನು ಕರ್ಣನು ತಿಳಿದಿದ್ದಾನೆ. ಇತ್ಯಾದಿಯಾದ ಮಾತುಗಳು ಏಕೆ ಹೊರಟಿವೆ? ಎಂಬ ಪ್ರಶ್ನೆಗೆ 'ವಿದುರಾದೀನಾಮ್' ಇತ್ಯಾದಿಯಾಗಿ ಉತ್ತರಿಸಿದ್ದಾರೆ. ವಿದುರ, ಕರ್ಣ ಮೊದಲಾದವರು ಅಪರೋಕ್ಷ ಜ್ಞಾನಿಗಳಾದ್ದರಿಂದ ವೇದಾಧಿಕಾರವಿರುತ್ತದೆಂದು ಅಪವಾದವನ್ನು ತಿಳಿಯಬೇಕು. ಅಂದರೆ ಅಪರೋಕ್ಷ ಜ್ಞಾನವಿಲ್ಲದ ಇತರ ಶೂದ್ರಾದಿಗಳಿಗೆ ಮಾತ್ರ ವೇದಾಧಿಕಾರವಿಲ್ಲವೆಂದು ಅಭಿಪ್ರಾಯ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಅಪಶೂದ್ರಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

ಸಾಮಸಂಹಿತೆಯಲ್ಲಿ ಉಪನಯನದ ಬಗ್ಗೆ

तत्त्वप्रदीपः –

विदुरादीनां तु जन्मान्तर एव वेदादुत्पन्नज्ञानत्वाद्विशेषः।।

।। इत्यपशूद्राधिकरणम् ।।

ವಿದುರಾದಿಗಳಿಗೆ ಜನ್ಮಾಂತರದಲ್ಲಿ ವೇದಾಧ್ಯಯನದಿಂದ ಸಂಸ್ಕಾರವು ಹುಟ್ಟಿದೆ. ಅದರಿಂದ ಉತ್ಪನ್ನವಾದ ಜ್ಞಾನವುಳ್ಳವರಾಗಿದ್ದಾರೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ತ್ವಪ್ರದೀಪದಲ್ಲಿ
ಅಪಶೂದ್ರಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ಕೇವಲ ವಿಶಿಷ್ಟಬುದ್ಧ್ಯಾದಿಮತ್ವವು ಪ್ರಯೋಜಕವಲ್ಲ

तत्वप्रकाशिका – ।। श्रवणाध्ययनार्थप्रतिषेधात् स्मृतेश्च ।।

ननु श्रुतावब्राह्मणमात्रस्यानुपनयनाभिप्रायप्रतीतेः कथं शूद्रत्वाभावेत्य-सूत्रयत्, अभाषात च । ब्राह्मणपदेन ब्रह्माणनयोग्यानां त्रैवर्णिकानामुक्तेः । शूद्रो वेदविद्याधिकारी विशिष्टबुद्ध्यादिमत्त्वात् द्विजवत् । अन्यथा विशिष्टबुद्ध्यादिमत्त्वेन देवताधिकारसिद्धिर्न स्यात्? इत्याशङ्कां परिहरत्सूत्रमुपन्यस्य व्याचष्टे – श्रवणेति ।। न विशिष्टबुद्ध्यादिमत्त्वेन शूद्रस्य वेदाधिकारो वाच्यः। अनिषिद्धत्वे सति विशिष्टबुद्ध्यादिमत्त्वस्याधिकारप्रयोजकत्वेन केवलविशिष्ट-बुद्ध्यादिमत्त्वस्याधिकारासाधकत्वात्।

'ನೈತದಬ್ರಾಹ್ಮಣೋ ವಿವಕ್ತುಮರ್ಹತಿ' ಎಂಬ ಶ್ರುತಿಯಲ್ಲಿ ಬ್ರಾಹ್ಮಣನಲ್ಲದವನಿಗೆ ಉಪನಯನ ಸಂಸ್ಕಾರವಿಲ್ಲವೆಂದಷ್ಟೇ ಹೇಳಲಾಗಿದೆ. ಹೀಗಿರುವಾಗ ನೀವು ಶೂದ್ರನಿಗೆ ಮಾತ್ರ ಉಪನಯನ ಸಂಸ್ಕಾರವಿಲ್ಲವೆಂಬ ಅಭಿಪ್ರಾಯದಲ್ಲಿ 'ತದಭಾವ' ಎಂಬ ಸೂತ್ರದ ಪದಕ್ಕೆ 'ಶೂದ್ರತ್ವಾಭಾವ' ಎಂದೇಕೆ ಅರ್ಥ ಹೇಳುತ್ತಿದ್ದೀರಿ? ಭಾಷ್ಯಕಾರರು 'ಸೂತ್ರತ್ವಾಭಾವ-ನಿರ್ಧಾರಣೇ' ಎಂದೇಕೆ ಹೇಳಿದರು? ಎಂದು ಪ್ರಶ್ನಿಸಬಾರದು. ಬ್ರಾಹ್ಮಣಪದಕ್ಕೆ 'ಬ್ರಹ್ಮ ಅಣತಿ' ಬ್ರಹ್ಮನನ್ನು ಅಧ್ಯಯನ ಮಾಡುವವನು ಎಂದು ವಿವಕ್ಷಿಸಿದಾಗ ತ್ರೈವರ್ಣಿಕರು ಎಂಬರ್ಥವು ಲಭಿಸುತ್ತದೆ. ಆದ್ದರಿಂದ 'ಶೂದ್ರಃ ವೇದವಿದ್ಯಾಧಿಕಾರೀ ವಿಶಿಷ್ಟಬುದ್ಧ್ಯಾದಿಮತ್ತ್ವಾತ್, ದ್ವಿಜವತ್' ದ್ವಿಜರಂತೆ ಶೂದ್ರನಿಗೆ ವಿಶಿಷ್ಟಬುದ್ಧ್ಯಾದಿಮತ್ವಗಳು ಇರುವುದರಿಂದ ವೇದಾಧಿಕಾರವಿರುತ್ತದೆ ಎಂದು ಸಾಧಿಸಬಹುದು. ಒಂದು ವೇಳೆ ವಿಶಿಷ್ಟಬುದ್ಧ್ಯಾದಿಗಳು ಇದ್ದರೂ ವೇದಾಧಿಕಾರವನ್ನು ಒಪ್ಪದಿದ್ದರೆ ವಿಶಿಷ್ಟಬುದ್ಧ್ಯಾದಿಮತ್ವವೆಂಬ ಹೇತುವಿರುವ ಕಾರಣದಿಂದಲೇ ದೇವತೆಗಳಿಗೆ ವೇದಾಧಿಕಾರವಿರುತ್ತದೆಂದು ದೇವತಾಧಿಕರಣದಲ್ಲಿ ಸಮರ್ಥಿಸಿದ್ದು ಕೂಡ ತಪ್ಪಾಗಬೇಕಾದೀತು.

ಈ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ, ಶ್ರವಣ ಇತ್ಯಾದಿಯಾಗಿ. ವಿಶಿಷ್ಟಬುದ್ಧ್ಯಾದಿಮತ್ವವೆಂಬ ಹೇತುವಿನಿಂದ ಶೂದ್ರನಿಗೆ ವೇದಾಧಿಕಾರವಿರುತ್ತದೆಂದು ಹೇಳಬಾರದು. ಏಕೆಂದರೆ, ನಿಷೇಧವಿಲ್ಲದೆ ವಿಶಿಷ್ಟಬುದ್ಧ್ಯಾದಿಮತ್ವ ಇದ್ದರೆ ಮಾತ್ರ ವೇದಾಧಿಕಾರವನ್ನು ಹೇಳಬೇಕು. ಆದ್ದರಿಂದ ವೇದವಿದ್ಯಾಧಿಕಾರಕ್ಕೆ ಪ್ರಯೋಜಕವಾದ ಹೇತು, 'ಅನಿಷಿದ್ಧತ್ವೇ ಸತಿ ವಿಶಿಷ್ಟಬುದ್ಧ್ಯಾದಿಮತ್ವ' ಹೊರತು, ಕೇವಲ 'ವಿಶಿಷ್ಟಬುದ್ಧ್ಯಾದಿಮತ್ವ' ಅಲ್ಲ.

ಸ್ಮೃತಿಗೆ ಅನುಗುಣವಾಗಿ ಶ್ರುತಿ

तत्वप्रकाशिका – शूद्रस्य वेदश्रवणाध्यायनार्थावधारणानां श्रुतो प्रतिषिद्धत्वात्। श्रुतौ शूद्रशब्दाश्रवणाद्वर्णबाह्यविषयोऽसाविति न वाच्यम् । 'नाग्नि यज्ञः शूद्रस्य' इति स्मृतौ शूद्रस्यैव स्पष्टनिषेधात् श्रुतेरपि तदर्थत्वोपपत्तेः।

ಶೂದ್ರನಿಗೆ ವೇದಶ್ರವಣ, ವೇದಾಧ್ಯಯನ, ವೇದದ ಅರ್ಥಾವಧಾರಣವನ್ನು ಶ್ರುತಿಯಲ್ಲಿ ನಿಷೇಧಿಸಲಾಗಿದೆ.

ಶ್ರುತಿಯಲ್ಲಿ ಶೂದ್ರಶಬ್ದವೇ ಕೇಳಿಸುತ್ತಿಲ್ಲ. ಆದ್ದರಿಂದ, ವರ್ಣಬ್ರಾಹ್ಯರಿಗೂ ಇದು ಸಂಬಂಧಿಸುತ್ತಿದೆ ಎಂದೇಕೆ ಹೇಳಬಾರದು ? 'ನಾಗ್ನಿರ್ನ ಯಜ್ಞಃ ಶೂದ್ರಸ್ಯ' ಎಂಬ ಸ್ಮೃತಿಯಲ್ಲಿ ಶೂದ್ರನಿಗೆ ಅಧಿಕಾರವಿಲ್ಲವೆಂದು ಸ್ಪಷ್ಟವಾಗಿ ನಿಷೇಧ ಮಾಡಿರುವುದರಿಂದ ಅದಕ್ಕನುಗುಣವಾಗಿ ಶ್ರುತಿಯೂ ಸಹ ಶೂದ್ರಪರವೇ ಆಗಿದೆಯೆಂದು ತಿಳಿಯಬೇಕು.

ಅನಿಷಿದ್ಧತ್ವೇ ಸತಿ ವಿಶಿಷ್ಟಬುದ್ಧ್ಯಾದಿಮತ್ತ್ವವು ಹೇತು

तत्वप्रकाशिका – अतोऽनिषिद्धत्वे सति विशिष्टबुद्ध्यादिमत्त्वं व्यावर्तमानं शूद्रात् स्वव्याप्यं वेदाधिकारं च व्यावर्तयतीति भावः ।

ಆದ್ದರಿಂದ, 'ಅನಿಷಿದ್ಧತ್ವೇ ಸತಿ ವಿಶಿಷ್ಟಬುದ್ಧ್ಯಾದಿಮತ್ವಮ್' ಎಂಬ ಹೇತು ಶೂದ್ರನಲ್ಲಿಲ್ಲದ ಕಾರಣ, ವ್ಯಾಪ್ಯವಾದ ವೇದಾಧಿಕಾರವೂ ಇಲ್ಲವೆಂದು ವೇದವು ಸಮರ್ಥಿಸುತ್ತದೆ.

ಕರ್ಣನಲ್ಲಿ ಹೇಗೆ ?

तत्वप्रकाशिका – ननु शूद्रस्य वेदार्थावधारणादेर्निषिद्धत्वे कथं विदुरधर्मव्याधादीनां वैदिकार्थावधारणमस्ति ? संस्काराभावेनानधिकारे च कथं कर्णोऽक्षत्रसंस्कारयुतोऽखिलाः श्रुतीरधिजगौ । नच वाच्यमसावपवादविषय इति । अविहितोपनयनानामेव वेदाधिकारिणामपवादविषयत्वसम्भवादित्यत आह – विदुरादीनामिति ।।

ಪ್ರಶ್ನೆ- ಶೂದ್ರನಿಗೆ ವೇದದ ಅರ್ಥವನ್ನು ತಿಳಿಯುವುದು ಕೂಡ ನಿಷಿದ್ಧವಾದಲ್ಲಿ ವಿದುರ, ಧರ್ಮವ್ಯಾಧ ಮೊದಲಾದ ಶೂದ್ರ ಜಾತಿಯಲ್ಲಿ ಹುಟ್ಟಿದವರು ವೇದದ ಅರ್ಥವನ್ನು ಸ್ಪಷ್ಟವಾಗಿ ಹೇಳುತ್ತಿದ್ದರೆಂದು ಪ್ರಸಿದ್ಧವಾಗಿದೆ. ಇದು ಹೇಗೆ ಕೂಡುತ್ತದೆ. ಮತ್ತು, ಉಪನಯನ ಸಂಸ್ಕಾರವಿಲ್ಲದ್ದರಿಂದ ವೇದಾಧಿಕಾರವಿಲ್ಲವೆನ್ನುವುದಾದರೆ, ಕರ್ಣನಿಗೆ ಕ್ಷತ್ರಿಯಸಂಸ್ಕಾರ-ವಿಲ್ಲದಿದ್ದರೂ ಸಕಲ ವೇದಗಳನ್ನು ಅಭ್ಯಾಸ ಮಾಡಿದ್ದನೆಂದು ಉಲ್ಲೇಖವಿದೆ. ಇದು ಹೇಗೆ?

ಉತ್ತರ - ಸಾಮಾನ್ಯ ನಿಯಮಕ್ಕೆ ವಿದುರ, ಕರ್ಣ ಮೊದಲಾದವರು ಅಪವಾದವಾಗಿದ್ದಾರೆ. ಬಾಧಕವಿರುವ ಕಾರಣ ಸಾಪವಾದ ನಿಯಮವೆಂದು ಹೇಳಬಹುದು. ಇದು ತಪ್ಪು. ಏಕೆಂದರೆ, ಉಪನಯನಸಂಸ್ಕಾರವಿಲ್ಲದ ಉತ್ತಮ ಸ್ತ್ರೀ ಮೊದಲಾದವರ ವಿಷಯದಲ್ಲಿ ಅಪವಾದವನ್ನು ಹೇಳಬಹುದೇ ಹೊರತು, ವಿದುರಾದಿಗಳಲ್ಲಿ ಅಪವಾದವನ್ನು ಹೇಳಲು ಸಾಧ್ಯವಿಲ್ಲ. ಈ ಪ್ರಶ್ನೆಗೆ, 'ವಿದುರಾದೀನಾಮ್' ಇತ್ಯಾದಿ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ.

ಕರ್ಣನಿಗೆ ಹಿಂದಿನ ಜನ್ಮದಲ್ಲಿ ಅಪರೋಕ್ಷವಾಗಿದೆ

तत्वप्रकाशिका – तेषां पूर्वजन्मन्युत्पन्नापरोक्षज्ञा(न) नित्वेनेतर-शूद्रादिभ्यो विशिष्टत्वात् वेदार्थावधारणादि न निषिद्धमिति भावः । अतो हरिः शूद्राद्यैर्वेदविद्याविज्ञेयो न भवतीति सिद्धम् ।। ३८ ।।

।। इति श्रीमज्जयतीर्थभिक्षुविरचितायां तत्वप्रकाशिकायाम् अपशूद्राधिकरणम्।।

ವಿದುರ, ಕರ್ಣ ಮೊದಲಾದವರಿಗೆ ಹಿಂದಿನ ಜನ್ಮದಲ್ಲಿ ಅಪರೋಕ್ಷಜ್ಞಾನವಾಗಿದೆ. ಆದ್ದರಿಂದ ಉಳಿದ ಶೂದ್ರಾದಿಗಳಿಗಿಂತ ಇವರಲ್ಲಿ ವೈಶಿಷ್ಟ್ಯವಿದೆ. ಹಾಗಾಗಿ, ವೇದದ ಅರ್ಥಾವಧಾರಣಾದಿ ವಿಷಯಗಳಲ್ಲಿ ಇವರಿಗೆ ನಿಷೇಧವಿರುವುದಿಲ್ಲ. ಹಾಗಾಗಿ, ಪೌತ್ರಾಯಣ ಸಂಬಂಧಿಯಾದ ಶೂದ್ರಶಬ್ದವು ಯೌಗಿಕವಾದ್ದರಿಂದ, ಆ ದೃಷ್ಟಾಂತ ಶೂದ್ರನಿಗೆ ವೇದಾಧಿಕಾರ-ವಿಷಯದಲ್ಲಿ ಹೇತುವಾಗದಿರುವುದರಿಂದ ಶೂದ್ರನಿಗೆ ಉಪನಯನ ಸಂಸ್ಕಾರವಿರದ ಕಾರಣ, ಸಂಸ್ಕಾರವು ನಿಷಿದ್ಧವಾದ್ದರಿಂದಲೂ ಪರಮಾತ್ಮನು ಶೂದ್ರಾದಿಗಳಿಂದ ವೇದವಿದ್ಯೆಯ ಮೂಲಕ ಜ್ಞೇಯನಾಗುವುದಿಲ್ಲವೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ತ್ವಪ್ರಕಾಶಿಕಾಟೀಕೆಯಲ್ಲಿ
ಅಪಶೂದ್ರಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಭಾವದೀಪ

'ಆರ್ಜವಂ ಬ್ರಾಹ್ಮಣೇ ಸಾಕ್ಷಾತ್' ಎಂಬ ಸ್ಮೃತಿಯ ವ್ಯಾಖ್ಯಾನ

भावदीपः –

॥ श्रवणाध्ययनार्थप्रतिषेधात् स्मृतेश्च ॥

श्रवणाध्ययनार्थप्रतिषेधात् स्मृतेश्च ॥ ब्रह्माणनेति ॥ 'आर्जवं ब्राह्मणे साक्षात् शूद्रो नार्जवलक्षणः । गौतमस्तु' इति विज्ञाय 'सत्यकाममुपानयद्' इति श्रुतिव्याख्यानरूपस्मृतौ ब्राह्मणप्रतियोगित्वेन शूद्रस्योक्तेः श्रुतावपि ब्राह्मणशब्दो वेदाध्ययनयोग्यत्रैवर्णिकपर इत्यर्थः ।

'ಆರ್ಜವಂ ಬ್ರಾಹ್ಮಣೇ ಸಾಕ್ಷಾತ್ ಶೂದ್ರೋऽನಾರ್ಜವಲಕ್ಷಣಃ।
ಗೌತಮಸ್ತ್ವಿತಿ ವಿಜ್ಞಾಯ ಸತ್ಯಕಾಮಮುಪಾನಯತ್ ॥'

ಎಂಬ ಸ್ಮೃತಿಯು ಶ್ರುತಿಯನ್ನು ವ್ಯಾಖ್ಯಾನ ಮಾಡುತ್ತಿದೆ. ಬ್ರಾಹ್ಮಣರಿಗೆ ಪ್ರತಿಯೋಗಿಯಾಗಿ ಶೂದ್ರನನ್ನು ಹೇಳಿದ್ದರಿಂದ ಶ್ರುತಿಯಲ್ಲಿ ಬ್ರಾಹ್ಮಣ ಶಬ್ದಕ್ಕೆ ವೇದಾಧ್ಯಯನದಲ್ಲಿ ಅರ್ಹರಾದ ತ್ರೈವರ್ಣಿಕರನ್ನು ವಿವಕ್ಷಿಸಬೇಕು.

ಹೇತು ಅಪ್ರಯೋಜಕವಲ್ಲ

ಭಾವದೀಪಃ – ಹೇತೋರಪ್ರಯೋಜಕತ್ವಂ ನಿರಾಹ – ಅನ್ಯಥೇತಿ ।। ಭಾಷ್ಯಂ ಯೋಜಯಿತುಂ ಸಾಧ್ಯಂ ಪೂರಯತಿ – ನ ವಿಶಿಷ್ಟೇತಿ ।। ಪರೋಕ್ತಹೇತೋರಪ್ರಯೋಜಕತ್ವಂ ವಕ್ತುಂ ಪ್ರಾಗ್ದೇವತಾನ ಯೋಕ್ತಾಧಿಕಾರಪ್ರಯೋಜಕಂ ಹೇತುಂ ಸ್ಮಾರಯಿತ್ವಾ ಶೂದ್ರೇ ತಾದೃಶಪ್ರಯೋಜಕಾಭಾವಪರತಯಾ ಭಾಷ್ಯಂ ವ್ಯಾಚಷ್ಟೇ – ಅನಿಷಿದ್ಧತ್ವೇ ಸತೀತಿ।।

ಹೇತುವಿಗೆ ಅಪ್ರಯೋಜಕತ್ವವನ್ನು 'ಅನ್ಯಥಾ' ಇತ್ಯಾದಿ ಟೀಕೆಯಿಂದ ನಿರಾಕರಿಸಿದ್ದಾರೆ. ಭಾಷ್ಯವನ್ನು ಯೋಜನೆ ಮಾಡಿಕೊಳ್ಳುವುದಕ್ಕಾಗಿ ಸಾಧ್ಯವನ್ನು ಶೇಷಪೂರಣ ಮಾಡುತ್ತಿದ್ದಾರೆ, 'ನ ವಿಶಿಷ್ಟ' ಇತ್ಯಾದಿ ಟೀಕೆಯಿಂದ. ಪರರು ಹೇತುವಿಗೆ ಹೇಳಿದ ಅಪ್ರಯೋಜಕತ್ವವನ್ನು ತೋರಿಸಲು ಹಿಂದೆ ದೇವತಾಧಿಕರಣದಲ್ಲಿ ಅಧಿಕಾರಕ್ಕೆ ಪ್ರಯೋಜಕವಾದ ಹೇತುವನ್ನು ಸ್ಮರಿಸಿ ಶೂದ್ರನಲ್ಲಿ ಅಂಥಹ ಪ್ರಯೋಜಕ ಧರ್ಮವು ಇರುವುದಿಲ್ಲವೆಂದು ಭಾಷ್ಯವನ್ನು ವ್ಯಾಖ್ಯಾನ ಮಾಡಿದ್ದಾರೆ 'ಅನಿಷಿದ್ಧತ್ವೇ ಸತಿ' ಎಂಬ ಟೀಕೆಯಿಂದ.

ಅಪವಾದಕ್ಕೆ ಯಾರು ವಿಷಯ

ಭಾವದೀಪಃ – ಯಸ್ತ್ವಯಾ ಪ್ರಯುಕ್ತಃ ಸ ತ್ವಪ್ರಯೋಜಕಃ ಯಸ್ತು ಪ್ರಯೋಜಕತ್ವೇನ ವೇದಾಧಿಕಾರೇ ವಿವಕ್ಷಿತಃ ಸತ್ತು ಶೂದ್ರೇ ನಾಸ್ತಿ ವಿಶೇಷಣಾಭಾವಾದಿತಿ ಭಾವಃ । ಸ್ಮೃತ್ಯುಕ್ತೇರುಪಯೋಗಮಾಹ – ಶ್ರುತಾವಿತಿ ।। ಅವಿಹಿತೇತಿ ।। ಅವಿಹಿತೋಪನಯನತ್ವೇ ಸತ್ಯನಿಷಿದ್ಧಾಧ್ಯಯನಾನಾಮುತ್ತಮಸ್ತ್ರೀತಿರ್ಯಗಾದೀನಾಮೇವಾಪವಾದವಿಷಯತಾ । ನತ್ತು ನಿಷಿದ್ಧಾಧ್ಯಯನಾದೀನಾಮಿತ್ಯರ್ಥಃ ।

ಯಾವುದನ್ನು ವೇದವಿದ್ಯೆಗೆ ಪ್ರಯೋಜಕವೆಂದು ನೀನು ಹೇಳಿದ್ದೀಯೋ, ಅದು ಅಪ್ರಯೋಜಕವಾಗಿದೆ. ವೇದಾಧಿಕಾರಕ್ಕೆ ಪ್ರಯೋಜಕವೆಂದು ಹೇಳಿದ ಆ ಧರ್ಮವು ಶೂದ್ರನಲ್ಲೇ

ಇರುವುದಿಲ್ಲ. ಇದನ್ನು ತಿಳಿಸಲು 'ವಿಶೇಷಣಾಭಾವಾತ್' ಎಂದಿದ್ದಾರೆ. ಸ್ಮೃತಿಯನ್ನು ಉಲ್ಲೇಖ ಮಾಡಿದ್ದಕ್ಕೆ ಉಪಯೋಗವನ್ನು 'ಶ್ರುತೌ' ಎಂಬ ಟೀಕೆಯಲ್ಲಿ ಹೇಳಿದ್ದಾರೆ. ಉತ್ತಮಸ್ತ್ರೀ ಹಾಗೂ ಉತ್ತಮ ಪ್ರಾಣಿಗಳಿಗೆ ಉಪನಯನವು ವಿಹಿತವಾಗದಿದ್ದರೂ ಅಧ್ಯಯನದ ನಿಷೇಧವಿರುವುದಿಲ್ಲ. ಇವರು ಮಾತ್ರ ಅಪವಾದಕ್ಕೆ ವಿಷಯರಾಗಿದ್ದಾರೆ ಹೊರತು, ಯಾರಿಗೆ ಅಧ್ಯಯನದ ನಿಷೇಧವಿದೆಯೋ, ಅವರು ಅಪವಾದಕ್ಕೆ ವಿಷಯರಲ್ಲ.

ವೇದಾಧಿಕಾರವಿಲ್ಲದಿದ್ದರೂ ಶೂದ್ರರಿಗೆ ಮೋಕ್ಷವಿದೆ

ಭಾವದೀಪಃ – एवञ्चेत् सच्छूद्रादौ मुक्त्यभाव इति शङ्कां निरस्यन्नुपसंहरति – अत इति ।। रथरूपलिङ्गेन क्षत्रिये शूद्रशब्दस्य यौगिकतया लिङ्गदर्शनाभावेन संस्कारशून्यत्वेन । गौतमप्रवृत्तिरूपलिङ्गदर्शनेन निषिद्धत्वेन च शूद्रस्याधिकाराभावादित्यर्थः ।।

ಹಾಗಾದರೆ, ಸಜ್ಜನರಾದ ಶೂದ್ರರಿಗೆ ಮೋಕ್ಷವೇ ಇಲ್ಲದ ಪ್ರಸಂಗ ಬರುತ್ತದಲ್ಲವೇ? ಎಂಬ ಆಶಂಕೆಯನ್ನು ನಿರಾಕರಿಸಿ ಅಧಿಕರಣವನ್ನು ಉಪಸಂಹಾರ ಮಾಡುತ್ತಿದ್ದಾರೆ, 'ಅತಃ' ಇತ್ಯಾದಿ ಟೀಕೆಯಿಂದ. 'ಅಥ' ಎಂಬ ಲಿಂಗದಿಂದ ಕ್ಷತ್ರಿಯನಲ್ಲಿಯೂ ಶೂದ್ರಶಬ್ದವನ್ನು ಯೌಗಿಕವಾಗಿ ಹೇಳಬಹುದು. ಆದ್ದರಿಂದ, ಲಿಂಗದರ್ಶನವಿಲ್ಲದ್ದರಿಂದ ಸಂಸ್ಕಾರಶೂನ್ಯರಾದ್ದರಿಂದ ಗೌತಮಪ್ರವೃತ್ತಿ ಎಂಬ ಲಿಂಗವೂ ಕಂಡಿರುವುದರಿಂದ ನಿಷೇಧವಿರುವ ಕಾರಣ ಶೂದ್ರರಿಗೆ ವೇದವಿದ್ಯೆಯಲ್ಲಿ ಅಧಿಕಾರವನ್ನು ಹೇಳಲಾಗದು ಎಂದಭಿಪ್ರಾಯ.

ಇತಿಹಾಸಾದಿಗಳಲ್ಲಿ ಶೂದ್ರರಿಗೆ ಅಧಿಕಾರವಿದೆ

ಭಾವದೀಪಃ – वेदेति ।। 'ज्ञेयो न वेदैः शूद्राद्यैः' इति सङ्क्षेपभाष्योक्तेरिति भावः। वेदेत्युक्त्या 'स्त्रीशूद्रब्रह्मबन्धूनां तन्त्रज्ञानेऽधिकारिता' । इत्यादेर्वेदादन्येन ज्ञेय इति दर्शितम् । फलं तु प्रागेवोक्तमिति भावः ।।३८।।

।। इति श्रीराघवेन्द्रयतिकृते भावदीपे अपशूद्राधिकरणम् ।।

'ಜ್ಞೇಯೋ ನ ವೇದೈಃ ಶೂದ್ರಾದ್ಯೈಃ' ಎಂಬ ಅಣುಭಾಷ್ಯದಲ್ಲಿ ಶೂದ್ರರಿಗೆ ವೇದಗಳಿಂದ ತಿಳಿಯಲು ಅರ್ಹತೆಯಿರುವುದಿಲ್ಲವೆಂದು ತಿಳಿಸಿದ್ದಾರೆ. ಮತ್ತು, 'ಸ್ತ್ರೀಶೂದ್ರಬ್ರಹ್ಮಬಂಧೂನಾಂ ತಂತ್ರಜ್ಞಾನೇऽಧಿಕಾರಿತಾ' ಎಂಬ ಆಧಾರದಿಂದ ಸ್ತ್ರೀಶೂದ್ರಾದಿಗಳು ವೇದಗಳನ್ನು ಬಿಟ್ಟು ಬೇರೆ ಇತಿಹಾಸಾದಿಗಳಿಂದ ಜ್ಞಾನವನ್ನು ಸಂಪಾದನೆ ಮಾಡಬಹುದು ಎಂದು ಹೇಳಿದಂತಾಯಿತು. ಈ ಅಧಿಕರಣದ ಫಲವನ್ನು ಹಿಂದೆಯೇ ಹೇಳಿದ್ದಾಗಿದೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಅಪಶೂದ್ರಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ಅಪಶೂದ್ರಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

अपशूद्राधिकरणम् (१।३।९)

'शुगस्य' इत्यादि सूत्रद अर्थ

।। शुगस्य तदनादरश्रवणात्तदाद्रवाणात्सूच्यते हि ।।

अत्र शूद्राणामधिकारो नेत्युच्यते । वेदविद्यास्विति प्रकृतम् ।

शूद्रस्येत्यर्थादन्वेति। अनधिकार इत्यस्ति । आद्यस्तच्छब्दः श्रुत्युक्तहंसपरः। अन्यः शुक्परः । तया शुचा आद्रवणान्निमित्ताच्छूद्रेत्युक्त पौत्रयणो मुनिना ''अह हारेत्वा शूद्र'' इत्यादि श्रुतौ, न रूढ्या । अतः शूद्रस्यानधिकार इत्यर्थः ।

ಈ ಅಧಿಕರಣದಲ್ಲಿ ಶೂದ್ರರಿಗೆ ವೇದವಿದ್ಯಾಧಿಕಾರವಿಲ್ಲವೆಂದು ಸಮರ್ಥಿಸಲಾಗಿದೆ. 'ವೇದವಿದ್ಯಾಸು' ಎಂಬ ಪದವು ಪ್ರಕೃತವಾಗಿದೆ. 'ಶೂದ್ರಸ್ಯ' ಎಂಬ ಪದವು ಅರ್ಥಾತ್ ಪ್ರಾಪ್ತವಾಗುತ್ತದೆ. 'ಅನಧಿಕಾರಃ' ಎಂಬ ಪದವು ಹಿಂದಿನ ಅಧಿಕರಣದಿಂದ ಅನುವೃತ್ತವಾಗಿದೆ. ಸೂತ್ರದಲ್ಲಿ ಎರಡು ಬಾರಿ 'ತತ್' ಎಂಬ ಪದವಿದೆ. ಮೊದಲಿರುವ 'ತತ್' ಪದವು ಶ್ರುತ್ಯುಕ್ತವಾದ ಹಂಸವನ್ನು ಹೇಳುತ್ತಿದೆ. ಎರಡನೆಯ 'ತತ್'ಶಬ್ದವು 'ಶುಕ್' ಅಂದರೆ ಶೋಕವನ್ನು ಹೇಳುತ್ತಿದೆ. 'ಅಹ ಹಾರೇ ತ್ವಾ ಶೂದ್ರ' ಇತ್ಯಾದಿ ಶ್ರುತಿಯಲ್ಲಿ 'ಶುಚಾ ಆದ್ರವಣ' 'ಶೋಕದಿಂದ ಕರಗುವಿಕೆ' ಎಂಬ ನಿಮಿತ್ತದಿಂದ ಪೌತ್ರಾಯಣನು ರೈಕ್ವ ಋಷಿಯಿಂದ ಶೂದ್ರನೆಂದು ಸಂಬೋಧಿಸಲ್ಪಟ್ಟಿದ್ದಾನೆ. ಹೊರತು, ರೂಢಿಯಿಂದಲ್ಲ. ಆದ್ದರಿಂದ, ಶೂದ್ರನಿಗೆ ವೇದಾಧಿಕಾರವಿಲ್ಲವೆಂದು ತಿಳಿಯುತ್ತದೆ.

ಶೂದ್ರ ಶಬ್ದದ ನಿಷ್ಪತ್ತಿ

शुगेवास्य किं निमित्तेत्यत उक्तम् शुगस्य तदनादरेति । ''कम्वर एनम्'' इत्यादिना हंसकृतानादरश्रवणादस्य पौत्रायणस्य शुगित्यर्थः । कथं ज्ञायते शुगस्य जातेत्य उक्तम् । सूच्यते हीति । हि यस्मात् ''सः सञ्जिहान एव क्षत्तारमुवाच'' इति व्यग्रत्वोक्त्या सूच्यते । अतः शुगस्य ज्ञायतेत्यर्थः । शुचा द्रवतीति निरुक्तत्वात् गकारस्य दत्वे दीर्घे च शूद्र इति भवति । शुद्रेति वाच्ये श्रुतौ शूद्रेत्युक्तिः शोकाधिक्यज्ञएपनाय । अत एव सूत्रे तद्रवणादिति वाच्ये तदाद्रवणादित्युकारव्याख्यानमाङा कृतम् ।।

ಪೌತ್ರಾಯಣ ರಾಜನಿಗೆ ದುಃಖವುಂಟಾಗಲು ಕಾರಣವೇನು? ಎಂಬ ಪ್ರಶ್ನೆಗೆ 'ಶುಗಸ್ಯ ತದನಾದರ' ಎಂದು ಉತ್ತರಿಸಿದ್ದಾರೆ. 'ಕಂ ವರ ಏನಮ್' ಇತ್ಯಾದಿಯಾಗಿ ಹಂಸವು

ಪೌತ್ರಾಯಣನ ವಿಷಯದಲ್ಲಿ ಅನಾದರವನ್ನು ತೋರ್ಪಡಿಸುತ್ತದೆ. ಅದನ್ನು ಕೇಳಿದ್ದರಿಂದ ಅಸ್ಯ = ಪ್ರೌತ್ರಾಯಣ ರಾಜನಿಗೆ, ಶುಕ್= ದುಃಖವು ಉಂಟಾಯಿತು ಎಂದರ್ಥ. ಪೌತ್ರಾಯಣನಿಗೆ ದುಃಖವುಂಟಾಯಿತೆನ್ನುವುದು ಹೇಗೆ ತಿಳಿಯುತ್ತದೆ? ಎಂಬ ಪ್ರಶ್ನೆಗೆ 'ಸೂಚ್ಯತೇ ಹಿ' ಎಂದು ಉತ್ತರಿಸಲಾಗಿದೆ. 'ಹಿ' ಯಾವ ಕಾರಣದಿಂದ ಆ ರಾಜನು ಎದ್ದ ಕೂಡಲೇ ಸಾರಥಿಯನ್ನು ಕುರಿತು ಹೇಳಿದನು. ಎಂಬುದಾಗಿ ರಾಜನ ವ್ಯಗ್ರತೆಯನ್ನು ಸೂಚಿಸಿದ್ದರಿಂದ ರಾಜನಿಗೆ ಶೋಕವುಂಟಾಯಿತೆಂದು ತಿಳಿಯುತ್ತದೆ.

'ಶುಚಾ ದ್ರವತಿ' ಎಂಬ ನಿರುಕ್ತಿಯಿದೆ. ಆದ್ದರಿಂದ 'ಶುಕ್' ಎಂಬಲ್ಲಿರುವ ಗಕಾರಕ್ಕೆ ದಕಾರಾದೇಶವು 'ಶು' ಎಂಬಲ್ಲಿನ ಉಕಾರಕ್ಕೆ ದೀರ್ಘ ಬಂದರೆ, 'ಶೂದ್ರ' ಎಂಬ ರೂಪವಾಗಿದೆ. 'ಶುದ್ರ' ಎಂದು ಹೇಳಬೇಕಿತ್ತು. ಆದರೆ 'ಶೂದ್ರ' ಎಂದು ಹೇಳಿದ್ದರಿಂದ ದುಃಖದ ಆಧಿಕ್ಯವನ್ನು ಪೌತ್ರಾಯಣನಲ್ಲಿ ಸೂಚಿಸಿದಂತಾಗುತ್ತದೆ. ಆದ್ದರಿಂದಲೇ ಸೂತ್ರದಲ್ಲಿಯೇ 'ತದ್ದ್ರವಣಾತ್' ಎಂದು ಹೇಳುವ ಬದಲು 'ತದಾದ್ರವಣಾತ್' ಉಕಾರದ ವ್ಯಾಖ್ಯಾನವನ್ನು 'ಆಙ್' ಎಂಬ ಉಪಸರ್ಗದಿಂದ ಮಾಡಲಾಗಿದೆ.

ಸೂತ್ರದ ಅಭಿಪ್ರಾಯ

ननु श्रौतश्शूद्रशब्दो रूढः किं न स्यादित्यत आह -

।। क्षत्रियत्वावगतेश्चोत्तरत्र चैत्ररथेन लिङ्गात् ।।

अस्येत्यस्ति । आद्रवणादिति शूद्रस्यानधिकार इति च । चित्रश्चासौ रथश्च चित्रस्थस्तस्येदं चैत्ररथम् । भावप्रधानश्चेदं, तेन । उत्तरत्रास्याद्रवणादुत्तरवाक्ये पौत्रायणस्याद्रवणोक्त्यनन्तरं''अयमश्वतरीरथः'' इत्युत्तरवाक्ये श्रुतेन इत्यर्थः । चैत्ररथेन चैत्ररथत्वेन चित्ररथसम्बन्धित्वेन लिङ्गात् लिङ्गेनास्य पौत्रायणस्य क्षत्रियत्वावगतेश्च शूद्रशब्दो न रूढ इति शूद्रस्यानधिकार इत्यर्थः । अश्वतरीयुक्तरथश्चित्रपदार्थः ।''रथस्त्वश्वतरीयुक्तश्चित्रः'' इत्यादेः ।

ಶ್ರುತಿಯಲ್ಲಿರುವ ಶೂದ್ರ ಶಬ್ದವು ರೂಢಿಯಿಂದ ಶೂದ್ರಜಾತಿಯಲ್ಲಿ ಹುಟ್ಟಿದವನೆಂದು ಏಕೆ ಹೇಳಬಾರದು? ಎಂಬ ಆಶಂಕೆಗೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ.

ಕ್ಷತ್ರಿಯತ್ವಾವಗತೇಶ್ಚೋತ್ತರತ್ರ ಚೈತ್ರರಥೇನ ಲಿಂಗಾತ್

ಹಿಂದಿನ ಸೂತ್ರದಿಂದ 'ಅರ್ಥೀ' ಎಂಬುದು ಅನುವೃತ್ತವಾಗುತ್ತದೆ. 'ಆದ್ರವಣಾತ್' 'ಶೂದ್ರಸ್ಯ' 'ಅನಧಿಕಾರಃ' ಎಂಬ ಪದಗಳು ಇಲ್ಲಿಯೂ ಅನುವೃತ್ತವಾಗುತ್ತವೆ. ಚಿತ್ರವಾಗಿರುವ ರಥವೇ ಚಿತ್ರರಥ. ಅದಕ್ಕೆ ಸಂಬಂಧಪಟ್ಟದ್ದು ಚೈತ್ರರಥ. ಚೈತ್ರರಥ ಶಬ್ದವು ಚಿತ್ರರಥಸಂಬಂಧಿತ್ವ, ಚಿತ್ರರಥದ ಸಂಬಂಧ ಎಂಬ ಭಾವಪ್ರಧಾನದಿಂದ ನಿರ್ದಿಷ್ಟವಾಗಿದೆ. ಹೀಗೆ ಹೇಳಿದ್ದರಿಂದ ಉತ್ತರತ್ರ = ಪೌತ್ರಾಯಣನಿಗೆ ಆದ್ರವಣವನ್ನು ಹೇಳುವ ವಾಕ್ಯದ ಮುಂದಿನ ವಾಕ್ಯದಲ್ಲಿ, ಅಂದರೆ ಪೌತ್ರಾಯಣನಿಗೆ ಆದ್ರವಣವನ್ನು ಹೇಳಿದ ನಂತರ, 'ಅಯಮಶ್ವತರೀರಥಃ' ಎಂಬ ಮುಂದಿನ ಮಾತಿನಲ್ಲಿ ಶ್ರುತವಾಗಿರುವ ಎಂದರ್ಥ. ಚೈತ್ರರಥೇನ ಲಿಂಗಾತ್ = ಚಿತ್ರರಥಸಂಬಂಧವೆಂಬ ಲಿಂಗದಿಂದ ಪೌತ್ರಾಯಣನಿಗೆ ಕ್ಷತ್ರಿಯತ್ವಾವಗತೇಶ್ಚ = ಕ್ಷತ್ರಿಯತ್ವವು ತಿಳಿದುಬರುವುದರಿಂದಲೂ ಶೂದ್ರಶಬ್ದವು ರೂಢವಲ್ಲದ ಕಾರಣ ಶೂದ್ರರಿಗೆ ವೇದವಿದ್ಯಾಧಿಕಾರವಿಲ್ಲ ಎಂದು ಸೂತ್ರಾರ್ಥ. ಶೂದ್ರ ಶಬ್ದವು ರೂಢವಲ್ಲದ ಕಾರಣ ಶೂದ್ರರಿಗೆ ವೇದವಿದ್ಯಾಧಿಕಾರವಿಲ್ಲವೆಂದು ತಿಳಿಯುತ್ತದೆ. 'ರಥಸ್ತ್ವಶ್ವತರೀಯುಕ್ತಃ ಚಿತ್ರಃ' ಇತ್ಯಾದಿ ಕೋಶವಿರುವುದರಿಂದ ಚಿತ್ರಪದಕ್ಕೆ ಹೇಸರಗತ್ತೆಗಳನ್ನು ಕಟ್ಟಿದ ರಥವೆಂದರ್ಥ.

'ಲಿಂಗಾತ್' ಎಂದೇಕೆ ಹೇಳಿದರು ?

रथेन लिङ्गेनेत्येव वाच्ये चित्रपदमपूर्वरथयोगात् क्षत्रियत्वसम्भावनार्थम्। चित्रेणेत्युक्तावपि तादृशरथेनेति सिद्धे रथोक्तिः स्पष्टार्था । चित्रेति वाच्ये चैत्रेत्युक्तिः ''हारेत्वा तव'' इत्युक्तमुख्यस्वाभाविकसम्बन्धं द्योतयितुम् । तेन रथित्वमात्रस्य वैदिकमात्रेऽपि कथञ्चित् सम्भवाद्व्यभिचार इति न शङ्क्यम् । लिङ्गेनेति वाच्ये लिङ्गादित्युक्तिर्व्यत्ययात्, तृतीयापञ्चम्योर्हेतु रूपैकार्थत्वाद्वेति ।

'ರಥೇನ ಲಿಂಗೇನ' ಎಂದೇ ಹೇಳಬಹುದಿತ್ತು. ಆದರೂ ಸಹ ಅಪೂರ್ವವಾದ ರಥದ ಸಂಬಂಧದಿಂದ ಪೌತ್ರಾಯಣನು ಕ್ಷತ್ರಿಯನಾಗಿರಬಹುದು ಎಂಬ ಸಂಭಾವನೆಯನ್ನು ಮಾಡುವುದಕ್ಕಾಗಿ ಚಿತ್ರಪದವನ್ನು ಪ್ರಯೋಗಿಸಿದ್ದಾರೆ. 'ಚಿತ್ರೇನ' ಎಂದು ಹೇಳಿದ್ದರೂ ಅಂತಹ ಹೇಸರಗತ್ತೆಗಳನ್ನು ಕಟ್ಟಿದ ರಥವೆಂದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಆದರೂ ಕೂಡ ಸ್ಪಷ್ಟತೆಗೋಸ್ಕರ ರಥಪದವನ್ನು ಪ್ರಯೋಗಿಸಿದ್ದಾರೆ. 'ಚಿತ್ರ' ಎಂದು ಹೇಳಿದ್ದರೆ ಸಾಕಾಗಿತ್ತು. ಆದರೂ 'ಚೈತ್ರ' ಎಂದು ಹೇಳಿದ್ದರಿಂದ, 'ಹಾರೇ ತ್ವಾ' ಎಂಬಲ್ಲಿ ಹೇಳಿರುವ ರಥದ ಸಂಬಂಧವು ಮುಖ್ಯವಾದ ಸ್ವಾಭಾವಿಕವಾದ ಸಂಬಂಧವಾಗಿದೆ ಎಂದು ತಿಳಿಸಲಾಗಿದೆ. ಆದ್ದರಿಂದಲೇ, ವೇದಾಧಿಕಾರವಿರುವ ತ್ರೈವರ್ಣಿಕರಿಗೂ ಕಥಂಚಿತ್ ರಥವಿರಬಹುದಾದ್ದರಿಂದ ರಥವಿದ್ದ ಮಾತ್ರಕ್ಕೆ ಪೌತ್ರಾಯಣನು ಕ್ಷತ್ರಿಯನಾಗಬೇಕಾಗಿಲ್ಲ ಎಂಬ ಶಂಕೆಗೆ ಅವಕಾಶವಿಲ್ಲ. 'ಲಿಂಗೇನ' ಎಂದು ಹೇಳಬೇಕಾಗಿದ್ದರೂ 'ಲಿಂಗಾತ್' ಎಂಬುದಾಗಿ ವಿಭಕ್ತಿಯನ್ನು ವ್ಯತ್ಯಾಸ ಮಾಡಿ ಹೇಳಲಾಗಿದೆ. ಅಥವಾ ತೃತೀಯಾ ಮತ್ತು ಪಂಚಮೀ ವಿಭಕ್ತಿಗಳಿಗೆ ಹೇತು ಎಂಬ ಒಂದೇ ಅರ್ಥವಿರುವುದರಿಂದಲೂ 'ಲಿಂಗೇನ' ಎಂದು ಹೇಳುವ ಬದಲು 'ಲಿಂಗಾತ್' ಎಂದು ಹೇಳಿದ್ದಾರೆ.

'ಚ'ಶಬ್ದದ ವ್ಯಾಖ್ಯಾನ

उत्तरत्रेत्युक्तिस्तादृशरथबोधवाक्यद्योतनाय । यद्वा शूद्रेति सम्बोधनादुत्तरत्रेत्यर्थः। तेन शूद्रश्रुतितोऽपि लिङ्गस्य चरमत्वेन प्राबल्यं सूचयति । चशब्दः ''श्रद्धादेयो बहुदायी'' इत्यादिवाक्यशेषस्थलिङ्गान्तर समुच्चयार्थ इत्यप्येके ।।

'ಉತ್ತರತ್ರ' ಎಂದು ಹೇಳಿರುವುದು ಅಂತಹ ರಥವನ್ನು ತಿಳಿಸುವ ವಾಕ್ಯವನ್ನು ಸೂಚಿಸುವುದಕ್ಕಾಗಿ. ಅಥವಾ, 'ಶೂದ್ರ' ಎಂದು ಸಂಬೋಧನೆ ಮಾಡಿದ ಅನಂತರ ಎಂದರ್ಥ. ಹೀಗೆ ಹೇಳಿದ್ದರಿಂದ ಶೂದ್ರಶ್ರುತಿಗಿಂತಲೂ ಲಿಂಗವು ಅನಂತರವಿರುವುದರಿಂದ ಲಿಂಗಕ್ಕೆ ಪ್ರಾಬಲ್ಯವನ್ನು ಸೂಚಿಸಲಾಗಿದೆ.

ಸೂತ್ರದಲ್ಲಿರುವ 'ಚ' ಶಬ್ದಕ್ಕೆ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನ ಮಾಡಬಹುದು. 'ಶ್ರದ್ಧಾ ದೇಯೋ ಬಹುದಾಯೀ' ಇತ್ಯಾದಿ ವಾಕ್ಯಶೇಷದಲ್ಲಿರುವ ಮತ್ತೊಂದು ಲಿಂಗವನ್ನು ಸಮುಚ್ಚಯ ಮಾಡುವುದಕ್ಕಾಗಿಯೂ ಚಶಬ್ದವಿದೆಯೆಂದು ಕೆಲವರು ಹೇಳುತ್ತಾರೆ.

ಶೂದ್ರನಿಗೆ ಅಧಿಕಾರವಿಲ್ಲವೆನ್ನಲು ಮತ್ತೊಂದು ಕಾರಣ

इतश्च शूद्रस्यानधिकार इत्याह -

।। संस्कारपरामर्शात्तदभावाभिलापाच्च ।।

अन्यार्थवचनं परामर्शः । अध्ययनाङ्गत्वेन ''तमध्यापयीत'' इत्युपनय नाख्यसंस्कारपरामर्शात् शूद्रस्य च ''नाग्निर्न यज्ञो न संस्कारः'' इति श्रुतौ संस्काराभावाभिलापाच्च शूद्रस्य वेदविद्यानधिकार इत्यर्थः । यद्वा पूर्वसूत्रे रथस्य वेदव्याप्तत्वाद्वेदद्वारा लिङ्गत्वमभिमतम् । तद्द्वयं शूद्रेऽप्यस्त्वित्यतोऽयं योगः । वेदाङ्गसंस्काराभावाद्वेदाभावेन रथित्वं च नोति योज्यम् । शूद्रं नोपनयीतेति निषेधाभावादस्तु तस्यापि संस्कार इत्यतो वा ।

ಮತ್ತೊಂದು ಕಾರಣದಿಂದಲೂ ಶೂದ್ರನಿಗೆ ವೇದವಿದ್ಯಾಧಿಕಾರವಿಲ್ಲವೆಂದು ಸಮರ್ಥಿಸುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. ಪರಾಮರ್ಶಃ = ಮತ್ತೊಂದರ ಉದ್ದೇಶದಿಂದ ಹೇಳುವಿಕೆ. 'ತಮಧ್ಯಾಪಯೀತ' ಎಂಬುದಾಗಿ ಉಪನಯನ ಎಂಬ ಸಂಸ್ಕಾರವನ್ನು ವೇದಾಧ್ಯಯನಕ್ಕೆ ಅಂಗವನ್ನಾಗಿ ಹೇಳಲಾಗಿದೆ. ಅದನ್ನು ಪರಾಮರ್ಶೆ ಮಾಡಿದ್ದರಿಂದ, ಎಂಬುದಾಗಿ 'ಪರಾಮರ್ಶಾತ್' ಎಂಬ ಪದದ ಅರ್ಥ. ಶೂದ್ರನಿಗೆ 'ನಾಗ್ನಿರ್ನ ಯಜ್ಞೋ ನ ಸಂಸ್ಕಾರಃ' ಎಂಬ ಶ್ರುತಿಯಂತೆ ಸಂಸ್ಕಾರವಿಲ್ಲವೆಂದು ಹೇಳಿದ್ದರಿಂದ ವೇದವಿದ್ಯಾಧಿಕಾರವಿಲ್ಲವೆಂದು ತಿಳಿಯುತ್ತದೆ. ಇಷ್ಟು ಸೂತ್ರಾರ್ಥ.

ಅಥವಾ, ಮತ್ತೊಂದು ಬಗೆಯಲ್ಲಿಯೂ ವ್ಯಾಖ್ಯಾನ ಮಾಡಬಹುದು–ಹಿಂದಿನ ಸೂತ್ರದಲ್ಲಿ 'ಯಾರು ರಥಾರೂಢರಾಗಿರುತ್ತಾರೋ, ಅವರಿಗೆ ವೇದವಿದ್ಯಾಧಿಕಾರವಿರುತ್ತದೆ'. ಎಂಬ ವ್ಯಾಪ್ತಿಯನ್ನು ಹೇಳಲಾಯಿತು. ಪೌತ್ರಾಯಣ ರಾಜನು ರಥಾರೂಢನಾಗಿ ಬಂದಿರುವುದರಿಂದ ಕ್ಷತ್ರಿಯನೆಂದು ಸಾಧಿಸಬಹುದು. ರಥ ಹಾಗೂ ವೇದ ಶೂದ್ರನಿಗೂ ಇರಲಿ ಎಂಬ ಆಶಂಕೆಗೆ

ಉತ್ತರಿಸುವುದಕ್ಕಾಗಿ ಈ ಸೂತ್ರವು ಹೊರಟಿದೆ. ವೇದಕ್ಕೆ ಅಂಗವಾದ ಉಪನಯನ ಸಂಸ್ಕಾರವಿಲ್ಲದ ಕಾರಣ, ಶೂದ್ರನಿಗೆ ವೇದವಿರುವುದಿಲ್ಲ. ಆದ್ದರಿಂದಲೇ ರಥವೂ ಕೂಡ ಇರುವುದಿಲ್ಲವೆಂದು ವಾಕ್ಯವನ್ನು ಯೋಜನೆ ಮಾಡಿಕೊಳ್ಳಬೇಕು. 'ಶೂದ್ರಂ ನೋಪನಯೀತ' ಶೂದ್ರನಿಗೆ ಉಪನಯನ ಮಾಡಬಾರದು ಎಂಬ ನಿಷೇಧವಾಕ್ಯವಿಲ್ಲದ ಕಾರಣ, ಅವನಿಗೂ ಉಪನಯನ ಸಂಸ್ಕಾರವನ್ನು ಮಾಡಬಹುದಲ್ಲವೇ? ಎಂಬ ಪ್ರಶ್ನೆಗೂ ಕೂಡ ಈ ಸೂತ್ರವೇ ಉತ್ತರಿಸಿದೆ ಎಂದು ತಿಳಿಯಬೇಕು. ಮತ್ತೊಂದು ಕಾರಣದಿಂದಲೂ ಶೂದ್ರನಿಗೆ ಸಂಸ್ಕಾರವಿಲ್ಲವೆಂದು ಹೇಳುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ

ಸಂಸ್ಕಾರವಿಲ್ಲದ್ದರಿಂದಲೂ ಅಧಿಕಾರವಿಲ್ಲ

इतश्च न संस्कार इति वाऽऽह -

।। तदभावनिर्धारणे च प्रवृत्ते ।।

चोऽवधारणे समुच्चये वा । तस्य प्रकृतशूद्रत्वस्याभावनिर्धारणे सत्येव प्रवृत्तेः । संस्कार इत्यस्ति । उपनयनसंस्कारे प्रवृत्तेश्च न निषेधाभाव इति वा न संस्कार इति वा योज्यम् । ''नैतदब्राह्मणो विवक्तुमर्हति'' इति सत्यकामे शूद्रत्वाभावं निश्चित्यैव तदुपनयने प्रवृत्तत्वात्तेन लिङ्गेन निषेधादिर्ज्ञायत इति भावः । अन्त्यपक्षे संस्काराभावे साध्ये नाग्निरिति प्रागुक्तश्रुत्या प्रवृत्तिरूपलिङ्गसमुच्चये चः ।।

ಚಶಬ್ದವು ಅವಧಾರಣ ಮತ್ತು ಸಮುಚ್ಚಯಾರ್ಥದಲ್ಲಿದೆ. 'ತಸ್ಯ' ಎಂದರೆ ಹಿಂದೆ ಪ್ರಸ್ತುತವಾದ ಶೂದ್ರತ್ವವಿಲ್ಲವೆಂದು ನಿಶ್ಚಯವಾದ ಮೇಲಷ್ಟೇ, ಉಪನಯನ ಸಂಸ್ಕಾರದಲ್ಲಿ ಪ್ರವೃತ್ತಿ ಮಾಡಲಾಗಿದೆ ಎಂದರ್ಥ. 'ಸಂಸ್ಕಾರಃ' ಎಂಬುದನ್ನು ಇಲ್ಲಿಯೂ ಪರಾಮರ್ಶ ಮಾಡಿಕೊಳ್ಳಬೇಕು. ಉಪನಯನ ಸಂಸ್ಕಾರದಲ್ಲಿ ಪ್ರವೃತ್ತಿ ಮಾಡುತ್ತಿರುವುದರಿಂದ ನಿಷೇಧವಿಲ್ಲವೆಂದಾಗಲಿ, ಸಂಸ್ಕಾರವಿಲ್ಲವೆಂದಾಗಲಿ ಸೇರಿಸಿಕೊಳ್ಳಬೇಕು. ನಿಷೇಧವಿಲ್ಲವೆಂದು ಸೇರಿಸಿದಾಗ, 'ನೈತದಬ್ರಾಹ್ಮಣೋ ವಿವಿಕ್ತುಮರ್ಹತಿ' 'ಬ್ರಾಹ್ಮಣನಲ್ಲದವನು ಈ ರೀತಿಯಾಗಿ ಸತ್ಯವನ್ನು ಹೇಳಲು ಸಾಧ್ಯವಿಲ್ಲ' ಎಂಬುದಾಗಿ ಸತ್ಯಕಾಮನು ಶೂದ್ರನಲ್ಲವೆಂದು ನಿಶ್ಚಯಿಸಿದ್ದಾರೆ.

ಅನಂತರವೇ ಅವನಿಗೆ ಉಪನಯನ ಸಂಸ್ಕಾರವನ್ನು ಮಾಡಲು ನಿರ್ಧರಿಸಿ ಪ್ರವೃತ್ತಿ ಮಾಡಿದ್ದಾರೆ. ಈ ಕಾರಣದಿಂದ ಶೂದ್ರನಿಗೆ ಸಂಸ್ಕಾರನಿಷೇಧ ಮೊದಲಾದವುಗಳು ಇದೆ ಎಂದು ತಿಳಿಯುತ್ತದೆ.

ಎರಡನೆಯ ಪಕ್ಷದಲ್ಲಿ, ಅಂದರೆ ಸಂಸ್ಕಾರವಿಲ್ಲವೆಂಬ ಪಕ್ಷದಲ್ಲಿ ಶೂದ್ರನಿಗೆ ಸಂಸ್ಕಾರವಿಲ್ಲವೆಂದು ಸಾಧಿಸಲು ಹಿಂದೆ ಹೇಳಿದ 'ನಾಗ್ನಿಃ' ಎಂಬ ಶ್ರುತಿಯ ಜೊತೆಗೆ ಪ್ರವೃತ್ತಿರೂಪವಾದ ಲಿಂಗದ ಸಮುಚ್ಚಯವನ್ನು 'ಚ' ಶಬ್ದವು ಹೇಳುತ್ತಿದೆ.

ವಿಶಿಷ್ಟಬುದ್ಧ್ಯಾದಿಗಳಿದ್ದರೂ ಅಧಿಕಾರವಿಲ್ಲ

संस्काराभावेऽपि विशिष्टबुद्ध्यादिमत्त्वाद् द्विजवदधिकारः स्यादित्यत आह -॥ श्रवणाध्ययनार्थप्रतिषेधात्स्मृतेश्च ॥ १-३-३८ ॥

अर्थपदेनार्थावधारणमुच्यते । वेदश्रवणाध्ययनार्थावधारणानां ''श्रवणे त्रपुजतुभ्याम्'' इत्यादिना प्रतिषेधात् ''नाग्निर्न यज्ञः शूद्रस्य'' इत्यादिस्मृतेश्च शूद्रस्यानाधिकार इत्यर्थः । श्रुतौ शूद्रपदानुक्तेः पृथक् स्मृत्युक्तिः ॥ ९ ॥

ಶೂದ್ರನಿಗೆ ಸಂಸ್ಕಾರವಿಲ್ಲದಿರಬಹುದು. ಆದರೂ ಕೂಡ, ವಿಶಿಷ್ಟಬುದ್ಧ್ಯಾದಿಗಳು ಇರುವುದರಿಂದ ದ್ವಿಜರಂತೆ ವೇದವಿದ್ಯಾಧಿಕಾರವನ್ನು ಹೊಂದಬಹುದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸಲು ಮುಂದಿನ ಸೂತ್ರವು ಹೊರಟಿದೆ.

ಅರ್ಥಪದವು ಅರ್ಥದ ನಿಶ್ಚಯವನ್ನು ಹೇಳುತ್ತಿದೆ. ವೇದಶ್ರವಣ, ವೇದಾಧ್ಯಯನ, ವೇದಾರ್ಥನಿರ್ಣಯ ಇವುಗಳನ್ನು 'ಶ್ರವಣೇ ತ್ರಪುಜತುಭ್ಯಾಂ' ಇತ್ಯಾದಿ ವಾಕ್ಯಗಳಿಂದ ಶೂದ್ರನಿಗೆ ನಿಷೇಧ ಮಾಡಲಾಗಿದೆ. 'ನಾಗ್ನಿರ್ನ ಯಜ್ಞಃ ಶೂದ್ರಸ್ಯ' ಇತ್ಯಾದಿ ಸ್ಮೃತಿಗಳೂ ಕೂಡ ಶೂದ್ರನಿಗೆ ವೇದವಿದ್ಯಾಧಿಕಾರವಿಲ್ಲವೆಂದು ದೃಢಪಡಿಸಿ ಹೇಳುತ್ತಿದೆ. ಶ್ರುತಿಯಲ್ಲಿ ಶೂದ್ರಪದವನ್ನು ಹೇಳದಿರುವುದರಿಂದ ಪ್ರತ್ಯೇಕವಾಗಿ ಸ್ಮೃತಿಯನ್ನು ಪ್ರಮಾಣವನ್ನಾಗಿ ಉಲ್ಲೇಖಿಸಿದ್ದಾರೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಅಪಶೂದ್ರಾಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಅಪಶೂದ್ರಾಧಿಕರಣ
ಮತ್ತು
ವಿಮರ್ಶೆ

ಅದ್ವೈತ ಭಾಷ್ಯದಲ್ಲಿ ಅಪಶೂದ್ರಾಧಿಕರಣದ ರಚನೆ ಹೀಗಿದೆ -

ಪೂರ್ವಪಕ್ಷ - ಪಿಂಡಪಿತೃಯಜ್ಞವು ಹೇಗೆ ಸ್ವರ್ಗಪ್ರಯೋಜನವುಳ್ಳದಾದ್ದರಿಂದ ಪುರುಷಾರ್ಥ-ರೂಪವಾಗಿದೆಯೋ, ಅದರಂತೆ ಅಧ್ಯಯನವೂ ಸಹ ಸ್ವರ್ಗಪ್ರಯೋಜನವುಳ್ಳದ್ದಾದ್ದರಿಂದ ಪುರುಷಾರ್ಥರೂಪವೇ ಆಗಿವೆ. ಅಧ್ಯಯನವು ಸ್ವಾಧ್ಯಾಯದ ಸಂಸ್ಕಾರರೂಪವಲ್ಲದ ಕಾರಣ ಅತೀತವಾದ ಸ್ವಾಧ್ಯಾಯದಿಂದ ಯಾವ ಬ್ರಹ್ಮಜ್ಞಾನವು ಹುಟ್ಟುತ್ತದೋ, ಅದರಿಂದಲೇ ಮೋಕ್ಷವಾಗುತ್ತದೆಂಬ ನಿಯಮವಿರುವುದಿಲ್ಲ. ಹಾಗಾಗಿ ಶೂದ್ರನಿಗೆ ಉಪನಯನವೆಂಬ ಸಂಸ್ಕಾರವಿಲ್ಲದಿದ್ದರೂ ಪುಸ್ತಕಪಾಠಾದಿ-ಗಳಿಂದ ಸ್ವಾಧ್ಯಾಯವನ್ನು ಮಾಡಿ, ಅದರಿಂದ ಹುಟ್ಟುವ ಬ್ರಹ್ಮಜ್ಞಾನದಿಂದ ಮೋಕ್ಷವು ದೊರೆಯುತ್ತದೆ. ಆದ್ದರಿಂದ ಶೂದ್ರನಿಗೂ ಸಹ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿರುತ್ತದೆ.

ಸಿದ್ಧಾಂತ - ದೃಷ್ಟಫಲವನ್ನೇ ಹೇಳಲು ಬರುವಾಗ ಅದೃಷ್ಟಫಲವನ್ನು ಹೇಳುವುದು ಸರಿಯಲ್ಲ. ಆದ್ದರಿಂದ ಅಧ್ಯಯನಕ್ಕೆ ಸ್ವಾಧ್ಯಾಯದ ಸಂಸ್ಕಾರರೂಪತ್ವವನ್ನೇ ಹೇಳಲು ಬರುವಾಗ ಪುಸ್ತಕಪಾಠದಿಂದ ಅಧ್ಯಯನವನ್ನು ಮಾಡಿ ಅದರಿಂದ ಹುಟ್ಟುವ ಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳಬಾರದು. ಆದ್ದರಿಂದ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ.

ಹಾಗಾದರೆ ಪೂರ್ವಮೀಮಾಂಸೆಯ ಅಪಶೂದ್ರಾಧಿಕರಣದಿಂದ ಪುನರುಕ್ತಿದೋಷ ಬರುತ್ತದಲ್ಲವೇ? ಏಕೆಂದರೆ ಅಲ್ಲಿಯೂ ಸಹ ಅಧೀತವಾದ ಸ್ವಾಧ್ಯಾಯದಿಂದ ಯಾವ ವಿದ್ಯೆಯು ಬರುತ್ತದೋ, ಅದರಿಂದ ಸಾಧ್ಯವಾದ ಕರ್ಮದಲ್ಲಿ ಅಧಿಕಾರವಿಲ್ಲವೆಂದು ಸಮರ್ಥಿಸಲಾಗಿದೆ. ಇದರಿಂದ ಶೂದ್ರನಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ಹೇಳಿದಂತಾಗುತ್ತದಲ್ಲವೇ?

ಪುನರುಕ್ತಿಗೆ ಅವಕಾಶವಿಲ್ಲ. ಏಕೆಂದರೆ ಪೂರ್ವಮೀಮಾಂಸೆಯಲ್ಲಿ ಅಗ್ನಿಯಿಲ್ಲದ ಶೂದ್ರನಿಗೆ ಅಗ್ನಿಸಾಧ್ಯವಾದ ಯಜ್ಞಾದಿಕರ್ಮಗಳಲ್ಲಿ ಅಧಿಕಾರವಿಲ್ಲವೆಂದಷ್ಟೇ ಸಮರ್ಥಿಸಿದ್ದಾರೆ ಹೊರತು, ಬ್ರಹ್ಮವಿದ್ಯೆಯಿಲ್ಲವೆಂದು ಸಮರ್ಥಿಸಿಲ್ಲ. ಅದನ್ನು ಇಲ್ಲಿ ಸಮರ್ಥನೆ ಮಾಡುತ್ತಿರುವುದರಿಂದ

ಪೂರ್ವಮೀಮಾಂಸೆಯಿಂದ ಗತಾರ್ಥತ್ವ ದೋಷವನ್ನು ಹೇಳಲು ಸಾಧ್ಯವಿಲ್ಲ. ಇಷ್ಟು ಅದ್ವೈತಿಗಳ ಅಧಿಕರಣ ಶರೀರ.

ಅದ್ವೈತಿಗಳ ಅಧಿಕರಣಶರೀರ ಸರಿಯಿಲ್ಲ. ಮೊದಲು ಅವರು ಪೂರ್ವಮೀಮಾಂಸೆಯ ಅಪಶೂದ್ರಾಧಿಕರಣದಿಂದ ಹೇಳಿದ ಗತಾರ್ಥತ್ವದ ಪರಿಹಾರವು ಅಸಾಧುವಾಗಿದೆ. ಏಕೆಂದರೆ ಪೂರ್ವಮೀಮಾಂಸೆಯಲ್ಲಿಯೂ 'ಅವೈದ್ಯತ್ವದಾಭಾವಃ ಕರ್ಮಣಿ ಸ್ಯಾತ್' ಎಂಬ ಸೂತ್ರದಲ್ಲಿ 'ಅವೈದ್ಯತ್ವ' ಎಂಬ ಶಬ್ದದಿಂದ ಶೂದ್ರನಿಗೆ ವೇದಾಧಿಕಾರವಿಲ್ಲವೆಂದು ಸಮರ್ಥನೆ ಮಾಡಲಾಗಿದೆ. ಅದೇ ವಿಚಾರವೂ ಇಲ್ಲಿಯೂ ಸಹ ಪ್ರಸಕ್ತವಾಗುತ್ತಿರುವುದರಿಂದ ಪುನರುಕ್ತಿ ದೋಷವು ಬಂದೇ ಬರುತ್ತದೆ.

ಪ್ರಶ್ನೆ - ಪೂರ್ವಮೀಮಾಂಸೆಯಲ್ಲಿ ಅವೈದ್ಯತ್ವವನ್ನು ಕೇವಲ ಅಭ್ಯುಚ್ಚಯಯುಕ್ತಿಯನ್ನಾಗಿ ಹೇಳಲಾಗಿದೆ. ಏಕೆಂದರೆ ಶೂದ್ರನಿಗೆ ಅಧ್ಯಯನವು ಸಂಸ್ಕಾರರೂಪವೆಂದು ಅಲ್ಲಿ ಹೇಳಿಲ್ಲ. ಹೊರತಾಗಿ ಶೂದ್ರನಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲದ ಕಾರಣ, ಕರ್ಮದಲ್ಲಿಯೂ ಕೂಡ ಅಧಿಕಾರ-ವಿಲ್ಲವೆಂದಷ್ಟೇ ಸಮರ್ಥನೆ ಮಾಡಿದ್ದಾರೆ. ಆದರೆ ಪ್ರಕೃತ 'ಸಂಸ್ಕಾರಪರಾಮರ್ಶಾತ್' ಎಂಬ ಸೂತ್ರದಲ್ಲಿ ಅಧ್ಯಯನವು ಸಂಸ್ಕಾರರೂಪವೆಂದು ಸಮರ್ಥನೆ ಮಾಡಿದ್ದಾರೆ. ಅಂದರೆ ಅಧ್ಯಯನವು ಪ್ರಧಾನಕರ್ಮವಾದರೆ, ಸಂಸ್ಕಾರಕರ್ಮವಾಗದಿದ್ದರೆ ಜ್ಞಾನವನ್ನು ಹೇಗಾದರೂ ಸಂಪಾದನೆ ಮಾಡಬಹುದು. ಒಂದು ವೇಳೆ ಸಂಸ್ಕಾರರೂಪವಾದರೆ ಅಧ್ಯಯನವಿಲ್ಲದೇ ವೇದದಿಂದ ಪಡೆಯುವ ಜ್ಞಾನವು ಅಸಂಸ್ಕೃತವಾಗುತ್ತದೆ. ಇದನ್ನು ಪೂರ್ವಮೀಮಾಂಸೆಯಲ್ಲಿ ಹೇಳಿರುವುದಿಲ್ಲ. ಇಲ್ಲಿ ಹೇಳಿದ್ದಾರೆ.

ಉತ್ತರ - ಪೂರ್ವಮೀಮಾಂಸೆಯಲ್ಲಿ ಅಧ್ಯಯನವು ಸಂಸ್ಕಾರರೂಪವೆಂದು ಹೇಗೆ ಹೇಳಿಲ್ಲವೋ ಅದರಂತೆ ಉತ್ತರಮೀಮಾಂಸೆಯಲ್ಲಿಯೂ ಕೂಡ ಹೇಳಿರುವುದಿಲ್ಲ. ಏಕೆಂದರೆ ನೀನೂ ಸಹ 'ಸಂಸ್ಕಾರ ಪರಾಮರ್ಶಾತ್' ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ 'ಸಂಸ್ಕಾರಶಬ್ದಃಉಪನಯನರೂಪ-ಸಂಸ್ಕಾರಾರ್ಥಃ' 'ಸಂಸ್ಕಾರ' ಶಬ್ದಕ್ಕೆ 'ಉಪನಯನವೆಂಬ ಸಂಸ್ಕಾರ' ಎಂದರ್ಥ ಎಂದು ವ್ಯಾಖ್ಯಾನ ಮಾಡಿರುವಿ. ಹಾಗಾಗಿ ಅಧ್ಯಯನವು ಸ್ವಾಧ್ಯಾಯದ ಸಂಸ್ಕಾರರೂಪವೆಂದು ಪೂರ್ವಮೀಮಾಂಸೆಯಲ್ಲಿ ಹೇಗೆ ಹೇಳಿಲ್ಲವೋ, ಅದರಂತೆ ಇಲ್ಲಿಯೂ ಕೂಡ ಹೇಳಿರುವುದಿಲ್ಲ.

ಮತ್ತು ನಾವು ಹೇಳುವಂತೆ 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬಲ್ಲಿರುವ 'ತವ್ಯ' ಪ್ರತ್ಯಯದಿಂದ ಸ್ವಾಧ್ಯಾಯಸಂಸ್ಕಾರವೆಂಬ ಗುಣಕರ್ಮತ್ವವೇ ಅಧ್ಯಯನದಲ್ಲಿ ಪ್ರತೀತವಾಗುತ್ತದೆ. ಅಂದರೆ ಅಧ್ಯಯನವು ಸಂಸ್ಕಾರರೂಪವೆಂದು ಅಂಗೀಕಾರ ಮಾಡಿದರೂ ಕೂಡ ಅಂತಹ ಅಧ್ಯಯನದ ಅಧಿಕಾರವನ್ನು

ಶೂದ್ರನೂ ಕೂಡ ಪಡೆಯಬಹುದಲ್ಲವೇ? ಎಂದೇ ಪೂರ್ವಪಕ್ಷ ಮಾಡಲು ಬರುವಾಗ ಅದೃಷ್ಟಾರ್ಥವಾದ ಪ್ರಧಾನಕರ್ಮತ್ವವನ್ನು ಒಪ್ಪಿ, ಪೂರ್ವಪಕ್ಷ ಮಾಡುವುದು ಸರಿಯಲ್ಲ. ಅಂದರೆ ಅಧ್ಯಯನವು ಸಂಸ್ಕಾರರೂಪವಾದ್ದರಿಂದ ದೃಷ್ಟಾರ್ಥವಾದ ಗುಣಕರ್ಮರೂಪವೇ ಆಗಿವೆಯೆಂದು ದೃಷ್ಟಫಲವನ್ನು ಹೇಳಲು ಬರುವಾಗ ಪ್ರಧಾನಕರ್ಮತ್ವವೆಂಬ ಅದೃಷ್ಟಫಲವನ್ನು ಹೇಳುವುದು ಸರಿಯಲ್ಲ ಎಂದಭಿಪ್ರಾಯ.

ಮತ್ತು ಪೂರ್ವಮೀಮಾಂಸೆಯ ಅಪಶೂದ್ರಾಧಿಕರಣದಿಂದ ಪುನರುಕ್ತಿಯನ್ನು ನೀವು ಪರಿಹರಿಸಿಕೊಂಡರೂ ಪೂರ್ವಮೀಮಾಂಸೆಯ ಮೊದಲನೆಯ ಧರ್ಮಜಿಜ್ಞಾಸಾಧಿಕರಣದಿಂದ ಪುನರುಕ್ತಿಯು ಬಂದೇ ಬರುತ್ತದೆ. ಏಕೆಂದರೆ ಅಲ್ಲಿ ಅಧ್ಯಯನಕ್ಕೆ ವೇದಾರ್ಥಜ್ಞಾನವೆಂಬ ದೃಷ್ಟಫಲವನ್ನು ಸಿದ್ಧಾಂತ ಮಾಡಲಾಗಿದೆ. ಇಲ್ಲಿಯೂ ಅದನ್ನೇ ಸಮರ್ಥನೆ ಮಾಡಿದರೆ ಪುನರುಕ್ತಿಯು ಬರುತ್ತದೆ.

ಮತ್ತು ರಾಮಾನುಜರು ಪೂರ್ವಮೀಮಾಂಸೆ ಹಾಗೂ ಬ್ರಹ್ಮಮೀಮಾಂಸೆಗಳನ್ನು ಒಂದೇ ಶಾಸ್ತ್ರವೆನ್ನುತ್ತಾರಾದ್ದರಿಂದ, ಪೂರ್ವಮೀಮಾಂಸೆಯಲ್ಲಿ ಹೇಳಿದ್ದನ್ನು ಪುನಃ ಬ್ರಹ್ಮಮೀಮಾಂಸೆಯಲ್ಲಿ ಹೇಳಬಾರದೆಂದು ಅವರು ಹೇಳುವುದು ಸೂಕ್ತವಾಗುತ್ತದೆ. ಆದರೆ ನಿಮ್ಮ ಮತದಲ್ಲಿ 'ಪೂರ್ವಮೀಮಾಂಸೆ' ಎಂಬ ಶಾಸ್ತ್ರವೇ ಬೇರೆ, 'ಬ್ರಹ್ಮಮೀಮಾಂಸೆ' ಎಂಬ ಶಾಸ್ತ್ರವೇ ಬೇರೆಯಾದ್ದರಿಂದ ಅಲ್ಲಿ ಹೇಳಿದ ವಿಚಾರವನ್ನು ಇಲ್ಲಿ ಹೇಳಬಾರದೆಂದು ಆಶಂಕೆ ಮಾಡುವುದೇ ತಪ್ಪಾಗುತ್ತದೆ. ಹೀಗೊಪ್ಪದಿದ್ದರೆ, ವೇದನಿತ್ಯತ್ವ ವಿಚಾರವನ್ನು ಪೂರ್ವಮೀಮಾಂಸೆಯಲ್ಲಿ ಸಮರ್ಥನೆ ಮಾಡಿದ್ದರಿಂದ ಪುನಃ ಅದೇ ವೇದನಿತ್ಯತ್ವವನ್ನು 'ಅತ ಏವ ಚ ನಿತ್ಯತ್ವಮ್' ಎಂಬ ಸೂತ್ರದಲ್ಲಿ ಸಮರ್ಥನೆ ಮಾಡುತ್ತಿರುವುದೂ ಕೂಡ ಪುನರುಕ್ತವಾಗಬೇಕಾದೀತು.

ಮತ್ತು ಸಿದ್ಧಾಂತದಲ್ಲಿ 'ತದಭಾವಾಭಿಲಾಪಾಚ್ಚ' ಎಂಬ ಸೂತ್ರವು ಶೂದ್ರನಿಗೆ ಉಪನಯನ-ಸಂಸ್ಕಾರವಿಲ್ಲವೆಂದು ಹೇಳುತ್ತಿದೆ. 'ಶ್ರವಣಾಧ್ಯಯನಾರ್ಥಪ್ರತಿಷೇಧಾಚ್ಚ' ಎಂಬ ಸೂತ್ರವು ಅಧ್ಯಯನವಿಲ್ಲವೆಂದು ಸಿದ್ಧಾಂತ ಮಾಡುತ್ತಿದೆ. ಪೂರ್ವಪಕ್ಷ ಮಾಡುವ ಸಂದರ್ಭದಲ್ಲಿ ಈ ಸಿದ್ಧಾಂತದಿಂದ ನಿರಾಕೃತವಾಗುವಂತೆ ವಿಷಯವನ್ನು ಮಂಡನೆ ಮಾಡಬೇಕು. ಅಂದರೆ ಶೂದ್ರನಿಗೆ ವೇದಾಧ್ಯಯನವನ್ನು ಹೇಳಬಹುದಲ್ಲವೇ, ಉಪನಯನಸಂಸ್ಕಾರವನ್ನೂ ಕೂಡ ಹೇಳಬಹುದಲ್ಲವೇ? ಎಂದು ಪೂರ್ವಪಕ್ಷ ಮಾಡಿದಾಗ ಮುಂದಿನ ಸಿದ್ಧಾಂತ ಸೂತ್ರಗಳಿಂದ ಪರಿಹರಿಸಲು ಸಾಧ್ಯವಿದೆ.

ಅಧ್ಯಯನವು ಪ್ರಧಾನಕರ್ಮವಾಗಿದೆಯೆಂದು ಪೂರ್ವಪಕ್ಷ ಮಾಡಿದಾಗ ಸಿದ್ಧಾಂತದಲ್ಲಿ ಅಧ್ಯಯನವು ಗುಣಕರ್ಮವಾಗಿದೆಯೆಂದು ಸಮರ್ಥನೆ ಮಾಡಬೇಕು. ಆದರೆ ಸೂತ್ರದಲ್ಲಿ ಹಾಗೇ ಎಲ್ಲಿಯೂ ಹೇಳಿಲ್ಲ.

ಮತ್ತು

ದಶಮಸ್ತ್ವಮಸೀತ್ಯಾದಿವಾಕ್ಯಾದಿವ ಭವೇದ್ಭ್ರುವಮ್ ।
ತತ್ತ್ವಮಸ್ಯಾದಿವಾಕ್ಯಾಚ್ಚ ಶೂದ್ರಸ್ಯಾಪ್ಯಪರೋಕ್ಷಧೀಃ ॥ ೧ ॥

'ದಶಮಸ್ತ್ವಮಸಿ' ಎಂಬ ವಾಕ್ಯದಂತೆ 'ತತ್ತ್ವಮಸಿ' ಎಂಬ ವಾಕ್ಯದಿಂದಲೂ ಶೂದ್ರನಿಗೆ ಅಪರೋಕ್ಷಜ್ಞಾನವನ್ನು ಹೇಳಬಹುದು.

ಶೂದ್ರನು ವೇದವನ್ನು ಓದಬಾರದೆಂಬ ನಿಷೇಧವಿದೆ. ಆದರೂ ಆ ನಿಷೇಧವನ್ನು ದಾಟಿ, ವ್ಯುತ್ಪನ್ನನಾದ ಶೂದ್ರನಿಗೆ ಪುಸ್ತಕಪಠನಾದಿಗಳಿಂದ ಬ್ರಾಹ್ಮಣಾದಿಗಳಂತೆ 'ತತ್ತ್ವಮಸಿ' ಎಂಬ ವಾಕ್ಯವನ್ನು ಕೇಳಿದಾಗ ಅಪರೋಕ್ಷಜ್ಞಾನವು ಹುಟ್ಟಬಹುದು. ಅಥವಾ ಮತ್ತೊಬ್ಬರು ಮಾಡುತ್ತಿರುವ ಅಧ್ಯಯನವನ್ನು ಕೇಳಿಸಿಕೊಂಡು 'ತತ್ತ್ವಮಸಿ' ಎಂಬ ವಾಕ್ಯದಿಂದ ದಶಮಸ್ತ್ವಮಸಿ' ಎಂಬ ವಾಕ್ಯದಂತೆ ಶಬ್ದಾಪರೋಕ್ಷಜ್ಞಾನವು ಹುಟ್ಟಬಹುದು.

ಬ್ರಹ್ಮಸಾಕ್ಷಾತ್ಕಾರವು ವಿಷಯದಲ್ಲಿ ಅಪರೋಕ್ಷಜ್ಞಾನದ ಅರ್ಹತೆಯಿರುವುದರಿಂದ ಯುಕ್ತ- ವಾಗುತ್ತದೆ. ಬ್ರಾಹ್ಮಣಾದಿಗಳಿಗೆ 'ತತ್ತ್ವಮಸಿ' ಎಂಬ ವಾಕ್ಯವನ್ನು ಕೇಳಿದಾಗ ಅಪರೋಕ್ಷೇಕರಸನಾದ ಬ್ರಹ್ಮನು ಹೇಗೆ ಅಪರೋಕ್ಷನಾಗುತ್ತಾನೋ, ಅದರಂತೆ ಶೂದ್ರನಿಗೂ ಸಹ ಅಪರೋಕ್ಷನಾಗಬಹುದು. ಅಸಂಭಾವನಾಶಂಕೆ ಹಾಗೂ ವಿಪರೀತ ಶಂಕೆಗಳೆಂಬ ಪ್ರತಿಬಂಧಕಗಳ ನಿರಾಸವಾದರೂ ಮನನ ನಿದಿಧ್ಯಾಸನಾದಿಗಳಿಂದ ಬ್ರಾಹ್ಮಣಾದಿಗಳಿಗೆ ಹೇಗೆ ಆಗುತ್ತದೋ, ಅದರಂತೆ ಶೂದ್ರನಿಗೂ ಸಹ ಹೇಳಬಹುದು.

ಒಂದು ವೇಳೆ ಬ್ರಹ್ಮನು ಅಪರೋಕ್ಷೇಕರಸನಾಗಿದ್ದರೂ ಲೋಕವಿಲಕ್ಷಣನಾದ ಕಾರಣ ನಿಯಮಾದೃಷ್ಟವು ಅನಿವಾರ್ಯ. ನಿಯಮಾದೃಷ್ಟವಿದ್ದರೆ ಮಾತ್ರ ಬ್ರಹ್ಮನು ಅಪರೋಕ್ಷನಾಗುತ್ತಾನೆ. ಶೂದ್ರನಿಗೆ ಅಧ್ಯಯನದಿಂದ ಅದೃಷ್ಟವು ಹುಟ್ಟುವುದಿಲ್ಲ. ಆದ್ದರಿಂದ ಬ್ರಾಹ್ಮಣನಿಗೆ ಮಾತ್ರ ಬ್ರಹ್ಮನು ಅಪರೋಕ್ಷನಾಗುತ್ತಾನೆಂದು ಹೇಳಬಾರದು. ಏಕೆಂದರೆ ಅಪರೋಕ್ಷಜ್ಞಾನದಿಂದ ಬಂಧವು ನಿವೃತ್ತವಾಗುತ್ತದೆ. ಆದ್ದರಿಂದ ಬಂಧಮಿಥ್ಯಾತ್ವವನ್ನು ಒಪ್ಪಬೇಕೆಂದು ಆದ್ವೈತಿಗಳು ಸಮರ್ಥಿಸುತ್ತಾರೆ. ಇದೂ ಸಹ ತಪ್ಪಾಗಬೇಕಾದೀತು. ಏಕೆಂದರೆ ಅಪರೋಕ್ಷೇಕರಸನಾದ ಬ್ರಹ್ಮನ ಜ್ಞಾನದಿಂದ ಲೋಕವಿಲಕ್ಷಣವೆಂಬ ಕಾರಣದಿಂದಲೇ ಸತ್ಯವಾದ ಬಂಧಕ್ಕೂ ಕೂಡ ನಿವೃತ್ತಿಯನ್ನು ಒಪ್ಪಬೇಕಾದೀತು.

ಶೂದ್ರನಿಗೆ ವೇದದಿಂದ ಜ್ಞಾನವು ಬರಬಹುದು. ಆದರೆ ಅಪರೋಕ್ಷವು ಬರುವುದಿಲ್ಲ. ಏಕೆಂದರೆ ಶೂದ್ರ ಮಾಡಿದ ಯಾಗವು ಹೇಗೆ ಸಫಲವಾಗುವುದಿಲ್ಲವೋ ಅದರಂತೆ ಶಬ್ದದಿಂದ ಬಂದಿರುವ ಜ್ಞಾನವೂ ಸಹ ಮೋಕ್ಷಕ್ಕೆ ಕಾರಣವಾಗುವುದಿಲ್ಲ ಎಂದು ಶಂಕಿಸಬಾರದು. ಏಕೆಂದರೆ ಜ್ಞಾನವು ಅಜ್ಞಾನವನ್ನಷ್ಟೇ ಪರಿಹಾರ ಮಾಡುತ್ತದೆ. ಅಜ್ಞಾನನಿವೃತ್ತಿಯೆಂಬ ದೃಷ್ಟಫಲವನ್ನು ಹೇಳಲು ಬರುವಾಗ ಮತ್ತೊಂದನ್ನು ಅದು ಅಪೇಕ್ಷಿಸುವುದಿಲ್ಲ. ಅಂದರೆ ಜ್ಞಾನಬಂದರೆ ಅಜ್ಞಾನವು ಸಹಜವಾಗಿ ನಿವೃತ್ತಿಯಾಗುತ್ತದೆ. ಅಜ್ಞಾನನಿವೃತ್ತಿಯೇ ಮೋಕ್ಷರೂಪವಾದ್ದರಿಂದ ಶೂದ್ರನಿಗೆ ಬಂದಿರುವಂತಹ ಜ್ಞಾನದಿಂದಲೂ ಮೋಕ್ಷವಾಗಬೇಕಾದೀತು ಎಂಬ ಆಕ್ಷೇಪ ಬಂದೇ ಬರುತ್ತದೆ.

'ಇಯಂ ಶುಕ್ತಿಃ' ಎಂಬ ಬಾಧಜ್ಞಾನವು ಬ್ರಾಹ್ಮಣನಿಗೆ ಬಂದರೂ ಶುಕ್ತಿಜ್ಞಾನವು ಪರಿಹಾರವಾಗುತ್ತದೆ. ಅದರಂತೆ ಶೂದ್ರನಿಗೆ ಬಂದರೂ ಸಹ ಶುಕ್ತಿಜ್ಞಾನವು ಪರಿಹಾರವಾಗುತ್ತದೆ.

ನಮ್ಮಲ್ಲಿ ಈ ದೋಷವಿಲ್ಲ. ಏಕೆಂದರೆ ನಾವು ಜ್ಞಾನದಿಂದ ನೇರವಾಗಿ ಮೋಕ್ಷವಾಗುತ್ತದೆಂದು ಒಪ್ಪುವುದಿಲ್ಲ. ಹೊರತಾಗಿ ಅದೃಷ್ಟದ್ವಾರಾ ಈಶ್ವರನ ಪ್ರಸಾದವುಂಟಾಗಿ, ಈಶ್ವರನ ಪ್ರಸಾದದಿಂದ ಸಂಸಾರ ಬಂಧನವು ಕಳಚುತ್ತದೆಂದು ಒಪ್ಪಿದ್ದೇವೆ. ಆದರೆ ಅದ್ವೈತಿಗಳು ಹೀಗೆ ಒಪ್ಪಿರದ ಕಾರಣ ಶೂದ್ರನಿಗೆ ಬಂದಿರುವಂತಹ ಜ್ಞಾನದಿಂದಲೂ ಮೋಕ್ಷವಾಗಲಿ ಎಂಬ ಆಕ್ಷೇಪವು ಅವರಿಗೆ ಮಾತ್ರ ಬರುತ್ತದೆ.

ಒಂದು ವೇಳೆ ನಮ್ಮಂತೆ ಅದ್ವೈತಿಗಳೂ ಸಹ ಅದೃಷ್ಟದ ಮೂಲಕ ಅಥವಾ ಈಶ್ವರನ ಪ್ರಸಾದದ ಮೂಲಕ ಬಂಧನಿವರ್ತಕವೆಂದು ಒಪ್ಪಿದರೆ ಬಂಧವು ಜ್ಞಾನನಿವರ್ತ್ಯವಾಗುವ ಕಾರಣದಿಂದ ಮಿಥ್ಯಾಭೂತವಾಗಿದೆಯೆಂದೇ ಅವರಿಗೆ ಹೇಳಲಾಗದು. ಹೊರತಾಗಿ ಅದೃಷ್ಟನಿವರ್ತ್ಯವಾಯಿತು, ಅಥವಾ ಈಶ್ವರಪ್ರಸಾದನಿವರ್ತ್ಯವಾಯಿತು. ಇದರಿಂದ ಮಿಥ್ಯಾತ್ವವನ್ನು ಸಮರ್ಥಿಸಲಾಗದು.

ಶೂದ್ರನು ವೇದವನ್ನು ಓದಬಾರದೆಂಬ ವಿಧಿಯಿದೆ. ಅದನ್ನು ಅತಿಕ್ರಮಣಮಾಡಿ ವೇದಾಧ್ಯಯನ ಮಾಡಿದರೆ ಪ್ರತ್ಯವಾಯ ಬರುತ್ತದೆ. ಈ ಪ್ರತ್ಯವಾಯವೆಂಬ ಪ್ರತಿಬಂಧಕವಿರುವ ಕಾರಣ ಶೂದ್ರನ ವೇದಾಧ್ಯಯನದಿಂದ ಮೋಕ್ಷವು ಹೇಗೆ ದೊರೆಯುತ್ತದೆ ? ಎಂಬ ಶಂಕೆಗೂ ಅವಕಾಶವಿಲ್ಲ. ಏಕೆಂದರೆ ಬ್ರಹ್ಮಜ್ಞಾನ ಬಂದಾಗ ಸಮಸ್ತ ಪ್ರಪಂಚವೇ ನಿವೃತ್ತವಾಗುತ್ತವೆ. ಅದರಲ್ಲಿ ಅಡಗಿರುವ ಪ್ರತ್ಯವಾಯವೂ ಕೂಡ ನಿವೃತ್ತವಾಗುತ್ತದೆ. ಆದ್ದರಿಂದ ಶೂದ್ರನ ವೇದಾಧ್ಯಯನದಿಂದ ಬರುವ ಜ್ಞಾನದಿಂದಲೂ ಮೋಕ್ಷವಾಗಬೇಕಾದೀತು ಎಂಬ ಆಕ್ಷೇಪವನ್ನು ಅದ್ವೈತಿಗಳಿಗೆ ಪರಿಹರಿಸಿಕೊಳ್ಳಲಾಗದು.

ತ್ರೈವರ್ಣಿಕೇತರರಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ಸಮರ್ಥಿಸುವ ಅದ್ವೈತಿಗಳಿಗೆ ಸ್ವನ್ಯಾಯವಿರೋಧಬರುತ್ತದೆ. ಅದು ಹೀಗೆ -

ಅದ್ವೈತಿಗಳಾದ ನೀವು ಅಧ್ಯಾಸಭಾಷ್ಯದಲ್ಲಿ 'ತಸ್ಮಾದವಿದ್ಯಾವತ್ ಪುರುಷವಿಷಯಾಣ್ಯೇವ ಶಾಸ್ತ್ರಾಣಿ । ತತ್ರ ಜಾತ್ಯಧ್ಯಾಸೋ ಬ್ರಾಹ್ಮಣೋ ಯಜೇತ' ಇತ್ಯಾದಿಯಾಗಿ ಹೇಳಿದ್ದೀರಿ. ಅಂದರೆ ಶಾಸ್ತ್ರಗಳೆಲ್ಲವೂ ಅಜ್ಞಾನವುಳ್ಳ ಪುರುಷರನ್ನು ವಿಷಯೀಕರಿಸುತ್ತಿದೆ. 'ಬ್ರಾಹ್ಮಣೋ ಯಜೇತ' ಇತ್ಯಾದಿ ವಾಕ್ಯಗಳು ಬ್ರಾಹ್ಮಣರಿಗೆ ಯಾಗವನ್ನು ವಿಧಾನ ಮಾಡುತ್ತಿವೆ. ಬ್ರಾಹ್ಮಣ್ಯಾದಿಗಳು ಜಾತ್ಯಧ್ಯಾಸ ರೂಪವಾದವುಗಳು ಎಂದರ್ಥ. ಹೀಗೆ ಹೇಳಿದ್ದರಿಂದ, ಬ್ರಾಹ್ಮಣತ್ವ ಮೊದಲಾದ ಜಾತಿಗಳು ಕೇವಲ ಶರೀರಕ್ಕೆ ಸಂಬಂಧಪಟ್ಟಿವೆ. ಶರೀರವು ಆತ್ಮನಲ್ಲಿ ಅಧ್ಯಸ್ತವಾಗಿದೆ. ಹಾಗಾಗಿ ಬ್ರಾಹ್ಮಣ್ಯಾದಿಗಳುಳ್ಳ ಶರೀರದ ಅಭೇದಾಧ್ಯಾಸವುಳ್ಳ ವ್ಯಕ್ತಿಗೆ ಯಾಗಾದಿಕರ್ಮಗಳಲ್ಲಿ ಅಧಿಕಾರವನ್ನು ಹೇಳಿದಂತಾಯಿತು. ಹಾಗಾದಲ್ಲಿ ಬ್ರಾಹ್ಮಣೇಸ್ತ್ರೀಯಲ್ಲಿ ಶೂದ್ರಪುರುಷನಿಂದ ಹುಟ್ಟಿದ ವ್ಯಕ್ತಿಯು ಚಂಡಾಲನೆನಿಸುತ್ತಾನೆ. ಇವನಿಗೂ ಕೂಡ ಯಾಗಾಧಿಕಾರವು ಸಿದ್ಧವಾಗಬೇಕಾದೀತು. ಏಕೆಂದರೆ ಬ್ರಾಹ್ಮಣೇಸ್ತ್ರೀಯಲ್ಲಿ ತಾನು ಹುಟ್ಟಿರುವೆನೆಂಬ ಕಾರಣದಿಂದ ತನ್ನಲ್ಲಿ ಬ್ರಾಹ್ಮಣ್ಯವನ್ನು ಅಧ್ಯಾಸ ಮಾಡಿಕೊಂಡಿದ್ದಾನೆ. ಯಾವರೀತಿಯಾಗಿ ಬ್ರಾಹ್ಮಣಾದಿಗಳಲ್ಲಿ ಬ್ರಾಹ್ಮಣತ್ವವುಳ್ಳ ಶರೀರದ ಅಭೇದಾಧ್ಯಾಸವು ಅಧಿಕಾರಿ - ಪುರುಷನಲ್ಲಿರುತ್ತದೋ, ಅದರಂತೆ ಇವನಲ್ಲಿಯೂ ಸಹ ಬ್ರಾಹ್ಮಣ್ಯದ ಅಧ್ಯಾಸವಿರುವ ಕಾರಣ ಯಾಗಾದಿ ಕರ್ಮಗಳಲ್ಲಿ ಅಧಿಕಾರಿಯಾಗಬೇಕಾದೀತು. ಇನ್ನೂ ಹೆಚ್ಚಿನ ವಿಚಾರವನ್ನು ನ್ಯಾಯಾಮೃತದ ದೇಹಾತ್ಮೈಕ್ಯಾಧ್ಯಾಸಭಂಗದಲ್ಲಿ ನೋಡಬಹುದು.

ಮತ್ತು

ಋಜೂಪಾಯೇನ ತರ್ಕೇಣ ತತ್ವನಿಶ್ಚಯಸಂಭವೇ ।
ವಿಪ್ರಾದೇರಪಿ ವಕ್ರೈಃ ಕಿಂ ಸಾಧ್ಯಂ ವೇದವಿಚಾರಣೈಃ ॥

ಸುಲಭವಾದ ತರ್ಕಮಾರ್ಗದಿಂದಲೇ ತತ್ವವು ನಿಶ್ಚಯವಾಗುತ್ತಿರುವಾಗ ವಕ್ರವಾದ ವೇದವಿಚಾರವೆಂಬ ಮಾರ್ಗದಲ್ಲಿ ಬ್ರಾಹ್ಮಣರೂ ಕೂಡ ಏಕೆ ಸಾಗಬೇಕು?

ನಿಮ್ಮ ಮತದಲ್ಲಿ ಚಿನ್ಮಾತ್ರವು ತತ್ವವಾಗಿದೆ. ಉಳಿದೆಲ್ಲವೂ ಆರೋಪಿತವಾಗಿದೆ ಎಂಬ ಜ್ಞಾನವೇ ಮೋಕ್ಷಕ್ಕೆ ಸಾಧನವಾದದ್ದು. ಈ ಜ್ಞಾನವು ದೃಶ್ಯತ್ವಾದ್ಯನುಮಾನಗಳೆಂಬ ಸುಲಭಮಾರ್ಗದಿಂದಲೇ

ದೊರೆಯುತ್ತದೆ. ಖಂಡನಕಾರನಾದ ಶ್ರೀಹರ್ಷನು ಹೇಳಿದಂತೆ ಅಥವಾ ವಿಜ್ಞಾನವಾದಿಗಳಾದ ಬೌದ್ಧರು ಹೇಳಿದಂತೆ ಪ್ರಮಾಣ, ಪ್ರಮೇಯ ಎಲ್ಲವೂ ಅನುಪಪನ್ನವಾಗುತ್ತವೆಂಬ ತರ್ಕದಿಂದ ದೃಶ್ಯತ್ವಾನುಮಾನವು ಅನುಗೃಹೀತವಾಗಿದೆ. ಇಂತಹ ಅನುಮಾನವೆಂಬ ಸುಲಭಮಾರ್ಗದಿಂದಲೇ ಚಿನ್ಮಾತ್ರವು ಸತ್ಯ, ಉಳಿದದ್ದೆಲ್ಲವೂ ಆರೋಪಿತವೆಂಬ ತತ್ವನಿಶ್ಚಯವಾಗುತ್ತದೆ. ಹೀಗಿರುವಾಗ ವಕ್ರಮಾರ್ಗವನ್ನೇಕೆ ಅನುಸರಿಸಬೇಕು. ಬ್ರಾಹ್ಮಣಾದಿಗಳಿಗೂ ಕೂಡ ಬೇರೆ ಪ್ರಮಾಣಗಳಿಂದ ಸಿದ್ಧವಾಗದ ಸರ್ವಕರ್ತೃತ್ವ, ಸರ್ವಜ್ಞತ್ವ ಮೊದಲಾದವುಗಳನ್ನು ಮೊದಲು ಕಷ್ಟದಿಂದ ತಿಳಿದು, ಅನಂತರ 'ನೇಹ ನಾನಾಸ್ತಿ ಕಿಂಚನ' ಎಂಬ ಶ್ರುತಿಯಿಂದ ತಿಳಿದದ್ದೆಲ್ಲವೂ ಕೂಡ ಸುಳ್ಳು ಎಂದು ಅರಿಯಬೇಕು. ಮತ್ತು ಚಿನ್ಮಾತ್ರನನ್ನು ಪ್ರತಿಪಾದನೆ ಮಾಡುವ ಅನೇಕ ನಿಯಮಗಳನ್ನೋಳಗೊಂಡ ಅಧ್ಯಯನ, ಶಮ, ದಮ ಮೊದಲಾದವುಗಳಿಂದ ಕೂಡಿರುವಂತಹ ಬಹಳ ಕಷ್ಟವಾದ ವೇದಾಂತವಿಚಾರವೆಂಬ ವಕ್ರಮಾರ್ಗದಿಂದ ಚಿನ್ಮಾತ್ರವೂ ಸತ್ಯ. ಉಳಿದೆಲ್ಲವೂ ಆರೋಪಿತವೆಂಬ ಜ್ಞಾನವನ್ನು ಏಕೆ ಪಡೆಯಬೇಕು?

ಶಂಕೆ - ಖಂಡನಕಾರನು ಹೇಳಿದ ತರ್ಕಗಳು ಅಥವಾ ವಿಜ್ಞಾನವಾದಿಗಳು ಹೇಳಿರುವ ತರ್ಕಗಳು ಮತ್ತು ದೃಶ್ಯತ್ವಾನುಮಾನಗಳು ಶ್ರುತಿಗೆ ಸಹಕಾರಿಯಾಗುತ್ತವೆ ಹೊರತು, ಶಬ್ದೈಕಸಮಧಿಗಮ್ಯವಾದ ತತ್ವದ ನಿರ್ಧಾರದಲ್ಲಿ ಸ್ವತಂತ್ರವಾಗಿ ಪ್ರಮಾಣಗಳಾಗುವುದಿಲ್ಲ. ಆದ್ದರಿಂದ ಶಬ್ದದಿಂದಲೇ ತತ್ವನಿಶ್ಚಯವಾಗಬೇಕಲ್ಲವೇ?

ಸಮಾಧಾನ - ಹಾಗಾದಲ್ಲಿ ವಾಕ್ಯಾರ್ಥನಿರ್ಣಾಯಕವಾದ ಉಪಕ್ರಮಾದಿಗಳಷ್ಟೇ ಸಾಕು ಮಿಥ್ಯಾತ್ವಾನುಮಾನವನ್ನೂ ಕೂಡ ನೀವು ಪ್ರಯೋಗಿಸುವುದು ತಪ್ಪಾಗುತ್ತದೆ. ಯಾವರೀತಿಯಾಗಿ, ಯಾಗಕ್ಕೆ ಸ್ವರ್ಗಸಾಧನತ್ವವು ಅಪೂರ್ವವಿಧಿಯಾದ್ದರಿಂದ ಯಾವ ಪ್ರಮಾಣದಿಂದಲೂ ಪ್ರಾಪ್ತವಾಗುವುದಿಲ್ಲವೋ, ಅದರಂತೆ ಚಿನ್ಮಾತ್ರಕ್ಕಿಂತ ಇತರವಾದದ್ದೆಲ್ಲವೂ ಮಿಥ್ಯಾಭೂತವಾಗಿದೆಯೆಂದು ಸಮರ್ಥಿಸಲು ಅನುಮಾನವೂ ಕೂಡ ಸಾಧಕವಾಗುವುದಿಲ್ಲ.

ಶಂಕೆ - ಚಿನ್ಮಾತ್ರಸ್ವರೂಪವು ಸತ್ಯವಾಗಿದೆಯೆಂಬುದಾಗಲೀ, ಚಿನ್ಮಾತ್ರೇತರಸ್ವರೂಪದ ಮಿಥ್ಯಾತ್ವವಾಗಲಿ, 'ನೇಹ ನಾನಾಸ್ತಿ ಕಿಂಚನ' ಎಂಬ ಶಬ್ದದಿಂದಷ್ಟೇ ಸಮಧಿಗಮ್ಯವಾಗಿದೆ. ಆದರೆ ಸನ್ಘಟಃ ಸನ್ಪಟಃ ಇತ್ಯಾದಿ ಪ್ರತ್ಯಕ್ಷದಿಂದ ಶಬ್ದವು ಪ್ರತಿಬದ್ಧವಾಗಿದೆ. ಪ್ರತಿಬಂಧಕವಾದ ಪ್ರತ್ಯಕ್ಷವನ್ನು ನಿರಾಕರಣೆ ಮಾಡಲು ಅನುಮಾನವು ಸಹಕಾರಿಯಾಗಿದೆಯಲ್ಲವೇ?

ಸಮಾಧಾನ - ಇದು ತಪ್ಪು. ಪ್ರತ್ಯಕ್ಷವು ಶಬ್ದಕ್ಕೆ ಪ್ರತಿಬಂಧಕವಾದ ಮೇಲೆ ಅನುಮಾನವನ್ನೂ ಕೂಡ ಸುತರಾಂ ಬಾಧಿಸುತ್ತದೆ. ಶಬ್ದವನ್ನೇ ಬಾಧಿಸಿದ ಮೇಲೆ ಅನುಮಾನವನ್ನು ಬಾಧಿಸದೇ ಇರುತ್ತದೇನು !

ಶಂಕೆ - 'ಅನುಮಾನ' ಎಂದರೆ ದೃಶ್ಯತ್ವಾನುಮಾನವಲ್ಲ. ಏಕೆಂದರೆ ಈ ಅನುಮಾನಕ್ಕೆ ಪ್ರತ್ಯಕ್ಷವನ್ನು ಖಂಡಿಸುವ ಸಾಮರ್ಥ್ಯವಿಲ್ಲ. ಹೊರತಾಗಿ ಖಂಡನಕಾರನಾದ ಶ್ರೀಹರ್ಷನು ಹೇಳಿದ ತರ್ಕಗಳನ್ನೇ ಅನುಮಾನವೆಂದು ವಿವಕ್ಷಿಸುತ್ತೇವೆ. ಆ ತರ್ಕಗಳು ಸ್ವರೂಪತಃ ವಿಷಯತಃ ಪ್ರತ್ಯಕ್ಷಕ್ಕೆ ದುರ್ನಿರೂಪತ್ವವನ್ನು ಸಮರ್ಥಿಸುತ್ತವೆ. ಅಂತಹ ಪ್ರಬಲವಾದ ತರ್ಕಗಳಿಂದ ಶಬ್ದವಿರೋಧಿಯಾದ ಪ್ರತ್ಯಕ್ಷಗಳನ್ನೂ ಕೂಡ ಬಾಧಿಸಬಹುದು. ಇದರಿಂದ ಪ್ರತ್ಯಕ್ಷಶಬ್ದಗಳೆಲ್ಲವೂ ಅಪ್ರಮಾಣವೆಂದು ಸಿದ್ಧವಾಗುತ್ತದಲ್ಲವೇ?

ಸಮಾಧಾನ - ಶ್ರೀಹರ್ಷನು ಹೇಳಿದ ತರ್ಕಗಳು ಪ್ರತ್ಯಕ್ಷಕ್ಕೆ ಸ್ವರೂಪತಃ ವಿಷಯತಃ ದುರ್ನಿರೂಪತ್ವವನ್ನು ಹೇಗೆ ಸಮರ್ಥಿಸುತ್ತವೋ ಅದರಂತೆ ಶಬ್ದಕ್ಕೂ ಕೂಡ ಸಮರ್ಥಿಸುತ್ತವೆ. ಅಂದರೆ ಶಬ್ದಪ್ರಮಾಣವೂ ಸ್ವರೂಪತಃ ವಿಷಯತಃ ದುರ್ನಿರೂಪವೆಂದು ಅವನೇ ಹೇಳಿದ್ದಾನೆ. ಆವಾಗ ಪ್ರತ್ಯಕ್ಷಕ್ಕೆ ಅಪ್ರಾಮಾಣ್ಯ ಬಂದಂತೆ ಶಬ್ದಕ್ಕೂ ಅಪ್ರಾಮಾಣ್ಯ ಬರುತ್ತದೆ.

ಆದ್ದರಿಂದ ಖಂಡನಕಾರನು ಹೇಳುವ ತರ್ಕಗಳು ಶಬ್ದಕ್ಕೆ ಸಹಕಾರಿಯಾಗದೇ ಪ್ರತಿಕೂಲವೇ ಆಗಿವೆ. ಏಕೆಂದರೆ ಶಬ್ದಪ್ರಾಮಾಣ್ಯಕ್ಕೆ ಉಪಯುಕ್ತವಾದ ಆಕಾಂಕ್ಷಾಯೋಗ್ಯತಾದಿಗಳನ್ನೂ ಕೂಡ ತರ್ಕದಿಂದ ಅವನು ಖಂಡನೆ ಮಾಡುತ್ತಾನೆ. ಸಮಾನನ್ಯಾಯದಿಂದ ಶಬ್ದಪ್ರತಿಪಾದ್ಯನಾದ ಬ್ರಹ್ಮನ ಸ್ವರೂಪವನ್ನೂ ಸಹ ಸ್ವರೂಪತಃ ವಿಷಯತಃ ನಿರೂಪಣೆ ಮಾಡಲು ಬರುವುದಿಲ್ಲವೆಂದು ಖಂಡನೆ ಮಾಡಬಹುದು. ಇಂತಹ ತರ್ಕಗಳಿಂದ ಶ್ರುತಿಗೆ ಸಾಧಕತ್ವವನ್ನು ಹೇಳಲು ಸಾಧ್ಯವಾಗುವುದಿಲ್ಲ.

ಒಂದು ವೇಳೆ ಬ್ರಹ್ಮನ ನಿರ್ವಚನವನ್ನು ತರ್ಕಗಳು ನಿರಾಸ ಮಾಡಿಯೂ ಬ್ರಹ್ಮಸ್ವರೂಪವನ್ನು ವಿರೋಧಿಸುವುದಿಲ್ಲವೆಂದು ಹೇಳುವುದಾದರೆ, ಆವಾಗ ದ್ರವ್ಯ, ಗುಣ, ಕರ್ಮ ಮೊದಲಾದವುಗಳನ್ನು ನಿರಾಸ ಮಾಡುವುದಾದರೂ, ಅದೇ ತರ್ಕಗಳು ದ್ರವ್ಯಾದಿ ಸ್ವರೂಪವನ್ನು ನಿರಾಕರಿಸುವುದಿಲ್ಲವೆಂದೂ ಕೂಡ ಹೇಳಬಹುದಲ್ಲವೇ? ಆವಾಗ ಯಾವುದೇ ಪದಾರ್ಥಗಳಿಗೆ ಸ್ವರೂಪತಃ ಮಿಥ್ಯಾತ್ವವು ಸಿದ್ಧವಾಗದ ಕಾರಣ ತರ್ಕವನ್ನು ಪ್ರಯೋಗಿಸಲು ಹೊರಟ, ಪ್ರಯಾಸವೆಲ್ಲವೂ ವ್ಯರ್ಥವಾಗುತ್ತದೆ.

ಶಂಕೆ - ಶ್ರೀಹರ್ಷನು ಪ್ರಯೋಗಿಸಿದ ತರ್ಕಗಳೆಲ್ಲವೂ ತಾರ್ಕಿಕರ ರೀತಿಯನ್ನು ಬಾಧಿಸಲು ಹೊರಟಿವೆ ಹೊರತು, ಅದ್ವೈತವನ್ನು ಸಾಧಿಸುವುದಕ್ಕಾಗಿ ಅಲ್ಲವಲ್ಲವೇ?

ಸಮಾಧಾನ - ಇದು ತಪ್ಪು. ಶ್ರೀಹರ್ಷನು ಹೇಳಿದ ತರ್ಕಗಳೆಲ್ಲವೂ ಸ್ವವ್ಯಾಘಾತಕವಾಗಿವೆ. ತನ್ನನ್ನೇ ನಾಶ ಮಾಡುವಂತಹ ತರ್ಕಗಳಿಗೆ ಇನ್ನೊಬ್ಬರ ತರ್ಕಗಳನ್ನು ನಿರಾಕರಣೆ ಮಾಡುವ ಸಾಮರ್ಥ್ಯವೇ ಇರುವುದಿಲ್ಲ. ಬ್ರಹ್ಮ, ಪ್ರಮಾಣ, ಭೇದ ಇವುಗಳನ್ನು ನಿರಾಸ ಮಾಡುವ ಸ್ವವ್ಯಾಘಾತಕವಾದ ತರ್ಕಗಳಿಗೆ

ಬಾಧಕತ್ವವನ್ನು ಅಂಗೀಕರಿಸಲಾಗದು. ಹೊರತಾಗಿ ಸ್ವವ್ಯಾಘಾತಕವಾದ ಆ ತರ್ಕಗಳಿಂದಲೇ ಅದ್ವೈತ, ಪ್ರಮಾಣ ಉಪನಿಷದ್ ರೀತಿಯೇ ಬಾಧಿತವಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ಋಜೂಪಾಯದಿಂದಲೇ ತತ್ವನಿಶ್ಚಯವಾಗಲು ಬರುವಾಗ ವಕ್ರಮಾರ್ಗವನ್ನು ಅನುಸರಿಸಬಾರದು.

ರಾಮಾನುಜರ ಅಪಶೂದ್ರಾಧಿಕರಣ ರಚನೆ ಹೀಗಿದೆ -

ಪೂರ್ವಪಕ್ಷ - ಶೂದ್ರನಿಗೆ ಉಪನಯನವಿಲ್ಲದ ಕಾರಣ ಅಧ್ಯಯನವೂ ಸಹ ಇರುವುದಿಲ್ಲ. ಮತ್ತು ಕರ್ಮಕಾಂಡದ ಅಪಶೂದ್ರಾಧಿಕರಣದ ನ್ಯಾಯದಂತೆ ಕರ್ಮದಲ್ಲಿಯೂ ಸಹ ಅಧಿಕಾರವನ್ನು ಹೊಂದಿರುವುದಿಲ್ಲ. ಮತ್ತು ಅಧ್ಯಯನವು ಸ್ವಾಧ್ಯಾಯದ ಸಂಸ್ಕಾರರೂಪವಾದ್ದರಿಂದ ಲಿಖಿತ-ಪಾಠಾದಿಗಳಿಂದ ಮಾಡಿದ ಸ್ವಾಧ್ಯಾಯದಿಂದ ಹುಟ್ಟಿದ ಧ್ಯಾನವು ಶ್ರೇಯಸ್ಸಾಧನವಾಗಿರುವುದಿಲ್ಲ. ಆದರೂ ಸಹ 'ಶ್ರಾವಯೇಚ್ಚತುರೋ ವರ್ಣಾನ್' ಶೂದ್ರರಿಗೆ ಶ್ರವಣ ಮಾಡಿಸಬೇಕು. ಇತ್ಯಾದಿ ಪ್ರಮಾಣಗಳ ಆಧಾರದಿಂದ, ಇತಿಹಾಸ ಪುರಾಣಾದಿಗಳಲ್ಲಿ ಶೂದ್ರರು ಅಧಿಕಾರವನ್ನು ಪಡೆದಿರುತ್ತಾರೆ. ಇತಿಹಾಸಾದಿಗಳಿಂದ ಬ್ರಹ್ಮಜ್ಞಾನವನ್ನು ಶೂದ್ರರೂ ಸಹ ಹೊಂದಬಹುದು. ಹಾಗಾಗಿ ಬ್ರಹ್ಮೋಪಾಸನೆಯಲ್ಲಿ ಶೂದ್ರರಿಗೆ ಅಧಿಕಾರವಿರುತ್ತದೆ.

ಸಿದ್ಧಾಂತ - 'ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್' ಇತಿಹಾಸ ಪುರಾಣಗಳ ಸಹಾಯದಿಂದ ವೇದಾರ್ಥವನ್ನು ತಿಳಿಯಬೇಕು ಎಂಬ ಮಾತಿನಂತೆ, ಇತಿಹಾಸ ಪುರಾಣಗಳು ಸ್ವತಂತ್ರವಾಗಿ ಜ್ಞಾನಕ್ಕೆ ಹೇತುವಲ್ಲ, ಹೊರತಾಗಿ ವೇದದಿಂದ ಜ್ಞಾನವನ್ನು ಪಡೆಯಲು ಕೇವಲ ಸಹಾಯವಾಗಿವೆ. ಆದ್ದರಿಂದ ಶೂದ್ರನಿಗೆ ಇತಿಹಾಸಪುರಾಣಗಳಿಂದ ನೇರವಾಗಿ ಜ್ಞಾನವನ್ನು ಪಡೆಯಲು ಅಧಿಕಾರ-ವಿರುವುದಿಲ್ಲ.

ರಾಮಾನುಜರ ಈ ಅಧಿಕರಣಶರೀರ ಅಸಾಧುವಾಗಿದೆ. ಪೂರ್ವಪಕ್ಷ ಮಾಡುವಾಗ ಶೂದ್ರರಿಗೆ ಯಾಗಾದಿಕರ್ಮಗಳಲ್ಲಿ ಅಧಿಕಾರವಿಲ್ಲವೆಂದು ಹೇಳಿದರು. ಇದು ಸರಿಯಲ್ಲ. ಶೂದ್ರನಿಗೆ ಅಗ್ನಿ ಹಾಗೂ ವೇದಜನ್ಯವಾದ ಕರ್ಮವಿದ್ಯೆಯಲ್ಲಿ ಅಧಿಕಾರವಿಲ್ಲದಿರಬಹುದು. ಆದರೆ ಇತಿಹಾಸಾದಿಗಳಿಂದ ಬ್ರಹ್ಮಜ್ಞಾನವನ್ನು ಶೂದ್ರನು ಪಡೆಯಬಹುದೆಂದು ನೀವು ಹೇಗೆ ಹೇಳುತ್ತಿರೋ ಅದರಂತೆ ಸ್ಮೃತಿಗಳಿಂದ ಶೂದ್ರನು ಕರ್ಮಜ್ಞಾನವನ್ನೂ ಕೂಡ ಪಡೆಯಬಹುದು. ವೇದದಿಂದಲೇ ಕರ್ಮಜ್ಞಾನವನ್ನು ಪಡೆಯಬೇಕೆಂಬ ನಿಯಮವಿಲ್ಲ. ಮತ್ತು ಅಗ್ನಿಸಾಧ್ಯವಲ್ಲದ ಸಂಧ್ಯೋಪಾಸನೆ ಮೊದಲಾದ ಕರ್ಮಗಳಲ್ಲಿಯೂ ಕೂಡ ಅಧಿಕಾರವನ್ನು ಶೂದ್ರನಾದವನು ಪಡೆಯಬಹುದು.

ರಾಮಾನುಜರ ಪಕ್ಷದಲ್ಲಿ ಸೂತ್ರವು ಇತಿಹಾಸಾದಿಗಳಿಗೆ ವೇದೋಪಬೃಂಹಕತ್ವವನ್ನಷ್ಟೇ ಸಿದ್ಧಾಂತಹೇತುವನ್ನಾಗಿ ಹೇಳಬೇಕಿತ್ತು. ಹೊರತು, ಶೂದ್ರನಿಗೆ ಉಪನಯನವಿಲ್ಲವೆಂದು ಹೇಳಿದ್ದು ತಪ್ಪಾಗುತ್ತದೆ.

ಮತ್ತು ವೇದದಲ್ಲಿರುವ ಸಂವರ್ಗವಿದ್ಯೆಯನ್ನು ಶ್ರವಣ ಮಾಡಲು ಶೂದ್ರನಿಗೂ ಕೂಡ ಅಧಿಕಾರವಿದೆ. ಏಕೆಂದರೆ ಶೂದ್ರ ಎಂದು ಸಂಬೋಧನೆ ಮಾಡಿದ್ದರಿಂದ ವೈದಿಕವಿದ್ಯೆಯ ಶ್ರವಣಾಧಿಕಾರವನ್ನು ಶೂದ್ರನಿಗೂ ಹೇಳಬಹುದು ಎಂದು ಶಂಕೆಯು ಪ್ರಾಪ್ತವಾದರೆ, 'ಶುಗಸ್ಯ' ಎಂಬ ಸೂತ್ರವು ಸಂವರ್ಗವಿದ್ಯೆಯಲ್ಲಿ ಶೂದ್ರನಿಗೆ ಅಧಿಕಾರವಿಲ್ಲವೆಂದು ಸಿದ್ಧಾಂತ ಮಾಡಿದೆ. ಹೀಗಿರುವಾಗ ಇತಿಹಾಸಾದಿಗಳಿಂದ ಶೂದ್ರನಿಗೆ ಜ್ಞಾನಹುಟ್ಟುತ್ತದೋ ಇಲ್ಲವೋ ಎಂಬ ವಿಚಾರವು ವಿರುದ್ಧವಾಗಿದೆ.

ಮತ್ತು ಇತಿಹಾಸಾದಿಗಳು ವೇದಕ್ಕೆ ಸಹಕಾರಿಯಾಗಿ ತತ್ವಜ್ಞಾನವನ್ನು ಹುಟ್ಟಿಸುವ ಕಾರಣ ಶೂದ್ರನಿಗೆ ಇತಿಹಾಸಾದಿಗಳಲ್ಲಿ ಅಧಿಕಾರವಿಲ್ಲವೆಂದು ನೀವು ಸಮರ್ಥನೆ ಮಾಡಬಹುದು. ಆದರೆ ವೇದಕ್ಕೆ ಸಮಾನಾರ್ಥವಾದ ಪ್ರಬಂಧರೂಪವಾದ ಭಾಷಾಂತರದಿಂದ ಬ್ರಹ್ಮಜ್ಞಾನವನ್ನು ಶೂದ್ರನಾದವನು ನೇರವಾಗಿ ಪಡೆಯಬಹುದು. ಅಂತಹ ಬ್ರಹ್ಮೋಪಾಸನೆಯಲ್ಲಿ ಶೂದ್ರನಿಗೂ ಕೂಡ ಅಧಿಕಾರವು ಬಂದೇ ಬರುತ್ತದೆ. ಮತ್ತು ಶೂದ್ರನಿಗೆ ಕರ್ಮದಲ್ಲಿ ಅಧಿಕಾರವಿಲ್ಲದ ಕಾರಣ, ತದಂಗವಾದ ಉಪಾಸನೆಯಲ್ಲಿಯೂ ಅಧಿಕಾರವಿಲ್ಲವೆಂದೇ ಹೇಳಲು ಬರುವಾಗ, ಇತಿಹಾಸಾದಿಗಳಿಂದ ಶೂದ್ರನಿಗೆ ತತ್ವಜ್ಞಾನವನ್ನು ಹೊಂದುವ ಅರ್ಹತೆಯಿಲ್ಲವೆಂದು ಸಮರ್ಥನೆ ಮಾಡುವುದು ವ್ಯರ್ಥವಾಗಿದೆ.

'ಇತಿಹಾಸಪುರಾಣಾಭ್ಯಾಮ್ ವೇದಂ ಸಮುಪಬೃಂಹಯೇತ್' ಎಂಬ ವಾಕ್ಯವು ಇತಿಹಾಸಪುರಾಣಾದಿ-ಗಳಿಗೆ ಅನುಸಾರಿಯಾಗಿಯೇ ವೇದದ ತಾತ್ಪರ್ಯವನ್ನು ನಿಶ್ಚಯಿಸಬೇಕೆಂದು ಸಮರ್ಥಿಸಲು ಹೊರಟಿದೆ ಹೊರತು, ವೇದನಿರಪೇಕ್ಷಿತವಾದ ಇತಿಹಾಸಾದಿಗಳಿಗೆ ಬೋಧಕತ್ವವೇ ಇಲ್ಲವೆಂದು ಹೇಳಲು ಹೊರಟಿಲ್ಲ.

ಏಕೆಂದರೆ ವೇದಗಳಲ್ಲಿರುವ ಎಲ್ಲಾ ಶಾಖೆಗಳನ್ನು ಚೆನ್ನಾಗಿ ಬಲ್ಲ ಶ್ರೀಬಾದರಾಯಣರಿಂದ ಪ್ರಣೀತವಾದ ನಿರ್ಣಯರೂಪವಾದ ಇತಿಹಾಸಾದಿಗಳಲ್ಲಿರುವ ವಾಕ್ಯದಿಂದ ಬ್ರಾಹ್ಮಣಾದಿಗಳಿಗೂ ಕೂಡ ವೇದವನ್ನು ಅಪೇಕ್ಷೆ ಪಡದೇ, ನೇರವಾಗಿ ತತ್ವಜ್ಞಾನ ಬರುವುದು ಕಂಡಿದೆ. ಆದ್ದರಿಂದ ವೇದನಿರಪೇಕ್ಷಿತವಾದ ಇತಿಹಾಸಾದಿಗಳು ಏನನ್ನೂ ತಿಳಿಸಲಾರವೆಂದು ಹೇಳಲಾಗದು.

ಇತಿಹಾಸಾದಿಗಳಿಂದ ಜ್ಞಾನವು ಬರಬಹುದು. ಆದರೆ ಅವು ಫಲದಾಯಕವಲ್ಲ ಎಂದು ಹೇಳಬಾರದು. ಏಕೆಂದರೆ 'ಯ ಇದಂ ಶೃಣುಯಾನ್ನಿತ್ಯಮ್' ಇತ್ಯಾದಿಯಾಗಿ ಯಾರು ವಿಷ್ಣುಸಹಸ್ರನಾಮಾದಿಗಳನ್ನು

ಕೇಳುತ್ತಾನೋ, ಅಂತಹವನು ಶೂದ್ರನಾಗಿದ್ದಲ್ಲಿ, ಸುಖವನ್ನು ಹೊಂದುತ್ತಾನೆ ಎಂದು 'ಶೂದ್ರಃ ಸುಖಮವಾಪ್ನುಯಾತ್' ಎಂಬ ವಾಕ್ಯವು ಹೇಳುತ್ತಿದೆ. ಆದ್ದರಿಂದ ಇತಿಹಾಸಾದಿಗಳಿಂದ ಪಡೆದ ಜ್ಞಾನವು ಶೂದ್ರನಿಗೂ ಕೂಡ ಫಲದಾಯಕವೇ ಆಗುತ್ತದೆ.

ಇತಿಹಾಸಾದಿಗಳ ಶ್ರವಣದಿಂದ ಶೂದ್ರನು ಜ್ಞಾನವನ್ನು ಪಡೆಯಬೇಕೆಂದು ಹೇಳುತ್ತಿಲ್ಲ ಹೊರತಾಗಿ, ಕೇವಲ ಪಾಪವನ್ನು ಪರಿಹರಿಸಿಕೊಳ್ಳಲು ಶ್ರವಣಮಾಡಬೇಕೆಂದಷ್ಟೇ ಆ ವಾಕ್ಯದ ಅಭಿಪ್ರಾಯವೆಂದು ಶಂಕಿಸಬಾರದು. ಶ್ರವಣಾದಿಗಳಿಗೆ ತತ್ವಜ್ಞಾನವೆಂಬ ದೃಷ್ಟಫಲವನ್ನು ಹೇಳಲು ಬರುವಾಗ ಪಾಪಕ್ಷಯವೆಂಬ ಅದೃಷ್ಟಪ್ರಯೋಜನವನ್ನು ಹೇಳುವುದು ತಪ್ಪಾಗುತ್ತದೆ.

ಮತ್ತು 'ಸ್ತ್ರೀಶೂದ್ರಬ್ರಹ್ಮಬಂಧೂನಾಂ ತ್ರಯೀ ನ ಶ್ರುತಿಗೋಚರಾ' ಸ್ತ್ರೀ, ಶೂದ್ರ ಬ್ರಹ್ಮಬಂಧು ಈ ಮೂವರಿಗೆ ವೇದಾಧಿಕಾರವಿರುವುದಿಲ್ಲ ಎಂದು ಪ್ರಾರಂಭ ಮಾಡಿ 'ಇತಿ ಭಾರತಮಾಖ್ಯಾನಂ ಕೃಪಯಾ ಮುನಿನಾ ಕೃತಮ್' ಅವರ ಉದ್ಧಾರಕ್ಕೋಸ್ಕರ ಮಹಾಭಾರತವನ್ನು ಶ್ರೀವೇದವ್ಯಾಸದೇವರು ಬರೆದಿದ್ದಾರೆ ಎಂದು ಹೇಳಲಾಗಿದೆ. ಈ ಸ್ಮೃತಿವಾಕ್ಯದಿಂದ ಮಹಾಭಾರತಾದಿ ಗ್ರಂಥಗಳಿಂದ ಶೂದ್ರರಾದವರು ವೇದದಿಂದ ಪಡೆಯುವ ತತ್ವಜ್ಞಾನವನ್ನು ಪಡೆಯಬೇಕೆಂದು ತಿಳಿಯುತ್ತದೆ. ಆದ್ದರಿಂದ ಬ್ರಾಹ್ಮಣರಿಗೆ ವೇದದಿಂದ ತತ್ವಜ್ಞಾನವು ದೊರೆಯುವಂತೆ ಶೂದ್ರರಿಗೆ ಮಹಾಭಾರತವು ತತ್ವಜ್ಞಾನವನ್ನು ನೀಡುತ್ತದೆ.

ಯಾವರೀತಿಯಾಗಿ ನಿಮ್ಮ ಮತದಲ್ಲಿ ಶೂದ್ರರಿಗೆ ಮುಕ್ತಿಸಾಧನವಾದ ಬ್ರಹ್ಮೋಪಾಸನೆಯಲ್ಲಿ ಅಧಿಕಾರವನ್ನು ಒಪ್ಪದಿದ್ದರೂ ಮುಕ್ತಿಸಾಧನವಾದ ಪ್ರಪತ್ತಿಯಲ್ಲಿ (ಶರಣಾಗತಿಯಲ್ಲಿ) ಅಧಿಕಾರವನ್ನು ಒಪ್ಪುತ್ತೀರೋ, ಅದರಂತೆ ವೇದದಿಂದ ಬ್ರಹ್ಮಜ್ಞಾನವನ್ನು ಪಡೆಯಲು ಶೂದ್ರರಿಗೆ ಅಧಿಕಾರವಿಲ್ಲದಿದ್ದರೂ ಇತಿಹಾಸಾದಿಗಳಿಂದ ಬ್ರಹ್ಮಜ್ಞಾನ ಪಡೆಯಲು ಅಧಿಕಾರವಿರುತ್ತದೆ. ಈ ವಿಷಯದಲ್ಲಿ ಯಾವುದೇ ಬಾಧಕಗಳಿರುವುದಿಲ್ಲ.

ಸ್ತ್ರೀ ಶೂದ್ರಾದಿಗಳಿಗೆ, ಮಹಾಭಾರತಾದಿಗಳಿಂದ ಜ್ಞಾನವನ್ನು ಪಡೆಯಲು ಅಧಿಕಾರವಿದೆಯೆನ್ನಲು ಗೀತೆಯ ಸಮ್ಮತಿಯೂ ಕೂಡ ಇರುತ್ತದೆ -

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇऽಪಿ ಸ್ಯುಃ ಪಾಪಯೋನಯಃ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇऽಪಿ ಯಾಂತಿ ಪರಾಂ ಗತಿಮ್ ।
ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ'

ಏಲೈ ! ಪ್ರಾರ್ಥನೇ ಪಾಪ ಯೋನಿಯಲ್ಲಿ ಹುಟ್ಟಿದ್ದರೂ ಸ್ತ್ರೀಯರು, ವೈಶ್ಯರು, ಶೂದ್ರರು, ನನ್ನು ತಿಳಿದು, ನನನ್ನೇ ಪಡೆಯುತ್ತಾರೆ. ಹೀಗಿರುವಾಗ ಪುಣ್ಯಾತ್ಮನಾದ ಬ್ರಾಹ್ಮಣರು ಭಕ್ತರಾದ ರಾಜರ್ಷಿಗಳು ನನ್ನನ್ನು ಹೊಂದದೇ ಇರುತ್ತಾರೇನು?

ಇತ್ಯಾದಿಯಾಗಿ ಶ್ರೀಕೃಷ್ಣನು ಹೇಳಿರುತ್ತಾನೆ.

ಈ ಅಭಿಪ್ರಾಯದಿಂದಲೇ ಟೀಕೆಯಲ್ಲಿ 'ಹರಿಃ ಶೂದ್ರಾದ್ಯೈರ್ವೇದವಿದ್ಯಾ ಜ್ಞೇಯೋ ನ ಭವತಿ' ಎಂದು ಹೇಳಿರುತ್ತಾರೆ. ಭಾಷ್ಯಕಾರರೂ ಸಹ - 'ಜ್ಞೇಯೋ ನ ವೇದ್ಯೈಃ ಶೂದ್ರಾದ್ಯೈಃ' ಶೂದ್ರರು ವೇದಗಳಿಂದಷ್ಟೇ ತಿಳಿಯಲು ಅರ್ಹರಲ್ಲ ಎಂದು ಹೇಳಿರುತ್ತಾರೆ.

ಅದ್ವೈತಿಗಳು ಪ್ರಥಮಸೂತ್ರವನ್ನು ಹೀಗೆ ವ್ಯಾಖ್ಯಾನ ಮಾಡುತ್ತಾರೆ - ಪೌತ್ರಾಯಣನಿಗೆ ಯಾವ ಶೋಕವು ಪ್ರಾಪ್ತವಾಗಿದೆಯೋ, ಅದನ್ನು ರೈಕ್ವಮುನಿಯು 'ಶೂದ್ರ' ಶಬ್ದದಿಂದ ಸಂಬೋಧನೆ ಮಾಡಿ ಸೂಚನೆ ಮಾಡಿದ್ದಾರೆ. ಇದು ಸೂತ್ರದಲ್ಲಿರುವ 'ಸೂಚ್ಯತೇ' ಎಂಬ ಪದದ ಅರ್ಥ.

ಇದು ತಪ್ಪು. ಸಂಬೋಧನೆ ಮಾಡಲ್ಪಟ್ಟ ಶೂದ್ರಶಬ್ದಕ್ಕೆ ನೇರವಾಗಿ ಯೌಗಿಕಾರ್ಥದಿಂದಲೇ ದುಃಖವನ್ನು ಹೊಂದಿರುತ್ತಿಎಂಬರ್ಥವನ್ನು ಹೇಳಲು ಬರುವಾಗ, ಸೂಚನೆ ಮಾಡಿದ್ದಾರೆ ಎಂದು ಹೇಳುವುದು ತಪ್ಪು.

ರಾಮಾನುಜರ ಪ್ರಥಮಸೂತ್ರ ವ್ಯಾಖ್ಯಾನ ಹೀಗಿದೆ - 'ಶುಚ್' ಧಾತುವಿಗೆ 'ಶುಚೇರ್ದಶ್ಚ' ಎಂಬ ಉಣಾದಿಸೂತ್ರದಿಂದ 'ರ' ಪ್ರತ್ಯಯವು ಬರುತ್ತದೆ. 'ಧಾತೋಶ್ಚ' ಎಂಬ ಸೂತ್ರದಿಂದ ದೀರ್ಘ ಬಂದು 'ಶುಚ್' ಧಾತುವಿನ 'ಚ'ಕಾರಕ್ಕೆ 'ದ'ಕಾರ ಬಂದರೆ 'ಶೂದ್ರ' ಎಂಬ ರೂಪವು ಸಿದ್ಧವಾಗುತ್ತದೆ.

ಹೀಗೆ ಹೇಳಿದ್ದರಿಂದ 'ಶೂದ್ರ' ಶಬ್ದಕ್ಕೆ ದುಃಖಪಟ್ಟವನು ಎಂಬಷ್ಟೇ ಅರ್ಥವನ್ನು ಸೂತ್ರದಿಂದ ವಿವಕ್ಷಿಸಿದಂತಾಯಿತು ಹೊರತು, ದುಃಖದಿಂದ ಮುನಿಯ ಬಳಿ ಹೊರಟಿದ್ದಾನೆ ಎಂಬರ್ಥವು ದೊರೆಯುವುದಿಲ್ಲ. ಹಾಗಾದರೆ ಸೂತ್ರಕಾರರು ಆದ್ರವಣವನ್ನು ಏಕೆ ಹೇಳಿದ್ದಾರೆಂದರೆ, ಶೂದ್ರಶಬ್ದದ ಅರ್ಥವೆಂಬ ದೃಷ್ಟಿಯಿಂದಲ್ಲ ಹೊರತಾಗಿ, ಶೋಕವಾಗಿದೆಯೆನ್ನಲು ಲಿಂಗವಾಗಿದೆಯೆಂಬ ದೃಷ್ಟಿಯಿಂದ.

ಅನಾದರಶ್ರವಣವನ್ನು ಪಂಚಮೀವಿಭಕ್ತಿಯಲ್ಲಿ ಹೇಳಿದಂತೆ ಆದ್ರವಣವನ್ನೂ ಕೂಡ ಪಂಚಮೀ ವಿಭಕ್ತಿಯಲ್ಲಿ ಹೇಳಲಾಗಿದೆ. ಪ್ರಥಮಾವಿಭಕ್ತಿಯಿಂದ ನಿರ್ದಿಷ್ಟವಾದ ಶೋಕಕ್ಕೆ ಇವೆರಡೂ ಹೇತುಗಳಾಗಿವೆ ಎಂದು ಹೇಳುವುದೇ ನ್ಯಾಯಸಮ್ಮತವಾದದ್ದು. ಅನಾದರಶ್ರವಣವು ಶೋಕಕ್ಕೆ ಕಾರಣತಯಾ ಲಿಂಗವಾಗಿದೆ. ಆದ್ರವಣವು ಶೋಕಕ್ಕೆ ಕಾರ್ಯತಯಾ ಲಿಂಗವಾಗಿದೆ ಎಂದಷ್ಟೇ ವ್ಯತ್ಯಾಸ.

(ಅಭಿಪ್ರಾಯವಿಷ್ಟು - 'ಶುಕ್' ಎಂಬುದು ಪ್ರಥಮಾವಿಭಕ್ತಿಯಲ್ಲಿರುವುದರಿಂದ ಸಾಧ್ಯವೆಂದು ತಿಳಿಯಬೇಕು. ಇದಕ್ಕೆ 'ಅನಾದರಶ್ರವಣ' ಮತ್ತು 'ಆದ್ರವಣ' ಎಂಬೆರಡು ಹೇತುಗಳಿವೆ. ಎರಡು ಲಿಂಗಗಳನ್ನೇಕೆ ಹೇಳಿದ್ದಾರೆಂದರೆ ಶೋಕವಾಗಿದೆಯೆನ್ನಲು ಅನಾದರಶ್ರವಣವು ಕಾರಣತಯಾ ಲಿಂಗವಾಗಿದೆ. 'ಪೌತ್ರಾಯಣಃ ಶೋಕವಾನ್ ಹಂಸಕೃತ ಅನಾದರ ಶ್ರವಣಕರ್ತೃತ್ವಾತ್' ಎಂದು. ಅದರಂತೆ ಆದ್ರವಣವು ಕಾರ್ಯತಯಾ ಲಿಂಗವಾಗಿದೆ. ಅಂದರೆ 'ಪೌತ್ರಾಯಣಃ ಶೋಕವಾನ್ ಆದ್ರವಣಾತ್' ಆದ್ರವಣವು ಶೋಕದ ಕಾರ್ಯವಾದ್ದರಿಂದ ಪೌತ್ರಾಯಣನಿಗೆ ದುಃಖವಾಗಿದೆಯೆಂದು ಅನುಮಾನದ ಅಭಿಪ್ರಾಯ. ಹೀಗೆ ವ್ಯಾಖ್ಯಾನಿಸಬೇಕು ಹೊರತು, ಆದ್ರವಣವು ಶೂದ್ರಶಬ್ದದ ಅರ್ಥವೆಂದು ವ್ಯಾಖ್ಯಾನಿಸಬಾರದು.)

ರಾಮಾನುಜರ ಈ ವ್ಯಾಖ್ಯಾನವೂ ಕೂಡ ತಪ್ಪು. ಅನಾದರಶ್ರವಣದಂತೆ ಆದ್ರವಣವೂ ಕೂಡ ಹೇತುವಾಗಿದ್ದಲ್ಲಿ, ಸೂತ್ರದಲ್ಲಿ 'ಚ' ಶಬ್ದವಿರಬೇಕಿತ್ತು. ಆದರೆ 'ಚ' ಶಬ್ದವಿಲ್ಲದ ಕಾರಣ, ಎರಡು ಲಿಂಗಗಳನ್ನು ಸೂತ್ರಕಾರರು ವಿವಕ್ಷಿಸಿದ್ದಾರೆಂದು ವ್ಯಾಖ್ಯಾನಿಸಲು ಬರುವುದಿಲ್ಲ.

ಆದ್ರವಣವು ಹೇತುವಲ್ಲದಿದ್ದರೆ, ಪಂಚಮೀವಿಭಕ್ತಿಯನ್ನು ಹೇಗೆ ಕೂಡಿಸಬೇಕು? ಎಂಬ ಗೊಂದಲಕ್ಕೆ ಅವಕಾಶವಿಲ್ಲ. ಸೂತ್ರದಲ್ಲಿ ಕೇಳಿಸುತ್ತಿರುವ 'ಅಸ್ಯ ಶುಕ್' ಎಂಬುದು ಪ್ರಧಾನಸಾಧ್ಯವಲ್ಲ. ಪೌತ್ರಾಯಣನು ದುಃಖದಿಂದ ಬಂದಿದ್ದಾನೆಂಬ ಕಾರಣದಿಂದಷ್ಟೇ ಶೂದ್ರಶಬ್ದದಿಂದ ಪ್ರತಿಪಾದ್ಯನು ಹೊರತು, ಚತುರ್ಥಜಾತಿಯವನಾದ್ದರಿಂದಲ್ಲ ಎಂಬುದು ಪ್ರಧಾನವಾದ ಸಾಧ್ಯ. ಇದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಅಧ್ಯಾಹೃತವಾದ ಈ ಪ್ರಧಾನಸಾಧ್ಯದಲ್ಲಿ ಆದ್ರವಣವು ಹೇತುವಾಗುತ್ತದೆ. ಅದಕ್ಕಾಗಿ ಪಂಚಮೀವಿಭಕ್ತಿಯು ಸಾರ್ಥಕ.

ಮತ್ತು ಶೂದ್ರಶಬ್ದಕ್ಕೆ ಔಣಾದಿಕೇ 'ರ' ಪ್ರತ್ಯಯವನ್ನು ಹೇಳಿ ನಿಷ್ಪನ್ನ ಮಾಡಿದಿರಿ. ಇದರಿಂದೇನೂ ಜಾತ್ಯರ್ಥತ್ವವನ್ನು ನಿರಾಕರಣೆ ಮಾಡಿದಂತಾಗಲಿಲ್ಲ. ಏಕೆಂದರೆ ಜಾತಿವಾಚಿಯಾದ ಶೂದ್ರಶಬ್ದವೂ ಸಹ ಔಣಾದಿಕೇ 'ರ'ಪ್ರತ್ಯಯಾಂತವೇ ಆಗಿರುತ್ತದೆ.

ಆದ್ದರಿಂದ ಶೂದ್ರಶಬ್ದವು ನಿರುಕ್ತಿಬಲದಿಂದ ಸಿದ್ಧವಾಗಿದೆ ಹೊರತು, ವ್ಯಾಕರಣದಿಂದಲ್ಲ. ಯಾವರೀತಿಯಾಗಿ 'ರುಗ್‌ದ್ರಾವಣಾತ್' ಎಂದು ರುದ್ರಶಬ್ದವು ನಿಷ್ಪನ್ನವಾಗಿದೆಯೋ, ಅದರಂತೆ 'ಶುಚಾಆದ್ರವಣಾತ್' ಎಂಬ ನಿಷ್ಪತ್ತಿಯಿಂದ ಶೂದ್ರ ಶಬ್ದವೂ ನಿಷ್ಪನ್ನವಾಗಿದೆ. 'ರುಜಂ ದ್ರಾವಯತೇ ಯಸ್ಮಾತ್ ರುದ್ರಸ್ತಸ್ಮಾಜ್ಜನಾರ್ದನಃ' ಎಂಬ ಮಾತಿನಂತೆ ರೋಗಗಳನ್ನು ಪರಿಹಾರ ಮಾಡುತ್ತಾನೆಂಬ

ಕಾರಣದಿಂದ ಪರಮಾತ್ಮನು 'ರುದ್ರ' ಎನಿಸಿದ್ದಾನೆ. ಇಲ್ಲಿಯೂ ಸಹ 'ರುಜಂ ದ್ರಾವಯತೇ' ಎಂಬ ನಿಷ್ಪತ್ತಿಯನ್ನು ವಿವಕ್ಷಿಸಿದಾಗ 'ರುಗ್‌ದ್ರ' ಎಂದಾಗಬೇಕು. ಆದರೂ 'ರುದ್ರ' ಎಂದೇ ಕರೆಯುತ್ತೇವೆ. ಅದರಂತೆ ಇಲ್ಲಿಯೂ ಸಹ 'ಶುಗ್‌ದ್ರ' ಎಂದಾಗಬೇಕು. ಆದರೆ ಪೃಷೋದರಾದಿಗಣದಲ್ಲಿ ಸೇರಿರುವ ಕಾರಣದಿಂದ 'ಗ'ಕಾರವು ಲೋಪವಾಗಿ 'ಶುಚ್' ಎಂಬ ಉಪಪದದಲ್ಲಿ 'ಉ' ಕಾರಕ್ಕೆ ದೀರ್ಘ ಬಂದು ಶೂದ್ರ ಎಂಬ ರೂಪವು ನಿಷ್ಪನ್ನವಾಗಿದೆ.

ಶಾಂಕರಭಾಷ್ಯದಲ್ಲಿ ಮತ್ತು ರಾಮಾನುಜ ಭಾಷ್ಯದಲ್ಲಿ 'ಕ್ಷತ್ರಿಯತ್ವಾವಗತೇಶ್ಚೋತ್ತರತ್ರ ಚೈತ್ರರಥೇನ ಲಿಂಗಾತ್' ಎಂಬ ಎರಡನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನ ಮಾಡಿದ್ದಾರೆ -

ಇದೇ ಸಂವರ್ಗವಿದ್ಯೆಯಲ್ಲಿ ಮುಂದೆ 'ಅಥ ಹ ಶೌನಕಂ ಚ ಕಾಪೇಯಮಭಿಪ್ರತಾರಿಣಂ ಚ ಕಾರ್ಕ್ಷಸೇನಿಮ್' ಎಂಬುದಾಗಿ 'ಅಭಿಪ್ರತಾರಿ' ಎಂಬ ಪುರುಷನನ್ನು ಉಲ್ಲೇಖ ಮಾಡಲಾಗಿದೆ. ಈ ವಾಕ್ಯವನ್ನು ನೋಡಿದಾಗ ಕಾರ್ಕ್ಷಸೇನಿ ಮಗನಾದ ಅಭಿಪ್ರತಾರಿಯು ಕಾಪೇಯಗೋತ್ರದಲ್ಲಿ ಹುಟ್ಟಿದ ಶೌನಕರ ಸಂಪರ್ಕದಲ್ಲಿದ್ದನು ಎಂದು ತಿಳಿಯುತ್ತದೆ.

ಈ ಅಭಿಪ್ರತಾರಿಯು ಚೈತ್ರರಥನು ಎಂದು ಹೇಳಬೇಕು. ಏಕೆಂದರೆ ಕಾಪೇಯಗೋತ್ರದಲ್ಲಿ ಹುಟ್ಟಿದ ಯಾಜಕರಾದ ಶೌನಕರ ಸಂಬಂಧವನ್ನು ಹೇಳಿರುವುದರಿಂದ.

ಕ್ಷತ್ರಿಯಜಾತಿಯಲ್ಲಿ ಹುಟ್ಟಿದ ಚಿತ್ರರಥನು ಕಾಪೇಯಗೋತ್ರದ ಬ್ರಾಹ್ಮಣರಿಂದ ಯಾಗ ಮಾಡಿಸುತ್ತಿದ್ದಾನೆಂದು 'ಏತೇನ ವೈ ಚಿತ್ರರಥಂ ಕಾಪೇಯಾ ಅಯಾಜಯನ್' ಎಂಬುದಾಗಿ ಶ್ರುತ್ಯಂತರದಲ್ಲಿ ಹೇಳಲಾಗಿದೆ.

ಹಾಗಾದರೆ ಅಭಿಪ್ರತಾರಿಯು ಚಿತ್ರರಥನಾಗಿದ್ದಾನೆಂದು ಸಮರ್ಥಿಸಬೇಕೇ ಹೊರತು, ಚೈತ್ರರಥನಾಗಿದ್ದಾನೆಂದು ಶಂಕಿಸುವುದು ತಪ್ಪು. ಅಭಿಪ್ರತಾರಿ ಎಂದು ಬೇರೆ ಹೆಸರನ್ನು ಹೇಳಿರುವುದರಿಂದ, ಚಿತ್ರರಥನಿಗಿಂತ ಬೇರೆಯವನೆಂದು ಸ್ಪಷ್ಟವಾಗುತ್ತದೆ.

ಚಿತ್ರರಥನಿಗಿಂತ ಭಿನ್ನನಾಗಿದ್ದಾನೆ. ಮತ್ತು ಚಿತ್ರರಥನ ಪುರೋಹಿತರಾದ ಕಾಪೇಯ ಋಷಿಗಳ ಸಂಬಂಧವನ್ನು ಹೇಳಲಾಗಿದೆ. ಇದರಿಂದ ಅಭಿಪ್ರತಾರಿಯು ಚಿತ್ರರಥನ ವಂಶದಲ್ಲಿ ಬಂದಿರುವ ಚೈತ್ರರಥನಾಗಿದ್ದಾನೆಂದು ಒಪ್ಪಲೇಬೇಕು. ಹೀಗೊಪ್ಪದಿದ್ದರೆ 'ಚಿತ್ರರಥಾದನ್ಯತ್ವ ಮತ್ತು ಚಿತ್ರರಥ-ಯಾಜಕಕಾಪೇಯಯೋಗತ್ವಗಳೆರಡೂ ಯುಕ್ತವಾಗುವುದಿಲ್ಲ. ಏಕೆಂದರೆ ಒಂದೇ ವಂಶದಲ್ಲಿ ಬಂದವರು ಪ್ರಾಯಶಃ ಒಂದೇ ವಂಶದಲ್ಲಿ ಬಂದಿರುವ ಪುರೋಹಿತರನ್ನೇ ಯಾಜಕರನ್ನಾಗಿ ಸ್ವೀಕರಿಸುತ್ತಾರೆ.

ಚೈತ್ರರಥನು ಕ್ಷತ್ರಿಯನಾಗಿದ್ದಾನೆಂಬುದು 'ತಸ್ಮಾತ್ ಚೈತ್ರರಥಾನಾಮೈಕಃ ಕ್ಷತ್ರಪತಿರಜಾಯತ' ಎಂಬ ಮತ್ತೊಂದು ಶ್ರುತಿಯಿಂದ ಸ್ಪಷ್ಟವಾಗಿ ತಿಳಿದಿದೆ. ಆದ್ದರಿಂದ 'ಕ್ಷತ್ರಿಯತ್ವಾವಗತೇ ಚೈತ್ರರಥೇನ ಲಿಂಗಾತ್' ಎಂಬ ಸೂತ್ರಕ್ಕೆ ಹೀಗರ್ಥ - 'ಅಭಿಪ್ರತಾರಿ' ಎಂಬ 'ಚೈತ್ರರಥ' ಎಂಬ ಕ್ಷತ್ರಿಯನ ಜೊತೆ ಸಮಭಿವ್ಯಹಾರವೆಂಬ ಲಿಂಗದ ಬಲದಿಂದ ಪೌತ್ರಾಯಣನೂ ಕೂಡ ಕ್ಷತ್ರಿಯನೇ ಆಗಿದ್ದಾನೆಂದು

ಇದು ತಪ್ಪು. ಸೂತ್ರದಲ್ಲಿ 'ಸಮಭಿವ್ಯಾಹಾರತ್' ಎಂಬುದನ್ನು ಅಧ್ಯಾಹಾರ ಮಾಡುವ ಪ್ರಸಂಗ ಬರುತ್ತದೆ. ನಮ್ಮ ಪ್ರಕಾರ ವ್ಯಾಖ್ಯಾನ ಮಾಡಿದಾಗ ಸಮಭಿವ್ಯಾಹಾರ ಮಾಡುವ ದೋಷವಿಲ್ಲ. ಮತ್ತು ಕಾಪೇಯರ ಜೊತೆಗೆ ಅಭಿಪ್ರತಾರಿಯು ಸಹಪಠಿತನಾಗಿದ್ದ ಮಾತ್ರದಿಂದ ಕಾಪೇಯರು ಯಾಜ್ಯತ್ವೇನ ಅಭಿಪ್ರತಾರಿಯ ಜೊತೆಗೆ ಅನ್ವಯವನ್ನು ಹೊಂದಿದ್ದಾರೆಂದು ತಿಳಿಯಲು ಸಾಧ್ಯವಿಲ್ಲ.

ಅಥವಾ ಕಾಪೇಯರು ಯಾಜ್ಯತ್ವೇನ ಅನ್ವಯವನ್ನು ಹೊಂದುತ್ತಾರೆಂದು ಒಪ್ಪೋಣ. ಆದರೂ ಸಹ ಅಭಿಪ್ರತಾರಿಯು ಚೈತ್ರರಥನಾಗಿದ್ದಾನೆಂದು ಸಿದ್ಧವಾಗುವುದಿಲ್ಲ. ಏಕೆಂದರೆ ಪ್ರಾಯಶಃ ಸಮಾನವಂಶದವರು ಸಮಾನವಂಶದಲ್ಲಿರುವ ಯಾಜಕರನ್ನೇ ಅಂಗೀಕರಿಸುತ್ತಾರೆಂದು ನೀವೇ 'ಪ್ರಾಯೇಣ' ಎಂದು ಹೇಳಿರುತ್ತೀರಿ. ಆದ್ದರಿಂದ ಚೈತ್ರರಥನಾಗದಿದ್ದರೂ ಕಾಪೇಯರನ್ನು ಯಾಜ್ಯತ್ವೇನ ಅಂಗೀಕರಿಸಬಹುದು.

ಅಥವಾ ಅಭಿಪ್ರತಾರಿಯು ಕಾಪೇಯರ ಸಂಪರ್ಕವನ್ನು ಹೊಂದಿರುವುದರಿಂದ ಕ್ಷತ್ರಿಯರಾಗಿದ್ದಾರೆಂದು ಒಪ್ಪೋಣ. ಆದರೂ ಸಹ ಕಾಪೇಯರ ಸಮಭಿವ್ಯಾಹಾರಮಾತ್ರದಿಂದ ಪೌತ್ರಾಯಣನು ಕ್ಷತ್ರಿಯನಾಗ-ಬೇಕಾಗಿಲ್ಲ. ಏಕೆಂದರೆ ಪೌತ್ರಾಯಣನ ಸಮಭಿವ್ಯಾಹಾರ ಇರುವಂತಹ ಕಾಪೆಯರಲ್ಲೇ ಕ್ಷತ್ರಿಯತ್ವವು ಬಂದಿಲ್ಲ. ಆದ್ದರಿಂದ ಅನೇಕಾಂತ್ಯ ದೋಷವು ಬರುತ್ತದೆ.

ಮತ್ತು ಕಾಪೇಯರು ಬ್ರಾಹ್ಮಣರಾಗಿದ್ದಾರೆಂದು ನಿಶ್ಚಯವಾಗಿದೆ. ರೈಕ್ವ ಮುನಿಗಳೂ ಸಹ ಬ್ರಾಹ್ಮಣರೆಂದು ನಿಶ್ಚಯವಾಗಿದೆ. ಬ್ರಾಹ್ಮಣರಾದ ಕಾಪೇಯರ ಜೊತೆಗೆ ಅಥವಾ ರೈಕ್ವರ ಜೊತೆಗೆ ಸಮಭಿವ್ಯಾಹಾರವಿರುವ ಕಾರಣ ಪೌತ್ರಾಯಣನೇ ಬ್ರಾಹ್ಮಣನಾಗುವ ಪ್ರಸಂಗ ಬರುತ್ತದೆ.

ನಿಶ್ಚಿತವಾದ ಬ್ರಾಹ್ಮಣ್ಯವುಳ್ಳ ಕಾಪೇಯರಿಂದ ಸಮಭಿವ್ಯಾಹಾರವಿರುವ ಕಾರಣ ಅಭಿಪ್ರತಾರಿಯು ಕ್ಷತ್ರಿಯನೆಂದು ಹೇಗೆ ನಿಶ್ಚಯವಾಗುತ್ತದೋ, ಅದರಂತೆ ನಿಶ್ಚಿತವಾದ ಬ್ರಾಹ್ಮಣ್ಯವುಳ್ಳ ರೈಕ್ವಮುನಿಗಳಿಂದ ಸಮಭಿವ್ಯಾಹಾರವಿರುವ ಕಾರಣ ಪೌತ್ರಾಯಣನೂ ಕೂಡ ಕ್ಷತ್ರಿಯನಾಗಬೇಕಲ್ಲವೇ? ಎಂದು ಪ್ರಶ್ನಿಸಬಾರದು.

ಏಕೆಂದರೆ ಬ್ರಾಹ್ಮಣರ ಜೊತೆಗೆ ಇದ್ದ ಮಾತ್ರದಿಂದ ಕ್ಷತ್ರಿಯರೇ ಆಗಬೇಕೆಂಬ ನಿಯಮವಿಲ್ಲ. ಮತ್ತು ರೈಕ್ವಮುನಿಗಳ ಸಮಭಿವ್ಯಾಹಾರವನ್ನೇ ಲಿಂಗವನ್ನಾಗಿ ಹೇಳಲು ಬರುವಾಗ ಚೈತ್ರರಥ ಸಮಭಿವ್ಯಾಹಾರವೆಂಬ ಲಿಂಗವನ್ನು ಸೂತ್ರದಲ್ಲಿ ಹೇಳಿದ್ದು ಅಯುಕ್ತವಾಗುತ್ತದೆ.

'ಸಂಸ್ಕಾರಪರಾಮರ್ಶಾತ್ ತದಭಾವಾಭಿಲಾಪಾಚ್ಚ' ಎಂಬ ಮೂರನೆಯ ಸೂತ್ರಕ್ಕೆ ಅದ್ವೈತಿಗಳು ಹೇಳುವ ಅರ್ಥ ಹೀಗಿದೆ - 'ತಂ ಹ ಉಪನಿನ್ಯೇ' ಎಂಬುದು ಈ ಸೂತ್ರದ ವಿಷಯವಾಕ್ಯ. ಇದರಲ್ಲಿ ಶೂದ್ರರಿಗೆ ಉಪನಯನಸಂಸ್ಕಾರವನ್ನು ಇಲ್ಲವೆಂದು ನಿಷೇಧ ಮಾಡಿದ್ದರಿಂದ ಶೂದ್ರರಿಗೆ ವೇದವಿದ್ಯಾಧಿಕಾರವಿಲ್ಲವೆಂದು ಸಮರ್ಥಿಸಲಾಗಿದೆ.

ಇದು ತಪ್ಪು. 'ಅಷ್ಟವರ್ಷಂ ಬ್ರಾಹ್ಮಣಮುಪನಯೀತ ತಮಧ್ಯಾಪಯೀತ' ಎಂಬುದನ್ನು ಮೂರನೆಯ ಸೂತ್ರದ ವಿಷಯವಾಕ್ಯವೆಂದು ಹೇಳಬೇಕು. ಆವಾಗ 'ತತ್'ಶಬ್ದದಿಂದ ಪ್ರಕೃತವಾದ ಉಪನಯನಸಂಸ್ಕಾರವನ್ನು ಪರಾಮರ್ಶ ಮಾಡಬಹುದು. ಆದರೆ 'ತಂ ಹ ಉಪನಿನ್ಯೇ' ಎಂಬ ವಾಕ್ಯದಿಂದ ಸಂಸ್ಕಾರವನ್ನು ಪರಾಮರ್ಶ ಮಾಡಲಾಗದು. ಕೇವಲ ಉಪನಯನವೆಂಬ ಸಂಸ್ಕಾರವನ್ನಷ್ಟೇ ಹೇಳಲಾಗಿದೆ. ಪರಾಮರ್ಶವನ್ನು ಹೇಳುವುದಾದರೂ ಹೇಗೆ ? ಆದ್ದರಿಂದ ಸೂತ್ರದಲ್ಲಿ 'ಪರಾಮರ್ಶಾತ್' ಎಂಬ ಪದಕ್ಕೆ ಅದ್ವೈತಮತದಲ್ಲಿ ಅರ್ಥವೇ ಇರುವುದಿಲ್ಲ.

'ತದಭಾವನಿರ್ಧಾರಣೇ ಚ ಪ್ರವೃತ್ತೇಃ' ಎಂಬುದು ನಾಲ್ಕನೆಯ ಸೂತ್ರ. 'ಪ್ರವೃತ್ತೇಃ' ಎಂಬುದಕ್ಕೆ ಸತ್ಯಕಾಮನು ಶೂದ್ರನಲ್ಲವೆಂದು ನಿರ್ಧರಿಸಿ, ಗೌತಮರು ಉಪನಯನದಲ್ಲಿ ಪ್ರವೃತ್ತಿ ಮಾಡಿದ್ದರಿಂದ ಎಂದರ್ಥ. ಇದರಿಂದಲೂ ಶೂದ್ರರಿಗೆ ವೇದವಿದ್ಯಾಧಿಕಾರವಿಲ್ಲವೆಂದು ಸಿದ್ಧವಾಗುತ್ತದೆನ್ನುತ್ತಾರೆ.

ಇದು ತಪ್ಪು. 'ನೈತದಬ್ರಾಹ್ಮಣೋ ವಿವಕ್ತುಮರ್ಹತಿ ಸಮಿಧಂ ಸೋಮ್ಯಹರೋಪತ್ವಾ ನೇಷ್ಯೇ' ಎಂಬುದನ್ನೇ ವಿಷಯವಾಕ್ಯವನ್ನಾಗಿ ನೀನೂ ಸಹ ಉದಾಹರಿಸುವ ವಾಕ್ಯದಲ್ಲಿ ಉಪನಯನದಲ್ಲಿ ಪ್ರವೃತ್ತಿಯೇ ನೇರವಾಗಿ ಕೇಳಿಸುತ್ತಿದೆ. ಹೀಗಿರುವಾಗ ಬ್ರಹ್ಮೋಪದೇಶದಲ್ಲಿ ಪ್ರವೃತ್ತಿ ಮಾಡುತ್ತಿರುವುದರಿಂದ ಉಪನಯನದಲ್ಲಿ ಬ್ರಾಹ್ಮಣರಿಗೆ ಮಾತ್ರ ಅಧಿಕಾರವೆಂದು ಸಾಧಿಸುವುದು ತಪ್ಪಾಗುತ್ತದೆ.

'ಶ್ರವಣಾಧ್ಯಯನಾರ್ಥಪ್ರತಿಷೇಧಾತ್ ಸ್ಮೃತೇಶ್ಚ' ಎಂಬುದು ಐದನೆಯ ಸೂತ್ರ. ಶೂದ್ರನಿಗೆ 'ಅಥಾಸ್ಯ ವೇದಂ' ಎಂಬ ಸ್ಮೃತಿಯು ಅಧ್ಯಯನಾದಿಗಳನ್ನು ನಿಷೇಧ ಮಾಡಿದೆ. ಆದ್ದರಿಂದಲೂ ವೇದಾಧ್ಯಯನ, ಅರ್ಥಜ್ಞಾನ ಇವುಗಳಲ್ಲಿ ಶೂದ್ರರಿಗೆ ಅಧಿಕಾರವಿರುವುದಿಲ್ಲ.

ಇದೂ ಸಹ ತಪ್ಪು. ಭಾಷ್ಯದಲ್ಲಿ ಹೇಳಿದಂತೆ ಶ್ರುತಿಯಿಂದಲೇ ಶೂದ್ರಾದಿಗಳಿಗೆ ಅಧಿಕಾರವಿಲ್ಲವೆಂದು ನಿಷೇಧ ಮಾಡಲು ಬರುವಾಗ ಸ್ಮೃತಿಯ ಮೂಲಕ ನಿಷೇಧವನ್ನು ಸಮರ್ಥಿಸುವುದು ಯುಕ್ತವಲ್ಲ. ಮತ್ತು 'ಸ್ಮೃತೇಶ್ಚ' ಎಂಬಲ್ಲಿರುವ 'ಚ' ಶಬ್ದಕ್ಕೆ 'ಪ್ರತಿಷೇಧಾತ್' ಎಂಬಲ್ಲಿ ನೀವು ಅನ್ವಯ ಮಾಡಬೇಕಾದ್ದರಿಂದ ಭಿನ್ನಕ್ರಮವನ್ನು ಹೇಳಿದಂತಾಗುತ್ತದೆ. ನಮ್ಮಲ್ಲಿ ಶ್ರುತಿಯ ಜೊತೆಗೆ ಸ್ಮೃತಿಯನ್ನೂ ಕೂಡ ಹೇಳಿದ್ದರಿಂದ ಭಿನ್ನಕ್ರಮತ್ವೇನ ಅನ್ವಯ ಮಾಡುವ ಅವಶ್ಯಕತೆಯಿಲ್ಲ. ಆದ್ದರಿಂದ ಪರಮತೀಯರು ಮಾಡುವ ಎಲ್ಲಾ ಸೂತ್ರ ವ್ಯಾಖ್ಯಾನಗಳು ಅತ್ಯಂತ ಅಸಾಧುವಾಗಿವೆ.

ಇಲ್ಲಿಗೆ ಅಪಶೂದ್ರಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಕಂಪನಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಕಂಪನಾಧಿಕರಣ

ಬ್ರಹ್ಮಸೂತ್ರ

।। अथ कम्पनाधिकरणम् ।।

'ಕಂಪನಾತ್' ಎಂಬ ಸೂತ್ರದ ವ್ಯಾಖ್ಯಾನ

ब्रह्मसूत्रम् – ।। कम्पनात् ।। ३९।।

ಸೂತಾರ್ಥ -- 'ಮಹದ್ಭಯಂ ವಜ್ರಮುದ್ಯತಂ' ಎಂಬಲ್ಲಿ ಶ್ರುತವಾದ 'ವಜ್ರ' ಶಬ್ದವು ಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತದೆ ಹೊರತು ಇಂದ್ರಾಯುಧವನ್ನಲ್ಲ. ಏಕೆಂದರೆ 'ಜಗತ್ಸರ್ವಂ ಪ್ರಾಣೇ ಏಜತಿ ನಿಃಸೃತಮ್' ಎಂಬುದಾಗಿ ಜಗಚ್ಚೇಷ್ಟಕತ್ವವೆಂಬ ಬ್ರಹ್ಮನ ಅಸಾಧಾರಣಧರ್ಮವನ್ನು ಹೇಳಿರುವುದರಿಂದ.

ಅರ್ಥ -- 'ಮಹದ್ಭಯಂ ವಜ್ರಮುದ್ಯತಂ' ಎಂಬಲ್ಲಿರುವ ವಜ್ರಶಬ್ದದಿಂದ ವಾಚ್ಯನಾದವನು ವಿಷ್ಣುವೇ ಹೊರತು ಇಂದ್ರಾಯುಧವಲ್ಲ. ಏಕೆಂದರೆ ಕಂಪನಾತ್ = ಸರ್ವಮೇಜತಿ ಎಂಬುದಾಗಿ 'ಕಂಪನ' ಶಬ್ದದಿಂದ ಸರ್ವಚೇಷ್ಟಕತ್ವವೆಂಬ ಲಿಂಗವು ಶ್ರುತವಾದ್ದರಿಂದ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಕಂಪನಾಧಿಕರಣವು ಸಮಾಪ್ತವಾಯಿತು ॥

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

'ವಜ್ರ' ಶಬ್ದ ಸಮನ್ವಯಕ್ಕಾಗಿ ಕಂಪನಾಧಿಕರಣ

ब्रह्मसूत्रभाष्यम् – यदिदं किञ्च जगत्सर्वं प्राण एजति निस्सृतम् । महद्भयं वज्रमुद्यतं य एतद्विदुरमृतास्ते भवन्ति (कठ. २-३-२.) इत्युद्यतवज्रज्ञानान्मोक्षः श्रूयते इति ।

ಅನುವಾದ – 'ಸಮಸ್ತ ಜಗತ್ತು ಯಾರಿಂದ ನಿರ್ಮಾಣವಾಗಿದೆಯೋ, ಅಂತಹ ಪ್ರಾಣನಿಗೂ ಕೂಡ ನಿಯಾಮಕವಾದ ಭಯಂಕರವಾದ ಉದ್ಯತವಾದ ವಜ್ರ. ಇದನ್ನು ತಿಳಿದವರು ಮುಕ್ತರಾಗುತ್ತಾರೆ' ಹೀಗೆ ಉದ್ಯತವಾದ ವಜ್ರದ ಜ್ಞಾನದಿಂದ ಮೋಕ್ಷವಾಗುತ್ತದೆಂದು ಕಾಠಕಶ್ರುತಿಯು ಹೇಳುತ್ತಿದೆ. ಅದಕ್ಕಾಗಿ ಸೂತ್ರಕಾರರು 'ಕಂಪನಾತ್' ಎಂಬ ಸೂತ್ರವನ್ನು ರಚನೆ ಮಾಡಿದ್ದಾರೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ 'ವಜ್ರ' ಎಂಬ ನಾಮಾತ್ಮಕ ಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಶ್ರುತ್ಯಾದಿಸಂಗತಿ ಹಾಗೂ ವಿಷಯಾದಿಗಳನ್ನು ಮೊದಲು ಸೂಚನೆ ಮಾಡುತ್ತಿದ್ದಾರೆ –

ಯದಿದಂ ಕಿಂಚ = ಕಣ್ಣಿಗೆ ಕಾಣಿಸುತ್ತಿರುವ ಯಾವ ಈ, ಜಗತ್ ಸರ್ವಂ = ಸಮಸ್ತ ಬ್ರಹ್ಮಾಂಡವು, ಪ್ರಾಣೇ = ಪ್ರಾಣನಿಂದ, ಏಜತಿ = ಚೇಷ್ಟೆಯನ್ನು ಹೊಂದಿದೆಯೋ, ಮತ್ತು, ನಿಃಸೃತಂ = ಪ್ರಾಣನಿಂದ ಹುಟ್ಟಿದೆಯೋ, ತತ್ = ಅಂತಹ, ಮಹದ್ ಭಯಂ = ಮಹಾಭಯಜನಕವಾದ, ಉದ್ಯತಂ = ಮೇಲಕ್ಕೆ ಎದ್ದಿರುವ, ವಜ್ರಂ = ವಜ್ರಾಯುಧವನ್ನು, ಯಃ = ಯಾರು, ವಿದುಃ = ತಿಳಿಯುತ್ತಾರೋ, ತೇ = ಅವರು, ಅಮೃತಾಃ = ಮುಕ್ತರು, ಭವಂತಿ = ಆಗುತ್ತಾರೆ, ಇತಿ = ಹೀಗೆ, ಉದ್ಯತವಜ್ರಜ್ಞಾನಾತ್ = ಎತ್ತಲ್ಪಟ್ಟ ವಜ್ರಾಯುಧದ ಜ್ಞಾನದಿಂದ, ಮೋಕ್ಷಃ = ಮೋಕ್ಷವು, ಶ್ರೂಯತೇ = ಶ್ರುತವಾಗಿದೆ. ಇತಿ = ಹೀಗೆ.

ಜಗಚ್ಚೇಷ್ಟಕನಾದ ಮಹಾವಿಷ್ಣುವೇ 'ವಜ್ರ' ; ಆಯುಧವಲ್ಲ

ಬ್ರಹ್ಮಸೂತ್ರಭಾಷ್ಯಮ್ – ಅತೋऽಬ್ರವೀತ್ –

।। ಕಮ್ಪನಾತ್ ।।೩೯।।

'ಏಜತಿ' ಇತಿ ಕಮ್ಪನವಚಾದ್ಯತವಜ್ರೋ ಭಗವಾನೇವ ।

ಅನುವಾದ - ಈ ಆಕ್ಷೇಪಕ್ಕೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ. ಶ್ರುತಿಯಲ್ಲಿ 'ಏಜತಿ' ಎಂಬುದಾಗಿ ಜಗತ್ತಿನ ಕಂಪನಕ್ಕೆ ಕಾರಣವನ್ನಾಗಿ ಹೇಳಲ್ಪಟ್ಟ 'ಉದ್ಯತ ವಜ್ರ' ಎಂದರೆ ಷಡ್ಗುಣೈಶ್ವರ್ಯಸಂಪನ್ನನಾದ ಮಹಾವಿಷ್ಣುವೇ ಆಗಿದ್ದಾನೆ.

ಪ್ರತಿಪದಾರ್ಥ -- ಸಿದ್ಧಾಂತವನ್ನು ಸಮರ್ಥಿಸುವ ಸೂತ್ರಕ್ಕೆ ಅವತಾರಿಕೆ ನೀಡಿ ವ್ಯಾಖ್ಯಾನ ಮಾಡುತ್ತಿದ್ದಾರೆ –

ಅತಃ = ಈ ಆಕ್ಷೇಪವು ಬರುತ್ತಿರಲು, ಅಬ್ರವೀತ್ = ಸೂತ್ರಕಾರರು ಉತ್ತರಿಸುತ್ತಿದ್ದಾರೆ, ಏಜತೀತಿ = ಶ್ರುತಿಯಲ್ಲಿ ಏಜತಿ ಎಂಬುದಾಗಿ, ಕಂಪನವಚನಾತ್ = ಜಗತ್ತಿನ ಕಂಪನವನ್ನು ಹೇಳಿದ್ದರಿಂದ, ಉದ್ಯತವಜ್ರಃ = ಎತ್ತಲ್ಪಟ್ಟ ವಜ್ರಾಯುಧವು, ಭಗವಾನೇವ = ಷಡ್ಗುಣೈಶ್ವರ್ಯ ಸಂಪನ್ನನಾದ ನಾರಾಯಣನೇ ಆಗಿದ್ದಾನೆ.

ಜಗಚ್ಚೇಷ್ಟಕತ್ವಲಿಂಗವು ನಿರವಕಾಶ

ಬ್ರಹ್ಮಸೂತ್ರಭಾಷ್ಯಮ್ – 'ಕೋ ಹ್ಯೇವಾನ್ಯಾತ್ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನನ್ದೋ ನ ಸ್ಯಾತ್''

(ತೈ. ೨-೭) ಇತಿ ಹಿ ಶ್ರುತಿಃ ।

ಅನುವಾದ - 'ಕೋ ಹ್ಯೇವಾನ್ಯಾತ್' ಎಂಬ ತೈತ್ತಿರೀಯ ಶ್ರುತಿಯು ವಿಷ್ಣುವೇ ಜಗತ್ತಿಗೆ ಪ್ರೇರಕನಾಗಿದ್ದಾನೆಂದು ಹೇಳುತ್ತಿದೆ.

ಪ್ರತಿಪದಾರ್ಥ -- ಶ್ರುತಿ ಹಾಗೂ ಲಿಂಗಗಳಿಂದ ಪೂರ್ವಪಕ್ಷ ಮಾಡಿದರೆ, ಕೇವಲ ಲಿಂಗದ ಬಲದಿಂದ ಹೇಗೆ ನಿರ್ಣಯವನ್ನು ಮಾಡುತ್ತೀರಿ? ಎಂದು ಪ್ರಶ್ನಿಸಬಾರದು. 'ಜಗಚ್ಚೇಷ್ಟಕತ್ವ' ಎಂಬ ಲಿಂಗವು ಎಷ್ಟುವಿನಲ್ಲಿ ನಿರವಕಾಶವಾಗಿದೆ ಎಂಬುದನ್ನು ಶ್ರುತಿಯಿಂದ ಸಮರ್ಥನೆ ಮಾಡುತ್ತಿದ್ದಾರೆ –

'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನ ಸ್ಯಾತ್' ಎಂಬುದಾಗಿ ತೈತ್ತಿರೀಯ ಶ್ರುತಿಯಲ್ಲಿ ವಿಷ್ಣುವೇ ಜಗತ್ತಿನ ಪ್ರೇರಕನೆಂದು ಹೇಳಲಾಗಿದೆ.

ಬೃಹದಾರಣ್ಯಕ ಶ್ರುತಿಯ ಆಧಾರ

ब्रह्मसूत्रभाष्यम् – 'प्राणस्य प्राणमुत चक्षुषश्चक्षुः' (बृ. ६-४-१८.) इति च

ಅನುವಾದ - 'ಪ್ರಾಣಸ್ಯ ಪ್ರಾಣಂ' ಎಂಬುದಾಗಿ ಬೃಹದಾರಣ್ಯಕ ಶ್ರುತಿಯು ಪ್ರಾಣನಿಗೂ ಕೂಡ ವಿಷ್ಣು ಪ್ರೇರಕನಾಗಿದ್ದಾನೆಂದು ಹೇಳುತ್ತಿದೆ.

ಪ್ರತಿಪದಾರ್ಥ -- ಸರ್ವಜಗಚ್ಚೇಷ್ಟಕತ್ವವು ವಿಷ್ಣುವಿನಲ್ಲಿ ಮಾತ್ರ ಇರುವಂತೆ ಸರ್ವಜಗತ್‌ಪ್ರವರ್ತಕರಾದ ಪ್ರಾಣದೇವರನ್ನೂ ಕೂಡ ಚೇಷ್ಟನೆ ಮಾಡುವಂಥ ಲಿಂಗವು ಕೇವಲ ವಿಷ್ಣುವಿನಲ್ಲೇ ಇದೆ ಎಂದು ಸಮರ್ಥಿಸಲು ಶ್ರುತಿಯನ್ನು ಪ್ರಮಾಣವನ್ನಾಗಿ ನೀಡುತ್ತಿದ್ದಾರೆ –

ಪ್ರಾಣಸ್ಯ = ಪ್ರಾಣದೇವರಿಗೆ, ಪ್ರಾಣಂ = ಚೇಷ್ಟಕನು, ಉತ = ಮತ್ತು, ಚಕ್ಷುಷಃ = ಚಕ್ಷುರಭಿಮಾನಿ ದೇವತೆಗಳಿಗೆ, ಚಕ್ಷುಃ = ದರ್ಶನಶಕ್ತಿಪ್ರದನು, ಇತಿ ಚ = ಹೀಗೆ ಬೃಹದಾರಣ್ಯಕೋಪನಿಷತ್ತು ಹೇಳುತ್ತಿದೆ.

ಕೈಮುತ್ಯನ್ಯಾಯದಿಂದ ಜಗಚ್ಚೇಷ್ಟಕತ್ವದ ಸಮರ್ಥನೆ

ब्रह्मसूत्रभाष्यम् – नभस्वतोऽपि सर्वास्त्युः चेष्टा भगवतो हरेः ।
किमुतान्यस्य जगतो यस्य चेष्टा नभस्वतः ।। इति च स्कान्दे ।

ಅನುವಾದ - ಯಾವ ವಾಯುದೇವರ ಕ್ರಿಯೆಯಿಂದ ಈ ಜಗತ್ತು ಕ್ರಿಯಾಶೀಲವಾಗಿದೆಯೋ, ಅಂತಹ ವಾಯುದೇವರ ಕ್ರಿಯೆಯೂ ಕೂಡ ಪರಮಾತ್ಮನ ಅಧೀನವಾಗಿದೆ. ಹೀಗಿರುವಾಗ, ಇತರರ ಕ್ರಿಯೆಗಳೆಲ್ಲವೂ ಹರಿಯ ಅಧೀನವೆಂದು ಪ್ರತ್ಯೇಕವಾಗಿ ಹೇಳಬೇಕೇನು? ಎಂದು ಸ್ಕಾಂದ ಪುರಾಣದ ಮಾತಿದೆ.

ಪ್ರತಿಪದಾರ್ಥ -- ಶ್ರುತ್ಯುಕ್ತವಾದ ಪ್ರಾಣಚೇಷ್ಟಕತ್ವವನ್ನು ಹೇತುವನ್ನಾಗಿ ಮಾಡಿಕೊಂಡು, ಸಕಲಜಗಚ್ಚೇಷ್ಟಕತ್ವವು ವಿಷ್ಣುವಿನಲ್ಲಿ ಸಿದ್ಧವಾಗುತ್ತಿದೆ ಎಂದು ಕೈಮುತ್ಯ ನ್ಯಾಯದಿಂದ ಸಿದ್ಧಮಾಡುತ್ತಿದ್ದಾರೆ.

ಭಗವತಃ = ಷಡ್ಗುಣೈಶ್ವರ್ಯಸಂಪನ್ನನಾದ, ಹರೇಃ = ವಿಷ್ಣುವಿನ ದೆಸೆಯಿಂದ, ನಭಸ್ವತೋಽಪಿ = ವಾಯುವಿಗೂ ಕೂಡ, ಸರ್ವಾಃ = ಸಕಲ ವಿಧವಾದ, ಚೇಷ್ಟಾಃ = ವ್ಯಾಪಾರಗಳು, ಸ್ಯುಃ = ನಡೆಯುತ್ತವೋ, ಮತ್ತು, ಅನ್ಯಸ್ಯ ಜಗತಃ = ಉಳಿದ ಜಗತ್ತಿಗೆ, ಅವನಿಂದಲೇ ಚೇಷ್ಟೆಯು ನಡೆಯುತ್ತದೆಂದು, ಕಿಮುತ = ಪ್ರತ್ಯೇಕ ಹೇಳಬೇಕೇನು? ಇತಿ ಚ = ಹೀಗೆ, ಸ್ಕಾಂದೇ = ಸ್ಕಾಂದ ಪುರಾಣದಲ್ಲಿ ಹೇಳಲಾಗಿದೆ.

ಚಕ್ರ, ಖಡ್ಗ ಇವುಗಳೆಲ್ಲವೂ ಶ್ರೀಹರಿಯೇ

ब्रह्मसूत्रभाष्यम् – चक्रं चङ्क्रमाणादेष वर्जनाद्वज्रमुच्यते । खण्डनात्खड्ग एवैष हेतिनामा स्वयं हरिः । इति ब्रह्मवैवर्ते ।।३९।।

।। इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये कम्पनाधिकरणम् ।। १० ।।

ಅನುವಾದ - ಶ್ರೀಹರಿಯು ಸಮಸ್ತ ಜೀವರನ್ನು ಸಂಸಾರಾವಸ್ಥೆಯಲ್ಲಿ ಚಕ್ರದಂತೆ ತಿರುಗಿಸುತ್ತಾನೆ. ಆದ್ದರಿಂದಲೇ ಅವನನ್ನು ಜ್ಞಾನಿಗಳು 'ಚಕ್ರ' ಎಂದು ಕರೆಯುತ್ತಾರೆ. ದೋಷದೂರನಾದ್ದರಿಂದ 'ವಜ್ರ' ಎಂದು ಕರೆಯುತ್ತಾರೆ. ದುಷ್ಟರನ್ನು ನಿರಾಕರಿಸುತ್ತಾನಾದ್ದರಿಂದ 'ಖಡ್ಗ' ಎಂದು ಕರೆಯುತ್ತಾರೆ. ಹೀಗೆ ಆಯುಧಗಳ ಹೆಸರುಗಳಿಂದ ಶ್ರೀಹರಿಯೇ ಪ್ರತಿಪಾದ್ಯನಾಗಿದ್ದಾನೆ.

ಪ್ರತಿಪದಾರ್ಥ -- ಉದ್ಯತತ್ವಲಿಂಗವು ವಿಷ್ಣುವಿನಲ್ಲಿ ಸಾವಕಾಶವಾದರೂ, ವಜ್ರಶ್ರುತಿಯು ನಿರವಕಾಶವಾದ್ದರಿಂದ, ಸ್ವಭಾವತಃ ಪ್ರಬಲವೂ ಆದ್ದರಿಂದ, ವಿಷ್ಣುವೇ ವಜ್ರನಾಗಿದ್ದಾನೆಂದು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ ವಜ್ರಶ್ರುತಿಯು ನಿರವಕಾಶವೇ ಆಗಿಲ್ಲವೆಂದು ಉತ್ತರಿಸುತ್ತಿದ್ದಾರೆ–

ಏಷಃ = ಈ ಪರಮಾತ್ಮನೇ, ಚಂಕ್ರಮಣಾತ್ = ಸಂಸಾರಾವಸ್ಥೆಯಲ್ಲಿರುವ ಜೀವರನ್ನು ತಿರುಗಿಸುವುದರಿಂದ, ಚಕ್ರಂ = ಚಕ್ರಶಬ್ದ ವಾಚ್ಯನು, ವರ್ಜನಾತ್ = ಸಕಲ ದೋಷವಿದೂರನಾದ, ವಜ್ರಃ = ವಜ್ರಶಬ್ದವಾಚ್ಯನು, ಖಂಡನಾತ್ = ಶತ್ರುಗಳನ್ನು ನಾಶ ಮಾಡುವ ಕಾರಣದಿಂದ, ಖಡ್ಗಃ = ಖಡ್ಗ ಶಬ್ದವಾಚ್ಯನು. ಏವೈಷ = ಇವನೇ,

ಹೇತಿನಾಮಾ = 'ಹೇತಿ' ಎಂಬ ಆಯುಧವಾಚಕ ಶಬ್ದದಿಂದಲೂ ಪ್ರತಿಪಾದ್ಯನು. ಇಂತಹ ಸ್ವಯಂ = ತಾನೇ, ಹರಿಃ = ಶ್ರೀಹರಿಯು, ಇತಿ = ಹೀಗೆ, ಬ್ರಹ್ಮವೈವರ್ತೇ = ಬ್ರಹ್ಮವೈವರ್ತಪುರಾಣದಲ್ಲಿ ಹೇಳಲಾಗಿದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಕಂಪನಾಧಿಕರಣವು ಸಮಾಪ್ತವಾಯಿತು ॥

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ
ಸತ್ತರ್ಕದೀಪಾವಳಿ

ವಜ್ರಾದಿ ಶಬ್ದಗಳು ಆಯುಧ ಪ್ರತಿಪಾದಕವಾದರೆ ಬಾಧಕ

सत्तर्कदीपावलिः – ।। कम्पनात् ।।

'ऊर्ध्वं प्राणमुन्नयति' इत्यत्र विष्णुः प्रतिपाद्यत इति यदुक्तम्, तद् दृढीकर्तुं तत्प्रकरणस्थं वाक्यमुदाहृत्य विचारयति – यदिदमित्यादिना ।। नात्र वज्रशब्दाभिधेयायुधविशेषः प्रतिपाद्यते । 'भयाद् अग्निस्तपति, भयात्तपति सूर्यः' इत्युत्तरवाक्यविरोधात् । 'भीषास्माद् वातः पवते' इत्यादौ विष्णुभयाद्धि सर्वकम्पनं श्रूयते । अतो दैत्यैर्दूरादेव वर्ज्यते, परिहियते, न सम्मुखीक्रियत इति वज्रशब्दाभिधेयो विष्णुरित्यनवद्यम् ।। ३९।।

।। इति सत्तर्कदीपावल्याम् कम्पनाधिकरणम् ।।

'ಊರ್ಧ್ವಂ ಪ್ರಾಣಮುನ್ನಯತಿ' ಎಂಬ ಶ್ರುತಿಯಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂದು ಹಿಂದೆ ಸಮರ್ಥಿಸಲಾಯಿತು. ಅದನ್ನು ಸ್ಪಷ್ಟಪಡಿಸುವುದಕ್ಕಾಗಿ ಅದೇ ಪ್ರಕರಣದಲ್ಲಿರುವ

ಭಗವತಃ = ಷಡ್ಗುಣೈಶ್ವರ್ಯಸಂಪನ್ನನಾದ, ಹರೇಃ = ವಿಷ್ಣುವಿನ ದೆಸೆಯಿಂದ, ನಭಸ್ವತೋಽಪಿ = ವಾಯುವಿಗೂ ಕೂಡ, ಸರ್ವಾಃ = ಸಕಲ ವಿಧವಾದ, ಚೇಷ್ಟಾಃ = ವ್ಯಾಪಾರಗಳು, ಸ್ಯುಃ = ನಡೆಯುತ್ತವೋ, ಮತ್ತು, ಅನ್ಯಸ್ಯ ಜಗತಃ = ಉಳಿದ ಜಗತ್ತಿಗೆ, ಅವನಿಂದಲೇ ಚೇಷ್ಟೆಯು ನಡೆಯುತ್ತದೆಂದು, ಕಿಮುತ = ಪ್ರತ್ಯೇಕ ಹೇಳಬೇಕೇನು? ಇತಿ ಚ = ಹೀಗೆ, ಸ್ಕಾಂದೇ = ಸ್ಕಾಂದ ಪುರಾಣದಲ್ಲಿ ಹೇಳಲಾಗಿದೆ.

ಚಕ್ರ, ಖಡ್ಗ ಇವುಗಳೆಲ್ಲವೂ ಶ್ರೀಹರಿಯೇ

ಬ್ರಹ್ಮಸೂತ್ರಭಾಷ್ಯಮ್ – चक्रं चङ्क्रमाणादेष वर्जनाद्वज्रमुच्यते । खण्डनात्खड्ग एवैष हेतिनामा स्वयं हरिः । इति ब्रह्मवैवर्ते ।।३९।।

।। इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये कम्पनाधिकरणम् ।। १० ।।

ಅನುವಾದ - ಶ್ರೀಹರಿಯು ಸಮಸ್ತ ಜೀವರನ್ನು ಸಂಸಾರಾವಸ್ಥೆಯಲ್ಲಿ ಚಕ್ರದಂತೆ ತಿರುಗಿಸುತ್ತಾನೆ. ಆದ್ದರಿಂದಲೇ ಅವನನ್ನು ಜ್ಞಾನಿಗಳು 'ಚಕ್ರ' ಎಂದು ಕರೆಯುತ್ತಾರೆ. ದೋಷದೂರನಾದ್ದರಿಂದ 'ವಜ್ರ' ಎಂದು ಕರೆಯುತ್ತಾರೆ. ದುಷ್ಟರನ್ನು ನಿರಾಕರಿಸುತ್ತಾನಾದ್ದರಿಂದ 'ಖಡ್ಗ' ಎಂದು ಕರೆಯುತ್ತಾರೆ. ಹೀಗೆ ಆಯುಧಗಳ ಹೆಸರುಗಳಿಂದ ಶ್ರೀಹರಿಯೇ ಪ್ರತಿಪಾದ್ಯನಾಗಿದ್ದಾನೆ.

ಪ್ರತಿಪದಾರ್ಥ -- ಉದ್ಯತತ್ವಲಿಂಗವು ವಿಷ್ಣುವಿನಲ್ಲಿ ಸಾವಕಾಶವಾದರೂ, ವಜ್ರಶ್ರುತಿಯು ನಿರವಕಾಶವಾದ್ದರಿಂದ, ಸ್ವಭಾವತಃ ಪ್ರಬಲವೂ ಆದ್ದರಿಂದ, ವಿಷ್ಣುವೇ ವಜ್ರನಾಗಿದ್ದಾನೆಂದು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ ವಜ್ರಶ್ರುತಿಯು ನಿರವಕಾಶವೇ ಆಗಿಲ್ಲವೆಂದು ಉತ್ತರಿಸುತ್ತಿದ್ದಾರೆ–

ಏಷಃ = ಈ ಪರಮಾತ್ಮನೇ, ಚಂಕ್ರಮಣಾತ್ = ಸಂಸಾರಾವಸ್ಥೆಯಲ್ಲಿರುವ ಜೀವರನ್ನು ತಿರುಗಿಸುವುದರಿಂದ, ಚಕ್ರಂ = ಚಕ್ರಶಬ್ದ ವಾಚ್ಯನು, ವರ್ಜನಾತ್ = ಸಕಲ ದೋಷವಿದೂರನಾದ, ವಜ್ರಃ = ವಜ್ರಶಬ್ದವಾಚ್ಯನು, ಖಂಡನಾತ್ = ಶತ್ರುಗಳನ್ನು ನಾಶ ಮಾಡುವ ಕಾರಣದಿಂದ, ಖಡ್ಗಃ = ಖಡ್ಗ ಶಬ್ದವಾಚ್ಯನು. ಏವೈಷ = ಇವನೇ,

ಹೇತಿನಾಮಾ = 'ಹೇತಿ' ಎಂಬ ಆಯುಧವಾಚಕ ಶಬ್ದದಿಂದಲೂ ಪ್ರತಿಪಾದ್ಯನು. ಇಂತಹ ಸ್ವಯಂ = ತಾನೇ, ಹರಿಃ = ಶ್ರೀಹರಿಯು, ಇತಿ = ಹೀಗೆ, ಬ್ರಹ್ಮವೈವರ್ತೇ = ಬ್ರಹ್ಮವೈವರ್ತಪುರಾಣದಲ್ಲಿ ಹೇಳಲಾಗಿದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಕಂಪನಾಧಿಕರಣವು ಸಮಾಪ್ತವಾಯಿತು ॥

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ
ಸತ್ತರ್ಕದೀಪಾವಳಿ

ವಜ್ರಾದಿ ಶಬ್ದಗಳು ಆಯುಧ ಪ್ರತಿಪಾದಕವಾದರೆ ಬಾಧಕ

सत्तर्कदीपावलिः – ।। कम्पनात् ।।

'ऊर्ध्वं प्राणमुन्नयति' इत्यत्र विष्णुः प्रतिपाद्यत इति यदुक्तम्, तद् दृढीकर्तुं तत्प्रकरणस्थं वाक्यमुदाहृत्य विचारयति – यदिदमित्यादिना ।। नात्र वज्रशब्दाभिधेयायुधविशेषः प्रतिपाद्यते । 'भयाद् अग्निस्तपति, भयात्तपति सूर्यः' इत्युत्तरवाक्यविरोधात् । 'भीषास्माद् वातः पवते' इत्यादौ विष्णुभयाद्धि सर्वकम्पनं श्रूयते । अतो दैत्यैर्दूरादेव वर्ज्यते, परिहियते, न सम्मुखीक्रियत इति वज्रशब्दाभिधेयो विष्णुरित्यनवद्यम् ।। ३९।।

।। इति सत्तर्कदीपावळ्याम् कम्पनाधिकरणम् ।।

'ಊರ್ಧ್ವಂ ಪ್ರಾಣಮುನ್ನಯತಿ' ಎಂಬ ಶ್ರುತಿಯಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂದು ಹಿಂದೆ ಸಮರ್ಥಿಸಲಾಯಿತು. ಅದನ್ನು ಸ್ಪಷ್ಟಪಡಿಸುವುದಕ್ಕಾಗಿ ಅದೇ ಪ್ರಕರಣದಲ್ಲಿರುವ

ವಾಕ್ಯವನ್ನು ಉದಾಹರಿಸಿ ಈ ಅಧಿಕರಣದಲ್ಲಿ ವಿಚಾರ ಮಾಡುತ್ತಿದ್ದಾರೆ, 'ಯದಿದಮ್' ಇತ್ಯಾದಿ ಭಾಷ್ಯದಿಂದ. 'ಯದಿದಂ ಕಿಂಚ' ಎಂಬ ಕಾಠಕೋಪನಿಷತ್ತಿನ ವಜ್ರಶಬ್ದವು ಆಯುಧವಿಶೇಷವನ್ನು ಪ್ರತಿಪಾದನೆ ಮಾಡುವುದಿಲ್ಲ. ಏಕೆಂದರೆ 'ಭಯಾದಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ' ಎಂಬುದಾಗಿ ಮುಂದಿನ ವಾಕ್ಯದ ವಿರೋಧ ಬರುತ್ತದೆ. ಏಕೆಂದರೆ, 'ಭೀಷಾಸ್ಮಾದ್ ವಾತಃ ಪವತೇ' ಇತ್ಯಾದಿ ಶ್ರುತಿಯಲ್ಲಿ ವಿಷ್ಣುವಿನ ಭಯದಿಂದಷ್ಟೇ ಎಲ್ಲರೂ ನಡಗುತ್ತಾರೆ ಎಂದು ಕೇಳಿಸುತ್ತಿದೆ. ಆದ್ದರಿಂದ, ದೈತ್ಯರಿಂದ ದೂರದಿಂದಲೇ ವರ್ಜ್ಯನಾಗಿದ್ದಾನೆ ಎನ್ನುವ ಕಾರಣದಿಂದ ವಜ್ರಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧವಾಗುತ್ತದೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಕಂಪನಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಯದಿದಿಂ ಕಿಂಚ ಎಂಬ ಶ್ರುತ್ಯರ್ಥ

तत्वप्रदीपः – यदिदं जगद्दृष्टं श्रुतं च तत्सर्वं प्राण एजति प्राणाधारं कम्पते । एजृ कम्पन इति धातोः । प्राणान्निस्सृतं च तदेतद्वज्रं ये विदुस्तेऽमृता भवन्ति । भाययतीति भयम् । कम्पनात् ।। सर्वजगतस्तदाधारकम्पनवचनाद्वज्रो विष्णुरेव । नत्वन्यस्य सर्वचेष्टकत्वं युक्तम् । नापि सदोद्यतत्वम् । चंक्रमयतीति चक्रम् ।।

।। इति कम्पनाधिकरणम् ।।

'ಯದಿದಂ ಕಿಂಚ' ಇತ್ಯಾದಿ ಶ್ರುತಿಯ ಅರ್ಥ ಹೀಗಿದೆ - ಯದಿದಂ ಕಿಂಚ = ಕಣ್ಣಿಗೆ ಕಾಣಿಸುತ್ತಿರುವ ಮತ್ತು ಶ್ರುತವಾದ, ಸರ್ವಂ = ಆ ಜಗತ್ತೆಲ್ಲವೂ, ಪ್ರಾಣೇ ಏಜತಿ = ಪ್ರಾಣನಿಂದಲೇ ಹೆದರಿ ನಡೆಯುತ್ತಿದೆ. 'ಏಜತಿ' ಎಂಬುದು 'ಏಜೃ ಕಂಪನೇ' ಎಂಬ ಧಾತುವಿನಿಂದ ನಿಷ್ಪನ್ನವಾದ್ದರಿಂದ ಈ ಅರ್ಥ ದೊರೆಯುತ್ತದೆ. 'ನಿಸೃತಂ' = ಪ್ರಾಣನಿಂದಲೇ ಸೃಷ್ಟವಾಗಿದೆ. ಯಃ = ಯಾರು, ಏತತ್ = ಯಾವ ಇದನ್ನು, ಮಹಾಜ್ಞೇಯಂ = ಮಹಾಭಯಂಕರವಾದ, ಉದ್ಯತಂ = ಕ್ರಿಯಾಶೀಲವಾದ, ವಜ್ರಂ = ವಜ್ರವನ್ನು, ವಿದುಃ = ತಿಳಿಯುತ್ತಾರೋ, ತೇ = ಅವರು, ಅಮೃತಾಃ ಭವಂತಿ = ಮುಕ್ತರಾಗುತ್ತಾರೆ. ಇಷ್ಟು ಶ್ರುತ್ಯರ್ಥ.

ಈ ಶ್ರುತಿಯಲ್ಲಿರುವ 'ಭಯಂ' ಎಂಬ ಪದಕ್ಕೆ 'ಭಾಯಯತೀತಿ' ಎಂಬ ನಿಷ್ಪತ್ತಿಯಂತೆ ಭಯವನ್ನು ಉಂಟುಮಾಡುತ್ತದೋ ಎಂಬರ್ಥವನ್ನು ತಿಳಿಯಬೇಕು. ಸಮಸ್ತ ಜಗತ್ತು ಯಾರ ಆಧಾರದಲ್ಲಿ ಚೇಷ್ಟೆಯುಳ್ಳದ್ದೆಂದು ಶ್ರುತಿಯು ಹೇಳುತ್ತಿದೆಯೋ, ಆ ಶ್ರುತಿಯ ಮಾತಿನಂತೆ ವಜ್ರಶಬ್ದವು ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತದೆ. ಏಕೆಂದರೆ ವಿಷ್ಣುವನ್ನು ಬಿಟ್ಟು ಇತರರಿಗೆ ಸರ್ವಚೇಷ್ಟಕತ್ವವು ಯುಕ್ತವಾಗುವುದಿಲ್ಲ. ಮತ್ತು ವಜ್ರಾಯುಧದಲ್ಲಿಯೂ ಸದಾ ಕ್ರಿಯಾಶೀಲತ್ವವು ಇರುವುದಿಲ್ಲ.

ಬ್ರಹ್ಮವೈವರ್ತದ ಶ್ಲೋಕದಲ್ಲಿರುವ 'ಚಕ್ರಂ' ಎಂಬ ಪದಕ್ಕೆ 'ಚಂಕ್ರಮಯತೀತಿ ಚಕ್ರಂ' ಎಂಬ ಪದದ ನಿಷ್ಪತ್ತಿಯಂತೆ ಸಂಸಾರ ಚಕ್ರದಲ್ಲಿ ತಿರುಗಿಸುವುದರಿಂದ ಶ್ರೀಹರಿಗೆ 'ಚಕ್ರ' ಎಂದು ಹೆಸರು.

ವಿಶೇಷವಿಚಾರ -

ಊರ್ಧ್ವಮೂಲೋಽವಾಕ್‌ಶಾಖಃ ವಿಷ್ಣೋಽಶ್ವತ್ಥಃ ಸನಾತನಃ। ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯತೇ। ತಸ್ಮಿನ್ ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ ॥ ಏತದ್ವೈ ತತ್ ॥೧॥

ಜಗತ್ತು ಎಂಬ ವೃಕ್ಷಕ್ಕೆ ಸರ್ವೋತ್ತಮನಾದ ಭಗವಂತನು ಭೂಮಿಯಂತೆ ಆಶ್ರಯನಾಗಿದ್ದಾನೆ. ಉಳಿದ ಸಾಮಾನ್ಯ ದೇವತೆಗಳು ಶಾಖೆಗಳಾಗಿದ್ದಾರೆ. ಶೀಘ್ರ ಗಮನಶಕ್ತಿಯುಳ್ಳ ಭಗವಂತನು ಈ ವೃಕ್ಷದಲ್ಲೆಲ್ಲಾ ವ್ಯಾಪಿಸಿದ್ದಾನೆ. ಅವನಿಗೆ ಇದು ಪ್ರಳಯಕಾಲದಲ್ಲಿ ಆಹಾರವಾಗುತ್ತದೆ. ಆದರೂ ಪ್ರವಾಹತಃ ಅನಾದಿನಿತ್ಯವಾಗಿದೆ.

ಹೀಗೆ ಸಮಸ್ತ ಪ್ರಪಂಚಕ್ಕೆ ಮೂಲಾಧಾರನಾದ ಭಗವಂತನು ದುಃಖರಹಿತನಾಗಿದ್ದಾನೆ. ಗುಣಪೂರ್ಣನಾಗಿದ್ದಾನೆ, ನಿತ್ಯಮುಕ್ತನಾಗಿದ್ದಾನೆ ಎಂದು ಬಲ್ಲವರು ಹೇಳುತ್ತಾರೆ. ಆ ಭಗವಂತನಲ್ಲಿಯೇ ಎಲ್ಲ ಲೋಕಗಳೂ ಆಶ್ರಯವನ್ನು ಪಡೆದಿವೆ. ಯಾರೂ ಕೂಡ ಹಿರಿತನದಲ್ಲಿ ಭಗವಂತನನ್ನು ಮೀರುವುದಿಲ್ಲ. ನಚಿಕೇತನೇ ನೀನು ಕೇಳಿದ ಭಗವಂತನ ಸ್ವರೂಪವು ಇದೇ ಆಗಿದೆ.

ಯದಿದಂ ಕಿಂಚ ಜಗತ್ ಸರ್ವಂ ಪ್ರಾಣ ಏಜತಿ ನಿಃಸೃತಮ್ । ಮಹದ್ ಭಯಂ ವಜ್ರಮುದ್ಯತಂ ಯ ಏತದ್ವಿದುರಮೃತಾಸ್ತೇ ಭವಂತಿ ॥೨॥

ಈ ಎಲ್ಲ ಜಗತ್ತು ಸರ್ವಪ್ರೇರಕನಾದ ಭಗವಂತನಿಂದ ಹುಟ್ಟಿದೆ. ಸ್ವಕರ್ತವ್ಯಾನುಷ್ಠಾನ ಮಾಡದಿದ್ದರೆ ಅವನಿಂದ ಭಯ ಆಗುತ್ತದೆ, ಕರ್ತವ್ಯ ಮಾಡದವರಿಗೆ ಅವನು ಮೇಲೆತ್ತಿದ ವಜ್ರಾಯುಧದಂತೆ ಮಹಾಭಯಂಕರನಾಗಿರುತ್ತಾನೆ. ಅವನ ಈ ಮಹಿಮೆಯನ್ನು ಯಾರು ತಿಳಿಯುತ್ತಾರೋ ಅವರು ಮುಕ್ತರಾಗುತ್ತಾರೆ.

ಪ್ರಾಣಾಖ್ಯೇ ತು ಹರೌ ಸರ್ವಂ ಏಜತ್ಯಸ್ಮಾತ್ತು ನಿಃಸೃತಂ ।
ವಜ್ರವದ್ ಭಯದಂ ಚೈವ ಸ್ವಧರ್ಮಸ್ಯಾತಿಲಂಘನೇ ॥

ಸರ್ವಪ್ರೇರಕನಾದುದರಿಂದ ಪ್ರಾಣನೆನಿಸಿರುವ ಹರಿಯಿಂದಲೇ ಜಗತ್ತು ಹುಟ್ಟಿದೆ ಮತ್ತು ಕರ್ತವ್ಯವನ್ನಾಚರಿಸದಿದ್ದರೆ ಅವನಿಂದಲೇ ಭಯ ಹೊಂದುತ್ತದೆ. ಮುಖ್ಯಪ್ರಾಣನಿಂದಲೂ ಅಲ್ಲ. ಆ ಹರಿಯೆ ತಮ್ಮ ಕರ್ತವ್ಯಧರ್ಮವನ್ನು ಉಲ್ಲಂಘಿಸುವವರಿಗೆ ವಜ್ರಾಯುಧದಂತೆ ಭಯಂಕರನಾಗಿದ್ದಾನೆ, ಅವನನ್ನು ಅರಿಯುವವರು ಮುಕ್ತರಾಗುತ್ತಾರೆ ಎಂದು ಮಂತ್ರದಲ್ಲಿ ಹೇಳಿದೆ. ಆದ್ದರಿಂದ ಮಂತ್ರದಲ್ಲಿ ಮಹಾಭಯಂಕರವಾದ ವಜ್ರವೆಂದರೆ ಇಂದ್ರನ ವಜ್ರಾಯುಧವಲ್ಲ, ವಜ್ರಾಯುಧದಂತೆ ಮಹಾಭಯಂಕರನಾದ ಶ್ರೀಹರಿ ಎಂದೇ ಅರ್ಥ.

ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ ।
ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ॥೩॥

ಭಗವಂತನ ಭಯದಿಂದಲೇ ಅಗ್ನಿಯು ಸುಡುತ್ತಾನೆ. ಭಗವಂತನ ಭಯದಿಂದಲೇ ಸೂರ್ಯನು ಜಗತ್ತಿಗೆ ಪ್ರಕಾಶಕನಾಗಿದ್ದಾನೆ. ಭಗವಂತನ ಭಯದಿಂದಲೇ ಇಂದ್ರನು ಮಳೆಗರೆಯುತ್ತಾನೆ. ಭಗವಂತನ ಭಯದಿಂದಲೇ ವಾಯು ಮತ್ತು ಐದನೆಯವನಾದ ಯಮನು ತನ್ನ ಕರ್ತವ್ಯದಲ್ಲಿ ನಿರತನಾಗಿದ್ದಾನೆ.

ಇಹ ಚೇದಶಕದ್ಬೋದ್ಧುಂ ಪ್ರಾಕ್ ಶರೀರಸ್ಯ ವಿಸ್ರಸಃ ।
ತತಃ ಸರ್ಗೇಷು ಲೋಕೇಷು ಶರೀರತ್ವಾಯ ಕಲ್ಪತೇ ॥೪॥

ಈ ಶರೀರವು ಪತನವಾಗುವುದಕ್ಕಿಂತ ಮುಂಚಿತವಾಗಿ, ಅಂದರೆ ಈ ಮನುಷ್ಯ ಜನ್ಮದಲ್ಲಿಯೇ ಯಾರು ಭಗವಂತನನ್ನು ತಿಳಿಯಲು ಸಮರ್ಥನಾಗುತ್ತಾನೆಯೋ ಅವನು ವೈಕುಂಠಾದಿ ಲೋಕಗಳಲ್ಲ ಚಿದಾನಂದಾತ್ಮಕವಾದ ಶರೀರವನ್ನು ಹೊಂದುತ್ತಾನೆ.

ಮನುಷ್ಯ ಜನ್ಮದಲ್ಲಿ ಮಾತ್ರ ಭಗವಂತನನ್ನು ತಿಳಿಯಲು ಸಾಧ್ಯ. ಅದನ್ನು ವ್ಯರ್ಥಗೊಳಿಸಬಾರದು. ಆದ್ದರಿಂದ ಚಿಕ್ಕವಯಸ್ಸಿನಲ್ಲಿಯೇ ನಚಿಕೇತನು ಭಗವಂತನ ಜ್ಞಾನವನ್ನು ಪಡೆದಿರುವುದನ್ನು ಕಂಡು, ಇತರರೂ ಈ ಶರೀರವು ಇರುವಾಗಲೇ ಪ್ರಯತ್ನಪೂರ್ವಕವಾಗಿ ಭಗವಂತನನ್ನು ತಿಳಿಯಲು ಪ್ರಯತ್ನಿಸಬೇಕು ಎಂಬುದನ್ನು ತಿಳಿಸಲು ಈ ಮಂತ್ರದಲ್ಲಿ, ಭಗವಂತನನ್ನು ತಿಳಿದವನಿಗೆ ಫಲವನ್ನು ವಿವರಿಸಲಾಗಿದೆ. ಸ್ವರ್ಗೇಷು ಲೋಕೇಷು ಎಂಬಲ್ಲಿ ಸ್ವರ್ಗವೆಂದರೆ, ಸ್ವ-ಸ್ವರೂಪಭೂತವಾದ, ರ-ಸುಖ, ಗ-ಜ್ಞಾನಗಳು ವ್ಯಕ್ತವಾಗುವ ವೈಕುಂಠ, ಅನಂತಾಸನ, ಶ್ವೇತದ್ವೀಪ ಮೊದಲಾದ ಲೋಕಗಳು ಎಂದು ಅರ್ಥ.

> ಯಥಾऽऽದರ್ಶೇ ತಥಾऽऽತ್ಮನಿ ಯಥಾ ಸ್ವಪ್ನೇ ತಥಾ ಪಿತೃಲೋಕೇ । ಯಥಾऽಪ್ಸು ಪರೀವ ದೃಶ್ಯತೇ ತಥಾ ಗಂಧರ್ವಲೋಕೇ । ಛಾಯಾತಪಯೋರಿವ ಬ್ರಹ್ಮಲೋಕೇ ॥೫॥

ಕನ್ನಡಿಯಲ್ಲಿ ಮುಖವು ಹೇಗೆ ಸ್ಪಷ್ಟವಾಗಿ ಕಾಣುತ್ತದೆಯೋ ಹಾಗೆ, ಋಷಿಗಳಿಗೆ ಆತ್ಮನಲ್ಲಿ ಅಂತರ್ಯಾಮಿಯಾಗಿರುವ ಭಗವಂತನು ಸ್ಪಷ್ಟವಾಗಿ ಕಾಣುತ್ತಾನೆ. ಸ್ವಪ್ನದಲ್ಲಿ ಪದಾರ್ಥಗಳು ಹೇಗೆ ಅಸ್ಪಷ್ಟವಾಗಿ ಕಾಣಿಸುತ್ತವೆಯೋ ಹಾಗೆ, ಪಿತೃಲೋಕದಲ್ಲಿರುವ ಭಗವಂತನು ಅಸ್ಪಷ್ಟವಾಗಿ ಕಾಣುತ್ತಾನೆ. ನೀರಿನಲ್ಲಿ ಬಿದ್ದಿರುವ ಪ್ರತಿಬಿಂಬವು ಹೇಗೆ ಸ್ವಪ್ನ ಪದಾರ್ಥಕ್ಕಿಂತಲೂ ಸ್ವಲ್ಪ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆಯೋ ಅದರಂತೆ ಗಂಧರ್ವಲೋಕದಲ್ಲಿರುವ ಭಗವಂತನು ಪಿತೃಲೋಕದಲ್ಲಿರುವ ಭಗವಂತನಿಗಿಂತ ಸ್ವಲ್ಪ ಸ್ಪಷ್ಟವಾಗಿ ಕಾಣಿಸುತ್ತಾನೆ. ಬ್ರಹ್ಮಲೋಕದಲ್ಲಿರುವ ಭಗವಂತನು ನೆರಳು ಮತ್ತು ಬಿಸಿಲು ಜೊತೆಗೆ ಸೇರುವಲ್ಲಿ ಪದಾರ್ಥವು ಹೇಗೆ ಸ್ಪಷ್ಟವಾಗಿ ಕಾಣಿಸುತ್ತದೆಯೋ ಅದರಂತೆ ಸ್ಪಷ್ಟವಾಗಿ ಕಾಣಿಸುತ್ತಾನೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ತ್ವಪ್ರದೀಪದಲ್ಲಿ
ಕಂಪನಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ವಜ್ರಶಬ್ದವು ಆಯುಧ ಪ್ರತಿಪಾದಕವೇ ?

तत्वप्रकाशिका – ।। कम्पनात् ।।

अत्र लोकप्रसिद्ध्या भगवल्लिङ्गेन च साधारणवज्रनाम्नो हरौ समन्वयप्रतिपादनादस्ति शास्त्रादिसङ्गतिः । श्रुत्यादिसङ्गतिं विषयादिकं च सूचयति – यदिदमिति ।।

ಈ ಅಧಿಕರಣದಲ್ಲಿ ವಜ್ರಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. ಲೋಕಪ್ರಸಿದ್ಧಿಯಿಂದ ಆಯುಧವಿಶೇಷವನ್ನು ಪ್ರತಿಪಾದನೆ ಮಾಡಿದರೆ, ಮೋಕ್ಷಸಾಧನಜ್ಞಾನ-ವಿಷಯತ್ವವೆಂಬ ಧರ್ಮದಿಂದ ಪರಮಾತ್ಮನ ಲಿಂಗವೂ ಆಗಿದೆ. ಹೀಗೆ, ಉಭಯಸಾಧಾರಣವಾದ ವಜ್ರಶಬ್ದವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡುವುದರಿಂದ ಶಾಸ್ತ್ರಸಂಗತಿ-ಅಧ್ಯಾಯಸಂಗತಿ-ಪಾದಸಂಗತಿಗಳು ಇರುತ್ತವೆಂದು ತಿಳಿಯಬೇಕು. ಶ್ರುತಿಸಂಗತಿ-ಅಧಿಕರಣಸಂಗತಿ ಹಾಗೂ ವಿಷಯಾದಿಗಳನ್ನು 'ಯದಿದಮ್' ಇತ್ಯಾದಿ ಭಾಷ್ಯದಿಂದ ಸೂಚನೆ ಮಾಡುತ್ತಿದ್ದಾರೆ.

ವಜ್ರಜ್ಞಾನದಿಂದ ಮೋಕ್ಷ

तत्वप्रकाशिका – 'तमेवं विद्वान्' इत्यादौ भगवज्ज्ञानादेव मोक्ष इत्युक्तम् । काठके तु 'यदिदं किञ्च' इति वज्रज्ञानान्मोक्षः श्रूयते ।

'ತಮೇವಂ ವಿದ್ವಾನ್' ಇತ್ಯಾದಿ ಶ್ರುತಿಯಲ್ಲಿ ಭಗವಂತನ ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಹೇಳಲಾಗಿದೆ. ಆದರೆ, ಕಾಠಕೋಪನಿಷತ್ತಿನಲ್ಲಿ 'ಯದಿದಂ ಕಿಂಚ' ಇತ್ಯಾದಿಯಾಗಿ ವಜ್ರಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳಲಾಗಿದೆ.

ವಜ್ರ ಶಬ್ದವೇ ಅಧಿಕರಣದ ವಿಷಯ

तत्वप्रकाशिका – तस्यच विष्णोरन्यत्वेऽन्यज्ञानान्मो क्षोपपत्तेरवश्यं निर्णेयत्वम् । स वज्रोऽत्र विषयः ।

ಆ ವಜ್ರನು ವಿಷ್ಣುವಿಗಿಂತ ಬೇರೆಯಾದರೆ ಅನ್ಯಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಒಪ್ಪಬೇಕು. ಆದ್ದರಿಂದ ಅವಶ್ಯವಾಗಿ ವಜ್ರಶಬ್ದಪ್ರತಿಪಾದ್ಯರು ಯಾರು? ಎಂಬುದನ್ನು ನಿರ್ಣಯಿಸಬೇಕು. ಹಾಗಾಗಿ ವಜ್ರಶಬ್ದವೇ ಈ ಅಧಿಕರಣದ ವಿಷಯವಾಗಿದೆ.

'ವಜ್ರ' ಎಂದರೆ ವಿಷ್ಣುವೋ ? ಇಂದ್ರಾಯುಧವೋ ?

तत्वप्रकाशिका – किं विष्णुरिन्द्रायुधं वेति सन्देहः । उक्तसाधारण्यं सन्देहबीजम् । इन्द्रायुधमेवेदं वज्रमिति पूर्वः पक्षः ।

ವಜ್ರವೆಂದರೆ ವಿಷ್ಣುವೋ, ಅಥವಾ ಇಂದ್ರಾಯುಧವೋ? ಎಂಬುದು ಸಂದೇಹ. ಉಭಯತ್ರ ಪ್ರಸಿದ್ಧಿಯಿರುವುದೇ ಸಂಶಯಬೀಜ. ವಜ್ರಶಬ್ದವಾಚ್ಯವಾದದ್ದು ಇಂದ್ರಾಯುಧವೆಂದು ಪೂರ್ವಪಕ್ಷ.

ವಜ್ರ ಎಂದರೆ ಇಂದ್ರಾಯುಧ

तत्वप्रकाशिका – वज्रश्रुतेस्तत्ररूढत्वात्, उद्यतत्वलिङ्गाच्च । तद्धि आयुध एवोपपद्यते ।

ವಜ್ರಶಬ್ದವು ಇಂದ್ರಾಯುಧದಲ್ಲಿ ರೂಢವಾಗಿದೆ. ಮತ್ತು ಉದ್ಯತತ್ವವೆಂಬ ಲಿಂಗವೂ ಸಹ ಇಂದ್ರಾಯುಧದಲ್ಲಿ ಯುಕ್ತವಾಗುತ್ತದೆ. ಆದ್ದರಿಂದ ಇಂದ್ರಾಯುಧವೇ ವಜ್ರಶಬ್ದಪ್ರತಿಪಾದ್ಯ.

ಶ್ರುತಿಲಿಂಗಗಳ ಆಧಾರ

तत्वप्रकाशिका – नच वज्रज्ञानेन मोक्षाक्तेर्विष्णुरिति वाच्यम् । लिङ्गमात्रात् श्रुतिलिङ्गयोः प्राबल्यात् ।

ಈ ಶ್ರುತಿಯಲ್ಲಿ ವಜ್ರಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳಲಾಗಿದೆ. ಆದ್ದರಿಂದ ವಿಷ್ಣುವನ್ನು ವಜ್ರಶಬ್ದಪ್ರತಿಪಾದ್ಯನೆಂದು ಹೇಳಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಮೋಕ್ಷಸಾಧನಜ್ಞಾನವಿಷಯತ್ವವೆಂಬ ಕೇವಲ ಒಂದು ಲಿಂಗಕ್ಕಿಂತ ಶ್ರುತಿಲಿಂಗಗಳೆರಡೂ ಇರುವುದರಿಂದ ಇದೇ ಪ್ರಬಲವಾಗುತ್ತದೆ. ಆದ್ದರಿಂದ ವಜ್ರಾಯುಧವೇ ವಜ್ರಶಬ್ದ-ಪ್ರತಿಪಾದ್ಯವೆಂದು ಹೇಳಬೇಕು.

ಇವುಗಳು ನಿರವಕಾಶ

तत्वप्रकाशिका – नच लिङ्गस्य निरवकाशतया प्राबल्यम् । श्रुतिलिङ्गयोरपि तथात्वात् ।

ಇನ್ನು ಮೋಕ್ಷಸಾಧನಜ್ಞಾನವಿಷಯತ್ವವೆಂಬ ಲಿಂಗವು ನಿರವಕಾಶವಾದ್ದರಿಂದ ಶ್ರುತಿಲಿಂಗ-ಗಳಿಗಿಂತಲೂ ಪ್ರಬಲವಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಶ್ರುತಿಲಿಂಗಗಳೆರಡೂ ಕೂಡ ನಿರವಕಾಶವೇ ಆಗಿವೆ.

ಪೂರ್ವಪಕ್ಷದ ಒಟ್ಟು ಅಭಿಪ್ರಾಯ

तत्वप्रकाशिका – अतो वज्रमिन्द्रायुधमेवेति न विष्णुज्ञानादेव मोक्ष इति भावः ।

ಆದ್ದರಿಂದ ವಜ್ರವೆಂದರೆ ಇಂದ್ರಾಯುಧವೆಂದೇ ಹೇಳಬೇಕು. ವಿಷ್ಣುಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಹೇಳಿದ್ದು ತಪ್ಪಾಗುತ್ತದೆ. ಇಷ್ಟು ಪೂರ್ವಪಕ್ಷದ ಅಭಿಪ್ರಾಯ.

ಶ್ರುತಿಯ ಅಭಿಪ್ರಾಯ

तत्वप्रकाशिका – यत्किञ्च सर्वं जगत्प्राणे स्थितं प्राणान्निःसृतं तदिदं जगद्यस्मादेजति यत्प्रेरणया चेष्टते तत् महद्भयङ्करं वज्रं ये विदुस्तेऽमृता भवन्तीत्यर्थः।

ಶ್ರುತ್ಯರ್ಥ ಹೀಗಿದೆ - ಯಾವ ಈ ಜಗತ್ತು ಪ್ರಾಣನಲ್ಲೇ ಇರುತ್ತದೋ, ಪ್ರಾಣನಿಂದಲೇ ಉತ್ಪನ್ನವಾಗುತ್ತದೋ, ಅಂತಹ ಸಕಲ ವಿಶ್ವವೂ ಯಾರ ಪ್ರೇರಣೆಯಿಂದ ವ್ಯಾಪಾರ ಮಾಡುತ್ತದೋ, ಅಂತಹ ಮಹಾಭಯಂಕರವಾದ ವಜ್ರವನ್ನು ಯಾರು ತಿಳಿಯುತ್ತಾರೋ, ಅವರು ಮುಕ್ತರಾಗುತ್ತಾರೆ ಎಂದು.

ಜಗಚ್ಚೇಷ್ಟಕನೇ ವಜ್ರ

तत्वप्रकाशिका – प्राणः सर्वमिदं किञ्च जगच्च यस्मान्निःसृतं चेष्टते चेति वा । सर्वं जगद्यस्मान्निःसृतं स प्राणो यस्माच्चेष्टत इति वा ।

ಅಥವಾ ಪ್ರಾಣ ಮತ್ತು ಪ್ರಪಂಚವು ಯಾರಿಂದ ಹುಟ್ಟಿದೆಯೋ, ಮತ್ತು ಚೇಷ್ಟೆ ಮಾಡುತ್ತದೆಯೋ ಎಂದರ್ಥ. ಅಥವಾ ಸಕಲ ಜಗತ್ತು ಯಾರಿಂದ ಹುಟ್ಟಿತೋ, ಆ ಪ್ರಾಣನು ಯಾರಿಂದ ವ್ಯಾಪಾರ ಮಾಡುತ್ತಾನೋ, ಎಂದೂ ಸಹ ಅರ್ಥೈಸಬಹುದು.

ಉದ್ಯತತ್ವಲಿಂಗದ ವಿರೋಧ

तत्वप्रकाशिका – सिद्धान्तयत्सूत्रमतार्थं व्याचष्टे – अत इति ।। अयं वज्रो भगवानेव । वज्रस्य सर्वजगच्चेष्टकत्वश्रवणात् । न चोद्यतत्वलिङ्गविरोधः। उद्यमित्वार्थतयोपपत्तेरिति भावः ।

ಸಿದ್ಧಾಂತ ಸ್ಥಾಪನೆ ಮಾಡುವ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅತಃ' ಇತ್ಯಾದಿಯಾಗಿ. ಶ್ರುತಿಯಲ್ಲಿರುವ ವಜ್ರಶಬ್ದದಿಂದ ಭಗವಂತನೇ ಪ್ರತಿಪಾದ್ಯನು. ಏಕೆಂದರೆ, ಸರ್ವಜಗಚ್ಚೇಷ್ಟಕತ್ವವೆಂಬ ಧರ್ಮವು ವಜ್ರನಲ್ಲಿ ಶ್ರುತವಾಗಿದೆ. ವಜ್ರಶಬ್ದಕ್ಕೆ ವಿಷ್ಣುವೆಂಬರ್ಥವನ್ನು ಮಾಡಿದರೆ, ಉದ್ಯತತ್ವವೆಂಬ ಲಿಂಗದ ವಿರೋಧ ಬರುತ್ತದೆಂದು ಹೇಳಬಾರದು. 'ಉದ್ಯಮಿತ್ವ' ಉತ್ಕೃಷ್ಟವಾದ ಪ್ರಯತ್ನಶೀಲತೆ ಎಂಬರ್ಥದಿಂದ ಉದ್ಯತತ್ವವು ಶ್ರೀಹರಿಯಲ್ಲಿ ಉಪಪನ್ನವಾಗುತ್ತದೆ ಎಂದರ್ಥ.

ಲಿಂಗಮಾತ್ರವು ನಿಶ್ಚಾಯಕವಲ್ಲ

तत्वप्रकाशिका – लिङ्गमात्रेण कथमयं निश्चयः । लिङ्गस्य निरवकाशत्वादेवेत्याह – को हीति ।।

'ಮೋಕ್ಷಸಾಧನಜ್ಞಾನಾಶ್ರಯತ್ವ' ಎಂಬ ಕೇವಲ ಲಿಂಗದಿಂದ ವಜ್ರಶಬ್ದಕ್ಕೆ ವಿಷ್ಣುವೆಂದು ನಿಶ್ಚಯಿಸುವುದು ಹೇಗೆ? ಎಂದರೆ, ಲಿಂಗವು ನಿರವಕಾಶವಾಗಿರುವುದರಿಂದ ಎಂಬಭಿಪ್ರಾಯದಿಂದ 'ಕೋ ಹಿ' ಎಂಬ ಪ್ರಮಾಣವನ್ನು ಉಲ್ಲೇಖಿಸುತ್ತಿದ್ದಾರೆ.

ಸರ್ವಪ್ರವರ್ತಕತ್ವಪ್ರಾಣಚೇಷ್ಟಕತ್ವಗಳು ವಿಷ್ಣುವಿನಲ್ಲಿ ಮಾತ್ರ

तत्वप्रकाशिका – यदा सामान्यतो जगच्चेष्टकत्वमेव विष्ण्वेकनिष्ठं, तदा सुतरां वज्रस्योक्तं सर्वप्रवर्तकप्राणचेष्टकत्वं तदेकनिष्ठमिति भावेनाऽऽह – प्राणस्येति ।।

ಎಲ್ಲರಲ್ಲೂ ಅನ್ವಯಿಸುವ ಜಗಚ್ಚೇಷ್ಟಕತ್ವವು ವಿಷ್ಣುವಿಗೆ ಮಾತ್ರ ಇದೆ ಎಂದು ಸಿದ್ಧವಾದ ಮೇಲೆ ಶ್ರುತಿಯಲ್ಲಿ ವಜ್ರನಿಗೆ ಹೇಳಲ್ಪಟ್ಟ ಸರ್ವಪ್ರವರ್ತಕತ್ವ, ಪ್ರಾಣಚೇಷ್ಟಕತ್ವಗಳೂ ಕೂಡ ವಿಷ್ಣುವಿನಲ್ಲಿ ಸುತರಾಂ ಬರುತ್ತವೆಂದು ಸ್ಪಷ್ಟಪಡಿಸಲು 'ಪ್ರಾಣಸ್ಯ' ಇತ್ಯಾದಿ ವಾಕ್ಯವು ಹೊರಟಿದೆ.

ಸ್ಮೃತಿಯ ಆಧಾರ

तत्वप्रकाशिका – ननूद्यतत्वलिङ्गस्य सावकाशत्वेऽपि वज्रश्रुतेर्निरवकाशत्वात्, निरवकाशेनापि लिङ्गेन कथं निर्णयः? इत्यतः श्रुतेरपि विष्णाववकाशं स्मृत्या दर्शयति – चक्रमिति ।।

'ಉದ್ಯತತ್ವ' ಎಂಬ ಲಿಂಗವು ವಿಷ್ಣುವಿನಲ್ಲಿ ಸಾವಕಾಶವಾಗಿದ್ದರೂ ಈ ಮಂತ್ರದಲ್ಲಿ ಶ್ರುತವಾದ ವಜ್ರಶ್ರುತಿಯು ನಿರವಕಾಶವಾಗಿರುವುದರಿಂದ ಮೋಕ್ಷಸಾಧನಜ್ಞಾನಾಶ್ರಯತ್ವವೆಂಬ ನಿರವಕಾಶಲಿಂಗದಿಂದ ವಜ್ರಶಬ್ದವಾಚ್ಯನಾದವನು ವಿಷ್ಣುವೇ ಆಗಿದ್ದಾನೆ, ಎಂದು ಹೇಗೆ

ನಿರ್ಧರಿಸುವುದು? ಎಂಬ ಪ್ರಶ್ನೆಗೆ ಸ್ಮೃತಿಯ ಆಧಾರದಿಂದ ವಿಷ್ಣುವಿನಲ್ಲಿ ವಜ್ರಶಬ್ದವು ಸಾವಕಾಶವಾಗಿದೆ ಎಂದು ತೋರಿಸುತ್ತಿದ್ದಾರೆ, 'ಚಕ್ರಮ್' ಇತ್ಯಾದಿಯಾಗಿ.

'ಆಯುಧಾನಾಮಹಂ ವಜ್ರಮ್'

तत्वप्रकाशिका – नच योगस्य रूढेर्दौर्बल्यादनिर्णय इति वाच्यम् । स्मृत्युक्तत्वेन विद्धद्रूढेरपि सत्वात् । आयुधानामहं वज्रम् । वज्रं प्रहरणोत्तमम् इति च ।

ರೂಢಿಗಿಂತಲೂ ಯೋಗವು ದುರ್ಬಲವಾದ್ದರಿಂದ ಹೇಗೆ ನಿರ್ಣಯಿಸುತ್ತೀರಿ? ಎಂದು ಪ್ರಶ್ನಿಸಬಾರದು. ಸ್ಮೃತಿಯಲ್ಲಿ ಹಾಗೆ ಹೇಳಿರುವುದರಿಂದ ವಿದ್ವದ್ರೂಢಿಯು ಇರುತ್ತದೆಂದು ತಿಳಿಯಬೇಕು. 'ಆಯುಧಾನಾಮಹಂ ವಜ್ರಮ್' 'ವಜ್ರಂ ಪ್ರಹರಣೋತ್ತಮಮ್' ಹೀಗೆ ವಜ್ರಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆನ್ನಲು ವಿದ್ವದ್ರೂಢಿ ಎಂಬ ಪ್ರಮಾಣವಿರುತ್ತದೆ.

ಶ್ರುತಿಲಿಂಗಗಳೆರಡೂ ಸಾವಕಾಶ

तत्वप्रकाशिका – नन्वेवं सावकाशत्वे श्रुतिलिङ्गयोः 'य एतद्विदुः' इत्युक्तलिङ्गं विहाय किं लिङ्गान्तरग्रहणेन ? मैवम् । तदविहायैव लिङ्गान्तरस्याप्युक्तत्वात्। एतदन्यत्राप्यनुसन्धेयम् । अतो विष्णुरेव वज्र इति तज्ज्ञानादेव मोक्ष इति सिद्धम् ।। ३९ ।।

।। इति श्रीमज्जयतीर्थभिक्षुविरचितायां तत्वप्रकाशिकायाम्
कम्पनाधिकरणम् ।।

ವಜ್ರಶ್ರುತಿ ಹಾಗೂ ಉದ್ಧತತ್ವಲಿಂಗಗಳೆರಡು ವಿಷ್ಣುವಿನಲ್ಲಿ ಸಾವಕಾಶವಾಗಿವೆ. ಆದರೆ, 'ಯ ಏತದ್ವಿದುರಮೃತಾಸ್ತೇ ಭವಂತಿ' ಎಂಬ ಪ್ರಮಾಣದಿಂದ ಹೇಳಲ್ಪಟ್ಟ ಮೋಕ್ಷಸಾಧನಜ್ಞಾನ-ವಿಷಯತ್ವವೆಂಬ ಲಿಂಗವನ್ನು ಬಿಟ್ಟು 'ಜಗದ್ವ್ಯಾಪಾರಕಾರಿತ್ವ' ಎಂಬ ಮತ್ತೊಂದು ಲಿಂಗವನ್ನು

ಏಕೆ ಸ್ವೀಕರಿಸಿದರು? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. 'ಮೋಕ್ಷಸಾಧನಜ್ಞಾನಾಶ್ರಯತ್ವ' ಎಂಬ ಲಿಂಗವನ್ನು ಬಿಡದೆ ಬೇರೆ ಲಿಂಗವನ್ನು ಸ್ವೀಕರಿಸಿದ್ದಾರೆಂದು. ಇದರಂತೆ ಬೇರೆ ಕಡೆ ಎಲ್ಲೆಲ್ಲಿ ಭಾಷ್ಯಕಾರರು ಸೂತ್ರದಲ್ಲಿ ಹೇಳದ ಮತ್ತೊಂದು ಲಿಂಗವನ್ನು ಹೇಳಿರುತ್ತಾರೋ, ಅಲ್ಲಿ ಇದೇ ನಿರ್ಣಯವನ್ನು ಹೇಳಬೇಕು. ಆದ್ದರಿಂದ ವಜ್ರಶಬ್ದದಿಂದ ವಾಚ್ಯನಾದವನು ವಿಷ್ಣುವೇ ಆಗಿದ್ದಾನೆ ಅವನ ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ತಿಳಿಯಬೇಕು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ಕಂಪನ್ಯಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಭಗವದ್ ಜ್ಞಾನದಿಂದಲೇ ಮೋಕ್ಷ

भावदीपः – ।। कम्पनात् ।।

न्यायविवरणेऽनुक्तेर्भाष्यदिशा स्वयं साधारण्यमाह – **लोकेति** ।। एवं हि प्राणाकाशाद्यपादीयनाम्नामप्येवं स्यादिति चोद्यनिरासादि तु चन्द्रिकायां व्यक्तम् । सङ्गतिपरत्वेन तावद् भाष्यं व्याचष्टे – **तमेवमिति**।। 'नेतरोऽनुपपत्तेः' इति सूत्रभाष्ये उक्तमित्यर्थः । शेषोऽयम् ।

ನ್ಯಾಯವಿವರಣದಲ್ಲಿ ವಜ್ರಶಬ್ದಕ್ಕೆ ಉಭಯತ್ರಪ್ರಸಿದ್ಧತ್ವವನ್ನು ಹೇಳಿರುವುದಿಲ್ಲ. ಅದಕ್ಕೋಸ್ಕರ ಭಾಷ್ಯದ ರೀತಿಯಲ್ಲಿ ಸ್ವತಃ ಟೀಕಾಕಾರರು ಉಭಯಸಾಧಾರಣ್ಯವನ್ನು ವಜ್ರಶಬ್ದಕ್ಕೆ ಸಮರ್ಥನೆ ಮಾಡುತ್ತಿದ್ದಾರೆ – 'ಲೋಕಪ್ರಸಿದ್ಧ್ಯಾ' ಇತ್ಯಾದಿಯಾಗಿ. ವಜ್ರಶಬ್ದಕ್ಕೆ ಉಭಯತ್ರಪ್ರಸಿದ್ಧತ್ವವು ಬಂದಂತೆ,

ಪ್ರಥಮ ಪಾದದಲ್ಲಿ ಸಮನ್ವಯ ಮಾಡಿದ ಆಕಾಶ ಮೊದಲಾದ ಪದಗಳಿಗೂ ಉಭಯತ್ರ ಪ್ರಸಿದ್ಧತ್ವವು ಬರಬೇಕಾಗುತ್ತದಲ್ಲವೇ? ಎಂಬ ಪ್ರಶ್ನೆಗೆ ತಾತ್ಪರ್ಯಚಂದ್ರಿಕೆಯಲ್ಲಿಯೇ ಉತ್ತರವನ್ನು ನೀಡಿದ್ದಾರೆ. ಸಂಗತಿಪರವಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ತಮೇವಂ ವಿದ್ವಾನ್' ಇತ್ಯಾದಿ ಟೀಕೆಯು ಹೊರಟಿದೆ. 'ಇತ್ಯುಕ್ತಂ' ಎಂದರೆ 'ನೇತರೋऽನುಪಪತ್ತೇಃ' ಎಂಬ ಸೂತ್ರದ ಭಾಷ್ಯದಲ್ಲಿ ಭಗವಂತನ ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಹೇಳಲಾಗಿದೆ. ಹೀಗೆ ಶೇಷಪೂರಣ ಮಾಡಿಕೊಳ್ಳಬೇಕು.

ಇಂದ್ರಾಯುಧ ಪ್ರತಿಪಾದಕವೆನ್ನಲು ಆಧಾರ

ಭಾವದೀಪಃ – उद्यतवज्रेति पदद्वयभावमाह – तस्य चेति ।। वज्रश्रुतेरुद्यतत्व-लिङ्गाच्चेन्द्रायुधत्व इत्यर्थः । अध्याहृतवाक्यभावमाह – अन्यज्ञानेति।। इति सङ्गतिसम्भवान्निर्णेयत्वं तस्येत्यन्वयः । पूर्वपक्षतद्युक्ति तत्फलोक्तिपरत्वेनापि भाष्यं व्याचष्टे – इन्द्रायुधमिति ।।

ಶ್ರುತಿಯಲ್ಲಿರುವ 'ಉದ್ಯತ' ಮತ್ತು 'ವಜ್ರ' ಎಂಬೆರಡು ಪದಗಳ ಅಭಿಪ್ರಾಯವನ್ನು 'ತಸ್ಯ ಚ' ಎಂದು ಹೇಳಿದ್ದಾರೆ. ವಜ್ರಶ್ರುತಿ ಹಾಗೂ ಉದ್ಯತತ್ವಲಿಂಗಗಳು ಇಂದ್ರಾಯುಧವೇ ಪ್ರತಿಪಾದ್ಯವೆಂದು ಸಮರ್ಥನೆ ಮಾಡುತ್ತಿವೆ ಎಂದು ಇದರ ಅರ್ಥ. 'ತಮೇವಂ ವಿದ್ವಾನ್' ಇತ್ಯಾದಿಯಾಗಿ ಅಧ್ಯಾಹಾರ ಮಾಡಿಕೊಂಡ ವಾಕ್ಯದ ಅಭಿಪ್ರಾಯವನ್ನು 'ಅನ್ಯಜ್ಞಾನಾತ್' ಎಂಬುದರಿಂದ ಹೇಳಿದ್ದಾರೆ. ಹೀಗೆ ಸಂಗತಿಯು ಉಪಪನ್ನವಾಗುವುದರಿಂದ ವಜ್ರಶಬ್ದದ ಅರ್ಥವನ್ನು ಅವಶ್ಯವಾಗಿ ನಿರ್ಣಯಿಸಬೇಕೆಂದು ವಾಕ್ಯದ ಅನ್ವಯ ತಿಳಿಯಬೇಕು. ಪೂರ್ವಪಕ್ಷ ಹಾಗೂ ಪೂರ್ವಪಕ್ಷಯುಕ್ತಿ, ಪೂರ್ವಪಕ್ಷ ಫಲಗಳನ್ನು ಭಾಷ್ಯದ ವಾಕ್ಯದಿಂದ ತೋರಿಸುತ್ತಿದ್ದಾರೆ, 'ಇಂದ್ರಾಯುಧಂ' ಇತ್ಯಾದಿಯಾಗಿ.

ವಜ್ರಶಬ್ದಾರ್ಥವು ಯೌಗಿಕವೇ ?

ಭಾವದೀಪಃ – वज्रशब्द उद्यतत्वलिङ्गं चेति तादृग्द्वयमिति न्यायविवरणा नुरोधेनोद्यतवज्रेति पदद्वयं श्रुतिलिङ्गरूपयुक्तिपरत्वेन व्याचष्टे – वज्रश्रुतेरिति ।। योगवृत्त्या श्रुतिर्विष्णावस्त्वित्यत आह – तत्र रूढत्वादिति।। तथात्वे सर्वशब्दानां सर्वत्र यौगिकत्वसम्भवेनाव्यवस्थानात् प्राणाकाशादिशब्देष्वपि हरौ योगवृत्तिरिह पूर्वपक्षे न सम्मतेति भावः ।

'ವಜ್ರಶಬ್ದಃ ಉದ್ಯತತ್ವಲಿಂಗಂ ಚೇತಿ ತಾದೃಗ್‌ದ್ವಯಂ' ಎಂಬುದಾಗಿ ನ್ಯಾಯವಿವರಣದಲ್ಲಿ ಹೇಳಿರುತ್ತಾರೆ. ಅದಕ್ಕನುಸಾರಿಯಾಗಿ 'ಉದ್ಯತ' ಮತ್ತು 'ವಜ್ರ' ಎಂಬೆರಡು ಪದಗಳು ಶ್ರುತಿ ಹಾಗೂ ಯುಕ್ತಿರೂಪವಾಗಿ ಶ್ರುತವಾಗಿವೆ ಎಂಬುದಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ – 'ವಜ್ರಶ್ರುತೇಃ' ಇತ್ಯಾದಿಯಾಗಿ. ವಜ್ರಶ್ರುತಿಯನ್ನು ಯೌಗಿಕವಾಗಿ ವಿಷ್ಣುವಿನಲ್ಲಿ ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ 'ತತ್ರ ರೂಢತ್ವಾತ್' ಎಂದು ಉತ್ತರಿಸಿದ್ದಾರೆ.

ಹಾಗೆ ವಿಷ್ಣುವಿನಲ್ಲಿ ಯೌಗಿಕಾರ್ಥವನ್ನು ಹೇಳುವುದಾದರೆ ಸಕಲ ಶಬ್ದಗಳೂ ಎಲ್ಲೆಡೆಯೂ ಯೌಗಿಕವಾಗಿ ಉಪಪನ್ನವಾಗಬಹುದಾದ್ದರಿಂದ ಈ ಶಬ್ದವು ಇದೇ ಪದಾರ್ಥವನ್ನು ಪ್ರತಿಪಾದನೆ ಮಾಡುತ್ತದೆಂಬ ವ್ಯವಸ್ಥೆಯನ್ನೇ ಕೂಡಿಸಲಾಗದು. ಆದ್ದರಿಂದ, ವಜ್ರಶ್ರುತಿಪ್ರಕರಣದಲ್ಲಿ ಕೇಳಿಸುತ್ತಿರುವ ಪ್ರಾಣ, ಆಕಾಶ ಮೊದಲಾದ ಶಬ್ದಗಳಿಗೂ ಸಹ ಶ್ರೀಹರಿಯಲ್ಲಿ ಯೋಗವೃತ್ತಿಯನ್ನು ಹೇಳುವುದು ಪೂರ್ವಪಕ್ಷಕಾರರಿಗೆ ಸಮ್ಮತವಲ್ಲವೆಂದು ತಿಳಿಯಬೇಕು.

ಉದ್ಯತತ್ವ ಲಿಂಗವು ನಿರವಕಾಶ

भावदीपः – लिङ्गस्यापि निरवकाशत्वमाह – तद्धीति ।। तेनेन्द्रो वज्रमुद्यच्छन्। उद्यतायुधदोर्दण्डा इत्यादावायुधे प्रसिद्धत्वादिति हेरर्थः । श्रुतिलिङ्गोपयोक्तेरुपयोगं वक्तुमाह – नचेति ।। द्वयोरपि निरवकाशत्वोक्तेः फलमाह – नच लिङ्गस्येति ।। एतेन तादृग्द्वयमित्येतद् विवृतं ध्येयम् । फलोक्त्योपसंहरति – अत इति ।। निरवकाशश्रुतिलिङ्गाभावादित्यर्थः ।

'ಉದ್ಯತತ್ವ' ಎಂಬ ಲಿಂಗಕ್ಕೆ ನಿರವಕಾಶತ್ವವನ್ನು ಸಮರ್ಥಿಸಲು 'ತದ್ಧಿ' ಎಂಬ ವಾಕ್ಯವು ಹೊರಟಿದೆ. ಆದ್ದರಿಂದ 'ಇಂದ್ರೋ ವಜ್ರಮುದ್ಯಚ್ಛನ್' 'ಉದ್ಯತಾಯುಧದೋರ್ದಂಡಾಃ' ಇತ್ಯಾದಿ ಸ್ಥಳಗಳಲ್ಲಿ ವಜ್ರಶಬ್ದವು ಆಯುಧದಲ್ಲಿಯೇ ಪ್ರಸಿದ್ಧವಾಗಿದೆ. ಇದನ್ನು 'ತದ್ಧಿ' ಎಂಬಲ್ಲಿರುವ 'ಹಿ' ಪದವು ಹೇಳುತ್ತಿದೆ ಎಂದಂತಾಯಿತು. ಶ್ರುತಿ ಹಾಗೂ ಲಿಂಗಗಳನ್ನು ಹೇಳಿದ್ದರ ಉಪಯೋಗವನ್ನು ತೋರಿಸಲು 'ನಚ' ಎಂಬ ವಾಕ್ಯವು ಹೊರಟಿದೆ. ಎರಡೂ ಸಹ ನಿರವಕಾಶವಾದ್ದರಿಂದ ಏನು ಸಿದ್ಧವಾಯಿತು? ಎಂಬುದನ್ನು 'ನಚ ಲಿಂಗಸ್ಯ' ಎಂಬ ವಾಕ್ಯದಿಂದ ಹೇಳಿದ್ದಾರೆ. ಇದರಿಂದ 'ತಾದೃಗ್‌ದ್ವಯಂ' ಎಂಬ ನ್ಯಾಯವಿವರಣವನ್ನು ವಿವರಿಸಿದಂತಾಯಿತು.

ಪೂರ್ವಪಕ್ಷದ ಫಲವನ್ನು ಉಪಸಂಹಾರ ಮಾಡುತ್ತಿದ್ದಾರೆ, 'ಅತಃ' ಎಂಬ ವಾಕ್ಯದಿಂದ. ನಿರವಕಾಶವಾದ ಶ್ರುತಿ ಹಾಗೂ ಲಿಂಗಗಳಿರುವುದರಿಂದ ಎಂದು 'ಅತಃ' ಶಬ್ದಕ್ಕೆ ಅರ್ಥ.

ಪೂರ್ವಪಕ್ಷದ ಉಪಸಂಹಾರ

ಭಾವದೀಪಃ – श्रुतित्वनिरवकाशत्वाभ्यां प्रबलवज्रश्रुत्यैव निरवकाशस्वभाव-दुर्बललिङ्गबाधः सुशकः । तथाप्यभ्युच्चयतया लिङ्गोक्तिः कम्पकत्वरूपसिद्धान्त-लिङ्गस्य वज्रनिष्ठताद्योतनाय । 'प्राणाख्ये तु हरौ सर्वमेजत्यस्माच्च निःसृतम् । वज्रवद् भयदं चैव स्वधर्मस्यातिलङ्घने ।।' इति काठकभाष्यानुरोधेन 'को हि' इति वक्ष्यमाणवाक्यानुगुणं श्रुत्यर्थमाह – **यत्किञ्चेति ।।**

ವಜ್ರಶ್ರುತಿಯು ನಿರವಕಾಶವಾಗಿದೆ. ಮತ್ತು ಸ್ವಾಭಾವಿಕವಾಗಿ ಪ್ರಬಲವಾಗಿದೆ. ಇದರಿಂದ ದುರ್ಬಲವಾದ ಲಿಂಗವು ಬಾಧಿತವಾಗುವುದೆಂದು ಹೇಳಬಹುದು. ಆದರೂ ಸಹ, 'ಅಭ್ಯುಚ್ಚಯ' ಯುಕ್ತಿಗಾಗಿ ಲಿಂಗವನ್ನು ಹೇಳಿರುತ್ತಾರೆ. ಅಂದರೆ, 'ಕಂಪಕತ್ವ' ಎಂಬ ಸಿದ್ಧಾಂತಲಿಂಗಕ್ಕೆ ವಜ್ರನಿಷ್ಠತ್ವವನ್ನು ತೋರಿಸುವುದಕ್ಕಾಗಿ. 'ಪ್ರಾಣಾಖ್ಯೇ ತು ಹರೌ ಸರ್ವಂ ಏಜತ್ಯಸ್ಮಾಚ್ಚ ನಿಃಸೃತಮ್ । ವಜ್ರವತ್ ಭಯದಂ ಚೈವ ಸ್ವಧರ್ಮಸ್ಯಾತಿಲಂಘನೇ ॥' ಎಂದು ಕಾಠಕಭಾಷ್ಯದಲ್ಲಿ ಹೇಳಿದಂತೆ 'ಕೋ ಹಿ' ಎಂಬ ಮುಂದಿನ ವಾಕ್ಯಕ್ಕೆ ಅನುಗುಣವಾಗಿ ಶ್ರುತಿಯ ಅರ್ಥವನ್ನು 'ಯತ್ಕಿಂಚ ಸರ್ವಂ' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ.

ಕಾಠಕಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿ

ಭಾವದೀಪಃ – स्थितमित्युक्त्या तद्भाष्योक्तस्मृतावपि शेष इति दर्शितम् । स्मृतावस्मादिति पदं पूर्वत्रोत्तरत्र चान्वेतीति मत्वा श्रुतौ प्राणपदस्याऽवृत्तिविपरिणामाभ्यामर्थमाह – **प्राणादिति ।।** यदित्युक्तिलब्धोक्तिः – **तदिति ।।** यदित्यस्याऽवृत्त्या वा यत्तच्छब्दावध्याहृत्य वाऽर्थमाह – **यस्मादिति ।।**

'ಸ್ಥಿತಂ' ಎಂದು ಹೇಳಿದ್ದರಿಂದ ಕಾಠಕಭಾಷ್ಯದ ಸ್ಮೃತಿಯಲ್ಲಿಯೂ ಇದನ್ನು ಶೇಷಪೂರಣ ಮಾಡಿಕೊಳ್ಳಬೇಕೆಂದು ಹೇಳಿದಂತಾಯಿತು. ಸ್ಮೃತಿಯಲ್ಲಿರುವ 'ಅಸ್ಮಾತ್' ಎಂಬ ಪದವು ಮೊದಲು ಮತ್ತು ಅನಂತರ ಅನ್ವಯವನ್ನು ಹೊಂದುತ್ತದೆಂದು ವಿವಕ್ಷಿಸಿ ಶ್ರುತಿಯಲ್ಲಿರುವ ಪ್ರಾಣಪದಕ್ಕೆ ಆವೃತ್ತಿ ಹಾಗೂ ವಿಪರಿಣಾಮಗಳಿಂದ ಅರ್ಥವನ್ನು ಹೇಳುತ್ತಿದ್ದಾರೆ 'ಪ್ರಾಣ' ಇತ್ಯಾದಿಯಾಗಿ. 'ಯತ್' ಎಂಬುದರಿಂದ 'ತತ್' ಎಂಬುದು ತಿಳಿಯುತ್ತದೆ. 'ಯತ್' ಎಂಬ ಪದವನ್ನು ಆವೃತ್ತಿ ಮಾಡಿಕೊಳ್ಳುವುದರಿಂದ 'ಯತ್ತತ್' ಶಬ್ದಗಳನ್ನು ಅಧ್ಯಾಹಾರ ಮಾಡಿ ಅರ್ಥವನ್ನು ಹೇಳಿದ್ದಾರೆ 'ಯಸ್ಮಾದ್' ಇತ್ಯಾದಿಯಾಗಿ.

ಶ್ರುತಿಗೆ ಅನುಸಾರಿಯಾಗಿ ಎರಡು ವ್ಯಾಖ್ಯಾನ

भावदीपः – प्राणस्य प्राणमिति वक्ष्यमाणश्रुत्यनुरोधेन क्रमेणार्थान्तर-द्वयमाह – प्राण इत्यादिना ।। यद्वा द्वितीयोऽपि को हीति वाक्यानुगुणः । तृतीयस्तु प्राणस्येत्यादि श्रुतिस्मृत्यनुगुण इति ध्येयम् । एजतीत्यादिभाष्यं व्याचष्टे – अयमिति ।। प्रागुक्तमाद्यं श्रुत्यर्थमुपेत्याह – वज्रस्येति ।।

'ಪ್ರಾಣಸ್ಯ ಪ್ರಾಣಮ್' ಎಂಬ ಮುಂದೆ ಹೇಳುವ ಶ್ರುತಿಗೆ ಅನುಸಾರಿಯಾಗಿ ಕ್ರಮವಾಗಿ ಎರಡು ಅರ್ಥಗಳನ್ನು ಹೇಳುತ್ತಿದ್ದಾರೆ, 'ಪ್ರಾಣಃ' ಇತ್ಯಾದಿಯಾಗಿ. ಅಥವಾ, ಎರಡನೆಯ ಅರ್ಥವು 'ಕೋ ಹಿ' ಎಂಬ ವಾಕ್ಯಕ್ಕೆ ಅನುಗುಣವಾಗಿದೆ. ಮೂರನೆಯ ಅರ್ಥವು 'ಪ್ರಾಣಸ್ಯ' ಇತ್ಯಾದಿ ಶ್ರುತಿಸ್ಮೃತಿಗೆ ಅನುಗುಣವಾಗಿದೆ ಎಂದು ತಿಳಿಯಬೇಕು. 'ಏಜತಿ' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ಅಯಂ ವಜ್ರಃ' ಇತ್ಯಾದಿಯಾಗಿ ಹೇಳಿದ್ದಾರೆ. ಹಿಂದೆ ಹೇಳಿದ ಮೊದಲನೆಯ ಶ್ರುತ್ಯರ್ಥವನ್ನು ಅಂಗೀಕರಿಸಿ 'ವಜ್ರಸ್ಯ' ಎಂಬ ವಾಕ್ಯವು ಹೊರಟಿದೆ.

'ಉದ್ಯತತ್ವ' ಎಂದರೇನು ?

भावदीपः – उद्यमित्वमेवोद्यतत्वमिति न्यायविवरणदिशोद्यतवज्र इत्युक्तोद्यतपदप्रयोगतात्पर्यमाह – नचेति ।। उत्पूर्वस्य 'यती प्रयत्ने' इत्यस्य कर्तर्यकारप्रत्यये सति उद्यतः उत्कृष्टप्रयत्नवानित्यर्थ इत्यर्थः । को हीति श्रुत्यर्थस्तु तद्धेतुसूत्रे प्रागेवोक्त इति भावः ।। सर्वप्रवर्तकेति ।।

'ಉದ್ಯಮಿತ್ವಮೇವ ಉದ್ಯತತ್ವಮ್' ಎಂಬ ನ್ಯಾಯವಿವರಣಕ್ಕೆ ಅನುಸಾರಿಯಾಗಿ 'ಉದ್ಯತವಜ್ರ' ಎಂಬಲ್ಲಿ ಹೇಳಿದ ಉದ್ಯತಪದಪ್ರಯೋಗದ ತಾತ್ಪರ್ಯವನ್ನು 'ನಚ' ಎಂಬ ಟೀಕೆಯಿಂದ ಹೇಳುತ್ತಿದ್ದಾರೆ. 'ಉತ್' ಎಂಬ ಉಪಸರ್ಗದಿಂದ ಕೂಡಿದ 'ಯತೀ ಪ್ರಯತ್ನೇ' ಎಂಬ ಧಾತುವಿಗೆ ಕರ್ತೃರ್ಥದಲ್ಲಿ 'ತಕಾರವು' ಬಂದು 'ಉದ್ಯತ' ಎಂಬ ಪದವು ನಿಷ್ಪನ್ನವಾಗಿದೆ. ಉತ್ಕೃಷ್ಟವಾದ ಪ್ರಯತ್ನವುಳ್ಳವನು ಎಂದು ಇದರ ಅರ್ಥ. 'ಕೋ ಹಿ' ಎಂಬ ಶ್ರುತಿಯ ಅರ್ಥವನ್ನು 'ತದ್ಧೇತುವ್ಯಪದೇಶಾಚ್ಚ' ಎಂಬ ಸೂತ್ರದಲ್ಲಿಯೇ ಹೇಳಿದ್ದಾಗಿದೆ.

ಸರ್ವಪ್ರವರ್ತಕತ್ವವು ಪ್ರಾಣನಲ್ಲಿ ಇದೆಯೇ ?

ಭಾವದೀಪಃ – यद्यपि श्रुतौ प्राणमिति द्वितीयान्तद्वितीयप्राणस्य 'प्राणादयो वाक्यशेषाद्' इत्यग्रे वक्ष्यमाणदिशा विष्णुत्वेऽपि प्राणस्येत्यस्य न सर्वप्रवर्तकत्वं श्रुतम् । तथा नभस्वत इति स्मृत्यनुरोधाद् 'यस्मिन् पञ्च पञ्चजनाः' इति प्रतिशरीरस्थत्वोक्त्या सर्वप्रवर्तकत्वमार्थिकमित्यभिप्रेत्य सर्वप्रवर्तकप्राणेत्युक्तम् । वज्रशब्दस्योद्यतत्वस्य च विष्णावेवावकाश इति न्यायविवरणे द्वयोः सावकाशत्वमुक्त्वा उद्यमित्वमेवोद्यतत्वमिति लिङ्गस्य तद् विवृतम् । श्रुतेः सावकाशत्वस्य तत्राविवृतत्वाच्चक्रमित्यादिभाष्यं श्रुतेः सावकाशत्वविवरणपरतया व्याख्याति – नन्वित्यादिना।।

ವಾಸ್ತವಿಕವಾಗಿ ಶ್ರುತಿಯಲ್ಲಿ 'ಪ್ರಾಣಂ' ಎಂದು ದ್ವಿತೀಯಾವಿಭಕ್ತ್ಯಂತವಾದ ಪ್ರಾಣಶಬ್ದವು ಶ್ರುತವಾಗಿದೆ. ಇದು 'ಪ್ರಾಣಾದಯೋ ವಾಕ್ಯಶೇಷಾತ್' ಎಂಬುದಾಗಿ ಮುಂದೆ ಹೇಳುವ ಪ್ರಕಾರ ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತದೆ. ಆದರೆ, ಪ್ರಾಣನಿಗೆ ಸರ್ವಪ್ರವರ್ತಕತ್ವವು ಶ್ರುತಿಯಲ್ಲಿ ಕೇಳಿಸುತ್ತಿಲ್ಲ. ಅದರಂತೆ, 'ನತು ಸ್ವತಃ' ಎಂಬ ಸ್ಮೃತಿಗನುಸಾರಿಯಾಗಿ 'ಯಸ್ಮಿನ್ ಪಂಚ ಪಂಚಜನಾಃ' ಎಂಬ ಶ್ರುತಿಯಲ್ಲಿ ಪ್ರತಿಶರೀರದಲ್ಲಿಯೂ ಇರುತ್ತಾನೆಂದು ಹೇಳಿದ್ದರಿಂದ ಸರ್ವಪ್ರವರ್ತಕತ್ವವು ಅರ್ಥಾತ್ ಸಿದ್ಧವಾಗುತ್ತದೆ. ಆದ್ದರಿಂದಲೇ, ಇಲ್ಲಿ ಸರ್ವಪ್ರವರ್ತಕನು ಪ್ರಾಣ ಎಂದು ಹೇಳಲಾಗಿದೆ. ವಜ್ರಶಬ್ದ ಹಾಗೂ ಉದ್ಯತತ್ವ ಲಿಂಗಗಳಿಗೆ ವಿಷ್ಣುವಿನಲ್ಲಿ ಅವಕಾಶವಿದೆಯೆಂದು ನ್ಯಾಯವಿವರಣದಲ್ಲಿ ಸಾವಕಾಶತ್ವವನ್ನು ಹೇಳಿರುತ್ತಾರೆ. ಮತ್ತು, 'ಉದ್ಯಮಿತ್ವವೇ ಉದ್ಯತತ್ವ ಎನಿಸುತ್ತದೆ ಎಂಬುದಾಗಿ ಎಲ್ಲ ವಿಧವಾದ ವ್ಯಾಪಾರಗಳನ್ನು ಮಾಡಿಸುತ್ತಾನಾದ್ದರಿಂದ 'ಉದ್ಯತತ್ವ' ಎಂಬ ಲಿಂಗವು ಪರಮಾತ್ಮನಲ್ಲೇ ಬರುತ್ತದೆಂದು ಹೇಳಲಾಗಿದೆ.

ಶ್ರುತಿಗೆ ಸಾವಕಾಶತ್ವವನ್ನು ನ್ಯಾಯವಿವರಣದಲ್ಲಿ ವಿವರಿಸಿಲ್ಲ. ಆದ್ದರಿಂದ, 'ಚಕ್ರಂ' ಇತ್ಯಾದಿ ಭಾಷ್ಯವು ಶ್ರುತಿಗೆ ಸಾವಕಾಶತ್ವವನ್ನು ಹೇಳುತ್ತಿದೆ ಎಂದು ವ್ಯಾಖ್ಯಾನ ಮಾಡಲು 'ನನು' ಇತ್ಯಾದಿ ಟೀಕೆಯು ಹೊರಟಿದೆ.

ನ್ಯಾಯವಿವರಣಕ್ಕೆ ಅನುಸಾರಿಯಾದ ವ್ಯಾಖ್ಯಾನ

ಭಾವದೀಪಃ – वर्जनात् सर्वदोषवर्जनादिति स्मृतावर्थः । यत्तु काठकभाष्ये वज्रवद् भयदं चेति गौणत्वमुक्तम्, तत् तावताऽपि तद्वाक्यस्य ब्रह्मपरत्वसिद्धेः । इह तु समन्वयसूत्रे प्रतिज्ञातमुख्यार्थत्वाय योग एवोक्त इत्युक्तं चन्द्रिकायाम् । अत एव भाष्यद्वये श्रुतेः सावकाशताया द्वेधा विवृतत्वान्न्यायविवरणेनैतद् विवृतम्।

'ವರ್ಜನಾತ್' ಎಂದರೆ ಸಕಲ ದೋಷಗಳಿಂದ ರಹಿತನಾಗಿದ್ದಾನೆಂದರ್ಥ. ಕಾಠಕಭಾಷ್ಯದಲ್ಲಿ 'ವಜ್ರವದ್ ಭಯದಂ ಚ' ಎಂದು ವಜ್ರಶಬ್ದಕ್ಕೆ ಗೌಣಾರ್ಥವನ್ನು ಹೇಳಲಾಗಿದೆ. ಆ ಅರ್ಥವನ್ನು ವಿವಕ್ಷಿಸಿದರೂ ಬ್ರಹ್ಮಪರತ್ವವೇ ಸಿದ್ಧವಾಗುತ್ತದೆ. ಪ್ರಕೃತ, ಸಮನ್ವಯಸೂತ್ರದಲ್ಲಿ ಸಕಲ ಶಬ್ದಗಳೂ ಪರಮಾತ್ಮನನ್ನೇ ಮುಖ್ಯವಾಗಿ ಹೇಳುತ್ತವೆಂದು ಪ್ರತಿಜ್ಞೆ ಮಾಡಿದ್ದರಿಂದ ಕಾಠಕಭಾಷ್ಯದ ಅರ್ಥವನ್ನು ಬಿಟ್ಟು ಯೌಗಿಕಾರ್ಥವನ್ನು ಸ್ವೀಕರಿಸಿದ್ದಾರೆಂಬ ವಿಚಾರವು ಚಂದ್ರಿಕೆಯಲ್ಲಿ ಸ್ಪಷ್ಟವಾಗಿದೆ. ಆದ್ದರಿಂದಲೇ, ಕಾಠಕ ಭಾಷ್ಯ ಹಾಗೂ ಬ್ರಹ್ಮಸೂತ್ರ ಭಾಷ್ಯದಲ್ಲಿ ಶ್ರುತಿಗೆ ಸಾವಕಾಶತ್ವವನ್ನು ಎರಡು ಬಗೆಯಲ್ಲಿ ಹೇಳಿದ್ದರಿಂದ ನ್ಯಾಯವಿವರಣಕ್ಕನುಸಾರಿಯಾಗಿ ಇಲ್ಲಿ ವಿವರಣೆ ಮಾಡಿದ್ದಾರೆ.

ಯೋಗಾರ್ಥದ ಜೊತೆ ರೂಢ್ಯರ್ಥವನ್ನು ವಿವಕ್ಷಿಸಬೇಕು

ಭಾವದೀಪಃ – स्मृत्या योगप्रदर्शनस्य कृत्यमाह – नचेत्यादिना ।। विद्वद्रूढेरिति।। 'विद्वद्रूढिर्वैदिका स्यात् सा योगादेव लभ्यते' । इत्युक्तेरिति भावः । एतच्च कर्मनिर्णयटीकायां 'रूढियोगौ विना कश्चिन्नैवार्थो वेदगो भवेद्' इत्यस्य न केवलं रूढो नापि केवलयौगिकोऽस्तीत्यर्थ

इतीतरेतरद्वन्द्वमाश्रित्य रूढियोगरूपवृत्तिद्वयसमुच्चयपरत्वेन व्याख्यात-त्वात्तदनुरोधेन रूढिमपि वक्तुमुक्तम् ।

ಸ್ಮೃತಿಯಿಂದ ಯೌಗಿಕಾರ್ಥವನ್ನು ಸ್ವೀಕರಿಸಲು ಕಾರಣವನ್ನು 'ನಚ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. 'ವಿದ್ವದ್ರೂಢೇಃ' ಎಂಬುದರ ಅಭಿಪ್ರಾಯ ಹೀಗಿದೆ - 'ವಿದ್ವದ್ರೂಢಿರ್ವೈದಿಕಾ ಸ್ಯಾತ್ ಸಾ ಯೋಗಾದೇವ ಲಭ್ಯತೇ' ಎಂಬಂತೆ ವಿಷ್ಣುವಿನಲ್ಲಿ ಯೋಗಶಕ್ತಿಯಿಂದಲೇ ವಿದ್ವದ್ರೂಢಿಯಿದೆಯೆಂದು ಸಿದ್ಧವಾಗುತ್ತದೆ. ಇದನ್ನು ಕರ್ಮನಿರ್ಣಯಟೀಕೆಯಲ್ಲಿ 'ರೂಢಿಯೋಗೌ ವಿನಾ ಕಶ್ಚಿತ್ ನೈವಾರ್ಥೋ ವೇದಗೋ ಭವೇತ್' ಎಂದು ಕೇವಲ ರೂಢ್ಯರ್ಥವನ್ನು ಅಥವಾ ಕೇವಲ ಯೌಗಿಕಾರ್ಥವನ್ನು ವಿವಕ್ಷಿಸಬಾರದು. 'ರೂಢಿಯೋಗೌ' ಎಂಬಲ್ಲಿ ಇತರೇತರದ್ವಂದ್ವಸಮಾಸವನ್ನು ಆಶ್ರಯಿಸಿ ರೂಢಿವೃತ್ತಿ ಹಾಗೂ ಯೋಗವೃತ್ತಿ ಎರಡನ್ನು ವಿವಕ್ಷಿಸಬೇಕೆಂದು ವ್ಯಾಖ್ಯಾನಿಸಲಾಗಿದೆ. ಅದಕ್ಕನುಸಾರಿಯಾಗಿ, ರೂಢ್ಯರ್ಥವನ್ನೂ ಕೂಡ ಹೇಳಬೇಕು. ಆದ್ದರಿಂದ, ಮಹಾವಿಷ್ಣುವಿನಲ್ಲಿ ವಿದ್ವದ್ರೂಢಿಯೂ ಸಹ ಇರುತ್ತದೆಂದು ಇಲ್ಲಿ ಹೇಳಿದ್ದಾರೆ.

ಅಜ್ಞರೂಢಿಗೆ ಮಾತ್ರ ಬಾಧ

भावदीपः – वस्तुतस्तु श्रुत्यर्थनिर्णयार्थत्वात् स्मृतेस्तत्र निरूपितोऽर्थो ग्राह्यो वेदवाक्ये तदभावे तु लौकिक इति चन्द्रिकोक्तदिशा केवलश्रौतस्मार्तयोगस्यापि निरवकाशत्वेन अज्ञरूढितोऽपि प्राबल्यम् । अन्यथा स्मृत्यादौ वैदिकपदानां योगोक्तिरनर्था स्यादिति ध्येयम् ।

ವಾಸ್ತವಿಕವಾದ ವಿಚಾರ ಹೀಗಿದೆ - ಸ್ಮೃತಿಗಳು ಶ್ರುತ್ಯರ್ಥದ ನಿರ್ಣಯಕ್ಕೋಸ್ಕರ ಹೊರಟಿರುತ್ತವೆ. ವೇದವಾಕ್ಯದಲ್ಲಿ ಸ್ಮೃತಿಯಲ್ಲಿ ಹೇಳಿದ ಅರ್ಥವನ್ನು ಸ್ವೀಕರಿಸಬೇಕು. ಸ್ಮೃತಿಯಿಲ್ಲದಿದ್ದಾಗ ಲೋಕಸಿದ್ಧವಾದ ಅರ್ಥವನ್ನೇ ವಿವಕ್ಷಿಸಬೇಕು, ಎಂದು ಚಂದ್ರಿಕೆಯಲ್ಲಿ ಹೇಳಿದಂತೆ ಸ್ಮೃತಿಸಿದ್ಧವಾದ ಯೌಗಿಕಾರ್ಥವೂ ಕೂಡ ನಿರವಕಾಶವೇ ಆಗಿದೆ. ಆದ್ದರಿಂದ, ಅಜ್ಞರೂಢಿಗಿಂತಲೂ ಪ್ರಬಲವೆಂದು ಹೇಳಿದಂತಾಯಿತು. ಅಂದರೆ, ಸ್ಮೃತಿಸಿದ್ಧವಾದ ಯೋಗಾರ್ಥದಿಂದ ಅಜ್ಞರೂಢಿಗೆ ಬಾಧವು ಬರುತ್ತದೆ. ಒಂದು ವೇಳೆ ಸ್ಮೃತಿಸಿದ್ಧವಾದ ಯೋಗದಿಂದ ಅಜ್ಞರೂಢಿಗೆ ಬಾಧವನ್ನು ಹೇಳದಿದ್ದರೆ, ಸ್ಮೃತ್ಯಾದಿಗಳಲ್ಲಿ ವೈದಿಕ ಪದಗಳಿಗೆ ಯೌಗಿಕಾರ್ಥವನ್ನು ಹೇಳಿದ್ದೇ ವ್ಯರ್ಥವಾಗಬೇಕಾದೀತು.

ವಿಷ್ಣುವಿನಲ್ಲಿ ವಜ್ರಶಬ್ದದ ರೂಢಿ

भावदीपः – न केवलमार्थिकी रूढिः प्रयोगसिद्धा चेति भावेन प्रयोगमाह – आयुधानामिति ।। गीतायाम् । वज्रमिति स्थलान्तरे ।। नन्वेवमिति।। पूर्वं श्रुतिलिङ्गयोर्निरवकाशत्व एव अमृतत्वहेतुवदनत्वलिङ्गमाक्षिप्तम् । तयोस्सावकाशत्वेनेतर इत्यत्र ब्रह्मधर्मतया निर्णीतस्याक्षेपकाभावात् सिद्धान्ते साधकं भवत्येवेति भावः ।।

ವಿಷ್ಣುವಿನಲ್ಲಿ ವಜ್ರಶಬ್ದವು ಆರ್ಥಿಕವಾಗಿ ರೂಢವಾಗಿದೆ ಎಂದಷ್ಟೇ ಅಲ್ಲ, ಪ್ರಯೋಗಸಿದ್ಧವೂ ಆಗಿದೆ ಎಂಬ ಅಭಿಪ್ರಾಯದಿಂದ 'ಆಯುಧಾನಾಮಹಂ ವಜ್ರಮ್' ಎಂದು ಹೇಳಿದ್ದಾರೆ. ಇದು ಗೀತೆಯಲ್ಲಿ ಬರುವ ವಾಕ್ಯ. ಹಿಂದೆ ಶ್ರುತಿ ಹಾಗೂ ಲಿಂಗಗಳೆರಡಕ್ಕೂ ನಿರವಕಾಶತ್ವವಿದ್ದರೆ ಮಾತ್ರ ಅಮೃತತ್ವಕ್ಕೆ ಹೇತುವಾದ ವೇದನತ್ವಲಿಂಗವು ಅರ್ಥಾತ್ ಸಿದ್ಧವಾಗುತ್ತದೆಂದು ಹೇಳಲಾಯಿತು. ಶ್ರುತಿ ಹಾಗೂ ಲಿಂಗಗಳೆರಡು ಸಾವಕಾಶವಾದರೆ 'ನೇತರಃ' ಎಂಬ ಸೂತ್ರದಲ್ಲಿ ಬ್ರಹ್ಮಧರ್ಮವೆಂದು ನಿರ್ಣೀತವಾದ್ದರಿಂದ ಆಕ್ಷೇಪ ಮಾಡಲು ಬರುವುದಿಲ್ಲ. ಆದ್ದರಿಂದ, ಸಿದ್ಧಾಂತದಲ್ಲಿ ಇವುಗಳು ಸಾಧಕವೇ ಆಗುತ್ತವೆಂದು ತಿಳಿಯಬೇಕು.

ಬೇರೆ ಸೂತ್ರಗಳ ಉದಾಹರಣೆ

भावदीपः – अन्यत्रापीति ।। 'शब्दादेव' इत्यत्र विश्वेदेवोपास्यत्वम् 'अन्तस्तद्धर्मोपदेशाद्' इत्यादिष्वदृश्यत्वमहाभोगत्वादिकमित्यर्थः । यथा वा 'आकाशोऽर्थान्तरत्वादि' इत्यत्र ब्रह्मश्रुतेरत्यागेन लिङ्गान्तरोक्तिः । एवं तत्र तत्र ।

'ಅನ್ಯತ್ರಾಪಿ' ಎಂದರೆ 'ಶಬ್ದಾದೇವ' ಎಂಬಲ್ಲಿ ವಿಶ್ವೇದೇವೋಪಾಸ್ಯತ್ವವು, 'ಅಂತಸ್ತದ್ಧರ್ಮೋಪದೇಶಾತ್' ಎಂಬಲ್ಲಿ ಅದೃಶ್ಯತ್ವ, ಮಹಾಭೋಗತ್ವಾದಿಗಳು ಇವುಗಳೂ ಸಹ ವಿವಕ್ಷಿತವಾಗಿವೆ ಎಂದರ್ಥ. ಯಾವ ರೀತಿಯಾಗಿ 'ಆಕಾಶೋಽರ್ಥಾಂತರತ್ವಾದಿ' ಎಂಬ ಸೂತ್ರದಲ್ಲಿ ಬ್ರಹ್ಮಶ್ರುತಿಯನ್ನು ಬಿಡದೆ ಮತ್ತೊಂದು ಲಿಂಗವನ್ನು ಸ್ವೀಕರಿಸಿದ್ದಾರೋ, ಅದರಂತೆ. ಹೀಗೆ ಬೇರೆ ಸೂತ್ರಗಳಲ್ಲಿಯೂ ತಿಳಿದುಕೊಳ್ಳಬೇಕು.

ತತ್ತ್ವಮಂಜರಿಯಲ್ಲಿ ಶ್ರುತಿಲಿಂಗಾದಿಗಳ ಉಲ್ಲೇಖ

भावदीपः – अत एव चन्द्रिकायाम् – आनन्दमयनयमारभ्य प्रतिनयं तत्तत्प्रकरणस्थाने कश्रुतिलिङ्गाद्युपदर्शनं कृतम् । प्रपञ्चितं चास्माभिः सङ्क्षेपभाष्यविवृतौ प्रतिनयम् । एतेन 'भूमा' इत्यत्र पूर्वपक्षिणाऽक्षिप्तस्यैव सम्प्रसादपदोक्तपूर्णसुखत्वस्य भूमा विष्णुरित्यत्र हेतुत्वम् ।

ಆದ್ದರಿಂದಲೇ, ಚಂದ್ರಿಕೆಯಲ್ಲಿ ಆನಂದಮಯಾಧಿಕರಣದಿಂದ ಪ್ರಾರಂಭಿಸಿ ಪ್ರತಿಯೊಂದು ಅಧಿಕರಣದಲ್ಲಿಯೂ ಆಯಾ ಪ್ರಕರಣಗಳಲ್ಲಿರುವ ಅನೇಕ ಶ್ರುತಿಲಿಂಗಾದಿಗಳನ್ನು ತೋರಿಸುತ್ತಾರೆ. ನಾವೂ ಸಹ ತತ್ತ್ವಮಂಜರಿಯಲ್ಲಿ ಪ್ರತಿಯೊಂದು ಅಧಿಕರಣದಲ್ಲಿಯೂ ಇದನ್ನು ವಿವರಿಸಿದ್ದೇವೆ. ಹೀಗೆ ಹೇಳಿದ್ದರಿಂದ 'ಭೂಮಾಸಂಪ್ರಸಾದಾತ್' ಎಂಬ ಸೂತ್ರದಲ್ಲಿ ಪೂರ್ವಪಕ್ಷಿಯಿಂದ ಆಕ್ಷೇಪ ಮಾಡಲ್ಪಟ್ಟ ಸಂಪ್ರಸಾದಪದದಿಂದ ತಿಳಿಯುವ ಪೂರ್ಣಸುಖತ್ವವನ್ನು ವಿಷ್ಣುವೇ ಭೂಮನಾಗಿದ್ದಾನೆನ್ನಲು ಹೇತುವನ್ನಾಗಿ ಬಳಸಲಾಗಿದೆ.

ಅಧಿಕರಣದ ಉಪಸಂಹಾರ

भावदीपः – 'द्युभ्वाद्यायतनम्' इत्यत्राऽक्षिप्तपरविद्याविषयत्वेन 'प्रकरणाद्' इति प्रकरणस्य वैष्णवत्वोज्जीवनमित्यादि समाहितं ध्येयम् । फलोक्त्योपसंहरति – अत इति ।। निरवकाशलिङ्गभावादित्यर्थः । इति हेतोरित्यर्थः ।। ३९ ।।

।। इति श्रीराघवेन्द्रयतिकृते भावदीपे कम्पनाधिकरणम् ।।

'द्युभ्वाद्यायतनं' ಎಂಬಲ್ಲಿ ಆಕ್ಷೇಪ ಮಾಡಲ್ಪಟ್ಟ ಪರವಿದ್ಯಾವಿಷಯತ್ವವೇ 'ಪ್ರಕರಣಾತ್' ಎಂಬ ಸೂತ್ರದಲ್ಲಿ ವಿಷ್ಣುಲಿಂಗವೆಂದು ವಿವಕ್ಷಿಸಿ ಸಮಾಧಾನವನ್ನು ಹೇಳಲಾಗಿದೆ. ಫಲವನ್ನು ಹೇಳುವ ಮೂಲಕ ಉಪಸಂಹಾರ ಮಾಡುತ್ತಿದ್ದಾರೆ 'ಅತಃ' ಇತ್ಯಾದಿಯಾಗಿ. ನಿರವಕಾಶಲಿಂಗವಿರುವುದರಿಂದ ಎಂದು 'ಅತಃ' ಶಬ್ದಕ್ಕೆ ಅರ್ಥ. 'ಇತಿ' ಪದವು ಹೇತ್ವರ್ಥದಲ್ಲಿದೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಕಂಪನಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

ತಂತ್ರದೀಪಿಕೆಯಲ್ಲಿ ಕಂಪನಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

कम्पनाधिकरणम् (१।३।१०)

'ಕಂಪನಾತ್' ಎಂಬ ಸೂತ್ರದ ಅರ್ಥ

।। कम्पनात् ।। १-३-३९ ।।

अत्र वज्रनाम समन्वीयते । योग्यतया वज्र इत्यन्वेति । तत्तु इत्यस्ति। ''महद्भयं वज्रमुद्यतम्'' इत्युक्तवज्रो ब्रह्मैव । न त्विन्द्रायुधम् । कम्पनात् ''जगत्सर्वं प्राण एजति निःसृतम्'' इति कम्पनवचनात् जगच्चेष्टकत्वलिङ्गादित्यर्थः ।। १० ।।

ಈ ಅಧಿಕರಣದಲ್ಲಿ 'ವಜ್ರ' ಎಂಬ ನಾಮಾತ್ಮಕ ಶಬ್ದದ ಸಮನ್ವಯವನ್ನು ಮಹಾವಿಷ್ಣುವಿನಲ್ಲಿ ಮಾಡುತ್ತಿದ್ದಾರೆ. 'ವಜ್ರ' ಎಂಬ ಪದವು ಇಲ್ಲಿ ಅನ್ವಯವನ್ನು ಹೊಂದುತ್ತದೆ. 'ತತ್ತು' ಎಂಬ ಪದಗಳೂ ಕೂಡ ಅನುವೃತ್ತವಾಗಿವೆ. 'ಮಹದ್ ಭಯಂ ವಜ್ರಮುದ್ಯತಮ್' ಎಂಬ ಶ್ರುತಿಯಲ್ಲಿ ಉಕ್ತವಾದ ವಜ್ರಶಬ್ದವು ಬ್ರಹ್ಮನನ್ನೇ ಪ್ರತಿಪಾದಿಸುತ್ತದೆ, ಹೊರತು ಇಂದ್ರಾಯುಧವನ್ನಲ್ಲ.

ಕಂಪನಾತ್ = 'ಜಗತ್ ಸರ್ವಂ ಪ್ರಾಣ ಏಜತಿ ನಿಃಸೃತಮ್' ಇತ್ಯಾದಿಯಾಗಿ ಕಂಪನವನ್ನು ಹೇಳಿರುವುದರಿಂದ. 'ಕಂಪನ' ಎಂದರೆ 'ಜಗಚ್ಚೇಷ್ಟಕತ್ವ' ಎಂದರ್ಥ. ಇದು ಬ್ರಹ್ಮನ ಅಸಾಧಾರಣ ಧರ್ಮವಾಗಿದೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಕಂಪನಾಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಕಂಪನಾಧಿಕರಣ ಮತ್ತು ವಿಮರ್ಶೆ

ಶಾಂಕರ ಭಾಷ್ಯದಲ್ಲಿ ಕಂಪನಾಧಿಕರಣದ ರಚನೆ ಹೀಗಿದೆ - 'ಪ್ರಾಣ ಏಜತಿ' ಎಂಬ ಕಾಠಕೋಪನಿಷತ್ತಿನ ವಾಕ್ಯವೇ ಅಧಿಕರಣಕ್ಕೆ ವಿಷಯವಾಗಿದೆ. ಇಲ್ಲಿರುವ ಪ್ರಾಣಶಬ್ದವು ಪ್ರಸಿದ್ಧವಾದ ವಾಯುವನ್ನು ಪ್ರತಿಪಾದನೆ ಮಾಡುತ್ತದೆಂದು ಪೂರ್ವಪಕ್ಷ. ಬ್ರಹ್ಮನೇ ಪ್ರಾಣಶಬ್ದ ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧಾಂತ.

ಅದ್ವೈತಿಗಳ ಈ ಅಧಿಕರಣಶರೀರ ಸರಿಯಿಲ್ಲ. ಏಕೆಂದರೆ ವಜ್ರಶಬ್ದದ ಸಮನ್ವಯ ಮಾಡುವುದೇ ಎಲ್ಲ ರೀತಿಯಿಂದಲೂ ಸೂಕ್ತವಾಗಿದೆ. ಇದುವರೆಗೂ ಯಾವುದೇ ಅಧಿಕರಣಗಳಲ್ಲಿ ವಜ್ರಶಬ್ದದ ಸಮನ್ವಯವನ್ನು ಮಾಡಿರುವುದಿಲ್ಲ. ಮತ್ತು ಇದರ ಸಮನ್ವಯಕ್ಕಾಗಿ ಉದ್ಯತತ್ವವೆಂಬ ಪೂರ್ವಪಕ್ಷಬೀಜವು ಪ್ರಬಲವಾಗಿರುತ್ತದೆ. ಇಂತಹ ವಜ್ರಶಬ್ದದ ಸಮನ್ವಯವನ್ನು ಬಿಟ್ಟು ಅನೇಕ ಬಾರಿ ಸಮನ್ವಯ ಮಾಡಿರುವ ಪ್ರಾಣಶಬ್ದದ ಸಮನ್ವಯವನ್ನು ಪುನಃ ಈ ಅಧಿಕರಣದಲ್ಲಿ ಮಾಡುವುದು ಯುಕ್ತವಲ್ಲ. ಮತ್ತು ಪ್ರಾಣಶಬ್ದ ಸಮನ್ವಯಕ್ಕಾಗಿ ಪ್ರಬಲವಾದ ಪೂರ್ವಪಕ್ಷ ಬೀಜವೂ ಕೂಡ ಇರುವುದಿಲ್ಲ.

ಮತ್ತು ಬ್ರಹ್ಮನಲಿಂಗವೆಂದು ಸೂತ್ರದಲ್ಲಿ ಹೇಳಲ್ಪಟ್ಟ ಕಂಪಕತ್ವವಾಗಲೀ, ಅದ್ವೈತಿಗಳೇ ಹೇಳಿರುವ ಅಮೃತತ್ವಹೇತುವೇದನತ್ವವಾಗಲೀ, ಭಯಂಕರವೆಂದು ವರ್ಣಿಸಲ್ಪಟ್ಟ 'ಏತದ್ವಿದುಃ' ಎಂಬ ಶ್ರುತಿಯಿಂದ ನಪುಂಸಕಲಿಂಗದಿಂದ ನಿರ್ದಿಷ್ಟವಾದದ್ದು ವಜ್ರವೇ ಆಗುತ್ತದೆ ಹೊರತು, ಪ್ರಾಣನಾಗಲು ಸಾಧ್ಯವಿಲ್ಲ. ಇಂತಹ ವಜ್ರದಲ್ಲಿಯೇ ವಿಚಾರವು ಅತ್ಯಂತ ಸಮಂಜಸವಾಗುತ್ತದೆ.

ರಾಮಾನುಜರು ಇದನ್ನು ಪ್ರತ್ಯೇಕ ಅಧಿಕರಣವೆಂದೇ ಪರಿಗಣಿಸಿಲ್ಲ. ಮುಂದಿನ 'ಜ್ಯೋತಿರ್ದರ್ಶನಾತ್' ಎಂಬುದರ ಜೊತೆಗೆ ಈ ಸೂತ್ರವನ್ನು ಸೇರಿಸಿದ್ದಾರೆ. ಏಕೆಂದರೆ 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಲ್ಲಿ 'ಅಂಗುಷ್ಠಮಾತ್ರಃ ಪುರುಷಃ ಮಧ್ಯ ಆತ್ಮನಿ ತಿಷ್ಠತಿ' ಎಂಬ ವಾಕ್ಯವನ್ನು 'ಅಂಗುಷ್ಠಮಾತ್ರಾಃ ಪುರುಷೋಂತರಾತ್ಮಾ ಸದಾ ಜನಾನಾಮ್' ಎಂಬ ವಾಕ್ಯವನ್ನು ಬ್ರಹ್ಮಪರವೆಂದು ಸಮನ್ವಯ ಮಾಡಿದ್ದಾಗಿದೆ. ಈ ಎರಡು ವಾಕ್ಯಗಳ ಮಧ್ಯದಲ್ಲಿರುವ 'ಯದಿದಂ ಕಿಂಚ' ವಾಕ್ಯವೂ ಕೂಡ ಬ್ರಹ್ಮಪರವೇ ಆಗಬೇಕು. ಅನ್ಯಪರವಾಗಿದೆಯೆಂಬ ಆಶಂಕೆಯೇ ಹುಟ್ಟುವುದಿಲ್ಲ. ಹೀಗಿರುವಾಗ ಈ ಅಧಿಕರಣವನ್ನು ಪ್ರತ್ಯೇಕವೆಂದು ಏಕೆ ಪರಿಗಣಿಸಬೇಕು?

ಆದ್ದರಿಂದ ಬ್ರಹ್ಮನು ಅಂಗುಷ್ಠಸ್ವರೂಪನಾಗಿದ್ದಾನೆಂದು 'ಶಬ್ದಾದೇವ ಪ್ರಮಿತ' ಎಂಬ ಸೂತ್ರವು ಪ್ರತಿಪಾದನೆ ಮಾಡಿದೆ. ಅದೇ ವಿಷಯದಲ್ಲೇ ಮತ್ತೊಂದು ಹೇತುವನ್ನು ಹೇಳುವುದಕ್ಕಾಗಿ ಈ ಅಧಿಕರಣವು ಹೊರಟಿದೆ. ಹಾಗಾಗಿ 'ಶಬ್ದಾದೇವ ಪ್ರಮಿತಃ' ಎಂಬ ಪ್ರಮಿತಾಧಿಕರಣದ ಶೇಷವೆಂದು ಹೇಳಬೇಕು.

ಇವರ ಮತವು ಅಯುಕ್ತವಾಗಿದೆ. ಏಕೆಂದರೆ ಶ್ರುತಿಯಿಂದ ಪ್ರಕರಣವು ಬಾಧಿತವಾಗಬಹುದು. ಹಾಗಾಗಿ ಹಿಂದಿನ-ಮುಂದಿನ ಪ್ರಕರಣಗಳು ಬ್ರಹ್ಮಪರವಾಗಿದ್ದರೂ ವಜ್ರಶ್ರುತಿಯ ಬಲದಿಂದ ವಜ್ರವೇ ಪ್ರತಿಪಾದ್ಯವಾಗಿರುತ್ತದೆಂಬ ಪೂರ್ವಪಕ್ಷವನ್ನು ನಾವು ಹಿಂದೆಯೇ ಸಮರ್ಥನೆ ಮಾಡಿದ್ದೇವೆ.

ಅಷ್ಟೇ ಅಲ್ಲದೆ, ಅಂಗುಷ್ಠವಾಕ್ಯದ್ವಯಗಳ ಮಧ್ಯದಲ್ಲೇ 'ಊರ್ಧ್ವಮೂಲೋऽವಾಕ್‌ಶಾಖ ಏಷೋऽಶ್ವತ್ಥಃ ಸನಾತನಃ' ಎಂಬ ವಾಕ್ಯವಿದೆ. ಇದು ಪ್ರಪಂಚವನ್ನು ಕುರಿತು ಹೇಳುತ್ತದೆಂದು ನೀವೂ ಕೂಡ ಒಪ್ಪಿದ್ದೀರಿ? ಇದು ಹೇಗೆ ಸಾಧ್ಯ ?

ಮತ್ತು 'ಶಬ್ದಾದೇವ ಪ್ರಮಿತಃ' ಎಂಬ ಅಧಿಕರಣಕ್ಕೆ ಇದು ಶೇಷವಾಗಿದ್ದಲ್ಲಿ ಅದರ ಜೊತೆ ಈ ಸೂತ್ರವನ್ನು ಹೇಳಬೇಕಿತ್ತು.

ಸೂತ್ರದಲ್ಲಿ ಹೇತುವನ್ನಷ್ಟೇ ಹೇಳಿದ್ದರಿಂದ 'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಇತ್ಯಾದಿ ಸೂತ್ರಗಳಲ್ಲಿ ಯೋಗ್ಯವಾದ ಸಾಧ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ನೀವೇ ಹೇಗೆ ಹೇಳುತ್ತೀರೋ ಅದರಂತೆ ಈ ಸೂತ್ರದಲ್ಲಿಯೂ ವಜ್ರಶಬ್ದಪ್ರತಿಪಾದ್ಯನಾದವನು ಬ್ರಹ್ಮನೇ ಆಗಿದ್ದಾನೆಂಬ ಸಾಧ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬಹುದು.

ಇಲ್ಲಿಗೆ ಕಂಪನಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಜ್ಯೋತಿರಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಜ್ಯೋತಿರಧಿಕರಣ

ಬ್ರಹ್ಮಸೂತ್ರ

॥ अथ ज्योतिरधिकरणम् ॥

'ಜ್ಯೋತಿದರ್ಶನಾತ್' ಎಂಬ ಸೂತ್ರದ ವ್ಯಾಖ್ಯಾನ

ब्रह्मसूत्रम् – ॥ ज्योतिर्दर्शनात् ॥ ४० ॥

ಸೂತ್ರಾರ್ಥ - 'ಯೋऽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ', ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿರುವ 'ಜ್ಯೋತಿ' ಮಹಾವಿಷ್ಣುವೇ ಆಗಿದ್ದಾನೆ ಹೊರತು ಜೀವನಲ್ಲ. ಏಕೆಂದರೆ ವಿಷ್ಣುರೇವ ಜ್ಯೋತಿಃ ಎಂಬುದಾಗಿ ವಿಷ್ಣುಪರವಾದ ಶ್ರುತಿ ಇರುವುದರಿಂದ.

ಅರ್ಥ -- ಜ್ಯೋತಿಃ = 'ಯೋಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ' ಎಂಬಲ್ಲಿ ಶ್ರುತವಾದ 'ಜ್ಯೋತಿಃ' ಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆ ಹೊರತು ಜೀವನಲ್ಲ. ಏಕೆಂದರೆ ದರ್ಶನಾತ್ = 'ವಿಷ್ಣುರೇವ ಜ್ಯೋತಿಃ', 'ವಿಷ್ಣುರೇವ ಬ್ರಹ್ಮ' ಎಂಬುದಾಗಿ ವಿಷ್ಣುವಿಷಯಕಶ್ರುತಿ ಇರುವುದರಿಂದ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಜ್ಯೋತಿರಧಿಕರಣವು ಸಮಾಪ್ತವಾಯಿತು ॥

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಜೀವನೇ ಜ್ಯೋತಿ ಎಂದು ಪೂರ್ವಪಕ್ಷ

ब्रह्मसूत्रभाष्यम् – हृदय आहितं ज्योतिः परमात्मेत्युक्तम् । तत्र 'योऽयं विज्ञानमयः प्राणेषु हृद्यन्तर्ज्योतिः पुरुष' (बृ.उ. ६-३-७) इत्यत्र 'उभौ लोकावनुसञ्चरति' (बृ. उ. ६-३-७) इति वचनाज्जीव इति प्रतीयते इति ।

ಅನುವಾದ - ಪ್ರಥಮಪಾದದ ಜ್ಯೋತಿರಧಿಕರಣದಲ್ಲಿ ಹೃದಯದಲ್ಲಿರುವ ಜ್ಯೋತಿಯೆಂದರೆ ಪರಮಾತ್ಮನೇ ಆಗಿದ್ದಾನೆಂದು ಸಮರ್ಥಿಸಲಾಯಿತು. ಆದರೆ, ಅದೇ ಜ್ಯೋತಿಯ ಬಗ್ಗೆ ಬೃಹದಾರಣ್ಯಕೋಪನಿಷತ್ತು 'ಇಂದ್ರಿಯಗಳಲ್ಲಿ ಮತ್ತು ಹೃದಯದಲ್ಲಿ ಇರುವ ವಿಜ್ಞಾನಮಯನಾದ ಪುರುಷನು ಜ್ಯೋತಿಯಾಗಿದ್ದಾನೆ' ಎಂದು ಹೇಳುತ್ತಿದೆ. ಈ ಜ್ಯೋತಿಯು 'ಭೂಲೋಕ ಹಾಗೂ ಸ್ವರ್ಗಲೋಕಗಳಲ್ಲಿ ಸಂಚಾರ ಮಾಡುತ್ತದೆ' ಎಂದು ಹೇಳಿದ್ದರಿಂದ ಜೀವನೇ ಜ್ಯೋತಿಯಾಗಬೇಕೆಂದು ತಿಳಿಯುತ್ತದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಉಭಯತ್ರಪ್ರಸಿದ್ಧವಾದ 'ಜ್ಯೋತಿ' ಎಂಬ ನಾಮಾತ್ಮಕ ಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಮೊದಲು ಶ್ರುತ್ಯಾದಿಸಂಗತಿ ಮತ್ತು ವಿಷಯಾದಿಗಳನ್ನು ತೋರಿಸುತ್ತಿದ್ದಾರೆ –

ಹೃದಯೇ ಆಹಿತಂ = ಹೃದಯ ಗುಹೆಯಲ್ಲಿರುವ, ಜ್ಯೋತಿಃ = ಜ್ಯೋತಿಯು, ಪರಮಾತ್ಮಾ = ಪರಮಾತ್ಮನೇ ಆಗಿದ್ದಾನೆಂದು, ಇತಿ = ಹೀಗೆ, ಉಕ್ತಮ್ = ಪ್ರಥಮ ಪಾದದ ಜ್ಯೋತಿರಧಿಕರಣದಲ್ಲಿ ಹೇಳಲಾಗಿದೆ, ತತ್ರ = ಅಲ್ಲಿ ಇದೇ ಜ್ಯೋತಿಯ ಬಗ್ಗೆ, ಯೋಽಯಂ =ಯಾವ ಪ್ರಸಿದ್ಧವಾದ, ವಿಜ್ಞಾನಮಯಃ = ವಿಜ್ಞಾನಮಯನೇ, ಪ್ರಾಣೇಷು = ಇಂದ್ರಿಯಗಳಲ್ಲಿ, ಹೃದಿ = ಹೃದಯದಲ್ಲಿ, ಅಂತಃ =

ಇರುವ, ಪುರುಷಃ = ಪುರುಷನೇ, ಜ್ಯೋತಿಃ = ಜ್ಯೋತಿಯಾಗಿರುತ್ತಾನೆ, ಇತ್ಯತ್ರ = ಈ ವಿಷಯದಲ್ಲಿ, ಮುಂದೆ, ಉಭೌ ಲೋಕೌ = ಭೂಲೋಕ ಹಾಗೂ ಸ್ವರ್ಗಲೋಕಗಳಲ್ಲಿ, ಅನುಸಂಚರತಿ = ಸಂಚರಿಸುತ್ತದೆ. ಇತಿ ವಚನಾತ್ = ಹೀಗೆ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದ್ದರಿಂದ, ಜೀವಃ ಇತಿ = ಜೀವನೇ ಜ್ಯೋತಿಯಾಗಿದ್ದಾನೆ ಎಂದು, ಪ್ರತೀಯತೇ = ತೋರುತ್ತದೆ. ಇತಿ = ಇಷ್ಟು ಪೂರ್ವಪಕ್ಷ.

ನಮ್ಮ ಹೃದಯದ ಜ್ಯೋತಿ ಮಹಾವಿಷ್ಣು, ಜೀವನಲ್ಲ

ब्रह्मसूत्रभाष्यम् – अत उच्यते –

ज्योतिर्दर्शनात् ।। ४० ।।

'विष्णुरेव ज्योतिर्विष्णुरेव ब्रह्मा विष्णुरेवाऽऽत्मा विष्णुरेव बलं विष्णुरेव यशो विष्णुरेवाऽऽनन्द' इति दर्शनाच्चतुर्वेदशिखायां ज्योतिर्विष्णुरेव ।

ಅನುವಾದ - ಈ ಆಕ್ಷೇಪಕ್ಕೆ ಉತ್ತರಿಸಲು ಸೂತ್ರಕಾರರು ಹೇಳುತ್ತಿದ್ದಾರೆ. ವಿಷ್ಣುವೇ ಜ್ಯೋತಿ, ವಿಷ್ಣುವೇ ಆತ್ಮಾ, ವಿಷ್ಣುವೇ ಬ್ರಹ್ಮ, ವಿಷ್ಣುವೇ ಬಲ, ವಿಷ್ಣುವೇ ಯಶಸ್ಸು, ವಿಷ್ಣುವೇ ಆನಂದನು ಆಗಿದ್ದಾನೆಂದು ಹೇಳಿದ್ದರಿಂದ, ಇಲ್ಲಿ ಹೇಳಿದ ಜ್ಯೋತಿಯು ವಿಷ್ಣುವೇ ಆಗಿದ್ದಾನೆಂದು ಚತುರ್ವೇದ ಶಿಖೆಯು ಹೇಳುತ್ತಿದೆ.

ಪ್ರತಿಪದಾರ್ಥ -- ಸಿದ್ಧಾಂತಸ್ಥಾಪನೆಗಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ –

ವಿಷ್ಣುರೇವ = ವಿಷ್ಣುವೇ, ಜ್ಯೋತಿಃ = ಜ್ಯೋತಿಯು, ವಿಷ್ಣುರೇವ = ವಿಷ್ಣುವೇ, ಆತ್ಮಾ = ಆತ್ಮನು, ವಿಷ್ಣುರೇವ = ವಿಷ್ಣುವೇ, ಬ್ರಹ್ಮಾ = ಗುಣಪರಿಪೂರ್ಣನಾದ ಬ್ರಹ್ಮಶಬ್ದವಾಚ್ಯನು, ವಿಷ್ಣುರೇವ = ವಿಷ್ಣುವೇ, ಬಲಂ = ಬಲರೂಪನು, ವಿಷ್ಣುರೇವ = ವಿಷ್ಣುವೇ, ಯಶಃ = ಯಶೋರೂಪನು, ವಿಷ್ಣುರೇವ = ವಿಷ್ಣುವೇ, ಆನಂದಃ = ಆನಂದಮಯರೂಪನು, ಇತಿ = ಹೀಗೆ, ಚತುರ್ವೇದಶಿಖಾಯಾಂ = ಚತುರ್ವೇದಶಿಖೆಯೆಂಬ ವೇದಭಾಗದಲ್ಲಿ, ದರ್ಶನಾತ್ =

ಕಾಣಿಸುತ್ತಿರುವುದರಿಂದ, ಜ್ಯೋತಿಃ = ಜ್ಯೋತಿಃಶಬ್ದವಾಚ್ಯನಾದವನು, ವಿಷ್ಣುರೇವ = ಮಹಾವಿಷ್ಣುವೇ ಆಗಿದ್ದಾನೆ.

ಪರಮಾತ್ಮನಿಗೂ ಲೋಕಸಂಚಾರವಿದೆ

ब्रह्मसूत्रभाष्यम् – 'प्राज्ञेनाऽऽत्मनाऽन्वारूढ उत्सर्जयाति' (बृ.उ. ६-५-३५) इति वचनात्तस्यापि लोकसञ्चरणमस्त्येव ॥४०॥

॥ इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये ज्योतिरधिकरणम्॥ ११॥

ಅನುವಾದ - ಜೀವನು ಪರಮಾತ್ಮನನ್ನು ಆಶ್ರಯಿಸಿ ಮರಣ ಸಂದರ್ಭದಲ್ಲಿ ದೇಹವನ್ನು ಬಿಟ್ಟು ಲೋಕಾಂತರಕ್ಕೆ ತೆರಳುತ್ತಾನೆ. ಹೀಗೆ ಹೇಳಿದ್ದರಿಂದ, ಪರಮಾತ್ಮನಿಗೂ ಕೂಡ ಲೋಕಸಂಚಾರವಿದೆ ಎಂದು ತಿಳಿಯುತ್ತದೆ.

ಪ್ರತಿಪದಾರ್ಥ -- ವಿಷ್ಣುವೇ ಜ್ಯೋತಿಯಾದರೆ, ಉಭಯಲೋಕ-ಸಂಚರಣೆವೆಂಬ ಲಿಂಗವಿರೋಧ ಬರುತ್ತದಲ್ಲವೇ? ಎಂಬ ಆಶಂಕೆಗೆ, ಸೂತ್ರದಲ್ಲಿರುವ 'ದರ್ಶನಾತ್' ಎಂಬ ಪದದಿಂದ ತಿಳಿಯುವ ಶ್ರುತಿಯಿಂದಲೇ ಉತ್ತರಿಸುತ್ತಿದ್ದಾರೆ –

ಪ್ರಾಜ್ಞೇನ ಆತ್ಮನಾ = ಪ್ರಾಜ್ಞರೂಪಿಯಾದ ಪರಮಾತ್ಮನನ್ನು, ಅನ್ವಾರೂಢಃ = ಆಶ್ರಯಿಸಿದವನಾಗಿ, ಉತ್ಸರ್ಜದ್ = ದೇಹವನ್ನು ಬಿಟ್ಟು, ಯಾತಿ = ಹೊರಡುತ್ತಾನೆ. ಇತಿ = ಹೀಗೆ, ವಚನಾತ್ = ವಾಜಸನೇಯಶ್ರುತಿಯ ವಾಕ್ಯವಿರುವುದರಿಂದ, ತಸ್ಯಾಪಿ = ವಿಷ್ಣುವಿಗೂ ಕೂಡ, ಲೋಕಸಂಚರಣಂ = ಉಭಯ ಲೋಕಸಂಚಾರವು, ಅಸ್ತ್ಯೇವ = ಇರುತ್ತದೆ. ಆದ್ದರಿಂದ, ವಿಷ್ಣುವೇ ಜ್ಯೋತಿಃಶಬ್ದದಿಂದ ಪ್ರತಿಪಾದ್ಯನಾದನು.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಜ್ಯೋತಿರಧಿಕರಣವು ಸಮಾಪ್ತವಾಯಿತು ॥

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಲೋಕದ್ವಯ ಸಂಚಾರ ವಿಷ್ಣುವಿನಲ್ಲೂ ಕೂಡುತ್ತದೆ

सत्तर्कदीपावलिः – ।। ज्योतिर्दर्शनात् ।।

ननु 'हृद्यन्तर्ज्योतिः पुरुष आत्मा, अतो जीवो भवितुमर्हति समानः सन्नुभौ लोकावनुसञ्चरन्ति' इति वाक्यशेषाद् 'अतो हृदय आहितं ज्योतिः परमात्मा' इति यदुक्तम्, तन्न सिद्ध्यतीति न वक्तव्यम् । 'विष्णुरेव ज्योतिः' इत्यादिश्रुतिविरोधात्। लोकद्वयसञ्चरणं तु परेशस्याप्यस्ति स्वेच्छावशादकर्मबद्धस्य । तथाहि श्रुतिः – 'प्राज्ञेनात्मनान्वारूढ उत्सर्जद् याति' इति । 'तदेतद् हृदय आहितम्' इत्यादिना ।।

।। इति सत्तर्कदीपावळ्याम् ज्योतिरधिकरणम् ।।

ಹೃದಯದಲ್ಲಿರುವ ಜ್ಯೋತಿಯು ಪರಮಾತ್ಮನೇ ಆಗಿದ್ದಾನೆಂದು ಹಿಂದೆ ಸಮರ್ಥಿಸಲಾಯಿತು. ಆದರೆ ಉಭಯಲೋಕದ ಅನುಸಂಚಾರವನ್ನು ವಾಕ್ಯಶೇಷದಲ್ಲಿ ಹೇಳಿರುವುದರಿಂದ ಹೃದಯದಲ್ಲಿರುವ ಜ್ಯೋತಿಯು ಪರಮಾತ್ಮನೆಂದು ಹೇಳಿದ್ದು ತಪ್ಪು. ಜೀವನೇ ಆಗಬೇಕು ಎಂದು ಪೂರ್ವಪಕ್ಷ.

ಸಿದ್ಧಾಂತ - ವಿಷ್ಣುವೇ 'ಜ್ಯೋತಿಃ' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂಬ ಶ್ರುತಿಯ ವಿರೋಧ ಬರುತ್ತದೆ. ಲೋಕದ್ವಯಸಂಚಾರವನ್ನು ಪರಮಾತ್ಮನಲ್ಲಿಯೂ ಸಹ ಕೂಡಿಸಬಹುದು.

ಯಾವುದೇ ಕರ್ಮಬಂಧನವಿಲ್ಲದೆ ಸ್ವೇಚ್ಛೆಯಿಂದ ಎಲ್ಲೆಡೆಯೂ ಪರಮಾತ್ಮನು ಸಂಚರಿಸುತ್ತಾನೆ. ಆದ್ದರಿಂದಲೇ ಶ್ರುತಿಯು 'ಶರೀರೇ ಆತ್ಮಾ ಪ್ರಾಜ್ಞೇನಾತ್ಮನಾ ಅನ್ವಾರೂಢಃ ಉತ್ಸರ್ಜನ್ ಯಾತಿ, ತದೇತದ್ ಹೃದಯ ಆಹಿತಮ್' ಎಂಬುದಾಗಿ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಜ್ಯೋತಿರಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಜೀವನೇ ಜ್ಯೋತಿಯೆಂದು ಪೂರ್ವಪಕ್ಷ

तत्वप्रदीपः – ''कतम आत्मा'' इति प्रश्ने ''योऽयं विज्ञानमयः'' प्राणेषु हृद्यन्तर्ज्योतिः पुरुषः स समानः सन्नुभौ लोकावनुसञ्चरति'' इत्युत्तरं पठ्यते । तत्र संशयः । किमयं ज्योतिः शब्दवाच्यः शारीरः स्यादाहोस्वित्परमात्मा इति । उभयलोकसञ्चरणात् ''प्राणेषु'' इति प्राणोपहितत्वाच्च शारीर इति पूर्वपक्षः ।

'ಕತಮ ಆತ್ಮಾ' ಆತ್ಮ ಎಂದರೆ ಯಾರು?' ಎಂಬ ಪ್ರಶ್ನೆಗೆ 'ಯೋऽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ' ಸ ಸಮಾನಃ ಸನ್ನುಭೌ ಲೋಕಾವನುಸಂಚರತಿ' 'ಇಂದ್ರಿಯಗಳಲ್ಲಿ ಹಾಗೂ ಮನಸ್ಸುಗಳಲ್ಲಿ ಯಾವ ವಿಜ್ಞಾನಮಯ ಸ್ವರೂಪವಾದ ಜ್ಯೋತಿ ಎಂಬ ಪುರುಷನು ನೆಲೆಸಿದ್ದಾನೋ, ಅವನು ಎಲ್ಲೆಡೆಯೂ ಸಮಾನನಾಗಿದ್ದಾನೆ. ಸ್ವರ್ಗ ಹಾಗೂ ಭೂಲೋಕಗಳಲ್ಲಿ ಸಂಚರಿಸುತ್ತಾನೆ' ಎಂಬುದಾಗಿ ಉತ್ತರಿಸಲಾಗಿದೆ. ಈ ವಾಕ್ಯವನ್ನು ನೋಡಿದಾಗ ಸಂಶಯವು ಪ್ರಾಪ್ತವಾಗುತ್ತದೆ. ಇಲ್ಲಿರುವ 'ಜ್ಯೋತಿಃ' ಎಂಬ ಶಬ್ದವು ಜೀವನನ್ನು ಪ್ರತಿಪಾದನೆ ಮಾಡುತ್ತದೋ, ಅಥವಾ ಪರಮಾತ್ಮನನ್ನೋ ? ಎಂದು. ಎರಡು ಲೋಕಗಳಲ್ಲಿ

ಸಂಚರಿಸುತ್ತಾನೆ ಎಂದು ಹೇಳಿರುವುದರಿಂದ ಮತ್ತು ಇಂದ್ರಿಯಗಳಲ್ಲಿ ನೆಲೆಸಿದ್ದಾನೆಂದು ಹೇಳಿದ್ದರಿಂದ ಶಾರೀರಾದಿ ಜೀವನೇ 'ಜ್ಯೋತಿ' ಎಂದು ಕರೆಸಿಕೊಳ್ಳುತ್ತಾನೆಂಬುದು ಪೂರ್ವಪಕ್ಷ.

ಲೋಕಾನುಚರಣವು ವಿಷ್ಣುವಿನಲ್ಲೂ ಯುಕ್ತವಾಗುತ್ತದೆ

तत्वप्रदीपः – ज्योतिर्दर्शनात् ।। ''विष्णुरेव ज्योतिः'' इति विष्णोरेव मुख्यज्योतिष्त्वोक्तेः, ''प्राणेषु'' इति प्राणनियन्तृत्वेन स्थित्याख्यानात् प्राज्ञेनाऽत्मनाऽन्वारूढ उत्सर्जद्यातीति, प्रकर्षेण आ समन्तात्, ज्ञेन परमात्मनाऽन्वारूढो जीवः शरीरमुत्सृजन् यातीति तस्यापि लोकचरणकथनात् विष्णुरेव ज्योतिरिति सिद्धान्तः ।।

ವಿಷ್ಣುವೇ ಜ್ಯೋತಿಯಾಗಿದ್ದಾನೆ. ಅವನನ್ನೇ ಮುಖ್ಯಜ್ಯೋತಿ ಎಂದು ಶ್ರುತಿಯು ಕರೆಯುತ್ತಿದೆ. ಈ ಶ್ರುತಿಯಲ್ಲೂ ಕೂಡ 'ಪ್ರಾಣೇಷು' ಎಂದು ಎಲ್ಲಾ ಇಂದ್ರಿಯಗಳನ್ನು ನಿಯಮನ ಮಾಡುವ ಮೂಲಕ ಇಂದ್ರಿಯಗಳಲ್ಲಿ ನೆಲೆಸಿದ್ದಾನೆಂದು ಹೇಳಿದ್ದರಿಂದ ವಿಷ್ಣುವೇ ಜ್ಯೋತಿ ಆಗಬೇಕು. ಮತ್ತು 'ಪ್ರಾಜ್ಞೇನಾऽತ್ಮನಾऽನ್ವಾರೂಢ ಉತ್ಸರ್ಜದ್ಯಾತಿ' ಮರಣಕಾಲದಲ್ಲಿ ಪರಮಾತ್ಮನಿಂದ ಅಧಿಷ್ಠಿತನಾಗಿ ಈ ದೇಹವನ್ನು ಬಿಟ್ಟು ಲೋಕಾಂತರಕ್ಕೆ ಜೀವನು ತೆರಳುತ್ತಾನೆ ಎಂದು ಹೇಳಲಾಗಿದೆ. ಈ ಶ್ರುತಿಯಲ್ಲಿ 'ಪ್ರಾಜ್ಞೇನಾऽತ್ಮನಾऽನ್ವಾರೂಢಃ' ಎಂಬ ಶ್ರುತಿಗೆ ಹೀಗರ್ಥ - 'ಪ್ರಕೃಷ್ಟವಾದ ವ್ಯಾಪ್ತನಾದ ಪರಮಾತ್ಮನಿಂದ ಅಧಿಷ್ಠಿತನಾದ ಜೀವನು ಶರೀರವನ್ನು ಬಿಟ್ಟು ತೆರಳುತ್ತಾನೆ' ಎಂದು. ಹೀಗೆ ವಿಷ್ಣುವಿಗೂ ಕೂಡ ಲೋಕಗಮನವನ್ನು ಹೇಳಿದ್ದರಿಂದ ವಿಷ್ಣುವೇ ಜ್ಯೋತಿಯಾಗಿದ್ದಾನೆಂಬುದು ಅಧಿಕರಣದ ಸಿದ್ಧಾಂತ.

ವಿಷ್ಣುವೇ ಬಲ, ವಿಷ್ಣುವೇ ಯಶ

तत्वप्रदीपः – विष्णुरेव बलम्, ''स वै बलं बलिनां चापरेषाम्'' इति हि भागवते । विष्णुरेव यशः, ''तस्य नाम महद्यशः'' इति हि श्रुतिः । ''विज्ञानमयः प्राणेषु'' इत्यादि शब्दलिङ्गानां जीव एव सावकाशत्वप्रतीतेः पुनरुक्तिर्ज्योतिः शब्दसमन्वयस्य ।।

।। इति ज्योतिरधिकरणम् ।।

ಶ್ರುತಿಯಲ್ಲಿರುವ 'ಬಲಂ' ಎಂಬ ಪದವೂ ಕೂಡ ವಿಷ್ಣುವಾಚಕವೇ ಆಗಿದೆ. ಏಕೆಂದರೆ 'ಸ ವೈ ಬಲಂ ಬಲಿನಾಂ ಚಾಪರೇಷಾಮ್' ಎಲ್ಲಾ ಬಲಿಷ್ಠರಿಗೂ ಬಲವನ್ನು ತುಂಬುತ್ತಾನಾದ್ದರಿಂದ ಇವನು ನಿಜವಾದ ಬಲ ಎಂದು ಕರೆಸಿಕೊಳ್ಳುತ್ತಾನೆ ಎಂದು ಭಾಗವತವು ಹೇಳುತ್ತಿದೆ. 'ಯಶಃ' ಎಂದರೂ ಕೂಡ ವಿಷ್ಣುವೇ. 'ತಸ್ಯ ನಾಮ ಮಹದ್ಯಶಃ' ಎಂಬ ಶ್ರುತಿಯು ವಿಷ್ಣುವನ್ನು 'ಯಶ' ಎಂದು ಕರೆದಿದೆ. 'ವಿಜ್ಞಾನಮಯಃ ಪ್ರಾಣೇಷು' ಇತ್ಯಾದಿಯಾದ ಶಬ್ದಲಿಂಗಗಳು ಜೀವನಲ್ಲೇ ಸಾವಕಾಶವಾಗಿವೆ. ಆದ್ದರಿಂದ ಪುನಃ ಜ್ಯೋತಿ ಎಂಬ ಶಬ್ದದ ಸಮನ್ವಯದ ಅನಿವಾರ್ಯತೆ ಈ ಅಧಿಕರಣದಲ್ಲಿ ಇರುತ್ತದೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ ಜ್ಯೋತಿರಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

'ಜ್ಯೋತಿಃ' ಎಂಬ ಶಬ್ದಸಮನ್ವಯಕ್ಕಾಗಿ ಕಂಪನಾಧಿಕರಣ

तत्वप्रकाशिका – ।। ज्योतिर्दर्शनात् ।।

अत्र जीवेशयोर्ज्ञानरूपत्वेन हृदयाहितत्वेन च साधारणस्य ज्योतिर्नाम्नो विष्णौ समन्वयप्रतिपादनादस्ति शास्त्रादिसङ्गतिः । श्रुत्यादिसङ्गतिं विषयादिकं च दर्शयति – हृदय इति ।।

ಈ ಅಧಿಕರಣದಲ್ಲಿ ಜೀವ ಮತ್ತು ಪರಮಾತ್ಮ ಇಬ್ಬರೂ ಕೂಡ ಜ್ಞಾನಸ್ವರೂಪರಾದ್ದರಿಂದ ಮತ್ತು ಹೃದಯದಲ್ಲಿರುವವರಾದ್ದರಿಂದ 'ಜ್ಯೋತಿಃ' ಎಂಬ ಶಬ್ದವು ಉಭಯಸಾಧಾರಣವಾಯಿತು. ಇಂತಹ ನಾಮಾತ್ಮಕಶಬ್ದವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಆದ್ದರಿಂದಲೇ ಶಾಸ್ತ್ರಸಂಗತಿ-ಅಧ್ಯಾಯಸಂಗತಿ-ಪಾದಸಂಗತಿಗಳಿರುತ್ತವೆ. ಶ್ರುತಿಸಂಗತಿ-ಅಧಿಕರಣಸಂಗತಿ ಮತ್ತು ವಿಷಯಾದಿಗಳನ್ನು 'ಹೃದಯೇ' ಇತ್ಯಾದಿಯಾಗಿ ತೋರಿಸುತ್ತಿದ್ದಾರೆ.

ಬೃಹದಾರಣ್ಯಕೋಪನಿಷತ್ತಿನಲ್ಲಿ ಜ್ಯೋತಿಯ ಬಗ್ಗೆ

तत्वप्रकाशिका – 'ज्योतिश्चरणाभिधानात्' इति हृदयाहितं ज्योतिः परमात्मेत्युक्तम् । वाजसनेयके च तत् श्रूयते – योऽयमिति ।।

'ಜ್ಯೋತಿಶ್ಚರಣಾಭಿಧಾನಾತ್' ಎಂಬ ಪ್ರಥಮಪಾದದಲ್ಲಿ ಬಂದಿರುವಂತಹ ಸೂತ್ರದಲ್ಲಿ ಹೃದಯದಲ್ಲಿರುವ ಜ್ಯೋತಿಯು ಪರಮಾತ್ಮನೇ ಆಗಿದ್ದಾನೆಂದು ಹೇಳಲಾಗಿದೆ. ಆದರೆ, ಬೃಹದಾರಣ್ಯಕೋಪನಿಷತ್ತಿನಲ್ಲಿ ಆ ಜ್ಯೋತಿಯು 'ಯೋऽಯಂ' ಇತ್ಯಾದಿ ವಾಕ್ಯಗಳಿಂದ ವರ್ಣಿಸಲ್ಪಟ್ಟಿದೆ.

'ಜ್ಯೋತಿಃ' ಎಂದರೆ ಯಾರು ?

तत्वप्रकाशिका – तच्च यदि विष्णोरन्यत् स्यात् तदा पूर्वोक्तमप्यन्यत् प्रसज्यत सत्यवश्यं निर्णेयम् । तज्जोतिर्विषयः ।

ಈ ಜ್ಯೋತಿಯು ವಿಷ್ಣುವಿಗಿಂತ ಬೇರೆಯದ್ದಾದರೆ ಹಿಂದೆ ಹೇಳಲ್ಪಟ್ಟ ಜ್ಯೋತಿಯೂ ಸಹ ವಿಷ್ಣುವಿಗಿಂತ ಭಿನ್ನವೇ ಆಗುತ್ತದೆ. ಆದ್ದರಿಂದ, ಈ 'ಜ್ಯೋತಿಃ' ಶಬ್ದದಿಂದ ಯಾರು ಪ್ರತಿಪಾದ್ಯರೆಂಬುದನ್ನು ಅವಶ್ಯವಾಗಿ ನಿರ್ಣಯಿಸಬೇಕು. ಬೃಹದಾರಣ್ಯಕದಲ್ಲಿರುವ ಈ ಜ್ಯೋತಿಸ್ಸೇ ವಿಷಯವಾಗಿದೆ.

ಜೀವನೋ ? ಮಹಾವಿಷ್ಣುವೋ ?

तत्वप्रकाशिका – किं विष्णुर्जीवो वेति सन्देहः । उक्तसाधारण्यं सन्देहबीजम्। जीव एवेदं ज्यातिरिति पूर्वः पक्षः ।

ಜ್ಯೋತಿಃಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೋ ಅಥವಾ ಜೀವನೋ ? ಎಂದು ಸಂದೇಹ. ಜ್ಞಾನರೂಪತ್ವ-ಹೃದಯೇಆಹಿತತ್ವ ಮೊದಲಾದ ಸಮಾನಧರ್ಮವಿರುವಿಕೆಯೇ ಸಂದೇಹ ಬೀಜ. ಜೀವನೇ 'ಜ್ಯೋತಿಃ' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಪೂರ್ವಪಕ್ಷ.

ಉಭಯಲೋಕ ಸಂಚಾರ ಜೀವನಲ್ಲಿ ಮಾತ್ರ

तत्वप्रकाशिका – 'स समानः सन्नुभौ लोकावनुसञ्चरति' इति जीवलिङ्गात्। तस्य हि कर्मवशादुभयलोकसञ्चरणं युक्तम्

'स समानः सन्नुभौ लोकावनुसंचरति' 'ಸಕಲರ ಹೃದಯದಲ್ಲಿ ಜ್ಯೋತಿಯು ಸಮಾನವಾಗಿ ಭೂಲೋಕದಲ್ಲಿ ಮತ್ತು ಸ್ವರ್ಗಲೋಕದಲ್ಲಿ ಸಂಚರಿಸುತ್ತದೆ. ಎಂದು, ಜೀವಲಿಂಗವೇ ಶ್ರುತವಾಗಿದೆ. ಕರ್ಮಾಧೀನವಾಗಿ ಮಾಡುವ ಉಭಯಲೋಕಸಂಚಾರವು ಜೀವನಲ್ಲಿ ಮಾತ್ರ ಯುಕ್ತವಾಗುತ್ತದೆ.

ಜೀವಲಿಂಗಗಳೇ ಎಲ್ಲೆಡೆ ಇವೆ

तत्वप्रकाशिका – 'इमं लोकमतिक्रामति मृत्यो रुपाणि' 'स वा अयं पुरुषो जायमानः शरीरमभिसम्पद्यमानः पाप्मभिः संसृज्यते । स उत्क्रामन् म्रियमाणः पाप्मनो विजहाति' 'उभयानपि पाप्मन आनन्दांश्च पश्यति स यत्र पस्वपिति' 'स्वप्नान्त उच्चावचमीयमानो' 'भयानि पश्यन्' इत्यादिजीवलिङ्गाच्च ।

'ಇಮಂ ಲೋಕಮತಿಕ್ರಾಮತಿ ಮೃತ್ಯೋ ರೂಪಾಣಿ' ಆ ಜ್ಯೋತಿಯು ಮೃತ್ಯುಸ್ವರೂಪವಾದ ಲೋಕವನ್ನು ಕುರಿತು ಜಾಗ್ರದವಸ್ಥೆಯಲ್ಲಿ ಅತಿಕ್ರಮಣ ಮಾಡುತ್ತದೆ, ಅಥವಾ ಭೂಲೋಕವನ್ನು ಅತಿಕ್ರಮಣ ಮಾಡುತ್ತದೆ. 'ಸ ವಾ ಅಯಂ ಪುರುಷೋ ಜಾಯಮಾನಃ ಶರೀರಮಭಿಸಂಪದ್ಯಮಾನಃ ಪಾಪ್ಮಭಿಃ ಸಂಸೃಜ್ಯತೇ । ಸ ಉತ್ಕ್ರಮನ್ ಮ್ರಿಯಮಾಣಃ ಪಾಪ್ಮನೋ ವಿಜಹಾತಿ' ಆ ಜ್ಯೋತಿರೂಪನಾದ ಪುರುಷನು ಹುಟ್ಟಿದ ಮೇಲೆ, ಅಂದರೆ ಶರೀರದಿಂದ ಯುಕ್ತನಾದ ಮೇಲೆ ಪಾಪದಿಂದ ಯುಕ್ತನಾಗುತ್ತಾನೆ. ಮತ್ತು, ಶರೀರದಿಂದ ಹೊರ ಹೋದಾಗ ಪಾಪವನ್ನು ತ್ಯಾಗ ಮಾಡುತ್ತಾನೆ. 'ಉಭಯಾನಪಿ ಪಾಪ್ಮನಃ ಆನಂದಾಂಶ್ಚ ಪಶ್ಯತಿ ಸ ಯತ್ರ ಪ್ರಸ್ವಪಿತಿ' ಆ ಜ್ಯೋತಿಪುರುಷನು ಪಾಪ ಮತ್ತು ಆನಂದ ಇವೆರಡನ್ನು ನೋಡುತ್ತಾನೆ. ಆ ಜ್ಯೋತಿಪುರುಷನು ಎಲ್ಲಿ ಮಲಗುತ್ತಾನೋ 'ಸ್ವಪ್ನಾಂತ

ಉಚ್ಚಾವಚಮೀಯಮಾನಃ' ಆ ಜ್ಯೋತಿಯು ಸ್ವಪ್ನದಲ್ಲಿ ನಾನಾಪ್ರಕಾರವಾದ ಕೆಟ್ಟ ಹಾಗೂ ಒಳ್ಳೆಯ ದೇಹಗಳಲ್ಲಿ ಪ್ರವಿಷ್ಟನಾಗುತ್ತಾನೆ. 'ಭಯಾನಿ ಪಶ್ಯನ್' ಭಯಗಳನ್ನು ನೋಡುತ್ತಾನೆ. ಇತ್ಯಾದಿಯಾಗಿ ಜೀವನ ಲಿಂಗವೇ ಎಲ್ಲೆಡೆಯಲ್ಲಿ ಕೇಳಿಸುತ್ತಿದೆ.

ಜ್ಯೋತಿಯಲ್ಲಿ ಇಲ್ಲ

तत्वप्रकाशिका – किञ्च 'किं ज्योतिरयं पुरुषः? इति आदित्यज्योतिः सम्राडिति होवाच' इत्यादिना यस्य पुरुषस्याऽऽदित्यादिज्योतिष्त्वमुक्तं तस्यैव 'आत्मैवास्य ज्योतिर्भवति' इति सु(षु)प्त्यादावात्मज्योतिष्त्वोक्तौ 'कतम आत्मा' इति तदात्मप्रश्ने ज्योतिरुच्यते ।

ಮತ್ತು 'ಕಿಂ ಜ್ಯೋತಿರಯಂ ಪುರುಷಃ' 'ಇತ್ಯಾದಿತ್ಯಜ್ಯೋತಿಃ ಸಮ್ರಾಡಿತಿ ಹೋವಾಚ' ಇತ್ಯಾದಿ ಪ್ರಕರಣದಲ್ಲಿ ಜನಕರಾಜರು ಯಾಜ್ಞವಲ್ಕ್ಯರನ್ನು ಕುರಿತು ಪ್ರಶ್ನಿಸುತ್ತಾರೆ. ಜೀವಾತ್ಮರಿಗೆ ಯಾರ ತೇಜಸ್ಸಿನಿಂದ ಜ್ಞಾನ ಪ್ರಾಪ್ತವಾಗುತ್ತದೆ? ಎಂದು. ಆವಾಗ, ಯಾಜ್ಞವಲ್ಕ್ಯರು ಹೀಗೆ ಉತ್ತರಿಸುತ್ತಾರೆ. 'ಎಲೈ ರಾಜನೇ ! ಆದಿತ್ಯಪ್ರಕಾಶದಿಂದ ಜೀವನಿಗೆ ಜ್ಞಾನ ಪ್ರಾಪ್ತವಾಗುತ್ತದೆ' ಎಂದು. ಈ ವಾಕ್ಯದಿಂದ ಪುರುಷನಿಗೆ ಆದಿತ್ಯಾದಿಪದಾರ್ಥಜ್ಞಾನವು ಸಾಧನವೆಂದು ತಿಳಿಸಿ, ಮುಂದೆ ಆ ಪುರುಷನಿಗೆ 'ಆತ್ಮೈವಾಸ್ಯ ಜ್ಯೋತಿಃ' ಆತ್ಮನೇ ಜ್ಯೋತಿಯಾಗಿದ್ದಾನೆಂದು ಸುಷುಪ್ತ್ಯಾದ್ಯವಸ್ಥೆಗಳಲ್ಲಿ ಹೇಳಲಾಗಿದೆ. ಮುಂದೆ ಜನಕರಾಜರು 'ಕತಮ ಆತ್ಮಾ' ಯಾರು ಈ ಆತ್ಮಾ? ಎಂದು ಪ್ರಶ್ನಿಸಿದಾಗ, 'ಹೃದ್ಯಂತರ್ಜ್ಯೋತಿಃ' ಎಂದು ಉತ್ತರಿಸಿದ್ದಾರೆ.

ಈ ಪ್ರಕರಣವನ್ನು ಗಮನಿಸಿದಾಗ, ಜ್ಯೋತಿಯೆಂದರೆ ಜೀವನೇ ಆಗಬೇಕು. ಏಕೆಂದರೆ, ಹಿಂದೆ ಪುರುಷರೂಪನಾದ ಜ್ಯೋತಿಗೆ ಆದಿತ್ಯಜ್ಯೋತಿಷ್ಟ್ವವನ್ನು ಹೇಳಲಾಗಿದೆ.

ಆದಿತ್ಯಾದಿ ಜ್ಯೋತಿಷ್ಟ್ವವು ವಿಷ್ಣುವಿನಲ್ಲಿ ಕೂಡುವುದಿಲ್ಲ. ಏಕೆಂದರೆ, ವಿಷ್ಣುವಿನ ವಿಷಯದಲ್ಲಿ 'ನ ತತ್ರ ಸೂರ್ಯೋ ಭಾತಿ' ಪರಮಾತ್ಮನನ್ನು ಸೂರ್ಯಾದಿಗಳು ಪ್ರಕಾಶ ಪಡಿಸಲಾರರು ಎಂಬುದಾಗಿ ಸೂರ್ಯಪ್ರಕಾಶಕತ್ವವನ್ನು ನಿಷೇಧಿಸಲಾಗಿದೆ.

ಪರಮಾತ್ಮನೇ ಜ್ಯೋತಿಯೆಂದು ಸಿದ್ಧಾಂತ

तत्वप्रकाशिका – नच वाच्यं यस्यादित्यादिज्योतिष्त्वमुक्तं स जीव एवास्तु, तस्य च 'आत्मैवास्य' इत्यत्र परमात्मज्योतिष्त्वमुच्यते । तदात्मप्रश्ने च ज्योतिरात्मानात् परमात्मैव ज्योतिरिति ।

ಇನ್ನು ಆದಿತ್ಯಾದಿಜ್ಯೋತಿಷ್ಟ್ವವನ್ನು ಯಾರಿಗೆ ಹೇಳಲಾಗಿದೆಯೋ, ಅವನು ಜೀವನೇ ಆಗಲಿ. ಅಂತಹ ಜೀವನಿಗೆ 'ಆತ್ಮೈವಾಸ್ಯ ಜ್ಯೋತಿರ್ಭವತಿ' ಎಂಬ ವಾಕ್ಯದಲ್ಲಿ ಪರಮಾತ್ಮಜ್ಯೋತಿಷ್ಟ್ವವನ್ನು ಹೇಳಲಾಗಿದೆ. ಏಕೆಂದರೆ, ಇಲ್ಲಿ ಆತ್ಮನ ಬಗ್ಗೆ ಜನಕರು ಪ್ರಶ್ನಿಸಿದಾಗ, ಯಾಜ್ಞವಲ್ಕ್ಯರು 'ಹೃದ್ಯಂತರ್ಜ್ಯೋತಿಃ' ಎಂದು ಉತ್ತರಿಸಿದ್ದರಿಂದ ಪರಮಾತ್ಮನೇ ಜ್ಯೋತಿಯಾಗುತ್ತಾನೆ.

ಪರಮಾತ್ಮನೇ ಜ್ಯೋತಿ ಎನ್ನಲು ಅವಧಾರಣ

तत्वप्रकाशिका – जीवस्य परमात्मज्योतिष्त्वस्यैवायोगात् । तथात्वे परमात्मनोऽस्तमयादिशून्यस्य जाग्रत्यपि ज्योतिष्त्वप्राप्त्या तदा 'आदित्येनैवायं ज्योतिषाऽऽस्ते' 'चन्द्रमसैवायं ज्योतिषाऽऽस्ते' इत्यवधारणानुपपत्तेः ।

ಇದು ತಪ್ಪು. ಏಕೆಂದರೆ, ಇಲ್ಲಿ ಜೀವನಿಗೆ ಪರಮಾತ್ಮಜ್ಯೋತಿಷ್ಟ್ವವನ್ನು ಹೇಳುವುದು ಕೂಡುವುದಿಲ್ಲ. ಒಂದು ವೇಳೆ ಜೀವನಿಗೆ ಪರಮಾತ್ಮಜ್ಯೋತಿಷ್ಟ್ವವನ್ನು ಹೇಳುವುದಾದರೆ, ಪರಮಾತ್ಮನಿಗೆ ನಾಶ ಮೊದಲಾದವುಗಳು ಇಲ್ಲದ ಕಾರಣ, ಜಾಗ್ರದವಸ್ಥೆಯಲ್ಲಿಯೂ ಕೂಡ ಪರಮಾತ್ಮಜ್ಯೋತಿಷ್ಟ್ವವನ್ನು ಹೇಳಬೇಕಾಗುತ್ತದೆ. ಆವಾಗ, 'ಆದಿತ್ಯೇನೈವಾಯಂ ಜ್ಯೋತಿಷಾಸ್ತೇ' ಸೂರ್ಯರೂಪವಾದ ಜ್ಯೋತಿಯಿಂದಲೇ ಇರುತ್ತಾನೆ. 'ಚಂದ್ರಮಸೈವಾಯಂ ಜ್ಯೋತಿಷಾಸ್ತೇ' ಚಂದ್ರರೂಪ ಜ್ಯೋತಿಯಿಂದಷ್ಟೇ ಇರುತ್ತಾನೆ, ಇತ್ಯಾದಿಯಾಗಿ ಅವಧಾರಣಾಪೂರ್ವಕವಾದ ವಚನವು ತಪ್ಪಾಗಬೇಕಾಗುತ್ತದೆ.

ಪೂರ್ವಪಕ್ಷದ ಅಭಿಪ್ರಾಯ

तत्वप्रकाशिका – तदा विशिष्याऽऽत्मज्योतिष्त्वोक्त्यनुपपत्तेश्च । अत्रायं

पुरुषः स्वयं ज्योतिर्भवतीत्यस्यैवार्थस्य प्रत्यभिज्ञानाच्च । अतो जीव एवेदं ज्योतिरिति प्रागुक्तमपि स एवेति भावः ।

ಮತ್ತು ಸುಷುಪ್ತವಸ್ಥೆಯಲ್ಲಿಯೂ ಪರಮಾತ್ಮನೇ ಜ್ಯೋತಿಯೆಂದು ಹೇಳಿದ್ದು ಉಪಪನ್ನವಾಗುವುದಿಲ್ಲ. ಏಕೆಂದರೆ, ಪರಮಾತ್ಮಜ್ಯೋತಿಯು ನಿರಂತರವಾಗಿರುವುದರಿಂದ ಸುಷುಪ್ತವಸ್ಥೆಯಲ್ಲಿ ಇದ್ದಾನೆಂದು ಹೇಳಲು ಕಾರಣವಿಲ್ಲ.

ಅಷ್ಟೇ ಅಲ್ಲದೆ, 'ಆತ್ಮೈವಾಸ್ಯ ಜ್ಯೋತಿರ್ಭವತಿ' ಎಂಬ ಈ ಪ್ರಕರಣದಲ್ಲೇ ಮುಂದೆ 'ತತ್ರಾಯಂ ಪುರುಷಃ ಸ್ವಯಂಜ್ಯೋತಿರ್ಭವತಿ' ಸ್ವಪ್ನಾವಸ್ಥೆಯಲ್ಲಿ ಜೀವನು ಸ್ವಯಂಪ್ರಕಾಶನಾಗಿರುತ್ತಾನೆ ಎಂಬ ಅರ್ಥದ ಪ್ರತ್ಯಭಿಜ್ಞಾನವೇ ಬರುತ್ತದೆ. ಆದ್ದರಿಂದ ಜೀವನೇ 'ಜ್ಯೋತಿಃ' ಎಂಬ ಶಬ್ದದಿಂದ ಪ್ರತಿಪಾದ್ಯನು. 'ಜ್ಯೋತಿಶ್ಚರಣಾಭಿಧಾನಾತ್' ಎಂದು ಪ್ರಥಮಪಾದದಲ್ಲಿ ಹೇಳಲ್ಪಟ್ಟ ಜ್ಯೋತಿಯೂ ಕೂಡ ಜೀವನೇ ಆಗುತ್ತಾನೆಂದು ಪೂರ್ವಪಕ್ಷದ ಅಭಿಪ್ರಾಯ.

ಸಿದ್ಧಾಂತಸ್ಥಾಪಕವಾದ ಸೂತ್ರ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। विष्णुरेवेदं ज्योतिर्नतु जीवः ।

ಸಿದ್ಧಾಂತಸ್ಥಾಪನೆಗಾಗಿ ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅತ' ಇತ್ಯಾದಿಯಾಗಿ. ವಿಷ್ಣುವೇ ಈ 'ಜ್ಯೋತಿಃ' ಎಂಬ ಶಬ್ದದಿಂದ ಪ್ರತಿಪಾದ್ಯನು, ಜೀವ ಎಂದಲ್ಲ.

ಉಭಯಲೋಕ ಸಂಚಾರವೆಂಬ ಜೀವಲಿಂಗಕ್ಕೆ ವಿರೋಧವಿಲ್ಲ

तत्वप्रकाशिका – ज्योतिः श्रुतेर्विष्ण्वेकवाचित्वश्रवणादित्यर्थः । ज्योतिः र्विष्णुश्चेत् उभयलोकसञ्चरणलिङ्गविरोधः? इत्यत आह – प्राज्ञेनेति ।।

ಏಕೆಂದರೆ, 'ಜ್ಯೋತಿಃ' ಎಂಬ ಶಬ್ದವು ಶ್ರುತಿಯಲ್ಲೆಲ್ಲೆಡೆ ಕೇವಲ ವಿಷ್ಣುಪರವೇ ಆಗಿರುತ್ತದೆ. ಜ್ಯೋತಿಯು ವಿಷ್ಣುವಾದರೆ, ಉಭಯಲೋಕಸಂಚಾರವೆಂಬ ಜೀವಲಿಂಗವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ಪ್ರಾಜ್ಞೇನ' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ.

ಪರಮಾತ್ಮನಲ್ಲಿ ಉಭಯಲೋಕ ಸಂಚಾರ

तत्वप्रकाशिका – जीवमादायेश्वरस्यैवोभयलोकसञ्चरणोक्तेर्न तद्विरोध इत्यर्थः।

ಪರಮಾತ್ಮನು ಜೀವನನ್ನು ಕರೆದುಕೊಂಡು ಉಭಯ ಲೋಕಗಳನ್ನು ಸಂಚಾರ ಮಾಡುತ್ತಾನೆಂದು ಶ್ರುತಿಯ ಅಭಿಪ್ರಾಯ. ಹಾಗಾಗಿ, ಶ್ರುತಿವಿರೋಧಕ್ಕೆ ಅವಕಾಶವಿಲ್ಲ.

ಇಮಂ ಲೋಕಮತಿಕ್ರಾಮತಿ ಎಂಬ ಪ್ರತ್ಯರ್ಥ

तत्वप्रकाशिका – न चेमं लोकमतिक्रामति मृत्यो रूपाणीत्याद्युक्तलिङ्गविरोधः। 'द्रष्टुश्चक्षुषः' इत्यादिवदन्तर्णीतणिच्त्वेनोपपत्तेः ।

'ಇಮಂ ಲೋಕಮತಿಕ್ರಾಮತಿ ಮೃತ್ಯೋ ರೂಪಾಣಿ' ಇತ್ಯಾದಿ ಶ್ರುತಿಯಲ್ಲಿ ಲೋಕವನ್ನು ಅತಿಕ್ರಮಣ ಮಾಡಿ ಹೋಗುತ್ತಾನೆಂದು ಜೀವಲಿಂಗವನ್ನು ಹೇಳಿದ್ದಾರಲ್ಲವೇ? ಆದ್ದರಿಂದ 'ಜ್ಯೋತಿಃ' ಶಬ್ದಕ್ಕೆ ಬಿಷ್ಣು ಎಂಬ ಅರ್ಥ ಹೇಳಿದರೆ ವಿರೋಧ ಬರುತ್ತದೆ, ಎಂದು ಪ್ರಶ್ನಿಸಬಾರದು. ಏಕೆಂದರೆ, ಈ ಶ್ರುತಿಯಲ್ಲಿ 'ಅತಿಕ್ರಾಮತಿ' ಎಂಬ ಶಬ್ದವು ಅಂತರ್ಗೀತವಾದ 'ಣಿಚ್' ಪ್ರತ್ಯಯಾಂತವಾಗಿದೆ. 'ದ್ರಷ್ಟುಶ್ಚಕ್ಷುಷಃ' ಎಂಬ ಶ್ರುತಿಯಲ್ಲಿರುವ 'ದ್ರಷ್ಟುಃ' ಎಂಬ ಶಬ್ದವು ಹೇಗೆ ಅಂತರ್ಗೀತವಾದ 'ಣಿಚ್' ಪ್ರತ್ಯಯಾಂತವಾಗಿದೆಯೋ, ಅದರಂತೆ ಇಲ್ಲಿಯೂ ಸಹ ತಿಳಿಯಬೇಕು.

ಹಾಗಾದರೆ, ಜ್ಯೋತಿಪುರುಷನಿಗೆ ಆದಿತ್ಯಾದಿಜ್ಯೋತಿಷ್ಟ್ವವನ್ನು ಹೇಳಿದ್ದರ ವಿರೋಧ ಬರುತ್ತದಲ್ಲವೇ? ಎಂದು ಕೇಳಿದರೆ, ಆದಿತ್ಯಾದಿ ಜ್ಯೋತಿರ್ಯುಕ್ತನಾದ 'ಅಯಂ ಪುರುಷಃ' ಎಂಬ ವಾಕ್ಯಪ್ರತಿಪಾದ್ಯನಾದ ಪುರುಷನು ಜೀವನೇ ಆಗಿದ್ದಾನೆಂದು ನಾವು ಒಪ್ಪುತ್ತೇವೆ. ಅಂದರೆ ಅತಿಕ್ರಾಮತಿ ಎಂಬ ಪದವು ಅತ್ರಿಕಾಮಯತಿ ಎಂಬ ಅರ್ಥದಲ್ಲಿರುತ್ತದೆ.

ಆದಿತ್ಯಾದಿ ಜ್ಯೋತಿಷ್ಟಾದಿತ್ವವು ಪರಮಾತ್ಮನಲ್ಲಿಲ್ಲ

तत्वप्रकाशिका – न चादित्यादिज्योतिष्त्वविरोधः । आदित्यादिज्योतिष्मतः 'अयं पुरुषः' इत्युक्तस्य जीवत्वेनाभ्युपगमात् ।

ಹಾಗಾದರೆ ಆದಿತ್ಯಾದಿಜ್ಯೋತಿಷ್ಟ್ವದ ವಿರೋಧ ಬರುತ್ತದಲ್ಲವೇ? ಎನ್ನಬಾರದು. ಆದಿತ್ಯಾದಿ ಜ್ಯೋತಿಷ್ಟ್ವೇನ ವರ್ಣಿತನಾದ ಪುರುಷನೇ ಮುಂದೆ 'ಅಯಂ ಪುರುಷಃ' ಎಂಬ ವಾಕ್ಯದಲ್ಲಿ ಹೇಳಿದ ಪುರುಷನು ಜೀವನೇ ಆಗಿದ್ದಾನೆಂಬುದನ್ನು ನಾವು ಒಪ್ಪುತ್ತೇವೆ.

ಆತ್ಮನೆನಿಸಿದ ವಿಷ್ಣುವೇ ಜ್ಯೋತಿ

तत्वप्रकाशिका – नच तस्यैव स्वयंज्योतिष्ट्वेनोक्तस्य ज्योतिष्ट्वमुच्यत इति वाच्यम् । 'आत्मैवास्य ज्योतिर्भवति' इति 'कतम आत्मा' इत्यात्मशब्दोदितस्य विष्णुत्वात् नचैवं सत्यवधारणविरोधः । अवधारणस्य बाह्यज्योतिषां मध्ये सूर्यादीनां प्राधान्यज्ञापनार्थत्वेनोपपत्तेः । अन्यव्यावर्तकत्वस्य वागादिसत्त्वेनायोगात् ।

ಆದಿತ್ಯಾದಿ ಜ್ಯೋತಿಷ್ಟ್ವದಿಂದ ವರ್ಣಿತನಾದ ಜ್ಯೋತಿಪುರುಷನೇ ಮುಂದೆ, 'ಅತ್ರಾಯಂ ಜ್ಯೋತಿರ್ಭವತಿ' ಎಂಬಲ್ಲಿ ಜ್ಯೋತಿಷ್ಟ್ವೇನ ವರ್ಣಿತನಾಗಿದ್ದಾನೆ. ಈ ಹಿಂದಿನ ಮುಂದಿನ ವಾಕ್ಯಗಳನ್ನು ಗಮನಿಸಿದಾಗ 'ಆತ್ಮೈವಾಸ್ಯ ಜ್ಯೋತಿರ್ಭವತಿ' ಎಂಬ ಮಧ್ಯದಲ್ಲಿರುವ ವಾಕ್ಯದಿಂದಲೂ ಜೀವನನ್ನೇ ಸ್ವೀಕರಿಸಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ, 'ಆತ್ಮೈವಾಸ್ಯ ಜ್ಯೋತಿರ್ಭವತಿ' 'ಕತಮ ಆತ್ಮಾ' ಎಂಬಲ್ಲಿ ಆತ್ಮಶಬ್ದವಿರುವುದರಿಂದ ಇಲ್ಲಿ ಪ್ರತಿಪಾದ್ಯನಾದ ಜ್ಯೋತಿಃಪದಾರ್ಥವು ವಿಷ್ಣುವೇ ಆಗಿದ್ದಾನೆ.

ಹಾಗಾದರೆ, ಜೀವನಿಗೆ ಆತ್ಮಜ್ಯೋತಿಷ್ಟ್ವವು ಯಾವಾಗಲೂ ಇರುವುದರಿಂದ ಶ್ರುತಿಯಲ್ಲಿ 'ಆದಿತ್ಯೇನೈವ' 'ಚಂದ್ರಮಸೈವ' ಎಂಬುದಾಗಿ ಅವಧಾರಣವನ್ನು ಹೇಳಿದ್ದು ತಪ್ಪಲ್ಲವೇ? ಎಂದು ಪ್ರಶ್ನಿಸಬಾರದು. ಬಾಹ್ಯವಾದ ತೇಜಸ್ಸುಗಳ ಮಧ್ಯದಲ್ಲಿ ಸೂರ್ಯ-ಚಂದ್ರ ಮೊದಲಾದವರಿಗೆ ಪ್ರಾಧಾನ್ಯವನ್ನು ತಿಳಿಸುವುದಕ್ಕಾಗಿ ಹಾಗೆ ಅವಧಾರಣವನ್ನು ಶ್ರುತಿಯು ಹೇಳಿದೆ. ಹೊರತು, ಅವಧಾರಣವು ಅನ್ಯಪದಾರ್ಥಗಳ ವ್ಯಾವೃತ್ತಿಗೋಸ್ಕರವೆಂದರೆ ಸೂರ್ಯ-ಚಂದ್ರಾದಿ-ಗಳಿರುವಾಗಲೂ ವಾಗಾದಿ ಇಂದ್ರಿಯಗಳು ಜ್ಞಾನಸಾಧನವಾಗಿರುವುದರಿಂದ ಅವಧಾರಣವು ಅಯುಕ್ತವಾಗುತ್ತದೆ.

ಸುಷುಪ್ತಿಯಲ್ಲಿ ಸೂರ್ಯಾದಿ ತೇಜಸ್ಸುಗಳೇ ಇಲ್ಲ

तत्वप्रकाशिका – नच विशिष्योक्तिविरोधः । ज्योतिरन्तराभावाभिप्रायेणोपपत्तेः । तदुक्तम् – 'भावेऽभावेऽपि सूर्यादिर्जीवानां विष्णुरेव हि । ज्योतिस्तथाप्यभावे तु तज्ज्ञेयं हि विशेषतः' । इति । नच प्रत्यभिज्ञाविरोधः। 'अत्रायं भगवान् विष्णुर्जीवस्य स्वयमेव तु । ज्योतिर्विशेषतो भूयान्नैवान्यज्जोतिरत्र यत्' इत्युक्तरीत्योपपत्तेः ।

ಇನ್ನು ಪರಮಾತ್ಮವಿಷಯಕವಾದ ಜ್ಯೋತಿಷ್ಟ್ವವು ಜೀವನಿಗೆ ನಿರಂತರ ಇರುವುದಾದರೆ ಸುಷುಪ್ತಿಕಾಲದಲ್ಲಿ ಇರುತ್ತದೆಂದು ಹೇಳಲು ಏನು ಕಾರಣ? ಎಂಬ ಶಂಕೆಯೂ ಸಹ ಸರಿಯಲ್ಲ. ಸುಷುಪ್ತಿಕಾಲದಲ್ಲಿ ಸೂರ್ಯಾದಿ ತೇಜಸ್ಸುಗಳು ಇರುವುದಿಲ್ಲ. ಅದನ್ನು ಸೂಚಿಸುವ ಅಭಿಪ್ರಾಯದಿಂದ, 'ಆತ್ಮೈವಾಸ್ಯ ಜ್ಯೋತಿಃ' ಎಂದು ಹೇಳಿರುತ್ತಾರೆ. ಇದನ್ನೇ 'ಭಾವೇ ಅಭಾವೇ ಸೂರ್ಯಾದೇರ್ಜೀವಾನಾಂ ವಿಷ್ಣುರೇವ ಹಿ । ಜ್ಯೋತಿಸ್ತಥಾಪ್ಯಭಾವೇ ತು ತದ್ ಜ್ಞೇಯಂ ಹಿ ವಿಶೇಷತಃ ॥ ಸೂರ್ಯನು ಇದ್ದರೂ ಇಲ್ಲದಿದ್ದರೂ ಜೀವನಿಗೆ ಜ್ಞಾನಸಾಧನವೆನಿಸಿದ ವಿಷ್ಣು ಇದ್ದೇ ಇರುತ್ತಾನೆ. ಆದರೂ ಸಹ ಸೂರ್ಯಾದಿಗಳಿಲ್ಲದಿರುವಾಗ ವಿಷ್ಣುರೂಪವಾದ ಜ್ಯೋತಿಯೇ ವಿಶೇಷವಾಗಿ ಜ್ಞಾನಸಾಧನವಾಗಿರುತ್ತದೆ, ಎಂದು ಬೃಹದಾರಣ್ಯಕದ ಭಾಷ್ಯದಲ್ಲಿ ಹೇಳಿರುತ್ತಾರೆ.

ಪ್ರತ್ಯಭಿಜ್ಞದ ವಿರೋಧವೂ ಇಲ್ಲ

तत्वप्रकाशिका – नन्वेवं बाधकाभावात् कथं लिङ्गानामन्यार्थता? श्रुतिमात्रस्य बहुलिङ्गानुसारेणामुख्यार्थत्वोपपत्तेरिति ।

'अयं पुरुषः स्वयंज्योतिर्भवति' ಎಂಬ ವಾಕ್ಯದಲ್ಲಿ ಸ್ವಯಂಶಬ್ದದಿಂದ ಜೀವನನ್ನೇ ಸ್ವೀಕರಿಸಬೇಕಲ್ಲವೇ? ಆಗ ಪ್ರತ್ಯಭಿಜ್ಞಾನದಿಂದ 'ಆತ್ಮೈವಾಸ್ಯ ಜ್ಯೋತಿಃ' ಎಂಬಲ್ಲಿರುವ ಆತ್ಮಶಬ್ದದಿಂದಲೂ ಜೀವನನ್ನೇ ತಿಳಿಯಬೇಕಾಗುತ್ತದೆ. ಒಂದು ವೇಳೆ ಪರಮಾತ್ಮನನ್ನು ಸ್ವೀಕರಿಸಿದರೆ ಪ್ರತ್ಯಭಿಜ್ಞಾನಕ್ಕೆ ವಿರೋಧ ಬರುತ್ತದೆಂದು ಶಂಕಿಸಬಾರದು.

ಏಕೆಂದರೆ, 'ಅತ್ರಾಯಂ ಭಗವಾನ್ ವಿಷ್ಣುರ್ಜೀವಸ್ಯ ಸ್ವಯಮೇವ ತು । ಜ್ಯೋತಿರ್ವಿಶೇಷತೋ ಭೂಯಾನ್ನೈವಾನ್ಯಜ್ಜ್ಯೋತಿರತ್ರ ಯತ್ ॥' ಸುಷುಪ್ತವಸ್ಥೆಯಲ್ಲಿ ಸ್ವತಃ ವಿಷ್ಣುವೇ ಜೀವನಿಗೆ ಜ್ಯೋತಿಯಾಗಿರುತ್ತಾನೆ. ಆ ಅವಸ್ಥೆಯಲ್ಲಿ ಭಗವಂತನನ್ನು ಬಿಟ್ಟು ಜೀವನಿಗೆ ಮತ್ತೊಂದು ಜ್ಯೋತಿಯಿರುವುದಿಲ್ಲ. ಆದ್ದರಿಂದ ಸ್ವಯಂಪದದಿಂದ ವಿಷ್ಣುವೇ ಆಗಿರುತ್ತಾನೆಂದು ಬೃಹದಾರಣ್ಯಕಭಾಷ್ಯದಲ್ಲಿ ಹೇಳಿರುತ್ತಾರೆ. ಆದ್ದರಿಂದ ಪ್ರತ್ಯಭಿಜ್ಞಾವಿರೋಧಕ್ಕೆ ಅವಕಾಶವಿಲ್ಲ.

ಬಹುಲಿಂಗವಿರೋಧ ಪ್ರಯುಕ್ತ ಅಮುಖ್ಯಾರ್ಥ ಸ್ವೀಕಾರ

तत्वप्रकाशिका – मैवम् । जीवपक्षे बहुबाधकसद्भावात्, प्रसिद्धत्वेन 'कतम आत्मा' इति प्रश्नायोगात् सुखदुःखविशेषवत्त्वेनोभयलोकसञ्चरणे समानत्वायोगात् स्वाप्नपदार्थकर्तृत्वाभावात् स्वप्नेन शारीरमित्यादिमन्त्रासङ्गतेश्च। तस्मादिदं प्रागुक्तं च ज्योतिर्विष्णुरेवेति सिद्धम् ॥ ४० ॥

॥ इति श्रीमज्जयतीर्थभिक्षुविरचितायां तत्वप्रकाशिकायाम् ज्योतिरधिकरणम् ॥

ಯಾವುದೇ ಬಾಧಕಗಳಿಲ್ಲದಿರುವಾಗ ಲಿಂಗಗಳಿಗೆ ಅನ್ಯಾರ್ಥ ಮಾಡುವುದು ಹೇಗೆ ಸಮಂಜಸವಾಗುತ್ತದೆ? ಕೇವಲ ಶ್ರುತಿಗೆ ಬಹುಲಿಂಗಗಳ ವಿರೋಧ ಬಂದಾಗ ಅಮುಖ್ಯಾರ್ಥವನ್ನು ಮಾಡುವುದು ಸಾಧುವಾಗುತ್ತದಲ್ಲವೇ? ಪ್ರಕೃತ 'ವಿಷ್ಣುರೇವಾಯಂ ಜ್ಯೋತಿಃ' ಎಂಬ ಒಂದೇ ಶ್ರುತಿಗೆ ಉಭಯಲೋಕಸಂಚಾರ ಮೊದಲಾದ ಅನೇಕ ಲಿಂಗಗಳ ವಿರೋಧ ಬರುವುದರಿಂದ ಗೌಣಾರ್ಥವನ್ನು ಮಾಡಬೇಕು.

ಈ ಶಂಕೆಯೂ ಸಹ ಸರಿಯಲ್ಲ. ಏಕೆಂದರೆ, ಜೀವಪಕ್ಷದಲ್ಲಿ ಅನೇಕ ಬಾಧಕಗಳಿರುವುದು ಪ್ರಸಿದ್ಧವಾಗಿದೆ. ಅವು ಹೀಗಿವೆ - 'ಕತಮ ಆತ್ಮಾ' ಎಂದು ಜನಕರಾಜರು ಮಾಡಿರುವಂತಹ ಪ್ರಶ್ನೆಯೇ ಸಮಂಜಸವಾಗುವುದಿಲ್ಲ. ಕರ್ಮಾನುಸಾರಿಯಾಗಿ ಜೀವನಿಗೆ ಸುಖ-ದುಃಖಾದಿಗಳ ಭೋಗವು ಉಂಟಾಗುವುದರಿಂದ ಉಭಯಲೋಕಸಂಚಾರವು ಅವನಿಗೆ ಕೂಡುವುದಿಲ್ಲ. ಕರ್ಮಾನುಸಾರಿಯಾಗಿ ಸುಖ-ದುಃಖಗಳು ಪ್ರಾಪ್ತವಾಗುವುದರಿಂದ ಉಭಯಲೋಕಸಂಚಾರದಲ್ಲಿ

ಸುಖ-ದುಃಖಗಳ ಸಮಪ್ರಾಪ್ತಿ ಕೂಡುವುದಿಲ್ಲ. ಅದರಂತೆ, 'ಅಥರಥಾನ್ ರಥಯೋಗಾನ್ ಸೃಜತೇ' ಎಂಬಲ್ಲಿ ಸ್ವಾಪ್ನಪದಾರ್ಥಕರ್ತೃತ್ವವು ಜೀವನಿಗೆ ಇಲ್ಲದ ಕಾರಣ ಜೀವನನ್ನು ತೆಗೆದುಕೊಳ್ಳಲು ಬರುವುದಿಲ್ಲ. ಮತ್ತು 'ಸ್ವಾಪ್ನೇನ ಶಾರೀರಮ್' ಇತ್ಯಾದಿ ಶ್ರುತಿಯಲ್ಲಿ ಜೀವನನ್ನು ಸ್ವೀಕರಿಸಿದರೆ ಬಾಧಕವಿರುತ್ತದೆ. ಆದ್ದರಿಂದ, 'ವಿಷ್ಣುರೇವಾಯಂ ಜ್ಯೋತಿಃ' ಎಂಬಲ್ಲಿರುವ 'ಜ್ಯೋತಿಃ' ಶಬ್ದದಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂದು ಸ್ಪಷ್ಟವಾಗುತ್ತದೆ. ಈ ಅರ್ಥದಲ್ಲಿ ಯಾವುದೇ ಬಾಧಕಗಳಿರುವುದಿಲ್ಲ. ಜೀವ ಎಂಬ ಅರ್ಥವನ್ನು ಸ್ವೀಕರಿಸಿದರೆ ಮಾತ್ರ ಅನೇಕ ಬಾಧಕಗಳಿರುತ್ತವೆ. ಆದ್ದರಿಂದ 'ಹೃದ್ಯಂತರ್ಜ್ಯೋತಿಃ' ಎಂಬಲ್ಲಿರುವ 'ಜ್ಯೋತಿಃ' ಶಬ್ದಕ್ಕೆ ಮಹಾವಿಷ್ಣುವೆಂಬ ಅರ್ಥವನ್ನೇ ಸ್ವೀಕರಿಸಬೇಕೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ತ್ವಪ್ರಕಾಶಿಕಾಟೀಕೆಯಲ್ಲಿ
ಜ್ಯೋತಿರಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ
ಭಾವದೀಪ

'ಜ್ಯೋತಿಸ್' ಶಬ್ದದ ಪ್ರವೃತ್ತಿ ನಿಮಿತ್ತ

भावदीपः –

॥ ज्योतिर्दर्शनात् ॥

अत्र न्यायविवरणे साधारण्यबीजाऽनुक्तेः योऽयमिति भाष्योक्तवाक्यानुरोधेन द्वेधा साधारण्यं स्वयमाह – अत्र जीवेति ॥ ज्योतिःपदप्रवृत्तिनिमित्तं हि प्रकाशत्वं ज्ञानत्वमपि प्रकाशत्वमेवेति भावः।

ಈ ಅಧಿಕರಣದ ನ್ಯಾಯವಿವರಣದಲ್ಲಿ 'ಜ್ಯೋತಿಸ್' ಶಬ್ದಕ್ಕೆ ಉಭಯಸಾಧಾರಣ್ಯದ ಬೀಜವನ್ನು ಹೇಳಿಲ್ಲ. ಆದರೆ 'ಯೋಽಯಂ' ಎಂಬ ಭಾಷ್ಯದಲ್ಲಿ ಈ ಸಾಧಾರಣ್ಯವು ಸೂಚಿತವಾಗಿದೆ. ಅದನ್ನು ಅನುಸರಿಸಿ ಟೀಕಾರಾಯರು ಎರಡು ಬಗೆಯ ಸಾಧಾರಣ್ಯವನ್ನು ಹೇಳುತ್ತಿದ್ದಾರೆ, 'ಅತ್ರ ಜೀವ' ಇತ್ಯಾದಿ ಟೀಕೆಯಿಂದ. 'ಜ್ಯೋತಿಸ್' ಶಬ್ದದ ಪ್ರವೃತ್ತಿನಿಮಿತ್ತವು 'ಪ್ರಕಾಶತ್ವ'. ಜ್ಞಾನತ್ವವೂ ಸಹ ಪ್ರಕಾಶತ್ವರೂಪವೇ ಆಗಿದೆ.

ಪ್ರವೃತ್ತಿ ನಿಮಿತ್ತವು ಉಭಯತ್ರ ಸಮಾನ

भावदीपः – अग्न्यादौ ज्योतिःपदप्रसिद्धावपि इह तस्य पूर्वपक्षकोटित्वाप्रसक्तेः प्रवृत्तिनिमित्तसाम्यमेवोक्तम् । सङ्गतिपरतया भाष्यं व्याचष्टे – ज्योतिरिति।। तत्रेत्येतत्प्रथमान्तं व्याचष्टे – तत् श्रूयत इति ।।

ಅಗ್ನಿ ಮೊದಲಾದವರಲ್ಲಿ 'ಜ್ಯೋತಿಃ' ಎಂಬ ಪದವು ಪ್ರಸಿದ್ಧವಾಗಿದ್ದರೂ ಸಹ, ಪ್ರಕೃತ ಅಗ್ನ್ಯಾದಿಗಳು ಪೂರ್ವಪಕ್ಷಕೋಟಿಯಲ್ಲಿ ಅಪ್ರಸಕ್ತರಾದ್ದರಿಂದ ಪ್ರವೃತ್ತಿನಿಮಿತ್ತಸಾಮ್ಯವನ್ನಷ್ಟೇ ಹೇಳಿದ್ದಾರೆ. ಸಂಗತಿಪರವಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ, 'ಜ್ಯೋತಿಃ' ಇತ್ಯಾದಿಯಾಗಿ. 'ತತ್ರ' ಎಂಬುದು ಪ್ರಥಮಾಂತವಾಗಿದೆ ಎಂದು 'ತಚ್ಛ್ರೂಯತೇ' ಎಂಬಲ್ಲಿ ವ್ಯಾಖ್ಯಾನ ಮಾಡಿದ್ದಾರೆ.

ಜೀವನೇಕೆ ಜ್ಯೋತಿ?

भावदीपः – षष्ठेऽध्याये ज्योतिर्ब्राह्मणे 'योऽयम्' इत्यत्र वाक्य इत्यर्थः। उभौ लोकावित्यादेस्तात्पर्यम् – तच्चेति ।। उभयलोकसञ्चरणाद्यदि जीवः स्यादित्यर्थः ।

'ತಚ್ಛ್ರೂಯತೇ' ಎಂದರೆ ಬೃಹದಾರಣ್ಯಕೋಪನಿಷತ್ತಿನ ಆರನೆಯ ಅಧ್ಯಾಯದ 'ಯೋಽಯಂ' ಎಂಬ ವಾಕ್ಯದಲ್ಲಿ ಶ್ರುತವಾಗಿದೆ ಎಂದರ್ಥ. 'ಉಭೌ ಲೋಕೌ' ಇತ್ಯಾದಿ ಶ್ರುತಿಯ ತಾತ್ಪರ್ಯವನ್ನು 'ತಚ್ಚ' ಎಂಬ ಟೀಕೆಯಿಂದ ಹೇಳಿದ್ದಾರೆ. ಉಭಯಲೋಕಸಂಚಾರವಿರುವುದರಿಂದ ಜೀವನು 'ಜ್ಯೋತಿಸ್' ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ ಎಂದರ್ಥ.

ಪ್ರತಿಜ್ಞೆಯ ವ್ಯಾಖ್ಯಾನ

ಭಾವದೀಪಃ – उक्तमित्यन्तस्य तात्पर्यमाह – तदेति ।। इति सङ्गतिसम्भवादित्यर्थः। पूर्वपक्षतद्युक्त्यादिपरतयाऽपि भाष्यं व्याख्यातुं तत्र तत् जीव इति षष्ठेऽध्याये प्रतीयत इति प्रतिज्ञार्थमाह – जीव एवेति ।।

'ಉಕ್ತಂ' ಎಂಬಲ್ಲಿಯ ತನಕ ಇರುವ ಭಾಷ್ಯದ ತಾತ್ಪರ್ಯವನ್ನು 'ತದಾ' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ. ಯುಕ್ತವಾಗುವುದರಿಂದ ಎಂದು ಇದರ ಅರ್ಥ. ಪೂರ್ವಪಕ್ಷ ಹಾಗೂ ಪೂರ್ವಪಕ್ಷಯುಕ್ತಿ ಪರವಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ತತ್ರ ತತ್ ಜೀವಃ' ಎಂಬ ಆರನೇ ಅಧ್ಯಾಯದಲ್ಲಿ ತೋರುತ್ತಿದೆ ಎಂದು ಪ್ರತಿಜ್ಞಾರ್ಥವನ್ನು 'ಜೀವ ಏವ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

ವಾಕ್ಯ ಎಂದರೆ ಏನು ?

ಭಾವದೀಪಃ – सञ्चरतीत्यत्र कर्तृवाचकं दर्शयन्नुभावित्यादिभाष्यं व्याचष्टे – स समान इति ।। निराकाङ्क्षाणि पदानि वाक्यमित्युक्तदिशाऽस्य वाक्यत्वेऽपि तद्बोध्यस्यासाधारणधर्मत्वाल्लिङ्गादित्युक्तम् ।

'ಸಂಚರತಿ' ಎಂಬಲ್ಲಿ ಕರ್ತೃವಾಚಕವಾದ ಪದವನ್ನು ತೋರಿಸುತ್ತಾ 'ಉಭೌ' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ, 'ತತ್ಸಮಾನಃ' ಇತ್ಯಾದಿಯಾಗಿ. ನಿರಾಕಾಂಕ್ಷಿತವಾದ ಪದಗಳ ಸಮೂಹವೇ ವಾಕ್ಯವೆನಿಸುತ್ತದೆ ಎಂದು ಹಿಂದೆ ಹೇಳಿದಂತೆ, ಇದೂ ಸಹ ವಾಕ್ಯವೇ ಆಗುತ್ತದೆ. ಆದರೆ, ತದ್ ಬೋಧ್ಯವಾದ ಅರ್ಥವು ಅಸಾಧಾರಣಧರ್ಮವಾದ್ದರಿಂದ ಲಿಂಗವೆಂದು ಹೇಳಿದ್ದಾರೆ.

ಅವಧಾರಣವು ಪರಮಾತ್ಮನಲ್ಲಿ ಯುಕ್ತವಾಗದು

ಭಾವದೀಪಃ – आदित्यादिज्योतिष्त्वमुभयलोकसञ्चरणं 'आदित्येनैवायं ज्योतिषाऽस्ते' इत्यवधारणमित्यादीनां परमात्मन्यवकाशाभावो बहुतादृक्त्वमिति न्यायविवरणोक्तमनवकाशत्वमस्य व्यनक्ति – तस्य हीति।।

ಆದಿತ್ಯಾದಿಜ್ಯೋತಿಷ್ಟ್ವ ಹಾಗೂ ಉಭಯಲೋಕಸಂಚಾರವು 'ಆದಿತ್ಯೇನೈವಾಯಂ ಜ್ಯೋತಿಷಾ ಆಸ್ತೇ' ಎಂಬಲ್ಲಿ ಕೇಳಿಸುವ ಅವಧಾರಣವು ಪರಮಾತ್ಮನಲ್ಲಿ ಕೂಡುವುದಿಲ್ಲ. 'ಬಹುತಾದೃಕ್ತ್ವ' ಎಂಬ

ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ನಿರವಕಾಶತ್ವವನ್ನು ಕೂಡ ಇದಕ್ಕೆ ಸಮರ್ಥಿಸುತ್ತಿದ್ದಾರೆ, 'ತಸ್ಯ ಹಿ' ಇತ್ಯಾದಿ ಟೀಕೆಯಿಂದ.

ಮಹಾವಿಷ್ಣು ಸಕಲ ಕರ್ಮಾತೀತ

ಭಾವದೀಪಃ – ब्रह्म तु कर्मातीतम् अन्यत्र धर्मादन्यत्राधर्मादित्यादेः । 'भूमा सम्प्रसादाद्' इत्यत्रोक्तदिशोत्क्रमणक्रियावदणुत्वयुक्ते हरौ सञ्चरणक्रियोपपत्तावपि कर्माधीनं यदुभयलोकसञ्चरणं तज्जीव एव युक्तं नतु हराविति भावः ।

'ಅನ್ಯತ್ರ ಧರ್ಮಾತ್, ಅನ್ಯತ್ರಾಧರ್ಮಾತ್' ಎಂಬ ಶ್ರುತಿ ಇರುವುದರಿಂದ ಬ್ರಹ್ಮನು ಎಲ್ಲಾ ವಿಧವಾದ ಕರ್ಮಗಳಿಂದ ಅತೀತನಾಗಿದ್ದಾನೆ. 'ಭೂಮಾ ಸಂಪ್ರಸಾದಾತ್' ಎಂಬಲ್ಲಿ ಹೇಳಿದಂತೆ 'ಉತ್ಕ್ರಮಣ' ಎಂಬ ಕ್ರಿಯೆಯುಳ್ಳವನಾದ್ದರಿಂದ ಅಣುತ್ವಧರ್ಮವನ್ನು ಹೊಂದಿದ ಶ್ರೀಹರಿಯಲ್ಲಿ ಉಭಯಲೋಕಸಂಚಾರವೆಂಬ ಕ್ರಿಯೆಯನ್ನು ಹೇಳಬಹುದು. ಆದರೆ ಕರ್ಮಾಧೀನವಾದ ಉಭಯಲೋಕಸಂಚಾರವನ್ನು ಶ್ರುತಿಯು ಹೇಳುತ್ತಿರುವುದರಿಂದ, ಇದು ಪರಮಾತ್ಮನಲ್ಲಿ ಯುಕ್ತವಾಗುವುದಿಲ್ಲ. ಆದ್ದರಿಂದ, ಜೀವನೇ 'ಜ್ಯೋತಿಃ' ಎಂಬ ಪದದಿಂದ ಪ್ರತಿಪಾದ್ಯನು, ಹೊರತು ಶ್ರೀಹರಿಯಲ್ಲ.

ಭಾಷ್ಯದಲ್ಲಿ ಹೇಳಿದ್ದು ಉಪಲಕ್ಷಣ ಮಾತ್ರ

ಭಾವದೀಪಃ – भाष्यमुपलक्षणं मत्वाऽन्यत्रोक्तादिपदोपात्तलिङ्गानि चाह – इममिति ।। पृथिवीलोकं मृत्युसाधनमिति वा मृत्युसाधनानि चेति वाऽप्नोतीत्यर्थः। जीवस्यानादिनित्यत्वाज्जायमानत्वम्रियमाणत्वे व्यनक्ति । शरीरमभिसम्पद्यमान उत्क्रामन्निति च । उभयानित्यस्य व्याख्या, पाप्मनः पापफलानि दुःखानि पुण्यफलान्यानन्दांश्च पश्यत्यनुभवतीति । स्वप्नान्ते स्वप्नदेशे ईयमानः प्राप्नुवन् । लिङ्गानां हरावनवकाशत्वं स्पष्टमिति भावः ।

ಭಾಷ್ಯದಲ್ಲಿ ಹೇಳಿದ್ದು ಕೇವಲ ಉಪಲಕ್ಷಣವಾಗಿದೆ. ಬೇರೆ ಕಡೆ ಹೇಳಿದ ಆದಿಪದದಿಂದ ಸ್ವೀಕರಿಸಲ್ಪಟ್ಟ ಲಿಂಗಗಳನ್ನೂ ಕೂಡ ಇಲ್ಲಿ ವಿವಕ್ಷಿಸಬೇಕೆಂದು 'ಇಮಮ್' ಇತ್ಯಾದಿ ಟೀಕೆಯಿಂದ ಹೇಳಿದ್ದಾರೆ. 'ಇಮಂ'

ಎಂದರೆ ಪೃಥ್ವಿಲೋಕವನ್ನು ಅಥವಾ ಮೃತ್ಯುಸಾಧನವನ್ನು ಎಂದರ್ಥ. ಅಥವಾ ಮೃತ್ಯುಸಾಧನಗಳನ್ನು ಎಂದೂ ಹೇಳಬಹುದು. 'ಅತಿಕ್ರಾಮತಿ' ಎಂದರೆ ಹೊಂದುತ್ತಾನೆ ಎಂದರ್ಥ. ಜೀವನು ಅನಾದಿನಿತ್ಯನಾದ್ದರಿಂದ, 'ಜಾಯಮಾನತ್ವ' ಮತ್ತು 'ಮ್ರಿಯಮಾಣತ್ವ'ಗಳನ್ನು ಶರೀರಮಭಿಸಂಪದ್ಯಮಾನಃ 'ಉತ್ಕ್ರಮನ್' ಎಂಬ ಎರಡು ಪದಗಳಿಂದ ಹೇಳಲಾಗಿದೆ. 'ಉಭಯಾನಪಿ' ಎಂಬುದರ ವ್ಯಾಖ್ಯಾನ ಹೀಗಿದೆ - 'ಪಾಪ್ಮನಃ' ಪಾಪಫಲಗಳಾದ ದುಃಖಗಳನ್ನು, ಪುಣ್ಯಫಲವೆನಿಸಿದ ಆನಂದವನ್ನೂ ಕೂಡ ಪಶ್ಯತಿ = ಅನುಭವಿಸುತ್ತಾನೆ. ಸ್ವಪ್ನಾಂತೇ = ಸ್ವಪ್ನದೇಶದಲ್ಲಿ, ಈಯಮಾನಃ = ಹೊಂದುತ್ತಾ ಎಂದು ಇದರರ್ಥ. ಇದರಿಂದ, ಲಿಂಗಗಳು ಶ್ರೀಹರಿಯಲ್ಲಿ ಯುಕ್ತವಾಗುವುದಿಲ್ಲವೆಂದು ಸ್ಪಷ್ಟವಾಗುತ್ತದೆ.

'ಅಸ್ಯ' ಎಂದರೆ ಜೀವನಿಗೆ ಎಂದರ್ಥ

ಭಾವದೀಪಃ – आदित्यादिज्योतिष्ट्वमितीममंशम् अन्यत्रोक्तम् 'आत्मैवास्य ज्योतिः' इत्यत्र इदंशब्दस्य जीवार्थत्वसाधकतया व्यनक्ति – किञ्चेति ।।

'ಆದಿತ್ಯಾದಿಜ್ಯೋತಿಷ್ಟ್ವಮ್' ಎಂಬ ಅಂಶವು ಬೇರೆ ಕಡೆ ಸ್ಪಷ್ಟಪಡಿಸಲಾಗಿದೆ. 'ಆತ್ಮೈವಾಸ್ಯ ಜ್ಯೋತಿಃ' ಎಂಬಲ್ಲಿ 'ಇದಂ'ಶಬ್ದಕ್ಕೆ ಜೀವ ಎಂಬ ಅರ್ಥವನ್ನೇ ವಿವಕ್ಷಿಸಬೇಕೆಂದು 'ಕಿಂಚ' ಇತ್ಯಾದಿ ಟೀಕೆಯಿಂದ ಸ್ಪಷ್ಟಪಡಿಸುತ್ತಿದ್ದಾರೆ.

ಬೃಹದಾರಣ್ಯಕೋಪನಿಷತ್ತಿನಲ್ಲಿರುವ ಪ್ರಕರಣ

ಭಾವದೀಪಃ – अयं पुरुषः जीवः किं ज्योतिः ज्ञानसाधनं यस्येति व्युत्पत्त्या जनकराजेन जीवस्य ज्ञानसाधने पृष्टे सति याज्ञवल्क्यः आदित्यज्योतिः सम्राडिति होवाचेत्युत्तरमुक्त्वा आदित्येनैवाऽयं ज्योतिषाऽस्ते पल्ययते कर्म कुरुते विपल्येतीत्युपपाद्य अस्तमित आदित्ये किं ज्योतिरेवायं पुरुष इति चन्द्रमा एवास्य ज्योतिर्भवतीत्यादिना आदित्यचन्द्राग्निवाचां पूर्वपूर्वास्तमये उत्तरोत्तरस्य ज्ञानसाधनत्वरूपं ज्योतिष्ट्वं प्रश्नोत्तराभ्यां यस्य जीवस्य जाग्रदशायामुक्तं तस्यास्तमित आदित्ये याज्ञवल्क्यचन्द्रमस्यस्तमिते शान्तेऽग्नौ शान्तायां वाचि किं

ज्योतिरयं पुरुष इतिप्रश्ने आत्मैवास्य ज्योतिर्भवतीति सुप्तिस्वप्नयोः स्वप्रकाशत्वरूपात्मज्योतिष्ट्वोक्तौ कतम आत्मेति ज्योतिष्ट्वेनोक्तात्मविषय प्रश्ने कृते सति 'योऽयं विज्ञानमयः प्राणेषु हृदं तज्ज्योतिः' इत्युच्यत इत्यर्थः ।

ಬೃಹದಾರಣ್ಯಕೋಪನಿಷತ್ತಿನ ನಾಲ್ಕನೆಯ ಅಧ್ಯಾಯದಲ್ಲಿ ಬರುವ ಪ್ರಕರಣ ಹೀಗಿದೆ - ಯಾಜ್ಞವಲ್ಕ್ಯರನ್ನು 'ಕಿಂ ಜ್ಯೋತಿರಯಂ ಪುರುಷಃ' ಜನಕರಾಜನು ಜೀವನಿಗೆ ಜ್ಞಾನಸಾಧನವಾದದ್ದು ಯಾವುದು? ಎಂದು ಪ್ರಶ್ನಿಸುತ್ತಾರೆ. ಆವಾಗ, ಯಾಜ್ಞವಲ್ಕ್ಯರು 'ಆದಿತ್ಯಜ್ಯೋತಿಃ ಸಮ್ರಾಡಿತಿ ಹೋವಾಚ' ಆದಿತ್ಯನೇ ಜ್ಞಾನಸಾಧನನಾಗಿದ್ದಾನೆ ಎಂದು ಉತ್ತರವನ್ನು ನೀಡುತ್ತಾರೆ. ಏಕೆಂದರೆ, 'ಆದಿತ್ಯೇನೈವಾಯಂ ಜ್ಯೋತಿಷಾऽಸ್ತೇ, ಪಲ್ಯಯತೇ, ಕರ್ಮ ಕುರುತೇ, ವಿಪಲ್ಯೇತೇತಿ' ಆದಿತ್ಯನ ಸಹಾಯದಿಂದಲೇ ಜೀವನು ಬೇಕಾದಲ್ಲಿ ಕುಳಿತುಕೊಳ್ಳುತ್ತಾನೆ. ಬೇಕಾದಲ್ಲಿ ಹೋಗುತ್ತಾನೆ. ಕೆಲಸಗಳನ್ನು ಮಾಡುತ್ತಾನೆ. ಹಿಂತಿರುಗಿ ಬರುತ್ತಾನೆ. ಆದ್ದರಿಂದ ಆದಿತ್ಯನೇ ಜ್ಞಾನಸಾಧನನಾಗಿದ್ದಾನೆ. ಎಂದು ಯಾಜ್ಞವಲ್ಕ್ಯರು ಉತ್ತರಿಸುತ್ತಾರೆ. ಪುನಃ ಜನಕರಾಜರು ಪ್ರಶ್ನಿಸುತ್ತಾರೆ. 'ಅಸ್ತಮಿತೇ ಆದಿತ್ಯೇ ಯಾಜ್ಞವಲ್ಕ್ಯ ಕಿಂ ಜ್ಯೋತಿರೇವಾಯಂ ಪುರುಷಃ ಇತಿ ಚಂದ್ರಮಾ ಏವಾಸ್ಯ ಜ್ಯೋತಿರ್ಭವತೀತಿ' 'ಎಲೈ ಯಾಜ್ಞವಲ್ಕ್ಯರೇ! ಆದಿತ್ಯನು ಅಸ್ತಂಗತನಾದಾಗ ಜೀವನಿಗೆ ಜ್ಞಾನಸಾಧನವಾದದ್ದು ಯಾವುದು? ಯಾಜ್ಞವಲ್ಕ್ಯರು ಉತ್ತರಿಸುತ್ತಾರೆ. ಚಂದ್ರನೇ ಇವನಿಗೆ ಜ್ಞಾನಸಾಧನನು. ಜ್ಞಾನಸಾಧನನಾದ ಚಂದ್ರನಿಂದಲೇ ಜೀವನು ಬೇಕಾದಲ್ಲಿ ಕುಳಿತುಕೊಳ್ಳುತ್ತಾನೆ. ಬೇಕಾದ ಕಡೆ ಹೋಗುತ್ತಾನೆ. ಕೆಲಸಗಳನ್ನು ಮಾಡುತ್ತಾನೆ. ಹಿಂತಿರುಗಿ ಬರುತ್ತಾನೆ. ಆದ್ದರಿಂದ ಚಂದ್ರನೇ ಜ್ಞಾನಸಾಧನನೆಂದು ಉತ್ತರಿಸುತ್ತಾರೆ. ಪುನಃ ಜನಕರಾಜರು ಸೂರ್ಯ ಹಾಗೂ ಚಂದ್ರರಿಬ್ಬರೂ ಅಸ್ತವಾದಾಗ ಜೀವನಿಗೆ ಜ್ಞಾನಸಾಧನವಾದದ್ದು ಯಾವುದು? ಎಂದು ಪ್ರಶ್ನಿಸುತ್ತಾರೆ. ಆವಾಗ ಯಾಜ್ಞವಲ್ಕ್ಯರು ಅಗ್ನಿಯೇ ಇವನಿಗೆ ಜ್ಞಾನಸಾಧನನಾಗುತ್ತಾನೆ. ಜ್ಞಾನಸಾಧನವಾದ ಅಗ್ನಿಯಿಂದಲೇ ಜೀವನು ಎಲ್ಲ ವ್ಯಾಪಾರಗಳನ್ನು ಮಾಡುತ್ತಾನೆಂದು ಉತ್ತರಿಸುತ್ತಾರೆ. ಪುನಃ ಜನಕರಾಜರು ಸೂರ್ಯ, ಚಂದ್ರ, ಅಗ್ನಿ ಎಲ್ಲರೂ ಅಸ್ತರಾದಾಗ ಜೀವರಿಗೆ ಜ್ಞಾನಸಾಧನವಾದದ್ದು ಯಾವುದು ಎಂದು ಪ್ರಶ್ನಿಸುತ್ತಾರೆ. ಆವಾಗ, ಯಾಜ್ಞವಲ್ಕ್ಯರು ಮಾತು ಇವನಿಗೆ ಮುಖ್ಯವಾದ ಜ್ಞಾನಸಾಧನ. ಜ್ಞಾನಸಾಧನವಾದ ಮಾತಿನಿಂದಲೇ ಎಲ್ಲ ವ್ಯಾಪಾರಗಳನ್ನು ಮಾಡುತ್ತಾನೆಂದು ಉತ್ತರಿಸುತ್ತಾರೆ. ಪುನಃ ಯಾಜ್ಞವಲ್ಕ್ಯರು ಸೂರ್ಯ, ಚಂದ್ರ, ಅಗ್ನಿ, ಮಾತು ಯಾವುದೂ ಇಲ್ಲದಿದ್ದಾಗ ಸುಷುಪ್ತ್ಯಾದಿ ಅವಸ್ಥೆಗಳಲ್ಲಿ ಜ್ಞಾನಸಾಧನವಾದದ್ದು ಯಾವುದು? ಎಂದು ಪ್ರಶ್ನಿಸುತ್ತಾರೆ. ಆವಾಗ, ಯಾಜ್ಞವಲ್ಕ್ಯರು 'ಆತ್ಮೈವಾಸ್ಯ

ಜ್ಯೋತಿರ್ಭವತಿ, ಆತ್ಮನ್ಯೇವಾಯಂ ಜ್ಯೋತಿಷಾऽऽಸ್ತೇ' ಇತ್ಯಾದಿಯಾಗಿ ಆತ್ಮನೇ ಇವನಿಗೆ ಮುಖ್ಯವಾದ ಜ್ಞಾನಸಾಧನವಾಗುತ್ತಾನೆ. ಆತ್ಮನ ಸಹಾಯದಿಂದಲೇ ಎಲ್ಲ ವ್ಯಾಪಾರಗಳನ್ನು ಮಾಡುತ್ತಾನೆಂದು ಉತ್ತರಿಸುತ್ತಾನೆ. ಆದ್ದರಿಂದ ಜ್ಯೋತಿಃಸ್ವರೂಪನೆಂದು ಹೇಳಲ್ಪಟ್ಟ ಆತ್ಮನು ಯಾರು? ಎಂಬ ಪ್ರಶ್ನೆಗೆ 'ಯೋऽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ' ಎಂದು ಉತ್ತರಿಸಿದ್ದಾರೆ. 'ಆತ್ಮಾ' ಎಂದರೆ ಯಾರು? ಎಂಬ ಪ್ರಶ್ನೆಗೆ ಯಾವಾತನು ಪೂರ್ಣಜ್ಞಾನಸ್ವರೂಪನೋ, ಇಂದ್ರಿಯ ಮತ್ತು ಹೃದಯಗಳ ಒಳಗೆ ಇದ್ದು ಜೀವನ ಬುದ್ಧಿಗೆ ಪ್ರೇರಕನಾಗಿದ್ದಾನೋ, ಅವನೇ ಆತ್ಮನೆಂದು ಉತ್ತರವನ್ನು ನೀಡಿದ್ದಾರೆ. ಆದ್ದರಿಂದ ಜೀವನೇ ಇಲ್ಲಿ ಪ್ರತಿಪಾದ್ಯನೆಂದು ಪೂರ್ವಪಕ್ಷ.

ಅವಧಾರಣ ಆತ್ಮಪದಗಳೂ ಕೂಡ ನಿರವಕಾಶ

भावदीपः – अस्य लिङ्गस्यान्यत्रोक्तं हरावनवकाशत्वं व्यनक्ति – **नहीति** ।। न तत्रेत्येतद् विष्णुपरमित्यनुकृतिनये व्यक्तम् । एवं लोकसञ्चरणादेरादित्यादिज्योतिष्त्वस्य चानवकाशत्वमुपपाद्य आदित्येनैव ज्योतिषाऽस्ते इत्यवधारणमित्यंशमात्मपदस्य स्वरूपार्थकत्वसाधनपरतया व्याख्यातुमाह – **नच वाच्यमिति** ।।

ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಲಿಂಗಗಳು ವಿಷ್ಣುವಿನಲ್ಲಿ ಬರುವುದಿಲ್ಲವೆಂದು ಸ್ಪಷ್ಟಪಡಿಸುತ್ತಾರೆ 'ನಹಿ' ಇತ್ಯಾದಿ ಟೀಕೆಯಿಂದ. 'ನ ತತ್ರ' ಇತ್ಯಾದಿ ಶ್ರುತಿಯು ವಿಷ್ಣುಪರವಾಗುತ್ತದೆಂದು ಅನುಕೃತ್ಯಧಿಕರಣದಲ್ಲಿ ಸ್ಪಷ್ಟಪಡಿಸಲಾಗಿದೆ.

ಇಲ್ಲಿಯ ತನಕ ಲೋಕಸಂಚರಣಾದಿ ಕ್ರಿಯೆಗಳು ಆದಿತ್ಯಾದಿ ಜ್ಯೋತಿಷ್ಟ್ವಗಳು ನಿರವಕಾಶವಾಗಿವೆ ಎಂಬುದನ್ನು ಉಪಪಾದನೆ ಮಾಡಿ 'ಆದಿತ್ಯೇನೈವ ಜ್ಯೋತಿಷಾऽऽಸ್ತೇ' ಎಂಬಲ್ಲಿರುವ ಅವಧಾರಣವು ಮತ್ತು ಆತ್ಮಪದವು ನಿರವಕಾಶವಾಗಿವೆ ಎಂದು ಸಮರ್ಥಿಸಲು ವ್ಯಾಖ್ಯಾನ ಮಾಡುತ್ತಿದ್ದಾರೆ, 'ನಚ ವಾಚ್ಯಮ್' ಇತ್ಯಾದಿ ಟೀಕೆಯಿಂದ.

ನ್ಯಾಯವಿವರಣದಲ್ಲಿರುವ ಆದಿ ಪದದ ವ್ಯಾಖ್ಯಾನ

भावदीपः – तदा जाग्रद्दशायामित्यर्थः ।। **अवधारणानुपपत्तेरिति** ।। किन्त्वादित्येन ज्योतिषेति वा आदित्येन चेति वा स्यादित्यर्थः । तदा

सुप्त्यादिदशायामित्यर्थः । परमात्मनोऽस्तमयादिशून्यस्य जाग्रत्यपि ज्योतिष्त्वप्राप्त्येत्यनुकर्षः । एतेनावधारणमित्यादीनामिति न्यायविवरणस्थादि-पदस्योक्तरूपयुक्त्यन्तरसङ्ग्राहकत्वरूपमर्थान्तरमुक्तं भवति।

'ತದಾ' ಎಂದರೆ ಜಾಗ್ರದವಸ್ಥೆಯಲ್ಲಿ ಎಂದರ್ಥ. 'अवधारणाऽनुपपत्तेः' ಎಂದರೆ 'ಆದಿತ್ಯೇನ ಜ್ಯೋತಿಷಾ' ಎಂದಾಗಲಿ, 'ಆದಿತ್ಯೇನ ಚ' ಎಂದು ಶ್ರುತಿಯು ಇರಬೇಕಿತ್ತು. 'ತದಾ' ಎಂದರೆ ಸುಷುಪ್ತ್ಯಾದಿ ಅವಸ್ಥೆಗಳಲ್ಲಿ ಎಂದರ್ಥ. ಪರಮಾತ್ಮನಿಗೆ ಅಸ್ತಮಯಾದಿಗಳಿಲ್ಲದ ಕಾರಣ ಜಾಗ್ರದವಸ್ಥೆಯಲ್ಲಿಯೂ ಜ್ಯೋತಿಷ್ಟ್ವವು ಪ್ರಾಪ್ತವಾಗುವುದರಿಂದ ಎಂಬುದನ್ನು ಅನುಕರ್ಷಣೆ ಮಾಡಿಕೊಳ್ಳಬೇಕು. ಹೀಗೆ ಹೇಳಿದ್ದರಿಂದ 'अवधारणमित्यादीनाम्' ಎಂಬ ನ್ಯಾಯವಿವರಣದಲ್ಲಿರುವ ಆದಿಪದಕ್ಕೆ ಹಿಂದೆ ಹೇಳಿದ ಎಲ್ಲ ಯುಕ್ತಿಗಳನ್ನು ಸಂಗ್ರಹಿಸಬೇಕೆಂಬ ಅರ್ಥಾಂತರವನ್ನು ಹೇಳಿದಂತಾಯಿತು.

ಆತ್ಮಶಬ್ದಕ್ಕೆ ಏನರ್ಥ ?

भावदीपः – नन्वात्मशब्दस्य परमात्मार्थत्व इव स्वरूपार्थत्वेऽप्य-वधारणस्य विशिष्य सुप्त्यादौ स्वयं ज्योतिष्त्वोक्तेश्चानुपपत्तिसाम्यात् जीवस्यापि स्वगतज्ञानहेतुस्वरूपस्वात्मज्योतिष्त्वस्य सुप्त्यादाविव जाग्रत्यपि सत्त्वाद् ब्रह्मैव कुतो नाऽत्मेत्यतोऽन्यत्रस्थाऽदिपदोक्तयुक्त्यन्तरेणात्मपदस्य स्वरूपार्थत्वमाह –**अत्रायं पुरुष इति** ।।

ಆತ್ಮಶಬ್ದವು 'ಪರಮಾತ್ಮ' ಎಂಬ ಅರ್ಥವನ್ನು ಹೇಳುವಂತೆ, 'ಸ್ವರೂಪ' ಎಂಬರ್ಥದಲ್ಲಿಯೂ ಕೂಡ ಪ್ರಸಿದ್ಧವಾಗಿರುತ್ತದೆ. ಮತ್ತು ಅವಧಾರಣಕ್ಕೆ ಸುಷುಪ್ತ್ಯಾದಿ ಅವಸ್ಥೆಯಲ್ಲಿ ಜ್ಯೋತಿಷ್ಟ್ವರೂಪವನ್ನು ಹೇಳಿದ್ದರಿಂದ ಅನುಪಪತ್ತಿಯು ಎರಡೂ ಪಕ್ಷಗಳಲ್ಲಿಯೂ ಸಮಾನವಾಗಿದೆ. ಮತ್ತು, ಜೀವನಲ್ಲೂ ಕೂಡ ಸ್ವಗತವಾದ ಜ್ಞಾನಹೇತು ಎನಿಸಿದ ಸ್ವಾತ್ಮಜ್ಯೋತಿಷ್ಟ್ವವು ಸುಷುಪ್ತ್ಯಾದಿ ಅವಸ್ಥೆಗಳಲ್ಲಿರುವಂತೆ ಜಾಗ್ರದವಸ್ಥೆಗಳಲ್ಲಿಯೂ ಇರುತ್ತದೆ. ಆದ್ದರಿಂದ, ಬ್ರಹ್ಮನೇ ಏಕೆ ಆತ್ಮಪದದಿಂದ ವಾಚ್ಯವಾಗಬಾರದು? ಎಂಬ ಪ್ರಶ್ನೆಯು ಪ್ರಾಪ್ತವಾಗುತ್ತದೆ. ಇದನ್ನು ಆದಿಪದದಿಂದ ಬೇರೆ ಕಡೆ ಹೇಳಿರುವ ಯುಕ್ತ್ಯಂತರದಿಂದ ನಿರಾಕರಿಸಬೇಕು. ಆತ್ಮಪದಕ್ಕೆ ಸ್ವರೂಪ ಎಂಬ ಅರ್ಥವನ್ನೇ ಹೇಳಬೇಕು ಎಂದು 'अत्रायं पुरुषः' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ.

ಪೂರ್ವಪಕ್ಷದ ಉಪಸಂಹಾರ

भावदीपः – आत्मप्रश्नोत्तरोपसंहारपरे अत्रायं पुरुषः स्वयं ज्योतिरिति वाक्येऽभिहितार्थस्येह स्वयं शब्दपर्यायात्मशब्देन प्रत्यभिज्ञानादात्मशब्दः स्वरूपपरो न परमात्मपर इत्यर्थः । फलोक्त्योपसंहरति – अत इति ।।

ಆತ್ಮನ ಬಗ್ಗೆ ಪ್ರಶ್ನೆ ಹಾಗೂ ಉತ್ತರಗಳನ್ನು ಹೇಳಿದ ಪ್ರಕರಣವು ಉಪಸಂಹಾರವಾಗುವಾಗ 'अत्रायं पुरुषः स्वयंज्योतिः' ಎಂದು ಹೇಳಲಾಗಿದೆ. ಈ ವಾಕ್ಯದಲ್ಲಿ ಯಾವ ಸ್ವಯಂ ಶಬ್ದವು ಕೇಳಿಸುತ್ತಿದೆಯೋ, ಅದಕ್ಕೆ ಪರ್ಯಾಯಶಬ್ದವಾದ ಆತ್ಮಶಬ್ದದಿಂದ ಪ್ರತ್ಯಭಿಜ್ಞೆಯನ್ನು ಮಾಡುತ್ತಿರುವ ಕಾರಣ, ಆತ್ಮಶಬ್ದವು ಸ್ವರೂಪಪರವೇ ಆಗುತ್ತದೆ ಹೊರತು, ಪರಮಾತ್ಮಪರವಾಗುವುದಿಲ್ಲ ಎಂದು 'अत्रायं पुरुषः' ಎಂಬ ವಾಕ್ಯದ ಅಭಿಪ್ರಾಯವಾಗಿದೆ. ಪೂರ್ವಪಕ್ಷದ ಫಲವನ್ನು ಹೇಳುತ್ತಾ ಉಪಸಂಹಾರ ಮಾಡುತ್ತಿದ್ದಾರೆ. 'अतः' ಇತ್ಯಾದಿಯಾಗಿ.

'अतः' ಎಂದರೆ ನಿರವಕಾಶ ಲಿಂಗಾದಿಗಳು ಇರುವುದರಿಂದ ಎಂದರ್ಥ.

ಪರಮಾತ್ಮನಲ್ಲಿ ಉಭಯಲೋಕ ಸಂಚಾರದ ಸಮರ್ಥನೆ

भावदीपः – निरवकाशलिङ्गादिभावादित्यर्थः । उक्तमित्यन्तभाष्यतात्पर्यम् – प्रागुक्तमिति ।। विष्णुरेवेत्यन्तभाष्यमाकाङ्क्षाक्रमेण व्याख्याति – विष्णुरेवेति ।। 'प्राज्ञेन' इति श्रुतौ जीवः प्राज्ञेनान्वारूढः प्राक्तनदेहं त्यजन् यातीति जीवस्यैव सञ्चरणप्रतीत्या श्रुतेः प्रकृतानानुगुण्यं निरस्यंल्लोकसञ्चरणं तु जीवमादाय तस्यैवादुःखेन स्वातन्त्र्यादिति न्यायविवरणानुरोधेन भाष्यं व्याचष्टे – जीवमादायेति ।।

'ಉಕ್ತಂ' ಎಂಬಲ್ಲಿಯ ತನಕ ಭಾಷ್ಯದ ತಾತ್ಪರ್ಯವನ್ನು 'ಪ್ರಾಗುಕ್ತಂ' ಎಂದು ಹೇಳಿದ್ದಾರೆ. 'ವಿಷ್ಣುರೇವ' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಆಕಾಂಕ್ಷಾಕ್ರಮದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ 'ವಿಷ್ಣುರೇವ' ಇತ್ಯಾದಿಯಾಗಿ. 'ಪ್ರಾಜ್ಞೇನಾತ್ಮನಾ' ಎಂಬ ಶ್ರುತಿಯಲ್ಲಿ ಜೀವನು ಪ್ರಾಜ್ಞನಾಮಕನಾದ ಪರಮಾತ್ಮನ ಜೊತೆಗೆ ಕೂಡಿಕೊಂಡು ಹಿಂದಿನ ದೇಹವನ್ನು ಬಿಡುತ್ತಾ ಲೋಕಸಂಚಾರವನ್ನು ಮಾಡುತ್ತಾನೆ

ಎಂದು ಶ್ರುತಿಯು ಹೇಳುತ್ತಿದೆ. ಹೀಗೆ ಹೇಳಿದಾಗ, ಶ್ರುತಿಗೆ ಅನಾನುಗುಣ್ಯದೋಷವೂ ಕೂಡ ಬರುವುದಿಲ್ಲ. ಉಭಯಲೋಕಸಂಚಾರವನ್ನು ಪರಮಾತ್ಮನಲ್ಲಿಯೂ ಕೂಡಿಸಬಹುದು. ಜೀವನನ್ನು ತೆಗೆದುಕೊಂಡು ಪರಮಾತ್ಮನು ಉಭಯಲೋಕದ ಸಂಚಾರವನ್ನು ಮಾಡುತ್ತಾನೆ. ಸ್ವಾತಂತ್ರ್ಯವಿರುವ ಕಾರಣ, ಜೀವನಿಗೆ ಆಗುವಂತಹ ಸುಖದುಃಖಗಳ ಅನುಭವ ಪರಮಾತ್ಮನಿಗೆ ಆಗುವುದಿಲ್ಲ. ಹೀಗೆ ನ್ಯಾಯವಿವರಣದಲ್ಲಿ ಹೇಳಿದ್ದನ್ನೇ ಅನುಸರಿಸಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ - 'ಜೀವಮಾದಾಯ' ಇತ್ಯಾದಿಯಾಗಿ.

ಬೃಹದಾರಣ್ಯಕ ಭಾಷ್ಯಕ್ಕೆ ಸಮಾಧಾನ

भावदीपः – बृहदारण्यकभाष्यात्तं समाधिमाह – द्रष्टुरिति ।। दर्शयितुरित्यर्थः । 'एतेनेमं लोकमतिक्रामयति जनयति मारयति' इत्यादिरूपेण विषयवाक्ये अर्थो दर्शितः । अयं पुरुष इति संसारी आत्मशब्दोदित एव विष्णुः । अत आदित्यादिज्योतिष्ट्वं संसारिण एव आदित्येनैवेत्यवधारणं बाह्यज्योतिःषु प्राधान्यापेक्षया इत्यादिन्यायविवरणं भिन्नभिन्नशङ्कानिरासकतया खण्डशोऽत्र योजयति – नचादित्यादीत्यादिना।।

ಬೃಹದಾರಣ್ಯಕಭಾಷ್ಯದಲ್ಲಿ ಹೇಳಿದ ಸಮಾಧಾನವನ್ನು 'ದ್ರಷ್ಟುಃ' ಇತ್ಯಾದಿಯಾಗಿ ಹೇಳಿದ್ದಾರೆ. 'ದ್ರಷ್ಟುಃ' ಎಂದರೆ ನೋಡಲು ಇಚ್ಛಿಸುವ ಎಂದರ್ಥ. ಹೀಗೆ ವ್ಯಾಖ್ಯಾನ ಮಾಡಿದ್ದರಿಂದ 'ಇಮಂ ಲೋಕಮತಿಕ್ರಾಮಯತಿ' ಇತ್ಯಾದಿಯಾದ ನ್ಯಾಯವಿವರಣದ ವಾಕ್ಯವನ್ನು ಬೇರೆ ಬೇರೆ ಆಶಂಕೆಯನ್ನು ನಿರಾಸ ಮಾಡುತ್ತದೆಂಬ ದೃಷ್ಟಿಯಿಂದ ಖಂಡಶಃ ಇಲ್ಲಿ ಯೋಜನೆ ಮಾಡುತ್ತಿದ್ದಾರೆ, 'ನಚ ಆದಿತ್ಯಾದಿ' ಇತ್ಯಾದಿ ಟೀಕೆಯಿಂದ.

'ಆತ್ಮ' ಎಂದರೆ ಮಹಾವಿಷ್ಣುವೇ ?

भावदीपः – उच्यते 'आत्मैवाऽस्येति वाक्य इत्यर्थः । अन्यत्रोक्तादिपदोपात्तयुक्तिं वक्तुं तदा विशिष्येत्यादिना प्रागुक्तमनुवदति – नच विशिष्येति ।। तदुक्तमिति ।। वाजसनेयभाष्य इत्यर्थः ।

तद्भाष्यरीत्यैवाऽदिपदोक्तं युक्त्यन्तरं प्रागुक्तशङ्कानिवर्तकतयाऽह – **नच प्रत्यभिज्ञेति ।। उक्तरीत्येति ।।** अत्र सुप्त्यादावयं पुरुषो विष्णुर्जीवस्य स्वयं ज्योतिरित्युपसंहारस्य स्मृत्यैव व्याख्यानेन आत्मापि विष्णुरेवेत्युपपत्तेरित्यर्थः ।

'ಉಚ್ಯತೇ' ಎಂದರೆ 'ಆತ್ಮೈವಾಸ್ಯ ಜ್ಯೋತಿಃ' ಎಂಬ ವಾಕ್ಯದಲ್ಲಿ ಹೇಳಲಾಗಿದೆ ಎಂದರ್ಥ. ಬೇರೆ ಕಡೆ ಹೇಳಿದ ಯುಕ್ತಿಗಳನ್ನು ಆದಿಪದದಿಂದ ಸಂಗ್ರಹಿಸಿದ್ದಾರೆ. ಅದನ್ನು ಹೇಳುವುದಕ್ಕಾಗಿ, 'ತದಾ ವಿಶಿಷ್ಯ' ಇತ್ಯಾದಿ ವಾಕ್ಯಗಳಿಂದ ಹಿಂದೆ ಹೇಳಿದ್ದನ್ನು ಅನುವಾದ ಮಾಡುತ್ತಿದ್ದಾರೆ 'ನಚ ವಿಶಿಷ್ಯ' ಇತ್ಯಾದಿ ಟೀಕಾವಾಕ್ಯದಿಂದ.

'ತದುಕ್ತಂ' ಎಂದರೆ ಬೃಹದಾರಣ್ಯಕೋಪನಿಷತ್ತಿನ ಭಾಷ್ಯದಲ್ಲಿ ಹೇಳಲಾಗಿದೆ ಎಂದರ್ಥ. ಬೃಹದಾರಣ್ಯಕ ಭಾಷ್ಯದಲ್ಲಿ ಹೇಳಿದಂತೆ, ಆದಿಪದದಿಂದ ತಿಳಿಸಿದ ಯುಕ್ತ್ಯಂತರವನ್ನು ಹಿಂದೆ ಹೇಳಿದ ಆಶಂಕೆಯ ಪರಿಹಾರ ಕವಾಗಿ 'ನಚ ಪ್ರತ್ಯಭಿಜ್ಞಾ' ಇತ್ಯಾದಿ ವಾಕ್ಯವು ಹೇಳಲು ಹೊರಟಿದೆ. 'ಉಕ್ತರೀತ್ಯಾ' ಎಂದರೆ ಹಿಂದೆ ಹೇಳಿದ ಪ್ರಕಾರ ಸುಷುಪ್ತವಸ್ಥೆಯಲ್ಲಿ ವಿಷ್ಣು ಜೀವನಿಗೆ ಸ್ವಯಂ ಜ್ಯೋತಿಃಸ್ವರೂಪನಾಗಿದ್ದಾನೆಂದು ಸ್ಮೃತಿಯಲ್ಲಿ ವ್ಯಾಖ್ಯಾನ ಮಾಡಿದಂತೆ 'ಆತ್ಮ' ಎಂಬ ಶಬ್ದದಿಂದಲೂ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ.

'ವಿಷ್ಣುರೇವ ಇದಂ ಜ್ಯೋತಿಃ'

भावदीपः – बृहद्भाष्योक्तजीवपरत्वबाधकान्यपि न्यायविवरणस्थादिपदसङ्गृहीतानीति भावेन तानि शङ्कोत्तराभ्यां विशदयति – नन्वेवमिति ।। श्रुतिमात्रस्य ज्योतिःश्रुतिमात्रस्येत्यर्थः । विष्णुरेवेदं ज्योतिरिति श्रुत्या विष्णौ मुख्यः स्यादपीत्यर्थः ।। **स्वाप्नेति ।।** 'अथ रथान् रथयोगान् पथः सृजते' इत्यादिनोक्त इत्यर्थः ।।

ಬೃಹದಾರಣ್ಯಕೋಪನಿಷತ್ತಿನ ಭಾಷ್ಯದಲ್ಲಿ ಹೇಳಿದ ಜೀವಪರತ್ವಬಾಧಕವಾದ ಲಿಂಗಗಳು, ನ್ಯಾಯವಿವರಣದಲ್ಲಿರುವ ಆದಿಪದದಿಂದ ಸಂಗ್ರಹಿಸಲ್ಪಟ್ಟಿದೆ ಎಂಬ ಅಭಿಪ್ರಾಯದಿಂದ ಪ್ರಶ್ನೆ ಹಾಗೂ ಉತ್ತರಗಳಿಂದ ಆ ಲಿಂಗಗಳನ್ನು ಸ್ಪಷ್ಟಪಡಿಸುತ್ತಿದ್ದಾರೆ. 'ನನ್ವಯಂ' ಇತ್ಯಾದಿ ಗ್ರಂಥದಿಂದ. 'ಶ್ರುತಿಮಾತ್ರಸ್ಯ' ಎಂದರೆ 'ಜ್ಯೋತಿಃ' ಶ್ರುತಿ ಮಾತ್ರಕ್ಕೆ ಎಂದರ್ಥ. 'ವಿಷ್ಣುರೇವೇದಂ ಜ್ಯೋತಿಃ' ಎಂಬ ಶ್ರುತಿಯಿಂದ

'ಜ್ಯೋತಿಸ್' ಎಂಬ ಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ. ಆದರೂ ಸಹ ಎಂದರ್ಥ. 'ಅಥ ರಥಾನ್ ರಥಯೋಗಾನ್ ಪಥಃ ಸೃಜತೇ' ಇತ್ಯಾದಿ ವಾಕ್ಯದಲ್ಲಿ ಪರಮಾತ್ಮನೇ ಸ್ವಪ್ನಪದಾರ್ಥಗಳನ್ನು ಸೃಷ್ಟಿ ಮಾಡುತ್ತಾನೆಂದು ಹೇಳಲಾಗಿದೆ.

'ಸ್ವಪ್ನೇನ ಶರೀರಂ' ಇತ್ಯಾದಿ ಶ್ರುತ್ಯರ್ಥ

ಭಾವದೀಪಃ – स्वप्नेनेति ।। स्वप्नेन शारीरमभिप्रहत्यासुप्तः सुप्तानभिचाकशीतीत्याद्युदाहृतमन्त्रे जीवस्य स्वप्नसम्बन्धं कृत्वा स्वयमसुप्त एव तान् पश्यतीत्युक्तार्थस्य जीवेऽनुपपत्तेरित्यर्थः । फलोक्त्योपसंहरति – तस्मादिति ।। ज्योतिःश्रुतिरूपसाधकभावाद् बाधकाभावाद् जीवपरत्वे बहुबाधक-भावाच्चेत्यर्थः ।। ४० ।।

।। इति श्रीराघवेन्द्रयतिकृते भावदीपे ज्योतिरधिकरणम् ।।

'ಸ್ವಪ್ನೇನ ಶರೀರಂ ಅಭಿಪ್ರಹತ್ಯ ಅಸುಪ್ತಃ ಸುಪ್ತಾನ್ ಅಭಿಚಾಕಶೀತಿ' ಇತ್ಯಾದಿಯಾದ ಮಂತ್ರದಲ್ಲಿ ಜೀವನಿಗೆ ಪರಮಾತ್ಮನು ಸ್ವಪ್ನಸಂಬಂಧವನ್ನು ಮಾಡಿ ತಾನು ಅಸುಪ್ತನಾಗಿಯೇ ಜೀವನನ್ನು ನೋಡುತ್ತಿರುತ್ತಾನೆಂದು ಶ್ರುತಿಯ ಅರ್ಥ. ಇದು ಜೀವನಲ್ಲಿ ಯುಕ್ತವಾಗುವುದಿಲ್ಲ. ಸಿದ್ಧಾಂತದ ಫಲವನ್ನು ಹೇಳುವ ಮೂಲಕ ಅಧಿಕರಣವನ್ನು ಉಪಸಂಹಾರ ಮಾಡುತ್ತಿದ್ದಾರೆ, 'ತಸ್ಮಾತ್' ಇತ್ಯಾದಿ ಟೀಕೆಯಿಂದ.

'ಜ್ಯೋತಿಃಶ್ರುತಿ' ಎಂಬ ಸಾಧಕ ಪ್ರಮಾಣವಿರುವುದರಿಂದ ಮತ್ತು ಬಾಧಕ ಪ್ರಮಾಣವಿಲ್ಲದ ಕಾರಣ, ಜೀವಪರವೆನ್ನಲು ಅನೇಕ ಬಾಧಕಗಳಿರುವುದರಿಂದಲೂ 'ಜ್ಯೋತಿಃ' ಎಂಬ ಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗುತ್ತಾನೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಜ್ಯೋತಿರಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

* * * * *

ತಂತ್ರದೀಪಿಕೆಯಲ್ಲಿ ಜ್ಯೋತಿರಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

ज्योतिरधिकरणम् (१।३।११)

'ಜ್ಯೋತಿದರ್ಶನಾತ್' ಎಂಬ ಸೂತ್ರದ ಅರ್ಧ

।। ज्योतिर्दर्शनात् ।। १-३-४० ।।

अत्र ज्योतिर्नाम समन्वीयते । ''योऽयं विज्ञानमयः प्राणेषु हृद्यन्तर्ज्योतिः'' इत्युक्तं ज्योतिर्ब्रह्मैव । नतु जीवः । कुतः ? दर्शनात् ''विष्णुरेव ज्योतिर्विष्णुरेव ब्रह्म'' इति श्रुतेरित्यर्थः । प्राक् समन्वितत्वेऽप्युभयत्र प्रसिद्धत्वेन पृथगुक्तिः । एवमग्रेऽपि ।। ११ ।।

ಈ ಅಧಿಕರಣದಲ್ಲಿ 'ಜ್ಯೋತಿಃ' ಎಂಬ ನಾಮಾತ್ಮಕಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. 'ಯೋऽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ' ಎಂಬ ಬೃಹದಾರಣ್ಯಕದ ವಾಕ್ಯವು ಅಧಿಕರಣದ ವಿಷಯವಾಗಿದೆ. ಇಲ್ಲಿ ಹೇಳಲ್ಪಟ್ಟ 'ಜ್ಯೋತಿಸ್ಸು' ಬ್ರಹ್ಮನೇ

ಹೊರತು, ಜೀವನಲ್ಲ. ಏಕೆಂದರೆ 'ದರ್ಶನಾತ್' = ವಿಷ್ಣುರೇವ ಜ್ಯೋತಿಃ ವಿಷ್ಣುರೇವ ಬ್ರಹ್ಮ, ವಿಷ್ಣುವೇ ಜ್ಯೋತಿಯಾಗಿದ್ದಾನೆ. ವಿಷ್ಣುವೇ ಬ್ರಹ್ಮನಾಗಿದ್ದಾನೆ ಎಂಬ ಶ್ರುತಿಯು ಪ್ರಮಾಣವಾಗಿರುವುದರಿಂದ.

ಇದೇ ಪ್ರಥಮಾಧ್ಯಾಯದ ಪ್ರಥಮ ಪಾದದಲ್ಲಿ 'ಜ್ಯೋತಿಃ' ಎಂಬ ಶಬ್ದವನ್ನು ಸಮನ್ವಯ ಮಾಡಿದ್ದಾಗಿತ್ತು. ಆದರೂ ಸಹ ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ 'ಜ್ಯೋತಿಸ್ಸು' ಉಭಯತ್ರಪ್ರಸಿದ್ಧವಾಗಿದೆ. ಆದ್ದರಿಂದ ಒಮ್ಮೆ ಸಮನ್ವಯ ಮಾಡಿದ್ದರೂ ಪುನಃ ಸಮನ್ವಯದ ಆವಶ್ಯಕತೆಯಿದೆ. ಇದರಂತೆ ಮುಂದಿನ ಆಕಾಶಾದ್ಯಧಿಕರಣಗಳಲ್ಲಿಯೂ ತಿಳಿಯಬೇಕು.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಜ್ಯೋತಿರಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಜ್ಯೋತಿರಧಿಕರಣ ಮತ್ತು ವಿಮರ್ಶೆ

ಅದ್ವೈತಿಗಳ ಅಧಿಕರಣ ಶರೀರವು ಹೀಗಿದೆ - 'ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ' ಎಂಬ ವಾಕ್ಯವು ಈ ಅಧಿಕರಣದ ವಿಷಯವಾಗಿದೆ. ಇಲ್ಲಿ ಹೇಳಲ್ಪಟ್ಟ ಜ್ಯೋತಿಯು ಆದಿತ್ಯನೇ ಆಗಿದ್ದಾನೆಂದು ಪೂರ್ವಪಕ್ಷ.

ವಾಸ್ತವಿಕವಾಗಿ ಶ್ರುತಿಯ ಈ ಪ್ರಕರಣವು ಬ್ರಹ್ಮಪರವಾಗಿದೆಯೆಂದು ದಹರಾಧಿಕರಣದಲ್ಲಿ ನಿರ್ಣಯಿಸಲಾಗಿದೆ. ಆದರೂ ಸಹ 'ಸಮುತ್ಥಾಯ' ಎಂಬ ಶ್ರುತಿಯಿಂದ ಬ್ರಹ್ಮಪ್ರಕರಣವು ಬಾಧಿತವಾಗುತ್ತದೆಂದು ಇಲ್ಲಿ ಆಕ್ಷೇಪಿಸಬಹುದು. ಏಕೆಂದರೆ ಈ ಶ್ರುತಿಯಲ್ಲಿರುವ 'ಜ್ಯೋತಿಃ' ಎಂಬ ಶಬ್ದವು ಬ್ರಹ್ಮಪರವಾದಲ್ಲಿ, ಅನೇಕ ಬಾಧಕಗಳಿವೆ. ಬ್ರಹ್ಮಭಾವರೂಪವಾದ ಮೋಕ್ಷಕ್ಕೋಸ್ಕರ ಶರೀರದ ತ್ಯಾಗವು ಬೇಕಾಗಿಲ್ಲ. ಜ್ಯೋತಿಯು ಬ್ರಹ್ಮನಾದಲ್ಲಿ 'ಸಮುತ್ಥಾಯ' ಎಂಬ ಶ್ರುತಿಯು ಕೂಡುವುದಿಲ್ಲ.

ಮತ್ತು 'ಉಪಸಂಪದ್ಯ' ಎಂಬಲ್ಲಿ 'ಕ್ತ್ವಾ' ಪ್ರತ್ಯಯಕ್ಕೆ 'ಲ್ಯಪ್' ಪ್ರತ್ಯಯವು ಆದೇಶವಾಗಿ ಬಂದಿದೆ. 'ಸಮಾನಕರ್ತೃಕಯೋಃ ಪೂರ್ವಕಾಲೇ ತು' ಎಂಬಂತೆ ಸಮಾನಕರ್ತೃಕವಾದ ಹಿಂದಿನ ಮುಂದಿನ ಕಾಲಗಳಲ್ಲಿ ನಡೆಯುವ ಕ್ರಿಯೆಗಳ ನಡುವೆ, ಹಿಂದಿನ ಕಾಲದ ಕ್ರಿಯಾವಾಚಿಯಾದ ಧಾತುವಿನ ಮುಂದೆ ತ್ವ ಪ್ರತ್ಯಯವು ಬರುತ್ತದೆಂದು ಹೇಳಲಾಗಿದೆ. ಹಾಗಾಗಿ 'ಉಪಸಂಪದ್ಯ' ಎಂದರೆ ಬ್ರಹ್ಮಭಾವವನ್ನು ಹೊಂದಿ, ಎಂಬರ್ಥವು ದೊರೆಯುತ್ತದೆ. ಪುನಃ 'ಸ್ವೇನ ರೂಪೇಣ ಅಭಿನಿಷ್ಪದ್ಯತೇ' ಎಂದು ಹೇಳುವುದು ಪುನರುಕ್ತವಾಗಿದೆ. ಏಕೆಂದರೆ ಸ್ವರೂಪನಿಷ್ಪತ್ತಿಗಿಂತ ಅತಿರಿಕ್ತವಾದ ಬ್ರಹ್ಮಸಂಪತ್ತಿಯು ಇರುವುದಿಲ್ಲ. ಆದ್ದರಿಂದ 'ಉಪಸಂಪದ್ಯ' ಎಂಬ ಪೂರ್ವಕಾಲವಾಚಿಯಾದ ತ್ವ ಶ್ರುತಿಯ ಬಾಧವು ಬರುತ್ತದೆ.

'ಜ್ಯೋತಿಃ' ಎಂಬ ಶಬ್ದದಿಂದ ಆದಿತ್ಯನು ಪ್ರತಿಪಾದ್ಯನೆಂದು ಹೇಳಿದಾಗ, ಈ ದೋಷಗಳು ಬರುವುದಿಲ್ಲ. ಏಕೆಂದರೆ ಶರೀರವನ್ನು ತ್ಯಾಗ ಮಾಡಿ, ಆದಿತ್ಯನ ಬಳಿ ಹೋಗಿ, ಅನಂತರ ಕಾರ್ಯರೂಪನಾದ ಬ್ರಹ್ಮನ ಲೋಕವನ್ನು ಹೊಂದುತ್ತಾನೆ. ಕ್ರಮವಾಗಿ ಮುಂದೆ ಮೋಕ್ಷವನ್ನು ಹೊಂದುತ್ತಾನೆಂಬ ಅರ್ಥವನ್ನು ಶ್ರುತಿಗೆ ಹೇಳಬಹುದು. ಹಾಗಾಗಿ ಶ್ರುತಿಬಾಧವು ಬರುವುದಿಲ್ಲ.

ಸಿದ್ಧಾಂತ - ನೀವು ಹೇಳಿದ್ದು ಯುಕ್ತವಾಗುತ್ತಿತ್ತು. ಒಂದು ವೇಳೆ ಈ ಶ್ರುತಿಯಲ್ಲಿ ಹೇಳಲ್ಪಟ್ಟ ಮೋಕ್ಷವು, ಸಗುಣವಿಷಯಕವಾಗಿದ್ದಲ್ಲಿ ಯುಕ್ತವಾಗುತ್ತಿತ್ತು. ಆದರೆ ಶ್ರುತಿಯು ನಿರ್ಗುಣನನ್ನೇ ಪ್ರತಿಪಾದನೆ ಮಾಡುತ್ತಿದೆ. 'ಯ ಆತ್ಮಾಽಪಹತಪಾಪ್ಮಾ' ಇತ್ಯಾದಿಯಾಗಿ ಹಿಂದೆ ನಿರ್ಗುಣನ ಬಗ್ಗೆ ಹೇಳಿ, 'ಪರಂಜ್ಯೋತಿರುಪಸಂಪದ್ಯ' ಇತ್ಯಾದಿಯಾಗಿ ನಿರ್ಗುಣಬ್ರಹ್ಮನ ಜ್ಞಾನವನ್ನು ಪಡೆಯುವುದರಿಂದ ಲಭಿಸುವಂತಹ ಫಲವನ್ನು ಶ್ರುತಿಯು ಹೇಳುತ್ತಿದೆ.

ನಿರ್ಗುಣಬ್ರಹ್ಮಭಾವಕ್ಕೆ ಯಾವುದೂ ಸಹ ಪ್ರತಿಬಂಧಕವಲ್ಲ. ಹಾಗಾಗಿ ದೇಹದಿಂದ ಉತ್ಕ್ರಮಣವನ್ನು ಶ್ರುತಿಯು ಏಕೆ ಹೇಳಿದೆ ? ಎಂಬ ಪೂರ್ವಪಕ್ಷಿಗಳ ಆಶಂಕೆಗೂ ಅವಕಾಶವಿಲ್ಲ. ಏಕೆಂದರೆ 'ಅಸ್ಮಾತ್ ಶರೀರಾತ್ ಸಮುತ್ಥಾಯ' ಎಂದರೆ ಶ್ರವಣ, ಮನನ ನಿಧಿಧ್ಯಾಸನಗಳನ್ನು ಮಾಡಿ, 'ಪರಂಜ್ಯೋತಿರುಪಸಂಪದ್ಯ' ಎಂದರೆ ಬ್ರಹ್ಮಭಾವವನ್ನು ಪಡೆದು, 'ಸ್ವೇನ ರೂಪೇಣ ಅಭಿನಿಷ್ಪದ್ಯತೇ' ಸಾಕ್ಷಾತ್ಕಾರವನ್ನು ಹೊಂದುತ್ತಾನೆ ಎಂದರ್ಥ.

ಬ್ರಹ್ಮಭಾವವನ್ನು ಪಡೆದ ಮೇಲೆ, ಸಾಕ್ಷಾತ್ಕಾರವನ್ನು ಪಡೆಯಲು ಹೇಗೆ ಸಾಧ್ಯ ? ಎಂದರೆ, ಶ್ರುತಿಯು ಪೂರ್ವೋತ್ತರ ಕಾಲಗಳನ್ನು ವಿವಕ್ಷಿಸಿಯೇ ಇಲ್ಲ. ಹೇಗೆಂದರೆ 'ಮುಖಂ ವ್ಯಾದಾಯ ಸ್ವಪಿತಿ' ಎಂಬಲ್ಲಿ ಮೊದಲು ಬಾಯಿತೆಗೆದು ಅನಂತರ ನಿದ್ರೆ ಮಾಡುತ್ತಾನೆ ಎಂದೇನೂ ಅರ್ಥವಲ್ಲ. ಹೊರತು, ಮಲಗಿದ

ಮೇಲೆ ಬಾಯಿ ತೆಗೆಯುತ್ತಾನೆ ಎಂದೇ ಅರ್ಥ. ಅದರಂತೆ ಇಲ್ಲಿಯೂ ಕೂಡ ತಿಳಿದುಕೊಳ್ಳಬೇಕು. ಆದ್ದರಿಂದ 'ಜ್ಯೋತಿಃ' ಶಬ್ದದಿಂದ ನಿರ್ಗುಣ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧಾಂತವೆಂದು ಅದ್ವೈತಿಗಳು ಹೇಳುತ್ತಾರೆ.

ಅದ್ವೈತಿಗಳ ಈ ಅಧಿಕರಣಶರೀರ ಅಸಾಧುವಾಗಿದೆ. ಏಕೆಂದರೆ 'ನಾರಾಯಣಪರೋಜ್ಯೋತಿಃ' ಇತ್ಯಾದಿ ಶ್ರುತಿಗಳಲ್ಲಿ 'ಪರಂ ಜ್ಯೋತಿಃ ಪರಂ ಧಾಮ ಪವಿತ್ರಂ ಪರಮಂ ಭವಾನ್' ಇತ್ಯಾದಿ ಸ್ಮೃತಿಗಳಲ್ಲಿಯೂ ಪರಶಬ್ದದಿಂದ ಕೂಡಿರುವ 'ಜ್ಯೋತಿಸ್' ಶಬ್ದವು ಪರಬ್ರಹ್ಮನಲ್ಲೇ ಪ್ರಸಿದ್ಧವಾಗಿದೆ. ಪ್ರಕೃತ 'ಏಷಃ ಸಂಪ್ರಸಾದೋ' ಎಂಬ ಶ್ರುತಿಯಲ್ಲಿಯೂ 'ಪರಂ ಜ್ಯೋತಿಃ' ಎಂಬ ಪದವೇ ಶ್ರುತವಾದ್ದರಿಂದ ಪರಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಮೊದಲೇ ನಿಶ್ಚಿತವಾಗಿರುತ್ತದೆ. ಹೀಗಿರುವಾಗ ಸಂಶಯವಾಗಲೀ, ಪೂರ್ವಪಕ್ಷವಾಗಲೀ ಹುಟ್ಟಲು ಸಾಧ್ಯವೇ ಇಲ್ಲ.

ಮತ್ತು

ಪೂರ್ವಂ ಯತ್ ಸತ್ಯಕಾಮಾದಿ ಪಶ್ಚಾದ್ಯತ್ ಕ್ರೀಡಾನಾದಿಕಮ್ ।
ತದ್ವಯಂ ನಿರ್ಗುಣೇ ಮೋಕ್ಷೇ ಸರ್ವಥಾ ನೋಪಪದ್ಯತೇ ॥೧॥

ಈ ಶ್ರುತಿಯ ಹಿಂದಿನ ವಾಕ್ಯಗಳಲ್ಲಿ ಹೇಳಲ್ಪಟ್ಟ ಸತ್ಯಕಾಮತ್ವಾದಿಗಳು ಮುಂದಿನ ವಾಕ್ಯಗಳಲ್ಲಿ ಹೇಳಲ್ಪಟ್ಟ ಕ್ರೀಡನಾದಿಗಳು ನಿರ್ಗುಣ ಬ್ರಹ್ಮಭಾವವೆಂಬ ಮೋಕ್ಷದಲ್ಲಿ ಸರ್ವಥಾ ಕೂಡುವುದಿಲ್ಲ.

'ಏಷಃ ಸಂಪ್ರಸಾದಃ' ಎಂಬ ವಾಕ್ಯಕ್ಕಿಂತ ಹಿಂದೆ 'ಯ ಆತ್ಮಾಪಹತಪಾಪ್ಮಾ' ಎಂದು ಪ್ರಾರಂಭವಾಗಿ, ಸತ್ಯಕಾಮಃ, ಸತ್ಯಸಂಕಲ್ಪಃ ಇತ್ಯಾದಿಯಾಗಿ ಸವಿಶೇಷಬ್ರಹ್ಮನ ವಿಚಾರವೇ ಪ್ರಸ್ತುತವಾಗಿದೆ. ಮುಂದೆಯೂ ಸಹ 'ಸ್ವೇನ ರೂಪೇಣ ಅಭಿನಿಷ್ಪದ್ಯತೇ । ಸತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ ಸ್ತ್ರೀಭರ್ವಾ ಯಾನೈರ್ವಾ' ಇತ್ಯಾದಿಯಾಗಿ ಸಗುಣಬ್ರಹ್ಮನ ಮೋಕ್ಷವೇ ಶ್ರುತವಾಗಿದೆ. ಹೊರತು, ನಿರ್ಗುಣಮೋಕ್ಷವು ಎಲ್ಲಿಯೂ ಸಹ ಪ್ರಸಕ್ತವಾಗಿಲ್ಲ.

ಅಪಹತಪಾಪ್ಮತ್ವಾದಿಗಳನ್ನು ಸಗುಣಬ್ರಹ್ಮನಲ್ಲಿಯೂ ಕೂಡಿಸಬಹುದು. ಏಕೆಂದರೆ 'ಯ ಏಷೋಂತರಾದಿತ್ಯೇ ಹಿರಣ್ಮಯಃ ಪುರುಷ' ಇತ್ಯಾದಿಯಾಗಿ ಹಿರಣ್ಮಯಾದಿ ಗುಣಗಳಿಂದ ಸಹಿತನಾದ ಸಗುಣಬ್ರಹ್ಮನ ಬಗ್ಗೆ 'ಸರ್ವೇಭ್ಯಃ ಪಾಪ್ಮಭ್ಯ ಉದಿತ' ಎಂಬುದಾಗಿ ಪಾಪರಾಹಿತ್ಯವನ್ನು ಶ್ರುತಿಯೇ

ಹೇಳುತ್ತಿದೆ. ಮತ್ತು 'ಸತ್ಯಕಾಮಃ' ಇತ್ಯಾದಿ ಶ್ರುತಿಯಲ್ಲಿ ಹೇಳಲ್ಪಟ್ಟ ಸತ್ಯಕಾಮತ್ವಾದಿಗುಣಗಳು ನಿರ್ಗುಣನಲ್ಲಿ ಸರ್ವಥಾ ಕೂಡುವುದಿಲ್ಲ.

ಮತ್ತು ಒಂದು ವೇಳೆ ನಿರ್ಗುಣ ಬ್ರಹ್ಮನು ಪ್ರತಿಪಾದ್ಯನಾದಲ್ಲಿ, ಶ್ರುತಿಯಲ್ಲಿರುವ ಸಕಲ ಪದಗಳಿಗೂ ಲಕ್ಷಣಾ ಮಾಡುವ ಪ್ರಸಂಗ ಬರುತ್ತದೆ. 'ಶರೀರಾತ್ ಸಮುತ್ಥಾಯ' ಎಂಬುದಕ್ಕೆ ಶ್ರವಣಾದಿಗಳಲ್ಲಿ 'ಉಪಸಂಪದ್ಯ' ಎಂಬ ಪದಕ್ಕೆ ಐಕ್ಯದಲ್ಲಿ, 'ಸ್ವೇನ ರೂಪೇಣಾಭಿನಿಷ್ಪದ್ಯತೇ' ಎಂಬುದಕ್ಕೆ ಸಾಕ್ಷಾತ್ಕಾರದಲ್ಲಿ ಯೌಗಿಕಾರ್ಥವಾಗಲೀ, ರೂಢಾರ್ಥವಾಗಲೀ ಹೇಳಲು ಸರ್ವಥಾ ಬರುವುದಿಲ್ಲ.

ಅದ್ವೈತಿಗಳ ಸೂತ್ರವ್ಯಾಖ್ಯಾನ ಹೀಗಿದೆ - 'ದರ್ಶನಾತ್' ಎಂಬ ಪದಕ್ಕೆ ಈ ಪ್ರಕರಣದಲ್ಲಿ ಬ್ರಹ್ಮನು ಪ್ರಸಕ್ತನಾದ್ದರಿಂದ, ಬ್ರಹ್ಮವಾಚಕವಾದ ಪದವನ್ನು ಅನುವೃತ್ತಿಮಾಡಿಕೊಳ್ಳುವುದು ಕಂಡಿದೆ ಎಂದರ್ಥವೆನ್ನುತ್ತಾರೆ. ಇದು ತಪ್ಪು. ಹಾಗಾದಲ್ಲಿ ಸೂತ್ರದಲ್ಲಿ 'ಅನುವೃತ್ತೇಃ' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು.

ರಾಮಾನುಜರು ಹೀಗೆ ಹೇಳುತ್ತಾರೆ - ಈ ಸೂತ್ರವು 'ಶಬ್ದಾದೇವ ಪ್ರಮಿತಃ' ಎಂಬ ವಾಮನಾಧಿಕರಣಕ್ಕೆ ಶೇಷಭೂತವಾಗಿದೆ. ಬ್ರಹ್ಮನು ಅಂಗುಷ್ಠಮಾತ್ರದಲ್ಲಿ ಇರುತ್ತಾನೆ ಎನ್ನಲು ಇದು ಮತ್ತೊಂದು ಹೇತುವನ್ನು ನಿರೂಪಣೆ ಮಾಡಲು ಹೊರಟಿದೆ. ಹೊರತಾಗಿ, ಪ್ರತ್ಯೇಕ ಅಧಿಕರಣವೆಂದು ಪರಿಗಣಿಸಬಾರದು. ಏಕೆಂದರೆ 'ಜ್ಯೋತಿಶ್ಚರಣಾಭಿಧಾನಾತ್' ಎಂಬ ಸೂತ್ರದಲ್ಲಿಯೇ 'ಜ್ಯೋತಿಃ' ಎಂಬ ಶಬ್ದದ ಸಮನ್ವಯವನ್ನು ಪರಮಾತ್ಮನಲ್ಲಿ ಮಾಡಿದ್ದಾಗಿದೆ. ಅಂಗುಷ್ಠಮಾತ್ರ ಪರಿಮಾಣವುಳ್ಳವನಾಗಿದ್ದಾನೆ ಎಂದು ಸಮರ್ಥಿಸುವ ಶ್ರುತಿಪ್ರಕರಣದಲ್ಲಿ 'ನ ತತ್ರ ಸೂರ್ಯೋ ಭಾತಿ' ಎಂಬ ಶ್ರುತಿಯು ಬ್ರಹ್ಮನೇ ಜ್ಯೋತಿಯಾಗಿದ್ದಾನೆನ್ನಲು ಹೇತುವನ್ನು ಸಾಧಿಸಲು ಹೊರಟಿದೆ. ಕಾಠಕೋಪನಿಷತ್ತಿನಲ್ಲಿ ಅಂಗುಷ್ಠಪರಿಮಾಣವುಳ್ಳ ಪುರುಷನ ಜ್ಯೋತಿಯು 'ನ ತತ್ರ ಸೂರ್ಯೋ ಭಾತಿ' ಎಂಬುದಾಗಿ ಸರ್ವತೇಜೋಭಿಭಾವಕವನ್ನು ಹೇಳಲಾಗಿದೆ. ಅಂತಹ ಜ್ಯೋತಿಯು ಪರಬ್ರಹ್ಮನೇ ಆಗಿದ್ದಾನೆಂದು 'ಪರಂಜ್ಯೋತಿರುಪಸಂಪದ್ಯ' ಮುಂತಾದ ಶ್ರುತಿಗಳು ಪ್ರತಿಪಾದನೆ ಮಾಡುತ್ತಿವೆ.

ಪ್ರಮಿತಾಧಿಕರಣಕ್ಕೆ ಈ ಸೂತ್ರವು ಶೇಷವಾದಲ್ಲಿ, ಅದರ ಅನಂತರವೇ ಇದನ್ನು ಪಠಿಸಬೇಕಿತ್ತು. ಮಧ್ಯದಲ್ಲಿ ಇಷ್ಟೊಂದು ಸೂತ್ರಗಳು ವ್ಯವಹಿತವಾಗಿದ್ದು ತಪ್ಪಾಗಬೇಕಾದೀತು. ಮತ್ತು 'ನ ತತ್ರ ಸೂರ್ಯೋ ಭಾತಿ' ಎಂಬ ಶ್ರುತಿಯಲ್ಲಿ 'ಜ್ಯೋತಿಃ' ಎಂಬ ಪದವೇ ಇಲ್ಲದ ಕಾರಣ ಸೂತ್ರವು ಶ್ರುತಿಗೆ ಅನುಗುಣವೂ ಕೂಡ ಆಗುವುದಿಲ್ಲ.

ಮತ್ತು ಹಿಂದಿನ ಸೂತ್ರಗಳಂತೆ ಈ ಸೂತ್ರದಲ್ಲಿ 'ಜ್ಯೋತಿಃ ಬ್ರಹ್ಮದರ್ಶನಾತ್' ಎಂದು ಸ್ಪಷ್ಟವಿರುವಾಗ ಹೇತುಮಾತ್ರ ಪರವಾಗಿ ವ್ಯಾಖ್ಯಾನ ಮಾಡುವುದು ತಪ್ಪಾಗುತ್ತದೆ.

'ಆಕಾಶಸ್ತಲ್ಲಿಂಗಾತ್' 'ಅತ ಏವ ಪ್ರಾಣ' ಇತ್ಯಾದಿ ಸೂತ್ರಗಳಲ್ಲಿ ಸಮನ್ವಯ ಮಾಡಿದ ಆಕಾಶ, ಪ್ರಾಣ ಮೊದಲಾದ ಶಬ್ದಗಳನ್ನು ಪುನಃ 'ದಹರ ಉತ್ತರೇಭ್ಯಃ' 'ಪ್ರಾಣಸ್ತಥಾನುಗಮಾತ್' ಇತ್ಯಾದಿ ಸೂತ್ರಗಳಲ್ಲಿ ಸಮನ್ವಯ ಮಾಡಲಾಗಿದೆಯೆಂದು ನೀವೂ ಸಹ ಒಪ್ಪಿರುತ್ತೀರಿ. ಆದ್ದರಿಂದ ರಾಮಾನುಜರ ಮತ ಅಸಾಧುವಾಗಿದೆ

ಇಲ್ಲಿಗೆ ಜ್ಯೋತಿರಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಆಕಾಶಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್‌ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಆಕಾಶಾಧಿಕರಣ

ಬ್ರಹ್ಮಸೂತ್ರ

।। अथ आकाशाधिकरणम् ।।

'ಆಕಾಶೋ' ಇತ್ಯಾದಿ ಸೂತ್ರದ ವ್ಯಾಖ್ಯಾನ

ब्रह्मसूत्रम् – ।।आकाशोऽर्थान्तरत्वादिव्यपदेशात् ।। ४१ ।।

ಸೂತ್ರಾರ್ಥ - 'ಆಕಾಶೋ ವೈ ನಾಮ' ಎಂಬಲ್ಲಿರುವ ಆಕಾಶ ಶಬ್ದದಿಂದಲೂ ಬ್ರಹ್ಮನೇ ಪ್ರತಿಪಾದ್ಯನು ಹೊರತು ಅವ್ಯಾಕೃತಾಕಾಶವಲ್ಲ ಏಕೆಂದರೆ ನಾಮರೂಪ ರಾಹಿತ್ಯವೆಂಬ ವಿಲಕ್ಷಣಧರ್ಮವನ್ನು ಹೇಳಿದ್ದರಿಂದ, ಬ್ರಹ್ಮತ್ವ, ಅಮೃತತ್ವ ಮೊದಲಾದ ಧರ್ಮಗಳೂ ಶ್ರುತವಾದ್ದರಿಂದ.

ಅರ್ಥ -- ಆಕಾಶಃ = 'ಆಕಾಶೋ ವೈ ನಾಮ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ 'ಆಕಾಶ' ಶಬ್ದದಿಂದ ಮಹಾವಿಷ್ಣುವೇ ಪ್ರತಿಪಾದ್ಯನು ಹೊರತು ಅವ್ಯಾಕೃತ ಆಕಾಶವಲ್ಲ. ಏಕೆಂದರೆ 'ಅರ್ಥಾಂತರತ್ವಾದಿ ವ್ಯಪದೇಶಾತ್' = 'ತೇ ಯದಂತರಾ' ಎಂಬುದಾಗಿ ಛಾಂದೋಗ್ಯದ ವಾಕ್ಯದಲ್ಲಿ ವಿಷ್ಣುವಿಗೆ ನಾಮರೂಪರಾಹಿತ್ಯವೆಂಬ ವಿಲಕ್ಷಣಧರ್ಮವನ್ನು ಹೇಳಿದ್ದರಿಂದ. ಆದಿಪದದಿಂದ ಬ್ರಹ್ಮತ್ವ, ಅಮೃತತ್ವ ಮೊದಲಾದವುಗಳನ್ನು ಹೇಳಿದ್ದರಿಂದಲೂ ಎಂಬರ್ಥವನ್ನು ವಿವಕ್ಷಿಸಬೇಕು.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಆಕಾಶಾಧಿಕರಣವು ಸಮಾಪ್ತವಾಯಿತು ॥

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಭೂತಾಕಾಶವೇ ಶ್ರುತಿಪ್ರತಿಪಾದ್ಯವೆಂದು ಪೂರ್ವಪಕ್ಷ

ब्रह्मसूत्रभाष्यम् – सर्वाधारत्वं विष्णोरुक्तम् । त'चाकाशो वै नाम नामरूपयोर्निर्वहित' (छा.उ.८-१४-१) इत्यत्राऽऽकाशस्य प्रतीयते। वै नामेति प्रसिद्धोपदेशात् प्रसिद्धाकाशश्चाङ्गीकर्तव्य इति ।

ಅನುವಾದ - ದ್ಯುಭ್ವಾದ್ಯಧಿಕರಣದಲ್ಲಿ ಆಕಾಶಾದಿ ಸಕಲ ಪದಾರ್ಥಗಳಿಗೆ ಆಧಾರನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಹೇಳಲಾಯಿತು. ಆದರೆ ಛಾಂದೋಗ್ಯವು ಪ್ರಸಿದ್ಧವಾದ ಆಕಾಶವೇ ನಾಮ ಹಾಗೂ ರೂಪಾತ್ಮಕವಾದ ಪ್ರಪಂಚಕ್ಕೆ ನಿರ್ವಾಹಕವಾಗಿದೆ ಎಂದು ಹೇಳುತ್ತಿದೆ. ಈ ಶ್ರುತಿಯಲ್ಲಿ 'ವೈ ನಾಮ' ಎಂಬೆರಡು ಅವ್ಯಯಗಳಿಂದ ಲೋಕಪ್ರಸಿದ್ಧಿಯು ತಿಳಿಯುತ್ತಿದೆ. ಲೋಕಪ್ರಸಿದ್ಧವಾದ ಭೂತಾಕಾಶವೇ ಈ ಮಂತ್ರಪ್ರತಿಪಾದ್ಯವಾಗಿದೆ ಎಂದು ಅಂಗೀಕರಿಸಬೇಕು.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಉಭಯತ್ರ ಪ್ರಸಿದ್ಧವಾದ 'ಆಕಾಶ' ಎಂಬ ನಾಮಾತ್ಮಕ ಶಬ್ದವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಶ್ರುತ್ಯಾದಿಸಂಗತಿ, ವಿಷಯಾದಿಗಳನ್ನು ಮೊದಲು ತೋರಿಸುತ್ತಾರೆ –

ಸರ್ವಾಧಾರತ್ವಂ = ಆಕಾಶಾದಿ ಸಕಲ ಪದಾರ್ಥಗಳಿಗೂ ಆಧಾರವಾಗಿರುವಿಕೆಯನ್ನು, ವಿಷ್ಣೋ = ವಿಷ್ಣುವಿಗೆ, ಉಕ್ತಂ = ದ್ಯುಭ್ವಾದ್ಯಧಿಕರಣದಲ್ಲಿ ಹೇಳಲಾಯಿತು. ತಚ್ಚ = ಆ ಸರ್ವಾಧಾರತ್ವ-ವಾದರೋ ಛಾಂದೋಗ್ಯ ಶ್ರುತಿಯಲ್ಲಿ, ಆಕಾಶೋ ವೈ = ಆಕಾಶವೇ, ನಾಮರೂಪಯೋಃ = ನಾಮ ಮತ್ತು ರೂಪಾತ್ಮಕವಾದ ಪ್ರಪಂಚಕ್ಕೆ, ನಿರ್ವಹಿತಾ = ನಿರ್ವಾಹಕವಾಗಿದೆ. ಇತಿ = ಹೀಗೆ, ಆಕಾಶಸ್ಯ = ಆಕಾಶಕ್ಕೆ, ಪ್ರತೀಯತೇ = ತೋರುತ್ತದೆ. ಮತ್ತು ವೈ ನಾಮೇತಿ = ವೈ ಮತ್ತು ನಾಮ ಎಂಬೆರಡು ನಿಪಾತಗಳು, ಪ್ರಸಿದ್ಧೋಪದೇಶಾತ್ = ಪ್ರಸಿದ್ಧವಾದ ಪದಾರ್ಥವನ್ನೇ ತಿಳಿಸುತ್ತದೆ. ಪ್ರಸಿದ್ಧಾಕಾಶಸ್ಯ = ಲೋಕಪ್ರಸಿದ್ಧವಾದ

ಭೂತಾಕಾಶವನ್ನೇ ಸರ್ವಾಧಾರವೆಂದು, ಅಂಗೀಕರ್ತವ್ಯಃ = ಅಂಗೀಕರಿಸಬೇಕು. ಇತಿ = ಇಷ್ಟು ಪೂರ್ವಪಕ್ಷ.

ಲೋಕವಿಲಕ್ಷಣನಾದ ಶ್ರೀಹರಿಯೇ 'ಆಕಾಶ'

ब्रह्मसूत्रभाष्यम् — अत उच्यते —

।। आकाशोऽर्थान्तरत्वादिव्यपदेशात् ।।४१।।

'ते यदन्तरा तद्ब्रह्म' (छा. उ. ८-१४-१) इत्यर्थान्तरत्वादि-व्यपदेशादाकाशो हरिरेव ।

ಅನುವಾದ - ಈ ಆಕ್ಷೇಪಕ್ಕೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ. ಅದೇ ಛಾಂದೋಗ್ಯದಲ್ಲಿ ನಾಮರೂಪರಹಿತವಾದದ್ದು ಬ್ರಹ್ಮ ಎಂದು ಲೋಕವಿಲಕ್ಷಣವಾದ ತತ್ತ್ವವನ್ನೇ ಬ್ರಹ್ಮನೆಂದು ಹೇಳಿ, ಆಕಾಶವನ್ನು ಹೇಳಿದ್ದರಿಂದ ಶ್ರೀಹರಿಯೇ ಆಕಾಶಶಬ್ದಪ್ರತಿಪಾದ್ಯನಾಗುತ್ತಾನೆ.

ಪ್ರತಿಪದಾರ್ಥ --ಸಿದ್ಧಾಂತಸ್ಥಾಪಕವಾದ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ —

ತೇ = ಪ್ರಾಕೃತವಾದ ನಾಮರೂಪಗಳನ್ನು, ಅಂತರಾ = ಬಿಟ್ಟು, ಅಂದರೆ ಭಿನ್ನವಾಗಿ, ಯತ್ = ಯಾವುದು ಇದೆಯೋ, ತತ್ ಬ್ರಹ್ಮ = ಅದೇ ಬ್ರಹ್ಮನು, ಇತಿ = ಹೀಗೆ, ಅರ್ಥಾಂತರತ್ವಾದಿವ್ಯಪದೇಶಾತ್ = ನಾಮರೂಪಾತ್ಮಕವಾದ ಪ್ರಪಂಚಕ್ಕಿಂತ ವಿಲಕ್ಷಣವಾದ ಅರ್ಥಾಂತರವನ್ನು ಹೇಳಿದ್ದರಿಂದ, ಆಕಾಶಃ = ಆಕಾಶಶಬ್ದಪ್ರತಿಪಾದ್ಯನಾದವನು, ಹರಿರೇವ = ಶ್ರೀಹರಿಯೇ ಆಗಿರುತ್ತಾನೆ.

'ಅವರ್ಣಮಚಕ್ಷುಃ ಶ್ರೋತ್ರಮ್' ಎಂಬ ಶ್ರುತ್ಯರ್ಥ

ब्रह्मसूत्रभाष्यम् — 'अवर्णं (अवर्णमचक्षुश्चोत्रम्' इत्याद्याथर्वणी श्रुतिः) 'यतो वाचो निवर्तन्ते' (तै.उ. २-४) इत्यादि श्रुतेस्तस्यैव हि तल्लक्षणम् ।

ಅನುವಾದ - 'ಅವರ್ಣಮಚಕ್ಷುಃಶ್ರೋತ್ರಮ್' ಎಂಬ ಅಥರ್ವಣ ಶ್ರುತಿಯಲ್ಲಿ, ಮತ್ತು 'ಯತೋ ವಾಚೋ ನಿವರ್ತಂತೇ' ಎಂದು ತೈತ್ತಿರೀಯ ಶ್ರುತಿಯಲ್ಲಿ ನಾಮರೂಪರಾಹಿತ್ಯವನ್ನು ಮಹಾವಿಷ್ಣುವಿನ ಲಕ್ಷಣವೆಂದು ಸ್ಪಷ್ಟವಾಗಿ ಹೇಳಲಾಗಿದೆ.

ಪ್ರತಿಪದಾರ್ಥ -- ಆಕಾಶದಲ್ಲಿ ಶ್ರುತವಾದ ನಾಮರೂಪತ್ವಾದಿ ಲಿಂಗದಿಂದ ವಿಷ್ಣುವನ್ನು ಹೇಗೆ ನಿಶ್ಚಯಿಸುತ್ತೀರಿ? ಎಂಬ ಪ್ರಶ್ನೆಗೆ, ಉತ್ತರಿಸುತ್ತಿದ್ದಾರೆ –

ಅವರ್ಣಂ = ಪ್ರಾಕೃತವಾದ ಶುಕ್ಲಾದಿ ವರ್ಣರಹಿತನಾದವನೆಂದು, ಮತ್ತು ಯತಃ = ಬ್ರಹ್ಮನ ದೆಸೆಯಿಂದ, ವಾಚೋ ನಿವರ್ತಂತೇ = ನಾಮರೂಪವಾದ ಜಗತ್ತು ಹಿಂತಿರುಗುತ್ತದೆ. ಇತ್ಯಾದಿ ಶ್ರುತೇಃ = ಇವೇ ಮೊದಲಾದ ಶ್ರುತಿಗಳ ಆಧಾರದಿಂದ, ತಸ್ಯೈವ ಹಿ = ಆ ವಿಷ್ಣುವಿನದ್ದೇ, ತತ್ = ನಾಮರೂಪರಾಹಿತ್ಯವು, ಲಕ್ಷಣಂ = ಲಕ್ಷಣವಾಗಿದೆ.

'ಅನಾಮಾ' ಇತ್ಯಾದಿ ಶ್ರುತ್ಯರ್ಥ

ಬ್ರಹ್ಮಸೂತ್ರಭಾಷ್ಯಮ್ –'ಅನಾಮಾ ಸೋಽಪ್ರಸಿದ್ಧತ್ವಾದರೂಪೋ ಭೂತವರ್ಜನಾದ್' ಇತಿ (ಹಿ) ಬ್ರಾಹ್ಮೇ ॥೪೧॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಬ್ರಹ್ಮಸೂತ್ರಭಾಷ್ಯೇ ಆಕಾಶಾಧಿಕರಣಮ್ ॥ ೧೨ ॥

ಅನುವಾದ - ಶ್ರೀಹರಿಯು ಲೋಕಪ್ರಸಿದ್ಧನಲ್ಲದ ಕಾರಣ ನಾಮವಾಚ್ಯನಾದರೂ ನಾಮರಹಿತನಾಗಿದ್ದಾನೆ. ಭೌತಿಕ ದೇಹರಹಿತನಾದ್ದರಿಂದ ಆಕಾರರಹಿತನಾಗಿದ್ದಾನೆಂದು ಕರೆಸಿಕೊಳ್ಳುತ್ತಾನೆ, ಹೀಗೆ ಬ್ರಹ್ಮಾಂಡ ಪುರಾಣವು ಹೇಳಿದೆ.

ಪ್ರತಿಪದಾರ್ಥ -- ಶ್ರೀಹರಿಗೆ ನಾಮರೂಪರಾಹಿತ್ಯವು ಯುಕ್ತವಾಗುವುದಿಲ್ಲ. ಸರ್ವಶಬ್ದವಾಚ್ಯನಾದ್ದರಿಂದ ಹಾಗೂ ರುಗ್ಮಾದಿ ವರ್ಣಗಳಿರುವುದರಿಂದ. ಈ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ –

ಅಸೌ ವಿಷ್ಣುಃ ಅಪ್ರಸಿದ್ಧತ್ವಾತ್ = ಲೋಕವಿಲಕ್ಷಣನಾದ್ದರಿಂದ, ಅನಾಮ = ನಾಮರಹಿತನಾಗಿದ್ದಾನೆ, ಹೆಸರಿಲ್ಲದವನೆಂದು ಕರೆಸಿಕೊಳ್ಳುತ್ತಾನೆ,

ಭೂತವರ್ಜನಾತ್ = ಪ್ರಾಕೃತವಾದ ದೇಹದ ಸಂಪರ್ಕವಿಲ್ಲದ ಕಾರಣ,
ಅರೂಪಃ = ರೂಪರಹಿತನೆಂದು ಕರೆಸಿಕೊಳ್ಳುತ್ತಾನೆ. ಇತಿ = ಹೀಗೆ,
ಬ್ರಾಹ್ಮೇ = ಬ್ರಹ್ಮಾಂಡ ಪುರಾಣದಲ್ಲಿ ಹೇಳಲಾಗಿದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಸಮಾಪ್ತವಾಯಿತು ॥

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ
ಸತ್ತರ್ಕದೀಪಾವಳಿ

ಭಗವಂತನೇ ಆಕಾಶಶಬ್ದ ಪ್ರತಿಪಾದ್ಯ

सत्तर्कदीपावलिः –

॥ आकाशोऽर्थान्तरत्वादिव्यपदेशात् ॥

ननु, 'आकाशो वै नाम नामरूपयोर्निर्वहिता' इत्यत्र सर्वाधिकतयाप्याम्नातोऽप्याकाशो न विष्णुः, किन्तु भूताकाश एव । वै नामेति प्रसिद्धिद्योतकनिपातश्रवणाल्लोकप्रसिद्धाकाशो हि भूताकाश इति न वक्तव्यम् । 'ते यदन्तरा तद् ब्रह्म' इति वाक्यशेषविरोधात् । यतो यमाकाशस्ते नामरूपे विना ताभ्यामस्पृष्टो वर्तते । अतो नामरूपात्मकभूतभौतिकादिप्रपञ्चानिर्वाहत्वाद् अर्थान्तरभूत इत्यर्थः । 'तद् ब्रह्म तदमृतं स आत्मा' इति निर्दिष्टमानत्वाच्च नायमाकाशः । वै नामेत्यनेन प्रकाशमानो भगवान्नामरूपनिर्वहितेत्यत्र प्रसिद्धिद्योतकेन नामरूपातीतत्वं विष्णोरेव युज्यते । 'अगोत्रमवर्णमचक्षुःश्रोत्रम्' 'यतो वाचो निवर्तन्ते' इत्यादिश्रुतेः । 'अनामा सोऽप्रसिद्धत्वादरूपो

भूतवर्जनाद्' इति वचनान्नात्र विरोधः शङ्कनीयः । तदिदमुक्तम् – सर्वाधारत्वमित्यादिना ।।

।। इति सत्तर्कदीपावल्याम् आकाशाधिकरणम् ।।

'ಆಕಾಶೋ ವೈ ನಾಮಾ, ನಾಮರೂಪಯೋರ್ನಿರ್ವಹಿತಾ' ಎಂಬಲ್ಲಿ ಆಕಾಶವು ಸಕಲ ಪದಾರ್ಥಗಳಗಿಂತಲೂ ಶ್ರೇಷ್ಠವಾಗಿದೆ, ಎಂದು ಹೇಳಲಾಗಿದೆ. ಇಲ್ಲಿರುವ ಆಕಾಶಶಬ್ದದಿಂದ ಭೂತಾಕಾಶವೇ ಪ್ರತಿಪಾದ್ಯವಾಗಿದೆ ಹೊರತು ವಿಷ್ಣುವಲ್ಲ. ಏಕೆಂದರೆ 'ವೈ ನಾಮಾ' ಎಂಬ ಪ್ರಸಿದ್ಧಿದ್ಯೋತಕವಾದ ನಿಪಾತವನ್ನು ಶ್ರುತಿಯು ಹೇಳಿದೆ. ಲೋಕಪ್ರಸಿದ್ಧವಾದ ಆಕಾಶವೆಂದರೆ ಭೂತಾಕಾಶವೇ ಆಗಿದೆ ಎಂದು ಪೂರ್ವಪಕ್ಷ.

ಸಿದ್ಧಾಂತ ಹೀಗಿದೆ - 'ತೇ ಯದಂತರಾ ತದ್ ಬ್ರಹ್ಮ' ಎಂಬ ವಾಕ್ಯಶೇಷದಲ್ಲಿ ವಿಷ್ಣುವಾಚಕವಾದ ಬ್ರಹ್ಮಶಬ್ದವಿರುವುದರಿಂದ ಮಹಾವಿಷ್ಣುವೇ ಆಕಾಶಶಬ್ದದಿಂದ ಪ್ರತಿಪಾದ್ಯ-ನಾಗುತ್ತಾನೆ. ನಾಮರೂಪರಹಿತವಾದ ಯಾವ ಪದಾರ್ಥವಿದೆಯೋ, ಅದೇ ಬ್ರಹ್ಮ ಎಂದು ಹೇಳಿದ್ದರಿಂದ ಆಕಾಶಪದದಿಂದ ನಾಮರೂಪಾತ್ಮಕವಾದ ಭೌತಿಕವಾದ ಆಕಾಶವು ಪ್ರತಿಪಾದ್ಯವಾಗಲು ಸಾಧ್ಯವಿಲ್ಲ. 'ತದ್ ಬ್ರಹ್ಮ ತದಮೃತಂ ಸ ಆತ್ಮಾ' ಎಂದು ನಿರ್ದೇಶ ಮಾಡಿದ್ದರಿಂದಲೂ ಆಕಾಶಶಬ್ದದಿಂದ ಭೂತಾಕಾಶವನ್ನು ಸ್ವೀಕರಿಸಲಾಗದು. 'ವೈ ನಾಮಾ' ಎಂಬುದರಿಂದ ಸಾಕಲ್ಯೇನ ಅಪ್ರಸಿದ್ಧನಾದ್ದರಿಂದ ಭಗವಂತನು ಅನಾಮನೆಂದು ಪಾಂಚಭೌತಿಕ-ರೂಪವಿಲ್ಲದ ಕಾರಣ ಅರೂಪನೆಂದು, ವಿಷ್ಣುವನ್ನೇ ಕರೆಯಲಾಗಿದೆ. 'ಅಗೋತ್ರಮವರ್ಣಮ-ಚಕ್ಷುಃಶ್ರೋತ್ರಮ್' 'ಯತೋ ವಾಚೋ ನಿವರ್ತಂತೇ' ಇತ್ಯಾದಿ ಶ್ರುತಿಗಳಿಂದ ಪ್ರಾಕೃತದೇಹವಿಲ್ಲದವನು ಎಲ್ಲಾ ಶಬ್ದಗಳಿಂದಲೂ ಅತೀತನಾದವನು ಭಗವಂತನೇ ಆಗುತ್ತಾನೆ. ಆದ್ದರಿಂದ ಪರಮಾತ್ಮನೇ ಆಕಾಶಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಸಿದ್ಧವಾಗುತ್ತದೆ.

।। ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಆಕಾಶಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ।।

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಈ ಪಾದದಲ್ಲಿರುವ ಸಕಲಶಬ್ದಗಳ ಸಮನ್ವಯದಲ್ಲಿ ತಿಳಿಯಬೇಕಾದ ಪ್ರಮೇಯ

तत्वप्रदीपः – ''अकाशस्तल्लिङ्गात्'' इत्यत्र विष्णोर्यौगिकाकाशत्व-प्रसाधनाद्यद्यपि न विष्णुर्विहातुं शक्यते । तथाऽप्यत्र वैनामेति प्रसिद्ध्यतिशय-द्योतकनिपातद्वययोगेन रूढेर्बलवत्त्वात् प्रसिद्धाकाशोऽप्यङ्गीकर्तव्यः । आकाशशब्दस्योभयत्र प्रसिद्धेरिति पूर्वः पक्षः । अयं चास्मिन् पादे प्रत्यधिकरणमनुगमयितव्यो न्यायः ।

'ಆಕಾಶಸ್ತಲ್ಲಿಂಗಾತ್' ಎಂಬ ಪ್ರಥಮಪಾದದ ಸೂತ್ರದಲ್ಲಿ ಆಕಾಶ ಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡಲಾಯಿತು. ಆಕಾಶ' ಎಂಬ ಶಬ್ದಕ್ಕೆ ಚೆನ್ನಾಗಿ ಪ್ರಕಾಶಿಸುತ್ತಾನೆ ಎಂಬುದನ್ನು ಪ್ರವೃತ್ತಿನಿಮಿತ್ತವನ್ನಾಗಿ ವಿವಕ್ಷಿಸಿ, ಯೌಗಿಕವಾದ ಶಬ್ದವೆಂದು ಪರಿಗಣಿಸಿ ವಿಷ್ಣುವಿನಲ್ಲಿ ಸಮನ್ವಯ ಮಾಡಲಾಯಿತು. ಆದ್ದರಿಂದ ಈ ಅಧಿಕರಣದಲ್ಲಿ ಪ್ರಸಕ್ತವಾಗುತ್ತಿರುವ ಆಕಾಶಶಬ್ದವು ವಿಷ್ಣುವನ್ನು ಪ್ರತಿಪಾದನೆ ಮಾಡುತ್ತಿದೆ ಎಂದು ಹೇಳಲೇಬೇಕು. ಆದರೂ ಕೂಡ 'ಆಕಾಶೋ ವೈ ನಾಮ' ಎಂಬ ಛಾಂದೋಗ್ಯೋಪನಿಷತ್ತಿನಲ್ಲಿರುವ ಆಕಾಶ ಶಬ್ದದ ಮುಂದೆ 'ವೈ' ಹಾಗೂ 'ನಾಮ' ಎಂಬೆರಡು ಪದಗಳು ಲೋಕಪ್ರಸಿದ್ಧಿಯ ಅತಿಶಯವನ್ನು ಹೇಳುತ್ತಿವೆ. ಈ ಎರಡು ನಿಪಾತಗಳಿಂದ ಪ್ರಥಮಪಾದದಲ್ಲಿ ಸಮನ್ವಯ ಮಾಡಿದ ಯೋಗಾರ್ಥಕ್ಕಿಂತಲೂ ರೂಢ್ಯರ್ಥವೇ ಬಲಿಷ್ಠವೆಂದು ಒಪ್ಪಬೇಕು. ಆದ್ದರಿಂದ ಪ್ರಸಿದ್ಧವಾದ ಭೂತಾಕಾಶವೂ ಕೂಡ ಆಕಾಶಶಬ್ದ ಪ್ರತಿಪಾದ್ಯವೆಂದು ಅಂಗೀಕರಿಸಬೇಕು. ಹೀಗೆ ಆಕಾಶಶಬ್ದವು ಉಭಯತ್ರಪ್ರಸಿದ್ಧವಾಗಿದೆ ಎಂಬುದು ಈ ಅಧಿಕರಣದ ಪೂರ್ವಪಕ್ಷ. ಈ ನ್ಯಾಯವನ್ನು ಈ ಪಾದದಲ್ಲಿರುವ ಪ್ರತಿಯೊಂದು ಅಧಿಕರಣಗಳಲ್ಲಿಯೂ ಅನುಸರಿಸಬೇಕು.

ವಿವರಣೆ - ಉಭಯತ್ರಪ್ರಸಿದ್ಧಶಬ್ದ ಸಮನ್ವಯಕ್ಕಾಗಿ ಮೂರನೆಯ ಪಾದವು ಹೊರಟಿದೆ. ಉಭಯತ್ರಪ್ರಸಿದ್ಧ ಏಕೆ ? ಎಂಬುದನ್ನು ಹೀಗೆ ತಿಳಿಯಬೇಕು - ಪ್ರಥಮಪಾದದಲ್ಲಿ ಹಾಗೂ ದ್ವಿತೀಯಪಾದದಲ್ಲಿ ನಾಮಾತ್ಮಕವಾದ ಹಾಗೂ ಲಿಂಗಾತ್ಮಕವಾದ ಸಕಲಶಬ್ದಗಳ ಸಮನ್ವಯವು ಸಿದ್ಧವಾಗಿದೆ. ಆದ್ದರಿಂದ ಎಲ್ಲಾ ಲಿಂಗಗಳೂ ಹಾಗೂ ನಾಮಗಳು ವಿಷ್ಣುವಿನಲ್ಲಿ ಪ್ರಸಿದ್ಧವೆಂದು ತಿಳಿದಂತಾಯಿತು. ಆದರೆ ಲೋಕದಲ್ಲಿಯೂ ಕೂಡ ಆ ಶಬ್ದಗಳು ಪ್ರಸಿದ್ಧವಾಗಿವೆ ಎಂಬ ಆಧಿಕಾಶಂಕೆಯು ಪ್ರಾಪ್ತವಾದಾಗ ಮೊದಲೆರಡು ಪಾದಗಳಲ್ಲಿ ಸಮನ್ವಯ ಮಾಡಿದ ಶಬ್ದಗಳು ಉಭಯತ್ರಪ್ರಸಿದ್ಧವಾದವು. ಹೀಗೆ ಉಭಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯಕ್ಕಾಗಿ ಈ ಮೂರನೆಯ ಪಾದದಲ್ಲಿರುವ ಪ್ರತಿಯೊಂದು ಅಧಿಕರಣಗಳು ಹೊರಟಿವೆ. ಈ ಪ್ರಮೇಯವನ್ನು ಪಂಡಿತಾಚಾರ್ಯರು ಆಕಾಶಶಬ್ದದ ಸಮನ್ವಯದ ಸಂದರ್ಭದಲ್ಲಿ ತಿಳಿಸಿರುತ್ತಾರೆ.

ಶ್ರುತಿ ಸೂತ್ರಗಳಿಗೆ ಎರಡು ಪಜಲಿನ ಅರ್ಥ

तत्वप्रदीपः – आकाशोऽर्थान्तरत्वादिव्यपदेशात् ।। ते यदन्तरा ते नामरूपे अन्तरा, यन्नाम च रूपं च न भवतीति यावत्, यद्वा नामि च रूपि च न भवति तद्ब्रह्मेति नामरूपाभ्यामर्थान्तरत्वतद्रहितत्व ब्रह्मत्वव्यपदेशादाकाशो हरिरेव । अर्थान्तरत्वनामान्तरत्वादिव्यपदेशादिति वा।

'ತೇ ಯದಂತರಾ' ಎಂಬ ಶ್ರುತಿಗೆ ಎರಡು ಅರ್ಥ. ೧. ಭಗವಂತನು ನಾಮ ಹಾಗೂ ರೂಪಗಳ ಸ್ವರೂಪವನ್ನು ತಾಳುವುದಿಲ್ಲ. ೨. ಭಗವಂತನು ನಾಮ ಹಾಗೂ ರೂಪಗಳುಳ್ಳವನು ಅಲ್ಲ. ಇವನೇ ಬ್ರಹ್ಮನಾಗಿರುವನು ಎಂದು ಶ್ರುತ್ಯರ್ಥ.

'ಅರ್ಥಾಂತರತ್ವಾದಿ' ಎಂಬ ಸೂತ್ರದಲ್ಲಿರುವ ಪದಕ್ಕೆ ಎರಡು ಅರ್ಥ - ೧. ನಾಮ ಹಾಗೂ ರೂಪಗಳಿಂದ ಭಿನ್ನನಾಗಿರುವಿಕೆ. ಹಾಗೂ ನಾಮ ಹಾಗೂ ರೂಪಗಳ ಇಲ್ಲದಿರುವಿಕೆ. ಮತ್ತು ಬ್ರಹ್ಮತ್ವ ಇವುಗಳ ವ್ಯಪದೇಶವಿರುವುದರಿಂದ ಆಕಾಶ ಎಂದರೆ ಶ್ರೀಹರಿಯೇ ಆಗುತ್ತಾನೆ.

೨. ನಾಮ ಹಾಗೂ ರೂಪಗಳ ಭೇದ. ನಾಮಾಂತರತ್ವಾದಿವ್ಯಪದೇಶ ಇವುಗಳಿರುವುದರಿಂದ ಶ್ರೀಹರಿಯೇ ಆಕಾಶನಾಗಿದ್ದಾನೆ.

'ಅಂತರ' ಎಂಬ ಶಬ್ದಕ್ಕೆ 'ನ ಭವತಿ' ಎಂಬುದು ಮೊದಲನೆಯ ವ್ಯಾಖ್ಯಾನ. 'ನಾಸ್ತಿ' ಎಂಬುದು ಎರಡನೆಯ ವ್ಯಾಖ್ಯಾನ

ವಿಶೇಷವಿಚಾರ-

ಆಕಾಶೋ ವೈ ನಾಮ ನಾಮರೂಪಯೋರ್ನಿರ್ವಹಿತಾ । ತೇ ಯದಂತರಾ ತದ್ಬ್ರಹ್ಮ । ತದಮೃತಮ್ । ಸ ಆತ್ಮಾ । ಪ್ರಜಾಪತೇಃ ಸಭಾಂ ವೇಶ್ಮ ಪ್ರಪದ್ಯೇ । ಯಶೋಽಹಂ ಭವಾನಿ । ಬ್ರಾಹ್ಮಣಾನಾಂ ಯಶೋ ರಾಜ್ಞಾಂ ಯಶೋ ದಿಶಾಂ ಯಶೋಽಹಮನು ಪ್ರಾಪತ್ಸಿ । ಸ ಹಾಹಂ ಯಶಸಾಂ ಯಶಃ ಶ್ವೇತಮದತ್ಕಮದತ್ಕಂ ಶ್ವೇತಂ ಲಿಂದುಮಾಭಿಗಾಂ ಲಿಂದುಮಾಭಿಗಾಂ ॥

ಆಕಾಶನಾಮಕನಾದ ಹೃದಯಸ್ಥ ಪರಮಾತ್ಮನು ನಾಮರೂಪಗಳ ಸೃಷ್ಟಿಕರ್ತನೆಂಬುದು ಪ್ರಸಿದ್ಧ. ಆ ನಾಮರೂಪಗಳಿಂದ ರಹಿತವಾಗಿ ಯಾವುದುಂಟೋ ಅದು ಪರಬ್ರಹ್ಮ. ಅದು ನಿತ್ಯಮುಕ್ತ. ಅವನೇ ಸ್ವಾಮಿ. 'ನಾನು ಪರಮಾತ್ಮನ ಸಭಾಗೃಹಗಳನ್ನು ತಲುಪಬೇಕು. ಬ್ರಾಹ್ಮಣರ ಮಧ್ಯದಲ್ಲಿ ನಾನು ಯಶಸ್ವಿ ಎನಿಸಿಕೊಳ್ಳಬೇಕು. ಕ್ಷತ್ರಿಯರ ಹಾಗೂ ವೈಶ್ಯರ ಮಧ್ಯದಲ್ಲೂ ಯಶಸ್ವಿ ಎಂದಾಗಬೇಕು. ಯಶಸ್ವಿಗಳಿಗೆಲ್ಲಾ ಯಶಸ್ಸನ್ನು ಕೊಡುವ ಮತ್ತು ಉತ್ತಮ ಯಶೋರೂಪನಾದ ವಾಯುದೇವರಲ್ಲಿರುವ, ಸ್ವರೂಪ-ಸುಖವನ್ನನುಭವಿಸುತ್ತಿರುವ ಪರಮಾತ್ಮನ ಅನುಗ್ರಹದಿಂದ ನಾನು ಯಶಸ್ಸನ್ನು ಹೊಂದಿದ್ದೇನೆ. ಸ್ವರೂಪಸುಖವನ್ನು ಅನುಭವಿಸುತ್ತಿರುವ, ವಾಯುದೇವನಲ್ಲಿರುವ , ಆನಂದವನ್ನು ನೀಡುವ ಆ ಪರಮಾತ್ಮನನ್ನು ನಾನು ಸದಾ ಹೊಂದಿರಬೇಕು ಎಂಬ ಅಭಿಪ್ರಾಯದಿಂದ ಹೃದಯಸ್ಥನಾದ ಆ ಪರಮಾತ್ಮನನ್ನು ಉಪಾಸನೆ ಮಾಡುವೆನು'.

ಆಕಾಶೋಽತಿಪ್ರಕಾಶತ್ವಾತ್ ನಾಮರೂಪೇ ಋತೇ ಸ್ಥಿತಃ । ಬ್ರಹ್ಮಾಖ್ಯೋ ಭಗವಾನ್ ವಿಷ್ಣುಃ ತದ್ವೇಶ್ಮ ಪ್ರಾಪ್ನುಯಾಮಹಮ್ । ಯಶೋಹಂ ಸರ್ವವರ್ಣಾನಾಂ ಮತ್ತೇನ್ಯೇಷಾಂ ಯತೋಭವೇತ್ ಸೋಽಹಂ ಮಮ ಯಶೋದಾತೃ ಯಶಸಾಂ ಯಶ ಉತ್ತಮಮ್ । ವಿಷ್ಣ್ವಾಖ್ಯಂ ಪರಮಂ ಬ್ರಹ್ಮ ಶ್ವೇತಂ ಶ್ವಸನಗಂ ಯತಃ । ಅದತ್ಕಮದ್ಯಮಾನಂ ಕಂ ಸ್ವಾನಂದಾನುಭವಾತ್ಮಕಮ್ । ಲಿಂದು ತದ್ ರತಿದಂ ಯಸ್ಮಾತ್ ತದಹಂ ಪ್ರಾಪ್ನುಯಾಂ ಸದಾ ॥

ಚೆನ್ನಾಗಿ ಪ್ರಕಾಶಿಸುವ ಕಾರಣ, ಹೃದಯಕಮಲದಲ್ಲಿರುವ ಪರಮಾತ್ಮನ ರೂಪವು ಆಕಾಶ ಎಂಬ ಹೆಸರುಳ್ಳದ್ದಾಗಿದೆ. ಈ ಪರಮಾತ್ಮನು ಅಪ್ರಸಿದ್ಧನೂ ಅಪ್ರಾಕೃತನೂ ಆದ್ದರಿಂದ ನಾಮರೂಪರಹಿತನಾಗಿರುವನು. ಬ್ರಹ್ಮ ಎಂಬ ಹೆಸರುಳ್ಳವನೂ ಅವನೇ.

ಇಂತಹ ಪರಮಾತ್ಮನ ಆವಾಸಸ್ಥಾನವಾದ ವೈಕುಂಠವನ್ನು ನಾನು ಪಡೆಯುವೆನು. ಬ್ರಾಹ್ಮಣಾದಿ ಎಲ್ಲಾ ವರ್ಣಗಳ ಜನರ ಮಧ್ಯದಲ್ಲಿ ನಾನು ಅಧಿಕ ಕೀರ್ತಿಶಾಲಿಯಾಗುವೆನು. ಬೇರೆಯವರಿಗೆ ನನ್ನಿಂದ ಕೀರ್ತಿ ದೊರೆಯುವಂತಾಗಬೇಕು. ನನಗೇ ಕೀರ್ತಿಯನ್ನು ಯಾರು ಅನುಗ್ರಹಿಸುತ್ತಾನೋ ಅಂತಹ, ಯಶಸ್ಸುಗಳ ಮಧ್ಯದಲ್ಲಿ ಉತ್ತಮ ಯಶಃ ಸ್ವರೂಪನಾದ ವಿಷ್ಣು ಎಂಬ ಪರಬ್ರಹ್ಮನ ಅನುಗ್ರಹದಿಂದ ನಾನು ಯಶಸ್ಸನ್ನು ಹೊಂದುವೆನು. ಪರಬ್ರಹ್ಮನು ವಾಯುದೇವರಲ್ಲಿ ಇರುವುದರಿಂದ ಶ್ವೇತ ಎಂದೂ, 'ಕ' ಎಂದರೆ ಸ್ವರೂಪಾನಂದವನ್ನು ಅನುಭವಿಸುತ್ತಿರುವುದರಿಂದ 'ಅದತ್ಕ' ಎಂದೂ, ಆನಂದವನ್ನು ಅನುಗ್ರಹಿಸುವ ಕಾರಣ 'ಲಿಂದು' ಎಂದೂ ಪ್ರಸಿದ್ಧನಾಗಿರುವನು. ಅಂತಹ ಪರಬ್ರಹ್ಮನನ್ನು ನಾನು ಸದಾ ಹೊಂದುವೆನು ಎಂದರ್ಥ. (ಸಂಗ್ರಹ)

ಪಂಡಿತಾಚಾರ್ಯರು 'ತೇ ಯದಂತರಾತ್ ತದ್ಬ್ರಹ್ಮ' ಎಂಬುದಕ್ಕೆ ಎರಡು ರೀತಿಯಲ್ಲಿ ಸ್ವರಸವಾಗಿ ವ್ಯಾಖ್ಯಾನ ಮಾಡಿದ್ದಾರೆ. ನಾಮ ಹಾಗೂ ರೂಪಗಳ ಅನ್ಯೋನ್ಯಾಭಾವ ಶ್ರೀಹರಿಯಲ್ಲಿ ಇದೆ ಎಂಬುದು ಮೊದಲನೆಯ ವ್ಯಾಖ್ಯಾನ. ಘಟದಲ್ಲಿ ಪಟದಲ್ಲಿರುವ ರೂಪದ ಅನ್ಯೋನ್ಯಾಭಾವವಿದೆ ಎಂದು ಹೇಳಿದಂತೆ ಶ್ರೀಹರಿಯಲ್ಲಿ ನಾಮ ಹಾಗೂ ರೂಪಗಳ ಅನ್ಯೋನ್ಯಾಭಾವ ಇದೆ ಎಂದರೆ ಭೇದವಿದೆ ಎಂದು ಇದರ ಅಭಿಪ್ರಾಯ. ಭಗವಂತನು ನಾಮ ಹಾಗೂ ರೂಪಗಳುಳ್ಳವನಲ್ಲ ಎಂಬುದು ಎರಡನೆಯ ವ್ಯಾಖ್ಯಾನ. ಭಗವಂತನಲ್ಲಿ ನಾಮ ಹಾಗೂ ರೂಪಗಳ ಅತ್ಯಂತಾಭಾವವಿದೆ ಎಂಬುದು ಇದರ ಅಭಿಪ್ರಾಯ. ಆದ್ದರಿಂದ ಸೂತ್ರದಲ್ಲಿರುವ ಅರ್ಥಾಂತರತ್ವ ಎಂಬ ಪದಕ್ಕೆ ಅನ್ಯೋನ್ಯಾಭಾವ ಎಂಬರ್ಥವನ್ನು ವಿವಕ್ಷಿಸುವುದರ ಜೊತೆಗೆ 'ತತ್ ದ್ರಹಿತ್ವ' ಎಂಬ ಅತ್ಯಂತಾಭಾವವನ್ನೂ ಕೂಡ ವಿವಕ್ಷಿಸಬೇಕು.

ಪಂಡಿತಾಚಾರ್ಯರು ಅರ್ಥಾಂತರತ್ವಾದಿ ಎಂಬಲ್ಲಿರುವ ಆದಿಪದಕ್ಕೂ ಎರಡು ಸ್ವರಸವಾದ ವ್ಯಾಖ್ಯಾನಗಳನ್ನು ಮಾಡಿರುತ್ತಾರೆ. ಬ್ರಹ್ಮತ್ವವನ್ನು ವಿವಕ್ಷಿಸಬೆಕೆಂಬುದು ಮೊದಲನೆಯ ವ್ಯಾಖ್ಯಾನ. ನಾಮಾಂತರತ್ವವನ್ನು ವಿವಕ್ಷಿಸಬೇಕೆಂಬುದು ಎರಡನೆಯ ವ್ಯಾಖ್ಯಾನ. ಹೀಗೆ ಶ್ರುತಿ ಹಾಗೂ ಸೂತ್ರಗಳಿಗೆ ಪಂಡಿತಾಚಾರ್ಯರ ಪ್ರಕಾರ ಮಜಲಿನ ಎರಡು ಸ್ವರಸಾರ್ಥಗಳನ್ನು ಗಮನಿಸಬೇಕು.

'ಅವರ್ಣಮಚಕ್ಷುಃ' ಇತ್ಯಾದಿ ಆಥರ್ವಣಶ್ರುತಿಯ ಅರ್ಥ

तत्वप्रदीपः – ''अवर्णमचक्षुः श्रोत्रम्'' इत्याद्याथर्वणी श्रुतिः । अवर्णं न वर्णः, शुक्लादिवर्णरहितं च, न च वर्ण्यते नापि वर्णात्मकमिति । अनामा

सोऽप्रसिद्धत्वात् सर्वात्मना स्वात्मनोऽन्यस्य । अरूपो भूतवर्जनात् भौतिकदेहवर्जनात् ।।

।। इत्याकाशाधिकरणम् ।।

'अवर्णमचक्षुः' ಎಂಬುದು ಅಥರ್ವಣೋಪನಿಷತ್ತಿನ ವಾಕ್ಯ. ಇಲ್ಲಿರುವ 'ಅವರ್ಣ೦' ಎಂಬುದಕ್ಕೆ ನಾಕು ಅರ್ಥಗಳು. ೧. ಪ್ರಾಕೃತರೂಪವಿಲ್ಲದವನು. ೨. ಶುಕ್ಲಾದಿ ವರ್ಣಗಳಿಂದ ಭಿನ್ನನಾದವನು. ೩. ಶಬ್ದಗಳಿಂದ ವರ್ಣಿಸಲು ಅಶಕ್ಯನಾದವನು. ೪. ಶಬ್ದರೂಪವಾದ ವರ್ಣಾತ್ಮಕನಲ್ಲದವನು.

'ಅನಾಮಾ ಸೋऽಪ್ರಸಿದ್ಧತ್ವಾತ್' ಬ್ರಾಹ್ಮಪುರಾಣದ ಈ ಮಾತಿಗೆ ಸರ್ವಾತ್ಮನು ತನಗಿಂತ ಭಿನ್ನವಾದ ... ಲೋಕಪ್ರಸಿದ್ಧನಲ್ಲದ ಕಾರಣ ನಾಮವಾಚ್ಯನಾದರೂ ನಾಮರಹಿತನಾಗಿದ್ದಾನೆ. ಭೌತಿಕದೇಹರಹಿತನಾಗಿದ್ದರಿಂದ ಆಕಾರರಹಿತನಾಗಿದ್ದಾನೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ಆಕಾಶಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

'ಯದೇಷ ಆಕಾಶ ಆನಂದೋ ನ ಸ್ಯಾತ್' ಎಂಬ ಶ್ರುತಿಯ ಸಮನ್ವಯ

तत्वप्रकाशिका – ।। आकाशोऽर्थान्तरत्वादिव्यपदेशात् ।।

अत्र प्रयोगवशाद्भगने भगवति च साधारणस्याकानाम्नो हरौ समन्वय-प्रतिपादनादस्ति शास्त्रादिसङ्गतिः । श्रुत्यादिसङ्गतिं विषयादिकं च सूचयति – सर्वेति ।।

ಈ ಅಧಿಕರಣದಲ್ಲಿ 'ಯದೇಷ ಆಕಾಶ ಆನಂದೋ ನ ಸ್ಯಾತ್' ಆಕಾಶಶಬ್ದದ ಸಮನ್ವಯವನ್ನು ಮಾಡುತ್ತಿದ್ದಾರೆ. ಇಲ್ಲಿರುವ ಆಕಾಶಶಬ್ದವು ಲೋಕಪ್ರಸಿದ್ಧಿಯಿಂದ ಭೂತಾಕಾಶದಲ್ಲಿ ಪ್ರಥಮಪಾದದಲ್ಲಿ ಹೇಳಿದ ನ್ಯಾಯದಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ. ಹೀಗೆ ಉಭಯಸಾಧಾರಣವಾದ್ದರಿಂದ, 'ಆಕಾಶ' ಎಂಬ ನಾಮಾತ್ಮಕ ಶಬ್ದವನ್ನು ದಹರ ವಿಷ್ಣುವಿನಲ್ಲಿ ಸಮರ್ಥನೆ ಮಾಡುತ್ತಿದ್ದಾರೆ. ಆದ್ದರಿಂದ ಶಾಸ್ತ್ರಸಂಗತಿ-ಅಧ್ಯಾಯಸಂಗತಿ-ಪಾದಸಂಗತಿಗಳು ಇರುತ್ತವೆ. ಶ್ರುತಿಸಂಗತಿ ಮತ್ತು ಅಧಿಕರಣಸಂಗತಿ, ವಿಷಯ ಮೊದಲಾದವುಗಳನ್ನು 'ಸರ್ವ' ಇತ್ಯಾದಿ ಭಾಷ್ಯದಿಂದ ಸೂಚನೆ ಮಾಡುತ್ತಿದ್ದಾರೆ.

ಸರ್ವಾಧಾರತ್ವವು ವಿಷ್ಣುವಿನಲ್ಲಿ ಹೇಳಲಾಯಿತು

तत्वप्रकाशिका – 'द्युभ्वाद्यायतनं स्वशब्दात्' इत्यादौ सर्वाधारत्वं विष्णोरुक्तम् । तच्छन्दोगश्रुतादाकाशस्य प्रतीयते ।

'द्युभ्वाद्यायतनं स्वशब्दात्' ಎಂಬ ಸೂತ್ರದಲ್ಲಿ ವಿಷ್ಣುವಿಗೆ ಸರ್ವಾಧಾರತ್ವವನ್ನು ಹೇಳಿದ್ದಾರೆ. ಅದೇ ಸರ್ವಾಧಾರತ್ವವನ್ನು ಬೃಹದಾರಣ್ಯಕೋಪನಿಷತ್ತು ಆಕಾಶಕ್ಕೆ ಹೇಳಿದೆ.

ಆಕಾಶ ಶಬ್ದ ಸಮನ್ವಯಕ್ಕಾಗಿ ಈ ಅಧಿಕರಣ

तत्वप्रकाशिका – आकाशो ह वै नाम नामरूपयोर्निर्वहिता, ते यदन्तरा

तद्ब्रह्म तदमृतम्' इति । स च विष्णोरितरश्चेत्सर्वाधारत्वमन्यस्य प्रसज्येत इत्यवश्यं निर्णयः । स आकाशोऽत्र विषयः ।

'ಆಕಾಶೋ ಹ ವೈ ನಾಮ ನಾಮರೂಪಯೋರ್ನಿರ್ವಹಿತಾ ತೇ ಯದಂತರಾ ತದ್ ಬ್ರಹ್ಮ ತದಮೃತಮ್' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಆಕಾಶಶಬ್ದದಿಂದ ವಿಷ್ಣುವಿಗಿಂತ ಭಿನ್ನವಾದ ಪದಾರ್ಥವು ಪ್ರತಿಪಾದ್ಯವಾದರೆ, ಅದೇ ಪದಾರ್ಥವೇ ಸರ್ವಾಧಾರವೂ ಆಗುತ್ತದೆ. ಆದ್ದರಿಂದ ಅವಶ್ಯವಾಗಿ ಈ ಶಬ್ದವನ್ನು ನಿರ್ವಹಿಸಬೇಕು. ಈ ಆಕಾಶಶಬ್ದದ ಸಮನ್ವಯವೇ ಈ ಅಧಿಕರಣದ ವಿಷಯವಾಗಿದೆ.

ಆಕಾಶವೆಂದರೆ ಮಹಾವಿಷ್ಣುವೋ, ಭೂತಾಕಾಶವೋ?

तत्वप्रकाशिका – किं विष्णुः प्रसिद्धाकाशो वेति सन्देहः । उक्तसाधारण्यं सन्देहबीजम् इति भावः । सयुक्तिकं पूर्वपक्षयति – वै नामेति ।।

ಇಲ್ಲಿರುವ ಆಕಾಶಶಬ್ದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೋ, ಅಥವಾ ಭೂತಾಕಾಶವೋ? ಎಂದು ಸಂಶಯ. ಹಿಂದೆ ಹೇಳಲ್ಪಟ್ಟ ಉಭಯಸಾಧಾರಣ್ಯವೇ ಸಂಶಯಬೀಜವಾಗಿದೆ. ಯುಕ್ತಿಬದ್ಧವಾದ ಪೂರ್ವಪಕ್ಷವನ್ನು 'ವೈನಾಮ' ಇತ್ಯಾದಿ ಭಾಷ್ಯದಿಂದ ತೋರಿಸುತ್ತಿದ್ದಾರೆ.

ಆಕಾಶಶಬ್ದದ ರೂಢಿ ಭೂತಾಕಾಶದಲ್ಲಿ

तत्वप्रकाशिका – अयमाकाशः प्रसिद्ध एव भवेत् । आकाशशब्दस्य तत्र रुढत्वात् ।

ಶ್ರುತಿಯಲ್ಲಿರುವ ಆಕಾಶಶಬ್ದವು ಪ್ರಸಿದ್ಧವಾದ ಭೂತಾಕಾಶವನ್ನೇ ಪ್ರತಿಪಾದನೆ ಮಾಡುತ್ತದೆ. ಏಕೆಂದರೆ, ಭೂತಾಕಾಶದಲ್ಲಿ ಆಕಾಶಶಬ್ದವು ರೂಢವಾಗಿದೆ.

ಯೋಗಕ್ಕಿಂತಲೂ ರೂಢಿಯೇ ಪ್ರಬಲ

तत्वप्रकाशिका – नच वाच्यमाकाशब्दस्य विष्णावपि वृत्तेः सावकाश इति । यौगिकत्वात् । योगस्यरूढेर्दौर्बल्यात् ।

ಆಕಾಶಶಬ್ದವು ವಿಷ್ಣುವಿನಲ್ಲೂ ಇರುವುದರಿಂದ ಸಾವಕಾಶವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ವಿಷ್ಣುವಿನಲ್ಲಿರುವ ಆಕಾಶಶಬ್ದವು ಯೌಗಿಕವಾಗಿದೆ. ಭೂತಾಕಾಶದಲ್ಲಿರುವ ಆಕಾಶಶಬ್ದವು ರೂಢವಾಗಿದೆ. ಯೋಗಕ್ಕಿಂತಲೂ ರೂಢಿಯೇ ಪ್ರಬಲವಾದ್ದರಿಂದ ಭೂತಾಕಾಶವೇ ಆಕಾಶಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯವಾಗುತ್ತದೆ.

ವಿಷ್ಣು ಎನ್ನಲು ನಿಪಾತದ್ವಯಗಳ ವಿರೋಧ

तत्वप्रकाशिका – सर्वाधारत्वलिङ्गेन योगोऽप्याश्रीयतेऽति चेन्न । प्रसिद्धाकाशपरित्यागेनात्र विष्ण्वङ्गीकारे वै नामेत्युक्तनिपातद्वयविरोधात् ।

'ಸರ್ವಾಧಾರತ್ವ' ಎಂಬ ಲಿಂಗದಿಂದ ಯೋಗಾರ್ಥವನ್ನೂ ಸಹ ಆಶ್ರಯಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಪ್ರಸಿದ್ಧವಾದ ಭೂತಾಕಾಶ ಎಂಬರ್ಥವನ್ನು ಬಿಟ್ಟು ವಿಷ್ಣು ಎಂಬರ್ಥವನ್ನು ಅಂಗೀಕಾರ ಮಾಡಿದರೆ 'ವೈ ನಾಮಾ' ಎಂಬಲ್ಲಿ ಹೇಳಲ್ಪಟ್ಟ ಎರಡು ನಿಪಾತಗಳ ವಿರೋಧ ಬರುತ್ತದೆ.

ನಿಪಾತಗಳು ಪ್ರಸಿದ್ಧಾರ್ಥ ದ್ಯೋತಕ

तत्वप्रकाशिका – तस्योक्तार्थप्रसिद्धिद्योतकत्वात् । नहि विष्णुस्तन्निर्वहितृत्वं वा प्रसिद्धम् । अतः प्रसिद्धाकाश एवायमिति तस्य सर्वाधारत्वमिति भावः ।

ಏಕೆಂದರೆ, ಈ ನಿಪಾತಗಳು ಭೂತಾಕಾಶ ಎಂಬ ಪ್ರಸಿದ್ಧಾರ್ಥಕ್ಕೆ ದ್ಯೋತಕವಾಗಿವೆ. ಆಕಾಶಶಬ್ದಕ್ಕೆ ವಿಷ್ಣು ಎಂಬರ್ಥವಾಗಲಿ, ಅಥವಾ ಅವನ ಸರ್ವಾಧಾರತ್ವ ಎಂಬ ಅರ್ಥವಾಗಲಿ ಪ್ರಸಿದ್ಧವಲ್ಲವಷ್ಟೆ. ಆದ್ದರಿಂದ ಪ್ರಸಿದ್ಧವಾದ ಭೂತಾಕಾಶವನ್ನೇ ಇಲ್ಲಿ ಸ್ವೀಕರಿಸಬೇಕು. ಸರ್ವಾಧಾರತ್ವವೂ ಸಹ ಭೂತಾಕಾಶದ ಧರ್ಮವೇ ಆಗಿದೆ ಎಂದು ಹೇಳಬೇಕು. ಇಷ್ಟು ಪೂರ್ವಪಕ್ಷದ ಅಭಿಪ್ರಾಯ.

ಮಹಾವಿಷ್ಣುವೇ ಆಕಾಶನೆಂದು ಸಿದ್ಧಾಂತ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। अयमकाशो हरिरेव । अस्याकाशस्य 'ते यदन्तरा' इति नामरूपराहित्याख्य-

विलक्षणार्थत्वव्यपदेशात्, 'तद् ब्रह्म' इति ब्रह्मत्वव्यपदेशाच्चेत्यर्थः । अर्थान्तरत्वमिति रूपराहित्यमादिपदेनानामत्वमिति वा, ते = नामरूपे अन्तरा = विना, वर्तते इत्यर्थः ।

ಸಿದ್ಧಾಂತಸ್ಥಾಪಕವಾದ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅತ' ಇತ್ಯಾದಿಯಾಗಿ. ಶ್ರುತಿಯಲ್ಲಿ ಆಕಾಶಶಬ್ದಪ್ರತಿಪಾದ್ಯನು ಶ್ರೀಹರಿಯೇ ಆಗಿದ್ದಾನೆ. ಏಕೆಂದರೆ, ಈ ಆಕಾಶಕ್ಕೆ 'ತೇ ಯದಂತರಾ' ಎಂಬುದಾಗಿ ನಾಮರೂಪಗಳ ರಾಹಿತ್ಯವೆಂಬ ವಿಲಕ್ಷಣವಾದ ಅರ್ಥವನ್ನು ಹೇಳಿದ್ದರಿಂದ. ಮತ್ತು 'ತದ್ ಬ್ರಹ್ಮ' ಎಂದು ಬ್ರಹ್ಮತ್ವವನ್ನು ಹೇಳಿದ್ದರಿಂದಲೂ ಮಹಾವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

'ಅರ್ಥಾಂತರತ್ವ' ಎಂಬ ಶಬ್ದದಿಂದ ರೂಪರಾಹಿತ್ಯವೆಂಬರ್ಥವನ್ನಾಗಲಿ, ಆದಿಪದದಿಂದ ನಾಮರಾಹಿತ್ಯವೆಂಬ ಅರ್ಥವನ್ನಾಗಲಿ ಸ್ವೀಕರಿಸಬಹುದು. ಇಂಥ ನಾಮರೂಪಗಳಿಲ್ಲದೆ ಭಗವಂತನು ಮಾತ್ರ ಇರಲು ಸಾಧ್ಯ.

ನಾಮರೂಪೇ ಎಂಬ ಕ್ರಮದ ಉಲ್ಲಂಘನೆ

तत्वप्रकाशिका – अरूपत्वादिलिङ्गेन कुतो विष्णुत्वनिश्चयः? इत्यत आह – अवर्णमिति ।। रूपस्य वाच्यान्तर्भावेन प्राधान्यात् क्रमोल्लङ्घनम् ।

ಅರೂಪತ್ವ ಮೊದಲಾದ ಲಿಂಗಗಳಿಂದ ವಿಷ್ಣುವೇ ಇಲ್ಲಿ ಆಕಾಶಶಬ್ದಪ್ರತಿಪಾದ್ಯನೆಂದು ಹೇಗೆ ನಿಶ್ಚಯಿಸುತ್ತೀರಿ? ಎಂಬ ಪ್ರಶ್ನೆಗೆ 'ಅವರ್ಣಮ್' ಎಂಬುದರಿಂದ ಉತ್ತರಿಸಿದ್ದಾರೆ. ರೂಪವು ವಾಚ್ಯದಲ್ಲೇ ಅಂತರ್ಭೂತವಾದ್ದರಿಂದ ಪ್ರಧಾನವಾಗಿದೆ. ಆದ್ದರಿಂದ 'ನಾಮರೂಪೇ' ಎಂದು ಕ್ರಮವನ್ನು ಉಲ್ಲಂಘನೆ ಮಾಡಿದ್ದಾರೆ.

ನಾಮರೂಪರಾಹಿತ್ಯವು ಶ್ರೀಹರಿಯಲ್ಲಿ ಹೇಗೆ ?

तत्वप्रकाशिका – रूपस्य वाच्यान्तर्भावेन प्राधान्यात् क्रमोल्लङ्घनम् । ननु हरेः कथमनामरूपत्वम् ? उक्तविरोधादित्यत आह – अनामेति ।।

ರೂಪವು ವಾಚ್ಯವರ್ಗದಲ್ಲಿ ಸೇರುವುದರಿಂದ ಅದು ನಾಮಕ್ಕಿಂತ ಹೆಚ್ಚು ಪ್ರಧಾನ. ಈ ಪ್ರಾಧಾನ್ಯವನ್ನು ವಿವಕ್ಷಿಸಿ ಭಾಷ್ಯದಲ್ಲಿ ಕ್ರಮವನ್ನು ಉಲ್ಲಂಘನೆ ಮಾಡಿರುತ್ತಾರೆ. ಶ್ರೀಹರಿಗೆ ನಾಮರೂಪರಾಹಿತ್ಯವು ಹೇಗೆ ಕೂಡುತ್ತದೆ? ಏಕೆಂದರೆ, ಹಿಂದೆ ಈಕ್ಷತ್ಯಧಿಕರಣದಲ್ಲಿ ನಾಮ ಹಾಗೂ ರೂಪಗಳು ಪರಮಾತ್ಮನಿಗೆ ಇರುವುದರಿಂದ ಅವಾಚ್ಯತ್ವವಿಲ್ಲವೆಂದು ಸಮರ್ಥಿಸಿದ್ದಾರಲ್ಲವೇ? ಎಂಬ ಪ್ರಶ್ನೆಗೆ 'ಅನಾಮಾ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ನಿಪಾತದ್ವಯಗಳ ವಿರೋಧವಿಲ್ಲ

तत्वप्रकाशिका – नच विष्णुपक्षे निपातद्वयविरोधः । भगवतो नामादि-निर्वहितृत्वस्यालोकप्रसिद्धत्वेऽपि 'एको दाधार भुवनानि विश्वा' इत्यादि-वेदप्रसिद्धत्वेन तदर्थत्वेनोपपत्तेः ।

ವಿಷ್ಣುವೇ ಆಕಾಶಶಬ್ದದಿಂದ ಪ್ರತಿಪಾದ್ಯನೆಂಬ ಪಕ್ಷದಲ್ಲಿ 'ವೈ ನಾಮಾ' ಎಂಬ ಎರಡು ನಿಪಾತಗಳ ವಿರೋಧ ಬರುವುದಿಲ್ಲ. ಏಕೆಂದರೆ, ನಾಮ ಹಾಗೂ ರೂಪಾತ್ಮಕವಾದ ಪ್ರಪಂಚಕ್ಕೆ ಆಶ್ರಯನಾಗಿದ್ದಾನೆಂಬುದು ಲೋಕಪ್ರಸಿದ್ಧವಾಗದಿದ್ದರೂ 'ಏಕೋ ದಾಧಾರ ಭುವನಾನಿ ವಿಶ್ವಾ' ಇತ್ಯಾದಿ ಶ್ರುತಿಗಳಲ್ಲಿ ಪ್ರಸಿದ್ಧವಾಗಿದೆ. ಹೀಗೆ ವೈದಿಕಪ್ರಸಿದ್ಧಿಯಿರುವುದರಿಂದ ನಿಪಾತಗಳು ಉಪಪನ್ನವಾಗುತ್ತವೆ.

ಸರ್ವಾಧಾರತ್ವಧರ್ಮ ಮಹಾವಿಷ್ಣುವಿನಲ್ಲಿ ಮಾತ್ರ

तत्वप्रकाशिका – अन्यथा अनामरूपत्वविरोधात् । अव(आ)काशस्यापि नाम(रूप)वत्त्वात् । अतोऽयमाकाशो विष्णुरेवेति तस्यैव सर्वाधारत्वमिति स्थितम् ।।

।। इति श्रीमज्जयतीर्थभिक्षुविरचितायां तत्वप्रकाशिकायाम् आकाशाधिकरणम् ।।

ಇಲ್ಲದಿದ್ದರೆ, 'ತೇ ಯದಂತರಾ' ಎಂಬ ವಾಕ್ಯದಲ್ಲಿ ಅನಾಮರೂಪತ್ವದ ವಿರೋಧ ಬರುತ್ತದೆ. ಏಕೆಂದರೆ, ಭೂತಾಕಾಶವು ನಾಮ ಹಾಗೂ ರೂಪಗಳಿಂದ ಯುಕ್ತವೇ ಆಗಿದೆ. ಹಾಗಾಗಿ, ಛಾಂದೋಗ್ಯದಲ್ಲಿರುವ ಆಕಾಶಶಬ್ದದಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ. 'ಸರ್ವಾಧಾರತ್ವ' ಎಂಬ ಧರ್ಮವೂ ಸಹ ಅವನಲ್ಲೇ ಯುಕ್ತವಾಗುತ್ತದೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ಆಕಾಶಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ
ಭಾವದೀಪ

ನ್ಯಾಯವಿವರಣದಲ್ಲೇಕೆ ಉಭಯಸಾಧಾರಣ್ಯ ಹೇಳಿಲ್ಲ

भावदीपः –

॥ आकाशोऽर्थान्तरत्वादिव्यपदेशात् ॥

न्यायविवरणेऽनुक्तेर्भाष्यपर्यालोचनया लब्धं साधारण्यबीजमाह – **प्रयोगेति** ॥ 'आकाशस्तल्लिङ्गाद्' इत्याकाशशब्दस्य विष्णौ प्रयोगस्य दर्शितत्वाद् गगने च प्रयोगस्य प्रसिद्धत्वादित्यर्थः ।

'ಆಕಾಶೋऽರ್ಥಾಂತರತ್ವಾದಿವ್ಯಪದೇಶಾತ್' ಎಂಬ ಸೂತ್ರದಿಂದ ಆಕಾಶಾಧಿಕರಣವು ಪ್ರಾರಂಭವಾಗಿದೆ. ನ್ಯಾಯವಿವರಣದಲ್ಲಿ ಉಭಯಸಾಧಾರಣ್ಯವನ್ನು ಆಕಾಶಶಬ್ದಕ್ಕೆ ತೋರಿಸಿಲ್ಲ. ಆದ್ದರಿಂದ, ಭಾಷ್ಯದಿಂದಲೇ ಉಭಯಸಾಧಾರಣ್ಯವು ಅರ್ಥಾತ್ ತಿಳಿಯುತ್ತಿದೆ ಎಂದು ಸಾಧಾರಣ್ಯಕ್ಕೆ

ಕಾರಣವನ್ನು 'ಪ್ರಯೋಗವಶಾತ್' ಎಂಬುದರಿಂದ ಹೇಳಿದ್ದಾರೆ. 'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಲ್ಲಿ ಆಕಾಶಶಬ್ದದ ಪ್ರಯೋಗವನ್ನು ವಿಷ್ಣುವಿನಲ್ಲಿ ತೋರಿಸಿದ್ದಾರೆ. ಲೋಕದಲ್ಲಿ ಆಕಾಶಶಬ್ದದ ಪ್ರಯೋಗವು ಅವ್ಯಾಕೃತಾಕಾಶದಲ್ಲೇ ಇರುತ್ತದೆ.

ನಿಪಾತಗಳಿಂದ ತಿಳಿಯುವ ಪ್ರಸಿದ್ಧಿಯು ವ್ಯಾವೃತ್ತಿ ಸೂಚಕ

भावदीपः – यद्वाऽत्र प्रयुक्तवैनामेति निपातद्योतितप्रसिद्धे-र्व्यावर्त्यत्वेनाप्रसिद्ध ब्रह्मण्याकाशशब्दप्रयोगस्य पूर्वपक्षिणाऽङ्गीकृतत्वा-दित्यर्थः । सङ्गत्यर्थतया भाष्यं व्याचष्टे – द्युभ्वादीति ।।

ಅಥವಾ, ಶ್ರುತಿಯಲ್ಲಿ 'ವೈ ನಾಮ' ಎಂಬ ನಿಪಾತಗಳನ್ನು ಪ್ರಯೋಗಿಸಿದ್ದರಿಂದ ಈ ನಿಪಾತಗಳಿಂದ ತಿಳಿಯುವ ಪ್ರಸಿದ್ಧಿಯನ್ನು ವ್ಯಾವೃತ್ತಿ ಮಾಡಬೇಕು. ಈ ನಿಪಾತಗಳಿಂದ ತಿಳಿಯುವ ಪ್ರಸಿದ್ಧಿಯು ಅಪ್ರಸಿದ್ಧವಾದ ಆಕಾಶಶಬ್ದದ ಪ್ರಯೋಗವನ್ನು ಬ್ರಹ್ಮನಲ್ಲಿ ವ್ಯಾವೃತ್ತಿ ಮಾಡುತ್ತದೆಂದು ಪೂರ್ವಪಕ್ಷಿಯು ಅಂಗೀಕರಿಸಿದ್ದಾನೆಂದರ್ಥ. ಸಂಗತಿಪರವಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡಲು ಹೊರಟಿದ್ದಾರೆ, 'ದ್ಯುಭ್ವಾದಿ' ಇತ್ಯಾದಿಯಾಗಿ.

'ನಾಮ' ಎಂದರೆ ಶಬ್ದ ಪ್ರಪಂಚ

भावदीपः – 'अक्षरमम्बरान्तधृतेः' 'दहर उत्तरेभ्यः' इत्यादावित्यादिपदार्थः। तच्चेत्यादि व्याचष्टे – तच्छन्दोगेति ।। अष्टमान्त । यद्यपि नामेति शब्दप्रपञ्चोक्तावपि रूपपदेनात्र 'अवर्णम्' इत्याद्युक्त्या वर्णविशेषोक्तेर्न सर्वाधारत्वलाभः । तथाप्यस्य वाच्यरूपार्थप्रपञ्चमात्रोपलक्षणमिति भावः ।

'ಅಕ್ಷರಮಂಬರಾಂತಧೃತೇಃ' 'ದಹರ ಉತ್ತರೇಭ್ಯಃ' ಇತ್ಯಾದಿಗಳನ್ನು 'ದ್ಯುಭ್ವಾದಿ' ಎಂಬಲ್ಲಿರುವ ಆದಿಪದದಿಂದ ವಿವಕ್ಷಿಸಬೇಕು. 'ತಚ್ಚ' ಇತ್ಯಾದಿ ಭಾಷ್ಯವನ್ನು 'ತಚ್ಛಂದೋಗಾ ವಾ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. 'ತಚ್ಛಂದೋಗ' ಎಂದರೆ ಅಷ್ಟಮಾಧ್ಯಾಯದ ಕೊನೆಯಲ್ಲಿ ಎಂದರ್ಥ.

ವಾಸ್ತವಿಕವಾಗಿ ಶ್ರುತಿಯಲ್ಲಿ 'ನಾಮ' ಎಂಬ ಪದದಿಂದ ಶಬ್ದಪ್ರಪಂಚವನ್ನೂ ಹೇಳಿದ್ದಾರೆ. ಆದರೆ ರೂಪಪದದಿಂದ ಅರ್ಥಪ್ರಪಂಚವನ್ನು ವಿವಕ್ಷಿಸಲಾಗದು. ಏಕೆಂದರೆ, 'ಅವರ್ಣಂ' ಇತ್ಯಾದಿಯಾಗಿ

ಹೇಳಿದ್ದರಿಂದ ವರ್ಣವಿಶೇಷವನ್ನಷ್ಟೇ ವಿವಕ್ಷಿಸಬೇಕು. ಇದರಿಂದ ಸರ್ವಾಧಾರತ್ವವನ್ನು ತಿಳಿಸಿದಂತಾಗುವುದಿಲ್ಲ. ಆದರೂ ಸಹ, ರೂಪಪದದಿಂದ ಯಾವ ರೂಪಪ್ರಪಂಚವು ತಿಳಿಯುತ್ತಿದೆಯೋ, ಇದರಿಂದ ಉಪಲಕ್ಷಣಯಾ ಸಕಲ ಅರ್ಥಪ್ರಪಂಚವನ್ನು ವಿವಕ್ಷಿಸಬೇಕು.

'ರೂಪ' ಎಂದರೆ ಅರ್ಥ ಪ್ರಪಂಚ

भावदीपः – एतेन इत्यत्रेत्यद् व्याख्यातम् । रूपेत्यर्थमात्रोपलक्षणम् । नामरूपयोः शब्दार्थप्रपञ्चयोः निर्वहिता निर्वोढा आश्रय इत्यर्थः । ते निर्वाह्यतया प्रकृते प्राकृतनामरूपे अन्तरा विना तद्रहितमिति यावत् । साकल्येन नामावाच्यं प्राकृतरूपरहितं च यद्वर्तत इति फलितार्थः ।

ಭಾಷ್ಯದಲ್ಲಿ 'ರೂಪ' ಎಂಬ ಪದವು ಅರ್ಥಮಾತ್ರಕ್ಕೆ ಉಪಲಕ್ಷಣವಾಗಿದೆ ಎಂದು 'ನಾಮರೂಪಯೋಃ' ಎಂದರೆ ಶಬ್ದ ಹಾಗೂ ಅರ್ಥಪ್ರಪಂಚಗಳಿಗೆ ನಿರ್ವಹಿತಾ = ಆಶ್ರಯವಾಗಿದೆ ಎಂಬರ್ಥವನ್ನು ವಿವಕ್ಷಿಸಬೇಕು. 'ತೇ' ಎಂದರೆ ನಿರ್ವಾಹ್ಯತಯಾ ಪ್ರಕೃತವಾದ ಪ್ರಾಕೃತ ನಾಮರೂಪಗಳನ್ನು ಬಿಟ್ಟು ಇರುವುದಿಲ್ಲ ಎಂದರ್ಥ. ಸಾಕಲ್ಯೇನ ಶಬ್ದಾವಾಚ್ಯವಾದ ಪ್ರಾಕೃತರೂಪರಹಿತವಾದ ಯಾವ ವಸ್ತುವಿದೆಯೋ, ಅಂತಹ ಬ್ರಹ್ಮ ಎಂಬರ್ಥವು ಫಲಿತಾರ್ಥವಾಯಿತು.

ಆಕಾಶ ಎಂದರೆ ಭೂತಾಕಾಶ

भावदीपः – वै नामेत्यादिभाष्यभावमाह – स चेति ।। वक्ष्यमाणदिशेति भावः। उक्तमित्यन्तस्य तात्पर्यम् – सर्वेति ।। इति सङ्गतिसम्भवादित्यर्थः। पूर्वपक्षादिपरत्वेनापि व्याख्यातुं पूर्वपक्षतद्युक्तिकथनपरांशमवतार्य-प्रसिद्धाकाशश्चाङ्गीकर्तव्य इति प्रतिज्ञातार्थमाह – सयुक्तिकमित्यादिना ।।

'वै नाम' ಇತ್ಯಾದಿ ಭಾಷ್ಯದ ಅಭಿಪ್ರಾಯವನ್ನು 'स च' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ. ಮುಂದೆ ಪೂರ್ವಪಕ್ಷದಲ್ಲಿ ಹೇಳುವಂತೆ ವಿಷ್ಣುವಿಗಿಂತ ಇತರವಾದದ್ದು ಆಕಾಶಶಬ್ದವಾಚ್ಯವಾದಲ್ಲಿ ಎಂದರ್ಥ. 'ಉಕ್ತಂ' ಎಂಬಲ್ಲಿಯ ತನಕ ಇರುವ ಭಾಷ್ಯದ ತಾತ್ಪರ್ಯವನ್ನು 'ಸರ್ವಾಧಾರತ್ವಂ' ಎಂಬುದರಿಂದ ತೋರಿಸುತ್ತಿದ್ದಾರೆ. 'ಇತಿ' ಎಂದರೆ ಹೀಗೆ ಸಂಗತಿಯು ಉಪಪನ್ನವಾಗುವುದರಿಂದ

ಎಂದರ್ಥ. ಪೂರ್ವಪಕ್ಷಪರವಾಗಿಯೂ ಕೂಡ ಭಾಷ್ಯವನ್ನು ವ್ಯಾಖ್ಯಾನ ಮಾಡಲು ಪೂರ್ವಪಕ್ಷ ಹಾಗೂ ಪೂರ್ವಪಕ್ಷಯುಕ್ತಿ ಕಥನಪರವಾಗಿ ಅವತಾರಿಕೆ ನೀಡಿ ಪ್ರಸಿದ್ಧವಾದ ಆಕಾಶವನ್ನೇ ಆಕಾಶಶಬ್ದವೆಂದು ಒಪ್ಪಬೇಕು ಎಂಬ ಪ್ರತಿಜ್ಞಾರ್ಥವನ್ನು 'ಸಯುಕ್ತಿಕಂ' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ.

ಆಕಾಶಶಬ್ದವು ವಿಷ್ಣುವಿನಲ್ಲಿ ಯೌಗಿಕ

भावदीपः – प्रसिद्धपदसूचितां युक्तिमाह – आकाशेति ।। पूर्वेण गतार्थत्वमाशङ्कते – नचेति ।। विष्णावपीति ।। 'आकाशस्तल्लिङ्गात्' इत्युक्तन्यायादिति भावः ।। यौगिकत्वादिति ।। 'यच्छब्दा योगवृत्तयः' इति सङ्क्षेपभाष्योक्तेः । अन्यथा ब्रह्मपदोक्तगुणपूर्त्यसिद्धेस्तदर्थत्वात् समन्वयस्येति भावः ।।

ಪ್ರಸಿದ್ಧಪದದಿಂದ ಸೂಚಿತವಾದ ಯುಕ್ತಿಯನ್ನು 'ಆಕಾಶ' ಎಂಬುದರಿಂದ ಹೇಳುತ್ತಿದ್ದಾರೆ. ಹಿಂದಿನ ಅಧಿಕರಣದಿಂದ ಗತಾರ್ಥತ್ವವನ್ನು 'ನಚ' ಎಂಬುದರಿಂದ ಆಶಂಕಿಸಿದ್ದಾರೆ. 'ವಿಷ್ಣಾವಪಿ' ಎಂದರೆ 'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ ವಿಷ್ಣುವಿನಲ್ಲಿಯೂ ಆಕಾಶಶಬ್ದವು ಬರುತ್ತದೆ ಎಂದರ್ಥ. 'ಯೌಗಿಕತ್ವಾತ್' ಎಂದರೆ 'ಯಚ್ಛಬ್ದಾಃ ಯೋಗವೃತ್ತಯಃ' ಎಂದು ಅಣುಭಾಷ್ಯದಲ್ಲಿ ಹೇಳಿದಂತೆ, ಆಕಾಶಶಬ್ದವು ವಿಷ್ಣುವಿನಲ್ಲಿ ಯೌಗಿಕವಾಗಿ ಬರುತ್ತದೆ ಎಂದರ್ಥ. ಹೀಗೊಪ್ಪದಿದ್ದರೆ, ಬ್ರಹ್ಮಪದದಿಂದ ಯೌಗಿಕಾರ್ಥವನ್ನು ಒಪ್ಪಿ, ಗುಣಪೂರ್ಣತ್ವವೆಂಬ ಅರ್ಥವನ್ನು ಒಪ್ಪದ್ದು ಕೂಡ ತಪ್ಪಾಗುತ್ತದೆ. ಗುಣಪೂರ್ಣತ್ವದ ಸಿದ್ಧಿಗಾಗಿ ಸಮನ್ವಯವನ್ನು ಮಾಡಲಾಗಿದೆಯಷ್ಟೆ.

भावदीपः – दौर्बल्यादिति ।। तथाच प्रबलरूढित्यागेन यौगिकग्रहणे निरवकाशानन्तत्वादिलिङ्गाद् 'आकाश इति होवाच' इत्यादौ यौगिकस्यापि विष्णोर्ग्रहणेऽपीह कारणाभावादिति भावः ।

ವಿಷ್ಣುವಿನಲ್ಲಿ ಹೇಳುವಂತಹ ಆಕಾಶಶಬ್ದದ ಯೌಗಿಕಾರ್ಥಕ್ಕಿಂತಲೂ ರೂಢಿಯೇ ಪ್ರಬಲವಾಗಿದೆ. ಆದ್ದರಿಂದ, ಪ್ರಬಲವಾದ ರೂಢಿಯನ್ನು ಬಿಟ್ಟು ಯೌಗಿಕವಾದ ವಿಷ್ಣುಪರತ್ವವನ್ನು ಒಪ್ಪಬಾರದು. ನಿರವಕಾಶವಾದ ಅನಂತತ್ವಾದಿ ಲಿಂಗಗಳ ಬಲದಿಂದ 'ಆಕಾಶ ಇತಿ ಹೋವಾಚ' ಎಂಬುದರಿಂದ

ಪ್ರತಿಪಾದ್ಯನಾದವನು ವಿಷ್ಣುವೇ ಆದರೂ ಕೂಡ, ಪ್ರಕೃತ, ಇಲ್ಲಿಯೂ ಹಾಗೆಯೇ ಯೌಗಿಕಾರ್ಥವನ್ನು ಸ್ವೀಕರಿಸಲು ಯಾವುದೇ ಕಾರಣಗಳಿರುವುದಿಲ್ಲ.

ನ್ಯಾಯವಿವರಣದ ಯೋಜನೆಯ ಜೊತೆ ಭಾಷ್ಯದ ವ್ಯಾಖ್ಯಾನ

भावदीपः – कारणमप्यत्राऽशङ्कते – सर्वेति ।। तथाच 'आकाशस्तल्लिङ्गात्' इत्यनेनैव गतार्थमिदमिति भावः । एतदुपमर्दकतयाऽधिकां शङ्कां वक्तुं वै नामेति प्रसिद्धिद्योतनिपातद्वयं रूढित्यागेनोक्तयौगिकार्थस्वीकारविरोधीति न्यायविवरणं योजयित्वा वै नामेति भाष्यं योजयति – प्रसिद्धेति ।।

ಯೌಗಿಕಾರ್ಥವನ್ನು ಸ್ವೀಕರಿಸಲು ಕಾರಣವನ್ನು ಆಶಂಕಿಸುತ್ತಿದ್ದಾರೆ, 'ಸರ್ವಾಧಾರತ್ವಲಿಂಗೇನ' ಎಂಬುದರಿಂದ. ಆದ್ದರಿಂದ, 'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಿಂದಲೇ ಈ ಅಧಿಕರಣದ ಪ್ರಮೇಯವು ಗತಾರ್ಥವಾಗಿದೆ ಎಂದು ಅಭಿಪ್ರಾಯ. ಅಧಿಕಾಶಂಕೆಯನ್ನು ತೋರಿಸುವುದಕ್ಕಾಗಿ 'ವೈ ನಾಮ' ಎಂಬೆರಡು ಪ್ರಸಿದ್ಧಿ ದ್ಯೋತಕವಾದ ನಿಪಾತಗಳು ರೂಢಾರ್ಥವನ್ನು ಬಿಟ್ಟು ಯೌಗಿಕಾರ್ಥದ ಸ್ವೀಕಾರಕ್ಕೆ ವಿರೋಧಿ-ಗಳಾಗಿವೆ. ಹೀಗೆ ನ್ಯಾಯವಿವರಣವನ್ನು ಯೋಜನೆ ಮಾಡಿ 'ವೈ ನಾಮ' ಎಂಬ ಭಾಷ್ಯವನ್ನು ಯೋಜನೆ ಮಾಡುತ್ತಿದ್ದಾರೆ 'ಪ್ರಸಿದ್ಧ' ಎಂಬುದರಿಂದ.

ಎರಡು ಬಗೆಯ ಅನ್ವಯಗಳು ವಿಷ್ಣುವಿನಲ್ಲಿ ಅಯುಕ್ತ

भावदीपः – प्रसिद्धाकाशश्चाङ्गीकर्तव्य इत्युक्तिलब्धमेतदापादकम् । तस्येत्यादि तु भाष्ययोजना । तद्धि निपातद्वयम् । य आकाशः प्रसिद्धः स नामरूपनिर्वहितेत्युद्देशेन वाऽन्वितं स्यात् । य आकाशः स नामरूपनिर्वहिता वै नाम तस्य नामरूपनिर्वोढृत्वं प्रसिद्धमिति विधेयेन वाऽन्वितं स्याद् द्वेधाऽपि न विष्णौ युक्तमित्याह – नहीति ।।

'ಪ್ರಸಿದ್ಧಾಕಾಶಶ್ಚ ಅಂಗೀಕರ್ತವ್ಯಃ' ಎಂಬುದು ಆಪಾದಕವಾಗಿದೆ. 'ತಸ್ಯ ಸರ್ವಾಧಾರತ್ವಂ' ಎಂಬುದನ್ನು ಭಾಷ್ಯದ ಜೊತೆಗೆ ಯೋಜನೆ ಮಾಡಿಕೊಳ್ಳಬೇಕು. 'ತದ್ಧಿ' ಎಂದರೆ ಎರಡು ನಿಪಾತಗಳು

ಎಂದರ್ಥ.ಯಾವ ಪ್ರಸಿದ್ಧವಾದ ಆಕಾಶವಿದೆಯೋ, ಅದು ನಾಮರೂಪನಿರ್ವಾಹಕವಾಗಿದೆ ಎಂದು ಉದ್ದೇಶದ ಜೊತೆಗೆ ಅನ್ವಯವನ್ನು ಹೊಂದುತ್ತದೆ. ಅಥವಾ, ಯಾವ ಆಕಾಶವಿದೆಯೋ, ಅದು ನಾಮರೂಪಗಳಿಗೆ ನಿರ್ವಾಹಕವಾಗಿದೆ. ಇದು ಪ್ರಸಿದ್ಧವಷ್ಟೆ ಎಂದೂ ಕೂಡ ಅನ್ವಯ ಮಾಡಬಹುದು. ಹೀಗೆ, ಎರಡು ಬಗೆಯ ಅನ್ವಯಗಳೂ ವಿಷ್ಣುವಿನಲ್ಲಿ ಯುಕ್ತವಾಗುವುದಿಲ್ಲ ಎಂದು 'ನಹಿ' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ.

ಪೂರ್ವಪಕ್ಷದ ಫಲ

भावदीपः – य आकाशो विष्णुः प्रसिद्ध इति वा य आकाशशब्दितो विष्णुस्स नामरूपयोर्निर्वहिता प्रसिद्ध इति वाऽर्थः स्यात् । नहि विष्णुर्वा तस्य निर्वोढृत्वं वा लोकतः प्रसिद्धम् । औपनिषदत्वात् तस्येति भावः । श्रौतपदानुकरणरूपत्वान्निर्वहितृत्वमित्युक्तम् । फलोक्त्योपसंहरति – अत इति ।।

'ನಹಿ' ಇತ್ಯಾದಿ ವಾಕ್ಯದ ಅಭಿಪ್ರಾಯ ಹೀಗಿದೆ. ವಿಷ್ಣು ಆಕಾಶಶಬ್ದಪ್ರತಿಪಾದ್ಯನೆಂಬುದಾಗಲಿ, ನಾಮರೂಪಗಳಿಗೆ ನಿರ್ವಾಹಕನಾಗಿದ್ದಾನೆಂಬುದಾಗಲಿ ಲೋಕದಿಂದ ಪ್ರಸಿದ್ಧವಾಗಿಲ್ಲ. ಏಕೆಂದರೆ, ಅವನು ಕೇವಲ ಉಪನಿಷತ್ತುಗಳಿಂದಷ್ಟೇ ತಿಳಿಯುವವನಾಗಿದ್ದಾನೆ ಎಂದು ಅಭಿಪ್ರಾಯ. ಶ್ರುತಿಯಲ್ಲಿರುವ ಪದವನ್ನು ಅನುಸರಿಸಲು 'ನಿರ್ವಹಿತೃತ್ವಂ' ಎಂದು ಹೇಳಿದ್ದಾರೆ. ಪೂರ್ವಪಕ್ಷದ ಫಲವನ್ನು ಹೇಳುತ್ತಾ ಉಪಸಂಹಾರ ಮಾಡಿದ್ದಾರೆ, 'ಅತಃ' ಎಂಬುದಾಗಿ.

ತದ್ಬ್ರಹ್ಮ ಎಂಬುದರ ಸಾರ್ಥಕ್ಯ

भावदीपः – वै नामेति प्रसिद्धोपदेशादित्यर्थः । उक्तमित्यन्तवाक्यस्य तात्पर्यम् – तस्येति ।। आकाङ्क्षाक्रमेण भाष्यं व्याचष्टे – अयमाकाश इति।। आदिपदार्थमाह – तद् ब्रह्मेति ।।

'ವೈ ನಾಮ' ಎಂಬ ಪ್ರಸಿದ್ಧೋಪದೇಶವಿರುವುದರಿಂದ ಎಂಬುದು 'ಅತಃ' ಎಂಬ ಪದದ ಅರ್ಥ. 'ಉಕ್ತಂ' ಎಂಬಲ್ಲಿಯ ತನಕ ಇರುವ ಭಾಷ್ಯದ ತಾತ್ಪರ್ಯವನ್ನು 'ತಚ್ಚ' ಎಂಬುದಾಗಿ ಹೇಳಿದ್ದಾರೆ.

ಆಕಾಂಕ್ಷಕ್ರಮದಿಂದ ಭಾಷ್ಯವನ್ನು ವ್ಯಾಖ್ಯಾನ ಮಾಡಿದ್ದಾರೆ, 'ಅಯಮಾಕಾಶಃ' ಇತ್ಯಾದಿಯಾಗಿ. ಆದಿಪದದ ಅರ್ಥವನ್ನೇ 'ತದ್ ಬ್ರಹ್ಮ' ಎಂದಿದ್ದಾರೆ.

ಸೂತ್ರದಲ್ಲಿರುವ ಲಿಂಗವು ಉಪಲಕ್ಷಣ

ಭಾವದೀಪಃ – ಪೂರ್ವಮರ್ಥಾನ್ತರತ್ವಪದೇನ ನಾಮರೂಪೋಭಯರಾಹಿತ್ಯಂ ವಿವಕ್ಷಿತ್ವಾ ಆದಿಪದೇನ ಬ್ರಹ್ಮತ್ವಂ ಗೃಹ್ಯತ ಇತಿ ಮತ್ವಾ ವ್ಯಾಖ್ಯಾತಮ್ । ಇದಾನೀಂ ಪ್ರಕಾರಾನ್ತರೇಣ ವ್ಯಾಚಷ್ಟೇ – **ಅರ್ಥಾನ್ತರತ್ವಮಿತಿ** ।। ಅಸ್ಮಿನ್ ಪಕ್ಷೇ ಭಾಷ್ಯೇ ತದ್ ಬ್ರಹ್ಮೇತ್ಯಂಶೋಕ್ತಿ ಸೌತ್ರಲಿಙ್ಗೋಕ್ತೇರುಪಲಕ್ಷಣತ್ವಾಭಿಪ್ರಾಯಾ । 'ಕಮ್ಪನಾದ್' ಇತ್ಯತ್ರ ತದವಿಹಾಯ ಲಿಙ್ಗಾನ್ತರಸ್ಯಾಪೀತ್ಯುಕ್ತ್ವಾ ಏತದನ್ಯತ್ರಾಪ್ಯನುಸನ್ಧೇಯಮಿತ್ಯುಕ್ತತ್ವಾದಿತಿ ಭಾವಃ ।।

ಸೂತ್ರದಲ್ಲಿರುವ ಅರ್ಥಾಂತರಪದಕ್ಕೆ ನಾಮರೂಪಉಭಯರಾಹಿತ್ಯ ಎಂಬ ಅರ್ಥವನ್ನು ವಿವಕ್ಷಿಸಿ, ಆದಿಪದದಿಂದ ಬ್ರಹ್ಮನೆಂಬರ್ಥವನ್ನು ವಿವಕ್ಷಿಸಿ ವ್ಯಾಖ್ಯಾನ ಮಾಡಲಾಯಿತು. ಈಗ ಮತ್ತೊಂದು ಪ್ರಕಾರದಲ್ಲಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅರ್ಥಾಂತರತ್ವಂ' ಇತ್ಯಾದಿಯಾಗಿ. ಈ ಪಕ್ಷದಲ್ಲಿ, 'ತದ್ ಬ್ರಹ್ಮ' ಎಂಬ ಅಂಶವು ಭಾಷ್ಯದಲ್ಲಿ, ಸೂತ್ರದಲ್ಲಿ ಹೇಳಲ್ಪಟ್ಟ ಲಿಂಗಶಬ್ದದಿಂದ ಉಪಲಕ್ಷಣಯಾ ವಿವಕ್ಷಿಸಲಾಗಿದೆ. ಏಕೆಂದರೆ, ಕಂಪನಾಧಿಕರಣದಲ್ಲಿ 'ತದವಿಹಾಯ ಲಿಂಗಾಂತರಸ್ಯಾಪಿ' ಎಂದು ಹೇಳಿ, 'ಏತದನ್ಯತ್ರಾಪ್ಯನುಸಂಧೇಯಂ' ಎಂದು ಹೇಳಿದ್ದರಿಂದ, ಇಲ್ಲಿಯೂ ಕೂಡ ಸೂತ್ರದಲ್ಲಿರುವ ಲಿಂಗವು ಉಪಲಕ್ಷಣವಾಗಿದೆ ಎಂದು ತಿಳಿಯಬೇಕು.

ಶ್ರುತಿಗೆ ಅನುಸಾರಿಯಾಗಿ ಸೂತ್ರವಿನ್ಯಾಸ

ಭಾವದೀಪಃ – ಇತ್ಯತ ಆಹೇತಿ ।। **ಅವರ್ಣಮಿತಿ** ।। ಶ್ರುತಿರದೃಶ್ಯತ್ವನಯೇ ಬ್ರಹ್ಮಪರೇತಿ ಸಿದ್ಧಮ್ । 'ಯತೋ ವಾಚೋ' ಇತಿ ತು ವಾಕ್ಯಮಾನನ್ದಮಯ ಇತಿ ಭಾವಃ । ನನ್ವಾದಿಪದೇನಾನಾಮತ್ವಂ ಗ್ರಾಹ್ಯಮಿತಿ ವ್ಯಾಖ್ಯಾನೇ ಸೂತ್ರಭಾಷ್ಯಯೋರನಾಮತ್ವಾದಿ-ವ್ಯಪದೇಶಾದಿತಿ ವಾಚ್ಯಮ್ । ತತ್ಕ್ರಮೇಣೈವ ಚ ವೈಷ್ಣವತಾ ವ್ಯುತ್ಪಾದ್ಯಾ । ನಾಮರೂಪಯೋರಿತಿ ತೇ ಇತಿ ಚ ಶ್ರೌತಕ್ರಮಾನುರೋಧಾತ್ ಶಬ್ದಲಾಘವಾಚ್ಚೇತ್ಯತ ಆಹ – **ರೂಪಸ್ಯೇತಿ** ।। ನಾಮ್ನೋ ವಾಚ್ಯಸಾಪೇಕ್ಷತ್ವಾದಪ್ರಾಧಾನ್ಯಮಿತಿ ಭಾವಃ ।।

'ಅವರ್ಣಂ' ಇತ್ಯಾದಿ ಶ್ರುತಿಯು ಬ್ರಹ್ಮಪರವಾಗಿದೆ ಎಂದು ಅದೃಶ್ಯತ್ವಾಧಿಕರಣದಲ್ಲೇ ಪ್ರತಿಪಾದಿಸಿದ್ದಾಗಿದೆ. 'ಯತೋ ವಾಚೋ ನಿವರ್ತಂತೇ' ಎಂಬ ಶ್ರುತಿಯಾದರೋ ವಿಷ್ಣುಪರವಾಗಿದೆ ಎಂದು ಆನಂದಮಯಾಧಿಕರಣದಲ್ಲಿ ವ್ಯಾಖ್ಯಾನಿಸಲಾಗಿದೆ. ಆದಿಪದದಿಂದ ನಾಮರಾಹಿತ್ಯವನ್ನು ವಿವಕ್ಷಿಸುವುದಾದಲ್ಲಿ ಸೂತ್ರ ಹಾಗೂ ಭಾಷ್ಯಗಳಲ್ಲಿಯೂ ಕೂಡ 'ಅನಾಮತ್ವಾದಿವ್ಯಪದೇಶಾತ್' ಎಂದು ಹೇಳಬೇಕಿತ್ತಲ್ಲವೇ? ಎಂದು ಪ್ರಶ್ನಿಸಬಾರದು. ಶ್ರುತಿಕ್ರಮವನ್ನು ಅನುಸರಿಸಿಯೇ ಸೂತ್ರ ಹಾಗೂ ಭಾಷ್ಯಗಳನ್ನು ವ್ಯಾಖ್ಯಾನ ಮಾಡಬೇಕು. ಶಬ್ದವು ವಾಚ್ಯವಾದ ಅರ್ಥವನ್ನು ಅಪೇಕ್ಷೆ ಪಡುವುದರಿಂದ ಅಪ್ರಧಾನವಾಗಿದೆ ಎಂಬ ಅಭಿಪ್ರಾಯದಿಂದ 'ರೂಪಸ್ಯ' ಎಂಬ ವಾಕ್ಯವು ಹೊರಟಿದೆ.

'ಅಪ್ರಸಿದ್ಧತ್ವಾತ್' ಎಂಬುದರ ವ್ಯಾಖ್ಯಾನ

भावदीपः – उक्तेति ।। 'ईक्षतेर्नाशब्दम्' इत्यत्र वाच्यत्वोक्त्या नामवत्त्वस्य 'रूपोपन्यासाद्' इत्यत्र रुग्मवर्णमिति रूपस्य चोक्तेस्तद्विरोधादित्यर्थः । अप्रसिद्धत्वात् साकल्येनागोचरत्वात् ।। भूतेति ।। भौतिकरूपराहित्यादित्यर्थः।

'ಈಕ್ಷೇರ್ನಾಶಬ್ದಮ್' ಎಂಬ ಸೂತ್ರದಲ್ಲಿ ಬ್ರಹ್ಮನಲ್ಲಿ ಶಬ್ದವಾಚ್ಯನೆಂದು ಹೇಳಿದ್ದರಿಂದ, ನಾಮವತ್ವವು ಸಿದ್ಧವಾಯಿತು. 'ರೂಪೋಪನ್ಯಾಸಾಚ್ಚ' ಎಂಬ ಸೂತ್ರದಲ್ಲಿ ಬ್ರಹ್ಮನಲ್ಲಿ ರುಗ್ವರ್ಣವನ್ನು ಹೇಳಿದ್ದರಿಂದ ರೂಪವತ್ವವು ಕೂಡ ಸಿದ್ಧವಾಯಿತು. ಆ ಸೂತ್ರಗಳ ವಿರೋಧವು ಕೂಡ ಪ್ರಕೃತ ಪೂರ್ವಪಕ್ಷಿಗಳಿಗೆ ಬರುತ್ತದೆ ಎಂದು ಅಭಿಪ್ರಾಯ. 'ಅಪ್ರಸಿದ್ಧತ್ವಾತ್' ಎಂದರೆ ಸಾಕಲ್ಯೇನ ತಿಳಿಯದ ಕಾರಣ ಎಂದು ಅರ್ಥ. 'ಭೂತ' ಎಂದರೆ ಭೌತಿಕ ರೂಪವಿಲ್ಲದ ಕಾರಣ ಎಂದು ಅರ್ಥ.

'ವೈ ನಾಮ' ಇತ್ಯಾದಿ ನ್ಯಾಯವಿವರಣದ ವ್ಯಾಖ್ಯಾನ

भावदीपः – वै नामेति निर्वहितृत्वे श्रुत्यादिप्रसिद्धिबाहुल्यमिति न्यायविवरणोक्तमत्र योजयितुमाह – नचेति ।। 'अन्नाद्ध्येव खल्विमानि भूतानि जायन्ते' इत्यादौ प्रसिद्धेर्विधेयान्वयदर्शनाद् इहापि तथेति नामरूप निर्वहितृत्वस्येत्युक्तम्। साधुत्वं प्राग्वत् ।।

'ವೈ ನಾಮೇತಿ ನಿರ್ವಹಿತೃತ್ವೇ ಶ್ರುತ್ಯಾದಿಪ್ರಸಿದ್ಧಿಬಾಹುಲ್ಯಮ್' ಎಂಬ ನ್ಯಾಯವಿವರಣದ ಮಾತನ್ನು 'ನಚ' ಇತ್ಯಾದಿ ವಾಕ್ಯದಿಂದ ಯೋಜನೆ ಮಾಡುತ್ತಿದ್ದಾರೆ. 'ಅನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ

ಜಾಯಂತೇ' ಇತ್ಯಾದಿ ಶ್ರುತಿಯಲ್ಲಿ ಪ್ರಸಿದ್ಧವಾದ್ದರಿಂದ ವಿಧೇಯದಲ್ಲಿ ಅನ್ವಯ ಮಾಡಿದ್ದು ಕಂಡಿದೆ. ಅದರಂತೆ ಇಲ್ಲಿಯೂ ಕೂಡ ವಿಧೇಯದಲ್ಲಿ ಅನ್ವಯವನ್ನು ಮಾಡಬಹುದೆಂದು ಹೇಳುತ್ತಿದ್ದಾರೆ. ಪ್ರಯೋಗದ ಸಾಧುತ್ವವನ್ನು ಹಿಂದಿನಂತೆ ತಿಳಿಯಬೇಕು.

ಅರ್ಥತಃ ನ್ಯಾಯವಿವರಣದ ಯೋಜನೆ

ಭಾವದೀಪಃ – अलोकेति ।। लोकतोऽप्रसिद्धत्वेऽपीत्यर्थः । वेदवैदिक-प्रसिद्धेरेवासम्भाव्याज्ञानादिमूलकत्वेनान्तरङ्गत्वेन च ग्राह्यत्वादिति भावः । प्रसिद्धाकाशस्योक्तमनामरूपत्वं विरुद्धमिति न्यायविवरणांशमर्थतो योजयति – अन्यथेति ।। प्रसिद्धाकाशत्व इत्यर्थः ।

'ಅಲೋಕಪ್ರಸಿದ್ಧತ್ವೇऽಪಿ' ಎಂದರೆ ಲೋಕತಃ ಪ್ರಸಿದ್ಧವಾಗದಿದ್ದರೂ ಎಂದು ಅರ್ಥ. ವೇದ ಹಾಗೂ ವೈದಿಕ ಗ್ರಂಥಗಳಲ್ಲಿ ಪ್ರಸಿದ್ಧವಾದದ್ದೇ ಶ್ರೇಷ್ಠವಾಗಿರುತ್ತದೆ. ಏಕೆಂದರೆ, ಅಜ್ಞಾನಾದಿಮೂಲಕತ್ವವು ಅಸಂಭಾವಿತವಾದ್ದರಿಂದ ಅಂತರಂಗವಾದ ಕಾರಣ ಇದೇ ಗ್ರಾಹ್ಯವಾಗಿದೆ ಎಂದು ತಿಳಿಯಬೇಕು. ಪ್ರಸಿದ್ಧಾಕಾಶಕ್ಕೆ ಹೇಳಲ್ಪಟ್ಟ ಅನಾಮರೂಪತ್ವಗಳು ವಿರುದ್ಧವಾಗಿವೆ ಎಂದು ನ್ಯಾಯವಿವರಣದ ಅಂಶವನ್ನು ಅರ್ಥತಃ ಯೋಜನೆ ಮಾಡುತ್ತಿದ್ದಾರೆ, 'ಅನ್ಯಥಾ' ಎಂಬ ವಾಕ್ಯದಿಂದ. ಪ್ರಸಿದ್ಧವಾದ ಆಕಾಶವನ್ನೇ ವಿವಕ್ಷಿಸುವುದಾದಲ್ಲಿ ಎಂಬುದು 'ಅನ್ಯಥಾ' ಎಂಬ ಪದದ ಅರ್ಥ.

ಅವ್ಯಾಕೃತಾಶಕ್ಕೆ ರೂಪವಿಲ್ಲ

ಭಾವದೀಪಃ – नन्वाकाशे नीलिमोदेति इति श्रुतेर्भूताकाशस्य रूपादिमत्त्वेऽपि अत्राभिमताव्याकृताकाशस्य त्वनामरूपत्वमस्तु । तस्मिन् रूपाश्रुतेरचाक्षुषत्वाच्चारूपत्वनिश्चयादित्यत आह – अवकाशस्यापीति ।। अनामत्वहेत्वप्रसिद्धत्वस्यावकाशेऽभावेन नामवत्त्वादित्यर्थः ।। अत इति ।। निरवकाशश्रुतिलिङ्गभावादित्यर्थः ।।४१।।

।। इति श्रीराघवेन्द्रयतिकृते भावदीपे आकाशाधिकरणम् ।।

'ಆಕಾಶೇ ನೀಲಿಮಾ ಉದೇತಿ' 'ಆಕಾಶದಲ್ಲಿ ನೀಲಿ ಬಣ್ಣವು ಉದಯವಾಗುತ್ತದೆ' ಎಂಬ ಶ್ರುತಿಯಿರುವುದರಿಂದ ಭೂತಾಕಾಶದಲ್ಲಿ ರೂಪಾದಿಗಳು ಇದ್ದರೂ ಪ್ರಕೃತ ಈ ಅಧಿಕರಣಕ್ಕೆ ವಿಷಯವಾದ

ಅವ್ಯಾಕೃತಾಕಾಶದಲ್ಲಿ ರೂಪವೂ ಕೂಡ ಇರುವುದಿಲ್ಲ. ಏಕೆಂದರೆ, ಅವ್ಯಾಕೃತಾಕಾಶದಲ್ಲಿ ರೂಪವಿದೆ ಎನ್ನಲು ಆಧಾರವಿಲ್ಲ. ಚಕ್ಷುರಿಂದ್ರಿಯಕ್ಕೆ ವಿಷಯವೂ ಆಗದ ಕಾರಣ, ರೂಪವಿಲ್ಲವೆಂದು ಹೇಗೆ ನಿಶ್ಚಯಿಸುತ್ತೀರಿ? ಎಂಬ ಪ್ರಶ್ನೆಗೆ 'ಅವಕಾಶಸ್ಯಾಪಿ' ಎಂಬುದರಿಂದ ಉತ್ತರಿಸಿದ್ದಾರೆ. 'ಅನಾಮತ್ವ' ಎಂಬ ಹೇತುವು ಕೂಡ ಅಪ್ರಸಿದ್ಧವಾಗಿದೆ. ಏಕೆಂದರೆ ಅವ್ಯಾಕೃತಾಕಾಶದಲ್ಲಿ ನಾಮವತ್ತವೇ ಇರುತ್ತದೆ ಎಂದು ಅರ್ಥ. 'ಅತಃ' ಎಂದರೆ ನಿರವಕಾಶಶ್ರುತಿ ಹಾಗೂ ಲಿಂಗಗಳಿರುವುದರಿಂದ ಎಂದು ಅರ್ಥ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಆಕಾಶಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ಆಕಾಶಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

आकाशाधिकरणम् (१।३।१२)

'ಆಕಾಶೋ' ಇತ್ಯಾದಿ ಸೂತ್ರದ ಅರ್ಥ

।। आकाशोऽर्थान्तरत्वादिव्यपदेशात् ।। १-३-४१।।

अत्राकाशनाम समन्वीयते । ''आकाशो वै नाम नामरूपयोर्निर्वहिता'' इत्युक्ताकाशस्तत्तु ब्रह्मैव । न त्वव्याकृताकाशः । कुतः ? अर्थान्तरत्वादि-

व्यपदेशात्। अन्योऽर्थोऽर्थान्तरम् । विलक्षणोऽर्थः । तस्य भावः । नामरूपराहित्यरूपविलक्षणार्थत्वव्यपदेशात् आदिपदाद् ब्रह्मत्वामृतत्व-व्यपदेशादित्यर्थः । अर्थान्तरत्वमात्रोक्तावपि ''नामरूपयोर्निर्वहिता ते यदन्तरा तद्ब्रह्म तदमृतम्'' इति विषयवाक्ये सन्निहितत्वात् अनामरूपत्व-रूपविशेषसिद्धिः । यद्वाऽर्थान्तरत्वमरूपत्वं आदिपदेनामत्वं ग्राह्यम् । प्राकृतरूपराहित्यात् साकल्येन शब्दागोचरत्वरूपानामत्वाच्चेत्यर्थः । निरपेक्षहेतुत्वं सूचयितुं पृथगुक्तिः । श्रुतावनामत्वस्यादित्वेऽप्यरूपत्वोक्ति-र्नाम्नोऽर्थसापेक्षत्वात् ।।१३।।

ಈ ಅಧಿಕರಣದಲ್ಲಿ 'ಆಕಾಶ' ಎಂಬ ನಾಮಾತ್ಮಕ ಶಬ್ದದ ಸಮನ್ವಯವನ್ನು ಮಹಾವಿಷ್ಣುವಿನಲ್ಲಿ ಮಾಡುತ್ತಿದ್ದಾರೆ. 'ಆಕಾಶೋ ವೈ ನಾಮ ನಾಮರೂಪಯೋರ್ನಿರ್ವಹಿತಾ' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಆಕಾಶವು 'ತತ್ತು = ಬ್ರಹ್ಮನೇ ಆಗಿದ್ದಾನೆ. ಹೊರತು, ಅವ್ಯಾಕೃತಾಕಾಶವಲ್ಲ. ಏಕೆಂದರೆ, ಅರ್ಥಾಂತರತ್ವಾದಿವ್ಯಪದೇಶಾತ್ = ಅನ್ಯವಾದ ಅರ್ಥವೇ ಅರ್ಥಾಂತರ ಎನಿಸುತ್ತದೆ. ವಿಲಕ್ಷಣವಾದ ಪದಾರ್ಥ ಎಂದರ್ಥ. ಅದರ ಧರ್ಮವು ಅರ್ಥಾಂತರತ್ವ ಎನಿಸಿದೆ. ನಾಮರೂಪರಾಹಿತ್ಯವೆಂಬ ವಿಲಕ್ಷಣ ಧರ್ಮವನ್ನು ಹೇಳಿರುವುದರಿಂದ. ಆದಿಪದದಿಂದ ಬ್ರಹ್ಮತ್ವ, ಅಮೃತತ್ವಗಳನ್ನು ಹೇಳಿರುವುದರಿಂದಲೂ ಆಕಾಶನು ಮಹಾವಿಷ್ಣುವೇ ಆಗಿದ್ದಾನೆ ಎಂದು ಸೂತ್ರಾರ್ಥ.

ಸೂತ್ರದಲ್ಲಿ ಅರ್ಥಾಂತರತ್ವವೆಂದಷ್ಟೇ ಹೇಳಿದ್ದರೂ ಸಾಕಾಗುತ್ತಿತ್ತು. 'ನಾಮರೂಪಯೋ-ರ್ನಿರ್ವಹಿತಾ ತೇ ಯದಂತರಾ ತದ್ ಬ್ರಹ್ಮ ತದಮೃತಮ್' ಎಂಬ ವಿಷಯವಾಕ್ಯದಲ್ಲಿ ಸನ್ನಿಹಿತವಾದ್ದರಿಂದ ನಾಮ-ರೂಪರಾಹಿತ್ಯವೆಂಬ ವಿಶೇಷ ಧರ್ಮವು ತಿಳಿದು ಬರುತ್ತದೆ. ಅಥವಾ, 'ಅರ್ಥಾಂತರತ್ವ' ಎಂದರೆ 'ರೂಪರಾಹಿತ್ಯ' ಎಂದರ್ಥ. ಆದಿಪದದಿಂದ ನಾಮರಾಹಿತ್ಯವನ್ನೂ ಕೂಡ ಇಟ್ಟುಕೊಳ್ಳಬೇಕು. ಪ್ರಾಕೃತವಾದ ರೂಪರಾಹಿತ್ಯದಿಂದ ಸಂಪೂರ್ಣವಾಗಿ ಶಬ್ದಗಳಿಗೆ ಗೋಚರನಾಗದಿರುವಿಕೆ ಎಂಬ ನಾಮರಾಹಿತ್ಯದಿಂದ ಎಂದರ್ಥ. ನಾಮರಾಹಿತ್ಯ ಹಾಗೂ ರೂಪರಾಹಿತ್ಯಗಳೆರಡು ಪರಸ್ಪರ ಒಂದನ್ನೊಂದು ಅಪೇಕ್ಷೆ ಪಡದೆ,

ಆಕಾಶಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಸಮರ್ಥಿಸುತ್ತಿವೆ. ಆದ್ದರಿಂದ, ಇವುಗಳನ್ನು ಸೂತ್ರದಲ್ಲಿ ಪ್ರತ್ಯೇಕವಾಗಿ ಹೇಳಿರುತ್ತಾರೆ. ಶ್ರುತಿಯಲ್ಲಿ ನಾಮರಾಹಿತ್ಯವನ್ನು ಮೊದಲೇ ಹೇಳಿದ್ದರೂ ಕೂಡ ನಾಮವು ಅರ್ಥವನ್ನು ಅಪೇಕ್ಷೆ ಪಡುವ ಕಾರಣ ಸೂತ್ರದಲ್ಲಿ ರೂಪರಾಹಿತ್ಯವನ್ನು ಮೊದಲು ಹೇಳಿರುತ್ತಾರೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಆಕಾಶಾಧಿಕರಣ
ಮತ್ತು
ವಿಮರ್ಶೆ

ಅದ್ವೈತಿಗಳು ಆಕಾಶಾಧಿಕರಣದ ಬಗ್ಗೆ ಹೀಗೆ ಹೇಳುತ್ತಾರೆ - 'ಆಕಾಶಸ್ತಲ್ಲಿಂಗಾತ್' ಎಂಬ ಪ್ರಥಮ ಪಾದದ ಆಕಾಶಾಧಿಕರಣದಿಂದ ಈ ಸೂತ್ರಕ್ಕೆ ವೈಯರ್ಥ್ಯಬರುವುದಿಲ್ಲ. ಏಕೆಂದರೆ ಅಲ್ಲಿರುವ 'ಆಕಾಶಾದೇವ ಸಮುತ್ಪದ್ಯಂತೇ' ಎಂಬ ವಿಷಯವಾಕ್ಯವು ಭೂತಕಾರಣತ್ವವನ್ನು ಆಕಾಶದಲ್ಲಿ ಹೇಳುತ್ತಿದೆ. ಇದು ಬ್ರಹ್ಮನ ಲಿಂಗವಾಗಿರುವುದರಿಂದ, ಆಕಾಶಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗ ಬೇಕಾಗುತ್ತದೆ. ಆದರೆ ಪ್ರಕೃತ ಈ ಅಧಿಕರಣದ ವಿಷಯವಾಕ್ಯವೆನಿಸಿರುವ 'ಆಕಾಶೋ ಹವೈನಾಮ' ಎಂಬಲ್ಲಿ ಅಂತಹ ಯಾವುದೇ ಬ್ರಹ್ಮಲಿಂಗಗಳು ಶ್ರುತವಾಗುತ್ತಿಲ್ಲ. ಆದ್ದರಿಂದ ಈ ಅಧಿಕರಣ ಹೊರಟಿದ್ದು ಸಾರ್ಥಕವೆನ್ನುತ್ತಾರೆ.

ಇದು ತಪ್ಪು. ಪ್ರಥಮಪಾದದ ಆಕಾಶಾಧಿಕರಣದಲ್ಲಿ ಭೂತಕಾರಣತ್ವ ಮೊದಲಾದ ಬ್ರಹ್ಮನ ಲಿಂಗವಿರುವಂತೆ ಈ ಅಧಿಕರಣದ ವಿಷಯವಾಕ್ಯದ ಸಮೀಪದಲ್ಲಿಯೂ ನಾಮರೂಪನಿರ್ವಹಿತೃತ್ವ ಮೊದಲಾದ ಲಿಂಗಗಳು ಬ್ರಹ್ಮಶ್ರುತಿ, ಆತ್ಮಶ್ರುತಿ ಮೊದಲಾದವುಗಳು ಬ್ರಹ್ಮನೇ ಆಕಾಶನಾಗಿದ್ದಾನೆನ್ನಲು ನಿರ್ಣಾಯಕಗಳಾಗಿವೆ. ಇನ್ನು ಭೂತಾಕಾಶದಲ್ಲೇ ಈ ನಾಮನಿರ್ವಹಿತೃತ್ವಾದಿಗಳನ್ನು ಕಷ್ಟದಿಂದ ಯೋಜನೆ ಮಾಡಬೇಕು. ಹಾಗಾದರೆ ಪ್ರಥಮ ಪಾದದ 'ಆಕಾಶಾದೇವ ಸಮುತ್ಪದ್ಯಂತೇ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಭೂತಕಾರಣತ್ವಾದಿಗಳನ್ನೂ ಕೂಡ ಭೂತಾಕಾಶದಲ್ಲೇ ಕಷ್ಟದಿಂದ ಹೇಳಬಹುದಲ್ಲವೇ? ಆದ್ದರಿಂದ ಈ ಅಧಿಕರಣಕ್ಕೆ ಸಾರ್ಥಕ್ಯವನ್ನು ಅದ್ವೈತಿಗಳಿಂದ ಸಮರ್ಥನೆ ಮಾಡಲು ಸಾಧ್ಯವಿಲ್ಲ.

ರಾಮಾನುಜರು ಈ ಅಧಿಕರಣ ಸಾರ್ಥಕ್ಯವನ್ನು ಹೀಗೆ ಉಪಪಾದನೆ ಮಾಡಿದ್ದಾರೆ. 'ಆಕಾಶಸ್ತಲ್ಲಿಂಗಾತ್' ಎಂಬ ಪ್ರಥಮ ಪಾದದಲ್ಲಿ ಶ್ರುತಿಯಲ್ಲಿ ಇರುವ ಆಕಾಶಶಬ್ದಗಳೆಲ್ಲವೂ ಪರಮಾತ್ಮ

ಪರವೆಂದು ನಿರ್ಣಯಿಸಿದ್ದಾಗಿದೆ. ಶ್ರುತಿಯಲ್ಲಿರುವ ಆಕಾಶಶಬ್ದವು ಭೂತಾಕಾಶಪರವಾಗುವುದಿಲ್ಲವೆಂದು ನಿರಾಕರಿಸಿದ್ದಾಗಿದೆ. ಆದ್ದರಿಂದ ಈ ಅಧಿಕರಣದ ವಿಷಯವಾಕ್ಯದಲ್ಲಿರುವ ಆಕಾಶಶಬ್ದವೂ ಕೂಡ ಭೂತಾಕಾಶವನ್ನು ಪ್ರತಿಪಾದನೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಇಲ್ಲಿ ಮುಕ್ತಜೀವನೇ ಇಲ್ಲಿ ಆಕಾಶಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಪೂರ್ವಪಕ್ಷವೆನ್ನುತ್ತಾರೆ.

ಇದೂ ಸಹ ತಪ್ಪು. ಏಕೆಂದರೆ ಶ್ರುತಿಯಲ್ಲಿ, ಬ್ರಹ್ಮನ ಲಿಂಗಗಳು ಸ್ಪಷ್ಟವಾಗಿ ತೋರುತ್ತಿಲ್ಲವೋ, ಅಥವಾ ತೋರುತ್ತಿದೆಯೋ ? ಎಂಬ ಪ್ರಶ್ನೆಗೆ ಉತ್ತರಿಸಬೇಕು. ಒಂದು ವೇಳೆ ಛಾಂದೋಗ್ಯದ ಈ ವಾಕ್ಯದಲ್ಲಿ ಬ್ರಹ್ಮನಲಿಂಗಗಳು ಸ್ಪಷ್ಟವಾಗಿ ತೋರುತ್ತಿಲ್ಲವೆನ್ನುವುದಾದರೆ, ಭೂತಾಕಾಶವೇ ಪೂರ್ವಪಕ್ಷಕ್ಕೆ ವಿಷಯವಾಗಿದೆಯೆಂಬ ಪೂರ್ವಪಕ್ಷವು ಹುಟ್ಟುತ್ತದೆ. ಬ್ರಹ್ಮನ ಲಿಂಗಗಳು ಸ್ಪಷ್ಟವಾಗಿವೆ ಎನ್ನುವುದಾದರೆ, ಮುಕ್ತಜೀವನು ಆಕಾಶಶಬ್ದ ಪ್ರತಿಪಾದ್ಯನಾಗಿದ್ದಾನೆಂಬ ಪೂರ್ವಪಕ್ಷವೂ ಸಹ ಹುಟ್ಟುವುದಿಲ್ಲ.

ಮತ್ತು ಜೀವನೆಂಬ ಪೂರ್ವಪಕ್ಷವು ನಿರ್ಬೀಜವಾಗಿದೆ. ಏಕೆಂದರೆ ಶ್ರುತಿಯಲ್ಲಿ ಯಾವುದೇ ಜೀವನ ಲಿಂಗಗಳು ಕೇಳಿಸುತ್ತಿಲ್ಲ. ಆಕಾಶಶಬ್ದವು ಮುಕ್ತಜೀವನಲ್ಲಿ ಸಿದ್ಧವೇ ಆಗಿಲ್ಲ. ಹೀಗಿರುವಾಗ 'ವೈ ನಾಮ' ಎಂಬ ನಿಪಾತಗಳಿಗೆ ಸಾರ್ಥಕ್ಯವನ್ನು ಹೇಳಲು ಹೇಗೆ ಸಾಧ್ಯ ?

ಮತ್ತು 'ಜಗದ್ವ್ಯಾಪಾರವರ್ಜಮ್' ಎಂಬಲ್ಲಿ ಮುಕ್ತನಿಗೆ ಜಗತ್ತಿನ ಯಾವುದೇ ವ್ಯಾಪಾರಗಳಿರುವು-ದಿಲ್ಲವೆಂದು ಸ್ಥಾಪನೆ ಮಾಡಲಾಗಿದೆ. ಹೀಗಿರುವಾಗ ನಾಮರೂಪನಿರ್ವಾಹಕತ್ವವನ್ನು ಮುಕ್ತಜೀವನಲ್ಲಿ ಹೇಗೆ ಹೇಳುತ್ತೀರಿ. ಇದು ಮುಕ್ತಜೀವನಲ್ಲಿ ಇಲ್ಲವೆಂಬ ವಿಚಾರವನ್ನು ಮುಂದೆ ಸಮರ್ಥನೆ ಮಾಡುತ್ತೇವೆ.

'ಬ್ರಹ್ಮಲೋಕಮಭಿಸಂಭವಾಮಿ' ಎಂಬ ಹಿಂದಿನ ವಾಕ್ಯದಲ್ಲಿ ಜೀವನು ಸನ್ನಿಹಿತನಾಗಿರಬಹುದು. ಆದರೆ ಸನ್ನಿಧಾನವು ಶ್ರುತಿಯನ್ನು ಬಾಧಿಸಲು ಸಾಧ್ಯವಿಲ್ಲ. ಹಿಂದೆ ಪ್ರಸಕ್ತನಾದ ಜೀವನನ್ನು ವಿವಕ್ಷಿಸಲು ಪರಾಮರ್ಶಕವಾದ ಯಾವುದೇ ಶಬ್ದಗಳೂ ಕೂಡ ಇರುವುದಿಲ್ಲ.

ಮತ್ತು ಬ್ರಹ್ಮಲೋಕ ಶಬ್ದದಿಂದ ಬ್ರಹ್ಮನೇ ಪ್ರಧಾನವಾಗಿ ಸನ್ನಿಹಿತನಾಗಿದ್ದಾನೆ. ಹೊರತು, ಮುಕ್ತಜೀವನಲ್ಲ. ಆದ್ದರಿಂದ ರಾಮಾನುಜರ ಅಭಿಪ್ರಾಯವು ಅಸಾಧುವಾಗಿದೆ.

ಇಲ್ಲಿಗೆ ಆಕಾಶಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಸುಷುಪ್ತ್ಯಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

ಪರವೆಂದು ನಿರ್ಣಯಿಸಿದ್ದಾಗಿದೆ. ಶ್ರುತಿಯಲ್ಲಿರುವ ಆಕಾಶಶಬ್ದವು ಭೂತಾಕಾಶಪರವಾಗುವುದಿಲ್ಲವೆಂದು ನಿರಾಕರಿಸಿದ್ದಾಗಿದೆ. ಆದ್ದರಿಂದ ಈ ಅಧಿಕರಣದ ವಿಷಯವಾಕ್ಯದಲ್ಲಿರುವ ಆಕಾಶಶಬ್ದವೂ ಕೂಡ ಭೂತಾಕಾಶವನ್ನು ಪ್ರತಿಪಾದನೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಇಲ್ಲಿ ಮುಕ್ತಜೀವನೇ ಇಲ್ಲಿ ಆಕಾಶಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಪೂರ್ವಪಕ್ಷವೆನ್ನುತ್ತಾರೆ.

ಇದೂ ಸಹ ತಪ್ಪು. ಏಕೆಂದರೆ ಶ್ರುತಿಯಲ್ಲಿ, ಬ್ರಹ್ಮನ ಲಿಂಗಗಳು ಸ್ಪಷ್ಟವಾಗಿ ತೋರುತ್ತಿಲ್ಲವೋ, ಅಥವಾ ತೋರುತ್ತಿದೆಯೋ ? ಎಂಬ ಪ್ರಶ್ನೆಗೆ ಉತ್ತರಿಸಬೇಕು. ಒಂದು ವೇಳೆ ಛಾಂದೋಗ್ಯದ ಈ ವಾಕ್ಯದಲ್ಲಿ ಬ್ರಹ್ಮನಲಿಂಗಗಳು ಸ್ಪಷ್ಟವಾಗಿ ತೋರುತ್ತಿಲ್ಲವೆನ್ನುವುದಾದರೆ, ಭೂತಾಕಾಶವೇ ಪೂರ್ವಪಕ್ಷಕ್ಕೆ ವಿಷಯವಾಗಿದೆಯೆಂಬ ಪೂರ್ವಪಕ್ಷವು ಹುಟ್ಟುತ್ತದೆ. ಬ್ರಹ್ಮನ ಲಿಂಗಗಳು ಸ್ಪಷ್ಟವಾಗಿವೆ ಎನ್ನುವುದಾದರೆ, ಮುಕ್ತಜೀವನು ಆಕಾಶಶಬ್ದ ಪ್ರತಿಪಾದ್ಯನಾಗಿದ್ದಾನೆಂಬ ಪೂರ್ವಪಕ್ಷವೂ ಸಹ ಹುಟ್ಟುವುದಿಲ್ಲ.

ಮತ್ತು ಜೀವನೆಂಬ ಪೂರ್ವಪಕ್ಷವು ನಿರ್ಬೀಜವಾಗಿದೆ. ಏಕೆಂದರೆ ಶ್ರುತಿಯಲ್ಲಿ ಯಾವುದೇ ಜೀವನ ಲಿಂಗಗಳು ಕೇಳಿಸುತ್ತಿಲ್ಲ. ಆಕಾಶಶಬ್ದವು ಮುಕ್ತಜೀವನಲ್ಲಿ ಸಿದ್ಧವೇ ಆಗಿಲ್ಲ. ಹೀಗಿರುವಾಗ 'ವೈ ನಾಮ' ಎಂಬ ನಿಪಾತಗಳಿಗೆ ಸಾರ್ಥಕ್ಯವನ್ನು ಹೇಳಲು ಹೇಗೆ ಸಾಧ್ಯ ?

ಮತ್ತು 'ಜಗದ್ವ್ಯಾಪಾರವರ್ಜಮ್' ಎಂಬಲ್ಲಿ ಮುಕ್ತನಿಗೆ ಜಗತ್ತಿನ ಯಾವುದೇ ವ್ಯಾಪಾರಗಳಿರುವು-ದಿಲ್ಲವೆಂದು ಸ್ಥಾಪನೆ ಮಾಡಲಾಗಿದೆ. ಹೀಗಿರುವಾಗ ನಾಮರೂಪನಿರ್ವಾಹಕತ್ವವನ್ನು ಮುಕ್ತಜೀವನಲ್ಲಿ ಹೇಗೆ ಹೇಳುತ್ತೀರಿ. ಇದು ಮುಕ್ತಜೀವನಲ್ಲಿ ಇಲ್ಲವೆಂಬ ವಿಚಾರವನ್ನು ಮುಂದೆ ಸಮರ್ಥನೆ ಮಾಡುತ್ತೇವೆ.

'ಬ್ರಹ್ಮಲೋಕಮಭಿಸಂಭವಾಮಿ' ಎಂಬ ಹಿಂದಿನ ವಾಕ್ಯದಲ್ಲಿ ಜೀವನು ಸನ್ನಿಹಿತನಾಗಿರಬಹುದು. ಆದರೆ ಸನ್ನಿಧಾನವು ಶ್ರುತಿಯನ್ನು ಬಾಧಿಸಲು ಸಾಧ್ಯವಿಲ್ಲ. ಹಿಂದೆ ಪ್ರಸಕ್ತನಾದ ಜೀವನನ್ನು ವಿವಕ್ಷಿಸಲು ಪರಾಮರ್ಶಕವಾದ ಯಾವುದೇ ಶಬ್ದಗಳೂ ಕೂಡ ಇರುವುದಿಲ್ಲ.

ಮತ್ತು ಬ್ರಹ್ಮಲೋಕ ಶಬ್ದದಿಂದ ಬ್ರಹ್ಮನೇ ಪ್ರಧಾನವಾಗಿ ಸನ್ನಿಹಿತನಾಗಿದ್ದಾನೆ. ಹೊರತು, ಮುಕ್ತಜೀವನಲ್ಲ. ಆದ್ದರಿಂದ ರಾಮಾನುಜರ ಅಭಿಪ್ರಾಯವು ಅಸಾಧುವಾಗಿದೆ.

ಇಲ್ಲಿಗೆ ಆಕಾಶಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಸುಷುಪ್ತ್ಯಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಸುಷುಪ್ತ್ಯಧಿಕರಣ

ಬ್ರಹ್ಮಸೂತ್ರ

।। अथ सुषुप्त्यधिकरणम् ।।

'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಎಂಬ ಸೂತ್ರದ ವ್ಯಾಖ್ಯಾನ

ब्रह्मसूत्रम् – ।। सुषुप्त्युत्क्रान्त्योर्भेदेन ।। ४२ ।।

ಸೂತ್ರಾರ್ಥ - 'ತ ಯತ್ತತ್ರ ಕಿಂಚಿತ್ ಪಶ್ಯತ್ಯನನ್ವಾಗತಃ' ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿರುವ ಸ್ವಪ್ನಾದಿದ್ರಷ್ಟೃವು ಬ್ರಹ್ಮನೇ ಆಗಿದ್ದಾನೆ ಹೊರತು ಜೀವನಲ್ಲ. ಏಕೆಂದರೆ 'ಅಸಂಗೋ ಹ್ಯಯಂ ಪುರುಷಃ' ಎಂಬುದಾಗಿ ಅಸಂಗತ್ವವನ್ನು ಹೇಳಿರುವುದರಿಂದ ಜೀವಬ್ರಹ್ಮರಿಗೆ ಭೇದವಿರುವುದರಿಂದ ಜೀವನಲ್ಲೂ ಕೂಡ ಅಸಂಗತ್ವವನ್ನು ಹೇಳಬಹುದಲ್ಲವೆ? ಎಂದು ಪ್ರಶ್ನಿಸಬಾರದು. 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' ಎಂಬುದಾಗಿ 'ಪ್ರಾಜ್ಞೇನಾತ್ಮನಾನ್ವಾರೂಢಃ' ಎಂಬುದಾಗಿಯೂ ಜೀವ ಬ್ರಹ್ಮರ ಭೇದವನ್ನು ಹೇಳಿರುವುದರಿಂದ ಅವರಿಬ್ಬರಿಗೆ ಐಕ್ಯವನ್ನು ಹೇಳಲು ಸಾಧ್ಯವಿಲ್ಲ.

ಅರ್ಥ --'ಸ ಯತ್ತತ್ರ ಕಿಂಚಿತ್ ಪಶ್ಯತಿ' ಎಂಬ ಶ್ರುತಿಯಲ್ಲಿ ಉಕ್ತವಾದ ಸ್ವಪ್ನಾದಿದ್ರಷ್ಟೃವು ಪರಮಾತ್ಮನೇ ಆಗಿದ್ದಾನೆ ಹೊರತು ಜೀವನಲ್ಲ. ಏಕೆಂದರೆ 'ಅಸಂಗೋ ಹ್ಯಯಂ ಪುರುಷಃ' ಎಂಬಲ್ಲಿ ಅಸಂಗತ್ವ ಮೊದಲಾದ ಲಿಂಗಗಳನ್ನು ಹೇಳಿರುವುದರಿಂದ ಈ ಹೇತುಗಳನ್ನು ಸೂತ್ರದಲ್ಲಿ ಶೇಷಪೂರಣಮಾಡಿಕೊಳ್ಳಬೇಕು. ಈಶ್ವರನಿಗೆ ಜೀವನಿಂದ ಅಭೇದವಿರುವದರಿಂದ, ಜೀವನಲ್ಲೂ ಅಸಂಗತ್ವಲಿಂಗ ಬರುತ್ತದಲ್ಲವೆ? ಎಂದು ಪ್ರಶ್ನಿಸಬಾರದು.

ಏಕೆಂದರೆ 'ಸುಷುಪ್ತ್ಯುತ್ಕ್ರಾಂತ್ಯೋಃ' = 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' ಎಂಬ ಸುಷುಪ್ತಿಪ್ರಕರಣದಲ್ಲಿ 'ಪ್ರಾಜ್ಞೇನಾತ್ಮನಾನ್ವಾರೂಢಃ' ಎಂಬ ಉತ್ಕ್ರಾಂತಿ ಪ್ರಕರಣದಲ್ಲಿ ಭೇದೇನ = ಜೀವೇಶ್ವರರಿಗೆ ಭೇದವನ್ನು ಹೇಳಿರುವುದರಿಂದ ಭೇದವನ್ನು ಹೇಳಲಾಗದು.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಸುಷುಪ್ತ್ಯಧಿಕರಣವು ಸಮಾಪ್ತವಾಯಿತು ॥

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಜೀವೇನ ಸ್ವಪ್ನದ್ರಷ್ಟೃವೆಂದು ಪೂರ್ವಪಕ್ಷ

ब्रह्मसूत्रभाष्यम् – असङ्गत्वं परमात्मन उक्तम् । तच्च 'स तत्तत्र किञ्चित्पश्यत्यनन्वागतस्तेन भवत्यसङ्गो ह्ययं पुरुष' (बृ. उ. ६-३-१५) इति स्वप्नादिद्रष्टुः प्रतीयते।

ಅನುವಾದ - ಪರಮಾತ್ಮನು ಅಸಂಗನಾಗಿದ್ದಾನೆಂದು ಅಕ್ಷರಾಧಿಕರಣದಲ್ಲಿ ಸಮರ್ಥಿಸಲಾಯಿತು. ಆದರೆ, ಅದೇ ಅಸಂಗತ್ವವನ್ನು ಬೃಹದಾರಣ್ಯಕೋಪನಿಷತ್ತು 'ಸ ಯತ್ತತ್ರ ಕಿಂಚಿತ್ ಪಶ್ಯತಿ' ಇತ್ಯಾದಿಯಾಗಿ ಸ್ವಪ್ನದ್ರಷ್ಟೃವಿಗೆ ಹೇಳುತ್ತಿದೆ. ಸ್ವಪ್ನದ್ರಷ್ಟೃವು ಜೀವನೇ ಆಗಿದ್ದಾನೆಂದು ಪ್ರಸಿದ್ಧವಾಗಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ 'ಸ್ವಪ್ನಾದಿದ್ರಷ್ಟೃತ್ವ' ಎಂಬ ಲಿಂಗವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಮೊದಲು ಶ್ರುತ್ಯಾದಿ ಸಂಗತಿ ಮತ್ತು ವಿಷಯಾದಿಗಳನ್ನು ಸೂಚಿಸುತ್ತಿದ್ದಾರೆ –

ಪರಮಾತ್ಮನಃ = ಮಹಾವಿಷ್ಣುವಿಗೆ, ಅಸಂಗತ್ವಂ = ಅಸಂಗತ್ವವನ್ನು, ಉಕ್ತಂ = ಅಕ್ಷರಾಧಿಕರಣದಲ್ಲಿ ಹೇಳಲಾಯಿತು. ತಚ್ಚ = ಅದೇ ಅಸಂಗತ್ವವು, ಬೃಹದಾರಣ್ಯಕೋಪನಿಷತ್ತು ಬೇರೆಯವರಲ್ಲಿ ಹೇಳಿದೆ. ಸಃ = ಆ ಪುರುಷನು, ತತ್ರ = ಸ್ವಪ್ನಾವಸ್ಥೆಯಲ್ಲಿ, ಕಿಂಚಿತ್ ಪಶ್ಯತಿ = ಏನನ್ನು ನೋಡುತ್ತಾನೋ, ತೇನ = ಆ ಸ್ವಪ್ನದರ್ಶನದಿಂದ, ಅನನ್ವಾಗತಃ =

ದುಃಖದಿಂದ ಅಸಂಸ್ಪೃಷ್ಟನಾಗಿ, ಭವತಿ = ಇರುತ್ತಾನೆ. ಏಕೆಂದರೆ, ಅಯಂ = ಈ, ಪುರುಷಃ = ಪುರುಷನು, ಅಸಂಗಃ = ಪುಣ್ಯಪಾಪಸಂಪರ್ಕರಹಿತನು. ಇತಿ = ಹೀಗೆ, ಪ್ರತೀಯತೇ = ಅಸಂಗತ್ವವನ್ನು ಹೇಳಿದ್ದು ಕಾಣಿಸುತ್ತಿದೆ.

ಸರ್ವಜ್ಞನಾದ ಪರಮಾತ್ಮನೇ ಸ್ವಪ್ನಾದಿದ್ರಷ್ಟಾ

ಬ್ರಹ್ಮಸೂತ್ರಭಾಷ್ಯಮ್ – स च जीवः प्रसिद्धेरित्यत आह (वक्ति) -

।। सुषुप्त्युत्क्रान्त्योर्भेदेन ।।४२।।

ಅನುವಾದ - ಸ್ವಪ್ನ ದ್ರಷ್ಟೃವು ಜೀವನೇ ಆಗಿದ್ದಾನೆಂದು ಲೋಕಪ್ರಸಿದ್ಧವಾಗಿದೆ.

ಪ್ರತಿಪದಾರ್ಥ -- ಸ್ವಪ್ನದ್ರಷ್ಟೃವು ಅಸಂಗನಾದ ಮಾತ್ರಕ್ಕೆ ಏನು ಹೇಳಿದಂತಾಯಿತು? ಎಂಬ ಪ್ರಶ್ನೆಗೆ ಪೂರ್ವಪಕ್ಷವನ್ನು ದೃಢಪಡಿಸುತ್ತಿದ್ದಾರೆ. ಸಃ = ಆ ಸ್ವಪ್ನ ದ್ರಷ್ಟೃವು, ಚ ಜೀವಃ = ಜೀವನೇ ಆಗಿದ್ದಾನೆ. ಏಕೆಂದರೆ, ಪ್ರಸಿದ್ಧೇಃ =ಲೋಕಪ್ರಸಿದ್ಧಿಯಿರುವುದರಿಂದ, ಇತಿ = ಇಷ್ಟು ಪೂರ್ವಪಕ್ಷ.

ಅಸಂಗನಾದವನು ಪರಮಾತ್ಮನೇ ಆಗಿದ್ದಾನೆ

ಬ್ರಹ್ಮಸೂತ್ರಭಾಷ್ಯಮ್ – 'प्राज्ञेनाऽऽत्मनाऽन्वारूढ उत्सर्जयाति' (बृ. उ.६-३-३६) इति भेदव्यपदेशान्न जीवः, पर एवासङ्गः ।

ಅನುವಾದ - ಈ ಆಕ್ಷೇಪಕ್ಕೆ ಪರಿಹಾರ ನೀಡಲು ಸೂತ್ರಕಾರರು ಉತ್ತರಿಸಿದ್ದಾರೆ. 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' ಇತ್ಯಾದಿ ಸುಷುಪ್ತಿ ಪ್ರಕರಣದಲ್ಲಿ ಮತ್ತು, 'ಪ್ರಾಜ್ಞೇನಾತ್ಮನಾऽನ್ವಾರೂಢಃ' ಇತ್ಯಾದಿ ಉತ್ಕ್ರಾಂತಿ ಪ್ರಕರಣದಲ್ಲಿ ಜೀವ ಮತ್ತು ಪರಮಾತ್ಮನಿಗೆ ಭೇದವನ್ನು ಹೇಳಲಾಗಿದೆ. ಆದ್ದರಿಂದ, ವಿಷಯವಾಕ್ಯದಲ್ಲಿ ಹೇಳಿರುವ ಅಸಂಗಪುರುಷನು ಜೀವನಲ್ಲ, ಹೊರತು ಪರಮಾತ್ಮನೇ ಆಗಿದ್ದಾನೆ.

ಪ್ರತಿಪದಾರ್ಥ -- ಸಿದ್ಧಾಂತಸ್ಥಾಪಕವಾದ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ - ಪ್ರಾಜ್ಞೇನ ಆತ್ಮನಾ = ಪ್ರಾಜ್ಞನಾಮಕನಾದ ಪರಮಾತ್ಮನಿಂದ, ಸಂಪರಿಷ್ವಕ್ತಃ = ಆಲಿಂಗಿತನಾಗಿ, ಬಾಹ್ಯಂ = ದೇಹದಿಂದ ಬಾಹ್ಯವಾದ, ಆಂತರಂ = ದೇಹದ ಒಳಗಿರುವ ಯಾವುದೇ

ವಿಷಯಗಳನ್ನು, ನ ವೇದ = ತಿಳಿಯಲಾರ ಎಂದು, ಮತ್ತು ಪ್ರಾಜ್ಞೇನ ಆತ್ಮನಾ = ಪ್ರಾಜ್ಞನಾಮಕನಾದ ಪರಮಾತ್ಮನಿಂದ, ಅನ್ವಾರೂಢಃ = ಹೊತ್ತುಕೊಂಡವನಾಗಿ, ಉತ್ಸರ್ಜನ್ = ದೇಹವನ್ನು ಬಿಟ್ಟು, ಯಾತಿ = ಹೊರಡುತ್ತಾನೆ. ಇತಿ = ಹೀಗೆ, ಭೇದವ್ಯಪದೇಶಾತ್ = ಪರಮಾತ್ಮನ ದೆಸೆಯಿಂದ ಜೀವನಿಗೆ ಭೇದವನ್ನು ಹೇಳಿದ್ದರಿಂದ, ಜೀವಃ = ಜೀವನು, ನ = ಅಸಂಗನಾಗುವುದಿಲ್ಲ. ಪರಃ ಏವ = ಪರಮಾತ್ಮನೇ, ಅಸಂಗಃ = ಅಸಂಗನಾಗುತ್ತಾನೆ.

ಸರ್ವಜ್ಞನಾದ್ದರಿಂದ ಸ್ವಪ್ನದ್ರಷ್ಟೃ

ब्रह्मसूत्रभाष्यम् — स्वप्नादिप्रष्टृत्वं च सर्वज्ञत्वात्तस्यैव युज्यते ॥४२॥

॥ इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये सुषुप्त्यधिकरणम्॥ ८॥

ಅನುವಾದ - ಪರಮಾತ್ಮನು ಸರ್ವಜ್ಞನಾದ್ದರಿಂದ ಸ್ವಪ್ನಾದಿದ್ರಷ್ಟೃತ್ವವು ಅವನಿಗೆ ಯುಕ್ತವಾಗುತ್ತದೆ.

ಪ್ರತಿಪದಾರ್ಥ -- ಅಶರೀರಿಯಾದ ಪರಮಾತ್ಮನಿಗೆ ಸ್ವಪ್ನಾದಿದರ್ಶನವು ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ –

ಸ್ವಪ್ನಾದಿದ್ರಷ್ಟೃತ್ವಂ ಚ = ಸ್ವಪ್ನಾದಿದ್ರಷ್ಟೃತ್ವವಾದರೋ, ಸರ್ವಜ್ಞತ್ವಾತ್ = ಸರ್ವಜ್ಞನಾದ ಕಾರಣ, ತಸ್ಯೈವ = ಪರಮಾತ್ಮನಿಗೆ, ಯುಜ್ಯತೇ = ಯುಕ್ತವಾಗುತ್ತದೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಸುಷುಪ್ತ್ಯಧಿಕರಣವು ಸಮಾಪ್ತವಾಯಿತು ॥

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ
ಸತ್ತರ್ಕದೀಪಾವಳಿ

ಅಸಂಗತ್ವವು ಜೀವನಲ್ಲಿ ಯುಕ್ತವಲ್ಲ

सत्तर्कदीपावलिः – ।। सुषुप्त्युत्क्रान्त्योर्भेदेन ।।

नन्वसङ्गत्वेन श्रुताज्जीवादर्थान्तरत्वं परमात्मनः कथम्? इत्याशङ्क्य परिहरति – प्राज्ञेनेत्यादिना ।। सुषुप्तीत्यादिना ।। 'सन्ध्यं तृतीयं स्वप्नस्थानम्' इत्यारभ्य 'स यत्तत्र किञ्चित् पश्यति । अनन्वागतस्तेन भवति असङ्गो ह्ययं पुरुषः' इत्येतत् परमात्मनि घटयति – स्वप्नादीति ।। नहि कर्मबद्धस्य जीवस्यासङ्गत्वमुपपद्यते । अतोऽर्थान्तरभूतः परमात्मा जीवात् । 'प्राज्ञेनात्मना सम्परिष्वक्तः' इत्यादिश्रुतेरित्यर्थः ।।

।। इति सत्तर्कदीपावळ्याम् सुषुप्त्यधिकरणम् ।।

ಜೀವನು ಅಸಂಗನಾಗಿದ್ದಾನೆಂದು ಶ್ರುತಿಯಲ್ಲಿ ಹೇಳುತ್ತಿರುವಾಗ ಪರಮಾತ್ಮನಲ್ಲಿ ಅಸಂಗತ್ವ ಧರ್ಮವನ್ನು ಹೇಗೆ ಹೇಳುತ್ತೀರಿ? ಎಂದು ಆಶಂಕಿಸಿ, ಪರಿಹಾರವನ್ನು 'ಪ್ರಾಜ್ಞೇನ' ಇತ್ಯಾದಿ ಭಾಷ್ಯದಿಂದ ಹೇಳುತ್ತಿದ್ದಾರೆ. ಸ್ವಪ್ನಾದಿದ್ರಷ್ಟೃತ್ವವು ಜೀವನಲ್ಲಿ ಯುಕ್ತವಾಗುವುದಿಲ್ಲ. ಸರ್ವಜ್ಞನಾದ್ದರಿಂದ ಪರಮಾತ್ಮನಲ್ಲೇ ಯುಕ್ತವಾಗುತ್ತದೆ. ಪರಮಾತ್ಮನೇ ಅಸಂಗನಾಗಿದ್ದಾನೆಂದು 'ಅನನ್ವಾಗತಃ ತೇನ ಭವತಿ ಅಸಂಗೋ ಹ್ಯಯಂ ಪುರುಷಃ' ಎಂದು ಶ್ರುತಿಯು ಹೇಳುತ್ತಿದೆ. ಕರ್ಮಬದ್ಧನಾದ ಜೀವನಿಗೆ ಅಸಂಗತ್ವವು ಯುಕ್ತವಾಗುವುದಿಲ್ಲ. ಆದ್ದರಿಂದ ಜೀವನಿಗಿಂತ ಭಿನ್ನನಾದ ಪರಮಾತ್ಮನೇ ಅಸಂಗನು. ಈ ವಿಷಯದಲ್ಲಿ 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' ಇತ್ಯಾದಿ ಶ್ರುತಿಗಳೇ ಆಧಾರವಾಗಿವೆ.

।। ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಸುಷುಪ್ತ್ಯಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ।।

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಸ್ವಪ್ನದ್ರಷ್ಟೃ ಯಾರು ?

तत्वप्रदीपः – असङ्गत्वं परमात्मन उक्तं ''अतमोऽवाव्यनाकाशम-सङ्गमरसम्'' इत्यक्षरब्राह्मणे । सुषुत्प्युत्क्रान्त्योर्भेदेन ।। असङ्गात् स्वापादिद्रष्टुरीश्वराज्जीवस्य भेदव्यपदेशान्न जीवोऽसङ्गः । अपितु पर एवासङ्गः । अथ च पराज्जीवस्य भेदव्यपदेशान्न जीवः पर एव सन् असङ्गः ।

ಪರಮಾತ್ಮನು ಅಸಂಗನಾಗಿದ್ದಾನೆಂದು 'ಅತಮೋऽವಾವ್ಯನಾಕಾಶಮಸಂಗಮರಸಮ್' ಎಂಬ ಅಕ್ಷರಬ್ರಾಹ್ಮಣದಲ್ಲಿ ಹೇಳಲಾಗಿದೆ. 'ಅಸಂಗತ್ವಂ ಪರಮಾತ್ಮನ ಉಕ್ತಂ' ಎಂಬ ಭಾಷ್ಯದ ಮಾತಿಗೆ ಹೀಗೆ ಅಕ್ಷರಬ್ರಾಹ್ಮಣದಲ್ಲಿ ಹೇಳಲಾಗಿದೆ ಎಂಬರ್ಥವನ್ನು ತಿಳಿಯಬೇಕು.

'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಎಂಬ ಸೂತ್ರದ ಅಭಿಪ್ರಾಯ ಹೀಗಿದೆ - ಅಸಂಗನಾಗಿ ಸ್ವಪ್ನಾದಿಗಳನ್ನು ನೋಡುವವನು ಈಶ್ವರನೇ ಆಗಿದ್ದಾನೆ. ಇಂಥ ಈಶ್ವರನಿಂದ ಜೀವನಿಗೆ ಭೇದವ್ಯಪದೇಶವಿರುವ ಕಾರಣ ಜೀವನು ಅಸಂಗನಲ್ಲ. ಪರಮಾತ್ಮನು ಅಸಂಗನಾಗಿದ್ದಾನೆ. ಇಂಥ ಪರಮಾತ್ಮನಿಂದ ಜೀವನಿಗೆ ಭೇದವ್ಯಪದೇಶವಿರುವುದರಿಂದ ಜೀವನು ಪರಮಾತ್ಮನಾಗಲಾರ. ಹಾಗೂ ಅಸಂಗನಾಗಲಾರ.

ವಿವರಣೆ - ಸ ವಾ ಏಷ ಏತಸ್ಮಿನ್ ಸಂಪ್ರಸಾದೋ ರತ್ವಾ ಚರಿತ್ವಾ ದೃಷ್ಟ್ವೈವ ಪುಣ್ಯಂ ಚ ಪಾಪಂ ಚ ಪುನಃ ಪ್ರತಿನ್ಯಾಯಂ ಪ್ರತಿಯೋನಿ ಆದ್ರವತಿ ಸ್ವಪ್ನಾಯೈವ । ಸ ಯತ್ ತತ್ರ ಕಿಂಚಿತ್ ಪಶ್ಯತಿ ಅನನ್ವಾಗತಸ್ತೇನ ಭವತಿ । ಅಸಂಗೋ ಹ್ಯಯಂ ಪುರುಷ ಇತಿ । ಏವಂ ಏವೈತದ್ ಯಾಜ್ಞವಲ್ಕ್ಯ । ಸೋऽಹಂ ಭಗವತೇ ಸಹಸ್ರಂ ದದಾಮಿ । ಅತ ಊರ್ಧ್ವಂ ವಿಮೋಕ್ಷಾಯೈವ ಬ್ರೂಹೀತಿ ।

ಈ ಪರಮಾತ್ಮನೇ ಜೀವಾತ್ಮನ ಸುಷುಪ್ತಿಕಾಲದಲ್ಲಿ ವಿಹರಿಸಿ ಅವನ ಪುಣ್ಯ-ಪಾಪಗಳನ್ನು ಕೇವಲ

ನೋಡುತ್ತಾ ಸಂಚರಿಸಿ ಪುನಃ ಪ್ರತಿಬಾರಿಯೂ ಪ್ರತಿಯೊಬ್ಬ ಜೀವನಿಗೂ ಸ್ವಪ್ನವುಂಟು ಮಾಡುವುದಕ್ಕಾಗಿ ಸ್ವಪ್ನಸ್ಥಾನಕ್ಕೆ ಹೋಗುತ್ತಾನೆ. ಪರಮಾತ್ಮನು ಸುಷುಪ್ತಿ ಕಾಲದಲ್ಲಿ ಜೀವನ ಯಾವ ಪುಣ್ಯ-ಪಾಪಗಳನ್ನು ನೋಡುತ್ತಾನೋ ಅವುಗಳ ಫಲಲೇಪವು ಅವನಿಗೆ ಆಗುವುದಿಲ್ಲ. ಅವನು ಅಸಂಗ, ಜೀವನ ಪಾಪ ಕರ್ಮದ ಫಲ ಸಂಸರ್ಗ ಅವನಿಗಿಲ್ಲ. ಜನಕನು ಹೇಳಿದನು 'ಯಾಜ್ಞವಲ್ಕ್ಯರೇ ನೀವು ಹೇಳಿದ್ದು ಸರಿ. ನಾನು ಪೂಜ್ಯರಾದ ನಿಮಗೆ ಸಹಸ್ರ ಆನೆ ಎತ್ತುಗಳನ್ನು ಗುರುದಕ್ಷಿಣೆಯಾಗಿ ಕೊಡುತ್ತೇನೆ. ಇನ್ನೂ ಹೆಚ್ಚಿನ ವಿಷಯವನ್ನು ಉತ್ತಮ ಮೋಕ್ಷಕ್ಕಾಗಿ ಹೇಳಿರಿ'. (ಸಂಗ್ರಹ)

ಬೃಹದಾರಣ್ಯಕದಲ್ಲಿರುವ ಈ ವಾಕ್ಯವು ಈ ಸುಷುಪ್ತ್ಯಧಿಕರಣದ ವಿಷಯವಾಕ್ಯವಾಗಿದೆ.

ಸ್ವಪ್ನವನ್ನು ಕಾಣುವವನು ಜೀವನೆಂದು ಪೂರ್ವಪಕ್ಷ. ಏಕೆಂದರೆ ಪೂರ್ವಕರ್ಮಕ್ಕೆ ಅನುಗುಣವಾಗಿ ಸ್ವಪ್ನಕಾಣುವ ಯೋಗ್ಯತೆ ಜೀವನಿಗಷ್ಟೇ ಇರುತ್ತದೆ. ಪುಣ್ಯಪಾಪಗಳಿಂದ ಸಂಸೃಷ್ಟರಾಗಿದ್ದರೂ ಕೂಡ ಜೀವನಿಗೆ ಹಾಗೂ ಬ್ರಹ್ಮನಿಗೆ ಅಭೇದವಿರುವುದರಿಂದ ಬ್ರಹ್ಮರೂಪದಿಂದ ಜೀವನು ಅಸಂಗನಾಗಿದ್ದಾನೆ. ಆದ್ದರಿಂದ ಜೀವನೇ ಸ್ವಪ್ನದ್ರಷ್ಟು ಎಂಬುದು ಪೂರ್ವಪಕ್ಷದ ಅಭಿಪ್ರಾಯ. ಅದನ್ನು ಪ್ರಕೃತ ನಿರಾಕರಣೆ ಮಾಡಿ ಪರಮಾತ್ಮನೇ ಸ್ವಪ್ನದ್ರಷ್ಟು ಎಂಬುದಾಗಿ ಪ್ರತಿಪಾದನೆ ಮಾಡುತ್ತಿದ್ದಾರೆ.

ಬೃಹದಾರಣ್ಯಕದಲ್ಲಿ ಭೇದವ್ಯಪದೇಶ

तत्त्वप्रदीपः – अत्र हि ''तद्यथा प्रियया स्त्रिया सम्परिष्वक्तो न बाह्यं किञ्चन वेद नाऽन्तरमेवमेवायं पुरुषः प्राज्ञेन'' इत्यादिना ''तद्यथा नस्सुसमाहितमुत्सर्जेद्यायादेवमेवायं शारीर आत्मा प्राज्ञेनाऽत्मना'' इत्यादिना च सदृष्टान्तं भेदो व्यपदिश्यते ।

'ತದ್ಯಥಾ ಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾಂತರಮೇವಮೇವಾಯಂ ಪುರುಷಃ ಪ್ರಾಜ್ಞೇನ' ಇತ್ಯಾದಿಯಾಗಿ, ಹಾಗೂ 'ತದ್ಯಥಾ ನಃ ಸುಸಮಾಹಿತಮುತ್ಸರ್ಜದ್ಯಾಯಾದೇವಮೇವಾಯಂ ಶರೀರ ಆತ್ಮಾ ಪ್ರಾಜ್ಞೇನಾತ್ಮನಾ' ಇತ್ಯಾದಿಯಾಗಿ ದೃಷ್ಟಾಂತಪುರಸ್ಸರವಾಗಿ ಉಪನಿಷತ್ತಿನಲ್ಲಿ ಜೀವಬ್ರಹ್ಮರಿಗೆ ಭೇದವನ್ನು ಹೇಳಲಾಗಿದೆ.

ವಿವರಣೆ - ಬೃಹದಾರಣ್ಯಕೋಪನಿಷತ್ತಿನಲ್ಲಿ ಜೀವಬ್ರಹ್ಮರಿಗೆ ಸ್ಪಷ್ಟವಾಗಿ ಭೇದವನ್ನು ಹೇಳಿರುವುದರಿಂದ ಬ್ರಹ್ಮನಿಂದ ಅಭೇದವಿದೆಯೆಂದು ವಿವಕ್ಷಿಸಿ ಅಸಂಗತ್ವವನ್ನು ಜೀವನಲ್ಲಿ ಹೇಳಲು ಸಾಧ್ಯವಿಲ್ಲ.

> ತದ್ವಾ ಅಸ್ಯೈತದತಿಚ್ಛಂದಾ ಅಪಹತಪಾಪ್ಮಾಭಯಂ ರೂಪಮ್ । ತದ್ ಯಥಾ ಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾಂತರಮ್ ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾಂತರಮ್ । ತದ್ ವಾ ಅಸ್ಯೈತದಾಪ್ತಕಾಮಮಾತ್ಮಕಾಮಮಕಾಮಂ ರೂಪಂ ಶೋಕಾಂತರಮ್ ।

ಮುಕ್ತಗಮ್ಯವಾದ ಶ್ರೀಹರಿಯ ರೂಪವು ವೇದಗಳನ್ನು ದಾಟಿದೆ. ಪಾಪರಹಿತವಾಗಿದೆ. ಭಯರಹಿತವಾಗಿದೆ. ಪ್ರೇಯಸಿಯಿಂದ ಆಲಿಂಗಿತನಾದ ಪ್ರಿಯಕರನು ಹೇಗೆ ಹೊರಗಿನ ಪ್ರಾಪಂಚಿಕ ಘಟನೆಗಳನ್ನಾಗಲೀ ಒಳಗಿನ ದುಃಖಾದಿ ಭಾವಗಳನ್ನಾಗಲೀ ತಿಳಿಯುವುದಿಲ್ಲವೋ ಹಾಗೆಯೇ ಈ ಜೀವಾತ್ಮನು ಸುಪ್ತಿಯಲ್ಲೂ ಮೋಕ್ಷದಲ್ಲೂ ಸರ್ವಜ್ಞನಾದ ಪರಮಾತ್ಮನಿಂದ ಆಲಿಂಗಿತನಾಗಿ ಹೊರಗಿನ ಅಥವಾ ಒಳಗಿನ ಯಾವುದೇ ಸಂಗತಿಯನ್ನು ತಿಳಿಯುವುದಿಲ್ಲ. ಪೂರ್ಣತೆಯನ್ನೇ ಅನುಭವಿಸುತ್ತಾನೆ. ಶ್ರೀಹರಿಯ ಈ ರೂಪವು ಬಯಸಿದುದನ್ನೆಲ್ಲ ಪಡೆದಿದೆ. ಕೇವಲ ತನ್ನನ್ನೇ ತಾನು ಬಯಸುತ್ತದೆ ಹೊರತು ಬಾಹ್ಯವಸ್ತುಗಳನ್ನು ಬಯಸುವುದಿಲ್ಲ. ದುಃಖರಹಿತ ಸುಖಸ್ವರೂಪವಾಗಿದೆ.

> ಛಂದಸಾಮಪ್ಯವಾಚ್ಯತ್ವಾದತಿಚ್ಛಂದಾ ಹರಿಃ ಸ್ಮೃತಃ ।
> ತೇನಾಶ್ಲಿಷ್ಟೋ ಹ್ಯಯಂ ಜೀವಃ ಸುಪ್ತೋ ಮುಕ್ತೋಭವಾ ಭವೇತ್
> ವಿಷ್ಣೋ ರೂಪಂ ಹಿ ಯನ್ನಿತ್ಯಮಭಯಂ ಪಾಪವರ್ಜಿತಮ್ ।
> ಆಪ್ತಕಾಮಂ ಚ ಪೂರ್ಣತ್ವಾದ್ ಆತ್ಮಕಾಮಂ ಸುಖತ್ವತಃ ।
> ಶೋಕಂ ವಿನಾ ಸುರಮಣಾಚ್ಛೋಕಾಂತರಮಿತೀರಿತಮ್ ।

ಪೂರ್ಣವಾಗಿ ಪ್ರತಿಪಾದನೆ ಮಾಡುವುದು ವೇದದ ಸಾಮರ್ಥ್ಯಕ್ಕೂ ಮೀರಿರುವುದರಿಂದ ಶ್ರೀಹರಿಯು ಅತಿಚ್ಛಂದನೆನಿಸಿದ್ದಾನೆ. ಸುಪ್ತ ಅಥವಾ ಮುಕ್ತಜೀವನು ಇವನಿಂದ ಆಲಿಂಗಿತನಾಗುತ್ತಾನೆ. ವಿಷ್ಣುವಿನ ರೂಪವು ಯಾವಾಗಲೂ ಭಯರಹಿತವೂ, ಪಾಪರಹಿತವೂ ಆಗಿದೆ. ಅವನು ಪೂರ್ಣನಾದುದರಿಂದ ಆಪ್ತಕಾಮ ಅಂದರೆ ಬಯಸಿದ್ದನ್ನೆಲ್ಲ ಹೊಂದಿರುತ್ತಾನೆ, ಇನ್ನು ಹೊಂದಬೇಕಾದುದು ಏನೂ ಇಲ್ಲ. ಸುಖಸ್ವರೂಪನಾದ್ದರಿಂದ ಆತ್ಮಕಾಮ ಅಂದರೆ ತನ್ನನ್ನೇ ತಾನು ಬಯಸುತ್ತಾನೆ. ಶೋಕರಹಿತನಾಗಿ ಸುಖವನ್ನನುಭವಿಸುವುದರಿಂದ ಶೋಕಾಂತರನೆನಿಸಿದ್ದಾನೆ.

ತದ್ ಯಥಾऽನಃ ಸುಸಮಾಹಿತಮುತ್ಸರ್ಜದ್ ಯಾಯಾದೇವಮೇವಾಯಂ ಶಾರೀರ ಆತ್ಮಾ ಪ್ರಾಜ್ಞೇನ ಆತ್ಮನಾನ್ವಾರೂಢ ಉತ್ಸರ್ಜದ್ ಯಾತ್ರ ಯತ್ರೈತದೂರ್ಧ್ವೋಚ್ಛ್ವಾಸೀ ಭವತಿ।

ಸಾರಥಿಯೊಬ್ಬನ ನಿಯಂತ್ರಣದಲ್ಲಿರುವ ಬಂಡಿಯು ಸಂಚಾರ ಮಾಡುತ್ತಾ ಒಂದೊಂದೇ ಗ್ರಾಮವನ್ನು ಕ್ರಮವಾಗಿ ಬಿಟ್ಟುಹೋಗುವಂತೆ ಶರೀರಾಭಿಮಾನಿಯಾದ ಜೀವನು ಯಾವಾಗ ಮರಣಕಾಲದ ಊರ್ಧ್ವಶ್ವಾಸ ಬಿಡಲು ತೊಡಗುವನೋ ಆಗ ಪರಮಾತ್ಮನ ನಿಯಂತ್ರಣಕ್ಕೊಳಪಟ್ಟು ಶರೀರವನ್ನು ಬಿಟ್ಟುಹೋಗುತ್ತಾನೆ. ಆದ್ದರಿಂದ ಪರಮಾತ್ಮನೇ ಜೀವನ ಮರಣಾವಸ್ಥೆಗೂ ನಿಯಾಮಕ.

ಗ್ರಾಮಾದಿಕಂ ಉತ್ಸರ್ಜದ್ ಯಾಯಾತ್।
ಯಥಾ ಗ್ರಾಮಂ ಪರಿತ್ಯಜ್ಯ ಯಾತ್ಯನಃ ಪುಮಧಿಷ್ಠಿತಮ್।
ಏವಂ ದೇಹಂ ಪರಿತ್ಯಜ್ಯ ವಿಷ್ಣುನಾऽಧಿಷ್ಠಿತಃ ಪುಮಾನ್। ಇತಿ ಚ।

ಉಪನಿಷತ್ತಿನಲ್ಲಿ 'ಉತ್ಸರ್ಜತ್ ಯಾಯಾತ್' ಎಂದರೆ ಒಂದು ಗ್ರಾಮವನ್ನು ಬಿಟ್ಟು ಇನ್ನೊಂದು ಗ್ರಾಮಕ್ಕೆ ಹೋಗುವುದು' ಎಂದರ್ಥ. ಸಾರಥಿಯ ನಿಯಂತ್ರಣಕ್ಕೊಳಪಟ್ಟ ಬಂಡಿಯು ಸಂಚಾರ ಮಾಡುತ್ತಾ ಒಂದೊಂದೇ ಗ್ರಾಮವನ್ನು ಬಿಟ್ಟು ಹೋಗುವಂತೆ ವಿಷ್ಣುವಿನ ನಿಯಂತ್ರಣಕ್ಕೊಳಪಟ್ಟ ಜೀವನು ದೇಹವನ್ನು ಬಿಟ್ಟುಹೋಗುತ್ತಾನೆ ಎಂದು ಕೂಡ ನಿರ್ಣಯದಲ್ಲಿ ಹೇಳಲ್ಪಟ್ಟಿದೆ.

ಜೀವೇಶಭೇದವು ವ್ಯಾವಹಾರಿಕವಲ್ಲ

तत्वप्रदीपः – नचायमभिधीयमानो जीवेशभेदो व्यावहारिक इति वाच्यम् । तदर्थानिरूपणात् । अनिर्वाच्यस्य निरस्तत्वात् । भेदस्य चाबाधात् । नच व्यवहारसम्बन्धित्वं व्यावहारिकत्वं, तथाव्यावहारिकस्यापि ब्रह्मणः सत्यत्वात्। अव्यावहारिकत्वे प्रतिवादिदूषितेऽपि ब्रह्मणि मूकतापत्तेरिति ।।

।। इति सुषुप्त्यधिकरणम् ।।

ಶ್ರುತಿಯಲ್ಲಿ ಉಕ್ತವಾದ ಜೀವೇಶಭೇದವನ್ನು ವ್ಯಾವಹಾರಿಕವೆಂದು ಹೇಳಲು ಸಾಧ್ಯವಿಲ್ಲ . ಏಕೆಂದರೆ ವ್ಯಾವಹಾರಿಕ ಎಂಬ ಶಬ್ದದ ಅರ್ಥವನ್ನೇ ಅದ್ವೈತಿಗಳಿಂದ ನಿರೂಪಣೆ ಮಾಡಲು ಆಗುವುದಿಲ್ಲ. 'ಅನಿರ್ವಾಚ್ಯತ್ವ' ಎಂಬರ್ಥವನ್ನು ಈಗಾಗಲೇ ನಿರಾಕರಣೆ ಮಾಡಿದ್ದೇವೆ. ಮತ್ತು ಜೀವೇಶಭೇದಕ್ಕೆ ಬಾಧವು ಇಲ್ಲದ ಕಾರಣ ವ್ಯಾವಹಾರಿಕವೆಂದು ಹೇಳಲು ಆಗುವುದಿಲ್ಲ.

ಇನ್ನು, ವ್ಯವಹಾರಸಂಬಂಧಿತ್ವವನ್ನು ವ್ಯಾವಹಾರಿಕತ್ವವೆಂದು ಹೇಳಬೇಕು. ಇದು ಬ್ರಹ್ಮನಲ್ಲಿ ಇರುವುದರಿಂದ ಬ್ರಹ್ಮನು ಹೇಗೆ ಸತ್ಯನಾಗಿದ್ದಾನೋ, ಅದರಂತೆ ವ್ಯವಹಾರಸಂಬಂಧಿತ್ವ-ರೂಪವಾದ ವ್ಯಾವಹಾರಿಕತ್ವವು ಜೀವೇಶಭೇದದಲ್ಲಿ ಇದ್ದರೂ ಅದು ಮಿಥ್ಯಾಭೂತವಾಗ-ಬೇಕಾಗಿಲ್ಲ. ಸತ್ಯವೇ ಆಗಬಹುದು.

ಪ್ರತಿವಾದಿಗಳಾದ ನಮ್ಮಿಂದ ದೂಷಿತವಾದರೂ ಕೂಡ ಬ್ರಹ್ಮನಲ್ಲಿ ಅವ್ಯಾವಹಾರಿಕತ್ವವನ್ನು ಒಪ್ಪುವುದಾದರೆ ನಿಮಗೆ ಮೂಕತ್ವದೋಷವು ಪ್ರಾಪ್ತವಾಗುತ್ತದೆ.

ವಿವರಣೆ - 'ಅವ್ಯಾವಹಾರಿಕತ್ವೇ ಪ್ರತಿವಾದಿದೂಷಿತೇऽಪಿ ಬ್ರಹ್ಮಣಿ ಮೂಕತಾಪತ್ತೇಃ' ಎಂಬ ಪಂಡಿತಾಚಾರ್ಯರ ವಾಕ್ಯಕ್ಕೆ 'ಬ್ರಹ್ಮಣಿ ಪ್ರತಿವಾದಿದೂಷಿತೇऽಪಿ ಅವ್ಯಾವಹಾರಿಕತ್ವೇ ಅಂಗೀಕ್ರಿಯಮಾಣೇ ಮೂಕತಾಪತ್ತೇಃ' ಎಂಬುದಾಗಿ ಅನ್ವಯಕ್ರಮವನ್ನು ತಿಳಿಯಬೇಕು. ಬ್ರಹ್ಮನಲ್ಲಿ ಪ್ರತಿವಾದಿಗಳಾದ ನಾವು ವ್ಯವಹಾರಸಂಬಂಧಿತ್ವರೂಪವಾದ ವ್ಯಾವಹಾರಿಕತ್ವವೇ ಇರುತ್ತದೆ ಎಂದು ಹೇಳಿ ಅವ್ಯಾವಹಾರಿಕತ್ವವನ್ನು ದೂಷಣೆ ಮಾಡಿದ್ದೇವೆ. ಆದರೂ ಕೂಡ ನೀನು ಬ್ರಹ್ಮನನ್ನು ಅವ್ಯಾವಹಾರಿಕನೆಂದು ಹೇಳಿದರೆ ವ್ಯವಹಾರವನ್ನೇ ಮಾಡಲು ಸಾಧ್ಯವಾಗದ ಕಾರಣ ಮೂಕತ್ವ ದೋಷವು ನಿನಗೆ ಪ್ರಾಪ್ತವಾಗುತ್ತದೆಂಬುದು ಇದರ ಅಭಿಪ್ರಾಯ.

> ವಿವರಣೆ - 'ಪ್ರಾಜ್ಞೇನಾऽತ್ಮನಾ ಸಂಪರಿಷ್ವಕ್ತಃ' 'ಪ್ರಾಜ್ಞೇನಾऽತ್ಮನಾऽನ್ವಾರೂಢಃ' ಇತ್ಯಾದಿಷು ಚಾಭ್ಯಾಸೇನ ಸರ್ವತ್ರ ಭೇದ ಏವ ನಿರ್ದಿಶ್ಯತೇ । 'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಇತಿ ನಿರ್ಣಯಾತ್ಮಕಂ ಭಗವದ್ವಚನಮ್ ।
>
> 'ಸ್ವಪ್ನೇನ ಶಾರೀರಂ' ಮುಂತಾದ ವಾಕ್ಯಗಳಲ್ಲಿ ಭೇದಪ್ರತಿಪಾದನೆ ಇದೆ, ಮಾತ್ರವಲ್ಲ, ಅದರಲ್ಲಿ ತಾತ್ಪರ್ಯವೂ ಶ್ರುತಿಗೆ ಇದೆ. ಏಕೆಂದರೆ 'ಜೀವನು ಪ್ರಾಜ್ಞಾತ್ಮನಿಂದ ಆಲಿಂಗಿತನಾಗಿ', 'ಜೀವನು ಪ್ರಾಜ್ಞಾತ್ಮನನ್ನು ಹೊತ್ತು ಕೊಂಡು' ಎಂದು ಮುಂತಾಗಿ ಎಲ್ಲ ಕಡೆ ಜೀವಪರಮಾತ್ಮರ ಭೇದವೇ ಪುನಃ ಪುನಃ ನಿರ್ದೇಶಿಸಲ್ಪಟ್ಟಿದೆ. 'ಸುಷುಪ್ತಿ ಹಾಗೂ ಉತ್ಕ್ರಮಣ ಸಂದರ್ಭಗಳಲ್ಲಿ

ಜೀವ-ಪರಮಾತ್ಮರಿಗೆ ಭೇದವನ್ನೇ ಹೇಳಿದ್ದರಿಂದ ಜೀವನು ಪರಮಾತ್ಮನಲ್ಲ' ಎಂದು ಜೀವಪರಮಾತ್ಮರ ಭೇದವನ್ನು ವೇದವ್ಯಾಸರು ಬ್ರಹ್ಮಸೂತ್ರದಲ್ಲಿ ನಿರ್ಣಯಾತ್ಮಕವಾಗಿ ಹೇಳಿದ್ದಾರೆ.

ನ ಚಾವಸ್ಥಾಭೇದೇನ ಜೀವಭೇದೋ ವ್ಯಾವಹಾರಿಕೋऽಪ್ಯಸ್ತೀತ್ಯತ್ರ ಕಿಂಚಿನ್ಮಾನಮ್। ನಹಿ ಜಾಗ್ರತ್ ಸ್ವಪ್ನಸ್ಥಶ್ಚ ದ್ವಾವಿತ್ಯಜ್ಞಪ್ರಯೋಗೋऽಪಿ ಕಶ್ಚಿದಸ್ತಿ ಲೌಕಿಕಃ । ನ ಚ ಭ್ರಮಸ್ತಾದೃಶಃ। ತಸ್ಮಾದ್ ಭಗವಾನೇವಾತ್ರೋಚ್ಯತೇ ಸರ್ವಕರ್ತೃತ್ವೇನ।

'ಜಾಗ್ರದವಸ್ಥೆಯಲ್ಲಿರುವ ಜೀವನು ಸುಷುಪ್ತವಸ್ಥೆಯಲ್ಲಿರುವ ಅದೇ ಜೀವನಿಗಿಂತ ಬೇರೆ ಎಂದು ಅವಸ್ಥಾಭೇದ ಪ್ರಯುಕ್ತ ಜೀವ-ಜೀವ ಭೇದವೇ ಉಕ್ತವಾಗಿದೆ. ಹೊರತು ಜೀವೇಶ್ವರ ಭೇದವಲ್ಲ' ಎನ್ನುವುದೂ ಅಸಂಗತ. ಏಕೆಂದರೆ ಅವಸ್ಥಾಭೇದಪ್ರಯುಕ್ತ ಜೀವ ಜೀವ ಭೇದವು ವ್ಯಾವಹಾರಿಕವಾಗಿಯಾದರೂ ಇದೆ ಎನ್ನುವಲ್ಲಿ ಏನೂ ಪ್ರಮಾಣವಿಲ್ಲ. ಇನ್ನು ಪಾರಮಾರ್ಥಿಕ ಭೇದವೆಲ್ಲಿ ? ಅಂತಹ ಭೇದವಿದ್ದಿದ್ದರೆ 'ಈಗ ಎಚ್ಚರವಿರುವ ಹಿಂದೆ ನಿದ್ರೆ ಮಾಡಿದ್ದ ಜೀವರು ಬೇರೆಯೇ ಇಬ್ಬರು' ಎಂಬ ಪ್ರಯೋಗ, 'ದ್ವಾಸುಪರ್ಣಾ' ಎಂದು ಮೊದಲಾದವುಗಳಂತೆ ವೇದದಲ್ಲಿರಬೇಕಾಗಿತ್ತು. ವೈದಿಕ ಪ್ರಯೋಗವಿಲ್ಲದಿದ್ದರೂ ಲೌಕಿಕ ಪ್ರಯೋಗವಾದರೂ ಇರಬೇಕಾಗಿತ್ತು. ಕೊನೆಯಪಕ್ಷ ಲೋಕದಲ್ಲಿ ಜ್ಞಾನಿಗಳ ಪ್ರಯೋಗವಿಲ್ಲದಿದ್ದರೂ, ಅಜ್ಞಾನಿಯ ಪ್ರಯೋಗವಾದರೂ ಇರಬೇಕಿತ್ತು. ಆದರೆ ಯಾವುದೂ ಇಲ್ಲ. ಯಾವ ಲೌಕಿಕ ಮನುಷ್ಯನಿಗೂ ಅಂತಹ ಭ್ರಮೆಯೂ ಇಲ್ಲ. ಇಷ್ಟರವರೆಗೆ ಮಲಗಿ ಕನಸು ಕಂಡವನೂ ಈಗ ಎಚ್ಚತ್ತವನೂ ನಾನೇ ಎಂಬ ಅನುಭವವೂ ಇದೆ. ಆದ್ದರಿಂದ ಪ್ರಕೃತ ಮಂತ್ರಗಳಲ್ಲಿ ಸರ್ವಕರ್ತೃ ಎಂದು ಹೇಳಿದ ಜ್ಯೋತಿಯು ಭಗವಂತನೇ ಹೊರತು ಜೀವನಲ್ಲ. (ಸಂಗ್ರಹ)

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ತ್ವಪ್ರದೀಪದಲ್ಲಿ ಸುಷುಪ್ತ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಸ್ವಪ್ನದ್ರಷ್ಟೃತ್ವ ಎಂಬ ಲಿಂಗಸಮನ್ವಯಕ್ಕಾಗಿ ಸುಷುಪ್ತ್ಯಧಿಕರಣ

तत्वप्रकाशिका – ।। सुषुप्त्युत्क्रान्त्योर्भेदेन ।।

अत्रासङ्गत्वलिङ्गेन लोकप्रसिद्ध्या चेशजीवयोः साधारणस्य स्वप्नादिदर्शनलिङ्गस्य भगवति समन्वयप्रतिपादनादस्ति शास्त्रादिसङ्गतिः । श्रुत्यादिसङ्गतिं विषयादिकं च सूचयति ।। असङ्गत्वमिति ।।

ಈ ಅಧಿಕರಣದಲ್ಲಿ 'ಸ್ವಪ್ನಾದಿದ್ರಷ್ಟೃತ್ವ' ಎಂಬ ಧರ್ಮವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಅಸಂಗತ್ವ ಎಂಬ ಧರ್ಮದಿಂದ ಈಶ್ವರನಲ್ಲಿ ಸ್ವಪ್ನಾದಿದ್ರಷ್ಟೃತ್ವ ಧರ್ಮವು ಪ್ರಸಿದ್ಧವಾಗಿದೆ. ಲೋಕಪ್ರಸಿದ್ಧಿಯಿಂದ ಜೀವನಲ್ಲಿ ಪ್ರತೀತವಾಗುತ್ತಿದೆ. ಹೀಗೆ ಉಭಯಸಾಧಾರಣವಾದ ಸ್ವಪ್ನಾದಿದರ್ಶನ ಎಂಬ ಲಿಂಗವನ್ನು ಭಗವಂತನಲ್ಲಿ ಸಮನ್ವಯ ಮಾಡುತ್ತಿದ್ದರಿಂದ ಶಾಸ್ತ್ರಸಂಗತಿ - ಅಧ್ಯಾಯಸಂಗತಿ-ಪಾದಸಂಗತಿಗಳಿರುತ್ತವೆ. ಶ್ರುತಿಸಂಗತಿ-ಅಧಿಕರಣಸಂಗತಿ ಮತ್ತು ವಿಷಯಾದಿಗಳನ್ನು 'ಅಸಂಗತ್ವಮ್' ಇತ್ಯಾದಿ ಭಾಷ್ಯದಿಂದ ಸೂಚನೆ ಮಾಡುತ್ತಿದ್ದಾರೆ.

ಸ್ವಪ್ನದ್ರಷ್ಟೃ ಅಸಂಗ

तत्वप्रकाशिका – असङ्गमरसमित्यसङ्गत्वं परमात्मन उक्तम् । तद्वाजसनेयके स्वप्नादिद्रष्टुः प्रतीयते । 'स वा एष, एतस्मिन्सम्प्रसादेरत्वा चरित्वा दृष्ट्वैव पुण्यं च पापं प्रतिन्यायं प्रतियोन्यां द्रवति स्वप्नायैव स यत्तत्र किञ्चित्पश्यत्यन्वागतस्तेन भवत्यसङ्गो ह्ययं पुरुषः' इति । तस्य च विष्णोरन्यत्वेऽन्यस्यासङ्गत्वप्रसङ्गादवश्यनिर्णेयत्वम् ।

'ಅಸಂಗಮರಸಮ್' ಎಂಬ ಶ್ರುತಿಯಿಂದ ಪರಮಾತ್ಮನಿಗೆ ಅಸಂಗತ್ವವನ್ನು ಹೇಳಲಾಗಿದೆ. ಇದೇ ಅಸಂಗತ್ವವು ಬೃಹದಾರಣ್ಯಕೋಪನಿಷತ್ತಿನಲ್ಲಿ ಸ್ವಪ್ನದ್ರಷ್ಟೃವಿಗೆ ಹೇಳಲಾಗಿದೆ - 'ಸವಾ ಏತಸ್ಮಿನ್ ಸಂಪ್ರಸಾದೇರತ್ವಾ ಚರಿತ್ವಾ ದೃಷ್ಟೈವ ಪುಣ್ಯಂ ಚ ಪಾಪಂ ಪ್ರತಿನ್ಯಾಯಂ ಪ್ರತಿಯೋನ್ಯಾಂ ದ್ರವತಿ ಸ್ವಪ್ನಾಯೈವ ಸ ಯತ್ತತ್ರ ಕಿಂಚಿತ್ ಪಶ್ಯತ್ಯನನ್ವಾಗತಸ್ತೇನ ಭವತ್ಯಸಂಗೋ ಹ್ಯಯಂ ಪುರುಷಃ'. ಪರಮಾತ್ಮನು ಸ್ವಪ್ನಾವಸ್ಥೆಯಲ್ಲಿ ಸ್ವರಮಣನಾಗಿ ಅಲ್ಲಲ್ಲಿ ಸಂಚಾರ ಮಾಡಿ ಜೀವನು ಮಾಡುವಂತಹ ಪುಣ್ಯ-ಪಾಪಗಳನ್ನು ನೋಡುತ್ತಾ, ಅವನ ಕರ್ಮಾನುಸಾರವಾಗಿ ಉಪಭೋಗಗಳನ್ನು ಕೊಡುವುದಕ್ಕೋಸ್ಕರ ಶರೀರಗಳಲ್ಲಿ ಸ್ವಪ್ನಾವಸ್ಥೆಗಾಗಿ ಕಂಠಸ್ಥಾನಕ್ಕೆ ಬರುತ್ತಾನೆ. ಮುಂದೆ ಅದೇ ಪರಮಾತ್ಮನು ಸ್ವಪ್ನಾವಸ್ಥೆಯಲ್ಲಿ ಯಾವ ಪದಾರ್ಥಗಳನ್ನೆಲ್ಲಾ ನೋಡುತ್ತಾನೋ, ಅದರ ಫಲದಿಂದ ಲಿಪ್ತನಾಗುವುದಿಲ್ಲ. ಏಕೆಂದರೆ, ಅವನಿಗೆ ಯಾವುದೇ ಲೇಪಗಳು ಇರುವುದಿಲ್ಲ'. ಹೀಗೆ ಸ್ವಪ್ನದ್ರಷ್ಟೃವಿಗೆ ಅಸಂಗತ್ವವನ್ನು ಶ್ರುತಿಯು ಹೇಳುತ್ತಿದೆ.

ಸ್ವಪ್ನದ್ರಷ್ಟೃತ್ವವು ವಿಷ್ಣುವಿನಲ್ಲೋ? ಜೀವನಲ್ಲೋ ?

तत्वप्रकाशिका – तत्स्वप्नादिद्रष्टृत्वं विषयः । विष्णोर्जीवस्य वेति सन्देहः । उक्तसाधारण्यं सन्देहबीजमिति भावः ।

ಇಂತಹ ಸ್ವಪ್ನದ್ರಷ್ಟೃತ್ವವು ವಿಷ್ಣುವಿಗಿಂತ ಭಿನ್ನನಾದವನಲ್ಲಿ ಬರುವುದಾದರೆ ಅಸಂಗತ್ವವೂ ಸಹ ಬೇರೆಯವರಲ್ಲೇ ಬರಬೇಕಾಗುತ್ತದೆ. ಆದ್ದರಿಂದ ಸ್ವಪ್ನದ್ರಷ್ಟೃವು ಯಾರೆಂದು ಅವಶ್ಯವಾಗಿ ನಿರ್ಣಯ ಮಾಡಲೇಬೇಕು. ಈ ಅಧಿಕರಣಕ್ಕೆ ಅಂತಹ ಸ್ವಪ್ನಾದಿದ್ರಷ್ಟೃತ್ವವೇ ವಿಷಯವಾಗಿದೆ. ಈ ಧರ್ಮವು ವಿಷ್ಣುವಿನಲ್ಲಿ ಬರುತ್ತದೋ, ಅಥವಾ ಜೀವನಲ್ಲಿ ಬರುತ್ತದೋ? ಎಂಬುದೇ ಸಂಶಯ. ಹಿಂದೆ ಹೇಳಿದಂತೆ ಉಭಯಸಾಧಾರಣ್ಯವೇ ಸಂಶಯಬೀಜವಾಗಿದೆ.

ಯುಕ್ತಿಬದ್ಧವಾದ ಪೂರ್ವಪಕ್ಷ

तत्वप्रकाशिका – सयुक्तिकं पूर्वपक्षयति ।। स चेति ।। स्वप्नादिद्रष्टृत्वं जीवस्यैव भवेत् । प्रसिद्धत्वात् ।

ಯುಕ್ತಿಬದ್ಧವಾದ ಪೂರ್ವಪಕ್ಷವನ್ನು 'ಸ ಚ' ಇತ್ಯಾದಿ ಭಾಷ್ಯದಿಂದ ತೋರಿಸುತ್ತಿದ್ದಾರೆ. ಸ್ವಪ್ನಾದಿದ್ರಷ್ಟೃತ್ವವು ಜೀವನ ಧರ್ಮವೇ ಆಗಿದೆ. ಈ ವಿಷಯದಲ್ಲಿ ಲೋಕಪ್ರಸಿದ್ಧಿಯೇ ಕಾರಣ.

ಅಸಂಗತ್ವವು ಜೀವನಲ್ಲೂ ಇದೆ

ತತ್ವಪ್ರಕಾಶಿಕಾ – ನ ಚಾಸಙ್ಗತ್ವಲಿಙ್ಗಾದೀಶಸ್ಯೇತಿ ವಾಚ್ಯಮ್ । ಜೀವೇಶಯೋರಭೇದೇನ ಜೀವೇऽಪಿ ಚೈತನ್ಯವಿವಕ್ಷಯಾऽಸಙ್ಗತ್ವೋಕ್ತಿಸಮ್ಭವಾತ್ ।

ಶ್ರುತಿಯಲ್ಲಿ 'ಅಸಂಗತ್ವ' ಎಂಬ ಧರ್ಮವನ್ನು ಸ್ವಪ್ನದ್ರಷ್ಟೃವಿಗೆ ಹೇಳಿರುವುದರಿಂದ ಪರಮಾತ್ಮನೇ ಸ್ವಪ್ನಾದಿದ್ರಷ್ಟೃ ಆಗಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಜೀವ ಹಾಗೂ ಪರಮಾತ್ಮನಿಗೆ ಅಭೇದ- ವಿರುವುದರಿಂದ ಜೀವನಿಗೆ ಕೇವಲ ಚೈತನ್ಯವಿವಕ್ಷೆಯಿಂದ ಅಸಂಗತ್ವವನ್ನು ಹೇಳುವುದು ತಪ್ಪಾಗುವುದಿಲ್ಲ.

ಅಭೇದವು ಹೇಗೆ ಸಾಧ್ಯ ?

ತತ್ವಪ್ರಕಾಶಿಕಾ – ನಚ ಮುಖ್ಯತೋऽಸಙ್ಗತ್ವಾದೀಶ್ವರಸ್ಯ ಸ್ವಪ್ನಾದಿದ್ರಷ್ಟೃತ್ವಮ್ । ತಸ್ಯಾಶರೀರತಯಾ ಸ್ವಪ್ನಾದ್ಯವಸ್ಥಾನುಭವಾನುಪಪತ್ತೇಃ ।

ಸ್ವಪ್ನಾದಿದ್ರಷ್ಟೃತ್ವವು ಮುಖ್ಯವಾಗಿ ಜೀವನಲ್ಲಿರುವುದರಿಂದ ಅಸಂಗತ್ವಧರ್ಮವು ಪರಮಾತ್ಮನಲ್ಲಿದ್ದರೂ ಜೀವೇಶ್ವರರಲ್ಲಿ ಭೇದವಿಲ್ಲದ ಕಾರಣ ಜೀವನ ಧರ್ಮ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಪರಮಾತ್ಮನು ಅಶರೀರಿಯಾದ್ದರಿಂದ ಸ್ವಪ್ನಾದ್ಯವಸ್ಥಾನವೇ ಕೂಡುವುದಿಲ್ಲ.

ಈಶನಲ್ಲಿರುವ ಅಸಂಗತ್ವ ಜೀವನಲ್ಲಿ ಬರಬಹುದು

ತತ್ವಪ್ರಕಾಶಿಕಾ – ನಚ ಮನ್ತವ್ಯಂ ಯಥಾ ಸ್ವಪ್ನಾದಿದರ್ಶನಸ್ಯ ಜೀವೇ ಮುಖ್ಯತ್ವೇನಾऽಸಙ್ಗತ್ವಮಭೇದಾಭಿಪ್ರಾಯೇಣ ನೀಯತೇ ತಥಾऽಸಙ್ಗತ್ವಸ್ಯೇಶ್ವರೇ ಮುಖ್ಯತ್ವೇನ ಸ್ವಪ್ನಾದಿದರ್ಶನಸ್ಯಾಪ್ಯಭೇದಾಭಿಪ್ರಾಯೇಣ ತದ್ವತಾಸಙ್ಗತ್ವಸ್ಯ ಜೀವेऽಮುಖ್ಯವೃತ್ತಿವದೀಶ್ವರೇ ಸ್ವಪ್ನಾದಿದ್ರಷ್ಟೃತ್ವಸ್ಯ ವಿಶಿಷ್ಟನಿಷ್ಠಸ್ಯಾಮುಖ್ಯತೋऽಪಿ ವಕ್ತುಮಯೋಗಾತ್ ।

ಸ್ವಪ್ನಾದಿದರ್ಶನವು ಜೀವನಲ್ಲಿ ಮುಖ್ಯವಾಗಿರುವುದರಿಂದ ಅಭೇದ ಅಭಿಪ್ರಾಯದಿಂದ ಅಸಂಗತ್ವವನ್ನು ಹೇಗೆ ಜೀವನಲ್ಲಿ ಹೇಳಲಾಗುತ್ತದೋ, ಅದೇ ರೀತಿಯಾಗಿ ಅಸಂಗತ್ವವೂ ಈಶ್ವರನಲ್ಲಿ ಮುಖ್ಯವಾಗಿರುವುದರಿಂದ ಸ್ವಪ್ನಾದಿದರ್ಶನವನ್ನೂ ಸಹ ಅಭೇದಾಭಿಪ್ರಾಯದಿಂದ

ಈಶ್ವರನಲ್ಲಿ ಒಪ್ಪಬಹುದು. ಆದ್ದರಿಂದ ಶ್ರುತಿಯಲ್ಲಿ ಜೀವನೇ ಪ್ರತಿಪಾದ್ಯನಾಗಿದ್ದಾನೆಂದು ನಿಶ್ಚಯಿಸಲು ಏನು ಕಾರಣ? ಎಂದು ತಿಳಿಯಬಾರದು.

ಚೈತನ್ಯೈಕ್ಯವನ್ನು ವಿವಕ್ಷಿಸಿದಾಗ ಈಶನಲ್ಲಿರುವ ಅಸಂಗತ್ವವನ್ನು ಜೀವನಲ್ಲಿ ಅಮುಖ್ಯವೃತ್ತಿಯಿಂದ ಹೇಳಬಹುದೇ ಹೊರತು, ಜೀವನಲ್ಲಿರುವ ಸ್ವಪ್ನಾದಿದ್ರಷ್ಟೃತ್ವವನ್ನು ಈಶ್ವರನಲ್ಲಿ ಅಮುಖ್ಯವೃತ್ತಿಯಿಂದಲೂ ಸಹ ಹೇಳಲು ಸಾಧ್ಯವಿಲ್ಲ.

ಅನ್ಯಥಾನುಪಪತ್ತಿಯಿಂದ ಅಭೇದವು ಸಿದ್ಧ

तत्वप्रकाशिका – नच जीवेशाभेद एव कुत इति वाच्यम् । विशेषण-द्वयसानाधिकरण्यान्यथानुपपत्त्यैव तत्सिद्धेः ।

ಜೀವೇಶ್ವರರಿಗೆ ಅಭೇದವನ್ನೇ ಏಕೆ ಒಪ್ಪಬೇಕು? ಎಂದು ಪ್ರಶ್ನಿಸಬಾರದು. ಶ್ರುತಿಯಲ್ಲಿ ಅಸಂಗತ್ವ ಹಾಗೂ ಸ್ವಪ್ನಾದಿದ್ರಷ್ಟೃತ್ವ ಎಂಬೆರಡು ಧರ್ಮಗಳಿಗೆ ಸಾಮಾನಾಧಿಕರಣ್ಯವನ್ನು ಹೇಳಲಾಗಿದೆ. ಇದರ ಅನ್ಯಥಾನುಪಪತ್ತಿಯಿಂದ ಅಭೇದವನ್ನು ಒಪ್ಪುವುದು ಅನಿವಾರ್ಯ.

ಅಕ್ಷರಾಧಿಕರಣದ ಸಮನ್ವಯವೂ ಹೋಯಿತು

तत्वप्रकाशिका – अतो जीव एवायं स्वप्नादिद्रष्टेति न प्रागुक्तासङ्गत्वं विष्णोरेवेति भावः ।

ಆದ್ದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ ಸ್ವಪ್ನಾದಿದ್ರಷ್ಟೃತ್ವವು ಜೀವನ ಧರ್ಮವೇ ಆಗಿದೆ. ಆದ್ದರಿಂದ ಅಕ್ಷರಾಧಿಕರಣದಲ್ಲಿ ಹೇಳಿದ ಅಸಂಗತ್ವವೂ ಕೂಡ ಜೀವನ ಧರ್ಮವೇ ಆಗುತ್ತದೆ. ಇಷ್ಟು ಪೂರ್ವಪಕ್ಷ.

ಈಶ್ವರನೇ ಅಸಂಗನೆಂದು ಸಿದ್ಧಾಂತ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। स्वप्नादिद्रष्टा परमात्मैवासङ्गत्वलिङ्गात् । यतोऽसङ्गः पर एव न जीवः ।

ಸಿದ್ಧಾಂತಸ್ಥಾಪನೆಗೋಸ್ಕರ ಸೂತ್ರವನ್ನು ಪಠಿಸಿ, ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅತಃ' ಇತ್ಯಾದಿ ಭಾಷ್ಯದಿಂದ. ಸ್ವಪ್ನಾದಿದ್ರಷ್ಟೃವು ಪರಮಾತ್ಮನೇ ಆಗಿದ್ದಾನೆ. 'ಅಸಂಗತ್ವ' ಎಂಬ ಅಸಾಧಾರಣ ಲಿಂಗವು ಶ್ರುತವಾದ್ದರಿಂದ. ಯಾವ ಕಾರಣದಿಂದ ಪರಮಾತ್ಮನು ಅಸಂಗನಾಗಿದ್ದಾನೋ, ಆ ಕಾರಣದಿಂದಲೇ ಜೀವನು ಸ್ವಪ್ನಾದಿದ್ರಷ್ಟೃವಾಗಲು ಸಾಧ್ಯವಿಲ್ಲ.

ಎಲ್ಲ ಶ್ರುತಿಗಳು ಭೇದವನ್ನೇ ಹೇಳುತ್ತವೆ

तत्वप्रकाशिका – न चेश्वराभेदेन जीवेप्यसङ्गत्वोक्तिः सम्भवतीति वाच्यम्। सुषुप्त्युत्क्रान्तिप्रकरणयोर्भेदेनैव जीवेशयोरुक्तत्वेन तदभेदस्यैवाभावादिति भावः ।

ಈಶ್ವರನಿಂದ ಅಭೇದವಿರುವ ಪ್ರಯುಕ್ತ ಜೀವನಲ್ಲಿಯೂ ಅಸಂಗತ್ವಧರ್ಮವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಸುಷುಪ್ತಿಪ್ರಕರಣ ಹಾಗೂ ಉತ್ಕ್ರಾಂತಿ-ಪ್ರಕರಣಗಳಲ್ಲಿ ಜೀವೇಶ್ವರರಿಗೆ ಭೇದವೇ ಹೇಳಲ್ಪಟ್ಟಿದೆ. ಹೀಗಿರುವಾಗ ಜೀವೇಶ್ವರರಿಗೆ ಅಭೇದವನ್ನು ಹೇಳಲು ಬರುವುದಿಲ್ಲ. ಇಷ್ಟು ಸೂತ್ರದ ಅಭಿಪ್ರಾಯ.

ಭೇದವು ವ್ಯಾವಹಾರಿಕವಲ್ಲ

तत्वप्रकाशिका – न चायं भेदो व्यावहारिक एवेति युक्तम् । सुषुप्तिप्रकरणस्य मोक्षपरतायाः अपि भावात् । यद्वक्ष्यति 'स्वाप्ययसम्पत्योरन्यतरापेक्षमाविष्कृतं हि' इति । अनन्वागतं पुण्येनानन्वागतं पापेनेत्याद्युपपत्तेश्च।

ಶ್ರುತಿಯಲ್ಲಿ ಹೇಳಲ್ಪಟ್ಟ ಭೇದವು ವ್ಯಾವಹಾರಿಕವಾಗಿರಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಶ್ರುತಿಯಲ್ಲಿ ಸುಷುಪ್ತಿಪ್ರಕರಣವು ಮೋಕ್ಷಪರವೂ ಆಗಬಹುದು. ಏಕೆಂದರೆ, ಸೂತ್ರಕಾರರೇ ಮುಂದೆ 'ಸ್ವಾಪ್ಯಯಸಂಪತ್ಯೋರನ್ಯತರಾಪೇಕ್ಷಮಾವಿಷ್ಕೃತಂ ಹಿ' ಎಂಬ ಸೂತ್ರದಲ್ಲಿ ಮತ್ತು 'ಅನನ್ವಾಗತಂ ಪುಣ್ಯೇನ, ಅನನ್ವಾಗತಂ ಪಾಪೇನ' ಪುಣ್ಯದಿಂದ ಹಾಗೂ ಪಾಪದಿಂದ ಲೇಪವು ಇರುವುದಿಲ್ಲ. ಇದು ಕೂಡ ಒಪ್ಪಬೇಕೆಂದರೆ ಸುಷುಪ್ತಿಪ್ರಕರಣವು ಮೋಕ್ಷಪರವಾಗಿದೆ ಎಂದು ಒಪ್ಪಲೇಬೇಕಾಗುತ್ತದೆ.

ವ್ಯಾವಹಾರಿಕ ಪದವು ಪಾರಿಭಾಷಿಕವಾಯಿತು

तत्वप्रकाशिका – मोक्षे च सतो भेदस्य व्यावहारिकता नाम परिभाषामात्रं स्यात् । ननु कथमशरीरस्येश्वरस्य स्वप्नादिदर्शनं युक्तं स्यादित्यत आह – स्वप्नादीति ।।

ಅದರಂತೆ, ಮೋಕ್ಷದಲ್ಲಿಯೂ ಒಂದು ವೇಳೆ ವ್ಯಾವಹಾರಿಕಭೇದವನ್ನು ಒಪ್ಪಿದರೆ, ಅದ್ವೈತಿಗಳು ಹೇಳುತ್ತಿರುವ ವ್ಯಾವಹಾರಿಕಸತ್ಯವು ಕೇವಲ ಪಾರಿಭಾಷಿಕವಾಗುತ್ತದೆ. ಏನೂ ಅರ್ಥವ್ಯತ್ಯಾಸವನ್ನು ಹೇಳಲು ಸಾಧ್ಯವಿಲ್ಲ.

ಶರೀರವಿಲ್ಲದ ಪರಮಾತ್ಮನಿಗೆ ಸ್ವಪ್ನಾದಿದರ್ಶನವನ್ನು ಹೇಳುವುದು ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆಗೆ, 'ಸ್ವಪ್ನಾದಿ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಸ್ವಪ್ನದರ್ಶನವು ಪರಮಾತ್ಮನಲ್ಲೇ ಮುಖ್ಯ

तत्वप्रकाशिका – न विष्णोः स्वप्नादिदर्शनायोगः किं नाम तस्यैव तन्मुख्यं जीवादपि । स्वाप्नपदार्थानां जीवगतावस्थायाश्च सत्यत्वात् परमात्मनश्च सर्वज्ञत्वेन तद्विशेषदर्शनोपपत्तिरिति भावः ।

ಸ್ವಪ್ನಾದಿದರ್ಶನವು ವಿಷ್ಣುವಿಗೆ ಕೂಡುವುದಿಲ್ಲವೆಂದು ಪ್ರಶ್ನಿಸಬಾರದು. ಏಕೆಂದರೆ, ಜೀವನಲ್ಲಿ ಸ್ವಪ್ನಾದಿದರ್ಶನಧರ್ಮವು ಹೇಗೆ ಇದೆಯೋ, ಅದಕ್ಕಿಂತ ಮುಖ್ಯವಾಗಿ ಪರಮಾತ್ಮನಲ್ಲೇ ಇರುತ್ತದೆ. ಏಕೆಂದರೆ, ಸ್ವಪ್ನದಲ್ಲಿ ತೋರುವಂತಹ ಪದಾರ್ಥಗಳು ಜೀವನಿಗೆ ಬರುವಂತಹ ಸ್ವಪ್ನಾವಸ್ಥೆಯು ಸತ್ಯವಾಗಿರುವುದರಿಂದ ಪರಮಾತ್ಮನು ಸರ್ವಜ್ಞನಾದ್ದರಿಂದ, ಇವೆಲ್ಲದರ ವಿಶೇಷದರ್ಶನವು ಪರಮಾತ್ಮನಲ್ಲಿ ಉಪಪನ್ನವಾಗುತ್ತದೆಂದು ಅಭಿಪ್ರಾಯ.

ಅಭೇದವಿಷಯದಲ್ಲಿ ಅನ್ಯಥಾನುಪಪತ್ತಿಯು ಕೂಡದು

तत्वप्रकाशिका – एवं स्वप्नादिदर्शनासङ्गत्वयोः परमात्मनि मुख्यत्वोक्त्या तदन्यथानुपपत्त्याऽभेदः इति परास्तम् ।

ಹೀಗೆ 'ಸ್ವಪ್ನಾದಿದರ್ಶನ' ಮತ್ತು 'ಅಸಂಗತ್ವ' ಎಂಬೆರಡು ಧರ್ಮಗಳನ್ನು ಪರಮಾತ್ಮನಲ್ಲಿ ಪ್ರತಿಪಾದನೆ ಮಾಡಿದ್ದರಿಂದ, ಇದರ ಅನ್ಯಥಾನುಪಪತ್ತಿಯಿಂದ ಅಭೇದವು ನಿರಸ್ತವಾಯಿತು. ಅಂದರೆ, ಜೀವ ಮತ್ತು ಪರಮಾತ್ಮರಿಗೆ ಭೇದವನ್ನು ಒಪ್ಪದೆ, ಇವೆರಡು ಧರ್ಮಗಳು ಪರಮಾತ್ಮನಲ್ಲಿ ಮುಖ್ಯವಾಗಿ ಕೂಡುವುದಿಲ್ಲ. ಆದ್ದರಿಂದ ಅನ್ಯಥಾನುಪಪತ್ತಿಯಿಂದ ಅಭೇದವನ್ನು ಸಮರ್ಥಿಸಿದ್ದು ನಿರಾಕೃತವಾಯಿತು.

ಅಸಂಗನಾದ ವಿಷ್ಣುವೇ ಸ್ವಪ್ನದ್ರಷ್ಟೃವೆಂದು ಸಿದ್ಧವಾಯಿತು

तत्वप्रकाशिका – तत्र प्रतीतोभयविधलिङ्गान्तरोपपत्तिस्तु तद्भाष्यादव-गन्तव्या । अतो विष्णुरेव स्वप्नादिद्रष्टाऽसङ्गश्चेति सिद्धम् ।। ४२ ।।

।। इति श्रीमज्जयतीर्थभिक्षुविरचितायां तत्वप्रकाशिकायाम् सुषुप्त्यधिकरणम्।।

ಇನ್ನು ಸುಷುಪ್ತಿಪ್ರಕರಣದಲ್ಲಿ ಉಭಯವಿಧವಾದ ಎರಡು ಲಿಂಗಗಳನ್ನು ಹೇಳಿದ್ದನ್ನು ಹೇಗೆ ಉಪಪಾದಿಸಬೇಕೆಂಬುದನ್ನು ಆ ಶ್ರುತಿಯ ಭಾಷ್ಯದಿಂದಲೇ ತಿಳಿದುಕೊಳ್ಳಬೇಕು. ಆದ್ದರಿಂದ ವಿಷ್ಣುವೇ ಸ್ವಪ್ನಾದಿದ್ರಷ್ಟೃವಾಗಿದ್ದಾನೆ, ಅಸಂಗನೂ ಆಗಿದ್ದಾನೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ಸುಷುಪ್ತ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಸ್ವಪ್ನ ದ್ರಷ್ಟೃತ್ವವು ಉಭಯಸಾಧಾರಣಲಿಂಗ

ಭಾವದೀಪಃ – ।। सुषुप्त्युत्क्रान्त्योर्भेदेन ।।

ಭಾಷ್ಯಸೂಚಿತಂ ಸಾಧಾರಣ್ಯಬೀಜಮಾಹ – **असङ्गत्वेति ।।** ಅಲೇಪತ್ವರೂಪಾಸಙ್ಗತ್ವ-ಲಿಙ್ಗೇನೇತ್ಯರ್ಥಃ । ಸಙ್ಗತ್ಯರ್ಥತಯಾ ಭಾಷ್ಯಂ ವ್ಯಾಚಷ್ಟೇ – **असङ्गमिति ।।** ಅಕ್ಷರನಯೇ 'ಅನ್ಯಭಾವ' ಇತಿ ಸೂತ್ರ ಇತ್ಯರ್ಥಃ । ತಚ್ಚೇತ್ಯಾದಿ ವ್ಯಾಚಷ್ಟೇ – **तद्वाजसनेयक इति ।।** ಷಷ್ಠ ಇತ್ಯರ್ಥಃ । ಸ ಯತ್ತತ್ರೇತಿ ತಚ್ಛಬ್ದಪರಾಮೃಷ್ಟಂ ದರ್ಶಯಿತುಂ ಪೂರ್ವಶೇಷಮಾಹ – **स वा इति ।।** ಸಮ್ಯಕ್ ಪ್ರಸೀದತ್ಯಸ್ಯಾಮಿತಿ ಸಮ್ಪ್ರಸಾದಃ ಸುಷಿಃ । ತಸ್ಮಿನ್ ರತ್ವಾ ರಮಣಂ ಕೃತ್ವಾ ಪ್ರತಿನ್ಯಾಯಮ್ ಅವಸ್ಥಾನ್ತರಂ ಪ್ರಾಪ್ತವ್ಯಮಿತಿ ನ್ಯಾಯಮನುಸೃತ್ಯ ಪ್ರತಿಯೋನ್ಯಾಪದವ್ಯಾ ತೇನ ಸ್ವಾಪ್ನಪದಾರ್ಥ-ದರ್ಶನೇನಾನನ್ವಾಗತೋ ನಿರ್ಲೇಪಃ ಲೇಪೇ ಸರ್ವಪ್ರಮಾಣಾಭಾವಂ ವಕ್ತುಮ್ 'ಅಸಙ್ಗೋ ಹ್ಯಯಮ್' ಇತಿ ವಾಕ್ಯಶೇಷಃ ।

'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಎಂಬುದಾಗಿ ಸುಷುಪ್ತ್ಯಧಿಕರಣವು ಪ್ರಾರಂಭವಾಗುತ್ತಿದೆ. ಭಾಷ್ಯದಲ್ಲಿ 'ಸ್ವಪ್ನಾದಿದ್ರಷ್ಟೃತ್ವ' ಎಂಬ ಲಿಂಗವು ಉಭಯಸಾಧಾರಣವಾಗಿದೆ ಎಂದು ಸೂಚಿಸಿದ್ದಾರೆ. ಅದಕ್ಕೆ ಕಾರಣವನ್ನು 'ಅಸಂಗತ್ವಲಿಂಗೇನ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. 'ಅಸಂಗತ್ವಲಿಂಗೇನ' ಎಂದರೆ 'ಅಲೇಪತ್ವ' ಎಂಬ ಅಸಂಗತ್ವಲಿಂಗದಿಂದ ಎಂದರ್ಥ. ಸಂಗತಿಪರವಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅಸಂಗಂ' ಇತ್ಯಾದಿಯಾಗಿ. ಅಕ್ಷರಾಧಿಕರಣದ 'ಅನ್ಯಭಾವ' ಎಂಬ ಸೂತ್ರದಲ್ಲಿ ಪರಮಾತ್ಮನನ್ನು ಅಸಂಗನೆಂದು ಹೇಳಲಾಗಿದೆ ಎಂದರ್ಥ. 'ನಚ' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ, 'ತದ್ವಾಜಸನೇಯಕೇ' ಇತ್ಯಾದಿ ಟೀಕೆಯಿಂದ. ಬೃಹದಾರಣ್ಯಕೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ ಈ ವಾಕ್ಯವಿದೆ ಎಂದರ್ಥ. 'ಸ ಯತ್ತತ್ರ' ಎಂಬಲ್ಲಿರುವ 'ತತ್' ಶಬ್ದದಿಂದ ಪರಾಮರ್ಶಿತವಾದದ್ದನ್ನು ತೋರಿಸಲು ವಾಕ್ಯದ ಪೂರ್ವಭಾಗವನ್ನು ಉಲ್ಲೇಖ ಮಾಡುತ್ತಿದ್ದಾರೆ, 'ಸ ವಾ ಏಷಃ' ಇತ್ಯಾದಿಯಾಗಿ. 'ಸಮ್ಯಕ್ ಪ್ರಸೀದತಿ ಅಸ್ಯಾಮ್' ಎಂಬ ವ್ಯುತ್ಪತ್ತಿಯಿಂದ 'ಸಂಪ್ರಸಾದ' ಶಬ್ದಕ್ಕೆ

'ಸುಷುಪ್ತಾವಸ್ಥೆ' ಎಂದರ್ಥ. ಅಂತಹ ಸುಷುಪ್ತಾವಸ್ಥೆಯಲ್ಲಿ ರತ್ವಾ = ಕ್ರೀಡಿಸಿ, ಪ್ರತಿನ್ಯಾಯಂ = ಬೇರೆ ಅವಸ್ಥೆಯನ್ನು ಹೊಂದಬೇಕೆಂಬ ನ್ಯಾಯವನ್ನು ಅನುಸರಿಸಿ, ಸ್ವಾಪ್ನಪದಾರ್ಥದ ದರ್ಶನ ಮಾಡಿದರೂ ನಿರ್ಲಿಪ್ತನಾಗಿಯೇ ಇರುತ್ತಾನೆ ಎಂದು ಅಭಿಪ್ರಾಯ. ಅವನಿಗೆ ಲೇಪವಾಗುತ್ತದೆಂಬ ವಿಷಯದಲ್ಲಿ ಯಾವುದೇ ಪ್ರಮಾಣಗಳಿರುವುದಿಲ್ಲ ಎಂಬುದನ್ನು ಸಮರ್ಥಿಸಲು 'ಅಸಂಗೋ ಹ್ಯಯಮ್' ಎಂಬ ವಾಕ್ಯಶೇಷವನ್ನು ನೀಡಲಾಗಿದೆ.

'ಸ ಚ' ಎಂಬುದರ ವ್ಯಾಖ್ಯಾನ

भावदीपः – स चेत्यादेस्तात्पर्यम् – तस्य चेति ।। प्रसिद्ध्या जीवत्व इत्यर्थः।

'ಸ ಚ' ಎಂಬುದರ ತಾತ್ಪರ್ಯವನ್ನು ಟೀಕೆಯಲ್ಲಿ 'ತಸ್ಯ ಚ' ಎಂಬುದರಿಂದ ಹೇಳುತ್ತಿದ್ದಾರೆ. ಪ್ರಸಿದ್ಧಿಬಲದಿಂದ ಜೀವನೇ ಸ್ವಪ್ನದ್ರಷ್ಟಾವಾದಲ್ಲಿ ಎಂದರ್ಥ.

'ಉಕ್ತಂ' ಇತ್ಯಾದಿ ಭಾಷ್ಯದ ತಾತ್ಪರ್ಯ

भावदीपः – उक्तमित्यन्तभाष्यस्य तात्पर्यम् – अन्यस्येति ।। नच, 'नहि सङ्गोऽस्ति वह्निवायुविवस्वताम्' इति न्यायेनानेकेषामसङ्गत्वं तथाच न पूर्वाक्षेप इति शङ्क्यम् । अनन्यापेक्षस्यानेकेषामयोगादिति तात्पर्यात् तस्यैव श्रुतौ प्रतीतेरिति ।

'ಉಕ್ತಂ' ಎಂಬಲ್ಲಿಯ ತನಕ ಇರುವ ಭಾಷ್ಯದ ತಾತ್ಪರ್ಯವನ್ನು 'ಅನ್ಯಸ್ಯ ಚ' ಎಂಬುದರಿಂದ ಸಮರ್ಥಿಸುತ್ತಿದ್ದಾರೆ. 'ನಹಿ ಸಂಗೋऽಸ್ತಿ ವಹ್ನಿವಾಯುವಿವಸ್ವತಾಮ್' 'ವಹ್ನಿ, ವಾಯು, ಸೂರ್ಯ ಮೊದಲಾದವರಿಗೂ ಕೂಡ ಯಾವುದೇ ಪದಾರ್ಥಗಳ ಸಂಗ ಇರುವುದಿಲ್ಲ' ಎಂಬ ನ್ಯಾಯದಂತೆ ಬೇರೆಯವರಲ್ಲಿಯೂ ಕೂಡ ಅಸಂಗತ್ವವು ಬರುತ್ತದೆ. ಆದ್ದರಿಂದ, ಪೂರ್ವಾಕ್ಷೇಪವನ್ನು ಹೇಗೆ ಮಾಡುತ್ತೀರಿ? ಎಂದು ಶಂಕಿಸಬಾರದು. ಸ್ವತಂತ್ರವಾದ ಅಸಂಗತ್ವವೇ ಇಲ್ಲಿ ವಿವಕ್ಷಿತವಾಗಿದೆ. ವಹ್ನಿ ಮೊದಲಾದವರಲ್ಲಿರುವ ಅಸಂಗತ್ವವು ಅಸ್ವತಂತ್ರವಾದದ್ದೇ, ಹೊರತು ಸ್ವತಂತ್ರವಾದದ್ದಲ್ಲ. ಹೀಗೆ ಶ್ರುತಿಯ ತಾತ್ಪರ್ಯವಿದೆ.

ಪೂರ್ವಪಕ್ಷದ ಪ್ರತಿಜ್ಞೆ

ಭಾವದೀಪಃ – पूर्वपक्षादिपरत्वेनापि व्याकुर्वत्स च जीव इति प्रतिज्ञार्थमाह – स्वप्नेति ।। स्वप्नादिद्रष्टृत्वं चेति सिद्धान्तभाष्यानुरोधाद् अत्रापि तथैव व्याख्या कृतेति बोध्यम् ।

ಭಾಷ್ಯವನ್ನು ಪೂರ್ವಪಕ್ಷಾದಿಪರವಾಗಿಯೂ ಕೂಡ ವ್ಯಾಖ್ಯಾನ ಮಾಡುವವರಾಗಿ, ಜೀವನೇ ಸ್ವಪ್ನಾದಿದ್ರಷ್ಟೃವಾಗಿದ್ದಾನೆ ಎಂಬ ಪ್ರತಿಜ್ಞೆಯನ್ನು ಮಾಡುತ್ತಿದ್ದಾರೆ, 'ಸ್ವಪ್ನ' ಇತ್ಯಾದಿಯಾಗಿ. 'ಸ್ವಪ್ನಾದಿದ್ರಷ್ಟೃತ್ವಂ ಚ ಸರ್ವಜ್ಞತ್ವಾತ್ ತಸ್ಯೈವ ಯುಜ್ಯತೇ' ಎಂಬ ಸಿದ್ಧಾಂತಭಾಷ್ಯಕ್ಕೆ ಅನುಸಾರಿಯಾಗಿ ಇಲ್ಲಿಯೂ ಕೂಡ ವ್ಯಾಖ್ಯಾನ ಮಾಡಬೇಕು.

ನ್ಯಾಯವಿವರಣದ ಆಧಾರದಲ್ಲಿ ಭಾಷ್ಯದ ವ್ಯಾಖ್ಯಾನ

ಭಾವದೀಪಃ – ननु यथा पूर्वत्र नामरूपनिर्वोढृत्वरूपब्रह्मलिङ्गाद् वै नामेति प्राप्तलोकप्रसिद्धिबाधस्तथाऽत्राप्यस्त्विति भावेन शङ्कते – नचेति।। जीवेश्वराभेदे ईश्वरोक्तावप्यर्थाज्जीव एवोच्यत इति न्यायविवरणांशोक्तमाह – जीवेशयोरिति ।।

ಹಿಂದೆ, ನಾಮರೂಪನಿರ್ವಾಹಕತ್ವವೆಂಬ ಬ್ರಹ್ಮನ ಲಿಂಗದಿಂದ 'ವೈ ನಾಮ' ಎಂಬ ನಿಪಾತದಿಂದ ಪ್ರಾಪ್ತವಾದ ಲೋಕಪ್ರಸಿದ್ಧಿಯನ್ನು ಬಾಧಿಸಲಾಯಿತು. ಅದರಂತೆ, ಇಲ್ಲಿಯೂ ಕೂಡ ಲೋಕಪ್ರಸಿದ್ಧಿಯನ್ನು ಬಾಧಿಸಬಹುದಲ್ಲವೇ? ಎಂದು ಆಶಂಕಿಸುತ್ತಿದ್ದಾರೆ, 'ನಚ' ಇತ್ಯಾದಿ ಗ್ರಂಥದಿಂದ. ಜೀವ ಹಾಗೂ ಈಶ್ವರರಿಗೆ ಅಭೇದವನ್ನು ಒಪ್ಪಿದಾಗ ಈಶ್ವರನಲ್ಲಿರುವ ಅಸಂಗತ್ವವು ಜೀವನಲ್ಲಿಯೂ ಕೂಡ ಬರುತ್ತದೆಂಬ ನ್ಯಾಯವಿವರಣದ ಮಾತನ್ನು 'ಜೀವೇಶಯೋಃ' ಎಂಬ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಜೀವನು ಹೇಗೆ ಅಸಂಗನು

ಭಾವದೀಪಃ – विशिष्टस्य सङ्गित्वादुक्तम् – चैतन्येति ।। ननु विनैवाभेदमीशलिङ्गेन जीवलिङ्गमीशे नीयतामिति शङ्कते – नचेति ।।

तस्येशेऽनवकाशतामाह – तस्येति ।। सर्वत्र प्रसिद्धेत्यत्र 'अशरीरः प्रज्ञात्मा' इत्युक्तेरिति भावः ।

ವಿಶಿಷ್ಟನಾದ ಚೇತನನು ಸಂಗವುಳ್ಳವನಾದ್ದರಿಂದ 'ಚೈತನ್ಯವಿವಕ್ಷಯಾ' ಎಂದು ಹೇಳಿದ್ದಾರೆ. ಅಭೇದವನ್ನೊಪ್ಪದೆ, ಈಶ್ವರನ ಲಿಂಗದಿಂದ ಜೀವನ ಲಿಂಗವನ್ನೇ ಈಶ್ವರನಲ್ಲಿ ಹೇಳಬಹುದಲ್ಲವೇ? ಎಂದು 'ನಚ' ಇತ್ಯಾದಿ ವಾಕ್ಯದಿಂದ ಆಶಂಕಿಸುತ್ತಿದ್ದಾರೆ. ಜೀವನ ಲಿಂಗವು ನಿರವಕಾಶವಾಗಿದೆ ಎಂದು 'ತಸ್ಯ' ಇತ್ಯಾದಿ ವಾಕ್ಯದಿಂದ ಪ್ರತಿಪಾದನೆ ಮಾಡಿದ್ದಾರೆ. 'ಸರ್ವತ್ರ ಪ್ರಸಿದ್ಧೋಪದೇಶಾತ್' ಎಂಬ ಸೂತ್ರದಲ್ಲಿ 'ಅಶರೀರಃ ಪ್ರಜ್ಞಾತ್ಮಾ' ಎಂದು ಹೇಳಿದ್ದರಿಂದ, ಈಶ್ವರನಿಗೆ ಶರೀರವಿಲ್ಲವೆಂದು ಇದರ ಅಭಿಪ್ರಾಯ.

ಜೀವನಿಗೆ ಬ್ರಹ್ಮನಿಂದ ಐಕ್ಯವಿದೆಯೇ ?

भावदीपः – ईश्वरोक्तावप्यर्थाज्जीव एवोच्यत इत्यंशतात्पर्यं व्यक्तीकर्तुमाह – नच मन्तव्यमिति ।। चैतन्येति ।। जीवस्य येन चैतन्यात्मना ब्रह्मैक्यं तदभिप्रायेणेत्यर्थः ।।

'ಈಶ್ವರೋಕ್ತಾವಪಿ ಅರ್ಥಾತ್ ಜೀವ ಏವ ಉಚ್ಯತೇ' ಎಂಬ ನ್ಯಾಯವಿವರಣದ ತಾತ್ಪರ್ಯವನ್ನು 'ನಚ ಮಂತವ್ಯಂ' ಎಂಬುದರಿಂದ ಸ್ಪಷ್ಟಪಡಿಸುತ್ತಿದ್ದಾರೆ. 'ಚೈತನ್ಯೈಕ್ಯಾತ್ ಪ್ರಾಯೇಣ' ಎಂದರೆ ಜೀವನಿಗೆ ಯಾವ ಚೈತನ್ಯಸ್ವರೂಪದಿಂದ ಬ್ರಹ್ಮನ ಐಕ್ಯವನ್ನು ಒಪ್ಪಲಾಗಿದೆಯೋ, ತದಭಿಪ್ರಾಯದಿಂದ ಎಂದರ್ಥ.

ಎರಡು ವಿಶೇಷಣಗಳೆಂದರೆ ?

भावदीपः – विशेषणेति ।। उक्तदिशा निरवकाशासङ्गत्वस्वप्नादिद्रष्टृरूप-विशेषणेत्यर्थः । एतच्चासङ्गत्वं प्रसिद्धेरिति भाष्योक्त्या ज्ञायत इति भावः।।

ವಿಶೇಷಣದ್ವಯವೆಂದರೆ, ನಿರವಕಾಶವಾದ ಅಸಂಗತ್ವ ಹಾಗೂ ಸ್ವಪ್ನಾದಿದ್ರಷ್ಟೃತ್ವ ಎಂಬೆರಡು ವಿಶೇಷಣಗಳಿಂದ ಎಂದರ್ಥ. ಈ ಅಸಂಗತ್ವವಾದರೂ, 'ಪ್ರಸಿದ್ಧೇಃ' ಇತ್ಯಾದಿ ಭಾಷ್ಯದಿಂದ ತಿಳಿಯುತ್ತದೆ.

ಜೀವಲಿಂಗವು ಈಶನಲ್ಲಿ ಅನುಪಪನ್ನ

ಭಾವದೀಪಃ – अत इति ।। असङ्गत्वरूपब्रह्मलिङ्गस्य जीवे तदभेदेनोपपत्त्या जीवलिङ्गस्य चेशेऽनुपपत्त्या च निर्बाधनिरवकाशप्रसिद्धिभावादित्यर्थः । उक्तमित्यन्तस्य भावोक्तिः – न प्रागिति ।।

'ಅತಃ' ಎಂದರೆ 'ಅಸಂಗತ್ವ' ಎಂಬ ಬ್ರಹ್ಮಲಿಂಗಕ್ಕೆ ಜೀವನಲ್ಲಿ ಅಭೇದವನ್ನು ಒಪ್ಪುವ ಮೂಲಕ ಮತ್ತು ಜೀವಲಿಂಗವು ಈಶನಲ್ಲಿ ಅನುಪಪನ್ನವಾದ್ದರಿಂದ ನಿರ್ಬಾಧಿತವಾದ ನಿರವಕಾಶ ಪ್ರಸಿದ್ಧಿಯಿರುವುದರಿಂದ ಎಂದರ್ಥ. 'ಉಕ್ತಮ್' ಎಂಬಲ್ಲಿಯ ತನಕ ಇರುವ ಭಾಷ್ಯದ ಅಭಿಪ್ರಾಯವನ್ನು 'ನ ಪ್ರಾಕ್' ಎಂದು ಹೇಳಿದ್ದಾರೆ.

ಪ್ರತಿಜ್ಞಾಂಶದ ವ್ಯಾಖ್ಯಾನ

ಭಾವದೀಪಃ – अभेदेन जीवेऽप्युपपन्नोक्त्या विष्णावनिरासादेवेत्युक्तम् । स्वप्नादिद्रष्टृत्वं च तस्यैवेति प्रतिज्ञांशं व्याचष्टे – स्वप्नादिद्रष्टेति ।। असङ्गत्वादि चेश्वरस्यैवेति न्यायविवरणानुरोधेन हेतुमाह – असङ्गत्वेति ।।

ಅಭೇದವನ್ನು ಒಪ್ಪಿ ಜೀವನಲ್ಲಿಯೂ ಕೂಡ ಅಸಂಗತ್ವವು ಬರುತ್ತದೆಂದು ಹೇಳಿ ವಿಷ್ಣುವಿನಲ್ಲಿ ಅಸಂಗತ್ವವನ್ನು ನಿರಾಕರಣೆ ಮಾಡದ್ದರಿಂದ ಟೀಕೆಯಲ್ಲಿ 'ಏವ' ಎಂದು ಹೇಳಿದ್ದಾರೆ. ಸ್ವಪ್ನಾದಿದ್ರಷ್ಟೃತ್ವವು ಪರಮಾತ್ಮನಲ್ಲೇ ಉಪಪನ್ನವಾಗುತ್ತದೆ ಎಂಬ ಪ್ರತಿಜ್ಞಾಂಶವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ, 'ಸ್ವಪ್ನಾದಿದ್ರಷ್ಟಾ' ಇತ್ಯಾದಿಯಾಗಿ. 'ಅಸಂಗತ್ವಾದಿ ಚ ಈಶ್ವರಸ್ಯೈವ' ಎಂಬ ನ್ಯಾಯವಿವರಣಕ್ಕೆ ಅನುಸಾರಿಯಾಗಿ ಹೇತುವನ್ನು ಹೇಳುತ್ತಿದ್ದಾರೆ 'ಅಸಂಗತ್ವ' ಎಂಬ ಟೀಕೆಯಿಂದ.

'ಅಸಂಗೋ ಹ್ಯಯಮ್' ಎಂಬ ಶ್ರುತಿಯ ಬಗ್ಗೆ

ಭಾವದೀಪಃ – अनन्वागतस्तेनेति वाक्योक्तादित्यर्थः । तावता कुतो विष्णुरित्यतो न जीव इत्यादि व्याचष्टे – **यत इति ।। 'असङ्गो ह्ययम्' इति हेतूकृतासङ्ग इत्यर्थः ।** अनन्वागतस्तेन भवतीत्यत्रासङ्गो ह्ययं पुरुष

इत्यसङ्गत्वं हेतुः । प्रसिद्धमेव च हेतुत्वयोग्यम् असङ्गमस्पर्शमित्यादि श्रुतिषु च ब्रह्मण्येव प्रसिद्धमिति भावः ।

'ಅನನ್ವಾಗತಸ್ತೇನ ಭವತಿ' ಎಂಬ ವಾಕ್ಯದಲ್ಲಿ ಅಸಂಗತ್ವವನ್ನು ಹೇಳಿದ್ದಾರೆಂದು ತಿಳಿಯಬೇಕು. ಇದರಿಂದ, ವಿಷ್ಣುವೇ ಸ್ವಪ್ನಾದಿದ್ರಷ್ಟವಾಗಿದ್ದಾನೆ. ಹೊರತು ಜೀವನಲ್ಲವೆಂದು ಸ್ಪಷ್ಟವಾಗುತ್ತದೆಂದು 'ಯತಃ' ಇತ್ಯಾದಿ ಟೀಕೆಯಿಂದ ಸ್ಪಷ್ಟಪಡಿಸುತ್ತಿದ್ದಾರೆ. 'ಅಸಂಗೋ ಹ್ಯಯಮ್' ಎಂಬಲ್ಲಿ ಅಸಂಗತ್ವವನ್ನು ಹೇತುವನ್ನಾಗಿ ಹೇಳಿದ್ದಾರೆ. 'ಅನನ್ವಾಗತಸ್ತೇನ ಭವತಿ' ಎಂಬಲ್ಲಿ 'ಅಸಂಗೋ ಹ್ಯಯಂ ಪುರುಷಃ' ಎಂಬಲ್ಲಿ ಹೇಳಿರುವ ಅಸಂಗತ್ವವೇ ಹೇತುವಾಗಿದೆ. ಪ್ರಸಿದ್ಧವಾದದ್ದಷ್ಟೇ ಹೇತುವಾಗಲು ಸಾಧ್ಯ. 'ಅಸಂಗಮಸ್ಪರ್ಶಂ' ಇತ್ಯಾದಿ ಶ್ರುತಿಗಳಲ್ಲಾದರೋ, ಅಸಂಗತ್ವವು ಪರಮಾತ್ಮನ ಧರ್ಮವಾಗಿದೆ ಎಂದೇ ಪ್ರಸಿದ್ಧವಾಗಿದೆ ಎಂದು ತಿಳಿಯಬೇಕು.

ಚತುರ್ಥಪಾದದಲ್ಲಿ ಹೆಚ್ಚಿನ ವಿಚಾರ

भावदीपः – सुषुप्त्युत्क्रान्त्योर्जीवेशयोर्भेदोक्तेरिति न्यायविवरणानुरोधेन प्राज्ञेनेत्यादि भाष्यं व्याचष्टे – नचेति ।। सुषुप्तिपदलब्धयुक्तिं वक्तुमाह – नचायमिति ।। यद्वक्ष्यतीति ।। चतुर्थ इत्यर्थः ।

ಸುಷುಪ್ತಿ ಹಾಗೂ ಉತ್ಕ್ರಾಂತಿ ಪ್ರಕರಣಗಳು ಜೀವ ಹಾಗೂ ಈಶ್ವರರಿಗೆ ಭೇದವನ್ನೇ ಹೇಳುತ್ತಿವೆ. ಹೀಗೆ ನ್ಯಾಯವಿವರಣದಲ್ಲಿ ಹೇಳಿದ್ದನ್ನು ಅನುಸರಿಸಿ, 'ಪ್ರಾಜ್ಞೇನ' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ, 'ನಚ' ಇತ್ಯಾದಿ ವಾಕ್ಯದಿಂದ. ಸುಷುಪ್ತಿ ಪದದಿಂದ ತಿಳಿಯಲ್ಪಟ್ಟ ಯುಕ್ತಿಯನ್ನು 'ನಚಾಯಂ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. 'ವಕ್ಷ್ಯತಿ' ಎಂದರೆ ಚತುರ್ಥಾಧ್ಯಾಯದಲ್ಲಿ ಎಂದರ್ಥ.

'ಸ್ವಾಪ್ಯಯಸಂಪತ್ಯೋಃ' ಇತ್ಯಾದಿ ಸೂತ್ರದ ಅರ್ಥ

भावदीपः – तीर्णो हि तदा सर्वान् शोकान् हृदयस्य भवतीति वाक्यं न मुक्तविषयम्, किन्तु स्वर्गस्थविषयं स्वर्गे लोके न भयं किञ्चनास्तीत्यादेरित्यतः स्वाप्यये सूत्रम् । स्वाप्ययः सुप्तिः सम्पत्तिर्मुक्तिः।

अन्यतरशब्दोऽत्र उभयपरः । तीर्णो हीति वाक्यं सुप्तिमुक्त्युभयपरं न स्वर्गिविषयम् । कुतः? हि यस्माद् आविष्कृतं तदुभयविषयत्वमस्य वाक्यस्य विस्पष्टमत इति सूत्रार्थः । तत् किञ्चिद् व्यनक्ति – अनन्वागतमिति।।

'स्वाप्ययसंपत्तोरन्यतरापेक्षमाविष्कृतं हि' (४-४-०६).

ಸೂತ್ರಾರ್ಥ ಹೀಗಿದೆ - ಜಡದೇಹಪ್ರವೇಶವು ಮುಕ್ತನಿಗೆ ಇರುವುದಿಲ್ಲ. 'ತೀರ್ಣೋ ಹಿ ತದಾ ಸರ್ವಾನ್ ಶೋಕಾನ್ ಹೃದಯಸ್ಯ ಭವತಿ' ಎಂಬ ಶ್ರುತಿವಾಕ್ಯದಿಂದ ಇದು ಸ್ಪಷ್ಟವಾಗುತ್ತದೆ. ಆದರೆ ಈ ಶ್ರುತಿಯು ಸ್ವರ್ಗಾದಿ ಲೋಕದಲ್ಲಿರುವವರನ್ನು ಕುರಿತು ಹೇಳುತ್ತಿದೆ ಎಂದು ಏಕೆ ಒಪ್ಪಬಾರದು? ಹಾಗೆ ಹೇಳಿದರೆ, ಬಾಧಕವೇನೂ ಇರುವುದಿಲ್ಲ. 'ಸ್ವರ್ಗೇ ಲೋಕೇ ನ ಭಯಂ ಕಿಂಚನಾಸ್ತಿ' ಎಂಬ ಶ್ರುತಿಯಿಂದ ಸ್ವರ್ಗದಲ್ಲಿಯೂ ಕೂಡ ದುಃಖವಿಲ್ಲವೆಂದು ಸಿದ್ಧವಾಗಿದೆ. ಆದ್ದರಿಂದ, ಮುಕ್ತರಿಗೆ ದುಃಖವಿಲ್ಲ ಎಂಬ ವಿಷಯದಲ್ಲಿ, ಇದು ಹೇಗೆ ಪ್ರಮಾಣವಾಗುತ್ತದೆ? ಹೀಗೆ ಆಕ್ಷೇಪ ಮಾಡಬಾರದು. 'ತೀರ್ಣೋ ಹಿ ತದಾ' ಎಂಬ ವಾಕ್ಯವು ಸ್ವರ್ಗದಲ್ಲಿರುವ ಜೀವರನ್ನು ಕುರಿತು ಹೊರಟಿಲ್ಲ. ಸುಷುಪ್ತವಸ್ಥೆಯಲ್ಲಿರುವವರನ್ನು ಹಾಗೂ ಮುಕ್ತರನ್ನು ಕುರಿತು ಹೊರಟಿದೆ. 'ಅತ್ರ ಪಿತಾऽಪಿತಾ ಭವತ್ಯನನ್ವಾಗತಂ ಪುಣ್ಯೇನಾನನ್ವಾಗತಂ ಪಾಪೇನ' ಎಂಬ ಶ್ರುತಿಯಲ್ಲಿ ಅಪಿತೃತ್ವ, ಪುಣ್ಯಪಾಪಾದ್ಯಸಂಗತ್ವ ಮೊದಲಾದ ಮುಕ್ತರ ಹಾಗೂ ಸುಪ್ತರ ಅಸಾಧಾರಣ ಧರ್ಮಗಳು ಉಕ್ತವಾಗಿದೆ. ಶಾಖಾದಿಗಳನ್ನು ಭೋಗಿಸುವ ಸ್ವರ್ಗದಲ್ಲಿರುವವರಿಗೆ ಈ ಧರ್ಮಗಳು ಅಸಂಭಾವಿತವಾಗಿವೆ. ಸೂತ್ರಾರ್ಥ ಹೀಗಿದೆ - 'ತೀರ್ಣೋ ಹಿ' ಎಂಬ ವಾಕ್ಯವು ಸ್ವಾಪ್ಯಯ = ಸುಷುಪ್ತಿ, ಸಂಪತ್ತಿ = ಮುಕ್ತಿ, ಅನ್ಯತರಾಪೇಕ್ಷಮ್ = ಉಭಯಪರವಾಗಿದೆ. ಹಿ = ಏಕೆಂದರೆ, ಆವಿಷ್ಕೃತಮ್ = ಸುಪ್ತಿ ಹಾಗೂ ಮುಕ್ತಿಪರವೆಂದು ಅತ್ಯಂತ ಸ್ಪಷ್ಟವಾಗಿದೆ ಎಂದು ಸೂತ್ರಾರ್ಥ. ಇದನ್ನು ಸ್ವಲ್ಪವೇ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅನನ್ವಾಗತಂ' ಇತ್ಯಾದಿ ಟೀಕೆಯಿಂದ.

ಇನ್ನೂ ಸ್ಪಷ್ಟ ಸೂತ್ರಾರ್ಥ ತಂತ್ರದೀಪಿಕೆಯಲ್ಲಿ

भावदीपः – अन्यथा अत्र पिताऽपिता भवति अनन्वागतं पुण्येनेत्यादिनोक्ता पितृत्वपुण्यपापाद्यसङ्गत्वलिङ्गानां स्वर्गिणः श्राद्धादिभोक्तुरनुपपत्तेः सुप्तिप्रकरणस्य मुक्तिपरत्वमुपेयमित्यर्थः । व्यक्तमुक्तमस्य सूत्रस्योभय-

परत्वाद्यर्थकत्वं बृहदारण्यकभाष्ये । कर्मनिर्णयटीकायां च । विवृतं तन्त्रदीपिकायामस्माभिश्चतुर्थे ।

ಹೀಗೆ ಮುಕ್ತವಿಷಯಕವೆಂದು ಒಪ್ಪದಿದ್ದರೆ, 'ಪಿತಾऽಪಿತಾ ಭವತಿ ಅನನ್ವಾಗತಂ ಪುಣ್ಯೇನ' ಇತ್ಯಾದಿಯಾಗಿ ಹೇಳಲ್ಪಟ್ಟ ಅಪಿತೃತ್ವ, ಪುಣ್ಯಪಾಪಾದ್ಯಸಂಗತ್ವ ಮೊದಲಾದ ಲಿಂಗಗಳು ಯುಕ್ತವಾಗುವುದಿಲ್ಲ. ಏಕೆಂದರೆ, ಸ್ವರ್ಗದಲ್ಲಿರುವವರಿಗೆ ಶ್ರಾದ್ಧಾದಿಭೋಕ್ತೃತ್ವವೇ ಇರುವುದರಿಂದ ಅಪಿತೃತ್ವವು ಹೇಗೆ ಯುಕ್ತವಾಗುತ್ತದೆ? ಆದ್ದರಿಂದ, ಸುಪ್ತಿಪ್ರಕರಣವು ಮುಕ್ತವಿಷಯಕವೆಂದೇ ಹೇಳಬೇಕು. ಶ್ರುತಿಗೆ ಹೀಗೆ ವ್ಯಾಖ್ಯಾನ ಮಾಡಬೇಕೆಂದು ಬೃಹದಾರಣ್ಯಕ ಭಾಷ್ಯದಲ್ಲಿ ಹಾಗೂ ಕರ್ಮನಿರ್ಣಯ ಟೀಕೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಸೂತ್ರಾರ್ಥವನ್ನು ತಂತ್ರದೀಪಿಕೆಯಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ.

'ಜೀವಸ್ಯ ತದಯುಕ್ತೇ' ಇತ್ಯಾದಿ ಟೀಕೆಯು ನ್ಯಾಯವಿವರಣ ಪರ

भावदीपः – अस्तु तावता व्यावहारिको भेद इत्यत्र किमागतमित्यत आह – **मोक्षे चेति** ।। प्रतिज्ञापरत्वेन व्याख्यातमपीदानीं स्वप्नादीत्यशेषभाष्यं प्रागुक्तशङ्कानिवर्तकतयाऽवतार्य जीवस्य तदयुक्तेरीशे सावकाशत्वाच्चेति न्यायविवरणविवरणपरतया व्याचष्टे – **नन्वित्यादिना** ।।

ಇದರಿಂದೇನಾಯಿತು? ವ್ಯಾವಹಾರಿಕಭೇದವನ್ನಷ್ಟೇ ಶ್ರುತಿಯು ಹೇಳುತ್ತಿದೆಯಲ್ಲವೇ? ಎಂಬ ಪ್ರಶ್ನೆಗೆ 'ಮೋಕ್ಷೇ ಚ' ಎಂಬುದರಿಂದ ಉತ್ತರಿಸಿದ್ದಾರೆ. 'ಸ್ವಪ್ನಾದಿತ್ಯಾದಿ' ಇತ್ಯಾದಿ ಭಾಷ್ಯವನ್ನು ಪ್ರತಿಜ್ಞಾಪರವಾಗಿ ವ್ಯಾಖ್ಯಾನ ಮಾಡಿ, ಈಗ ಹಿಂದೆ ಮಾಡಿದ ಆಶಂಕೆಯನ್ನು ನಿರಾಕರಣೆ ಮಾಡುತ್ತಿದೆ ಎಂದು ಹೇಳುತ್ತಾ, ಜೀವನಲ್ಲಿ ಸ್ವಪ್ನಾದಿದ್ರಷ್ಟೃತ್ವವು ಬರುವುದಿಲ್ಲ, 'ಜೀವಸ್ಯ ತದಯುಕ್ತೇ ಹಿ ಈಶೇ ಸಾವಕಾಶತ್ವಾಚ್ಚ' ಎಂಬ ನ್ಯಾಯವಿವರಣವನ್ನು ವಿವರಿಸುವ ಪರವಾಗಿಯೂ ಕೂಡ ವ್ಯಾಖ್ಯಾನ ಮಾಡುತ್ತಿದ್ದಾರೆ, 'ನನು' ಇತ್ಯಾದಿ ಗ್ರಂಥದಿಂದ.

ಸಂಧ್ಯಧಿಕರಣದಲ್ಲಿ ಸ್ವಪ್ನ ಸತ್ಯತ್ವ ವಿಚಾರ

भावदीपः –'सन्ध्ये सृष्टिराह हि' इत्यादिना तृतीयस्य द्वितीयपादे वक्ष्यमाणत्वात् सत्यत्वस्येति भावः । एतल्लिङ्गद्वयानुपपत्तिपरिहारेऽपि

लिङ्गान्तरसामानाधिकरण्यानुपत्त्याऽभेदशङ्कायां कथं तदुपपत्तिरित्यत आह – तत्र प्रतीतेति ।। सम्प्रसादे रत्वेत्यादिना प्रागुदाहृतवाक्ये प्रतीतजीवलिङ्गान्तराणाम् अनन्वागतं पुण्येनेतीदानीमुदाहृतवाक्यप्रतीत-पुण्यपापलेपरूपब्रह्मलिङ्गान्तराणामुपपत्तिस्तु 'शुभाशुभं तु दृष्ट्वैव स्वप्ने जागरितेऽपि च । असंसृष्टः सदा दुःखैश्चरतीशः पुनःपुनः' ।। इत्यादिवाजसनेयभाष्यादवसेयेत्यर्थः । फलोक्त्योपसहंरति – अत इति ।। परमात्मनि मुख्यत्वादित्यर्थः ।। ४२ ।।

।। इति श्रीराघवेन्द्रयतिकृते भावदीपे सुषुप्त्यधिकरणम् ।।

'संध्ये सृष्टिराह हि' ಎಂಬ ಮೂರನೇ ಅಧ್ಯಾಯದ ಎರಡನೆಯ ಪಾದದಲ್ಲಿ ಸ್ವಾಪ್ನಪದಾರ್ಥಗಳನ್ನು ಸತ್ಯವೆಂದು ಸಮರ್ಥನೆ ಮಾಡುತ್ತಾರೆ. 'ಸ್ವಪ್ನಾದಿದ್ರಷ್ಟೃತ್ವ' ಮತ್ತು 'ಅಸಂಗತ್ವ' ಎಂಬ ಲಿಂಗದ್ವಯಗಳ ಅನುಪಪತ್ತಿಯನ್ನು ಪರಿಹಾರ ಮಾಡಿದರೂ ಇತರ ಲಿಂಗಗಳ ಸಾಮಾನಾಧಿಕರಣ್ಯಾನ್ಯಥಾನುಪಪತ್ತಿಯಿಂದ ಅಭೇದವನ್ನು ಆಶಂಕಿಸಿದರೆ, ಅದನ್ನೂ ಕೂಡ ಪರಿಹಾರ ಮಾಡುತ್ತಿದ್ದಾರೆ, 'ತತ್ರ ಪ್ರತೀತ' ಇತ್ಯಾದಿ ವಾಕ್ಯದಿಂದ. 'ಸಂಪ್ರಸಾದೇ ರತ್ವಾ' ಇತ್ಯಾದಿಯಾಗಿ ಹಿಂದೆ ಉದಾಹರಿಸಿದ ವಾಕ್ಯದಲ್ಲಿ, ಯಾವ ಜೀವನ ಲಿಂಗಗಳು ಶ್ರುತವಾಗಿವೆಯೋ, 'ಅನನ್ವಾಗತಂ ಪುಣ್ಯೇನ' ಎಂಬ ವಾಕ್ಯದಲ್ಲಿ ಉದಾಹರಿಸಲ್ಪಟ್ಟ ಪುಣ್ಯ-ಪಾಪಗಳ ಸಂಪರ್ಕವಿಲ್ಲವೆಂಬ ಯಾವ ಬ್ರಹ್ಮನ ಲಿಂಗವು ಶ್ರುತವಾಗಿದೆಯೋ, ಇವನ್ನು 'ಶುಭಾಶುಭಂ ತು ದೃಷ್ಟ್ವೈವ ಸ್ವಪ್ನೇ ಜಾಗರಿತೇऽಪಿ ಚ। ಅಸಂಸೃಷ್ಟಾಃ ಸದಾ ದುಃಖೈ ಚರತೀಷ ಪುನಃಪುನಃ ॥' ಇತ್ಯಾದಿಯಾದ ಬೃಹದಾರಣ್ಯಕ ಭಾಷ್ಯದ ಆಧಾರದಿಂದ ಕೂಡಿಸಬೇಕು. ಫಲವನ್ನು ಹೇಳುವ ಮೂಲಕ ಅಧಿಕರಣವನ್ನು ಉಪಸಂಹಾರ ಮಾಡುತ್ತಿದ್ದಾರೆ, 'ಅತಃ' ಇತ್ಯಾದಿಯಾಗಿ. ಪರಮಾತ್ಮನಲ್ಲಿ ಮುಖ್ಯವಾಗಿರುವುದರಿಂದ ಎಂದು ಇದರ ಅರ್ಥ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಸುಷುಪ್ತ್ಯಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ಸುಷುಪ್ತ್ಯಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

सुषुप्त्यधिकरणम् (१।३।१३)

'ಸುಷುಪ್ತ್ಯುತ್ಕ್ರಾನ್ತ್ಯೋರ್ಭೇದೇನ' ಎಂಬ ಸೂತ್ರದ ಅರ್ಥ

।। सुषुप्त्युत्क्रान्त्योर्भेदेन ।। १-३-४३ ।।

अत्र स्वप्नादिद्रष्टृत्वलिङ्गं समन्वीयते । व्यपदेशादित्यस्ति । स्वप्नादिस्रष्टेति योग्यतयाऽन्वेति । ''स यत्तत्र किञ्चित्पश्यत्यनन्वागतस्तेन भवति'' इत्युक्तस्वप्नादिद्रष्टा तत्तु ब्रह्मैव । न जीवः । कुतः ? ''अनन्वागतस्तेन भवत्यसङ्गो ह्ययं पुरूषः'' इत्यसङ्गत्वलिङ्गात् । न चाभेदेन लिङ्गोपपत्तिः । ''प्राज्ञेनात्मना सम्परिष्वक्तः'' इति ''प्राज्ञेनात्मनाऽन्वारूढः'' इति च सुषुप्त्युत्क्रान्तिप्रकरणयोः भेदेन जीवेशयोर्व्यपदेशादिति परम्परया योज्यम् ।। १३ ।।

ಈ ಅಧಿಕರಣದಲ್ಲಿ 'ಸ್ವಪ್ನಾದಿದ್ರಷ್ಟೃತ್ವ' ಎಂಬ ಲಿಂಗವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಹಿಂದಿನ ಸೂತ್ರದಿಂದ 'ವ್ಯಪದೇಶಾತ್' ಎಂಬ ಪದವು ಅನುವೃತ್ತವಾಗುತ್ತದೆ. 'ಸ್ವಪ್ನಾದಿದ್ರಷ್ಟಾ' ಎಂಬ ಪದವು ಅನ್ವಯಯೋಗ್ಯವಾದ್ದರಿಂದ ಅನ್ವಯ ಪಡೆದಿದೆ.

'ಸ ಯತ್ತತ್ರ ಕಿಂಚಿತ್ ಪಶ್ಯತ್ಯನನ್ವಾಗತಸ್ತೇನ ಭವತಿ' ಎಂಬ ಉಪನಿಷತ್ತಿನಲ್ಲಿ ಸ್ವಪ್ನಾದಿದ್ರಷ್ಟವು ಬ್ರಹ್ಮನೇ ಆಗಿದ್ದಾನೆ. ಹೊರತು ಜೀವನಲ್ಲ. ಏಕೆಂದರೆ, 'ಅನನ್ವಾಗತಸ್ತೇನ ಭವತ್ಯಸಂಗೋ ಹ್ಯಯಂ ಪುರುಷಃ' ಎಂಬುದಾಗಿ ಅಸಂಗತ್ವ ಲಿಂಗವನ್ನು ಹೇಳಿರುತ್ತಾರೆ. ಜೀವಬ್ರಹ್ಮರಿಗೆ ಅಭೇದವಿರುವುದರಿಂದ ಅಸಂಗತ್ವ ಲಿಂಗವು ಜೀವನಲ್ಲೂ ಕೂಡ ಯುಕ್ತವೇ ಆಗುತ್ತದಲ್ಲವೆ? ಎಂದು ಪ್ರಶ್ನಿಸಬಾರದು. 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' ಎಂಬುದಾಗಿ ಮತ್ತು 'ಪ್ರಾಜ್ಞೇನಾತ್ಮನಾऽನ್ವಾರೂಢಃ' ಎಂಬುದಾಗಿಯೂ ಸುಷುಪ್ತಿಪ್ರಕರಣ ಹಾಗೂ ಉತ್ಕ್ರಾಂತಿಪ್ರಕರಣಗಳಲ್ಲಿ ಜೀವಬ್ರಹ್ಮರ ಭೇದವನ್ನು ಹೇಳಿರುವುದರಿಂದ ಎಂಬುದಾಗಿ ಪರಂಪರೆಯಿಂದ ಯೋಜನೆ ಮಾಡಿಕೊಳ್ಳಬೇಕು.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಸುಷುಪ್ತ್ಯಧಿಕರಣವು ಮುಗಿಯಿತು ॥

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಬ್ರಾಹ್ಮಣಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ,
ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಬ್ರಾಹ್ಮಣಾಧಿಕರಣ

ಬ್ರಹ್ಮಸೂತ್ರ

॥ अथ ब्राह्मणाधिकरणम् ॥

'ಪತ್ಯಾದಿ ಶಬ್ದೇಭ್ಯಃ ಎಂಬ ಸೂತ್ರ ವ್ಯಾಖ್ಯಾನ

ಬ್ರಹ್ಮಸೂತ್ರಮ್ – पत्यादि शब्देभ्यः ॥ ೪೩ ॥

ಸೂತ್ರಾರ್ಥ – ''ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಲ್ಪಟ್ಟ 'ಬ್ರಾಹ್ಮಣ' ಶಬ್ದಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆ ಹೊರತು ವಿರಿಂಚನಲ್ಲ. ಏಕೆಂದರೆ 'ಸರ್ವಸ್ಯ ವಶೀ' ಇತ್ಯಾದಿ ಶ್ರುತಿಯು ಸರ್ವಾಧಿಪತಿತ್ವಮೊದಲಾದ ವಿಷ್ಣುವಿನ ಅಸಾಧಾರಣ ಧರ್ಮಗಳನ್ನೇ ಹೇಳುತ್ತಿದೆ.

ಬೃಹದಾರಣ್ಯಕದಲ್ಲಿ ಹೇಳಲ್ಪಟ್ಟ ಬ್ರಾಹ್ಮಣ ಶಬ್ದಪ್ರತಿಪಾದ್ಯನು ಮಹಾವಿಷ್ಣುವೇ ಆಗಿದ್ದಾನೆ ಹೊರತು ಚತುರ್ಮುಖನಲ್ಲ. ಏಕೆಂದರೆ 'ಪತ್ಯಾದಿಶಬ್ದೇಭ್ಯಃ' = 'ಸರ್ವಾಧಿಪತಿ' ಇತ್ಯಾದಿಯಾಗಿ ಸರ್ವಾಧಿಪತಿತ್ವ ಮೊದಲಾದ ಧರ್ಮಗಳನ್ನು ಹೇಳುವ ಶ್ರುತಿಗಳು ಇರುವುದರಿಂದ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಬ್ರಾಹ್ಮಣಾಧಿಕರಣವು ಸಮಾಪ್ತವಾಯಿತು ॥

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಚತುರ್ಮುಖನೇ ಬ್ರಾಹ್ಮಣನೆಂದು ಪೂರ್ವಪಕ್ಷ

ब्रह्मसूत्रभाष्यम् – 'एष नित्यो महिमा ब्राह्मणस्य' (बृ.उ. ६-४-२२) इति ब्राह्मणस्यापि नित्यमहिमा प्रतीयते । स च ब्राह्मणः 'स वा एष महानज आत्मा' (बृ.उ.६-४-२४) इत्यजशब्दाद्विरिञ्च इति प्राप्तम् । देवानां च विद्याकर्मणोः पदप्राप्तिः सूचिता तदुपर्यपीति ।

ಅನುವಾದ - 'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಸಾರ್ವಕಾಲಿಕವಾದ ಮಹಿಮೆಯನ್ನು ಬ್ರಾಹ್ಮಣನಿಗೆ ಹೇಳಲಾಗಿದೆ. ಈ ಬ್ರಾಹ್ಮಣನಾದರೂ 'ಸ ವಾ ಏಷ ಮಹಾನಜ ಆತ್ಮಾ' ಎಂಬ ಅದೇ ಬೃಹದಾರಣ್ಯಕೋಪನಿಷತ್ತಿನ ಮಾತಿನಿಂದ ಅಜಶಬ್ದವಿರುವ ಕಾರಣ ಚತುರ್ಮುಖನೆಂದು ತಿಳಿಯುತ್ತದೆ. ಹಿಂದೆ ದೇವತಾಧಿಕರಣದಲ್ಲಿ ದೇವತೆಗಳಿಗೆ ಮಾತ್ರ ವಿದ್ಯೆ ಹಾಗೂ ಕರ್ಮಗಳಿಂದ ಪದವಿಯು ಪ್ರಾಪ್ತವಾಗುತ್ತದೆಂದು ಹೇಳಲ್ಪಟ್ಟಿದೆ, ಹೊರತು ಬ್ರಹ್ಮನಿಗಲ್ಲ. ಆದ್ದರಿಂದ, ಚತುರ್ಮುಖನು ನಿತ್ಯಮಹಿಮನಾಗಬಹುದು ಎಂದು ಪೂರ್ವಪಕ್ಷ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ 'ಬ್ರಾಹ್ಮಣ' ಎಂಬ ನಾಮಾತ್ಮಕಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಶ್ರುತ್ಯಾದಿಸಂಗತಿ, ವಿಷಯಗಳನ್ನು ಮೊದಲು ಸೂಚನೆ ಮಾಡುತ್ತಿದ್ದಾರೆ.

ಏಷಃ = ಪ್ರಸಿದ್ಧವಾದ, ನಿತ್ಯಃ = ಅಪ್ರತಿಹತವಾದ, ಮಹಿಮಾ = ಮಹಿಮೆಯು, ಬ್ರಾಹ್ಮಣಸ್ಯ = ಬ್ರಾಹ್ಮಣನಿಗೆ. ಇತಿ = ಹೀಗೆ, ಬ್ರಾಹ್ಮಣಸ್ಯಾಪಿ = ಬ್ರಾಹ್ಮಣನಿಗೂ, ನಿತ್ಯಮಹಿಮಾ = ನಿತ್ಯವಾದ ಮಹಿಮೆಯು ಹೇಳಿದ್ದು, ಪ್ರತೀಯತೇ = ಕಾಣಿಸುತ್ತಿದೆ, ಸ ಚ ಬ್ರಾಹ್ಮಣಃ = ಅಂತಹ ಬ್ರಾಹ್ಮಣನು, ಸ ವಾ ಏಷ ಮಹಾನ್ = ಈ ಮಹಾಮಹಿಮನು, ಅಜಃ = ಚತುರ್ಮುಖನಾದ, ಆತ್ಮಾ = ಆತ್ಮನು, ಇತಿ = ಹೀಗೆ, ಅಜಶಬ್ದಾತ್ = ಅಜಶಬ್ದದ ಬಲದಿಂದ, ವಿರಿಂಚಃ = ಚತುರ್ಮುಖಬ್ರಹ್ಮನೇ ಬ್ರಾಹ್ಮಣಶಬ್ದಪ್ರತಿಪಾದ್ಯನು, ಇತಿ = ಹೀಗೆ,

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಬ್ರಾಹ್ಮಣಾಧಿಕರಣ

ಬ್ರಹ್ಮಸೂತ್ರ

॥ अथ ब्राह्मणाधिकरणम् ॥

'ಪತ್ಯಾದಿ ಶಬ್ದೇಭ್ಯಃ ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – पत्यादि शब्देभ्यः ॥ ४३ ॥

ಸೂತ್ರಾರ್ಥ - ''ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಲ್ಪಟ್ಟ 'ಬ್ರಾಹ್ಮಣ' ಶಬ್ದಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆ ಹೊರತು ವಿರಿಂಚನಲ್ಲ. ಏಕೆಂದರೆ 'ಸರ್ವಸ್ಯ ವಶೀ' ಇತ್ಯಾದಿ ಶ್ರುತಿಯು ಸರ್ವಾಧಿಪತಿತ್ವಮೊದಲಾದ ವಿಷ್ಣುವಿನ ಅಸಾಧಾರಣ ಧರ್ಮಗಳನ್ನೇ ಹೇಳುತ್ತಿದೆ.

ಬೃಹದಾರಣ್ಯಕದಲ್ಲಿ ಹೇಳಲ್ಪಟ್ಟ ಬ್ರಾಹ್ಮಣ ಶಬ್ದಪ್ರತಿಪಾದ್ಯನು ಮಹಾವಿಷ್ಣುವೇ ಆಗಿದ್ದಾನೆ ಹೊರತು ಚತುರ್ಮುಖನಲ್ಲ. ಏಕೆಂದರೆ 'ಪತ್ಯಾದಿಶಬ್ದೇಭ್ಯಃ' = 'ಸರ್ವಾಧಿಪತಿ.' ಇತ್ಯಾದಿಯಾಗಿ ಸರ್ವಾಧಿಪತ್ಯ ಮೊದಲಾದ ಧರ್ಮಗಳನ್ನು ಹೇಳುವ ಶ್ರುತಿಗಳು ಇರುವುದರಿಂದ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಬ್ರಾಹ್ಮಣಾಧಿಕರಣವು ಸಮಾಪ್ತವಾಯಿತು ॥

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಚತುರ್ಮುಖನೇ ಬ್ರಾಹ್ಮಣನೆಂದು ಪೂರ್ವಪಕ್ಷ

ब्रह्मसूत्रभाष्यम् – 'एष नित्यो महिमा ब्राह्मणस्य' (बृ.उ. ६-४-२२) इति ब्राह्मणस्यापि नित्यमहिमा प्रतीयते । स च ब्राह्मणः 'स वा एष महानज आत्मा' (बृ.उ.६-४-२४) इत्यजशब्दाद्विरिञ्च इति प्राप्तम् । देवानां च विद्याकर्मणोः पदप्राप्तिः सूचिता तदुपर्यपीति ।

ಅನುವಾದ - 'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಸಾರ್ವಕಾಲಿಕವಾದ ಮಹಿಮೆಯನ್ನು ಬ್ರಾಹ್ಮಣನಿಗೆ ಹೇಳಲಾಗಿದೆ. ಈ ಬ್ರಾಹ್ಮಣನಾದರೂ 'ಸ ವಾ ಏಷ ಮಹಾನಜ ಆತ್ಮಾ' ಎಂಬ ಅದೇ ಬೃಹದಾರಣ್ಯಕೋಪನಿಷತ್ತಿನ ಮಾತಿನಿಂದ ಅಜಶಬ್ದವಿರುವ ಕಾರಣ ಚತುರ್ಮುಖನೆಂದು ತಿಳಿಯುತ್ತದೆ. ಹಿಂದೆ ದೇವತಾಧಿಕರಣದಲ್ಲಿ ದೇವತೆಗಳಿಗೆ ಮಾತ್ರ ವಿದ್ಯೆ ಹಾಗೂ ಕರ್ಮಗಳಿಂದ ಪದವಿಯು ಪ್ರಾಪ್ತವಾಗುತ್ತದೆಂದು ಹೇಳಲ್ಪಟ್ಟಿದೆ, ಹೊರತು ಬ್ರಹ್ಮನಿಗಲ್ಲ. ಆದ್ದರಿಂದ, ಚತುರ್ಮುಖನು ನಿತ್ಯಮಹಿಮನಾಗಬಹುದು ಎಂದು ಪೂರ್ವಪಕ್ಷ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ 'ಬ್ರಾಹ್ಮಣ' ಎಂಬ ನಾಮಾತ್ಮಕಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಶ್ರುತ್ಯಾದಿಸಂಗತಿ, ವಿಷಯಗಳನ್ನು ಮೊದಲು ಸೂಚನೆ ಮಾಡುತ್ತಿದ್ದಾರೆ.

ಏಷಃ = ಪ್ರಸಿದ್ಧವಾದ, ನಿತ್ಯಃ = ಅಪ್ರತಿಹತವಾದ, ಮಹಿಮಾ = ಮಹಿಮೆಯು, ಬ್ರಾಹ್ಮಣಸ್ಯ = ಬ್ರಾಹ್ಮಣನಿಗೆ. ಇತಿ = ಹೀಗೆ, ಬ್ರಾಹ್ಮಣಸ್ಯಾಪಿ = ಬ್ರಾಹ್ಮಣನಿಗೂ, ನಿತ್ಯಮಹಿಮಾ = ನಿತ್ಯವಾದ ಮಹಿಮೆಯು ಹೇಳಿದ್ದು, ಪ್ರತೀಯತೇ = ಕಾಣಿಸುತ್ತಿದೆ, ಸ ಚ ಬ್ರಾಹ್ಮಣಃ = ಅಂತಹ ಬ್ರಾಹ್ಮಣನು, ಸ ವಾ ಏಷ ಮಹಾನ್ = ಈ ಮಹಾಮಹಿಮನು, ಅಜಃ = ಚತುರ್ಮುಖನಾದ, ಆತ್ಮಾ = ಆತ್ಮನು, ಇತಿ = ಹೀಗೆ, ಅಜಶಬ್ದಾತ್ = ಅಜಶಬ್ದದ ಬಲದಿಂದ, ವಿರಿಂಚಃ = ಚತುರ್ಮುಖಬ್ರಹ್ಮನೇ ಬ್ರಾಹ್ಮಣಶಬ್ದಪ್ರತಿಪಾದ್ಯನು, ಇತಿ = ಹೀಗೆ,

ಪ್ರಾಪ್ತಂ = ಪ್ರಾಪ್ತವಾಗುತ್ತದೆ, ದೇವಾನಾಂ ಚ = ದೇವತೆಗಳಿಗಾದರೂ, ವಿದ್ಯಾಕರ್ಮಣೋಃ = ವಿದ್ಯೆ ಹಾಗೂ ಕರ್ಮಗಳಿಂದ, ಪದಪ್ರಾಪ್ತಿಃ = ತಮ್ಮ ಸ್ಥಾನಪ್ರಾಪ್ತಿಯು ದೊರೆಯುತ್ತದೆಂದು, ಸೂಚಿತಾ = ತಿಳಿಸಲಾಗಿದೆ, ಆದ್ದರಿಂದ ಬೃಹದಾರಣ್ಯಕದಲ್ಲಿ ಹೇಳಲ್ಪಟ್ಟ ಮಹಾಮಹಿಮೆಯು ಚತುರ್ಮುಖನಲ್ಲಿಯೂ ಬರುತ್ತದೆ.

ವೇದಗಳಿಂದ ಮುಖ್ಯಪ್ರತಿಪಾದ್ಯನಾದ ಮಹಾವಿಷ್ಣುವೇ 'ಬ್ರಾಹ್ಮಣ'

ब्रह्मसूत्रभाष्यम् – अतो ब्रवीति -

।। पत्यादिशब्देभ्यः ।।४३।।

'सर्वस्याधिपतिः सर्वस्येशानः...स वा एष नेति नेति (बृ.उ.६-४-२१) इत्यादिशब्देभ्यो नित्यमहिमा विष्णुरेव ।

ಅನುವಾದ - ಈ ಪೂರ್ವಪಕ್ಷಕ್ಕೆ ಸೂತ್ರಕಾರರೇ ಉತ್ತರಿಸುತ್ತಿದ್ದಾರೆ. 'ಸರ್ವಸ್ಯಾಧಿಪತಿಃ ಸರ್ವಸ್ಯೇಶಾನಃ' ಇತ್ಯಾದಿಯಾಗಿ ಸರ್ವಾಧಿಪತಿ ಮೊದಲಾದ ಶಬ್ದಗಳನ್ನು ಪ್ರಯೋಗ ಮಾಡಿರುವ ಕಾರಣ, ನಿತ್ಯಮಹಿಮೆಯುಳ್ಳವನು ಮಹಾವಿಷ್ಣುವೇ ಆಗುತ್ತಾನೆ.

ಪ್ರತಿಪದಾರ್ಥ -- ಸಿದ್ಧಾಂತಸ್ಥಾಪಕವಾದ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ –

ಸರ್ವಸ್ಯ = ಬ್ರಹ್ಮರುದ್ರಾದಿಗಳಿಗೆಲ್ಲ, ಅಧಿಪತಿಃ = ಸ್ವಾಮಿಯಾಗಿದ್ದಾನೆ, ಸರ್ವಸ್ಯ = ಸಮಸ್ತ ಜಗತ್ತಿಗೆ, ಈಶಾನಃ = ಪ್ರಭುವಾಗಿದ್ದಾನೆ, ಸ ವಾ = ಅಂತಹ, ಏಷಃ = ವಿಷ್ಣುವೇ, ನೇತಿ ನೇತಿ = ದೃಷ್ಟಶ್ರುತವಿಲಕ್ಷಣನಾಗಿದ್ದಾನೆ, ಇತ್ಯಾದಿಶಬ್ದೇಭ್ಯಃ = ಇವೇ ಮೊದಲಾದ ಶ್ರುತಿವಾಕ್ಯಗಳಿಂದ, ನಿತ್ಯಮಹಿಮಾ = ನಿತ್ಯವಾದ ಮಹಿಮೆಯುಳ್ಳವನು, ವಿಷ್ಣುರೇವ = ಮಹಾವಿಷ್ಣುವೇ ಆಗಿದ್ದಾನೆ.

ವಿಷ್ಣುವೇ ಏಕೆ ಬ್ರಾಹ್ಮಣ ?

ब्रह्मसूत्रभाष्यम् – 'उतामृतत्वस्येशानः । यदन्नेनातिरोहति' (तै. आ. ३-१२)

ಅನುವಾದ - 'ಉತಾಮೃತತ್ವಸ್ಯೇಶಾನಃ ಯದನ್ನೇನಾತಿರೋಹತಿ' ಇತ್ಯಾದಿ ಪುರುಷಸೂಕ್ತವು ಕೇವಲ ವಿಷ್ಣುವಿನ ಲಕ್ಷಣವೆಂದು ಪ್ರತಿಪಾದನೆ ಮಾಡುತ್ತಿದೆ.

ಪ್ರತಿಪದಾರ್ಥ -- ಸರ್ವಾಧಿಪತಿ ಮೊದಲಾದ ಶಬ್ದಗಳು ಇದ್ದ ಮಾತ್ರಕ್ಕೆ, ಬ್ರಾಹ್ಮಣ-ಶಬ್ದದಿಂದ ವಿಷ್ಣುವೇ ಏಕೆ ಪ್ರತಿಪಾದ್ಯನಾಗಬೇಕು? ಎಂಬ ಪ್ರಶ್ನೆಗೆ ಉತ್ತರಿಸಲು ಶ್ರುತಿಯನ್ನು ಹೇಳುತ್ತಿದ್ದಾರೆ –

ಉತ = ಮತ್ತು, ಯದ್ =ಯಾವ ಕಾರಣದಿಂದ, ಅನ್ನೇನ = ಮರ್ತ್ಯವಾದ ಸಂಸಾರಿ-ಸಮೂಹವನ್ನು, ಅತಿರೋಹತಿ = ಮೀರಿದ್ದಾನೋ. ಆ ಕಾರಣದಿಂದ, ಅಮೃತತ್ವಸ್ಯ = ಮುಕ್ತರ ವರ್ಗಕ್ಕೂ, ಈಶಾನಃ = ಅಧಿಪತಿಯಾಗಿದ್ದಾನೆ.

ವಿಷ್ಣುವೇ ಬ್ರಾಹ್ಮಣನೆನ್ನಲು ಶ್ರುತಿ ಪ್ರಮಾಣ

ब्रह्मसूत्रभाष्यम् – 'सप्तार्धगर्भा भुवनस्य रेतो विष्णोस्तिष्ठन्ति प्रदिशा विधर्मणि' (ऋ.सं.१-१६४-३६) 'स योऽतोऽश्रुतः' (ऐ.अ. ३-२-४) इत्यादि श्रुतिभ्यस्तस्यैव हि ते शब्दाः ॥४३॥

॥ इति श्रीमदानन्दतीर्थभगवत्पादाचार्यविरचिते श्रीमद्ब्रह्मसूत्रभाष्ये प्रथमाध्यायस्य तृतीयः पादः ॥ १४॥

ಅನುವಾದ - 'ಸಪ್ತಾರ್ಧಗರ್ಭಾ ಭುವನಸ್ಯ ರೇತಃ' ಇತ್ಯಾದಿ ಶ್ರುತಿಯಿಂದ 'ಸರ್ವಾಧಿಪತಿ' ಎಂಬ ಶಬ್ದವು, 'ಸ ಯೋಽತೋಽಶ್ರುತಃ' ಇತ್ಯಾದಿ ಶ್ರುತಿಯಿಂದ 'ನೇತಿ ನೇತಿ' ಎಂಬ ಶಬ್ದವು ವಿಷ್ಣುವಿಗೆ ಮಾತ್ರ ಸಂಬಂಧಪಟ್ಟಿರುತ್ತಿದೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ಪ್ರತಿಪದಾರ್ಥ -- ಸರ್ವಪ್ರೇರಕನು, ಸಕಲಶಬ್ದಪ್ರತಿಪಾದ್ಯನು ಮಹಾವಿಷ್ಣುವೇ ಆಗಿದ್ದಾನೆನ್ನಲು ಶ್ರುತಿಪ್ರಮಾಣ ನೀಡುತ್ತಿದ್ದಾರೆ –

ಆ ಋದ್ಧಗರ್ಭಾಃ = ಬ್ರಹ್ಮಾಂಡರೂಪವಾದ ಆವರಣದೊಳಗಿರುವ, ಭುವನಸ್ಯ = ವಿಷ್ಣುವಿನ, ರೇತಃ = ರೇತಸ್ಸಿನ ಸ್ವರೂಪವಾಗಿರುವ, ಸಪ್ತ = ಏಳು ಮುಂದಿ; ಪ್ರಕೃತಿಯಿಂದ ಮೊದಲು ವ್ಯಕ್ತವಾದ ಮಹತ್ತತ್ತ್ವ.

ಅದಕ್ಕೆ ಅಭಿಮಾನಿಯಾದ ಬ್ರಹ್ಮದೇವರು; ಅನಂತರ ಅಹಂಕಾರತತ್ತ್ವ, ಅದಕ್ಕೆ ಅಭಿಮಾನಿಯಾದ ರುದ್ರದೇವರು; ಮುಂದೆ ಪಂಚ ಭೂತಗಳು, ಅದಕ್ಕೆ ಅಭಿಮಾನಿಯಾದ ಗಣಪತಿ ಮೊದಲಾದವರು; ಹೀಗೆ ಒಟ್ಟು ಏಳು ಮಂದಿ ದೇವತೆಗಳು, ಪ್ರದಿಶಾ = ವಿಷ್ಣುವಿನ ಆಜ್ಞೆಯಿಂದ, ವಿಧರ್ಮಣಿ = ವಿವಿಧ ಕರ್ತವ್ಯಗಳಲ್ಲಿ ತೊಡಗುತ್ತಾರೆ. ಸಃ ಯಃ = ಅಂತಹ ಯಾವ ಪರಮಾತ್ಮನು, ಅಶ್ರುತಃ = ಅಶ್ರುತನಾಗಿದ್ದಾನೆ. ಇತ್ಯಾದಿಶ್ರುತಿಭ್ಯಃ =ಇವೇ ಮೊದಲಾದ ಶ್ರುತಿಗಳಿಂದ, ತೇ ಶಬ್ದಾಃ = ಸರ್ವಾಧಿಪತಿ, ನೇತಿ ಮೊದಲಾದ ಶಬ್ದಗಳೆಲ್ಲವೂ, ತಸ್ಯೈವ ಹಿ = ಮಹಾವಿಷ್ಣುವಿನದ್ದೇ ಆಗಿವೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಬ್ರಾಹ್ಮಣಾಧಿಕರಣವು ಸಮಾಪ್ತವಾಯಿತು ॥

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ನಿತ್ಯಮಹಿಮೆಯ ಸಮನ್ವಯಕ್ಕಾಗಿ ಬ್ರಾಹ್ಮಣಾಧಿಕರಣ

सत्तर्कदीपावलिः –

॥ पत्यादिशब्देभ्यः ॥

नच 'स वा एष महानज आत्मा' इति सन्निहितवाक्यबलाद् 'एष नित्यो महिमा ब्रह्मणस्य' इति तदपि हिरण्यगर्भविषयम्, 'सर्वस्याधिपतिः' इत्यादि-बहुवाक्यविरोधापत्तेः । 'हिरण्यगर्भः समवर्तताग्रे भूतस्य जातः पतिरेक आसीद्'

इत्यादिश्रुत्या हिरण्यगर्भस्याजातलोकाधिपत्यनिषेधेन सर्वाधिपत्याभावात्। नचेन्द्रदिवद् विद्याकर्मलब्धपदत्वेन देवाधिकारिणो हिरण्यगर्भस्य नित्यमहिमत्वं युज्यते । नच हिरण्यगर्भेतरदेवविषयं तद्वाक्यम्, तत्र प्रमाणाभावात्, 'स्वधर्मनिष्ठः शतजन्मभिः पुमान् विरिञ्चतामेति' इत्यादिवचनविरोधाच्च । 'उतामृतस्येशानः' इत्यादिश्रुत्यन्तरविरोधात् । 'सर्वस्याधिपतिः सर्वस्येशानः एष सेतुर्विधरण एषां लोकानामसम्भेदाय स एष नेति नेत्यात्मा गृह्यो नहि गृह्यते' इत्यादिवाक्यं विष्णुविषयमेव । तस्माद् ब्रह्मशब्दवाच्यवेदेन गम्यत्वाद् ब्राह्मणशब्दवाच्योऽजातत्वादजशब्दवाच्यो विष्णुरिति सिद्धम् । दशप्रमतिवरदः प्रीयताम् ।।

।। इति श्रीमदानन्दतीर्थभगवत्पादाचार्यविरचितश्रीमद्ब्रह्मसूत्रभाष्यटीकायां पद्मनाभतीर्थभट्टारकविरचितायां सत्तर्कदीपावल्यां प्रथमाध्यायस्य तृतीयः पादः ।।

ಈ ಅಧಿಕರಣದಲ್ಲಿ ನಿತ್ಯಮಹಿಮತ್ವವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. 'ಸವಾ ಏಷ ಮಹಾನಜಃ ಆತ್ಮಾ' ಎಂಬ ಸನ್ನಿಹಿತ ವಾಕ್ಯಬಲದಿಂದ 'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂಬಲ್ಲಿ ಶ್ರುತವಾದ ನಿತ್ಯಮಹಿಮತ್ವವೂ ಕೂಡ ಹಿರಣ್ಯಗರ್ಭವಿಷಯವೇ ಆಗುತ್ತದೆಂದು ಭ್ರಾಂತಿ ಬರುತ್ತದೆ. ಆದರೆ ಇದು ತಪ್ಪು. 'ಸರ್ವಸ್ಯಾಧಿಪತಿಃ' ಇತ್ಯಾದಿ ಅನೇಕ ವಾಕ್ಯಗಳ ವಿರೋಧ ಬರುವುದರಿಂದ ಹಿರಣ್ಯಗರ್ಭವಿಷಯಕವೆಂದು ಹೇಳಬಾರದು. 'ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್' ಇತ್ಯಾದಿ ಶ್ರುತಿಯಿಂದ ಹಿರಣ್ಯಗರ್ಭನಿಗೆ ಅಜಾತಲೋಕಾಧಿಪತ್ಯವನ್ನು ನಿಷೇಧ ಮಾಡಿದ್ದರಿಂದ ಸರ್ವಾಧಿಪತಿತ್ವವು ಯುಕ್ತವಾಗುವುದಿಲ್ಲ. ಮತ್ತು ಇಂದ್ರಾದಿಗಳಂತೆ ಹಿರಣ್ಯಗರ್ಭನೂ ಸಹ ವಿದ್ಯೆ ಹಾಗೂ ಕರ್ಮಗಳಿಂದ ತನ್ನ ಪದವಿಯನ್ನು ಪಡೆದಿರುತ್ತಾನೆ. ಹೀಗಿರುವಾಗ, ನಿತ್ಯಮಹಿಮತ್ವವೆಂಬ ಧರ್ಮವನ್ನೂ ಸಹ ಅವನಲ್ಲಿ ಹೇಳಲಾಗದು.

ಇನ್ನು ಹಿರಣ್ಯಗರ್ಭನಂತೆ, ಬೇರೆ ದೇವತೆಗಳನ್ನು ಈ ವಾಕ್ಯವು ವಿಷಯೀಕರಿಸುತ್ತಿದೆ ಎಂಬ ಶಂಕೆಯೂ ತಪ್ಪು. ಬೇರೆ ದೇವತೆಯಲ್ಲಿ ನಿತ್ಯಮಹಿಮತ್ವವೆಂಬ ಧರ್ಮವನ್ನು ಶ್ರುತಿಯು

ಹೇಳುತ್ತಿದೆ ಎನ್ನಲು ಯಾವುದೇ ಪ್ರಮಾಣವಿಲ್ಲ. ಅಷ್ಟೇ ಅಲ್ಲದೆ, 'ಸ್ವಧರ್ಮನಿಷ್ಠಃ ಶತಜನ್ಮಭಿಃ ಪುಮಾನ್ ವಿರಿಂಚತಾಮೇತಿ' ಇತ್ಯಾದಿ ವಚನಗಳ ವಿರೋಧವೂ ಸಹ ಬರುತ್ತದೆ. 'ಉತಾಮೃತತ್ವಸ್ಯೇಶಾನಃ' ಇತ್ಯಾದಿ ಶ್ರುತ್ಯಂತರದ ವಿರೋಧ ಬರುತ್ತದೆ. 'ಸರ್ವಸ್ಯಾಧಿಪತಿಃ ಸರ್ವಸ್ಯೇಶಾನಃ ಏಷ ಸೇತುರ್ವಿಧರಣ ಏಷಾಂ ಲೋಕಾನಾಮಸಂಭೇದಾಯ ಸ ಏಷ ನೇತಿ ನೇತ್ಯಾತ್ಮಾ ಗುಹ್ಯೋ ನಹಿ ಗೃಹ್ಯತೇ' ಇತ್ಯಾದಿ ವಾಕ್ಯಗಳೆಲ್ಲವೂ ವಿಷ್ಣುವಿಷಯಕವೇ ಆಗಿವೆ. ಆದ್ದರಿಂದ, ಬ್ರಹ್ಮಶಬ್ದದ ಬಲದಿಂದ ಬ್ರಾಹ್ಮಣಶಬ್ದವಾಚ್ಯನಾದವನು ಅಜಾತತ್ವಲಿಂಗದಿಂದ ಅಥಶಬ್ದವಾಚ್ಯನಾದವನು ವಿಷ್ಣುವೇ ಆಗಿದ್ದಾನೆ. ನಿತ್ಯಮಹಿಮತ್ವವೆಂಬ ಧರ್ಮವು ಇವನಲ್ಲೇ ಯುಕ್ತವಾಗುತ್ತದೆ.

ದಶಪ್ರಮತಿವರದನಾದ ಪರಮಾತ್ಮನು ಪ್ರೀತನಾಗಲಿ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಬ್ರಾಹ್ಮಣಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಚತುರ್ಮುಖಬ್ರಹ್ಮನು ನಿತ್ಯಮಹಿಮೆಯುಳ್ಳವನೆಂದು ಪೂರ್ವಪಕ್ಷ

तत्वप्रदीपः – ''पतिं विश्वस्याऽत्मेश्वरं शाश्वतम्'' इत्यादिना नित्यमहिमा परस्योक्तः । स ब्राह्मणस्यापि प्रतीयते । विरिञ्चस्य कादाचित्कपदप्राप्तेर्न नित्यमहिमेत्याशङ्क्याऽह – देवानां चेति । चकारोऽवधारणे । अन्यदेवानामेव विद्याकर्मणोः सकाशात् पदप्राप्तिः सूचिता देवताधिकरणे न विरिञ्चस्य । तस्मात् विरिञ्चोऽपि नित्यमहिमेति प्राप्त आह – पत्यादिशब्देभ्यः ।।

'ಪತಿಂ ವಿಶ್ವಸ್ಯಾSತ್ಮೇಶ್ವರಂ ಶಾಶ್ವತಮ್' ಇತ್ಯಾದಿ ವಾಕ್ಯದಿಂದ ಶಾಶ್ವತವಾದ ಮಹಿಮೆಯುಳ್ಳವನು ಪರಮಾತ್ಮನಾಗಿದ್ದಾನೆಂದು ಹೇಳಲಾಗಿದೆ. ಈ ಶಾಶ್ವತವಾದ ಮಹಿಮೆಯು ಪರಮಾತ್ಮನಿಗೆ ಮಾತ್ರವಲ್ಲ. ಬ್ರಾಹ್ಮಣನೆನಿಸಿದ ಚತುರ್ಮುಖಬ್ರಹ್ಮನಲ್ಲಿಯೂ ಕೂಡ ಪ್ರತೀತವಾಗುತ್ತಿದೆ.

ಚತುರ್ಮುಖಬ್ರಹ್ಮನ ಸ್ಥಾನವು ಅಶಾಶ್ವತವಾದ್ದರಿಂದ ನಿತ್ಯವಾದ ಮಹಿಮೆಯುಳ್ಳವನಾಗಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ 'ದೇವಾನಾಂಚ' ಇತ್ಯಾದಿ ಭಾಷ್ಯವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಇಲ್ಲಿರುವ ಚಕಾರವು ಅವಧಾರಣಾರ್ಥದಲ್ಲಿ ಪ್ರಯುಕ್ತವಾಗಿದೆ.

ದೇವತಾಧಿಕರಣದಲ್ಲಿ ಉಳಿದ ದೇವತೆಗಳಿಗೆ ವಿದ್ಯೆ ಹಾಗೂ ಕರ್ಮಗಳ ಪ್ರಯುಕ್ತವಾಗಿ ಪದಗಳು ದೊರೆಯುತ್ತವೆಂದು ಸೂಚಿಸಲಾಗಿದೆ. ಆದರೆ ಚತುರ್ಮುಖಬ್ರಹ್ಮನ ಸ್ಥಾನವು ಹೀಗೆ ವಿದ್ಯೆ ಹಾಗೂ ಕರ್ಮಗಳಿಂದ ದೊರೆಯುತ್ತದೆಂದು ಹೇಳಿರುವುದಿಲ್ಲ. ಆದ್ದರಿಂದ ಭಗವಂತನಂತೆ ಚತುರ್ಮುಖಬ್ರಹ್ಮನೂ ಕೂಡ ನಿತ್ಯವಾದ ಮಹಿಮೆ ಉಳ್ಳವನು ಆಗಿದ್ದಾನೆಂಬುದು ಅಧಿಕರಣದ ಪೂರ್ವಪಕ್ಷ. ಇದರ ನಿರಾಕರಣೆಗಾಗಿ 'ಪತ್ಯಾದಿಶಬ್ದೇಭ್ಯಃ' ಎಂಬ ಸೂತ್ರವು ಹೊರಟಿದೆ.

> **ವಿವರಣೆ** - **ಸ ವಾ ಏಷ ಮಹಾನಜ ಆತ್ಮಾ ಯೋSಯಂ ವಿಜ್ಞಾನಮಯಃ ಪ್ರಾಣೇಷು ಯ ಏಷೋSಂತರ್ಹೃದಯ ಆಕಾಶಸ್ತಸ್ಮಿನ್ ಶೇತೇ । ಸರ್ವಸ್ಯ ವಶೀ, ಸರ್ವಸ್ಯೇಶಾನಃ, ಸರ್ವಸ್ಯಾಧಿಪತಿಃ ಸಃ । ನ ಸಾಧುನಾ ಕರ್ಮಣಾ ಭೂಯಾನ್। ನೋ ಏವಾಸಾಧುನಾ ಕನೀಯಾನ್ । ಏಷ ಸರ್ವೇಶ್ವರ ಏಷ ಭೂತಾಧಿಪತಿರೇಷ ಭೂತಪಾಲ ಏಷ ಸೇತುರ್ವಿಧರಣ ಏಷಾಂ ಲೋಕಾನಾಮಸಂಭೇದಾಯ। ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾನಾಶಕೇನ । ಏತಮೇವ ವಿದಿತ್ವಾ ಮುನಿರ್ಭವತಿ।**
>
> ಈ ಹಿಂದೆ ಉಪನಿಷತ್ತಿನಲ್ಲಿ ಮಹಾನ್, ಅಜ, ಆತ್ಮಾ ಎಂದು ವರ್ಣಿಸಲ್ಪಟ್ಟಿರುವನು ಚತುರ್ಮುಖನಲ್ಲ. ಶ್ರೀಹರಿಯೇ. ಅಂದರೆ ಸರ್ವಜ್ಞನೂ ಇಂದ್ರಿಯಗಳಲ್ಲಿ ನಿಯಾಮಕನೂ ಆಗಿದ್ದು ಹೃದಯದೊಳಗಿನ ಆಕಾಶದಲ್ಲಿರುವ ಪರಮಾತ್ಮನೆ. ಅವನ ಜ್ಞಾನವೇ ಮೋಕ್ಷಸಾಧನ. ಅಧ್ಯಯನಾದಿ ಕರ್ಮವು ಜ್ಞಾನಸಾಧನ ಮಾತ್ರ. ಆದ್ದರಿಂದ 'ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವವ ಶ್ರೀಹರಿ ಬ್ರಹ್ಮರುದ್ರಾದಿಗಳೆಲ್ಲರಿಗೂ ಚೇಷ್ಟಕ. ಎಲ್ಲರಿಗಿಂತ

ಗುಣಾಧಿಕ. ಪುಣ್ಯಕರ್ಮಗಳಿಂದ ಸುಖಪೂರ್ಣನಾಗುವುದಿಲ್ಲ. ಪಾಪಕರ್ಮಗಳಿಂದ ಸುಖರಹಿತನೂ ಆಗುವುದಿಲ್ಲ. ಎಲ್ಲರ ಒಡೆಯ. ಇವನು ಅನಾದಿಕಾಲದಿಂದಲೂ ಒಡೆಯನಾಗಿಯೇ ಇದ್ದಾನೆ. ಅನಾದಿಯಿಂದಲೂ ಪಾಲಕ. ಈ ಲೋಕಗಳನ್ನು ಒಂದರಲ್ಲೊಂದು ಕಲಸಿ ಹೋಗದಂತೆ ವ್ಯವಸ್ಥಿತವಾಗಿ ಇಟ್ಟಿರುವವನು' ಎಂದು ಶ್ರೀಹರಿಯನ್ನು ಬ್ರಹ್ಮಜ್ಞಾನ ಯೋಗ್ಯರು ವೇದಾಧ್ಯಯನದಿಂದ, ಯಜ್ಞದಿಂದ, ದಾನದಿಂದ, ತಪಸ್ಸಿನಿಂದ, ಉಪವಾಸದಿಂದ ತಿಳಿಯಲು ಇಚ್ಛಿಸುತ್ತಾರೆ. ಇವನನ್ನು ತಿಳಿದೇ ಜ್ಞಾನಸ್ವರೂಪರಾಗುತ್ತಾರೆ, ಅಂದರೆ ಮುಕ್ತರಾಗುತ್ತಾರೆ.

ಏತಮೇವ ಪ್ರವ್ರಾಜಿನೋ ಲೋಕಮಿಚ್ಛಂತಃ ಪ್ರವ್ರಜಂತಿ । ಏತದ್ಧಸ್ಮ ವೈ ಪೂರ್ವೇ ವಿದ್ವಾಂಸಃ ಪ್ರಜಾಂ ನ ಕಾಮಯಂತೇ । ಕಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋऽಯಮಾತ್ಮಾಯಂ ಲೋಕ ಇತಿ। ತೇ ಹ ಸ್ಮ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರಂತಿ । ಯಾ ಹ್ಯೇವ ಪುತ್ರೈಷಣಾ ಸಾ ವಿತ್ತೈಷಣಾ । ಯಾ ವಿತ್ತೈಷಣಾ ಸಾ ಲೋಕೈಷಣಾ । ಉಭೇ ಹ್ಯೇತೇ ಏಷಣೇ ಏವ ಭವತಃ । ಸ ಏಷ ನೇತಿ । ನೇತಿ । ಆತ್ಮಾऽಗೃಹ್ಯೋ ನಹಿ ಗೃಹ್ಯತೇ । ಅಶೀರ್ಯೋ ನ ಹಿ ಶೀರ್ಯತೇ । ಅಸಂಗೋ ನ ಹಿ ಸಜ್ಜತೇ । ಅಸಿತೋ ನ ವ್ಯಥತೇ । ನ ರಿಷ್ಯತಿ ।

ಈ ಭಗವಂತನನ್ನೇ ಆಶ್ರಯಿಸಲು ಬಯಸುವ ಸಂನ್ಯಾಸಯೋಗ್ಯರು ಸನ್ಯಾಸಿಗಳಾಗುತ್ತಾರೆ. ಭಗವಂತನೇ ಎಲ್ಲರಿಗೂ ಆಶ್ರಯ ಎಂಬ ಪ್ರಮೇಯವನ್ನು ತಿಳಿದ ಪ್ರಾಚೀನರು ನಿಷಿದ್ಧ ವಸ್ತುಗಳನ್ನು ಕಾಮಿಸಲಿಲ್ಲ. ಏಕೆಂದರೆ ನಮಗೆ ಶ್ರೀಹರಿಯೇ ಒಡೆಯನೂ ಆಶ್ರಯನೂ ಆಗಿರುವಾಗ ನಿಷಿದ್ಧ ಪದಾರ್ಥಗಳಿಂದ ನಾವು ಏನು ಸಾಧಿಸಬೇಕು ? ಎಂದು ಭಾವಿಸಿದರು. ಅವರು ಪುತ್ರೈಷಣ, ವಿತ್ತೈಷಣ ಮತ್ತು ಲೋಕೈಷಣಗಳನ್ನು ಮೀರಿ ಮುಕ್ತರಾಗಿ ಪರಮಾತ್ಮನಿಂದ ಅತ್ಯಲ್ಪ ಆನಂದವನ್ನು ಬೇಡುತ್ತಾರೆ. ಯಾವುದು ಪುತ್ರೈಷಣವೋ ಅದೇ ವಿತ್ತೈಷಣಾ. ಯಾವುದು ವಿತ್ತೈಷಣವೋ ಅದೇ ಲೋಕೈಷಣಾ. ಇವೆರಡು ಏಷಣಗಳು ದುಃಖಹೇತುಗಳೇ. ಅಂತಹ ಶ್ರೀಹರಿಯು ಶ್ರೀದೇವಿಯಂತೆಯೂ ಅಲ್ಲ. ಬ್ರಹ್ಮಾದಿಗಳಂತೆಯೂ ಅಲ್ಲ. ಏಕೆಂದರೆ ಶ್ರೀಹರಿಯು ಸಂಪೂರ್ಣವಾಗಿ ತಿಳಿಯಲ್ಪಡುವುದಿಲ್ಲ. ಅವನು ಸಂಪೂರ್ಣವಾಗಿ ತಿಳಿಯಲ್ಪಡುತ್ತಾನೆ ಎಂಬ ವಿಷಯದಲ್ಲಿ ಪ್ರಮಾಣವಿಲ್ಲ. ಕಾಲದಿಂದ ಅಥವಾ ಬೇರೆ ಕಾರಣಗಳಿಂದ ಹಿಂಸೆಯಿಲ್ಲದವನು. ಏಕೆಂದರೆ ಹಿಂಸಿಸಲ್ಪಡುತ್ತಾನೆ ಎಂಬ ವಿಷಯದಲ್ಲಿ ಪ್ರಮಾಣವಿಲ್ಲ. ಪ್ರಪಂಚದ ಜೊತೆ ಸಂಬಂಧ ಹೊಂದಿದ್ದರೂ ಪ್ರಪಂಚದ ದೋಷಗಳ ಲೇಪವಿಲ್ಲದವನು. ಏಕೆಂದರೆ ದೋಷಲೇಪವಿದೆ ಎಂಬ ವಿಷಯದಲ್ಲಿ ಪ್ರಮಾಣವಿಲ್ಲ. ಬಂಧವಿಲ್ಲದವನು. ಏಕೆಂದರೆ ಬಂಧವಿದೆ ಎಂಬ ವಿಷಯದಲ್ಲಿ ಪ್ರಮಾಣವಿಲ್ಲ. ಅವನು ನಾಶವಿಲ್ಲದವನು.

ಏತಮು ಹ ಏವ ಏತೇ ನ ತರತಃ ಇತಿ । ಅತಃ ಪಾಪಮಕರವಮಿತಿ । ಅತಃ ಕಲ್ಯಾಣಮಕರವಮಿತಿ । ಉಭೇ ಉ ಹೈವೈಷ ಏತೇ ತರತಿ । ನೈನಂ ಕೃತಾಕೃತೇ ತಪತಃ ।

ನಾನು ಪಾಪ ಮಾಡಿದೆನು ಪುಣ್ಯಮಾಡಿದೆನೆಂಬ ಭಾವನೆಗಳು ಹರಿಗೆ ಮಾತ್ರವೆ ಇಲ್ಲ. ಹರಿಪ್ರೇರಣೆಯಿಂದಲೇ 'ಪಾಪವನ್ನು ಮಾಡಿದೆನು. ಪುಣ್ಯವನ್ನು ಮಾಡಿದೆನು' ಎಂಬ ಭಾವನೆಗಳು ಜೀವರಿಗೆ ಉಂಟಾಗುವುವು. ಶ್ರೀಹರಿಯು ಪುಣ್ಯ ಪಾಪಕರ್ಮಗಳನ್ನು ಮೀರಿದ್ದಾನೆ. ಆದ್ದರಿಂದ ಪುಣ್ಯ ಪಾಪಗಳು ಇವನಿಗೆ ಎಂದೂ ತಾಪವನ್ನುಂಟು ಮಾಡುವುದಿಲ್ಲ.

ತದೇತದೃಚಾಭುಕ್ತಂ-
ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ
ನ ಕರ್ಮಣಾ ವರ್ಧತೇ ನೋ ಕನೀಯಾನ್ ।
ತಸ್ಯೈವ ಸ್ಯಾತ್ ಪದವಿತ್ ತಂ ವಿದಿತ್ವಾ ।
ನ ಲಿಪ್ಯತೇ ಕರ್ಮಣಾ ಪಾಪಕೇನ । ಇತಿ ।

ಈ ಪ್ರಮೇಯವು ಈ ಋಚೆಯಲ್ಲಿಯೂ ಉಕ್ತವಾಗಿದೆ - ವೇದವೇದ್ಯನಾದ ವಿಷ್ಣುವಿನ ಈ ಮಹಿಮೆ ನಿತ್ಯ. ಏಕೆಂದರೆ ಅವನ ಸುಖಜ್ಞಾನಾದಿಗಳು ಕರ್ಮದಿಂದ ಹೆಚ್ಚುವುದಿಲ್ಲ, ಕಡಿಮೆಯೂ ಆಗುವುದಿಲ್ಲ. ಅಂತಹ ವಿಷ್ಣುವಿನ ಸ್ವರೂಪವನ್ನು ತಿಳಿಯಬೇಕು. ಅವನನ್ನು ತಿಳಿದವನು ಪಾಪಕರ್ಮದಿಂದ ಲೇಪವನ್ನು ಹೊಂದುವುದಿಲ್ಲ.

ತಸ್ಮಾದೇವಂವಿತ್ ಶಾಂತೋ ದಾಂತ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾ ಆತ್ಮನ್ಯೇವಾತ್ಮಾನಂ ಪಶ್ಯತಿ । ಸರ್ವಮಾತ್ಮಾ ನಂ ಪಶ್ಯತಿ । ನೈನಂ ಪಾಪ್ಮಾ ತರತಿ । ಸರ್ವಂ ಪಾಪ್ಮಾನಂ ತರತಿ । ನೈನಂ ಪಾಪ್ಮಾ ತಪತಿ । ಸರ್ವಂ ಪಾಪ್ಮಾನಂ ತಪತಿ । ವಿಪಾಪೋ ವಿರಜೋऽ ವಿಚಿಕಿತ್ಸೋ ಬ್ರಾಹ್ಮಣೋ ಭವತ್ಯೇಷ ಬ್ರಹ್ಮಲೋಕಃ ಸಾಮ್ರಾಡಿತಿ ಹೋವಾಚ ಯಾಜ್ಞವಲ್ಕ್ಯಃ । ಸೋऽಹಂ ಭಗವತೇ ವಿದೇಹಾನ್ ದದಾಮಿ ಮಾಂ ಚಾಪಿ ಸಹ ದಾಸ್ಯಾಯ ಇತಿ ।

ಬ್ರಹ್ಮಜ್ಞಾನವು ಮುಕ್ತಿಸಾಧನವಾದುದರಿಂದ ಅದನ್ನು ತಿಳಿದವನು ಭಗವನ್ನಿಷ್ಠನೂ ಇಂದ್ರಿಯ ನಿಗ್ರಹವುಳ್ಳವನೂ, ಹೃದಯದಲ್ಲಿರುವ ವಿಷ್ಣುವಿನ ಬಗ್ಗೆ ಚಿಂತನೆಯಿಂದಲೇ ಸಂತೋಷಪಡುವವನೂ, ದ್ವಂದ್ವಸಹಿಷ್ಣುವೂ, ಯಥಾರ್ಥಜ್ಞಾನಿಯೂ ಆಗಿ ತನ್ನಲ್ಲಿಯೇ ಇರುವ ವಿಷ್ಣುವನ್ನು ತಿಳಿಯುತ್ತಾನೆ, ತಿಳಿಯಬೇಕು. ತನ್ನಲ್ಲಿರುವ ವಿಷ್ಣುವನ್ನು ಪೂರ್ಣನೆಂದು ತಿಳಿಯುತ್ತಾನೆ, ತಿಳಿಯಬೇಕು. ಹೀಗೆ ತಿಳಿದವನನ್ನು ಪಾಪವು ಆಕ್ರಮಿಸುವುದಿಲ್ಲ. ಇವನೇ ಸಕಲ ಪಾಪಗಳನ್ನೂ ದಾಟುತ್ತಾನೆ. ಅಂದರೆ ಇವನನ್ನು ಪಾಪವು ಸುಡುವುದಿಲ್ಲ. ಇವನೇ ಪಾಪವನ್ನು ಸುಡುತ್ತಾನೆ. ಬ್ರಹ್ಮಜ್ಞಾನಿಯು ಪಾಪರಹಿತನೂ ರಜಸ್ ಮೊದಲಾದ

ಪ್ರಾಕೃತ ದೋಷವಿಲ್ಲದವನೂ ಸಂಶಯರಹಿತನೂ ಆಗುತ್ತಾನೆ. ಏಕೆಂದರೆ ರಾಜನೇ ! ಪೂರ್ಣ ಜ್ಞಾನಸ್ವರೂಪನಾದ ಈ ಹರಿಯು ಪಾಪರಹಿತನೂ ರಜಸ್ ಮೊದಲಾದ ಪ್ರಾಕೃತ ಗುಣರಹಿತನೂ, ಸಂಶಯರಹಿತನೂ, ವೇದಗಮ್ಯನೂ ಆಗಿದ್ದಾನೆ ಎಂದು ಯಾಜ್ಞವಲ್ಕ್ಯರು ಹೇಳಿದರು. 'ಪೂಜ್ಯರಾದ ನಿಮಗೆ ನಾನು ಇಡೀ ವಿದೇಹದೇಶವನ್ನು ಮತ್ತು ನನ್ನನ್ನೂ ಗುರುದಕ್ಷಿಣೆಯಾಗಿ ಕೊಡುತ್ತೇನೆ' ಎಂದು ರಾಜನು ಹೇಳಿದನು. (ಸಂಗ್ರಹ)

'ಬ್ರಾಹ್ಮಣ' ಎಂದರೆ ಮಹಾವಿಷ್ಣು ಮಾತ್ರ

तत्वप्रदीपः – पतिशब्दादीशानशब्दादग्राह्याश्रुतत्वादिशब्देभ्यश्च नित्यमहित्वेनोक्तो ब्राह्मणो विष्णुरेव । ब्रह्मणा वेदेन गम्यत इति 'ब्राह्मणः', ब्रह्म अणति वाच्यत्वेनेति वा । अण गताविति धातोः ।

ನಿತ್ಯವಾದ ಮಹಿಮೆಯುಳ್ಳವನು ಬ್ರಾಹ್ಮಣನೆಂದು 'ಏಷೋ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂಬ ಶ್ರುತಿಯು ಹೇಳುತ್ತಿದೆ. ಈ ಶ್ರುತಿಯಲ್ಲಿರುವ ಬ್ರಾಹ್ಮಣ ಎಂಬ ಪದದಿಂದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆ. ಏಕೆಂದರೆ ಪತಿ ಶಬ್ದ, ಈಶಾನಶಬ್ದ ಅಗ್ರಾಹ್ಯತ್ವ, ಅಶ್ರುತತ್ವ ಮೊದಲಾದ ಶಬ್ದಗಳು ಯಾರಲ್ಲಿ ಯುಕ್ತವಾಗುತ್ತವೋ ಅವನೇ ಬ್ರಾಹ್ಮಣ ಎಂದು ಕರೆಸಿಕೊಳ್ಳುತ್ತಾನೆ. ಈ ಪತ್ಯಾದಿಶಬ್ದಗಳೆಲ್ಲವೂ ವಿಷ್ಣುವಿನಲ್ಲಿ ಮಾತ್ರ ಅಸಾಧಾರಣವಾಗಿ ಯುಕ್ತವಾಗುವುದರಿಂದ ಚತುರ್ಮುಖಬ್ರಹ್ಮನನ್ನು ಬ್ರಾಹ್ಮಣಶಬ್ದದಿಂದ ಇಲ್ಲಿ ವಿವಕ್ಷಿಸಬಾರದು.

ಬ್ರಾಹ್ಮಣಶಬ್ದಕ್ಕೆ 'ಬ್ರಹ್ಮಣಾ ವೇದೇನ ಗಮ್ಯತೇ ಇತಿ ಬ್ರಾಹ್ಮಣಃ' ವೇದದಿಂದ ಗಮ್ಯನಾದ ಕಾರಣ ಮಹಾವಿಷ್ಣು ಬ್ರಾಹ್ಮಣ ಎಂದು ಕರೆಸಿಕೊಳ್ಳುತ್ತಾನೆ ಎಂಬರ್ಥವು ದೊರೆಯುತ್ತದೆ. ಅಥವಾ ಬ್ರಹ್ಮನು ವಾಚ್ಯತ್ವೇನ ತಿಳಿಯುವವನಾದ್ದರಿಂದಲೂ ಬ್ರಾಹ್ಮಣ ಎಂದು ಕರೆಸಿಕೊಳ್ಳುತ್ತಾನೆ. 'ಅಣ ಗತೌ' ಎಂಬ ಧಾತುವಿನಿಂದ ನಿಷ್ಪನ್ನವಾದ್ದರಿಂದ 'ಬ್ರಹ್ಮ ಅಣತಿ' ಎಂಬ ವ್ಯುತ್ಪತ್ತಿಯನ್ನು ತಿಳಿಯಬೇಕು.

ವಿವರಣೆ - ಬ್ರಾಹ್ಮಣ ಶಬ್ದಕ್ಕೆ 'ಬ್ರಹ್ಮಣಾ ಅಣ್ಯತೇ ಇತಿ ಬ್ರಾಹ್ಮಣಃ' ಎಂಬುದು ಒಂದು ಬಗೆಯ ವ್ಯುತ್ಪತ್ತಿ, 'ಬ್ರಹ್ಮ ಅಣತಿ ಇತಿ ಬ್ರಾಹ್ಮಣಃ' ಮತ್ತೊಂದು ಬಗೆಯ ವ್ಯುತ್ಪತ್ತಿ. ಮೊದಲನೆಯ ವ್ಯುತ್ಪತ್ತಿಯಲ್ಲಿ

ವೇದದಿಂದ ಶ್ರೀಹರಿಯು ಗಮ್ಯನಾಗಿದ್ದಾನೆ ಎಂದರ್ಥ. ಎರಡನೆಯ ವ್ಯುತ್ಪತ್ತಿಯಲ್ಲಿ ಶ್ರೀಹರಿಯು ವಾಚ್ಯತ್ವೇನ ವೇದದಿಂದ ತಿಳಿಯುತ್ತಾನೆ ಎಂದರ್ಥ.

ಸಕಲವೂ ಪುರುಷಾಧೀನ

तत्वप्रदीपः – ''उतामृतत्वस्येशानः'' इत्यादिना ''पुरुष एवेदम्'' इति प्रतिज्ञाते सर्वेशत्वे हेतुरुच्यते । अमृतस्य मुक्तस्यापीशानोऽयं पुरुष इति यत् तस्मादिदं सर्वं पुरुष एव पुरुषाधीनमेवेत्यर्थः ।

'ಉತಾಮೃತತ್ವಸ್ಯೇಶಾನಃ' ಇತ್ಯಾದಿಯಾಗಿ 'ಪುರುಷ ಏವೇದಮ್' ಎಂಬುದಾಗಿ ಪ್ರತಿಜ್ಞಾತನಾದವನಲ್ಲಿ ಸರ್ವೇಶತ್ವವನ್ನು ಹೇತುವನ್ನಾಗಿ ಹೇಳಲಾಗಿದೆ. ಮುಕ್ತರೂ ಕೂಡ ಈ ಒಡೆಯನಾದ ಪುರುಷನ ಅಧೀನರಾಗಿರುವುದರಿಂದ ಈ ಸಮಸ್ತ ಜಗತ್ತು ಪುರುಷ ಎಂದೇ ಕರೆಸಿಕೊಳ್ಳುತ್ತದೆ. ಪುರುಷಾಧೀನವೇ ಆಗಿದೆ ಎಂಬುದು ಇದರ ಅರ್ಥ.

'ಪುರುಷ ಏವೇದಂ ಸರ್ವಂ' ಎಂಬುದರ ವ್ಯಾಖ್ಯಾನ

तत्वप्रदीपः – नच सर्वस्य पुरुषैक्यमिहोच्यते । तथासत्यनिवृत्तेरयुक्तेश्च । तस्मात् तदधीनत्वमेव प्रतिज्ञातम् । पुरुषेणैवेदं व्याप्तमिति वाऽर्थः । तथाच पैङ्गिश्रुतिरिमां श्रुतिं व्याचष्टे – ''पुरुष एवेदं सर्वं यद्भूतं यच्च भव्यमिति पुरुषेणैवेदं व्याप्तं यद्भूतं यच्च भाव्यं आतृणादाकरीषात् सर्वं भगवानिति मिथ्यादृष्टिरेषः'' इति । ''सर्वं समाप्नोषि ततोऽसि सर्वः'' इति च भगवद्गीतासु । ''यदन्नेनातिरोहति'' इत्यन्नशब्दोक्तो मर्त्यः संसारी ।

ಸಕಲ ಜಗತ್ತು ಪುರುಷನಿಂದ ಐಕ್ಯ ಹೊಂದಿದೆ ಎಂದು ಹೇಳಬಾರದು. ಹಾಗಾದರೆ ಸತ್ಯವಾದ ಜಗತ್ತಿಗೆ ನಿವೃತ್ತಿಯನ್ನು ಹೇಳುವುದು ಯುಕ್ತವಾಗುವುದಿಲ್ಲ. ಆದ್ದರಿಂದ ಸಮಸ್ತ ಜಗತ್ತು ಪುರುಷಾಧೀನವಾಗಿದೆ ಎಂದೇ 'ಪುರುಷ ಏವೇದಂ ಸರ್ವಂ' ಎಂಬ ಪ್ರತಿಜ್ಞಾ ಮಾತಿಗೆ ವ್ಯಾಖ್ಯಾನವನ್ನು ಮಾಡಬೇಕು.

'ಪುರುಷ ಏವೇದಂ ಸರ್ವಂ' ಎಂಬುದಕ್ಕೆ ಮತ್ತೊಂದು ಅರ್ಥ - ಪುರುಷನಿಂದಲೇ ಈ ಸಮಸ್ತ ಜಗತ್ತು ವ್ಯಾಪ್ತವಾಗಿದೆ ಎಂದು. ಆದ್ದರಿಂದಲೇ ಪೈಂಗಿಶ್ರುತಿಯು 'ಪುರುಷ ಏವೇದಂ ಸರ್ವಂ' ಎಂಬ ಶ್ರುತಿಯನ್ನು ಹೀಗೆ ವ್ಯಾಖ್ಯಾನ ಮಾಡಿದೆ - 'ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮಿತಿ ಪುರುಷೇಣೈವೇದಂ ವ್ಯಾಪ್ತಂ ಯದ್ಭೂತಂ ಯಚ್ಚ ಭಾವ್ಯಂ ಆತೃಣಾದಾಕರೀಷಾತ್ ಸರ್ವಂ ಭಗವಾನಿತಿ ಮಿಥ್ಯಾದೃಷ್ಟಿರೇಷ' 'ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ' ಎಂಬ ಪುರುಷಸೂಕ್ತದ ಮಾತಿಗೆ ಹೀಗರ್ಥ - 'ಪುರುಷನಿಂದಲೇ ಈ ಜಗತ್ತು ವ್ಯಾಪಿಸಿದೆ. ಹಿಂದಿನ ಹಾಗೂ ಮುಂದಿನ ಹುಲ್ಲು, ಸಗಣಿ, ಮೊದಲಾದವೆಲ್ಲವೂ ಭಗವಂತನಿಂದಲೇ ವ್ಯಾಪ್ತವಾಗಿದೆ. ಆದ್ದರಿಂದ ಹುಲ್ಲು, ಸಗಣಿ ಇವುಗಳನ್ನು ಭಗವಂತನ ಸ್ವರೂಪವೆಂದು ಹೇಳುವುದು ಮಿಥ್ಯಾಭೂತಾವಾದ ಆಲೋಚನರೂಪವಾದದ್ದು'. 'ಸರ್ವಂ ಸಮಾಪ್ನೋಷಿ ತತೋऽಸಿ ಸರ್ವಃ' ಎಲ್ಲವನ್ನೂ ವ್ಯಾಪಿಸಿರುವುದರಿಂದ ಸಕಲವೂ ಶ್ರೀಹರಿಯೇ ಆಗಿದ್ದಾನೆ ಎಂಬ ಭಗವದ್ಗೀತೆಯ ಮಾತೂ ಕೂಡ ಇದನ್ನೇ ವ್ಯಾಖ್ಯಾನ ಮಾಡುತ್ತಿದೆ. 'ಯದನ್ನೇನಾತಿರೋಹತಿ' ಎಂಬಲ್ಲಿ ಅನ್ನಶಬ್ದದಿಂದ ಮರ್ತ್ಯನಾದ ಸಂಸಾರಿಯನ್ನು ವಿವಕ್ಷಿಸಬೇಕು.

ಮುಕ್ತರಿಗೂ ಕೂಡ ಒಡೆಯನಾದವನು ಮಹಾವಿಷ್ಣು

एतदत्रोक्तं भवति । मुक्तसमुदायस्यापीशो विष्णुः । यदमं संसारिसमुदायमत्यगात् । यद्यं मुक्तिगानामनीशः स्यात्, नैव संसारिणः संसारान्मोचयेत् । मोचयति च तस्मान्मुक्तानामपीश एव । ''सोऽमृतस्याभयस्येशो मर्त्यमन्नं यदत्यगात्'' इति च भागवते । अमृतत्वस्येति धर्मधर्म्यभेदाभिप्रायेण । अमृतत्वस्येशान इति वाऽर्थः मुक्तेरपि तदधीनत्वात् ।।

।। इति ब्राह्मणाधिकरणम् ।।

।। इति तत्त्वप्रदीपे प्रथमाध्यायस्य तृतीयः पादः ।।

ಒಟ್ಟು ಅಭಿಪ್ರಾಯ - ಮಹಾವಿಷ್ಣುವು ಮುಕ್ತಸಮುದಾಯಕ್ಕೂ ಕೂಡ ಒಡೆಯನಾಗಿದ್ದಾನೆ. ಯಾವಾಗ ಸಂಸಾರಿ ಸಮುದಾಯವನ್ನು ದಾಟಿದ್ದಾನೋ ಆವಾಗ ಮುಕ್ತರಿಗೆ ಇವನು

ಒಡೆಯನಾಗದಿದ್ದರೆ ಸಂಸಾರಿಗಳ ಸಂಸಾರವನ್ನೂ ಕೂಡ ಬಿಡುಗಡೆ ಮಾಡಲು ಇವನು ಅಸಮರ್ಥನಾಗುತ್ತಾನೆ. ಯಾವ ಕಾರಣದಿಂದ ಮಹಾವಿಷ್ಣುವು ಸಂಸಾರಿಗಳ ಸಂಸಾರವನ್ನು ಮೋಚನೆ ಮಾಡುತ್ತಾನೋ, ಆದ್ದರಿಂದಲೇ ಮುಕ್ತರಿಗೂ ಕೂಡ ಇವನು ಒಡೆಯನಾಗಿದ್ದಾನೆಂಬುದು ಸಿದ್ಧವಾಗುತ್ತದೆ. 'ಸೋऽಮೃತಸ್ಯಾಭಯಸ್ಯೇಶೋ ಮರ್ತ್ಯಮನ್ನಂ ಯದತ್ಯಗಾತ್' 'ಸಂಸಾರಿಜೀವರನ್ನು ಮೀರಿ ನಿಂತಿರುವುದರಿಂದ ಇವನು ಮುಕ್ತರಿಗೂ ಕೂಡ ಒಡೆಯನಾಗಿದ್ದಾನೆ' ಎಂಬುದಾಗಿ ಭಾಗವತವೂ ಇದನ್ನೇ ಹೇಳುತ್ತಿದೆ.

ಭಾಷ್ಯದಲ್ಲಿ 'ಅಮೃತತ್ವಸ್ಯ' ಎಂದು ಹೇಳಿರುವುದು ಧರ್ಮ ಹಾಗೂ ಧರ್ಮಿಗಳ ಅಭೇದಾಭಿಪ್ರಾಯದಿಂದ. ಅಥವಾ ಅಮೃತತ್ವಕ್ಕೂ ಕೂಡ ಒಡೆಯನಾಗಿದ್ದಾನೆಂಬುದು ಇದರ ಅರ್ಥ. ಏಕೆಂದರೆ ಮುಕ್ತಿಯೂ ಕೂಡ ಇವನ ಅಧೀನವಾಗಿದೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ತ್ವಪ್ರದೀಪದಲ್ಲಿ
ಬ್ರಾಹ್ಮಣಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ತ್ವಪ್ರಕಾಶಿಕಾ

ಬ್ರಾಹ್ಮಣನೆಂಬ ನಾಮಾತ್ಮಕಶಬ್ದ ಸಮನ್ವಯಕ್ಕಾಗಿ ಈ ಅಧಿಕರಣ

तत्त्वप्रकाशिका – ॥ पत्यादिशब्देभ्यः ॥

अत्र नित्यमहिमत्वलिङ्गेन, अजश्रुत्या च विष्णुविरिञ्चयोः साधारणस्य ब्राह्मणनाम्नो विष्णौ समन्वयप्रतिपादनादस्ति शास्त्रादिसङ्गतिः । श्रुत्यादिसङ्गतिं विषयादिकं च सूचयति – एष इति ॥

ಈ ಅಧಿಕರಣದಲ್ಲಿ 'ಬ್ರಾಹ್ಮಣ' ಎಂಬ ನಾಮಾತ್ಮಕ ಶಬ್ದವನ್ನು ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ 'ನಿತ್ಯಮಹಿಮತ್ವ' ಎಂಬ ಲಿಂಗಬಲದಿಂದ ಬ್ರಾಹ್ಮಣಶಬ್ದವು

ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ. ಅಜಶ್ರುತಿಯಿಂದ ಚತುರ್ಮುಖನಲ್ಲಿ ಪ್ರಸಿದ್ಧವಾಗಿದೆ. ಹೀಗೆ ಉಭಯಸಾಧಾರಣವಾದ 'ಬ್ರಾಹ್ಮಣ' ಎಂಬ ನಾಮಾತ್ಮಕ ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿರುವುದರಿಂದ ಶಾಸ್ತ್ರಸಂಗತಿ-ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳಿರುತ್ತವೆ. ಶ್ರುತಿಸಂಗತಿ, ಅಧಿಕರಣಸಂಗತಿ ಮತ್ತು ವಿಷಯಾದಿಗಳನ್ನು 'ಏಷ' ಇತ್ಯಾದಿ ಭಾಷ್ಯದಿಂದ ಸೂಚನೆ ಮಾಡುತ್ತಿದ್ದಾರೆ.

ಬೃಹದಾರಣ್ಯಕದಲ್ಲಿ ಹೇಳಿದ ಬ್ರಾಹ್ಮಣ

तत्वप्रकाशिका – प्राचीनाधिकरणेषु विष्णोर्नित्यमहिमत्वमभिसंहितम् । अनन्यापेक्षया जगत्स्रष्टृत्वादेरुपपादितत्वात् । तद्वाजसनेयके कस्यचिद् ब्राह्मणस्य प्रतीयते ।

ಹಿಂದಿನ ಅಧಿಕರಣಗಳಲ್ಲಿ ವಿಷ್ಣುವಿಗೆ ನಿತ್ಯಮಹಿಮತ್ವ ಎಂಬ ಧರ್ಮವನ್ನು ಸಮರ್ಥಿಸಲಾಯಿತು. ಏಕೆಂದರೆ, ಸ್ವತಂತ್ರವಾಗಿ ವಿಷ್ಣುವೊಬ್ಬನೇ ಜಗತ್ತನ್ನು ಸೃಷ್ಟಿ ಮಾಡುತ್ತಾನೆಂದು ಹೇಳಿದ್ದರಿಂದ. ಈ ಮಹಿಮೆಯನ್ನು ಬೃಹದಾರಣ್ಯಕೋಪನಿಷತ್ತು ಯಾರೋ ಒಬ್ಬ ಬ್ರಾಹ್ಮಣನಲ್ಲಿ ಹೇಳುತ್ತಿದೆ.

ಈ ಅಧಿಕರಣದ ವಿಷಯವಾಕ್ಯ

तत्वप्रकाशिका – 'एष नित्यो महिमा ब्राह्मणस्य न कर्मणा वर्धते नो कनीयान्' इति । तस्य च विष्णोरितरत्वेऽन्यस्यापि नित्यमहिमत्वप्रसङ्गादवश्य-निर्णेयत्वम् ।

'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ ನ ಕರ್ಮಣಾ ವರ್ಧತೇ ನೋ ಕನೀಯಾನ್' 'ಬ್ರಾಹ್ಮಣನಲ್ಲಿರುವ ಈ ಮಹಿಮೆಯು ನಿತ್ಯವಾಗಿದೆ. ಕರ್ಮದಿಂದ ಹೆಚ್ಚು ಅಥವಾ ಕಮ್ಮಿ ಆಗುವುದಿಲ್ಲ' ಎಂದು. ಈ ಬ್ರಾಹ್ಮಣಶಬ್ದವು ವಿಷ್ಣುವಿಗಿಂತ ಬೇರೆಯವರನ್ನು ಪ್ರತಿಪಾದನೆ ಮಾಡುವುದಾದರೆ ಬೇರೆಯವರಲ್ಲಿಯೇ ನಿತ್ಯಮಹಿಮತ್ವ ಎಂಬ ಧರ್ಮವು ಬರಬೇಕಾದೀತು. ಆದ್ದರಿಂದ ಬ್ರಾಹ್ಮಣಶಬ್ದದ ಸಮನ್ವಯವನ್ನು ಅವಶ್ಯವಾಗಿ ಮಾಡಲೇಬೇಕು.

ಅಧಿಕರಣದ ಸಂದೇಹಾದಿಗಳು

तत्वप्रकाशिका – स ब्राह्मणो विषयः । किं विष्णुर्विरिञ्चो वेति सन्देहः। उक्तसाधारण्यं सन्देहबीजमिति भावः ।

ಈ ಬ್ರಾಹ್ಮಣಶಬ್ದದ ಸಮನ್ವಯವೇ ಈ ಅಧಿಕರಣದ ಉದ್ದೇಶವಾಗಿದೆ. ಈ ಶಬ್ದದಿಂದ ಪ್ರತಿಪಾದ್ಯನು ಮಹಾವಿಷ್ಣುವೋ? ಅಥವಾ ಚತುರ್ಮುಖನೋ? ಎಂಬುದೇ ಸಂದೇಹ. ಹಿಂದೆ ಹೇಳಿದಂತೆ, ಉಭಯಸಾಧಾರಣ್ಯವೇ ಸಂದೇಹಬೀಜ ಎಂದು ಅಭಿಪ್ರಾಯ.

ಅಧಿಕರಣದ ಪೂರ್ವಪಕ್ಷ

तत्वप्रकाशिका – सयुक्तिकं पूर्वपक्षयति – स इति ।। स ब्राह्मणो विरिञ्चो भवेत् । अस्मिन् बहुशोऽजशब्दश्रवणात्, अजशब्दस्य च तस्मिन् प्रसिद्धत्वात् ।

ಯುಕ್ತಿಬದ್ಧವಾದ ಪೂರ್ವಪಕ್ಷವನ್ನು 'ಸ' ಇತ್ಯಾದಿ ಭಾಷ್ಯದಿಂದ ತೋರಿಸುತ್ತಿದ್ದಾರೆ. ಶ್ರುತಿಯಲ್ಲಿರುವ ಬ್ರಾಹ್ಮಣಶಬ್ದದಿಂದ ಚತುರ್ಮುಖನೇ ಪ್ರತಿಪಾದ್ಯನಾಗಬೇಕು. ಏಕೆಂದರೆ, ಅನೇಕ ಬಾರಿ 'ಅಜ' ಶಬ್ದವು ಶ್ರುತವಾಗುತ್ತಿದೆ. 'ಅಜ' ಶಬ್ದವಾದರೂ ಸಹ ಚತುರ್ಮುಖನಲ್ಲೇ ಪ್ರಸಿದ್ಧವಾಗಿದೆ.

ಯೌಗಿಕವಾಗಿ ಚತುರ್ಮುಖ ಪರ

तत्वप्रकाशिका – नच वाच्यं 'न जायते' इत्यजशब्दो विष्णावपि सावकाशः। तत्र यौगिकोऽसाविति चेत् विरिञ्चेऽपि विष्णुजातत्वयोगेन प्रवृत्तत्वादिति ।

'ನ ಜಾಯತೇ' ಎಂಬ ವ್ಯುತ್ಪತ್ತಿಯಿಂದ ಅಜಶಬ್ದವು ವಿಷ್ಣುವಿನಲ್ಲಿಯೂ ಸಾವಕಾಶವಾಗಿದೆ. ವಿಷ್ಣುವಿನಲ್ಲಿ ಯೌಗಿಕಾರ್ಥವನ್ನು ಹೇಳಿದಂತಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು ಚತುರ್ಮುಖನಲ್ಲಿಯೂ ವಿಷ್ಣುವಿನಿಂದ ಹುಟ್ಟಿದ್ದಾನೆ ಎಂಬ ಕಾರಣದಿಂದಲೇ ಅಜಶಬ್ದವು

ಇರುತ್ತದೆ. ಆದ್ದರಿಂದ ವಿಷ್ಣುವಿನಂತೆ ಚತುರ್ಮುಖನಲ್ಲಿಯೂ ಯೌಗಿಕವಾದ್ದರಿಂದ ಸಾವಕಾಶವಾಗುತ್ತದೆಂದು ಪ್ರಶ್ನಿಸಬಾರದು.

ಪೂರ್ವಪಕ್ಷಕ್ಕೆ ಅಜಶಬ್ದದ ಬೆಂಬಲ

तत्वप्रकाशिका – ब्राह्मणशब्देन सह पठितस्य विष्णावनवकाश(शात्) त्वात् । वर्णादिशून्यादीश्वराद् व्यावर्तमानस्य ब्राह्मणशब्दस्य सहश्रुताजशब्द-व्यावर्तकत्वात् ।

ಏಕೆಂದರೆ, ಬ್ರಾಹ್ಮಣಶಬ್ದದ ಜೊತೆಗೆ ಪಠಿತವಾದ ಅಜಶಬ್ದಕ್ಕೆ ವಿಷ್ಣುವಿನಲ್ಲಿ ಅವಕಾಶವೇ ಇರುವುದಿಲ್ಲ. ಬ್ರಾಹ್ಮಣ ಮೊದಲಾದ ವರ್ಣಗಳಿಂದ ಶೂನ್ಯನಾದ ಈಶ್ವರನಲ್ಲಿ ಬ್ರಾಹ್ಮಣಶಬ್ದದ ಸಮನ್ವಯವೇ ಕೂಡುವುದಿಲ್ಲ. ಇಂತಹ ಬ್ರಾಹ್ಮಣಶಬ್ದದ ಜೊತೆಗೆ ಪಠಿತವಾದ ಅಜಶಬ್ದವೂ ಸಹ ಅವನಲ್ಲಿ ಕೂಡುವುದಿಲ್ಲ. ಹೀಗೆ, ವಿಷ್ಣುವಿನಿಂದ ವ್ಯಾವೃತ್ತವಾದ ಬ್ರಾಹ್ಮಣಶಬ್ದವು ತನ್ನ ಜೊತೆಯಲ್ಲಿ ಪಠಿತವಾದ ಅಜಶಬ್ದವನ್ನೂ ಸಹ ವ್ಯಾವೃತ್ತಿ ಮಾಡುತ್ತದೆ.

ಆತ್ಮಶಬ್ದವೂ ಕೂಡ ಚತುರ್ಮುಖ ಪರ

तत्वप्रकाशिका – महत्तत्त्वाभिमानितया महच्छब्दोऽपि विरिञ्चिवाची । ब्राह्मणशब्देन सह श्रवणादजशब्दो यथा विरिञ्चिवाचीत्युच्यते, तथाऽऽत्मशब्देन सह श्रवणाद्विष्णुवाची किं न स्यादिति चेन्न । 'आत्मा विरिञ्चः सुमनाः सुधौतश्चेति कथ्यते'। इत्यादेरात्मशब्दस्य विरिञ्चेऽपि वृत्तेः ।

ಮತ್ತು ಬ್ರಹ್ಮನು ಮಹತ್ತತ್ವಕ್ಕೆ ಅಭಿಮಾನಿಯಾಗಿರುವುದರಿಂದ ಶ್ರುತಿಯಲ್ಲಿರುವ 'ಮಹಾನ್' ಎಂಬ ಶಬ್ದವೂ ಸಹ ಚತುರ್ಮುಖನನ್ನೇ ಪ್ರತಿಪಾದನೆ ಮಾಡುತ್ತದೆ. ಬ್ರಾಹ್ಮಣಶಬ್ದದ ಜೊತೆಗಿರುವ ಅಜಶಬ್ದವು ಹೇಗೆ ಚತುರ್ಮುಖನನ್ನು ಪ್ರತಿಪಾದಿಸುತ್ತದೋ, ಅದರಂತೆ ಅಜಶಬ್ದವು ಆತ್ಮಶಬ್ದದ ಜೊತೆಗೆ ಪಠಿತವಾದ್ದರಿಂದ ವಿಷ್ಣುವನ್ನು ಏಕೆ ಪ್ರತಿಪಾದನೆ ಮಾಡಬಾರದು? ಎಂದು ಶಂಕಿಸಬಾರದು. 'ಆತ್ಮಾ ವಿರಿಂಚಃ ಸುಮನಾಃ ಸುಧೌತಶ್ಚ ಇತಿ ಕಥ್ಯತೇ' ಎಂಬ ಕೋಶದಂತೆ ಆತ್ಮಶಬ್ದವು ಚತುರ್ಮುಖನನ್ನೂ ಸಹ ಪ್ರತಿಪಾದನೆ ಮಾಡುತ್ತದೆ.

ಪೂರ್ವಪಕ್ಷದ ಅಭಿಪ್ರಾಯ

तत्वप्रकाशिका – अतोऽजशब्दाद्विरिञ्च एवायं ब्राह्मण इति भावः ।

ಆದ್ದರಿಂದ ಅಜಶಬ್ದದ ಬಲದಿಂದ ಬ್ರಾಹ್ಮಣಶಬ್ದಪ್ರತಿಪಾದ್ಯನಾದವನು ಚತುರ್ಮುಖನೇ ಆಗುತ್ತಾನೆಂದು ಪೂರ್ವಪಕ್ಷದ ಅಭಿಪ್ರಾಯ.

ನಿತ್ಯಮಹಿಮೆಯು ಚತುರ್ಮುಖನಲ್ಲಿ ಅಸಂಭಾವಿತವೇ ?

तत्वप्रकाशिका – ननु कथं ब्राह्मणो विरिञ्चो भवेत् । 'तदुपर्यपि बादरायणः सम्भवात्' इत्यत्र देवानां विद्याकर्मभ्यां पदप्राप्तेः समर्थितत्वेन ब्राह्मणे श्रुतनित्यमहिमत्वस्य विरिञ्चेऽसम्भवात्? सादिपदस्य चानित्यत्वनियमादित्यत आह – देवानां चेति ।।

ಬ್ರಾಹ್ಮಣಶಬ್ದಕ್ಕೆ ಚತುರ್ಮುಖ ಎಂಬ ಅರ್ಥವನ್ನು ಹೇಗೆ ಹೇಳುತ್ತೀರಿ? ಏಕೆಂದರೆ, 'ತದುಪರ್ಯಪಿ ಬಾದರಾಯಣಃ ಸಂಭವಾತ್' ಎಂಬ ಸೂತ್ರದಲ್ಲಿ ದೇವತೆಗಳಿಗೆ ವಿದ್ಯೆ ಹಾಗೂ ಕರ್ಮಗಳಿಂದ ತಮ್ಮ ತಮ್ಮ ಪದವಿಗಳು ದೊರಕುತ್ತವೆಂದು ಸಮರ್ಥಿಸಲಾಗಿದೆ. ಹೀಗಿರುವಾಗ, ಬ್ರಾಹ್ಮಣನಲ್ಲಿ ಹೇಳಲ್ಪಟ್ಟ ನಿತ್ಯಮಹಿಮೆಯು ಚತುರ್ಮುಖನಲ್ಲಿ ಅಸಂಭಾವಿತವಾಗಿದೆ. ಉತ್ತನ್ನ ಪದವಿಯುಳ್ಳವರಿಗೆ ಅನಿತ್ಯತ್ವವು ಇದ್ದೇ ಇರುತ್ತದೆಂಬ ನಿಯಮವಿದೆಯಲ್ಲವೇ? ಎಂಬ ಆಶಂಕೆಗೆ 'ದೇವಾನಾಂ ಚ' ಇತ್ಯಾದಿ ಭಾಷ್ಯದಿಂದ ಉತ್ತರಿಸಿದ್ದಾರೆ.

ಚತುರ್ಮುಖನು ಈಶ್ವರ ಸ್ವರೂಪ

तत्वप्रकाशिका – देवताधिकरणे देवानामेव विद्याकर्मणोः सकाशात् पदप्राप्तिः समर्थिता न त्वीश्वरस्य । विरिञ्चश्चेश्वरस्वरूपमेव । अतस्तस्य नित्यमहिमत्वं युक्तमेव ।

ದೇವತಾಧಿಕರಣದಲ್ಲಿ ವಿದ್ಯೆ ಮತ್ತು ಕರ್ಮಗಳಿಂದ ದೇವತೆಗಳಿಗಷ್ಟೇ ಆಯಾ ಪದವಿಗಳು ದೊರಕುತ್ತವೆಂದು ಸಮರ್ಥಿಸಿದ್ದಾರೆ. ಆದರೆ, ಈಶ್ವರನಿಗೆ ಹಾಗೆ ಹೇಳಿರುವುದಿಲ್ಲ. ಚತುರ್ಮುಖನು ಈಶ್ವರನ ಸ್ವರೂಪಿಯಾಗಿರುವುದರಿಂದ ನಿತ್ಯಮಹಿಮೆಯನ್ನು ಹೇಳಿದ್ದು ಯುಕ್ತವೇ ಆಗಿದೆ.

ಇಲ್ಲದಿದ್ದರೆ ಪ್ರಕರಣವೇ ಅನುಪಪನ್ನ

तत्वप्रकाशिका – नच विरिञ्चस्येश्वरस्वरूपत्वमेव कुत इति वाच्यम् । अन्यथैतत्प्रकरणानुपपत्तेरेव तत्सिद्धेः ।

ಚತುರ್ಮುಖನಿಗೆ ಈಶ್ವರಸ್ವರೂಪತ್ವವನ್ನು ಹೇಗೆ ಹೇಳುತ್ತೀರಿ? ಎಂದು ಪ್ರಶ್ನಿಸಬಾರದು. ಈಶ್ವರಸ್ವರೂಪವನ್ನು ಚತುರ್ಮುಖನಿಗೆ ಒಪ್ಪದಿದ್ದರೆ, ಈ ಪ್ರಕರಣವೇ ಅನುಪಪನ್ನವಾಗಿ ವ್ಯರ್ಥವಾಗಬೇಕಾಗುತ್ತದೆ. ಈ ಅನ್ಯಥಾನುಪಪತ್ತಿಯಿಂದ ಈಶ್ವರಸ್ವರೂಪತ್ವವನ್ನು ವಿರಿಂಚನಿಗೆ ಒಪ್ಪಲೇಬೇಕು.

ಪೂರ್ವಪಕ್ಷದಲ್ಲಿರುವ ಶ್ರುತಿ ಹಾಗೂ ಲಿಂಗಗಳು

तत्वप्रकाशिका – तथाहि । अत्र तावद् ब्राह्मणाजशब्दौ श्रूयेते, नित्यमहिमत्वलिङ्गं, 'स न साधुना कर्मणा भूयान्नो एवासाधुना कनीयान्' इति पापाद्यलेपलिङ्गं च ।

ಅದು ಹೀಗೆ - ಈ ಪ್ರಕರಣದಲ್ಲಿ ಬ್ರಾಹ್ಮಣ ಮತ್ತು ಅಜಶಬ್ದಗಳು ಕೇಳಿಸುತ್ತಿವೆ. ಅಷ್ಟೇ ಅಲ್ಲದೆ, 'ನಿತ್ಯಮಹಿಮತ್ವ' ಎಂಬ ಲಿಂಗವು 'ಸ ನ ಸಾಧುನಾ ಕರ್ಮಣಾ ಭೂಯಾನ್ನೋ ಏವಾಸಾಧುನಾ ಕನೀಯಾನ್' ಎಂಬುದಾಗಿ ಪಾಪಾದ್ಯಲೇಪಲಿಂಗವು ಕೇಳಿಸುತ್ತಿದೆ.

ಶ್ರುತಿಲಿಂಗಗಳು ಉಭಯಪರವಲ್ಲ

तत्वप्रकाशिका – नच एतद्विष्णुविरिञ्चान्यतरमात्रग्रहणे युक्तम् । विष्णौ शब्दानवकाशाद्विरिञ्चे लिङ्गानवकाशात् । नच भिन्नतयोभयग्रहणेनोपपत्तिः। एकनिष्ठत्वात् ।

ಶಬ್ದ ಹಾಗೂ ಲಿಂಗಗಳು ವಿಷ್ಣು ಅಥವಾ ವಿರಿಂಚ ಇವರಿಬ್ಬರ ಮಧ್ಯದಲ್ಲಿ ಒಬ್ಬರನ್ನು ತೆಗೆದುಕೊಂಡರೂ ಯುಕ್ತವಾಗುವುದಿಲ್ಲ. ಏಕೆಂದರೆ, ವಿಷ್ಣುವಿನಲ್ಲಿ ಬ್ರಾಹ್ಮಣ ಮತ್ತು ಅಜ ಶಬ್ದಗಳಿಗವಕಾಶವಿಲ್ಲ. ವಿರಿಂಚನಲ್ಲಿ ನಿತ್ಯಮಹಿಮತ್ವ ಮತ್ತು ಪಾಪಾದ್ಯಲೇಪತ್ವಲಿಂಗಗಳಿಗೆ

ಅವಕಾಶವಿಲ್ಲ. ವಿಷ್ಣು-ವಿರಿಂಚವೆಂಬ ಎರಡು ಭಿನ್ನ ಪದಾರ್ಥಗಳನ್ನು ತೆಗೆದುಕೊಂಡು ಆಯಾ ಶಬ್ದ ಹಾಗೂ ಲಿಂಗಗಳನ್ನು ಕೂಡಿಸಬೇಕೆಂದರೆ, ಇದು ಸಹ ತಪ್ಪು. ಈ ಶಬ್ದ-ಲಿಂಗಗಳು ಏಕನಿಷ್ಠವಾಗಿವೆ.

ಇಬ್ಬರಿಗೂ ಅಭೇದ ಒಪ್ಪುವುದು ಅನಿವಾರ್ಯ

तत्वप्रकाशिका – अत एतदन्ययानुपपत्त्या विष्णुविरिञ्चयोरभेदसिद्धेर्युक्तं विरिञ्चस्यापि नित्यमहिमत्वमिति स एवात्रोक्तब्राह्मणः ।

ಈ ಏಕಾಧಿಕರಣತ್ವವನ್ನು ಕೂಡಿಸಬೇಕೆಂದರೆ ಬೇರೆ ಉಪಾಯವಿಲ್ಲದ ಕಾರಣ, ವಿಷ್ಣು ಹಾಗೂ ವಿರಿಂಚ ಇವರಿಬ್ಬರಿಗೂ ಅಭೇದವನ್ನು ಒಪ್ಪಬೇಕು. ಅಭೇದವನ್ನು ಒಪ್ಪದಿದ್ದರೆ ಸಾಮಾನಾಧಿಕರಣ್ಯವು ಯುಕ್ತವಾಗದ ಕಾರಣ ಸಾಮಾನಾಧಿಕರಣ್ಯದ ಅನ್ಯಥಾನುಪಪತ್ತಿಯಿಂದ ಅಭೇದವು ಸಿದ್ಧವಾಗುತ್ತದೆ.

ಅಭೇದ ಒಪ್ಪಲು ಶ್ರುತಿಯ ಆಧಾರ

तत्वप्रकाशिका – 'सत्वं रजस्तम इति प्रकृतेर्गुणास्तैर्युक्तः परः पुरष एक इहास्य धत्तेः । स्थित्यादये हरिविरिञ्चहरेति संज्ञा' इत्यादेश्च ।

ಮತ್ತು 'ಸತ್ವಂ ರಜಸ್ತಮ ಇತಿ ಪ್ರಕೃತೇರ್ಗುಣಾಸ್ತೈರ್ಯುಕ್ತಃ ಪರಃ ಪುರುಷ ಏಕ ಇಹಾಸ್ಯ ಧತ್ತೇ । ಸ್ಥಿತ್ಯಾದಯೇ ಹರಿವಿರಿಂಚಹರೇತಿ ಸಂಜ್ಞಾ ॥' ಪರಮಪುರುಷನಾದ ನಾರಾಯಣನು ಪ್ರಕೃತಿಗಿಂತ ಶ್ರೇಷ್ಠನಾಗಿದ್ದಾನೆ. ಆದರೂ ಸಹ ಪ್ರಕೃತಿಯ ಗುಣಗಳೆನಿಸಿದ ಸತ್ವ, ರಜಸ್ಸು, ತಮಸ್ಸು ಈ ಗುಣಗಳಿಂದ ಯುಕ್ತನಾಗಿರುವಂತೆ ವಿಶ್ವದ ಸ್ಥಿತಿ, ಉತ್ಪತ್ತಿ, ಸಂಹಾರಗಳನ್ನು ನಡೆಸುತ್ತಾನೆ. ಒಬ್ಬನೇ ಈ ನಾರಾಯಣನು ಹರಿ, ವಿರಿಂಚಿ, ಹರ ಮೊದಲಾದ ಹೆಸರುಗಳನ್ನು ಧಾರಣೆ ಮಾಡಿದ್ದಾನೆ. ಈ ಪ್ರಮಾಣದ ಬಲದಿಂದಲೂ ವಿರಿಂಚ ಹಾಗೂ ವಿಷ್ಣುವಿಗೆ ಅಭೇದವು ಸಿದ್ಧವಾಗುತ್ತದೆ.

ಅಭೇದ ಒಪ್ಪಿದ ಮೇಲೆ ಚತುರ್ಮುಖನೇ ಏಕಾಗಬೇಕು ?

तत्वप्रकाशिका – तर्हि विरिञ्च एवेति निर्बन्धे को हेतुः । मैवम् । कारणशब्दानां कार्ये प्रवृत्त्युपपत्तिवत् कार्यशब्दानां कारणे तदनुपपत्तेरिति भावः।

ಹಾಗಾದರೆ ಬ್ರಾಹ್ಮಣಶಬ್ದದಿಂದ ವಿರಿಂಚನೊಬ್ಬನೇ ಪ್ರತಿಪಾದ್ಯನಾಗುತ್ತಾನೆನ್ನಲು ಏನು ಕಾರಣ? ಎಂದು ಪ್ರಶ್ನಿಸಬಾರದು. ಕಾರಣವಾಚಕವಾದ ಶಬ್ದಗಳಿಗೆ ಕಾರ್ಯದಲ್ಲಿ ಪ್ರವೃತ್ತಿಯುಂಟಾಗುವಂತೆ, ಕಾರ್ಯವಾಚಕ ಶಬ್ದಗಳಿಗೆ ಕಾರಣದಲ್ಲಿ ಪ್ರವೃತ್ತಿಯಿರುವುದಿಲ್ಲವೆಂದು ಅಭಿಪ್ರಾಯ.

ಮಹಾವಿಷ್ಣುವೇ ಬ್ರಾಹ್ಮಣನೆಂದು ಸಿದ್ಧಾಂತ ಸ್ಥಾಪನೆ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। अयं ब्राह्मणो विष्णुरेव ।

ಸಿದ್ಧಾಂತವನ್ನು ಸಮರ್ಥಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ, 'ಅತಃ' ಇತ್ಯಾದಿಯಾಗಿ. ಶ್ರುತಿಯಲ್ಲಿರುವ ಬ್ರಾಹ್ಮಣಶಬ್ದವು ಮಹಾವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತದೆ.

ಸರ್ವಾಧಿಪತಿಯಾದವನೇ ಬ್ರಾಹ್ಮಣನು

तत्वप्रकाशिका – 'सर्वस्य वशी सर्वस्योशानः सर्वस्याधिपतिः एष सर्वेश्वर एष भूताधिपतिरेष भूतपाल एष सेतुर्विधरण एषां लोकानामसम्भेदाय स एष नेति नेत्यात्माऽगृह्यो नहि गृह्यतेऽशीर्यो नहि शीर्यतेऽसङ्गो नहि सज्जतेऽसितो न व्यथते न रिष्यति स एष आत्माऽजरोऽमरोऽमृतोऽभयः' इति सर्वाधिपत्यादिवाचिशब्दसद्भावात् ।

'ಸರ್ವಸ್ಯ ವಶೀ ಸರ್ವಸ್ಯೇಶಾನಃ ಸರ್ವಸ್ಯಾಧಿಪತಿಃ ಏಷ ಸರ್ವೇಶ್ವರಃ ಏಷ ಭೂತಾಧಿಪತಿರೇಷ ಭೂತಪಾಲ ಏಷ ಸೇತುರ್ವಿಧರಣ ಏಷಾಂ ಲೋಕಾನಾಮಸಂಭೇದಾಯ ಸ ಏಷ ನೇತಿ ನೇತ್ಯಾತ್ಮಾಗೃಹ್ಯೋ ನಹಿ ಗೃಹ್ಯತೇಽಶೀರ್ಯೋ ನಹಿ ಶೀರ್ಯತೇಽಸಂಗಃ ನಹಿ ಸಜ್ಜತೇಽಸಿತೋ ನ ವ್ಯಥತೇ ನ ರಿಷ್ಯತಿ ಸ ಏಷ ಆತ್ಮಾಜರೋಽಮರೋಽಮೃತೋಽಭಯಃ' 'ಪರಮಾತ್ಮನು ಸರ್ವನಿಯಾಮಕನು, ಅನಾದಿ ಕಾಲದಿಂದ ಸಕಲ ಭೂತಗಳಿಗೆ ಅಧಿಪತಿಯು, ಸಂರಕ್ಷಕನು, ಸಕಲ ಜಗತ್ತನ್ನು ನಾಶವಾಗದಂತೆ ಧಾರಣೆ ಮಾಡಿದವನು. ಎಲ್ಲ ಪದಾರ್ಥಗಳಿಗೂ ಆಶ್ರಯನು. ದೃಷ್ಟವಾದ, ಶ್ರುತವಾದ ವಸ್ತುಗಳಿಗಿಂತೆಲ್ಲ ವಿಲಕ್ಷಣನು. ಅವನನ್ನು ತಿಳಿಯಲು

ಯಾರಿಗೂ ಸಾಧ್ಯವಿಲ್ಲ. ಆದ್ದರಿಂದಲೇ ಅಗ್ರಾಹ್ಯನು. ನಾಶವಿಲ್ಲದ ಕಾರಣ ಅಶೀರ್ಯನು. ಯಾವ ಪದಾರ್ಥಗಳಲ್ಲಿಯೂ ಕಾಮನೆಯುಳ್ಳವನಲ್ಲ. ಆದ್ದರಿಂದಲೇ ಅಸಂಗನು. ಬದ್ಧನಲ್ಲ, ದುಃಖಿಯಲ್ಲ, ನಾಶಿಯಲ್ಲ, ಜರಾ-ಮರಣ-ಭೀತಿ ಮೊದಲಾದವುಗಳಿಂದ ಶೂನ್ಯನು.' ಇತ್ಯಾದಿಯಾಗಿ ಈ ಪ್ರಕರಣದಲ್ಲಿ ಸರ್ವಾಧಿಪತ್ಯವನ್ನು ಹೇಳುವಂತಹ ಶಬ್ದಗಳು ಇರುತ್ತವೆ.

ಚತುರ್ಮುಖನು ಸರ್ವಾಧಿಪತಿ ಅಲ್ಲ

तत्वप्रकाशिका – तथा च तस्यैव नित्यमहिमत्त्वमिति भावः । सर्वाधिपत्यादिवाचिशब्दसद्भावेऽपि कुतो विष्णुत्वनिश्चय इत्यत आह – ततेति ।।

ಆದ್ದರಿಂದ, ಮಹಾವಿಷ್ಣುವೇ ನಿತ್ಯಮಹಿಮೆಯುಳ್ಳವನೆಂದು ಸಿದ್ಧವಾಗುತ್ತದೆ. ಸರ್ವಾಧಿಪತ್ಯವನ್ನು ಹೇಳುವಂತಹ ಶಬ್ದವು ಇದ್ದ ಮಾತ್ರಕ್ಕೆ ವಿಷ್ಣುವೇ ಬ್ರಾಹ್ಮಣಶಬ್ದಪ್ರತಿಪಾದ್ಯನೆಂದು ಏಕೆ ನಿಶ್ಚಯವಾಗಬೇಕು? ಎಂಬ ಪ್ರಶ್ನೆಗೆ 'ಉತ' ಎಂಬ ಪ್ರಮಾಣವನ್ನು ಉಲ್ಲೇಖಿಸುತ್ತಿದ್ದಾರೆ.

ಮುಕ್ತರಿಗೂ ಅಧಿಪತಿ ಮಹಾವಿಷ್ಣು

तत्वप्रकाशिका – यद्भूतं भविष्यद्वर्तमानं सर्वं तत्परमपुरुषाधीनम् । न केवलममुक्तसर्वाधिपतिः पुरुषः, किन्तु मुक्तसमुदायस्यापि यस्मात् संसारि समूहमतिशेते । मुक्तावनधीनत्वे सर्वज्ञस्य बुद्धिमतः स्वाधीनसंसारिभ्यो मोक्षप्रदानायोगादित्यर्थः ।

ಭೂತ-ಭವಿಷ್ಯತ್-ವರ್ತಮಾನಕಾಲದಲ್ಲಿರುವ ಸಕಲ ವಿಶ್ವವು ಸರ್ವಾಧಿಪತಿಯಾದ ಪರಮಾತ್ಮನ ಅಧೀನವಾಗಿದೆ. ಆ ಪರಮಪುರುಷನು ಕೇವಲ ಅಮುಕ್ತರಿಗಷ್ಟೇ ನಿಯಾಮಕನಾಗಿಲ್ಲ. ಮುಕ್ತರಿಗೂ ಸಹ ನಿಯಾಮಕನಾಗಿದ್ದಾನೆ. ಏಕೆಂದರೆ, ಸಂಸಾರಿಗಳ ಸಮೂಹವನ್ನೇ ಅತಿಕ್ರಮಣ ಮಾಡಿದ್ದಾನೆ. ಮುಕ್ತವಸ್ಥೆಯಲ್ಲಿ ಮುಕ್ತಜೀವನು ಪರಮಾತ್ಮನ ಅಧೀನನಾಗದಿದ್ದರೆ ಸರ್ವಜ್ಞನಾದ ಭಗವಂತನ ದೆಸೆಯಿಂದ ಅವನ ಅಧೀನರಾದ ಸಂಸಾರಿಗಳಿಗೆ ಮೋಕ್ಷ ಸಿಗುವುದೇ ಸಾಧ್ಯವಿಲ್ಲ ಎಂದು ಶ್ರುತಿಯ ಅರ್ಥ.

ಸರ್ವಪ್ರೇರಕತ್ವವು ಪರಮಾತ್ಮನ ಅಸಾಧಾರಣ ಧರ್ಮ

तत्वप्रकाशिका – ईशानपदात्तसर्वप्रेरकत्वे द्वितीया श्रुतिः । नेति नेतीत्युक्तश्रुतदृष्टवैलक्षण्ये तृतीया । सर्ववशित्वादौ श्रुत्यन्तराण्यादिपदेन सूचयति ।

ಈಶಾನಶಬ್ದದಿಂದ ಹೇಳಲ್ಪಟ್ಟ ಸರ್ವಪ್ರೇರಕತ್ವ ಧರ್ಮವು ಪರಮಾತ್ಮನದ್ದೇ ಆಗಿದೆ, ಎಂಬ ವಿಷಯದಲ್ಲಿ 'ಸಪ್ತಾರ್ಧಗರ್ಭಾ' ಎಂಬ ಎರಡನೇ ಶ್ರುತಿಯನ್ನು ಪ್ರಮಾಣವನ್ನಾಗಿ ನೀಡಿದ್ದಾರೆ. ಮತ್ತು 'ನೇತಿ ನೇತಿ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಶ್ರುತವಾದ ದೃಷ್ಟವಾದ ಸಕಲ ಪದಾರ್ಥಗಳಿಂದ ಪರಮಾತ್ಮನು ವಿಭಿನ್ನನಾಗಿದ್ದಾನೆಂದು ತಿಳಿಸಲು 'ಸ ಯೋಽತೋ' ಎಂಬ ಮೂರನೇ ಶ್ರುತಿಯನ್ನು ಪ್ರಮಾಣವನ್ನಾಗಿ ಉಲ್ಲೇಖಿಸಿದ್ದಾರೆ. ಈ ಪ್ರಕರಣದಲ್ಲಿ ಬ್ರಾಹ್ಮಣನಿಗೆ ಸರ್ವವಶಿತ್ವ ಮುಂತಾದ ಧರ್ಮಗಳನ್ನು ಹೇಳಿದ್ದಾರೆನ್ನಲು ಉಳಿದ ಶ್ರುತಿಗಳನ್ನು ಪ್ರಮಾಣವನ್ನಾಗಿ ಹೇಳಿರುತ್ತಾರೆ. ಅಂತಹ ಪ್ರಮಾಣಗಳು ಬಹಳವಾಗಿವೆ ಎಂಬುದನ್ನು ತಿಳಿಸುವುದಕ್ಕಾಗಿ ಆದಿಪದವನ್ನು ಪ್ರಯೋಗಿಸಿದ್ದಾರೆ.

ಅಜಶಬ್ದದ ಯೋಗವೃತ್ತಿ ಮಹಾವಿಷ್ಣುವಿನಲ್ಲಿ

तत्वप्रकाशिका – नच विष्णोर्ब्राह्मणत्वेऽजशब्दविरोधः । 'न जायते' इति योगेनोपपत्तेः ।

ವಿಷ್ಣು ಎಂಬ ಅರ್ಥವನ್ನು ಸ್ವೀಕರಿಸಿದರೆ, ಅಜಶಬ್ದದ ವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. 'ನ ಜಾಯತೇ' ಎಂಬ ಯೋಗವೃತ್ತಿಯಿಂದ ಅಜಶಬ್ದವನ್ನು ವಿಷ್ಣುವಿನಲ್ಲಿ ಕೂಡಿಸಬಹುದು.

ಬ್ರಾಹ್ಮಣಶಬ್ದದ ಯೋಗಾರ್ಥ

तत्वप्रकाशिका – नच विष्णौ ब्राह्मणशब्दानुपपत्त्याजशब्दापहारः । 'ब्रह्मणा वेदेन गम्यते' इति योगेनोपपत्तेः ।

ವಿಷ್ಣುವಿನಲ್ಲಿ ಬ್ರಾಹ್ಮಣಶಬ್ದವನ್ನು ಉಪಪಾದನೆ ಮಾಡಲು ಬಾರದ ಕಾರಣ, ಅಜಶಬ್ದವನ್ನು ಸಹ ಕೂಡಿಸಲು ಬರುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಬ್ರಾಹ್ಮಣಶಬ್ದಕ್ಕೆ 'ಬ್ರಹ್ಮಣಾ ವೇದೇನ ಗಮ್ಯತೇ' ವೇದದಿಂದ ಯಾರು ಜ್ಞಾತರಾಗುತ್ತಾರೋ, ಅವರೇ ಬ್ರಾಹ್ಮಣರು, ಎಂಬ ಯೌಗಿಕಾರ್ಥದಿಂದ ಉಪಪಾದಿಸಬಹುದು.

ಸ್ವರವ್ಯತ್ಯಾಸದಿಂದ ಆಧಿಕ್ಯ

तत्वप्रकाशिका – स्वरव्यत्ययस्याधिक्यार्थत्वात् । अण गताविति धातोः । अन्यथा पत्यादिशब्दविरोधात् ।

ಬ್ರಾಹ್ಮಣಶಬ್ದದಲ್ಲಿ ಸ್ವರವ್ಯತ್ಯಾಸವಿರುವುದು ಆಧಿಕ್ಯಾರ್ಥದ ಸೂಚನೆಗೋಸ್ಕರ. ಅಂದರೆ 'ಬ್ರಹ್ಮಣಿ ಅಣ್ಯತೇ ಇತಿ ಬ್ರಾಹ್ಮಣಃ' ಎಂದು ವ್ಯುತ್ಪತ್ತಿಯನ್ನು ತೋರಿಸಿದಾಗ 'ಬ್ರಹ್ಮಾಣಃ' ಎಂದಾಗಬೇಕು. 'ಬ್ರಾಹ್ಮಣಃ' ಎಂದು ಸ್ವರವ್ಯತ್ಯಾಸವಾಗಿದ್ದು ವಿಷ್ಣುವಿನಲ್ಲಿರುವ ವೇದಪ್ರತಿಪಾದ್ಯತ್ವವು ಅತಿಶಯವಾಗಿದೆ ಎಂಬುದನ್ನು ಸೂಚನೆ ಮಾಡುವುದಕ್ಕಾಗಿ. 'ಅಣ ಗತೌ' ಎಂಬ ಧಾತುವಿನಿಂದ ಈ ರೂಪವು ಸಿದ್ಧವಾಗುತ್ತದೆ. ಆದ್ದರಿಂದ 'ಬ್ರಹ್ಮಾ ಅಣ್ಯತೇ ಗಮ್ಯತೇ ಇತಿ ಬ್ರಾಹ್ಮಣಃ' ಎಂದು ವಿಗ್ರಹ ಮಾಡಬೇಕು. ಬ್ರಾಹ್ಮಣಶಬ್ದಕ್ಕೆ ವಿರಿಂಚ ಎಂಬರ್ಥವನ್ನು ಮಾಡಿದರೆ ಶ್ರುತಿಯಲ್ಲಿ ಹೇಳಲ್ಪಟ್ಟ ಆಧಿಪತ್ಯಾದಿ ಶಬ್ದಗಳ ವಿರೋಧವು ಬರುತ್ತದೆ.

ಅಭೇದ ಒಪ್ಪಲು ಆಧಾರವಿಲ್ಲ

तत्वप्रकाशिका – न चाभेदात्पतित्वादिर्विरिञ्चेऽपि सम्भवति इति वाच्यम् । तदभेदे मानाभावात् । ब्रह्मणाजशब्दयोरुक्तरीत्याऽन्यथाप्युपपत्तेः ।

ಪರಮಾತ್ಮ ಹಾಗೂ ಚತುರ್ಮುಖ ಬ್ರಹ್ಮರಿಗೆ ಅಭೇದವಿರುವ ಪ್ರಯುಕ್ತ ಆಧಿಪತಿ ಮೊದಲಾದ ಶಬ್ದಗಳನ್ನು ಚತುರ್ಮುಖನಲ್ಲಿಯೂ ಕೂಡಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ, ಚತುರ್ಮುಖ ಹಾಗೂ ವಿಷ್ಣುವಿಗೆ ಅಭೇದವಿದೆ ಎಂದು ಹೇಳಲು, ಯಾವುದೇ ಪ್ರಮಾಣವಿಲ್ಲ. ಏಕೆಂದರೆ, ಬ್ರಾಹ್ಮಣ ಹಾಗೂ ಅಜ ಶಬ್ದಗಳಲ್ಲಿ ಹಿಂದೆ ಹೇಳಿದಂತೆ ಅಭೇದವನ್ನು ಒಪ್ಪದೆಯೂ ಕೂಡಿಸಲು ಬರುತ್ತದೆ.

ಚತುರ್ಮುಖನಿಂದ ಮಹಾವಿಷ್ಣು ಅತ್ಯಂತ ಭಿನ್ನ

ತತ್ವಪ್ರಕಾಶಿಕಾ – ಸ್ಮೃತೇಸ್ತದನ್ತರ್ಗತೇಶ್ವರರೂಪಾಪೇಕ್ಷಯೋಪಪತ್ತೇಃ । 'ಸ್ವಧರ್ಮನಿಷ್ಠಃ ಶತಜನ್ಮಭಿಃ ಪುಮಾನ್ ವಿರಿಞ್ಚತಾಮೇತಿ ತತಃ ಪರಂ ಹಿ ಮಾಮ್' ಇತಿ ವಚನಾದ್ವಿರಿಞ್ಚಸ್ಯ ಕರ್ಮ ಫಲಾಭಾವಾಯುಕ್ತೇರ್ನಿತ್ಯಮುಕ್ತೇನ ಪರಮಾತ್ಮನಾ ಭೇದಸ್ಯೈವೋಪಪನ್ನತ್ವಾತ್ ।

'ಸತ್ವಂ ರಜಸ್ತಮಃ' ಎಂಬ ಸ್ಮೃತಿಯನ್ನು ಅಂತರ್ಯಾಮಿರೂಪದಿಂದ ಕೂಡಿಸಬೇಕು. 'ಸ್ವಧರ್ಮನಿಷ್ಠಃ ಶತಜನ್ಮಭಿಃ ಪುಮಾನ್ ತತಃ ಪರಂ ಹಿ ಮಾಮ್' 'ಸ್ವಧರ್ಮನಿಷ್ಠಪುರುಷನು ನೂರು ಜನ್ಮದಲ್ಲಿ ವಿರಿಂಚನನ್ನು ಹೊಂದುತ್ತಾನೆ. ಅನಂತರ ನನ್ನನ್ನು ಹೊಂದುತ್ತಾನೆ'. ಈ ಮಾತಿನಿಂದ ಚತುರ್ಮುಖನಿಗೆ ಕರ್ಮಫಲದ ಲೇಪವೇ ಇರುವುದಿಲ್ಲವಲ್ಲ ? ಎಂದು ಪ್ರಶ್ನಿಸಬಾರದು. ಕರ್ಮಫಲದ ಲೇಪವಿರುವುದಿಲ್ಲವೆಂದು ಹೇಳಲು ಬರುವುದಿಲ್ಲವೆಂದು ಸಿದ್ಧವಾಗುತ್ತದೆ. ಆದ್ದರಿಂದ ನಿತ್ಯಮುಕ್ತನಾದ ಪರಮಾತ್ಮನ ದೆಸೆಯಿಂದ ಚತುರ್ಮುಖನಿಗೆ ಭೇದವನ್ನು ಹೇಳುವುದು ಅನಿವಾರ್ಯ.

ವಿಷ್ಣುವೇ ನಿತ್ಯಮಹಿಮೆಯುಳ್ಳವನು

ತತ್ವಪ್ರಕಾಶಿಕಾ – 'ತತ ಏತೇ ವ್ಯಜಾಯನ್ತ ವಿಶ್ವೋ ಹಿರಣ್ಯಗರ್ಭಃ' ಇತ್ಯಾದಿಭೇದಶ್ರುತಿ-ಬಾಹುಲ್ಯಾಚ್ಚ । ಅತೋ ವಿಷ್ಣುರೇವಾಯಂ ಬ್ರಾಹ್ಮಣೋ ನಿತ್ಯಮಹಿಮಾಚೇತಿ ಸಿದ್ಧಮ್ ।।೪೩।।

।। ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತಸ್ಯ ಶ್ರೀಮದ್ಬ್ರಹ್ಮಸೂತ್ರಭಾಷ್ಯಸ್ಯ ಟೀಕಾಯಾಂ ಶ್ರೀಮಜ್ಜಯತೀರ್ಥಭಿಕ್ಷುವಿರಚಿತಾಯಾಂ ತತ್ವಪ್ರಕಾಶಿಕಾಯಾಮ್ ಪ್ರಥಮಾಧ್ಯಾಯಸ್ಯ ತೃತೀಯಃ ಪಾದಃ ।।

'ತತ ಏತೇ ವ್ಯಜಾಯಂತ ವಿಶ್ವೋ ಹಿರಣ್ಯಗರ್ಭಃ' ಇವೇ ಮೊದಲಾದ ಶ್ರುತಿಗಳೆಲ್ಲವೂ ಚತುರ್ಮುಖ ಹಾಗೂ ವಿಷ್ಣುವಿಗೆ ಭೇದವನ್ನೇ ಪ್ರತಿಪಾದನೆ ಮಾಡುತ್ತಿದೆ. ಆದ್ದರಿಂದ ಮಹಾವಿಷ್ಣುವೇ ಬ್ರಾಹ್ಮಣಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ. ನಿತ್ಯಮಹಿಮೆಯುಳ್ಳವನೂ ಕೂಡ ವಿಷ್ಣುವೇ ಆಗುತ್ತಾನೆಂದು ಸಿದ್ಧವಾಯಿತು.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ಬ್ರಾಹ್ಮಣಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

.ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಬ್ರಾಹ್ಮಣಶಬ್ದವು ಏಕೆ ಉಭಯಸಾಧಾರಣ ?

ಭಾವದೀಪಃ – ।। पत्यादिशब्देभ्यः ।।

ಭಾಷ್ಯಸೂಚಿತಂ ಸಾಧಾರಣ್ಯಬೀಜಮಾಹ – अत्र नित्यमहिमत्त्वेति ।। ಸಙ್ಗತಿಪರತಯಾ ಭಾಷ್ಯಂ ವ್ಯಾಕುರ್ವನ್ ಬ್ರಾಹ್ಮಣಸ್ಯಾಪೀತ್ಯಪಿಪದಸೂಚಿತಮಾಹ – ಪ್ರಾಚೀನೇತಿ ।।

ಬ್ರಾಹ್ಮಣಶಬ್ದವು ವಿಷ್ಣು ಹಾಗೂ ವಿರಿಂಚರಲ್ಲಿ ಸಾಧಾರಣವಾಗಿದೆ ಎಂದು ಭಾಷ್ಯದಲ್ಲಿ ಹೇಳಿದ್ದಾರೆ. ಅದಕ್ಕೆ ಕಾರಣವನ್ನು 'ಅತ್ರ ನಿತ್ಯಮಹಿಮತ್ವ' ಇತ್ಯಾದಿ ವಾಕ್ಯದಿಂದ ಸಮರ್ಥನೆ ಮಾಡುತ್ತಿದ್ದಾರೆ. ಸಂಗತಿಪರವಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡಿ 'ಬ್ರಾಹ್ಮಣಸ್ಯಾಪಿ' ಎಂಬಲ್ಲಿರುವ 'ಅಪಿ'ಪದದಿಂದ ಸೂಚಿತವಾದದ್ದನ್ನು 'ಪ್ರಾಚೀನಾಧಿಕರಣವಾಕ್ಯೇಷು' ಎಂಬ ವಾಕ್ಯದಲ್ಲಿ ಹೇಳಿದ್ದಾರೆ.

'ಅಭಿಸಂಹಿತಂ' ಎಂಬ ಪದ ಪ್ರಯೋಗದ ಸ್ವಾರಸ್ಯ

ಭಾವದೀಪಃ – ಸಾಕ್ಷಾದನುಕ್ತೇರಾಹ – अभिसंहितमिति ।। ತದ್ ವ್ಯನಕ್ತಿ – अनन्येति।। ಏಷ ಇತ್ಯಾದಿ ವ್ಯಾಚಷ್ಟೇ – एतदिति ।। ಷಷ್ಠೇऽಧ್ಯಾಯ ಇತ್ಯರ್ಥಃ । ಸ ಚೇತ್ಯಾದೇಸ್ತಾತ್ಪರ್ಯಮ್ – तस्य चेति ।। ವಕ್ಷ್ಯಮಾಣದಿಶಾ ವಿರಿಞ್ಚತ್ವ ಇತ್ಯರ್ಥಃ । ಅಪಿಪದಸೂಚಿತಾಭಿಸಂಹಿತಮಿತ್ಯನ್ತವಾಕ್ಯಸ್ಯ ಭಾವಃ – अन्यस्यापीति ।।

ಹಿಂದಿನ ಅಧಿಕರಣಗಳಲ್ಲಿ ವಿಷ್ಣುವಿನ ಮಹಿಮೆಯು ನೇರವಾಗಿ ಹೇಳದ ಕಾರಣ 'ಅಭಿಸಂಹಿತಂ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಅದನ್ನೇ 'ಅನನ್ಯಾಪೇಕ್ಷಯಾ' ಎಂಬ ವಾಕ್ಯದಿಂದ ಪ್ರತಿಪಾದನೆ ಮಾಡಿದ್ದಾರೆ. 'ಏಷ ನಿತ್ಯಃ' ಎಂಬ ಶ್ರುತಿಯನ್ನು 'ಏತತ್' ಎಂಬುದರಿಂದ ವ್ಯಾಖ್ಯಾನ ಮಾಡಿದ್ದಾರೆ. ಬೃಹದಾರಣ್ಯಕೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ 'ಏಷ ನಿತ್ಯೋ ಮಹಿಮಾ' ಎಂಬ ವಾಕ್ಯವಿರುತ್ತದೆ.

'ಸ ಚ' ಎಂಬ ಭಾಷ್ಯವಾಕ್ಯದ ತಾತ್ಪರ್ಯವನ್ನು 'ತಸ್ಯ ಚ' ಎಂಬ ಟೀಕೆಯಲ್ಲಿ ಹೇಳಿದ್ದಾರೆ. ಮುಂದೆ ಹೇಳುವಂತೆ ವಿರಿಂಚನೇ ಪ್ರತಿಪಾದ್ಯನಾದಲ್ಲಿ ಎಂದು ಅರ್ಥ.

ಬ್ರಾಹ್ಮಣ ಶಬ್ದವು ಜಾತಿಪರವೇ ?

भावदीपः – विरिञ्चो वेति ।। विप्रमात्रे ब्राह्मणपदस्य लोकप्रसिद्धावपि इहाजश्रुत्या न तस्य सन्देहनिविष्टत्वमिति भावः । पूर्वपक्षादिपरत्वेना-प्यवतार्य 'स च ब्राह्मणो विरिञ्चः' इति प्रतिज्ञार्थमाह – स ब्राह्मणेति ।। 'स वा एषः' इति भाष्योपात्तवाक्यस्यास्मिन् प्रकरणे बहुकृत्वः श्रवणादाह – बहुश इति ।। प्रसिद्धत्वादिति रूढत्वादित्यर्थः ।।

ಬ್ರಾಹ್ಮಣ ಪದವು ಬ್ರಾಹ್ಮಣ ಜಾತಿಯಲ್ಲಿ ಲೋಕಪ್ರಸಿದ್ಧವಾಗಿದೆ. ಪ್ರಕೃತ ಅಜಶ್ರುತಿಯಿರುವುದರಿಂದ ಅಂತಹ ಬ್ರಾಹ್ಮಣ ಜಾತಿಯವರು ಸಂದೇಹಕ್ಕೆ ವಿಷಯವಾಗಿಲ್ಲವೆಂದು ತಿಳಿಯಬೇಕು. ಪೂರ್ವಪಕ್ಷಾದಿ ಪರವಾಗಿಯೂ ಕೂಡ ಭಾಷ್ಯಕ್ಕೆ ಅವತಾರಿಕೆ ನೀಡಿ, ಅಂತಹ ಬ್ರಾಹ್ಮಣನು ವಿರಿಂಚನೇ ಆಗಿದ್ದಾನೆ ಎಂಬ ಪ್ರತಿಜ್ಞಾರ್ಥವನ್ನು 'ಸ ಬ್ರಾಹ್ಮಣಃ' ಎಂಬುದರಿಂದ ಹೇಳಿದ್ದಾರೆ. 'ಸ ವಾ ಏಷಃ' ಎಂಬ ಭಾಷ್ಯದಲ್ಲಿ ಉದಾಹರಿಸಿದ ವಾಕ್ಯವು ಈ ಪ್ರಕರಣದಲ್ಲಿ ಅನೇಕ ಬಾರಿ ಶ್ರುತವಾಗಿದೆ ಎಂಬುದಾಗಿ 'ಬಹುಶಃ' ಎಂಬ ಟೀಕೆಯಿಂದ ಹೇಳುತ್ತಿದ್ದಾರೆ. 'ಪ್ರಸಿದ್ಧತ್ವಾತ್' ಎಂದರೆ ರೂಢವಾದ್ದರಿಂದ ಎಂದು ಅರ್ಥ.

ಬ್ರಾಹ್ಮಣಪದದ ಸಾಹಿತ್ಯದಿಂದ ಪೂರ್ವಪಕ್ಷವನ್ನು ಮಾಡಬಹುದೇ ?

भावदीपः – यौगिक इति ।। उपलक्षणमेतत् । विरिञ्चे रूढत्ववत् 'तस्मादहमजः स्मृतः' इति भारतवाक्यादजशब्दस्य विष्णौ रूढेरपि सत्वादित्यपि ध्येयम् । अन्यथा विरिञ्चे योगरूढ्योः केवलयोगात् प्राबल्येन पूर्वपक्षसम्भवात् । ब्राह्मणपदसाहित्येनोज्जीवनायोगात् ।

'ಯೌಗಿಕಃ' ಎಂಬುದು ಉಪಲಕ್ಷಣವಾಗಿದೆ. ವಿರಿಂಚನಲ್ಲಿ ಬ್ರಾಹ್ಮಣಶಬ್ದವು ರೂಢವಾದದ್ದೇ 'ತಸ್ಮಾದಹಮಜಃ ಸ್ಮೃತಃ' ಎಂಬ ಮಹಾಭಾರತದ ವಾಕ್ಯದಿಂದ. ಅಜಶಬ್ದವು ವಿಷ್ಣುವಿನಲ್ಲಿಯೂ ರೂಢವಾಗಿದೆ ಎಂಬುದನ್ನು ತಿಳಿಯಬೇಕು. ಹೀಗೊಪ್ಪದಿದ್ದರೆ, ವಿರಿಂಚನಲ್ಲಿ ಯೋಗ ಹಾಗೂ ರೂಢಿ

ಎರಡೂ ಇರುವುದರಿಂದ, ಕೇವಲ ಯೋಗಕ್ಕಿಂತಲೂ ಪ್ರಬಲವಾಗಿ ಎಂಬ ಪೂರ್ವಪಕ್ಷವನ್ನು ಮಾಡಬಹುದು. ಬ್ರಾಹ್ಮಣಪದದ ಸಾಹಿತ್ಯದಿಂದ ಪೂರ್ವಪಕ್ಷವನ್ನು ಉಜ್ಜೀವನ ಮಾಡಲು ಸಾಧ್ಯವಿಲ್ಲ.

ಪೂರ್ವಪಕ್ಷ ಅರ್ಥಮಾಡಿಕೊಳ್ಳಲು ನ್ಯಾಯವಿವರಣ ಅನಿವಾರ್ಯ

भावदीपः – एवं भाष्योक्तमजशब्दं सावकाशं कृत्वा ब्राह्मणशब्दस्य पापालेपलिङ्गस्य च चतुर्मुखेन सह परमात्मनोऽभेदं विनाऽवकाशराहित्यादर्थादप्राप्तिरिति न्यायविवरणे ब्राह्मणश्रुतितो विरिञ्चप्राप्तेरुक्त्या तत्साहित्येनाजश्रुतेर्निरवकाशतामाह – ब्राह्मणेति ।।

ಹೀಗೆ ಭಾಷ್ಯದಲ್ಲಿ ಹೇಳಿದ ಅಜಶಬ್ದವನ್ನು ಸಾವಕಾಶ ಮಾಡಿ ಬ್ರಾಹ್ಮಣಶಬ್ದವು, ಪಾಪಾಲೇಪಲಿಂಗವು ಚತುರ್ಮುಖನಿಂದ ಪರಮಾತ್ಮನಿಗೆ ಅಭೇದವನ್ನೊಪ್ಪದೆ ಯುಕ್ತವಾಗುವುದಿಲ್ಲ. ಆದ್ದರಿಂದ, ಬ್ರಾಹ್ಮಣನೆಂದು ಸಿದ್ಧವೇ ಆಗುವುದಿಲ್ಲ. ಹೀಗೆ, ನ್ಯಾಯವಿವರಣದಲ್ಲಿ ಬ್ರಾಹ್ಮಣಶ್ರುತಿಯಿಂದ ವಿರಿಂಚನೇ ಪ್ರತಿಪಾದ್ಯನಾಗುತ್ತಾನೆ ಎಂದು ಹೇಳಿ ಬ್ರಾಹ್ಮಣಶ್ರುತಿಯ ಸಾಹಿತ್ಯದಿಂದ ಅಜಶ್ರುತಿಗೆ ನಿರವಕಾಶತ್ವವನ್ನು ಹೇಳಿರುತ್ತಾರೆ. ಅದನ್ನೇ ಟೀಕೆಯಲ್ಲಿ 'ಬ್ರಾಹ್ಮಣಃ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ.

ಮಹತ್ ಶಬ್ದದ ವಿರೋಧವಿಲ್ಲವೇ?

भावदीपः – वर्णादीति ।। 'अगोत्रमवर्णम्' इत्यादेर्ब्राह्मण्यादिवर्णगोत्रशून्यादित्यर्थः ।। व्यावर्तकत्वादिति ।। ईश्वरादित्यनुषङ्गः । विरिञ्चस्य तु विप्रत्वाद् विप्रत्वजातौ निरूढब्राह्मणश्रुतिर्युक्तेति भावः । उत्कृष्टत्ववाचिमहच्छब्दविरोध इत्यत आह – महत्तत्त्वेति ।।

ವರ್ಣಾದಿಶೂನ್ಯನಾದ ಈಶ್ವರನು ಎಂದರೆ, 'ಅಗೋತ್ರಮವರ್ಣಂ' ಇತ್ಯಾದಿ ಶ್ರುತಿಯಲ್ಲಿ ಹೇಳಿದಂತೆ ಬ್ರಾಹ್ಮಣ್ಯಾದಿ ವರ್ಣಗಳಾಗಲಿ ಗೋತ್ರಗಳಾಗಲಿ ಪರಮಾತ್ಮನಿಗಿರುವುದಿಲ್ಲವೆಂದು ತಿಳಿಯಬೇಕು. 'ವ್ಯಾವರ್ತಕತ್ವಾತ್' ಎಂಬಲ್ಲಿ 'ಈಶ್ವರಾತ್' ಎಂಬುದನ್ನು ಅನುಷಂಗ ಮಾಡಬೇಕು. ವಿರಿಂಚನು ವಿಪ್ರನಾದ್ದರಿಂದ ವಿಪ್ರತ್ವಜಾತಿಯಲ್ಲಿ ಬ್ರಾಹ್ಮಣಶ್ರುತಿಯು ನಿರೂಢವಾಗಿದೆ ಎಂದಭಿಪ್ರಾಯ.

ಪ್ರಕೃಷ್ಟತ್ವವಾಚಿಯಾದ ಮಹತ್ ಶಬ್ದದ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ಮಹತ್ತತ್ವ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಅಭಿಮಾನ್ಯಧಿಕರಣದ ನ್ಯಾಯವನ್ನು ವಿವಕ್ಷಿಸಬೇಕು

ಭಾವದೀಪಃ – ದ್ವಿತೀಯೇ ವಕ್ಷ್ಯಮಾಣಾಭಿಮಾನಿನಯನ್ಯಾಯಾದಿತಿ ಭಾವಃ । ಪ್ರಥಮೇऽಧ್ಯಾಯೇ ಬೃಹದ್ಭಾಷ್ಯೋಕ್ತಾಭಿಧಾನಮಾಹ – ಆತ್ಮೇತಿ ।। ಇತ್ಯಾದೇರಿತ್ಯಾದಿಪದೇನ 'ಬುದ್ಧೇರಾತ್ಮಾ ಮಹಾನ್ ಪರಃ' ಇತಿ ಪ್ರಯೋಗಗ್ರಹಃ ।

ಎರಡನೆಯ ಅಧ್ಯಾಯದ ಅಭಿಮಾನ್ಯಧಿಕರಣದಲ್ಲಿ ಅಭಿಮಾನಿ ದೇವತೆಯನ್ನು ವಿವಕ್ಷಿಸಬೇಕೆಂದು ಹೇಳಿದ್ದಾರೆ. ಪ್ರಥಮಾಧ್ಯಾಯದ ಬೃಹದಾರಣ್ಯಕ ಭಾಷ್ಯದಲ್ಲಿ ಹೇಳಿದ್ದನ್ನು 'ಆತ್ಮಾ' ಎಂಬುದರಿಂದ ತೋರಿಸಿದ್ದಾರೆ. 'ಇತ್ಯಾದಿ' ಎಂಬಲ್ಲಿರುವ ಆದಿಪದದಿಂದ 'ಬುದ್ಧೇರಾತ್ಮಾ ಮಹಾನ್ ಪರಃ' ಎಂಬ ಪ್ರಯೋಗವನ್ನು ವಿವಕ್ಷಿಸಬೇಕು.

ನ್ಯಾಯವಿವರಣದಿಂದ ಅಭೇದಪರ ಪೂರ್ವಪಕ್ಷ

ಭಾವದೀಪಃ – अत इति विष्णावनवकाशब्राह्मणश्रुतिसाहित्याद् बाधकाभावाच्चेत्यर्थः । ब्राह्मणो ब्राह्मणशब्दार्थः । प्रागुक्तन्यायविवरणोक्तश्रुतिलिङ्गे भाष्योक्ताजश्रुतिनित्यमहिमत्त्वलिङ्गयोरप्युपलक्षणमिति भावेन न्यायविवरणभाष्याभ्यामुक्तविरुद्धश्रुतिलिङ्गानि व्यक्तीकृत्याभेदं विनाऽवकाशराहित्यादिति न्यायविवरणोक्तदिशाऽभेदप्रापकतां व्यनक्ति – तथाहीत्यादिना ।।

'ಅತಃ' ಎಂದರೆ ವಿಷ್ಣುವಿನಲ್ಲಿ ಅವಕಾಶವನ್ನು ಹೊಂದದ ಬ್ರಾಹ್ಮಣಶ್ರುತಿಯ ಸಾಹಿತ್ಯದಿಂದ ಮತ್ತು ಯಾವುದೇ ಬಾಧಕಗಳಿಲ್ಲದ ಕಾರಣ ಎಂದು ಅರ್ಥ. 'ಬ್ರಾಹ್ಮಣಃ' ಎಂದರೆ ಬ್ರಾಹ್ಮಣ ಶಬ್ದದ ಅರ್ಥ. ಹಿಂದೆ ಹೇಳಿದ ನ್ಯಾಯವಿವರಣದಲ್ಲಿ ಶ್ರುತಿ ಹಾಗೂ ಲಿಂಗಗಳು ಭಾಷ್ಯದಲ್ಲಿ ಉದಾಹರಿಸಿದ ಅಜಶ್ರುತಿ, ನಿತ್ಯಮಹಿಮತ್ವಾದಿ ಲಿಂಗಗಳಿಗೆ ಉಪಲಕ್ಷಣವಾಗಿದೆ ಎಂಬ ಅಭಿಪ್ರಾಯದಿಂದ ನ್ಯಾಯವಿವರಣ ಹಾಗೂ ಭಾಷ್ಯಗಳಿಂದ ವಿರುದ್ಧವಾದ ಶ್ರುತಿಲಿಂಗಗಳನ್ನು ವ್ಯಾಖ್ಯಾನ ಮಾಡಿ 'ಅಭೇದಂ ವಿನಾऽವಕಾಶರಾಹಿತ್ಯಾತ್'

ಎಂಬ ನ್ಯಾಯವಿವರಣದಲ್ಲಿ ಹೇಳಿದಂತೆ ಅಭೇದಪ್ರಾಪಕವಾದದ್ದನ್ನು 'ತಥಾಹಿ' ಎಂಬ ವಾಕ್ಯದಿಂದ ಸಮರ್ಥನೆ ಮಾಡುತ್ತಿದ್ದಾರೆ.

ಚತುರ್ಮುಖನೂ ಕೂಡ ವಿಷ್ಣುವಿನ ರೂಪ

भावदीपः – ननु ब्राह्मण श्रुत्युपेतम् अज आत्मेत्यादिकम् विरिञ्चविषयं; विष्णुलिङ्गोपेतवाक्यं तु विष्णुविषयमित्यन्यथोपपत्तिं श्रुत्यादेराशङ्क्य निराह – नच भिन्नेति ।। वाक्यभेदमाश्रित्येति योज्यम् ।। एकेति ।। एकार्थनिष्ठत्वेनैकवाक्यत्वावगमादित्यर्थः ।। स एवेति ।। पूर्वाधिकरण-पूर्वपक्षन्यायाद् वक्ष्यमाणदिशा वेति भावः । विवरिष्यते चैतदग्रे इति भावः । न केवलमर्थापत्त्येत्याह – सत्त्वमिति ।। भागवते प्रथमस्कन्धे परमपुरुषस्यैकस्यैव क्रमेण सत्त्वादिगुणै रक्षासृष्टिसंहारार्थं हरिविरिञ्चहरात्मना रूपत्रयोक्तेरित्यर्थः ।

ಬ್ರಾಹ್ಮಣ ಶ್ರುತಿಯಿಂದ 'ಅಜ ಆತ್ಮಾ' ಎಂಬ ಶ್ರುತಿಯು ಕೂಡಿರುತ್ತದೆ. ಆದ್ದರಿಂದ, 'ಅಜ ಆತ್ಮಾ' ಎಂಬ ಶ್ರುತಿಯು ವಿರಿಂಚಪರವಾಗಿದೆ. ವಿಷ್ಣುಲಿಂಗದಿಂದ ಕೂಡಿದ ವಾಕ್ಯ ಮಾತ್ರ ವಿಷ್ಣುವಿಷಯಕವಾಗಿದೆ ಎಂದು ಹೇಳಬಹುದಲ್ಲವೇ? ಎಂದು ಅನ್ಯಥೋಪಪತ್ತಿಯನ್ನು ಆಶಂಕಿಸಿ ನಿರಾಕರಿಸುತ್ತಿದ್ದಾರೆ, 'ನಚ ಭಿನ್ನ' ಇತ್ಯಾದಿ ಟೀಕೆಯಿಂದ. 'ವಾಕ್ಯಭೇದಮಾಶ್ರಿತ್ಯ' ಎಂಬುದನ್ನು ಇಲ್ಲಿ ಯೋಜನೆ ಮಾಡಿಕೊಳ್ಳಬೇಕು.

'ಏಕನಿಷ್ಠತ್ವಾತ್' ಎಂದರೆ ಒಂದೇ ಅರ್ಥವನ್ನು ಪ್ರತಿಪಾದನೆ ಮಾಡುವುದರಿಂದ ಏಕವಾಕ್ಯವಾಗಿದೆ ಎಂದರ್ಥ. 'ಸ ಚ ಏವ' ಹಿಂದಿನ ಅಧಿಕರಣದ ಪೂರ್ವಪಕ್ಷನ್ಯಾಯದಿಂದ, ಅಥವಾ ಮುಂದೆ ಹೇಳುವ ನ್ಯಾಯದಿಂದ ಎಂದರ್ಥ. ಮುಂದೆ ಇದನ್ನು ವಿವರಿಸಲಾಗುತ್ತದೆ. ಕೇವಲ ಅರ್ಥಾಪತ್ತಿಯಿಂದಷ್ಟೇ ಸಿದ್ಧವಾಗಿಲ್ಲವೆಂದು 'ತತ್ತ್ವಂ' ಎಂಬ ವಾಕ್ಯದಿಂದ ಪ್ರತಿಪಾದನೆ ಮಾಡುತ್ತಿದ್ದಾರೆ. ಭಾಗವತದ ಪ್ರಥಮಸ್ಕಂಧದಲ್ಲಿ ಒಬ್ಬನೇ ಪರಮಪುರುಷನು ಕ್ರಮವಾಗಿ ರಕ್ಷಣೆ, ಸೃಷ್ಟಿ, ಸಂಹಾರಗಳಿಗಾಗಿ ಹರಿ-ವಿರಿಂಚ-ಹರ ಎಂಬ ರೂಪಗಳನ್ನು ಧರಿಸಿದ್ದಾನೆಂದು ಹೇಳಲಾಗಿದೆ.

'ಅಯಂ ಬ್ರಾಹ್ಮಣಃ ವಿಷ್ಣುರೇವ'

ಭಾವದೀಪಃ – ಇತ್ಯಾದೇರಿತ್ಯಾದಿಪದೇನ ತೃತೀಯಸ್ಕನ್ಧೇ ಏಕಾದಶಾಧ್ಯಾಯೇ ತಾತ್ಪರ್ಯೋದಾಹೃತಮ್ 'ಸ ತ್ರೇಧಾ ಬಭೂವೈಷಾಂ ಗುಣಾನಾಮುಪಾದಾನಾಯ ವಿಷ್ಣುರ್ವಾವ ಸತ್ತ್ವಸ್ಯ ರಜಸೋ ಬ್ರಹ್ಮಾ ಈಶಾನೋ ನಾಮ ತಮಸಃ' ಇತ್ಯಾದಿಶ್ರುತಿವಾಕ್ಯಂ ಚ ಗೃಹ್ಯತೇ । ಬ್ರಾಹ್ಮಣಶಬ್ದೋ ವಿಷ್ಣಾವೇವೇತಿ ನ್ಯಾಯವಿವರಣಾನುರೋಧಾದ್ ಬ್ರಾಹ್ಮಣಪದಮಧ್ಯಾಹೃತ್ಯ ನಿತ್ಯಮಹಿಮಾ ವಿಷ್ಣುರೇವೇತಿ ಪ್ರತಿಜ್ಞಾರ್ಥಮಾಹ – ಅಯಂ ಬ್ರಾಹ್ಮಣೋ ವಿಷ್ಣುರೇವೇತಿ ।।

'ಇತ್ಯಾದೇಃ' ಎಂಬಲ್ಲಿರುವ ಆದಿಪದದಿಂದ ತೃತೀಯಸ್ಕಂಧದ ಏಕಾದಶಾಧ್ಯಾಯದ ತಾತ್ಪರ್ಯದಲ್ಲಿ ಉದಾಹರಿಸಿದ ಈ ವಾಕ್ಯವನ್ನು ವಿವಕ್ಷಿಸಬೇಕು - 'ಸ ತ್ರೇಧಾ ಬಭೂವೈಷಾಂ ಗುಣಾನಾಮುಪಾದಾನಾಯ ವಿಷ್ಣುರ್ವಾವ ಸತ್ತ್ವಸ್ಯ ರಜಸೋ ಬ್ರಹ್ಮಾ ಈಶಾನೋ ನಾಮ ತಮಸಃ' ಎಂದು. 'ಬ್ರಾಹ್ಮಣಶಬ್ದಃ ವಿಷ್ಣಾವೇವ' ಎಂಬ ನ್ಯಾಯವಿವರಣಕ್ಕೆ ಅನುಸಾರಿಯಾಗಿ, ಬ್ರಾಹ್ಮಣಶಬ್ದವನ್ನು ಅಧ್ಯಾಹಾರ ಮಾಡಿಕೊಂಡು ವಿಷ್ಣುವೇ ನಿತ್ಯಮಹಿಮೆಯುಳ್ಳವನಾಗಿದ್ದಾನೆಂಬ ಪ್ರತಿಜ್ಞಾರ್ಥವನ್ನು 'ಅಯಂ ಬ್ರಾಹ್ಮಣಃ ವಿಷ್ಣುರೇವ' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ.

ಪತ್ಯಾದಿ ಸೂತ್ರದಲ್ಲಿ ಶಾಖಾಂತರದ ಉದಾಹರಣೆ

ಭಾವದೀಪಃ – ಭಾಷ್ಯೇ ಪತ್ಯಾದೀತಿ ಸೂತ್ರೋಪಾತ್ತಶಾಖಾನ್ತರಸ್ಥವಾಕ್ಯಸ್ಯೈವೋದಾಹೃತತ್ವೇನ ಸ್ವಯಮೇವ ತತ್ಪಕರಣಸ್ಥವಾಕ್ಯಮುದಾಹೃತ್ಯ 'ಪತ್ಯಾದಿಶಬ್ದೇಭ್ಯಃ' ಇತಿ ಹೇತುಪರಭಾಷ್ಯಂ ವ್ಯಾಚಷ್ಟೇ – ಸರ್ವಸ್ಯೇತಿ ।।

ಭಾಷ್ಯದಲ್ಲಿ 'ಪತ್ಯಾದಿ' ಎಂಬ ಸೂತ್ರದಲ್ಲಿ ಉದಾಹರಿಸಿದ ಶಾಖಾಂತರದ ವಾಕ್ಯವನ್ನೇ ಉದಾಹರಿಸಿದ್ದಾರೆ. ಹೊರತು, ಆ ಪ್ರಕರಣದಲ್ಲಿರುವ ವಾಕ್ಯವನ್ನು ಉದಾಹರಿಸಿಲ್ಲವೆಂದು ತಿಳಿದು ಸ್ವತಃ ಟೀಕೆಯಲ್ಲಿ ಅದೇ ಪ್ರಕರಣದಲ್ಲಿರುವ ವಾಕ್ಯವನ್ನು ಉದಾಹರಿಸಿ 'ಪತ್ಯಾದಿಶಬ್ದೇಭ್ಯಃ' ಎಂಬ ಹೇತುಪರವಾದ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ಸರ್ವಸ್ಯ' ಇತ್ಯಾದಿ ಗ್ರಂಥದಿಂದ.

ಸೇತು ಶಬ್ದದ ನಿಷ್ಪತ್ತಿ

ಭಾವದೀಪಃ – सेतुर्विधारण इति ।। धारणसमर्थ आश्रय इत्यर्थः ।। इति नेति ।। इति नेति श्रुतदृष्टवन्नेत्यर्थः । असितः अबद्धः 'षिञ् बन्धने' । न रिष्यति न नश्यति, 'रिष हिंसायाम्' । सूत्रे पत्यादिशब्दः सर्वाधिपत्यादिवाचिपर इति मत्वाऽह – सर्वाधिपत्येति ।। तेन सर्वस्य वशीत्याद्यपि शाखान्तरस्थवाक्यमिह सङ्गृहीतमिति भावः ।

ಶ್ರುತಿಯಲ್ಲಿರುವ 'ಸೇತುರ್ವಿಧಾರಣಃ' ಎಂದರೆ ಧಾರಣಸಮರ್ಥನಾದವನು, ಅಂದರೆ ಆಶ್ರಯನು ಎಂದು ಅರ್ಥ. 'ಇತಿ ನೇತಿ' ಎಂದರೆ ಶ್ರುತನಾದವನಂತೆ, ದೃಷ್ಟನಾದವನಂತೆ ಅಲ್ಲವೆಂದರ್ಥ. 'ಅಸಿತಃ' ಎಂದರೆ ಬದ್ದನಲ್ಲ ಎಂದರ್ಥ. 'ಷಿಞ್ ಬಂಧನೇ' ಎಂಬ ಧಾತುವಿನಿಂದ ಇದು ನಿಷ್ಪನ್ನವಾಗಿದೆ. 'ನ ರಿಷ್ಯತಿ' ಎಂದರೆ ನಾಶವಾಗುವುದಿಲ್ಲ. 'ರಿಷ ಹಿಂಸಾಯಾಮ್' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಸೂತ್ರದಲ್ಲಿರುವ 'ಪತ್ಯಾದಿಶಬ್ದಃ' ಎಂಬುದು ಸರ್ವಾಧಿಪತ್ಯವಾಚಿಯಾಗಿದೆ ಎಂದು 'ಸರ್ವಾಧಿಪತ್ಯಂ' ಎಂಬುದರಿಂದ ಹೇಳಿದ್ದಾರೆ. ಇದರಿಂದ 'ಸರ್ವಸ್ಯ ವಶೀ' ಎಂಬ ಶಾಖಾಂತರದಲ್ಲಿರುವ ವಾಕ್ಯವನ್ನು ಸಂಗ್ರಹಿಸಿದಂತಾಯಿತು.

ಶಾಖಾಂತರ ವಾಕ್ಯವು ಉಪಲಕ್ಷಣಯಾ ಗ್ರಾಹ್ಯ

ಭಾವದೀಪಃ – नित्यमहिमा विष्णुरेवेत्येतद् व्याचष्टे – तथाचेति ।। भाष्ये 'सर्वस्य वशी' इत्यादावुदाहर्तव्ये 'सर्वस्याधिपतिः' इत्युक्तिः शाखान्तराणामुपसङ्ग्रहार्थेत्यस्य 'धृतेश्च महिम्नः' इति सूत्रे एवमन्यत्रापीत्युक्त्या उक्तप्रायत्वादत्रानुक्तिः। ततशब्दाकाङ्क्षितं 'पुरुष एवेदं सर्वं यद् भूतं यच्च भव्यम्' इति पूर्ववाक्यार्थमाह – यद्भूतमिति ।।

ವಿಷ್ಣುವೇ ನಿತ್ಯಮಹಿಮೆಯುಳ್ಳವನಾಗಿದ್ದಾನೆಂದು 'ತಥಾ ಚ' ಎಂಬ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. ಭಾಷ್ಯದಲ್ಲಿ 'ಸರ್ವಸ್ಯ ವಶೀ' ಎಂದೇ ಉದಾಹರಿಸಬೇಕಿತ್ತು. ಆದರೂ 'ಸರ್ವಾಧಿಪತಿಃ' ಎಂದು ಏಕೆ ಹೇಳಿದರು? ಎಂದರೆ ಬೇರೆ ಶಾಖೆಗಳಲ್ಲಿರುವುದನ್ನು ಉಪಲಕ್ಷಣಯಾ ಇಟ್ಟುಕೊಳ್ಳಬೇಕೆಂದು ತಿಳಿಸಲು. 'ಧೃತೇಶ್ಚ ಮಹಿಮ್ನಃ' ಎಂಬ ಸೂತ್ರದಲ್ಲಿ ಇದನ್ನು ಹೇಳಲಾಗಿದೆ. 'ಏವಮನ್ಯತ್ರಾಪಿ' ಎಂದು

ಹೇಳಿದ್ದರಿಂದ ಉಕ್ತಪ್ರಾಯವಾಗಿದ್ದರಿಂದ ಇಲ್ಲಿ ಅದನ್ನು ಹೇಳಿಲ್ಲವೆಂದು ಅರ್ಥ. 'ಉತ' ಶಬ್ದದಿಂದ ಆಕಾಂಕ್ಷಿತವಾದ 'ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್' ಎಂಬ ಪೂರ್ವವಾಕ್ಯವು ತಿಳಿಯುತ್ತದೆ. ಅದರ ಅರ್ಥವನ್ನು 'ಯದ್‌ಭೂತಂ' ಎಂಬುದರಿಂದ ಹೇಳಿದ್ದಾರೆ.

ಸಮಸ್ತವೂ ವಿಷ್ಣುವಿನ ಅಧೀನ

भावदीपः – उपलक्षणं मत्वोक्तम् – वर्तमानमिति ।। 'इदं हि विश्वं भगवानिवेतरो यतो जगत्स्थाननिरोधसम्भवः' । इत्याद्यानन्दमयनयभाष्योक्त-स्मृतेरधीनमित्युक्तम् । 'पुरुष एवेदं सर्वं भूतं भव्यं भवच्च यत् । इत्युच्यते तदीशत्वान्नतु सर्वस्वरूपतः' ।। इति प्रथमे बृहद्भाष्योक्तभारतस्मृतेरिति भावः । उतेत्यस्यार्थः – न केवलमिति ।। अमृतत्वस्येत्यस्यार्थः – मुक्तसमुदायस्येति ।।

'ಉಪಲಕ್ಷಣಂ' ಎಂದು ತಿಳಿದು 'ವರ್ತಮಾನಂ' ಎಂದು ಪ್ರಯೋಗಿಸಿದ್ದಾರೆ. ಈ ಸಮಸ್ತ ವಿಶ್ವವು 'ಇದಂ ಹಿ ವಿಶ್ವಂ ಭಗವಾನಿವೇತರೋ ಯತೋ ಜಗತ್‌ಸ್ಥಾನನಿರೋಧಸಂಭವಃ' ಎಂಬ ಆನಂದಮಯಾಧಿಕರಣದ ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯ ಅಧೀನವಾಗಿದೆ ಎಂದು ಹೇಳಿದ್ದಾರೆ. 'ಪುರುಷ ಏವೇದಂ ಸರ್ವಂ ಭೂತಂ ಭವ್ಯಂ ಭವಚ್ಚ ಯತ್ । ಇತ್ಯುಚ್ಯತೇ ತದೀಶತ್ವಾತ್ ನತು ಸರ್ವಸ್ವರೂಪತಃ ॥' ಎಂಬ ಬೃಹದಾರಣ್ಯಕೋಪನಿಷತ್ತಿನ ಭಾಷ್ಯದ ಪ್ರಥಮಾಧ್ಯಾಯದಲ್ಲಿ ಉದಾಹರಿಸಿದ ಮಹಾಭಾರತದ ವಾಕ್ಯವೆಂದರ್ಥ. 'ನಚ' ಎಂಬುದರ ಅರ್ಥವನ್ನೇ 'ನ ಕೇವಲಂ' ಎಂದು ಹೇಳಿದ್ದಾರೆ. 'ಅಮೃತತ್ವಸ್ಯ' ಎಂಬುದರ ಅರ್ಥವನ್ನು 'ಮುಕ್ತಸಮುದಾಯಸ್ಯ' ಎಂದು ಹೇಳಿದ್ದಾರೆ.

ಅಮೃತಶಬ್ದದ ಅಭಿಪ್ರಾಯ

भावदीपः – विचित्रा हि तद्धितगतिरिति समुदाये भावप्रत्ययः । भावभवित्रोर-भेदादमृतत्वशब्दोऽत्र मुक्तसमुदायपर इति वा भावः । द्वितीया सप्तार्धगर्भेति श्रुतिरित्यर्थः । इयमक्षरनये व्याख्यातत्वान्नेह व्याख्याता ।। तृतीयेति ।।

'ವಿಚಿತ್ರಾ ಹಿ ತದ್ಧಿತಗತಿಃ' ಎಂಬಂತೆ ಸಮುದಾಯಾರ್ಥದಲ್ಲಿ ಭಾವಪ್ರತ್ಯಯ ಬಂದಿರುತ್ತದೆ. ಧರ್ಮಧರ್ಮಿಗಳಿಗೆ ಅಭೇದವಿರುವುದರಿಂದ ಅಮೃತತ್ವ ಶಬ್ದವು ಮುಕ್ತಸಮುದಾಯಪರವಾಗಿದೆ ಎಂಬುದಾಗಿಯೂ ಕೂಡ ತಿಳಿಯಬಹುದು. 'ದ್ವಿತೀಯಾ' ಎಂದರೆ 'ಸಪ್ತಾರ್ಧಗರ್ಭಾ' ಎಂಬ ಶ್ರುತಿಯೆಂದರ್ಥ. ಇದನ್ನು ಅಕ್ಷರಾಧಿಕರಣದಲ್ಲಿ ವ್ಯಾಖ್ಯಾನ ಮಾಡಿದ್ದರಿಂದ ಇಲ್ಲಿ ವ್ಯಾಖ್ಯಾನ ಮಾಡಿಲ್ಲ.

ಆಕಾಂಕ್ಷಾಕ್ರಮದಂತೆ ಯೋಜನೆ

ಭಾವದೀಪಃ – 'स योऽतः' इति श्रुतिः । इयं च सर्वत्र प्रसिद्धेति नये व्यक्ता । ब्रह्मणा वेदेन गम्यत इति ब्राह्मणशब्दो विष्णावेव युज्यत इत्यर्थादजशब्दोऽपि तस्मिन्नेवेति न्यायविवरणं प्रागुक्तशङ्काव्यावर्तकत्वेन योजयितुं शङ्कामनूद्याकाङ्क्षाक्रमेण योजयति – नचेत्यादिना ।। स्वरेति ।।

'स योऽतोऽशृतः' ಎಂಬ ಶ್ರುತಿಯನ್ನು ಸರ್ವಗತತ್ವಾಧಿಕರಣದಲ್ಲಿ ವ್ಯಾಖ್ಯಾನ ಮಾಡಲಾಗಿದೆ. 'ಬ್ರಹ್ಮಣಾ ವೇದೇನ ಗಮ್ಯತೇ' ಎಂಬ ವ್ಯುತ್ಪತ್ತಿಯಿಂದ ಬ್ರಾಹ್ಮಣಶಬ್ದವು ವಿಷ್ಣುವಿನಲ್ಲಿ ಮಾತ್ರ ಯುಕ್ತವಾಗುತ್ತದೆ. ಅರ್ಥಾತ್ ಅಜಶಬ್ದವೂ ಅವನಲ್ಲೇ ಯುಕ್ತವಾಗುತ್ತದೆ ಎಂಬ ನ್ಯಾಯವಿವರಣವನ್ನು ಹಿಂದಿನ ಆಶಂಕಾವ್ಯಾವರ್ತಕವಾಗಿ ಯೋಜನೆ ಮಾಡಲು ಶಂಕೆಯನ್ನು ಅನುವಾದ ಮಾಡಿ, ಆಕಾಂಕ್ಷಾಕ್ರಮದಿಂದ ಯೋಜನೆ ಮಾಡುತ್ತಿದ್ದಾರೆ, 'ನಚ' ಇತ್ಯಾದಿ ಗ್ರಂಥದಿಂದ.

'ಬ್ರಹ್ಮಾಣಃ' ಎಂದು ಹೇಳಬೇಕಲ್ಲವೇ?

ಭಾವದೀಪಃ – ब्रह्मणा वेदेन गम्यत इति विग्रहे ब्रह्माण इति वाच्ये ब्राह्मण इति स्वरशब्दितदीर्घव्यत्यासः 'आधिक्येऽधिकमित्येव हरिणा सूत्रमीरितम्' । इति ऋग्भाष्योक्त्या वेदेन गम्यत्वाधिक्यद्योतनार्थमित्यर्थः।

'ಬ್ರಹ್ಮಣಾ ವೇದೇನ ಗಮ್ಯತೇ' ಎಂದು ವಿಗ್ರಹ ಮಾಡಿದರೆ 'ಬ್ರಹ್ಮಾಣಃ' ಎಂದಾಗಬೇಕು. 'ಬ್ರಾಹ್ಮಣಃ' ಎಂದು ದೀರ್ಘಸ್ವರದ ವ್ಯತ್ಯಾಸವೇಕಾಯಿತು? ಎಂದರೆ 'ಆಧಿಕ್ಯೇ ಅಧಿಕಮಿತ್ಯೇವ ಹರಿಣಾ ಸೂತ್ರಮೇರಿತಮ್' ಆಧಿಕ್ಯಾರ್ಥವನ್ನು ಸೂಚಿಸಲು ಸ್ವರವ್ಯತ್ಯಾಸವಾಗಿದೆ ಎಂಬ ಋಗ್ಭಾಷ್ಯದ ಆಧಾರದಿಂದ ವೇದದಿಂದ ಪರಮಾತ್ಮನು ಅಧಿಕವಾಗಿ ಗಮ್ಯನಾಗಿದ್ದಾನೆಂದು ತಿಳಿಯುತ್ತದೆ.

ಸ್ವರವ್ಯತ್ಯಾಸಕ್ಕೆ ಕಾರಣ

ಭಾವದೀಪಃ – ನನು ಗಮ್ಯತ ಇತಿ ವ್ಯುತ್ಪತ್ತೌ ಬ್ರಹ್ಮಗಮ ಇತ್ಯಾದಿ ಸ್ಯಾತ್ ಸ್ವರವ್ಯತ್ಯಯ ಇತಿ ಕಥಮಿತ್ಯತ ಆಹ – ಅಣ ಗತಾವಿತಿ ।। ಉಕ್ತವಿರೋಧಶ್ಚ ತತ್ರೈವೇತಿ ನ್ಯಾಯವಿವರಣೋಕ್ತಮಾಹ – ಅನ್ಯಥೇತಿ ।।

'ಗಮ್ಯತೇ' ಎಂಬ ವ್ಯುತ್ಪತ್ತಿ ಮಾಡಿದಾಗ 'ಬ್ರಹ್ಮಗಮಃ' ಎಂದೇ ಆಗಬೇಕು. 'ಸ್ವರವ್ಯತ್ಯಯಃ' ಎಂದು ಏಕೆ ಹೇಳಿದರು? ಎಂಬ ಪ್ರಶ್ನೆಗೆ 'ಅಣ ಗತೌ' ಎಂಬುದರಿಂದ ಉತ್ತರಿಸಿದ್ದಾರೆ.

ಭಾಗವತ ತಾತ್ಪರ್ಯದ ಆಧಾರ

ಭಾವದೀಪಃ – ಮಾನಾಭಾವಾದಿತಿ ।। ಅಭೇದಃ ಕಿಮರ್ಥಾಪತ್ತ್ಯಾऽಥ ಪುರಾಣವಾಕ್ಯೇನ। ನಾದ್ಯಃ। ಶ್ರುತ್ಯಾ ಯೌಗಿಕತ್ವೋಕ್ತಿಪರನ್ಯಾಯವಿವರಣೇನ ಪರಿಹೃತತ್ವಾದಿತ್ಯಾಹ – ಬ್ರಾಹ್ಮಣೇತಿ ।। ಸ್ಮೃತಿಸ್ತು ತಾತ್ಪರ್ಯೇ ಸ್ಮೃತ್ಯೈವ ವ್ಯಾಖ್ಯಾತೇತಿ ಮತ್ವಾऽಹ – ಸ್ಮೃತೇಸ್ತ್ವಿತಿ ।।

ಶ್ರೀಹರಿಯಿಂದ ಚತುರ್ಮುಖನಿಗೆ ಅಭೇದವನ್ನು ಅರ್ಥಾಪತ್ತಿ ಪ್ರಮಾಣದಿಂದ ಹೇಳುತ್ತೀರೋ, ಅಥವಾ ಪುರಾಣವಾಕ್ಯದಿಂದಲೋ? ಮೊದಲನೆಯ ಪಕ್ಷವು ತಪ್ಪು. ಏಕೆಂದರೆ, ಬ್ರಾಹ್ಮಣಶಬ್ದವು ಯೌಗಿಕವಾಗಿದೆಯೆಂದು ಹೇಳುವ ನ್ಯಾಯವಿವರಣದಿಂದ ಇದನ್ನು ನಿರಾಕರಿಸಲಾಗಿದೆ ಎಂದು 'ಬ್ರಾಹ್ಮಣಃ' ಎಂಬ ವಾಕ್ಯವು ಸಮರ್ಥಿಸುತ್ತಿದೆ. ಭಾಗವತತಾತ್ಪರ್ಯದಲ್ಲಿ ಸ್ಮೃತಿವಾಕ್ಯದಿಂದಲೇ ವ್ಯಾಖ್ಯಾನ ಮಾಡಿದ್ದಾರೆ ಎಂಬುದನ್ನು 'ಸ್ಮೃತೇಸ್ತು' ಎಂಬುದರಿಂದ ಹೇಳಿದ್ದಾರೆ.

ಚತುರ್ಮುಖನಿಗೂ ಕರ್ಮಫಲವಿದೆ

ಭಾವದೀಪಃ – ಸತ್ತ್ವ ರಜಸ್ತಮ ಇತ್ಯಾದೇಃ 'ಬ್ರಹ್ಮಣಿ ಬ್ರಹ್ಮರೂಪोऽಸೌ ಶಿವರೂಪೀ ಶಿವೇ ಸ್ಥಿತಃ' । ಇತ್ಯಾದಿಸ್ಮೃತೇರಿತಿ ಭಾವಃ । ಚತುರ್ಮುಖಸ್ಯ ಕರ್ಮಫಲಾಭಾವಾಯುಕ್ತೇಸ್ತಯೋರ್ಭೇದ ಏವಾರ್ಥಾದಾಪದ್ಯತ ಇತಿ ನ್ಯಾಯವಿವರಣೋಕ್ತಮತ್ರ ವ್ಯನಕ್ತಿ – ಸ್ವಧರ್ಮೇತಿ ।।

'ಸತ್ತ್ವಂ ರಜಸ್ತಮಃ' ಇತ್ಯಾದಿ ವಾಕ್ಯವು 'ಬ್ರಹ್ಮಣಿ ಬ್ರಹ್ಮರೂಪೋऽಸೌ ಶಿವರೂಪೀ ಶಿವೇ ಸ್ಥಿತಃ' ಇತ್ಯಾದಿ ಸ್ಮೃತಿವಾಕ್ಯವು ಅಂತರ್ಗತನಾದ ಪರಮಾತ್ಮಪರವಾಗಿದೆ ಎಂದು ಅಭಿಪ್ರಾಯ. ಚತುರ್ಮುಖನಿಗೆ

ಕರ್ಮಫಲವೇ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ, ಚತುರ್ಮುಖನಿಗೂ ಪರಮಾತ್ಮನಿಗೂ ಭೇದವು ಅರ್ಥಾತ್ ಸಿದ್ಧವಾಗುತ್ತದೆ. ಹೀಗೆ ನ್ಯಾಯವಿವರಣದಲ್ಲಿ ಹೇಳಿದ್ದನ್ನೇ 'ಸ್ವಧರ್ಮ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ.

ಭಗವಂತನಿಗೆ ಕರ್ಮಫಲವಿಲ್ಲ

ಭಾವದೀಪಃ – इति वचनादिति ।। चतुर्थस्कन्धे त्रयोविंशेऽध्याये । मां लक्ष्मीमित्यर्थः ।। नित्यमुक्तेनेति ।। तथाच परमात्मनो नित्यमुक्तत्वेन कर्मफला-भावाद् विरिञ्चस्य चोदाहृतवचनेन कर्मफलसद्भावावगमेन तदभावायुक्तेरित्यर्थः।

'ಇತಿ ವಚನಾತ್' ಎಂದರೆ ಚತುರ್ಥಸ್ಕಂಧದ ಇಪ್ಪತ್ತಮೂರನೇ ಅಧ್ಯಾಯದಲ್ಲಿ ಹೇಳಲಾಗಿದೆ ಎಂದರ್ಥ. 'ಮಾಂ' ಎಂದರೆ ಲಕ್ಷ್ಮೀಯನ್ನು ಎಂದರ್ಥ. 'ನಿತ್ಯಮುಕ್ತೇನ' ಎಂದು ಹೇಳಿದ್ದರಿಂದ, ಪರಮಾತ್ಮನು ನಿತ್ಯಮುಕ್ತನಾದ್ದರಿಂದ ಯಾವುದೇ ಕರ್ಮಫಲಗಳಿರುವುದಿಲ್ಲ. ವಿರಿಂಚನಿಗಾದರೋ, ಉದಾಹರಿಸಿದ ವಾಕ್ಯಫಲದಿಂದ ಕರ್ಮಫಲವಿರುತ್ತದೆಂದು ತಿಳಿಯುತ್ತದೆ. ಆದ್ದರಿಂದ, ಅವರಿಬ್ಬರಿಗೂ ಐಕ್ಯವು ಯುಕ್ತವಾಗುವುದಿಲ್ಲ.

ಶ್ರುತಿಗಳಿಂದ ವಿಷ್ಣುವಿಗೂ ಚತುರ್ಮುಖನಿಗೂ ಭೇದಪ್ರತಿಪಾದನೆ

ಭಾವದೀಪಃ – भेदश्रुतिबाहुल्यादित्यन्यत्रोक्तं व्यनक्ति – तत इति ।। अदृश्यत्वनयभाष्योक्तेयं श्रुतिः ।। अत इति ।। निरवकाशप्रापकसद्भावादित्यर्थः । नित्यमहिमा चेति फलोक्तिः । अकारान्तत्वमुपेत्य क्वचिन्नित्यमहिमश्चेति पाठः ।।४३।।

।। ಇತಿ ಶ್ರೀಮದ್ಭಾಷ್ಯಟೀಕಾಭಾವದೀಪೇ ಶ್ರೀರಾಘವೇಂದ್ರಯತಿಕೃತೇ
ಪ್ರಥಮಾಧ್ಯಾಯಸ್ಯ ತೃತೀಯಃ ಪಾದಃ ।।

ವಿರಿಂಚನಿಗೂ ಪರಮಾತ್ಮನಿಗೂ ಭೇದವಿದೆ ಎಂದು ಸಮರ್ಥಿಸುವ ಅನೇಕ ಶ್ರುತಿಗಳು ಇರುತ್ತವೆ. ಅವುಗಳನ್ನು ಬೇರೆ ಕಡೆ ತಿಳಿಸಿರುತ್ತೇವೆ ಎಂಬುದನ್ನು 'ತತಃ' ಎಂಬುದರಿಂದ ಹೇಳಿದ್ದಾರೆ. ಅದೃಶ್ಯತ್ವಾಧಿಕರಣದ ಭಾಷ್ಯದಲ್ಲಿ ಉದಾಹರಿಸಿದ ಶ್ರುತಿಯನ್ನು ಇಲ್ಲಿ ಉಲ್ಲೇಖಿಸಿದ್ದಾರೆ. 'ಅತಃ' ಎಂದರೆ ನಿರವಕಾಶತ್ವಪ್ರಾಪಕವಾದ ಲಿಂಗಗಳಿರುವುದರಿಂದ ಎಂದರ್ಥ. 'ನಿತ್ಯಮಹಿಮಾ ಚ' ಎಂಬುದು ಅಧಿಕರಣದ ಫಲವಾಗಿದೆ. ಕೆಲವು ಪುಸ್ತಕಗಳಲ್ಲಿ ಅಕಾರಾಂತವೆಂದು ಒಪ್ಪಿ, 'ನಿತ್ಯಮಹಿಮಶ್ಚ' ಎಂಬ ಪಾಠವನ್ನು ವಿವಕ್ಷಿಸಿರುತ್ತಾರೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಬ್ರಾಹ್ಮಣಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

ಪ್ರಥಮಾಧ್ಯಾಯದ ತೃತೀಯ ಪಾದವು ಸಮಾಪ್ತವಾಯಿತು

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ಬ್ರಾಹ್ಮಣಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

ब्राह्मणाधिकरणम् (१।३।१४)

ಏಷ ನಿತ್ಯೋ ಬ್ರಾಹ್ಮಣಸ್ಯ ಎಂದರೆ ಯಾರು ?

।। पत्यादिशब्देभ्यः ।। १-३-४३ ।।

अत्र ब्राह्मणनाम समन्वीयते । ब्राह्मण इति योग्यतयाऽन्वेति । ''एष नित्यो महिमा ब्राह्मणस्य ''इत्युक्तो ब्राह्मणस्तत्तु ब्रह्मैव । न विरिञ्चः । कुतः ? ''सर्वस्य वशी सर्वस्येशानः । सर्वाधिपतिः'' इत्यादिसर्वाधिपत्या दिवाचिशब्देभ्य इत्यर्थः । अत्र श्रुतौ वशित्वस्यादित्वेऽपि भाष्योक्तश्रुत्यन्त रानुरोधात् पत्यादीत्युक्तम् । प्रत्येकं हेतुत्वज्ञापनाय बहुवचनमित्याहुः ।।१४।।

ಈ ಅಧಿಕರಣದಲ್ಲಿ 'ಬ್ರಾಹ್ಮಣ' ಎಂಬ ನಾಮಾತ್ಮಕ ಶಬ್ದದ ಸಮನ್ವಯವನ್ನು ಮಹಾವಿಷ್ಣುವಿನಲ್ಲಿ ಮಾಡುತ್ತಿದ್ದಾರೆ. 'ಬ್ರಾಹ್ಮಣ' ಎಂಬ ಪದವು ಯೋಗ್ಯವಾದ್ದರಿಂದ ಅನ್ವಯವನ್ನು ಪಡೆಯುತ್ತದೆ. 'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ' ಎಂಬಲ್ಲಿ ಪ್ರತಿಪಾದನಾದ ಬ್ರಾಹ್ಮಣನು ಬ್ರಹ್ಮನೇ [illegible]ದಾನೆ. ಹೊರತು ಚತುರ್ಮುಖನಲ್ಲ. ಏಕೆಂದರೆ, 'ಸರ್ವಸ್ಯ ವಶಿ

ಸರ್ವಸ್ಯೇಶಾನಃ, ಸರ್ವಾಧಿಪತಿಃ' ಇತ್ಯಾದಿಯಾಗಿ ಸರ್ವಾಧಿಪತ್ಯ ಮೊದಲಾದ ಧರ್ಮಗಳನ್ನು ಹೇಳುವಂತಹ ಶಬ್ದಗಳಿಂದ ಎಂದು ಸೂತ್ರಾರ್ಥ.

'ವಶಿತ್ವಾದಿಶಬ್ದೇಭ್ಯಃ' ಎಂದು ಸೂತ್ರವನ್ನು ಹೇಳಬೇಕಿತ್ತು. ಶ್ರುತಿಯಲ್ಲಿ ವಶಿತ್ವವನ್ನು ಮೊದಲು ಹೇಳಿದ್ದರೂ ಭಾಷ್ಯದಲ್ಲಿ ಉದಾಹರಿಸಿದ 'ಸರ್ವಸ್ಯಾಧಿಪತಿಃ ಸರ್ವಸ್ಯೇಶಾನಃ' ಎಂಬ ಮತ್ತೊಂದು ಶ್ರುತಿಯನ್ನು ಉದಾಹರಿಸಿ 'ಪತ್ಯಾದಿ' ಎಂದು ಹೇಳಿದ್ದಾರೆ. ವಶಿತ್ವ ಮೊದಲಾದವುಗಳು ಪ್ರತ್ಯೇಕವಾದ ಹೇತುಗಳಾಗಿವೆ ಎಂದು ತಿಳಿಸುವುದಕ್ಕಾಗಿ 'ಶಬ್ದೇಭ್ಯಃ' ಎಂದು ಬಹುವಚನವನ್ನು ಪ್ರಯೋಗಿಸಿದ್ದಾರೆ, ಎಂದು ಹೇಳುತ್ತಾರೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಬ್ರಾಹ್ಮಣಾಧಿಕರಣವು ಮುಗಿಯಿತು ॥

ತೃತೀಯಪಾದದ ಸಾರ

तृतीयपादसारसङ्ग्रह :

अत्राद्यनये अजस्याविर्भावाख्यजनिः, भूमनये सर्वगतस्यापि परिस्पन्दक्रिया, अक्षरनये महतोऽप्यणुत्वम्, ईक्षतिनये स्वरूपैरेव बहुभवनम्, दहरनये ईशांशस्यापि व्याप्तता, अनुकृतिनये सूर्यादिकृतेरीशायत्तत्वम्, शब्दादिति नये प्राणप्रेरकत्वं श्रुत्यादेः पूर्वपूर्वप्राबल्यं च, देवतानये देवर्ष्यादीनां कर्मब्रह्मविद्ययोरधिकारः, शुगिति नये वेदविद्यायामेव शूद्रस्यानधिकारः, कम्पनादिति नये रूढितः स्मार्तयोगस्य प्राबल्यम्, ज्योतिर्नये जीवेन सहेशस्य लोकान्तरसञ्चारस्य कर्मानधीनत्वम्, सुषुप्तिनये निर्लेपत्वम्, अन्त्यनये विरिञ्चैक्यनिरास इत्यादि सिद्धमिति विवेक्तव्यम् ।

इति श्रीमद्राघवेन्द्रयतिकृतायां तन्त्रदीपिकायां प्रथमाध्यायस्य तृतीयः पादः

।। श्रीकृष्णार्पणमस्तु ।।

ಈ ಮೂರನೆಯ ಪಾದದ ಪ್ರಥಮಾಧಿಕರಣದಲ್ಲಿ ಜನನವಿಲ್ಲದ ಬ್ರಹ್ಮನಿಗೆ ಆವಿರ್ಭಾವರೂಪವಾದ ಜನನವನ್ನು ಹೇಳಿದ್ದಾರೆ.

೧. ಭೂಮಾಧಿಕರಣದಲ್ಲಿ ಸರ್ವಗತನಿಗೂ ಕೂಡ ಚಲನಕ್ರಿಯೆಯನ್ನು ಹೇಳಿರುತ್ತಾರೆ.

೨. ಅಕ್ಷರಾಧಿಕರಣದಲ್ಲಿ ವ್ಯಾಪ್ತನಾದ ಬ್ರಹ್ಮನಿಗೆ ಅಣುರೂಪವನ್ನು ಹೇಳಿದ್ದಾರೆ.

೩. ಈಕ್ಷತ್ಯಧಿಕರಣದಲ್ಲಿ ಬ್ರಹ್ಮನು ತನ್ನ ಸ್ವರೂಪದಿಂದಲೇ ಬಹುಭವನವನ್ನು ಪಡೆಯುತ್ತಾನೆಂದು ಹೇಳಿದ್ದಾರೆ.

೪. ದಹರಾಧಿಕರಣದಲ್ಲಿ ಈಶ್ವರನ ಅಂಶಗಳಿಗೂ ವ್ಯಾಪ್ತತ್ವವಿದೆ ಎಂದು ಸಮರ್ಥಿಸಿದ್ದಾರೆ.

೫. ಅನುಕೃತ್ಯಧಿಕರಣದಲ್ಲಿ ಸೂರ್ಯ ಮೊದಲಾದವರ ಚಲನ-ವಲನಗಳೆಲ್ಲವೂ ಪರಮಾತ್ಮನ ಅಧೀನವೆಂದು ಸಮರ್ಥಿಸಿದ್ದಾರೆ.

೬. 'ಶಬ್ದಾತ್' ಎಂಬ ಅಧಿಕರಣದಲ್ಲಿ ಪ್ರಾಣಪ್ರೇರಕತ್ವವು ಭಗವಂತನಲ್ಲಿ ಸಮರ್ಥಿಸಿದ್ದಾರೆ. ಮತ್ತು, ಶ್ರುತಿ-ಲಿಂಗ-ವಾಕ್ಯ-ಪ್ರಕರಣ-ಸ್ಥಾನ-ಸಮಾಖ್ಯಾ ಎಂಬ ಪ್ರಮಾಣಗಳಲ್ಲಿ ಮುಂದಿನ ಪ್ರಮಾಣಗಳಿಗಿಂತ ಹಿಂದಿನ ಪ್ರಮಾಣಗಳಿಗೆ ಪ್ರಾಬಲ್ಯವನ್ನು ನಿರೂಪಿಸಿದ್ದಾರೆ.

೭. ದೇವತಾಧಿಕರಣದಲ್ಲಿ ದೇವತೆಗಳು, ಋಷಿಗಳು ಮೊದಲಾದವರಿಗೆ ಕರ್ಮಾಧಿಕಾರವನ್ನು ಬ್ರಹ್ಮವಿದ್ಯಾಧಿಕಾರವನ್ನು ಸಮರ್ಥಿಸಿದ್ದಾರೆ.

೮. ಅಪಶೂದ್ರಾಧಿಕರಣದಲ್ಲಿ ಶೂದ್ರ-ಬ್ರಹ್ಮಬಂಧು-ಅವೈಷ್ಣವರಿಗೆ ಮತ್ತು ಸ್ತ್ರೀಯರಿಗೆ ವೇದವಿದ್ಯಾಧಿಕಾರವಿಲ್ಲವೆಂದು ಸಮರ್ಥಿಸಿದ್ದಾರೆ.

೯. ಕಂಪನಾಧಿಕರಣದಲ್ಲಿ ರೂಢಿಗಿಂತಲೂ ಸ್ಮೃತಿಯಲ್ಲಿ ಹೇಳಲ್ಪಟ್ಟ ಯೋಗಕ್ಕೆ ಪ್ರಾಬಲ್ಯವನ್ನು ಸಮರ್ಥಿಸಿದ್ದಾರೆ.

೧೦. ಜ್ಯೋತಿರಧಿಕರಣದಲ್ಲಿ ಜೀವನ ಜೊತೆಗೆ ಈಶ್ವರನು ಮತ್ತೊಂದು ಲೋಕದ ಸಂಚಾರವನ್ನು ಮಾಡುತ್ತಾನೆ. ಇದು ಕರ್ಮಾಧೀನವಾದದ್ದಲ್ಲವೆಂದು ಸಮರ್ಥಿಸಿದ್ದಾರೆ.

೧೧. ಸುಷುಪ್ತ್ಯಧಿಕರಣದಲ್ಲಿ ಭಗವಂತನಿಗೆ ನಿರ್ದೋಷತ್ವವನ್ನು ನಿರೂಪಿಸಲಾಗಿದೆ.

೧೨. ಕೊನೆಯ ಬ್ರಾಹ್ಮಣಾಧಿಕರಣದಲ್ಲಿ ಭಗವಂತನಿಗೆ ಚತುರ್ಮುಖ ಬ್ರಹ್ಮನಿಂದ ಅಭೇದವನ್ನು ನಿರಾಕರಿಸಿ, ಭೇದವನ್ನು ಸಮರ್ಥನೆ ಮಾಡಿದ್ದಾರೆ.

ಹೀಗೆ ತೃತೀಯಪಾದದಲ್ಲಿರುವ ಎಲ್ಲ ಅಧಿಕರಣಗಳ ಸಾರಸಂಗ್ರಹವನ್ನು ತಿಳಿದುಕೊಳ್ಳಬೇಕು.

ತಂತ್ರದೀಪಿಕೆಯಲ್ಲಿ ಪ್ರಥಮಾಧ್ಯಾಯದ ತೃತೀಯಪಾದವು ಸಮಾಪ್ತವಾಯಿತು.

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಬ್ರಾಹ್ಮಣಾಧಿಕರಣ ಮತ್ತು ವಿಮರ್ಶೆ

ಶಾಂಕರಭಾಷ್ಯ ಹಿಂದಿನ ಸೂತ್ರವನ್ನು ಸೇರಿಸಿಕೊಂಡು ಅಧಿಕರಣವನ್ನು ಹೀಗೆ ರಚನೆ ಮಾಡಿದೆ. ಬೃಹದಾರಣ್ಯಕದ ನಾಲ್ಕನೆಯ ಅಧ್ಯಾಯದಲ್ಲಿ 'ಕತಮ ಆತ್ಮಾ ಯೋऽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ' ಎಂದು ಪ್ರಾರಂಭವಾಗಿ ಆತ್ಮನ ಬಗ್ಗೆ ಅನೇಕ ವಿಷಯಗಳು ಪ್ರಸಕ್ತವಾಗಿದೆ. ಈ ಆತ್ಮನು ಜೀವನೇ ಆಗಿದ್ದಾನೆ. ಏಕೆಂದರೆ ಪ್ರಾರಂಭದಲ್ಲಿ 'ಹೃದ್ಯಂತಃ' ಎಂದು ಹೃದಯದ ಸಂಬಂಧವನ್ನು ಹೇಳಲಾಗಿದೆ. ಉಪಸಂಹಾರದಲ್ಲಿಯೂ ಕೂಡ 'ಸ ವಾ ಏಷ ಮಹಾನಜಃ ಆತ್ಮಾ ಯೋऽಯಂ ವಿಜ್ಞಾನಮಯಃ' ಎಂದು ವಿಜ್ಞಾನಮಯನ ಉಲ್ಲೇಖವಿದೆ. ಈ ಸಂಪೂರ್ಣ ಪ್ರಕರಣವು ಬೇರೆ ಪ್ರಮಾಣದಿಂದ ಪ್ರಾಪ್ತವಾದ ಸಂಸಾರಿಯಾದ ಜೀವನನ್ನು ಅನುವಾದ ಮಾಡುವ ಮೂಲಕ ಪ್ರತಿಪಾದನೆ ಮಾಡುತ್ತಿದೆ. ಉಪಕ್ರಮ ಹಾಗೂ ಉಪಸಂಹಾರಗಳಿಗೆ ಜೀವನನ್ನು ಪ್ರತಿಪಾದನೆ ಮಾಡಿರುವುದೇ ಇದಕ್ಕೆ ಮುಖ್ಯಕಾರಣವೆಂದು ಪೂರ್ವಪಕ್ಷ.

'ಸ ವಾ ಅಯಂ ಪುರುಷಃ ಜಾಯಮಾನಃ' ಇತ್ಯಾದಿಯಾಗಿ ಕಲ್ಪಿತನಾದ ಜೀವಾತ್ಮನ ಸ್ವರೂಪವನ್ನು ಅನುವಾದ ಮಾಡಿ 'ಸ ವಾ ಏಷ ಮಹಾನಜ ಆತ್ಮಾ' ಎಂದು ಅಕಲ್ಪಿತವಾದ ಜೀವಾಧೀನನಾದ ಬ್ರಹ್ಮನನ್ನು ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ. ಆದ್ದರಿಂದ ಬ್ರಹ್ಮನ ಧರ್ಮವು ಶ್ರುತವಾದ್ದರಿಂದ ಬ್ರಹ್ಮನೇ ಈ ಪ್ರಕರಣದಿಂದ ಪ್ರತಿಪಾದ್ಯನಾಗುತ್ತಾನೆ. ಹೀಗೆ ಹಿಂದಿನ 'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಎಂಬ ಸೂತ್ರವನ್ನು ಸೇರಿಸಿ, ಒಂದೇ ಅಧಿಕರಣವೆಂಬುದು ಇವರ ಅಭಿಪ್ರಾಯ.

ಅದ್ವೈತಿಗಳ ಈ ಅಧಿಕರಣ ಶರೀರ ಸರಿಯಿಲ್ಲ. ಏಕೆಂದರೆ -

ಯತ್ತತ್ತ್ವಮೈಕ್ಯಂ ತನ್ನೈವ ಕೀರ್ತ್ಯತೇ ಶ್ರುತಿಸೂತ್ರಯೋಃ ।
ತತ್ರ ಯಃ ಕೀರ್ತ್ಯತೇ ಭೇದಃ ತಚ್ಚ ತತ್ತ್ವಂ ನ ತೇ ಮತೇ ॥೧॥

ಯಾವ ಐಕ್ಯವು ಅದ್ವೈತ ಮತದ ತತ್ತ್ವವಾಗಿದೆಯೋ, ಅದನ್ನು ಶ್ರುತಿಯಾಗಲೀ, ಸೂತ್ರವಾಗಲೀ, ಪ್ರತಿಪಾದನೆ ಮಾಡುತ್ತಿಲ್ಲ. ಶ್ರುತಿ ಹಾಗೂ ಸೂತ್ರಗಳಲ್ಲಿ ಪ್ರತಿಪಾದನೆ ಮಾಡುತ್ತಿರುವ ಜೀವೇಶಭೇದವು ಅದ್ವೈತಮತದ ತತ್ತ್ವವಲ್ಲ.

'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಎಂಬ ಸೂತ್ರದ ವಿಷಯವನ್ನಾಗಿ ನೀವು ಉದಾಹರಿಸಿದ 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ ಪ್ರಾಜ್ಞೇನಾತ್ಮನಾನ್ವಾರೂಢಃ' ಎಂಬೆರಡು ಶ್ರುತಿಗಳು ಬ್ರಹ್ಮನು ಜೀವನಿಗಿಂತ ಭಿನ್ನನಾಗಿದ್ದಾನೆಂದೇ ಪ್ರತಿಪಾದನೆ ಮಾಡುತ್ತಿವೆ.

ಅದರಂತೆ 'ಪತ್ಯಾದಿಶಬ್ದೇಭ್ಯಃ' ಎಂಬ ಸೂತ್ರಕ್ಕೆ ವಿಷಯವಾಕ್ಯವನ್ನಾಗಿ ಅದ್ವೈತಿಗಳೇ ಉದಾಹರಿಸಿದ 'ಏಷ ಲೋಕಾಧಿಪತಿಃ' ಎಂಬ ಶ್ರುತಿಯೂ ಕೂಡ ಜೀವನಿಗಿಂತ ಬ್ರಹ್ಮನು ಭಿನ್ನನಾಗಿದ್ದಾನೆಂದು ತಿಳಿಸುವ ಭೇದಕಧರ್ಮವನ್ನೇ ಪ್ರತಿಪಾದನೆ ಮಾಡುತ್ತಿದೆ ಹೊರತು, ಅದ್ವೈತಿಗಳ ತತ್ತ್ವವೆನಿಸಿದ ಅದ್ವೈತಕ್ಕೆ ಅನುಕೂಲಕರವಾದ ವಿಷಯವನ್ನು ಪ್ರತಿಪಾದನೆ ಮಾಡಿಲ್ಲ.

ಹೀಗೆ ಹೇಳಿದ್ದರಿಂದ 'ಯೋಽಯಂ ವಿಜ್ಞಾನಮಯಃ' ಎಂಬ ಶ್ರುತಿಯು ವಿಜ್ಞಾನಮಯನೆನಿಸಿದ ಜೀವನೇ ಪರಮಾತ್ಮನಾಗಿದ್ದಾನೆ ಎಂಬ ಅದ್ವೈತಿಗಳ ವ್ಯಾಖ್ಯಾನವನ್ನು ನಿರಾಕರಿಸಿದಂತಾಯಿತು. ಸೂತ್ರವು ಸ್ಪಷ್ಟವಾಗಿ ಪರಮಾತ್ಮನಿಗಿಂತ ಭೇದವನ್ನು ಪ್ರತಿಪಾದನೆ ಮಾಡುತ್ತಿರುವಾಗ ಅದಕ್ಕೆ ವಿರುದ್ಧವಾಗಿ ಅಭೇದವನ್ನು ಹೇಳಿದರೆ ಸೂತ್ರವಿರೋಧವು ಬರುತ್ತದೆ. ಮತ್ತು 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' ಎಂಬ ಭೇದಪ್ರತಿಪಾದಕ ಶ್ರುತಿಯ ವಿರೋಧವೂ ಕೂಡ ಬರುತ್ತದೆ.

ಶ್ರುತಿಯಲ್ಲಿ ಭೇದವು ಪ್ರತಿಪಾದಿತವಾಗಿದೆಯೆಂದು ಹೇಳಬಾರದು. ಏಕೆಂದರೆ 'ಅತ ಊರ್ಧ್ವಂ ವಿಮೋಕ್ಷಾಯೈವ ಬ್ರೂಹಿ' ಮೋಕ್ಷದ ಮಾರ್ಗವನ್ನು ಉಪದೇಶ ಮಾಡು ಎಂದು ಪ್ರಶ್ನಿಸಿದಾಗ ಭೇದ ಹಾಗೂ ಭೇದಕಧರ್ಮಗಳನ್ನು ಶ್ರುತಿಯು ಹೇಳಿದೆ. ಆದ್ದರಿಂದ ಇವುಗಳನ್ನು ಮಿಥ್ಯಾಭೂತವೆಂದು ಹೇಳಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಬೇರೆ ಪ್ರಮಾಣಗಳಿಂದ ಹಾಗೂ ಸ್ವಪ್ರಕರಣದಲ್ಲೇ ಇರುವ 'ಪ್ರಾಜ್ಞೇನಾತ್ಮನಾ' ಇತ್ಯಾದಿ ವಾಕ್ಯಗಳಿಂದ ಅವಿರುದ್ಧವಾದ ಮಹತ್ತ್ವಾದಿವಿಧಿಪರತ್ವವನ್ನೇ ಹೇಳಲು ಬರುತ್ತದೆ. ಹೀಗಿರುವಾಗ ಅದಕ್ಕೆ ವಿರುದ್ಧವಾಗಿ ಅಭೇದಪರತ್ವವನ್ನು ಒಪ್ಪುವುದು ಯುಕ್ತವಲ್ಲ. ಆದ್ದರಿಂದ 'ಅತ ಊರ್ಧ್ವಂ' ಇತ್ಯಾದಿ ವಾಕ್ಯದಿಂದಲೇ ಐಕ್ಯವನ್ನು ಪ್ರತಿಪಾದನೆ ಮಾಡಲು ಸಾಧ್ಯವಿಲ್ಲ.

ಮತ್ತು ಶ್ರುತಿಸೂತ್ರಗಳಲ್ಲಿ ಯಾವ ಭೇದವು ಪ್ರತಿಪಾದಿತವಾಗಿದೆಯೋ, ಅದು ಅದ್ವೈತಮತದ ತತ್ವವಲ್ಲ. ಆದ್ದರಿಂದ ಶ್ರುತಿಸೂತ್ರಗಳ ವಿರೋಧವೂ ಬರುತ್ತದೆ. ಮತ್ತು 'ಪತ್ಯಾದಿಶಬ್ದೇಭ್ಯಃ' ಎಂಬ ಸೂತ್ರವು ಹಿಂದಿನ ಸೂತ್ರಕ್ಕೆ ಗುಣಸೂತ್ರವಾದಲ್ಲಿ 'ಚ' ಶಬ್ದವನ್ನು ಹೇಳಬೇಕಿತ್ತು. ಹಿಂದಿನ ಸೂತ್ರದಲ್ಲಿ ಹೇಳಿದ ಪ್ರಮೇಯಕ್ಕೆ ಮತ್ತೊಂದು ಕಾರಣವನ್ನು ಹೇಳಲು ಹೊರಟಾಗ ಸೂತ್ರದಲ್ಲಿ 'ಚ' ಶಬ್ದವನ್ನು ಉಲ್ಲೇಖ ಮಾಡಬೇಕು. ಈ ಎಲ್ಲಾ ಕಾರಣಗಳಿಂದ ಅದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ.

ರಾಮಾನುಜರ ಅಧಿಕರಣಶರೀರ ಹೀಗಿದೆ - ೧. 'ಆಕಾಶೋऽರ್ಥಾಂತರತ್ವಾದಿವ್ಯಪದೇಶಾತ್' ೨. 'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ೩. 'ಪತ್ಯಾದಿಶಬ್ದೇಭ್ಯಃ' ಇತ್ಯಾದಿ ಮೂರು ಸೂತ್ರಗಳು ಸೇರಿ, ಒಂದೇ ಅಧಿಕರಣ. ಈ ಮೂರು ಸೂತ್ರಗಳಲ್ಲಿಯೂ ಆಕಾಶಶಬ್ದದ ಸಮನ್ವಯವನ್ನು ಸಾಧಿಸಲಾಗಿದೆ. ನಾವು ಹೇಳಿದ ಛಾಂದೋಗ್ಯದ ಮಂತ್ರವೇ ಅಧಿಕರಣದ ವಿಷಯವಾಕ್ಯವಾಗಿದೆ. ನಾಮರೂಪವಿಲಕ್ಷಣನೆಂದು ಹೇಳಿರುವುದರಿಂದ, ಆಕಾಶಶಬ್ದದಿಂದ ಪ್ರತಿಪಾದ್ಯನಾದವನು ಬ್ರಹ್ಮನೇ ಆಗುತ್ತಾನೆ ಹೊರತು, ಮುಕ್ತಜೀವನು ಆಗುವುದಿಲ್ಲವೆಂದು ಸಿದ್ಧಾಂತ ಮಾಡಿದ್ದಾರೆ. ಮುಕ್ತಜೀವನು ಆಕಾಶಶಬ್ದವಾಚ್ಯನೆಂದು ಪೂರ್ವಪಕ್ಷ. ಬ್ರಹ್ಮನೆಂದು ಸಿದ್ಧಾಂತ.

ಇವರ ಈ ಪೂರ್ವಪಕ್ಷಸಿದ್ಧಾಂತಗಳು ಅಸಾಧುವಾಗಿವೆ. ಏಕೆಂದರೆ 'ಆಕಾಶೋ ವೈ ನಾಮ' ಎಂಬಲ್ಲಿ ಆಕಾಶಶಬ್ದದಿಂದ ಮುಕ್ತಜೀವನೇ ಪ್ರತಿಪಾದ್ಯನಾಗಿದ್ದಾನೆ ಹೊರತು, ಬ್ರಹ್ಮನಲ್ಲವೆಂದು ಪೂರ್ವಪಕ್ಷವನ್ನು ಮಾಡುತ್ತಿದ್ದಾರೆ. ಇದರಿಂದ ಪೂರ್ವಪಕ್ಷಿಯು ಜೀವನಿಗೂ ಬ್ರಹ್ಮನಿಗೂ ಭೇದವನ್ನು ಒಪ್ಪಿ ಪ್ರಶ್ನೆ ಮಾಡುತ್ತಿದ್ದಾನೆ ಎಂದಂತಾಯಿತು. ಮೊದಲು ತಾನು ಒಪ್ಪಿರುವ ಭೇದಕ್ಕೆ ವಿರುದ್ಧವಾಗಿ ಅವರಿಬ್ಬರಿಗೆ ಐಕ್ಯವನ್ನು 'ತತ್ತ್ವಮಸ್ಯಾದಿ' ವಾಕ್ಯಗಳ ಆಧಾರದಿಂದ ಒಪ್ಪಿ, ಸುಷುಪ್ತಿಸೂತ್ರಕ್ಕೆ ಪೂರ್ವಪಕ್ಷವನ್ನು ಮಾಡುವುದು ಅತ್ಯಂತ ಅನುಚಿತವಾಗಿದೆ.

ಇಲ್ಲಿಗೆ ಬ್ರಾಹ್ಮಣಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು.

ಇಲ್ಲಿಗೆ ಪ್ರಥಮಾಧ್ಯಾಯದ ತೃತೀಯಪಾದವು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಆನುಮಾನಿಕಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಆನುಮಾನಿಕಾಧಿಕರಣ

ಬ್ರಹ್ಮಸೂತ್ರ

।। अथ आनुमानिकाधिकरणम् ।।

'ಆನುಮಾನಿಕಪಮಿ' ಇತ್ಯಾದಿ ಸೂತ್ರದ ವ್ಯಾಖ್ಯಾನ

ब्रह्मसूत्रम् – आनुमानिकमप्येकेषामिति चेन्न

शरीररूपकविन्यस्तगृहीतेर्दर्शयति च ।। १ ।।

ಸೂತ್ರಾರ್ಥ - ಸಾಂಖ್ಯರ ಅನುಮಾನದಿಂದ ಕಲ್ಪಿತವಾದ ಪ್ರಕೃತಿ, ಜೀವ ಮೊದಲಾದವು ಅವ್ಯಕ್ತ, ಜೀವ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯವಾಗಿವೆ. ಆದ್ದರಿಂದ ವಿಷ್ಣುವಿನಲ್ಲಿ ಸರ್ವಶಬ್ದವಾಚ್ಯತ್ವವು ಯುಕ್ತವಾಗುವುದಿಲ್ಲ.

ಇದು ತಪ್ಪು. 'ಅವ್ಯಕ್ತಮಚಲಂ ಶಾಂತಮ್' ಎಂಬ ಶ್ರುತಿಯಲ್ಲಿ 'ಅವ್ಯಕ್ತೋಽಕ್ಷರ ಉಚ್ಯತೇ' ಎಂಬ ಸ್ಮೃತಿಯಲ್ಲಿ 'ಅನೇನ ಜೀವೇನ' ಇತ್ಯಾದಿ ಶ್ರುತಿಗಳಲ್ಲಿಯೂ ಪರಮಾತ್ಮನೇ ಅವ್ಯಕ್ತ, ಜೀವ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನೆಂದು ಸಿದ್ಧವಾಗಿದೆ. ಅಂಥ ಪರಮಾತ್ಮನ ಸಂಬಂಧವಿರುವುದರಿಂದ ಪ್ರಕೃತಿ ಮೊದಲಾದವುಗಳಲ್ಲಿ 'ಅವ್ಯಕ್ತ'

ಮೊದಲಾದ ಶಬ್ದಗಳ ವ್ಯವಹಾರವಿದೆ. ಶರೀರವು ಹೇಗೆ ಪುರುಷನ ಅಧೀನವಾಗಿರುತ್ತದೋ, ಅದರಂತೆ ಪ್ರಧಾನಾದಿಗಳು ಬ್ರಹ್ಮನ ಅಧೀನವಾಗಿವೆ. ಆದ್ದರಿಂದ ಪ್ರಕೃತ್ಯಾದಿಗಳು ಮುಖ್ಯವಾಗಿ ಪ್ರತಿಪಾದ್ಯವಾಗುವುದಿಲ್ಲ.

ಅರ್ಥ -- ಸೂತ್ರದಲ್ಲಿರುವ 'ಅಪಿ' ಶಬ್ದವು ಅವಧಾರಣಾರ್ಥದಲ್ಲಿದೆ. 'ಚ' ಶಬ್ದವು ಸ್ಮೃತಿಯನ್ನು ಸಮುಚ್ಚಯ ಮಾಡುತ್ತಿದೆ. ಆದ್ದರಿಂದ ಯಾವ ಕಾರಣದಿಂದ 'ಆನುಮಾನಿಕಮಪಿ' = ಸಾಂಖ್ಯರ ಅನುಮಾನದಿಂದ ಕಲ್ಪಿತವಾದ ಪ್ರಕೃತಿ, ಜೀವ ಮೊದಲಾದವುಗಳೇ, ಏಕೇಷಾಂ = ಕೆಲವು ಶಾಖಿಗಳು ಪಠಿಸುವ ಶಾಖೆಗಳಲ್ಲಿರುವ 'ಅವ್ಯಕ್ತಾತ್ ಪುರುಷಃ ಪರಃ' ಇತ್ಯಾದಿ ವಾಕ್ಯದಲ್ಲಿ ಶ್ರುತವಾದ ಅವ್ಯಕ್ತಾದಿ ಶಬ್ದಗಳಿಂದ ಪ್ರತಿಪಾದ್ಯವಾಗಿವೆ. ಆದ್ದರಿಂದ ವಿಷ್ಣುವು ಸರ್ವಶಬ್ದವಾಚ್ಯನಾಗಲಾರ. ಇತಿ ಚೇನ್ನ = ಈ ಆಕ್ಷೇಪವು ತಪ್ಪು. ಏಕೆಂದರೆ ವಿಷ್ಣುವೇ ಅವ್ಯಕ್ತಾದಿ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಹೊರತು, ಪ್ರಕೃತ್ಯಾದಿಗಳಲ್ಲ. ಏಕೆಂದರೆ ಯಾವ ಕಾರಣದಿಂದ 'ಅವ್ಯಕ್ತಮಚಲಮ್' ಎಂಬ ಶ್ರುತಿಯು 'ಅವ್ಯಕ್ತೋಽಕ್ಷರಃ' ಎಂಬ ಸ್ಮೃತಿಯು ಪ್ರಮಾಣವಾಗಿದೆಯೋ, ಆ ಕಾರಣದಿಂದ. ದರ್ಶಯತಿ = ವಿಷ್ಣುವೇ ಅವ್ಯಕ್ತಾದಿ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ಶ್ರುತಿ-ಸ್ಮೃತಿಗಳು ಹೇಳುತ್ತಿವೆ. ಹಾಗಾದರೆ ಅವ್ಯಕ್ತಾದಿ ಶಬ್ದವ್ಯವಹಾರಗಳು ಪ್ರಕೃತ್ಯಾದಿಗಳಲ್ಲಿ ಹೇಗೆ ಯುಕ್ತವಾಗುತ್ತದೆ ? ಎಂದರೆ, 'ಶರೀರರೂಪಕ' ಎಂಬಲ್ಲಿರುವ 'ಕ' ಪ್ರತ್ಯಯದಿಂದ ಉತ್ತರಿಸಿದ್ದಾರೆ. 'ಕುತ್ಸನಾರ್ಥದಲ್ಲಿ 'ಕ' ಪ್ರತ್ಯಯವಿದೆ. ಆದ್ದರಿಂದ, ಶರೀರರೂಪಕವಿನ್ಯಸ್ತಗೃಹಿತೇಃ = ಯಾವರೀತಿಯಾಗಿ ಶರೀರವು ಪುರುಷನ ಅಧೀನವಾಗಿದೆಯೋ, ಅದೇ ರೀತಿಯಾಗಿ ಪ್ರಕೃತ್ಯಾದಿಗಳು ಪರಮಾತ್ಮನ ಅಧೀನವಾಗಿವೆ. ಆದ್ದರಿಂದ ಶರೀರದಂತಿವೆ. ಹೊರತು ಶರೀರವೇ ಆಗಿರುವುದಿಲ್ಲ. ಇಂಥ ಪ್ರಕೃತ್ಯಾದಿಗಳಲ್ಲಿ ಅಂತರ್ಯಾಮಿಯಾಗಿರುವಾಗ ಪರಮಾತ್ಮನೇ ಅವ್ಯಕ್ತಾದಿ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಅಂತಹ ಪರಮಾತ್ಮನ ಸಂಬಂಧದಿಂದಲೇ ಪ್ರಕೃತ್ಯಾದಿಗಳಲ್ಲಿಯೂ ಅವ್ಯಕ್ತಾದಿಶಬ್ದ ವ್ಯವಹಾರವು ಲೋಕದಲ್ಲಿ ಇರುತ್ತವೆ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ನಾಕನೆಯ ಪಾದ ಏಕೆ ಹೊರಟಿದೆ ?

ब्रह्मसूत्रभाष्यम् –

।। श्रुतिलिङ्गादिभिरन्यत्रैव प्रसिद्धानामपि शब्दानां सामस्त्येन विशेषहेतुभिर्विष्णावेव प्रवृत्तिं दर्शयत्यस्मिन् पादे ।

ಅನುವಾದ - ವಿಷ್ಣುವಿಗಿಂತ ಬೇರೆಯಾದ ಪದಾರ್ಥವೇ ಶ್ರುತಿ ಹಾಗೂ ಲಿಂಗಗಳಿಂದ ಪ್ರತಿಪಾದ್ಯವಾಗಿದೆ ಎಂದು ಆಪಾತತಃ ತೋರುತ್ತದೆ. ಆದರೆ ಅಂತಹ ಶಬ್ದಗಳಿಂದೆಲ್ಲಾ ಮುಖ್ಯವಾಗಿ ವಿಷ್ಣುವೇ ವಾಚ್ಯನಾಗಿದ್ದಾನೆ. ಈ ವಿಷಯದಲ್ಲಿ ಸೂತ್ರಕಾರರು ಅನೇಕ ಪ್ರಬಲ ಕಾರಣಗಳನ್ನು ನೀಡುತ್ತಾರೆ. ಇದಕ್ಕಾಗಿಯೇ ಈ ನಾಲ್ಕನೆಯ ಪಾದ ಹೊರಡುತ್ತಿದೆ.

ಪ್ರತಿಪದಾರ್ಥ -- ನಾಲ್ಕನೆಯ ಪಾದದಿಂದ ಪ್ರತಿಪಾದ್ಯವಾದ ವಿಷಯವನ್ನು ತೋರಿಸುತ್ತಿದ್ದಾರೆ –

ಶ್ರುತಿಲಿಂಗಾದಿಭಃ = ಶ್ರುತಿ ಹಾಗೂ ಲಿಂಗಗಳಿಂದ, ಅನ್ಯತ್ರೈವ = ವಿಷ್ಣುವನ್ನು ಬಿಟ್ಟು ಬೇರೆ ಪ್ರಪಂಚದಲ್ಲಿಯೇ, ಪ್ರಸಿದ್ಧಾನಾಮಪಿ = ರೂಢಿಯಿಂದ ಅನ್ಯವಾಚಕವೆಂದು ಪ್ರಮಿತವಾಗಿದ್ದರೂ, ಶಬ್ದಾನಾಂ = ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳಿಗೆ, ಸಾಮಸ್ತ್ಯೇನ = ಸಮಗ್ರವಾಗಿ, ವಿಶೇಷಹೇತುಭಃ = ಪೂರ್ವಪಕ್ಷದಲ್ಲಿ ಹೇಳಲ್ಪಟ್ಟ ಲಿಂಗಗಳಿಗಿಂತಲೂ ಪ್ರಬಲವಾದ ಹೇತುಗಳಿಂದ, ವಿಷ್ಣಾವೇವ = ಮಹಾವಿಷ್ಣುವಿನಲ್ಲೇ, ಪ್ರವೃತ್ತಿಂ = ಸಮನ್ವಯವನ್ನು, ಅಸ್ಮಿನ್ ಪಾದೇ = ನಾಲ್ಕನೆಯ ಈ ಪಾದದಲ್ಲಿ, ದರ್ಶಯತಿ = ತೋರಿಸುತ್ತಿದ್ದಾರೆ.(೧)

---

(೧) ಪ್ರಥಮಾಧ್ಯಾಯದಲ್ಲಿ ಸಕಲಗುಣಪರಿಪೂರ್ಣತ್ವವನ್ನು ಸಮನ್ವಯ ಮಾಡುತ್ತಿದ್ದಾರೆ. ಸಕಲಗುಣ-ಪರಿಪೂರ್ಣತ್ವವು ಸಿದ್ಧವಾಗಬೇಕಾದರೆ, ಸಕಲಶಬ್ದಸಮನ್ವಯವನ್ನು ಮಾಡಲೇಬೇಕೆಂದು ಈಗಾಗಲೇ ತಿಳಿದಿದ್ದೇವೆ. ಸಕಲವಿಧವಾದ ಶಬ್ದಗಳನ್ನು ನಾಲ್ಕು ಬಗೆಯಲ್ಲಿ ಎಂಗಡಿಸಿ, ಅನ್ಯತ್ರಪ್ರಸಿದ್ಧವಾದ ನಾಮಾತ್ಮಕ ಶಬ್ದಗಳನ್ನು

'ಅವ್ಯಕ್ತ' ಎಂದರೆ ಮುಖ್ಯವಾಗಿ ಮಹಾವಿಷ್ಣು, ಅಮುಖ್ಯವಾಗಿ ಪ್ರಕೃತಿ

ब्रह्मसूत्रभाष्यम् — ।। आनुमानिकमप्येकेषामिति चेन्न शरीररूपकविन्यस्तगृहीतेर्दर्शयति च ।।१।।

'तत्तु समन्वयात्' (ब्र.सू. १-१-४) इति सर्वशब्दानां परमेश्वरे समन्वय उक्तः । तन्न युज्यते । यतः 'अव्यक्तात् पुरुषः परः' (क.उ. १-३-११) इति साङ्ख्यानुमानपरिकल्पितं प्रधानमप्येकेषां शाखिनामुच्यत इति चेत्

ಅನುವಾದ - 'ಅವ್ಯಕ್ತಾತ್ ಪುರುಷಃ ಪರಃ' ಇತ್ಯಾದಿ ಶ್ರುತಿಗಳಿಂದ ಪ್ರಧಾನಾದಿಗಳೇ ಪ್ರತಿಪಾದ್ಯಗಳಾಗಿವೆಯೆಂದು ಪೂರ್ವಪಕ್ಷ. ಶ್ರುತಿಸ್ಮೃತಿಗಳ ಆಧಾರದಿಂದ ವಿಷ್ಣುವೇ ಅವ್ಯಕ್ತಾದಿಶಬ್ದಗಳಿಂದ ವಾಚ್ಯನಾಗಿದ್ದಾನೆಂದು ತಿಳಿಯುತ್ತದೆ. ವಿಷ್ಣುವಿನ ಶರೀರದಂತಿರುವ ಪ್ರಧಾನಾದಿಗಳು ಅಮುಖ್ಯವಾಚ್ಯಗಳೆಂದು ಸಿದ್ಧಾಂತ.

ಸಕಲಶಬ್ದಗಳು ಪರಮಾತ್ಮನಲ್ಲಿಯೇ ಸಮನ್ವಯವಾಗುತ್ತವೆಂಬುದು 'ತತ್ತು ಸಮನ್ವಯಾತ್'

ಪ್ರಥಮಪಾದದಲ್ಲಿ ಸಮನ್ವಯ ಮಾಡಿದ್ದಾಯಿತು. ಎರಡನೆಯ ಪಾದದಲ್ಲಿ ಅನ್ಯತ್ರಪ್ರಸಿದ್ಧವಾದ ಲಿಂಗಾತ್ಮಕ ಶಬ್ದಗಳ ಸಮನ್ವಯವನ್ನು ಮಾಡಿದ್ದಾಯಿತು. ಉಭಯತ್ರಪ್ರಸಿದ್ಧವಾದ ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯವನ್ನು ಮೂರನೆಯ ಪಾದದಲ್ಲಿ ಮಾಡಿದ್ದಾಯಿತು. ಇನ್ನು ಉಳಿದದ್ದು ಅನ್ಯತ್ರೈವಪ್ರಸಿದ್ಧವಾದ ನಾಮಲಿಂಗಾತ್ಮಕವಾದ ಶಬ್ದಸಮನ್ವಯ. ಅದನ್ನು ಈ ಪಾದದಲ್ಲಿ ಮಾಡಲು ಹೊರಟಿದ್ದಾರೆ.

'ದುಃಖೀ', 'ಬದ್ಧ', 'ನೀಚ' ಇತ್ಯಾದಿ ಶಬ್ದಗಳು ಭಗವಂತನಲ್ಲಿ ಸರ್ವಥಾ ಬರಲಾರವು. ಅಂತಹ ಶಬ್ದಗಳೇನಾದರೂ ಭಗವಂತನನ್ನು ಪ್ರತಿಪಾದನೆ ಮಾಡಿದರೆ ದುಃಖಾದಿ ದೋಷಗಳನ್ನು ಪರಮಾತ್ಮನಲ್ಲಿ ಒಪ್ಪಬೇಕಾಗುತ್ತದೆ. ಮತ್ತು ಇಂತಹ ಶಬ್ದಗಳ ಸಮನ್ವಯವನ್ನು ಭಗವಂತನಲ್ಲಿ ಮಾಡುವುದರಿಂದ ಯಾವುದೇ ಲಾಭವೂ ಇಲ್ಲ. ಈ ಶಬ್ದಗಳ ಸಮನ್ವಯವನ್ನು ಮಾಡದಿದ್ದರೂ ಸಕಲಗುಣಪರಿಪೂರ್ಣತ್ವವು ಸಿದ್ಧವಾಗುತ್ತದೆ. ಇತ್ಯಾದಿ ಅನೇಕ ಬಗೆಯ ಪ್ರಶ್ನೆಗಳಿಗೆ ಉತ್ತರ ನೀಡಲು ಈ ಪಾದ ಹೊರಡುತ್ತಿದೆ.

ದುಃಖನಿಯಾಮಕತ್ವವೇ ಮೊದಲಾದ ಹಲವು ಗುಣಗಳು ಪರಮಾತ್ಮನಲ್ಲಿ ಸಿದ್ಧವಾಗಬೇಕಾದರೆ 'ದುಃಖೀ' ಮೊದಲಾದ ಶಬ್ದಗಳ ಸಮನ್ವಯ ಅನಿವಾರ್ಯ. ಮತ್ತು ಸರ್ವಶಬ್ದವಾಚ್ಯತ್ವದ ಜ್ಞಾನವೂ ಮೋಕ್ಷಕ್ಕೆ ಪ್ರಧಾನ ಕಾರಣ. ಅದಕ್ಕೋಸ್ಕರ ದೋಷವಾಚಕ ಶಬ್ದಗಳ ಸಮನ್ವಯವನ್ನು ಮಾಡಲೇಬೇಕು. ಮತ್ತು 'ನಾಮಾನಿ ಸರ್ವಾಣಿ ಯಮಾವಿಶಂತಿ' ಇತ್ಯಾದಿ ವೇದಗಳಲ್ಲಿರುವ ಸರ್ವಶಬ್ದಕ್ಕೆ ಸಂಕೋಚ ಮಾಡಬಾರದೆಂದರೆ ದೋಷವಾಚಕಶಬ್ದಗಳ ಸಮನ್ವಯವನ್ನು ತಿಳಿಯಲೇ ಬೇಕು. ಅಷ್ಟೇ ಅಲ್ಲದೇ ಈ ಪಾದದಲ್ಲಿ ವೇದದಲ್ಲಿರುವ ಪದ, ಸ್ವರ, ವರ್ಣಗಳಿಂದಲೂ ಪರಮಾತ್ಮನು ಪ್ರತಿಪಾದ್ಯನೆಂದು ಸಮರ್ಥಿಸಲಾಗಿದೆ. ಹಾಗಾಗಿ ಈ ಪಾದವು ಅತ್ಯಂತ ಸಾರ್ಥಕ.

ಎಂಬ ಸೂತ್ರದಲ್ಲಿ ಸಮರ್ಥಿಸಲಾಗಿದೆ. ಆದರೆ ಇದು ಸರಿಯಲ್ಲ. ಏಕೆಂದರೆ 'ಅವ್ಯಕ್ತಾತ್ ಪುರುಷಃ ಪರಃ' 'ಅವ್ಯಕ್ತದಿಂದ ಪುರುಷನು ಹುಟ್ಟಿದನು' ಎಂಬ ಶ್ರುತಿಯಲ್ಲಿರುವ ಅವ್ಯಕ್ತಶಬ್ದದಿಂದ ಸಾಂಖ್ಯರ ಅನುಮಾನದಿಂದ ಕಲ್ಪಿತವಾದ ಪ್ರಧಾನವು ವಾಚ್ಯವಾಗುತ್ತದೆ. ಹೊರತು ವಿಷ್ಣು ವಾಚ್ಯನಾಗಲಾರ. ಇಷ್ಟು ಆಕ್ಷೇಪ.

ಪ್ರತಿಪದಾರ್ಥ -- ಅಧಿಕರಣದ ಪ್ರಾರಂಭದಲ್ಲಿ ಸಂಗತಿಯನ್ನೇ ತೋರಿಸಬೇಕೆಂಬ ನಿಯಮವೇನೂ ಇರುವುದಿಲ್ಲ. ಬೇರೆ ಅಧಿಕರಣ-ಗಳಲ್ಲಿಯೂ ಹೀಗೆಯೇ ತಿಳಿಯಬೇಕು. ಇದನ್ನು ತಿಳಿಸಲು ಭಾಷ್ಯಕಾರರು ಮೊದಲು ಸೂತ್ರವನ್ನೇ ಪಠಿಸುತ್ತಿದ್ದಾರೆ –

ತತ್ತು ಸಮನ್ವಯಾತ್= ತತ್ತು ಸಮನ್ವಯಾತ್ ಎಂಬ ಸೂತ್ರದಲ್ಲಿ, ಸರ್ವಶಬ್ದಾನಾಂ = ಸಕಲವಿಧ ಶಬ್ದಗಳಿಗೆ, ಪರಮೇಶ್ವರೇ = ಮಹಾವಿಷ್ಣುವಿನಲ್ಲಿ, ಸಮನ್ವಯಃ = ಸಮ್ಯಕ್ ಪ್ರತಿಪಾದ್ಯತ್ವವನ್ನು, ಉಕ್ತಃ = ಹೇಳಲ್ಪಟ್ಟಿದೆ, ತತ್ = ಹಾಗೇ ಹೇಳಿರುವುದು, ನ ಯುಜ್ಯತೇ = ಯುಕ್ತವಾಗುವುದಿಲ್ಲ, ಯತಃ = ಏಕೆಂದರೆ, ಅವ್ಯಕ್ತಾತ್ ಪುರುಷಃ ಪರಃ = ಅವ್ಯಕ್ತದಿಂದ ಪುರುಷನು ಹುಟ್ಟಿದನು, ಇತಿ = ಹೀಗೆ ಕಾಠಕ ಶ್ರುತಿಯಲ್ಲಿ ಹೇಳಿರುವುದರಿಂದ, ಸಾಂಖ್ಯಾನುಮಾನಪರಿಕಲ್ಪಿತಂ = ಸಾಂಖ್ಯರ ಅನುಮಾನದಿಂದ ಪರಿಕಲ್ಪಿತವಾದ, ಪ್ರಧಾನಮಪಿ = ಪ್ರಕೃತಿಯೂ ಕೂಡ, ಏಕೇಷಾಂ ಶಾಖಿನಾಂ = ಬೇರೆ ಶಾಖೆಗಳಲ್ಲಿ, ಉಚ್ಯತೇ = ಹೇಳಲ್ಪಟ್ಟಿರುತ್ತದೆ, ಇತಿ ಚೇತ್ = ಇಷ್ಟು ಆಕ್ಷೇಪ.

ಅವ್ಯಕ್ತ, ಜೀವ ಈ ಶಬ್ದಗಳೆಲ್ಲವೂ ಮಹಾವಿಷ್ಣು ವಾಚಕ

ब्रह्मसूत्रभाष्यम् – न तस्यैव पारतन्त्र्याच्छरीररूपकेऽव्यक्ते विन्यस्तस्य परमात्मन एवाव्यक्तशब्देन गृहीतेः । कप्रत्ययः कृत्स्ने । परमात्मन एवाव्यक्तशब्दः। तत्तन्त्रत्वेन तच्छरीररूपत्वादितरस्याप्यव्यक्तशब्दः।

ಅನುವಾದ - ಆ ಆಕ್ಷೇಪವು ಸರಿಯಲ್ಲ. ಪ್ರಧಾನಾದಿಗಳು ವಿಷ್ಣುವಿನ ಅಧೀನವಾದ್ದರಿಂದ, ವಿಷ್ಣುವಿನ ಶರೀರದಂತಿವೆ. ಅಂತಹ ಪ್ರಧಾನಗಳಲ್ಲಿ ಸಿದ್ಧನಾಗಿರುವ ವಿಷ್ಣುವನ್ನೇ ಅವ್ಯಕ್ತಶಬ್ದದಿಂದ ಶ್ರುತಿಗಳು ತಿಳಿಸುತ್ತಿವೆ. ಶರೀರರೂಪಕ ಎಂಬಲ್ಲಿರುವ 'ಕ' ಪ್ರತ್ಯಯವು ಲಿಂಗಾರ್ಥದಲ್ಲಿದೆ. ನಮಗೆ

ಜಡಶರೀರವಿದ್ದಂತೆ ಪ್ರಕೃತ್ಯಾದಿಗಳು ಶರೀರಗಳಾಗಿಲ್ಲ. ಪರಮಾತ್ಮನ ಅಧೀನವಾದ್ದರಿಂದಷ್ಟೇ ಪ್ರಕೃತ್ಯಾದಿಗಳು ಪರಮಾತ್ಮನ ಶರೀರ ಎಂದು ಕರೆಸಿಕೊಳ್ಳಲ್ಪಟ್ಟವೆ. ಅವ್ಯಕ್ತಾದಿಶಬ್ದಗಳು ಮುಖ್ಯವಾಗಿ ಪರಮಾತ್ಮನಲ್ಲೇ ಇರುತ್ತವೆ. ಅವನ ಅಧೀನವಾದ್ದರಿಂದ ಅವನ ಶರೀರದಂತಿರುವ ಪ್ರಧಾನಾದಿಗಳಲ್ಲಿ ಅಮುಖ್ಯವಾಗಿ ಇರುತ್ತದೆ.

ಪ್ರತಿಪದಾರ್ಥ -- ಸಿದ್ಧಾಂತಾಂಶವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ -

ನ = ಸಕಲ ಶಬ್ದಗಳು ಪರಮಾತ್ಮ ಪರವಾಗುವುದಿಲ್ಲವೆಂಬ ಆಕ್ಷೇಪವು ತಪ್ಪು. ಏಕೆಂದರೆ ಪಾರತಂತ್ರ್ಯಾತ್ = ಈಶ್ವರನ ಅಧೀನವಾದ್ದರಿಂದ, ಶರೀರರೂಪಕೇ = ಶರೀರದಂತಿರುವ, ಅವ್ಯಕ್ತೇ = ಪ್ರಕೃತಿಯಲ್ಲಿ, ವಿನ್ಯಸ್ತಸ್ಯ = ಅಂತರ್ಗತನಾಗಿರುವ, ತಸ್ಯೈವ = ಯಾವ ಪರಮಾತ್ಮನಲ್ಲಿ ಸಮನ್ವಯದ ಪ್ರತಿಜ್ಞೆ ಮಾಡಲಾಯಿತೋ ಅಂತಹ ಪರಮಾತ್ಮನಃ ಏವ = ಪರಮಾತ್ಮನೇ, ಅವ್ಯಕ್ತಶಬ್ದೇನ = ಅವ್ಯಕ್ತಶಬ್ದದಿಂದ, ಗೃಹೀತೇಃ = ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ. ಕಪ್ರತ್ಯಯಃ = ಸೂತ್ರದಲ್ಲಿರುವ 'ಕ' ಪ್ರತ್ಯಯವು, ಕುತ್ಸನೇ = ನಿಂದಾರ್ಥದಲ್ಲಿದೆ, ಪರಮಾತ್ಮನ ಏವ = ಪರಮಾತ್ಮನೊಬ್ಬನೇ, ಅವ್ಯಕ್ತ ಶಬ್ದಃ = ಅವ್ಯಕ್ತ ಜೀವ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ. ತತ್ತಂತ್ರತ್ವೇನ = ಪರಮಾತ್ಮನ ಅಧೀನವಾದ್ದರಿಂದ, ತತ್ ಶರೀರರೂಪತ್ವಾತ್ = ಅವನ ಶರೀರವೆಂದು ಕರೆಸಿಕೊಳ್ಳುವ, ಇತರಸ್ಯಾಪಿ = ಪ್ರಕೃತಿ, ಜೀವ ಮೊದಲಾದವುಗಳೂ ಕೂಡ, ಅವ್ಯಕ್ತಶಬ್ದಃ = ಅವ್ಯಕ್ತ, ಜೀವ ಮೊದಲಾದ ಶಬ್ದಗಳಿಂದ ಅಪ್ರಧಾನವಾಗಿ ಪ್ರತಿಪಾದ್ಯವಾಗುತ್ತವೆ.

ಪ್ರಕೃತಿಯ ಒಳಗಡೆ ಪರಮಾತ್ಮ

ब्रह्मसूत्रभाष्यम् –'तुच्छ्येनाभ्वपिहितं यदासीत्' इति (ऋ.स. १०-१२९-३) दर्शयति च ।

ಅನುವಾದ - ಪರಮಾತ್ಮನಿಂದ ಗುಣದಲ್ಲಿ ಅಲ್ಪವಾದ ಪ್ರಕೃತಿಯಿಂದ ವಿಭುವಾದ ಪರಬ್ರಹ್ಮ ಆಚ್ಛಾದಿತವಾಗಿತ್ತು. ಹೀಗೆ ಋಗ್ವೇದವು ಹೇಳುತ್ತಿರುವುದರಿಂದ ಪ್ರಕೃತಿಯ ಒಳಗಡೆ ಪರಮಾತ್ಮನಿದ್ದಾನೆಂದು ತಿಳಿಯುತ್ತದೆ.

ಪ್ರತಿಪದಾರ್ಥ -- ಪರಮಾತ್ಮನೇ ಸ್ವತಂತ್ರನು, ಪ್ರಕೃತ್ಯಾದಿಗಳೇ ಅಸ್ವತಂತ್ರ ಎಂಬ ಪ್ರಮೇಯವು ಮತ್ತು ಪ್ರಧಾನಾದಿಗಳಲ್ಲಿ ಪರಮಾತ್ಮನು ಅಂತರ್ಗತನಾಗಿದ್ದಾನೆ ಎಂಬ ಪ್ರಮೇಯವು ಸಿದ್ಧವಾದರೆ, ಪರಮಾತ್ಮನು ಅವ್ಯಕ್ತಾದಿಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯನು, ಮತ್ತು ಅವನ ಸಂಪರ್ಕದಿಂದ ಪ್ರಕೃತ್ಯಾದಿಗಳು ಪ್ರತಿಪಾದ್ಯವಾಗಿವೆ ಎಂದು ಸಿದ್ಧವಾಗುತ್ತಿತ್ತು. ಆದರೆ ಈ ವಿಷಯದಲ್ಲಿ ಏನು ಆಧಾರ ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ –

ತುಚ್ಛೇನ = ತನಗಿಂತ ಗುಣದಲ್ಲಿ ಅತ್ಯಂತ ಅಲ್ಪವಾದ ಪ್ರಕೃತಿಗಿಂತ, ಆಭು = ವ್ಯಾಪ್ತನಾದ ಪರಮಾತ್ಮನು, ಅಪಿಹಿತಂ = ಮುಚ್ಚಲ್ಪಟ್ಟವನಾಗಿ, ಯದಾ = ಯಾವ ಪ್ರಲಯಕಾಲದಲ್ಲಿ, ಆಸೀತ್ = ಇದ್ದನೋ, ಇತಿ = ಹೀಗೆ, ದರ್ಶಯತಿ ಚ = ಋಗ್ವೇದದಲ್ಲಿ (೧೦-೧೨೯-೩) ಹೇಳಲ್ಪಟ್ಟಿದೆ.

ಅವ್ಯಕ್ತಾದಿಶಬ್ದಗಳು ವಿಷ್ಣುಪರವೆನ್ನಲು ಆಧಾರ

ब्रह्मसूत्रभाष्यम् –'अव्यक्तमचलं शान्तं निष्कलं निष्क्रियं परम् ।
यो वेद हरिमात्मानं स भयादनुमुच्यते'
इति पिप्पलादशाखायाम् ।

'अक्षरं ब्रह्म परमम्' इत्युक्त्वा 'अव्यक्तोऽक्षर इत्युक्तः (उच्यते)'
(भ.गी.८-३,२१) इति वचनाच्च ॥१॥

ಅನುವಾದ - ಇದೇ ವಿಷಯದಲ್ಲಿ ಅನೇಕ ಪ್ರಮಾಣಗಳಿವೆ. ಸಕಲರಿಂದ ತಿಳಿಯಲು ಸಾಧ್ಯವಿಲ್ಲದವನಾದ ಐಶ್ವರ್ಯದಿಂದ ಚ್ಯುತಿಯಿಲ್ಲದ ಕಾರಣ ಅಚಲನೆನಿಸಿರುವ ನಿರ್ವಿಕಾರನಾದ, ಷೋಡಶ ಕಲಾರಹಿತನಾದ, ಅನಾಯಾಸವಾಗಿ ಕ್ರಿಯಾಶೀಲನಾದ, ಸರ್ವೋತ್ತಮನಾದ, ಅಂತಃಪ್ರೇರಕನಾದ ಪರಮಾತ್ಮನನ್ನು ಯಾವ ಅಧಿಕಾರಿಯು ತಿಳಿಯುತ್ತಾನೋ ಅವನು ಸಂಸಾರ ಭಯದಿಂದ ಬಿಡುಗಡೆ ಹೊಂದುತ್ತಾನೆ, ಹೀಗೆ ಪಿಪ್ಪಲಾದ ಶಾಖೆಯಲ್ಲಿ ಹೇಳಲ್ಪಟ್ಟಿದೆ. ಮತ್ತು ಗೀತೆಯಲ್ಲಿ ಪರಬ್ರಹ್ಮನು ಅಕ್ಷರನಾಗಿದ್ದಾನೆಂದು ಹೇಳಿ, 'ಅವ್ಯಕ್ತೋಽಕ್ಷರ ಉಚ್ಯತೇ' ಅವ್ಯಕ್ತವೇ ಅಕ್ಷರ ಎಂದು ಹೇಳಲಾಗಿದೆ.

ಪ್ರತಿಪದಾರ್ಥ -- ಪರಮಾತ್ಮನು ಅವ್ಯಕ್ತಾದಿಶಬ್ದಗಳಿಂದ ವಾಚ್ಯನಾಗಿದ್ದಾನೆಂದು ಸಿದ್ಧವಾದರೆ, ಹಿಂದೆ ಹೇಳಿದ ಎಲ್ಲಾ ವಿಷಯಗಳು ಸಿದ್ಧವಾಗುತ್ತಿದ್ದವು. ಆದರೆ ಅದೇ ಸಿದ್ಧವಾಗಿಲ್ಲವಲ್ಲ ? ಎಂಬ ಪ್ರಶ್ನೆಗೆ ಸೂತ್ರದಲ್ಲಿರುವ 'ದರ್ಶಯತಿಚ' ಎಂಬ ಪದದ ಅರ್ಥವನ್ನು ಸ್ಪಷ್ಟಪಡಿಸುತ್ತಾ, ಶ್ರುತಿ-ಸ್ಮೃತಿಗಳನ್ನು ಆಧಾರವನ್ನಾಗಿ ನೀಡುತ್ತಿದ್ದಾರೆ –

ಅವ್ಯಕ್ತಂ = ಸಾಕಲ್ಯೇನ ಯಾರಿಂದಲೂ ತಿಳಿಯದ, ಅಚಲಂ = ಐಶ್ವರ್ಯದಿಂದ ಚ್ಯುತಿಯಿಲ್ಲದ, ಶಾಂತಂ = ನಿರ್ವಿಕಾರನಾದ, ನಿಷ್ಕಲಂ = ಪ್ರಾಣಾದಿ ಷೋಡಶ ಕಲಾರಹಿತನಾದ, ನಿಷ್ಕ್ರಿಯಂ = ಅನಾಯಾಸವಾಗಿ ಕ್ರಿಯಾಶೀಲನಾದ, ಪರಂ = ಸರ್ವೋತ್ತಮನಾದ, ಆತ್ಮಾನಂ = ಅಂತಃಪ್ರೇರಕನಾದ, ಹರಿಂ = ಪರಮಾತ್ಮನನ್ನು, ಯಃ = ಯಾವ ಅಧಿಕಾರಿಯು, ವೇದ = ತಿಳಿಯುತ್ತಾನೋ, ಸಃ = ಅಂತಹ ಅಧಿಕಾರಿಯು, ಭಯಾತ್ = ಸಂಸಾರ ಭಯದಿಂದ, ಮುಚ್ಯತೇ = ಬಿಡುಗಡೆ ಪಡೆಯುತ್ತಾನೆ, ಇತಿ = ಹೀಗೆ, ಪಿಪ್ಪಲಾದಶಾಖಾಯಾಂ = ಪಿಪ್ಪಲಾದ ಶಾಖೆಯಲ್ಲಿ ಹೇಳಲಾಗಿದೆ. ಅಕ್ಷರಂ = ಅಕ್ಷರನಾದ, ಪರಮಮ್ = ಶ್ರೇಷ್ಠನಾದ, ಬ್ರಹ್ಮ = ಬ್ರಹ್ಮನು, ಇತಿ = ಹೀಗೆ, ಉಕ್ತ್ವಾ = ಹೇಳಿ, ಅವ್ಯಕ್ತೋಽಕ್ಷರ ಉಚ್ಯತೇ = ಅವ್ಯಕ್ತವೇ ಅಕ್ಷರ ಎಂದು ಕರೆಸಿಕೊಳ್ಳುತ್ತದೆ, ಇತಿ = ಎಂದು, ವಚನಾಚ್ಚ = ಗೀತೆಯ ಪ್ರಮಾಣವಚನವಿರುವುದರಿಂದಲೂ ಪರಮಾತ್ಮನೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ವಪ್ರದೀಪ

ಪೂರ್ವಪಕ್ಷ ಭಾಷ್ಯದ ಅಭಿಪ್ರಾಯ

तत्वप्रदीपः – आनुमानिकमप्येकेषामिति चेन्न शरीररूपकविन्यस्त-गृहीतेर्दर्शयति न ।। ''महतः परमव्यक्तमव्यक्तात् पुरुषः परः'' इति काठकानां शाखायामव्यक्तशब्देन प्रधानं परिपठ्यते । तस्य महतः परत्वात् पुरुषादवरत्वाच्च। नह्यवरत्वं परस्य कयाऽपि विधया पश्याम इत्याशङ्क्य ।

'ಆನುಮಾನಿಕಮಪ್ಯೇಕೇಷಾಮಿತಿ ಚೇನ್ನ ಶರೀರರೂಪಕವಿನ್ಯಸ್ತಗೃಹೀತೇರ್ದರ್ಶಯತಿ ಚ' ಎಂಬ ಸೂತ್ರದ ವ್ಯಾಖ್ಯಾನವನ್ನು ಪ್ರಕೃತ ಭಾಷ್ಯಕಾರರು ಮಾಡುತ್ತಿದ್ದಾರೆ. 'ಮಹತಃ ಪರಮವ್ಯಕ್ತಂ ಅವ್ಯಕ್ತಾತ್ ಪುರುಷಃ ಪರಃ' ಮಹತ್ತತ್ವಕ್ಕಿಂತ ಅವ್ಯಕ್ತತತ್ವವು ಉತ್ಕೃಷ್ಟವಾಗಿದೆ. ಅವ್ಯಕ್ತತತ್ವಕ್ಕಿಂತ ಪುರುಷನು ಉತ್ಕೃಷ್ಟನಾಗಿದ್ದಾನೆ ಎಂದು ಕಾಠಕೋಪನಿಷತ್ತು ಹೇಳುತ್ತಿದೆ. ಈ ಶ್ರುತಿಯಲ್ಲಿರುವ ಅವ್ಯಕ್ತಶಬ್ದದಿಂದ ಪ್ರಕೃತಿಯೇ ಪ್ರತಿಪಾದ್ಯವಾಗುತ್ತದೆ. ಏಕೆಂದರೆ ಪ್ರಕೃತಿಯು ಮಹತ್ತತ್ವಕ್ಕಿಂತ ಶ್ರೇಷ್ಠವಾಗಿದೆ. ಪುರುಷನಿಗಿಂತ ಅವರವಾಗಿದೆ. ಪರಮಾತ್ಮನು ಮಹತ್ತತ್ವಕ್ಕಿಂತ ಶ್ರೇಷ್ಠನಾಗಬಹುದು, ಮತ್ತೊಂದು ವಸ್ತುವಿಗಿಂತ ಅವರನಾಗಲು ಯಾವುದೇ ವಿಧದಿಂದಲೂ ಸಾಧ್ಯವಿಲ್ಲ.

ವಿವರಣೆ - ಈ ಅಧಿಕರಣದಲ್ಲಿ ಅವ್ಯಕ್ತ ಮೊದಲಾದ ಶಬ್ದಗಳ ಸಮನ್ವಯವನ್ನು ಮಾಡಲಾಗಿದೆ. 'ಅವ್ಯಕ್ತಾತ್ ಪುರುಷಃ ಪರಃ' ಎಂಬುದು ಈ ಅಧಿಕರಣದ ವಿಷಯವಾಕ್ಯ. ಇಲ್ಲಿರುವ ಅವ್ಯಕ್ತಶಬ್ದದಿಂದ ಪ್ರಕೃತಿಯೇ ಪ್ರತಿಪಾದ್ಯವಾಗಬೇಕು. ಪರಮಾತ್ಮನು ಪ್ರತಿಪಾದ್ಯನಾಗಲು ಸಾಧ್ಯವಿಲ್ಲ. ಏಕೆಂದರೆ ಅವ್ಯಕ್ತತತ್ವವು ಮಹತ್ತತ್ವಕ್ಕಿಂತ ಶ್ರೇಷ್ಠವಾಗಿದೆ. ಪುರುಷನಿಂದ ಅವರವಾಗಿದೆ. ಈಗ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾದಲ್ಲಿ ಪುರುಷನಿಗಿಂತ ಕಡಿಮೆಯಾದನು ಎಂದು ಹೇಳಬೇಕಾಗುತ್ತದೆ. ಅವನು ಸರ್ವಾಧಿಪತಿಯಾಗಿರುವಾಗ ಮತ್ತೊಂದು ವಸ್ತುವಿನಿಂದ ಅವರನಾಗಲು ಹೇಗೆ ಸಾಧ್ಯ ? ಎಂಬುದು ಈ ಅಧಿಕರಣದ ಪೂರ್ವಪಕ್ಷ.

ಪರಿಹಾರ ಭಾಷ್ಯದ ಅಭಿಪ್ರಾಯ

तत्वप्रदीपः – परिहारभाष्यस्यायमर्थः । तस्यैव विष्णोः शरीररूपमव्यक्तम्। तदधीनत्वाच्छरीरमिवं रूपमस्येति शरीररूपं, नतु हरेश्शरीरत्वात्तस्येति शरीरूपमित्युक्तम् ।

ಈ ಆಕ್ಷೇಪವನ್ನು ಪರಿಹರಿಸುವ ಭಾಷ್ಯದ ಅಭಿಪ್ರಾಯ ಹೀಗಿದೆ - ಯಾವ ವಿಷ್ಣುವಿನಲ್ಲಿ ಸಮನ್ವಯವನ್ನು ಪ್ರತಿಜ್ಞೆ ಮಾಡಲಾಯಿತೋ, ಅಂಥ ಮಹಾವಿಷ್ಣುವೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. ಅವ್ಯಕ್ತತತ್ವವು ಮಹಾವಿಷ್ಣುವಿಗೆ ಶರೀರದಂತೆ ಇರುವುದರಿಂದ ಅವನ ಅಧೀನವಾಗಿದೆ. ತನ್ನ ಅಧೀನವಾದ ಅವ್ಯಕ್ತತತ್ವದಲ್ಲಿ ನೆಲೆಸಿರುವ ಪರಮಾತ್ಮನು ಅವ್ಯಕ್ತನೆಂದು ಕರೆಸಿಕೊಳ್ಳುತ್ತಾನೆ.

ಅವ್ಯಕ್ತತತ್ವವು ಶ್ರೀಹರಿಯ ಅಧೀನವಾದ್ದರಿಂದ ಶರೀರದಂತೆ ಇದೆ ಎಂದು ಶಾಸ್ತ್ರದಲ್ಲಿ ವ್ಯವಹರಿಸಲಾಗಿದೆ. ಆದ್ದರಿಂದ ಅವ್ಯಕ್ತತತ್ವವು ಶ್ರೀಹರಿಯ ಶರೀರವಾಗಿದೆ ಎಂದು ಸರ್ವಥಾ ತಿಳಿಯಬಾರದು.

'ಕ' ಪ್ರತ್ಯಯದ ಸ್ವಾರಸ್ಯ

तत्वप्रदीपः – नच शरीरकल्पनायोग्यं तदिति कप्रत्ययेन कुत्सयामास । तस्मिन्नव्यक्ते नियामकत्वेन वर्तमानो विष्णुरेवाव्यक्तशब्देन गृह्यते । परमात्मन एवाव्यक्तशब्दो मुख्यः । तत्तन्त्रत्वेन तदावरकत्वेन च तच्छरीररूपकत्वादितरस्याव्यक्तशब्दः ।

ಅವ್ಯಕ್ತತತ್ವವು ಶ್ರೀಹರಿಯ ಶರೀರವಾಗಿದೆಯೆಂದು ಕಲ್ಪನೆ ಮಾಡಬಾರದು. ಈ ವಿಷಯವನ್ನು ತಿಳಿಸುವುದಕ್ಕಾಗಿಯೇ ನಿಂದಾರ್ಥದಲ್ಲಿರುವ 'ಕ' ಪ್ರತ್ಯಯವನ್ನು ಉಪಯೋಗಿಸಿದ್ದಾರೆ. ಇಂಥ ಶರೀರದಂತಿರುವ ಅವ್ಯಕ್ತತತ್ವದಲ್ಲಿ ಶ್ರೀಹರಿಯು ನಿಯಾಮಕನಾಗಿ ನೆಲೆಸಿರುವ ಕಾರಣ ಅವನೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ. ಅವನ ಅಧೀನವಾದ್ದರಿಂದ ಅಥವಾ ಅವರಕವಾದ್ದರಿಂದ ಅವನ ಶರೀರದಂತೆ ಇರುವ ಅವ್ಯಕ್ತತತ್ವವೂ ಕೂಡ ಅಮುಖ್ಯವಾಗಿ ಅವ್ಯಕ್ತ ಎಂದು ಕರೆಸಿಕೊಳ್ಳುತ್ತಿದೆ.

ವಿವರಣೆ - ನಮ್ಮ ಶರೀರವು ಹೇಗೆ ಜಡಭೂತವಾಗಿದೆಯೋ, ಹಾಗೇ ಪರಮಾತ್ಮನು ಶರೀರವು ಜಡವಲ್ಲ. ತನ್ನ ಸ್ವರೂಪವೇ ಆಗಿದೆ. ಅವ್ಯಕ್ತಾದಿ ಜಡವಸ್ತುವು ಪರಮಾತ್ಮನ ಶರೀರವೆಂದು ಹೇಳುವುದು ತಪ್ಪಾಗುತ್ತದೆ. ಆದ್ದರಿಂದ ಸೂತ್ರಕಾರರು 'ಕ'ಪ್ರತ್ಯಯವನ್ನು ಬಳಸಿದ್ದಾರೆ. ಇದರಿಂದ ಅವ್ಯಕ್ತತತ್ವವು ಪರಮಾತ್ಮನ ಶರೀರವಲ್ಲ. ಶರೀರದಂತೆ ಇದೆ ಎಂದಷ್ಟೇ ಅಭಿಪ್ರಾಯ ಎಂದು.

'ತುಚ್ಛೇನಾಭ್ವಪಿಹಿತಂ' ಎಂಬ ಶ್ರುತ್ಯರ್ಥ

तत्वप्रदीपः – 'तुच्छमल्पं गुणतः । परमापेक्षयाऽल्पत्वं प्रकृतेः । आ समन्ताद्भूमात्मकत्वादाभु ब्रह्म । यत् ब्रह्म प्रकृत्याऽपिहितमासीत् तदेव 'तपसो' ज्ञानस्य महत्तया प्रधानमासीत् । अव्यक्तमिति ज्ञातुमसुशकं, अचलं न चाल्यं, शान्तं पूर्णसुखं, निष्कलं षोडशकलावर्जितं, निष्क्रियं न क्रियत इति ।।

'ತುಚ್ಛ್ಯೇನಾಭ್ವಪಿಹಿತಂ' ಇತ್ಯಾದಿಯಾಗಿ ಭಾಷ್ಯದಲ್ಲಿ ಋಗ್ವೇದದ ವಾಕ್ಯವನ್ನು ಉಲ್ಲೇಖ ಮಾಡಿದ್ದಾರೆ - 'ತುಚ್ಛೇನ' = ಗುಣದಲ್ಲಿ ಪರಮಾತ್ಮನಿಗಿಂತ ನೀಚವಾದ ಪ್ರಕೃತಿಯಿಂದ, ಆಭು = ಎಲ್ಲೆಡೆ ವ್ಯಾಪ್ತನಾದ, ಯತ್ = ಯಾವ ಪರಬ್ರಹ್ಮನು, ಅಪಿಹಿತಂ = ಪ್ರಕೃತಿಯಿಂದ ಆಚ್ಛಾದಿತನಾಗಿ, ಅಸೀತ್ = ಆಗಿದ್ದನು. ಅದೇ ತತ್ವವೇ ತಪಸ್ಸಿನಿಂದ ಹೇಳುವುದಕ್ಕೆ ಪ್ರಧಾನವಾಗಿತ್ತು.

'ಅವ್ಯಕ್ತಮಚಲಂ' ಎಂಬ ಪಿಪ್ಪಲಾದ ಶಾಖೆಯ ವಾಕ್ಯದಲ್ಲಿರುವ ಅವ್ಯಕ್ತಶಬ್ದಕ್ಕೆ ಸುಲಭವಾಗಿ ತಿಳಿಯಲು ಸಾಧ್ಯವಾಗದ್ದು ಎಂದರ್ಥ. 'ಅಚಲಂ' ಎಂಬುದಕ್ಕೆ ಚಂಚಲವಲ್ಲದ್ದು ಎಂದರ್ಥ. ಶಾಂತಂ ಎಂದರೆ ಪೂರ್ಣಸುಖವುಳ್ಳದ್ದು, 'ನಿಷ್ಕಲಂ' ಎಂದರೆ ಷೋಡಶಕಲಾರಹಿತವಾದದ್ದು, 'ನಿಷ್ಕ್ರಿಯಂ' ಎಂದರೆ ಕ್ರಿಯಾರಹಿತವಾದದ್ದು ಎಂದರ್ಥ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಅನ್ಯತ್ರೈವಪ್ರಸಿದ್ಧವಾದ ಶಬ್ದಗಳ ಸಮನ್ವಯಕ್ಕಾಗಿ ನಾಕನೆಯ ಪಾದ

तत्वप्रकाशिका – एतत्पादप्रतिपाद्यं दर्शयति – श्रुतीति ।। अन्यत्रोभयत्र च प्रसिद्धानां नामलिङ्गात्मकानां शब्दानां भगवति समन्वये सिद्धे, अवसरप्राप्तमन्यत्रैव प्रसिद्धानामुभयविधशब्दानां विष्णौ समन्वयं वक्त्यस्मिन् पादे सूत्रकार इत्यर्थः ।

ಪ್ರಥಮಾಧ್ಯಾಯದ ನಾಲ್ಕನೆಯ ಪಾದವು ಪ್ರಾರಂಭವಾಗುತ್ತಿದೆ. ಈ ಪಾದದಲ್ಲಿ ಯಾವ ವಿಷಯಗಳನ್ನು ಪ್ರತಿಪಾದನೆ ಮಾಡುತ್ತಾರೋ ಅವುಗಳನ್ನು ಭಾಷ್ಯಕಾರರು ಪ್ರಾರಂಭದಲ್ಲಿ 'ಶ್ರುತಿಲಿಂಗಾದಿಭಿಃ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

ವಿಷ್ಣುವನ್ನು ಬಿಟ್ಟು ಬೇರೆ ಪದಾರ್ಥಗಳಲ್ಲಿ ಪ್ರಸಿದ್ಧವಾದ ಅನ್ಯತ್ರಪ್ರಸಿದ್ಧವಾದ ನಾಮಾತ್ಮಕ ಶಬ್ದಗಳ ಸಮನ್ವಯವನ್ನು ಮೊದಲಿನ ಪಾದದಲ್ಲಿ ಅನ್ಯತ್ರಪ್ರಸಿದ್ಧವಾದ ಲಿಂಗಾತ್ಮಕ ಶಬ್ದಗಳ ಸಮನ್ವಯವನ್ನು, ಎರಡನೆಯ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ನಾಮಲಿಂಗಾತ್ಮಕ ಶಬ್ದಗಳ ಸಮನ್ವಯವನ್ನು ಮೂರನೆಯ ಪಾದದಲ್ಲಿ ಪರಮಾತ್ಮನಲ್ಲಿ ಮಾಡಿದ್ದಾಯಿತು. ಪ್ರಕೃತ ಅವಸರಪ್ರಾಪ್ತವಾದ ವಿಷ್ಣುವನ್ನು ಬಿಟ್ಟು ಬೇರೆ ಪದಾರ್ಥಗಳಲ್ಲಿ ಮಾತ್ರ ಪ್ರಸಿದ್ಧವಾದ ಅನ್ಯತ್ರೈವಪ್ರಸಿದ್ಧವಾದ ಶಬ್ದಗಳ ಸಮನ್ವಯವನ್ನು ಈ ಪಾದದಲ್ಲಿ ಸೂತ್ರಕಾರರು ಮಾಡುತ್ತಿದ್ದಾರೆಂಬುದು ಭಾಷ್ಯವಾಕ್ಯದ ಅಭಿಪ್ರಾಯ.

ನಾಕನೆಯ ಪಾದ ಏಕೆ ?

तत्वप्रकाशिका – नन्विन्द्रादिशब्दानामन्यत्रैव प्रसिद्धानां विष्णौ समन्वयस्य प्रथमपाद एव सिद्धत्वाद्, व्यर्थ एवायं पादः प्रतिभाति । नच

तेषामन्यत्रैव प्रसिद्धताऽभावः । तथा सति तृतीयवैयर्थ्यात् । 'अन्यत्रैव' 'अन्यत्रापि' इत्यतः प्रकारान्तराभावादित्यत उक्तम् – श्रुतिलिङ्गादिभिरिति ।।

ಪ್ರಶ್ನೆ - ವಿಷ್ಣುವನ್ನು ಬಿಟ್ಟು ದೇವೇಂದ್ರಾದಿಗಳಲ್ಲಿ ಮಾತ್ರ ಪ್ರಸಿದ್ಧವಾದ ಇಂದ್ರಾದಿ ಶಬ್ದಗಳ ಸಮನ್ವಯವನ್ನು ಪ್ರಥಮಪಾದದಲ್ಲಿಯೇ ಮಾಡಿದ್ದಾಯಿತು. ಅದಕ್ಕಾಗಿ ಪುನಃ ಈ ನಾಕನೆಯ ಪಾದ ಹೊರಡುವುದು ವ್ಯರ್ಥವೇ ಆಗಿದೆ. ಇಂದ್ರಾದಿ ಶಬ್ದಗಳು ಅನ್ಯತ್ರೈವಪ್ರಸಿದ್ಧವಾದ ಶಬ್ದಗಳಲ್ಲಿ ಸೇರುವುದಿಲ್ಲವೆಂದು ಹೇಳಲಾಗದು. ಅನ್ಯತ್ರೈವಪ್ರಸಿದ್ಧವಲ್ಲವೆಂದರೆ ಅನ್ಯತ್ರಾಪಿ-ಪ್ರಸಿದ್ಧವೆಂದು ಹೇಳಿದಂತಾಯಿತು. ಅರ್ಥಾತ್ ಉಭಯತ್ರಪ್ರಸಿದ್ಧಶಬ್ದಗಳೆಂದು ಹೇಳಿದಂತಾಯಿತು. ಆವಾಗ ಪ್ರಥಮಪಾದದಲ್ಲಿಯೇ ಉಭಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯವು ಸಿದ್ಧವಾದ ಮೇಲೆ ಪುನಃ ಮೂರನೆಯ ಪಾದ ಹೊರಟಿದ್ದು ವ್ಯರ್ಥವಾಗಬೇಕಾಗುತ್ತದೆ. ಹೀಗೆ ಅನ್ಯತ್ರಪ್ರಸಿದ್ಧವಾದ ಶಬ್ದಗಳು ಅನ್ಯತ್ರೈವಪ್ರಸಿದ್ಧವೆಂದೇ ಕರೆಸಿಕೊಳ್ಳುವುದರಿಂದ ಶಬ್ದಗಳು ಅನ್ಯತ್ರೈವಪ್ರಸಿದ್ಧವೆಂದು, ಅನ್ಯತ್ರಾಪಿಪ್ರಸಿದ್ಧವೆಂದು ಎರಡೇ ಪ್ರಕಾರಗಳಲ್ಲಿರುತ್ತವೆ. ಅನ್ಯತ್ರೈವಪ್ರಸಿದ್ಧವಾದ ಶಬ್ದಗಳ ಸಮನ್ವಯವನ್ನು ಮೊದಲಿನ ಎರಡು ಪಾದಗಳಲ್ಲಿ ಮಾಡಿದ್ದಾಯಿತು. ಅನ್ಯತ್ರಾಪಿಪ್ರಸಿದ್ಧವಾದ ಶಬ್ದಗಳ ಸಮನ್ವಯವನ್ನು ಮೂರನೆಯ ಪಾದದಲ್ಲಿ ಮಾಡಿದ್ದಾಯಿತು. ಈ ಎರಡು ಶಬ್ದಪ್ರಕಾರಗಳನ್ನು ಬಿಟ್ಟು ಮೂರನೆಯ ಪ್ರಕಾರ ಇರುವುದಿಲ್ಲ. ಆದ್ದರಿಂದ ಈ ನಾಲ್ಕನೆಯ ಪಾದ ಹೊರಟ್ಟಿದ್ದು ವ್ಯರ್ಥವಲ್ಲವೇ?

ಸಮಾಧಾನ - ಈ ಪ್ರಶ್ನೆಗೆ 'ಶ್ರುತಿಲಿಂಗಾದಿಭಿಃ' ಎಂಬ ಮಾತಿನಿಂದ ಭಾಷ್ಯಕಾರರು ಉತ್ತರಿಸಿದ್ದಾರೆ.

ಶಬ್ದದಲ್ಲಿರುವ ಮೂರನೆಯ ಪ್ರಕಾರ

तत्वप्रकाशिका – लोकप्रसिद्ध्याऽन्यत्र रूढानामिन्द्रादिशब्दानां श्रुतिलिङ्गादिबलात् विष्णौ समन्वयः प्राक् प्रतिपादितः । इदानीं तु श्रुतिलिङ्गादिभिरेवान्यत्रप्रसिद्धानामपि शब्दानां समन्वयनिरूपणान्नैतत्पाद-वैयर्थ्यम् । अनेनैवाभिप्रायेण 'अन्यत्रैव' इत्युक्तिरिति भावः ।

ಪ್ರಥಮಪಾದದಲ್ಲಿ ಲೋಕರೂಢಿಯಿಂದ ಇಂದ್ರಾದಿಶಬ್ದಗಳು ಅನ್ಯತ್ರಪ್ರಸಿದ್ಧವಾಗಿದ್ದವು. ಅಂಥ ನಾಮಾತ್ಮಕವಾದ ಶಬ್ದಗಳನ್ನು ಶ್ರುತಿ ಹಾಗೂ ಲಿಂಗಗಳ ಬಲದಿಂದ ಮಹಾವಿಷ್ಣುವಿನಲ್ಲಿ ಸಮನ್ವಯ ಮಾಡಿದ್ದಾಯಿತು. ಆದರೆ ಈ ಪಾದದಲ್ಲಿ ಶ್ರುತಿ ಹಾಗೂ ಲಿಂಗಾದಿಗಳ ಬಲದಿಂದಲೇ ಶಬ್ದಗಳು ಅನ್ಯತ್ರಪ್ರಸಿದ್ಧವಾಗಿವೆ. ಅಂಥ ಶಬ್ದಗಳ ಸಮನ್ವಯಕ್ಕಾಗಿ ಈ ಪಾದ ಹೊರಟಿರುವುದು ವ್ಯರ್ಥವಲ್ಲ. ಈ ಅಭಿಪ್ರಾಯದಿಂದಲೇ ಪ್ರತ್ಯೇಕವಾಗಿ ಅನ್ಯತ್ರೈವಪ್ರಸಿದ್ಧಶಬ್ದಗಳೆಂದು ಪರಿಗಣಿಸಲಾಗಿದೆ.

ಅಭಿಪ್ರಾಯವಿಷ್ಟು - ಶ್ರುತಿ ಹಾಗೂ ಲಿಂಗಾದಿಗಳ ಬಲದಿಂದ ಯಾವ ಶಬ್ದಗಳು ಅನ್ಯತ್ರಪ್ರಸಿದ್ಧವಾಗಿವೆಯೋ, ಅವುಗಳನ್ನು ಅನ್ಯತ್ರೈವಪ್ರಸಿದ್ಧಶಬ್ದಗಳೆಂದು ಪರಿಗಣಿಸಬೇಕು. ಆದ್ದರಿಂದ ಶಬ್ದಗಳಲ್ಲಿ ಮೂರನೆಯ ಪ್ರಕಾರವಿಲ್ಲವೆಂಬ ಆಕ್ಷೇಪಕ್ಕೂ ಕೂಡ ಈಗ ಅವಕಾಶವಿರುವುದಿಲ್ಲ.

ಈ ಪಾದಕ್ಕೆ ಸಾರ್ಥಕ್ಯ ಚಿಂತನೆ

तत्वप्रकाशिका – पूर्वं कचित् श्रुत्यादिनैवान्यत्रप्रसिद्धशब्दसमन्वयोक्ता-वप्येतत्पादीयश्रुत्यादीनां प्राबल्यादियमुक्तिः ।

ಎರಡನೆಯ ಪಾದದಲ್ಲಿ ಕೆಲವು ಶಬ್ದಗಳು ಶ್ರುತ್ಯಾದಿಗಳಿಂದಲೇ ಅನ್ಯತ್ರಪ್ರಸಿದ್ಧವಾಗಿದ್ದವು, ಅಂಥ ಶಬ್ದಗಳ ಸಮನ್ವಯವನ್ನು ಈಗಾಗಲೇ ಮಾಡಿದ್ದಾಗಿದೆ. ಆದರೂ ಕೂಡ ಈ ಪಾದದಲ್ಲಿ ಸಮನ್ವಯ ಮಾಡಲು ಹೊರಟಿರುವ ಶಬ್ದಗಳು ಅನ್ಯತ್ರಪ್ರಸಿದ್ಧವೆನ್ನಲು ಯಾವ ಶ್ರುತ್ಯಾದಿಪ್ರಮಾಣಗಳನ್ನು ಆಧಾರವನ್ನಾಗಿ ಹೇಳಲಾಗಿದೆಯೋ, ಅವುಗಳು ಬಹಳ ಪ್ರಬಲವಾಗಿವೆ. ಹಿಂದೆ ಅನ್ಯತ್ರಪ್ರಸಿದ್ಧವೆನ್ನಲು ಆಧಾರವಾಗಿ ಹೇಳಲ್ಪಟ್ಟ ಶ್ರುತಿಗಳು ದುರ್ಬಲವಾಗಿವೆ. ಆದ್ದರಿಂದಲೂ ಈ ಪಾದವು ಸಾರ್ಥಕ.

ಸ್ವರ ವರ್ಣಾದಿಗಳ ಸಮನ್ವಯಕ್ಕಾಗಿಯೂ ಈ ಪಾದ

तत्वप्रकाशिका – पूर्वं स्रष्टृत्वादिगुणाभिधायकानां शब्दानां तत्सङ्गतानां च समन्वयो निगदितः, अत्र पुनः स्वर-वर्ण-पदात्मकानां समस्तशब्दानामिति वाऽवैयर्थ्यमिति भावेनोक्तम् – सामस्त्येनेति ।।

ಹಿಂದಿನ ಮೂರು ಪಾದಗಳಲ್ಲಿಯೂ ಶ್ರೀಹರಿಯ ಗುಣಗಳನ್ನು ಪ್ರತಿಪಾದನೆ ಮಾಡುವ ಜಗತ್‌ಸ್ರಷ್ಟೃತ್ವ ಮೊದಲಾದ ಶಬ್ದಗಳನ್ನು ಸಮನ್ವಯ ಮಾಡಲಾಯಿತು. ಹಾಗೂ ಆ ಜಗತ್ ಸ್ರಷ್ಟೃತ್ವಕ್ಕೆ ಸಂಬಂಧಪಟ್ಟ ಆನಂದಮಯ ಮೊದಲಾದ ಶಬ್ದಗಳನ್ನೂ ಕೂಡ ಸಮನ್ವಯ ಮಾಡಲಾಯಿತು. ಆದರೆ ಈ ಪಾದದಲ್ಲಿ ಗುಣಪರಿಪೂರ್ಣತ್ವಕ್ಕೆ ಉಪಯುಕ್ತವಾದ ಸ್ವರ, ವರ್ಣ, ಪದಸ್ವರೂಪವಾದ ಶಬ್ದಗಳನ್ನು ಸಮನ್ವಯ ಮಾಡಲಾಗಿದೆ. ಈ ಕಾರಣದಿಂದಲೂ ಈ ಪಾದಕ್ಕೆ ವೈಯರ್ಥ್ಯವಿರುವುದಿಲ್ಲ. ಈ ಅಭಿಪ್ರಾಯದಿಂದ ಭಾಷ್ಯಕಾರರು 'ಸಾಮಸ್ತ್ಯೇನ' ಎಂಬ ಪದವನ್ನು ಉಲ್ಲೇಖಿಸಿದ್ದಾರೆ.

ಈ ಪಾದದಲ್ಲಿ ಬಲಿಷ್ಠ ಶ್ರುತಿಲಿಂಗಗಳು

तत्वप्रकाशिका – यदुक्तं 'बलवत् श्रुत्यादिभिन्यत्रप्रसिद्धशब्दानां समन्वयोऽत्र कथ्यते' इति तदयुक्तम् असम्भवादित्यत उक्तम् – विशेषेति।।

'ಅತ್ಯಂತ ಬಲಿಷ್ಠವಾದ ಶ್ರುತಿಲಿಂಗಾದಿಗಳಿಂದ ಅನ್ಯತ್ರಪ್ರಸಿದ್ಧವಾದ ಶಬ್ದಗಳನ್ನು ಮಹಾವಿಷ್ಣುವಿನಲ್ಲಿ ಈ ಪಾದವು ಸಮನ್ವಯ ಮಾಡುತ್ತಿದೆ' ಎಂದು ಹೇಳಿದ್ದು ಸರಿಯಲ್ಲ. ಏಕೆಂದರೆ ಹಾಗೇ ಶಬ್ದಗಳನ್ನು ಸಮನ್ವಯ ಮಾಡುವುದು ಅತ್ಯಂತ ಅಸಂಭಾವಿತ. ಈ ಆಶಂಕೆಯನ್ನು ಪರಿಹರಿಸಲು 'ವಿಶೇಷಹೇತುಭಿಃ' ಎಂದು ಹೇಳಿದ್ದಾರೆ.

ಹಿಂದಿನ ಪಾದಗಳಿಂದ ಪುನರುಕ್ತಿ ಇಲ್ಲ

तत्वप्रकाशिका – ततोऽपि प्रबलहेतुभिरित्यर्थः । यदुदितम् 'अत्र समस्तशब्दसमन्वयनिरूपणादवैयर्थ्यम्' इति । तदसत् । अंशे वैयर्थ्यादित्य (तो वा) तश्चाऽऽह – विशेषेति ।। प्रागनुक्तहेतुभिरित्यर्थः ।

ಭಾಷ್ಯದಲ್ಲಿರುವ 'ವಿಶೇಷಹೇತುಭಿಃ' ಎಂಬುದರ ಅಭಿಪ್ರಾಯ ಹೀಗಿದೆ - ಪೂರ್ವಪಕ್ಷಿಯು ಯಾವ ಅರ್ಥದಲ್ಲಿ ಶ್ರುತಿಲಿಂಗಗಳು ಆಧಾರವಾಗಿವೆ ಎಂದು ಹೇಳಿದನೋ, ಅಂಥ ಶ್ರುತಿಲಿಂಗ-ಗಳಿಗಿಂತಲೂ ವಿಷ್ಣುಪರವಾದ ಶ್ರುತಿಲಿಂಗಗಳು ಬಲಿಷ್ಠವಾಗಿವೆ. ಆದ್ದರಿಂದ ಎಲ್ಲಾ ಶಬ್ದಗಳು ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತವೆ ಎಂದರ್ಥ.

ಅಥವಾ 'ವಿಶೇಷಹೇತುಭಿಃ' ಎಂಬುದಕ್ಕೆ ಮತ್ತೊಂದು ಅಭಿಪ್ರಾಯವನ್ನೂ ಕೂಡ ತಿಳಿಯಬಹುದು - ಈ ಪಾದದಲ್ಲಿ ಎಲ್ಲಾ ಶಬ್ದಗಳನ್ನು ಸಮನ್ವಯ ಮಾಡುತ್ತಿರುವುದರಿಂದ ವೈಯರ್ಥ್ಯವಿಲ್ಲವೆಂದು ಹೇಳಿದ್ದು ಸರಿಯಲ್ಲ. ಒಂದು ವೇಳೆ ಹಿಂದಿನ ಮೂರು ಪಾದಗಳಲ್ಲಿ ಯಾವ ಶಬ್ದಗಳನ್ನೆಲ್ಲಾ ಪರಮಾತ್ಮನಲ್ಲಿ ಸಮನ್ವಯ ಮಾಡಿದ್ದಾಗಿದೆಯೋ, ಅದೇ ಶಬ್ದಗಳನ್ನು ಪುನಃ ಇಲ್ಲಿಯೂ ಸಮನ್ವಯ ಮಾಡಿದರೆ ಆ ಅಂಶದಲ್ಲಿ ವೈಯರ್ಥ್ಯದೋಷವು ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ವಿಶೇಷಹೇತುಭಿಃ' ಎಂಬುದರಿಂದ ಉತ್ತರಿಸಿದ್ದಾರೆ.

ಹಿಂದೆ ಯಾವ ಹೇತುಗಳಿಂದ ಶಬ್ದಗಳನ್ನು ಸಮನ್ವಯ ಮಾಡಲಾಯಿತೋ, ಆ ಹೇತುಗಳನ್ನು ಬಿಟ್ಟು ಬೇರೆ ಹೇತುಗಳಿಂದ, ಎಲ್ಲಾ ಬಗೆಯ ಶಬ್ದಗಳನ್ನು ಸಮನ್ವಯ ಮಾಡುತ್ತಿರುವುದರಿಂದ ಪುನರುಕ್ತಿ ದೋಷವು ಬರುವುದಿಲ್ಲ. ಏಕೆಂದರೆ ಪ್ರಮೇಯವು ಒಂದೇ ಆಗಿದ್ದರೂ ಅದಕ್ಕೆ ಉಪಯುಕ್ತವಾದ ಉಪಪತ್ತಿಗಳು ಬೇರೆ ಬೇರೆಯಾಗಿವೆ.

ಎಲ್ಲವನ್ನು ಸಾಧಿಸಿದ್ದಾಯಿತಲ್ಲವೇ ?

तत्वप्रकाशिका – स्यादेतत् । न समस्तशब्दसमन्वयोक्तिरुपपन्ना । वैयर्थ्यात् । 'जन्माद्यस्य' इत्युक्तजन्मादिकारणत्वे हि शास्त्रं प्रमाणीकृतम् । जन्मादिकारणत्वाभिधायकवाक्यानामेव परमात्मपरत्वं चतुर्थसूत्रे प्रतिज्ञातम्, तच्चातीतैः पादैः समर्थितमिति ।।

ಎಲ್ಲಾ ಬಗೆಯ ಶಬ್ದಗಳು ವಿಷ್ಣುವಿನಲ್ಲಿ ಸಮನ್ವಯಗೊಳ್ಳುತ್ತವೆಂಬುದು ಸರಿಯಲ್ಲ. ಏಕೆಂದರೆ ಎಲ್ಲಾ ಬಗೆಯ ಶಬ್ದಗಳ ಸಮನ್ವಯ ಮಾಡುವುದು ವ್ಯರ್ಥ. ಹಿಂದೆ 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿ ಪರಮಾತ್ಮನು ಜಗಜ್ಜನ್ಮಾದಿಕಾರಣನಾಗಿದ್ದಾನೆಂಬ ವಿಷಯದಲ್ಲಷ್ಟೇ ಶಾಸ್ತ್ರಗಳು ಪ್ರಮಾಣವಾಗಿವೆಯೆಂದು ಸಮರ್ಥಿಸಲಾಯಿತು. 'ತತ್ತು ಸಮನ್ವಯಾತ್' ಎಂಬ ನಾಲ್ಕನೆಯ ಸೂತ್ರದಲ್ಲಿ ಜನ್ಮಾದಿಕಾರಣತ್ವವನ್ನು ಸಮರ್ಥಿಸುವ ವಾಕ್ಯಗಳು ಪರಮಾತ್ಮಪರ-ವಾಗುತ್ತವೆಂದಷ್ಟೇ ಪ್ರತಿಜ್ಞೆ ಮಾಡಲಾಗಿದೆ. ಅಂತಹ ಜಗಜ್ಜನ್ಮಾದಿಕಾರಣತ್ವಕ್ಕೆ ಉಪಯುಕ್ತವಾದ ಶಬ್ದಗಳನ್ನೆಲ್ಲಾ ಹಿಂದಿನ ಮೂರು ಪಾದಗಳಿಂದ ಸಮರ್ಥಿಸಿದ್ದಾಗಿದೆ. ಪುನಃ ಈ ಪಾದ ವ್ಯರ್ಥವಲ್ಲವೇ?

ಜನ್ಮಾದಿಕಾರಣತ್ವ ಸಮನ್ವಯವಷ್ಟೇ ವಿವಕ್ಷಿತವಲ್ಲ

तत्वप्रकाशिका – मैवम् । चतुर्थसूत्रे सर्वशब्दानां परमात्मपरत्वस्य प्रतिज्ञातत्वात् । जन्मादिसूत्रे हि न जन्मादिकारणत्वमात्रं विवक्षितम् । किन्तु 'किं तद् ब्रह्म' इत्याकाङ्क्षायां निखिलगुणपरिपूर्णत्वस्यैव वक्तव्यत्वात्।

ಈ ಆಕ್ಷೇಪವು ತಪ್ಪು. ನಾಲ್ಕನೆಯ ಸೂತ್ರದಲ್ಲಿ ಸಕಲ ಶಬ್ದಗಳು ಪರಮಾತ್ಮಪರವಾಗಿವೆ ಎಂದು ಪ್ರತಿಜ್ಞೆಯನ್ನು ಮಾಡಲಾಗಿದೆ. ಮತ್ತು ಜನ್ಮಾಧಿಕರಣದಲ್ಲಿ ಜಗಜ್ಜನ್ಮಾದಿಕಾರಣತ್ವವಷ್ಟೇ ವಿಷ್ಣುವಿನ ಲಕ್ಷಣವೆಂದು ವಿವಕ್ಷಿಸಿಲ್ಲ. ಹೊರತಾಗಿ, ಪ್ರಥಮಸೂತ್ರದಲ್ಲಿ ಬ್ರಹ್ಮನ ಜಿಜ್ಞಾಸೆ ಮಾಡಬೇಕೆಂದು ಹೇಳಿದಾಗ 'ಕಿಂ ತದ್ ಬ್ರಹ್ಮ' ಅಂತಹ ಬ್ರಹ್ಮನು ಯಾರು? ಎಂಬ ಆಕಾಂಕ್ಷೆಯು ಪ್ರಾಪ್ತವಾಗುತ್ತದೆ. ಆವಾಗ ಸಕಲಗುಣಪರಿಪೂರ್ಣತ್ವವುಳ್ಳವನೇ ಬ್ರಹ್ಮನೆಂದು ಉತ್ತರಿಸಬೇಕು.

ಸಕಲ ಗುಣಗಳ ಸಮನ್ವಯವೂ ವಿವಕ್ಷಿತ

तत्वप्रकाशिका – नहि ब्रह्मशब्दः कतिपयगुणाभिधायकः । जन्मादिकारणत्वगुणग्रहणं तु तस्याखिलगुणसाधकत्वेनान्योपलक्षणाभिप्रायेणैव। तृतीयसूत्रे च तत्रैव सर्वं शास्त्रं प्रमाणमुक्तम् । कतिपयशब्दानां निखिल-गुणाभिधायकत्वायोगादिति ।

ಬ್ರಹ್ಮ ಶಬ್ದವು ಕೆಲವು ಗುಣಗಳನ್ನಷ್ಟೇ ಪರಮಾತ್ಮನಲ್ಲಿ ಹೇಳುತ್ತಿಲ್ಲ; ಹೊರತು ಸಕಲ ಗುಣಗಳನ್ನೇ ಹೇಳುತ್ತಿದೆ. ಎರಡನೆಯ ಸೂತ್ರದಲ್ಲಿ ಜನ್ಮಾದಿಕಾರಣತ್ವವೆಂಬ ಗುಣವನ್ನೇ ಸ್ವೀಕರಿಸಲು ಕಾರಣವೇನೆಂದರೆ ಶ್ರೀಹರಿಯಲ್ಲಿ ಜನ್ಮಾದಿಕಾರಣತ್ವವು ನಿಖಿಲಗುಣಪರಿಪೂರ್ಣತ್ವಕ್ಕೆ ಸಾಧಕವಾಗಿದೆಯೆಂದು ತಿಳಿಸಬೇಕಾಗಿದೆ. ಇಂತಹ ಜಗಜ್ಜನ್ಮಾದಿಕಾರಣತ್ವದಿಂದ ಉಳಿದ ಗುಣಗಳನ್ನು ಉಪಲಕ್ಷಣಯಾ ವಿವಕ್ಷಿಸಬೇಕೆಂಬ ಅಭಿಪ್ರಾಯದಿಂದ ಜಗಜ್ಜನ್ಮಾದಿಕಾರಣತ್ವವನ್ನು ಸ್ವೀಕರಿಸಲಾಗಿದೆ. ಮೂರನೆಯ ಶಾಸ್ತ್ರಯೋನಿತ್ವಸೂತ್ರದಲ್ಲಿಯೂ ನಿಖಿಲಗುಣಪರಿಪೂರ್ಣತ್ವ ವಿಷಯದಲ್ಲಿ ಸಕಲ ಶಾಸ್ತ್ರಗಳು ಪ್ರಮಾಣವೆಂದು ಹೇಳಲಾಗಿದೆ. ಏಕೆಂದರೆ ಕೆಲವು ಪರಿಮಿತ

ಶಬ್ದಗಳಿಂದ ನಿಖಿಲಗುಣಪರಿಪೂರ್ಣತ್ವವನ್ನು ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಾಲ್ಕನೆಯ ಸೂತ್ರದಲ್ಲಿಯೂ ಸಕಲಶಬ್ದಗಳ ಸಮನ್ವಯವನ್ನು ಪ್ರತಿಜ್ಞೆ ಮಾಡಿದ್ದಾರೆಂದು ತಿಳಿಯಬೇಕು.

ಅಧಿಕರಣಕ್ಕೆ ಸಂಗತ್ಯಾದಿಗಳು

तत्वप्रकाशिका – सूत्रमेवादौ पठति – आनुमानिकमिति ।। अत्रावरत्वादिलिङ्गैर्भगवति विरुद्धतयाऽन्यत्रैव प्रसिद्धाव्यक्तादिशब्दानां भगवति समन्वयप्रतिपादनादस्ति शास्त्रादिसङ्गतिः । श्रुत्यादिसङ्गतिं विषयादिकं च सूचयन् सौत्रं पूर्वपक्षांशं तावद् व्याचष्टे – तत्त्विति ।।

ಭಾಷ್ಯಕಾರರು ಸೂತ್ರವನ್ನೇ ಮೊದಲು ಪಠಿಸುತ್ತಿದ್ದಾರೆ 'ಆನುಮಾನಿಕಮ್' ಇತ್ಯಾದಿಯಾಗಿ. ಅವರತ್ವ ಮೊದಲಾದ ಲಿಂಗಗಳು ಶ್ರೀಹರಿಯಲ್ಲಿ ಇಲ್ಲವೆಂದು ತೋರುತ್ತಿರುವುದರಿಂದ ಆ ಧರ್ಮಗಳಿಂದ ಅನ್ಯತ್ರವೇ ಪ್ರಸಿದ್ಧವಾದ ಅವ್ಯಕ್ತಾದಿಶಬ್ದಗಳನ್ನು ಭಗವಂತನಲ್ಲಿ ಸಮನ್ವಯ ಮಾಡಲಾಗಿದೆ. ಆದ್ದರಿಂದ ಶಾಸ್ತ್ರಸಂಗತಿಯನ್ನು ತಿಳಿಯಬೇಕು. ಶ್ರುತಿಸಂಗತಿ, ಅಧಿಕರಣಸಂಗತಿ ವಿಷಯಾದಿಗಳನ್ನು ಸೂಚಿಸುತ್ತಾ ಸೂತ್ರದಲ್ಲಿರುವ ಪೂರ್ವಪಕ್ಷಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ತತ್ತು' ಇತ್ಯಾದಿಯಾಗಿ.

ಸಮನ್ವಯ ಸೂತ್ರದ ಅಭಿಪ್ರಾಯ

तत्वप्रकाशिका – 'तत्तु समन्वयात्' इति सूत्रे सर्वशब्दानां परमात्मपरत्वमुक्तम् । सर्वान्तर्गताव्यक्तादिशब्दैश्च काठकादौ किञ्चिदुच्यते –

'महतः परमव्यक्तमव्यक्तात् पुरुषः परः'।
'योनिमन्ये प्रपद्यन्ते शरीरत्वाय देहिनः ।
स्थाणुमन्ये नु संयन्ति यथा कर्म यथा श्रुतम्'।
'जीवा एव तु दुःखिनः'

ಇತಿ । ತಸ್ಯಾವ್ಯಕ್ತಾದೇರ್ವಿಷ್ಣೋರನ್ಯತ್ವೇ ನ ತಸ್ಯ ಸರ್ವಶಬ್ದವಾಚ್ಯತಾ ? ಇತ್ಯವಶ್ಯ-ನಿರ್ಣೇಯತಾ । (ಇತಿ ಸಙ್ಗತಿಸಮ್ಭವಾತ್)[೧]

'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ ಸಕಲಶಬ್ದಗಳು ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತವೆಂದು ಹೇಳಲಾಗಿದೆ. ಎಲ್ಲಾ ಶಬ್ದಗಳಲ್ಲಿ 'ಅವ್ಯಕ್ತ', 'ದುಃಖೀ', 'ಬದ್ಧ', 'ಅವರ', 'ಜೀವ' ಮೊದಲಾದ ಶಬ್ದಗಳೂ ಕೂಡ ಸೇರಿವೆ. ಆದರೆ ಈ ಶಬ್ದಗಳು ಬೇರೆ ಪದಾರ್ಥವನ್ನೇ ಹೇಳುತ್ತಿರುವಂತೆ ಕಾಠಕಶ್ರುತಿ ಮೊದಲಾದವುಗಳನ್ನು ನೋಡಿದಾಗ ತಿಳಿದು ಬರುತ್ತದೆ. ಅದು ಹೀಗೆ -

'ಮಹತಃ ಪರಮವ್ಯಕ್ತಮವ್ಯಕ್ತಾತ್ ಪುರುಷಃ ಪರಃ' ಮಹತ್ತತ್ತ್ವಕ್ಕಿಂತ ಅವ್ಯಕ್ತತತ್ತ್ವ ಶ್ರೇಷ್ಠ. ಅವ್ಯಕ್ತ ತತ್ತ್ವಕ್ಕಿಂತಲೂ ಪುರುಷನು ಶ್ರೇಷ್ಠ. (ಈ ಶ್ರುತಿ ಪುರುಷನು ಅವ್ಯಕ್ತಕ್ಕಿಂತ ಪರ ಎಂದು ಹೇಳುತ್ತಿದೆ)

ಯೋನಿಮನ್ಯೇ ಪ್ರಪದ್ಯಂತೇ ಶರೀರತ್ವಾಯ ದೇಹಿನಃ ।
ಸ್ಥಾಣುಮನ್ಯೇ ನು ಸಂಯಂತಿ ಯಥಾ ಕರ್ಮ ಯಥಾ ಶ್ರುತಮ್ ॥

'ತಮ್ಮ ಕರ್ಮಕ್ಕೆ ಅನುಗುಣವಾಗಿ ಕೆಲವು ಜೀವರು ಶರೀರವನ್ನು ಹೊಂದಲು ಯೋನಿಯನ್ನು ಪ್ರವೇಶಿಸುತ್ತಾರೆ. ಇನ್ನು ಕೆಲವರು ಮರದಲ್ಲಿ ಪ್ರವೇಶಿಸುತ್ತಾರೆ' (ಈ ಶ್ರುತಿ ಜೀವನಿಗೆ ಪ್ರಕೃತಿಬದ್ಧತ್ವವನ್ನು ಹೇಳುತ್ತಿದೆ).

'ಜೀವಾ ಏವ ತು ದುಃಖಿನಃ' 'ಜೀವರು ಮಾತ್ರ ದುಃಖಿಗಳು'. (ಈ ಶ್ರುತಿ ಜೀವನಿಗೆ ದುಃಖವನ್ನು ಹೇಳುತ್ತಿದೆ).

ಈ ವಾಕ್ಯಗಳಲ್ಲಿ ಶ್ರುತವಾದ ಅವ್ಯಕ್ತಾದಿಶಬ್ದಗಳು ವಿಷ್ಣುವನ್ನು ಬಿಟ್ಟು, ಬೇರೆ ಪದಾರ್ಥವನ್ನು ಪ್ರತಿಪಾದನೆ ಮಾಡುತ್ತಿವೆ ಎಂದು ಒಪ್ಪುವುದಾದರೆ ಸಮನ್ವಯಸೂತ್ರದಲ್ಲಿ ಹೇಳಲ್ಪಟ್ಟ ಸರ್ವಶಬ್ದವಾಚ್ಯತ್ವವು ವಿಷ್ಣುವಿಗೆ ಕೂಡುವುದಿಲ್ಲ. ಆದ್ದರಿಂದ ಅವಶ್ಯವಾಗಿ ಅವ್ಯಕ್ತಾದಿ

(೧) ಮುದ್ರಿತ ಪುಸ್ತಕದಲ್ಲಿ 'ಇತಿ ಸಂಗತಿಸಂಭವಾತ್' ಎಂಬ ಪಾಠ ಕಾಣುವುದಿಲ್ಲ. ಆದರೆ ರಾಯರು ಇದಕ್ಕೆ ವ್ಯಾಖ್ಯಾನ ಮಾಡಿದ್ದರಿಂದ ಉಲ್ಲೇಖಿಸಲಾಗಿದೆ.

ಶಬ್ದಗಳಿಂದ ಯಾರು ಪ್ರತಿಪಾದ್ಯರೆಂಬುದನ್ನು ನಿರ್ಣಯ ಮಾಡಬೇಕು. ಹೀಗೆ ಸಮನ್ವಯಾಧಿಕರಣದಿಂದ ಸಂಗತಿಯಿರುತ್ತದೆ.

ಅವ್ಯಕ್ತಾದಿಶಬ್ದಗಳಿಂದ ಪ್ರಕೃತ್ಯಾದಿಗಳು ಪ್ರತಿಪಾದ್ಯವೆಂದು ಪೂರ್ವಪಕ್ಷ

तत्वप्रकाशिका – तदव्यक्तजीवादिपदवाच्यं विषयः । किं विष्णुरन्यद्वेति सन्देहः । समन्वयसूत्रमन्यत्रैव प्रसिद्धिश्च सन्देहबीजम् । 'प्रधानाद्येवाव्यक्तादि पदवाच्यं नतु विष्णुः' इति पूर्वः पक्षः अव्यक्तादिशब्दानां प्रधानादावेव प्रसिद्धेः ।

ಶ್ರುತಿ-ಸ್ಮೃತಿಗಳಲ್ಲಿರುವ 'ಅವ್ಯಕ್ತ', 'ಜೀವ' ಮೊದಲಾದ ಪದಗಳಿಂದ ಯಾರು ವಾಚ್ಯರೋ, ಅವರೇ ವಿಷಯ. ವಿಷ್ಣುವೋ ಅಥವಾ ಬೇರೆ ಪದಾರ್ಥವೋ ? ಎಂಬುದೇ ಸಂದೇಹ. ಸಮನ್ವಯಸೂತ್ರ ಹಾಗೂ ಅನ್ಯತ್ರಪ್ರಸಿದ್ಧಿ ಇವೆರಡು ಸಂದೇಹಕ್ಕೆ ಬೀಜ. ಪ್ರಕೃತಿ ಮೊದಲಾದವುಗಳೇ ಅವ್ಯಕ್ತಾದಿ ಶಬ್ದಗಳಿಂದ ವಾಚ್ಯವಾಗಿವೆ ಹೊರತು ವಿಷ್ಣುವಲ್ಲ ಎಂಬುದು ಪೂರ್ವಪಕ್ಷ. ಏಕೆಂದರೆ ಅವ್ಯಕ್ತ ಮೊದಲಾದ ಶಬ್ದಗಳು ಪ್ರಕೃತ್ಯಾದಿಗಳಲ್ಲೇ ಪ್ರಸಿದ್ಧವಾಗಿವೆ.

ವಿಷ್ಣುವಿನಲ್ಲಿ ಅವ್ಯಕ್ತಶಬ್ದವಾಚ್ಯತ್ವವಿಲ್ಲ

तत्वप्रकाशिका – नच तेषां विष्णावपि सावकाशतेति वाच्यम् । तत्राव्यक्तस्य पुरुषावरत्वश्रवणात् । तच्च प्रधानस्य युक्तं, नतु विष्णोः । 'न तत्समश्चाभ्यधिकश्च दृश्यते' इत्यादिप्रमाणविरोधात् ।

ಪ್ರಶ್ನೆ - ಅವ್ಯಕ್ತ ಮೊದಲಾದ ಶಬ್ದಗಳು ವಿಷ್ಣುವಿನಲ್ಲಿ ಸಾವಕಾಶವಾಗಿದೆಯಲ್ಲವೇ ?

ಉತ್ತರ - ಮಂತ್ರದಲ್ಲಿ ಪುರುಷನಿಗಿಂತ ಅವ್ಯಕ್ತವು ನೀಚ ಎಂದು ಹೇಳಲಾಗಿದೆ. ಇದು ಪ್ರಕೃತಿಯಲ್ಲಿ ಬರುತ್ತದೆ ಹೊರತು, ವಿಷ್ಣುವಿನಲ್ಲಿ ಸರ್ವಥಾ ಬರುವುದಿಲ್ಲ. 'ನತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ' ವಿಷ್ಣುವಿಗೆ ಸರಿಸಾಟಿಯಾದ ವ್ಯಕ್ತಿಯಾಗಲೀ, ವಿಷ್ಣುವಿಗಿಂತ ಶ್ರೇಷ್ಠ ವ್ಯಕ್ತಿಯಾಗಲೀ ಎಲ್ಲಿಯೂ ಕಾಣಿಸುತ್ತಿಲ್ಲ. ಇವೇ ಮೊದಲಾದ ಪ್ರಮಾಣಗಳ ವಿರೋಧವು ಬರುತ್ತದೆ.

ಅವ್ಯಕ್ತ ಎಂದರೆ ಪ್ರಕೃತಿಯೇ ?

तत्वप्रकाशिका – तथाऽव्यक्तस्य महत्परत्वश्रवणात् । तदपि प्रधानस्यैवोपपन्नम् । 'महान्तं च समावृत्य प्रधानं समवस्थितम्' इत्यादेः विष्णोरव्यक्तादपि परत्वात् ।

ಮತ್ತು ಅವ್ಯಕ್ತವು ಮಹತ್ತತ್ವಕ್ಕಿಂತ ಶ್ರೇಷ್ಠವಾಗಿದೆಯೆಂದು 'ಮಹತಃ ಪರಮವ್ಯಕ್ತಮ್' ಎಂಬ ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ. ಇದೂ ಕೂಡ ಪ್ರಕೃತಿಯಲ್ಲೇ ಯುಕ್ತವಾಗುತ್ತದೆ ಹೊರತು, ವಿಷ್ಣುವಿನಲ್ಲಿ ಅಲ್ಲ. ಏಕೆಂದರೆ 'ಮಹಾಂತಂ ಚ ಸಮಾವೃತ್ಯ ಪ್ರಧಾನಂ ಸಮವಸ್ಥಿತಮ್' ಇತ್ಯಾದಿ ವಾಕ್ಯದ ಆಧಾರದಿಂದ ಮಹತ್ತತ್ವವು ಪ್ರಕೃತಿಯನ್ನು ಆಶ್ರಯಿಸಿ ಪ್ರಕೃತಿಯಿಂದಲೇ ಉತ್ಪನ್ನವಾಗಿದೆ ಎಂದು ತಿಳಿಯುತ್ತಿದೆ. ವಿಷ್ಣುವಾದರೂ ಪ್ರಕೃತಿಗಿಂತಲೂ ಉತ್ತಮನಾಗಿದ್ದಾನೆ. ಅಂತಹ ಉತ್ತಮೋತ್ತಮನಾದ ವಿಷ್ಣುವಿನಿಂದ ಮಹತ್ತತ್ವವು ನೇರವಾಗಿ ಹುಟ್ಟಿದೆಯೆಂದು ಈ ವಾಕ್ಯದಿಂದ ತಿಳಿಯುತ್ತಿಲ್ಲ. ಈ ಕಾರಣದಿಂದ ಅವ್ಯಕ್ತಶಬ್ದವಾಚ್ಯವಾದದ್ದು ಪ್ರಕೃತಿಯೆಂದೇ ನಿರ್ಣಯವಾಗುತ್ತದೆ.

ಜೀವ ಎಂದರೆ ವಿಷ್ಣುವಲ್ಲ

तत्वप्रकाशिका – जीवानां च दुःखिबद्धत्वादिप्रतीतेः । तच्च विष्णोः प्रमाणविरुद्धम् ।

'ಜೀವಾ ಏವ ತು ದುಃಖಿನಃ' ಇತ್ಯಾದಿ ವಾಕ್ಯಗಳಿಗೆ ದುಃಖ ಮೊದಲಾದ ದೋಷಗಳುಳ್ಳವನು ಜೀವನು ಎಂದು ಹೇಳಿದ್ದರಿಂದ ಜೀವಪದದಿಂದ ವಿಷ್ಣು ಪ್ರತಿಪಾದ್ಯನಾಗಲಾರನು. ಏಕೆಂದರೆ 'ನಿರನಿಷ್ಟೋ ನಿರವದ್ಯಃ' ಇತ್ಯಾದಿ ಶ್ರುತಿಗಳು ವಿಷ್ಣುವಿನಲ್ಲಿ ಯಾವುದೇ ದೋಷವಿಲ್ಲ ಎಂದು ಹೇಳುತ್ತಿವೆ.

ವಿಷ್ಣುವಿನಲ್ಲಿ ಸರ್ವಸಮನ್ವಯವು ಸಿದ್ಧವಾಗಲಿಲ್ಲ

तत्वप्रकाशिका – तस्मादव्यक्तादिशब्दवाच्यं प्रधानाद्येव ।

ಆದ್ದರಿಂದ 'महतः परमव्यक्तम्' ಎಂಬಲ್ಲಿರುವ ಅವ್ಯಕ್ತ ಮೊದಲಾದ ಶಬ್ದಗಳಿಂದ 'जीवा एव तु दुःखिनः' ಎಂಬಲ್ಲಿರುವ 'ಜೀವ' ಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವಲ್ಲ ಹೊರತು, ಪ್ರಕೃತಿ, ಜೀವ ಇವುಗಳೇ ಪ್ರತಿಪಾದ್ಯವಾಗುತ್ತವೆ.

ಸರ್ವಸಮನ್ವಯದ ಪ್ರತಿಜ್ಞೆಗೆ ಭಗ್ನವಾಯಿತು

तत्त्वप्रकाशिका – यत एवं केषाञ्चिच्छाखास्वव्यक्तादिशब्दैः । प्रधानाद्येवोच्यते' अतो यत् 'तत्तु समन्वयात्' इति सर्वशब्दानां परमेश्वराभिधायकत्वं उक्तं तन्न युज्यत इति भावः ।

ಯಾವ ಕಾರಣದಿಂದ ಕೆಲವು ಶಾಖೆಗಳಲ್ಲಿರುವ ಅವ್ಯಕ್ತ, ಜೀವ ಮೊದಲಾದ ಶಬ್ದಗಳು ಪ್ರಕೃತಿ, ಜೀವ ಮೊದಲಾದವನ್ನೇ ಪ್ರತಿಪಾದನೆ ಮಾಡುತ್ತಿವೆಯೋ ಆ ಕಾರಣದಿಂದ ಹಿಂದೆ 'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ ಸಕಲ ಶಬ್ದಗಳೂ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ ಎಂದು ನೀವು ಪ್ರತಿಜ್ಞೆ ಮಾಡಿದ್ದು ತಪ್ಪಾಯಿತು. ಕೆಲವು ಶಬ್ದಗಳಿಂದ ಪ್ರಕೃತ್ಯಾದಿಗಳು ಪ್ರತಿಪಾದ್ಯವಾಗುತ್ತಿರುವಾಗ ಸಕಲಶಬ್ದಗಳು ವಿಷ್ಣುವನ್ನೇ ಹೇಳುತ್ತವೆಂದು ನಿಮಗೆ ಸಾಧಿಸಲಾಗದು. ಇಷ್ಟು ಪೂರ್ವಪಕ್ಷ.

ಅವ್ಯಕ್ತ, ಜೀವಾದಿ ಶಬ್ದಗಳು ವಿಷ್ಣು ವಾಚಕ

तत्त्वप्रकाशिका – सिद्धान्तांशं व्याचष्टे – नेति ।। यतः परमात्मैव अव्यक्तादिशब्दवाच्यो न प्रधानादि ।

ಸಿದ್ಧಾಂತ ಹೀಗಿದೆ - ಸಿದ್ಧಾಂತ ಹೇಳುವ ಸೂತ್ರದ ಭಾಗವನ್ನು 'ನ' ಇತ್ಯಾದಿ ಭಾಷ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. ಅವ್ಯಕ್ತ, ಜೀವ ಮೊದಲಾದ ಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ ಹೊರತು, ಪ್ರಕೃತಿಯಾಗಲೀ, ಜೀವನಾಗಲೀ ಪ್ರತಿಪಾದ್ಯವಲ್ಲ.

ಪೂರ್ವಪಕ್ಷವೇ ಅಸಾಧು

तत्त्वप्रकाशिका – अतः परमात्मन एवाव्यक्तादिशब्दवाच्यत्वग्रहणात् यत् 'सर्वशब्दानां परमात्मपरत्वं न युज्यते' इत्युक्तं तन्न इत्यर्थः ।

ಆದ್ದರಿಂದ ಅವ್ಯಕ್ತ, ಜೀವ ಮೊದಲಾದ ಶಬ್ದಗಳಿಂದ ಶ್ರುತಿಯು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿರುವ ಕಾರಣ ಸಕಲ ಶಬ್ದಗಳು ಪರಮಾತ್ಮಪರವಲ್ಲವೆಂಬ ಪೂರ್ವಪಕ್ಷವು ಅಸಾಧುವಾಗಿದೆ ಎಂದು ಹೇಳಿದಂತಾಯಿತು.

ಸಮನ್ವಯ ಸೂತ್ರದ ಪ್ರತಿಜ್ಞೆ ಸಿದ್ಧವಾಯಿತು

तत्वप्रकाशिका – यस्मिन् समन्वयः प्रतिज्ञातः 'तस्यैव' इति स्वपदं 'परमात्मन एव' इति व्याख्यातम् ।

ಯಾವ ವ್ಯಕ್ತಿಯಲ್ಲಿ ಸಕಲಶಬ್ದಗಳು ಸಮನ್ವಯವಾಗುತ್ತವೆಂದು ಸಮನ್ವಯ ಸೂತ್ರದಲ್ಲಿ ಪ್ರತಿಜ್ಞೆ ಮಾಡಲಾಗಿದೆಯೋ, ಅಂತಹ ಪರಮಾತ್ಮನ ವಿಷಯದಲ್ಲೇ ಎಂಬುದಾಗಿ ಭಾಷ್ಯದಲ್ಲಿರುವ 'ತಸ್ಯೈವ' ಎಂಬ ಪದದ ಅರ್ಥ. ಅದನ್ನೇ ಪುನಃ 'ಪರಮಾತ್ಮನಃ' ಎಂಬ ಪದದಿಂದ ಭಾಷ್ಯಕಾರರು ವ್ಯಾಖ್ಯಾನ ಮಾಡಿದ್ದಾರೆ.

ವ್ಯವಹಾರಕ್ಕೂ ಬಾಧಕವಿಲ್ಲ

तत्वप्रकाशिका – परमात्मन एवाव्यक्तादिशब्दवाच्यत्वे कथं प्रधानादौ तद् व्यवहारः ?

ಒಂದು ವೇಳೆ ಅವ್ಯಕ್ತ, ಜೀವ ಮೊದಲಾದ ಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನಾಗುವುದಾದರೆ, ಪ್ರಕೃತಿ, ಜೀವ ಮೊದಲಾದವರಲ್ಲಿ ಅವ್ಯಕ್ತ, ಜೀವ ಮೊದಲಾದ ವ್ಯವಹಾರಗಳು ಹೇಗೆ ಕೂಡುತ್ತವೆ ?

ಅಜ್ಞಾನಿಗಳ ವ್ಯವಹಾರವೇ ಬೇರೆ

तत्वप्रकाशिका – 'अवाचकत्वेऽप्यनभिज्ञानादिना व्यवहारः' इत्युक्तम्, इति चेन्न ।

ಪ್ರಕೃತ್ಯಾದಿಗಳು ಅವ್ಯಕ್ತಾದಿ ಶಬ್ದಗಳಿಂದ ಪ್ರತಿಪಾದ್ಯವಲ್ಲ; ಹೊರತು ಪರಮಾತ್ಮನೇ ಪ್ರತಿಪಾದ್ಯ. ಇದನ್ನು ಸರಿಯಾಗಿ ತಿಳಿಯದ ಅಜ್ಞಾನಿಗಳು ಪ್ರಕೃತ್ಯಾದಿಗಳನ್ನೇ ಅವ್ಯಕ್ತ ಮೊದಲಾದ ಶಬ್ದಗಳಿಂದ ವ್ಯವಹರಿಸುತ್ತಿದ್ದಾರಲ್ಲವೇ? ಇದು ತಪ್ಪು.

'ಶರೀರರೂಪಕವಿನ್ಯಸ್ತ' ಎಂಬ ವಿಶೇಷಣದ ತಾತ್ಪರ್ಯ

तत्वप्रकाशिका – तथा सत्यवाचकत्वाविशेषेण घटादिशब्दानां पटादौ व्यवहारप्रसङ्गादित्याशङ्कानिरासायोक्तं – शरीररुपकविन्यस्तेति ।।

ಹಾಗಾದಲ್ಲಿ ಅವಾಚಕಶಬ್ದದಿಂದ ಆಯಾ ಪದಾರ್ಥಗಳು ಪ್ರತಿಪಾದ್ಯವಾಗುವುದಾದರೆ ಘಟ ಮೊದಲಾದ ಶಬ್ದಗಳು ಪಟಾದಿ ವಸ್ತುಗಳಿಗೆ ವಾಚಕವಾಗದಿದ್ದರೂ ಘಟ ಮೊದಲಾದ ಶಬ್ದಗಳನ್ನು ಪಟಾದಿಗಳಲ್ಲಿ ವ್ಯವಹಾರ ಮಾಡಬೇಕಾದಿತು. ಈ ಆಶಂಕೆಯನ್ನು ನಿರಾಕರಿಸಲು ಸೂತ್ರಕಾರರು 'ಶರೀರರೂಪಕವಿನ್ಯಸ್ತ' ಎಂಬ ಪದವನ್ನು ಪ್ರಯೋಗಿಸಿದ್ದಾರೆ.

ಪ್ರಕೃತಿಯು ಈಶನ ಶರೀರದಂತಿದೆ

तत्वप्रकाशिका – तद् व्याचष्टे – पारतन्त्र्यादिति ।। यथा शरीरं पुरुषतन्त्रं तथा परमात्मतन्त्रत्वेन शरीरसमे प्रधानादौ स्थितस्य इत्यर्थः ।

'ಶರೀರರೂಪಕವಿನ್ಯಸ್ತ' ಎಂಬ ಸೂತ್ರದ ಭಾಗವನ್ನೇ ಭಾಷ್ಯಕಾರರು 'ಪಾರತಂತ್ರ್ಯಾತ್' ಎಂಬ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ. ಯಾವರೀತಿಯಾಗಿ ಶರೀರವು ಪುರುಷಾಧೀನವಾಗಿರುತ್ತದೋ, ಅದರಂತೆ ಶರೀರದಂತಿರುವ ಪ್ರಕೃತಿಯು ಪರಮಾತ್ಮನ ಅಧೀನವಾಗಿದೆಯೆಂದು ವಿವಕ್ಷಿಸಬೇಕು. 'ಇಂತಹ ಶರೀರದಂತಿರುವ ಪ್ರಧಾನದಲ್ಲಿ ಸ್ಥಿತನಾಗಿರುವ' ಎಂಬುದಾಗಿ 'ಶರೀರರೂಪಕವಿನ್ಯಸ್ತ' ಎಂಬ ಪದದ ಅರ್ಥವಾಗಿದೆ.

ಶರೀರ ಎಂದರೆ ಅಧೀನ ಎಂದರ್ಥ

तत्वप्रकाशिका – ननु 'अत्र पारतन्त्र्याभिप्रायेण प्रधानादेः परमात्म-शरीररूपत्वमसूत्रयत्' इति कुतो ज्ञायते ? शरीरत्वाभिप्रायेण किं न स्यात् ? इत्यत आह – कप्रत्यय इति ।।

ಪ್ರಕೃತಿಯು ಪರಮಾತ್ಮನ ಶರೀರ ಎಂದರೆ ಪರಮಾತ್ಮನ ಅಧೀನವಾಗಿದೆ ಎಂಬರ್ಥವನ್ನು ಹೇಳುತ್ತಿದ್ದೀರಿ. ಇದು ನಮಗೆ ಹೇಗೆ ತಿಳಿಯುತ್ತದೆ. ಪ್ರಕೃತಿಯು ಪರಮಾತ್ಮನ ಶರೀರವೇ ಆಗಿರಬಹುದಲ್ಲವೇ? ಈ ಪ್ರಶ್ನೆಗೆ ಭಾಷ್ಯಕಾರರು 'ಕ' ಪ್ರತ್ಯಯ ಎಂಬುದರಿಂದ ಉತ್ತರಿಸಿದ್ದಾರೆ.

'ಕ' ಪ್ರತ್ಯಯವು ನಿಂದಾರ್ಥಕ

तत्वप्रकाशिका – न प्रधानादेः परमात्मशरीरत्वाभिप्रायेणैतत्पदं प्रायुङ्क्त सूत्रकारः, यावता तत् कप्रत्ययेन कुत्सयामास ।

ಪ್ರಧಾನವು ಪರಮಾತ್ಮನ ಸ್ವಾಭಾವಿಕವಾದ ಶರೀರವಾಗಿದ್ದಲ್ಲಿ ಸೂತ್ರಕಾರರು ಶರೀರರೂಪಕ ಎಂಬಲ್ಲಿ ಕಪ್ರತ್ಯಯವನ್ನು ಪ್ರಯೋಗಿಸುತ್ತಲೇ ಇರಲಿಲ್ಲ. ಯಾವ ಕಾರಣದಿಂದ ನಿಂದಾರ್ಥದಲ್ಲಿರುವ ಕಪ್ರತ್ಯಯವನ್ನು ಉಲ್ಲೇಖಿಸಿದ್ದಾರೋ, ಆ ಕಾರಣದಿಂದ ಪ್ರಕೃತಿಯು ಪರಮಾತ್ಮನ ಶರೀರವಲ್ಲವೆಂದು ನಿರ್ಣಯವಾಗುತ್ತದೆ.

ಪ್ರಕೃತಿಯು ಹರಿಯ ಶರೀರವಲ್ಲ

तत्वप्रकाशिका – नहि कुत्सनार्हं परमात्मशरीरमिति भावः । अन्यथा रुपपदवैयर्थ्याच्च ।

ಏಕೆಂದರೆ ನಿಂದನೆಗೆ ವಿಷಯವಾದದ್ದು ಪರಮಾತ್ಮನ ಶರೀರವಾಗಲು ಸಾಧ್ಯವಿಲ್ಲ. ಹೀಗೊಪ್ಪದಿದ್ದರೆ ಶರೀರರೂಪಕ ಎಂಬಲ್ಲಿ ಸಾದೃಶ್ಯಾರ್ಥದಲ್ಲಿರುವ ರೂಪಶಬ್ದವೂ ಕೂಡ ವ್ಯರ್ಥವಾಗಬೇಕಾದೀತು.

ರೂಪಕ ಪದದ ಸ್ವಾರಸ್ಯ

तत्वप्रकाशिका – शरीररुपकविन्यस्तपदं व्याख्याय तदभिप्रायमाह – परमात्मन एवेति ।।

ಹೀಗೆ ಸೂತ್ರದಲ್ಲಿ 'ಶರೀರರೂಪಕವಿನ್ಯಸ್ತ' ಎಂಬ ಪದವನ್ನು ವ್ಯಾಖ್ಯಾನ ಮಾಡಿ, ಅದರ ಅಭಿಪ್ರಾಯವನ್ನು 'ಪರಮಾತ್ಮನ ಏವ' ಎಂಬ ಮುಂದಿನ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ವ್ಯವಹಾರದ ವಿರೋಧವೂ ಇಲ್ಲ

तत्वप्रकाशिका – यद्यपि परमात्मन एवाव्यक्तादिशब्दा वाचकाः, तथापि न प्रधानादौ तद् व्यवहारायोगः । प्रधानादौ परमात्मनो विशेषस्तया, तत्सम्बन्धेन तत्रापि शब्दप्रवृत्तेः ।

ಅವ್ಯಕ್ತಾದಿಶಬ್ದಗಳು ವಾಸ್ತವಿಕವಾಗಿ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿವೆ. ಆದರೂ ಸಹ ಪ್ರಕೃತ್ಯಾದಿಗಳಲ್ಲಿಯೂ ಅವ್ಯಕ್ತಾದಿ ಶಬ್ದಗಳ ವ್ಯವಹಾರವು ಅಯುಕ್ತವಲ್ಲ. ಏಕೆಂದರೆ ಪ್ರಕೃತ್ಯಾದಿಗಳಲ್ಲಿ ಪರಮಾತ್ಮನು ನಿಯಾಮಕನಾಗಿ ನೆಲೆಸಿದ್ದಾನೆ. ಅಂತಹ ಅವ್ಯಕ್ತಾದಿಶಬ್ದಗಳಿಂದ ಮುಖ್ಯಪ್ರತಿಪಾದ್ಯನಾದ ಪರಮಾತ್ಮನ ಸಂಬಂಧದಿಂದ ಈ ಪ್ರಕೃತ್ಯಾದಿಪದಾರ್ಥಗಳೂ ಕೂಡ ಅಮುಖ್ಯವಾಗಿ ಪ್ರತಿಪಾದ್ಯವಾಗುತ್ತಿವೆ.

ಪ್ರಕೃತ್ಯಾದಿಗಳೆಲ್ಲವೂ ಶ್ರೀಹರಿಯ ಅಧೀನ

तत्वप्रकाशिका – नच वाच्यमुभयोरपि मुख्यवाच्यत्वं, विपरीतं वा किं न स्यात् ? इति । प्रधानादेः भगवत्तन्त्रत्वेनोभयोर्मुख्यवाच्यत्वस्योक्तविपर्यस्य चायोगादिति भावः ।

ಪ್ರಶ್ನೆ - ಪರಮಾತ್ಮನು ಅವ್ಯಕ್ತಾದಿಶಬ್ದಗಳಿಂದ ಮುಖ್ಯವಾಗಿ ಹೇಗೆ ಪ್ರತಿಪಾದ್ಯನಾಗಿದ್ದಾನೋ, ಅದರಂತೆ ಪ್ರಕೃತಿಯೂ ಕೂಡ ಮುಖ್ಯವಾಗಿ ಪ್ರತಿಪಾದ್ಯವಾಗಬಹುದಲ್ಲವೇ? ಅಥವಾ ಪ್ರಕೃತಿಯೇ ಮುಖ್ಯವಾಗಿ ಪ್ರತಿಪಾದ್ಯವಾಗಿದ್ದು, ಇಂತಹ ಜಡವಾದ ಪ್ರಕೃತಿಯ ಸಂಬಂಧದಿಂದ ಪರಮಾತ್ಮನು ಅಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ ಎಂದೇಕೆ ಹೇಳಬಾರದು ?

ಉತ್ತರ - ಇದು ತಪ್ಪು. ಪ್ರಕೃತ್ಯಾದಿಗಳು ಜಡವಾದ್ದರಿಂದ ಭಗವದಧೀನವಾಗಿವೆ. ಆದ್ದರಿಂದ ಪರಮಾತ್ಮನಂತೆ ಪ್ರಕೃತಿಯು ಮುಖ್ಯವಾಗಿ ಪ್ರತಿಪಾದ್ಯವಾಗಲು ಸಾಧ್ಯವಿಲ್ಲ. ಮತ್ತು ಭಗವದ-ಧೀನವಾದ ಪ್ರಕೃತಿಯ ಸಂಬಂಧದಿಂದ ಭಗವಂತನು ಪ್ರತಿಪಾದ್ಯನಾಗಿದ್ದಾನೆಂಬ ವಾದವೂ ಕೂಡ ಅಸಾಧುವಾಗಿದೆ.

ಶ್ರೀಹರಿಯ ಸಂಬಂಧದಿಂದ ಬೇರೆ ಪದಾರ್ಥಗಳು ಪ್ರತಿಪಾದ್ಯ

तत्वप्रकाशिका – तदुक्तं गारुडे –

'एवमेव हि शब्दानां प्रसिद्धिरपि लौकिकी ।
वाचकत्वं प्रधानस्य त्वितरस्य तदन्वयात्'

इति ।

ಇದನ್ನೇ ಗರುಡಪುರಾಣದಲ್ಲಿ -

'ಏವಮೇವ ಹಿ ಶಬ್ದಾನಾಂ ಪ್ರಸಿದ್ಧಿರಪಿ ಲೌಕಿಕೀ ।
ವಾಚಕತ್ವಂ ಪ್ರಧಾನಸ್ಯ ತ್ವಿತರಸ್ಯ ತದನ್ವಯಾತ್ ॥'

ಸಕಲಶಬ್ದಗಳು ಮುಖ್ಯನಾದ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ. ಇವನ ಸಂಬಂಧದಿಂದ ಬೇರೆ ಪದಾರ್ಥಗಳನ್ನೂ ಪ್ರತಿಪಾದನೆ ಮಾಡುತ್ತವೆ.

ಸಮಾಕರ್ಷ ಮಾಡಿ ಲೋಕವ್ಯವಹಾರ

तत्वप्रकाशिका – नच मञ्चादावुक्तव्यभिचारः शङ्कनीयः । 'समाकर्षात्' इति वक्ष्यमाणन्यायस्यात्राभिप्रेतत्वेन लक्षणानाश्रयणादिति ।

ಪ್ರಶ್ನೆ - ಯಾವ ಅರ್ಥವು ಅನ್ಯಾಧೀನವೋ, ಅದು ಅಮುಖ್ಯಾರ್ಥವೆಂದು ನಿಯಮ ಮಾಡಿದಿರಿ. 'ಮಂಚಾಃ ಕ್ರೋಶಂತಿ' ಇತ್ಯಾದಿ ಸ್ಥಳದಲ್ಲಿ ನಿಮ್ಮ ಈ ನಿಯಮಕ್ಕೆ ವ್ಯಭಿಚಾರ ಬರುತ್ತದೆ. ಇಲ್ಲಿ 'ಮಂಚ' ಶಬ್ದಕ್ಕೆ 'ಮಂಚದಲ್ಲಿರುವ ಪುರುಷರು' ಎಂದರ್ಥ. ಪುರುಷರೇ ಇಲ್ಲಿ ಮುಖ್ಯವಾಗಿ 'ಮಂಚ' ಶಬ್ದದಿಂದ ಪ್ರತಿಪಾದ್ಯರಾಗಿದ್ದಾರೆ. ಮಂಚಗಳು ಪುರುಷಾಧೀನವಾದರೂ ಅಮುಖ್ಯಾರ್ಥಗಳಾಗಿಲ್ಲ. ಪುರುಷರು ಮಂಚಾಧೀನರಾಗದಿದ್ದರೂ ಅಮುಖ್ಯಾರ್ಥರಾಗಿದ್ದಾರೆ. ಮಂಚ ಶಬ್ದಕ್ಕೆ ಪುರುಷರಲ್ಲಿ ಲಕ್ಷಣಾ ಮಾಡುವುದು ಕಂಡಿದೆ. ಆದ್ದರಿಂದ ನಿಮ್ಮ ನಿಯಮಕ್ಕೆ ವ್ಯಭಿಚಾರ ಬರುತ್ತದಲ್ಲವೇ?

ಉತ್ತರ - ಇದು ತಪ್ಪು. ಏಕೆಂದರೆ ಮುಂದೆ 'ಸಮಾಕರ್ಷಾತ್' ಎಂಬ ಸೂತ್ರದಲ್ಲಿ ಹೇಳುವ ನ್ಯಾಯವು ಇಲ್ಲಿ ಅಭಿಪ್ರೇತವಾಗಿರುವುದರಿಂದ ಲಕ್ಷಣಾವನ್ನು ಆಶ್ರಯಿಸಬಾರದು. ಸಕಲಶಬ್ದಗಳು ಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತವೆ. ಅವನನ್ನು ಹೇಳುವ ಶಬ್ದಗಳನ್ನೇ ಸಮಾಕರ್ಷಣ ಮಾಡಿ ಲೋಕದಲ್ಲಿ ವ್ಯವಹರಿಸುತ್ತಿದ್ದೇವೆ.

ಎಲ್ಲೆಡೆಯೂ ಪರಮಾತ್ಮನೇ ಪ್ರತಿಪಾದ್ಯ

तत्वप्रकाशिका – अत्र सर्वत्राव्यक्तपदं जीवाद्युपलक्षणार्थम् ।

ಎಲ್ಲೆಡೆಯೂ ಅವ್ಯಕ್ತಪದದಿಂದ ಉಪಲಕ್ಷಣಯಾ ಜೀವನನ್ನೂ ಕೂಡ ವಿವಕ್ಷಿಸಬೇಕು. ಆದ್ದರಿಂದ ಪರಮಾತ್ಮನು ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಹೇಗೆ ತಿಳಿಯುತ್ತೇವೆಯೋ, ಅದರಂತೆ ಜೀವ ಮೊದಲಾದ ಶಬ್ದಗಳಿಂದಲೂ ಪರಮಾತ್ಮನೇ ಪ್ರತಿಪಾದ್ಯನೆಂಬುದನ್ನೂ ಕೂಡ ತಿಳಿಯಬೇಕು.

ಪ್ರಮಾಣದಿಂದ ನಿಯಾಮಕನೆಂದು ನಿರ್ಧಾರ

तत्वप्रकाशिका – ननु 'परमात्मन एवाव्यक्तादिशब्दाभिधेयत्वं प्रधानादेस्तु तत्सम्बन्धादेव' इति युज्यते, यदि प्रधानादेरल्पत्वं परमात्मनः स्वातन्त्र्यं प्रधानादिविन्यस्तत्वं च भवेत्; तदेव कुतः? इत्यत आह – तुच्छेनेति ।।

ಪ್ರಶ್ನೆ - ಪರಮಾತ್ಮನೇ ಅವ್ಯಕ್ತಾದಿ ಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ. ಪ್ರಕೃತ್ಯಾದಿಗಳು ಪರಮಾತ್ಮನ ಅಧೀನವಾದ್ದರಿಂದ ಅವನ ಸಂಬಂಧದಿಂದ ಅಮುಖ್ಯವಾಗಿ ಪ್ರತಿಪಾದ್ಯವಾಗಿವೆ ಎಂದು ಹೇಳುವುದಾದರೆ, ಪ್ರಕೃತ್ಯಾದಿಗಳು ಪರಮಾತ್ಮನ ಮುಂದೆ ಬಹಳ ಅಲ್ಪವಾಗಿವೆ ಎಂದು ನಿರ್ಣಯವಾಗಬೇಕು. ಮತ್ತು ಪರಮಾತ್ಮನು ಸ್ವತಂತ್ರನಾಗಿದ್ದಾನೆಂದು ಪ್ರಕೃತ್ಯಾದಿಗಳಿಗೆ ನಿಯಾಮಕನಾಗಿದ್ದಾನೆಂಬುದೂ ಕೂಡ ನಿರ್ಣಯವಾಗಬೇಕು. ಈ ವಿಷಯವು ಯಾವ ಪ್ರಮಾಣದಿಂದ ನಿರ್ಣಯವಾಗುತ್ತದೆ ?

ಉತ್ತರ - ಪ್ರಮಾಣವಿದೆ. 'ತುಚ್ಛೇನಾಭ್ವಪಿಹಿತಂ ಯದಾಸೀತ್' ಎಂಬ ಋಗ್ವೇದ ವಾಕ್ಯವು ಇದನ್ನು ಪ್ರತಿಪಾದನೆ ಮಾಡುತ್ತಿದೆ. ಇದನ್ನೇ ಶ್ರೀಮದಾಚಾರ್ಯರು 'ತುಚ್ಛೇನ' ಎಂಬ ಭಾಷ್ಯದಿಂದ ಹೇಳಿರುತ್ತಾರೆ.

'ಯ ಆತ್ಮನಿ ತಿಷ್ಠನ್' ಇತ್ಯಾದಿ ಶ್ರುತಿಗಳೂ ವಿವಕ್ಷಿತ

तत्वप्रकाशिका – 'अल्पेनाव्यक्तेन विभु ब्रह्मा पिहितमासीत्' इत्यर्थः । 'य आत्मनि तिष्ठन्' इत्यादिश्रुत्यन्तरं चात्रोदाहर्तव्यम् ।

ಅಲ್ಪವಾದ ಅವ್ಯಕ್ತದಿಂದ 'ಆಭು', ವಿಭು = ವ್ಯಾಪ್ತನಾದ ಪರಮಾತ್ಮನು ಆಚ್ಛಾದಿತನಾಗಿದ್ದನೆಂದರ್ಥ. ಅಲ್ಪವಾದ, ಅಸ್ವಂತ್ರವಾದ ಅವ್ಯಕ್ತದಲ್ಲಿ ವ್ಯಾಪ್ತನಾದ ಪರಮಾತ್ಮನು

ಅಂತರ್ಯಾಮಿರೂಪದಿಂದ ಆಚ್ಛಾದಿತನಾಗಿದ್ದ ಎಂಬುದು ಇದರ ಅಭಿಪ್ರಾಯ. 'ಯ ಆತ್ಮನಿ ತಿಷ್ಠನ್' ಇತ್ಯಾದಿ ಬೇರೆ ಶ್ರುತಿಗಳನ್ನೂ ಕೂಡ ಇಲ್ಲಿ ಉದಾಹರಿಸಬೇಕು.

'ದರ್ಶಯತಿ ಚ' ಎಂಬ ಸೂತ್ರದಲ್ಲಿ ಉಲ್ಲೇಖಿಸಿದ ಆಧಾರ

तत्वप्रकाशिका – परमात्मनोऽव्यक्तादिशब्दवाच्यत्वे सिद्धे भवेत् प्राचीनचिन्ता । तदेव कुतः? इत्यतो 'दर्शयतिच' इति शब्दाभ्यां सूचिते श्रुतिस्मृती पठति – अव्यक्तमिति ।।

ಪ್ರಶ್ನೆ - ಪರಮಾತ್ಮನು ಅವ್ಯಕ್ತ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾದರೆ ಹಿಂದೆ ಹೇಳಿದ ಪರಮಾತ್ಮನ ಸಂಬಂಧದಿಂದ ಪ್ರಕೃತ್ಯಾದಿಗಳೂ ಕೂಡ ಅವ್ಯಕ್ತಾದಿ ಶಬ್ದಗಳಿಂದ ಪ್ರತಿಪಾದ್ಯವಾಗುತ್ತೆಂಬ ವಿಚಾರಗಳು ಸಿದ್ಧವಾಗುತ್ತಿದ್ದವು. ಆದರೆ ಪರಮಾತ್ಮನಿಗೆ ಅವ್ಯಕ್ತಶಬ್ದವಾಚ್ಯತ್ವವೇ ಹೇಗೆ ಕೂಡುತ್ತದೆ ?

ಉತ್ತರ - ಈ ಪ್ರಶ್ನೆಗೆ 'ದರ್ಶಯತಿ ಚ' ಎಂಬ ಸೂತ್ರದಲ್ಲಿರುವ ಶಬ್ದದಿಂದ ಸೂಚಿತವಾದ ಶ್ರುತಿ ಮತ್ತು ಸ್ಮೃತಿಗಳನ್ನು ಪಠಿಸುತ್ತಾ ಉತ್ತರಿಸುತ್ತಿದ್ದಾರೆ 'ಅವ್ಯಕ್ತಮ್' ಇತ್ಯಾದಿಯಾಗಿ.

'ಅವ್ಯಕ್ತಮಚಲಮ್' ಎಂಬ ಶ್ರುತಿಯ ವ್ಯಾಖ್ಯಾನ

तत्वप्रकाशिका – अचलम् = ईश्वरभावात् । शान्तं = निर्विकारम् । निष्क्रियम् = अक्लिष्टकारित्वादेः । आत्मानम्, आदानादेः । यस्याक्षरस्य ब्रह्मत्वमुक्तं, तस्यैवाव्यक्तत्वमुच्यत इत्यर्थः ।

'ಅವ್ಯಕ್ತಮಚಲಮ್' ಎಂಬ ಶ್ರುತಿಯಲ್ಲಿರುವ ಅಚಲಶಬ್ದಕ್ಕೆ ಈಶ್ವರಸ್ವರೂಪದಿಂದ ಎಂದೂ ಕೂಡ ಚಲನವಿಲ್ಲದವನು ಎಂದು ಅರ್ಥ. ಶಾಂತಂ = ನಿರ್ವಿಕಾರನು, ನಿಷ್ಕ್ರಿಯಮ್ = ಕ್ಲೇಶವಿಲ್ಲದೇ ಸಕಲ ಕಾರ್ಯಗಳನ್ನು ಮಾಡುವವನು. ಆತ್ಮಾನಂ = ಎಲ್ಲವನ್ನು ಸ್ವೀಕರಿಸುವವನು. ಯಾವ ಅಕ್ಷರನನ್ನು ಬ್ರಹ್ಮನೆಂದು ಹೇಳಲಾಗಿದೆಯೋ, ಅಂತಹವನೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ ಎಂದು ಇದರ ಅರ್ಥ.

ಜೀವಶಬ್ದದಿಂದಲೂ ಪರಮಾತ್ಮನೇ ಪ್ರತಿಪಾದ್ಯ

तत्वप्रकाशिका – 'अनेन जीवेनाऽऽत्मना' इत्यादिश्रुतिः 'जीवो विनयिता साक्षी' इत्यादिस्मृतिश्चोदाहर्तव्या ।। १ ।।

'ಅನೇನ ಜೀವೇನಾऽऽತ್ಮನಾ' ಇತ್ಯಾದಿ ಶ್ರುತಿ ಮತ್ತು 'ಜೀವೋ ವಿನಯಿತಾ ಸಾಕ್ಷೀ' ಇತ್ಯಾದಿ ಸ್ಮೃತಿಯು ಇಲ್ಲಿ ಪ್ರಮಾಣವಾಗಿದೆ. ಅವ್ಯಕ್ತಶಬ್ದದಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆನ್ನಲು ಹೇಗೆ ಶ್ರುತಿ-ಸ್ಮೃತಿಗಳು ಆಧಾರವಾಗಿವೆಯೋ, ಅದರಂತೆ ಜೀವಶಬ್ದದಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆಂಬ ವಿಷಯದಲ್ಲಿ ಶ್ರುತಿ-ಸ್ಮೃತಿಗಳು ಆಧಾರವಾಗಿವೆ ಎಂದು ತಿಳಿದುಕೊಳ್ಳಬೇಕು.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ
ಭಾವದೀಪ

ನಾಕನೆಯ ಪಾದದ ಪ್ರತಿಪಾದ್ಯ ಪ್ರಮೇಯ

भावदीपः – पूर्ववत्कृत्स्नपादार्था(र्थत्वा) प्रतीतेराह – एतदिति ।। अत्रैतत् समन्वये का सङ्गतिरित्यत आनन्दमनये प्रागुक्तं स्मारयति – अन्यत्रेति ।। भाष्ये शब्दपदं नामलिङ्गपरमित्युपेत्याऽऽह उभयविधेति ।। श्रुतिलिङ्गादिभिरित्यस्योपयोगं वक्तुमाह – नन्विति ।।

ಅನ್ಯತ್ರೈವಪ್ರಸಿದ್ಧವಾದ ಶಬ್ದಗಳನ್ನು ಸಮನ್ವಯ ಮಾಡಲು ನಾಲ್ಕನೆಯ ಪಾದವು ಹೊರಡುತ್ತಿದೆ. ಸಮಗ್ರ ಈ ಪಾದದಲ್ಲಿ ಪ್ರತಿಪಾದನೆ ಮಾಡುತ್ತಿರುವ ವಿಷಯವನ್ನು ತಿಳಿಸಲು ಟೀಕೆಯಲ್ಲಿ 'ಏತತ್-ಪಾದಪ್ರತಿಪಾದ್ಯಂ' ಎಂಬ ವಾಕ್ಯವು ಹೊರಟಿದೆ. ಅನ್ಯತ್ರೈವಪ್ರಸಿದ್ಧವಾದ ಶಬ್ದಗಳ ಸಮನ್ವಯವನ್ನು ಇಲ್ಲಿ ಮಾಡಲು ಯಾವ ಸಂಗತಿ ಇರುತ್ತದೆ ? ಎಂಬ ಪ್ರಶ್ನೆಗೆ ಹಿಂದೆ ಆನಂದಮಯಾಧಿಕರಣದಲ್ಲಿ ಹೇಳಿದ ವಿಷಯವನ್ನೇ ಪುನಃ ಸ್ಮರಣೆಗೆ ತಂದುಕೊಡುತ್ತಿದ್ದಾರೆ 'ಅನ್ಯತ್ರ' ಇತ್ಯಾದಿ ಟೀಕೆಯಿಂದ. ಭಾಷ್ಯದಲ್ಲಿ 'ಶಬ್ದಾನಾಮ್' ಎಂದು ಹೇಳಿದ್ದಾರೆ. ಇಲ್ಲಿರುವ 'ಶಬ್ದ' ಎಂಬ ಪದಕ್ಕೆ ನಾಮಾತ್ಮಕವಾದ ಹಾಗೂ

ಲಿಂಗಾತ್ಮಕವಾದ ಶಬ್ದಗಳು ಎಂದರ್ಥ. ಆದ್ದರಿಂದ ಟೀಕೆಯಲ್ಲಿ 'ಉಭಯವಿಧ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಇದರಿಂದ 'ಶಬ್ದಾನಾಮ್' ಎಂಬ ಭಾಷ್ಯದ ಪದಕ್ಕೆ 'ಉಭಯವಿಧಶಬ್ದಾನಾಮ್' ನಾಮಾತ್ಮಕವಾದ ಮತ್ತು ಲಿಂಗಾತ್ಮಕವಾದ ಶಬ್ದಗಳ ಎಂಬರ್ಥವನ್ನು ಹೇಳಿದಂತಾಯಿತು.

ಭಾಷ್ಯದಲ್ಲಿ 'ಶ್ರುತಿಲಿಂಗಾದಿಭಿಃ' ಎಂದು ಹೇಳಿದ್ದಾರೆ. ಶ್ರುತಿ ಹಾಗೂ ಲಿಂಗಗಳ ಆಧಾರವನ್ನು ಹೇಳಿದ್ದಕ್ಕೆ ಉಪಯೋಗವನ್ನು ತಿಳಿಸಲು 'ನನು' ಇತ್ಯಾದಿ ಟೀಕೆ ಹೊರಡುತ್ತಿದೆ.

ಇಲ್ಲಿ ಉಲ್ಲೇಖಿಸುವ ಶ್ರುತಿ-ಸ್ಮೃತಿಗಳು ಅತ್ಯಂತ ಪ್ರಬಲ

ಭಾವದೀಪಃ – ಪೂರ್ವಂ ಕಚಿದಿತಿ ।। ದ್ವಿತೀಯಪಾದ ಇತ್ಯರ್ಥಃ ।। ಪ್ರಾಬಲ್ಯಾದಿತಿ ।। श्रुतेरर्थान्तरपरत्वमपि विनाऽनुपपद्यमानत्वरूपात् प्रबल्यादित्यर्थः । तादृशश्रुत्यादिकं च प्रतिनयं दर्शयिष्याम इति भावः ।

'ಪೂರ್ವಂ ಕ್ವಚಿತ್' ಎಂದರೆ ಎರಡನೆಯ ಪಾದದಲ್ಲಿ ಎಂದರ್ಥ. 'ತಸ್ಯೈತಸ್ಯಾಸಾವಾದಿತ್ಯೋ ರಸಃ ಇತ್ಯಾದಿನಾ ಆದಿತ್ಯಸ್ಯ ಪ್ರತೀಯತೇ' ಎಂಬುದಾಗಿ ಎರಡನೆಯ ಪಾದದ ಸರ್ವಗತತ್ವಾಧಿಕರಣದಲ್ಲಿ ಶ್ರುತಿಯಿಂದಲೇ ಅನ್ಯತ್ರಪ್ರಸಿದ್ಧಿಯನ್ನು ತೋರಿಸಿದ್ದಾರೆ. ಆನಂದಮಯಾಧಿಕರಣದಲ್ಲಿಯೂ ಕೂಡ 'ಬ್ರಹ್ಮ ಶಬ್ದಾದ್ ಹಿರಣ್ಯಗರ್ಭಸ್ಯ ಪ್ರಾಪ್ತಿಃ' ಎಂದು ಶ್ರುತಿಯಿಂದಲೇ ಅನ್ಯತ್ರಪ್ರಸಿದ್ಧಿಯನ್ನು ತೋರಿಸಿದ್ದಾರೆ. 'ಪ್ರಾಬಲ್ಯಾತ್' ಎಂದರೆ ಈ ಪಾದದಲ್ಲಿ ಸಮನ್ವಯ ಮಾಡುತ್ತಿರುವ ಶ್ರುತಿಗಳು ಅನ್ಯತ್ರಪ್ರಸಿದ್ಧವೆಂದು ಒಪ್ಪದಿದ್ದರೆ ಅನುಪಪದ್ಯಮಾನವಾಗುತ್ತವೆ. ಹೀಗೆ ಅನ್ಯಥಾನುಪಪತ್ತಿ ಪ್ರಮಾಣದಿಂದ ಪ್ರಬಲವಾಗಿರುವುದರಿಂದ ಎಂದರ್ಥ. ಅಂತಹ ಪ್ರಬಲವಾದ ಶ್ರುತಿಗಳನ್ನು ಪ್ರತಿ ಅಧಿಕರಣದಲ್ಲಿಯೂ ಮುಂದೆ ತೋರಿಸುತ್ತೇವೆ.

ಹಿಂದಿನ ಮೂರು ಪಾದಗಳಲ್ಲಿ ಮಾಡಿದ ಸಮನ್ವಯ

ಭಾವದೀಪಃ – सामस्त्येनेत्येतद् व्याचष्टे – **पूर्वमिति ।।** त्रिपाद्यामित्यर्थः।। **स्रष्टृत्वेति ।।** जन्मादिसूत्रे कण्ठोक्तेरित्यर्थः ।। **तत्सङ्गतानां चेति ।।** आनन्दमयाकाशादिशब्दानामित्यर्थः ।।

ಭಾಷ್ಯದಲ್ಲಿ 'ಸಾಮಸ್ತ್ಯೇನ' ಎಂದು ಹೇಳಿದ್ದಾರೆ. ಅದನ್ನೇ ಟೀಕೆಯಲ್ಲಿ 'ಪೂರ್ವಮ್ ಸ್ಪಷ್ಟತ್ವಾದಿಗುಣಾಭಿಧಾಯಕನಾಮ್' ಎಂಬ ವಾಕ್ಯದಿಂದ ವ್ಯಾಖ್ಯಾನ ಮಾಡಿದ್ದಾರೆ. 'ಪೂರ್ವಮ್'

ಎಂದರೆ ಹಿಂದಿನ ಮೂರು ಪಾದಗಳಲ್ಲಿ ಎಂದರ್ಥ. 'ಸ್ಪಷ್ಟತ್ವ' ಎಂಬುದಕ್ಕೆ ಜನ್ಮಾದ್ಯಧಿಕರಣದಲ್ಲಿ ಕಂಠತಃ ಸ್ಪಷ್ಟತ್ವ ಎಂಬ ಲಿಂಗವನ್ನು ಸಮನ್ವಯ ಮಾಡಿದ್ದಾರೆ ಎಂದರ್ಥ. 'ತತ್‌ಸಂಗತಾನಾಂ ಚ' ಎಂದರೆ ಸ್ಪಷ್ಟತ್ವಕ್ಕೆ ಸಂಗತವಾದ 'ಆನಂದಮಯ' 'ಆಕಾಶ' ಮೊದಲಾದ ಶಬ್ದಗಳ ಸಮನ್ವಯವನ್ನು ಎಂದರ್ಥ.

ಈ ಪಾದದಲ್ಲಿ ಮಾಡುತ್ತಿರುವ ಸಮನ್ವಯ

भावदीपः – ततोऽपि प्रबलेति ।। विष्णुपरत्वं विनाऽनुपपद्यमानैस्तदधीनत्व-ज्ञेयत्वावचनादिभिरित्यर्थः । विशेषहेतुभिरित्येतत्प्रकारान्तरेण व्याचष्टे – यदुदितमिति ।। प्रागनुक्तेति ।। तदधीनत्वादिभिरित्यर्थः ।

'ತತೋऽಪಿ ಪ್ರಬಲ' ಎಂದರೆ ಶ್ರುತಿಗಳಿಗೆ ವಿಷ್ಣುಪರತ್ವವನ್ನು ಒಪ್ಪದಿದ್ದರೆ ಶ್ರುತಿಗಳೇ ಅನುಪಪದ್ಯಮಾನವಾಗುತ್ತವೆಂಬ ಲಿಂಗ ಹಾಗೂ 'ತದಧೀನತ್ವ' 'ಜ್ಞೇಯತ್ವಾವಚನ' ಮೊದಲಾದ ಲಿಂಗಗಳಿಂದ ಪ್ರಬಲವಾಗಿವೆ ಎಂದರ್ಥ. 'ವಿಶೇಷಹೇತುಭಿಃ' ಎಂಬುದನ್ನು ಮತ್ತೊಂದು ಪ್ರಕಾರದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ 'ಯದುದಿತಮ್' ಇತ್ಯಾದಿ ಟೀಕೆಯಿಂದ. 'ಪ್ರಾಗನುಕ್ತ' ಎಂಬ ಟೀಕಾ ವಾಕ್ಯಕ್ಕೆ 'ತದಧೀನತ್ವ' ಇತ್ಯಾದಿ ಲಿಂಗಗಳು ಹಿಂದೆ ಹೇಳಿರುವುದಿಲ್ಲ ಎಂದಭಿಪ್ರಾಯ.

'ಟೀಕೆಯಲ್ಲಿ ಸ್ಯಾದೇತತ್' ಎಂಬ ಆಕ್ಷೇಪಕ್ಕೆ ಕಾರಣ

भावदीपः – 'तदधीनत्वात्' इत्युक्तिः सूत्रकृताऽत्रोक्तैव भाष्यादौ पूर्वमुक्तेति भावः । 'तत्तु' इत्याद्यग्रेतनभाष्योपपत्तिं 'जन्माद्यस्येति सूत्रेण गुणसर्वस्वसिद्धये' इत्याद्यानन्दमयनयानुभाष्यदिशा वक्तुमाह – स्यादेतदिति।।

'ತದಧೀನತ್ವಾತ್' ಎಂಬ ನ್ಯಾಯವನ್ನು ಸೂತ್ರಕಾರರು ಇಲ್ಲಿ ಮಾತ್ರ ಹೇಳುತ್ತಿದ್ದಾರೆ. ಹಿಂದೆ ಭಾಷ್ಯಕಾರರು ಹೇಳಿದ್ದರೂ ಕೂಡ ಸೂತ್ರಕಾರರು ಹೇಳಿರಲಿಲ್ಲ. ಜನ್ಮಾಧಿಕರಣದಲ್ಲಿ ಹೇಳಲ್ಪಟ್ಟ ಜಗತ್ಕಾರಣತ್ವದ ಸಮನ್ವಯವಷ್ಟೇ ವಿವಕ್ಷಿತವಲ್ಲ. ತನ್ಮೂಲಕವಾಗಿ ಸಕಲಗುಣಗಳೂ ಕೂಡ ವಿವಕ್ಷಿತ. ಹೀಗೆ ಆನಂದಮಯಾಧಿಕರಣದ ಅನುವ್ಯಾಖ್ಯಾನದಲ್ಲಿ 'ಜನ್ಮಾದ್ಯಸ್ಯೇತಿ ಸೂತ್ರೇಣ ಗುಣಸರ್ವಸ್ವಸಿದ್ಧಯೇ' ಎಂದು ಹೇಳಿರುತ್ತಾರೆ. ಪ್ರಕೃತ 'ತತ್ತು ಸಮನ್ವಯಾತ್' ಇತ್ಯಾದಿಯಾಗಿರುವ ಮುಂದಿನ ಭಾಷ್ಯದ ಮಾತುಗಳಿಂದ ತಿಳಿಯುವ ಉಪಪತ್ತಿಯನ್ನು ಈ ಅನುವ್ಯಾಖ್ಯಾನದ ಪ್ರಕಾರವಾಗಿ ವ್ಯಾಖ್ಯಾನ ಮಾಡಲು 'ಸ್ಯಾದೇತತ್' ಇತ್ಯಾದಿಯಾಗಿ ಆಶಂಕಿಸುತ್ತಿದ್ದಾರೆ.

ಬ್ರಹ್ಮಶಬ್ದವು ಸಕಲಗುಣವಾಚಕ

भावदीपः – न हीति ।। सङ्कोचकाभावादिति भावः । अन्योपलक्षणत्वेनोक्तौ बीजमाह – तस्याखिलगुणेति ।। पूर्वत्रैव सङ्गति-भाष्यभ्रान्तिनिरासायाऽऽह – सूत्रमेवेति ।।

'नहि ब्रह्मशब्दः कतिपयगुणाभिधायकः' ಎಂಬ ಟೀಕೆಗೆ 'ಬ್ರಹ್ಮಶಬ್ದದಿಂದ ಕೆಲವು ಗುಣಗಳು ಮಾತ್ರ ವಿವಕ್ಷಿತವೆನ್ನಲು ಯಾವುದೇ ಆಧಾರವಿರುವುದಿಲ್ಲ' ಎಂದಭಿಪ್ರಾಯ. ಬೇರೆ ಗುಣಗಳನ್ನೂ ಕೂಡ ಉಪಲಕ್ಷಣಯಾ ವಿವಕ್ಷಿಸಬೇಕೆನ್ನಲು ಕಾರಣವನ್ನು 'ತಸ್ಯಾಖಿಲ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ಹಿಂದಿನಂತೆ ಇಲ್ಲಿಯೂ ಸಹ ಪೂರ್ವಪಕ್ಷ ಹಾಗೂ ಸಂಗತಿಗಳನ್ನು ಭಾಷ್ಯದಲ್ಲಿ ಮೊದಲು ಹೇಳಿದ್ದಾರೆಂಬ ಭ್ರಾಂತಿ ಬರುತ್ತದೆ. ಅದಕ್ಕೋಸ್ಕರ 'ಸೂತ್ರಮೇವ' ಎಂದು ಹೇಳಿದ್ದಾರೆ. ಅಂದರೆ ಸೂತ್ರವನ್ನು ಪಠಿಸಿ ಅನಂತರ ಸಂಗತಿ ಮತ್ತು ಪೂರ್ವಪಕ್ಷಗಳನ್ನು ಭಾಷ್ಯಕಾರರು ಹೇಳಿದ್ದಾರೆಂದು ತಿಳಿಯಬೇಕು.

ಅವರತ್ವದ ಜೊತೆ ದುಃಖಿತ್ವವೂ ವಿವಕ್ಷಿತ

भावदीपः – दुःखित्वादिरादिपदार्थः । तस्य प्राबल्यायोक्तं भगवति विरुद्धतयेति ।।

'ಅವರತ್ವಾದಿ' ಎಂಬಲ್ಲಿರುವ ಆದಿಪದಿಂದ ದುಃಖಿತ್ವಾದಿಗಳನ್ನು ವಿವಕ್ಷಿಸಬೇಕು. ಈ ದುಃಖಿತ್ವ, ಅವರತ್ವ ಮೊದಲಾದವುಗಳು ಪ್ರಬಲವಾಗಿದೆ ಎಂದು ತಿಳಿಸಲು 'ಭಗವತಿ ವಿರುದ್ಧತಯಾ' ಎಂದು ಹೇಳಿದ್ದಾರೆ.

ಸಮನ್ವಯ ಸೂತ್ರದಿಂದ ಈ ಪಾದಕ್ಕೆ ಸಂಗತಿ

भावदीपः – श्रुत्यादिति ।। समन्वयसूत्रे सर्वश्रुतिगतसर्वशब्दार्थत्वोक्त्या तदधिकरणेन तद्विषयभूतसर्वश्रुतिनिचयेन च सङ्गतिमित्यर्थः ।

ಸಮನ್ವಯಸೂತ್ರದಲ್ಲಿ ಸಕಲ ಶ್ರುತಿಗಳಲ್ಲಿರುವ ಶಬ್ದಗಳ ಸಮನ್ವಯ ಪ್ರತಿಜ್ಞೆಯನ್ನು ಮಾಡಿದ್ದಾರೆ. ಆದ್ದರಿಂದ ಆ ಸಮನ್ವಯಾಧಿಕರಣದಿಂದ ಮತ್ತು ಆ ಸಮನ್ವಯಸೂತ್ರಕ್ಕೆ ವಿಷಯಭೂತವಾದ ಸಕಲ ಶ್ರುತಿಗಳ ಸಮೂಹದಿಂದ ಈ ಅಧಿಕರಣವು ಸಂಗತವಾಗಿದೆ ಎಂದು ತಿಳಿಯಬೇಕು.

ಭಾಷ್ಯದಲ್ಲಿಯೇ ಸಂಗತಿ ಪ್ರದರ್ಶನ

ಭಾವದೀಪಃ – उच्यत इत्यन्तं भाष्यं सङ्गतिसूचकत्वेन तावद् व्याख्यातुम् उक्त इत्यन्तस्यार्थमाह – तत्त्वित्यादिना ।।

'एकेषाम् शाखिनाम् उच्यते' ಎಂಬಲ್ಲಿಯ ತನಕ ಭಾಷ್ಯವು ಸಂಗತಿಸೂಚಕವಾಗಿದೆ ಎಂದು ವ್ಯಾಖ್ಯಾನ ಮಾಡಲು 'समन्वयः उक्तः' ಎಂಬಲ್ಲಿಯ ತನಕ ಇರುವ ಭಾಷ್ಯದ ವಾಕ್ಯವನ್ನು 'ತತ್ತು' ಇತ್ಯಾದಿಯಾಗಿ ಟೀಕೆಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ.

ದೋಷವಾಚಕ ಸಕಲ ಶಬ್ದಗಳ ಸಮನ್ವಯ

ಭಾವದೀಪಃ – तन्नेत्यादेरर्थः सर्वेत्यादि ।। अव्यक्तादीति ।। दुःखिबद्धावरादि-दोषवाचिनः सर्वेऽपि शब्दा आदिपदार्थाः । उक्तं चानुभाष्ये – 'दुःखिबद्धावराद्यास्तु' इति।

'तन्न युज्यते' ಇತ್ಯಾದಿ ಭಾಷ್ಯದ ಅಭಿಪ್ರಾಯವನ್ನು 'सर्व' ಇತ್ಯಾದಿಯಾಗಿ ಟೀಕೆಯಲ್ಲಿ ಹೇಳಿದ್ದಾರೆ. 'अव्यक्तादि' ಎಂಬಲ್ಲಿ 'दुःखी', 'बद्धः', 'अवरः' ಮೊದಲಾದ ದೋಷವಾಚಕವಾದ ಸಕಲಶಬ್ದಗಳನ್ನು ಆದಿಪದದ ಅರ್ಥವೆಂದು ವಿವಕ್ಷಿಸಬೇಕು. ಇದನ್ನೇ ಅನುವ್ಯಾಖ್ಯಾನದಲ್ಲಿ 'दुःखि-बद्धावरादयास्तु' ಎಂದು ಹೇಳಿದ್ದಾರೆ.

ಬದ್ಧತ್ವ ದುಃಖಿತ್ವಾದಿಗಳನ್ನು ಹೇಳುವ ವಾಕ್ಯಗಳು

ಭಾವದೀಪಃ – पूर्वपक्षे युक्तिसूचनाय 'महतः परम्' इत्यंशोक्तिः । सूत्रभाष्ये उपलक्षणं मत्त्वाऽऽह – योनिमिति ।। अनेन बद्धत्वमुच्यते ।। जीवा इति ।। 'अदुःखमितरत् सर्वं जीवा एव तु दुःखिनः । तेषां दुःखप्रहाणाय श्रुतिरेषा प्रवर्तते' इति श्रुतौ किञ्चिदुच्यत इत्यर्थः । विष्णोरन्यत्वे वक्ष्यमाणदिशेति भावः । उक्त इत्यन्तवाक्यस्य भावोक्तिः ।। न तस्येति ।। इति सङ्गतिसम्भवादितीति शब्दो हेत्वर्थः ।

ಪೂರ್ವಪಕ್ಷದಲ್ಲಿ ಯುಕ್ತಿಯನ್ನು ಸೂಚನೆ ಮಾಡುವುದಕ್ಕಾಗಿ 'ಮಹತಃ ಪರಮ್' ಎಂಬ ಶ್ರುತಿಯ ಭಾಗವನ್ನು ಉಲ್ಲೇಖಿಸಿದ್ದಾರೆ. ಸೂತ್ರ ಹಾಗೂ ಭಾಷ್ಯಗಳಲ್ಲಿ ಜೀವಾದಿಗಳನ್ನು ಉಪಲಕ್ಷಣಯಾ ವಿವಕ್ಷಿಸಬೇಕೆಂದು ತಿಳಿಸಲು 'ಯೋನಿಮನ್ಯೇ' ಇತ್ಯಾದಿಯಾಗಿ ಹೇಳಿದ್ದಾರೆ. 'ಯೋನಿಮನ್ಯೇ ಪ್ರಪದ್ಯಂತೇ' ಎಂಬ ವಾಕ್ಯದಲ್ಲಿ ಬದ್ಧತ್ವ ದೋಷವನ್ನು ಹೇಳಲಾಗಿದೆ. 'ಅದುಃಖಮಿತರತ್ಸರ್ವಂ ಜೀವಾ ಏವ ತು ದುಃಖಿನಃ । ತೇಷಾಂ ದುಃಖಪ್ರಹಾಣಾಯ ಶ್ರುತಿರೇಷಾ ಪ್ರವರ್ತತೇ' ಎಂಬ ಶ್ರುತಿಯಲ್ಲಿ ಜೀವನು ದುಃಖಿಯಾಗಿದ್ದಾನೆಂದು ಹೇಳಲಾಗಿದೆ. ಈ ಶ್ರುತಿ-ಸ್ಮೃತಿಗಳಲ್ಲಿರುವ ಅವ್ಯಕ್ತ, ಜೀವ ಮೊದಲಾದ ಶಬ್ದಗಳು ವಿಷ್ಣುವಾಗದಿದ್ದರೆ ಏನೆಂಬುದನ್ನು ಮುಂದೆ ಪೂರ್ವಪಕ್ಷದಲ್ಲಿ ಹೇಳುವಂತೆ ತಿಳಿಯಬೇಕು. 'ಉಕ್ತಃ' ಎಂಬಲ್ಲಿಯ ತನಕ ಇರುವ ಭಾಷ್ಯದ ಅಭಿಪ್ರಾಯವನ್ನು 'ನ ತಸ್ಯ' ಎಂಬ ಟೀಕೆಯಿಂದ ಸ್ಪಷ್ಟಪಡಿಸಿದ್ದಾರೆ. 'ಇತಿ ಸಂಗತಿಸಂಭವಾತ್' ಎಂಬಲ್ಲಿರುವ 'ಇತಿ' ಶಬ್ದವು ಹೇತ್ವರ್ಥದಲ್ಲಿದೆ.

ಭಾಷ್ಯದಲ್ಲಿ ಪೂರ್ವಪಕ್ಷ ಪ್ರದರ್ಶನ

भावदीपः – एवमव्यक्तादिशब्दाः सर्वेऽन्यत्र प्रसिद्धा अपीति वक्ष्यमाणभाष्यानुरोधेन विषयादिकमाह – तदव्यक्तेति ।। तन्नेत्यादिभाष्यं पूर्वपक्षादिपरत्वेनापि व्याख्यातुं प्रधानमप्युच्यत इति प्रतिज्ञामुपलक्षणत्वेन व्याचष्टे – प्रधानाद्येवेति ।।

एतेनापिरेवार्थ इति दर्शितम् । तत्र हेत्वाकाङ्क्षायां वक्ष्यमाणभाष्यसूचितां युक्तिमाह – अव्यक्तेति ।।

'ಏವಮವ್ಯಕ್ತಾದಿಶಬ್ದಾಃ ಸರ್ವೇಽನ್ಯತ್ರ ಪ್ರಸಿದ್ಧಾ ಅಪಿ' ಎಂಬ ಮುಂದಿನ ಭಾಷ್ಯಕ್ಕೆ ಅನುಸಾರಿಯಾಗಿ ವಿಷಯಾದಿಗಳನ್ನು ಟೀಕೆಯಲ್ಲಿ 'ತದವ್ಯಕ್ತ' ಇತ್ಯಾದಿಯಾಗಿ ಪ್ರತಿಪಾದನೆ ಮಾಡುತ್ತಿದ್ದಾರೆ. 'ತನ್ನ' ಇತ್ಯಾದಿಯಾದ ಭಾಷ್ಯವು ಕೇವಲ ಸಂಗತಿಪರವಷ್ಟೇ ಅಲ್ಲ, ಪೂರ್ವಪಕ್ಷಪರವೂ ಆಗಿದೆ ಎಂದು ವ್ಯಾಖ್ಯಾನ ಮಾಡಲು 'ಪ್ರಧಾನಮಪಿ ಉಚ್ಯತೇ' ಎಂಬ ಪ್ರತಿಜ್ಞೆಯು ಕೇವಲ ಉಪಲಕ್ಷಣವೆಂದು ವ್ಯಾಖ್ಯಾನ ಮಾಡುತ್ತಿದ್ದಾರೆ 'ಪ್ರಧಾನಾದ್ಯೇವ' ಇತ್ಯಾದಿಯಾಗಿ.

'ಪ್ರಧಾನಾದ್ಯೇವ' ಎಂದು ಹೇಳಿದ್ದರಿಂದ ಭಾಷ್ಯದಲ್ಲಿರುವ 'ಅಪಿ'ಶಬ್ದವು ಏವಕಾರಾರ್ಥದಲ್ಲಿದೆ ಎಂದು ತೋರಿಸಿದ್ದಾರೆ. ಈ ವಿಷಯದಲ್ಲಿ ಹೇತುವಿನ ಆಕಾಂಕ್ಷೆಯು ಪ್ರಾಪ್ತವಾದರೆ ಮುಂದಿನ ಭಾಷ್ಯದಿಂದ ಸೂಚಿತವಾದ ಯುಕ್ತಿಯನ್ನೇ 'ಅವ್ಯಕ್ತ' ಇತ್ಯಾದಿಯಾಗಿ ಹೇಳಿದ್ದಾರೆ.

ಅವ್ಯಕ್ತಾದಿಶಬ್ದಗಳು ಹರಿಪರ ಎನ್ನಬಹುದೇ ?

भावदीपः – अव्यक्तादिशब्दानां परमात्मविषयत्वाङ्गीकारे सर्वमानविरोध इति न्यायविवरणमत्र योजयितुं शङ्कामाह – न चेति ।। नामपादीयन्यायेनेति भावः ।

ಅವ್ಯಕ್ತ ಮೊದಲಾದ ಶಬ್ದಗಳು ಪರಮಾತ್ಮವಿಷಯಕವೆಂದು ಅಂಗೀಕಾರ ಮಾಡಿದರೆ, ಸಕಲಪ್ರಮಾಣಗಳ ವಿರೋಧ ಬರುತ್ತದೆ ಎಂಬುದಾಗಿ 'सर्वमानविरोधः' ಎಂಬುದು ನ್ಯಾಯವಿವರಣದಲ್ಲಿ ಹೇಳಿದ್ದಾರೆ. ಅದನ್ನು ಇಲ್ಲಿ ಯೋಜನೆ ಮಾಡುತ್ತಾ ಶಂಕೆಯನ್ನು 'ನಚ' ಇತ್ಯಾದಿ ಟೀಕೆಯಲ್ಲಿ ಹೇಳಿದ್ದಾರೆ. ನಾಮಪಾದದ ನ್ಯಾಯದಂತೆ ಈ ಶಂಕೆಯನ್ನು ತಿಳಿಯಬೇಕು.

ಅದೃಶ್ಯತ್ವಾಧಿಕರಣದಂತೆ ಇಲ್ಲಿ ಹೇಳಲಾಗದು

भावदीपः – 'महतः परं ध्रुवम्' इत्याद्यग्रेतनभाष्यलब्धां युक्तिमाह – तथाऽव्यक्तस्येति ।। महान्तं महत्तत्त्वम् । इत्येकादशगीताभाष्योक्त-स्मृतेरित्यर्थः ।। विष्णोरिति ।। अदृश्यत्वनये तथा निर्णयादिति भावः ।

'ಮಹತಃ ಪರಂ ಧ್ರುವಮ್' ಇತ್ಯಾದಿಯಾದ ಮುಂದಿನ ಭಾಷ್ಯದಿಂದ ಲಬ್ಧವಾದ ಯುಕ್ತಿಯನ್ನು 'ತಥಾऽವ್ಯಕ್ತಸ್ಯ' ಇತ್ಯಾದಿಯಾಗಿ ಹೇಳಿದ್ದಾರೆ. 'ಮಹಾಂತಂ' ಎಂದರೆ 'ಮಹತ್ತತ್ತ್ವ' ಎಂದರ್ಥ. 'ಮಹಾಂತಂ ವಿಭುಮಾತ್ಮಾನಂ' ಎಂಬುದು ಹನ್ನೊಂದನೆಯ ಅಧ್ಯಾಯದ ಗೀತಾಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿವಾಕ್ಯವಾಗಿದೆ. 'ವಿಷ್ಣೋಃ' ಎಂದರೆ ಅದೃಶ್ಯತ್ವಾಧಿಕರಣದಲ್ಲಿ ನಿರ್ಣಯಿಸಿದಂತೆ ವಿಷ್ಣುವಿಗೆ ಅವ್ಯಕ್ತಶಬ್ದ ಪ್ರತಿಪಾದ್ಯತ್ವವನ್ನು ಇಲ್ಲಿ ನಿರ್ಣಯಿಸಲಾಗದು ಎಂದಭಿಪ್ರಾಯ.

ಜೀವಶಬ್ದವು ವಿಷ್ಣುಪರವೆಂದರೆ ವಿರೋಧ

भावदीपः – न्यायविवरणस्थादिपदार्थं व्यञ्जयन् तत्रापि मानविरोधयुक्तिमाह – जीवानामिति ।। तच्चेति ।। दुःखित्वादिकं निरनिष्टो निरवद्य इत्यादिप्रमाणविरुद्धमित्यर्थः।

ನ್ಯಾಯವಿವರಣದಲ್ಲಿರುವ ಆದಿಪದದ ಅರ್ಥವನ್ನು ಸ್ಪಷ್ಟಪಡಿಸುತ್ತಾ 'ಮಾನವಿರೋಧ' ಎಂಬ ಯುಕ್ತಿಯನ್ನು ಜೀವನ ವಿಷಯದಲ್ಲಿಯೂ ಕೂಡ ವಿವಕ್ಷಿಸುತ್ತಿದ್ದಾರೆ 'ಜೀವಾನಾಮ್' ಇತ್ಯಾದಿ

ಟೀಕೆಯಿಂದ. 'ತಚ್ಚ' ಎಂದರೆ ದುಃಖಿತ್ವಾದಿಗಳು 'ನಿರನಿಷ್ಟೋ ನಿರವದ್ಯಃ' ಇತ್ಯಾದಿ ಪ್ರಮಾಣಗಳಿಂದ ವಿಷ್ಣುವಿನಲ್ಲಿ ವಿರುದ್ಧವಾಗಿವೆ ಎಂದಭಿಪ್ರಾಯ. ಹೀಗೆ ಪ್ರಮಾಣವಿರೋಧವಿರುವುದರಿಂದ ವಿಷ್ಣು ಜೀವಶಬ್ದದಿಂದಲೂ ಪ್ರತಿಪಾದ್ಯನಾಗಲಾರನು.

ಭಾಷ್ಯದಲ್ಲಿರುವ 'ತತ್' ಪದವು ಪಂಚಮ್ಯಂತ

भावदीपः – ननु भाष्ये प्रधानमप्युच्यत इति प्रतिज्ञामात्रं श्रूयते न तूक्तहेतुवाचि किमपीत्यतः तन्नेत्यत्र तच्छब्दः पञ्चम्यन्ततया इहाप्युक्त-सर्वहेतुपरामर्शितयाऽन्वेतीति भावेनाऽऽह – **तस्मादिति** ।।

ಭಾಷ್ಯದಲ್ಲಿ 'ಪ್ರಧಾನಮಪ್ಯುಚ್ಯತೇ' ಎಂಬ ಪ್ರತಿಜ್ಞೆಯಷ್ಟೇ ಕೇಳಿಸುತ್ತಿದೆ ಹೊರತು, ಹಿಂದೆ ಹೇಳಿದ ಹೇತುವನ್ನು ಸೂಚಿಸುವಂತಹ ಯಾವುದೇ ಪದಗಳು ಕೇಳಿಸುತ್ತಿಲ್ಲವಲ್ಲ ? ಎಂಬ ಪ್ರಶ್ನೆಗೆ 'ತನ್ನ' ಎಂಬಲ್ಲಿರುವ 'ತತ್' ಶಬ್ದವನ್ನು ಪಂಚಮ್ಯಂತವಾಗಿ ವಿವಕ್ಷಿಸಬೇಕು. ಆಮಾಗ ಹಿಂದೆ ಹೇಳಿದ ಸಕಲ ಹೇತುಗಳನ್ನು ಇಲ್ಲಿ ಪರಾಮರ್ಶಿಸಿದಂತಾಗುತ್ತದೆ. ಹೀಗೆ ಭಾಷ್ಯವನ್ನು ವ್ಯಾಖ್ಯಾನ ಮಾಡುವುದಕ್ಕಾಗಿ 'ತಸ್ಮಾತ್' ಇತ್ಯಾದಿ ಟೀಕಾ ವಾಕ್ಯವು ಹೊರಟಿದೆ.

ಅವ್ಯಕ್ತಶಬ್ದವು ವಿಷ್ಣುಪರವೆಂದರ ಪ್ರಮಾಣ ವಿರೋಧ

भावदीपः – अव्यक्तादिशब्दानां प्रधानादौ प्रसिद्धात्वात् अवरत्वादीनां श्रुतानामपि तत्परत्वे प्रमाणाविरोधाच्चेत्यर्थः ।

'ಅವ್ಯಕ್ತ' ಮೊದಲಾದ ಶಬ್ದಗಳು ಪ್ರಕೃತ್ಯಾದಿಗಳಲ್ಲೇ ಪ್ರಸಿದ್ಧವಾದ್ದರಿಂದ, ಶ್ರುತಿಯಲ್ಲಿರುವ ಅವರತ್ವಾದಿಗಳು ವಿಷ್ಣುಪರವೆಂದು ಹೇಳಿದರೆ ಪ್ರಮಾಣವಿರೋಧವು ಬರುವುದರಿಂದ ಎಂಬುದಾಗಿ 'ತಸ್ಮಾತ್' ಎಂಬ ಪದದ ಅರ್ಥವನ್ನು ತಿಳಿಯಬೇಕು.

ಸಮಗ್ರ ಭಾಷ್ಯದ ವ್ಯಾಖ್ಯಾನ

भावदीपः – एवं सानुषङ्गप्रतिज्ञांशं व्याख्याय समग्रभाष्यं यत इत्याद्युक्त्या अतो यदित्यध्याहृत्य योजयति – **यत एवमिति** ।।

उपक्रमादिलिङ्गकशक्तितात्पर्यावधारणरूपसमन्वयस्य तत्रोक्तेराह – परमेश्वरेति।। भाष्ये तन्नेति समन्वेयशब्दाभिमतस्य परमेश्वरवाचित्वपरामर्श इति भावः ।।

ಹೀಗೆ ಅನುಷಂಗವನ್ನು ಮಾಡಿಕೊಂಡು ಪ್ರತಿಜ್ಞಾಭಾಗವನ್ನು ವ್ಯಾಖ್ಯಾನ ಮಾಡಿದರು. ಮುಂದೆ ಸಮಗ್ರಭಾಷ್ಯವನ್ನು 'ಯತಃ' ಇತ್ಯಾದಿಯಾಗಿ ಹೇಳುತ್ತಾ 'ಅತಃ ಯತ್' ಎಂಬುದನ್ನು ಅಧ್ಯಾಹಾರ ಮಾಡಿಕೊಂಡು ಯೋಜನೆ ಮಾಡುತ್ತಿದ್ದಾರೆ 'ಯತ ಏವಮ್' ಇತ್ಯಾದಿ ಟೀಕೆಯಿಂದ.

ಉಪಕ್ರಮಾದಿಲಿಂಗಗಳಿಂದ ಕೂಡಿರುವ ಶಕ್ತಿತಾತ್ಪರ್ಯಾವಧಾರಣೆ ಎಂಬ ಸಮನ್ವಯವನ್ನು ಸಮನ್ವಯಸೂತ್ರದಲ್ಲಿ ಪ್ರತಿಜ್ಞೆ ಮಾಡಿದ್ದರಿಂದ 'ಪರಮೇಶ್ವರಾಭಿಧಾಯಕತ್ವಮ್' ಎಂದು ಹೇಳಿದ್ದಾರೆ. ಭಾಷ್ಯದಲ್ಲಿ 'ತನ್ನ' ಎಂಬುದರಿಂದ ಸಮನ್ವಯ ಮಾಡಲು ಯೋಗ್ಯವಾದ ಶಬ್ದಗಳು ಪರಮಾತ್ಮ-ವಾಚಿಯಾಗಿವೆಯೆಂದು ಪರಾಮರ್ಶೆ ಮಾಡಿದ್ದಾರೆ.

ಹೇತ್ವಸಿದ್ಧಿಯ ಪರಿಹಾರಕ್ಕಾಗಿ 'ಪರಮಾತ್ಮನಃ ಏವ' ಇತ್ಯಾದಿ ಟೀಕಾವಾಕ್ಯ

भावदीपः – परमात्मन एवाव्यक्तशब्देन गृहीतेरित्येतत् नेत्यत्र हेत्वाकाङ्क्षापूरकं मत्वा हेतोरसिद्धिनिरासायाऽनुवादलब्धविधेयमाह – परमात्मैवेति ।।

ಪ್ರಕೃತ್ಯಾದಿಗಳೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೆಂಬುದು ಯುಕ್ತವಾಗುವುದಿಲ್ಲ. ಇದನ್ನು ಸೂತ್ರ ಹಾಗೂ ಭಾಷ್ಯಗಳಲ್ಲಿ 'ನ' ಎಂಬುದರಿಂದ ಹೇಳಿದ್ದಾರೆ. ಇದಕ್ಕೆ ಕಾರಣವನ್ನು 'ಶರೀರರೂಪಕವಿನ್ಯಸ್ತಗೃಹೀತೇಃ' ಎಂಬ ಸೂತ್ರದಲ್ಲಿ ಹೇಳಿದ್ದಾರೆ. ಭಾಷ್ಯದಲ್ಲಿಯೂ ಕೂಡ ಪರಮಾತ್ಮನೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಹೇಳಿರುತ್ತಾರೆ. ಆದ್ದರಿಂದ ಪೂರ್ವಪಕ್ಷನಿರಾಸಕವಾದ 'ನ' ಎಂಬ ಪದಕ್ಕೆ ಹೇತುವಿನ ಆಕಾಂಕ್ಷೆಗೆ ಪೂರಕವಾಗಿ ಪರಮಾತ್ಮನೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂಬುದನ್ನು ತಿಳಿಯಬೇಕು. ಈ ಹೇತು ಅಸಿದ್ಧವಾಗಿದೆಯಲ್ಲವೇ? ಎಂಬ ಆಶಂಕೆಯ ಪರಿಹಾರಕ್ಕೋಸ್ಕರ 'ಪರಮಾತ್ಮನಃ' ಎಂಬ ಪದದ ಉಲ್ಲೇಖದಿಂದ ತಿಳಿಯಲ್ಪಡುವ ವಿಧೇಯವನ್ನು 'ಪರಮಾತ್ಮೈವ' ಎಂಬ ಟೀಕೆಯಿಂದ ಹೇಳಿದ್ದಾರೆ.

ಟೀಕೆಯಿಂದ. 'ತಚ್ಚ' ಎಂದರೆ ದುಃಖಿತ್ವಾದಿಗಳು 'ನಿರನಿಷ್ಟೋ ನಿರವದ್ಯಃ' ಇತ್ಯಾದಿ ಪ್ರಮಾಣಗಳಿಂದ ವಿಷ್ಣುವಿನಲ್ಲಿ ವಿರುದ್ಧವಾಗಿವೆ ಎಂದಭಿಪ್ರಾಯ. ಹೀಗೆ ಪ್ರಮಾಣವಿರೋಧವಿರುವುದರಿಂದ ವಿಷ್ಣು ಜೀವಶಬ್ದದಿಂದಲೂ ಪ್ರತಿಪಾದ್ಯನಾಗಲಾರನು.

ಭಾಷ್ಯದಲ್ಲಿರುವ 'ತತ್' ಪದವು ಪಂಚಮ್ಯಂತ

भावदीपः – ननु भाष्ये प्रधानमप्युच्यत इति प्रतिज्ञामात्रं श्रूयते न तूक्तहेतुवाचि किमपीत्यतः तन्नेत्यत्र तच्छब्दः पञ्चम्यन्ततया इहाप्युक्त-सर्वहेतुपरामर्शितयाऽन्वेतीति भावेनाऽऽह – **तस्मादिति** ।।

ಭಾಷ್ಯದಲ್ಲಿ 'प्रधानमप्युच्यते' ಎಂಬ ಪ್ರತಿಜ್ಞೆಯಷ್ಟೇ ಕೇಳಿಸುತ್ತಿದೆ ಹೊರತು, ಹಿಂದೆ ಹೇಳಿದ ಹೇತುವನ್ನು ಸೂಚಿಸುವಂತಹ ಯಾವುದೇ ಪದಗಳು ಕೇಳಿಸುತ್ತಿಲ್ಲವಲ್ಲ ? ಎಂಬ ಪ್ರಶ್ನೆಗೆ 'ತನ್ನ' ಎಂಬಲ್ಲಿರುವ 'ತತ್' ಶಬ್ದವನ್ನು ಪಂಚಮ್ಯಂತವಾಗಿ ವಿವಕ್ಷಿಸಬೇಕು. ಆವಾಗ ಹಿಂದೆ ಹೇಳಿದ ಸಕಲ ಹೇತುಗಳನ್ನು ಇಲ್ಲಿ ಪರಾಮರ್ಶಿಸಿದಂತಾಗುತ್ತದೆ. ಹೀಗೆ ಭಾಷ್ಯವನ್ನು ವ್ಯಾಖ್ಯಾನ ಮಾಡುವುದಕ್ಕಾಗಿ 'तस्मात्' ಇತ್ಯಾದಿ ಟೀಕಾ ವಾಕ್ಯವು ಹೊರಟಿದೆ.

ಅವ್ಯಕ್ತಶಬ್ದವು ವಿಷ್ಣುಪರವೆಂದರ ಪ್ರಮಾಣ ವಿರೋಧ

भावदीपः – अव्यक्तादिशब्दानां प्रधानादौ प्रसिद्धात्वात् अवरत्वादीनां श्रुतानामपि तत्परत्वे प्रमाणाविरोधाच्चेत्यर्थः ।

'ಅವ್ಯಕ್ತ' ಮೊದಲಾದ ಶಬ್ದಗಳು ಪ್ರಕೃತ್ಯಾದಿಗಳಲ್ಲೇ ಪ್ರಸಿದ್ಧವಾದ್ದರಿಂದ, ಶ್ರುತಿಯಲ್ಲಿರುವ ಅವರತ್ವಾದಿಗಳು ವಿಷ್ಣುಪರವೆಂದು ಹೇಳಿದರೆ ಪ್ರಮಾಣವಿರೋಧವು ಬರುವುದರಿಂದ ಎಂಬುದಾಗಿ 'तस्मात्' ಎಂಬ ಪದದ ಅರ್ಥವನ್ನು ತಿಳಿಯಬೇಕು.

ಸಮಗ್ರ ಭಾಷ್ಯದ ವ್ಯಾಖ್ಯಾನ

भावदीपः – एवं सानुषङ्गप्रतिज्ञांशं व्याख्याय समग्रभाष्यं यत इत्याद्युक्त्या अतो यदित्यध्याहृत्य योजयति – **यत एवमिति** ।।

उपक्रमादिलिङ्गकशक्तितात्पर्यावधारणरूपसमन्वयस्य तत्रोक्तेराह – परमेश्वरेति।। भाष्ये तन्नेति समन्वेयशब्दाभिमतस्य परमेश्वरवाचित्वपरामर्श इति भावः ।।

ಹೀಗೆ ಅನುಷಂಗವನ್ನು ಮಾಡಿಕೊಂಡು ಪ್ರತಿಜ್ಞಾಭಾಗವನ್ನು ವ್ಯಾಖ್ಯಾನ ಮಾಡಿದರು. ಮುಂದೆ ಸಮಗ್ರಭಾಷ್ಯವನ್ನು 'ಯತಃ' ಇತ್ಯಾದಿಯಾಗಿ ಹೇಳುತ್ತಾ 'ಅತಃ ಯತ್' ಎಂಬುದನ್ನು ಅಧ್ಯಾಹಾರ ಮಾಡಿಕೊಂಡು ಯೋಜನೆ ಮಾಡುತ್ತಿದ್ದಾರೆ 'ಯತ ಏವಮ್' ಇತ್ಯಾದಿ ಟೀಕೆಯಿಂದ.

ಉಪಕ್ರಮಾದಿಲಿಂಗಗಳಿಂದ ಕೂಡಿರುವ ಶಕ್ತಿತಾತ್ಪರ್ಯಾವಧಾರಣೆ ಎಂಬ ಸಮನ್ವಯವನ್ನು ಸಮನ್ವಯಸೂತ್ರದಲ್ಲಿ ಪ್ರತಿಜ್ಞೆ ಮಾಡಿದ್ದರಿಂದ 'ಪರಮೇಶ್ವರಾಭಿಧಾಯಕತ್ವಮ್' ಎಂದು ಹೇಳಿದ್ದಾರೆ. ಭಾಷ್ಯದಲ್ಲಿ 'ತನ್ನ' ಎಂಬುದರಿಂದ ಸಮನ್ವಯ ಮಾಡಲು ಯೋಗ್ಯವಾದ ಶಬ್ದಗಳು ಪರಮಾತ್ಮ-ವಾಚಿಯಾಗಿವೆಯೆಂದು ಪರಾಮರ್ಶೆ ಮಾಡಿದ್ದಾರೆ.

ಹೇತ್ವಸಿದ್ಧಿಯ ಪರಿಹಾರಕ್ಕಾಗಿ 'ಪರಮಾತ್ಮನಃ ಏವ' ಇತ್ಯಾದಿ ಟೀಕಾವಾಕ್ಯ

भावदीपः – परमात्मन एवाव्यक्तशब्देन गृहीतेरित्येतत् नेत्यत्र हेत्वाकाङ्क्षापूरकं मत्वा हेतोरसिद्धिनिरासायाऽनुवादलब्धविधेयमाह – परमात्मैवेति ।।

ಪ್ರಕೃತ್ಯಾದಿಗಳೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೆಂಬುದು ಯುಕ್ತವಾಗುವುದಿಲ್ಲ. ಇದನ್ನು ಸೂತ್ರ ಹಾಗೂ ಭಾಷ್ಯಗಳಲ್ಲಿ 'ನ' ಎಂಬುದರಿಂದ ಹೇಳಿದ್ದಾರೆ. ಇದಕ್ಕೆ ಕಾರಣವನ್ನು 'ಶರೀರರೂಪಕವಿನ್ಯಸ್ತಗೃಹೀತೇಃ' ಎಂಬ ಸೂತ್ರದಲ್ಲಿ ಹೇಳಿದ್ದಾರೆ. ಭಾಷ್ಯದಲ್ಲಿಯೂ ಕೂಡ ಪರಮಾತ್ಮನೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ಹೇಳಿರುತ್ತಾರೆ. ಆದ್ದರಿಂದ ಪೂರ್ವಪಕ್ಷನಿರಾಸಕವಾದ 'ನ' ಎಂಬ ಪದಕ್ಕೆ ಹೇತುವಿನ ಆಕಾಂಕ್ಷೆಗೆ ಪೂರಕವಾಗಿ ಪರಮಾತ್ಮನೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂಬುದನ್ನು ತಿಳಿಯಬೇಕು. ಈ ಹೇತು ಅಸಿದ್ಧವಾಗಿದೆಯಲ್ಲವೇ? ಎಂಬ ಆಶಂಕೆಯ ಪರಿಹಾರಕ್ಕೋಸ್ಕರ 'ಪರಮಾತ್ಮನಃ' ಎಂಬ ಪದದ ಉಲ್ಲೇಖದಿಂದ ತಿಳಿಯಲ್ಪಡುವ ವಿಧೇಯವನ್ನು 'ಪರಮಾತ್ಮೈವ' ಎಂಬ ಟೀಕೆಯಿಂದ ಹೇಳಿದ್ದಾರೆ.

'ಅತಃ' ಎಂಬ ಪದದ ವ್ಯಾಖ್ಯಾನ

ಭಾವದೀಪಃ – अत इत्यस्यैवार्थः परमात्मन एवेत्यादि । नेत्यत्र प्रतियोग्यपेक्षायां तन्न युज्यत इत्येतदन्वेतीत्याशयेनाऽऽह – यत्सर्वेति ।।

'ಅತಃ' ಎಂಬ ಪದದ ಅರ್ಥವನ್ನೇ 'ಪರಮಾತ್ಮನ ಏವ' ಎಂಬುದರಿಂದ ಹೇಳಿದ್ದಾರೆ. 'ನ' ಎಂಬಲ್ಲಿ ಪ್ರತಿಯೋಗಿಯ ಅಪೇಕ್ಷೆಯು ಬಂದರೆ 'ತನ್ನ ಯುಜ್ಯತೇ' ಎಂಬುದರ ಜೊತೆಗೆ ಅನ್ವಯವನ್ನು ತಿಳಿಯಬೇಕೆಂದು 'ಯತ್‌ಸರ್ವ' ಎಂಬ ವಾಕ್ಯದಿಂದ ಹೇಳಿದ್ದಾರೆ.

'ಇತಿ ವ್ಯಾಖ್ಯಾತಮ್' ಎಂದು ಹೇಳದಿದ್ದಲ್ಲಿ

ಭಾವದೀಪಃ – सूत्रेऽदर्शनादाह – स्वपदमिति ।। तस्यार्थो यस्मिन्नित्यादि। अपौनरुक्त्यायाऽऽह इति व्याख्यातमिति ।।

ಸೂತ್ರದಲ್ಲಿ 'ಪರಮಾತ್ಮನಃ' ಎಂಬ ಪದವು ಇಲ್ಲದ ಕಾರಣ 'ಸ್ವಪದಮ್' ಎಂದು ವ್ಯಾಖ್ಯಾನ ಮಾಡಿದ್ದಾರೆ. ಅದರ ಅರ್ಥವನ್ನೇ 'ಯಸ್ಮಿನ್' ಇತ್ಯಾದಿ ವಾಕ್ಯದಿಂದ ನಿರೂಪಣೆ ಮಾಡಿದ್ದಾರೆ. ಪುನರುಕ್ತಿ ಬರಬಾರದೆಂದು 'ಇತಿ ವ್ಯಾಖ್ಯಾತಮ್' ಎಂದು ಹೇಳಿದ್ದಾರೆ. ಇಲ್ಲದಿದ್ದರೆ ಮುಂದಿನ ವಾಕ್ಯದಲ್ಲಿ 'ಪರಮಾತ್ಮನಃ ಏವ' ಎಂದಿರುವುದರಿಂದ ಎರಡು ಬಾರಿ ಹೇಳಿದಂತಾಗಿ ಶಾಬ್ದಬೋಧವೇ ಬರುತ್ತಿರಲಿಲ್ಲ.

ಸೂತ್ರಾಂಶಕ್ಕೆ ಪೀಠಿಕೆ

ಭಾವದೀಪಃ – परमात्मन एवेत्यादिभाष्ये तात्पर्योक्त्यनुरोधेन सूत्रांशमवतारयति – परमात्मन एवेति ।।

'ಪರಮಾತ್ಮನ ಏವ' ಇತ್ಯಾದಿ ಭಾಷ್ಯದ ತಾತ್ಪರ್ಯಕ್ಕೆ ಅನುಗುಣವಾಗಿ ಸೂತ್ರಾಂಶಕ್ಕೆ ಅವತಾರಿಕೆಯನ್ನು 'ಪರಮಾತ್ಮನ ಏವ' ಇತ್ಯಾದಿಯಾಗಿ ನೀಡಿದ್ದಾರೆ.

'ಸಾಕ್ಷಾದಪ್ಯವಿರೋಧಂ' ಇತ್ಯಾದಿ ಸೂತ್ರಕ್ಕೆ ವಿರೋಧವಿಲ್ಲ

ಭಾವದೀಪಃ – साक्षादप्यविरोधं जैमिनिरित्यनेन गतार्थत्वमाशङ्क्य निराह – अवाचकत्वेऽपीति ।।

'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರದಿಂದ ಪುನರುಕ್ತಿಯನ್ನು ಆಶಂಕಿಸಿ, ನಿರಾಕರಿಸುತ್ತಿದ್ದಾರೆ 'ಅವಾಚಕತ್ವೇऽಪಿ' ಇತ್ಯಾದಿಯಾಗಿ.

'ಶರೀರರೂಪಕ' ಎಂಬುದರ ವ್ಯಾಖ್ಯಾನ

ಭಾವದೀಪಃ – ಶರೀರಸಮ ಇತಿ ।। ರೂಪಶಬ್ದಃ ಸಮಾರ್ಥ ಇತಿ ದರ್ಶಿತಮ್ । ಪ್ರಾಯುङ्क्त ಪ್ರಯುಕ್ತವಾನ್ । ಪ್ರೋಪಾಭ್ಯಾಂ ಯುಜರೇಯಜ್ಞಪಾತ್ರೇಷ್ವಿತ್ಯಾತ್ಮನೇಪದಮ್ । ಅನ್ಯಥಾ ಮುಖ್ಯಶರೀರತ್ವೇ ಶರೀರವಿನ್ಯಸ್ತೇತ್ಯೇವ ಸಾಮಞ್ಜಸ್ಯಾತ್ । ಅಸ್ಮತ್ ಪಕ್ಷೇ ತು ಶರೀರಸ್ಯ ರೂಪಮಿವ ರೂಪಂ ಯಸ್ಯೇತಿ ವಿಗ್ರಹಸೂಚನಾರ್ಥತ್ವೇನ ಸಾರ್ಥಕ್ಯಾದಿತಿ ಭಾವಃ ।

ಸೂತ್ರದಲ್ಲಿರುವ 'ರೂಪ' ಶಬ್ದವು ಸದೃಶವಾದದ್ದು ಎಂಬರ್ಥದಲ್ಲಿ ಪ್ರಾಯುಂಕ್ತ = ಪ್ರಯೋಗಿಸಲ್ಪಟ್ಟಿದೆ. 'ಪ್ರೋಪಾಭ್ಯಾಂ ಯುಜರೇಯಜ್ಞಪಾತ್ರೇಷು' ಎಂಬ ಸೂತ್ರದಂತೆ 'ಪ್ರಾಯುಂಕ್ತ' ಎಂಬುದು ಆತ್ಮನೇ ಪದದಲ್ಲಿ ಪ್ರಯೋಗಿಸಲ್ಪಟ್ಟಿದೆ. ಒಂದು ವೇಳೆ ಪ್ರಕೃತಿಯೇ ಭಗವಂತನ ಮುಖ್ಯಶರೀರವಾಗಿದ್ದಲ್ಲಿ 'ಶರೀರವಿನ್ಯಸ್ತ' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು. 'ರೂಪಕ' ಪದವು ಬೇಕಾಗಿರಲಿಲ್ಲ. ನಮ್ಮ ಸಿದ್ಧಾಂತದ ಪ್ರಕಾರ 'ಶರೀರಸ್ಯ ರೂಪಮಿವ ರೂಪಂ ಯಸ್ಯ' ಎಂಬ ವಿಗ್ರಹವನ್ನು ಸೂಚನೆ ಮಾಡುವುದಕ್ಕಾಗಿ 'ರೂಪಕ' ಪದವು ಸಾರ್ಥಕವಾಗಿದೆ.

'ಯದ್ಯಪಿ' ಇತ್ಯಾದಿ ವಾಕ್ಯಗಳ ವ್ಯಾಖ್ಯಾನ

ಭಾವದೀಪಃ – ಪುನರುಕ್ತಿಪ್ರತೀತೇರಾಹ – ಶರೀರೇತಿ ।। ಅನೇನ ಭಾಷ್ಯೇಣ ಪ್ರಾಗುಕ್ತಶಙ್ಕಾನಿರಾಸಪ್ರಕಾರಂ ದರ್ಶಯತಿ ।। ಯದ್ಯಪೀತ್ಯಾದಿನಾ ।। ವಿಪರೀತಂ ವೇತಿ ।। ಪ್ರಧಾನಸಮ್ಬನ್ಧಾಚ್ಛಬ್ದವೃತ್ತಿರಿತಿ ।।

ಪುನರುಕ್ತಿಯ ಪರಿಹಾರಕ್ಕೆ 'ಶರೀರ' ಇತ್ಯಾದಿಯಾಗಿ ಹೇಳಿದ್ದಾರೆ. ಇದರಿಂದ ಭಾಷ್ಯದಲ್ಲಿ ಹಿಂದೆ ಮಾಡಲ್ಪಟ್ಟ ಆಶಂಕೆಯ ನಿರಾಸಪ್ರಕಾರವನ್ನು 'ಯದ್ಯಪಿ' ಇತ್ಯಾದಿಯಾಗಿ ತೋರಿಸಿದ್ದಾರೆ. 'ವಿಪರೀತಂ ವಾ' ಎಂದರೆ ಪ್ರಕೃತಿಯ ಸಂಬಂಧದಿಂದಲೇ ಪರಮಾತ್ಮನು ಪ್ರತಿಪಾದ್ಯನಾಗಲಿ ಎಂದಭಿಪ್ರಾಯ.

ಗಾರುಡ ವಚನಕ್ಕೆ ವ್ಯಾಖ್ಯಾನ

ಭಾವದೀಪಃ – ಏವಮಿತ್ಯುಕ್ತಂ ವ್ಯನಕ್ತಿ – ವಾಚಕತ್ವಮಿತಿ ।। ಪ್ರಧಾನಸ್ಯ ಸ್ವತನ್ತ್ರಸ್ಯ ಹರೇಃ । ಕರ್ಮಣಿ ಷಷ್ಠೀ । ಇತರಸ್ಯ ಜಗತಃ । ವಾಚಕತ್ವಂ ಶಬ್ದಾನಾಂ । ತದನ್ವಯಾತ್ ಪ್ರಧಾನಹರಿಸಮ್ಬನ್ಧಾದಿತ್ಯರ್ಥಃ ।।

'ಏವಂ' ಎಂಬುದಾಗಿ ಹೇಳಿದ್ದನ್ನೇ 'ವಾಚಕತ್ವಮ್' ಎಂದು ವ್ಯಾಖ್ಯಾನ ಮಾಡಿದ್ದಾರೆ. ಪ್ರಧಾನಸ್ಯ = ಸ್ವತಂತ್ರನಾದ ಶ್ರೀಹರಿಗೆ ಎಂದರ್ಥ. ಕರ್ಮಾಥದಲ್ಲಿ ಷಷ್ಠೀವಿಭಕ್ತಿಯು ಪ್ರಯೋಗಿಸಲ್ಪಟ್ಟಿದೆ. 'ಇತರಸ್ಯ' = ಜಗತ್ತಿಗೆ, ವಾಚಕತ್ವಂ = ಶಬ್ದಗಳು ಪ್ರತಿಪಾದನೆ ಮಾಡುತ್ತವೆ. 'ತದನ್ವಯಾತ್' = ಮುಖ್ಯನಾದ ಶ್ರೀಹರಿಯ ಸಂಬಂಧದಿಂದ ಎಂದರ್ಥ.

ಮಂಚಗಳು ಪರತಂತ್ರವಾದರೂ ಅಮುಖ್ಯಾರ್ಥವಲ್ಲ

ಭಾವದೀಪಃ – ನಚ ಮञ್ಚಾದಾವಿತಿ ।। ಪಾರತನ್ತ್ರ್ಯಾದಮುಖ್ಯತ್ವಮಿತಿ ವ್ಯಭಿಚರಿತಂ ಮञ್ಚಶಬ್ದಸ್ಯ ಪುರುಷೇ ಅಮುಖ್ಯಾರ್ಥತ್ವಾದರ್ಶನಾದಿತಿ ನ ಶಙ್ಕ್ಯಮಿತ್ಯರ್ಥಃ ।

'ನಚ ಮಂಚಾದಾವಿತಿ' ಎಂದರೆ 'ಮಂಚ' ಶಬ್ದಕ್ಕೆ ಪುರುಷನಲ್ಲಿ ಅಮುಖ್ಯಾರ್ಥವು ಕಂಡಿದೆ. ಆದ್ದರಿಂದ ಪಾರತಂತ್ರ್ಯವಿದ್ದಲ್ಲಿ, ಅಮುಖ್ಯತ್ವವಿರುತ್ತದೆ ಎಂಬ ನಿಯಮಕ್ಕೆ ವ್ಯಭಿಚಾರ ಬರುತ್ತದೆ ಎಂದಭಿಪ್ರಾಯ.

ಮಂಚ ಶಬ್ದದ ಉದಾಹರಣೆ ತಪ್ಪು

ಭಾವದೀಪಃ – ಸಮಾಕರ್ಷಾದಿತ್ಯತ್ರ ಪರಮಮುಖ್ಯಮುಖ್ಯವೃತ್ತಿಭೇದೇನ ವೃತ್ತಿತಾರತಮ್ಯಸ್ಯ ಮುಖ್ಯವೃತ್ತಾವೇವ ವಕ್ಷ್ಯಮಾಣತ್ವೇನೇಹಾಪಿ ಹರೌ ಪರಮಮುಖ್ಯತ್ವಂ ತತ್ಸಮ್ಬನ್ಧಾತ್ ಪ್ರಧಾನಾದೌ ಮುಖ್ಯತ್ವಂ ನ ಲಕ್ಷಣಾವೃತ್ತಿರಿತಿ ಮುಖ್ಯವೃತ್ತಾವೇವ ಹೀನತ್ವೇ ಪ್ರವೃತ್ತಿನಿಮಿತ್ತಪಾರತನ್ತ್ರ್ಯಂ ಹೇತ್ವಃ ನ ಲಕ್ಷಣಾಯಾಮಿತ್ಯಭಿಮತತ್ವೇನ ಪಾರತನ್ತ್ರ್ಯಾಭಾವೇऽಪಿ ಮञ್ಚಾದಿಶಬ್ದೇ ಲಕ್ಷಣಾಯಾಃ ಸಮ್ಭವಾದಿತ್ಯರ್ಥಃ ।

'ಸಮಾಕರ್ಷಾತ್' ಎಂಬ ಸೂತ್ರದಲ್ಲಿ ಪರಮಮುಖ್ಯವೃತ್ತಿ ಹಾಗೂ ಮುಖ್ಯವೃತ್ತಿ ಎಂಬ ವೈಲಕ್ಷಣ್ಯದಿಂದ ವೃತ್ತಿತಾರತಮ್ಯವನ್ನು ಮುಖ್ಯವೃತ್ತಿಯಲ್ಲಿಯೇ ಹೇಳುತ್ತಾರೆ. ಮುಖ್ಯವೃತ್ತಿಯಲ್ಲಿಯೇ ಈ ದ್ವೈವಿಧ್ಯವಿರುವುದರಿಂದ ಶ್ರೀಹರಿಯಲ್ಲಿ ಪರಮಮುಖ್ಯವೃತ್ತಿಯನ್ನು ಅವನ ಸಂಬಂಧದಿಂದ ಪ್ರಕೃತ್ಯಾದಿಗಳಲ್ಲಿ ಮುಖ್ಯವೃತ್ತಿಯನ್ನು ತಿಳಿಯಬೇಕು. ಆದ್ದರಿಂದ ಲಕ್ಷಣಾ ಮಾಡುವ ಪ್ರಸಂಗವಿಲ್ಲ. ಈ ಎರಡು ಬಗೆಯ ಮುಖ್ಯವೃತ್ತಿಗಳ ನಡುವೆ ಪ್ರಕೃತ್ಯಾದಿಗಳಲ್ಲಿ ಪರಮಮುಖ್ಯವೃತ್ತಿಯನ್ನು ವಿವಕ್ಷಿಸಬಾರದು ಎಂದು ತಿಳಿಸುವುದಕ್ಕಾಗಿ ಪರಮಾತ್ಮನ ಸಂಬಂಧವನ್ನು ಹೇಳಲಾಗಿದೆ ಹೊರತು, ಲಕ್ಷಣಾ ಮಾಡುವುದಕ್ಕಾಗಿ

ಅಲ್ಲ. ಈ ವಿಷಯವನ್ನು ಗಮನಿಸಬೇಕು. ಪುರುಷರಲ್ಲಿ ಪಾರತಂತ್ರ್ಯವಿಲ್ಲದಿದ್ದರೂ ಮಂಚಾದಿ ಶಬ್ದಗಳಿಗೆ ಲಕ್ಷಣಾವನ್ನು ಮಾಡಬಹುದು ಎಂದಭಿಪ್ರಾಯ. ಅಂದರೆ ಮಂಚ ಶಬ್ದಕ್ಕೆ ಪುರುಷರಲ್ಲಿ ಲಕ್ಷಣಾ ಮಾಡಿದಂತೆ ಪ್ರಕೃತ ಪ್ರಕೃತ್ಯಾದಿಗಳಲ್ಲಿ ಅವ್ಯಕ್ತಾದಿಶಬ್ದಗಳಿಗೆ ಲಕ್ಷಣಾವನ್ನು ಮಾಡುತ್ತಿಲ್ಲ.

ಅವ್ಯಕ್ತ ಶಬ್ದಕ್ಕೆ ಏನರ್ಥ ?

ಭಾವದೀಪಃ – अव्यक्तादीत्यग्रे भाषणादाह – **अत्रेति** ।। अधिकरण इत्यर्थः । सर्वत्र सूत्रेषु भाष्ये चेत्यर्थः । अल्पत्वं पारतन्त्र्यमित्यर्थः ।

'ಅವ್ಯಕ್ತಾದಿ' ಎಂಬುದಾಗಿ ಮುಂದೆ ಭಾಷ್ಯಕಾರರು ಹೇಳುತ್ತಾರೆ. ಅದನ್ನೇ 'ಅತ್ರ' ಎಂಬುದಾಗಿ ನಿರೂಪಣೆ ಮಾಡಿದ್ದಾರೆ. 'ಅತ್ರ' ಎಂದರೆ ಈ ಅಧಿಕರಣದಲ್ಲಿ ಎಂದರ್ಥ. 'ಸರ್ವತ್ರ' ಎಂದರೆ ಸೂತ್ರಗಳಲ್ಲಿ ಹಾಗೂ ಭಾಷ್ಯದಲ್ಲಿ ಎಂದರ್ಥ. 'ಅಲ್ಪತ್ವಂ' ಎಂದರೆ 'ಪಾರತಂತ್ರ್ಯ' ಎಂದರ್ಥ.

ತುಚ್ಛಶಬ್ದದ ಅರ್ಥವೇನು ?

ಭಾವದೀಪಃ – तुच्छेनेत्यस्यार्थोऽल्पेनेति। परतन्त्रेणेत्यर्थः ।

'ತುಚ್ಛೇನ' ಎಂಬುದರ ಅರ್ಥವನ್ನೇ 'ಅಲ್ಪೇನ' ಎಂಬುದರಿಂದ ಹೇಳಿದ್ದಾರೆ. ಪರತಂತ್ರವಾದ್ದರಿಂದ ಎಂದರ್ಥ.

ಅವ್ಯಕ್ತದಲ್ಲಿಯೂ ಶ್ರೀಹರಿ ನೆಲಸಿದ್ದಾನೆ

ಭಾವದೀಪಃ – अव्यक्तेनेति विशेष्यम् । अनेन प्रधानस्य पारतन्त्र्यं हरेस्तत्र स्थितत्वं च सिद्धमिति भावः ।

'ಅವ್ಯಕ್ತೇನ' ಎಂಬುದು ವಿಶೇಷ್ಯವಾಚಕವಾದ ಪದ. ಹೀಗೆ ಹೇಳಿದ್ದರಿಂದ ಪ್ರಕೃತಿಗೆ ಪಾರತಂತ್ರ್ಯವನ್ನು ಅಂತಹ ಪರತಂತ್ರವಾದ ಪ್ರಕೃತಿಯಲ್ಲಿ ಶ್ರೀಹರಿಯು ಸ್ಥಿತನಾಗಿದ್ದಾನೆಂದು ಹೇಳಿದಂತಾಯಿತು.

'ಯ ಆತ್ಮನಿ ತಿಷ್ಠನ್' ಶ್ರುತಿಯ ಉದಾಹರಣೆಗೆ ಕಾರಣ

ಭಾವದೀಪಃ – जीवस्य अस्वातन्त्र्ये हरेर्जीवविन्यस्तत्वे च अन्तर्यामिनये ब्रह्मपरत्वेन सिद्धश्रुत्यन्तरमाह – **य आत्मनीति** ।।

ಜೀವನು ಅಸ್ವತಂತ್ರನಾಗಿದ್ದಾನೆ. ಶ್ರೀಹರಿಯು ಅಂತಹ ಅಸ್ವತಂತ್ರನಾದ ಜೀವನಲ್ಲಿ ಸ್ಥಿತನಾಗಿದ್ದಾನೆ ಎಂಬುದಾಗಿ ತಿಳಿಯಬೇಕು. ಅಂತರ್ಯಾಮ್ಯಧಿಕರಣದಲ್ಲಿ ಇದೇ ವಿಷಯದಲ್ಲಿ ಬ್ರಹ್ಮಪರವಾಗಿ ಸಿದ್ಧವಾದ ಯಾವ ಶ್ರುತಿಯನ್ನು ಹೇಳಲಾಗಿತ್ತೋ ಅದನ್ನೇ ಇಲ್ಲಿ 'ಯ ಆತ್ಮನಿ' ಎಂಬುದರಿಂದ ಉಲ್ಲೇಖಿಸಿದ್ದಾರೆ.

'ಭವೇತ್ ಪ್ರಾಚೀನ ಚಿಂತಾ' ಎಂಬುದರ ವ್ಯಾಖ್ಯಾನ

भावदीपः – प्राचीनेति ।। अव्यक्तशब्दवाच्यभगवत्सम्बन्धादन्यत्र शब्दवृत्ति विचार इत्यर्थः ।

'ಪ್ರಾಚೀನ' ಎಂದರೆ ಅವ್ಯಕ್ತ ಶಬ್ದವಾಚ್ಯನಾದ ಪರಮಾತ್ಮನ ಸಂಬಂಧದಿಂದ ಬೇರೆಡೆ ಶಬ್ದಗಳು ಪ್ರವೃತ್ತವಾಗುತ್ತವೆಂಬ ಹಿಂದಿನ ಚಿಂತನೆಯು ಎಂದರ್ಥ.

'ನಿಷ್ಕ್ರಿಯಮ್' ಎಂಬುದರಿಂದ ಪುನರುಕ್ತಿ ಇಲ್ಲ

भावदीपः – निष्क्रियमित्यनेनापौनरुक्त्यायाऽऽह – अचलमीश्वरभावादिति।।

'ನಿಷ್ಕ್ರಿಯಮ್' ಎಂಬ ಪದದ ಜೊತೆಗೆ ಪುನರುಕ್ತಿ ಬರಬಾರದೆಂದು 'ಅಚಲಮ್ ಈಶ್ವರಭಾವಾತ್' ಎಂದು ವ್ಯಾಖ್ಯಾನ ಮಾಡಿದ್ದಾರೆ. ಈಶ್ವರನು ಸ್ವರೂಪದಿಂದ ಚ್ಯುತನಾಗುವುದಿಲ್ಲ ಎಂದಭಿಪ್ರಾಯ.

'ನಿಷ್ಕ್ರಿಯಮ್' ಎಂಬ ಪದದ ವ್ಯಾಖ್ಯಾನ

भावदीपः – अक्लिष्टेति ।। अकर्माक्लिष्टकारित्वात् इत्येकादशस्कन्धतात्पर्योक्तेः इति भावः । प्राकृतादिक्रियाराहित्यमादिपदार्थः । अन्यभावव्यावृत्तेरित्युक्तेः। निष्कलं प्राकृतषोडशकलारहितमिति स्पष्टमिति भावः ।

'ಅಕರ್ಮಾಕ್ಲಿಷ್ಟಕಾರಿತ್ವಾತ್' ಎಂದು ಏಕಾದಶಸ್ಕಂಧತಾತ್ಪರ್ಯದಲ್ಲಿ ಹೇಳಿದ ಮಾತಿನಂತೆ ಕ್ಲೇಶವಿಲ್ಲದೆ ಕೆಲಸ ಮಾಡುತ್ತಾನೆಂಬರ್ಥವನ್ನು ತಿಳಿಯಬೇಕು. ಆದಿಪದದಿಂದ ಪ್ರಾಕೃತವಾದ ಕ್ರಿಯಾರಹಿತನಾಗಿದ್ದಾನೆಂದು ವಿವಕ್ಷಿಸಬೇಕು. ಏಕೆಂದರೆ 'ಅನ್ಯಭಾವವ್ಯಾವೃತ್ತೇಃ' ಎಂದು ಸೂತ್ರಕಾರರೇ ಹೇಳಿದ್ದಾರೆ. 'ನಿಷ್ಕಲಂ' ಎಂದರೆ ಪ್ರಾಕೃತವಾದ ಹದಿನಾರು ಕಲೆಗಳಿಂದ ರಹಿತನಾಗಿದ್ದಾನೆ ಎಂದರ್ಥ.

'ಆತ್ಮಾನಾಮ್' ಎಂದೇ ಪದಚ್ಛೇದ ಮಾಡಬೇಕು

भावदीपः – स्वात्मानमिति भ्रमनिरासायाऽऽह – आत्मानमिति ।। भाष्ये इत्युक्त्वेत्यन्तोक्तेरुपयोगायार्थमाह – यस्येति ।। उक्तमिति ।। गीतायामष्टमेऽध्याये उक्तमित्यर्थः ;

'ಸ್ವಾತ್ಮಾನಮ್' ಎಂದು ಪದಚ್ಛೇದ ಮಾಡಬಾರದೆಂದು ತಿಳಿಸಲು 'ಆತ್ಮಾನಾಮ್' ಎಂದು ಹೇಳಿದ್ದಾರೆ. ಭಾಷ್ಯದಲ್ಲಿ 'ಇತ್ಯುಕ್ತ್ವಾ' ಎಂಬಲ್ಲಿಯ ತನಕ ಹೇಳಿದ ಮಾತುಗಳ ಉಪಯೋಗವನ್ನು ತೋರಿಸಲು 'ಯಸ್ಯ' ಎಂಬ ಕೊನೆಯ ಟೀಕಾ ವಾಕ್ಯವು ಹೊರಟಿದೆ. 'ಉಕ್ತಮ್' ಎಂದರೆ ಗೀತೆಯ ಎಂಟನೆಯ ಅಧ್ಯಾಯದಲ್ಲಿ ಹೇಳಿದ್ದಾರೆ ಎಂದರ್ಥ.

ಶ್ರುತಿ-ಸ್ಮೃತಿಗಳ ಉದಾಹರಣೆಗೆ ಕಾರಣ

भावदीपः – जीवशब्दवाच्यत्वेऽपि श्रुतिस्मृती आह – अनेनेति ।। छान्दोग्ये षष्ठे श्रुतेयं श्रुतिः । तत्र जीवशब्दस्य ईशपरत्वं चेमास्तिस्रो देवता अनेन जीवेनाऽऽत्मनाऽनुप्रविश्य नामरूपे व्याकरवाणीत्यादौ जीवानुप्रवेशात् पूर्वमेव देवतापदप्रयोगेण चेतनत्वावगमेन पुनर्जीवप्रवेशोक्तेः वैयर्थ्येन जीवाख्यानिरुद्धरूपात्मना भगवत एवानुप्रवेश इति तत्वनिर्णय छान्दोग्यभाष्यादौ व्यक्तमिति भावः ।। जीव इति ।। सहस्रनामसु ।।१।।

ಪರಮಾತ್ಮನು ಜೀವಶಬ್ದವಾಚ್ಯನಾಗಿದ್ದಾನೆ ಎಂಬ ವಿಷಯದಲ್ಲಿಯೂ ಶ್ರುತಿ-ಸ್ಮೃತಿಗಳನ್ನು 'ಅನೇನ' ಎಂಬುದರಿಂದ ಉಲ್ಲೇಖಿಸಿದ್ದಾರೆ. ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ ಈ ಶ್ರುತಿಯು ಉಲ್ಲೇಖಿತವಾಗಿದೆ. ಆ ಶ್ರುತಿಯಲ್ಲಿ ಜೀವಶಬ್ದಕ್ಕೆ ಪರಮಾತ್ಮ ಎಂಬರ್ಥವನ್ನೇ ವಿವಕ್ಷಿಸಲಾಗಿದೆ. ವಿಷ್ಣುತತ್ವನಿರ್ಣಯದಲ್ಲಿ ಹಾಗೂ ಛಾಂದೋಗ್ಯಭಾಷ್ಯದಲ್ಲಿ 'ಅನೇನ ಜೀವೇನಾತ್ಮನಾ' ಎಂಬ ಶ್ರುತಿಗೆ ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿದ್ದಾರೆ. 'ಇಮಾಸ್ತಿಸ್ರೋ ದೇವತಾಃ' ಎಂಬಲ್ಲಿ ದೇವತಾ ಪದವನ್ನು ಉಲ್ಲೇಖ ಮಾಡಿದ್ದರಿಂದ ಜೀವನ ಅನುಪ್ರವೇಶಕ್ಕಿಂತ ಮೊದಲೇ ದೇವತಾಪದವನ್ನು ಪ್ರಯೋಗಿಸಲಾಗಿದೆ. ಪುನಃ ಜೀವಪ್ರವೇಶವನ್ನು ಹೇಳುವುದು ವ್ಯರ್ಥವಾಗುತ್ತದೆ. ಆದ್ದರಿಂದ ಅನಿರುದ್ಧರೂಪಿಯಾದ ಪರಮಾತ್ಮನ

ಅನುಪ್ರವೇಶವನ್ನು ಶ್ರುತಿಯು ವಿವಕ್ಷಿಸಿದೆ ಎಂದು ತಿಳಿಯಬೇಕು. ಆವಾಗ ಜೀವಶಬ್ದದಿಂದ ಅನಿರುದ್ಧ-ರೂಪಿಯಾದ ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆ. ವಿಷ್ಣುಸಹಸ್ರನಾಮದಲ್ಲಿ 'ಜೀವೋ ವಿನಯಿತಾ ಸಾಕ್ಷೀ' ಎಂಬ ವಾಕ್ಯವಿದೆ. ಈ ವಿಷ್ಣುಸಹಸ್ರನಾಮದ ಮಾತಿನಿಂದಲೂ ಜೀವ ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯುತ್ತದೆ.

ಬ್ರಹ್ಮಸೂತ್ರ

'ಸೂಕ್ಷ್ಮಂ ತು ತದರ್ಹತ್ವಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। सूक्ष्मं तु तदर्हत्वात् ।। २ ।।

ಸೂತ್ರಾರ್ಥ - ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತ ಎಂದರೆ 'ಸೂಕ್ಷ್ಮತ್ವ'. ಇದು ವಿಷ್ಣುವಿನಲ್ಲಿ ಮಾತ್ರ ಇರುವುದರಿಂದ ಅವನೇ ಅವ್ಯಕ್ತ ಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ.

ಅರ್ಥ -- ಯಾವ ಕಾರಣದಿಂದ ಸೂಕ್ಷ್ಮಂ ತು = ಸೂಕ್ಷ್ಮವಾದ ಪದಾರ್ಥವೇ ಅವ್ಯಕ್ತ ಶಬ್ದದಿಂದ ಪ್ರತಿಪಾದ್ಯವಾಗುತ್ತದೆ. ಏಕೆಂದರೆ ತದರ್ಹತ್ವಾತ್ = ಸೂಕ್ಷ್ಮವಾಗಿರುವಿಕೆಯು ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಇಂಥ ಸೂಕ್ಷ್ಮತ್ವವು ವಿಷ್ಣುವಿನಲ್ಲಿ ಮಾತ್ರ ಯುಕ್ತವಾಗುತ್ತದೆ. ಆದ್ದರಿಂದ ಪರಮಾತ್ಮನೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನು.

ಬ್ರಹ್ಮಸೂತ್ರಭಾಷ್ಯ

ಯಾವುದು ಸೂಕ್ಷ್ಮವೋ ಅದೇ ಅವ್ಯಕ್ತ

ब्रह्मसूत्रभाष्यम् – सूक्ष्ममेवाव्यक्तशब्देनोच्यते । तद्धयव्यक्ततामर्हति ।

ಅನುವಾದ - ಸೂಕ್ಷ್ಮವಾದುದು 'ಅವ್ಯಕ್ತಃ' ಎಂಬ ಶಬ್ದದಿಂದ ಪ್ರತಿಪಾದ್ಯವಾಗುತ್ತದೆ. ಯಾವುದು ಅತ್ಯಂತ ಸೂಕ್ಷ್ಮವಾಗಿರುತ್ತದೋ, ಅದೇ ಅವ್ಯಕ್ತತ್ವಕ್ಕೆ ಅರ್ಹವಾಗಿರುತ್ತದೆ.

ಪ್ರತಿಪದಾರ್ಥ -- 'ಸೂಕ್ಷ್ಮವೇ ಅವ್ಯಕ್ತ ಶಬ್ದಪ್ರತಿಪಾದ್ಯವಾಗಿದೆ' ಎಂಬ ಸೂತ್ರದಲ್ಲಿರುವ ಪ್ರತಿಜ್ಞಾಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ –

ಸೂಕ್ಷ್ಮಮೇವ = ಅತ್ಯಂತ ಸೂಕ್ಷ್ಮವಾದ ವಸ್ತುವನ್ನೇ, ಅವ್ಯಕ್ತಶಬ್ದೇನ = ಅವ್ಯಕ್ತ ಎಂಬ ಪದದಿಂದ, ಉಚ್ಯತೇ = ಕರೆಯುತ್ತಾರೆ. ತತ್ = ಆ ಸೂಕ್ಷ್ಮವಾದ ವಸ್ತುವೇ, ಅವ್ಯಕ್ತತಾಂ = ಅವ್ಯಕ್ತತ್ವಕ್ಕೆ, ಅರ್ಹತಿ = ಅರ್ಹವಾಗುತ್ತದೆ.

ಅತ್ಯಂತ ಸೂಕ್ಷ್ಮವಾದ ಮಹಾವಿಷ್ಣುವಿನಲ್ಲಿ ಮಾತ್ರ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವಿದೆ

ब्रह्मसूत्रभाष्यम् – सूक्ष्मत्वं च मुख्यं तस्यैव ।

ಅನುವಾದ - ಅತ್ಯಂತ ಸೂಕ್ಷ್ಮವಾಗಿರುವಿಕೆಯು ಅವ್ಯಕ್ತಶಬ್ದವಾಚ್ಯನಾದ ವಿಷ್ಣುವಿನಲ್ಲಿಯೇ ಮುಖ್ಯವಾಗಿ ಬರುತ್ತದೆ. ಬೇರೆಯವರಲ್ಲಿ ಬರುವುದಿಲ್ಲ.

ಪ್ರತಿಪದಾರ್ಥ -- ಸೂಕ್ಷ್ಮವಾದ ವಸ್ತುವೇ ಅವ್ಯಕ್ತತ್ವಕ್ಕೆ ಅರ್ಹವಾದ್ದರಿಂದ, ಅವ್ಯಕ್ತಶಬ್ದವಾಚ್ಯವಾಗಲಿ, ಇದರಿಂದ ಪ್ರಕೃತದಲ್ಲಿ ಏನು ಹೇಳಿದಂತಾಯಿತು ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ –

ಸೂಕ್ಷ್ಮತ್ವಂ ಚ = ಅತ್ಯಂತ ಸೂಕ್ಷ್ಮವಾಗಿರುವಿಕೆಯಾದರೂ, ಮುಖ್ಯಂ = ಪ್ರಧಾನವಾಗಿ, ತಸ್ಯೈವ = ವಿಷ್ಣುವಿನಲ್ಲಿಯೇ ಬರುತ್ತದೆ, ಉಳಿದವರಲ್ಲಿ ಬರುವುದಿಲ್ಲ.

ಮಹಾವಿಷ್ಣುವೇ ಸೂಕ್ಷ್ಮನೆನ್ನಲು ಶ್ರುತಿಯ ಆಧಾರ

ब्रह्मसूत्रभाष्यम् –'यत्तत् सूक्ष्मं परमं वेदितव्यं नित्यं पदं वैष्णवं ह्यामनन्ति ।
यत्तल्लोका न विदुर्लोकसारं विन्दन्त्येतत् कवयो योगनिष्ठाः ।।'

इति च पिप्पलादशाखायाम् ।

ಅನುವಾದ - ಲೋಕೋತ್ತರವಾದ ವಿಷ್ಣುವಿನ ಯಾವ ಸ್ವರೂಪವಿದೆಯೋ, ಅದನ್ನು ಪರಮಸೂಕ್ಷ್ಮವೆಂದು ತಿಳಿಯಬೇಕು. ಇದನ್ನು ಅಥರ್ವಣಿಕರು 'ಏಷೋऽಣುರಾತ್ಮಾ ಚೇತಸಾ ವೇದಿತವ್ಯಃ' ಎಂಬುದಾಗಿ ಹೇಳುತ್ತಾರೆ. ಯಾವಾತನನ್ನು ಪಾಮರ ಜನರು ತಿಳಿಯಲು ಅಸಮರ್ಥರಾಗುತ್ತಾರೋ, ಅಂತಹ ಮಹಾವಿಷ್ಣುವಿನ ದಿವ್ಯ ಸ್ವರೂಪವನ್ನು ಮನೋಯೋಗನಿಷ್ಠರಾದಉಪಾಯಸಿದ್ಧರಾದಜ್ಞಾನಿಜನರುಸಾಕ್ಷಾತ್ಕಾರಮಾಡಿಕೊಳ್ಳುತ್ತಾರೆ. ಈ ವಿಷಯವು ಶ್ರುತಿಗಳಲ್ಲಿ ಪ್ರಸಿದ್ಧವಷ್ಟೇ.

ಪ್ರತಿಪದಾರ್ಥ -- ಮಹಾವಿಷ್ಣುವೇ ಅತ್ಯಂತ ಸೂಕ್ಷ್ಮನಾಗಿದ್ದಾನೆ. ಈ ವಿಷಯದಲ್ಲಿ ಸೂತ್ರಕಾರರಿಗೆ ಅಭಿಪ್ರೇತವಾದ ಶ್ರುತಿ ಹೀಗಿದೆ –

ಯತ್ = ಯಾವ, ಲೋಕಸಾರಂ = ಸಕಲ ಲೋಕಗಳಿಗಿಂತ ಉತ್ತಮವಾದ, ವೈಷ್ಣವಂಪದಂ = ವಿಷ್ಣುಸ್ವರೂಪವಿದೆಯೋ, ತತ್ = ಅದು, ಪರಮಂ ಸೂಕ್ಷ್ಮಂ = ಅತ್ಯಂತ ಸೂಕ್ಷ್ಮವಾಗಿದೆ ಎಂಬುದಾಗಿ, ವೇದಿತವ್ಯಂ = ತಿಳಿಯತಕ್ಕದ್ದು. ಇತಿ = ಹೀಗೆ, ಆಮನಂತಿ = 'ಏಷೋऽಣುರಾತ್ಮಾ ಚೇತಸಾ ವೇದಿತವ್ಯಃ' ಎಂಬುದಾಗಿ ಆಥರ್ವಣಿಕರು ಹೇಳುತ್ತಾರೆ. ಯತ್ = ಯಾವ ವಿಷ್ಣುವನ್ನು, ಲೋಕಾಃ = ಪಾಮರ ಜನರು, ನ ವಿದುಃ = ತಿಳಿಯಲು ಅಸಮರ್ಥರಾಗುತ್ತಾರೋ, ತತ್ = ಅಂತಹ, ಏತತ್ = ಮಹಾವಿಷ್ಣುವಿನ ಸ್ವರೂಪವನ್ನು, ಯೋಗನಿಷ್ಠಾಃ = ಬ್ರಹ್ಮನಲ್ಲಿ ಮನೋಯೋಗ ನಿಷ್ಠರಾದ, ಉಪಾಯಸಿದ್ಧರಾದ, ಕವಯಃ = ಜ್ಞಾನಿಜನರು, ವಿದಂತಿ = ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ. ಹಿ = ಇದು ಪ್ರಸಿದ್ಧವಷ್ಟೆ. ಇತಿ ಚ = ಹೀಗೆ, ಪಿಪ್ಪಲಾದ ಶಾಖಾಯಾಂ = ಪಿಪ್ಪಲಾದ ಶಾಖೆಯಲ್ಲಿ ಹೇಳಲ್ಪಟ್ಟಿದೆ.

ಪ್ರಕೃತಿಯು ಅತ್ಯಂತ ಸೂಕ್ಷ್ಮವಲ್ಲ

ब्रह्मसूत्रभाष्यम् – मुख्ये च विद्यमाने नामुख्यं युक्तम् ।।२।।

ಅನುವಾದ - ಪ್ರಕೃತ ವಿಷಯವಾಕ್ಯದಲ್ಲಿ ಮಹಾವಿಷ್ಣುವೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ವಿವಕ್ಷಿಸಲು ಬರುವಾಗ, ಅಪ್ರಧಾನವಾದ ಪ್ರಕೃತಿಯನ್ನು ಅವ್ಯಕ್ತಶಬ್ದವಾಚ್ಯವೆಂದು ಹೇಳುವುದು ಯುಕ್ತವಲ್ಲ.

ಪ್ರತಿಪದಾರ್ಥ -- ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವೆನಿಸಿದ, ಅತ್ಯಂತ ಸೂಕ್ಷ್ಮತ್ವವು ಮಹಾವಿಷ್ಣುವಿನಲ್ಲೇ ಇರಲಿ. ಆದರೆ 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿರುವ ಅವ್ಯಕ್ತ ಶಬ್ದದಿಂದ ಪ್ರಕೃತಿಯೇ ಪ್ರತಿಪಾದ್ಯವಾಗಲಿ? ಈ ಪ್ರಶ್ನೆಗೆ ಹಿಂದಿನ ಸೂತ್ರದಲ್ಲಿ 'ಉಕ್ತೇಃ' ಎಂದು ಹೇಳದೆ, 'ಗೃಹಿತೇಃ' ಎಂದು ಹೇಳಿದ್ದರಿಂದ ಸೂಚಿತವಾದ ಯುಕ್ತಿಯನ್ನು ಹೇಳುತ್ತಾ ಉತ್ತರಿಸುತ್ತಿದ್ದಾರೆ. –

ಮುಖ್ಯೇಚ = ಸೂಕ್ಷ್ಮವಸ್ತುಗಳಿಗೂ, ಸೂಕ್ಷ್ಮತ್ವವನ್ನು ನೀಡುವುದರಿಂದಲೇ, ಅತ್ಯಂತ ಸೂಕ್ಷ್ಮನಾದ ಮಹಾವಿಷ್ಣುವನ್ನು, ಎದ್ಯಮಾನೇ = ವಿವಕ್ಷಿಸಲು ಬರುವಾಗ, ಅಮುಖ್ಯಂ = ಗೌಣವಾದ ಪ್ರಕೃತ್ಯಾದಿಗಳನ್ನು, ನ ಯುಕ್ತಮ್ = ವಿವಕ್ಷಿಸುವುದು ಯುಕ್ತವಲ್ಲ.

ತತ್ತ್ವಪ್ರದೀಪ

ಉತ್ತಮರ ಸ್ವರೂಪವನ್ನು 'ಪಾದ' ಎನ್ನುವರು

तत्वप्रदीपः – सूक्ष्मं तु तदर्हत्वात् ।। सूक्ष्मं ह्यव्यक्ततामर्हति । सूक्ष्माः खलु परमाण्वाकाशादयोऽव्यक्ता लक्ष्यन्ते । वैष्णवं पदं विष्णुस्वरूपम् ।

''उत्तमानां हि पादेन सर्वरूपं हि कथ्यते ।
विष्णोः पदमिति ह्यस्मात् प्रथितिर्वैदिकी स्मृता''
इति वैश्वानरविद्यायाम् ।।

लोकसारं - लोकोत्तमम् । योगनिष्ठाः - ब्रह्मणि मनोयोगनिष्ठाः ।।

'ಸೂಕ್ಷ್ಮಂ ತು ತದರ್ಹತ್ವಾತ್' ಎಂಬ ಸೂತ್ರವನ್ನು 'ಸೂಕ್ಷ್ಮಂ ಅವ್ಯಕ್ತ' ಇತ್ಯಾದಿಯಾಗಿ ಭಾಷ್ಯಕಾರರು ವ್ಯಾಖ್ಯಾನ ಮಾಡುತ್ತಿದ್ದಾರೆ. ಯಾವುದು ಸೂಕ್ಷ್ಮವೋ, ಅದೇ ಅವ್ಯಕ್ತವೆಂದು ಕರೆಸಿಕೊಳ್ಳಲು ಸಾಧ್ಯವಾಗುತ್ತದೆ. ಪರಮಾಣು ಮೊದಲಾದ ಸೂಕ್ಷ್ಮ ಪದಾರ್ಥಗಳನ್ನು ಅವ್ಯಕ್ತ ಎಂದೇ ಗುರುತಿಸುತ್ತಾರೆ.

ಪಿಪ್ಪಲಾದ ಶಾಖೆಯಲ್ಲಿರುವ 'ವೈಷ್ಣವಂ ಪದಂ' ಎಂಬುದಕ್ಕೆ ವಿಷ್ಣುಸ್ವರೂಪವನ್ನು ಎಂದರ್ಥ. ಏಕೆಂದರೆ

'ಉತ್ತಮಾನಾಂ ಹಿ ಪಾದೇನ ಸರ್ವರೂಪಂ ಹಿ ಕಥ್ಯತೇ ।
ವಿಷ್ಣೋಃ ಪದಮಿತಿ ಹ್ಯಸ್ಮಾತ್ ಪ್ರಥಿತಿರ್ವೈದಿಕೀ ಸ್ಮೃತಾ'

'ಉತ್ತಮರ ಸ್ವರೂಪವನ್ನು ಪಾದಶಬ್ದದಿಂದ ಕರೆಯಲಾಗುತ್ತದೆ. ಆದ್ದರಿಂದ 'ವಿಷ್ಣೋಃ ಪದಂ' ಎಂಬುದಾಗಿ ವೈದಿಕವೃತ್ತಿಯು ಆಧಾರವಾಗಿದೆ' ಎಂಬುದಾಗಿ ವೈಶ್ವಾನರವಿದ್ಯೆಯಲ್ಲಿ ಹೇಳಿದಂತೆ 'ವೈಷ್ಣವಂ ಪದಂ' ಎಂಬಲ್ಲಿರುವ ಪದಶಬ್ದಕ್ಕೆ ವಿಷ್ಣುವಿನ ಸ್ವರೂಪ ಎಂದರ್ಥ.

'ಲೋಕಸಾರಂ' ಎಂಬ ಪದಕ್ಕೆ ಎಲ್ಲಾ ಲೋಕಗಳಿಗಿಂತ ಉತ್ತಮವಾದ, 'ಯೋಗನಿಷ್ಠಾಃ' ಎಂಬ ಪದಕ್ಕೆ ಬ್ರಹ್ಮನಲ್ಲಿ ಮನೋಯೋಗನಿಷ್ಠರಾದ ಎಂದರ್ಥ.

ತತ್ತ್ವಪ್ರಕಾಶಿಕಾ

ಶ್ರುತಿ-ಸ್ಮೃತಿಗಳು ಅಮುಖ್ಯಾರ್ಥವನ್ನು ಏಕೆ ಹೇಳಬಾರದು ?

नन्वस्त्वेवं श्रौतस्मार्तप्रयोगबलेनाव्यक्तादिशब्दानां भगवद्वाचित्वम् । तत्र तेषां मुख्यत्वं कुतः? प्रयोगस्यामुख्यवाच्येऽपि सम्भवात् इत्याशङ्कां परिहरत् सूत्रमुपन्यस्य व्याचष्टे – सूक्ष्ममिति ।।

ಪ್ರಶ್ನೆ - ಶ್ರುತಿ ಹಾಗೂ ಸ್ಮೃತಿಗಳಲ್ಲಿ ಅವ್ಯಕ್ತಶಬ್ದವನ್ನು ವಿಷ್ಣುವಿನಲ್ಲೇ ಪ್ರಯೋಗಿಸಲಾಗಿದೆ. ಈ ಪ್ರಯೋಗದ ಬಲದಿಂದ ಅವ್ಯಕ್ತ ಮೊದಲಾದ ಶಬ್ದಗಳು ಭಗವದ್ವಾಚಕವೇ ಆಗಲಿ; ಅಂದ ಮಾತ್ರಕ್ಕೆ ಆ ಶಬ್ದಗಳು ಭಗವಂತನನ್ನು ಮುಖ್ಯವಾಗಿ ಪ್ರತಿಪಾದನೆ ಮಾಡುತ್ತಿವೆಯೆಂದು ಏಕೆ ಅಂಗೀಕರಿಸಬೇಕು? ಶ್ರುತಿ-ಸ್ಮೃತಿಗಳಲ್ಲಿರುವ ಪ್ರಯೋಗವು ಅಮುಖ್ಯವಾಗಿರಬಹುದು ಅಮುಖ್ಯವಾದಾಗಲೂ ಕೂಡ ಭಗವದ್ವಾಚಕವೆಂದು ಹೇಳಲು ಏನೂ ತೊಂದರೆಯಿರುವುದಿಲ್ಲವಲ್ಲವೇ?

ಉತ್ತರ - ಈ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಸೂಕ್ಷ್ಮಮ್' ಎಂಬುದಾಗಿ.

ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತ ಯಾರಲ್ಲಿ ?

तत्त्वप्रकाशिका – अव्यक्तत्वस्यैवाव्यक्तशब्दप्रवृत्तिनिमित्तत्वात् कथं 'सूक्ष्ममेवाव्यक्तशब्देनोच्यते?' इति तत्राऽऽह – तद्धीति ।।

ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವು ಅವ್ಯಕ್ತತ್ವವೇ ಆಗಿದೆ. ಆದರೆ ಸೂಕ್ಷ್ಮವಾದ ಪದಾರ್ಥವು ಅವ್ಯಕ್ತಶಬ್ದದಿದ ಪ್ರತಿಪಾದ್ಯವೆಂದು ನೀವು ಹೇಳುತ್ತಿದ್ದೀರಿ ಇದು ಹೇಗೆ ಕೂಡುತ್ತದೆ ? ಎಂಬ ಪ್ರಶ್ನೆಗೆ 'ತದ್ ಹಿ' ಎಂಬ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ.

ವಿಷ್ಣುವೇ ಏಕೆ ಅವ್ಯಕ್ತನಾಗಬೆಕು ?

तत्वप्रकाशिका – अस्तु सूक्ष्मस्यैवाव्यक्तशब्दप्रवृत्तिनिमित्ताव्यक्तताऽर्हत्वात् तदव्यक्तशब्दवाच्यम् । तथापि प्रकृते किमायातम् ? इत्यत आह – सूक्ष्मत्वं चेति ।।

ಸೂಕ್ಷ್ಮವಾದ ವಸ್ತುವಿನಲ್ಲಿ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಅವ್ಯಕ್ತತ್ವವು ಇರುವ ಕಾರಣ ಅದು ಅವ್ಯಕ್ತಶಬ್ದವಾಚ್ಯವಾಗಲಿ. ಅಂದಮಾತ್ರಕ್ಕೆ ಪ್ರಕೃತ ಪರಮಾತ್ಮನು ಅವ್ಯಕ್ತಶಬ್ದವಾಚ್ಯನೆಂದು ಹೇಗೆ ಸಿದ್ಧವಾಗುತ್ತದೆ ? ಎಂಬ ಪ್ರಶ್ನೆಗೆ 'ಸೂಕ್ಷ್ಮತ್ವಂ ಚ' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ.

ಎಲ್ಲವೂ ಪರಮಾತ್ಮನಲ್ಲಿಯೇ ಮುಖ್ಯ

तत्वप्रकाशिका – युक्तं परमात्मन्यव्यक्तशब्दस्य मुख्यत्वम् । तदर्थ-भूताव्यक्तत्वस्य परमात्मनि सत्त्वात् । अव्यक्तत्वोपयोगिनः सूक्ष्मत्वस्य तत्र सद्भावात् ।

ಪರಮಾತ್ಮನಲ್ಲಿ ಅವ್ಯಕ್ತಶಬ್ದವಾಚ್ಯತ್ವವು ಮುಖ್ಯವಾಗಿಯೇ ಬರುತ್ತದೆ. ಏಕೆಂದರೆ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವಾದ ಅವ್ಯಕ್ತತ್ವವು ಪರಮಾತ್ಮನಲ್ಲಿದೆ. ಅವ್ಯಕ್ತತ್ವಕ್ಕೆ ಉಪಯೋಗಿಯಾದ ಸೂಕ್ಷ್ಮತ್ವವು ಪರಮಾತ್ಮನಲ್ಲೇ ಮುಖ್ಯವಾಗಿ ಇರುವುದರಿಂದ ಅವ್ಯಕ್ತಶಬ್ದದಿಂದ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ.

ಅತಿಸೂಕ್ಷ್ಮತ್ವವು ಪ್ರಕೃತಿಯಲ್ಲಿ ಸರ್ವಥಾ ಇಲ್ಲ

तत्वप्रकाशिका – नच वाच्यं प्रधानस्यापि सूक्ष्मत्वेनाव्यक्तत्वसम्भवात् कथमव्यक्तशब्दस्य परमात्मनि मुख्यतेति । विष्णोरतिसूक्ष्मत्वेनात्यन्तम-व्यक्तत्वात् तिशयेन प्रवृत्तिनिमित्तवत्येव शब्दस्य मुख्यत्वादिति भावः ।

ಪರಮಾತ್ಮನು ಹೇಗೆ ಸೂಕ್ಷ್ಮನೆಂದು ಹೇಳಿದಿರೋ ಅದರಂತೆ ಪ್ರಕೃತಿಯೂ ಕೂಡ ಅತ್ಯಂತ ಸೂಕ್ಷ್ಮವೇ ಆಗಿದೆ. ಆದ್ದರಿಂದ ಅವ್ಯಕ್ತತ್ವವು ಪ್ರಕೃತಿಯಲ್ಲಿಯೂ ಕೂಡ ಇರುವುದರಿಂದ

ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನೆಂದು ಹೇಗೆ ಹೇಳುತ್ತೀರಿ ? ಎಂದು ಪ್ರಶ್ನಿಸಬಾರದು. ಪ್ರಕೃತಿಯು ಎಷ್ಟು ಸೂಕ್ಷ್ಮವಾಗಿದೆಯೋ, ಅದಕ್ಕಿಂತಲೂ ಪರಮಾತ್ಮನು ಸೂಕ್ಷ್ಮನಾಗಿದ್ದಾನೆ. ಆದ್ದರಿಂದ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವಾದ ಅತಿಸೂಕ್ಷ್ಮತ್ವವು ಮುಖ್ಯವಾಗಿ ಪರಮಾತ್ಮನಲ್ಲೇ ಇರುವುದರಿಂದ ಅವ್ಯಕ್ತಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗಿ ಬರುತ್ತದೆ; ಹೊರತು ಪ್ರಕೃತಿಯಲ್ಲಿ ಬರುವುದಿಲ್ಲ.

ಮುಖ್ಯ ಸೂಕ್ಷ್ಮನೆನ್ನಲು ಏನು ಆಧಾರ ?

तत्वप्रकाशिका – कुतो विष्णोः मुख्यसूक्ष्मत्वं ? येन तस्य मुख्याव्यक्तत्वमिति तत्राऽऽह – यदिति ।।

ವಿಷ್ಣು ಮುಖ್ಯಸೂಕ್ಷ್ಮನೆಂಬ ವಿಷಯದಲ್ಲಿ ಯಾವ ಆಧಾರವೂ ಇರುವುದಿಲ್ಲ. ಒಂದು ವೇಳೆ ಆಧಾರವಿದ್ದಲ್ಲಿ, ಮುಖ್ಯವಾದ ಅವ್ಯಕ್ತಶಬ್ದವಾಚ್ಯನು ವಿಷ್ಣುವೇ ಆಗುತ್ತಿದ್ದನು? ಈ ಪ್ರಶ್ನೆಗೆ 'ಯತ್' ಇತ್ಯಾದಿ ವಾಕ್ಯದಿಂದ ಪ್ರಮಾಣವನ್ನು ಉದಾಹರಿಸುತ್ತಿದ್ದಾರೆ.

'ಏಷೋಽಣುರಾತ್ಮಾ' ಎಂಬುದೇ ಆಧಾರ

तत्वप्रकाशिका – ''यत्तल्लोकोत्तमं नित्यं विष्णोः स्वरूपं परमसूक्ष्मं वेदितव्यम्, 'एषोऽणुरात्मा चेतसा वेदितव्यः' इत्याद्यामनन्ति । यच्च पृथग्जना न विदुस्तदेतदुपायसिद्धा ज्ञानिनः पश्यन्ति'' इत्यर्थः ।

ಪಿಪ್ಪಲಾದಶಾಖೆಯ ಶ್ರುತಿಯಲ್ಲಿರುವ 'ಲೋಕಸಾರಂ' ಎಂಬ ಪದಕ್ಕೆ 'ಲೋಕಗಳಿಗಿಂತ ಉತ್ತಮನಾದ' ಎಂದರ್ಥ. 'ವೈಷ್ಣವಂ' ಎಂದರೆ 'ವಿಷ್ಣುವಿನ ಸ್ವರೂಪವನ್ನು' ಎಂದರ್ಥ. 'ಆಮನಂತಿ' ಎಂದರೆ 'ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ' ಎಂದು ಆಥರ್ವಣಿಕರು ಹೇಳುತ್ತಾರೆ. ''ಸಕಲ ಲೋಕಗಳಿಗಿಂತ ಉತ್ತಮನಾದ ನಿತ್ಯವಾದ ವಿಷ್ಣುವಿನ ಸ್ವರೂಪವು ಅತ್ಯಂತ ಸೂಕ್ಷ್ಮವೆಂದು ತಿಳಿಯಬೇಕು. 'ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ' 'ಅಣುಸ್ವರೂಪಿಯಾದ ಪರಮಾತ್ಮನನ್ನು ಬುದ್ಧಿಯಿಂದ ತಿಳಿಯಬೇಕು. ಇವೇ ಮೊದಲಾದ ಪ್ರಮಾಣಗಳು ವಿಷ್ಣುವನ್ನೇ ಪರಮಸೂಕ್ಷ್ಮವೆಂದು ಹೇಳುತ್ತಿವೆ. ಸಾಮಾನ್ಯಜನರಿಂದ ಈ ಸೂಕ್ಷ್ಮಸ್ವರೂಪವನ್ನು ತಿಳಿಯಲು

ಸಾಧ್ಯವಾಗುವುದಿಲ್ಲ. ಆದರೆ ಜ್ಞಾನಿಜನರು ಶ್ರವಣ-ಮನನಾದಿ ಸಾಧನೆಗಳಿಂದ ತಿಳಿಯುತ್ತಾರೆ.

ಜೀವಶಬ್ದವೂ ಸಹ ಪರಮಾತ್ಮನಲ್ಲಿಯೇ ಮುಖ್ಯ

ತತ್ವಪ್ರಕಾಶಿಕಾ – ಏವಂ ಜೀವಾದಿಶಬ್ದಪ್ರವೃತ್ತಿನಿಮಿತ್ತಾನಾಂ ಪ್ರಾಣಧಾರಣಾದೀನಾಂ ಭಗವತಿ ಮುಖ್ಯತ್ವೇನ ತಚ್ಛಬ್ದಾನಾಂ ತತ್ರ ಮುಖ್ಯತ್ವಂ ದ್ರಷ್ಟವ್ಯಮ್ ।

ಹೀಗೆ ಅವ್ಯಕ್ತಶಬ್ದವು ವಿಷ್ಣುವಿನಲ್ಲೇ ಮುಖ್ಯವಾಗಿರುವಂತೆ ಜೀವಾದಿಶಬ್ದಗಳೂ ಕೂಡ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ. ಏಕೆಂದರೆ ಜೀವಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಪ್ರಾಣಧಾರಣಾದಿಗಳು ಪರಮಾತ್ಮನಲ್ಲೇ ಮುಖ್ಯವಾಗಿರುತ್ತವೆ.

ಪರಮಾತ್ಮನೇ ಮುಖ್ಯ ಜೀವನು ಅಮುಖ್ಯ

ತತ್ವಪ್ರಕಾಶಿಕಾ – ತದುಕ್ತಮ್ 'ಸ ಜೀವನಾಮಾ ಭಗವಾನ್ ಪ್ರಾಣಧಾರಣಹೇತ್ತುತಃ । ಉಪಚಾರೇಣ ಜೀವಾಖ್ಯಾ ಸಂಸಾರಿಣಿ ನಿಗದ್ಯತೇ' ಇತ್ಯಾದಿ ।

ಪ್ರಾಣಧಾರಣ ಮೊದಲಾದ ಪ್ರವೃತ್ತಿನಿಮಿತ್ತಗಳು ಮುಖ್ಯವಾಗಿ ಇರುತ್ತವೆನ್ನಲು ಪ್ರಮಾಣ ಹೀಗಿವೆ - 'ಸ ಜೀವನಾಮಾ ಭಗವಾನ್ ಪ್ರಾಣಧಾರಣಹೇತುತಃ। ಉಪಚಾರೇಣ ಜೀವಾಖ್ಯಾ ಸಂಸಾರಿಣಿ ನಿಗದ್ಯತೇ' ಪರಮಾತ್ಮನು ಸಕಲಜೀವರ ಪ್ರಾಣವನ್ನು ಧಾರಣೆ ಮಾಡುತ್ತಾನಾದ್ದರಿಂದ ಜೀವನೆಂದು ಕರೆಸಿಕೊಳ್ಳುತ್ತಾನೆ. ಸಂಸಾರಿಯಾದ ಜೀವನಾದರೂ ಔಪಚಾರಿಕವಾಗಿ ಜೀವನೆಂದು ಕರೆಸಿಕೊಳ್ಳುತ್ತಾನೆ. ಇವೇ ಮೊದಲಾದ ಪ್ರಮಾಣಗಳಿವೆ.

ಪ್ರಕೃತಿಯೇಕೆ ಅವ್ಯಕ್ತವಲ್ಲ ?

ತತ್ವಪ್ರಕಾಶಿಕಾ – ನನ್ವಸ್ತು ವಿಷ್ಣೌ ಮುಖ್ಯಂ ಶಬ್ದಪ್ರವೃತ್ತಿನಿಮಿತ್ತಂ ಪ್ರಧಾನಾದಾವಪಿ ಕಿಞ್ಚಿದವ್ಯಕ್ತತ್ವಾದಿಸದ್ಭಾವಾತ್ 'ಅವ್ಯಕ್ತಾತ್ ಪುರುಷಃ ಪರಃ' ಇತ್ಯಾದೌ ತದ್ವಾಚ್ಯಂ ಕಿಂ ನ ಸ್ಯಾತ್ ? ಇತಿ ಚೇತ್ ।

ಪ್ರಶ್ನೆ - ವಿಷ್ಣುವಿನಲ್ಲಿ ಅವ್ಯಕ್ತಾದಿಶಬ್ದಗಳ ಪ್ರವೃತ್ತಿನಿಮಿತ್ತವು ಮುಖ್ಯವಾಗಿರಲಿ, ಆದರೆ ಪ್ರಧಾನಾದಿಗಳಲ್ಲಿಯೂ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಸೂಕ್ಷ್ಮತ್ವವು ಅಪ್ರಧಾನವಾಗಿ

ಇದ್ದೇ ಇರುತ್ತದೆ. ಅಂತಹ ಅಪ್ರಧಾನವಾದ ಅವ್ಯಕ್ತತ್ವ ಇರುವ ಕಾರಣ 'ಅವ್ಯಕ್ತಾತ್ ಪುರುಷಃ ಪರಃ' ಎಂಬ ಶ್ರುತಿಯಲ್ಲಿ ಅವ್ಯಕ್ತಶಬ್ದದಿಂದ ಪ್ರಕೃತಿಯೇ ವಾಚ್ಯವಾಗಬಹುದಲ್ಲವೇ?

ನಿಮ್ಮ ಅಭಿಪ್ರಾಯವೇನು ?

तत्वप्रकाशिका – तत् किं परमात्मनो मुख्यवाच्यत्वमङ्गीकृत्य, अमुख्यतयाऽन्यस्यापि वाच्यत्वं स्यादित्युच्यते ? उतान्यस्यैव ?

ಉತ್ತರ - ನಮ್ಮ ಪ್ರಶ್ನೆಗೆ ನೀವು ಉತ್ತರಿಸಬೇಕು. ಅವ್ಯಕ್ತಶಬ್ದದಿಂದ ಪ್ರಧಾನವು ವಾಚ್ಯವೆಂದು ಹೇಳುವ ನಿಮ್ಮ ಅಭಿಪ್ರಾಯವೇನು ? ಪರಮಾತ್ಮನು ಮುಖ್ಯವಾಗಿ ವಾಚ್ಯನಾಗಿದ್ದಾನೆಂದು ಒಪ್ಪಿ, ಪ್ರಧಾನವು ಅಮುಖ್ಯವಾಗಿ ವಾಚ್ಯವಾಗಿರುತ್ತದೆ ಎಂದೋ? ಅಥವಾ ಪ್ರಧಾನವೇ ಮುಖ್ಯವಾಗಿ ಅವ್ಯಕ್ತಶಬ್ದದಿಂದ ವಾಚ್ಯವಾಗಿದೆ ಎಂದೋ ?

ಪ್ರಕೃತಿಯು ಅಮುಖ್ಯಪ್ರತಿಪಾದ್ಯ

तत्वप्रकाशिका – आद्ये न विरोधः । न चोभयार्थत्वे वाक्यभेदः । प्रधानविशिष्टस्यैव परमात्मनः शब्दवाच्यत्वाभ्युपगमात् ।

ಮೊದಲನೆಯ ಪಕ್ಷದಲ್ಲಿ ನಮ್ಮ ವಿರೋಧವೇನೂ ಇರುವುದಿಲ್ಲ. ಇನ್ನು ಅವ್ಯಕ್ತಶಬ್ದಕ್ಕೆ ವಿಷ್ಣು ಹಾಗೂ ಪ್ರಧಾನ ಎಂಬ ಎರಡೂ ಅರ್ಥವನ್ನು ಒಪ್ಪಿದರೆ ವಾಕ್ಯಭೇದದೋಷ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ವಿಶಿಷ್ಟನಾದ ಪರಮಾತ್ಮನೇ ಅವ್ಯಕ್ತಶಬ್ದದಿಂದ ವಾಚ್ಯನಾಗುತ್ತಾನೆಂದು ನಾವು ಒಪ್ಪಿರುತ್ತೇವೆ.

ಮುಖ್ಯಪ್ರತಿಪಾದ್ಯ ಮಹಾವಿಷ್ಣು ಮಾತ್ರ

तत्वप्रकाशिका – द्वितीयं निराह – मुख्ये चेति ।। मुख्यतोऽव्यक्तादि-शब्दार्थवति विष्णावव्यक्तादिशब्दवाच्यतया सम्भवति, तत् परित्यागेनामुख्यतः शब्दार्थवतां प्रधानादीनामत्र वाच्यतया ग्रहणं न युक्तम् । मुख्यासम्भव एव गौणाश्रयस्य न्यायत्वा(प्राप्तत्वा)दिति भावः ।। २ ।।

ಎರಡನೆಯ ಪಕ್ಷವನ್ನು ನಿರಾಕರಿಸುವುದಕ್ಕಾಗಿ ಭಾಷ್ಯಕಾರರು 'ಮುಖ್ಯೇ ಚ' ಇತ್ಯಾದಿಯಾಗಿ ಹೇಳಿರುತ್ತಾರೆ. ಮುಖ್ಯವಾಗಿ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವು ಯಾವ ವಿಷ್ಣುವಿನಲ್ಲಿರುತ್ತದೋ, ಅಂತಹ ವಿಷ್ಣುವೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ. ಹೊರತು, ಎಲ್ಲಿ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವು ಅಮುಖ್ಯವಾಗಿರುತ್ತದೋ, ಅಂತಹ ಪ್ರಕೃತ್ಯಾದಿಗಳಲ್ಲಿ ಅವ್ಯಕ್ತಶಬ್ದವಾಚ್ಯತ್ವವನ್ನು ಮುಖ್ಯವಾಗಿ ಸರ್ವಥಾ ತಿಳಿಯಬಾರದು. ಏಕೆಂದರೆ ಮುಖ್ಯಾರ್ಥವೇ ಸಂಭವಿಸುತ್ತಿರುವಾಗ ಗೌಣವಾದ ಅಮುಖ್ಯಾರ್ಥವನ್ನು ಸ್ವೀಕರಿಸುವುದು ಸರ್ವಥಾ ನ್ಯಾಯಬದ್ಧವಾದುದಲ್ಲ.

ಭಾವದೀಪ

ಪರಮಮುಖ್ಯವೃತ್ತಿಯಿಂದ ಯಾರು ಪ್ರತಿಪಾದ್ಯರು ?

मुख्यत्वमिति ।। परममुख्यत्वमित्यर्थः ।

'ಮುಖ್ಯತ್ವಮ್' ಎಂಬ ಪದಕ್ಕೆ 'ಪರಮಮುಖ್ಯತ್ವ' ಎಂದರ್ಥ. ಅವ್ಯಕ್ತ ಮೊದಲಾದ ಶಬ್ದಗಳು ವಿಷ್ಣುವನ್ನು ಪ್ರತಿಪಾದನೆ ಮಾಡಲಿ. ಆದರೆ ಪರಮಮುಖ್ಯವೃತ್ತಿಯಿಂದಲೇ ಏಕೆ ಪ್ರತಿಪಾದನೆ ಮಾಡಬೇಕು ಎಂಬುದು ಇದರ ಅಭಿಪ್ರಾಯ.

ಅವ್ಯಕ್ತಶಬ್ದದ ತಾತ್ಪರ್ಯ ಮಹಾವಿಷ್ಣು

भावदीपः – एवं पदार्थानुक्त्वा तात्पर्योक्त्या उक्तशङ्कां निराह – युक्तमित्यादिना ।।

ಅವ್ಯಕ್ತಶಬ್ದದಿಂದ ಪ್ರತಿಪಾದ್ಯವಾದ ಅರ್ಥವನ್ನು ಹೇಳಿ ಇದರ ತಾತ್ಪರ್ಯವೂ ಕೂಡ ವಿಷ್ಣುವಿನಲ್ಲೇ ಯುಕ್ತವಾಗುತ್ತದೆಂದು ಹೇಳುತ್ತಾ ಹಿಂದಿನ ಆಶಂಕೆಯನ್ನು ಪರಿಹರಿಸಲು 'ಯುಕ್ತಮ್' ಇತ್ಯಾದಿ ವಾಕ್ಯವು ಹೊರಟಿದೆ.

'ನಚ' ಎಂಬ ಟೀಕಾವಾಕ್ಯದ ಸಂದರ್ಭ

भावदीपः – मुख्यमित्युक्तमुख्यपदतात्पर्यं व्यनक्ति – न चेत्यादिना ।।

ವಿಷ್ಣುವಿನಲ್ಲಿ ಅವ್ಯಕ್ತ ಮೊದಲಾದ ಶಬ್ದಗಳು ಮುಖ್ಯವಾಗಿ ಇರುತ್ತವೆಂದು ಹಿಂದೆ ಹೇಳಲಾಯಿತು. ಅದರ ತಾತ್ಪರ್ಯವನ್ನು ನಿರೂಪಣೆ ಮಾಡಲು 'ನಚ' ಇತ್ಯಾದಿ ವಾಕ್ಯವು ಹೊರಟಿದೆ.

ಪಿಪ್ಪಲಾದ ಶ್ಲೋಕದ ವ್ಯಾಖ್ಯಾನ

भावदीपः – लोकसारं लोकोत्तमम् । पदं स्वरूपम् 'उत्तमानां स्वरूपं तु पादशब्देन भण्यते, इत्युक्तेः । एषोऽणुरित्याथर्वणे । पृथग्जनाः पामरा इत्यर्थः । यच्च पृथग्जना न विदुः तदेतदिति तच्छब्दद्वयस्य च योजना । योगनिष्ठा उपायसिद्धाः । कवयो ज्ञानिनः । विन्दन्तीत्यस्य योगनिष्ठा इत्याद्युक्त्यनुरोधेनार्थमाह – पश्यन्तीति ।। साक्षात्कुर्वन्तीत्यर्थः ।। तदुक्तमिति ।। गीतातात्पर्ये द्वितीय इत्यर्थः।

ಭಾಷ್ಯದಲ್ಲಿ ಉಲ್ಲೇಖಿಸಿದ ಪಿಪ್ಪಲಾದಶಾಖೆಯ ಶ್ಲೋಕದಲ್ಲಿ 'ಲೋಕಸಾರಂ' ಎಂಬ ಪದವಿದೆ, ಇದರ ಅರ್ಥವನ್ನು ಟೀಕೆಯಲ್ಲಿ 'ಲೋಕೋತ್ತಮಮ್' ಲೋಕಗಳಿಗಿಂತ ಉತ್ತಮನಾದ ಎಂದು ಹೇಳಿದ್ದಾರೆ. 'ಪದಂ' ಎಂಬ ಪದದ ಅರ್ಥವನ್ನು 'ಸ್ವರೂಪಮ್' 'ವಿಷ್ಣುವಿನ ಸ್ವರೂಪ' ಎಂದು ಹೇಳಿರುತ್ತಾರೆ. 'ಉತ್ತಮಾನಾಂ ಸ್ವರೂಪಂ ತು ಪಾದಶಬ್ದೇನ ಭಣ್ಯತೇ' ಉತ್ತಮರ ಸ್ವರೂಪವನ್ನು ಪಾದಶಬ್ದದಿಂದ ಹೇಳುತ್ತಾರೆ ಎಂಬ ಮಾತಿನಂತೆ ಪದ ಹಾಗೂ ಪಾದ ಇವೆರಡು ಪರ್ಯಾಯ ಪದಗಳಾದ್ದರಿಂದ ಪದಶಬ್ದಕ್ಕೆ ಸ್ವರೂಪ ಎಂಬರ್ಥವನ್ನು ಹೇಳಬಹುದು. ಟೀಕೆಯಲ್ಲಿ ಉದಾಹರಿಸಿದ 'ಏಷೋऽಣುರಾತ್ಮ ಚೇತಸಾ ವೇದಿತವ್ಯಃ' ಎಂಬ ಮಾತು ಅಥರ್ವಣೋಪನಿಷತ್ತಿನಲ್ಲಿದೆ. 'ಪೃಥಗ್ಜನಾ' ಎಂಬ ಪದಕ್ಕೆ ಪಾಮರರು ಎಂದರ್ಥ. ಪಾಮರಜನರು ಪರಮಸೂಕ್ಷ್ಮನಾದ ಯಾವ ವಿಷ್ಣುವನ್ನು ತಿಳಿಯಲಾರರೋ ಅವನನ್ನು ಜ್ಞಾನಿಜನರು ಶ್ರವಣಮನನಾದಿ ಸಾಧನೆಗಳಿಂದ ತಿಳಿಯುತ್ತಾರೆ ಎಂಬುದಾಗಿ 'ತತ್' ಎಂಬ ಪದವನ್ನು ಪಿಪ್ಪಲಾದ ಶಾಖೆಯ ಶ್ಲೋಕದಲ್ಲಿ ಎರಡು ಬಾರಿ ಯೋಜನೆ ಮಾಡಿಕೊಳ್ಳಬೇಕು. ಶ್ಲೋಕದಲ್ಲಿರುವ 'ಯೋಗನಿಷ್ಠಾಃ' ಎಂಬ ಪದಕ್ಕೆ ಶ್ರವಣ-ಮನನಾದಿ ಉಪಾಯಗಳ ಸಿದ್ಧಿಯನ್ನು ಪಡೆದ 'ಕವಯಃ' ಜ್ಞಾನಿಗಳು 'ವಿಂದಂತಿ' ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ ಎಂದರ್ಥ. 'ಯೋಗನಿಷ್ಠಾಃ' ಎಂಬ ಪದವಿರುವುದರಿಂದ 'ವಿಂದಂತಿ' ಎಂಬ ಪದಕ್ಕೆ ಟೀಕೆಯಲ್ಲಿ 'ಪಶ್ಯಂತಿ' ಎಂದು ಅರ್ಥೈಸಿದ್ದಾರೆ. ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆಂಬುದು ಇದರ ಅಭಿಪ್ರಾಯ.

'ತದುಕ್ತಮ್' = ಗೀತಾತಾತ್ಪರ್ಯದಲ್ಲಿ 'ಸ ಜೀವನಾಮಾ' ಇತ್ಯಾದಿಯಾಗಿ ಹೇಳಿರುತ್ತಾರೆ.

ಯೋಗ, ರೂಢಿಗಳನ್ನು ಬೇರೆಡೆ ಹೇಳಬಹುದು

ಭಾವದೀಪಃ – मुख्यवाच्यत्वं परममुख्यवाच्यत्वम् ।। **अमुख्यतयेति** ।। परममुख्यवृत्त्यपेक्षया एवमुक्तिः । लोकसिद्धयोगरूढ्यादिरूपमुख्य-वृत्त्येत्यर्थः नतु लक्षणादिनेति भ्रमितव्यम् । लक्षणानाश्रयणादिति प्रागेवोक्तत्वात् । एवमग्रेऽपि बोध्यम् ।

'ಮುಖ್ಯವಾಚ್ಯತ್ವಂ' ಎಂಬ ಪದಕ್ಕೆ ಪರಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆಂದರ್ಥ. 'ಅಮುಖ್ಯತಯಾ' ಎಂಬುದಕ್ಕೆ ಪರಮಮುಖ್ಯವೃತ್ತಿಗಿಂತಲೂ ಅಮುಖ್ಯವಾದ ವೃತ್ತಿಯಿಂದ ಎಂದರ್ಥ. ಲೋಕಸಿದ್ಧವಾದ ಯೋಗ, ರೂಢಿ ಮೊದಲಾದ ಮುಖ್ಯವೃತ್ತಿಗಳಿಂದ ಎಂದಭಿಪ್ರಾಯವೇ ಹೊರತು, ಅಮುಖ್ಯವೃತ್ತಿ ಎಂಬ ಶಬ್ದಕ್ಕೆ ಲಕ್ಷಣಾದಿ ವೃತ್ತಿಯಿಂದ ಎಂಬ ಭ್ರಾಂತಿಯನ್ನು ಹೊಂದಬಾರದು. ಏಕೆಂದರೆ ಲೋಕದಲ್ಲಿರುವ ಶಬ್ದಗಳಿಗೆ ನಾವು ಲಕ್ಷಣಾವೃತ್ತಿಯನ್ನು ಅಂಗೀಕರಿಸಿಲ್ಲ ಎಂದು ಈ ಹಿಂದೆಯೇ ಹೇಳಿದ್ದಾಗಿದೆ. ಇದರಂತೆ ಮುಂದೆಯೂ ಕೂಡ ಅಮುಖ್ಯವೃತ್ತಿಯೆಂಬ ಶಬ್ದವು ಪ್ರಸಕ್ತವಾದರೆ ಪರಮಮುಖ್ಯವೃತ್ತಿಗಿಂತಲೂ ಅಮುಖ್ಯವಾದ ಯೋಗ, ರೂಢಿ ಮೊದಲಾದ ವೃತ್ತಿಗಳಿಂದ ಎಂಬರ್ಥವನ್ನು ತಿಳಿಯಬೇಕು.

ಶರೀರರೂಪಕವಿನ್ಯಸ್ತ ಇತ್ಯಾದಿ ಸೂತ್ರದ ತಾತ್ಪರ್ಯ

ಭಾವದೀಪಃ – शरीररूपकविन्यस्तगृहीतेरित्यंशतात्पर्यमाह – **प्रधानविशिष्टस्यैवेति**।।

'ಶರೀರರೂಪಕವಿನ್ಯಸ್ತಗೃಹಿತೇಃ' ಎಂಬ ಸೂತ್ರದ ಭಾಗದ ತಾತ್ಪರ್ಯವನ್ನು ಹೇಳಲು 'ಪ್ರಧಾನವಿಶಿಷ್ಟಸ್ಯೈವ' ಎಂಬ ವಾಕ್ಯವು ಹೊರಟಿದೆ.

ವಿಷ್ಣುವಿನಲ್ಲಿ ಮಹಾವೃತ್ತಿಯನ್ನೇ ಹೇಳಬೇಕು

ಭಾವದೀಪಃ – लोकसिद्धन्यायमाह – **मुख्यासम्भव इति** ।। यद्वा परममुख्यापेक्षया गौणेत्युक्तिः ।।२।।

ಲೋಕದಲ್ಲಿ ಸಿದ್ಧವಾದ ನ್ಯಾಯವನ್ನೇ 'ಮುಖ್ಯಾಸಂಭವೇ' ಎಂಬ ಮಾತಿನಿಂದ ಸಮರ್ಥಿಸುತ್ತಿದ್ದಾರೆ.

'ಗೌಣಾಶ್ರಯಸ್ಯ' ಎಂಬುದಕ್ಕೆ 'ಪರಮಮುಖ್ಯವೃತ್ತಿಗಿಂತಲೂ ಗೌಣವಾದ ವೃತ್ತಿಯಿಂದ' ಎಂದರ್ಥ. ಪರಮಮುಖ್ಯವೃತ್ತಿಯಿಂದಲೇ ವಾಚ್ಯತ್ವವು ಯುಕ್ತವಾಗುತ್ತಿರುವಾಗ ಯೋಗ, ರೂಢಿ ಮೊದಲಾದ ಅಮುಖ್ಯಾರ್ಥವನ್ನು ಸ್ವೀಕರಿಸಬಾರದು ಎಂಬುದು ನ್ಯಾಯಸಮ್ಮತವಾದ ಮಾತು.

ಬ್ರಹ್ಮಸೂತ್ರ

'ತದಧೀನತ್ವಾದರ್ಥವತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। तदधीनत्वादर्थवत् ।। ३ ।।

ಸೂತ್ರಾರ್ಥ - ಅವರತ್ವವನ್ನು ತಿಳಿಸುವ ಪಂಚಮ್ಯಾದಿ ಶಬ್ದಗಳು ಪರಬ್ರಹ್ಮನನ್ನೇ ಪ್ರತಿಪಾದನೆ ಮಾಡುತ್ತವೆ. ಏಕೆಂದರೆ ಪಂಚಮ್ಯಾದಿ ಪದಗಳ ಪ್ರವೃತ್ತಿನಿಮಿತ್ತವಾದ ಅವರತ್ವಾದಿಧರ್ಮಗಳು, ದುಃಖಿತ್ವ ಮೊದಲಾದವುಗಳು ಬ್ರಹ್ಮನ ಅಧೀನವಾಗಿರುತ್ತವೆ.

ಅರ್ಥ -- 'ದರ್ಶಯತಿ ಚ' ಎಂಬಲ್ಲಿರುವ 'ಚ' ಶಬ್ದವನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಪರಮಾತ್ಮನಲ್ಲೇ 'ಪರಾವರ', 'ದುಃಖೀ' 'ಬದ್ಧ' ಮೊದಲಾದ ಶಬ್ದಗಳ ಸಮನ್ವಯವು ಯುಕ್ತವಾಗುತ್ತದೆ. ಅರ್ಥವತ್ = ಪ್ರವೃತ್ತಿನಿಮಿತ್ತವಿರುವುದರಿಂದ ಸಾರ್ಥಕವಾಗಿವೆ. ಏಕೆಂದರೆ, ತದಧೀನತ್ವಾತ್ = ಪ್ರಧಾನಾದಿಗಳಲ್ಲಿರುವ ಪರಾವರತ್ವ ಮೊದಲಾದ ಧರ್ಮಗಳು ಭಗವದಧೀನವಾಗಿವೆ. ಆದ್ದರಿಂದ ಬೇರೆಡೆಯಿರುವ ಪ್ರವೃತ್ತಿನಿಮಿತ್ತಗಳ ಸ್ವಾಮಿಯಾದ್ದರಿಂದ ಭಗವಂತನು 'ಪರಾವರ' ಮೊದಲಾದ ಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ.

ಬ್ರಹ್ಮಸೂತ್ರಭಾಷ್ಯ

ದೇವರನ್ನು 'ದುಃಖೀ' 'ಬದ್ಧಃ' ಇತ್ಯಾದಿಯಾಗಿ ಕರೆಯಬಹುದು

ब्रह्मसूत्रभाष्यम् –

तदधीनत्वाच्चाव्यक्तत्वादीनां तस्यैवाव्यक्तत्वपरावरत्वादिकमर्थवत् ।

ಅನುವಾದ - ಅವ್ಯಕ್ತತ್ವಾದಿ ಧರ್ಮಗಳು ವಿಷ್ಣುವಿನ ಅಧೀನವಾಗಿರುವುದರಿಂದ ವಿಷ್ಣುವಿನಲ್ಲಷ್ಟೇ ಅವ್ಯಕ್ತತ್ವ, ಪರಾವರತ್ವ ಮೊದಲಾದ ಧರ್ಮಗಳು ಸಾರ್ಥಕವಾಗುತ್ತವೆ.

ಪ್ರತಿಪದಾರ್ಥ -- ವಿಷ್ಣುವಿನಲ್ಲೇ ಅವ್ಯಕ್ತ ಮೊದಲಾದ ಪ್ರಾತಿಪದಿಕಗಳು ಮುಖ್ಯವಾಗಿ ಬರುತ್ತವೆಂದು ಒಪ್ಪೋಣ. ಆದರೆ 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿ ಶ್ರುತವಾದ ಅವ್ಯಕ್ತಾದಿ ಶಬ್ದಗಳಿಂದ

ವಿಷ್ಣುವಾಚ್ಯನಾಗುತ್ತಾನೆಂದು ವಿವಕ್ಷಿಸಲಾಗದು. ಹಾಗಾದಲ್ಲಿ 'ಮಹತಃ ಪರಮವ್ಯಕ್ತಂ' ಎಂಬುದಾಗಿ ಮಹತ್‌ಪರತ್ವವನ್ನು ಅವ್ಯಕ್ತದಲ್ಲಿ ಹೇಳುತ್ತಿರುವ ಶ್ರುತಿಯು ಅದೇ ರೀತಿಯಾಗಿ 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿ ಅವ್ಯಕ್ತಕ್ಕೆ ಅವರತ್ವವನ್ನು ಹೇಳುತ್ತಿರುವ ಪಂಚಮಿ ಶ್ರುತಿಯು, 'ಸೋಽವರಃ' ಎಂಬಲ್ಲಿ ನೇರವಾಗಿ ಅವ್ಯಕ್ತಕ್ಕೆ ಅವರತ್ವವನ್ನು ಹೇಳುತ್ತಿರುವ ಶ್ರುತಿಯು ಮತ್ತು 'ಜೀವಾ ಏವ ತು ದುಃಖಿನಃ ಕಾರ್ಯಕಾರಣಬದ್ಧೌ' ಎಂದು ದುಃಖಿತ್ವ, ಬದ್ಧತ್ವ ಮೊದಲಾದವುಗಳನ್ನು ಹೇಳುತ್ತಿರುವ ಶ್ರುತಿಯು 'ನಿರನಿಷ್ಟೋ ನಿರವದ್ಯಃ' ಎಂಬ ಶ್ರುತಿಯು ಪರಮಾತ್ಮನಲ್ಲಿ ಅತ್ಯಂತ ಅಸಂಭಾವಿತವಾಗುತ್ತದೆ. ಮತ್ತು ಈ ಎಲ್ಲಾ ಶ್ರುತಿಗಳಿಗೆ ನೈರರ್ಥ್ಯವು ಬರಬೇಕಾಗುತ್ತದೆ. ಈ ಬಾಧಕಗಳಿರುವುದರಿಂದ ಅವ್ಯಕ್ತಾದಿಶಬ್ದಗಳಿಂದ ಅಮುಖ್ಯವಾದರೂ ಕೂಡ ಪ್ರಧಾನಾದಿಗಳನ್ನೇ ಅರ್ಥವನ್ನಾಗಿ ಸ್ವೀಕರಿಸಬೇಕಲ್ಲವೇ? ಈ ಆಶಂಕೆಯನ್ನು ಪರಿಹರಿಸಲು ಮುಂದಿನ ಸೂತ್ರ ಹೊರಟಿದೆ. –

ತದಧೀನತ್ವಾತ್ ಅರ್ಥವತ್ = ಪ್ರಧಾನಾದಿ ಜಗತ್ತು ಭಗವದ-ಧೀನವಾಗಿರುವುದರಿಂದ ಭಗವಂತನಲ್ಲಿಯೇ ಸಾರ್ಥಕವಾಗಿವೆ.

ಅವ್ಯಕ್ತತ್ವಾದೀನಾಂ = ಅವ್ಯಕ್ತತ್ವ ಮೊದಲಾದ ಧರ್ಮಗಳೆಲ್ಲವೂ, ತದಧೀನತ್ವಾಚ್ಚ = ವಿಷ್ಣುವಿನ ಅಧೀನವಾಗಿರುವುದರಿಂದಲೂ, ತಸ್ಯೈವ = ಮಹಾವಿಷ್ಣುವಿನಲ್ಲಿಯೇ, ಅವ್ಯಕ್ತತ್ವ = ಅವ್ಯಕ್ತತ್ವವು, ಪರಾವರತ್ವಾದಿಕಂ = ಪರಾವರತ್ವ ಮೊದಲಾದ ಧರ್ಮಗಳು, ಅರ್ಥವತ್ = ಸಾರ್ಥಕವಾಗುತ್ತವೆ.

ಶಬ್ದ ಪ್ರಯೋಗದ ಕ್ರಮ

ब्रह्मसूत्रभाष्यम् – 'यदधीनो गुणो यस्य तद्गुणी सोऽभिधीयते ।
यथा जीवः परात्मेति यथा राजा जयीत्यपि'

इति च स्कान्दे ।।३।।

ಅನುವಾದ- ಯಾವುದರ ಗುಣವು ಯಾರ ಅಧೀನವೋ, ಅವರೇ ಅಂತಹ ಗುಣಗಳುಳ್ಳವನೆಂದು ಕರೆಸಿಕೊಳ್ಳುತ್ತಾನೆ. ಉದಾ: - ಜೀವನಲ್ಲಿದ್ದು ಜೀವನ ಗುಣಗಳಿಗೆ ನಿಯಾಮಕನಾದ್ದರಿಂದ, ಪರಮಾತ್ಮನೇ 'ಜೀವ' ಎಂದು ಕರೆಸಿಕೊಳ್ಳುತ್ತಾನೆ. ಭೃತ್ಯನು ಗೆದ್ದಾಗ ರಾಜನು 'ಜಯೀ' ಎಂದು ಕರೆಸಿಕೊಳ್ಳುತ್ತಾನೆ. ಹೀಗೆ ಸ್ಕಾಂದ ಪುರಾಣವು ಹೇಳಿದೆ.

ಪ್ರತಿಪದಾರ್ಥ -- ಪ್ರಧಾನ ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತಕ್ಕೆ ಪ್ರೇರಕನಾದ್ದರಿಂದ ಈಶ್ವರನು ಅವರ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಿದ್ದನು. ಒಂದು ವೇಳೆ ಅನ್ಯಗತವಾದ ಶಬ್ದಪ್ರವೃತ್ತಿನಿಮಿತ್ತಕ್ಕೆ ಪ್ರೇರಕನಾದ ಈಶ್ವರನಲ್ಲಿ ಅವರಾದಿ ಶಬ್ದಗಳು ಇರುವುದಾದರೆ, ಇದೇ ಇನ್ನು ಸಿದ್ಧವಾಗಿಲ್ಲವಲ್ಲ? ಎಂಬ ಪ್ರಶ್ನೆಗೆ ವ್ಯಾಪ್ತಿಯನ್ನು ಹೇಳುವ ಮೂಲಕ ಅನುಮಾನದಿಂದ ಸಮರ್ಥಿಸುತ್ತಿದ್ದಾರೆ. –

ಯದಧೀನಃ = ಧರ್ಮಿವಾಚಕವಾದ ಶಬ್ದದ ಪ್ರವೃತ್ತಿನಿಮಿತ್ತವೆಂಬ, ಗುಣಃ = ಗುಣವು, ಯದಧೀನಃ = ಯಾರ ಅಧೀನವಾಗಿದೆಯೋ, ಸಃ = ಅವನು, ತದ್ಗುಣ = ಆ ಗುಣವುಳ್ಳವನೆಂದು, ಅಭಿಧೀಯತೇ = ಕರೆಸಿಕೊಳ್ಳುತ್ತಾನೆ. ಯಥಾ = ವೈದಿಕವಾದ ಹಾಗೂ ಲೌಕಿಕವಾದ ಎರಡು ಬಗೆಯ ದೃಷ್ಟಾಂತಗಳು ಹೀಗಿವೆ - ಪರಾತ್ಮಾ = ವಿಷ್ಣುವು, ಜೀವಃ = 'ಅನೇನ ಜೀವೇನ' ಎಂಬ ಶ್ರುತಿಯಲ್ಲಿರುವ ಜೀವ ಎಂಬ ಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಗುಣಕ್ಕೆ ನಿಯಾಮಕನಾದ್ದರಿಂದ, ಜೀವಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. ಯಥಾ = ಹೇಗೆಂದರೆ, ರಾಜಾ ಜಯೀ = ಭೃತ್ಯನು ಜಯಶೀಲನಾದರೆ, ರಾಜನು ಜಯಿಸಿದನು, ಇತ್ಯಪಿ = ಈ ಪ್ರಯೋಗವೂ ಕೂಡ ಲೋಕದಲ್ಲಿ ಕಾಣಿಸುತ್ತದೆ. ಇತಿ ಚ = ಹೀಗೆ, ಸ್ಕಾಂದೇ = ಸ್ಕಾಂದಪುರಾಣದಲ್ಲಿ ಹೇಳಲಾಗಿದೆ.

ತತ್ತ್ವಪ್ರದೀಪ

ಯಾರು ಅಮೃತನೋ, ಅವನೇ ಮೃತ್ಯು

तत्त्वप्रदीपः – तदधीनत्वादर्थवत् ।। तदधीनत्वाच्चाव्यक्तादेरव्यक्तपरावरत्वादि-धर्माणां तस्यैवाव्यक्तत्वादिधर्मजातं मुख्यम् । अतस्तस्यैवाव्यक्तादि-शब्दजातमर्थवत् । अव्यक्तस्थं तद्रूपमव्यक्तस्याप्यव्यक्तत्वं महतः परत्वं चाऽपादयतीति 'महतः परमव्यक्तम्' इत्युच्यते । तदेव तस्य पुरुषादवरत्वं साधयतीत्यवरशब्दार्थः । नतु स्वयमवरत्वात् । यथाऽमृतत्वापादकत्वादमृतमि-त्युच्यते मृतिशीलत्वापादकत्वाच्च मृत्युरिति, एवम् ।।

'ತದಧೀನತ್ವಾದರ್ಥವತ್' ಎಂಬ ಸೂತ್ರದ ಭಾಷ್ಯಾಭಿಪ್ರಾಯ ಹೀಗಿದೆ - ಶ್ರೀಹರಿಯ ಅಧೀನವಾಗಿರುವುದರಿಂದ ಅವ್ಯಕ್ತಾದಿಶಬ್ದಗಳಿಂದ ಪ್ರತಿಪಾದ್ಯವಾದ ಸೂಕ್ಷ್ಮತ್ವಾದಿಗುಣಗಳು ಪರಾವರತ್ವಾದಿ ಧರ್ಮಗಳು ವಿಷ್ಣುವಿನಲ್ಲಿಯೇ ಯುಕ್ತವಾಗುತ್ತವೆ. ಆದ್ದರಿಂದ ಅವನಲ್ಲಿಯೇ ಅವ್ಯಕ್ತ ಮೊದಲಾದ ಶಬ್ದಗಳ ಸಮೂಹವು ಸಾರ್ಥಕವಾಗುತ್ತವೆ. ಅವ್ಯಕ್ತತತ್ವದಲ್ಲಿ ನೆಲೆಸಿರುವ ಕಾರಣ, ಮತ್ತು ಅವ್ಯಕ್ತರೂಪದಲ್ಲಿರುವ ಪ್ರಕೃತಿಗೆ ಅವ್ಯಕ್ತತ್ವವನ್ನು ನೀಡುತ್ತಾನಾದ್ದರಿಂದ ಪರಮಾತ್ಮನು 'ಮಹತಃ ಪರಃ' ಎಂದು ಕರೆಸಿಕೊಳ್ಳುತ್ತಾನೆ. ಆದ್ದರಿಂದ ಶ್ರುತಿಯಲ್ಲಿ 'ಮಹತಃ ಪರಮವ್ಯಕ್ತಮ್' ಎಂದು ಹೇಳಲಾಗಿದೆ. ಆಗಲೇ ಅವನಿಗೆ ಪುರುಷಾದವರತ್ವವನ್ನು ಸಾಧನೆ ಮಾಡುವುದರಿಂದ 'ಅವರ' ಎಂದು ಕರೆಯಲಾಗುತ್ತದೆ. ಪರಮಾತ್ಮನು ಸ್ವತಃ ತಾನು ಅವರನಾಗಿರುವುದರಿಂದ 'ಅವರ' ಎಂದು ಕರೆಸಿಕೊಳ್ಳಲಾರ. 'ಅಮೃತತ್ವ' ಎಂಬ ಧರ್ಮವಿರುವುದರಿಂದ ಪರಮಾತ್ಮನು 'ಅಮೃತ' ಎಂದು ಕರೆಸಿಕೊಳ್ಳುತ್ತಾನೆ. ಮರಣಶೀಲರಾದ ಜೀವರಿಗೆ ನಿಯಾಮಕನಾದ್ದರಿಂದ 'ಮೃತ್ಯು' ಎಂದೂ ಕೂಡ ಕರೆಸಿಕೊಳ್ಳುತ್ತಾನೆ.

ವಿವರಣೆ - ಒಬ್ಬನೇ ಪರಮಾತ್ಮನು ಅವ್ಯಕ್ತತತ್ವಕ್ಕಿಂತ ಶ್ರೇಷ್ಠನು ಪುರುಷನಿಗಿಂತ ನೀಚನೂ ಆಗುವುದು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ ಇಲ್ಲಿ ಉತ್ತರಿಸಲಾಗಿದೆ. ಪ್ರಕೃತಿಗೆ ಅವ್ಯಕ್ತತ್ವವನ್ನು ನೀಡುವುದರಿಂದ ಮತ್ತು ಅವ್ಯಕ್ತನಾಗಿ ಅಲ್ಲಿ ನೆಲೆಸಿರುವುದರಿಂದ ಅವ್ಯಕ್ತತತ್ವಕ್ಕಿಂತಲೂ ಇವನು ಶ್ರೇಷ್ಠ ಎಂದು ಕರೆಸಿಕೊಳ್ಳುತ್ತಾನೆ. ಆದೇ ಅವ್ಯಕ್ತವು ಪುರುಷನೆನಿಸಿದ ಪರಮಾತ್ಮನಿಗಿಂತ ನೀಚವಾಗಿದೆ. ಇಂಥ ಪ್ರಕೃತಿಯಲ್ಲಿ ನೀಚತ್ವವನ್ನು ತಂದು ಕೊಡುವವನಾದ್ದರಿಂದ ತಾನೂ

ಕೂಡ ಅವರನಾಗುತ್ತಾನೆ ಎಂದು ಅರ್ಥ. ಸ್ವತಃ ತಾನೇ ಅವರನಾಗುತ್ತಾನಾದ್ದರಿಂದ ಅವರನೆಂದು ತಿಳಿಯಬಾರದು.

ಜೀವ ಎನಿಸುವಂತೆ ದುಃಖೀ ಎನಿಸುತ್ತಾನೆ

तत्वप्रदीपः – ''यथा जीवः परात्मेति'' । अयमर्थः । यथा जीवगुणस्य प्राणधारणस्य परमात्माधीनत्वात् परमात्मा जीव इत्युच्यते ''अनेन जीवेनाऽत्मनाऽनुप्रविश्य'' इत्यादौ । नतु तत्र संसारिप्रवेशविवक्षा । ''तत्तेज ऐक्षत'', ''ता आप ऐक्षन्त'', ''इमास्तिस्रो देवताः'' इत्यादिना पूर्वमेव तत्र संसारिस्थित्यवगमात । अनेनैव न्यायेन दुःखित्वादिशब्दा अपि परमात्मनि परममुख्यत्वेन व्युत्पादिता भवन्ति । स्वातन्त्र्यस्य प्रवृत्तिहेतोस्तत्रैव विद्यमानात्वात् ।।

'यथा जीवः परात्मा' ಎಂಬ ಸ್ಕಾಂಧಪುರಾಣದ ಅಭಿಪ್ರಾಯ ಹೀಗಿದೆ - ಈ ವಚನದಲ್ಲಿ ಜೀವ ಎಂಬ ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ. ಹೇಗೆಂದರೆ - ಜೀವನ ಗುಣವೆನಿಸಿದ ಪ್ರಾಣಧಾರಣೆಯು ಪರಮಾತ್ಮನ ಅಧೀನವಾಗಿದೆ. ಆದ್ದರಿಂದಲೇ 'ಅನೇನ ಜೀವೇನಾऽತ್ಮನಾऽನುಪ್ರವಿಶ್ಯ' ಎಂಬಲ್ಲಿ ಜೀವ ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. ಹೊರತು, ತಾನೇ ಸಂಸಾರಿಯಾಗಿ ಹುಟ್ಟಿದನು ಎಂಬ ಕಾರಣದಿಂದ ಜೀವ ಎಂದು ಕರೆಸಿಕೊಳ್ಳುವುದಿಲ್ಲ. ಏಕೆಂದರೆ 'ತತ್ತೇಜ ಐಕ್ಷತ', 'ತಾ ಆಪ ಐಕ್ಷಂತ' 'ಇಮಾಸ್ತಿಸ್ರೋ ದೇವತಾಃ' ಇತ್ಯಾದಿ ವಾಕ್ಯಗಳಿಂದ ಮೊದಲೇ ಸಂಸಾರದಲ್ಲಿ ಶ್ರೀಹರಿಯು ಇದ್ದನು ಎಂದು ತಿಳಿಯುತ್ತಿದೆ. ಇದೇ ನ್ಯಾಯದಿಂದ ದುಃಖಿತ್ವಾದಿ ಶಬ್ದಗಳನ್ನೂ ಕೂಡ ಪರಮಾತ್ಮನಲ್ಲಿ ಪರಮಮುಖ್ಯವೃತ್ತಿಯಿಂದ ಸಮನ್ವಯ ಮಾಡಿದಂತಾಯಿತು. ಏಕೆಂದರೆ 'ಸ್ವಾತಂತ್ರ್ಯ' ಎಂಬ ಪ್ರವೃತ್ತಿನಿಮಿತ್ತವು ಅವ್ಯಕ್ತ ಜೀವ ಮೊದಲಾದ ಶಬ್ದಗಳಲ್ಲಿರುವಂತೆ 'ದುಃಖೀ' ಮೊದಲಾದ ಶಬ್ದಗಳಲ್ಲೂ ಕೂಡ ಇರುತ್ತದೆ.

ತತ್ವಪ್ರಕಾಶಿಕಾ

'ಅವ್ಯಕ್ತಾತ್ ಪುರುಷಃ ಪರಃ' ಎಂಬುದು ಮಾತ್ರ ಪ್ರಕೃತಿ ಪರವೇ?

नन्वस्त्वेवं परमात्मन्येवाव्यक्तादिशब्दानां मुख्यत्वम् । तथापि 'अव्यक्तात् पुरुषः परः' इत्यादौ प्रधानाद्येवोच्यते; न विष्णुः ।

ಹಿಂದಿನ ಸೂತ್ರದಲ್ಲಿ ಹೇಳಿದಂತೆ ಅವ್ಯಕ್ತ, ಜೀವ ಇವೇ ಮೊದಲಾದ ಶಬ್ದಗಳು ಮುಖ್ಯವಾಗಿ ವಿಷ್ಣುವನ್ನೇ ಪ್ರತಿಪಾದನೆ ಮಾಡಲಿ. ಆದರೂ ಕೂಡ 'ಅವ್ಯಕ್ತಾತ್ ಪುರುಷಃ ಪರಃ' ಎಂಬ ಶ್ರುತಿಯಲ್ಲಿರುವ ಅವ್ಯಕ್ತಶಬ್ದ ಮಾತ್ರ ಪ್ರಕೃತಿಯನ್ನೇ ಪ್ರತಿಪಾದನೆ ಮಾಡುತ್ತದೆ ಹೊರತು, ವಿಷ್ಣುವನ್ನಲ್ಲ.

ಇದೊಂದು ಶ್ರುತಿ ಹರಿಪರ ಬೇಡ

तत्वप्रकाशिका – अव्यक्तादीनां महत्परत्वस्य, पुरुषावरत्वस्य, दुःखि-बद्धत्वादेश्च श्रवणात् । तस्य च प्रधानादावेव सम्भवात् । सर्वप्रमाणविरोधेन परमात्मन्यसम्भवात् ।

ಏಕೆಂದರೆ ಅವ್ಯಕ್ತ ಮೊದಲಾದ ಪದಾರ್ಥಗಳಿಗೆ ಮಹತ್ತತ್ವಕ್ಕಿಂತ ಉತ್ತಮತ್ವವನ್ನು, ಪುರುಷನಿಗಿಂತ ಅವರತ್ವವನ್ನು ಶ್ರುತಿಯು ಹೇಳುತ್ತಿದೆ. ಅಷ್ಟೇ ಅಲ್ಲದೇ ದುಃಖಿತ್ವ, ಬದ್ಧತ್ವ ಮೊದಲಾದವುಗಳೂ ಕೂಡ ಶ್ರುತವಾಗಿವೆ. ಈ ಎಲ್ಲಾ ಧರ್ಮಗಳು ಪ್ರಕೃತಿಯಲ್ಲೇ ಸಂಭವಿಸುತ್ತವೆ. ಅನೇಕ ಪ್ರಮಾಣಗಳ ವಿರೋಧವಿರುವ ಕಾರಣ ಪರಮಾತ್ಮನಲ್ಲಿ ಸರ್ವಥಾ ಕೂಡುವುದಿಲ್ಲ.

ಈ ಅಧಿಕಾಕ್ಷೇಪದ ಪರಿಹಾರಕ್ಕಾಗಿ ಈ ಸೂತ್ರ

तत्वप्रकाशिका – अतो विष्णोः मुख्यार्थत्वेऽपि तद्ग्रहणे परावरत्वादिश्रुतेः नैरर्थ्यादमुख्यमपि प्रधानादि ग्राह्यम्, इत्याशङ्कां परिहरत्सूत्रं पठित्वा व्याचष्टे – तदधीनत्वादिति ।।

ಆದ್ದರಿಂದ ಅವ್ಯಕ್ತ ಮೊದಲಾದ ಶಬ್ದಗಳ ಮುಖ್ಯಾರ್ಥ ವಿಷ್ಣುವೇ ಆಗುತ್ತಾನೆ. ಆದರೂ ಕೂಡ ಈ ಶ್ರುತಿಯಲ್ಲಿ ಅವ್ಯಕ್ತಶಬ್ದದಿಂದ ಮಹಾವಿಷ್ಣುವನ್ನು ಸ್ವೀಕರಿಸಿದರೆ ಪರತ್ವಶ್ರುತಿ ಹಾಗೂ ಅವರತ್ವ ಪ್ರತಿಪಾದಕ ಶ್ರುತಿಗೆ ವೈಯರ್ಥ್ಯವು ಬರುತ್ತದೆ. ಹಾಗಾಗಿ ಅವ್ಯಕ್ತಶಬ್ದಕ್ಕೆ ಪ್ರಕೃತಿಯು ಅಮುಖ್ಯಾರ್ಥವಾದರೂ ಸ್ವೀಕರಿಸಬೇಕಲ್ಲವೇ? ಈ ಆಕ್ಷೇಪವನ್ನು ಪರಿಹರಿಸುವ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ತದಧೀನತ್ವಾತ್' ಇತ್ಯಾದಿಯಾಗಿ.

'ಅವ್ಯಕ್ತಾತ್ ಪುರುಷಃ ಪುರಃ' ಎಂಬುದೂ ಹರಿಪರವೇ?

तत्वप्रकाशिका – नाव्यक्तादिशब्दैः परमात्मनो वाच्यत्वग्रहणे परावरत्वादि-श्रुतिनैरर्थ्यं, येन मुख्यार्थं परित्यज्य अमुख्यार्थाभ्युपगतिः ।

ಅವ್ಯಕ್ತ ಮೊದಲಾದ ಶಬ್ದಗಳಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆಂದು ಮುಖ್ಯಾರ್ಥವನ್ನು ಸ್ವೀಕರಿಸಿದರೂ ಪರತ್ವಶ್ರುತಿ ಹಾಗೂ ಅವರತ್ವ ಪ್ರತಿಪಾದಕ ಶ್ರುತಿಗಳಿಗೆ ವೈಯರ್ಥ್ಯವು ಬರುವುದಿಲ್ಲ. ಹಾಗೆ ವೈಯರ್ಥ್ಯವು ಬರುವುದಾದಲ್ಲಿ ಅವ್ಯಕ್ತಾದಿಶಬ್ದಗಳಿಗೆ ಮುಖ್ಯಾರ್ಥವನ್ನು ಬಿಟ್ಟು ಅಮುಖ್ಯವಾದ ಪ್ರಕೃತಿ ಎಂಬರ್ಥವನ್ನೇ ಒಪ್ಪಬೇಕಾಗಿತ್ತು.

ಅವರತ್ವ ದುಃಖಿತ್ವಾದಿಗಳು ಭಗವದಧೀನ

तत्वप्रकाशिका – किं नाम ? तस्मिन्नैवावरत्वादिवाचिशब्दजातमर्थवत्। प्रधानादिगतपरावरत्वादिधर्माणां भगवदधीनत्वात् ।

ಮತ್ತೇನೆಂದರೆ ಅವರತ್ವ, ದುಃಖಿತ್ವ ಮೊದಲಾದ ಧರ್ಮಗಳನ್ನು ಪ್ರತಿಪಾದನೆ ಮಾಡುವ ಶಬ್ದಗಳೆಲ್ಲವೂ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಾ ಸಾರ್ಥಕವಾಗುತ್ತವೆ. ಏಕೆಂದರೆ ಪ್ರಕೃತಿ ಮೊದಲಾದ ಪದಾರ್ಥಗಳಲ್ಲಿ ಇರುವಂತಹ, ಪರತ್ವ, ಅವರತ್ವ, ದುಃಖಿತ್ವ ಮೊದಲಾದ ಧರ್ಮಗಳೆಲ್ಲವೂ ಭಗವಂತನ ಅಧೀನವಾಗಿರುತ್ತವೆ. ಭಗವದಧೀನವಾಗಿರುವುದರಿಂದ ಅವರಾದಿ ಶಬ್ದಗಳಿಂದಲೂ ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆ.

ಸ್ವಾತಂತ್ರ್ಯವು ಶಬ್ದಪ್ರಯೋಗಕ್ಕೆ ನಿಮಿತ್ತ

तत्वप्रकाशिका – 'अन्यगतशब्दार्थनियन्तृत्वं' 'तदधिकरणत्वं' चेति द्विधा हि प्रवृत्तिनिमित्तम् ।

ಅನ್ಯಗತಶಬ್ದಾರ್ಥನಿಯಂತೃತ್ವ, ಮತ್ತು ತದಧಿಕರಣತ್ವ ಎಂಬುದಾಗಿ ಎರಡು ಕ್ರಮದಲ್ಲಿ ಶಬ್ದಗಳು ಪ್ರವೃತ್ತವಾಗುತ್ತವೆ. ಬೇರೆ ಪದಾರ್ಥಗಳಲ್ಲಿರುವ ಆಯಾ ಶಬ್ದಾರ್ಥಗಳನ್ನು ನಿಯಮನ ಮಾಡುವಿಕೆ ಅಥವಾ ಆ ಧರ್ಮಗಳಿಗೆ ಅಧಿಕರಣವಾಗಿರುವಿಕೆಯೆಂಬ ಎರಡು ಬಗೆಯ ಧರ್ಮಗಳಿದ್ದಲ್ಲಿ ಆಯಾ ಶಬ್ದಗಳನ್ನು ಪ್ರಯೋಗಿಸಬಹುದು.

ಪರಮಾತ್ಮನು ದುಃಖೀ ಎನಿಸುತ್ತಾನೆ ಆದರೆ ದುಃಖವಿಲ್ಲ

तत्वप्रकाशिका – तत्र परमात्मनो 'निरनिष्टो निरवद्यः' इत्यादिनावरत्वादि दोषात्यस्मृष्टिनियमात्, तदन्यथानुपपत्त्या तत्तन्नियामकत्वेन तत्तच्छब्द-वाच्यताऽपातात् ।

ಈ ಎರಡುವಿಧ ಪ್ರವೃತ್ತಿನಿಮಿತ್ತಗಳಲ್ಲಿ ಪರಮಾತ್ಮನು ಅನ್ಯಗತಶಬ್ದಾರ್ಥನಿಯಾಮಕತ್ವ ಎಂಬ ಕಾರಣದಿಂದ ಆಯಾ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ. ಅದು ಹೀಗೆ - 'ನಿರನಿಷ್ಟೋ ನಿರವದ್ಯಃ' ಇತ್ಯಾದಿ ಶ್ರುತಿಗಳು ಪರಮಾತ್ಮನು ಅವರತ್ವಾದಿ ದೋಷಗಳಿಂದ ರಹಿತನಾಗಿದ್ದಾನೆಂದು ಪ್ರತಿಪಾದನೆ ಮಾಡುತ್ತಿವೆ. ದೋಷವಿದೂರನೆಂಬ ಅರ್ಥವನ್ನು ಬಿಟ್ಟು 'ದುಃಖೀ' ಮೊದಲಾದ ಬೇರೆ ಪ್ರಕಾರದಿಂದ ಶ್ರುತಿಯನ್ನು ಸಮರ್ಥಿಸಲು ಸಾಧ್ಯವಿಲ್ಲ. ಆದರೆ ಶಬ್ದಗಳು ದೋಷವನ್ನು ಪ್ರತಿಪಾದನೆ ಮಾಡುತ್ತಿವೆ. ಈ ಉಭಯವಿಧ ಅನ್ಯಥಾನುಪಪತ್ತಿಯಿಂದ ಆಯಾ ದೋಷಗಳಿಗೆ ಭಗವಂತನು ನಿಯಾಮಕನಾಗಿದ್ದಾನೆಂದು ಹೇಳಬೇಕು. ಆದ್ದರಿಂದಲೇ ಆಯಾ ಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗುತ್ತಾನೆ.

ದೋಷವಾಚಕಶಬ್ದಗಳೂ ಹರಿಪರವೇ ?

तत्वप्रकाशिका – नच तदवाच्यतयाऽन्यथोपपत्तिः । 'नामानि सर्वाणि यमाविशन्ति' इत्यादिश्रुतिविरोधात् ।

ಅವರಾದಿ ಶಬ್ದಗಳಿಂದ ಪರಮಾತ್ಮನು ವಾಚ್ಯನೇ ಆಗದ ಕಾರಣ ಅನ್ಯಥಾ ಉಪಪನ್ನ-ವಾಗುತ್ತದಲ್ಲವೇ? ಹೀಗೆ ಪ್ರಶ್ನಿಸಬಾರದು. ಏಕೆಂದರೆ 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯ ವಿರೋಧ ಬರುತ್ತದೆ. ಸಕಲಶಬ್ದಗಳು ಪರಮಾತ್ಮನನ್ನು ಪ್ರತಿಪಾದನೆ

ಮಾಡುತ್ತಿವೆಯೆಂದು ಈ ಶ್ರುತಿಯು ಹೇಳುತ್ತಿರುವುದರಿಂದ ದೋಷವಾಚಕ ಶಬ್ದಗಳಿಂದ ಪರಮಾತ್ಮನು ಪ್ರತಿಪಾದ್ಯನಾಗುವುದಿಲ್ಲವೆಂದು ಹೇಳಲಾಗದು.

ಯಾವ ಶಬ್ದದಲ್ಲಿಯೂ ಸಂಕೋಚ ಬೇಡ

तत्वप्रकाशिका – नच सङ्कोचः । 'सर्वाणि' इत्यस्य निरवकाशत्वात्, बाधकाभावाच्चेति भावः ।

'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯಲ್ಲಿರುವ ಸರ್ವ ಪದಕ್ಕೆ ದೋಷವಾಚಕ ಶಬ್ದಗಳನ್ನು ಬಿಟ್ಟು ಎಂದು ಸಂಕೋಚ ಮಾಡಬಹುದಲ್ಲವೇ? ಎಂದು ಪ್ರಶ್ನಿಸಬಾರದು. 'ಸರ್ವಾಣಿ' ಎಂಬ ಪದವು ನಿರವಕಾಶವಾಗಿದೆ. ಮತ್ತು ಅಸಂಕುಚಿತವಾಗಿ ಸಕಲಶಬ್ದಗಳನ್ನು 'ಸರ್ವ' ಪದದಿಂದ ವಿವಕ್ಷಿಸಿದಾಗ ಯಾವುದೇ ಬಾಧಕಗಳೂ ಕೂಡ ಬರುತ್ತಿಲ್ಲ.

ಎರಡು ಬಗೆಯಲ್ಲಿ ಸಮನ್ವಯ

तत्वप्रकाशिका – अत्र अव्यक्तत्वग्रहणेनाव्यक्तशब्दस्य द्वेधापि परमात्मनि वृत्तिरिति दर्शयति । अत एव भाष्ये 'च'शब्दः ।

ಭಾಷ್ಯದಲ್ಲಿ 'ಅವ್ಯಕ್ತತ್ವಾದೀನಾಂ' ಎಂಬುದಾಗಿ ಅವ್ಯಕ್ತತ್ವ ಎಂಬ ಧರ್ಮವನ್ನು ಉಲ್ಲೇಖಿಸಿದ್ದರಿಂದ ಅವ್ಯಕ್ತಶಬ್ದಕ್ಕೆ ಎರಡು ಬಗೆಯಲ್ಲಿಯೂ ಪರಮಾತ್ಮನಲ್ಲಿ ಸಮನ್ವಯವನ್ನು ತೋರಿಸುತ್ತಿದ್ದಾರೆ. ಆದ್ದರಿಂದಲೇ ಭಾಷ್ಯದಲ್ಲಿ 'ಚ' ಶಬ್ದವು ಸಾರ್ಥಕವಾಗಿದೆ.

ಕೆಲವರ ಆಕ್ಷೇಪಕ್ಕೆ ಉತ್ತರ

तत्वप्रकाशिका – अनेन 'प्रधानादेरतिसूक्ष्मत्वाद्यभावेऽपि नामुख्यार्थत्वम्, अल्पपङ्कजेऽपि पद्मे पङ्कजशब्दस्यामुख्यार्थताऽदर्शनात्' इति शङ्का च निरस्ता भवति ।

ಹೀಗೆ ಹೇಳಿದ್ದರಿಂದ ಪ್ರಕೃತ್ಯಾದಿಗಳಲ್ಲಿ ಅತಿಸೂಕ್ಷ್ಮತ್ವವು ಇರದಿದ್ದರೂ ಪ್ರಕೃತ್ಯಾದಿಗಳು ಅವ್ಯಕ್ತ ಶಬ್ದಕ್ಕೆ ಅಮುಖ್ಯಾರ್ಥವೆಂದು ತಿಳಿಯಬಾರದು. ಏಕೆಂದರೆ ಕಮಲವು ಸ್ವಲ್ಪ ಕೆಸರಿನಿಂದ ಹುಟ್ಟಿದಾಗ ಪಂಕಜ ಶಬ್ದಕ್ಕೆ ಕಮಲದಲ್ಲಿ ಅಮುಖ್ಯಾರ್ಥವೆಂದು ಯಾರೂ ಹೇಳುವುದಿಲ್ಲ. ಅದರಂತೆ ಪರಮಾತ್ಮನು ಮಾತ್ರ ಅತಿಸೂಕ್ಷ್ಮನಾಗಿದ್ದಾನೆ, ಪ್ರಕೃತಿಯು ಅತಿಸೂಕ್ಷ್ಮವಾಗದ ಕಾರಣ ಮುಖ್ಯಾರ್ಥವಲ್ಲ ಎಂದು ಹೇಳಬಾರದು ಎಂಬ ಕೆಲವರ ಆಕ್ಷೇಪವನ್ನು ಈಗ ನಿರಾಕರಿಸಿದಂತಾಯಿತು.

'ಯದಧೀನಃ' ಎಂಬ ಪ್ರಮಾಣದ ಬಗ್ಗೆ

तत्वप्रकाशिका – ननु भवेदेतत् प्रधानादिगतशब्दप्रवृत्तिनिमित्त-प्रेरकत्वेनेश्वरस्यावरत्वादिशब्दवाच्यत्वम् । यद्यन्यगतशब्दप्रवृत्तिनिमित्त प्रेरकोऽसौ शब्दो वर्तते सति सिध्येत् तदेव कुत ? इति तत्राह – यदधीन इति ।।

ಪ್ರಶ್ನೆ - ಪ್ರಕೃತ್ಯಾದಿಗಳಲ್ಲಿರುವ ಶಬ್ದಪ್ರವೃತ್ತಿನಿಮಿತ್ತಗಳಿಗೆ ಪ್ರೇರಕನಾದ ಕಾರಣ ಈಶ್ವರನು ಅವರಾದಿ ಶಬ್ದಗಳಿಂದ ವಾಚ್ಯನಾಗುತ್ತಾನೆ. ಇದು ಯಾವಾಗ ಸರಿಹೊಂದುತ್ತದೆಂದರೆ ಒಂದು ವೇಳೆ ಬೇರೆ ಶಬ್ದಗಳಲ್ಲಿರುವ ಪ್ರವೃತ್ತಿನಿಮಿತ್ತಗಳಿಗೆ ಈಶ್ವರನೇ ಪ್ರೇರಕನಾಗಿದ್ದರೆ ಈಶ್ವರನು ಆಯಾ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಿದ್ದನು. ಆದರೆ ಈಶ್ವರನು ಹಾಗೆ ಪ್ರೇರಕನಾಗಿದ್ದಾನೆಂಬುದು ಹೇಗೆ ಸಿದ್ಧವಾಗುತ್ತದೆ?

ಉತ್ತರ - ಈ ಪ್ರಶ್ನೆಗೆ 'ಯದಧೀನಃ' ಎಂಬ ಪ್ರಮಾಣವನ್ನು ಉಲ್ಲೇಖಿಸುವ ಮೂಲಕ ಉತ್ತರಿಸುತ್ತಿದ್ದಾರೆ.

ಭೃತ್ಯನು ಗೆದ್ದರೆ 'ರಾಜಾ ಜಯೀ' ಎನ್ನುವರು

तत्वप्रकाशिका – यथा परमात्मा जीवगतप्राणधारणस्य तदधीनत्वेन 'अनेन जीवेन' इत्यादौ जीवशब्देनोच्यते । यथा च भृत्यगतजयस्य राजाधीनत्वादसौ जयीत्युच्यते इत्यर्थः ।

ಯಾವರೀತಿಯಾಗಿ ಜೀವನಲ್ಲಿರುವ ಪ್ರಾಣಧಾರಕತ್ವವು ಪರಮಾತ್ಮನ ಅಧೀನವಾಗಿರುವುದರಿಂದ 'ಅನೇನ ಜೀವೇನ' ಎಂಬ ಉಪನಿಷತ್ತಿನಲ್ಲಿರುವ ಜೀವಶಬ್ದದಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೋ, ಮತ್ತು ಭೃತ್ಯನಲ್ಲಿರುವ ಜಯವು ರಾಜಾಧೀನವಾದ್ದರಿಂದ ರಾಜನನ್ನು ಎಲ್ಲರೂ 'ಜಯೀ' ಎಂಬುದಾಗಿ ಕರೆಯುತ್ತಾರೋ, ಅದರಂತೆ ಪರಮಾತ್ಮನೂ ಕೂಡ ನಿಯಾಮಕನಾದ್ದರಿಂದ 'ಅವರ' ಇತ್ಯಾದಿ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

ತದ್ಗತತ್ವ ಮಾತ್ರ ಪ್ರವೃತ್ತಿನಿಮಿತ್ತವಲ್ಲ

तत्वप्रकाशिका – नच अन्यगतशब्दप्रवृत्तिनिमित्तप्रेरके शब्दप्रवृत्तिरमुख्या। राजनि विजयिब्दस्य बहुलप्रयोगात् यमादौ मृत्युप्रमुखशब्दानां च तथात्वात् बहुलप्रयोगसिद्धस्यैव मुख्यत्वात् ।

ಬೇರೆ ಪದಾರ್ಥದಲ್ಲಿರುವ ಶಬ್ದಗಳ ಪ್ರವೃತ್ತಿನಿಮಿತ್ತಗಳಿಗೆ ನಿಯಾಮಕನಾದ ಪರಮಾತ್ಮನಲ್ಲಿ ಶಬ್ದಗಳ ಪ್ರವೃತ್ತಿಯು ಅಮುಖ್ಯವಾಗಿರುತ್ತದೆಂದು ಹೇಳಬಾರದು. ಏಕೆಂದರೆ 'ವಿಜಯೀ' ಎಂಬ ಶಬ್ದವನ್ನು ಭೃತ್ಯರಿಗಿಂತ ಹೆಚ್ಚಾಗಿ ರಾಜನಲ್ಲಿಯೇ ಎಲ್ಲರೂ ವ್ಯವಹರಿಸುತ್ತಾರೆ. ಅದರಂತೆ ಮೃತ್ಯುಶಬ್ದಕ್ಕೆ ಮರಣ ಎಂಬರ್ಥವಿದ್ದರೂ ಮರಣಕ್ಕೆ ನಿಯಾಮಕನಾದ ಯಮದೇವರಲ್ಲಿಯೇ ಎಲ್ಲರೂ ಹೆಚ್ಚಾಗಿ ಮೃತ್ಯುಶಬ್ದವನ್ನು ಪ್ರಯೋಗಿಸುತ್ತಾರೆ. ಹೆಚ್ಚಾದ ಪ್ರಯೋಗವು ಯಾರಲ್ಲಿರುತ್ತದೋ ಅವರೇ ಆಯಾ ಶಬ್ದಗಳ ಮುಖ್ಯಾರ್ಥರೆಂಬುದು ಲೋಕಸಿದ್ಧವಾದ ನಿಯಮ.

ಅವರಾದಿಶಬ್ದಗಳೇ ವ್ಯುತ್ಪತ್ತಿ

तत्वप्रकाशिका – अवरयतीत्यादिव्युत्पत्त्युपपत्तेश्च । तथा च श्रुतिः 'स बद्धः स दुःखी स बन्धयति स दुःखयतीति स जीवः सा प्रकृतिः स जीवयति स प्रकरोति सोऽवरः सोऽनित्यः सोऽवरयति सोऽनित्ययति' इत्यादिका ।

ಮತ್ತು 'ಅವರಯತಿ' 'ಮತ್ತೊಬ್ಬರನ್ನು ನೀಚರನ್ನಾಗಿ ಮಾಡಿಸುತ್ತಾನೆ' ಎಂಬ ವ್ಯುತ್ಪತ್ತಿಯಿಂದಲೇ ಪರಮಾತ್ಮನೇ 'ಅವರ' ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಿದ್ದಾನೆ.

ಈ ವಿಷಯದಲ್ಲಿ ಶ್ರುತಿಪ್ರಮಾಣ ಹೀಗಿದೆ - 'ಸ ಬದ್ಧಃ, ಸ ದುಃಖೀ, ಸ ಬಂಧಯತಿ, ಸ ದುಃಖಯತೀತಿ, ಸ ಜೀವಃ, ಸಾ ಪ್ರಕೃತಿಃ, ಸ ಜೀವಯತಿ, ಸ ಪ್ರಕರೋತಿ, ಸೋऽವರಃ, ಸೋऽನಿತ್ಯಃ, ಸೋऽವರಯತಿ, ಸೋऽನಿತ್ಯಯತಿ' ಮತ್ತೊಬ್ಬರಿಗೆ ಬಂಧನವನ್ನು ನೀಡುತ್ತಾನಾದ್ದರಿಂದ ಬದ್ಧಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. ಮತ್ತೊಬ್ಬರಿಗೆ ದುಃಖವನ್ನು ನೀಡುತ್ತಾನಾದ್ದರಿಂದ 'ದುಃಖೀ' ಎನಿಸಿಕೊಳ್ಳುತ್ತಾನೆ. ಇಂತಹ ಪರಮಾತ್ಮನು ಮತ್ತೊಬ್ಬ ಪ್ರಾಣಧಾರಕನಿಗೆ ನಿಯಾಮಕನಾದ್ದರಿಂದ 'ಜೀವ' ಎನಿಸಿಕೊಳ್ಳುತ್ತಾನೆ. ಅವನು ಪ್ರಕೃಷ್ಟನಾದ್ದರಿಂದ ಪ್ರಕೃತಿ ಎನಿಸಿಕೊಳ್ಳುತ್ತಾನೆ. ಅವನು ಅವರರನ್ನಾಗಿ ಮಾಡುತ್ತಾನಾದ್ದರಿಂದ 'ಅವರ', ಅನಿತ್ಯರನ್ನಾಗಿ ಮಾಡುತ್ತಾನಾದ್ದರಿಂದ 'ಅನಿತ್ಯ'. ಹೀಗೆ 'ಅವರಃ', 'ಅನಿತ್ಯಃ' ಮೊದಲಾದ ಶಬ್ದಗಳಿಂದಲೂ ಪ್ರತಿಪಾದ್ಯನಾಗಿದ್ದಾನೆ.

ಅವ್ಯಕ್ತಾದಿಶಬ್ದಗಳ ಮುಖ್ಯಾರ್ಥತ್ವವು ಸಿದ್ಧವಾಯಿತು

तत्वप्रकाशिका – एवं प्रयोगप्रवृत्तिनिमित्तातिशयाभ्यां परमात्मन्ये वाव्यक्तशब्दानां मुख्यत्वात्, मुख्यार्थस्यैव ग्राह्यत्वात् स एवाऽव्यक्तात् पुरुषः पर इत्यादावुच्यते न प्रधानादीत्युक्तम् ।। ३ ।।

ಹೀಗೆ ಅಯಾ ಶಬ್ದಗಳ ಪ್ರಯೋಗ ಹಾಗೂ ಪ್ರವೃತ್ತಿನಿಮಿತ್ತಗಳು ಅತಿಶಯವಾಗಿ ಪರಮಾತ್ಮನಲ್ಲೇ ಬರುವುದರಿಂದ ಅವ್ಯಕ್ತಾದಿಶಬ್ದಗಳಿಂದ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ. ಮುಖ್ಯಾರ್ಥನಾದ ಪರಮಾತ್ಮನನ್ನೇ ಸ್ವೀಕರಿಸಬೇಕಾದ್ದರಿಂದ 'ಅವ್ಯಕ್ತಾತ್ ಪುರುಷಃ ಪರಃ' ಎಂಬ ಶ್ರುತಿಯಲ್ಲಿರುವ ಅವ್ಯಕ್ತಶಬ್ದದಿಂದಲೂ ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆ ಹೊರತು ಪ್ರಕೃತ್ಯಾದಿಗಳಲ್ಲ ಎಂಬ ವಿಷಯವು ಈ ಸೂತ್ರದಿಂದ ಅತ್ಯಂತ ಸ್ಪಷ್ಟವಾಗಿ ಸಿದ್ಧವಾಗಿದೆ.

ಭಾವದೀಪ

'मुख्यासंभवः' ಎಂಬ ನ್ಯಾಯದ ಬಗ್ಗೆ

भावदीपः – मुख्यासम्भवोऽसिद्ध इति शङ्कते – नन्विति ।।

'मुख्यासंभव एव गौणाश्रयस्य न्यायत्वात्' ಎಂಬ ನ್ಯಾಯವು ಅಸಿದ್ಧವೆಂದು 'ನನು' ಇತ್ಯಾದಿ ಟೀಕೆಯಿಂದ ಪ್ರಶ್ನಿಸುತ್ತಾರೆ.

'अव्यक्तात्' ಎಂಬಲ್ಲಿರುವ ಪಂಚಮ್ಯರ್ಥ

भावदीपः – परावरत्वादिश्रुतेरिति ।। परशब्दः परत्वश्रुतिः । अव्यक्तादिति पञ्चमी त्ववरत्वाक्षेपकावधित्ववाचित्वादवरत्वश्रुतिरित्युच्यत इति ध्येयम् ।

ಟೀಕೆಯಲ್ಲಿ 'परवरत्वादिश्रुतेः' ಎಂದು ಹೇಳಿದ್ದಾರೆ. ಇದಕ್ಕೆ ಹೀಗೆ ಅರ್ಥ - 'पर' ಶಬ್ದವು ಪರತ್ವಪ್ರತಿಪಾದಕವಾದ ಶ್ರುತಿಯನ್ನು ಹೇಳುತ್ತಿದೆ. 'अव्यक्तात्' ಎಂಬ ಶ್ರುತಿಯಲ್ಲಿರವ ಪಂಚಮೀ ವಿಭಕ್ತಿಯು ಅವಧಿತ್ವವನ್ನು ಹೇಳುತ್ತಿದೆ. ಇದರಿಂದ ಅವರತ್ವವು ಆಕ್ಷೇಪದ ಬಲದಿಂದ ಸಿದ್ಧವಾಗುತ್ತದೆ. ಹೀಗೆ ಪರಾವರತ್ವಾದಿ ಶ್ರುತಿಶಬ್ದಕ್ಕೆ ಪರತ್ವ ಪ್ರತಿಪಾದಕ ಶ್ರುತಿ ಹಾಗೂ ಆಕ್ಷೇಪದ ಬಲದಿಂದ ಸಿದ್ಧವಾಗುವ ಅವರತ್ವ ಪ್ರತಿಪಾದಕ ಶ್ರುತಿಯೆಂಬ ಅರ್ಥವನ್ನು ತಿಳಿಯಬೇಕು.

ಸೂತ್ರಭಾಗದ ವ್ಯಾಖ್ಯಾನ

भावदीपः – उक्तशङ्कानिवृत्तिपूर्वं तस्यैवेति सूत्रांशभाष्यं व्याचष्टे – नाव्यक्तेति ।।

ಇದುವರೆಗೂ ಹೇಳಿದ ಆಶಂಕೆಯನ್ನು ಪರಿಹರಿಸಲು 'तस्यैव' ಎಂಬ ಸೂತ್ರಭಾಗದ ಅಂಶವನ್ನು ಭಾಷ್ಯದಲ್ಲಿ ವ್ಯಾಖ್ಯಾನಿಸಿದ್ದಾರೆ. ಅದನ್ನು ಟೀಕೆಯಲ್ಲಿ 'न अव्यक्त' ಇತ್ಯಾದಿ ಮಾತುಗಳಿಂದ ಸ್ಪಷ್ಟಪಡಿಸುತ್ತಿದ್ದಾರೆ.

'तस्य' ಎಂಬುದಕ್ಕೆ 'तस्मिन्' ಎಂದರ್ಥ

भावदीपः – तस्येति पदं सप्तम्यन्तं व्याचष्टे – तस्मिन्निति ।। तदित्यादिभाष्यार्थमाह – प्रधानेति ।।

ಭಾಷ್ಯದಲ್ಲಿರುವ 'तस्य' ಎಂಬ ಪದವು ಸಪ್ತಮೀವಿಭಕ್ತ್ಯರ್ಥವನ್ನು ಹೇಳುತ್ತಿರುವುದನ್ನು ತೋರಿಸಲು 'तस्मिन्' ಎಂದು ಪ್ರಯೋಗ ಮಾಡಿದ್ದಾರೆ. 'तदधीनत्वात्' ಇತ್ಯಾದಿ ಭಾಷ್ಯದ ಅರ್ಥವನ್ನು 'प्रधानादि' ಇತ್ಯಾದಿ ವಾಕ್ಯದಿಂದ ಹೇಳಿರುತ್ತಾರೆ.

ಪ್ರವೃತ್ತಿನಿಮಿತ್ತವು ಎರಡು ವಿಧ

भावदीपः – अवरत्वसमवायादेरवरादिशब्दप्रवृत्तिहेतोरीशेऽभावेन तच्छब्दवाच्यता नेत्यस्य किमुत्तरमनेनोक्तं स्यादित्यतः अवरत्वादिधर्मनियन्तृत्वं तत्तादम्त्यवत्वं चेति द्विविधं ह्यवरत्वादि । 'निरनिष्टो निरवद्यः' इत्यादिश्रुतेः तत्तद्दोषतादात्म्यात्यस्पृष्टिनियमात् विष्णोः 'नामानि सर्वाणि यमाविशन्ति' इति श्रुतिबलाच्च नियन्तृत्वमवरत्वादिकमित्यापतति । श्रुतिद्वयस्यापि निरवकाशत्वादिति न्यायविवरणमत्र योजयति – अन्यगतेति ।।

ಅವರತ್ವಸಮವಾಯಾದಿಗಳು ಅವರಾದಿಶಬ್ದದ ಪ್ರವೃತ್ತಿನಿಮಿತ್ತಗಳು ಪರಮಾತ್ಮನಲ್ಲಿ ಬರುವುದಿಲ್ಲ. ಅಂತಹ ಶಬ್ದವಾಚ್ಯತ್ವವನ್ನೂ ಕೂಡ ಅವನಲ್ಲಿ ಹೇಳಲು ಸಾಧ್ಯವಿಲ್ಲ. ಈ ಆಕ್ಷೇಪಕ್ಕೆ ಯಾವ ಉತ್ತರವನ್ನು ಹೇಳಿದಂತಾಯಿತು ? ಎಂದು ಪ್ರಶ್ನೆ ಬರುತ್ತದೆ. ಇದಕ್ಕೆ ನ್ಯಾಯವಿವರಣದಲ್ಲಿ ಹೇಳಿದ ಉತ್ತರವನ್ನೇ ಟೀಕೆಯಲ್ಲಿ 'ಅನ್ಯಗತ' ಇತ್ಯಾದಿಯಾಗಿ ಉಲ್ಲೇಖಿಸಿದ್ದಾರೆ. ನ್ಯಾಯವಿವರಣದಲ್ಲಿ ಹೀಗೆ ಹೇಳಿದ್ದಾರೆ -

'ಅವರ' ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತವು ಎರಡುವಿಧ -

೧. ಬೇರೆಯಲ್ಲಿರುವ 'ಅವರತ್ವ' ಮೊದಲಾದ ಧರ್ಮಗಳ ನಿಯಾಮಕತ್ವ.

೨. 'ಅವರಾದಿ ವಸ್ತುಗಳ ಅಭೇದ' ಎಂದು. 'यदधीनो गुणो यस्य तद्गुणे सोऽभिधीयते' ಎಂಬ ಪ್ರಮಾಣದಿಂದ ಇದು ಪ್ರಸಿದ್ಧವಾಗಿದೆ. ಪರಮಾತ್ಮನಲ್ಲಿ ಅವರತ್ವ ಮೊದಲಾದ

ಧರ್ಮಗಳಿರುವುದರಿಂದ 'ಅವರ' ಮೊದಲಾದ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ನಾವು ಹೇಳುತ್ತಿಲ್ಲ. ಹೊರತಾಗಿ ಬೇರೆಯಲ್ಲಿರುವ 'ಅವರತ್ವ' ಮೊದಲಾದ ಧರ್ಮಗಳಿಗೆ ನಿಯಾಮಕನಾಗಿರುವುದರಿಂದ 'ಅವರ' ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆಂಬುದು ನಮ್ಮ ಅಭಿಪ್ರಾಯ. 'ನಿರನಿಷ್ಟಃ ನಿರವದ್ಯಃ' ಮೊದಲಾದ ಶ್ರುತಿಗಳಿಂದ ವಿಷ್ಣುವಿನಲ್ಲಿ ಯಾವ ದೋಷಗಳ ಸಂಪರ್ಕವು ಇಲ್ಲವೆಂದು ಸಿದ್ಧವಾಗಿದೆ. ಮತ್ತು 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯಿಂದ ಬೇರೆಯವರಲ್ಲಿರುವ ಅವರತ್ವಾದಿ ಧರ್ಮಗಳಿಗೆ ವಿಷ್ಣುವೇ ನಿಯಾಮಕನೆಂಬ ವಿಚಾರವು ಸಿದ್ಧವಾಗಿದೆ. ಆದ್ದರಿಂದ ಅವರತ್ವಧರ್ಮಪುರಸ್ಸರವಾಗಿ ಅವರಾದಿಶಬ್ದ ಪ್ರತಿಪಾದ್ಯತ್ವವನ್ನು ಹೇಳದೇ ಅವರತ್ವಾದಿ ಧರ್ಮಗಳ ನಿಯಾಮಕತ್ವವನ್ನೇ ಅವರಾದಿಶಬ್ದಗಳ ಪ್ರವೃತ್ತಿನಿಮಿತ್ತವೆಂದು ಒಪ್ಪಿ, ಅವರ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನೆಂದು ಹೇಳಬೇಕು. ಏಕೆಂದರೆ ನಿರನಿಷ್ಟಃ ನಿರವದ್ಯಃ' ಮತ್ತು 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬೆರಡು ಶ್ರುತಿಗಳು ನಿರವಕಾಶಗಳಾಗಿವೆ. ಇಷ್ಟು ನ್ಯಾಯವಿವರಣದಲ್ಲಿ ಹೇಳಿದ ವಿಚಾರ.

ಏನೂ ಬಾಧಕವಿಲ್ಲ

भावदीपः – द्विधा हीति हि शब्देन भाष्ये वक्ष्यमाणप्रसिद्धिर्दर्शिता । अस्त्ववरत्वादिबाधकात् सङ्कोच इति तत्राऽऽह – **बाधकेति** ।। तस्य समाहितत्वादिति भावः ।

'ದ್ವಿಧಾ ಹಿ' ಎಂಬಲ್ಲಿರುವ 'ಹಿ' ಶಬ್ದದಿಂದ ಭಾಷ್ಯದಲ್ಲಿ ಮುಂದೆ ವಿಚಾರವನ್ನು ಹೇಳುತ್ತಾರೆಂಬುದನ್ನು ಸೂಚನೆ ಮಾಡಿದ್ದಾರೆ. 'ಅವರತ್ವ' ಮೊದಲಾದ ಬಾಧಕಗಳಿರುವುದರಿಂದ ಅವರಾದಿ ಶಬ್ದಗಳಿಗೆ ಸಂಕೋಚ ಮಾಡಬಹುದಲ್ಲವೇ? ಎಂಬ ಪ್ರಶ್ನೆಗೆ 'ಬಾಧಕಾಭಾವಾತ್' ಎಂಬುದರಿಂದ ಉತ್ತರಿಸಿದ್ದಾರೆ. ಸಕಲ ಬಗೆಯ ಶಬ್ದಗಳು ಪರಮಾತ್ಮನಲ್ಲಿ ಇರುತ್ತವೆನ್ನಲು ಯಾವುದೇ ಬಾಧಕವಿಲ್ಲ ಎಂದಭಿಪ್ರಾಯ.

ಅವರತ್ವಾದಿಗಳೆಲ್ಲವೂ ಭಗವದಧೀನ

भावदीपः – ननु भाष्ये तदधीनत्वाच्चावरत्वादीनामिति वाच्येऽव्यक्तत्वादीना- मित्याद्युक्तिः किमर्था । अव्यक्तशब्दप्रवृत्तिनिमित्तस्य

सूक्ष्मं तु इत्यत्रेशे प्रतिपादनेन तस्मिन् शब्दे अमुख्यत्वशङ्कानुदयादित्यत आह – अत्राव्यक्तत्वेति ।। अत एव पूर्वनिमित्तस्योक्तत्वादेवेत्यर्थः ।

ಭಾಷ್ಯದಲ್ಲಿ 'तदधीनत्वाच्चावरत्वादीनाम्' ಎಂದು ಹೇಳಬೇಕಿತ್ತು. ಅವರತ್ವಾದಿಗಳೆಲ್ಲವೂ ಭಗವದಧೀನವಾದ್ದರಿಂದ ಆಯಾ ಶಬ್ದಗಳು ಅವನಲ್ಲಿ ಇರುತ್ತವೆಂದು ಹೇಳಿದಾಗ ಸ್ಪಷ್ಟವಾಗಿ ಶಾಬ್ದಬೋಧ ಬರುತ್ತದೆ. ಆದರೆ 'तदधीनत्वाच्च अवरत्वादीनाम्' ಎಂದು ಹೇಳಿರುತ್ತಾರೆ. ಹೀಗೆ ಹೇಳಿದರೆ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಸೂಕ್ಷ್ಮತ್ವವು ಈಶ್ವರನಲ್ಲಿ ಇರುತ್ತದೆಂದು 'सूक्ष्मं तु तदर्हत्वात्' ಎಂಬ ಸೂತ್ರದಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಹೀಗಿರುವಾಗ ಅವ್ಯಕ್ತಶಬ್ದವು ಅಮುಖ್ಯವಾದ ಅರ್ಥವನ್ನೇ ಪ್ರತಿಪಾದನೆ ಮಾಡಲಿ ಎಂಬ ಶಂಕೆಯು ಹುಟ್ಟುವುದೇ ಇಲ್ಲ. ಈ ಪ್ರಶ್ನೆಯ ಪರಿಹಾರಕ್ಕಾಗಿ 'अत्र अव्यक्तत्वग्रहणेन' ಎಂಬ ಟೀಕಾವಾಕ್ಯವು ಹೊರಟಿದೆ. 'अत एव' ಎಂದರೆ ಹಿಂದೆ ಹೇಳಿದ ಪ್ರವೃತ್ತಿನಿಮಿತ್ತವು ಪರಮಾತ್ಮನಲ್ಲಿ ಬರುವುದರಿಂದಲೇ ಎಂದರ್ಥ.

ಸ್ವಲ್ಪ ಕೆಸರಿನಲ್ಲಿ ಹುಟ್ಟಿದರೂ ಪಂಕಜ

भावदीपः – प्राचीननिमित्तेनैव अव्यक्तादिशब्दस्येशे मुख्यत्वोपपत्तौ तदधीनत्वन्यायः किमर्थं तत्र सञ्चारित इत्यत आह – प्रधानादेरिति ।। एतच्च 'तुष्यतु दुर्जनः' इति न्यायेनोक्तम् । वस्तुतस्तु प्रवृत्तिनिमित्तस्य हरौ मुख्यत्वेनैव मुख्यत्वोपपत्तेरिति वक्ष्यमाणत्वेन तन्न्यायस्याव्यभिचारात्। पद्मत्वजातेरेव निमित्तत्वेन विवक्षिततया तस्याल्पपङ्कजेऽपि सत्वेन अमुख्यत्वानापत्तेः । अन्यथाऽग्रेतनवाक्यविरोधादिति ध्येयम् ।। निरस्तेति ।। अव्यक्तत्वग्रहणेनेत्यनुषङ्गः ।

ಹಿಂದೆ ಹೇಳಿದ ಪ್ರವೃತ್ತಿನಿಮಿತ್ತದಿಂದಲೇ ಅವ್ಯಕ್ತಶಬ್ದವು ಪರಮಾತ್ಮನಲ್ಲಿ ಮುಖ್ಯವಾಗಿ ಯುಕ್ತವಾಗುತ್ತಿರುವಾಗ ತದಧೀನತ್ವನ್ಯಾಯವನ್ನು ಏಕೆ ಹೇಳುತ್ತಿದ್ದೀರಿ ? ಎಂಬ ಪ್ರಶ್ನೆಗೆ 'प्रधानादेः' ಎಂಬ ಟೀಕೆಯು ಉತ್ತರಿಸಿದೆ. ವಾಸ್ತವಿಕವಾಗಿ 'तुष्यतु दुर्जनः' ಎಂಬ ನ್ಯಾಯದಿಂದ ಹೀಗೆ ಹೇಳಿದ್ದಾರೆ. ವಿಚಾರ ಮಾಡಿದರೆ ಪ್ರವೃತ್ತಿನಿಮಿತ್ತವು ಮುಖ್ಯವೃತ್ತಿಯಿಂದಲೇ ಪರಮಾತ್ಮನಲ್ಲಿ ಯುಕ್ತವಾಗುತ್ತವೆಂದು ಹೇಳಲು ಬರುತ್ತದೆ. ಆದ್ದರಿಂದ ಎಲ್ಲಿಯೂ ಕೂಡ ಇದಕ್ಕೆ ವ್ಯಭಿಚಾರವಿಲ್ಲ. ಸ್ವಲ್ಪ

ಕೆಸರಿನಿಂದ ಹುಟ್ಟಿದಾಗಲೂ ಕಮಲವನ್ನು 'ಪಂಕಜ' ಎಂದೇ ಕರೆಯುತ್ತಾರೆ. ಆದ್ದರಿಂದ ಪದತ್ವಜಾತಿಯನ್ನು ಪ್ರವೃತ್ತಿನಿಮಿತ್ತವೆಂದು ಎಲ್ಲರೂ ಒಪ್ಪಿದ್ದಾರೆ. ಹೀಗೊಪ್ಪದಿದ್ದರೆ ಮುಂದಿನ ವಾಕ್ಯದ ವಿರೋಧ ಬರುತ್ತದೆ. 'ನಿರಸ್ತಾ' ಎಂಬಲ್ಲಿ 'ಅವ್ಯಕ್ತತ್ವಗ್ರಹಣೇನ' ಎಂಬುದನ್ನು ಅನುಷಂಗ ಮಾಡಿಕೊಳ್ಳಬೇಕು.

ಸ್ವಾತಂತ್ರ್ಯವು ನಿಮಿತ್ತವೆನ್ನಲು ಲೌಕಿಕ ದೃಷ್ಟಾಂತ

ಭಾವದೀಪಃ – लौकिकं च दृष्टान्तं व्यनक्ति – यथाचेति ।। अभिधीयत इत्युक्ताभिधावृत्तिं साधयितुं नहि भृत्यस्य विजयिशब्दस्तावत् प्रयुज्यते ।।

ಲೌಕಿಕ ದೃಷ್ಟಾಂತವನ್ನು 'ಯಥಾಚ' ಎಂಬುದರಿಂದ ಹೇಳಿದ್ದಾರೆ. 'ಅಭಿಧೀಯತೇ' ಎಂಬ ಸ್ಕಂಧಪುರಾಣದ ಮಾತಿನಿಂದ ಹೇಳಿದ ಅಭಿಧಾವೃತ್ತಿಯನ್ನು ಸಮರ್ಥನೆ ಮಾಡಲು ಭೃತ್ಯನಲ್ಲಿ 'ವಿಜಯಿ' ಶಬ್ದವನ್ನು ಯಾರೂ ಕೂಡ ಪ್ರಯೋಗ ಮಾಡುವುದಿಲ್ಲವಷ್ಟೇ ? ಎಂದು ಟೀಕೆಯಲ್ಲಿ ಹೇಳಿರುತ್ತಾರೆ.

ನಿಯಾಮಕತ್ವದ ಸಮರ್ಥನೆ

ಭಾವದೀಪಃ – 'यावद्राज्ञ्यन्यगत्वेऽपि स्वातन्त्र्याभासमात्रतः' इत्यनुभाष्योक्तमत्र योजयितुं शङ्कामाह – नचेति ।। मृत्युशब्दादिषु प्रसिद्धेश्च प्रसिद्धत्वाच्च कर्तृव्युत्पत्तेरिति न्यायविवरणोक्तमाह – यमादावित्यादिना ।। स्वातन्त्र्येण निमित्तेन मुख्यत्वादित्यर्थः ।

'ಯಾವದ್ರಾಜ್ಞ್ಯನ್ಯಗತ್ವೇऽಪಿ ಸ್ವಾತಂತ್ರ್ಯಾಭಾಸಮಾತ್ರತಃ' ರಾಜನನ್ನು ಬಿಟ್ಟು ಬೇರೆಯವರಲ್ಲಿ ಸ್ವಾತಂತ್ರ್ಯಾಭಾಸದಿಂದಷ್ಟೇ 'ವಿಜಯಿ' ಮೊದಲಾದ ಶಬ್ದಗಳನ್ನು ಪ್ರಯೋಗಿಸುತ್ತಾರೆ ಎಂಬ ಅಣುಭಾಷ್ಯದ ಅಭಿಪ್ರಾಯವನ್ನು ಯೋಜನೆ ಮಾಡಲು 'ನಚ' ಇತ್ಯಾದಿ ವಾಕ್ಯದಿಂದ ಆಶಂಕೆ ಮಾಡುತ್ತಿದ್ದಾರೆ. 'ಮೃತ್ಯುಶಬ್ದಾದಿಷು ಪ್ರಸಿದ್ಧೇಶ್ಚ ಪ್ರಸಿದ್ಧತ್ವಾಚ್ಚ ಕರ್ತೃವ್ಯುತ್ಪತ್ತೇಃ' ಮೃತ್ಯು ಮೊದಲಾದ ಶಬ್ದಗಳು ಮಾರಕತ್ವ ಎಂಬ ಪ್ರವೃತ್ತಿನಿಮಿತ್ತದಿಂದ ಯಮಾದಿಗಳನ್ನೇ ಪ್ರತಿಪಾದನೆ ಮಾಡುತ್ತವೆ. ಈ ವಿಷಯವು ಬಹುಪ್ರಯೋಗದಿಂದ ಸಿದ್ಧವಾಗಿದೆ. ಮತ್ತು ವಿಷ್ಣುವಿಗೆ ಅವರಾದಿ ಶಬ್ದಪ್ರತಿಪಾದ್ಯತ್ವ ಮಾತ್ರವಲ್ಲ. ಹೊರತಾಗಿ 'ಸ ಬದ್ಧಃ, ಸ ದುಃಖೀ, ಸ ಸಂಬಂಧಯತಿ, ಸ ದುಃಖಯತಿ' ಶ್ರೀಹರಿಯು ಸಂಸಾರಿಗಳನ್ನು ಬಂಧನೆ ಮಾಡುವುದರಿಂದ ಬದ್ಧನೆಂದು, ದುಃಖವನ್ನು ನೀಡುವುದರಿಂದ 'ದುಃಖೀ' ಎಂದು ಕರೆಸಿಕೊಳ್ಳುತ್ತಾನೆ. ಇವೇ ಮೊದಲಾದ ಶ್ರುತಿಗಳಲ್ಲಿ ಬದ್ಧಾದಿ ಶಬ್ದಗಳಿಗೆ ವಿಷ್ಣುವಿನಲ್ಲಿ ಕರ್ತೃವ್ಯುತ್ಪತ್ತಿಯು

ಪ್ರಸಿದ್ಧವಾಗಿದೆ ಎಂಬ ನ್ಯಾಯವಿವರಣದ ಅಭಿಪ್ರಾಯವನ್ನೇ 'ಯಮಾದೌ' ಇತ್ಯಾದಿ ವಾಕ್ಯದಿಂದ ಟೀಕೆಯಲ್ಲಿ ಹೇಳಿರುತ್ತಾರೆ. ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವಿರುವುದರಿಂದ ವಿಷ್ಣುವಿನಲ್ಲಿ ಶಬ್ದಗಳು ಮುಖ್ಯವಾಗಿವೆ ಎಂದು ತಿಳಿಯಬೇಕು.

ನ್ಯಾಯವಿವರಣದಲ್ಲಿ ಹೇಳಿದ್ದು ಮತ್ತೊಂದು ದೃಷ್ಟಾಂತ

भावदीपः – यद्यपि न्यायविवरणे तमेव मृत्युममृतमिति हरावेव मृत्युप्रभृतिशब्दस्य श्रुतौ प्रसिद्धिर्दर्शिता । तथाप्येतदुदाहरणान्तरमित्यदोषः । नियामकाभावादन्यथापि व्युत्पत्तिः स्यादित्यतो माण्डूकभाष्योक्तश्रुतिमाह – तथाचेति ।। एतेन प्रसिद्धेश्चेत्युक्तप्रसिद्धिरुपपादिता । एतच्चावरत्वाक्षेपकावधित्ववाचिपञ्चमीभिन्नावरादिशब्दविषयम् ।।

ವಾಸ್ತವಿಕವಾಗಿ ನ್ಯಾಯವಿವರಣದಲ್ಲಿ 'ತಮೇವ ಮೃತ್ಯುಮಮೃತಮ್' ಎಂಬುದಾಗಿ ಶ್ರೀಹರಿಯಲ್ಲಿ ಮಾತ್ರ ಮೃತ್ಯು ಮೊದಲಾದ ಶಬ್ದಗಳನ್ನು ಹೇಳುವ ಮೂಲಕ ಶ್ರುತಿಪ್ರಸಿದ್ಧಿಯನ್ನು ತೋರಿಸಿರುತ್ತಾರೆ. ಆದರೆ ಇದು ಮತ್ತೊಂದು ಉದಾಹರಣೆ ಎಂದು ತಿಳಿಯಬೇಕು. ಇದಕ್ಕಿಂತ ವಿಭಿನ್ನವಾಗಿ ಮತ್ತೊಂದು ಬಗೆಯಲ್ಲಿ ಶಬ್ದದ ವ್ಯುತ್ಪತ್ತಿಯನ್ನು ಸಮರ್ಥಿಸಬಹುದೆಂಬ ಉದ್ದೇಶದಿಂದ ಮಾಂಡೂಕಭಾಷ್ಯದಲ್ಲಿ ಉದಾಹರಿಸಿದ ಶ್ರುತಿಯನ್ನು 'ತಥಾಚ' ಇತ್ಯಾದಿ ವಾಕ್ಯದಿಂದ ಉಲ್ಲೇಖಿಸಿದ್ದಾರೆ. ಇದರಿಂದ 'ಪ್ರಸಿದ್ಧೇಶ್ಚ' ಎಂಬ ಸೂತ್ರಾಂಶದಲ್ಲಿ ಹೇಳಿದ ಪ್ರಸಿದ್ಧಿಯನ್ನು ಸಮರ್ಥನೆ ಮಾಡಿದಂತಾಗುತ್ತದೆ. ಇದು ಅವರತ್ವವನ್ನು ಆಕ್ಷೇಪದ ಬಲದಿಂದ ಸಮರ್ಥಿಸುವ ಅವಧಿತ್ವವಾಚಿಯಾದ ಪಂಚಮೀ ವಿಭಕ್ತಿಯಿಂದ ತಿಳಿಯುವುದಕ್ಕಿಂತ ಭಿನ್ನವಾದ ಅವರಶಬ್ದಕ್ಕೆ ವಿಷಯವಾಗಿರುತ್ತದೆ. ಪಂಚಮೀ ವಿಭಕ್ತಿಯು ಅವಧಿತ್ವವನ್ನು ಹೇಳುತ್ತದೆ. ಇದರಿಂದ ಅವರತ್ವವು ಅರ್ಥಾತ್‌ಸಿದ್ಧವಾಗುತ್ತದೆ. ಇಂತಹ ಅವರತ್ವವನ್ನು ಹಿಂದೆ ಪರಮಾತ್ಮನಲ್ಲಿ ಸಮರ್ಥನೆ ಮಾಡಿದರು. ಆದರೆ ಈಗ ಇದಕ್ಕಿಂತ ವಿಭಿನ್ನವಾದ 'ಅವರಯತಿ' ಎಂಬ ವ್ಯುತ್ಪತ್ತಿಯಿಂದಲೇ ಅವರ ಶಬ್ದವನ್ನು ಪರಮಾತ್ಮನಲ್ಲಿ ಸಮರ್ಥನೆ ಮಾಡಿರುತ್ತಾರೆ.

ಪರಮಮುಖ್ಯವೃತ್ತಿ ವಿಷ್ಣುವಿನಲ್ಲಿ ಸಿದ್ಧವಾಯಿತು

भावदीपः – स एवेति ।। प्रधानादिविशिष्ट एवेत्यर्थः ।। न प्रधानादीति।। प्रधानाद्येवेत्यर्थः । यद्वा मुख्यत्वादित्यादिमुख्यशब्दस्य परममुख्यार्थत्वे तु

यथान्यासमेव योज्यम् ।। अन्यथा अन्यस्यापि वाच्यत्वाभ्युपगमादित्यादि पूर्वेण विरोधात् । एवमग्रेऽपि विष्णोरेवेत्यादौ ध्येयम् ।।

'स एव' ಎಂದರೆ ಪ್ರಧಾನಾದಿಗಳಿಂದ ವಿಶಿಷ್ಟನಾದ ಪರಮಾತ್ಮನೇ ಎಂದರ್ಥ. 'न प्रधानादि' ಎಂದರೆ ಕೇವಲ ಪ್ರಕೃತಿ ಮೊದಲಾದವುಗಳು ಮಾತ್ರ ಪ್ರತಿಪಾದ್ಯವಲ್ಲ ಎಂದರ್ಥ. ಅಥವಾ ಇಲ್ಲಿರುವ ಮುಖ್ಯಶಬ್ದಕ್ಕೂ ಕೂಡ ಪರಮಮುಖ್ಯಾರ್ಥವೆಂದೇ ಅರ್ಥೈಸಬೇಕು. ಇಲ್ಲದಿದ್ದರೆ ಹಿಂದೆ ಹೇಳಿದಂತೆ ಉಳಿದ ಪದಾರ್ಥಗಳಿಗೂ ಮುಖ್ಯವಾಚ್ಯತ್ವದ ವಿರೋಧ ಬರುತ್ತದೆ. ಇದರಂತೆ ಮುಂದೆಯೂ ಕೂಡ 'ವಿಷ್ಣೋರೇವ' ಇತ್ಯಾದಿ ವಾಕ್ಯಗಳಲ್ಲಿ ಮಹಾವಿಷ್ಣುವೇ ಅವ್ಯಕ್ತ ಮೊದಲಾದ ಶಬ್ದಗಳಿಂದ ಪರಮವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯಬೇಕು.

ಬ್ರಹ್ಮಸೂತ್ರ

'ज्ञेयत्वावचनाच्च' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। ज्ञेयत्वावचनाच्च ।। ४ ।।

ಸೂತ್ರಾರ್ಥ - 'तमेवैकं जानथ' ಎಂಬ ಉಪನಿಷತ್ತು ಮುಮುಕ್ಷುಗಳಿಂದ ಬ್ರಹ್ಮನೇ ಜ್ಞೇಯನಾಗಿದ್ದಾನೆ. ಉಳಿದವುಗಳು ಜ್ಞೇಯವಲ್ಲವೆಂದು ಹೇಳುತ್ತಿದೆ. ಆದ್ದರಿಂದ ಅವ್ಯಕ್ತಾದಿ ಶಬ್ದಗಳಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ.

ಅರ್ಥ -- 'तमेवैकं जानथ' ಎಂಬ ಶ್ರುತಿಯಲ್ಲಿ ಮೋಕ್ಷಕ್ಕಾಗಿ ವಿಷ್ಣುವನ್ನೇ ತಿಳಿಯಬೇಕೆಂದು ಹೇಳಲಾಗಿದೆ. ಉಳಿದವರನ್ನು ತಿಳಿಯಬೇಕೆಂದು ಹೇಳಿರುವುದಿಲ್ಲ. ಹೊರತಾಗಿ 'विमुंचथ' ಎಂಬುದಾಗಿ ಮೋಕ್ಷಕ್ಕೋಸ್ಕರ ಉಳಿದವರ ಜ್ಞಾನವು ಅಗತ್ಯವಿಲ್ಲವೆಂದೇ ಹೇಳಲಾಗಿದೆ. ಆದ್ದರಿಂದ ಶ್ರುತಿಗಳಲ್ಲಿರುವ ಅವ್ಯಕ್ತಾದಿ ಶಬ್ದಗಳಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ.

ಬ್ರಹ್ಮಸೂತ್ರಭಾಷ್ಯ

ಶ್ರೀಹರಿ ಮಾತ್ರ ಮುಮುಕ್ಷುಗಳಿಂದ ಜ್ಞೇಯ. ಆದ್ದರಿಂದ ಸಕಲಶಬ್ದವಾಚ್ಯ

ब्रह्मसूत्रभाष्यम् – अन्यस्य न वाच्यत्वं युज्यते ।।४।।

ಅನುವಾದ - ಅವ್ಯಕ್ತಾದಿಶಬ್ದಗಳ ಮುಖ್ಯಾರ್ಥ ಮಹಾವಿಷ್ಣುವೇ ಹೊರತು, ಪ್ರಕೃತ್ಯಾದಿಗಳಲ್ಲ. (ಏಕೆಂದರೆ 'ತಮೇವೈಕಂ ಜಾನಥ ಆತ್ಮಾನಂ' ಇತ್ಯಾದಿ ಶ್ರುತಿಯು ಬ್ರಹ್ಮನೇ ಮುಮುಕ್ಷುಗಳಿಂದ ಜ್ಞೇಯನೆಂದು ಹೇಳುತ್ತಿದೆ. ಹೊರತು, ಪ್ರಕೃತ್ಯಾದಿಗಳನ್ನು ಜ್ಞೇಯವೆಂದು ಹೇಳುತ್ತಿಲ್ಲ. ಆದ್ದರಿಂದ ಅವ್ಯಕ್ತಾದಿಶಬ್ದಗಳ ಮುಖ್ಯಾರ್ಥ ಮಹಾವಿಷ್ಣುವೇ ಆಗಿದ್ದಾನೆ ಹೊರತು ಪ್ರಕೃತ್ಯಾದಿಗಳಲ್ಲ. ಶ್ರುತಿ ಹಾಗೂ ಸ್ಮೃತಿಗಳಲ್ಲಿರುವ ಪ್ರಯೋಗಗಳ ಪ್ರವೃತ್ತಿನಿಮಿತ್ತವು ಅತಿಶಯವಾಗಿ ಪರಮಾತ್ಮನಲ್ಲಿಯೇ ಇರುತ್ತದೆ . ಆದ್ದರಿಂದ ಅವ್ಯಕ್ತಾದಿ ಶಬ್ದಗಳಿಂದ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ. ಬಾಧಕವಿಲ್ಲದಿದ್ದಾಗ, ಮುಖ್ಯಾರ್ಥವನ್ನೇ ಸ್ವೀಕರಿಸಬೇಕು. ಆದ್ದರಿಂದ 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿರುವ ಅವ್ಯಕ್ತಾದಿ ಶಬ್ದಗಳಿಂದಲೂ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ ಹೊರತು, ಪ್ರಕೃತ್ಯಾದಿಗಳಲ್ಲ. ಈ ವಿಷಯವನ್ನೇ ಮತ್ತೊಂದು ಯುಕ್ತಿಯಿಂದ ಉಪಪಾದನೆ ಮಾಡಲು ಸೂತ್ರವನ್ನು ಉಪನ್ಯಾಸ ಮಾಡಿ, ಚ ಶಬ್ದಕ್ಕೆ ಅನೇಕ ಹೇತು ಸಮುಚ್ಚಯಾರ್ಥತ್ವವನ್ನು ವಿವಕ್ಷಿಸಿ, ಸೂತ್ರದಲ್ಲಿ ಶೇಷ ಪೂರಣ ಮಾಡಿಕೊಳ್ಳಬೇಕಾದ ಪ್ರತಿಜ್ಞೆಯನ್ನು ಪೂರ್ಣ ಮಾಡುತ್ತಿದ್ದಾರೆ)-

ಪ್ರತಿಪದಾರ್ಥ --

ಅನ್ಯಸ್ಯ = ಪ್ರಧಾನಾದಿಗಳಿಗೆ, ವಾಚ್ಯತ್ವಂ = ಅವ್ಯಕ್ತ ಮೊದಲಾದ ಶಬ್ದವಾಚ್ಯತ್ವವು, ನ ಯುಜ್ಯತೇ = ಯುಕ್ತವಾಗುವುದಿಲ್ಲ. ಹೊರತಾಗಿ ಪರಮಾತ್ಮನೇ ಅವ್ಯಕ್ತಾದಿ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ.

ತತ್ವಪ್ರದೀಪ

तत्वप्रदीपः – ज्ञेयत्वावचनाच्च ।। परमात्मनोऽन्यस्य न वाच्यत्वम् ।।

ಪರಮಾತ್ಮನನ್ನು ಬಿಟ್ಟು ಮತ್ತೊಂದು ವಸ್ತುವು ವೈದಿಕಶಬ್ದಗಳಿಂದ ಪ್ರತಿಪಾದ್ಯವಾಗಲು ಸಾಧ್ಯವೇ ಇಲ್ಲ.

ತತ್ವಪ್ರಕಾಶಿಕಾ

ಹಿಂದಿನ ಸೂತ್ರದ ಪ್ರಮೇಯದ ಸಮರ್ಥನೆಗಾಗಿ ಈ ಸೂತ್ರ

तदेव युक्त्यन्तरेणोपपादयत् सूत्रमुपन्यस्य तच्छेषं पूरयति – ज्ञेयत्वेति।।

ಹಿಂದಿನ ಸೂತ್ರದಲ್ಲಿ ಹೇಳಿದ ವಿಷಯವನ್ನೇ ಮತ್ತೊಂದು ಯುಕ್ತಿಯಿಂದ ಪ್ರತಿಪಾದನೆ ಮಾಡುವುದಕ್ಕಾಗಿ ಸೂತ್ರವನ್ನು ರಚಿಸಿ, ಸೂತ್ರದಲ್ಲಿ ಅವಶೇಷ ಭಾಗವನ್ನು ಪೂರಣೆ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದಾರೆ 'ಜ್ಞೇಯತ್ವ' ಇತ್ಯಾದಿಯಾಗಿ.

ಅವ್ಯಕ್ತಾದಿ ಶ್ರುತಿ ಪ್ರತಿಪಾದ್ಯ ಮಹಾವಿಷ್ಣು

तत्वप्रकाशिका – विष्णोरेवाव्यक्तादिश्रुतिवाच्यत्वम् न प्रधानादेः ।

ಶ್ರುತಿಯಲ್ಲಿರುವ ಅವ್ಯಕ್ತಶಬ್ದಗಳಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ ಹೊರತು, ಪ್ರಕೃತಿಯು ಸರ್ವಥಾ ಪ್ರತಿಪಾದ್ಯವಾಗಿಲ್ಲ.

ಪರಮಾತ್ಮನನೊಬ್ಬನನ್ನು ತಿಳಿದರೆ ಸಾಕು

तत्वप्रकाशिका – 'तमेवैकं जानथ आत्मानमन्या वाचो विमुञ्चथ अमृतस्यैष सेतुः' इति विष्णोरेव मोक्षार्थं ज्ञेयत्ववचनात् ।

ಏಕೆಂದರೆ 'ತಮೇವೈಕಂ ಜಾನಥ ಆತ್ಮಾನಮ್ ಅನ್ಯಾ ವಾಚೋ ವಿಮುಂಚಥ ಅಮೃತಸ್ಯೈಷ ಸೇತುಃ' 'ಆ ಪರಮಾತ್ಮನನ್ನೇ ಮುಖ್ಯವಾಗಿ ತಿಳಿಯಿರಿ. ಉಳಿದ ವಸ್ತುಗಳನ್ನು ತಿಳಿಯುವುದು ವ್ಯರ್ಥ. ಏಕೆಂದರೆ ಆ ಪರಮಾತ್ಮನೇ ಎಲ್ಲರನ್ನು ಮೋಕ್ಷಕ್ಕೆ ಕರೆದೊಯ್ಯುವ ಸೇತುವೆಯಾಗಿದ್ದಾನೆ'. ಹೀಗೆ ಮೋಕ್ಷಕ್ಕೋಸ್ಕರ ಪರಮಾತ್ಮನನ್ನೇ ತಿಳಿಯಬೇಕೆಂದು ಶ್ರುತಿಯು ಘೋಷಣೆ ಮಾಡುತ್ತಿದೆ.

ಪ್ರಕೃತಿಯ ಜ್ಞಾನದಿಂದ ಮೋಕ್ಷವಾಗದು

ತತ್ವಪ್ರಕಾಶಿಕಾ – ಪ್ರಧಾನಾದೇಸ್ತದಭಾವಾತ್ । ಯಜ್ಞಾನೇನ ಮೋಕ್ಷಃ ತಜ್ಞಾಪನ ಏವ ವೇದಸ್ಯ ಪ್ರವೃತ್ತತ್ವಾದಿತಿ ಭಾವಃ ।

ಆದರೆ ಪ್ರಕೃತಿಯ ಜ್ಞಾನದಿಂದ ಇಂತಹ ಮೋಕ್ಷವಾಗುತ್ತದೆಂದು ಯಾವ ಶ್ರುತಿಯಲ್ಲಿಯೂ ಕೂಡ ಹೇಳಿರುವುದಿಲ್ಲ. ಯಾವ ವಿಷ್ಣುವಿನ ಜ್ಞಾನದಿಂದ ಮೋಕ್ಷವು ದೊರೆಯುತ್ತದೋ, ಅಂತಹ ವಿಷ್ಣುವನ್ನು ತಿಳಿಸಲು ವೇದವು ಪ್ರವೃತ್ತವಾಗಿದೆ. ಇದು ಭಾಷ್ಯದ ಅಭಿಪ್ರಾಯ.

ಯಾರ ಮೇಲೆ ವಿಷ್ಣುವಿಗೆ ಪ್ರೀತಿ

ತತ್ವಪ್ರಕಾಶಿಕಾ – ತಥಾ ಚ ಶ್ರಾವಯತಿ

'ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ ಯಾದೃಶೀ ಸ್ಯಾತ್ ।
ತತ್ಪ್ರೀಣನಾನ್ಮೋಕ್ಷಮಾಪ್ನೋತಿ ಸರ್ವಸ್ತತೋ ವೇದಾಸ್ತತ್ಪರಾಃ ಸರ್ವ ಏವ ।।'

ಇತಿ ।। ೪ ।।

ಇದನ್ನೇ ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ.

'ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ ಯಾದೃಶೀ ಸ್ಯಾತ್ ।
ತತ್ಪ್ರೀಣನಾನ್ಮೋಕ್ಷಮಾಪ್ನೋತಿ ಸರ್ವಸ್ತತೋ ವೇದಾಸ್ತತ್ಪರಾಃ ಸರ್ವ ಏವ ।।'

ಸ್ತುತ್ಯನಾದ ಮಹಾವಿಷ್ಣುವಿಗೆ ತನ್ನ ಗುಣೋತ್ಕರ್ಷವನ್ನು ತಿಳಿದವರ ಮೇಲೆ ಎಷ್ಟು ಪ್ರೀತಿಯು ಹುಟ್ಟುತ್ತದೋ, ಅಷ್ಟು ಪ್ರೀತಿಯು ತಿಳಿಯದವರ ಮೇಲೆ ಹುಟ್ಟುವುದಿಲ್ಲ. ಈ ಮಹಾವಿಷ್ಣುವನ್ನು ಸಂತೋಷ ಪಡಿಸುವುದರಿಂದಲೇ ಎಲ್ಲರೂ ಕೂಡ ಮೋಕ್ಷವನ್ನು

ಪಡೆಯುತ್ತಾರೆ. ಆದ್ದರಿಂದಲೇ ಸಕಲವೇದಗಳು ಮುಖ್ಯವಾಗಿ ಅವನನ್ನೇ ಪ್ರತಿಪಾದನೆ ಮಾಡುತ್ತದೆ.

ಭಾವದೀಪ

'ವಿಷ್ಣೋರೇವ' ಎಂಬ ಟೀಕೆಯಲ್ಲಿ ಭಾಷ್ಯದ ವ್ಯಾಖ್ಯಾನ

भावदीपः – आकाङ्क्षां पूरयन् भाष्यं व्याचष्टे – विष्णोरेवेति ।।

ಭಾಷ್ಯದಲ್ಲಿ ಬೇರೆಯವರಿಗೆ ಶ್ರುತಿಪ್ರತಿಪಾದ್ಯತ್ವವನ್ನು ನಿರಾಕರಿಸಿದ್ದಾರೆ. ಬೇರೆಯವರು ಶ್ರುತಿಪ್ರತಿಪಾದ್ಯರಲ್ಲವೆಂದಾದರೆ ಯಾರು ಶ್ರುತಿಪ್ರತಿಪಾದ್ಯರೆಂಬ ಆಕಾಂಕ್ಷೆ ಹುಟ್ಟುತ್ತದೆ. ಅದನ್ನು ಪರಿಹರಿಸುತ್ತಾ ಭಾಷ್ಯದ ಮಾತನ್ನು ವ್ಯಾಖ್ಯಾನಿಸಲು 'ವಿಷ್ಣೋರೇವ' ಎಂಬ ಟೀಕೆಯು ಹೊರಟಿದೆ.

ಸೂತ್ರದಲ್ಲಿ ಮಾಡಬೇಕಾದ ಶೇಷಪೂರಣ

भावदीपः – 'अन्यार्थं तु जैमिनिः' इत्यादौ अन्यस्यापि ज्ञेयत्वोक्तेः सौत्रहेतोरसिद्धिनिरासाय उपलक्षणं मत्वा सूत्रार्थं शेषोक्तिपूर्वमाह – तमेवेति ।।

'ಅನ್ಯಾರ್ಥಂ ತು ಜೈಮಿನಿಃ' ಮೊದಲಾದ ಸೂತ್ರಗಳಲ್ಲಿ ವಿಷ್ಣುವಿಗಿಂತ ಅತಿರಿಕ್ತವಾದ ಬೇರೆ ಪದಾರ್ಥಗಳೂ ಕೂಡ ತಿಳಿಯಲು ಯೋಗ್ಯವಾಗಿವೆ ಎಂದು ಸಮರ್ಥಿಸಲಾಗಿದೆ. ಆದರೆ 'ಜ್ಞೇಯತ್ವಾವಚನಾಚ್ಚ' ಎಂಬ ಈ ಸೂತ್ರದಲ್ಲಿ ಬೇರೆಯವರು ತಿಳಿಯಲು ಯೋಗ್ಯರಲ್ಲವೆಂದು ಹೇಳಲಾಗಿದೆ. ಇದು ಅಸಿದ್ಧವಾಗುತ್ತದಲ್ಲವೆ? ಎಂಬ ಪ್ರಶ್ನೆಗೆ ಸೂತ್ರದ ಮಾತು ಉಪಲಕ್ಷಣವಾಗಿದೆ ಎಂದು ಹೇಳುವವರಾಗಿ ಯಾವ ಪದವನ್ನು ಸೂತ್ರದಲ್ಲಿ ಶೇಷಪೂರಣ ಮಾಡಿಕೊಳ್ಳಬೇಕೋ ಅದನ್ನೂ ಕೂಡ ಉಲ್ಲೇಖಿಸಲು 'ತಮೇವೈಕಂ' ಎಂಬ ಟೀಕಾವಾಕ್ಯವು ಹೊರಟಿದೆ.

ಮೋಕ್ಷಕ್ಕೋಸ್ಕರ ವಿಷ್ಣುವನ್ನು ತಿಳಿಯಬೇಕು

भावदीपः – इयं च द्युभ्वादिनये विष्णुपरत्वेन निर्णीता । अस्त्वेवं तावताऽन्यस्यावाच्यत्वं कुत इत्यतो भावमाह – **यज्ज्ञानेनेति ।।**

ದ್ಯುಭ್ವಾದ್ಯಧಿಕರಣದಲ್ಲಿ 'ತಮೇವೈಕಂ' ಎಂಬ ಶ್ರುತಿಯು ವಿಷ್ಣುಪರವಾಗಿದೆಯೆಂದು ನಿರ್ಣಯಿಸಲಾಗಿದೆ. ಶ್ರುತಿಯು ಮೋಕ್ಷಕ್ಕೋಸ್ಕರ ವಿಷ್ಣುವನ್ನು ತಿಳಿಯಬೇಕೆನ್ನುತ್ತಿದೆ. ಇಷ್ಟು ಹೇಳಿದ ಮಾತ್ರಕ್ಕೆ ಬೇರೆ ಪದಾರ್ಥಗಳು ಏಕೆ ಶಬ್ದಪ್ರತಿಪಾದ್ಯವಾಗಬಾರದು ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಇದರ ಪರಿಹಾರಕ್ಕಾಗಿ ಶ್ರುತಿಯ ಅಭಿಪ್ರಾಯವನ್ನು 'ಯಜ್ಜ್ಞಾನೇನ' ಇತ್ಯಾದಿ ಟೀಕೆಯಿಂದ ಸ್ಪಷ್ಟಪಡಿಸುತ್ತಿದ್ದಾರೆ.

ತತ್ತ್ವಜ್ಞಾನಕ್ಕೆ ವಿಷಯನಾದವನು ಮಹಾವಿಷ್ಣು ಮಾತ್ರ

भावदीपः – कुत इत्यत आह – तया चेति ।। श्रावयति श्रुतिर्वक्ति । इयं तत्त्वनिर्णयादावुदाहृता । अनया श्रुत्या सर्वस्य ब्रह्मपरत्वे सिद्धे प्रतिवाक्यं च तत्परत्वस्यादावन्ते च मध्ये च विष्णुः सर्वत्र गीयत इत्यादिवचनसिद्धत्वात् स्वतः प्राप्तमुख्यवृत्तित्यागे च हेत्वभावाद्विष्णोरेव अव्यक्तादिश्रुतिवाच्यत्वमिति भावः ।।४।।

ಮೋಕ್ಷಕ್ಕೆ ಕಾರಣವಾದ ತತ್ತ್ವಜ್ಞಾನಕ್ಕೆ ವಿಷಯನಾದವನು ಮಹಾವಿಷ್ಣುವೇ ಆಗಿದ್ದಾನೆಂಬ ವಿಷಯದಲ್ಲಿ ಏನು ಪ್ರಮಾಣ? ಎಂಬುದಕ್ಕೆ ಉತ್ತರಿಸಲು 'ತಥಾಚ' ಎಂಬ ವಾಕ್ಯವು ಹೊರಟಿದೆ.

ಶ್ರಾವಯತಿ = ಶ್ರುತಿ ಹೇಳುತ್ತಿದೆ. 'ನ ತಾದೃಶಿ' ಎಂಬ ಪ್ರಮಾಣವಾಕ್ಯವು ತತ್ತ್ವನಿರ್ಣಯ ಮೊದಲಾದ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಶ್ರುತಿವಾಕ್ಯದಿಂದ ಸಕಲ ವಾಕ್ಯಗಳೂ ಬ್ರಹ್ಮಪರವಾಗಿವೆಯೆಂದು ಸಿದ್ಧವಾಗುತ್ತದೆ. ಹೀಗೆ ಶ್ರುತಿಯು ಬ್ರಹ್ಮಪರವೆಂದು ಸಿದ್ಧವಾದ ಮೇಲೆ 'ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ' ಎಂಬ ಪ್ರಮಾಣವಚನದಂತೆ ಪ್ರತಿಯೊಂದು ವಾಕ್ಯಗಳೂ ಕೂಡ ವಿಷ್ಣುಪರವೆಂದು ಸಿದ್ಧವಾಗುತ್ತವೆ. ಆದ್ದರಿಂದ ಸ್ವಾಭಾವಿಕವಾಗಿ ಸಿದ್ಧವಾದ ಮುಖ್ಯವೃತ್ತಿಯನ್ನು ಬಿಡಲು ಯಾವುದೇ ಕಾರಣವಿರುವುದಿಲ್ಲ. ಆದ್ದರಿಂದ ಮಹಾವಿಷ್ಣುವೇ ಅವ್ಯಕ್ತಶ್ರುತಿ ಮೊದಲಾದವುಗಳಿಂದ ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯವಾಯಿತು.

ಬ್ರಹ್ಮಸೂತ್ರ

'ವದತೀತಿ ಚೇನ್ನ ಪ್ರಾಜ್ಞೋ ಹಿ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। वदतीति चेन्न प्राज्ञो हि ।। ९ ।।

ಸೂತ್ರಾರ್ಥ - 'ಅನಾದ್ಯಂತಮ್' ಎಂಬ ಶ್ರುತಿಯು ಪ್ರಕೃತಿಗೂ ಕೂಡ ಮುಮುಕ್ಷು ಜ್ಞೇಯತ್ವವನ್ನು ಹೇಳುತ್ತಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಆ ಶ್ರುತಿಯಲ್ಲಿಯೂ ಕೂಡ ಸರ್ವಜ್ಞನಾದ ಮಹಾವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಮುಮುಕ್ಷು ಜ್ಞೇಯತ್ವವನ್ನು ಅವನಲ್ಲಿಯೇ ಹೇಳುತ್ತಿದೆ.

ಅರ್ಥ -- ವದತಿ ಇತಿ ಚೇತ್ = 'ಅನಾದ್ಯನಂತಮ್' ಎಂಬ ಕಾಠಕೋಪನಿಷತ್ತು ಪ್ರಧಾನಕ್ಕೂ ಕೂಡ ಮುಮುಕ್ಷುಜ್ಞೇಯತ್ವವನ್ನು ಹೇಳುತ್ತಿದೆಯಲ್ಲವೇ? ನ = ಹೀಗೆ ಪ್ರಶ್ನಿಸಬಾರದು. ಹಿ = ಏಕೆಂದರೆ, ಪ್ರಾಜ್ಞಃ = ಪ್ರಾಜ್ಞಶಬ್ದದಿಂದ ಪ್ರತಿಪಾದ್ಯನಾದ ಪರಮಾತ್ಮನೇ ಆ ಶ್ರುತಿಯಲ್ಲಿಯೂ ಪ್ರತಿಪಾದ್ಯನಾಗಿದ್ದಾನೆ ಹೊರತು, ಪ್ರಕೃತಿಯಲ್ಲ. ಆದ್ದರಿಂದ ಮುಮುಕ್ಷುಜ್ಞೇಯತ್ವವನ್ನು ಪ್ರಕೃತಿಯಲ್ಲಿ ತಿಳಿಯಬಾರದು.

ಬ್ರಹ್ಮಸೂತ್ರಭಾಷ್ಯ

ಪ್ರಕೃತಿಯು ಜ್ಞೇಯವಲ್ಲ

ब्रह्मसूत्रभाष्यम् – 'महतः परं ध्रुवं निचाय्य तं मृत्युमुखात् प्रमुच्यते' (क.उ. १-३-१५) इति ज्ञेयत्वं वदतीति चेत् ।

ಅನುವಾದ - 'ಮಹತಃ ಪರಂ' ಇತ್ಯಾದಿ ಶ್ರುತಿಯು ಪ್ರಕೃತಿಗೂ ಕೂಡ ಜ್ಞೇಯತ್ವವನ್ನು ಎಂದು ಹೇಳುತ್ತಿದೆಯಲ್ಲವೇ?

ಪ್ರತಿಪದಾರ್ಥ -- ಹಿಂದೆ ಹೇಳಿದ ಪ್ರಮೇಯವನ್ನು ಆಕ್ಷೇಪ ಮಾಡಿ, ಸಮಾಧಾನವನ್ನು ನೀಡುವ ಸೂತ್ರವನ್ನೇ ಉಪನ್ಯಾಸ ಮಾಡಿ, ಆಕ್ಷೇಪಾಂಶವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. –

ವದತಿ ಇತಿ ಚೇತ್, 'ಮಹತಃ ಪರಂ ಧ್ರುವಂ ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ' ಮಹತಃ = ಮಹತ್ತತ್ವಕ್ಕಿಂತ, ಪರಂ =

ಉತ್ತಮವಾದ, ಧ್ರುವಂ = ನಿತ್ಯವಾದ, ತಂ = ಪ್ರಧಾನವನ್ನು, ನಿಚಾಯ್ಯ = ತಿಳಿದುಕೊಂಡು, ಮೃತ್ಯುಮುಖಾತ್ = ಸಂಸಾರದಿಂದ, ಪ್ರಮುಚ್ಯತೇ = ಮುಕ್ತನಾಗುತ್ತಾನೆ. ಇತಿ = ಹೀಗೆ ಕಾಠಕೋಪನಿಷತ್ತಿನಲ್ಲಿ, ಜ್ಞೇಯತ್ವಂ = ಪ್ರಧಾನಾದಿಗಳಿಗೂ ಮೋಕ್ಷಕ್ಕೋಸ್ಕರ ಜ್ಞೇಯತ್ವವನ್ನು ಹೇಳಲಾಗಿದೆ. ಇತಿ ಚೇತ್ = ಇಷ್ಟು ಆಕ್ಷೇಪ.

'ಅನಾದ್ಯನಂತಂ' ಎಂಬ ಶ್ರುತಿಯಿಂದ ಶ್ರೀಹರಿಯೇ ಪ್ರತಿಪಾದ್ಯ

ಬ್ರಹ್ಮಸೂತ್ರಭಾಷ್ಯಮ್ – ನ ಪ್ರಾಜ್ಞಃ ಪರಮಾತ್ಮಾ ಹಿ ತತ್ರೋಚ್ಯತೇ । 'ಅಣೋರಣೀಯಾನ್ ಮಹತೋ ಮಹೀಯಾನ್' (ಕ.ತ. ೧-೨-೨೦) ಇತಿ ತಸ್ಯೈವ ಹಿ ಮಹತೋ ಮಹತ್ವಮ್ । ಸರ್ವಸ್ಮಾತ್ ಪರಸ್ಯ ಮಹತೋಽಪಿ ಪರತ್ವಂ ಯುಜ್ಯತೇ ।।೯।।

ಅನುವಾದ - ಇದು ಸರಿಯಲ್ಲ. ಏಕೆಂದರೆ 'ಮಹತಃ ಪರಂ' ಎಂಬ ವಾಕ್ಯದಲ್ಲಿಯೂ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ. 'ಅಣೋರಣೀಯಾನ್ ಮಹತೋ ಮಹೀಯಾನ್ ' ಎಂಬ ಹಿಂದಿನ ಪ್ರಕರಣದಲ್ಲಿ ಮಹತ್ತತ್ತ್ವಕ್ಕಿಂತಲೂ ಉತ್ತಮತ್ವವನ್ನು ಹೇಳಿದ್ದು ಮಹಾವಿಷ್ಣುವಿನಲ್ಲಿ ಕೂಡುತ್ತದೆ. ಏಕೆಂದರೆ ಎಲ್ಲಾ ಪದಾರ್ಥಗಳಿಗಿಂತಲೂ ಯಾರು ಉತ್ತಮನೋ, ಅವನೇ ಮಹತ್ತತ್ತ್ವಕ್ಕಿಂತಲೂ ಉತ್ತಮನಾಗುತ್ತಾನೆಂದು ಹೇಳಬೇಕಷ್ಟೇ.

ಪ್ರತಿಪದಾರ್ಥ -- ಸೂತ್ರದ ಪರಿಹಾರ ಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. –

ನ = ಮೇಲೆ ಉಲ್ಲೇಖಿಸಿದ ವಾಕ್ಯದ ಬಲದಿಂದ ಪ್ರಕೃತಿಗೆ ಮೋಕ್ಷಕ್ಕೋಸ್ಕರ ಜ್ಞೇಯತ್ವವನ್ನು ತಿಳಿಯಬಾರದು. ಹಿ = ಏಕೆಂದರೆ, ತತ್ರ = ಮೇಲೆ ಉದಾಹರಿಸಿದ ವಾಕ್ಯದಲ್ಲಿ, ಪ್ರಾಜ್ಞಃ = ಪ್ರಾಜ್ಞನಾದ, ಪರಮಾತ್ಮಾ = ಪರಮಾತ್ಮನು, ಉಚ್ಯತೇ = ಪ್ರತಿಪಾದ್ಯನಾಗಿದ್ದಾನೆ ಹೊರತು ಪ್ರಧಾನವಲ್ಲ.

ಮಹತಃಪರತ್ವಲಿಂಗದಿಂದ ಪ್ರಕೃತಿಯು ಪ್ರತಿಪಾದ್ಯವಾಗಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಹಿ = ಯಾವ ಕಾರಣದಿಂದ, ಅಣೋರಣೀಯಾನ್ = ಅಣುಪದಾರ್ಥಗಳಿಗೂ ಅಣುತರನು, ಮಹತೋ ಮಹೀಯಾನ್ = ಮಹತ್‌ಪದಾರ್ಥಗಳಿಗೆ ಮಹತ್

ಪರಿಮಾಣವುಳ್ಳವನು. ಇತಿ = ಹೀಗೆ, ತಸ್ಯೈವ = ಪರಮಾತ್ಮನಲ್ಲಿ, ಮಹತೋ ಮಹತ್ವಮ್ = ಮಹತ್ ಪದಾರ್ಥಗಳಿಂತಲೂ ಮಹತ್ವವನ್ನು ಹೇಳಲಾಗಿದೆ. ಸರ್ವಸ್ಮಾತ್ = ಚತುರ್ಮುಖಾದಿ ಜೀವರಾಶಿಗಳಿಗಿಂತಲೂ ಮಹತ್ತತ್ವ ಪ್ರಕೃತಿತತ್ವಗಳಿಗಿಂತಲೂ, ಪರಸ್ಯ = ಶ್ರೇಷ್ಠನಾದ ಪರಮಾತ್ಮನಿಗೆ, ಮಹತೋऽಪಿ = ಮಹತ್ತತ್ತ್ವಾದಿಗಳಿಗಿಂತಲೂ, ಪರತ್ವಂ = ಎಲ್ಲ ಬಗೆಯ ಉತ್ತಮತ್ವವು, ಯುಜ್ಯತೇ = ಯುಕ್ತವಾಗುತ್ತದಷ್ಟೇ.

ತತ್ತ್ವಪ್ರಕಾಶಿಕಾ

ಹಿಂದಿನ ಸೂತ್ರದ ಮೇಲೆ ಅಧಿಕಾಕ್ಷೇಪ

उक्तमाक्षिप्य समादधत् सूत्रमुपन्यस्याऽऽक्षेपांशं तावद् व्याचष्टे – वदतीति ।।

ಹಿಂದಿನ ಸೂತ್ರದಲ್ಲಿ ಸಮರ್ಥನೆ ಮಾಡಿದ ವಿಷಯವನ್ನು ಆಕ್ಷೇಪ ಮಾಡಿ ಸಮಾಧಾನವನ್ನು ಹೇಳುವಂತಹ ಸೂತ್ರವನ್ನು ಪಠಿಸುತ್ತಿದ್ದಾರೆ. ಸೂತ್ರದಲ್ಲಿರುವ ಆಕ್ಷೇಪಭಾಗವನ್ನಷ್ಟೇ ಮೊದಲು ವ್ಯಾಖ್ಯಾನ ಮಾಡುತ್ತಿದ್ದಾರೆ 'ವದತಿ' ಇತ್ಯಾದಿಯಾಗಿ.

ಪ್ರಕೃತಿಯ ಜ್ಞಾನವು ಮೋಕ್ಷಕ್ಕೆ ಏಕೆ ಕಾರಣವಲ್ಲ?

तत्त्वप्रकाशिका – न प्रधानस्य मोक्षार्थं ज्ञेयत्वे वचनाभावः । 'अनाद्यनन्तं महतः परं ध्रुवं निचाय्य तं मृत्युमुखात् प्रमुच्यते' इति वचनस्य सद्भावात् ।

ಮೋಕ್ಷಕ್ಕೋಸ್ಕರ ಪ್ರಕೃತಿಯನ್ನು ತಿಳಿಯಬೇಕು ಎಂಬ ಶ್ರುತಿವಾಕ್ಯವು ಎಲ್ಲಿಯೂ ಇರುವುದಿಲ್ಲವೆಂದು ಹೇಳಿದ್ದು ತಪ್ಪು. 'ಅನಾದ್ಯನಂತಂ ಮಹತಃ ಪರಂ ಧ್ರುವಂ ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ' 'ಆದಿ-ಅಂತ್ಯಗಳಿಲ್ಲದ ಮಹತ್ತತ್ವಕ್ಕಿಂತಲೂ ಶ್ರೇಷ್ಠವಾದ

ನಿರ್ವಿಕಾರವಾದ ಪ್ರಕೃತಿ ಎಂಬ ತತ್ವವನ್ನು ಯಾರು ತಿಳಿಯುತ್ತಾರೋ ಅವರು ಸಂಸಾರದಿಂದ ಮುಕ್ತರಾಗುತ್ತಾರೆ' ಎಂಬ ಶ್ರುತಿಯು ಪ್ರಕೃತಿಯ ಜ್ಞಾನವು ಮೋಕ್ಷಕ್ಕೆ ಕಾರಣವೆಂದು ಹೇಳುತ್ತಿದೆ.

ಪ್ರಕೃತಿಯು ಮಹತ್ತತ್ವವನ್ನು ವ್ಯಾಪಿಸಿದೆ

तत्वप्रकाशिका – नच त्राच्यमत्र प्रधानं प्रतिपाद्यं कुतः? इति । महत्परत्वलिङ्गादेव । 'महान्तं च समावृत्या प्रधानं समवस्थितम्' इत्यादेः ।

ಈ ಶ್ರುತಿವಾಕ್ಯವು ಪ್ರಕೃತಿಯನ್ನೇ ಪ್ರತಿಪಾದನೆ ಮಾಡುತ್ತಿದೆಯೆಂಬುದು ಹೇಗೆ ಸಿದ್ಧವಾಗುತ್ತದೆ. ಎಂದು ಸಂಶಯಪಡಬಾರದು. ಏಕೆಂದರೆ 'ಮಹತಃ ಪರಂ' ಎಂಬುದಾಗಿ 'ಮಹತ್‌ಪರತ್ವ' ಎಂಬ ಪ್ರಕೃತಿಯ ಅಸಾಧಾರಣಧರ್ಮವು ಇಲ್ಲಿ ಶ್ರುತವಾಗಿದೆ. ಮತ್ತು 'ಮಹಾಂತಂ ಚ ಸಮಾವೃತ್ಯಾ ಪ್ರಧಾನಂ ಸಮವಸ್ಥಿತಮ್' ಮಹತ್ತತ್ವವನ್ನು ವ್ಯಾಪಿಸಿ ಪ್ರಕೃತಿಯು ಇರುತ್ತದೆ ಎಂಬ ವಚನವೂ ಕೂಡ ಇದೇ ವಿಷಯದಲ್ಲಿ ಆಧಾರವಾಗಿದೆ.

'ವದತೀತಿಚೇತ್' ಎಂಬ ಸೂತ್ರದ ವ್ಯಾಖ್ಯಾನ

तत्वप्रकाशिका – पूर्वोक्तरीत्या तदपि विष्णुपरतया नेतुं शक्यम्, इति चेत् । सत्यम् । अन्यस्यापि वाच्यत्वाऽभ्युपगमात् । प्रधानस्यापि मोक्षार्थं ज्ञेयत्ववचनात् तस्यापि मुख्यतो वेदवेद्यतेति भावः ।

'ತದಧೀನತ್ವಾದರ್ಥವತ್' ಎಂಬ ಹಿಂದಿನ ಸೂತ್ರದಲ್ಲಿ ಹೇಳಿದ ಪ್ರಕಾರ ಮಹತ್‌ಪರತ್ವವು ವಿಷ್ಣುವಿನ ಲಿಂಗವೆಂದು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಹುದು. ಆದರೆ ಮಹತ್ ಪರತ್ವವು ವಿಷ್ಣುವಿನ ಲಿಂಗವಾಗಿದ್ದರೂ ಕೂಡ ಪ್ರಕೃತ್ಯಾದಿ ತತ್ವಗಳಲ್ಲಿಯೂ ಪ್ರಧಾನ ಮೊದಲಾದ ಶಬ್ದಗಳ ವಾಚ್ಯತ್ವವನ್ನು ನೀವೂ ಕೂಡ ಅಂಗೀಕರಿಸಿದ್ದೀರಿ. ಆದ್ದರಿಂದ ಪ್ರಧಾನವೂ ಕೂಡ ಮೋಕ್ಷಕ್ಕೋಸ್ಕರ ಜ್ಞೇಯವೇ ಆಗಿರುತ್ತದೆ. ಮುಖ್ಯತಃ ವಿಷ್ಣು ಹೇಗೆ ವೇದವೇದ್ಯನಾಗಿದ್ದಾನೋ ಅದರಂತೆ ಪ್ರಕೃತಿಯೂ ವೇದದಿಂದ ಮುಖ್ಯವಾಗಿ ವೇದ್ಯವೇ ಆಗಿದೆಯೆಂದು ಹೇಳಬೇಕು. ಇದು ಸೂತ್ರದಲ್ಲಿರುವ 'ವದತೀತಿಚೇತ್' ಎಂಬ ಆಕ್ಷೇಪಭಾಗದ ಅಭಿಪ್ರಾಯವಾಗಿದೆ.

'ನ ಪ್ರಾಜ್ಞೋಹಿ' ಎಂಬ ಸೂತ್ರದ ವ್ಯಾಖ್ಯಾನ

तत्वप्रकाशिका – परिहाराशं व्याचष्टे – नेति ।। नैतद्वाक्यबलेन प्रधानस्य मोक्षार्थं ज्ञेयत्वं मन्तव्यम् । यतस्तत्र वाक्ये परमात्मैवोच्यते न प्रदानमित्यर्थः ।

'ನ ಪ್ರಾಜ್ಞೋಹಿ' ಎಂಬ ಸೂತ್ರದಲ್ಲಿರುವ ಪರಿಹಾರ ಭಾಗವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ 'ನ' ಇತ್ಯಾದಿಯಾಗಿ. 'ಮಹತಃ ಪರಂ' ಎಂಬ ವಾಕ್ಯದ ಆಧಾರದಿಂದ ಪ್ರಧಾನವು ಮೋಕ್ಷಕ್ಕೋಸ್ಕರ ಜ್ಞೇಯವಾಗಿದೆಯೆಂದು ಸರ್ವಥಾ ತಿಳಿಯಬಾರದು. ಏಕೆಂದರೆ ಈ ವಾಕ್ಯದಲ್ಲಿಯೂ ಕೂಡ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ ಹೊರತು, ಪ್ರಕೃತಿಯು ಅಲ್ಲ.

'ಅಣೋರಣೀಯಾನ್' ಎಂಬ ಶ್ರುತಿಯ ಉಲ್ಲೇಖದ ಬಗ್ಗೆ

तत्वप्रकाशिका – महतः परत्वलिङ्गात् प्रधानमत्रोच्यते, इति । तत्राह – अणोरिति ।।

'ಮಹತಃ ಪರತ್ವ' ಎಂಬ ಲಿಂಗದಿಂದ ಪ್ರಕೃತಿಯು ಪ್ರತಿಪಾದ್ಯವಾಗಿದೆಯಲ್ಲವೇ? ಎಂಬ ಆಕ್ಷೇಪವನ್ನು ಪರಿಹರಿಸಲು 'ಅಣೋರಣೀಯಾನ್' ಎಂಬ ಶ್ರುತಿಯನ್ನು ಉಲ್ಲೇಖಿಸುತ್ತಿದ್ದಾರೆ.

ಮಹತ್ ಶಬ್ದಕ್ಕೆ ಮಹತ್ತತ್ವ ಎಂದರ್ಥವಲ್ಲ

तत्वप्रकाशिका – ननु 'अणोरणीयान्' इति श्रुतौ सर्वस्मात् स्थूलात् स्थूलत्वमेवोच्यते, न महत्तत्वपरत्वम्, स्थूलस्यैवाणुप्रतियोगित्वात् । अतो न महत्परत्वलिङ्गं विष्णौ सावकाशम्, इत्यत आह – सर्वस्मादिति ।।

ಪ್ರಶ್ನೆ - 'ಅಣೋರಣೀಯಾನ್' ಎಂಬ ಶ್ರುತಿಯಲ್ಲಿ ಸಕಲ ಸ್ಥೂಲ ಪದಾರ್ಥಗಳಿಗಿಂತ ಹೆಚ್ಚು ಸ್ಥೂಲವಾಗಿರುವಿಕೆಯನ್ನು ಪರಮಾತ್ಮನಲ್ಲಿ ಹೇಳಲಾಗಿದೆ. ಮಹತ್ತತ್ವಕ್ಕಿಂತ ಪರತ್ವವನ್ನು ಹೇಳಿರುವುದಿಲ್ಲ. ಏಕೆಂದರೆ ಅಣುವಿಗೆ ವಿರುದ್ಧವಾದದ್ದು ಸ್ಥೂಲ ಪದಾರ್ಥವೇ ಆಗಿದೆ.

ಮಹತ್ತತ್ವವಲ್ಲ. 'ಮಹತೋ ಮಹೀಯಾನ್' ಎಂಬ ಶ್ರುತಿಯಲ್ಲಿ 'ಮಹತ್' ಶಬ್ದಕ್ಕೆ 'ಮಹತ್ತತ್ವ' ಎಂದೂ ಕೂಡ ಅರ್ಥವಲ್ಲ. ಆದ್ದರಿಂದ ಮಹತ್ತತ್ವಕ್ಕಿಂತ ಉತ್ತಮತ್ವವು ಈ ಶ್ರುತಿಯಿಂದ ವಿಷ್ಣುವಿನಲ್ಲಿ ಸಿದ್ಧವಾಗುವುದಿಲ್ಲ.

ಪರಮಾತ್ಮನಲ್ಲಿ ವಿರುದ್ಧ ಧರ್ಮವಿರುತ್ತವೆಂಬುದನ್ನು ಸಮರ್ಥಿಸಲು 'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬ ಶ್ರುತಿಯು ಹೊರಟಿದೆ. ಅಣುವಿಗೆ ವಿರುದ್ಧವಾದ ಪದಾರ್ಥವೆಂದರೆ ಸ್ಥೂಲಪದಾರ್ಥವೇ ಹೊರತು, ಮಹತ್ತತ್ವವಲ್ಲ. ಆದ್ದರಿಂದ ಈ ಶ್ರುತಿಯಲ್ಲಿ 'ಮಹತ್' ಎಂಬ ಶಬ್ದಕ್ಕೆ ಮಹತ್ತತ್ವ ಎಂದು ಅರ್ಥಮಾಡಬಾರದು. ಸ್ಥೂಲಪದಾರ್ಥವೆಂದಷ್ಟೇ ಅರ್ಥೈಸಬೇಕು.

ವಿಷ್ಣುವಿನಲ್ಲಿ ಮಹತಃ ಪರತ್ವ

तत्वप्रकाशिका – सत्यम्, 'अत्र सर्वस्मात् स्थूलात् स्थूलत्वं विष्णोरुच्यते' इति । तथाप्यनेन महत् परत्वं च सिध्यति ।

ಹೌದು. ಸಕಲ ಸ್ಥೂಲಪದಾರ್ಥಗಳಿಗಿಂತಲೂ ಪರಮಾತ್ಮನು ಸ್ಥೂಲನಾಗಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಆದರೂ ಕೂಡ ಇದೇ ಮಾತಿನಿಂದಲೇ 'ಮಹತಃ ಪರತ್ವ' ಎಂಬುದು ವಿಷ್ಣುವಿನಲ್ಲಿ ಸ್ವತಃ ಸಿದ್ಧವಾಗುತ್ತದೆ.

ಶ್ರುತ್ಯರ್ಥವು ಹರಿಯಲ್ಲಿ ಸಹಜ ಸಿದ್ಧ

तत्वप्रकाशिका – यदा खलु सर्वस्मात् स्थूलात् परस्तदा महत्तत्वपरत्वस्य सुतरां युक्तत्वादिति भावः ।। ९ ।।

ಏಕೆಂದರೆ ಪರಮಾತ್ಮನು ಸಕಲ ಸ್ಥೂಲಪದಾರ್ಥಗಳಿಗಿಂತ ಹೆಚ್ಚು ಸ್ಥೂಲನಾಗಿದ್ದಾನೆಂದು ಹೇಳಿದಾಗ 'ಮಹತ್ತತ್ವ' ಎಂಬ ಸ್ಥೂಲ ಪದಾರ್ಥಕ್ಕಿಂತಲೂ ಉತ್ತಮನಾಗಿದ್ದಾನೆಂಬ ಅರ್ಥವು ಸ್ವಾಭಾವಿಕವಾಗಿಯೇ ಸಿದ್ಧವಾಗುತ್ತದೆಂಬುದು ಸೂತ್ರಕಾರರ ಅಭಿಪ್ರಾಯ.

ಭಾವದೀಪ

'ಮಹತಃ' ಇತ್ಯಾದಿ ಭಾಷ್ಯ ವ್ಯಾಖ್ಯಾನ

ಭಾವದೀಪಃ – ಉಕ್ತಮಿತ್ಯೇತೇದ್ ವ್ಯಞ್ಜಯನ್ 'ಮಹತಃ' ಇತ್ಯಾದಿ ಭಾಷ್ಯಂ ವ್ಯಾಚಷ್ಟೇ – ನ ಪ್ರಧಾನಸ್ಯೇತಿ ।।

ಹಿಂದಿನ ಸೂತ್ರದಲ್ಲಿ ಹೇಳಿದ ವಿಚಾರವನ್ನು ಸ್ಪಷ್ಟಪಡಿಸುವವರಾಗಿ 'ಮಹತಃ' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ನ ಪ್ರಧಾನಸ್ಯ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

'ಮಹಾಂತಂ ಚ ಸಮಾವೃತ್ಯ' ಎಂಬ ಗೀತೆಯ ವ್ಯಾಖ್ಯಾನ

ಭಾವದೀಪಃ – ಭಾಷ್ಯೇ ಮಹತಃ ಪರಮಿತ್ಯಂಶೋಕ್ತೇಃ ಉಪಯೋಗಮಾಹ – ನಚ ವಾಚ್ಯಮಿತ್ಯಾದಿನಾ।। ಇತ್ಯಾದೇರಿತಿ ।। ಏಕಾದಶಗೀತಾಭಾಷ್ಯೋಕ್ತಾದಿತ್ಯಪುರಣವಾಕ್ಯಮ್।।

ಭಾಷ್ಯದಲ್ಲಿ 'ಮಹತಃ ಪರಂ' ಎಂಬ ಶ್ರುತಿಯ ಭಾಗವನ್ನು ಉಲ್ಲೇಖಿಸಲು ಏನು ಕಾರಣ? ಎಂಬ ಪ್ರಶ್ನೆಗೆ 'ನಚ ವಾಚ್ಯಮ್' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಮಹಾಂತಂ ಚ ಸಮಾವೃತ್ಯ' ಎಂಬ ವಾಕ್ಯವು ಹನ್ನೊಂದನೆಯ ಅಧ್ಯಾಯದ ಗೀತಾಭಾಷ್ಯದಲ್ಲಿ ಉಲ್ಲೇಖಿಸಿದ ಪುರಾಣವಾಕ್ಯವೆಂಬುದನ್ನು 'ಇತ್ಯಾದೇಃ' ಎಂಬುದರಿಂದ ಹೇಳಿದ್ದಾರೆ.

ಪೂರ್ವಪಕ್ಷಿಗೆ ಅನಿಷ್ಟವಾಗಿದೆ

ಭಾವದೀಪಃ – ಪೂರ್ವೋಕ್ತೇತಿ ।। ತದಧೀನತ್ವಾದರ್ಥವದಿತ್ಯುಕ್ತರೀತ್ಯೇತ್ಯರ್ಥಃ । ತದಪಿ ಮಹತ್ಪರತ್ವಮಪಿ ।। ತರ್ಹಿ ಕಿಮನಿಷ್ಟಂ ಸಿದ್ಧಾನ್ತೇऽಪಿ ತಸ್ಯಾನಿರಾಸಾದಿತ್ಯತೋ ನಿಚಾಯ್ಯೇತ್ಯಾದ್ಯಂಶೋಕ್ತಿತಾತ್ಪರ್ಯಮಾಹ – ಅತ ಇತಿ ನಿರಪವಾದೋಕ್ತಲಿಙ್ಗಾದಿತ್ಯರ್ಥಃ ।

'ಪೂರ್ವೋಕ್ತರೀತ್ಯಾ' ಎಂಬುದಕ್ಕೆ 'ತದಧೀನತ್ವಾದರ್ಥವತ್' ಎಂಬ ಸೂತ್ರದಲ್ಲಿ ಹೇಳಿದ ಪ್ರಕಾರ ಎಂದರ್ಥ. 'ತದಪಿ' = ಮಹತ್‌ಪರತ್ವ ಎಂಬುದೂ ಕೂಡ. ಪ್ರಕೃತಿಯ ಜ್ಞಾನವೂ ಕೂಡ ಮೋಕ್ಷಕ್ಕೆ ಉಪಯುಕ್ತವಾಗಿದೆ ಎಂದು ಸಿದ್ಧಾಂತದಲ್ಲಿ ನಿರಾಕರಣೆ ಮಾಡದಿದ್ದಾಗ, ಪೂರ್ವಪಕ್ಷಿಗೆ ಅನಿಷ್ಟವಾದದ್ದನ್ನು ಹೇಗೆ ಹೇಳಿದಂತಾಯಿತು? ಎಂಬ ಪ್ರಶ್ನೆಗೆ 'ನಿಚಾಯ್ಯ ತಮ್' ಎಂಬ ಶ್ರುತಿವಾಕ್ಯದ ಅಂಶದಿಂದಲೇ

ಉತ್ತರ ನೀಡಿದಂತಾಗಿದೆ ಎಂದು ತಿಳಿಸಲು ಶ್ರುತಿಯ ತಾತ್ಪರ್ಯವನ್ನು 'ಅತಃ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ಯಾವುದೇ ಅಪವಾದವಿಲ್ಲದ ಲಿಂಗವಿರುವುದರಿಂದ ಎಂದರ್ಥ.

ಸೂತ್ರದಲ್ಲಿರುವ 'ನ' ಎಂಬುದರ ವ್ಯಾಖ್ಯಾನ

भावदीपः – नेत्यत्र प्रतियोग्याकाङ्क्षायां पूर्वयोगोक्तं संयोजयति – नैतदिति ।। हीत्यस्यार्थो यत इति । तत्रेति भाष्यस्यानुवादः ।

ಸೂತ್ರದಲ್ಲಿರುವ 'ನ' ಎಂಬ ಪದವನ್ನು ಕೇಳಿದಾಗ ಪ್ರತಿಯೋಗಿಯ ಆಕಾಂಕ್ಷೆಯು ಹುಟ್ಟುತ್ತದೆ. ಅದಕ್ಕಾಗಿ ಹಿಂದೆ ಪ್ರಸಕ್ತವಾದದ್ದನ್ನು ಸಂಯೋಜನೆ ಮಾಡುವ ಮೂಲಕ ಶ್ರುತ್ಯರ್ಥವನ್ನು ತಿಳಿಯಬೇಕೆಂದು ಸ್ಪಷ್ಟಪಡಿಸಲು 'ನೈತತ್' ಎಂಬ ಟೀಕಾವಾಕ್ಯವು ಹೊರಟಿದೆ. ಸೂತ್ರದಲ್ಲಿರುವ 'ಹಿ' ಎಂಬ ಪದದ ಅರ್ಥವನ್ನು 'ಯತಃ' ಎಂದು ಟೀಕೆಯಲ್ಲಿ ಹೇಳಿದ್ದಾರೆ. 'ತತ್ರ' ಎಂಬ ಪದವು 'ತತ್ರೋಚ್ಯತೇ' ಎಂಬ ಭಾಷ್ಯದಲ್ಲಿರುವ 'ತತ್ರ' ಎಂಬ ಪದದ ಅನುವಾದ ರೂಪವಾಗಿದೆ.

ಅಣುವಿಗೆ ಪ್ರತಿಯೋಗೀ ಸ್ಥೂಲ

भावदीपः – ननु महत इति पदेन महत्तत्वमेवोच्यतामित्यत आह – स्थूलस्यैवेति ।। प्रतियोगित्वादिति ।। अणोरित्युक्तस्य प्रतिद्वन्द्वित्वात् स्थूलवस्तुन एतत् प्रतिद्वन्द्वितायोग्यत्वादित्यर्थः ।।५।।

'ಮಹತಃ ಪರಮವ್ಯಕ್ತಮ್' ಎಂಬಲ್ಲಿರುವ 'ಮಹತ್' ಪದದಿಂದ ಮಹತ್ತತ್ವವನ್ನೇ ವಿವಕ್ಷಿಸಬಹುದಲ್ಲವೇ? ಎಂಬ ಪ್ರಶ್ನೆಗೆ 'ಸ್ಥೂಲಸ್ಯೈವ' ಎಂಬುದರಿಂದ ಉತ್ತರಿಸಿದ್ದಾರೆ. 'ಪ್ರತಿಯೋಗಿತ್ವಾತ್' ಎಂಬುದರ ಅಭಿಪ್ರಾಯ ಹೀಗಿದೆ - ಅಣುಪದಾರ್ಥಕ್ಕೆ ಪ್ರತಿಯೋಗಿಯಾದದ್ದು, ಸ್ಥೂಲಪದಾರ್ಥವೇ ಆಗಿರುತ್ತವೆ. ಆದ್ದರಿಂದ ಸ್ಥೂಲಪದಾರ್ಥವೇ ಅಣುವಿಗೆ ಪ್ರತಿಯೋಗಿಯಾಗಲು ಯೋಗ್ಯವಾಗಿರುತ್ತವೆ.

ಬ್ರಹ್ಮಸೂತ್ರ

'ಪ್ರಕರಣಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। प्रकरणात् ।। ६ ।।

ಸೂತ್ರಾರ್ಥ - 'ಸೋऽಧ್ವನಃ' ಎಂಬ ಅದೇ ಪ್ರಕರಣದಲ್ಲಿ ಆ ವಿಷಯವನ್ನು ಉಪಾಸನೆ ಮಾಡುವವನಿಗೆ ವಿಷ್ಣು ಪದವು ಪ್ರಾಪ್ತವಾಗುತ್ತದೆ ಎಂದು ನಿರ್ಣಯಿಸಲ್ಪಟ್ಟಿದೆ. ಆದ್ದರಿಂದ 'ಮಹತಃ ಪರಮ್' ಎಂಬ ಶ್ರುತಿಯಿಂದ ಪ್ರಾಜ್ಞನಾದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ.

ಅರ್ಥ -- ಪ್ರಕರಣಾತ್ = ವಿಷ್ಣುವನ್ನೇ ಪ್ರತಿಪಾದನೆ ಮಾಡುವ ಮೂರು ಪ್ರಕರಣಗಳಿಂದಲೂ ಪ್ರಾಜ್ಞನಾದ ಪರಮಾತ್ಮನೇ 'ಮಹತಃ ಪರಮ್' ಎಂಬ ಶ್ರುತಿಯಿಂದ ಪ್ರತಿಪಾದ್ಯನೆಂದು ನಿರ್ಣಯವಾಗುತ್ತದೆ.

ಬ್ರಹ್ಮಸೂತ್ರಭಾಷ್ಯ

ಅವ್ಯಕ್ತ ಶಬ್ದವಿರುವುದು ವಿಷ್ಣುಪ್ರಕರಣದಲ್ಲಿ

ब्रह्मसूत्रभाष्यम् –'सोऽध्वनः पारमाप्नोति तद्विष्णोः परमं पदम्' (क.उ.१-३-९)
इति तस्य ह्येतत् प्रकरणम् ।।६।।

ಅನುವಾದ - ಯಾವ ವ್ಯಕ್ತಿಯು ವಿಷ್ಣುವಿನ ಪರಮಸ್ವರೂಪವನ್ನು ತಿಳಿಯುತ್ತಾನೋ, ಅವನು ಸಂಸಾರವನ್ನು ದಾಟಿ, ಮೋಕ್ಷವನ್ನು ಪಡೆಯುತ್ತಾನೆ. ಹೀಗೆ ಈ ಪ್ರಕರಣವು ವಿಷ್ಣುವಿಗೆ ಸಂಬಂಧಪಟ್ಟಿರುವುದರಿಂದ, ಮಹತ್ತತ್ತ್ವಕ್ಕಿಂತ ಶ್ರೇಷ್ಠವಾದ ತತ್ತ್ವವೆಂದು ಪ್ರಸಕ್ತವಾದವನು ಮಹಾವಿಷ್ಣುವೇ ಆಗಿರುತ್ತಾನೆ.

ಪ್ರತಿಪದಾರ್ಥ -- 'ಮಹತ್‌ಪರತ್ವ' ಎಂಬುದು ಪ್ರಕೃತಿಯ ಲಿಂಗವಾಗಿದೆ. ಇದನ್ನು ಬಿಟ್ಟು ವಿಷ್ಣುವೆಂಬ ಅರ್ಥವನ್ನು ಸ್ವೀಕರಿಸಲು ಯಾವುದೇ ಕಾರಣವಿಲ್ಲ. ಈ ಆಶಂಕೆಗೆ ಉತ್ತರಿಸಲು ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನ ಮಾಡುತ್ತಿದ್ದಾರೆ. –

ಸಃ = ಭಗವದುಪಾಸಕನು, ಅಧ್ವನಃ = ಸಂಸಾರವೆಂಬ ದಾರಿಯ, ಪಾರಮ್ = ಮತ್ತೊಂದು ದಡವನ್ನು, ಆಪ್ನೋತಿ = ಹೊಂದುತ್ತಾನೆ. ತತ್ = ಆ ದಡವು, ವಿಷ್ಣೋಃ = ಮಹಾವಿಷ್ಣುವಿನ, ಪರಮಂ ಪದಮ್ = ಶ್ರೇಷ್ಠ ಸ್ಥಾನವಾದ ಮೋಕ್ಷವೇ ಆಗಿದೆ. ಇತಿ = ಹೀಗೆ, ಏತತ್ = ಇದು, ತಸ್ಯ ಹಿ = ಮಹಾವಿಷ್ಣುವಿನ, ಪ್ರಕರಣಮ್ = ಪ್ರಕರಣವಾಗಿದೆ. ಆದ್ದರಿಂದ ಪ್ರಾಜ್ಞನು ಅವ್ಯಕ್ತಾದಿಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯಬೇಕು.

ತತ್ತ್ವಪ್ರಕಾಶಿಕಾ

ಅನಾದ್ಯನಂತಂ ಎಂಬ ವಾಕ್ಯವು ವಿಷ್ಣುಪರವಲ್ಲ

ನನು ವಿಶಿಷ್ಯ ಮಹತ್ಪರತ್ವಸ್ಯ ಪ್ರಧಾನಲಿಙ್ಗಸ್ಯಾಮುಖ್ಯಾರ್ಥತಾಂ ಸ್ವೀಕೃತ್ಯ, ಅನಾದ್ಯನನ್ತಾದಿವಾಕ್ಯಸ್ಯ ವಿಷ್ಣುಪರತ್ವಗ್ರಹಣೇ ಕಾರಣಾಭಾವಾತ್, ಪ್ರಧಾನಮೇವಾತ್ರೋಚ್ಯತ ಇತ್ಯಾಶಙ್ಕಾಂ ಪರಿಹರತ್‌ಸೂತ್ರಮುಪನ್ಯಸ್ಯ ವ್ಯಾಚಷ್ಟೇ – ಪ್ರಕರಣಾದಿತಿ ।।

ಪ್ರಕೃತಿಯ 'ಮಹತ್‌ಪರತ್ವ' ಎಂಬ ವಿಶೇಷ ಲಿಂಗಕ್ಕೆ ಅಮುಖ್ಯಾರ್ಥವನ್ನು ಸ್ವೀಕರಿಸಿ ವಿಷ್ಣುಪರತ್ವವನ್ನು ಹೇಳಿದಿರಿ. ಎಲ್ಲಾ ಪದಾರ್ಥಗಳಿಂದ ಉತ್ತಮನಾದ ಮಹಾವಿಷ್ಣು ಮಹತ್ ತತ್ವಕ್ಕಿಂತಲೂ ಉತ್ತಮನಾಗಿದ್ದಾನೆಂಬುದು ಅಮುಖ್ಯವಾದ ಮಹತ್‌ಪರತ್ವವಾಗುತ್ತದೆ. ಈ ಅಮುಖ್ಯವಾದ ಮಹತ್‌ಪರತ್ವವನ್ನು ವಿಷ್ಣುವಿನಲ್ಲಿ ಒಪ್ಪಿ 'ಅನಾದ್ಯನಂತಂ' ಎಂಬ ವಾಕ್ಯವು ವಿಷ್ಣುಪರವಾಗಿದೆ ಎಂದು ಹೇಳಲು ಯಾವುದೇ ಕಾರಣವಿರುವುದಿಲ್ಲ. ಆದ್ದರಿಂದ ಪ್ರಕೃತಿಯೇ ಇಲ್ಲಿ ಮುಖ್ಯವಾಗಿ ಪ್ರತಿಪಾದ್ಯವಾಗುತ್ತದೆ.

ಈ ಆಶಂಕೆಗೆ ಪರಿಹಾರ ನೀಡಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಪ್ರಕರಣಾತ್' ಎಂಬುದಾಗಿ.

ಸಂಪೂರ್ಣ ಪ್ರಕರಣವು ವಿಷ್ಣುಪರ

तत्वप्रकाशिका – नात्र विष्णुग्रहणे कारणाभावः, येनान्यस्य वाच्यता शङ्केत; एतत्प्रकरणस्य वैष्णवत्वात् ।

ಶ್ರುತಿಯಲ್ಲಿ ಮಹತ್‌ಪರತ್ವವೆಂಬ ಲಿಂಗದಿಂದ ವಿಷ್ಣುವನ್ನೇ ಸ್ವೀಕರಿಸಲು ಕಾರಣವಿಲ್ಲವೆಂದು ಹೇಳಬಾರದು. ಒಂದು ವೇಳೆ ವಿಷ್ಣುವನ್ನು ಸ್ವೀಕರಿಸಲು ಕಾರಣವಿಲ್ಲದಿದ್ದಲ್ಲಿ ವಿಷ್ಣುವಿಗಿಂತ ಭಿನ್ನವಾದ ಪ್ರಕೃತಿಯೇ 'ಮಹತಃ ಪರಂ' ಎಂಬ ಶ್ರುತಿಯಿಂದ ಪ್ರತಿಪಾದ್ಯವಾಗುತ್ತಿದೆಯೆಂದು ಶಂಕಿಸಬಹುದಿತ್ತು. ಆದರೆ ಸಂಪೂರ್ಣ ಈ ಪ್ರಕರಣವು ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತಿದೆಯೆನ್ನಲು ಕಾರಣವಿದೆ.

ಬೇರೆ ಪದಾರ್ಥವು ಪ್ರಸಕ್ತವೇ ಅಲ್ಲ

तत्वप्रकाशिका – एतत्प्रकरणोक्तार्थोपासकस्य विष्णुपदप्राप्त्युक्त्या तदवगमात्, अन्यप्रकरणत्वे तदयोगादिति भावः ।

ಈ ಪ್ರಕರಣದ ಅರ್ಥವನ್ನು ಉಪಾಸನೆ ಮಾಡುವವನಿಗೆ ವಿಷ್ಣುವಿನ ಸ್ಥಾನವು ದೊರೆಯುತ್ತದೆಂದು ಹೇಳಲಾಗಿದೆ. ಒಂದು ವೇಳೆ ಬೇರೆ ಪದಾರ್ಥವು ಪ್ರತಿಪಾದ್ಯವಾಗಿದ್ದಲ್ಲಿ ಅಂತಹ ಬೇರೆ ಪದಾರ್ಥದ ಉಪಾಸನೆಯಿಂದ ವಿಷ್ಣುವಿನ ಪದವು ಪ್ರಾಪ್ತವಾಗುತ್ತದೆಂದು ಹೇಳಿದಂತಾಗುತ್ತದೆ. ಇದು ತಪ್ಪು. ಪ್ರಕರಣವು ವಿಷ್ಣುವನ್ನು ಪ್ರತಿಪಾದನೆ ಮಾಡುತ್ತಿರುವಾಗ ಬೇರೆ ಪದಾರ್ಥವು ಪ್ರತಿಪಾದ್ಯವೆಂದು ಹೇಳುವುದು ತಪ್ಪಾಗುತ್ತದೆ.

ಪ್ರಕರಣವು ಲಿಂಗವನ್ನು ಬಾಧಿಸದು

तत्वप्रकाशिका – नच लिङ्गात् प्रकरणस्य दौर्बल्येनासाधकत्वम् । लिङ्गस्योक्तरीत्या सावकाशत्वात्, प्रकरणस्य निरवकाशत्वात् । निरवकाशप्रकरणस्यापि सावकाशलिङ्गबाधकत्वोपपत्तेः ।

ಲಿಂಗಕ್ಕಿಂತಲೂ ಪ್ರಕರಣವು ದುರ್ಬಲವಾದ್ದರಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂದು ಹೇಗೆ ಸಮರ್ಥಿಸುತ್ತೀರಿ. ದುರ್ಬಲವಾದ ಪ್ರಕರಣವು ಈ ವಿಷಯದಲ್ಲಿ ಸಾಧಕವಾಗುವು-ದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಹಿಂದಿನ ಸೂತ್ರದಲ್ಲಿ ಹೇಳಿದಂತೆ ಮಹತ್ ಪರತ್ವವೆಂಬ ಲಿಂಗವು ಸಾವಕಾಶವಾಗಿದೆ. ಪ್ರಕರಣವು ನಿರವಕಾಶವಾಗಿದ್ದಾಗ, ಲಿಂಗವು ಸಾವಕಾಶವಾಗಿದ್ದಾಗ, ಪ್ರಕರಣವೇ ಲಿಂಗವನ್ನು ಬಾಧಿಸುತ್ತದೆ ಹೊರತು, ಲಿಂಗವು ಪ್ರಕರಣವನ್ನು ಬಾಧಿಸುವುದಿಲ್ಲ.

ಗೀತೆಯ ಉದಾಹರಣೆಯಿಂದ ಮಹತ್‌ಪರತ್ವ ಸಾಧನೆ

तत्वप्रकाशिका – नच वाच्यं विशिष्य महत्परत्वलिङ्गं च प्रधानपरे परमात्मनि निरवकाशमिति । प्रधानपरस्यपि 'यो बुद्धेः परतस्तु सः' इत्यादाविव महत्परत्वोक्तिसम्भवात् ।

ಮತ್ತು 'ಮಹತಃ ಪರಂ' ಎಂಬುದಾಗಿ 'ಮಹತ್‌ಪರತ್ವ' ಲಿಂಗವನ್ನು ವಿಶೇಷವಾಗಿ ಹೇಳಲಾಗಿದೆ. ಇದು ಪ್ರಕೃತಿಗಿಂತಲೂ ಉತ್ತಮನಾದ ಪರಮಾತ್ಮನಲ್ಲಿ ನಿರವಕಾಶ-ವಾಗಿರುತ್ತದಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ ಪರಮಾತ್ಮನು ಪ್ರಕೃತಿಗಿಂತ ಉತ್ತಮನಾಗಿದ್ದರೂ ಕೂಡ 'ಯೋ ಬುದ್ಧೇಃ ಪರತಸ್ತು ಸಃ' ಎಂಬ ಗೀತೆಯಲ್ಲಿ ವಿಷ್ಣುವಿಗೆ ಬುದ್ಧಿಪರತ್ವವನ್ನು ಹೇಗೆ ಹೇಳಿದ್ದಾರೋ ಅದರಂತೆ ಇಲ್ಲಿಯೂ ಕೂಡ ಮಹತ್‌ಪರತ್ವವನ್ನು ಹೇಳಿದ್ದಾರೆಂದು ತಿಳಿಯಬೇಕು.

ಪರಮಾತ್ಮನು ಅಪ್ರಕೃತನೇ ?

तत्वप्रकाशिका – पूर्वं महत् परत्वेन परमात्मनोऽप्रकृतत्वात् प्रधानस्य तद्भावात् 'तम्' इति परामर्शेनैतत्सिद्धमित्युक्तार्थविस्मरणविजृम्भितं साधकमस्माकं, न परस्य ।

ಹಿಂದೆ 'ಮಹತಃ ಪರಮವ್ಯಕ್ತಮ್' ಎಂಬಲ್ಲಿ ಪರಮಾತ್ಮನು ಅಪ್ರಕೃತನಾಗಿದ್ದಾನೆ. ಪ್ರಧಾನವು ಪ್ರಕೃತವಾಗಿದೆ. ಆದ್ದರಿಂದ 'ನಿಚಾಯ್ಯ ತಂ' ಎಂಬಲ್ಲಿರುವ 'ತಮ್' ಎಂಬ ಸರ್ವನಾಮಶಬ್ದದಿಂದ ಪ್ರಕೃತಿಯನ್ನು ಪರಾಮರ್ಶಿಸಬೇಕು. ಆ ಪ್ರಕೃತಿಯೇ ಶ್ರುತಿಯಿಂದ ಪ್ರತಿಪಾದ್ಯವಾಗಬೇಕು. ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆಂಬುದು ಮತ್ತು ಪರಮಾತ್ಮಗೆ ಮಹತ್‌ಪರತ್ವವು ಸಿದ್ಧವಾಗುತ್ತದೆಂಬುದು ಕೇವಲ ಹಿಂದೆ ಹೇಳಿದ ವಿಷಯದ ಮರೆಯುವಿಕೆಯ ವಿಜೃಂಭಣೆ ಮಾತ್ರ. ಹೀಗೆ ಪೂರ್ವಪಕ್ಷಿ ಹೇಳುವ ಉಕ್ತಾರ್ಥವಿಸ್ಮರಣೆಯ ವಿಜೃಂಭಣೆ ಎಂಬ ದೋಷ ಸಿದ್ಧಾಂತಿಗಳಿಗೆ ಸಾಧಕವೇ ಆಗುತ್ತದೆ. ಪೂರ್ವಪಕ್ಷಿಗೆ ಸಾಧಕವಾಗುವುದಿಲ್ಲ.

ಉಭಯಾರ್ಥವನ್ನು ಸ್ವೀಕರಿಸಿದರೆ ಪ್ರಕರಣ ವಿರೋಧ

तत्वप्रकाशिका – सत्यम् । तद्वदत्राप्युभयोक्तिः स्यादितिचेन्न । अविरोध एवोभयार्थताऽभ्युपगमात् ।

ಮೊದಲನೆಯ ಸೂತ್ರದಲ್ಲಿ 'ಮಹತಃ ಪರಮವ್ಯಕ್ತಮ್' ಎಂಬಲ್ಲಿರುವ ಅವ್ಯಕ್ತಪದದ ಅರ್ಥ ಪರಮಾತ್ಮನೆಂದು ಸಾಧಿಸಲಾಗಿದೆ. ಆದ್ದರಿಂದ ಅವ್ಯಕ್ತಶಬ್ದಕ್ಕೆ ಪರಮಾತ್ಮ ಹಾಗೂ ಪ್ರಕೃತಿ ಎಂಬ ಎರಡೂ ಅರ್ಥವನ್ನು ಸ್ವೀಕರಿಸಬೇಕು ಎಂದು ಹೇಗೆ ಹೇಳುತ್ತೀರೋ, ಅದರಂತೆ 'ಅನಾದ್ಯನಂತಂ' ಎಂಬ ವಾಕ್ಯದಲ್ಲೂ 'ಪ್ರಕೃತಿ' ಹಾಗೂ 'ಪರಮಾತ್ಮ' ಎಂಬ ಎರಡು ಅರ್ಥವನ್ನು ಸ್ವೀಕರಿಸಬೇಕಲ್ಲವೇ? ಎಂದು ಪೂರ್ವಪಕ್ಷಿಯು ಪ್ರಶ್ನಿಸಬಹುದು. ಆದರೆ ಇದು ಸರಿಯಲ್ಲ. ಏಕೆಂದರೆ ಎಲ್ಲಿ ಎರಡು ಅರ್ಥವನ್ನು ಸ್ವೀಕರಿಸಲು ವಿರೋಧವಿರುವುದಿಲ್ಲವೋ ಅಲ್ಲಿ ಮಾತ್ರ ಶಬ್ದಗಳಿಗೆ ಉಭಯಾರ್ಥತ್ವವನ್ನು ಸ್ವೀಕರಿಸಬೇಕು. ಆದರೆ 'ಅನಾದ್ಯನಂತಂ' ಎಂಬ ವಾಕ್ಯದಲ್ಲಿ ಪ್ರಕೃತಿ ಎಂಬರ್ಥವನ್ನು ಸ್ವೀಕರಿಸಿದರೆ ನಿರವಕಾಶಪ್ರಕರಣದ ವಿರೋಧ ಬರುತ್ತದೆ. ಆದ್ದರಿಂದ ಇಲ್ಲಿ ಉಭಯಾರ್ಥತ್ವವನ್ನು ಸ್ವೀಕರಿಸಬಾರದು.

ಪ್ರಕೃತಿಯನ್ನು ಪ್ರಾಸಂಗಿಕವಾಗಿಯೂ ಹೇಳಲಾಗದು

तत्वप्रकाशिका – नच प्रकरणस्यापि प्रसङ्गादन्योक्तिसम्भवात् सावकाशत्वेन पुनर्लिङ्गमेव प्रबलमिति युक्तम् । प्रासङ्गिकोक्तेरत्र प्रयोजनादर्शनात् ।

ಪ್ರಕರಣವು ವಿಷ್ಣುವನ್ನೇ ಸಂಪೂರ್ಣವಾಗಿ ಪ್ರತಿಪಾದಿಸುತ್ತಿರಬಹುದು. ಆದರೂ ಕೂಡ ಪ್ರಾಸಂಗಿಕವಾಗಿ ಪ್ರಕೃತಿಯನ್ನೂ ಕೂಡ ವರ್ಣನೆ ಮಾಡಬಹುದು. ಆವಾಗ ಪ್ರಕರಣವು ಸಾವಕಾಶವಾಗುತ್ತದೆ. ಈ ಪ್ರಕರಣಕ್ಕಿಂತ ನಿರವಕಾಶವಾದ ಲಿಂಗ ಪ್ರಬಲವಾಗುತ್ತದಲ್ಲವೇ ? ಹೀಗೆ ಪ್ರಶ್ನಿಸಬಾರದು. ಏಕೆಂದರೆ ಈ ಪ್ರಕರಣದಲ್ಲಿ ಪ್ರಾಸಂಗಿಕವಾಗಿ ಪ್ರಕೃತಿಯನ್ನು ವರ್ಣನೆ ಮಾಡುವ ಸಂದರ್ಭವೇ ಇರುವುದಿಲ್ಲ. ಅದಕ್ಕೆ ಯಾವ ಪ್ರಯೋಜನವೂ ಕೂಡ ಇರುವುದಿಲ್ಲ.

'ಅನಾದ್ಯನಂತಂ' ಎಂಬ ಶ್ರುತಿಯು ವಿಷ್ಣುವನ್ನೇ ಪ್ರತಿಪಾದಿಸುತ್ತಿದೆ

तत्वप्रकाशिका – 'अनाद्यनन्तं महतः परं ध्रुवम्' इति 'परो हि देवः पुरुहूतो महत्परः' (महतः) इति श्रुतेश्चेति ।। ६ ।।

ಮತ್ತು 'ಅನ್ಯಾದ್ಯನಂತಂ ಮಹತಃ ಪರಂ ಧ್ರುವಮ್' ಎಂಬ ಶ್ರುತಿ ಮತ್ತು 'ಪರೋ ಹಿ ದೇವಃ ಪುರುಹೂತೋ ಮಹತ್ತರಃ' ಎಂಬ ಶ್ರುತಿ ಮಹತ್ತರತ್ವವನ್ನು ನೇರವಾಗಿ ವಿಷ್ಣುವಿನಲ್ಲಿ ಹೇಳುತ್ತಿದೆ. ಆದ್ದರಿಂದ ವಿಷ್ಣುವೇ ಮಹತ್ತರನೆಂದು ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧವಾಯಿತು.

ಭಾವದೀಪ

ಸೂತ್ರಕಾರರಿಗೆ ವಿವಕ್ಷಿತವಾದ ಸಾಧ್ಯ

ಭಾವದೀಪಃ – प्रकणादित्यत्र साध्याकाङ्क्षां पूरयति – नात्रेति ।। तस्यैव हि एतत् प्रकरणमिति अस्यार्थमाह – एतदिति ।। हिर्हेताविति सूचितम् ।

'ಪ್ರಕರಣಾತ್' ಎಂಬ ಸೂತ್ರದಲ್ಲಿ ಯಾವುದು ಸಾಧ್ಯ ? ಎಂಬ ಆಕಾಂಕ್ಷೆಯನ್ನು 'ನಾತ್ರ' ಇತ್ಯಾದಿ ಟೀಕಾದಿಂದ ಪೂರಣ ಮಾಡುತ್ತಿದ್ದಾರೆ. 'ಮಹತ್‌ಪರತ್ವವೆಂಬ ಲಿಂಗವು ವಿಷ್ಣುವಿನಲ್ಲಿರುವುದಿಲ್ಲವೆಂದು ಹೇಳಬಾರದು' ಇದು ಸಾಧ್ಯ. 'ಈ ಪ್ರಕರಣವು ವಿಷ್ಣುಪರವಾಗಿರುವುದರಿಂದ' ಎಂಬುದು ಹೇತು. 'ಪ್ರಕರಣಾತ್' ಎಂಬ ಸೂತ್ರದ ಪದವನ್ನು 'ಏತತ್‌ಪ್ರಕರಣಸ್ಯ ವೈಷ್ಣವತ್ವಾತ್' ಎಂದು ವ್ಯಾಖ್ಯಾನ ಮಾಡಿದ್ದಾರೆ. ಭಾಷ್ಯದಲ್ಲಿರುವ 'ಹಿ' ಪದವು ಹೇತ್ವರ್ಥದಲ್ಲಿದೆ ಎಂದು ಇದರಿಂದ ಸೂಚನೆ ಮಾಡಿದಂತಾಯಿತು.

'ಏತತ್ ಪ್ರಕರಣಸ್ಯ' ಎಂಬ ಟೀಕೆಯ ಸಂದರ್ಭ

ಭಾವದೀಪಃ – कुतो न शङ्क्येतेत्यतः स इत्यादि पूर्वभाष्यं व्याचष्टे – एतत्प्रकरणेति ।।

ಪ್ರಕೃತಿಯಲ್ಲಿ ಮಹತ್‌ಪರತ್ವವನ್ನು ಏಕೆ ಆಶಂಕಿಸಬಾರದು? ಎಂಬ ಪ್ರಶ್ನೆಗೆ 'ಸೋऽಧ್ವನಃ' ಎಂಬ ಭಾಷ್ಯವನ್ನು ವ್ಯಾಖ್ಯಾನ ಮಾಡಲು 'ಏತತ್‌ಪ್ರಕರಣಸ್ಯ' ಎಂಬ ಟೀಕಾವಾಕ್ಯವು ಹೊರಟಿದೆ.

ಬುದ್ಧಿತತ್ವದಂತೆ ಮಹತ್ತತ್ವಕ್ಕಿಂತಲೂ ಶ್ರೇಷ್ಠ

ಭಾವದೀಪಃ – उक्ताशङ्कानिरासकतयाऽपि सर्वस्मात् परस्य महतोऽपि परत्वं युज्यत इति वाक्यमेवात्र योजयति ।। प्रधानेति ।। इत्यादाविवेति ।। यथा गीतायां तृतीयेऽध्याये बुद्धेः परान्महादितोऽपि परस्य बुद्धिपरत्वमुच्यते तथेत्यर्थः । उक्तं च गीताभाष्ये 'न केवलं बुद्धेः परः श्रुत्युक्तप्रकारेणाव्यक्तादपि' इत्यादि ।

ಹಿಂದಿನ ಆಕ್ಷೇಪಕ್ಕೆ ಉತ್ತರಿಸಲು 'ಸಕಲ ಪದಾರ್ಥದಿಂದ ಶ್ರೇಷ್ಠನಾದ ಪರಮಾತ್ಮನು ಮಹತ್ತತ್ತ್ವಕ್ಕಿಂತಲೂ ಶ್ರೇಷ್ಠನಾಗಿದ್ದಾನೆಂದು ಹೇಳುವುದು ಯುಕ್ತವಾಗುತ್ತದೆ' ಎಂಬುದಾಗಿ ಸ್ಪಷ್ಟವಾಗಿ ಹೇಳುವ ಶ್ರುತಿವಾಕ್ಯವನ್ನು ಟೀಕೆಯಲ್ಲಿ ಉಲ್ಲೇಖಿಸುತ್ತಿದ್ದಾರೆ 'ಪ್ರಧಾನಪರಸ್ಯಾಪಿ' ಇತ್ಯಾದಿಯಾಗಿ.

'ಇತ್ಯಾದಾವಿವ' ಎಂಬುದರ ಅಭಿಪ್ರಾಯ ಹೀಗಿದೆ - ಯಾವರೀತಿಯಾಗಿ ಗೀತೆಯ ತೃತೀಯಾಧ್ಯಾಯದಲ್ಲಿ ಬುದ್ಧಿತತ್ತ್ವಕ್ಕಿಂತಲೂ ಶ್ರೇಷ್ಠತ್ವವನ್ನು ಪರಮಾತ್ಮನಿಗೆ ಹೇಳಿದ್ದಾರೋ, ಅದರಂತೆ ಮಹತ್‌ಪರತ್ವವನ್ನೂ ಕೂಡ ತಿಳಿಯಬೇಕು. ಇದನ್ನು ಗೀತಾಭಾಷ್ಯದಲ್ಲಿ 'ನ ಕೇವಲಂ ಬುದ್ಧೇಃ ಪರಃ ಶ್ರುತ್ಯುಕ್ತಪ್ರಕಾರೇಣಾವ್ಯಕ್ತಾದಪಿ' ''ಕೇವಲ ಬುದ್ಧಿತತ್ತ್ವಕ್ಕಿಂತ ಪರಮಾತ್ಮನು ಶ್ರೇಷ್ಠ ಎಂಬುದಷ್ಟೇ ಅಲ್ಲ. ಶ್ರುತಿಯಲ್ಲಿ ಹೇಳಿದಂತೆ ಅವ್ಯಕ್ತತತ್ತ್ವಕ್ಕಿಂತಲೂ ಕೂಡ ಶ್ರೇಷ್ಠನಾಗಿದ್ದಾನೆಂದು ತಿಳಿಯಬೇಕು'' ಇತ್ಯಾದಿಯಾಗಿ ಹೇಳಲಾಗಿದೆ. ಬುದ್ಧಿತತ್ತ್ವ ಹಾಗೂ ಪರಮಾತ್ಮನ ನಡುವೆ ಮಹತ್ತತ್ತ್ವ ಹಾಗೂ ಅವ್ಯಕ್ತತತ್ತ್ವಗಳಿವೆ. ಇವೆರಡನ್ನೂ ಬಿಟ್ಟು ಬುದ್ಧಿತತ್ತ್ವಕ್ಕಿಂತ ಪರಮಾತ್ಮನು ಶ್ರೇಷ್ಠನೆಂದು 'ಯೋ ಬುದ್ಧೇಃ ಪರತಸ್ತು ಸಃ' ಎಂಬ ಗೀತಾವಾಕ್ಯ ಹೇಳುತ್ತಿದೆ. ಇದರಂತೆ ಸಕಲ ಪದಾರ್ಥಗಳಿಂದ ಶ್ರೇಷ್ಠನೆಂದು ಹೇಳಿದ ಮೇಲೆ ಮಹತ್ತತ್ತ್ವಕ್ಕಿಂತಲೂ ಶ್ರೇಷ್ಠನೆಂದು ಹೇಳಿದಂತಾಗುತ್ತದೆ.

ಪೂರ್ವಪಕ್ಷಿಯಲ್ಲಿ ವಿಸ್ಮರಣೆಯ ವಿಜೃಂಭಣೆ

भावदीपः – शङ्कते – पूर्वमिति ।। अनाद्यनन्तमिति वाक्यात् पूर्वं महतः परमव्यक्तमिति वाक्य इत्यर्थः । इति चोद्यमिति शेषः ।। उक्तार्थेति।। आनुमानिकसूत्र एवाव्यक्तशब्दवाच्यं ब्रह्मेत्युक्तार्थ इत्यर्थः ।

'ಪೂರ್ವಮ್' ಎಂಬ ವಾಕ್ಯದಿಂದ ಆಕ್ಷೇಪ ಮಾಡುತ್ತಿದ್ದಾರೆ. 'ಮಹತಃ ಪರಮವ್ಯಕ್ತಮ್' ಎಂಬ ಶ್ರುತಿವಾಕ್ಯಕ್ಕಿಂತಲೂ ಹಿಂದಿನ 'ಅನಾದ್ಯನಂತಮ್' ಎಂಬ ವಾಕ್ಯದಲ್ಲಿ ಎಂದರ್ಥ. ಇಲ್ಲಿ 'ಇತಿ ಚೋದ್ಯಮ್' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. 'ಉಕ್ತಾರ್ಥ' ಎಂಬುದಕ್ಕೆ ಆನುಮಾನಿಕ ಸೂತ್ರದಲ್ಲೇ ಹೇಳಿದಂತೆ ಅವ್ಯಕ್ತಶಬ್ದವಾಚ್ಯನಾದವನು ಬ್ರಹ್ಮನಾಗಿದ್ದಾನೆ ಎಂಬರ್ಥದಲ್ಲಿ ಎಂದರ್ಥ.

'ಅನಾದ್ಯನಂತಮ್' 'ಮಹತಃ ಪರಮ್' ಎಂಬ ವಾಕ್ಯವು 'ಮಹತಃ ಪರಮವ್ಯಕ್ತಮ್' ಎಂಬ ವಾಕ್ಯದಿಂದ ಮೊದಲು ಪ್ರಸಕ್ತವಾಗಿದೆ. ಈ ವಾಕ್ಯದಲ್ಲಿ ಪರಮಾತ್ಮನ ವಿಚಾರವು ಪ್ರಸಕ್ತವಾಗಿಲ್ಲ. ಪ್ರಕೃತಿ ವಿಚಾರವು ಪ್ರಸಕ್ತವಾಗಿದೆ. ಆದ್ದರಿಂದ 'ಮಹತಃ ಪರಂ ಧ್ರುವಂ ನಿಚಾಯ್ಯ ತಂ' ಎಂಬಲ್ಲಿ ಇರುವ 'ತಂ'

ಎಂಬ ಪದದಿಂದಲೂ ಪರಮಾತ್ಮನು ಪ್ರತಿಪಾದ್ಯನಾಗುತ್ತಾನೆಂಬುದು ಹಿಂದೆ ಹೇಳಿದ ವಿಚಾರದ ವಿಸ್ಮರಣೆಯ ವಿಜೃಂಭಣೆಯಾಗಿದೆ ಎಂದು ಪೂರ್ವಪಕ್ಷಿಯು ಆಪಾದನೆ ಮಾಡುತ್ತಾನೆ. ಈ ಆಪಾದನೆಯು ಪ್ರತಿಯಾಗಿ ಪೂರ್ವಪಕ್ಷಿಗೆ ಬರುತ್ತದೆ ಹೊರತು, ನಮಗಲ್ಲ. ಏಕೆಂದರೆ ಈ ಅಧಿಕರಣದ ಮೊದಲನೆಯ ಆನುಮಾನಿಕ ಸೂತ್ರದಲ್ಲಿ 'ಶರೀರರೂಪಕವಿನ್ಯಸ್ತಗೃಹೀತೇಃ' ಎಂಬ ಪದದಿಂದ ಅವ್ಯಕ್ತಶಬ್ದಕ್ಕೆ ಬ್ರಹ್ಮನೆಂಬರ್ಥವನ್ನು ನಾವು ಸಮರ್ಥಿಸುತ್ತೇನೆ. ಇದರ ವಿಸ್ಮರಣೆಯ ವಿಜೃಂಭಣೆಯು ಪೂರ್ವಪಕ್ಷಿಯಲ್ಲಿ ಎದ್ದು ಕಾಣಿಸುತ್ತಿದೆ. ಆದ್ದರಿಂದ ವಿಸ್ಮರಣೆ, ವಿಜೃಂಭಣೆ ಎಂಬ ಮಾತು ಅವ್ಯಕ್ತಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನೆಂದು ಹೇಳುವ ಹಾಗೂ ಪರಮಾತ್ಮನಿಗೆ ಮಹತ್ ಪರತ್ವವನ್ನು ಹೇಳುವ ನಮಗೆ ಅನುಕೂಲವೇ ಆಗಿದೆ. ಪ್ರತಿಕೂಲವಾಗಿರುವುದಿಲ್ಲ.

ವಿರೋಧವಿಲ್ಲದಿದ್ದಾಗ ಅನೇಕಾರ್ಥ

ಭಾವದೀಪಃ – ಶಙ್ಕತೇ – ಸತ್ಯಮಿತಿ ।। ಪ್ರಾಗವ್ಯಕ್ತಂ ಬ್ರಹ್ಮೇತ್ಯುಕ್ತಂ ಸತ್ಯಮಿತ್ಯರ್ಥಃ।। ಅವಿರೋಧ ಏವೇತಿ ।। ಅವಿರೋಧೇ ತು ಬಹ್ವರ್ಥಾ ಏತನ್ಮೂಲತಯಾ ಮತಾ ಇತ್ಯನುಭಾಷ್ಯೋಕ್ತೇಃ। ಇಹ ತು ಮುಕ್ತಿಹೇತುಜ್ಞಾನತ್ವವಿರೋಧಾದನ್ಯವಾಚಿತ್ವಮಪೋದ್ಯತ ಇತಿ ಭಾವಃ ।

ಪುನಃ ಪೂರ್ವಪಕ್ಷಿಯ ಆಕ್ಷೇಪವನ್ನು 'ಸತ್ಯಮ್' ಎಂಬುದರಿಂದ ಹೇಳುತ್ತಿದ್ದಾರೆ. ಹಿಂದೆ ಅವ್ಯಕ್ತಶಬ್ದದಿಂದ ಬ್ರಹ್ಮನು ಪ್ರತಿಪಾದ್ಯನೆಂದು ಹೇಳಿದ್ದು ಸತ್ಯವೆಂದು ಒಪ್ಪುತ್ತೇವೆ ಎಂದಭಿಪ್ರಾಯ. 'ಅವಿರೋಧ ಏವ' ಎಂದರೆ 'ಅವಿರೋಧೇ ತು ಬಹ್ವರ್ಥಾ ಏತನ್ ಮೂಲತಯಾ ಮತಾ' ವಿರೋಧವಿಲ್ಲದಿದ್ದಾಗ ಅನೇಕ ಅರ್ಥಗಳನ್ನು ಒಪ್ಪಬಹುದು ಎಂಬ ಅನುವ್ಯಾಖ್ಯಾನದ ಮಾತಿನಂತೆ ವಿರೋಧವಿಲ್ಲದಿದ್ದರೆ ಮಾತ್ರ ಇಲ್ಲಿ ಉಭಯಾರ್ಥವನ್ನು ಒಪ್ಪಬಹುದು. ಆದರೆ ಪ್ರಕೃತ 'ಮುಕ್ತಿಹೇತುಜ್ಞಾನತ್ವ' ಎಂಬ ವಿರೋಧವಿರುವುದರಿಂದ ಪ್ರಕೃತಿಪರತ್ವವನ್ನು ಒಪ್ಪಲು ಸಾಧ್ಯವಿಲ್ಲ.

ಷಟ್‌ಪ್ರಶ್ನದ ಪ್ರಕರಣ

ಭಾವದೀಪಃ – ನನು ಷಟ್ಪ್ರಶ್ನೇ ಯಥಾ 'ಆತ್ಮನ ಏಷ ಪ್ರಾಣೋ ಜಾಯತೇ' ಇತ್ಯಾದಿ ಪ್ರಾಣಪ್ರಕರಣೇ ಪ್ರಸಙ್ಗಾತ್' 'ಹೃದಿ ಹ್ಯೇಷ ಆತ್ಮಾ' ಇತಿ ಜೀವೋಕ್ತಿಃ ತಥಾ ವಿಷ್ಣುಪ್ರಕರಣೇऽಪಿ ಪ್ರಸಙ್ಗಾದಸ್ತು ಪ್ರಧಾನೋಕ್ತಿರಿತ್ಯಾಶಙ್ಕ್ಯ ನಿರಸ್ಯತಿ – ನಚೇತಿ ।।

ज्ञानरूपस्य जीवस्यैव विभोर्विषयसम्बन्धोपपत्तौ किमिन्द्रियवृत्तिभिरिति शङ्कानिरासरूपप्रयोजनं हृदिहीतिवाक्येऽस्तीति भावः ।

ಷಟ್‌ಪ್ರಶ್ನೋಪನಿಷತ್ತಿನಲ್ಲಿ 'ಆತ್ಮನ ಏಷ ಪ್ರಾಣೋ ಜಾಯತೇ' ಎಂಬ ಪ್ರಾಣಪ್ರಕರಣದಲ್ಲಿ ಪ್ರಾಸಂಗಿಕವಾಗಿ 'ಹೃದಿ ಹ್ಯೇಷ ಆತ್ಮಾ' ಎಂಬ ವಾಕ್ಯವಿದೆ. ಇಲ್ಲಿರುವ ಆತ್ಮ ಶಬ್ದಕ್ಕೆ ಜೀವಪರತ್ವವನ್ನು ನೀವೇ ಒಪ್ಪಿದ್ದೀರಿ. ಅದರಂತೆ ಇಲ್ಲಿಯೂ ವಿಷ್ಣುಪ್ರಕರಣವಾಗಿದ್ದರೂ ಪ್ರಾಸಂಗಿಕವಾಗಿ ಅವ್ಯಕ್ತತತ್ವವನ್ನು ಶ್ರುತಿ ಹೇಳುತ್ತಿದೆಯೆಂದು ಒಪ್ಪಬಹುದಲ್ಲವೇ? ಎಂಬ ಆಶಂಕೆಯನ್ನು 'ನಚ' ಇತ್ಯಾದಿ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ.

ಜ್ಞಾನರೂಪನಾದ ಜೀವನೇ ವಿಭುವಾದ್ದರಿಂದ ವಿಷಯಪದಾರ್ಥಗಳ ಜೊತೆ ಸಂಬಂಧವನ್ನು ಹೊಂದುತ್ತಾನೆಂದು ಹೇಳಲು ಬರುವಾಗ ಇಂದ್ರಿಯವೃತ್ತಿಯನ್ನು ಏಕೆ ಒಪ್ಪಬೇಕು ? ಎಂಬ ಆಶಂಕೆಯನ್ನು ನಿರಾಕರಣೆ ಮಾಡಬೇಕೆಂಬ ಪ್ರಯೋಜನವು 'ಹೃದಿ ಹಿ' ಎಂಬ ವಾಕ್ಯದಲ್ಲಿರುತ್ತದೆಂದು ತಿಳಿಯಬೇಕು.

ಸ್ಪಷ್ಟವಾದ ಸಮಾಖ್ಯಾ ಪ್ರಮಾಣ

भावदीपः – स्पष्टं समाख्यां चाऽऽह – अनादीति ।। द्वादशे गीताभाष्योक्ताग्निवेश्यश्रुतेश्चेत्यर्थः । महत्परः महतः = महत्तत्त्वात् परः ।।६।।

ಸ್ಪಷ್ಟವಾದ ಸಮಾಖ್ಯಾ ಪ್ರಮಾಣವನ್ನು 'ಅನಾದಿ' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ. 'ಪರೋಹಿ ದೇವಃ' ಎಂಬುದು ಹನ್ನೆರಡನೆಯ ಅಧ್ಯಾಯದ ಗೀತಾಭಾಷ್ಯದಲ್ಲಿ ಉಲ್ಲೇಖಿಸಿದ ಅಗ್ನಿವೇಶ್ಯಶ್ರುತಿಯೆಂದು ತಿಳಿಯಬೇಕು. 'ಮಹತಃ' ಎಂಬ ಪದಕ್ಕೆ ಮಹತ್ತತ್ವಕ್ಕಿಂತಲೂ ಉತ್ತಮವಾದದ್ದು ಎಂದರ್ಥ.

ಕಠ ಶ್ರುತಿಯಲ್ಲಿ 'ಮಹತಃ ಪರಂ' ಎಂಬುದಾಗಿ ಹೇಳಲಾಗಿದೆ. ಈ ಪದಗಳಿಗೆ ಅಗ್ನಿವೇಶ್ಯಶ್ರುತಿಯು ವಿಷ್ಣುಪರವಾಗಿ ವ್ಯಾಖ್ಯಾನ ಮಾಡಿದೆ. ಹೀಗಿರುವಾಗ 'ಮಹತಃ ಪರಂ' ಎಂಬ ಪದಗಳು ಪ್ರಕೃತಿವಾಚಕಗಳೆನ್ನಲು ಹೇಳಲು ಯಾವುದೇ ಆಧಾರವಿರುವುದಿಲ್ಲ.

ಬ್ರಹ್ಮಸೂತ್ರ

'ತ್ರಯಾಣಾಮೇವ ಚೈವಮುಪನ್ಯಾಸಃ ಪ್ರಶ್ನಶ್ಚ ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। त्रयाणामेव चैवमुपन्यासः प्रश्नश्च ।। ७ ।।

ಸೂತ್ರಾರ್ಥ - ಪಿತೃಸೌಮನಸ್ಯ, ಸ್ವರ್ಗ್ಯಾಗ್ನಿ, ಪರಮಾತ್ಮ ಈ ಮೂರರ ಬಗ್ಗೆ ಮಾತ್ರ ನಚಿಕೇತನು ಪ್ರಶ್ನೆ ಮಾಡಿರುತ್ತಾನೆ. ಆದ್ದರಿಂದ ಈ ಮೂರರ ವಿಷಯದಲ್ಲಿ ಮಾತ್ರ ಯಮದೇವರು ಉತ್ತರವನ್ನು ನೀಡಿರುತ್ತಾರೆ. ಇದನ್ನು ಬಿಟ್ಟು, ಪ್ರಕೃತಿಯ ಬಗ್ಗೆ ಪ್ರಸ್ತಾಪವೇ ಇರುವುದಿಲ್ಲ.

ಅರ್ಥ -- 'ಚ'ಶಬ್ದವು ಯುಕ್ತಿಯನ್ನು ಸಮುಚ್ಚಯ ಮಾಡುತ್ತಿದೆ. ಯಾವ ಕಾರಣದಿಂದ ಎಂಬರ್ಥದಲ್ಲಿಯೂ ಕೂಡ ಇರುತ್ತದೆ. 'ಏವ' ಶಬ್ದವು ಪ್ರಕಾರತ್ಯೆವಿಧ್ಯವನ್ನು ಪರಾಮರ್ಶ ಮಾಡುತ್ತಿದೆ. ಆದ್ದರಿಂದ ತ್ರಯಾಣಾಮೇವ = ಪಿತೃಸೌಮನಸ್ಯ, ಸ್ವರ್ಗ್ಯಾಗ್ನಿ, ಪರಮಾತ್ಮನ ರೂಪ ಈ ಮೂರರ ಬಗ್ಗೆ ಮಾತ್ರ, ಪ್ರಶ್ನಃ = ನಚಿಕೇತನಿಂದ ಪ್ರಶ್ನೆ ಇವುಗಳ ಬಗ್ಗೆ ಮಾತ್ರ, ಉಪನ್ಯಾಸಃ = ಯಮದೇವರಿಂದ ಉತ್ತರವು ಪ್ರಕರಣದಲ್ಲಿ ಪ್ರಸಕ್ತವಾಗಿದೆ. ಆದ್ದರಿಂದ ಪ್ರಕೃತಿಯು ಪ್ರತಿಪಾದ್ಯವಾಗುವುದಿಲ್ಲ.

ಬ್ರಹ್ಮಸೂತ್ರಭಾಷ್ಯ

ಸಂಪೂರ್ಣ ಪ್ರಕರಣದಲ್ಲಿ ಪ್ರಕೃತಿ ಅಪ್ರಸ್ತುತ

ब्रह्मसूत्रभाष्यम् – त्रयाणामेव पितृसौमनस्यस्वर्ग्याग्निपरमात्मनां प्रश्न उपन्यासश्च ।

ಅನುವಾದ - ತಂದೆಯ ಮನಶ್ಶಾಂತಿ, ಮೋಕ್ಷಪ್ರಾಪ್ತಿಗೆ ಕಾರಣವಾದ ನಾಚಿಕೇತಾಗ್ನಿ, ಮುಕ್ತನಿಯಾಮಕನಾದ ಪರಮಾತ್ಮ ಈ ಮೂರರ ಬಗ್ಗೆ ಪ್ರಶ್ನೆ ಹಾಗೂ ಉತ್ತರಗಳು ಉಪನಿಷತ್ತಿನಲ್ಲಿ ಪ್ರಸಕ್ತವಾಗಿವೆ. ಇಲ್ಲಿ ಪ್ರಕೃತ್ಯಾದಿತತ್ವಗಳಿಗೆ ಪ್ರಸಕ್ತಿಯೇ ಇಲ್ಲ. ಆದ್ದರಿಂದ ಪರಮಾತ್ಮನೇ ಅವ್ಯಕ್ತಾದಿಶಬ್ದಗಳಿಂದ ಪ್ರತಿಪಾದ್ಯನಾಗಬೇಕು.

ज्ञानरूपस्य जीवस्यैव विभोर्विषयसम्बन्धोपपत्तौ किमिन्द्रियवृत्तिभिरिति शङ्कानिरासरूपप्रयोजनं हृदिहीतिवाक्येऽस्तीति भावः ।

ಷಟ್‌ಪ್ರಶ್ನೋಪನಿಷತ್ತಿನಲ್ಲಿ 'ಆತ್ಮನ ಏಷ ಪ್ರಾಣೋ ಜಾಯತೇ' ಎಂಬ ಪ್ರಾಣಪ್ರಕರಣದಲ್ಲಿ ಪ್ರಾಸಂಗಿಕವಾಗಿ 'ಹೃದಿ ಹ್ಯೇಷ ಆತ್ಮಾ' ಎಂಬ ವಾಕ್ಯವಿದೆ. ಇಲ್ಲಿರುವ ಆತ್ಮಶಬ್ದಕ್ಕೆ ಜೀವಪರತ್ವವನ್ನು ನೀವೇ ಒಪ್ಪಿದ್ದೀರಿ. ಅದರಂತೆ ಇಲ್ಲಿಯೂ ವಿಷ್ಣುಪ್ರಕರಣವಾಗಿದ್ದರೂ ಪ್ರಾಸಂಗಿಕವಾಗಿ ಅವ್ಯಕ್ತತತ್ವವನ್ನು ಶ್ರುತಿ ಹೇಳುತ್ತಿದೆಯೆಂದು ಒಪ್ಪಬಹುದಲ್ಲವೇ? ಎಂಬ ಆಶಂಕೆಯನ್ನು 'ನಚ' ಇತ್ಯಾದಿ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ.

ಜ್ಞಾನರೂಪನಾದ ಜೀವನೇ ವಿಭುವಾದ್ದರಿಂದ ವಿಷಯಪದಾರ್ಥಗಳ ಜೊತೆ ಸಂಬಂಧವನ್ನು ಹೊಂದುತ್ತಾನೆಂದು ಹೇಳಲು ಬರುವಾಗ ಇಂದ್ರಿಯವೃತ್ತಿಯನ್ನು ಏಕೆ ಒಪ್ಪಬೇಕು ? ಎಂಬ ಆಶಂಕೆಯನ್ನು ನಿರಾಕರಣೆ ಮಾಡಬೇಕೆಂಬ ಪ್ರಯೋಜನವು 'ಹೃದಿ ಹಿ' ಎಂಬ ವಾಕ್ಯದಲ್ಲಿರುತ್ತದೆಂದು ತಿಳಿಯಬೇಕು.

ಸ್ಪಷ್ಟವಾದ ಸಮಾಖ್ಯಾ ಪ್ರಮಾಣ

भावदीपः – स्पष्टं समाख्यां चाऽऽह – अनादीति ।। द्वादशे गीताभाष्योक्ताग्निवेश्यश्रुतेश्चेत्यर्थः । महत्परः महतः = महत्तत्त्वात् परः ।।६।।

ಸ್ಪಷ್ಟವಾದ ಸಮಾಖ್ಯಾ ಪ್ರಮಾಣವನ್ನು 'ಅನಾದಿ' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ. 'ಪರೋಹಿ ದೇವಃ' ಎಂಬುದು ಹನ್ನೆರಡನೆಯ ಅಧ್ಯಾಯದ ಗೀತಾಭಾಷ್ಯದಲ್ಲಿ ಉಲ್ಲೇಖಿಸಿದ ಅಗ್ನಿವೇಶ್ಯಶ್ರುತಿಯೆಂದು ತಿಳಿಯಬೇಕು. 'ಮಹತಃ' ಎಂಬ ಪದಕ್ಕೆ ಮಹತ್ತತ್ವಕ್ಕಿಂತಲೂ ಉತ್ತಮವಾದದ್ದು ಎಂದರ್ಥ.

ಕಠ ಶ್ರುತಿಯಲ್ಲಿ 'ಮಹತಃ ಪರಂ' ಎಂಬುದಾಗಿ ಹೇಳಲಾಗಿದೆ. ಈ ಪದಗಳಿಗೆ ಅಗ್ನಿವೇಶ್ಯಶ್ರುತಿಯು ವಿಷ್ಣುಪರವಾಗಿ ವ್ಯಾಖ್ಯಾನ ಮಾಡಿದೆ. ಹೀಗಿರುವಾಗ 'ಮಹತಃ ಪರಂ' ಎಂಬ ಪದಗಳು ಪ್ರಕೃತಿವಾಚಕಗಳೆನ್ನಲು ಹೇಳಲು ಯಾವುದೇ ಆಧಾರವಿರುವುದಿಲ್ಲ.

ಬ್ರಹ್ಮಸೂತ್ರ

'ತ್ರಯಾಣಾಮೇವ ಚೈವಮುಪನ್ಯಾಸಃ ಪ್ರಶ್ನಶ್ಚ ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। त्रयाणामेव चैवमुपन्यासः प्रश्नश्च ।। ७ ।।

ಸೂತ್ರಾರ್ಥ - ಪಿತೃಸೌಮನಸ್ಯ, ಸ್ವರ್ಗ್ಯಾಗ್ನಿ, ಪರಮಾತ್ಮ ಈ ಮೂರರ ಬಗ್ಗೆ ಮಾತ್ರ ನಚಿಕೇತನು ಪ್ರಶ್ನೆ ಮಾಡಿರುತ್ತಾನೆ. ಆದ್ದರಿಂದ ಈ ಮೂರರ ವಿಷಯದಲ್ಲಿ ಮಾತ್ರ ಯಮದೇವರು ಉತ್ತರವನ್ನು ನೀಡಿರುತ್ತಾರೆ. ಇದನ್ನು ಬಿಟ್ಟು, ಪ್ರಕೃತಿಯ ಬಗ್ಗೆ ಪ್ರಸ್ತಾಪವೇ ಇರುವುದಿಲ್ಲ.

ಅರ್ಥ -- 'ಚ'ಶಬ್ದವು ಯುಕ್ತಿಯನ್ನು ಸಮುಚ್ಚಯ ಮಾಡುತ್ತಿದೆ. ಯಾವ ಕಾರಣದಿಂದ ಎಂಬರ್ಥದಲ್ಲಿಯೂ ಕೂಡ ಇರುತ್ತದೆ. 'ಏವ' ಶಬ್ದವು ಪ್ರಕಾರತ್ಯೆವಿಧ್ಯವನ್ನು ಪರಾಮರ್ಶ ಮಾಡುತ್ತಿದೆ. ಆದ್ದರಿಂದ ತ್ರಯಾಣಾಮೇವ = ಪಿತೃಸೌಮನಸ್ಯ , ಸ್ವರ್ಗ್ಯಾಗ್ನಿ , ಪರಮಾತ್ಮನ ರೂಪ ಈ ಮೂರರ ಬಗ್ಗೆ ಮಾತ್ರ , ಪ್ರಶ್ನಃ = ನಚಿಕೇತನಿಂದ ಪ್ರಶ್ನೆ ಇವುಗಳ ಬಗ್ಗೆ ಮಾತ್ರ , ಉಪನ್ಯಾಸಃ = ಯಮದೇವರಿಂದ ಉತ್ತರವು ಪ್ರಕರಣದಲ್ಲಿ ಪ್ರಸಕ್ತವಾಗಿದೆ. ಆದ್ದರಿಂದ ಪ್ರಕೃತಿಯು ಪ್ರತಿಪಾದ್ಯವಾಗುವುದಿಲ್ಲ.

ಬ್ರಹ್ಮಸೂತ್ರಭಾಷ್ಯ

ಸಂಪೂರ್ಣ ಪ್ರಕರಣದಲ್ಲಿ ಪ್ರಕೃತಿ ಅಪ್ರಸ್ತುತ

ब्रह्मसूत्रभाष्यम् – त्रयाणामेव पितृसौमनस्यस्वर्ग्याग्निपरमात्मनां प्रश्न उपन्यासश्च ।

ಅನುವಾದ - ತಂದೆಯ ಮನಶ್ಶಾಂತಿ, ಮೋಕ್ಷಪ್ರಾಪ್ತಿಗೆ ಕಾರಣವಾದ ನಾಚಿಕೇತಾಗ್ನಿ, ಮುಕ್ತನಿಯಾಮಕನಾದ ಪರಮಾತ್ಮ ಈ ಮೂರರ ಬಗ್ಗೆ ಪ್ರಶ್ನೆ ಹಾಗೂ ಉತ್ತರಗಳು ಉಪನಿಷತ್ತಿನಲ್ಲಿ ಪ್ರಸಕ್ತವಾಗಿವೆ. ಇಲ್ಲಿ ಪ್ರಕೃತ್ಯಾದಿತತ್ವಗಳಿಗೆ ಪ್ರಸಕ್ತಿಯೇ ಇಲ್ಲ. ಆದ್ದರಿಂದ ಪರಮಾತ್ಮನೇ ಅವ್ಯಕ್ತಾದಿಶಬ್ದಗಳಿಂದ ಪ್ರತಿಪಾದ್ಯನಾಗಬೇಕು.

ಪ್ರತಿಪದಾರ್ಥ -- ಮತ್ತೊಂದು ಹೇತುವಿನಿಂದ 'ಅನಾದ್ಯನಂತಂ' ಎಂಬ ಶ್ರುತಿಯು ಪ್ರಕೃತ್ಯಾದಿಗಳನ್ನು ಪ್ರತಿಪಾದನೆ ಮಾಡುವುದಿಲ್ಲವೆಂದು ಸಮರ್ಥಿಸುತ್ತಿದ್ದಾರೆ –

ತ್ರಯಾಣಾಮೇವ = ಕಾಠಕದಲ್ಲಿ ಮೂರು ವಿಷಯಗಳ ಬಗ್ಗೆ, ಪಿತೃಸೌಮನಸ್ಯ = ತಂದೆಯ ಮನಶ್ಶಾಂತಿ, ಸ್ವರ್ಗ್ಯಾಗ್ನಿ = ಸಾಧನೆಗಾಗಿ, ನಾಚಿಕೇತಾಗ್ನಿ ಪರಮಾತ್ಮಾನಾಂ = ಪರಮಾತ್ಮ ಈ ಮೂರು ವಿಷಯದಲ್ಲಷ್ಟೇ, ಪ್ರಶ್ನ ಉಪನ್ಯಾಸಶ್ಚ = ಪ್ರಶ್ನೆ ಹಾಗೂ ಉತ್ತರಗಳು ಇರುತ್ತವೆ.

ನಚಿಕೇತನು ಕೇಳಿದ್ದು ವರ

ಬ್ರಹ್ಮಸೂತ್ರಭಾಷ್ಯಮ್ – 'अविज्ञातप्रार्थनं च प्रश्न इत्यभिधीयते' इति वचनान्न विरोधः ॥७॥

ಅನುವಾದ - ತಿಳಿಯದ ಅರ್ಥವನ್ನು ಪ್ರಾರ್ಥಿಸುವುದೇ ಪ್ರಶ್ನೆ ಎನಿಸಿಕೊಳ್ಳುತ್ತದೆ. ಹೀಗೆ ಪ್ರಮಾಣವಿರುವುದರಿಂದ ಯಾವುದೇ ವಿರೋಧವಿಲ್ಲ.

ಪ್ರತಿಪದಾರ್ಥ -- ಹಾಗಾದರೆ ಪಿತೃಸೌಮನಸ್ಯವನ್ನು ನಚಿಕೇತನು ವರವನ್ನಾಗಿ ಕೇಳಬೇಕೇ ಹೊರತು, ಪ್ರಶ್ನೆಯನ್ನಾಗಿ ಕೇಳಬಾರದು. ಆದ್ದರಿಂದ ಪ್ರಾರ್ಥನೆಯನ್ನು ಪ್ರಶ್ನೆಯಲ್ಲಿ ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ ಹೀಗೆ ಉತ್ತರ ತಿಳಿಯಬೇಕು. –

ಅವಿಜ್ಞಾತಪ್ರಾರ್ಥನಂ = ತಿಳಿಯದ ಅರ್ಥದ ಬಗ್ಗೆ ಬೇಡುವಿಕೆಯು, ಪ್ರಶ್ನಃ = ಪ್ರಶ್ನೆಯು, ಇತಿ = ಹೀಗೆ, ಅಭಿಧೀಯತೇ = ಕರೆಸಿಕೊಳ್ಳುತ್ತದೆ. ಇತಿ ವಚನಾತ್ = ಹೀಗೆ ಪ್ರಮಾಣವಚನವಿರುವುದರಿಂದ, ನ ವಿರೋಧಃ = ಯಾವ ವಿರೋಧವೂ ಇಲ್ಲ.

ತತ್ವಪ್ರದೀಪ

ಮೊದಲನೆಯ ವರ

तत्वप्रदीपः – इतश्च नान्यस्य वाच्यत्वम् ।। त्रयाणामेव चैवमुपन्यासः प्रश्नश्च ।।

''शान्तसङ्कल्पः सुमना यथा स्यात् ।
वीतमन्युर्गौतमो माऽभि मृत्यो ।
त्वत्प्रसृष्टं माऽभिवदेत्प्रतीतः
एतत् त्रयाणां प्रथमं वरं वृणे''

इति नचिकेतसः पितृसौमनस्यप्रार्थनात्मकः प्रश्नः ।

ಮತ್ತೊಂದು ಕಾರಣದಿಂದಲೂ ಬೇರೆ ವಸ್ತುವು ವೈದಿಕಶಬ್ದದಿಂದ ಪ್ರತಿಪಾದ್ಯವಾಗಲು ಸಾಧ್ಯವಿಲ್ಲ ಎನ್ನಲು 'त्रयाणामेव चैवमुन्यापसः प्रश्नश्च' ಎಂಬ ಸೂತ್ರವು ಹೊರಟಿದೆ.

'शान्तसंकल्पः सुमना यथा स्यात् ।
ऐतमन्युर्गौतमो माऽभि मृत्यो ।
त्वत्प्रसृष्टं माऽभिवदेत्प्रतीतः ।
एतत् त्रयाणां प्रथमं वरं वृणे'

ಯಮನೇ ಗೌತಮ ಗೋತ್ರದಲ್ಲಿ ಜನ್ಮತಾಳಿದ ನನ್ನ ತಂದೆಯು ನನ್ನಲ್ಲಿ ಕೋಪ ಮಾಡಿರುವನು. ಅವನ ಈ ಕೋಪವು ಶಾಂತವಾಗಬೇಕು. ನನ್ನ ವಿಷಯದಲ್ಲಿ ಕೆಟ್ಟದ್ದನ್ನು ಯೋಚನೆ ಮಾಡಬಾರದು. ಪ್ರಸನ್ನ ಮನಸ್ಸುಳ್ಳವನಾಗಬೇಕು. ನಿನ್ನಿಂದ ಕಳುಹಿಸಿದ ಮೇಲೂ ನನ್ನನ್ನು ಮಗನೆಂಬ ವಾತ್ಸಲ್ಯದಿಂದ ಕಾಣಬೇಕು. ಮೂರು ವರಗಳಲ್ಲಿ ಇದು ನನ್ನ ಮೊದಲನೆಯ ವರ.

ಹೀಗೆ ನಚಿಕೇತನು ಕೇಳಿರುವ ಮೊದಲನೆಯ ವರವು ಪಿತೃಸೌಮನಸ್ಯವೆಂಬ ಪ್ರಾರ್ಥನಾರೂಪವಾಗಿದೆ.

ಯಮನ ಉತ್ತರ

तत्वप्रदीपः –

''यथा पुरस्ताद्भविता प्रतीतः
औद्दालकिरारुणिर्मत्प्रसृष्टः ।
सुखं रात्रीः शयिता वीतमन्यु-
स्त्वां ददृशिवान् मृत्युमुखात्प्रमुक्तम्'' इति मृत्योरुत्तरोपन्यासः ।

''स त्वमग्निं स्वर्ग्यमध्येषि मृत्यो
प्रब्रूहि त्वं श्रद्धधानाय मह्यम्'' इत्यादि स्वर्ग्याग्निप्रश्नः ।
''प्र ते ब्रवीमि तदु मे निबोध
स्वर्ग्यमग्निं नचिकेतः प्रजानन्'' इत्यादिरुपन्यासः ।

ಇದಕ್ಕೆ ಯಮದೇವರು ನೀಡುವ ಉತ್ತರ -

'ಯಥಾ ಪುರಸ್ತಾದ್ಭವಿತಾ ಪ್ರತೀತಃ ।
ಔದ್ದಾಲಕಿರಾರುಣಿರ್ಮತ್ಪ್ರಸೃಷ್ಟಃ ।
ಸುಖಂ ರಾತ್ರೀಃ ಶಯಿತಾ ವೀತಮನ್ಯು-
ಸ್ತ್ವಾಂ ದದೃಶಿವಾನ್ ಮೃತ್ಯುಮುಖಾತ್ ಪ್ರಮುಕ್ತಮ್''

ನಿನ್ನನ್ನು ನೋಡಿದಾಕ್ಷಣ ನಿನ್ನ ತಂದೆಯು ನನ್ನ ಪ್ರೇರಣೆಯಂತೆ ಶಾಂತನಾಗುವನು. ಯಾವುದೇ ಕೋಪ ಕೆಡುಕುಗಳಿಲ್ಲದವನಾಗುವನು. ಮತ್ತೊಂದು ಊರಿಗೆ ಹೋಗಿ ಬಂದಾಗ ನಿನ್ನನ್ನು ಹೇಗೆ ಗುರುತಿಸುತ್ತಾನೋ, ಹಾಗೆಯೇ ಗುರುತಿಸುವನು ಎಂಬುದಾಗಿ ಯಮನು ನಚಿಕೇತನಿಗೆ ಮೊದಲನೆಯ ವರವನ್ನು ನೀಡಿದನು.

'ಸ ತ್ವಮಗ್ನಿಂ ಸ್ವರ್ಗ್ಯಮಧ್ಯೇಷಿ ಮೃತ್ಯೋ
ಪ್ರಬ್ರೂಹಿ ತ್ವಂ ಶ್ರದ್ಧಧಾನಾಯ ಮಹ್ಯಮ್'

ಯಮನೇ ನನಗೆ ವರವನ್ನು ನೀಡಲು ಆಸಕ್ತನಾದ ನೀನು, ಸ್ವರ್ಗಕ್ಕೂ, ವಿಷ್ಣುಲೋಕಕ್ಕೂ ಕಾರಣವಾದ ಅಗ್ನಿಯಲ್ಲಿರುವ ಅಗ್ನಿಯೆಂಬ ವಿಷ್ಣುವನ್ನು ಚೆನ್ನಾಗಿ ತಿಳಿದಿರುವಿ. ಅದನ್ನು ನನಗೆ ತಿಳಿಸು ಎಂಬುದಾಗಿ ಸ್ವರ್ಗ್ಯಾಗ್ನಿಯ ಬಗ್ಗೆ ವರವನ್ನು ಕೇಳುವನು.

'ಪ್ರ ತೇ ಬ್ರವೀಮಿ ತದು ಮೇ ನಿಬೋಧ
ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್' ಇತ್ಯಾದಿರುಪನ್ಯಾಸಃ।

ಇದಕ್ಕೆ ಯಮಧರ್ಮರಾಜನು ಹೀಗೆ ಉತ್ತರಿಸಿದನು - ಓ ನಚಿಕೇತನೇ ! ಸ್ವರ್ಗಕ್ಕೆ ಸಾಧನವಾದ ಅಗ್ನಿಯಲ್ಲಿ ನೆಲೆಸಿರುವವನು ಅಗ್ನಿಯೆಂಬ ವಿಷ್ಣುವೇ ಆಗಿದ್ದಾನೆ. ಅದರ ಬಗ್ಗೆ ತಿಳಿದಿರುವ ನಾನು ನಿನಗೆ ಸ್ವರ್ಗ್ಯಾಗ್ನಿಯ ಉಪದೇಶವನ್ನು ಮಾಡುತ್ತೇನೆ.

ಮೂರನೆಯ ವರ

तत्वप्रदीपः –

''यैयं प्रेते विचिकित्सा मनुष्ये
अस्तीत्येके नायमस्तीति चैके ।
एतद्विद्यामनुशिष्टस्त्वयाऽहम्'' इत्यादि परमात्मप्रश्नः ।।
''देवैरत्रापि विचिकित्सितं पुरा
नहि सुज्ञेयोऽणुरेषु धर्म'' इत्यादिरुपन्यासप्रपञ्चः ।।

'ಯೈಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ
ಅಸ್ತೀತ್ಯೇಕೇ ನಾಯಮಸ್ತೀತಿ ಚೈಕೇ।
ಏತದ್ವಿದ್ಯಾಮನುಶಿಷ್ಟಸ್ತ್ವಯಾಽಹಮ್''

ಜ್ಞಾನಿಜನರು ಹೀಗೆ ಹೇಳುತ್ತಾರೆ - ಮುಕ್ತರಾದವರಲ್ಲಿ ಭಗವಂತನು ನಿಯಾಮಕನಾಗಿ ನೆಲೆಸಿದ್ದಾನೆ. ಆದರೆ ಅಜ್ಞಾನಿಗಳು ಅವನನ್ನು ನಿಯಾಮಕನಲ್ಲವೆಂದು ಹೇಳುತ್ತಾರೆ. ಇದರಿಂದ ನನಗೆ ಸಂಶಯವು ಉಂಟಾಗಿದೆ. ಆದ್ದರಿಂದ ನಿಯಾಮಕನಾದ ಭಗವಂತನ ಸ್ವರೂಪವನ್ನು ನಿನ್ನಿಂದ ಕೇಳಿ ತಿಳಿಯಲು ಇಚ್ಛಿಸುತ್ತೇನೆ. ಇದು ನಾನು ನಿನ್ನ ಬಳಿ ಕೇಳುವ ಮೂರನೆಯ ವರ.

ಎಂಬುದಾಗಿ ಪರಮಾತ್ಮವಿಷಯಕವಾಗಿ ಮೂರನೆಯ ಪ್ರಶ್ನೆಯನ್ನು ನಚಿಕೇತನು ಮಾಡುತ್ತಾನೆ. ಇದಕ್ಕೆ ಯಮದೇವರು ನೀಡುವ ಉತ್ತರ ಹೀಗಿದೆ -

'ದೈವೈರತ್ರಾಪಿ ವಿಚಿಕಿತ್ಸಿತಂ ಪುರಾ
ನಹಿ ಸುಜ್ಞೇಯೋಽಣುರೇಷು ಧರ್ಮ'

ಓ ನಚಿಕೇತನೇ ! ಅತ್ಯಂತ ಸೂಕ್ಷ್ಮವಾದ ಪ್ರಪಂಚಕ್ಕೆ ಪರಮಾತ್ಮನೇ ಧಾರಕನಾಗಿದ್ದಾನೆ. ಈ ಮುಕ್ತನಿಯಾಮಕನಾದ ಭಗವಂತನನ್ನು ತಿಳಿಯುವುದು ಸುಲಭವಲ್ಲ ಎಂದು.

ಮರಣ ಎಂದರೆ ಮೋಕ್ಷ

तत्वप्रदीपः – अत्र मरणं मोक्षः, सर्वशरीरविरहात्मकत्वात्तस्य ।

ಇಲ್ಲಿರುವ ಮರಣಶಬ್ದಕ್ಕೆ ಮೋಕ್ಷ ಎಂದರ್ಥ. ಏಕೆಂದರೆ ಮೋಕ್ಷವು ಎಲ್ಲಾ ಶರೀರಗಳಿಂದಲೂ ರಹಿತವಾಗಿರುತ್ತದೆ. ಹೀಗೆ ಮೂರು ಬಗೆಯ ಪ್ರಶ್ನೆ ಹಾಗೂ ಉತ್ತರಗಳನ್ನು ತಿಳಿಯಬೇಕು.

ಪ್ರಸಕ್ತವಾದದ್ದು ಮೂರು ಮಾತ್ರ

तत्वप्रदीपः – एवं त्रयाणामेव प्रश्नोपन्यासौ चैवमेवोपपद्येते । नान्योन्यासाङ्गीकारे । अथापि परादन्यस्य वाच्यत्वमापतितमिति चेन्न । त्रयाणामेव प्रश्न उपन्यासश्च एवमेव परमात्मन एव ज्ञेयत्वाङ्गीकार एव युज्यत इत्यभिप्रायात् ।

'ಏವಂ ತ್ರಯಾಣಾಮೇವ ಪ್ರಶ್ನಃ' ಎಂದು ಅನ್ವಯ. ಈ ಮೂರರ ಬಗ್ಗೆ ಮಾತ್ರ ಪ್ರಶ್ನೆ ಮಾಡಲಾಗಿದೆ ಎಂದಭಿಪ್ರಾಯ. ತಂದೆಯ ಮನಃಶಾಂತಿ, ಸ್ವರ್ಗಪ್ರಾಪ್ತಿ ಕಾರಣವಾದ ನಚಿಕೇತಾಗ್ನಿ, ಮುಕ್ತನಿಯಾಮಕನಾದ ಪರಮಾತ್ಮ ಈ ಮೂರರ ಬಗ್ಗೆ ಮಾತ್ರ ಪ್ರಶ್ನೆ ಮಾಡಲಾಗಿದೆ. ಬೇರೆ ವಿಷಯವನ್ನು ಇಲ್ಲಿ ಹೇಳಿರುವುದಿಲ್ಲ. ಆದರೂ ಕೂಡ ಪರಮಾತ್ಮನನ್ನು ಬಿಟ್ಟು, ಮತ್ತೊಂದು ಪದಾರ್ಥವೂ ಕೂಡ ವೈದಿಕಶಬ್ದಗಳಿಂದ ಪ್ರತಿಪಾದ್ಯವಾಗಲಿ ಎಂದು

ಪ್ರಶ್ನಿಸಬಾರದು. ಏಕೆಂದರೆ 'ತ್ರಯಾಣಾಮೇವ ಪ್ರಶ್ನೋಪನ್ಯಾಸಶ್ಚ' ಮೂರರ ಬಗ್ಗೆ ಮಾತ್ರ ಪ್ರಶ್ನೆ ಹಾಗೂ ಉತ್ತರವನ್ನು ಹೇಳಿರುವುದರಿಂದ ಪರಮಾತ್ಮನೇ ಇಲ್ಲಿ ಪ್ರತಿಪಾದ್ಯನಾಗಿದ್ದಾನೆಂದು ಅಂಗೀಕಾರ ಮಾಡಬೇಕು ಎಂಬುದು ಸೂತ್ರಕಾರರ ಅಭಿಪ್ರಾಯ. ಉಪನಿಷತ್ತಿನಿಂದಲೂ ಕೂಡ ಇದೇ ವಿಷಯವು ಸ್ಪಷ್ಟವಾಗುತ್ತದೆ. ಅದು ಹೀಗೆ -

ಭಗವಂತನ ಬಗ್ಗೆ ಆಸಕ್ತಿ ಇಲ್ಲದವರೇ ಹೆಚ್ಚು

तत्वप्रदीपः – तथाहि –

''अविद्यायामन्तरे वेष्टयमानाः
स्वयं धीराः पण्डितम्मन्यमाना''

इत्यादिनाऽन्यत्सर्वं विनिन्द्य –

''श्रवणायापि बहुभिर्यो न लभ्यः
शृण्वन्तोऽपि बहवो यं न विद्युः''

इत्यादिना परम्तत्मानं तद्भक्तारं श्रोतारं ज्ञानं च पृथक्पृथक् प्रशस्य तत्स्वरूपमवर्णयत् । अत्रैव तात्पर्यप्रदिदर्शयिषयैवान्यदप्यभिधशय विनिनिन्द। निन्दनार्थमप्यन्यस्य वाच्यत्वमनुज्ञातमिति चेत्सत्यमधिकारिभेदापेक्षया । ''सर्वे वेदा यत्पदमामनन्ति'' इतीहैव चान्यस्यावाच्यत्वं प्रतिज्ञायते ।

ಅದು ಹೀಗೆ -

ಅವಿದ್ಯಾಯಾಮಂತರೇ ವೇಷ್ಟ್ಯಮಾನಾಃ
ಸ್ವಯಂ ಧೀರಾಃ ಪಂಡಿತಂಮನ್ಯಮಾನಾ'

ಬ್ರಹ್ಮವಿದ್ಯೆಯನ್ನು ಅಧ್ಯಯನ ಮಾಡದೇ ಭೋಗಪದಾರ್ಥಗಳ ಮಧ್ಯದಲ್ಲಿ ಬಿದ್ದಿರುವ ತಾವೇ ಬುದ್ಧಿವಂತರು ಹಾಗೂ ಪಂಡಿತರು ಎಂದು ತಿಳಿದಿರುವ ಮಂದಮತಿಗಳು

ಲೋಕದಲ್ಲಿಯೇ ತಿರುಗುತ್ತಾರೆ ಇತ್ಯಾದಿಯಾಗಿ ಪರಮಾತ್ಮನನ್ನು ಬಿಟ್ಟು, ಬೇರೆ ಪದಾರ್ಥಗಳನ್ನು ತಿಳಿಯಬಾರದು ಎಂದು ಅದೇ ಶ್ರುತಿ ಮುಂದೆ ನಿಷೇಧ ಮಾಡುತ್ತಿದೆ. ಮತ್ತು

'ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ
ಶೃಣ್ವಂತೋಽಪಿ ಬಹವೋ ಯಂ ನ ವಿದ್ಯುಃ'

ಬಹಳಮಂದಿ ಭಗವಂತನ ಬಗ್ಗೆ ಕೇಳುವುದೇ ಇಲ್ಲ. ಕೆಲವರು ಭಗವಂತನ ಬಗ್ಗೆ ಕೇಳಿದರೂ ಕೂಡ ಯಥಾರ್ಥವಾಗಿ ಮತ್ತು ಸಮಗ್ರವಾಗಿ ಭಗವಂತನನ್ನು ತಿಳಿಯುವುದೇ ಇಲ್ಲ ಇತ್ಯಾದಿ ವಾಕ್ಯದಿಂದ ಪರಮಾತ್ಮನನ್ನು ಅವನ ಬಗ್ಗೆ ಹೇಳುವ ವ್ಯಕ್ತಿಯನ್ನು ಪರಮಾತ್ಮನ ಬಗ್ಗೆ ಕೇಳುವ ವ್ಯಕ್ತಿಯನ್ನು ಹಾಗೂ ಜ್ಞಾನವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪ್ರಶಂಸೆ ಮಾಡಿ, ಪರಮಾತ್ಮನ ಸ್ವರೂಪವನ್ನು ವರ್ಣಿಸಲಾಗಿದೆ. ಮತ್ತು ಇದೇ ಸಂದರ್ಭದಲ್ಲಿ ಪರಮಾತ್ಮನೊಬ್ಬನೇ ಎಲ್ಲಾ ವೇದಗಳ ಅರ್ಥ ಹಾಗೂ ತಾತ್ಪರ್ಯವೆಂದು ತೋರಿಸುವ ಮೂಲಕ ಬೇರೆ ವಿಷಯಗಳಲ್ಲಿ ಉಪನಿಷತ್ತಿಗೆ ತಾತ್ಪರ್ಯವೂ ಇರುವುದಿಲ್ಲ. ಪ್ರತಿಪಾದ್ಯತ್ವವೂ ಕೂಡ ಇರುವುದಿಲ್ಲವೆಂದು ನಿಂದನೆ ಮಾಡಲಾಗಿದೆ.

ನಿಂದನೆಗೋಸ್ಕರವಾದರೂ ಬೇರೆ ವಸ್ತುವನ್ನು ಪ್ರತಿಪಾದ್ಯವೆಂದು ಒಪ್ಪಬೇಕಲ್ಲವೇ? ಎಂದು ಪ್ರಶ್ನಿಸಿದರೆ, ಹೌದು ! ಅಧಿಕಾರಿಭೇದಾಪೇಕ್ಷೆಯಿಂದ ಹಾಗೇ ಹೇಳಬಹುದು. 'ಸರ್ವೇ ವೇದಾ ಯತ್ಪದಮಾಮನಂತಿ' ಎಂಬ ಶ್ರುತಿಯು ಇದೇ ಸಂದರ್ಭದಲ್ಲಿ ಸಕಲ ವೇದವೈದಿಕಶಬ್ದಗಳು ಪರಮಾತ್ಮನನ್ನು ಬಿಟ್ಟು ಮತ್ತೊಂದನ್ನು ಪ್ರತಿಪಾದನೆ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದೆ.

ತತ್ವಪ್ರಕಾಶಿಕಾ

ಪ್ರಕೃತಿಯೂ ಕೂಡ ಪ್ರತಿಪಾದ್ಯವಾಗಲಿ ?

तत्वप्रकाशिका – हेत्वन्तरेणानाद्यनन्तादिवाक्येऽन्यस्यापि प्रतिपाद्यतां पराकुर्वत् सूत्रमुपन्यस्य व्याचष्टे – त्रयाणामेवेति ।।

'ಅನಾದ್ಯನಂತಂ' ಎಂಬ ಶ್ರುತಿಯಲ್ಲಿ ಪರಮಾತ್ಮನಿಗಿಂತ ಇತರವಾದ ಪ್ರಕೃತಿಯೂ ಕೂಡ ಪ್ರತಿಪಾದ್ಯವಾಗಿವೆ ಎಂಬುದನ್ನು ಮತ್ತೊಂದು ಹೇತುವಿನಿಂದ ನಿರಾಕರಣೆ ಮಾಡಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ತ್ರಯಾಣಾಮೇವ' ಇತ್ಯಾದಿಯಾಗಿ.

ಪ್ರಕೃತಿ ವಿಷಯದಲ್ಲಿ ಪ್ರಶ್ನೆಯೇ ಇಲ್ಲ

तत्वप्रकाशिका – न केवलमेतत् प्रकरणस्य वैष्णवत्वेन प्रधानस्याप्रतिपाद्यता किं त्वेतदुपनिषद्यपि पितृसौमनस्यादित्रयस्यैवोपन्यासाच्च।

ಈ ಪ್ರಕರಣವು ವಿಷ್ಣುಪ್ರಕರಣವಾದ್ದರಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ ಹೊರತು ಪ್ರಧಾನವು ಪ್ರತಿಪಾದ್ಯವಾಗುವುದಿಲ್ಲ ಎಂಬುದಷ್ಟೇ ಅಲ್ಲ. ಈ ಕಾಠಕೋಪನಿಷತ್ತಿನಲ್ಲಿ 'ಪಿತೃಸೌಮನಸ್ಯ' ಮೊದಲಾದ ಮೂರು ವಿಷಯಗಳಲ್ಲಿ ಪ್ರಶ್ನೆಯನ್ನು ಉಪನ್ಯಾಸ ಮಾಡಿರುವುದರಿಂದ ಪ್ರಕೃತಿಯ ವಿಷಯದಲ್ಲಿ ಪ್ರಶ್ನೆಯೇ ಇರುವುದಿಲ್ಲ. ಆದ್ದರಿಂದಲೂ ಪ್ರಕೃತಿಯು ಪ್ರತಿಪಾದ್ಯವಾಗುವುದಿಲ್ಲವೆಂದು ತಿಳಿಯಬೇಕು.

ಹಾಗಾದಲ್ಲಿ ಯಮದೇವರ ಮಾತೇ ತಪ್ಪಾದೀತು

तत्वप्रकाशिका – तदेव कुतः । तत्त्रयविषय एव नचिकेतसः प्रश्नात् अपृष्टस्य चोपन्यासायोगादिति भावः ।

ಪ್ರಕೃತಿಯ ವಿಷಯದಲ್ಲಿ ಪ್ರಶ್ನೆಯಿರುವುದಿಲ್ಲವೆಂದು ಹೇಗೆ ನಿರ್ಣಯಿಸುತ್ತೀರಿ? ಎಂದರೆ ನಚಿಕೇತನು ಮೂರು ವಿಷಯದಲ್ಲಿ ಮಾತ್ರ ಪ್ರಶ್ನೆಯನ್ನು ಮಾಡಿದ್ದಾನೆ. ಯಾವ ವಿಷಯದಲ್ಲಿ ನಚಿಕೇತನು ಪ್ರಶ್ನಿಸಿಲ್ಲವೋ, ಆ ವಿಷಯದಲ್ಲಿ ಉತ್ತರವನ್ನು ಯಮದೇವರು ಹೇಳುವುದೂ ಕೂಡ ತಪ್ಪಾಗುತ್ತದೆ ಎಂದು ಸಿದ್ಧಾಂತಿಗಳ ಅಭಿಪ್ರಾಯ.

ನಚಿಕೇತನ ಪ್ರಶ್ನೆಗಳು

तत्वप्रकाशिका – त्रयाणामेवोपन्यास इत्युक्ते त्रयेऽपि प्रधानं किं न स्यादिति शङ्कानिरासाय तत्प्रकारं दर्शयन्नेवमित्याह, तदेव व्याचख्यौ – पितृसौमनस्येत्यादिना ।।

ನಚಿಕೇತನು ಮಾಡಿರುವ ಮೂರು ಬಗೆಯ ಪ್ರಶ್ನೆಗಳ ಮಧ್ಯದಲ್ಲಿ ಪ್ರಕೃತಿಯು ಏಕೆ ಸೇರಿರಬಾರದು? ಎಂಬ ಆಶಂಕೆಯನ್ನು ನಿರಾಕರಣೆ ಮಾಡುವುದಕ್ಕಾಗಿ ಪ್ರಶ್ನೆಗಳ ಪ್ರಕಾರವನ್ನು ತೋರಿಸಲು ಸೂತ್ರದಲ್ಲಿ 'ಏವಂ' ಎಂದು ಹೇಳಿದರು. ಸೂತ್ರದಲ್ಲಿರುವ 'ಏವಂ' ಎಂಬ ಪದವನ್ನು ಭಾಷ್ಯದಲ್ಲಿ 'ಪಿತೃಸೌಮನಸ್ಯ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ಮೂರನೆಯ ಪ್ರಶ್ನೆ

तत्वप्रकाशिका – 'येयं प्रेते विचिकित्सा' इत्यादिना मृतजीवस्यास्तित्वादौ तृतीयप्रश्नस्य प्रवृत्तत्वात् कथं परमात्मप्रश्न इति शङ्का तद् भाष्य एव परिहृता ।

'ಯೇಯಂ ಪ್ರೇತೇ ವಿಚಿಕಿತ್ಸಾ' ಇತ್ಯಾದಿ ವಾಕ್ಯದಲ್ಲಿ ಮರಣವನ್ನು ಹೊಂದಿರುವ ಜೀವನು ಇದ್ದಾನೋ ಇಲ್ಲವೋ ? ಎಂಬ ಮೂರನೆಯ ಪ್ರಶ್ನೆಯು ಹೊರಟಿರುವುದರಿಂದ ಪರಮಾತ್ಮ-ವಿಷಯಕವಾದ ಪ್ರಶ್ನೆ ಎಂದು ಹೇಗೆ ಹೇಳುತ್ತೀರಿ? ಈ ಆಶಂಕೆಗೆ ಕಾಠಕೋಪನಿಷತ್ತಿನ ಭಾಷ್ಯದಲ್ಲಿಯೇ ಪರಿಹಾರವನ್ನು ಹೇಳಿರುತ್ತಾರೆ.

ಯಾವುದು ಪ್ರಶ್ನೆ ?

तत्वप्रकाशिका – ननु पितृसौमनस्यं वरत्वेन प्रार्थ्यतेऽतः कथं प्रार्थनं प्रश्न इत्यत आह – अविज्ञातेति ।।

ನಚಿಕೇತನು ತನ್ನ ತಂದೆಯ ಸೌಮನಸ್ಯವನ್ನು ವರವನ್ನಾಗಿ ಯಾಚನೆ ಮಾಡಿರುತ್ತಾನೆ. ಈ ಯಾಚನೆಯನ್ನು ಪ್ರಶ್ನೆ ಎಂದು ಹೇಗೆ ಹೇಳುತ್ತೀರಿ? ಎಂಬ ಆಶಂಕೆಗೆ 'ಅವಿಜ್ಞಾತ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಾರ್ಥನೆಯೇ ಪ್ರಶ್ನೆ

तत्वप्रकाशिका – 'यत् प्राप्स्यते न वेत्यविज्ञातं तत् प्रार्थनमपि प्रश्न इत्यभिधीयते' इति वचनान्न प्रार्थनस्यापि प्रश्नत्वोक्तिर्विरुद्धेत्यर्थः ।। ७ ।।

'ಯತ್ ಪ್ರಾಪ್ಸ್ಯತೇ ನ ವೇತ್ಯವಿಜ್ಞಾತಂ ತತ್ ಪ್ರಾರ್ಥನಮಪಿ ಪ್ರಶ್ನ ಇತ್ಯಭಿಧೀಯತೇ' 'ವಸ್ತುವು ನಮಗೆ ಪ್ರಾಪ್ತವಾಗುತ್ತದೋ ಇಲ್ಲವೋ ಎಂಬ ವಿಷಯದಲ್ಲಿ ತಿಳುವಳಿಕೆ ಇಲ್ಲದಿದ್ದಾಗ ಅಂತಹ ವಸ್ತುವಿನ ಬಗ್ಗೆ ನಾವು ಮಾಡುವಂತಹ ಪ್ರಾರ್ಥನೆಯೂ ಕೂಡ ಪ್ರಶ್ನೆಯೆಂದು ಕರೆಸಿಕೊಳ್ಳುತ್ತದೆ' ಎಂಬ ವಚನವಿರುವುದರಿಂದ ಪ್ರಾರ್ಥನೆಯನ್ನೇ ಪ್ರಶ್ನೆಯೆಂದು ಇಲ್ಲಿ ವಿವಕ್ಷಿಸಲಾಗಿದೆ. ಆದ್ದರಿಂದ ಯಾವ ವಿರೋಧಗಳಿಗೂ ಅವಕಾಶವಿರುವುದಿಲ್ಲ.

ಭಾವದೀಪ

'ಚ'ಶಬ್ದವು ಯುಕ್ತಿಸಮುಚ್ಚಾಯಕ

भावदीपः – आद्यश्चो युक्तिसमुच्चय इति मत्वाऽर्थमाह – न केवलमिति।।

ಸೂತ್ರದಲ್ಲಿ ಮೊದಲನೆಯ ''ಚ'' ಎಂಬ ಶಬ್ದವು ಮತ್ತೊಂದು ಯುಕ್ತಿಯನ್ನು ಸಮುಚ್ಚಯ ಮಾಡುತ್ತಿದೆ. ಅದನ್ನು ಟೀಕೆಯಲ್ಲಿ 'ನ ಕೇವಲಂ' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ.

ಪಿತೃಸೌಮನಸ್ಯದ ಬಗ್ಗೆ

भावदीपः – पितृसौमनस्यादीति ।। वीतमन्युस्त्वां ददृशिवान् मृत्युमुखात् प्रमुक्तमिति । स्वर्ग्यमग्निं नचिकेतः प्रजानन्निति । देवैरत्रापि विचिकित्सितं किलेत्येवं रूपस्य पितृसौमनस्य स्वर्ग्याग्निपरमात्म रूपत्रयस्येत्यर्थः ।

ಟೀಕೆಯಲ್ಲಿ 'ಪಿತೃಸೌಮನಸ್ಯಾದಿ' ಎಂಬ ಪದವಿದೆ. ಇದರ ಅಭಿಪ್ರಾಯವನ್ನು ಹೀಗೆ ತಿಳಿಯಬೇಕು - ''ವೀತಮನ್ಯುಸ್ತ್ವಾಂ ದದೃಶಿವಾನ್ ಮೃತ್ಯುಮುಖಾತ್ ಪ್ರಮುಕ್ತಮ್'' ''ಎಲೈ ನಚಿಕೇತನೇ! ನಾನು ಕಳುಹಿಸಿದ ನಿನ್ನನ್ನು ನೋಡಿದಾಗ ನಿನ್ನ ತಂದೆಯು ಕೋಪ ರಹಿತನಾಗುವನು. ಬೇರೆ ಊರಿನಿಂದ ಬಂದರೆ ನಿನ್ನನ್ನು ಹೇಗೆ ಗುರುತಿಸುತ್ತಾನೋ ಹಾಗೆ ಗುರುತಿಸುವನು, ಮತ್ತು ರಾತ್ರಿಯಕಾಲ ಸುಖವಾಗಿ ನಿದ್ರಿಸುವನು''. ಹೀಗೆ ''ಪಿತೃಸೌಮನಸ್ಯ'' ಎಂಬ ಮೊದಲನೆಯ ವರವನ್ನು ಯಮನು ನಚಿಕೇತನಿಗೆ ನೀಡಿದನು

''ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್'' ''ನಚಿಕೇತನೇ ಸ್ವರ್ಗಕ್ಕೆ ಸಾಧನವಾದ ಅಗ್ನಿಯಲ್ಲಿರುವ ಅಗ್ನಿ ಎಂಬ ಭಗವಂತನನ್ನು ನಾನು ಚೆನ್ನಾಗಿ ತಿಳಿದಿರುವೆನು. ನಿನಗೆ ಈಗ ಅವನನ್ನು ಉಪದೇಶಿಸುವೆನು. ಅಗ್ನಿ ನಾಮಕನಾದ ಈ ಪರಮಾತ್ಮನು ಶಾಶ್ವತವಾದ ಮೋಕ್ಷವನ್ನು ನೀಡುವವನಾಗಿದ್ದಾನೆ. ಎಲ್ಲರ ಹೃದಯಗುಹೆಯಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವ ಇವನು ಸಮಸ್ತ ಲೋಕಗಳಿಗೆ ಆಧಾರನಾಗಿದ್ದಾನೆಂದು ತಿಳಿ.'' ಹೀಗೆ ನಚಿಕೇತನಿಗೆ ಸ್ವರ್ಗ್ಯಾಗ್ನಿಯನ್ನು ಉಪದೇಶಿಸಿ ಎರಡನೆಯ ವರವನ್ನು ನೀಡಿದನು.

''ದೇವೈರತ್ರಾಪಿ ವಿಚಿಕಿತ್ಸಿತಂ ಕಿಲ'' ''ಮುಕ್ತಾಮುಕ್ತನಿಯಾಮಕನಾದ ಭಗವಂತನ ಸ್ವರೂಪವನ್ನು ಸುಲಭವಾಗಿ ತಿಳಿಯಲು ಸಾಧ್ಯವಿಲ್ಲ ಆದ್ದರಿಂದ ದೇವತೆಗಳೂ ಕೂಡ ಈ ವಿಷಯದಲ್ಲಿ ಸಂದೇಹವನ್ನು ಹೊಂದಿದ್ದಾರೆ. ಹೀಗೆ ನೀನೇ ಹೇಳಿರುವಿಯಷ್ಟೆ. ಆದ್ದರಿಂದ ನನಗೆ ಮುಕ್ತನಿಯಾಮಕನಾದ ಭಗವಂತನ ಬಗ್ಗೆ ಉಪದೇಶ ಮಾಡು''. ಹೀಗೆ ನಚಿಕೇತನು ಯಮನ ಬಳಿ ಮುಕ್ತನಿಯಾಮಕನಾದ ಪರಮಾತ್ಮನ ಬಗ್ಗೆ ಮೂರನೆಯ ವರವನ್ನು ಪ್ರಾರ್ಥಿಸುತ್ತಾನೆ.

ಸೂತ್ರದಲ್ಲಿರುವ ಪ್ರಶ್ನಪದದ ಬಗ್ಗೆ

भावदीपः – उपन्यासोक्त्यैव प्रधानस्याप्रतिपाद्यतासिद्धौ प्रश्नोक्तिः किमर्थेत्यत आह – तदेव कुत इति ।।

ಕಾಠಕೋಪನಿಷತ್‌ನಲ್ಲಿ ಪಿತೃಸೌಮನಸ್ಯ, ಸ್ವರ್ಗ್ಯಾಗ್ನಿ ಮತ್ತು ಪರಮಾತ್ಮ. ಈ ಮೂರು ವಿಷಯದ ಬಗ್ಗೆ ಪ್ರಸ್ತಾಪ ಬಂದಿದೆ ಎಂದು ಹೇಳಿದರೆ ಸಾಕು. ಪ್ರಕೃತಿಯು ಪ್ರತಿಪಾದ್ಯವಲ್ಲವೆಂಬುದು ಸಿದ್ಧವಾಗುತ್ತದೆ. ಪುನಃ ಪ್ರಕೃತಿಯ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿಲ್ಲ ಎಂಬುದನ್ನು ತಿಳಿಸಲು ಸೂತ್ರದಲ್ಲಿ 'ಪ್ರಶ್ನಃ' ಎಂಬ ಪದವನ್ನು ಏಕೆ ಪ್ರಯೋಗಿಸಿದರು ? ಎಂಬ ಪ್ರಶ್ನೆಗೆ 'ತದೇವ ಕುತಃ' ಎಂಬ ಮಾತಿನಿಂದ ಉತ್ತರಿಸುತ್ತಿದ್ದಾರೆ.

ಪ್ರಶ್ನೋಕ್ತಿಯ ಫಲ

भावदीपः – उपन्यासस्य त्रितयविषयकत्वसमर्थनं प्रश्नोक्तेः फलमिति दर्शितम्।

ಮೂರು ವಿಷಯವನ್ನಷ್ಟೇ ಉಪನಿಷತ್ತು ಪ್ರತಿಪಾದನೆ ಮಾಡುತ್ತಿದೆ ಎಂಬ ಸಮರ್ಥನೆಯು ಪ್ರಶ್ನೋಕ್ತಿಯ ಫಲವಾಗಿದೆ ಎಂದು ಹೇಳಿದಂತಾಯಿತು.

ತ್ರಯಾಣಾಮಿತ್ಯಾದಿ ಟೀಕೆಯ ಸಂದರ್ಭ

भावदीपः – पितृसौमनस्येत्यादिभाष्यस्य व्यावर्त्योक्तिपूर्वं व्याख्येयं दर्शयति – त्रयाणामिति ।।

'ಪಿತೃಸೌಮನಸ್ಯ' ಇತ್ಯಾದಿ ಭಾಷ್ಯದಿಂದ ವ್ಯಾವೃತ್ತವಾದುದ್ದನ್ನು ತಿಳಿಸುವ ಮೂಲಕ ವ್ಯಾಖ್ಯೇಯವನ್ನು ತೋರಿಸುತ್ತಿದ್ದಾರೆ 'ತ್ರಯಾಣಾಮ್' ಇತ್ಯಾದಿ ಟೀಕಾಮಾತಿನಿಂದ.

ನಚಿಕೇತ ಕೇಳಿದ ಮೂರು ವರಗಳು

भावदीपः – 'सुमना यथा स्यात् वीतमन्युः' इति 'स त्वमग्निं स्वर्ग्यमध्येषि मृत्यो प्रब्रूहि तम्' इति 'येयं प्रेते विचिकित्सा मनुष्ये' इति त्रयविषय एवेत्यर्थः । तद्भाष्ये काठकभाष्ये ।

"ಸುಮನಾ ಯಥಾ ಸ್ಯಾದ್ವೀತಮನ್ಯುಃ" "ಯಮನೇ! ನನ್ನ ತಂದೆಯು ನನ್ನ ವಿಷಯದಲ್ಲಿ ಕೋಪವನ್ನು ಬಿಟ್ಟು ಪ್ರಸನ್ನಮನಸ್ಕನಾಗಬೇಕು." ಇದು ಮೊದಲನೆಯ ವರ.

"ಸ ತ್ವಮಗ್ನಿಂ ಸ್ವರ್ಗ್ಯಮಧ್ಯೇಷಿ ಮೃತ್ಯೋ ಪ್ರಬ್ರೂಹಿ ತಮ್" "ಯಮನೇ! ಸ್ವರ್ಗಕ್ಕೂ ವಿಷ್ಣುಲೋಕಕ್ಕೂ ಕಾರಣನಾದ ಅಗ್ನಿಯಲ್ಲಿರುವ ವಿಷ್ಣುವನ್ನು ನೀನು ಚೆನ್ನಾಗಿ ತಿಳಿದಿರುವಿ. ಅದನ್ನು ನನಗೆ ಉಪದೇಶಿಸು". ಇದು ಎರಡನೆಯ ವರ.

"ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ" "ಯಮನೇ! ಮುಕ್ತನಾದ ಮನುಷ್ಯನಲ್ಲಿ ಭಗವಂತನು ನಿಯಾಮಕನಾಗಿ ಇರುತ್ತಾನೆಂದು ಜ್ಞಾನಿಗಳು ಹೇಳುತ್ತಾರೆ. ಅಂಥ ಮುಕ್ತ ನಿಯಾಮಕನಾದ ಭಗವಂತನ ಸ್ವರೂಪವನ್ನು ನನಗೆ ತಿಳಿಸು". ಇದು ಮೂರನೆಯ ವರ.

ಹೀಗೆ ನಚಿಕೇತನು ಯಮನ ಬಳಿ ಮೂರರ ಬಗ್ಗೆ ಮಾತ್ರ ಪ್ರಶ್ನೆಯನ್ನು ಮಾಡಿರುತ್ತಾನೆ ಹೊರತು ಪ್ರಕೃತಿಯ ಬಗ್ಗೆ ಪ್ರಶ್ನೆ ಮಾಡಿರುವುದೇ ಇಲ್ಲ ಎಂದು ತಿಳಿಯಬೇಕು.

'ತದ್‌ಭಾಷ್ಯೇ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಕಾಟಕಭಾಷ್ಯದಲ್ಲಿ ಎಂದು ಇದರ ಅರ್ಥ.

'ಯೇಯಂ ಪ್ರೇತೇ' ಎಂಬ ಶ್ರುತ್ಯರ್ಥ

भावदीपः – प्रेते मुक्ते मनुष्ये नियामकत्वेन भगवानस्तीत्यादिना 'येयं प्रेते' इति वाक्यं मुक्तविषयं व्याख्याय नच मृत्वा यमं प्राप्तस्य नचिकेतसो मृतोऽस्ति न वेति संशयोऽस्तीत्यादीना परिहृतेत्यर्थः।।

ಪ್ರೇತೇ = ಮುಕ್ತನಾದ ಮನುಷ್ಯನಲ್ಲಿ, ನಿಯಾಮಕನಾಗಿ ಭಗವಂತನು ಇರುತ್ತಾನೆ ಇತ್ಯಾದಿಯಾಗಿ 'ಯೇಯಂ ಪ್ರೇತೇ' ಎಂಬ ಉಪನಿಷತ್ತಿನ ವಾಕ್ಯವನ್ನು ಮುಕ್ತನಿಯಾಮಕನಾದ ಪರಮಾತ್ಮವಿಷಯಕವಾಗಿ ವ್ಯಾಖ್ಯಾನ ಮಾಡಿದ್ದಾರೆ. ಅನಂತರ ಮರಣವನ್ನು ಹೊಂದಿ ಯಮನ ಬಳಿ ನಿಂತಿರುವ ನಚಿಕೇತನಿಗೆ ಮರಣವಿದೆಯೋ ಇಲ್ಲವೊ ? ಎಂಬ ಸಂಶಯವು ಪ್ರಾಪ್ತವಾದರೆ 'ಅಸ್ತಿ' ಇತ್ಯಾದಿ ವಾಕ್ಯದಿಂದ ಪರಿಹರಿಸಿದ್ದಾರೆ.

ಅವಿಜ್ಞಾತ ಪದದ ಅರ್ಥ

भावदीपः – अविज्ञातमिति ।। प्राप्स्यत इति वा न वेति वा यदनिर्णीतमित्यर्थः ।।७।।

ಟೀಕೆಯಲ್ಲಿ ಹೇಳಿರುವ 'ಅವಿಜ್ಞಾತಮ್' ಎಂಬ ಪದಕ್ಕೆ 'ವಸ್ತುವು ನಮಗೆ ಪ್ರಾಪ್ತವಾಗುತ್ತದೋ ಇಲ್ಲವೊ ಎಂಬ ತಿಳುವಳಿಕೆಯನ್ನು ಹೊಂದದ ವಿಷಯದಲ್ಲಿ' ಎಂದರ್ಥ.

ಬ್ರಹ್ಮಸೂತ್ರ

'ಮಹದ್ವಚ್ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। महद्वच्च ।। ८ ।।

ಸೂತ್ರಾರ್ಥ - ಪರಮಾತ್ಮನು ಹೇಗೆ 'ಮಹಾಂತಂ ವಿಭುಮಾತ್ಮಾನಂ' ಎಂಬಲ್ಲಿರುವ 'ಮಹತ್' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೋ, ಅದರಂತೆ ಅವ್ಯಕ್ತಾದಿ ಶಬ್ದಗಳಿಂದಲೂ ಕೂಡ ಪ್ರತಿಪಾದ್ಯನಾಗಿದ್ದಾನೆ.

ಅರ್ಥ -- 'ಚ' ಶಬ್ದವು ದಾರ್ಷ್ಟಾಂತಿಕವನ್ನು ಸಮುಚ್ಚಯ ಮಾಡುತ್ತಿದೆ. 'ಮಹಾಂತಂ ವಿಭುಮಾತ್ಮಾನಮ್' ಎಂಬ ವಾಕ್ಯದಲ್ಲಿರುವ 'ಮಹತ್' ಶಬ್ದವು ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತದೆ, ಹೊರತು ಮಹತ್ತತ್ವವನ್ನು ಪ್ರತಿಪಾದನೆ ಮಾಡುವುದಿಲ್ಲ. ಅದರಂತೆ ಅವ್ಯಕ್ತಶಬ್ದವೂ ಕೂಡ ಅವ್ಯಕ್ತತತ್ವವನ್ನು ಪ್ರತಿಪಾದನೆ ಮಾಡುವುದಿಲ್ಲ. ಹೊರತು, ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತದೆ.

ಬ್ರಹ್ಮಸೂತ್ರಭಾಷ್ಯ

ಪರಮಾತ್ಮನು ಮಹತ್ ಶಬ್ದದಿಂದ ಪ್ರತಿಪಾದ್ಯನಾದಂತೆ ಅವ್ಯಕ್ತ ಶಬ್ದದಿಂದಲೂ ಪ್ರತಿಪಾದ್ಯ

ब्रह्मसूत्रभाष्यम् – यथा महच्छब्दो महत्तत्वे प्रसिद्धोऽपि परममहत्त्वात् परमात्मन एव मुख्यः एवमितरेऽपि ।।८।।

ಅನುವಾದ - 'ಮಹತ್' ಎಂಬ ಶಬ್ದವು ಮಹತ್ತತ್ವದಲ್ಲಿ ಪ್ರಸಿದ್ಧವಾಗಿದ್ದರೂ 'ಮಹಾಂತಂ ವಿಭುಮಾತ್ಮಾನಂ' ಎಂಬಲ್ಲಿ ಪರಮ ಮಹತ್ವ ಎಂಬ ಗುಣವು ಶ್ರುತವಾಗಿರುವುದರಿಂದ, ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೋ, ಅದರಂತೆ ಅವ್ಯಕ್ತಾದಿ ಶಬ್ದಗಳೂ ಕೂಡ ಪರಮಾತ್ಮನಲ್ಲಿಯೇ ಮುಖ್ಯವಾಗಿ ಸಮನ್ವಯಗೊಳ್ಳುತ್ತವೆ.

ಪ್ರತಿಪದಾರ್ಥ -- ಅವ್ಯಕ್ತಾದಿಶಬ್ದಗಳು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆಂದು ಹೇಳಿದ್ದು ತಪ್ಪು. ಪ್ರಧಾನಾದಿಗಳಲ್ಲಿ ಈ ಶಬ್ದವು ಪ್ರತಿಪಾದ್ಯವಾಗಿವೆ. ಅವ್ಯಕ್ತಾದಿಶಬ್ದಗಳ ಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಮುಖ್ಯವಾಗಿರುವುದರಿಂದ ಅವನಲ್ಲಿಯೇ ಮುಖ್ಯವಾಗಿ ಸಮನ್ವಯಗೊಳ್ಳುತ್ತದೆಂದು ಹೇಳಬಾರದು. ಯಾವ ಶಬ್ದವು ಯಾರಲ್ಲಿ ಪ್ರಸಿದ್ಧವಾಗಿದೆಯೋ, ಅದು ಅವರಲ್ಲಿ ಮುಖ್ಯವಾಗಿರುತ್ತದೆ. ಯಾವ ಶಬ್ದದ ಪ್ರವೃತ್ತಿನಿಮಿತ್ತವು ಎಲ್ಲಿ ಮುಖ್ಯವಾಗಿರುತ್ತದೋ, ಆ ಶಬ್ದವು ಅಲ್ಲಿ ಮುಖ್ಯವಾಗಿರುತ್ತದೆಂಬುದು ಎಲ್ಲಿಯೂ ಕೂಡ ಕಂಡಿಲ್ಲವಲ್ಲ ? ಎಂಬ ಪ್ರಶ್ನೆಗೆ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ –

ಯಥಾ = ಯಾವರೀತಿಯಾಗಿ, ಮಹತ್‌ಶಬ್ದಃ = ಮಹತ್ ಎಂಬ ಶಬ್ದವು, ಮಹತ್ತತ್ವೇ = ಮಹತ್ತತ್ವದಲ್ಲಿ, ಪ್ರಸಿದ್ಧೋऽಪಿ = ಪ್ರಸಿದ್ಧವಾಗಿದ್ದರೂ, ಪರಮಮಹತ್ತ್ವಾತ್ = ಪರಮ ಮಹತ್ವವನ್ನು ಹೊಂದಿರುವುದರಿಂದ,

ಪರಮಾತ್ಮನಃ ಏವ = ಪರಮಾತ್ಮನಲ್ಲಿಯೇ, ಮುಖ್ಯಃ = ಮುಖ್ಯವಾಗಿರುತ್ತದೋ, ಏವಂ = ಅದೇ ರೀತಿಯಾಗಿ, ಇತರೇಽಪಿ = ಅವ್ಯಕ್ತಾದಿಶಬ್ದಗಳೂ ಕೂಡ ಪರಮಾತ್ಮನಲ್ಲಿಯೇ ಮುಖ್ಯವಾಗಿರುತ್ತವೆ.

ತತ್ತ್ವಪ್ರಕಾಶಿಕಾ

ಅವ್ಯಕ್ತಶಬ್ದವು ಪ್ರಕೃತಿಯಲ್ಲಿ ಪ್ರಸಿದ್ಧ

तत्वप्रकाशिका – यदुक्तं विष्णोरेव मुख्यतोऽव्यक्तादिशब्दवाच्यत्वमिति तदयुक्तम् । अव्यक्तादिशब्दानां प्रधानादावेव प्रसिद्धत्वात् ।

'ಅವ್ಯಕ್ತ' ಮೊದಲಾದ ಶಬ್ದಗಳಿಂದ ಮಹಾವಿಷ್ಣುವೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ ಎಂದು ಏನು ಸಮರ್ಥನೆ ಮಾಡಿದರೋ, ಅದು ಸರಿಯಲ್ಲ. ಏಕೆಂದರೆ 'ಅವ್ಯಕ್ತ' ಮೊದಲಾದ ಶಬ್ದಗಳು ಪ್ರಕೃತ್ಯಾದಿಗಳಲ್ಲೇ ಪ್ರಸಿದ್ಧವಾಗಿರುತ್ತವೆ.

ಪ್ರವೃತ್ತಿನಿಮಿತ್ತವು ಈಶ್ವರನಲ್ಲಿ ಪ್ರಸಿದ್ಧವಲ್ಲ

तत्वप्रकाशिका – नच वाच्यं शब्दप्रवृत्तिनिमित्तस्येश्वरे मुख्यत्वेन तत्र शब्दानां मुख्यत्वमुक्तमिति ।

'ಅವ್ಯಕ್ತ' ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಅತಿಸೂಕ್ಷ್ಮತ್ವವು ಈಶ್ವರನಲ್ಲೇ ಮುಖ್ಯವಾಗಿರುವುದರಿಂದ ಅವನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡಬೇಕಲ್ಲವೇ? ಎಂದು ಪ್ರಶ್ನಿಸಬಾರದು.

ಪ್ರಸಿದ್ಧಿಯಿದ್ದಲ್ಲೇ ಪ್ರಯೋಗ

तत्वप्रकाशिका – नहि यत्र शब्दः प्रसिद्धस्तत्रामुख्यो मुख्यतः प्रवृत्तिनिमित्तवति मुख्य इति दृष्टचरमित्याशङ्कां परिहरत् सूत्रमुपन्यस्य व्याचष्टे – महद्वच्चेति ।।

ಶಬ್ದವು ಎಲ್ಲಿ ಪ್ರಸಿದ್ಧವಾಗಿರುತ್ತದೋ, ಅಲ್ಲಿ ಅಮುಖ್ಯವಾಗಿರುತ್ತದೆ. ಶಬ್ದವು 'ಎಲ್ಲಿ ಮುಖ್ಯವಾದ ಪ್ರವೃತ್ತಿನಿಮಿತ್ತವಿರುತ್ತದೋ ಅಲ್ಲಿ ಮುಖ್ಯವಾಗಿರುತ್ತದೆಂಬುದು' ಎಲ್ಲಿಯೂ ಕಂಡಿಲ್ಲ. ಹಾಗೇನಾದರೂ ಪ್ರವೃತ್ತಿನಿಮಿತ್ತವು ಮುಖ್ಯವಾಗಿದ್ದಲ್ಲೇ ಶಬ್ದವು ಮುಖ್ಯವಾಗಿ ಸಮನ್ವಯವಾಗುತ್ತದೆಂದು ಕಂಡಿದ್ದಲ್ಲಿ ನಿಮ್ಮ ಸಿದ್ಧಾಂತವು ಸಮಂಜಸವಾಗುತ್ತಿತ್ತು. ಈ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಮಹದ್ವಚ್ಚ' ಇತ್ಯಾದಿಯಾಗಿ.

ಸೂತ್ರದಲ್ಲಿರುವ 'ಚ'ಶಬ್ದದ ಬಗ್ಗೆ

तत्वप्रकाशिका – चशब्दो दार्ष्टान्तिकसमुच्चयार्थः । युक्तमेवाव्यक्तादिशब्दानां मुख्यतः परमात्मवाचित्वम् । तत्प्रवृत्तिनिमित्तस्य तत्र मुख्यत्वात् ।

'ಮಹದ್ವಚ್ಚ' ಎಂಬ ಸೂತ್ರದಲ್ಲಿರುವ 'ಚ'ಶಬ್ದವು ದಾರ್ಷ್ಟಾಂತಿಕವಾದ ಅವ್ಯಕ್ತಾದಿಶಬ್ದಗಳನ್ನು ಸಮುಚ್ಚಯವನ್ನು ಮಾಡುತ್ತಿದೆ. ಯಾವ ವಿಷಯದಲ್ಲಿ ದೃಷ್ಟಾಂತವನ್ನು ಸೂತ್ರಕಾರರು ನೀಡಿದ್ದಾರೋ, ಅದರಂತೆ ದಾರ್ಷ್ಟಾಂತಿಕದಲ್ಲಿಯೂ ಸಮನ್ವಯವನ್ನು ಮಾಡಿಕೊಳ್ಳಬೇಕು. ಅವ್ಯಕ್ತ ಮೊದಲಾದ ಶಬ್ದಗಳು ಮುಖ್ಯವಾಗಿ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆಂದು ಹಿಂದಿನ ಸೂತ್ರಗಳಲ್ಲಿ ಸಮರ್ಥನೆ ಮಾಡಿದ್ದು ಯುಕ್ತವೇ ಆಗಿದೆ. ಏಕೆಂದರೆ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವು ವಿಷ್ಣುವಿನಲ್ಲೇ ಮುಖ್ಯವಾಗಿರುತ್ತವೆ.

ಪ್ರಸಿದ್ಧಿ ಮುಖ್ಯವಲ್ಲ

तत्वप्रकाशिका – न चान्यत्रप्रसिद्धत्वविरोधः । 'महान्तं विभुम्' इत्यादौ श्रुतमहच्छब्दस्य महत्तत्वे प्रसिद्धत्वेऽपि तत्प्रवृत्तिनिमित्तस्य हरौ मुख्यत्वेन मुख्यत्वोपपत्तिरिति भावः ।

ಪ್ರಕೃತ್ಯಾದಿಗಳಲ್ಲಿ ಅವ್ಯಕ್ತಶಬ್ದದ ಪ್ರಸಿದ್ಧಿ ಇದೆಯಲ್ಲವೇ? ಎಂಬುದಾಗಿ ಪ್ರಸಿದ್ಧಿಯ ವಿರೋಧವನ್ನು ಆಕ್ಷೇಪಿಸಬಾರದು. ಏಕೆಂದರೆ 'ಮಹಾಂತಂ ವಿಭುಮಾತ್ಮಾನಂ' ಎಂಬಲ್ಲಿರುವ

ಮಹತ್ ಶಬ್ದವು ಮಹತ್ತತ್ವದಲ್ಲಿ ಪ್ರಸಿದ್ಧವಾಗಿದ್ದರೂ ಆ ಶಬ್ದದ ಪ್ರವೃತ್ತಿನಿಮಿತ್ತವು ಶ್ರೀಹರಿಯಲ್ಲಿಯೇ ಮುಖ್ಯವಾಗಿರುತ್ತದೆ. ಆದ್ದರಿಂದ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗಿರುತ್ತಾನೆ.

ಪ್ರವೃತ್ತಿನಿಮಿತ್ತವೇ ಮುಖ್ಯ

तत्वप्रकाशिका – नच मन्तव्यं प्रवृत्तिनिमित्ताधिक्येन मुख्यतः शब्दवाच्यत्वाभावेऽपि दृष्टान्तोऽस्ति । अतिसहनवति पुरुषे सिंहशब्दस्यामुख्यत्वादिति ।

ಪ್ರವೃತ್ತಿನಿಮಿತ್ತವು ಎಲ್ಲಿ ಮುಖ್ಯವಾಗಿರುತ್ತದೋ, ಶಬ್ದವು ಅದನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡಬೇಕು ಎಂಬ ವಿಷಯದಲ್ಲಿ ದೃಷ್ಟಾಂತವಿರುವುದಿಲ್ಲ. ಉದಾಹರಣೆ - ಅತ್ಯಂತ ಸಹನವುಳ್ಳ ಪುರುಷನಲ್ಲಿ ಸಿಂಹ ಎಂಬ ಶಬ್ದವನ್ನು ಅಮುಖ್ಯವಾಗಿಯೇ ಪ್ರಯೋಗಿಸುತ್ತಾರೆ.

ಪ್ರವೃತ್ತಿನಿಮಿತ್ತದ ಆಧಿಕ್ಯದಿಂದ ಶಬ್ದ ಪ್ರಯೋಗ

तत्वप्रकाशिका – न त्वस्माभिः प्रवृत्तिनिमित्ताधिक्यमात्रेण शब्दस्य मुख्यतः परमात्मवाचित्वमुच्यते किं तु सिद्धे परमात्मवाचित्वे मुख्यत्वमात्रस्य तेन साधनादिति ।। ८ ।।

ನಾವು ಪ್ರವೃತ್ತಿನಿಮಿತ್ತದ ಆಧಿಕ್ಯದಿಂದ ಶಬ್ದವು ಮುಖ್ಯವಾಗಿ ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತಿದೆ ಎಂದಷ್ಟೇ ಹೇಳುತ್ತಿಲ್ಲ ಹೊರತಾಗಿ, ಶಬ್ದವು ಪರಮಾತ್ಮ ಪ್ರತಿಪಾದಕವಾಗಿದೆಯೆಂದು ಸಿದ್ಧವಾಗಿರುವುದರಿಂದ ಅಂತಹ ಪರಮಾತ್ಮನಲ್ಲಿ ಶಬ್ದಗಳು ಮುಖ್ಯವಾಗಿವೆ ಎಂದಷ್ಟೇ ಸಾಧನೆ ಮಾಡುತ್ತಿದ್ದೇವೆ. ಆದ್ದರಿಂದ ಯಾವ ವಿರೋಧಕ್ಕೂ ಅವಕಾಶವಿರುವುದಿಲ್ಲ.

ಭಾವದೀಪ

ಪ್ರವೃತ್ತಿನಿಮಿತ್ತವು ಮುಖ್ಯವೆನ್ನಲು ಈ ಸೂತ್ರ

भावदीपः – प्रवृत्तिनिमित्तस्येति ।। सूक्ष्मं तु इत्यत्रोक्तस्येत्यर्थः ।

ಟೀಕೆಯಲ್ಲಿ 'ಶಬ್ದ ಪ್ರವೃತ್ತಿನಿಮಿತ್ತಸ್ಯ' ಎಂಬ ಪದದಿಂದ ಅವ್ಯಕ್ತಾದಿಶಬ್ದಗಳ ಪ್ರವೃತ್ತಿನಿಮಿತ್ತಗಳು ಪರಮಾತ್ಮನಲ್ಲಿ ಮುಖ್ಯವಾಗಿವೆಯೆಂದು ಹೇಳಿದ್ದಾರೆ. ''ಸೂಕ್ಷ್ಮಂತು ತದರ್ಹತ್ವಾತ್'' ಎಂಬ ಸೂತ್ರದಲ್ಲಿ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವು ಪರಮಾತ್ಮನಲ್ಲಿ ಮುಖ್ಯವಾಗಿದೆ ಎಂದು ಹೇಳಿದ್ದಾರೆ.

ಅವ್ಯಕ್ತಾದಿಶಬ್ದಗಳು ಪರಮಾತ್ಮನಲ್ಲಿಯೇ ಮುಖ್ಯ

भावदीपः – निमित्तस्य शब्दशक्तिनियामकत्वेन तस्य मुख्यत्वे शब्दस्यापि मुख्यत्वनियमादिति भावः ।

ಶಬ್ದದ ಪ್ರವೃತ್ತಿನಿಮಿತ್ತವು ಶಬ್ದಶಕ್ತಿಗೆ ನಿಯಾಮಕವಾಗಿರುತ್ತದೆ. ಪರಮಾತ್ಮನಲ್ಲಿ ಅಂಥ ಪ್ರವೃತ್ತಿನಿಮಿತ್ತವು ಮುಖ್ಯವಾದರೆ ಶಬ್ದವೂ ಕೂಡ ಮುಖ್ಯವಾಗುತ್ತದೆ ಎಂಬ ನಿಯಮವಿದೆ. ಪ್ರಕೃತ ಅವ್ಯಕ್ತ ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತವು ಪರಮಾತ್ಮನಲ್ಲಿ ಮುಖ್ಯವಾಗಿರುವುದರಿಂದ ಅವ್ಯಕ್ತ ಮೊದಲಾದ ಶಬ್ದಗಳೂ ಕೂಡ ಪರಮಾತ್ಮನಲ್ಲಿ ಮುಖ್ಯವಾಗಿರುತ್ತವೆ ಎಂದು ಹೇಳಿದಂತಾಗುತ್ತದೆ.

ಸೂತ್ರಕಾರರಿಗೆ ಎಲ್ಲವೂ ಸಮ್ಮತ

भावदीपः – एवमितरेऽपीति भाष्यमुत्सूत्रमिति भ्रमं वारयति – च शब्द इति ।।

ಭಾಷ್ಯದಲ್ಲಿ ಮಹತ್ ಶಬ್ದವನ್ನು ದೃಷ್ಟಾಂತವನ್ನಾಗಿ ಹೇಳಿ 'ಇತರೇಪಿ' ಎಂಬುದರಿಂದ ದಾರ್ಷ್ಟಾಂತಿಕವನ್ನು ಸಮುಚ್ಚಯ ಮಾಡಿದ್ದಾರೆ. 'ಏವಮಿತರೇऽಪಿ' ಎಂಬುದಾಗಿ ಭಾಷ್ಯದಲ್ಲಿ ಹೇಳಿದ್ದು ಸೂತ್ರಕಾರರಿಗೆ ಸಮ್ಮತವಿಲ್ಲವೆಂಬ ಭ್ರಮೆಯನ್ನು 'ಚ ಶಬ್ದಃ' ಇತ್ಯಾದಿ ಟೀಕೆಯಿಂದ ಪರಿಹರಿಸುತ್ತಿದ್ದಾರೆ.

'ತತ್‌ಪ್ರವೃತ್ತಿ' ಇತ್ಯಾದಿ ಟೀಕೆಯ ಸಂದರ್ಭ

भावदीपः – इतरेऽपीतिभाष्यं व्याचष्टे – व्यक्तमिति । एवमित्यस्यार्थमाह – तत्प्रवृत्तीति ।

'ಇತರೇऽಪಿ' ಎಂಬ ಭಾಷ್ಯವನ್ನು ಟೀಕೆಯಲ್ಲಿ 'ವ್ಯಕ್ತಮ್' ಎಂಬುದರಿಂದ ವ್ಯಾಖ್ಯಾನ ಮಾಡಿದ್ದಾರೆ. ಭಾಷ್ಯದಲ್ಲಿರುವ 'ಏವಂ' ಎಂಬ ಪದದ ಅರ್ಥವನ್ನು 'ತತ್‌ಪ್ರವೃತ್ತಿ' ಇತ್ಯಾದಿ ಟೀಕೆಯಿಂದ ಹೇಳಿರುತ್ತಾರೆ.

'ಮಹಾಂತಂ ವಿಭುಮಾತ್ಮಾನಂ' ಎಂಬ ವಿಷಯವಾಕ್ಯದ ಸಂದರ್ಭ

भावदीपः – यथा इत्यादि भाष्यं व्याचष्टे – न चान्यत्रेति ।। 'महान्तं विभुमात्मानं मत्वा धीरो न शोचति' इति काठक एवेत्यर्थः ।।

'ಯಥಾ' ಇತ್ಯಾದಿ ಭಾಷ್ಯವನ್ನು 'ನ ಚ ಅನ್ಯತ್ರ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡಿದ್ದಾರೆ. 'ಅನ್ಯತ್ರ' ಎಂದರೆ ''ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ'' ಎಲ್ಲೆಡೆ ವ್ಯಾಪ್ತನಾದ ಪರಮಾತ್ಮನನ್ನು ತಿಳಿದ ಧೀರ ದುಃಖಿಸುವುದಿಲ್ಲ. ಇಲ್ಲಿರುವ ಮಹತ್ ಶಬ್ದವು ಮಹತ್ತತ್ತ್ವದಲ್ಲಿ ಪ್ರಸಿದ್ಧವಾಗಿದ್ದರೂ ಅದರ ಪ್ರವೃತ್ತಿನಿಮಿತ್ತವು ಶ್ರೀಹರಿಯಲ್ಲಿ ಮುಖ್ಯವಾಗಿದೆ ಎಂದು ತಿಳಿಯಬೇಕು.

'ತುಷ್ಯತು ದುರ್ಜನಃ' ನ್ಯಾಯದಿಂದ ಹೇಳಿದ್ದು

भावदीपः – न चास्माभिरिति ।। यद्यपि सिंहशब्दो जातिनिमित्तको न यौगिकः तथापि 'तुष्यतु दुर्जनः' इति न्यायेनेदं समाधानम् । वस्तुतो निमित्ताधिक्येन मुख्यत्वोक्तौ न व्यभिचार इति ध्येयम् ।

ಪ್ರವೃತ್ತಿನಿಮಿತ್ತದ ಆಧಿಕ್ಯವಿದ್ದಮಾತ್ರದಿಂದ ಶಬ್ದವು ಮುಖ್ಯವಾಗಿ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿದೆ ಎಂದು ಸಮರ್ಥಿಸುತ್ತಿಲ್ಲ; ಹೊರತಾಗಿ ಶಬ್ದಗಳು ಮೊದಲೇ ಪರಮಾತ್ಮನಲ್ಲಿ ಮುಖ್ಯವಾಗಿವೆಯೆಂದು ಸಿದ್ಧವಾಗಿದೆ. ಅದನ್ನು ಸಮರ್ಥಿಸುತ್ತಿದ್ದೇವೆಂದು ಟೀಕೆಯಲ್ಲಿ ಹೇಳಿದ್ದಾರೆ. ಈ ವಿಷಯದಲ್ಲಿ ಸಿಂಹಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಅತಿಸಹನತ್ವ ಎಂಬುದು ಪುರುಷನಲ್ಲಿ ಮುಖ್ಯವಾಗಿದ್ದರೂ ಸಿಂಹಶಬ್ದವು ಮುಖ್ಯವಾಗಿರುವುದಿಲ್ಲ ಎಂಬ ದೃಷ್ಟಾಂತವನ್ನು ನೀಡಿದ್ದಾರೆ.

ವಾಸ್ತವಿಕವಾಗಿ ಈ ದೃಷ್ಟಾಂತವು ಸರಿ ಹೊಂದುವುದಿಲ್ಲ. ಏಕೆಂದರೆ ಈ ಸಿಂಹಶಬ್ದವು ಜಾತಿನಿಮಿತ್ತಕವಾದ ರೂಢಪದ ಹೊರತು ಯೋಗಿಕವಾದ ಪದವಲ್ಲ. ಪ್ರಕೃತ ಯೋಗಿಕವಾದ ಪದದ ವಿಷಯದಲ್ಲಿ ಪ್ರಸ್ತಾಪ ಬಂದಿದೆ. ಆದರೂ ಕೂಡ 'ತುಷ್ಯತು ದುರ್ಜನಃ' ಎಂಬ ನ್ಯಾಯವನ್ನು ಅನುಸರಿಸಿ ಗ್ರಂಥದಲ್ಲಿ ಹೀಗೆ ಸಮಾಧಾನವನ್ನು ಹೇಳಿರುತ್ತಾರೆ. ವಾಸ್ತವಿಕವಾಗಿ ಪ್ರವೃತ್ತಿನಿಮಿತ್ತದ ಆಧಿಕ್ಯದಿಂದ ಶಬ್ದದಲ್ಲಿ ಮುಖ್ಯತ್ವವನ್ನು ಹೇಳಿದರೂ ವ್ಯಭಿಚಾರದೋಷಕ್ಕೆ ಅವಕಾಶವಿರುವುದಿಲ್ಲ.

ಟೀಕಾವಾಕ್ಯವು ಅಭ್ಯುಗಮವಾದದಿಂದ

भावदीपः – तस्य शब्दशक्तिनियामकत्वेन तदाधिक्ये मुख्यत्वावश्यम्भावात् । अवयवार्थो यथायथोत्कृष्यते तथा तथा योग वृत्तेरप्युत्कर्षेण भाव्यमिति सुधोक्तेः उत्तरसूत्रावतारणायाऽभ्युपगमवादः इति ज्ञेयम् ।।८।।

ಪ್ರವೃತ್ತಿನಿಮಿತ್ತವು ಶಬ್ದಶಕ್ತಿಗೆ ನಿಯಾಮಕವಾಗಿರುವುದರಿಂದ ಆದರಲ್ಲಿ ಆಧಿಕ್ಯವಿದ್ದರೆ ಶಬ್ದದಲ್ಲಿಯೂ ಕೂಡ ಮುಖ್ಯತ್ವವು ಬಂದೇ ಬರುತ್ತದೆ ಎಂದು ಅವಶ್ಯ ಒಪ್ಪಲೇಬೇಕು. ಅವಯವಾರ್ಥವು ಉತ್ಕೃಷ್ಟವಾದಷ್ಟು ಯೋಗವೃತ್ತಿಯೂ ಕೂಡ ಉತ್ಕೃಷ್ಟವಾಗಿಯೇ ಉಪಪನ್ನವಾಗುತ್ತದೆ. ''ಅವಯವಾರ್ಥೋ ಯಥಾಯಥೋತ್ಕೃಷ್ಯತೇ ತಥಾ ತಥಾ ಯೋಗವೃತ್ತೇರಪ್ಯುತ್ಕರ್ಷೇಣ ಭಾವ್ಯಮ್'' ಹೀಗೆ ನ್ಯಾಯಸುಧೆಯಲ್ಲಿ ಹೇಳಿದ್ದಾರೆ. ಆದರೂ ಕೂಡ ಪ್ರಕೃತ ಟೀಕೆಯಲ್ಲಿ ಅದಕ್ಕೆ ವಿರುದ್ಧವಾಗಿ ಹೇಳಿದ್ದು ಉತ್ತರಸೂತ್ರಕ್ಕೆ ಅವತಾರಿಕೆ ನೀಡಲು ಅಭ್ಯುಪಗಮವಾದಕ್ಕಾಗಿ ಮಾತ್ರ ಹೊರತು ನಮ್ಮ ಸಿದ್ಧಾಂತವೆಂಬ ಅಭಿಪ್ರಾಯದಿಂದಲ್ಲ.

ಬ್ರಹ್ಮಸೂತ್ರ

'ಚಮಸಪದವಿಶೇಷಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। चमसवदविशेषात् ।। ९ ।।

ಸೂತ್ರಾರ್ಥ - 'ಚಮಸ' ಶಬ್ದವು ಯಜ್ಞಪಾತ್ರೆಯಲ್ಲಿ ಪ್ರಸಿದ್ಧವಾಗಿದ್ದರೂ 'ಶಿರಸ್ಸು' ಎಂಬರ್ಥದಲ್ಲಿ ಹೇಗೆ ಮುಖ್ಯವಾಗಿದೆಯೋ, ಅದರಂತೆ ಅವ್ಯಕ್ತಾದಿ ಶಬ್ದಗಳೂ ಕೂಡ

'ತತ್‌ಪ್ರವೃತ್ತಿ' ಇತ್ಯಾದಿ ಟೀಕೆಯ ಸಂದರ್ಭ

भावदीपः – इतरेऽपीतिभाष्यं व्याचष्टे – व्यक्तमिति । एवमित्यस्यार्थमाह – तत्प्रवृत्तीति ।

'ಇತರೇऽಪಿ' ಎಂಬ ಭಾಷ್ಯವನ್ನು ಟೀಕೆಯಲ್ಲಿ 'ವ್ಯಕ್ತಮ್' ಎಂಬುದರಿಂದ ವ್ಯಾಖ್ಯಾನ ಮಾಡಿದ್ದಾರೆ. ಭಾಷ್ಯದಲ್ಲಿರುವ 'ಏವಂ' ಎಂಬ ಪದದ ಅರ್ಥವನ್ನು 'ತತ್‌ಪ್ರವೃತ್ತಿ' ಇತ್ಯಾದಿ ಟೀಕೆಯಿಂದ ಹೇಳಿರುತ್ತಾರೆ.

'ಮಹಾಂತಂ ವಿಭುಮಾತ್ಮಾನಂ' ಎಂಬ ವಿಷಯವಾಕ್ಯದ ಸಂದರ್ಭ

भावदीपः – यथा इत्यादि भाष्यं व्याचष्टे – न चान्यत्रेति ।। 'महान्तं विभुमात्मानं मत्वा धीरो न शोचति' इति काठक एवेत्यर्थः ।।

'ಯಥಾ' ಇತ್ಯಾದಿ ಭಾಷ್ಯವನ್ನು 'ನ ಚ ಅನ್ಯತ್ರ' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡಿದ್ದಾರೆ. 'ಅನ್ಯತ್ರ' ಎಂದರೆ ''ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ'' ಎಲ್ಲೆಡೆ ವ್ಯಾಪ್ತನಾದ ಪರಮಾತ್ಮನನ್ನು ತಿಳಿದ ಧೀರ ದುಃಖಿಸುವುದಿಲ್ಲ. ಇಲ್ಲಿರುವ ಮಹತ್ ಶಬ್ದವು ಮಹತ್ತತ್ತ್ವದಲ್ಲಿ ಪ್ರಸಿದ್ಧವಾಗಿದ್ದರೂ ಅದರ ಪ್ರವೃತ್ತಿನಿಮಿತ್ತವು ಶ್ರೀಹರಿಯಲ್ಲಿ ಮುಖ್ಯವಾಗಿದೆ ಎಂದು ತಿಳಿಯಬೇಕು.

'ತುಷ್ಯತು ದುರ್ಜನಃ' ನ್ಯಾಯದಿಂದ ಹೇಳಿದ್ದು

भावदीपः – न चास्माभिरिति ।। यद्यपि सिंहशब्दो जातिनिमित्तको न यौगिकः तथापि 'तुष्यतु दुर्जनः' इति न्यायेनेदं समाधानम् । वस्तुतो निमित्ताधिक्येन मुख्यत्वोक्तौ न व्यभिचार इति ध्येयम् ।

ಪ್ರವೃತ್ತಿನಿಮಿತ್ತದ ಆಧಿಕ್ಯವಿದ್ದಮಾತ್ರದಿಂದ ಶಬ್ದವು ಮುಖ್ಯವಾಗಿ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿದೆ ಎಂದು ಸಮರ್ಥಿಸುತ್ತಿಲ್ಲ; ಹೊರತಾಗಿ ಶಬ್ದಗಳು ಮೊದಲೇ ಪರಮಾತ್ಮನಲ್ಲಿ ಮುಖ್ಯವಾಗಿವೆಯೆಂದು ಸಿದ್ಧವಾಗಿದೆ. ಅದನ್ನು ಸಮರ್ಥಿಸುತ್ತಿದ್ದೇವೆಂದು ಟೀಕೆಯಲ್ಲಿ ಹೇಳಿದ್ದಾರೆ. ಈ ವಿಷಯದಲ್ಲಿ ಸಿಂಹಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಅತಿಸಹನತ್ವ ಎಂಬುದು ಪುರುಷನಲ್ಲಿ ಮುಖ್ಯವಾಗಿದ್ದರೂ ಸಿಂಹಶಬ್ದವು ಮುಖ್ಯವಾಗಿರುವುದಿಲ್ಲ ಎಂಬ ದೃಷ್ಟಾಂತವನ್ನು ನೀಡಿದ್ದಾರೆ.

ವಾಸ್ತವಿಕವಾಗಿ ಈ ದೃಷ್ಟಾಂತವು ಸರಿ ಹೊಂದುವುದಿಲ್ಲ. ಏಕೆಂದರೆ ಈ ಸಿಂಹಶಬ್ದವು ಜಾತಿನಿಮಿತ್ತಕವಾದ ರೂಢಪದ ಹೊರತು ಯೋಗಿಕವಾದ ಪದವಲ್ಲ. ಪ್ರಕೃತ ಯೋಗಿಕವಾದ ಪದದ ವಿಷಯದಲ್ಲಿ ಪ್ರಸ್ತಾಪ ಬಂದಿದೆ. ಆದರೂ ಕೂಡ 'ತುಷ್ಯತು ದುರ್ಜನಃ' ಎಂಬ ನ್ಯಾಯವನ್ನು ಅನುಸರಿಸಿ ಗ್ರಂಥದಲ್ಲಿ ಹೀಗೆ ಸಮಾಧಾನವನ್ನು ಹೇಳಿರುತ್ತಾರೆ. ವಾಸ್ತವಿಕವಾಗಿ ಪ್ರವೃತ್ತಿನಿಮಿತ್ತದ ಆಧಿಕ್ಯದಿಂದ ಶಬ್ದದಲ್ಲಿ ಮುಖ್ಯತ್ವವನ್ನು ಹೇಳಿದರೂ ವ್ಯಭಿಚಾರದೋಷಕ್ಕೆ ಅವಕಾಶವಿರುವುದಿಲ್ಲ.

ಟೀಕಾವಾಕ್ಯವು ಅಭ್ಯುಗಮವಾದದಿಂದ

भावदीपः – तस्य शब्दशक्तिनियामकत्वेन तदाधिक्ये मुख्यत्वावश्यम्भावात् । अवयवार्थो यथायथोत्कृष्यते तथा तथा योग वृत्तेरप्युत्कर्षेण भाव्यमिति सुधोक्तेः उत्तरसूत्रावतारणायाऽभ्युपगमवादः इति ज्ञेयम् ।।८।।

ಪ್ರವೃತ್ತಿನಿಮಿತ್ತವು ಶಬ್ದಶಕ್ತಿಗೆ ನಿಯಾಮಕವಾಗಿರುವುದರಿಂದ ಆದರಲ್ಲಿ ಆಧಿಕ್ಯವಿದ್ದರೆ ಶಬ್ದದಲ್ಲಿಯೂ ಕೂಡ ಮುಖ್ಯತ್ವವು ಬಂದೇ ಬರುತ್ತದೆ ಎಂದು ಅವಶ್ಯ ಒಪ್ಪಲೇಬೇಕು. ಅವಯವಾರ್ಥವು ಉತ್ಕೃಷ್ಟವಾದಷ್ಟು ಯೋಗವೃತ್ತಿಯೂ ಕೂಡ ಉತ್ಕೃಷ್ಟವಾಗಿಯೇ ಉಪಪನ್ನವಾಗುತ್ತದೆ. "ಅವಯವಾರ್ಥೋ ಯಥಾಯಥೋತ್ಕೃಷ್ಯತೇ ತಥಾ ತಥಾ ಯೋಗವೃತ್ತೇರಪ್ಯುತ್ಕರ್ಷೇಣ ಭಾವ್ಯಮ್" ಹೀಗೆ ನ್ಯಾಯಸುಧೆಯಲ್ಲಿ ಹೇಳಿದ್ದಾರೆ. ಆದರೂ ಕೂಡ ಪ್ರಕೃತ ಟೀಕೆಯಲ್ಲಿ ಅದಕ್ಕೆ ವಿರುದ್ಧವಾಗಿ ಹೇಳಿದ್ದು ಉತ್ತರಸೂತ್ರಕ್ಕೆ ಅವತಾರಿಕೆ ನೀಡಲು ಅಭ್ಯುಪಗಮವಾದಕ್ಕಾಗಿ ಮಾತ್ರ ಹೊರತು ನಮ್ಮ ಸಿದ್ಧಾಂತವೆಂಬ ಅಭಿಪ್ರಾಯದಿಂದಲ್ಲ.

ಬ್ರಹ್ಮಸೂತ್ರ

'ಚಮಸವದವಿಶೇಷಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। चमसवदविशेषात् ।। ९ ।।

ಸೂತ್ರಾರ್ಥ - 'ಚಮಸ' ಶಬ್ದವು ಯಜ್ಞಪಾತ್ರೆಯಲ್ಲಿ ಪ್ರಸಿದ್ಧವಾಗಿದ್ದರೂ 'ಶಿರಸ್ಸು' ಎಂಬರ್ಥದಲ್ಲಿ ಹೇಗೆ ಮುಖ್ಯವಾಗಿದೆಯೋ, ಅದರಂತೆ ಅವ್ಯಕ್ತಾದಿ ಶಬ್ದಗಳೂ ಕೂಡ

ಪ್ರಕೃತ್ಯಾದಿಗಳಲ್ಲಿ ಪ್ರಸಿದ್ಧವಾಗಿದ್ದರೂ ವಿಷ್ಣುವಿನಲ್ಲಿ ಮುಖ್ಯವಾದ ಅರ್ಥವನ್ನು ಹೊಂದಿರುತ್ತದೆ. ಏಕೆಂದರೆ 'ನಾಮಾನಿ ಸರ್ವಾಣಿ' ಎಂಬ ಶ್ರುತಿಗೆ 'ಇದಂ ತಚ್ಛಿರಃ' ಎಂಬ ಶ್ರುತಿಯಿಂದ ಸಾಮ್ಯವಿರುವುದರಿಂದ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯೂ ಕೂಡ ಅನುಶಾಸನರೂಪವಾದ್ದರಿಂದ ಎಲ್ಲಾ ಶಬ್ದಗಳಿಗೂ ಭಗವಂತನೇ ಮುಖ್ಯಾರ್ಥವೆಂದು ಅಂಗೀಕರಿಸಬೇಕು.

ಅರ್ಥ -- ಚಮಸವತ್ = ಯಾವ ರೀತಿಯಾಗಿ ಯಜ್ಞಪಾತ್ರದಲ್ಲಿ 'ಚಮಸ' ಶಬ್ದವು ಪ್ರಸಿದ್ಧವಾಗಿದ್ದರೂ 'ಇದಂ ತಚ್ಛಿರಃ' ಎಂಬ ಶ್ರುತಿಯ ಬಲದಿಂದ ಶಿರಸ್ಸು ಎಂಬ ಅರ್ಥದಲ್ಲಿ ಮುಖ್ಯವಾಗಿದೆಯೋ, ಅದರಂತೆ ಅವ್ಯಕ್ತಾದಿ ಶಬ್ದವೂ ಕೂಡ ಪ್ರಧಾನಾದಿಗಳಲ್ಲಿ ಪ್ರಸಿದ್ಧವಾಗಿದ್ದರೂ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತದೆ. ಏಕೆಂದರೆ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಆಧಾರವಾಗಿದೆ. ಆದರೂ ಕೂಡ ವಿಷ್ಣುವೇ ಏಕೆ ಪ್ರತಿಪಾದ್ಯನಾಗಬೇಕು ? ಎಂಬ ಪ್ರಶ್ನೆಗೆ 'ಅವಿಶೇಷಾತ್' ಎಂದು ಉತ್ತರಿಸಿದ್ದಾರೆ. ಅವಿಶೇಷಾತ್ = 'ನಾಮಾನಿ ಸರ್ವಾಣಿ' ಎಂಬ ಶ್ರುತಿಗೆ 'ಇದಂ ತಚ್ಛಿರಃ' ಎಂಬ ಶ್ರುತಿಯಿಂದ ಸಾಮ್ಯವು ಇರುತ್ತದೆ.

ಬ್ರಹ್ಮಸೂತ್ರಭಾಷ್ಯ

ಮುಖ್ಯವಾಚ್ಯತ್ವಕ್ಕೆ ಲೋಕಪ್ರಸಿದ್ಧಿಯು ಗಮಕವಲ್ಲ

ಬ್ರಹ್ಮಸೂತ್ರಭಾಷ್ಯಮ್ – ಯಥಾ ಚಮಸಶಬ್ದೋऽನ್ಯತ್ರ ಪ್ರಸಿದ್ಧೋऽಪಿ 'ಇದಂ ತಚ್ಛಿರ ಏಷ ಹ್ಯರ್ವಾಗ್ಬಿಲಶ್ಚಮಸ ಊರ್ಧ್ವಬುಧ್ನಃ' (ಬೃ.ತ. ೪-೨-೩) ಇತಿ ಶ್ರುತೇಃ ಶಿರೋವಾಚಕಃ ಏವಮವ್ಯಕ್ತಾದಿ ಶಬ್ದಾಃ ಸರ್ವೇऽನ್ಯತ್ರ ಪ್ರಸಿದ್ಧಾ ಅಪಿ, 'ನಾಮಾನಿ ಸರ್ವಾಣಿ ಯಮಾವಿಶನ್ತಿ ತಂ ವೈ ವಿಷ್ಣುಂ ಪರಮಮುದಾಹರನ್ತಿ' (ಭಾಲ್ಲವೇಯಶ್ರುತಿಃ) ಇತ್ಯಾದಿಶ್ರುತೇಃ ಪರಮಾತ್ಮಾಭಿಧಾಯಕಾ ಏವ ।। ಅವಿಶೇಷಾತ್ ಶ್ರುತೇಃ ।।೯।।

।। ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತೇ ಬ್ರಹ್ಮಸೂತ್ರಭಾಷ್ಯೇ ಆನುಮಾನಿಕಾಧಿಕರಣಮ್ ।। ೧ ।।

ಅನುವಾದ - ಯಾವರೀತಿಯಾಗಿ ಚಮಸ ಎಂಬ ಶಬ್ದವು ಯಜ್ಞಪಾತ್ರೆಯಲ್ಲಿ ಪ್ರಸಿದ್ಧವಾಗಿದ್ದರೂ ನಮ್ಮ ಶಿರಸ್ಸನ್ನು ಹೇಳುತ್ತದೆ. ಬಾಯಿ ಕೆಳಮುಖವಾಗಿದೆ, ದುಂಡಗಿನ

ಗಟ್ಟಿಯಾದ ಕೆಳಭಾಗ ಮೇಲಿದೆ. ಹೀಗೆ ನಮ್ಮ ತಲೆಯು ಬೋರಲಾದ ಚಮಸವೆಂದು ಬೃಹದಾರಣ್ಯಕ ಹೇಳುತ್ತಿದೆ. ಆದ್ದರಿಂದ ಚಮಸ ಶಬ್ದವು ಶಿರೋವಾಚಕವಾಗಿದೆ. ಅದರಂತೆ ಅವ್ಯಕ್ತ ಮೊದಲಾದ ಶಬ್ದಗಳು ಪ್ರಕೃತಿ ಮೊದಲಾದವುಗಳಲ್ಲಿ ಪ್ರಸಿದ್ಧವಾಗಿದ್ದರೂ 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯ ಆಧಾರದಿಂದ ವಿಷ್ಣು ವಾಚಕವಾಗಿದೆ. ಚಮಸ ಶ್ರುತಿಗೂ 'ನಾಮಾನಿ ಸರ್ವಾಣಿ' ಎಂಬ ಶ್ರುತಿಗೂ ಏನೂ ವ್ಯತ್ಯಾಸವಿಲ್ಲ.

ಪ್ರತಿಪದಾರ್ಥ -- ಅವ್ಯಕ್ತಾದಿ ಶಬ್ದಗಳು ಪರಮಾತ್ಮನಲ್ಲಿ ಪರಮ-ಮುಖ್ಯವೃತ್ತಿಯಿಂದ ಸಮನ್ವಯಗೊಳ್ಳುತ್ತವೆಂದು ಸಮರ್ಥಿಸಿದಿರಿ. ಆದರೆ ಅವ್ಯಕ್ತಾದಿಶಬ್ದಗಳು ಮುಖ್ಯವಾಗಿ ಪರಮಾತ್ಮನಲ್ಲಿ ಬರುವುದಾದರೆ, ಪರಮಮುಖ್ಯತ್ವವನ್ನು ಸಮರ್ಥಿಸಬಹುದಿತ್ತು. ಆದರೆ ಮುಖ್ಯತ್ವವೇ ಪರಮಾತ್ಮನಲ್ಲಿ ಕೂಡುವುದಿಲ್ಲ. 'ಅವ್ಯಕ್ತಮಚಲಂ' ಇತ್ಯಾದಿ ಶ್ರುತಿ-ಸ್ಮೃತಿಗಳ ಪ್ರಯೋಗಾನುಸಾರದಿಂದಲೂ ಮುಖ್ಯತ್ವವನ್ನು ತಿಳಿಯಲಾಗದು. ಬೇರೆ ವೃತ್ತಿಯಿಂದ ಆ ಪ್ರಯೋಗವನ್ನು ಕೂಡಿಸಬಹುದಲ್ಲವೇ? ಈ ಆಶಂಕೆಯನ್ನು ಪರಿಹರಿಸಲು ಸೂತ್ರವನ್ನು ಉಪನ್ಯಾಸ ಮಾಡುತ್ತಿದ್ದಾರೆ. –

ಯಥಾ = ಯಾವರೀತಿಯಾಗಿ, ಚಮಸ ಶಬ್ದಃ = ಚಮಸ ಎಂಬ ಪದವು, ಅನ್ಯತ್ರ = ಯಜ್ಞಪಾತ್ರೆಯಲ್ಲಿ, ಪ್ರಸಿದ್ಧೋಽಪಿ = ಪ್ರಸಿದ್ಧವಾಗಿದ್ದರೂ, ಇದಂ ತಚ್ಛಿರಃ ಏಷಃ ಹ್ಯರ್ವಾಗ್‌ಬಿಲಶ್ಚಮಸ ಊರ್ಧ್ವಬುಧ್ನಃ = ಬಾಯಿ ಕೆಳಮುಖವಾಗಿದೆ, ದುಂಡಗಿನ ಗಟ್ಟಿಯಾದ ಕೆಳಭಾಗ ಮೇಲಿದೆ. ಇತಿ ಶ್ರುತೇಃ = ಹೀಗೆ ಬೃಹದಾರಾಣ್ಯಕ ಶ್ರುತಿ ಪ್ರಮಾಣವಾಗಿರುವುದರಿಂದ ಶಿರೋವಾಚಕಃ = ಚಮಸ ಎಂಬ ಶಬ್ದವು ಶಿರೋವಾಚಕವಾಗಿದೆ. ಏವಂ = ಅದರಂತೆ, ಅವ್ಯಕ್ತಾದಿಶಬ್ದಾಃ = ಅವ್ಯಕ್ತಾದಿಶಬ್ದಗಳು, ಅನ್ಯತ್ರಪ್ರಸಿದ್ಧಾ ಅಪಿ = ಅನ್ಯತ್ರಪ್ರಸಿದ್ಧವಾಗಿದ್ದರೂ, ನಾಮಾನಿ ಸರ್ವಾಣಿ ಯಮಾವಿಶಂತಿ ತಂ ವೈ ವಿಷ್ಣುಂ ಪರಮಮುದಾಹರಂತಿ = ಎಲ್ಲಾ ಶಬ್ದಗಳು ವಿಷ್ಣುವಿನಲ್ಲೇ ಸಮನ್ವಯವಾಗುತ್ತವೆ. ಅಂತಹ ಸರ್ವೋತ್ತಮನಾದ ವಿಷ್ಣುವನ್ನೇ ಹೇಳುತ್ತದೆ. ಇವೇ ಮೊದಲಾದ ಶ್ರುತಿಗಳಿರುವುದರಿಂದ, ಪರಮಾತ್ಮಾಭಿಧಾಯಕಾ ಏವ = ಎಲ್ಲಾ ಶ್ರುತಿಗಳೂ ಪರಮಾತ್ಮನ

ಪ್ರತಿಪಾದಕಗಳೇ ಆಗಿವೆ. ಶ್ರುತೇಃ = ವೇದಗಳಿಗೆ, ಅವಿಶೇಷಾತ್ = ಏನೂ ವಿಶೇಷವಿಲ್ಲದ ಕಾರಣ ಚಮಸ ಶಬ್ದದಂತೆ ಅವ್ಯಕ್ತಾದಿ ಶಬ್ದಗಳೂ ಕೂಡ ಶಕ್ತಿವೃತ್ತಿಯಿಂದಲೇ ವಿಷ್ಣುವಾಚಕಗಳಾಗುತ್ತವೆ.

ಇಲ್ಲಿಗೆ ಆನುಮಾನಿಕಾಧಿಕರಣದಲ್ಲಿ ಭಾಷ್ಯ ಹಾಗೂ ಭಾಷ್ಯಾನುವಾದ ಮುಗಿಯಿತು.

ತತ್ವಪ್ರದೀಪ

ಅಬಾಧಿತಾರ್ಥವನ್ನು ಬಿಡಬಾರದು

तत्वप्रदीपः – चमसवदविशेषात् ।। उपचारचमसत्वमेव शिरसो न मुख्यत इति चेन्न । श्रौतस्य चमसशब्दस्याबाधितविषयस्य मुख्यार्थपरित्यागे कारणाभावात् ।।

'ಚಮಸ' ಶಬ್ದವು ಔಪಚಾರಿಕವಾಗಿ ಮಾತ್ರ ಶಿರಸ್ಸನ್ನು ಹೇಳುತ್ತಿದೆ. ಮುಖ್ಯವಾಗಿ ಹೇಗೆ ಹೇಳುತ್ತದೆ? ಎಂದು ಪ್ರಶ್ನಿಸಿದರೆ, ಅಬಾಧಿತವಾದ ವಿಷಯವನ್ನು ಶ್ರುತಿಯು ಪ್ರತಿಪಾದನೆ ಮಾಡಿದಾಗ ಅದು ಅದರ ಮುಖ್ಯಾರ್ಥವೆಂದೇ ಹೇಳಬೇಕು. ಅದನ್ನು ಪರಿತ್ಯಾಗ ಮಾಡಲು ಯಾವುದೇ ಕಾರಣವಿರುವುದಿಲ್ಲ.

ವಿವರಣೆ - 'ಚಮಸ' ಎಂಬ ಶಬ್ದವು ಯಜ್ಞಪಾತ್ರೆಯಲ್ಲಿ ಪ್ರಸಿದ್ಧವಾಗಿದೆ. ಆದರೂ ಕೂಡ 'ಇದಂ ತಚ್ಛಿರಃ' ಎಂಬ ಶ್ರುತಿಯು ತಲೆಯೆಂಬರ್ಥವನ್ನು ಹೇಳುತ್ತಿದೆ. ಅದರಂತೆ ಅವ್ಯಕ್ತ ಮೊದಲಾದ ಶಬ್ದಗಳು ಪ್ರಕೃತ್ಯಾದಿಗಳನ್ನು ಪ್ರತಿಪಾದನೆ ಮಾಡಿದರೂ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯ ಆಧಾರದಿಂದ ವಿಷ್ಣುವಾಚಕವೇ ಆಗುತ್ತದೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ ಆನುಮಾನಿಕಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ತ್ವಪ್ರಕಾಶಿಕಾ

ಶಬ್ದಗಳು ಹೇಗೆ ಹರಿಪರ ?

तत्वप्रकाशिका – ननु भवेदियमव्यक्तादिशब्दानां परमात्मनि मुख्यत्वचिन्ता । यदि तेषां तद्वाचित्वमेव भवेत् ।

ಹಿಂದಿನ ಸೂತ್ರದಲ್ಲಿ ಪ್ರತಿಪಾದನೆ ಮಾಡಿದಂತೆ ಅವ್ಯಕ್ತ ಮೊದಲಾದ ಶಬ್ದಗಳು ಪರಮಾತ್ಮನನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತಿವೆ ಎಂಬ ವಿಚಾರವು ಯಾವಾಗ ಸಿದ್ಧವಾಗುತ್ತದೆಂದರೆ ಮೊದಲು ಆ ಶಬ್ದಗಳು ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತದೆಂದು ಸಿದ್ಧವಾಗಬೇಕು.

ಶ್ರೀಹರಿಯಲ್ಲಿ ಪ್ರಸಿದ್ಧಿಯಿಲ್ಲ

तत्वप्रकाशिका – नच तद्युक्तम्, तेषामन्यत्रैव प्रसिद्धत्वात् । नच वक्तव्यम् 'अव्यक्तमचलम्' इत्यादिप्रयोगात् तद्वाचित्वावगमः इति ।

ಆದರೆ ಅವ್ಯಕ್ತ ಮೊದಲಾದ ಶಬ್ದಗಳು ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತವೆ ಎಂಬುದೇ ಸಿದ್ಧವಾಗುವುದಿಲ್ಲ. ಏಕೆಂದರೆ ಆ ಶಬ್ದಗಳು ಬೇರೆ ಪದಾರ್ಥಗಳಲ್ಲಿಯೇ ಪ್ರಸಿದ್ಧವಾಗಿವೆ. 'ಅವ್ಯಕ್ತಮಚಲಂ' ಎಂದು ಪರಮಾತ್ಮನಲ್ಲಿ ಅವ್ಯಕ್ತ ಮೊದಲಾದ ಶಬ್ದಗಳು ಪ್ರಸಿದ್ಧವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು.

ರೂಢಿವೃತ್ತಿಯಿಂದ ಪ್ರಯೋಗ

तत्वप्रकाशिका – वृत्त्यन्तरेणापि प्रयोगोपपत्तेः ।

ಪ್ರಯೋಗವನ್ನು ಕೂಡಿಸಬೇಕೆಂದರೆ ಮುಖ್ಯವಾಚ್ಯತ್ವವನ್ನೇ ಒಪ್ಪಬೇಕಾಗಿಲ್ಲ ರೂಢಿವೃತ್ತಿಯಿಂದಲೂ ಕೂಡ ಪ್ರಯೋಗವನ್ನು ಕೂಡಿಸಬಹುದು.

ಸಿಂಹ ಶಬ್ದದ ಉದಾಹರಣೆ

तत्वप्रकाशिका – नच योगयुक्तप्रयोगेन तन्निश्चयः । सहनवति पुंसि प्रयुक्तस्यापि सिंहशब्दस्य तदवाचकत्वेन दर्शनात् ।

ಸಕಲ ಶಬ್ದಗಳು ಯೌಗಿಕವಾಗಿ ಪರಮಾತ್ಮನಲ್ಲಿ ಪ್ರಯುಕ್ತವಾಗುತ್ತವಾದ್ದರಿಂದ ಅವನನ್ನು ಪ್ರತಿಪಾದನೆ ಮಾಡುತ್ತವೆಂದು ಹೇಳಬಾರದು. ಏಕೆಂದರೆ ಅತ್ಯಂತ ಸಹನೆಯಿರುವಂತಹ ಪುರುಷನಲ್ಲಿ ಸಿಂಹ ಶಬ್ದದ ಪ್ರಯೋಗವಿದ್ದರೂ ಅದು ಅವನನ್ನು ಮುಖ್ಯವಾಗಿ ಪ್ರತಿಪಾದನೆ ಮಾಡುವುದಿಲ್ಲ.

'ಚಮಸವತ್' ಎಂಬ ಸೂತ್ರಕ್ಕೆ ಪೀಠಿಕೆ

तत्वप्रकाशिका – अतः प्रसिद्धेरेव वाचकताऽध्यवसायकत्वात् तस्याश्च प्रधानादावेव सत्त्वान्, नाव्यक्तादिशब्दा विष्णुवाचकाः किमु मुख्याः? इत्याकाङ्क्षां परिहरत्सूत्रमुपन्यस्य व्याचष्टे – चमसवदिति ।।

ಆದ್ದರಿಂದ ಯಾವುದೇ ಒಂದು ಶಬ್ದವು ಪದಾರ್ಥವನ್ನು ಪ್ರತಿಪಾದನೆ ಮಾಡಬೇಕೆಂದರೆ ಲೋಕಪ್ರಸಿದ್ಧಿಯೇ ನಿಶ್ಚಾಯಕವಾಗಿರುತ್ತದೆ. ಅವ್ಯಕ್ತಾದಿ ಶಬ್ದಗಳು ಪ್ರಧಾನಾದಿಗಳಲ್ಲೇ ಪ್ರಸಿದ್ಧವಾಗಿರುತ್ತವೆ. ಈ ಎರಡು ಕಾರಣಗಳಿಂದ ಅವ್ಯಕ್ತಾದಿ ಶಬ್ದಗಳು ವಿಷ್ಣುವಾಚಕಗಳಲ್ಲ. ಹೀಗೆ ವಿಷ್ಣುವಾಚಕವೇ ಆಗದಿರುವಾಗ ಮುಖ್ಯವಾಗಿ ವಿಷ್ಣುವನ್ನು ಪ್ರತಿಪಾದನೆ ಮಾಡುತ್ತದೆಂಬುದು ಹೇಗೆ ಸಿದ್ಧವಾಗುತ್ತದೆ? ಈ ಆಶಂಕೆಯನ್ನು ಪರಿಹರಿಸುವ ಸೂತ್ರವನ್ನು ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದಾರೆ 'ಚಮಸವತ್' ಇತ್ಯಾದಿಯಾಗಿ.

'ನಾಮಾನಿ ಸರ್ವಾಣಿ ಯಮಾವಿಶಂತಿ'

तत्वप्रकाशिका – अव्यक्तादिशब्दाः परमात्मवाचका भवन्त्येव । 'नामानि सर्वाणि' इति तस्याशेषशब्दवाच्यत्वश्रुतेः ।

ಅವ್ಯಕ್ತ ಮೊದಲಾದ ಶಬ್ದಗಳು ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತವೆ. ಏಕೆಂದರೆ 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯು ಸಕಲ ಶಬ್ದಗಳಿಂದಲೂ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತಿವೆಯೆಂದು ಘೋಷಣೆ ಮಾಡುತ್ತಿವೆ.

ಸೂತ್ರದ ತಾತ್ಪರ್ಯ

ತತ್ವಪ್ರಕಾಶಿಕಾ – ನ ಚಾನ್ಯತ್ರ ಪ್ರಸಿದ್ಧಿವಿರೋಧಃ । ಯಥಾ ಖಲ್ವ ಚಮಸಶಬ್ದೋ ಯಜ್ಞಪಾತ್ರೇ ಪ್ರಸಿದ್ಧೋऽಪಿ, ಶ್ರುತಿಬಲೇನ ಶಿರೋವಾಚಕಃ, ತಥಾऽವ್ಯಕ್ತಾದಿಶಬ್ದಾನಾಂ ಪ್ರಧಾನಾದೌ ಪ್ರಸಿದ್ಧಾನಾಮಪಿ ಶ್ರುತಿಬಲೇನ ವಿಷ್ಣುವಾಚಕತ್ವನಿಶ್ಚಯಾತ್ ।

ಹಾಗಾದರೆ ಲೋಕಪ್ರಸಿದ್ಧಿಯ ವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಯಾವರೀತಿಯಾಗಿ 'ಚಮಸ' ಎಂಬ ಶಬ್ದವು ಯಜ್ಞಪಾತ್ರೆಯ ವಿಶೇಷದಲ್ಲಿ ಪ್ರಸಿದ್ಧವಾಗಿದ್ದರೂ 'ಇದಂ ತಚ್ಛಿರಃ' ಎಂಬ ಶ್ರುತಿಯ ಬಲದಿಂದ ಶಿರಸ್ಸನ್ನು ಪ್ರತಿಪಾದನೆ ಮಾಡುತ್ತದೋ, ಅದರಂತೆ ಅವ್ಯಕ್ತ ಮೊದಲಾದ ಶಬ್ದಗಳು ಲೋಕತಃ ಪ್ರಕೃತ್ಯಾದಿಗಳಲ್ಲಿ ಪ್ರಸಿದ್ಧವಾಗಿದ್ದರೂ 'ಅವ್ಯಕ್ತಮಚಲಮ್' ಎಂಬ ಶ್ರುತಿಯ ಬಲದಿಂದ ವಿಷ್ಣುವಾಚಕವೆಂದು ನಿಶ್ಚಯಿಸಬೇಕು.

ಕೋಶಾದಿಗಳಂತೆ ಶ್ರುತಿಯ ಅನುಶಾಸನ

ತತ್ವಪ್ರಕಾಶಿಕಾ – ನಚ ವಕ್ತವ್ಯಂ 'ಪ್ರಯೋಗಮಾತ್ರಸ್ಯ ವೃತ್ತ್ಯನ್ತರೇಣಾಪಿ ಸಮ್ಭವಾತ್, ನ ಚಮಸಶಬ್ದಃ ಶಿರೋವಾಚಕಃ' ಇತಿ । ಅಭಿಧಾನಾದಾವಿವಾನುಶಾಸನರೂಪತ್ವಾತ್ । ನಹಿ ಗೌಣ್ಯಾದಿವೃತ್ತೀನಾಮನುಶಾಸನಮಸ್ತಿ । ಅನ್ಯಥಾ ಕಲಶಕಾರೀರಾದಿಶಬ್ದಾನಾಮನುಶಾಸನ-ಸಿದ್ಧಾನಾಂ ಘಟಾದ್ಯವಾಚಕತ್ವಪ್ರಸಙ್ಗಾತ್ ।

'ಚಮಸ' ಶಬ್ದಪ್ರಯೋಗವನ್ನು ಶಿರಸ್ಸಿನಲ್ಲಿ ಗೌಣೀವೃತ್ತಿಯಿಂದ ಮಾಡಬಹುದಾದ್ದರಿಂದ ಶಿರಸ್ಸನ್ನು ಮುಖ್ಯವಾಗಿ ಪ್ರತಿಪಾದನೆ ಮಾಡುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಕೋಶಾದಿಗಳಂತೆ ಶ್ರುತಿಯು ಅನುಶಾಸನ ಮಾಡುತ್ತಿದೆ. ಗೌಣೀ ವೃತ್ತಿಗಳಲ್ಲಿ ಅನುಶಾಸನವು ಸರ್ವಥಾ ಇರುವುದಿಲ್ಲ. ಹೀಗೊಪ್ಪದಿದ್ದರೆ ಕಲಶ, ಕಾರೀರ ಮೊದಲಾದ ಶಬ್ದಗಳೂ ಕೂಡ ಕೋಶ ಹಾಗೂ ಅನುಶಾಸನಗಳ ಬಲದಿಂದ ಘಟವನ್ನು ಪ್ರತಿಪಾದನೆ ಮಾಡುತ್ತವೆಂದೂ ಕೂಡ ಸಿದ್ಧವಾಗದಿರಬೇಕಾದೀತು.

ಗೌಣೀವೃತ್ತಿಯು ಸಾಧ್ಯವಿಲ್ಲ

ತತ್ವಪ್ರಕಾಶಿಕಾ – ಅಥಾಪಿ ಸ್ಯಾತ್ – ಅನುಶಾಸನರುಪತ್ವಾತ್ ಶ್ರುತಿಬಲೇನ ಚಮಸಶಬ್ದಸ್ಯ ಶಿರೋವಾಚಕತ್ವೇऽಪಿ, ನ ತಥಾऽವ್ಯಕ್ತದಿಶಬ್ದಾನಾಂ ಪರಮಾತ್ಮವಾಚಿತ್ವಮ್? 'ನಾಮಾನಿ' ಇತಿ ಪ್ರಯೋಗಸ್ಯ ವೃತ್ತ್ಯನ್ತರೇಣಾಪಿ ಸಮ್ಭವಾದಿತಿ ।।

ಪ್ರಶ್ನೆ - ಶ್ರುತಿಯು ಅನುಶಾಸನರೂಪವಾಗಿರುವುದರಿಂದ 'ಚಮಸ' ಶಬ್ದವು ಶಿರಸ್ಸನ್ನು ಪ್ರತಿಪಾದನೆ ಮಾಡಬಹುದು. ಅದರಂತೆ 'ಅವ್ಯಕ್ತ' ಮೊದಲಾದ ಶಬ್ದಗಳು ಪರಮಾತ್ಮನನ್ನು ಪ್ರತಿಪಾದನೆ ಮಾಡುತ್ತಿವೆ ಎಂದು ಸಿದ್ಧವಾಗುವುದಿಲ್ಲ. ಏಕೆಂದರೆ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಸರ್ವಶಬ್ದವಾಚ್ಯತ್ವವನ್ನು ಗೌಣ್ಯಾದಿವೃತ್ತಿಗಳಿಂದಲೂ ಕೂಡ ಪ್ರತಿಪಾದನೆ ಮಾಡುವಂತಹ ಅವಕಾಶವಿರುತ್ತದಲ್ಲವೇ?

ಶ್ರುತಿಯು ಅನುಶಾಸನ ರೂಪ

तत्वप्रकाशिका – मैवम् । 'नामानि सर्वाणि' इति श्रुतेरप्यनुशासनरूपत्वेन तत् श्रुतेरविशेषात् । तद्वदस्याप्यनुशासनरूपत्वात्।

ಉತ್ತರ - ಈ ಪ್ರಶ್ನೆಯು ಸರಿಯಲ್ಲ. ಏಕೆಂದರೆ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯೂ ಕೂಡ ಅನುಶಾಸನರೂಪವೇ ಆಗಿರುತ್ತವೆ. 'ಇದಂ ತಚ್ಛಿರಃ' ಎಂಬ ಶ್ರುತಿಯಂತೆ.

ಸರ್ವಶಬ್ದಕ್ಕೆ ಸಂಕೋಚವಿಲ್ಲ

तत्वप्रकाशिका – न चात्राव्यक्तादिशब्दाश्रवणादोषः । सर्वशब्दसद्भावात्। सङ्कोचे कारणाभावादिति भावः ।

ಅವ್ಯಕ್ತಶಬ್ದವು ವಿಷ್ಣುಪರವಾಗಿದೆ ಎಂಬ ವಿಷಯದಲ್ಲಿ ಯಾವುದೇ ಉಲ್ಲೇಖವಿಲ್ಲದ ಕಾರಣ ಶ್ರುತಿಯು ಅನುಶಾಸನರೂಪ ಎಂದು ಹೇಗೆ ಹೇಳುತ್ತೀರಿ? ಎಂದು ಪ್ರಶ್ನಿಸಬಾರದು. ಏಕೆಂದರೆ ಶ್ರುತಿಯಲ್ಲಿ ಸರ್ವಶಬ್ದವಿರುತ್ತದೆ. ಈ ಸರ್ವಶಬ್ದಕ್ಕೆ ಅವ್ಯಕ್ತಶಬ್ದವನ್ನು ಬಿಟ್ಟು ಎಂಬುದಾಗಿ ಸಂಕೋಚ ಮಾಡಲು ಯಾವುದೇ ಕಾರಣವಿರುವುದಿಲ್ಲ.

ಚಮಸ ಶಬ್ದದ ನಿಷ್ಪತ್ತಿ

तत्वप्रकाशिका – 'अर्वाग्बिलश्चमस ऊर्ध्वबुध्नः' इति व्याख्येयमन्त्रे यदुक्तं तदिदं = प्रतीयमानं शिरः कुतः । एष ह्यर्वाग्बिलश्चमस ऊर्ध्वबुध्नः इत्यर्थः ।

'ಅರ್ವಾಗ್ಬಿಲಶ್ಚಮಸ ಊರ್ಧ್ವಬುಧ್ನಃ' ವ್ಯಾಖ್ಯಾನ ಮಾಡಲು ಯೋಗ್ಯವಾಗಿರುವ ಈ ಮಂತ್ರದಲ್ಲಿ ಯಾವುದು ಪ್ರಸಿದ್ಧವಾಗುತ್ತಿದೆಯೋ ಅದು ಶಿರಸ್ಸೇ ಆಗಿದೆ ಎಂಬುದು ಹೇಗೆ ಸಿದ್ಧವಾಗುತ್ತದೆ ? ಎಂದರೆ ಈ ಚಮಸವು ಕೆಳಮುಖವಾಗಿದೆ. ಅದರ ಬುಡವು ಮೇಲ್ಮುಖವಾಗಿದೆ ಎಂಬುದಾಗಿ ಶಿರಸ್ಸಿನ ವರ್ಣನೆಯಿದೆ.

ಪರಮಾತ್ಮನೇ ಸಕಲಶಬ್ದಗಳಿಂದ ಮುಖ್ಯಪ್ರತಿಪಾದ್ಯ

तत्वप्रकाशिका – 'एषः' इति चमसविवक्षया । 'दक्षिणान्नं वनुते यो न आत्मा' इतिवत् । बिलं मुखादि । तस्मादव्यक्तादिशब्दवाच्यो हरिर्भवत्येवेति सर्वशब्दवाच्यत्वं तस्यैवोपपन्नमिति सिद्धम् ।। ९ ।।

।। इति श्रीमज्जयतीर्थभिक्षुविरचितायां तत्वप्रकाशिकायाम् आनुमानिकाधिकरणम् ।।

'ಶಿರಃ' ಎಂಬ ಶಬ್ದವು ನಪುಂಸಕಲಿಂಗದಲ್ಲಿದೆ. ಅದನ್ನು ಪರಾಮರ್ಶಿಸುವ 'ಏಷಃ' ಎಂಬ ಶಬ್ದವು ಪುಲ್ಲಿಂಗದಲ್ಲಿದೆ. ಇದು ಹೇಗೆ ಕೂಡುತ್ತದೆ ಎಂದರೆ 'ಏಷಃ' ಎಂಬುದು ವಿಧೇಯವಾದ ಚಮಸಶಬ್ದವನ್ನು ಅನುಸರಿಸಿ ಪುಲ್ಲಿಂಗದಲ್ಲಿದೆ ಎಂದು ತಿಳಿಯಬೇಕು. 'ದಕ್ಷಿಣಾನ್ನಂ ವನುತೇ ಯೋ ನ ಆತ್ಮಾ' ಎಂಬ ಶ್ರುತಿಯಲ್ಲಿ 'ಅನ್ನ' ಎಂಬ ಶಬ್ದವು ನಪುಂಸಕಲಿಂಗ ಶಬ್ದವಾಗಿದೆ. 'ಯಃ' ಎಂಬುದು ಪುಲ್ಲಿಂಗದಲ್ಲಿದೆ. ಆದರೂ ವಿಧೇಯವಾದ ಆತ್ಮಶಬ್ದವನ್ನು ಅನುಸರಿಸಿ ಪುಲ್ಲಿಂಗದಲ್ಲಿ ಪ್ರಯೋಗ ಮಾಡಿದಂತೆ ಇಲ್ಲಿಯೂ ಕೂಡ ತಿಳಿಯಬೇಕು. 'ಬಿಲಂ' ಎಂದರೆ 'ಮುಖಾದಿ ರಂಧ್ರ' ಎಂದು ಅರ್ಥ. ಆದ್ದರಿಂದ ಈ ಅಧಿಕರಣದಲ್ಲಿ ಅವ್ಯಕ್ತ, ಜೀವ ಮೊದಲಾದ ಶಬ್ದಗಳಿಂದ ಪರಮಾತ್ಮನು ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆಂದು ಸಿದ್ಧವಾಯಿತು. ಆದ್ದರಿಂದ 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯು ಹೇಳುವಂತೆ ಸಕಲಶಬ್ದಗಳಿಂದಲೂ ಪರಮಾತ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆಂಬ ಸಿದ್ಧಾಂತವು ಸ್ಥಾಪಿತವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ಆನುಮಾನಿಕಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಭಾವದೀಪ

'ದರ್ಶಯತಿ ಚ' ಎಂಬ ಭಾಗದಿಂದ ಪುನರುಕ್ತಿ ಇಲ್ಲ

दर्शयति च इत्याद्यसूत्रखण्डेन गतार्थत्वमाशङ्क्याऽऽह – न च वक्तव्यमिति ।।

ಪ್ರಥಮಸೂತ್ರದಲ್ಲಿರುವ 'ದರ್ಶಯತಿ ಚ' ಎಂಬ ಭಾಗದಿಂದ ಪುನರುಕ್ತಿ ಬರುತ್ತದಲ್ಲವೆ ? ಎಂಬ ಆಶಂಕೆಗೆ 'ನ ಚ ವಕ್ತವ್ಯಮ್' ಎಂಬ ಟೀಕೆಯಿಂದ ಉತ್ತರಿಸುತ್ತಿದ್ದಾರೆ.

ಪ್ರಯೋಗವಿದ್ದರೂ ಪ್ರತಿಪಾದ್ಯತ್ವವಿಲ್ಲ

भावदीपः – सूक्ष्मं तु इत्यादिनाऽगतार्थत्वमाह – नच योगयुक्तेत्यादिना।। सहनवतीति ।। षहमर्षण इति धातुजत्त्वमभ्युपेत्यवादोऽयम् ।

'ಸೂಕ್ಷ್ಮಂ ತು' ಇತ್ಯಾದಿ ಸೂತ್ರದಿಂದ ಬರುವ ಪುನರುಕ್ತಿದೋಷವನ್ನು 'ನಚ ಯೋಗಯುಕ್ತ' ಇತ್ಯಾದಿ ಟೀಕೆಯಿಂದ ಪರಿಹರಿಸುತ್ತಿದ್ದಾರೆ. 'ಸಹನವತಿ' ಎಂಬ ಟೀಕೆಯಲ್ಲಿ ಸಹನೆ ಇರುವ ಪುರುಷನಲ್ಲಿ ಸಿಂಹಶಬ್ದದ ಪ್ರಯೋಗವಿದ್ದರೂ ಮುಖ್ಯಪ್ರತಿಪಾದ್ಯತ್ವ ಇರುವುದಿಲ್ಲವೆಂದು ಹೇಳಿದ್ದಾರೆ. ಸಿಂಹ ಶಬ್ದಕ್ಕೆ ಸಹನೆ ಇರುವವನು ಎಂಬರ್ಥವಿದೆ. ಎಂದರೆ 'ಷಹ ಮರ್ಷಣೇ' ಎಂಬ ಧಾತುವಿನಿಂದ ನಿಷ್ಪನ್ನವಾಗಿರುವುದರಿಂದ ಅಂಗೀಕಾರಮಾಡಿ ಹೇಳಿದ್ದಾರೆ ಎಂದು ತಿಳಿಯಬೇಕು.

ಸಿಂಹಶಬ್ದವು ಯೋಗಿಕವಲ್ಲ

भावदीपः – जातिनिमित्तकत्वात् सिंहशब्दस्य । अविशेषात् श्रुतेरित्येतद् व्यावर्त्यपूर्वं व्याचष्टे – अथापि स्यादिति ।। भाष्योक्तश्रुत्यर्थमाह – इति व्याख्येयमन्त्र इति ।।

ಸಿಂಹ ಶಬ್ದವು ಸಿಂಹಜಾತಿಯ ಪ್ರಾಣಿಗಳನ್ನು ಪ್ರತಿಪಾದನೆ ಮಾಡುವ ಶಬ್ದವಾಗಿದೆ; ಹೊರತು ಯೋಗಿಕವಾದ ಶಬ್ದವಲ್ಲ.

'ಅವಿಷೇಶಾತ್' ಎಂಬ ಸೂತ್ರಭಾಗದಿಂದ ವ್ಯಾವೃತ್ತವಾಗುವ ಅಂಶವನ್ನು ಉಲ್ಲೇಖಿಸುವ ಮೂಲಕ 'ಅಥಾಪಿ ಸ್ಯಾತ್' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

ಶಿಶುಬ್ರಾಹ್ಮಣದಲ್ಲಿ ಸಪ್ತಾಕ್ಷಿವಿದ್ಯೆ

ಭಾವದೀಪಃ – काण्वश्रुतौ चतुर्थेऽध्याये शिशुब्राह्मणे सप्ताक्षिविद्यायामुक्तेऽर्थे सम्मतित्वेन 'तदेष श्लोको भवति अर्वाग्बिलश्चमस ऊर्ध्वबुध्नस्तस्मिन् यशो निहितं विश्वरूपम्' इत्यादि मन्त्रमुदाहृत्य पादं पादमुपादाय स व्याक्रियते ।

ಭಾಷ್ಯದಲ್ಲಿ ಹೇಳಿದ ಶ್ರುತ್ಯರ್ಥವನ್ನು 'ಇತಿ ವ್ಯಾಖ್ಯೇಯಮಂತ್ರೇ' ಎಂದು ನಿರೂಪಣೆ ಮಾಡಿದ್ದಾರೆ ಕಾಣ್ವಶ್ರುತಿಯ ಚತುರ್ಥಾಧ್ಯಾಯದ ಶಿಶುಬ್ರಾಹ್ಮಣದಲ್ಲಿ ಸಪ್ತಾಕ್ಷಿ ವಿದ್ಯೆಯು ಪ್ರಸಕ್ತವಾಗಿದೆ. ಆ ಸಂದರ್ಭದಲ್ಲಿ 'ತದೇಷ ಶ್ಲೋಕೋ ಭವತಿ ಅರ್ವಾಗ್‌ಬಿಲಶ್ಚಮಸ ಊರ್ಧ್ವಬುಧ್ನಸ್ತಸ್ಮಿನ್ ಯಶೋ ನಿಹಿತಂ ವಿಶ್ವರೂಪಮ್' ಇತ್ಯಾದಿ ಮಂತ್ರವಿದೆ ಅದನ್ನು ಉದಾಹರಿಸಿ ಪ್ರತ್ಯೇಕ ಪ್ರತ್ಯೇಕ ಪಾದಗಳನ್ನು ಸ್ವೀಕರಿಸಿ ವ್ಯಾಖ್ಯಾನ ಮಾಡಲಾಗಿದೆ.

'ಅರ್ವಾಗ್‌ಬಿಲಶ್ಚಮಸ ಊರ್ಧ್ವಬುಧ್ನಃ'

ಭಾವದೀಪಃ – तत्रार्वाग्बिलश्चमस ऊर्ध्वबुध्न इत्याद्यपादव्याख्यानपरे वाक्ये इत्यन्तस्यार्थः इति व्याख्येयमन्त्र इति । तच्छब्दार्थो यदुक्तं तदिति । इदं शब्दार्थः प्रतीयमानमिति ।

ಆ ಸಂದರ್ಭದಲ್ಲಿ 'ಅರ್ವಾಗ್‌ಬಿಲಶ್ಚಮಸ ಊರ್ಧ್ವಬುಧ್ನಃ' ಎಂಬ ಮೊದಲನೆಯ ಪಾದವನ್ನು ವ್ಯಾಖ್ಯಾನ ಮಾಡುವ ವಾಕ್ಯದಲ್ಲಿ ಎಂದು ವ್ಯಾಖ್ಯೇಯಮಂತ್ರದ ಅಭಿಪ್ರಾಯವಾಗಿದೆ. ಪ್ರತಿಶಬ್ದದ ಅರ್ಥವನ್ನು 'ಯದುಕ್ತಮ್' ಇತ್ಯಾದಿಯಾಗಿ ನಿರೂಪಣೆ ಮಾಡಿದ್ದಾರೆ. 'ಇದಂ' ಶಬ್ದದ ಅರ್ಥವನ್ನು 'ಪ್ರತೀಯಮಾನಮ್' ಎಂದು ಹೇಳಿರುತ್ತಾರೆ.

'ಏಷಃ' ಎಂಬ ಪುಲ್ಲಿಂಗ ಪ್ರಯೋಗದ ಬಗ್ಗೆ

ಭಾವದೀಪಃ – शिरः परामर्शित्वे एतदित्येव स्यात् कथमेष इति पुल्लिङ्गमित्यतः एषः इतीति ।। दक्षिणेति ।।

ಶಿರಸ್ಸನ್ನು ಪರಾಮರ್ಶೆ ಮಾಡುವುದಾದರೆ 'ಏತತ್' ಎಂದು ನಪುಂಸಕಲಿಂಗದಲ್ಲಿ ಪ್ರಯೋಗ ಮಾಡಬೇಕಿತ್ತು. 'ಏಷಃ' ಎಂದು ಪುಲ್ಲಿಂಗಪ್ರಯೋಗವು ಹೇಗೆ ಕೂಡುತ್ತದೆ ? ಎಂಬ ಪ್ರಶ್ನೆಗೆ 'ಏಷಃ ಇತಿ' ಎಂಬುದರಿಂದ ಉತ್ತರಿಸಿದ್ದಾರೆ.

ಸೂತ್ರಾರ್ಥದ ಉಪಸಂಹಾರ

भावदीपः – ऐतरेये यथाऽस्मिन् वाक्ये य इत्यस्यान्यपरत्वेऽपि विधेयात्मविवक्षया पुल्लिङ्गं तथेहापीत्यर्थः । सूत्रार्थोपसंहारपूर्वं भाष्यार्थमुपसंहरति – तस्मादिति ।।

ಐತರೇಯೋಪನಿಷತ್ತಿನಲ್ಲಿ ಪ್ರಸಕ್ತವಾದ ವಾಕ್ಯದಲ್ಲಿರುವ 'ಯಃ' ಎಂಬ ಶಬ್ದವು ಅನ್ಯಪರವಾದರೂ ವಿಧೇಯವಾದ ಆತ್ಮನನ್ನು ವಿವಕ್ಷಿಸಿದಾಗ ಪುಲ್ಲಿಂಗವು ಹೇಗೆ ಯುಕ್ತವಾಗುತ್ತದೋ ಅದರಂತೆ ಇಲ್ಲಿಯೂ ತಿಳಿಯಬೇಕು. ಸೂತ್ರದ ಅರ್ಥವನ್ನು ಉಪಸಂಹಾರ ಮಾಡುವ ಮೂಲಕ ಭಾಷ್ಯದ ಅರ್ಥವನ್ನು ಉಪಸಂಹಾರ ಮಾಡುತ್ತಿದ್ದಾರೆ 'ತಸ್ಮಾದ್' ಇತ್ಯಾದಿಯಾಗಿ

'ತತ್ತು ಸಮನ್ವಯಾತ್' ಎಂಬುದು ಸಿದ್ಧವಾಯಿತು

भावदीपः – प्रयोगप्रवृत्तिनिमित्तादिसाधकभावादवरत्वादिबाधकाभावाच्चेत्यर्थः ।। तत्तु समन्वयादित्यादिभाष्योपसंहारः सर्वशब्देत्यादि ।।९।।

।। इति श्रीराघवेन्द्रयतिकृते भावदीपे आनुमानिकाधिकरणम् ।।

ಪ್ರಯೋಗ ಪ್ರವೃತ್ತಿನಿಮಿತ್ತ ಮೊದಲಾದ ಸಾಧಕಗಳು ಇರುವುದರಿಂದ ಅವರತ್ವಾದಿ ಬಾಧಕಗಳು ಇಲ್ಲದಿರುವುದರಿಂದ ಎಂಬುದು 'ತಸ್ಮಾದ್' ಎಂಬ ಪದದ ಅರ್ಥ. 'ತತ್ತು ಸಮನ್ವಯಾತ್' ಇತ್ಯಾದಿ ಭಾಷ್ಯವನ್ನು 'ಸರ್ವಶಬ್ದ' ಇತ್ಯಾದಿಯಾಗಿ ಉಪಸಂಹಾರ ಮಾಡಿದ್ದಾರೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಆನುಮಾನಿಕಾಧಿಕರಣದ ಕನ್ನಡ ಅನುವಾದವು ಮುಗಿಯಿತು ॥

ತಂತ್ರದೀಪಿಕೆಯಲ್ಲಿ ಆನುಮಾನಿಕಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।।

श्री राघवेन्द्रतीर्थविरचिता

तन्त्रदीपिका

आनुमानिकाधिकरणम् (१।४।१)

ಅಧಿಕರಣದ ಪ್ರಮೇಯ

अस्मिन् पादेऽन्यत्रैव प्रसिद्धद्विविधशब्दसमन्वय उच्यते ।

।। अनुमानिकमप्येकेषामिति चेन्न शरीररूपकविन्यस्तगृहीतेर्दर्शयति च ।।१-४-१।।

ನಾಲ್ಕನೆಯ ಈ ಪಾದವು ಪ್ರಾರಂಭವಾಗುತ್ತಿದೆ. ಈ ಪಾದದಲ್ಲಿ ಅನ್ಯತ್ರೈವಪ್ರಸಿದ್ಧವಾದ 'ನಾಮಾತ್ಮಕಶಬ್ದ' ಹಾಗೂ 'ಲಿಂಗಾತ್ಮಕಶಬ್ದ' ಎಂಬ ಎರಡೂ ಬಗೆಯ ಶಬ್ದಗಳ ಸಮನ್ವಯವನ್ನು ಮಾಡುತ್ತಿದ್ದಾರೆ.

'अव्यक्तात् पुरुषः परः' ಎಂಬ ಸೂತ್ರದ ವ್ಯಾಖ್ಯಾನ

अत्रैश्वर्यविरोध्यवरत्वदुःखित्वाद्यर्थकशब्दाः समन्वीयन्ते । अत्राव्यक्त-जीवबद्धादिशब्दो योग्यतयाऽन्वेति । अपिरेवार्थे । आनुमानिकमिति जीवादेरुपलक्षणम् । तत्त्वित्यस्ति ।

ಈ ಅಧಿಕರಣದಲ್ಲಿ ಭಗವಂತನಲ್ಲಿರುವ ಐಶ್ವರ್ಯಕ್ಕೆ ವಿರೋಧಿಯಾಗಿರುವ ಅವರತ್ವ, ದುಃಖಿತ್ವ ಮೊದಲಾದ ಅರ್ಥವುಳ್ಳಂತಹ ಶಬ್ದಗಳನ್ನು ಸಮನ್ವಯ ಮಾಡಲಾಗಿದೆ. ಅಂದರೆ

'ಅವ್ಯಕ್ತ', 'ಜೀವ', 'ಬದ್ಧ' ಮೊದಲಾದ ಶಬ್ದಗಳು ಸಮನ್ವಯ ಮಾಡಲು ಯೋಗ್ಯವಾದ್ದರಿಂದ ಸಮನ್ವಯ ಹೊಂದುತ್ತವೆ. ಸೂತ್ರದಲ್ಲಿರುವ 'ಅಪಿ' ಎಂಬ ಶಬ್ದವು ಅವಧಾರಣಾರ್ಥದಲ್ಲಿದೆ. 'ಆನುಮಾನಿಕಮ್' ಎಂದರೆ ಅನುಮಾನಸಿದ್ಧವಾದ ಪ್ರಕೃತಿ ಎಂದರ್ಥ. ಉಪಲಕ್ಷಣಯಾ ಜೀವಾದಿಗಳನ್ನು ವಿವಕ್ಷಿಸಬೇಕು. 'ತತ್ತು' ಎಂಬುದು ಅನುವೃತ್ತವಾಗಿದೆ.

'ಶರೀರರೂಪಕ ವಿನ್ಯಸ್ತ' ಎಂಬ ಸೂತ್ರದ ವ್ಯಾಖ್ಯಾನ

''अव्यक्तात् पुरुषः परः'' ''जीवा एव तु दुःखिनः'' इत्युक्ताव्यक्तादि-शब्दैरानुमानिकमप्यनुमानगम्यम्, शैषिकष्ठक्, प्रधानादिरेव केषाञ्चित् शाखासूच्यत इति चेन्न । अव्यक्तादि तत्तु परममुख्यवृत्त्या ब्रह्मैव । न प्रधानादि । कुतः ? दर्शयति श्रुतिः । चशब्देन स्मृतिः । ''अव्यक्तमचलं शान्तम्'' इति श्रुतिः । ''अव्यक्तोऽक्षर उच्यते'' इति स्मृतिश्च । तथा 'अनेन जीवेनात्मना'' इति श्रुतिः । ''जीवो विनयिता साक्षी'' इति स्मृतिश्चाव्यक्तादि ब्रह्मेति यतो दर्शयति तस्मादित्यर्थः । विष्णोरेवाव्यक्तादिशब्दवाच्यत्वे कथमन्यत्र व्यवहार इत्यत उक्तम् । शरीरेति । शरीरस्य रूपमिव रूपं यस्य तच्छरीररूपं, कुत्सितं शरीररूपं शरीररूपकं प्रधानादि तत्र विन्यस्तस्य स्थितस्य विष्णोरव्यक्तादिपदेन गृहीतेरित्यर्थः। विन्यस्तेत्युक्त्या अव्यक्तादिशब्दवाच्यब्रह्मसमबन्धात् प्रधानादावव्यक्तादिशब्दव्यवहार इति दर्शितम् । वैपरीत्यं कि नेत्यतः शरीरेति । जीवशरीरं यथा तत्तन्त्रं तथा प्रधानाद्यपि ब्रह्मतन्त्रमिति । मुख्यशरीरं कुतो नेत्यतः केति । नहि कुत्सितं मुख्यशरीरं भवतीति भावः। स्थितेति वाच्ये विन्यस्तेत्युक्तिः प्रधानादिविशिष्टस्यैवाव्यक्तादिपदेन गृहीतिर्न केवलस्येति वक्तुम् ।।

'ಅವ್ಯಕ್ತಾತ್ ಪುರುಷಃ ಪರಃ' ಎಂಬ ಶ್ರುತಿಯಲ್ಲಿ ಇರುವ ಅವ್ಯಕ್ತಶಬ್ದದಿಂದ 'ಜೀವಾ ಏವ ತು ದುಃಖಿನಃ' ಎಂಬ ಶ್ರುತಿಯಲ್ಲಿರುವ 'ಜೀವ' ಎಂಬ ಶಬ್ದದಿಂದ ಆನುಮಾನಿಕಮಪಿ =

ಅನುಮಾನಸಿದ್ಧವಾದ ಪ್ರಕೃತಿ, ಜೀವರುಗಳೇ, ಏಕೇಷಾಂ = ಕೆಲವು ಶಾಖೆಗಳಲ್ಲಿ ಹೇಳಲ್ಪಟ್ಟಿದ್ದಾರೆ. ಇತಿ ಚೇನ್ನ = ಹೀಗೆ ಹೇಳುವುದು ತಪ್ಪು. ಅವ್ಯಕ್ತಾದಿಶಬ್ದಗಳಿಂದ ತತ್ತು = ಪರಮಮುಖ್ಯವೃತ್ತಿಯಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆ ಹೊರತು, ಪ್ರಕೃತ್ಯಾದಿಗಳಲ್ಲ. ಏಕೆಂದರೆ ದರ್ಶಯತಿ ಚ = ಶ್ರುತಿ ಹಾಗೂ ಸ್ಮೃತಿಗಳು ಈ ವಿಷಯದಲ್ಲಿ ಆಧಾರವಾಗಿವೆ. ಚ ಶಬ್ದದಿಂದ ಸ್ಮೃತಿಯನ್ನು ವಿವಕ್ಷಿಸಬೇಕು.. 'ಅವ್ಯಕ್ತಮಚಲಂ ಶಾಂತಮ್' ಎಂಬ ಶ್ರುತಿಯು 'ಅವ್ಯಕ್ತೋSಕ್ಷರ ಉಚ್ಯತೇ' ಎಂಬ ಸ್ಮೃತಿಯು ಅವ್ಯಕ್ತಶಬ್ದವು ಬ್ರಹ್ಮನ ನಾಮವೆಂದು ಹೇಳುತ್ತಿವೆ. ಅದರಂತೆ 'ಅನೇನ ಜೀವೇನಾತ್ಮನಾ' ಎಂಬ ಶ್ರುತಿಯು, 'ಜೀವೋ ವಿನಯಿತಾ ಸಾಕ್ಷೀ' ಎಂಬ ಸ್ಮೃತಿಯು ಬ್ರಹ್ಮನನ್ನು ಜೀವನೆಂದು ಕರೆಯುತ್ತಿವೆ. ಆದ್ದರಿಂದ ಎಂದರ್ಥ. ವಿಷ್ಣುವೇ ಅವ್ಯಕ್ತಾದಿಶಬ್ದಗಳಿಂದ ವಾಚ್ಯನಾದರೆ ಬೇರೆ ಪದಾರ್ಥಗಳಲ್ಲಿ ಅವುಗಳ ವ್ಯವಹಾರ ಹೇಗೆ ? 'ಶರೀರರೂಪಕವಿನ್ಯಸ್ತಗೃಹಿತೇಃ' = ಬ್ರಹ್ಮಾಧೀನವಾದ್ದರಿಂದ ಅವನ ಶರೀರದಂತಿರುವ ಅವ್ಯಕ್ತಾದಿತತ್ವಗಳಲ್ಲಿರುವ ವಿಷ್ಣುವನ್ನೇ 'ಅವ್ಯಕ್ತ' ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನೆಂದು ವ್ಯವಹರಿಸಲಾಗುತ್ತದೆ. 'ವಿನ್ಯಸ್ತ' ಎಂಬ ಪದವನ್ನು ಪ್ರಯೋಗಿಸಿದ್ದರಿಂದ ಅವ್ಯಕ್ತಶಬ್ದದಿಂದ ಪರಮಾತ್ಮನೇ ಮುಖ್ಯವಾಗಿ ವಾಚ್ಯನಾಗಿದ್ದಾನೆ ಅಂತಹ ಪರಮಾತ್ಮನ ಸಂಬಂಧವು ಈ ಪ್ರಕೃತ್ಯಾದಿಗಳಿಗಿರುವುದರಿಂದ ಪ್ರಕೃತ್ಯಾದಿಗಳಲ್ಲಿಯೂ ಶಬ್ದವ್ಯವಹಾರವಿದೆ. ಪ್ರಕೃತ್ಯಾದಿಗಳ ಸಂಬಂಧ ಪರಮಾತ್ಮನಿಗಿರುವುದರಿಂದ ಪರಮಾತ್ಮನು ಅವ್ಯಕ್ತಶಬ್ದದಿಂದ ವಾಚ್ಯನಾಗಿದ್ದಾನೆ ಎಂದೇಕೆ ಹೇಳಬಾರದು? ಎಂಬ ಪ್ರಶ್ನೆಗೂ ಶರೀರ' ಎಂಬುದರಿಂದಲೇ ಉತ್ತರಿಸಿದ್ದಾರೆ. ಯಾವರೀತಿಯಾಗಿ ಜೀವನ ಶರೀರವು, ಜೀವನ ಅಧೀನವಾಗಿರುವಾಗಿರುತ್ತದೋ, ಅದರಂತೆ ಪ್ರಕೃತ್ಯಾದಿಗಳೇ ಬ್ರಹ್ಮನ ಶರೀರವೆಂದೆನಿಸಿಕೊಂಡಿದ್ದರಿಂದ ಅವುಗಳು ಬ್ರಹ್ಮನ ಅಧೀನವಾಗಿವೆ. ಪ್ರಕೃತ್ಯಾದಿಗಳು ಬ್ರಹ್ಮನ ಮುಖ್ಯಶರೀರವೆಂದು ಏಕೆ ಪರಿಗಣಿಸಬಾರದು ? ಎಂಬ ಪ್ರಶ್ನೆಗೆ 'ಆನುಮಾನಿಕಮ್' ಎಂಬಲ್ಲಿ 'ಕ' ಪ್ರತ್ಯಯವನ್ನು ಪ್ರಯೋಗಿಸಿದ್ದಾರೆ. ನಿಂದಾರ್ಥದಲ್ಲಿ 'ಕ' ಪ್ರತ್ಯಯವಿದೆ. ನಮಗೆ ಪಾಂಚಭೌತಿಕಶರೀರವು ಹೇಗೆ ಸುಖ-ದುಃಖಗಳಿಗೆ ಕಾರಣವಾಗಿದೆಯೋ, ಅದರಂತೆ ಅವ್ಯಕ್ತಾದಿಗಳು ಪರಮಾತ್ಮನ ಶರೀರವಾಗಿರುವುದಲ್ಲ. ನಿಯಾಮಕ-ನಾಗಿರುವುದರಿಂದಷ್ಟೇ ಅವು ಪರಮಾತ್ಮನ ಶರೀರ ಎಂದೆನಿಸಿಕೊಳ್ಳುತ್ತವೆ. ಕುತ್ಸಿತವಾದದ್ದು ಯಾವತ್ತೂ ಮುಖ್ಯಶರೀರವೆಂದೆನಿಸಿಕೊಳ್ಳುವುದಿಲ್ಲ. ಸೂತ್ರದಲ್ಲಿ 'ವಿನ್ಯಸ್ತ' ಎಂಬ ಪದದ ಬದಲು 'ಸ್ಥಿತ' ಎಂಬ ಪದವನ್ನು ಪ್ರಯೋಗಿಸಬಹುದು. ಆದರೆ ಪ್ರಧಾನಾದಿ ವಿಶಿಷ್ಟನಾದ

ಬ್ರಹ್ಮನೇ ಅವ್ಯಕ್ತಪದದಿಂದ ಪ್ರತಿಪಾದ್ಯನಾಗಿದ್ದಾನೆ. ಕೇವಲ ಬ್ರಹ್ಮನು ಪ್ರತಿಪಾದ್ಯನಲ್ಲ ಎಂಬುದನ್ನು ತಿಳಿಸಲು 'ವಿನ್ಯಸ್ತ' ಎಂದು ಹೇಳಿದ್ದಾರೆ.

'ಸೂಕ್ಷ್ಮಂ ತು ತದರ್ಹತ್ವಾತ್' ಎಂಬ ಸೂತ್ರದ ವ್ಯಾಖ್ಯಾನ

श्रौतस्मार्तप्रयोगेऽप्यव्यक्तादिशब्दस्य विष्णौ मुख्यत्वं कुत इत्यत आह-

॥ सूक्ष्मं तु तदर्हत्वात् ॥ १-४-२ ॥

तुरेव । सूक्ष्ममेव वस्त्वव्यक्तशब्दवाच्यमित्यर्थः । अव्यक्तत्वस्यैव तच्छब्दनिमित्तत्वात् कथमेतदित्यत उक्तम् तदर्हत्वात् । तदिति तन्त्रम् । तस्य सूक्ष्मस्य तस्य प्रकृताव्यक्तत्वस्यार्हत्वादित्यर्थः । सूक्ष्मस्यैवाव्यक्तशब्द-प्रवृत्तिनिमित्ता व्यक्तार्हत्वात् तदव्यक्तशब्दवाच्यं ब्रह्मैव । ''यत्तत्सूक्ष्मं परमं वेदितव्यम्'' इत्यादेः सूक्ष्मतममित्यव्यक्तशब्दमुख्यार्थ इति भावः । जीवादिपदनिमित्तप्राणधारकत्वादेरुपलक्षणमेतत् ।

ಶ್ರೌತಪ್ರಯೋಗ ಹಾಗೂ ಸ್ಮಾರ್ತಪ್ರಯೋಗಗಳ ಆಧಾರದಿಂದಲೂ ಅವ್ಯಕ್ತ ಮೊದಲಾದ ಶಬ್ದಗಳು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ ಎಂದು ಸಮರ್ಥಿಸಿದಿರಿ. ಇದು ಹೇಗೆ ಸಿದ್ಧವಾಗುತ್ತದೆ ? ಎಂಬ ಪ್ರಶ್ನೆಗೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ -

'ಸೂಕ್ಷ್ಮಂ ತು ತದರ್ಹತ್ವಾತ್ '

'ತು' ಶಬ್ದವು ಅವಧಾರಣಾರ್ಥದಲ್ಲಿದೆ. ಸೂಕ್ಷ್ಮವಾದ ವಸ್ತುವೇ 'ಅವ್ಯಕ್ತ' ಎಂಬ ಶಬ್ದದಿಂದ ಪ್ರತಿಪಾದ್ಯವಾಗುತ್ತದೆ ಎಂದರ್ಥ. ಅವ್ಯಕ್ತತ್ವವು ಅವ್ಯಕ್ತ ಶಬ್ದದ ಪ್ರವೃತ್ತಿನಿಮಿತ್ತವಾಗಿದೆಯೆಂದು ಹೇಗೆ ಸಮರ್ಥಿಸುತ್ತೀರಿ? ಎಂಬ ಪ್ರಶ್ನೆಗೆ 'ತದರ್ಹತ್ವಾತ್' ಎಂಬುದರಿಂದ ಉತ್ತರಿಸಿದ್ದಾರೆ. 'ತತ್' ಎಂಬುದನ್ನು ಎರಡು ಬಾರಿ ವಿವಕ್ಷಿಸಿಕೊಳ್ಳಬೇಕು. 'ತದರ್ಹತ್ವಾತ್', ತಸ್ಯ = ಸೂಕ್ಷ್ಮವಾದ ವಸ್ತುವಿಗೆ, ತಸ್ಯ = ಅವ್ಯಕ್ತತ್ವದ, ಅರ್ಹತ್ವಾತ್ = ಅರ್ಹತೆಯಿರುವುದರಿಂದ,

ಸೂಕ್ಷ್ಮಂತು = ಸೂಕ್ಷ್ಮವಾದ ವಸ್ತುವೇ (ಪರಮಾತ್ಮನೇ) ಅವ್ಯಕ್ತಶಬ್ದದಿಂದ ಪ್ರತಿಪಾದ್ಯವಾಗುತ್ತದೆ ಎಂಬುದೇ ಸೂತ್ರದ ಅರ್ಥ.

ಸೂಕ್ಷ್ಮವಾದ ವಸ್ತುವೇ ಅವ್ಯಕ್ತತ್ವಕ್ಕೆ ಅರ್ಹವಾಗಿರುತ್ತದೆ. 'ಯತ್ತತ್ ಸೂಕ್ಷ್ಮಂ ಪರಮಂ ವೇದಿತವ್ಯಮ್' ಇತ್ಯಾದಿ ಶ್ರುತಿಗಳಿಂದ ಸೂಕ್ಷ್ಮತಮವಾದದ್ದು ಅವ್ಯಕ್ತಶಬ್ದದ ಮುಖ್ಯಾರ್ಥ-ವಾಗಿರುತ್ತದೆ ಎಂದು ಅಭಿಪ್ರಾಯ. ಜೀವ ಮೊದಲಾದ ಪದಗಳ ಪ್ರವೃತ್ತಿನಿಮಿತ್ತಗಳೆನಿಸಿದ ಪ್ರಾಣಧಾರಕತ್ವ ಮೊದಲಾದವುಗಳು ಪರಮಾತ್ಮನಲ್ಲಿಯೇ ಮುಖ್ಯವಾಗಿರುತ್ತವೆಂಬುದನ್ನು ಉಪಲಕ್ಷಣಯಾ ವಿವಕ್ಷಿಸಬೇಕು.

'ತದಧೀನತ್ವಾದರ್ಥವತ್' ಎಂಬ ಸೂತ್ರದ ವ್ಯಾಖ್ಯಾನ

ननु विष्णोरव्यक्तादिशब्दमुख्यार्थत्वेऽपीहपरत्वावधित्वार्थकपञ्चम्या-क्षिप्तावरत्वदुःखित्वादेरयोगेन पञ्चम्यादेः व्यर्थतापत्तेर्नाव्यक्तादिशब्वाच्यं ब्रह्मेत्यत आह -

।। तदधीनत्वादर्थवत् ।। १-४-३ ।।

'ಅವ್ಯಕ್ತಾತ್ ಪುರುಷಃ ಪರಃ' ಎಂಬ ಕಾಠಕೋಪನಿಷತ್ತಿನ ವಾಕ್ಯದಲ್ಲಿರುವ ಅವ್ಯಕ್ತ ಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಬಹುದು. ಆದರೆ 'ಅವ್ಯಕ್ತಾತ್' ಎಂಬಲ್ಲಿರುವ ಪಂಚಮೀ ವಿಭಕ್ತಿಯು ಅವ್ಯಕ್ತವು ಪುರುಷನಿಗಿಂತ ಅವರ ಎಂದು ಸೂಚಿಸುತ್ತಿದೆ. ಬ್ರಹ್ಮನಿಗೆ ಅವರತ್ವವು ಸರ್ವಥಾ ಯುಕ್ತವಾಗುವುದಿಲ್ಲ. ಆದ್ದರಿಂದ ಪಂಚಮೀ ವಿಭಕ್ತಿ ಮೊದಲಾದವುಗಳು ಅರ್ಥರಹಿತವಾಗುತ್ತವೆ. ಅದಕ್ಕಾಗಿ ಅವ್ಯಕ್ತ ಶಬ್ದದಿಂದ ವಿಷ್ಣು ಪ್ರತಿಪಾದ್ಯನಾಗುವುದಿಲ್ಲ ಎಂದು ಹೇಳುವುದು ಉಚಿತವಲ್ಲವೇ? ಎಂಬ ಪ್ರಶ್ನೆಗೆ ಉತ್ತರ ನೀಡಲು ಮುಂದಿನ ಸೂತ್ರ ಹೊರಟಿದೆ-

'ತದಧೀನತ್ವಾದರ್ಥವತ್'

अवरत्वाक्षेपकावधित्वादिवाचिपञ्चम्यादिशब्दजातमित्यन्वेति । अर्थवत् परब्रह्मण्यर्थवत् न व्यर्थम् । कुतः ? तदधीनत्वात् । अवरत्वदुःखित्वादि-

तन्निमित्तधर्माणां तस्य विन्यस्तपदेन प्रकृतस्य ब्रह्मणोऽधीनत्वादित्यर्थः । ब्रह्मण्यवरत्वादेरभावेऽपि अन्यगतावरत्वादेः तदधीनत्वात्तत्र तद्वाचिशब्दो राज्ञि जयिशब्दवदस्तीति भावः ।

ಅವರತ್ವವನ್ನು ಆಕ್ಷೇಪ ಮಾಡುವ ೨೦ಮೊದಲಾದ ಧರ್ಮಗಳು 'ತದಧೀನತ್ವಾತ್' = ವಿಷ್ಣುವಿನ ಅಧೀನವಾದುದರಿಂದ, 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿ ಅವಧಿ ಎಂಬರ್ಥವನ್ನು ತಿಳಿಸುವ ಪಂಚಮೀ ವಿಭಕ್ತಿ, 'ದುಃಖೀ' ಮೊದಲಾದ ಶಬ್ದಗಳೆಲ್ಲವೂ ಬ್ರಹ್ಮನಲ್ಲಿ, ಅರ್ಥವತ್ = ಸಾರ್ಥಕ ವ್ಯರ್ಥವಲ್ಲ.

ಬ್ರಹ್ಮನಲ್ಲಿ ದುಃಖಿತ್ವಾದಿಗಳು ಇಲ್ಲದಿದ್ದರೂ ಜೀವನಲ್ಲಿರುವ ದುಃಖವು ಬ್ರಹ್ಮನ ಅಧೀನವಾದ್ದರಿಂದ ಅವನನ್ನು 'ದುಃಖೀ' ಎನ್ನಬಹುದು. ಹಿಂದಿನ ಸೂತ್ರದಿಂದ 'ವಿನ್ಯಸ್ತ' ಎಂಬ ಪದದಿಂದ ಪ್ರಕೃತನಾಗುವ ಬ್ರಹ್ಮನಿಗೆ ಅಧೀನವಾಗಿರುವುದರಿಂದ ಎಂಬರ್ಥವನ್ನು ಇಲ್ಲಿ ವಿವಕ್ಷಿಸಬೇಕು. 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿ ಪುರುಷನು ಅವ್ಯಕ್ತಕ್ಕಿಂತ ಉತ್ತಮ ಎಂದು ಹೇಳಿದಾಗ ಉತ್ತಮತ್ವಕ್ಕೆ ಅವ್ಯಕ್ತವು ಅವಧಿಯಾಗಿದೆ. ಇದರಿಂದ ಅದು ಉತ್ತಮವಲ್ಲ. ಪುರುಷನಿಗಿಂತ ಅವರವಾಗಿದೆ. ಅವ್ಯಕ್ತಶಬ್ದದಿಂದ ವಿಷ್ಣು ಪ್ರತಿಪಾದ್ಯನಾದರೆ ಅವನೂ ಕೂಡ ಅವರನಾಗಬೇಕಾದೀತು? ಈ ಪ್ರಶ್ನೆಗೆ ಅವರತ್ವವು ಅವನ ಅಧೀನವಾದ್ದರಿಂದ ಅವರತ್ವ ವಾಚಕವಾದ ಪಂಚಮೀ ವಿಭಕ್ತಿಯೂ ಕೂಡ ಪರಮಾತ್ಮನನ್ನೇ ಪ್ರತಿಪಾದನೆ ಮಾಡುತ್ತದೆಂಬ ಉತ್ತರವನ್ನು ತಿಳಿಯಬೇಕು. ಹೇಗೆಂದರೆ ಯುದ್ಧರಂಗದಲ್ಲಿ ಸೈನಿಕರು ಜಯವನ್ನು ಗಳಿಸಿದರೂ, ರಾಜನನ್ನು 'ಜಯೀ' ಎಂದು ವ್ಯವಹರಿಸುತ್ತಾರೆ. ಏಕೆಂದರೆ ಜಯವು ರಾಜನ ಅಧೀನವಾಗಿರುತ್ತದೆ. ಅದರಂತೆ ಅವರತ್ವ, ದುಃಖಿತ್ವಾದಿಗಳು ಜೀವನಲ್ಲೇ ಇದ್ದರೂ ಬ್ರಹ್ಮನ ಅಧೀನವಾದ್ದರಿಂದ ಬ್ರಹ್ಮನನ್ನು 'ಅವರ', 'ದುಃಖೀ' ಇತ್ಯಾದಿಯಾಗಿ ವ್ಯವಹರಿಸುವುದು ಸಮಂಜಸವಾಗಿದೆ.

'ಜ್ಞೇಯತ್ವಾವಚನಾಚ್ಚ' ಎಂಬ ಸೂತ್ರದ ವ್ಯಾಖ್ಯಾನ

इतश्च मुख्यतोऽव्यक्तादिशब्दवाच्यं ब्रह्मेत्याह -

।। ज्ञेयत्वावचनाच्च ।। १-४-४ ।।

अव्यक्तजीवादिशब्दमुख्यार्थो ब्रह्मैव । नानुमानिकादिः । ''तमेवैकं जानथ आत्मानम्'' इति ब्रह्मण एव मुमुक्षुज्ञेयत्वोक्त्यनुक्तिभ्यां मोक्षार्थवेदानां ब्रह्मपरत्वसिद्धौ प्रतिवाक्यं तत्परत्वस्य ''आदावन्ते च मध्ये च'' इत्यादिना सिद्धेः स्वतःप्राप्तमुख्यवृत्तत्तित्यागायोगात् अव्यक्तादि-शब्दमुख्यार्थो ब्रह्मैवेति भावः ।

ಮತ್ತೊಂದು ಕಾರಣದಿಂದಲೂ ಅವ್ಯಕ್ತ ಮೊದಲಾದ ಶಬ್ದಗಳಿಂದ ಬ್ರಹ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆಂದು ಸಮರ್ಥನೆ ಮಾಡಲು ಮುಂದಿನ ಸೂತ್ರ ಹೊರಟಿದೆ -

'ಜ್ಞೇಯತ್ವಾವಚನಾಚ್ಚ'

ಸೂತ್ರಾರ್ಥ ಹೀಗಿದೆ - ಅವ್ಯಕ್ತಾದಿ ಶಬ್ದಗಳ ಮುಖ್ಯಾರ್ಥನು ಬ್ರಹ್ಮನೇ ಆಗಿದ್ದಾನೆ ಹೊರತು, ಪ್ರಕೃತ್ಯಾದಿಗಳಲ್ಲ. 'ತಮೇವೈಕಂ ಜಾನಥ ಆತ್ಮಾನಮ್' ಎಂಬುದಾಗಿ ಬ್ರಹ್ಮನೇ ಮುಮುಕ್ಷುಗಳಿಂದ ಜ್ಞೇಯನಾಗಿದ್ದಾನೆಂದು ಹೇಳಿ, ಉಳಿದ ತತ್ವಗಳಿಗೆ ಮುಮುಕ್ಷುಗಳಿಂದ ಜ್ಞೇಯತ್ವವನ್ನು ಹೇಳಿರುವುದಿಲ್ಲ. ಆದ್ದರಿಂದ ಅವ್ಯಕ್ತಾದಿಶಬ್ದಗಳ ಮುಖ್ಯಾರ್ಥನು ವಿಷ್ಣುವೇ ಆಗಿದ್ದಾನೆ ಪ್ರಧಾನಾದಿಗಳಲ್ಲ. ಮೋಕ್ಷಫಲವನ್ನು ಹೇಳುವ ವೇದಗಳಿಗೆ ಬ್ರಹ್ಮನಲ್ಲೇ ತಾತ್ಪರ್ಯವೆಂದು ಸಿದ್ಧವಾಗುತ್ತದೆ. ಆದ್ದರಿಂದಲೇ 'ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ' ಪ್ರತಿಯೊಂದು ವೇದವಾಕ್ಯದಿಂದಲೂ ಬ್ರಹ್ಮನೇ ಪ್ರತಿಪಾದ್ಯನೆಂದು ಸಿದ್ಧವಾಗುತ್ತದೆ. ಹೀಗೆ ಮುಖ್ಯವೃತ್ತಿಯು ಬ್ರಹ್ಮನಲ್ಲಿ ಸ್ವತಃ ಸಿದ್ಧವಾಗಿರುವಾಗ ಅದನ್ನು ಬಿಡಲು ಯಾವುದೇ ಕಾರಣವಿಲ್ಲ. ಆದ್ದರಿಂದ ಅವ್ಯಕ್ತಾದಿಶಬ್ದಗಳ ಮುಖ್ಯಾರ್ಥನು ಬ್ರಹ್ಮನೇ ಆಗಿದ್ದಾನೆಂದು ತಿಳಿಯಬೇಕು.

'ವದತೀತಿ ಚೇನ್ನ ಪ್ರಾಜ್ಞೋ ಹಿ' ಎಂಬ ಸೂತ್ರದ ವ್ಯಾಖ್ಯಾನ

उक्तमाक्षिप्याह -

।। वदतीति चेन्न प्राज्ञो हि ।। १-४-५ ।।

ज्ञेयत्वावचनमन्यस्यापि सिद्धम् । यतो 'महतः' परं ध्रुवं निचाय्य तं मृत्युमुखात् प्रमुच्यते'' इति महत्परत्वलिङ्गेन प्रधानस्यापि मुमुक्षुज्ञेयत्वं वदति श्रुतिरिति चेन्न । प्राज्ञो हि । यस्मात् प्राज्ञो विष्णुरत्र उच्यत इत्यर्थः । सर्वतः परे महत्परत्वं युक्तमिति भावः ।।

ಹಿಂದಿನ ಸೂತ್ರದಲ್ಲಿ ಪರಮಾತ್ಮನಿಗಿಂತ ಭಿನ್ನವಾದುದೆಲ್ಲವೂ ಹೇಯವಾಗಿದೆ. ಆದ್ದರಿಂದ ಜ್ಞೇಯವಲ್ಲ ಎಂದು ಸಮರ್ಥಿಸಲಾಯಿತು. ಆದರೆ 'ಮಹತಃ ಪರಂ ಧ್ರುವಂ' ಎಂಬ ಶ್ರುತಿಯಲ್ಲಿ ಪ್ರಕೃತಿಯ ಜ್ಞಾನದಿಂದಲೂ ಮೋಕ್ಷವಾಗುತ್ತದೆಂದು ಹೇಳಿದೆಯಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ -

'ವದತೀತಿ ಚೇನ್ನ ಪ್ರಾಜ್ಞೋ ಹಿ'

ಪ್ರಕೃತಿಯ ಜ್ಞಾನವಿಲ್ಲದೇ ಮೋಕ್ಷವಾಗುವುದಿಲ್ಲ ಎಂಬ ಜ್ಞೇಯತ್ವಾವಚನವು ಪ್ರಕೃತಿಯಲ್ಲಿಯೂ ಕೂಡ ಸಿದ್ಧವಾಗಿದೆ. ಏಕೆಂದರೆ 'ವದತಿ ಮಹತಃ ಪರಂ ಧ್ರುವಂ ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ' ಎಂಬ ಶ್ರುತಿಯಲ್ಲಿ ಮಹತ್‌ಪರತ್ವಲಿಂಗವಿರುವುದರಿಂದ ಪ್ರಕೃತಿಯೇ ಪ್ರತಿಪಾದ್ಯವಾಗಿದೆ. ಇಂತಹ ಪ್ರಕೃತಿಯ ಜ್ಞಾನವನ್ನು ಮುಮುಕ್ಷು ಆದವನು ಪಡೆಯಬೇಕು ಎಂದು ಈ ಶ್ರುತಿಯು ಹೇಳುತ್ತಿದೆಯಲ್ಲವೇ? ಇತಿ ಚೇನ್ನ = ಇದು ಸರಿಯಲ್ಲ. ಏಕೆಂದರೆ ಅಲ್ಲಿಯೂ ಕೂಡ, ಪ್ರಾಜ್ಞೋ ಹಿ = ಪ್ರಾಜ್ಞ ಎನಿಸಿದ ವಿಷ್ಣುವೇ ಜ್ಞೇಯನೆಂದು ಪ್ರತಿಪಾದ್ಯನಾಗಿದ್ದಾನೆ. ಎಲ್ಲಾ ಪದಾರ್ಥಗಳಿಗಿಂತ ಶ್ರೇಷ್ಠವಾದ ವಿಷ್ಣುವಿನಲ್ಲಿ ಮಹತ್‌ಪರತ್ವವೂ ಕೂಡ ಯುಕ್ತವೇ ಆಗುತ್ತದೆ.

'ಪ್ರಕರಣಾತ್' ಎಂಬ ಸೂತ್ರದ ವ್ಯಾಖ್ಯಾನ

विष्णुग्रहणे किं कारणमित्यत आह -

।। प्रकरणात् ।। १-४-६ ।।

''सोऽध्वनः पारमाप्नोति तद्विष्णोः परमं पदम्'' इति

प्रकरणोक्तार्थोपासकस्य विष्णुपदप्राप्युक्त्या निर्णीतात् प्रकरणात् प्राज्ञस्तत्रोच्यत इत्यन्वयः ।।

ವಿಷ್ಣುವೇ ಮಹತ್‌ಪರನಾಗಿದ್ದಾನೆ ಎಂದು ವಿವಕ್ಷಿಸಲು ಏನು ಕಾರಣ ? ಎಂಬ ಪ್ರಶ್ನೆಗೆ ಮುಂದಿನ ಸೂತ್ರ ಉತ್ತರಿಸುತ್ತಿದೆ -

'प्रकरणात्'

'सोऽध्वनः पारमाप्नोति तद्विष्णोः परमं पदम्' ಎಂಬುದಾಗಿ ಯಾರು ಈ ಪ್ರಕರಣದ ಅರ್ಥವನ್ನು ಉಪಾಸನೆ ಮಾಡುತ್ತಾರೋ ಅವನಿಗೆ ವಿಷ್ಣುಪದವೇ ಪ್ರಾಪ್ತವಾಗುತ್ತದೆ ಎಂದು ಹೇಳಿರುವುದರಿಂದ ಇದು ವಿಷ್ಣುವಿನ ಪ್ರಕರಣವಾಗಿದೆ ಎಂದು ಸಿದ್ಧವಾಗುತ್ತದೆ. ಆದ್ದರಿಂದಲೂ ವಿಷ್ಣುವೇ 'ಮಹತ್‌ಪರ' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ.

'त्रयाणामेव चैवमुपन्यासः प्रश्नश्च' ಎಂಬ ಸೂತ್ರದ ವ್ಯಾಖ್ಯಾನ

इतश्च प्राज्ञ एव निचाय्यवाक्योक्त इत्याह -

।। त्रयाणामेव चैवमुपन्यासः प्रश्नश्च ।। १-४-७ ।।

आद्यचशब्दो युक्तिसमुच्चये । न केवलं प्रकरणादिति । अन्त्यः प्रश्नोपन्याससमुच्चये । प्राज्ञ इत्यस्ति । बुद्धिस्थत्वात् एतदुपनिषदीत्यन्वेति। एवं ''वीतमन्युस्त्वां ददृशिवान्मृत्युमुखात्प्रमुक्तम्'' इति,''स्वर्ग्यमग्निं नचिकेतः प्रजानन्'' इति, ''देवैरत्रापि विचिकित्सितं किल'' इत्येवं प्रकारेण त्रयाणां पितृसौमनस्य-स्वर्ग्याग्नि-ब्रह्मणामेवोपन्यासो यतोऽतश्च प्राज्ञ एव तत्र उच्यत इत्यर्थः ।

ಮತ್ತೊಂದು ಕಾರಣದಿಂದಲೂ 'ಪ್ರಾಜ್ಞ' ಎನಿಸಿದ ಪರಮಾತ್ಮನೇ ನಿಚಾಯ್ಯವಾಕ್ಯದಿಂದ ಪ್ರತಿಪಾದ್ಯನಾಗಿದ್ದಾನೆಂದು ಸಮರ್ಥಿಸಲು ಮುಂದಿನ ಸೂತ್ರ ಹೊರಟಿದೆ -

'त्रयाणामेव चैवमुपन्यासः प्रश्नश्च'

'चैवं' ಎಂಬಲ್ಲಿರುವ 'च' ಶಬ್ದವು ಯುಕ್ತಿಯನ್ನು ಸಮುಚ್ಚಯ ಮಾಡುತ್ತಿದೆ. ಕೇವಲ ಪ್ರಕರಣದಿಂದಷ್ಟೇ ವಿಷ್ಣುವಿನಲ್ಲಿ ಅವ್ಯಕ್ತಶಬ್ದ ಪ್ರತಿಪಾದ್ಯತ್ವವು ಸಿದ್ಧವಾಗುವುದಿಲ್ಲ. ಹೊರತಾಗಿ, ಪ್ರಶ್ನೆ ಹಾಗೂ ಉಪನ್ಯಾಸಗಳ ಬಲದಿಂದಲೂ ಸಿದ್ಧವಾಗುತ್ತದೆ. ಈ ಸೂತ್ರದಲ್ಲಿ 'ಪ್ರಾಜ್ಞಃ' ಎಂಬುದನ್ನು ವಿವಕ್ಷಿಸಬೇಕು. ಬುದ್ಧಿಸ್ಥವಾದ್ದರಿಂದ 'ಈ ಉಪನಿಷತ್ತಿನಲ್ಲಿ' ಎಂಬ ಪದವು ಅನ್ವಯವನ್ನು ಹೊಂದುತ್ತದೆ. 'ವೀತಮನ್ಯುಸ್ತ್ವಾಂ ದದೃಶಿವಾನ್ ಮೃತ್ಯುಮುಖಾತ್ ಪ್ರಮುಕ್ತಮ್' ಭೋಗವನ್ನು ತ್ಯಜಿಸಿದ ನಿನ್ನ ತಂದೆಯು ಮೃತ್ಯುಮುಖದಿಂದ ಬಿಡುಗಡೆ ಹೊಂದಿದ ನಿನ್ನನ್ನು ನೋಡಲಿ ಎಂಬ ವಾಕ್ಯದಲ್ಲಿ ಮೊದಲ ವರದ ಉಪನ್ಯಾಸ ಇದೆ. 'ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್' ಎಂಬ ಎರಡನೆಯ ವಾಕ್ಯದಲ್ಲಿ 'ಎಲೈ ನಚಿಕೇತನೇ ! ಸ್ವರ್ಗಸಾಧನನೂ, ಅಗ್ನಿನಾಮಕನೂ ಆದ ಶ್ರೀಹರಿಯನ್ನು ತಿಳಿದಿರುವ ನಾನು ಅವನ ಸ್ವರೂಪವನ್ನು ಹೇಳುತ್ತೇನೆ ತಿಳಿ ಎಂಬುದಾಗಿ ಎರಡನೆಯ ವರದ ಪ್ರಸ್ತಾಪವಿದೆ. 'ದೇವೈರತ್ರಾಪಿ ವಿಚಿಕಿತ್ಸಿತಂ ಕಿಲ' ಎಂಬ ಮೂರನೆಯ ವಾಕ್ಯದಲ್ಲಿ ನೀನು ಕೇಳುತ್ತಿರುವ ಮೃತ ಜೀವರ ಮತ್ತು ಮುಕ್ತರಾದ ಜೀವರ ಪ್ರೇರಕರಾದ ಬ್ರಹ್ಮನ ಸ್ವರೂಪವಿಷಯದಲ್ಲಿ ದೇವತೆಗಳೂ ಕೂಡ ಹಿಂದೆ ಸಂಶಯವನ್ನು ಪಡೆದಿದ್ದರು ಎಂಬ ಮೂರನೆಯ ವಾಕ್ಯದ ಪ್ರಸ್ತಾಪವಿದೆ.

ಯಾವ ಕಾರಣದಿಂದ ಮೂರು ಬಗೆಯ ಪ್ರಶ್ನೆಗಳು ಪ್ರಸಕ್ತವಾಗಿವೆಯೋ, ಆ ಕಾರಣದಿಂದಲೇ ಇಲ್ಲಿ ಪ್ರಾಜ್ಞನು ಪ್ರತಿಪಾದ್ಯನಾಗಿದ್ದಾನೆ ಎಂದಭಿಪ್ರಾಯ.

त्रयाणामेवेति कुत इत्यत उक्तम् – प्रश्नश्चेति । ''सुमना यथा स्याद्वीतमन्युः'' इति, ''स त्वमग्निं स्वर्ग्यमध्येषि मृत्यो प्रब्रूहि तम्'' इति, ''येयं प्रेते विचिकित्सा मनुष्ये'' इति चैतत् त्रितयविषय एव प्रश्नश्च यतोऽत उपन्यासस्त्रितयविषय इत्यर्थः। आद्यश्चो हेतौ । अन्त्यः समुच्चय इत्येके । प्रश्नस्यादित्वेऽपि प्रतिवचनस्थनिचाय्यवाक्यस्य प्रधानपरत्वशङ्कनात् तन्निरसितुमुपन्यासस्यादावुक्तिः । त्रयाणामेव चेत्येव-

पूर्तावेवमित्युक्तिः त्रयमध्ये प्रधानस्य न निवेश इति दर्शयितुं प्रकारत्रयोक्त्यर्था । उपन्यासस्योक्तत्रयविषयत्वसिद्धये प्रश्नोक्तिः ।

ಏವಂ = ಕಾಠಕದಲ್ಲಿ ಹೇಳಿರುವಂತೆ, ತ್ರಯಾಣಮೇವ = ತಂದೆಯ ಸೌಮನಸ್ಯ ಸ್ವರ್ಗ್ಯವಾದ ಅಗ್ನಿಯಲ್ಲಿರುವ ಪರಮಾತ್ಮ, ಮುಕ್ತನಿಯಾಮಕನಾದ ಬ್ರಹ್ಮ ಈ ಮೂರರ ಬಗ್ಗೆ ಮಾತ್ರ ಪ್ರಶ್ನಿಸಲಾಗಿದೆ. ಏಕೆಂದರೆ ಪ್ರಶ್ನಶ್ಚ = ಈ ಮೂರನ್ನೇ ಕೇಳಿರುವುದರಿಂದ, ಈ ಮೂರರ ಬಗ್ಗೆ ಮಾತ್ರ ನಿರೂಪಣೆಯಿದೆ ಎಂದು ಹೇಗೆ ಹೇಳುತ್ತೀರಿ ? ಎಂಬ ಆಶಂಕೆಗೆ ಉತ್ತರಿಸಲು 'ಪ್ರಶ್ನಶ್ಚ' ಎನ್ನಲಾಗಿದೆ. 'ಸುಮನಾ ಯಥಾ ಸ್ಯಾದ್ವೀತಮನ್ಯುಃ' ಎಂಬುದಾಗಿ 'ಸತ್ವಮಗ್ನಿಂ ಸ್ವರ್ಗ್ಯಮಧ್ಯೇಷಿ ಮೃತ್ಯೋ ಪ್ರಬ್ರೂಹಿ ತಮ್' ಎಂಬುದಾಗಿ, 'ಯೇ ಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ'ಎಂಬುದಾಗಿ ಮೂರರ ವಿಷಯದಲ್ಲೇ ಪ್ರಶ್ನೆಗಳು ಇರುವುದರಿಂದ ಉತ್ತರವೂ ಕೂಡ ಮೂರರ ಕುರಿತೇ ಇರಬೇಕು.

ಇಲ್ಲಿರುವ 'ಚ' ಶಬ್ದವು ಹೇತ್ವರ್ಥದಲ್ಲಿದೆ. ಕೊನೆಯ 'ಚ' ಶಬ್ದವು ಸಮುಚ್ಚಯವನ್ನು ಹೇಳುವುದಕ್ಕಾಗಿ ಇರುತ್ತದೆ.

ಉಪನಿಷತ್ತಿನಲ್ಲಿ ಪ್ರಶ್ನೆಯೇ ಮೊದಲಿದ್ದರೂ ಉತ್ತರದಲ್ಲಿರುವ 'ನಿಚಾಯ್ಯ' ವಾಕ್ಯವು ಪ್ರಕೃತಿ ಪರವಾಗಿದೆಯೆಂದು ಶಂಕಿಸಲಾಗಿದೆ. ಅದನ್ನು ನಿರಾಕರಣೆ ಮಾಡುವುದಕ್ಕಾಗಿ ಮೊದಲು ಉತ್ತರ ಎಂಬರ್ಥವನ್ನು ನೀಡುವ 'ಉಪನ್ಯಾಸ' ಪದವನ್ನು ಸೂತ್ರದಲ್ಲಿ ಉಲ್ಲೇಖಿಸಿದ್ದಾರೆ. 'ತ್ರಯಾಣಾಮೇವ ಚ' ಎಂದಷ್ಟೇ ಹೇಳಿದ್ದರೂ ಸಾಕಾಗುತ್ತಿತ್ತು. ಆದರೂ 'ಏವಂ' ಎಂದು ಹೇಳಿರುವುದರಿಂದ ಈ ಮೂರರ ಮಧ್ಯದಲ್ಲಿ ಪ್ರಧಾನವನ್ನು ಸೇರಿಸಿಕೊಳ್ಳಬಾರದು ಎಂಬ ಉದ್ದೇಶವಿದೆ. ಈ ಪ್ರಶ್ನೆಗಳ ಮೂರು ಪ್ರಕಾರಗಳನ್ನು ಮತ್ತು ಉಪನ್ಯಾಸವು ಪ್ರಶ್ನೆ ಮಾಡಿದ ಮೂರು ವಿಷಯಗಳನ್ನು ಕುರಿತೇ ಇರುತ್ತದೆ ಎಂದು ಹೇಳಲು ಪ್ರಶ್ನೆಗಳನ್ನು ಉಲ್ಲೇಖಿಸಲಾಗಿದೆ.

'ಮಹದ್ವಚ್ಚ' ಎಂಬ ಸೂತ್ರದ ವ್ಯಾಖ್ಯಾನ

ननु प्रवृत्तिनिमित्तस्त्वेऽपि प्रयोगप्राचुर्याभावान्मुख्यतो नाव्यक्तादिशब्दं ब्रह्मेत्यत आह - ।। महद्वच्च ।। १-४-८ ।।

चशब्दादव्यक्तादिशब्दं ब्रह्मैवेति समुच्चीयते । महद्वत् महच्छब्द ब्रह्म यथा तथेत्यर्थः ।

ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತ ಅವ್ಯಕ್ತತ್ವ. ಇದು ಬ್ರಹ್ಮನಲ್ಲಿ ಇದೆ ಎಂದು ಸಾಧನೆ ಮಾಡಿದರೂ ಪ್ರಯೋಗಪ್ರಾಚುರ್ಯವು ಬ್ರಹ್ಮನಲ್ಲಿ ಇರುವುದಿಲ್ಲ. ಆದ್ದರಿಂದ ಅವ್ಯಕ್ತಶಬ್ದದಿಂದ ಬ್ರಹ್ಮನು ಮುಖ್ಯವಾಗಿ ಹೇಗೆ ಪ್ರತಿಪಾದ್ಯನಾಗುತ್ತಾನೆ? ಎಂಬ ಆಕ್ಷೇಪಕ್ಕೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ -

'ಮಹದ್ವಚ್ಚ'

ಸೂತ್ರದಲ್ಲಿರುವ 'ಚ' ಶಬ್ದದಿಂದ ಅವ್ಯಕ್ತಾದಿಶಬ್ದಗಳಿಂದ ಬ್ರಹ್ಮನೇ ಪ್ರತಿಪಾದ್ಯನೆಂದು ಸಮುಚ್ಚಯ ಮಾಡಬೇಕು.

ಸೂತ್ರಾರ್ಥ - ಮಹದ್ವಚ್ಚ = 'ಮಹಾಂತಂ ವಿಭುಮಾತ್ಮಾಮ್' ಎಂಬ ಉಪನಿಷತ್ತಿನಲ್ಲಿ ಬ್ರಹ್ಮನಲ್ಲಿ 'ಮಹತ್' ಶಬ್ದವು ಹೇಗೆ ಮುಖ್ಯವಾಗಿ ಇದೆಯೋ, ಅದರಂತೆ ಅವ್ಯಕ್ತಶಬ್ದವು ಮುಖ್ಯವಾಗಿ ಬ್ರಹ್ಮನಲ್ಲಿ ಸಮನ್ವಯಗೊಳ್ಳುತ್ತದೆ.

'ಚಮಸವದವಿಶೇಷಾತ್' ಎಂಬ ಸೂತ್ರದ ವ್ಯಾಖ್ಯಾನ

महच्छब्दो महत्तत्त्वे प्रयोगप्राचुर्यवत्त्वेन ब्रह्मणि तद्धीनोऽपि ''महान्तं विभुमात्मानम्'' इत्यादौ यथा महत्त्वरूपतत्प्रवृत्तिनिमित्तसत्त्वान्मुख्यः तथाऽव्यक्तादिशब्दोऽन्यत्र प्रसिद्धया ब्रह्मणि तदभावेऽपि निमित्तातिशयान्मुख्य इति भावः ।

'ಮಹತ್' ಶಬ್ದದ ಪ್ರಯೋಗಪ್ರಾಚುರ್ಯವು ಮಹತ್ತತ್ವದಲ್ಲಿ ಇರುತ್ತದೆ ಹೊರತು, ಬ್ರಹ್ಮನಲ್ಲಿ ಇರುವುದಿಲ್ಲ. ಆದರೂ 'ಮಹತ್' ಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಮಹತ್ವವು ಬ್ರಹ್ಮನಲ್ಲಿರುವುದರಿಂದ 'ಮಹಾಂತಂ ವಿಭುಮಾತ್ಮಾನಮ್' ಇತ್ಯಾದಿ ಶ್ರುತಿಗಳಲ್ಲಿ 'ಮಹತ್' ಶಬ್ದದಿಂದ ಬ್ರಹ್ಮನೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆ. ಅದರಂತೆ ಅವ್ಯಕ್ತ ಮೊದಲಾದ

ಶಬ್ದಗಳು ಪ್ರಕೃತ್ಯಾದಿಗಳಲ್ಲಿ ಪ್ರಸಿದ್ಧವಾಗಿದ್ದರೂ ಬ್ರಹ್ಮನಲ್ಲಿ ಪ್ರಸಿದ್ಧವಾಗದೇ ಇದ್ದರೂ ಕೂಡ 'ಅವ್ಯಕ್ತತ್ವ' ಎಂಬ ಪ್ರವೃತ್ತಿನಿಮಿತ್ತವು ಹೆಚ್ಚಾಗಿ ಬ್ರಹ್ಮನಲ್ಲೇ ಇರುವುದರಿಂದ ಇವನೇ 'ಅವ್ಯಕ್ತ' ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

महच्छब्देऽपि विप्रतिपन्नं प्रति दृष्टान्तान्तरमाह -

॥ चमसवदविशेषात् ॥ १-४-९ ॥

अव्यक्तादि ब्रह्मैवेत्यस्ति । चमसशब्दो यज्ञपात्रे प्रसिद्धोऽपि यथा शिरसि मुख्यस्तथाऽव्यक्तादिरपि ब्रह्मैव तत्र मुख्य इत्यर्थः ।

'ಮಹತ್' ಶಬ್ದದ ಪ್ರಯೋಗಪ್ರಾಚುರ್ಯವು ಬ್ರಹ್ಮನಲ್ಲಿ ಇದೆಯೆಂಬ ವಿಷಯದಲ್ಲಿಯೂ ವಿಪ್ರತಿಪತ್ತಿಯಿದೆ ಎಂದು ಹೇಳುವ ವಾದಿಗೆ ಮತ್ತೊಂದು ದೃಷ್ಟಾಂತವನ್ನು ನೀಡುತ್ತಿದ್ದಾರೆ -

'ಚಮಸವದವಿಶೇಷಾತ್'

'ಅವ್ಯಕ್ತಾದಿ' 'ಬ್ರಹ್ಮೈವ' ಎಂಬೆರಡು ಪದಗಳನ್ನು ಸೂತ್ರದಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕು. ಸೂತ್ರಾರ್ಥ - ಚಮಸವತ್ = ಚಮಸ ಶಬ್ದವು ಯಜ್ಞಪಾತ್ರೆಯೆಂಬರ್ಥದಲ್ಲಿ ಪ್ರಸಿದ್ಧವಾಗಿದೆ. ಆದರೂ ಕೂಡ ನಮ್ಮ ಶಿರಸ್ಸಿನಲ್ಲಿ ಮುಖ್ಯವಾದ ಪ್ರಯೋಗ ಹೊಂದಿದೆ. ಅದರಂತೆ ಅವಿಶೇಷಾತ್ - ವೇದವಾಕ್ಯಗಳಲ್ಲಿ ವ್ಯತ್ಯಾಸವಿಲ್ಲದ ಕಾರಣ ಅವ್ಯಕ್ತಶಬ್ದವು ಜಡಪ್ರಕೃತಿಯಲ್ಲಿ ಪ್ರಸಿದ್ಧವಾಗಿದ್ದರೂ ಬ್ರಹ್ಮನಲ್ಲೇ ಮುಖ್ಯಪ್ರಯೋಗವನ್ನು ಕೂಡಿಸಬಹುದು ಎಂದು.

ननु ''इदं तच्छिर एष ह्यर्वाग्बिलश्चमस ऊर्ध्वबुध्न'' इत्यनुशासनसत्त्वात्तस्य तथात्वेऽप्यत्र कुत इत्यत उक्तम् – अविशेषात् । ''नामानि सर्वाणि'' इति श्रुतेः ''इदं तच्छिरः'' इति श्रुत्या अविशेषात् तत्साम्यात् । अस्या अप्यनुशासनरूपत्वादिति यावत् । समन्वयस्य गुणपूर्त्यर्थत्वेऽप्यत्र दोषवाचिनां तदुक्तिः ''प्राण ऋच इत्येव विद्यात्''

इत्यादौ सर्वशब्दवाच्यत्वस्यापि मुमुक्षुज्ञेयत्वोक्तेरिति बोध्यम् । स्पष्टमेतदग्रे कल्पनेत्यत्र ।। १ ।।

'ಇದಂ ತಚ್ಛಿರ ಏಷ ಹ್ಯರ್ವಾಗ್ಬಿಲಶ್ಚಮಸ ಊರ್ಧ್ವಬುಧ್ನಃ' ಎಂಬುದಾಗಿ ಬೃಹದಾರಣ್ಯಕೋಪನಿಷತ್ತಿನಲ್ಲಿ ಅನುಶಾಸನವಿದೆ. ಆದ್ದರಿಂದ 'ಚಮಸ' ಶಬ್ದವು ಶಿರಸ್ಸನ್ನೇ ಮುಖ್ಯವಾಗಿ ಹೇಳಬಹುದು. ಆದರೆ ಪ್ರಕೃತಿ, ಅವ್ಯಕ್ತ ಮೊದಲಾದ ಶಬ್ದಗಳು ಮುಖ್ಯವಾಗಿ ಬ್ರಹ್ಮನನ್ನೇ ಹೇಳುತ್ತವೆಂಬುದರಲ್ಲಿ ಇದು ದೃಷ್ಟಾಂತವಾಗುವುದಿಲ್ಲವಲ್ಲವೇ? ಈ ಆಶಂಕೆಗೆ 'ಅವಿಶೇಷಾತ್' ಎಂಬುದರಿಂದ ಉತ್ತರಿಸಿದ್ದಾರೆ. 'ನಾಮಾನಿ ಸರ್ವಾಣಿ' ಇತ್ಯಾದಿ ಶ್ರುತಿಗೆ, 'ಇದಂ ತಚ್ಛಿರಃ' ಎಂಬ ಶ್ರುತಿಯಿಂದ 'ಅವಿಶೇಷಾತ್' ಸಾಮ್ಯವಿರುವ ಕಾರಣ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಅನುಶಾಸನ ರೂಪವಾದ್ದರಿಂದ ಅವ್ಯಕ್ತಾದಿಶಬ್ದಗಳು ಬೇರೆಡೆ ಪ್ರಸಿದ್ಧವಾಗಿದ್ದರೂ ಪರಮಾತ್ಮನಲ್ಲಿ ಮುಖ್ಯವಾಗಿ ಕೂಡಿಸಬೇಕು.

ದೋಷವಾಚಕ ಶಬ್ದಗಳ ಸಮನ್ವಯವು ಗುಣಪೂರ್ಣತ್ವದ ಸಾಧನೆಗೋಸ್ಕರವೇ ಹೊರಟಿರುತ್ತದೆ. ಆದ್ದರಿಂದ 'ಪ್ರಾಣ ಋಚ ಇತ್ಯೇವ ವಿದ್ಯಾತ್' ಇತ್ಯಾದಿ ಶ್ರುತಿಗಳಲ್ಲಿ ಮುಮುಕ್ಷು ಆದವನು ಸರ್ವಶಬ್ದವಾಚ್ಯತ್ವವನ್ನು ತಿಳಿಯಬೇಕು ಎಂದು ಹೇಳಲಾಗಿದೆ. ಆದ್ದರಿಂದ ದೋಷವಾಚಕ ಶಬ್ದಗಳ ಸಮನ್ವಯವು ಈ ಪಾದದಲ್ಲಿ ಸಂಗತವೇ ಆಗಿದೆ. 'ಕಲ್ಪನೋಪದೇಶಾಚ್ಚ ಮಧ್ವಾದಿವದವಿರೋಧಾತ್' ಎಂಬ ಸೂತ್ರದಲ್ಲಿ ಈ ವಿಷಯವು ಮತ್ತಷ್ಟು ಸ್ಪಷ್ಟವಾಗುತ್ತದೆ. ತಂತ್ರದೀಪಿಕೆಯಲ್ಲಿ ಪ್ರಥಮಾಧ್ಯಾಯದ ತೃತೀಯಪಾದವು ಸಮಾಪ್ತವಾಯಿತು.

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಆನುಮಾನಿಕಾಧಿಕರಣ
ಮತ್ತು
ವಿಮರ್ಶೆ

ಆನುಮಾನಿಕಾಧಿಕರಣದ ಶರೀರವನ್ನು ಶಾಂಕರಭಾಷ್ಯದಲ್ಲಿ ಹಾಗೂ ರಾಮಾನುಜಭಾಷ್ಯದಲ್ಲಿ ಒಂದೇ ರೀತಿಯಾಗಿ ರಚನೆ ಮಾಡಿದ್ದಾರೆ. ಈಕ್ಷತ್ಯಧಿಕರಣದಲ್ಲಿ ಪ್ರಕೃತಿಯು ಶಬ್ದಪ್ರತಿಪಾದ್ಯವಲ್ಲವೆಂದು ಹೇಳಲಾಗಿತ್ತು. ಇದು ತಪ್ಪು. ಏಕೆಂದರೆ 'ಮಹತಃ ಪರಮವ್ಯಕ್ತಮ್' ಎಂಬ ವಾಕ್ಯದಲ್ಲಿ ಪ್ರಕೃತಿಯು ಶಬ್ದದಿಂದ ಪ್ರತಿಪಾದ್ಯವಾಗುತ್ತಿದೆಯೆಂದು ಪೂರ್ವಪಕ್ಷ. ಅದರ ಪರಿಹಾರಕ್ಕಾಗಿ ಈ ಅಧಿಕರಣವು ಹೊರಟಿದೆಯೆಂದು ಸಿದ್ಧಾಂತ ಮಾಡಿದ್ದಾರೆ.

ಇವರ ಈ ಅಧಿಕರಣಶರೀರವೂ ಸರಿಯಲ್ಲ. ಏಕೆಂದರೆ ಪ್ರಧಾನಕ್ಕೆ ಯಾವುದೇ ಶಬ್ದಗಳಿಂದಲೂ ಪ್ರತಿಪಾದ್ಯತ್ವವು ಇಲ್ಲವೆಂದು ಸಿದ್ಧಾಂತ ಮಾಡುತ್ತಿದ್ದಿರೋ, ಅಥವಾ ಜಗತ್ ಕಾರಣತ್ವಪ್ರತಿಪಾದಕವಾದ ಶಬ್ದಗಳಿಂದ ಪ್ರತಿಪಾದ್ಯತ್ವವಿಲ್ಲವೆಂದು ಸಿದ್ಧಾಂತ ಮಾಡುತ್ತಿದ್ದೀರೋ, ಪ್ರಧಾನವು ಯಾವುದೇ ಶಬ್ದಗಳಿಂದಲೂ ಕೂಡ ಪ್ರತಿಪಾದ್ಯವಲ್ಲವೆಂದು ನಿರಾಕರಿಸುತ್ತಿದ್ದೇವೆಂಬ ಮೊದಲನೆಯ ಪಕ್ಷವು ಸರಿಯಲ್ಲ. ಏಕೆಂದರೆ ನಿಮ್ಮ ಮತದಲ್ಲಿ ಸಕಲಶಬ್ದಗಳ ಸಮನ್ವಯವು ಈ ಅಧ್ಯಾಯದ ಉದ್ದೇಶವೆಂದು ಸಮನ್ವಯ ಸೂತ್ರದಲ್ಲಿ ಪ್ರತಿಜ್ಞೆ ಮಾಡಿಲ್ಲ. ಆದ್ದರಿಂದ ಪ್ರಧಾನಕ್ಕೆ ಅವ್ಯಕ್ತಾದಿಶಬ್ದ ಪ್ರತಿಪಾದ್ಯತ್ವವನ್ನು ಹೇಳಿದರೂ ಕೂಡ ಸಮನ್ವಯಸೂತ್ರದ ಪ್ರತಿಜ್ಞೆಗೇನೂ ವಿರೋಧ ಬರುವುದಿಲ್ಲ. ಆದ್ದರಿಂದ ಯಾವುದೇ ಶಬ್ದಗಳಿಂದಲೂ ಪ್ರಧಾನವು ಪ್ರತಿಪಾದ್ಯವಲ್ಲವೆಂದು ಸಮರ್ಥನೆ ಮಾಡುವುದರಿಂದ ನಿಮಗೆ ಯಾವುದೇ ರೀತಿಯ ಪ್ರಯೋಜನವೂ ಕೂಡ ಇರುವುದಿಲ್ಲ.

ಮತ್ತು ಪ್ರಕೃತಿ ಮೊದಲಾದವು ಶ್ರುತಿಪ್ರತಿಪಾದ್ಯವಾಗಿವೆಯೆಂಬುದನ್ನು ಮುಂದೆ ನಾವೇ ಸಮರ್ಥಿಸುತ್ತೇವೆ. ಆದ್ದರಿಂದ ಶಬ್ದಪ್ರತಿಪಾದ್ಯವಲ್ಲವೆಂದು ಸಮರ್ಥಿಸುವುದು ನಿಮ್ಮಿಂದ ಸಾಧ್ಯವಾಗುವುದಿಲ್ಲ. ಮತ್ತು ಈಕ್ಷತ್ಯಧಿಕರಣದ ಸೂತ್ರದಲ್ಲಿಯೂ ಕೂಡ ಪ್ರಧಾನವು ಯಾವುದೇ ಶಬ್ದದಿಂದಲೂ ಪ್ರತಿಪಾದ್ಯವಲ್ಲವೆಂದು ಸಮರ್ಥಿಸುವುದು ಕೂಡುವುದಿಲ್ಲ.

ಏಕೆಂದರೆ ಹಾಗೇ ಸಮರ್ಥನೆ ಮಾಡುವುದರಿಂದ ಯಾವುದೇ ಪ್ರಯೋಜನವೂ ಇಲ್ಲ. ಮತ್ತು ಹಾಗೇ ಸಮರ್ಥನೆ ಮಾಡಲು ಸಾಧ್ಯವೂ ಇರುವುದಿಲ್ಲ.

ಇನ್ನು ಜಗತ್ಕಾರಣತ್ವಪ್ರತಿಪಾದಕವಾದ ಶಬ್ದಗಳಿಂದಷ್ಟೇ ಪ್ರಧಾನವು ಪ್ರತಿಪಾದ್ಯವಲ್ಲವೆಂಬ ಎರಡನೆಯ ಪಕ್ಷವನ್ನು ಹೇಳಬೇಕು. ಆದರೆ ಪ್ರಕೃತ 'ಮಹತಃ ಪರಮ್' ಇತ್ಯಾದಿ ಶ್ರುತಿಯು ಜಗತ್ಕಾರಣತ್ವವನ್ನು ಹೇಳುತ್ತಲೇ ಇಲ್ಲ. 'ಮಹತಃ ಪರಮ್' ಎಂಬಲ್ಲಿರುವ ಪರಶಬ್ದದಿಂದ ಕಾರಣತ್ವವು ತಿಳಿಯುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಯಾವರೀತಿಯಾಗಿ 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿರುವ 'ಪರಃ' ಎಂಬ ಶಬ್ದವು ಕೇವಲ ಉತ್ತಮ ಎಂಬರ್ಥವನ್ನಷ್ಟೇ ಹೇಳುತ್ತಿದೆಯೋ, ಅದರಂತೆ 'ಪರ' ಶಬ್ದವೂ ಕೂಡ ಉತ್ತಮ ಎಂದಷ್ಟೇ ಅರ್ಥವನ್ನು ಹೇಳುತ್ತಿದೆ. ಹೊರತು, ಕಾರಣತ್ವವನ್ನು ಹೇಳುತ್ತಿಲ್ಲ. ಆದ್ದರಿಂದ ಅದ್ವೈತಿಗಳ ಹಾಗೂ ರಾಮಾನುಜರ ಪ್ರಕಾರ ಪೂರ್ವಪಕ್ಷವೇ ಹುಟ್ಟುವುದಿಲ್ಲ.

ಶಾಂಕರಭಾಷ್ಯದಲ್ಲಿ ಹಾಗೂ ರಾಮಾನುಜಭಾಷ್ಯದಲ್ಲಿ ಅವ್ಯಕ್ತಶಬ್ದದಿಂದ ಪ್ರಕೃತಿ ಪ್ರತಿಪಾದ್ಯವಲ್ಲವೆಂದು ಹೇಳಿದ್ದಾರೆ. ಇದು ಸರಿಯಲ್ಲ. ಏಕೆಂದರೆ, ಅವ್ಯಕ್ತಶಬ್ದಕ್ಕೆ ಪ್ರಕೃತಿಯು ಅರ್ಥವಲ್ಲವೆಂದಾದರೆ, ಬ್ರಹ್ಮನೆಂಬರ್ಥವನ್ನು ಹೇಳುತ್ತೀರೋ? ಅಥವಾ ಅವಿದ್ಯಾದಿಗಳನ್ನು ಅರ್ಥವೆಂದು ಹೇಳುತ್ತೀರೋ?

ಬ್ರಹ್ಮನೇ ಅವ್ಯಕ್ತಶಬದ ಅರ್ಥವೆಂದು ನೀವು ಅಂಗೀಕಾರ ಮಾಡಿಲ್ಲ. ಅವಿದ್ಯಾದಿಗಳನ್ನು ಅರ್ಥವೆಂದು ಹೇಳುವುದೂ ಕೂಡ ಸರಿಯಲ್ಲ. ಏಕೆಂದರೆ ಬ್ರಹ್ಮನಲ್ಲಿ ಅವ್ಯಕ್ತಶಬ್ದದ ಸಮನ್ವಯವನ್ನು ಮಾಡದ ಕಾರಣ ಸಮನ್ವಯಾಧ್ಯಾಯದಿಂದ ಅಸಾಂಗತ್ಯ ಬರುತ್ತದೆ.

ಮತ್ತು ಬ್ರಹ್ಮನ ಲಕ್ಷಣಕ್ಕೆ ಪ್ರಧಾನದಲ್ಲಿ ಅತಿವ್ಯಾಪ್ತಿದೋಷವು ಪ್ರಾಪ್ತವಾದಾಗ ಅದರ ಪರಿಹಾರಕ್ಕೆ ಅವಿದ್ಯಾದಿಗಳು ಪ್ರತಿಪಾದ್ಯವೆಂದು ಹೇಳಿದರೆ, ಅವಿದ್ಯಾದಿಗಳಲ್ಲಿಯೇ ಅತಿವ್ಯಾಪ್ತಿ ಬರುತ್ತದೆ. ಆದ್ದರಿಂದ ಪ್ರಧಾನದಲ್ಲಿ ಅತಿವ್ಯಾಪ್ತಿಯನ್ನು ಪರಿಹರಿಸಲು ಹೋಗಿ, ಅವಿದ್ಯಾದಿಗಳಲ್ಲಿ ಅತಿವ್ಯಾಪ್ತಿಯನ್ನು ಒಪ್ಪಿಕೊಂಡಂತಾಯಿತು.

ಕಾರಣತ್ವಂ ಪ್ರಧಾನಸ್ಯ ನಿರಸ್ಯ ಸ್ಥಾಪಿತಂ ಯದಿ ।
ಅವಿದ್ಯಾದೇಸ್ತದಾ ಕೋಸು ಲಾಭೋಽಸ್ತಿ ಬ್ರಹ್ಮವಾದಿನಃ ॥೧॥

ಬ್ರಹ್ಮವಾದಿಯಾದ ನಿನಗೆ ಕಾರಣತ್ವವನ್ನು ಪ್ರಧಾನದಲ್ಲಿ ನಿರಾಕರಿಸಿ, ಅವಿದ್ಯಾದಿಗಳಲ್ಲಿ ಸ್ಥಾಪನೆ ಮಾಡುವುದಾದರೆ, ಏನು ಲಾಭವಿದೆ ?

ವೃಕೋಣಾಪಹೃತಂ ಮೇಷಮಾದಾಯಾತಿಪ್ರಯತ್ನತಃ ।
ಸ ಚೇದ್ವ್ಯಾಘ್ರಾಯ ದೀಯೇತ ಕೋ ಲಾಭಸ್ತೇನ ಸಿಧ್ಯತಿ ॥೨॥

ತೋಳದಿಂದ ಕುರಿಯನ್ನು ಮಹಾಪ್ರಯತ್ನದಿಂದ ರಕ್ಷಣೆ ಮಾಡಿ ಹುಲಿಯ ಬಾಯಿಯಲ್ಲಿ ನೀಡಿದರೆ ನಿನಗೇನು ಲಾಭವಾಗುತ್ತದೆ.

ಶಂಕೆ - 'ಪರ' ಶಬ್ದಕ್ಕೆ ಕೇವಲ 'ಉತ್ಕರ್ಷ' ಎಂದಷ್ಟೇ ಅರ್ಥ. ಹೊರತು, ಕಾರಣತ್ವವೆಂದರ್ಥವಲ್ಲ. ಹೀಗೆ ಸಿದ್ಧಾಂತ ಮಾಡುತ್ತೇವೆ. ಆದ್ದರಿಂದ ಅವಿದ್ಯಾದಿಗಳೂ ಕೂಡ ಅವ್ಯಕ್ತಾದಿಶಬ್ದಗಳಿಂದ ಪ್ರತಿಪಾದ್ಯವಾದರೆ, ಅತಿಪ್ರಸಂಗಾದಿ ದೋಷಗಳಿಗೆ ಅವಕಾಶವಿಲ್ಲವಲ್ಲವೇ?

ಸಮಾಧಾನ - 'ಪರ'ಶಬ್ದಕ್ಕೆ 'ಉತ್ಕರ್ಷ' ಎಂಬರ್ಥವನ್ನು ಹೇಳುವುದಾದರೆ, ಪ್ರಕೃತಿಯೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯವಾಗಬಹುದಲ್ಲವೇ? ಪ್ರಕೃತಿಯು ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೆಂದು ಹೇಳಿದಾಗ, ಅತಿಪ್ರಸಂಗಾದಿ ದೋಷಗಳಿಗೆ ಅವಕಾಶವೇ ಇಲ್ಲ. ಹೀಗಿರುವಾಗ ಇದರ ಪರಿಹಾರಕ್ಕಾಗಿ ಪ್ರಯಾಸ ಪಡುವುದು ವ್ಯರ್ಥವಾಗುತ್ತದೆ.

ಒಂದು ವೇಳೆ ಸಾಂಖ್ಯರಿಗೆ ಅಭಿಮತವಾದ ಈಶ್ವರಾನಧೀನವಾದ ಪ್ರಕೃತಿಯನ್ನು ನಿರಾಕರಣೆ ಮಾಡುವ ಉದ್ದೇಶವು ನಿನ್ನದಾಗುವುದಾದರೆ 'ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ' ಇತ್ಯಾದಿ ಸ್ಥಳಗಳಲ್ಲಿಯೂ ಅರ್ಥಾದಿ ಶಬ್ದಗಳಿಗೆ ಸಾಂಖ್ಯರಿಗೆ ಅಭಿಮತವಾದ ಈಶ್ವರಾನಧೀನವಾದಶಬ್ದಸ್ಪರ್ಶಾದ್ಯರ್ಥವನ್ನು ನಿರಾಕರಣೆ ಮಾಡಬೇಕಾದೀತು. ಮತ್ತು 'ಆಕಾಶಾದ್ವಾಯುಃ' ಇತ್ಯಾದಿ ಸ್ಥಳಗಳಲ್ಲಿಯೂ ಈಶ್ವರಾನಧೀನವಾದ ಆಕಾಶಾದ್ಯರ್ಥವನ್ನು ನೀನು ನಿರಾಕರಣೆ ಮಾಡಬೇಕಾದೀತು.

ಮತ್ತು ಜಗತ್ತಿಗೆ ಉಪದಾನಕಾರಣವಾದ ಪ್ರಕೃತಿಯು ಅನೇಕ ಶ್ರುತಿ-ಸ್ಮೃತಿಗಳಿಂದ ಪ್ರತಿಪಾದ್ಯವಾಗಿದೆಯೆಂದು ನೀನೂ ಕೂಡ ಅಂಗೀಕರಿಸಿರುವಿ. ಅವ್ಯಕ್ತಶಬ್ದದ ಅರ್ಥವೆನಿಸಿದ ಪ್ರಕೃತಿಯು ಗುಣತ್ರಯಾತ್ಮಕವಾಗಿದೆ. ಅನಾದಿಯಾದ ಭಾವರೂಪವಾದ ಪದಾರ್ಥವಾಗಿದೆ. ಇಂತಹ ಪ್ರಕೃತಿತತ್ವವು 'ಮಾಯಾಂ ತು ಪ್ರಕೃತಿಂ ವಿದ್ಯಾತ್' 'ದೈವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ'

'ಗೌರನಾದ್ಯಂತವತೀ' 'ಯಸ್ಯಾವ್ಯಕ್ತಂ ಶರೀರಮ್' ಇವೇ ಮೊದಲಾದ ಶ್ರುತಿಗಳಿಂದ ಮತ್ತು 'ಸತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ' 'ಯತ್ತತ್ತ್ರಿಗುಣಮವ್ಯಕ್ತಮ್' ಇವೇ ಮೊದಲಾದ ಸ್ಮೃತಿಗಳಿಂದಲೂ ಪ್ರತಿಪಾದ್ಯವಾಗಿರುತ್ತದೆ.

ಈ ಶ್ರುತಿ-ಸ್ಮೃತಿಗಳಲ್ಲಿ ಪ್ರತಿಪಾದ್ಯವಾದದ್ದು ಭೂತಸೂಕ್ಷ್ಮವೆಂದು ನೀನು ವಾದಿಸಬಹುದು. ಹಾಗಾದಲ್ಲಿ ಕೇವಲ ಹೆಸರಿನಲ್ಲಷ್ಟೇ ವಿವಾದ ಮಾಡಿದಂತಾಗುತ್ತದೆ. ಎರಡರ ಲಕ್ಷಣವು ಒಂದೇ ಆಗಿರುವಾಗ, ತತ್ವದಲ್ಲಿ ಏನೂ ವ್ಯತ್ಯಾಸವಿಲ್ಲದಿದ್ದಾಗ ಹೆಸರಿನಲ್ಲಿ ವಾದ ಮಾಡಿದಂತಾಗುತ್ತದೆ. ಮತ್ತು ಈಶ್ವರಾನಧೀನವಾದ ಸತ್ಯತ್ವಾದಿಗಳು ಆಕಾಶಾದಿಗಳಲ್ಲೂ ಕೂಡ ಇರುವುದಿಲ್ಲ. ಆದ್ದರಿಂದ ಆಕಾಶಾದಿಗಳಲ್ಲಿಯೂ ಕೂಡ ಈಶಾನಧೀನಸತ್ಯತ್ವವನ್ನು ಈ ಅಧಿಕರಣದಲ್ಲಿ ನಿರಾಕರಣೆ ಮಾಡಬಹುದಿತ್ತಲ್ಲವೇ?

'ಸೂಕ್ಷ್ಮಂ ತು ತದರ್ಹತ್ವಾತ್' ಎಂಬ ಎರಡನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನ ಮಾಡಿದ್ದಾರೆ - ಶರೀರವು ಸ್ಥೂಲವಾಗಿರುವ ಕಾರಣ ಅವ್ಯಕ್ತಶಬ್ದದಿಂದ ಪ್ರತಿಪಾದ್ಯ-ವಾಗಿರುವುದಿಲ್ಲವೆಂದು ಆಶಂಕಿಸಬಾರದು.

ಏಕೆಂದರೆ ಶರೀರಕ್ಕೆ ಭೂತಸೂಕ್ಷ್ಮವು ಕಾರಣವಾಗಿದೆ. ಶರೀರವು ನಾಮ ಹಾಗೂ ರೂಪಗಳಿಂದ ಅಭಿವ್ಯಕ್ತವಾಗಿದ್ದರೂ ಕೂಡ ಶರೀರಕ್ಕೆ ಕಾರಣವಾದ ಭೂತಸೂಕ್ಷ್ಮವು ನಾಮದಿಂದಾಗಲೀ, ರೂಪದಿಂದಾಗಲೀ ಅಭಿವ್ಯಕ್ತವಾಗಿಲ್ಲ. ಹೀಗೆ ಅನಭಿವ್ಯಕ್ತಸ್ವರೂಪದಲ್ಲಿ ಶರೀರವು ಮೊದಲು ಇರುತ್ತದೆ. ಹೀಗೆ ಶರೀರಕ್ಕೆ ಕಾರಣವಾದ ಭೂತಸೂಕ್ಷ್ಮವು ಅವ್ಯಕ್ತಶಬ್ದದಿಂದ ಪ್ರತಿಪಾದ್ಯವಾಗಲು ಅರ್ಹವಾಗಿದೆ, ಆದ್ದರಿಂದ ತತ್ಕಾರ್ಯವಾದ ಶರೀರವೂ ಕೂಡ ಅಮುಖ್ಯವೃತ್ತಿಯಿಂದ ಅವ್ಯಕ್ತಶಬ್ದಪ್ರತಿಪಾದ್ಯವಾಗುತ್ತದೆಂದು ಎರಡನೆಯ ಸೂತ್ರಾರ್ಥ.

ಇದೂ ಕೂಡ ಸರಿಯಲ್ಲ. ಶರೀರಕ್ಕೆ ಕಾರಣವಾಗಿರುವ ಭೂತಸೂಕ್ಷ್ಮವನ್ನೇ 'ಮಹತಃ ಪರಮವ್ಯಕ್ತಂ' ಎಂಬಲ್ಲಿರುವ ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೆಂದು ಹೇಳಲು ಬರುತ್ತದೆ. ಹೀಗಿರುವಾಗ ಶರೀರವನ್ನು ಅವ್ಯಕ್ತಶಬ್ದದಿಂದ ಸ್ವೀಕರಿಸಿ ಗೌಣಾರ್ಥ ಮಾಡುವುದು ಯುಕ್ತವಾಗುವುದಿಲ್ಲ. ವಾಸ್ತವಿಕವಾಗಿ 'ಶರೀರಂ ರಥಮೇವ ಚ' ಎಂಬುದಾಗಿ ಹಿಂದೆ ಶರೀರವು ಪ್ರಕೃತವಾಗಿದ್ದರೂ ಮಹತ್‌ಪರತ್ವವನ್ನು ಅಂತಹ ಶರೀರದಲ್ಲಿ ಹೇಳಲು ಸಾಧ್ಯವಿಲ್ಲ. ಮತ್ತು

ಅವ್ಯಕ್ತತ್ವವನ್ನೂ ಕೂಡ ಶರೀರದಲ್ಲಿ ಹೇಳಲು ಸಾಧ್ಯವಿಲ್ಲ. ಆದರೆ ಭೂತಸೂಕ್ಷ್ಮದಲ್ಲಿ ಮಹತ್ ಪರತ್ವವಾಗಲೀ, ಅವ್ಯಕ್ತತ್ವವಾಗಲೀ ಇರುವ ಕಾರಣ, ಇದನ್ನೇ ಅವ್ಯಕ್ತಶಬ್ದಪ್ರತಿಪಾದ್ಯವೆಂದು ಹೇಳಬಹುದಿತ್ತು.

ಹಾಗಾದರೆ ಶರೀರವನ್ನಾಗಲೀ, ಶರೀರಕ್ಕೆ ಕಾರಣವಾದ ಭೂತಸೂಕ್ಷ್ಮವನ್ನಾಗಲೀ, ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೆಂದು ಹೇಳುವುದಿಲ್ಲ. ಶಾಂಕರಭಾಷ್ಯಕ್ಕೆ ಅನುಸಾರಿಯಾಗಿ ಅವಿದ್ಯೆಯನ್ನೇ ಅವ್ಯಕ್ತಶಬ್ದಾರ್ಥವೆಂದು ಹೇಳಬಹುದಲ್ಲವೇ ? ಎಂದೂ ಕೂಡ ಶಂಕಿಸಬಾರದು. ಅವಿದ್ಯೆಯನ್ನು ಅವ್ಯಕ್ತಶಬ್ದದಿಂದ ಸ್ವೀಕರಿಸಿದಲ್ಲಿ ಸೂತ್ರದಲ್ಲಿರುವ ಶರೀರಶಬ್ದದ ವಿರೋಧ ಬರುತ್ತದೆ. ಶರೀರಶಬ್ದಕ್ಕೆ ಅವಿದ್ಯೆಯೆಂಬರ್ಥವನ್ನಂತೂ ಮಾಡಲು ಸುತರಾಂ ಸಾಧ್ಯವಿಲ್ಲ.

ಮತ್ತು ನೀವೇ ಹೇಳಿದಂತೆ ಹಿಂದಿನ ಪ್ರಕರಣದಲ್ಲಿ ಶರೀರವೇ ಪ್ರಕೃತವಾಗಿದೆ. ಮತ್ತು ಪರಿಶೇಷಪ್ರಮಾಣದಿಂದ ಶರೀರವೇ ವಿವಕ್ಷಿತವಾಗಿದೆ. ಇಂತಹ ಶರೀರವನ್ನು ಬಿಟ್ಟು, ಅವಿದ್ಯಾಪರತ್ವವನ್ನು ಹೇಳುವುದಾದರೆ, ಸಾಂಖ್ಯರಿಗೆ ಅಭಿಮತವಾದ ಪ್ರಧಾನಪರತ್ವವನ್ನೇ ಹೇಳಬಹುದಲ್ಲವೇ? ಅಂತಹ ಪ್ರಧಾನವನ್ನು ಬಿಟ್ಟು ಅವಿದ್ಯಾಪರತ್ವವನ್ನು ಹೇಳುವುದರಲ್ಲಿ ಏನು ಅರ್ಥವಿದೆ?

ಮತ್ತು ಅವಿದ್ಯೆಯು ಸಾಕ್ಷಿಸಿದ್ಧವಾಗಿ ಯಾವಾಗಲೂ ವ್ಯಕ್ತವೇ ಆಗಿರುತ್ತದೆ. ಹೀಗಿರುವಾಗ ಅವ್ಯಕ್ತತ್ವ ಎಂಬ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವು ಅವಿದ್ಯೆಯಲ್ಲಿ ಸರ್ವಥಾ ಬರುವುದಿಲ್ಲ. ಅವ್ಯಕ್ತತ್ವಕ್ಕೆ ಪ್ರಯೋಜಕವಾದ ಸೂಕ್ಷ್ಮತ್ವವೂ ಕೂಡ ಅವಿದ್ಯೆಯಲ್ಲಿರುವುದಿಲ್ಲ.

'ತದಧೀನತ್ವಾದರ್ಥವತ್' ಎಂಬ ಮೂರನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನ ಮಾಡುತ್ತಾರೆ - ಬೀಜರೂಪವಾದ ಶರೀರಾದಿಕಾರ್ಯಗಳಿಗೆ ಪ್ರಾಗವಸ್ಥಾರೂಪವಾದ, ಅವ್ಯಾಕೃತವಾದ = ಅನಾದಿಯಾದ, ಅವ್ಯಕ್ತಶಬ್ದಕ್ಕೆ ಅರ್ಹವಾದ ಒಂದು ವಸ್ತುವನ್ನು ನೀವು ಸ್ವೀಕಾರ ಮಾಡುವುದಾದರೆ, ಸಾಂಖ್ಯಮತವನ್ನು ಪ್ರವೇಶಿಸಿದಂತಾಯಿತಲ್ಲವೇ? ಏಕೆಂದರೆ ಸಾಂಖ್ಯರೂ ಕೂಡ ಜಗತ್ತಿನ ಪ್ರಾಗವಸ್ಥಾನವನ್ನೇ ಪ್ರಧಾನವೆಂದು ಕರೆಯುತ್ತಾರೆ. ಹೀಗೆ ಶಂಕಿಸಬಾರದು.

ಏಕೆಂದರೆ ನಾವು ಅಂಗೀಕರಿಸುತ್ತಿರುವ ಪ್ರಾಗವಸ್ಥೆಯು ಪರಮೇಶ್ವರನ ಅಧೀನವಾಗಿದೆ. ಆದರೆ ಸಾಂಖ್ಯರು ಹೇಳುವ ಪ್ರಧಾನವು ಪರಮೇಶ್ವರನ ಅನಧೀನವಾಗಿ ಸ್ವತಂತ್ರ-ವಾಗಿರುವಂತಹದ್ದು. ಹಾಗಾಗಿ ಸಾಂಖ್ಯಮತಪ್ರವೇಶದೋಷವು ಬರುವುದಿಲ್ಲ.

ಪ್ರಾಗವಸ್ಥಾಪನ್ನವಾದ ಭೂತಸೂಕ್ಷ್ಮವನ್ನು ಒಪ್ಪುವುದು ವ್ಯರ್ಥವಲ್ಲ. ಬೀಜರೂಪವಾದ ಆ ವಸ್ತುವು ಸಾರ್ಥಕವೇ ಆಗಿದೆ. ಏಕೆಂದರೆ ಭೂತಸೂಕ್ಷ್ಮವಿಲ್ಲದೇ ಈ ಜಗತ್ತನ್ನು ಸೃಷ್ಟಿಸಲು ಈಶ್ವರನಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಉಪಾದಾನಕಾರಣಕ್ಕೋಸ್ಕರ ಬೀಜರೂಪವಾದ ವಸ್ತುವನ್ನು ಒಪ್ಪಲೇಬೇಕು.

ಈ ಸೂತ್ರವ್ಯಾಖ್ಯಾನವೂ ಸರಿಯಿಲ್ಲ. ಏಕೆಂದರೆ ನಿಮ್ಮ ಮತದ ಪ್ರಕಾರ ಹಿಂದಿನ ಎರಡು ಸೂತ್ರಗಳಲ್ಲಿ ಈಶ್ವರನು ಪ್ರಕೃತನೇ ಆಗಿಲ್ಲ. ಹೀಗಿರುವಾಗ 'ತತ್' ಶಬ್ದದಿಂದ ಅಪ್ರಕೃತವಾದದ್ದನ್ನು ಪರಾಮರ್ಶ ಮಾಡಿದಂತಾಗುತ್ತದೆ. ಮತ್ತು 'ತದಧೀನತ್ವಾತ್' ಎಂಬ ಹೇತುವಿಗೆ ಅಲ್ಲಿಯೇ ಶ್ರುತವಾದ 'ಅರ್ಥವತ್ವ' ಎಂಬ ಸಾಧ್ಯದ ಜೊತೆಗೆ ಅನ್ವಯ ಮಾಡದೇ 'ಸಾಂಖ್ಯಮತಾಪತ್ತಿಃ ನ' ಎಂಬುದನ್ನು ಅಧ್ಯಾಹಾರ ಮಾಡಿಕೊಂಡು, ಅಂತಹ ಸಾಧ್ಯದಲ್ಲಿ ಅನ್ವಯ ಮಾಡುವುದು ಕೂಡುವುದಿಲ್ಲ.

'ಯಸ್ಯಾವ್ಯಕ್ತಂ ಶರೀರಮ್' ಇವೇ ಮೊದಲಾದ ಶ್ರುತಿಗಳ ಆಧಾರದಲ್ಲಿ ಪ್ರಕೃತಿಗೆ ನೀವು ಸ್ವಾತಂತ್ರ್ಯವನ್ನಷ್ಟೇ ಅಲ್ಲಗಳೆಯಬೇಕು. ಇದನ್ನು ಬಿಟ್ಟು ಪ್ರಕೃತಿಯು ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೇ ಅಲ್ಲವೆಂಬ ನಿರಾಕರಣೆ ಅಯುಕ್ತ.

ಅದ್ವೈತಿಗಳು ನಾಲ್ಕನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - ಸತ್ವರಜಸ್ತಮೋ-ಗುಣಾತ್ಮಕವಾದ ಪ್ರಕೃತಿ ಹಾಗೂ ಜೀವ ಈ ಎರಡು ಪದಾರ್ಥಗಳ ಭೇದಜ್ಞಾನದಿಂದ ಮೋಕ್ಷವಾಗುತ್ತದೆಂದು ಸಾಂಖ್ಯರು ಹೇಳುತ್ತಾರೆ. ಇವರ ಈ ಮಾತಿನಿಂದ ಪ್ರಕೃತಿಯೂ ಕೂಡ ಜ್ಞೇಯವೆಂಬುದು ಸಾಂಖ್ಯರ ಅಭಿಪ್ರಾಯವೆಂದು ತಿಳಿಯುತ್ತದೆ. ಆದರೆ ಪ್ರಕೃತ ಶ್ರುತಿಯಲ್ಲಿರುವ ಅವ್ಯಕ್ತಕ್ಕೆ ಜ್ಞೇಯತ್ವವನ್ನು ಹೇಳಿರುವುದಿಲ್ಲ. ಆದ್ದರಿಂದ ಇಲ್ಲಿರುವ ಅವ್ಯಕ್ತಶಬ್ದವು ಪ್ರಕೃತಿಪರವಾಗುವುದಿಲ್ಲ.

ಇದೂ ಕೂಡ ತಪ್ಪು. ಶ್ರುತಿಯಲ್ಲಿ 'ಜ್ಞೇಯಂ' ಎಂದು ಹೇಳದ್ದಿದರೂ 'ಮಹತಃ ಪರಮವ್ಯಕ್ತಮ್' ಎಂದು ಹೇಳಿರುವುದರಿಂದಲೇ ಪ್ರಕೃತಿಗೆ ಜ್ಞೇಯತ್ವವು ಸಿದ್ಧವಾಗುತ್ತದೆ.

ಮತ್ತು 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿರುವ 'ಪರ' ಶಬ್ದಕ್ಕೆ 'ವಿಲಕ್ಷಣ' ಎಂಬರ್ಥವು ಇರುವುದರಿಂದ ಪ್ರಕೃತಿಗಿಂತಲೂ ಪುರುಷನು ವಿಲಕ್ಷಣನೆಂದು ಶ್ರುತಿಯಲ್ಲಿ ತಿಳಿಸಲಾಗಿದೆ. ಮತ್ತು ಬ್ರಹ್ಮನನ್ನು ಅನ್ಯತಕ್ಕಿಂತ ಭಿನ್ನನೆಂದು ತಿಳಿಯಬೇಕೆಂದು ನೀವು ಒಪ್ಪಿದ್ದೀರಿ. 'ಅನ್ಯತ' ಎಂದರೆ ಅವಿದ್ಯೆಯೆಂದರ್ಥ. ಇದರಿಂದ ಅವಿದ್ಯೆಗೂ ಜ್ಞೇಯತ್ವವನ್ನು ನೀವು ಒಪ್ಪಲೇಬೇಕು.

ಮತ್ತು ಅವ್ಯಕ್ತಶಬ್ದದಿಂದ ಪ್ರಕೃತಿಯನ್ನು ಸ್ವೀಕರಿಸದೇ ಅವಿದ್ಯೆಯನ್ನು ಸ್ವೀಕರಿಸಬೇಕೆಂದು ನೀವು ಹೇಳುವುದಾದರೆ, ಅವಿದ್ಯೆಯ ಸ್ವಭಾವವೆನಿಸಿದ ಅನಿರ್ವಾಚ್ಯತ್ವ, ಜಗದುಪಾನತ್ವ ಇವುಗಳನ್ನೂ ಕೂಡ ಶ್ರುತಿಯಲ್ಲಿ ಹೇಳಿರುವುದಿಲ್ಲ.

'ವದತೀತಿ ಚೇನ್ನ ಪ್ರಾಜ್ಞೋ ಹಿ ಪ್ರಕರಣಾತ್' ಎಂಬ ಐದನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ -

''ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ' ಎಂಬುದಾಗಿ ಮಹತ್ತತ್ತ್ವಕ್ಕಿಂತಲೂ ಪ್ರಕೃತಿಯು ಉತ್ತಮವಾಗಿದೆಯೆಂದು ತಿಳಿಯಬೇಕು'. ಹೀಗೆ ಶ್ರುತಿಯು ಹೇಳುತ್ತಿದೆಯೆಂದ ಮೇಲೆ, ಪ್ರಧಾನವು ಜ್ಞೇಯವೆಂದು ಹೇಳಿದಂತಾಯಿತಲ್ಲವೇ ? ಎಂದು ಪ್ರಶ್ನಿಸಬಾರದು. ಏಕೆಂದರೆ 'ಮಹತಃ ಪರಮ್' ಎಂಬುದಾಗಿ ಬ್ರಹ್ಮನನ್ನು ಹೇಳಿ, ಅವನನ್ನೇ ಜ್ಞೇಯನನ್ನಾಗಿ ನಿರ್ದೇಶಿಸಲಾಗಿದೆ. ಏಕೆಂದರೆ ಇದು 'ಸಾ ಕಾಷ್ಠಾ ಸಾ ಪರಾ ಗತಿಃ' ಎಂಬುದಾಗಿ ಬ್ರಹ್ಮನ ಪ್ರಕರಣವೇ ಆಗಿರುತ್ತದೆ. ಇಷ್ಟು ಐದನೆಯ ಸೂತ್ರಾರ್ಥ.

ಇದು ತಪ್ಪು. ಏಕೆಂದರೆ ನಿಮ್ಮ ಮತದಲ್ಲಿ ಜ್ಞಾತೃತ್ವಾದಿ ಧರ್ಮಗಳಿಂದ ರಹಿತನಾದ, ಶುದ್ಧನಾದ ತುರೀಯ ಬ್ರಹ್ಮನ ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ಒಪ್ಪಲಾಗಿದೆ. ಆದರೆ ಸೂತ್ರದಲ್ಲಿ ಜ್ಞಾತೃತ್ವಾದಿ ಧರ್ಮಗಳನ್ನು ಹೇಳುವಂತಹ 'ಪ್ರಜ್ಞಾವತ್' ಎಂಬ ಅರ್ಥದಲ್ಲಿರುವ 'ಪ್ರಾಜ್ಞ' ಎಂಬ ಪದವನ್ನು ಪ್ರಯೋಗಿಸಲಾಗಿದೆ.

'ಪ್ರಜ್ಞಾ ಶ್ರದ್ಧಾರ್ಚಾಭ್ಯೋ ಣಃ' ಎಂಬ ವ್ಯಾಕರಣ ಸೂತ್ರದಲ್ಲಿ ಪ್ರಜ್ಞಾಶಬ್ದದ ಮೇಲೆ ಮತ್ವರ್ಥದಲ್ಲಿ 'ಅಣ್' ಪ್ರತ್ಯಯವು ಬಂದು 'ಪ್ರಾಜ್ಞ' ಎಂಬ ಶಬ್ದವು ನಿಷ್ಪನ್ನವಾಗಿದೆ. ಆದ್ದರಿಂದ ಪ್ರಾಜ್ಞಶಬ್ದಕ್ಕೆ ಜ್ಞಾತೃತ್ವಾದಿ ಧರ್ಮಗಳುಳ್ಳವನು ಎಂಬರ್ಥ ತಿಳಿಯುತ್ತದೆ.

'ಮಹತಃ ಪರಮವ್ಯಕ್ತಮ್' ಎಂಬ ಶ್ರುತಿಯೂ ಕೂಡ ಅದ್ವೈತಿಗಳಿಗೆ ಪ್ರತಿಕೂಲವೇ ಆಗಿದೆ. ಏಕೆಂದರೆ ಮಹತ್ತತ್ವಕ್ಕಿಂತ ಶ್ರೇಷ್ಠನಾಗಿದ್ದಾನೆಂಬ ವಿಶಿಷ್ಟಾಜ್ಞಾನದಿಂದಲೇ ಮೋಕ್ಷವು ದೊರೆಯುತ್ತದೆಂದು ಶ್ರುತಿ ಹೇಳುತ್ತಿದೆ. ಹೀಗಿರುವಾಗ ಶುದ್ಧಬ್ರಹ್ಮನ ಜ್ಞಾನದಿಂದ ಮೋಕ್ಷವಾಗುತ್ತದೆಂಬ ಅದ್ವೈತ ಮತ ಶ್ರುತಿಗೆ ವಿರುದ್ಧವಾಗಿದೆ.

'ತ್ರಯಾಣಾಮೇವ ಚೈವಮುಪನ್ಯಾಸಃ ಪ್ರಶ್ನಶ್ಚ' ಎಂಬ ಆರನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ -

ಕಾಠಕೋಪನಿಷತ್ತಿನಲ್ಲಿ ನಚಿಕೇತನು ಮೂರರ ಬಗ್ಗೆ ಮಾತ್ರ ಪ್ರಶ್ನಿಸಿದ್ದಾನೆ. 'ಸತ್ವಮಗ್ನಿಮ್' ಎಂಬುದಾಗಿ ಅಗ್ನಿಯ ಬಗ್ಗೆ, 'ಯೇಯಂ ಪ್ರೇತೇ ವಿಚಿಕಿತ್ಸಾ' ಎಂಬುದಾಗಿ ಮರಣವನ್ನು ಹೊಂದಿದ ಜೀವನ ಬಗ್ಗೆ 'ಅನ್ಯತ್ರ ಧರ್ಮಾತ್' ಎಂಬುದರಿಂದ ಬ್ರಹ್ಮನ ಬಗ್ಗೆ ನಚಿಕೇತನು ಪ್ರಶ್ನಿಸಿದ್ದಾನೆ. ಅದಕ್ಕನುಗುಣವಾಗಿ ಯಮನು ಉತ್ತರಿಸಿದ್ದಾನೆ. ಹೀಗಿರುವಾಗ ಜಡಪ್ರಕೃತಿಯ ನಿರೂಪಣೆಯ ಪ್ರಸಂಗವೇ ಇಲ್ಲಿ ಕಾಣಿಸುವುದಿಲ್ಲ. ಇಷ್ಟು ಆರನೆಯ ಸೂತ್ರ ವ್ಯಾಖ್ಯಾನ.

ಈ ಸೂತ್ರ ವ್ಯಾಖ್ಯಾನವೂ ಕೂಡ ಸರಿಯಿಲ್ಲ. ಏಕೆಂದರೆ ಶ್ರುತಿಯಲ್ಲಿ ನಚಿಕೇತನು ಮೂರರ ಬಗ್ಗೆ ಮಾತ್ರ ಪ್ರಶ್ನಿಸಿದ್ದರೂ ಉತ್ತರ ನೀಡುವ ವಾಕ್ಯದಲ್ಲಿ 'ಇಂದ್ರಿಯೇಭ್ಯಃ ಪರಾ ಹ್ಯರ್ಥಾಃ' ಇತ್ಯಾದಿಯಾಗಿ ಮೂರು ವಿಷಯಗಳಿಗಿಂತ ಅತಿರಿಕ್ತವಾದ ಇಂದ್ರಿಯಾದಿಗಳೂ ಪ್ರಸಕ್ತವಾಗಿವೆ. ಅದರಂತೆ ಪ್ರಕೃತಿಯ ಬಗ್ಗೆಯೂ ಕೂಡ ಹೇಳಿರಬಹುದಲ್ಲವೇ?

ಮುಖ್ಯವಾಗಿ ಇಂದ್ರಿಯಗಳನ್ನು ನಿರೂಪಣೆ ಮಾಡಿಲ್ಲ. ಬ್ರಹ್ಮನ ಬಗ್ಗೆ ಹೇಳಲು ಅಂಗತ್ವೇನ ಇಂದ್ರಿಯಾದಿಗಳನ್ನು ನಿರೂಪಣೆ ಮಾಡಿದ್ದಾನೆಂದು ಉತ್ತರಿಸುವುದಾದರೆ, ಪ್ರಧಾನದಲ್ಲಿಯೂ ಕೂಡ 'ಅವ್ಯಕ್ತಾತ್ ಪುರುಷಃ ಪರಃ' ಎಂಬುದಾಗಿ ಪುರುಷನ ಬಗ್ಗೆ ಹೇಳುವುದಕ್ಕಾಗಿ ಎಂದು ಉತ್ತರಿಸಬಹುದು. ಅಪ್ರಧಾನವಾಗಿ ಪ್ರಧಾನವು ಪ್ರತಿಪಾದ್ಯವೆಂದು ಹೇಳಲು ಯಾವ ಬಾಧಕವೂ ಇಲ್ಲ. ಹೀಗೊಪ್ಪದಿದ್ದರೆ ಅವ್ಯಕ್ತಶಬ್ದದಿಂದ ಅವಿದ್ಯೆಯು ಪ್ರತಿಪಾದ್ಯವೆಂದು ನೀವು ಹೇಳುತ್ತೀರಿ. ಅದೂ ಸಹ ಮೂರು ವಿಷಯಗಳಿಗಿಂತ ಅತಿರಿಕ್ತವಾದ್ದರಿಂದ ಅವ್ಯಕ್ತಶಬ್ದ ಪ್ರತಿಪಾದ್ಯವಾಗಲು ಹೇಗೆ ಸಾಧ್ಯ ? ಆದ್ದರಿಂದ ನಿಮ್ಮ ಮಾತು ಸ್ವವಚನ ವಿರೋಧಗ್ರಸ್ತವಾಗಿದೆ.

ಮತ್ತು ಶ್ರುತಿಯಲ್ಲಿ 'ತ್ರೀನ್ ವರಾನ್ ವೃಣಿಷ್ವ' ಎಂದು ಮೂರು ವರಗಳನ್ನು ಬೇಡು ಎಂದು ಯಮನು ಹೇಳಿದಾಗ, ನಚಿಕೇತನು 'ಪ್ರಥಮಂ ವರಂ ವೃಣೇ' ಎಂದು ಮೊದಲನೆಯ ವರವನ್ನು, ತಂದೆಯ ಮನಶ್ಶಾಂತಿಯ ಬಗ್ಗೆ 'ದ್ವಿತಿಯೇನ ವೃಣೇ ವರೇಣ' ಎಂಬುದಾಗಿ ಸ್ವರ್ಗಕಾರಣವಾದ ಅಗ್ನಿಯಲ್ಲಿರುವ ಪರಮಾತ್ಮನ ಬಗ್ಗೆ, 'ವರಾಣಾಮೇಷ ವೃತಸ್ತೃತೀಯಃ' ಎಂಬುದರಿಂದ ಮುಕ್ತನಿಯಾಮಕನಾದ ಪರಮಾತ್ಮನ ಬಗ್ಗೆ ವರವನ್ನು ಕೇಳಿದ್ದಾನೆ. ಆದ್ದರಿಂದ 'ತ್ರಿಶಬ್ದದಿಂದ ಮತ್ತು ಪ್ರಥಮಾದಿಶಬ್ದಗಳಿಂದ ಹೇಳಲ್ಪಟ್ಟ ಪಿತೃಸೌಮನಸ್ಯ, ಅಗ್ನಿ ಮತ್ತು ಈಶ್ವರ ಈ ಮೂವರನ್ನು ಬಿಟ್ಟು ಸೂತ್ರದಲ್ಲಿರುವ ತ್ರಿಶಬ್ದಕ್ಕೆ ಬೇರೆ ಅರ್ಥವನ್ನು ನೀವು ಮಾಡುತ್ತಿರುವುದು ಅಯುಕ್ತವಾಗುತ್ತದೆ.

ಮತ್ತು 'ಯೇಯಂ ಪ್ರೇತೇ ವಿಚಿಕಿತ್ಸಾ' ಎಂಬ ಶ್ರುತಿಗೆ ದೇಹಾತಿರಿಕ್ತನಾದ ಜೀವನ ಬಗ್ಗೆ ಪ್ರಶ್ನಿಸಲಾಗಿದೆ. ಮರಣವನ್ನು ಹೊಂದಿದ ಅನಂತರ ದೇಹಾತಿರಿಕ್ತನಾದ ಜೀವನು ಲೋಕಾಂತರವನ್ನು ಕುರಿತು ಹೋಗುತ್ತಾನೆ. ಅಂತಹ ಜೀವನು ದೇಹಾತಿರಿಕ್ತನಾಗಿ ಇರುತ್ತಾನೆಂದು ಕೆಲವರು ಹೇಳುತ್ತಾರೆ. ಇಲ್ಲವೆಂದು ಇನ್ನು ಕೆಲವರು ಹೇಳುತ್ತಾರೆ. ಆದ್ದರಿಂದ ಲೋಕಾಂತರವನ್ನು ಕುರಿತು ಹೋಗುವ ಜೀವನು ದೇಹಾತಿರಿಕ್ತನಾಗಿ ಇದ್ದಾನೋ, ಇಲ್ಲವೋ ? ಎಂಬುದರ ಬಗ್ಗೆ ನನಗೆ ಉತ್ತರ ನೀಡಿ, ಎಂದು ನಚಿಕೇತನ ಅಭಿಪ್ರಾಯವೆಂದು ನೀವು ವ್ಯಾಖ್ಯಾನ ಮಾಡುತ್ತೀರಿ. ಇದು ಸರಿಯಲ್ಲ.

ಸ್ವತಃ ನಚಿಕೇತನೇ ಮರಣವನ್ನು ಹೊಂದಿ ಯಮಲೋಕವನ್ನು ಕುರಿತು ಹೋಗಿರುವಾಗ ದೇಹಾತಿರಿಕ್ತನಾದ ಜೀವನ ಬಗ್ಗೆ ಪ್ರಶ್ನೆ ಬರಲು ಸಾಧ್ಯವೇ ಇಲ್ಲ. ಮತ್ತು ಯಮನ ಬಳಿಯಿಂದ ಪಿತೃಸೌಮನಸ್ಯದ ಬಗ್ಗೆ ಮೊದಲನೆಯ ವರವನ್ನು ಸ್ವೀಕರಿಸುವಾಗ 'ಉಭೇ ತೀರ್ತ್ವಾ ಅಶನಾಯಾಪಿಪಾಸೇ ಶೋಕಾತಿಗೋ ಮೋದತೇ ಸ್ವರ್ಗಲೋಕೇ' ಎಂದು ಕೇಳಿರುತ್ತಾನೆ. ಹಸಿವು, ನೀರಡಿಕೆ, ದುಃಖ ಎಲ್ಲವನ್ನೂ ದಾಟಿ, ಸ್ವರ್ಗಲೋಕದಲ್ಲಿ ಸಂತೋಷ ಪಡುತ್ತಾನೆ ಎಂದು ಇದರ ಅರ್ಥ. ದೇಹವೇ ಆತ್ಮವಾದರೆ ಎಲ್ಲವನ್ನು ದಾಟಿ ಸ್ವರ್ಗಲೋಕವನ್ನು ಪಡೆಯಲು ಹೇಗೆ ಸಾಧ್ಯ ? ಮತ್ತು ಎರಡನೆಯ ವರವನ್ನು ಕೇಳುವಾಗ 'ಸ ತ್ವಮಗ್ನಿಂ ಸ್ವರ್ಗ್ಯಮಧ್ಯೇಷಿ ಮೃತ್ಯೋ ಪ್ರಬ್ರೂಹಿ ತಮ್' ಎಂದು ಪ್ರಾರ್ಥಿಸಿದ್ದಾನೆ. ಸ್ವರ್ಗಸಾಧನವಾದ ಅಗ್ನಿಯನ್ನು ಮತ್ತು

ಅಂತಹ ಅಗ್ನಿಯಲ್ಲಿರುವ ಪರಮಾತ್ಮನನ್ನು ನೀವು ತಿಳಿದಿದ್ದೀರಾ? ತಿಳಿದಿರುವುದಾದರೆ ಅಂತಹ ಪರಮಾತ್ಮನ ಬಗ್ಗೆ ನನಗೆ ತಿಳಿಸಿರಿ ಎಂದು ಇದರ ಅರ್ಥ. ಇಲ್ಲಿ 'ಸ್ವರ್ಗ' ಎಂಬ ಪದದಿಂದ ಸ್ವರ್ಗಸಾಧನವಾದದ್ದು ಎಂದು ಹೇಳಿದ್ದರಿಂದ, ದೇಹಾತಿರಿಕ್ತನಾದ ಜೀವನಿದ್ದಾನೆಂದು ತಿಳಿಯುತ್ತದೆ. ಮತ್ತು ಯಮನೇ ಸ್ವತಃ 'ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್, ತ್ರಿಕರ್ಮಕೃತ್ತರತಿ ಜನ್ಮಮೃತ್ಯೂ' ಎಂದು ಹೇಳಿದ್ದಾನೆ. ಎಲೈ ನಚಿಕೇತನೇ ! ಸ್ವರ್ಗಸಾಧನವಾದ ಅಗ್ನಿಯನ್ನು ತಿಳಿದವನಾಗಿ ಮೂರು ರೀತಿಯ ಕರ್ಮಗಳನ್ನು ಮಾಡಿದವನಾಗಿ, ಜನ್ಮ ಹಾಗೂ ಮರಣಗಳನ್ನು ದಾಟುವಂತಹವನಾಗು ಎಂದು ಹೇಳಿರುತ್ತಾನೆ. ಇಲ್ಲಿಯೂ ಕೂಡ ಜನ್ಮ ಮತ್ತು ಮರಣಗಳನ್ನು ದಾಟಿ, ಸ್ವರ್ಗವನ್ನು ಪಡೆಯುತ್ತಾನೆಂದು ಹೇಳಿದ್ದರಿಂದ ದೇಹಾತಿರಿಕ್ತನಾದ ಜೀವನಿದ್ದಾನೆಂದು ತಿಳಿಯುತ್ತದೆ. ಮತ್ತು 'ಇಮಾ ರಾಮಾಃ ಸರಥಾಃ ಸ ತೂರ್ಯಾಃ' ಇತ್ಯಾದಿಯಾಗಿ ಮೂರನೆಯ ವರವನ್ನು ಕೇಳಿದ ನಚಿಕೇತನಿಗೆ ಯಮನು ಈ ಸ್ತ್ರೀಯರನ್ನು, ರಥಗಳನ್ನು, ವಾದ್ಯಗಳನ್ನು ಬೇಕಾದರೆ ಸ್ವೀಕರಿಸು, ಆದರೆ ಮೂರನೆಯ ವರವನ್ನು ನೀಡುವುದು ಬಹಳ ಕಠಿಣವಾಗುತ್ತದೆಂದು ಉತ್ತರಿಸಿದ್ದಾನೆ. ಆವಾಗ ನಚಿಕೇತನು ಅಂತಹ ವಸ್ತುಗಳನ್ನು ಯಾಚನೆ ಮಾಡದೇ ಪರಮಾತ್ಮನ ಬಗ್ಗೆಯೇ ವರವನ್ನು ಕೇಳುತ್ತಾನೆಂದು 'ನಾನ್ಯಂ ತಸ್ಮಾನ್ನಚಿಕೇತೋ ವೃಣೀತೇ' ಇತ್ಯಾದಿಯಾಗಿ ಹೇಳಲಾಗಿದೆ. ಹೀಗೆ ಪ್ರಾರ್ಥಿಸುತ್ತಿರುವ ನಚಿಕೇತನು ಮೂರನೆಯ ವರವನ್ನು ಕೇಳುವ ಸಂದರ್ಭದಲ್ಲಿ ದೇಹಾತಿರಿಕ್ತನಾದ ಆತ್ಮನ ವಿಷಯದಲ್ಲಿ ಸಂದೇಹವನ್ನು ಹೊಂದಲು ಸಾಧ್ಯವೇ ಇಲ್ಲ.

ಆದ್ದರಿಂದ 'ಯೇಯಂ ಪ್ರೇತೇ ವಿಚಿಕಿತ್ಸಾ' ಎಂಬ ಪ್ರಶ್ನೆಯು ಮುಕ್ತನಿಯಾಮಕನಾದ ಭಗವದ್ವಿಷಯಕವಾದದ್ದು ಎಂದೇ ತಿಳಿಯಬೇಕು. ಇನ್ನೂ ಹೆಚ್ಚಿನ ವಿಚಾರವನ್ನು ಕಾಠಕಭಾಷ್ಯದಲ್ಲಿ ವಿವರಿಸಲಾಗಿದೆ.

ರಾಮಾನುಜರ ಸೂತ್ರ ವ್ಯಾಖ್ಯಾನ ಹೀಗಿದೆ -

ಅನ್ಯತ್ರ ಧರ್ಮಾದನ್ಯತ್ರಾಧರ್ಮಾದನ್ಯತ್ರಾಸ್ಮಾತ್ ಕೃತಾಕೃತಾತ್ ।
ಅನ್ಯತ್ರ ಭೂತಾಚ್ಚ ಭವ್ಯಾಚ್ಚ ಯತ್ತತ್ಪಶ್ಯಸಿ ತದ್ವದ ॥

ಎಂಬುದು ವಿಷ್ಣುಪರವಾದ ಶ್ಲೋಕವಾಗಿದೆ. ಇಲ್ಲಿರುವ ಧರ್ಮಶಬ್ದ ಪ್ರಸಿದ್ಧವಾದ ಉಪಾಯ (ಉಪಾಸನಾ) ಎಂಬರ್ಥದಲ್ಲಿ ಇರುತ್ತದೆ. 'ಅಧೀನ' ಶಬ್ದವು ಲೋಕದಲ್ಲಿ ಪ್ರಸಿದ್ಧವಾದ ಉಪಾಸ್ಯವಾದದ್ದನ್ನು ಹೇಳುತ್ತದೆ. 'ಅಸ್ಮಾತ್' ಎಂಬುದು ಬುದ್ಧಿಸ್ಥವಾದ ಉಪಾಸಕನನ್ನು ಹೇಳುತ್ತದೆ. ಅನ್ಯತ್ರ ಎಂಬ ಶಬ್ದವು ವೈಲಕ್ಷಣ್ಯವನ್ನು ಹೇಳಿದ್ದರಿಂದ ಲೋಕಪ್ರಸಿದ್ಧವಾದ ಉಪಾಸನೆ, ಉಪಾಸ್ಯ, ಉಪಾಸಕ ಇವುಗಳಿಗಿಂತ ವಿಲಕ್ಷಣವಾದ ಅಪ್ರಸಿದ್ಧವಾದ ಉಪಾಯ ಮೊದಲಾದ ಮೂರರ ಬಗ್ಗೆ ಪ್ರಶ್ನಿಸಲಾಗಿದೆ. 'ಯಮೇವೈಷ ವೃಣುತೇ ತೇನ ಲಭ್ಯಃ' ಎಂಬುದರಿಂದ ಭಕ್ತಿಯೆಂಬ ಉಪಾಸನದ ಬಗ್ಗೆ 'ಅಣೋರಣೀಯಾನ್' ಇತ್ಯಾದಿ ವಾಕ್ಯದಿಂದ ಉಪೇಯನಾದ ವಿಷ್ಣುವಿನ ಬಗ್ಗೆ 'ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್' ಇತ್ಯಾದಿ ವಾಕ್ಯದಿಂದ ಉಪೇತೃವಾದ ಜೀವನ ಬಗ್ಗೆ ಯಮನು ಉತ್ತರಿಸಿದ್ದಾನೆ. ಆದ್ದರಿಂದ ಸೂತ್ರದಲ್ಲಿರುವ 'ತ್ರಯಾಣಾಮ್' ಎಂಬ ಪದವು 'ಉಪಾಯ', 'ಉಪೇಯ', 'ಉಪಾಸಕ' ಎಂಬ ಮೂರು ಅರ್ಥವುಳ್ಳದ್ದಾಗಿದೆ. ಇಷ್ಟು ರಾಮಾನುಜರ ವ್ಯಾಖ್ಯಾನ.

ಇವರ ಈ ವ್ಯಾಖ್ಯಾನವೂ ಕೂಡ ಸಾಧುವಲ್ಲ. ಏಕೆಂದರೆ ಹಿಂದೆ ಹೇಳಿದ ದೋಷ ಇವರಿಗೂ ಸಮಾನವಾಗಿದೆ. 'ತ್ರೀನ್ ವರಾನ್ ವೃಣೀಷ್ವ' ಎಂದು ಯಮದೇವರು ಹೇಳಿದ ಅನಂತರ ನಚಿಕೇತನು ಪ್ರಥಮ ವರಂ ವೃಣೇ, ದ್ವಿತಿಯೇನ ವೃಣೇ ವರೇನ, 'ವರಾಣಾಮೇಷ ವೃತಸ್ತೃತೀಯಃ' ಎಂಬುದಾಗಿ ಮೂರು ವರಗಳ ಕ್ರಮವನ್ನು ಉಪನಿಷತ್ತಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅದನ್ನೇ 'ತ್ರಯಾಣಾಮ್' ಎಂಬ ಪದದಿಂದ ಸ್ವೀಕರಿಸಬೇಕು. ಇದನ್ನು ಬಿಟ್ಟು ಉಪಾಯ, ಉಪೇಯ, ಉಪಾಸಕ ಇವುಗಳಿಗಿಂತ ವಿಲಕ್ಷಣವಾದ ಅರ್ಥವನ್ನು ಹೇಳುವುದು ಸರಿಯಲ್ಲ.

'ಪ್ರಬ್ರೂಹಿ ತಂ ಶ್ರದ್ಧಧಾನಾಯ ಮಹ್ಯಮ್' ಇತ್ಯಾದಿ ವಾಕ್ಯಗಳಲ್ಲಿ ಅಗ್ನ್ಯಾದಿ ವಿಷಯಕವಾದ ಪ್ರಶ್ನೆಯಿರುತ್ತದೆ. 'ಪ್ರತೇ ಬ್ರವೀಮಿ ತದು ಮೇ ನಿಬೋಧ ಸ್ವರ್ಗ್ಯಮಗ್ನಿಂ ನಚಿಕೇತಃ' ಉತ್ತರವಾಕ್ಯಗಳಲ್ಲಿ ಸ್ಪಷ್ಟವಾಗಿ ಅಗ್ನ್ಯಾದಿಗಳ ವಿಷಯವೇ ಇರುತ್ತದೆ. ಇದನ್ನು ಬಿಟ್ಟು ಒಂದೇ ಶ್ಲೋಕದಲ್ಲಿ ಉಪಾಯ, ಉಪೇತೃ, ಉಪೇಯಗಳ ಪ್ರಶ್ನೆಗಳನ್ನು ನೀವು ಕಷ್ಟದಿಂದ ಸಂಪಾದನೆ ಮಾಡಿ, ಸೂತ್ರದಲ್ಲಿರುವ 'ತ್ರಯಾಣಾಮ್' ಎಂಬ ಪದಕ್ಕೆ ತತ್ಪರತ್ವವನ್ನು ಹೇಳುವುದು ಯುಕ್ತವಾಗುವುದಿಲ್ಲ.

ಮತ್ತು ನೀವು ಹೇಳಿದ ಉಪಾಯಾದಿಗಳಿಗಿಂತ ವಿಲಕ್ಷಣವಾದ ಅಗ್ನ್ಯಾದಿಗಳ ಬಗ್ಗೆಯೂ ಪ್ರಶ್ನೆಗಳಿರುವ ಕಾರಣ 'ತ್ರಯಾಣಾಮೇವ' ಎಂಬಲ್ಲಿರುವ ಅವಧಾರಣೆಯು ಅಯುಕ್ತವಾಗುತ್ತದೆ.

'ಮಹದ್ವಚ್ಚ' ಎಂಬ ಏಳನೆಯ ಸೂತ್ರಾರ್ಥವನ್ನು ರಾಮಾನುಜರು ಹಾಗೂ ಶಂಕರರು ಹೀಗೆ ಹೇಳುತ್ತಾರೆ - 'ವೇದಾಹಮೇತಂ ಪುರುಷಂ ಮಹಾಂತಮ್' ಎಂಬಲ್ಲಿರುವ 'ಮಹತ್' ಶಬ್ದವು ಸಾಂಖ್ಯಸ್ಮೃತಿಸಿದ್ಧವಾದ ಮಹತ್ತತ್ತ್ವವನ್ನು ಹೇಗೆ ಪ್ರತಿಪಾದನೆ ಮಾಡುವುದಿಲ್ಲವೋ, ಅದರಂತೆ ಅವ್ಯಕ್ತಶಬ್ದವೂ ಕೂಡ ಸಾಂಖ್ಯಸ್ಮೃತಿಸಿದ್ಧವಾದ ಪ್ರಕೃತಿಯನ್ನು ಹೇಳುವುದಿಲ್ಲ. ಇಷ್ಟು 'ಮಹದ್ವಚ್ಚ' ಎಂಬ ಸೂತ್ರದ ಅರ್ಥ.

ಇದು ತಪ್ಪು. 'ವೇದಾಹಮೇತಂ' ಇತ್ಯಾದಿ ವಾಕ್ಯದಲ್ಲಿ 'ಆದಿತ್ಯವರ್ಣಮ್' ಇತ್ಯಾದಿಯಾದ ಬಾಧಕಗಳಿರುವ ಕಾರಣ ಮಹತ್ತತ್ತ್ವವನ್ನು ಸ್ವೀಕರಿಸಲು ಬರುವುದಿಲ್ಲ. ಆದರೆ ಅವ್ಯಕ್ತಶಬ್ದದಿಂದ ಪ್ರಧಾನವನ್ನು ಸ್ವೀಕರಿಸಲು ಅಂತಹ ಯಾವುದೇ ಬಾಧಕಗಳಿದಿರುವುದಿಲ್ಲ.

ಆಶಂಕೆ - ಆತ್ಮಶಬ್ದದ ಸಾಮಾನಾಧಿಕರಣ್ಯವಿರುವ ಪ್ರಯುಕ್ತ ಮಹತ್‌ಶಬ್ದವು ಆತ್ಮನನ್ನೇ ಪ್ರತಿಪಾದನೆ ಮಾಡುತ್ತದೆ. ಮಹತ್ತತ್ತ್ವವನ್ನು ಹೇಳುವುದಿಲ್ಲ. ಆದರೆ ಮುಂದಿರುವ ಅವ್ಯಕ್ತಶಬ್ದದಿಂದ ಪ್ರಕೃತಿಯನ್ನು ಸ್ವೀಕರಿಸಲು ಸಾಧ್ಯವಿಲ್ಲ. ಏಕೆಂದರೆ ಆತ್ಮನಿಗಿಂತ ಉತ್ತಮತ್ವವನ್ನು ಪ್ರಕೃತಿಯಲ್ಲಿ ಹೇಳಲು ಹೇಗೆ ಸಾಧ್ಯ? ಹೀಗೆ ಬಾಧಕವಿರುವ ಕಾರಣ ಅವ್ಯಕ್ತಶಬ್ದವು ಪ್ರಕೃತಿಯನ್ನು ಹೇಳಲು ಸಾಧ್ಯವಿಲ್ಲವಲ್ಲವೇ?

ಸಮಾಧಾನ - ಅವ್ಯಕ್ತಶಬ್ದಕ್ಕೆ ಪ್ರಕೃತಿಪರತ್ವವನ್ನು ನೀವು ಒಪ್ಪದಿದ್ದರೂ ಅವಿದ್ಯಾಪರವೆನ್ನುತ್ತೀರಿ. ಇಂತಹ ಅವಿದ್ಯೆಯೂ ಕೂಡ ಆತ್ಮನಿಗಿಂತ ಉತ್ತಮವಾಗಲು ಹೇಗೆ ಸಾಧ್ಯ? ಆದ್ದರಿಂದ ಪ್ರಕೃತಿಪರವಲ್ಲವೆಂದು ಹೇಳುವ ನಿಮಗೆ ದೋಷವು ತಪ್ಪಿದ್ದಲ್ಲ.

ನಿಜವಾಗಿ ವಿಚಾರ ಮಾಡಿದರೆ 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿ ಪುರುಷನಿಗಿಂತ ಅವ್ಯಕ್ತವು ಅಧಮವಾಗಿದೆಯೆಂದು ಹೇಳಿದ್ದರಿಂದ ಪ್ರಕೃತಿಯನ್ನು ವಿವಕ್ಷಿಸಲು ಯಾವುದೇ ತೊಂದರೆಯೂ ಇರುವುದಿಲ್ಲ. ಆತ್ಮಶಬ್ದಕ್ಕೆ 'ಸ್ವರೂಪ' ಎಂಬರ್ಥವನ್ನೂ ಕೂಡ ಹೇಳಬಹುದಾದ್ದರಿಂದ 'ಮಹತ್' ಶಬ್ದಕ್ಕೆ ಆತ್ಮಶಬ್ದದ ಸಾಮಾನಾಧಿಕರಣ್ಯವಿದೆಯೆಂಬ ಕಾರಣದಿಂದ 'ಮಹತ್' ಶಬ್ದವು ಆತ್ಮನನ್ನೇ ಹೇಳಬೇಕೆಂಬ ನಿಯಮವಿಲ್ಲ.

ಶಾಂಕರಭಾಷ್ಯ ಹಿಂದಿನ ಸೂತ್ರವನ್ನು ಸೇರಿಸಿಕೊಂಡು ಅಧಿಕರಣವನ್ನು ಹೀಗೆ ರಚನೆ ಮಾಡಿದೆ. ಬೃಹದಾರಣ್ಯಕದ ನಾಲ್ಕನೆಯ ಅಧ್ಯಾಯದಲ್ಲಿ 'ಕತಮ ಆತ್ಮಾ ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ' ಎಂದು ಪ್ರಾರಂಭವಾಗಿ ಆತ್ಮನ ಬಗ್ಗೆ ಅನೇಕ ವಿಷಯಗಳು ಪ್ರಸಕ್ತವಾಗಿದೆ. ಈ ಆತ್ಮನು ಜೀವನೇ ಆಗಿದ್ದಾನೆ. ಏಕೆಂದರೆ ಪ್ರಾರಂಭದಲ್ಲಿ 'ಹೃದ್ಯಂತಃ' ಎಂದು ಹೃದಯದ ಸಂಬಂಧವನ್ನು ಹೇಳಲಾಗಿದೆ. ಉಪಸಂಹಾರದಲ್ಲಿಯೂ ಕೂಡ 'ಸ ವಾ ಏಷ ಮಹಾನಜಃ ಆತ್ಮಾ ಯೋಽಯಂ ವಿಜ್ಞಾನಮಯಃ' ಎಂದು ವಿಜ್ಞಾನಮಯನ ಉಲ್ಲೇಖವಿದೆ. ಈ ಸಂಪೂರ್ಣ ಪ್ರಕರಣವು ಬೇರೆ ಪ್ರಮಾಣದಿಂದ ಪ್ರಾಪ್ತವಾದ ಸಂಸಾರಿಯಾದ ಜೀವನನ್ನು ಅನುವಾದ ಮಾಡುವ ಮೂಲಕ ಪ್ರತಿಪಾದನೆ ಮಾಡುತ್ತಿದೆ. ಉಪಕ್ರಮ ಹಾಗೂ ಉಪಸಂಹಾರಗಳಿಗೆ ಜೀವನನ್ನು ಪ್ರತಿಪಾದನೆ ಮಾಡಿರುವುದೇ ಇದಕ್ಕೆ ಮುಖ್ಯಕಾರಣವೆಂದು ಪೂರ್ವಪಕ್ಷ.

'ಸ ವಾ ಅಯಂ ಪುರುಷಃ ಜಾಯಮಾನಃ' ಇತ್ಯಾದಿಯಾಗಿ ಕಲ್ಪಿತನಾದ ಜೀವಾತ್ಮನ ಸ್ವರೂಪವನ್ನು ಅನುವಾದ ಮಾಡಿ 'ಸ ವಾ ಏಷ ಮಹಾನಜ ಆತ್ಮಾ' ಎಂದು ಅಕಲ್ಪಿತವಾದ ಜೀವಾಧೀನನಾದ ಬ್ರಹ್ಮನನ್ನು ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ. ಆದ್ದರಿಂದ ಬ್ರಹ್ಮನ ಧರ್ಮವು ಶ್ರುತವಾದ್ದರಿಂದ ಬ್ರಹ್ಮನೇ ಈ ಪ್ರಕರಣದಿಂದ ಪ್ರತಿಪಾದ್ಯನಾಗುತ್ತಾನೆ. ಹೀಗೆ ಹಿಂದಿನ 'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಎಂಬ ಸೂತ್ರವನ್ನು ಸೇರಿಸಿ, ಒಂದೇ ಅಧಿಕರಣವೆಂಬುದು ಇವರ ಅಭಿಪ್ರಾಯ.

ಅದ್ವೈತಿಗಳ ಈ ಅಧಿಕರಣ ಶರೀರ ಸರಿಯಿಲ್ಲ. ಏಕೆಂದರೆ -

ಯತ್ತತ್ತ್ವಮೈಕ್ಯಂ ತನ್ನೈವ ಕೀರ್ತ್ಯತೇ ಶ್ರುತಿಸೂತ್ರಯೋಃ ।
ತತ್ರ ಯಃ ಕೀರ್ತ್ಯತೇ ಭೇದಃ ತಚ್ಚ ತತ್ತ್ವಂ ನ ತೇ ಮತೇ ॥

ಯಾವ ಐಕ್ಯವು ಅದ್ವೈತ ಮತದ ತತ್ವವಾಗಿದೆಯೋ, ಅದನ್ನು ಶ್ರುತಿಯಾಗಲೀ, ಸೂತ್ರವಾಗಲೀ, ಪ್ರತಿಪಾದನೆ ಮಾಡುತ್ತಿಲ್ಲ. ಶ್ರುತಿ ಹಾಗೂ ಸೂತ್ರಗಳಲ್ಲಿ ಪ್ರತಿಪಾದನೆ ಮಾಡುತ್ತಿರುವ ಜೀವೇಶಭೇದವು ಅದ್ವೈತಮತದ ತತ್ವವಲ್ಲ.

'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಎಂಬ ಸೂತ್ರದ ವಿಷಯವನ್ನಾಗಿ ನೀವು ಉದಾಹರಿಸಿದ 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ ಪ್ರಾಜ್ಞೇನಾತ್ಮನಾನ್ವಾರೂಢಃ' ಎಂಬೆರಡು ಶ್ರುತಿಗಳು ಬ್ರಹ್ಮನು ಜೀವನಿಗಿಂತ ಭಿನ್ನನಾಗಿದ್ದಾನೆಂದೇ ಪ್ರತಿಪಾದನೆ ಮಾಡುತ್ತಿವೆ.

ಅದರಂತೆ 'ಪತ್ಯಾದಿಶಬ್ದೇಭ್ಯಃ' ಎಂಬ ಸೂತ್ರಕ್ಕೆ ವಿಷಯವಾಕ್ಯವನ್ನಾಗಿ ಅದ್ವೈತಿಗಳೇ ಉದಾಹರಿಸಿದ 'ಏಷ ಲೋಕಾಧಿಪತಿಃ' ಎಂಬ ಶ್ರುತಿಯೂ ಕೂಡ ಜೀವನಿಗಿಂತ ಬ್ರಹ್ಮನು ಭಿನ್ನನಾಗಿದ್ದಾನೆಂದು ತಿಳಿಸುವ ಭೇದಕಧರ್ಮವನ್ನೇ ಪ್ರತಿಪಾದನೆ ಮಾಡುತ್ತಿದೆ ಹೊರತು, ಅದ್ವೈತಿಗಳ ತತ್ವವೆನಿಸಿದ ಅದ್ವೈತಕ್ಕೆ ಅನುಕೂಲಕರವಾದ ವಿಷಯವನ್ನು ಪ್ರತಿಪಾದನೆ ಮಾಡಿಲ್ಲ.

ಹೀಗೆ ಹೇಳಿದ್ದರಿಂದ 'ಯೋಽಯಂ ವಿಜ್ಞಾನಮಯಃ' ಎಂಬ ಶ್ರುತಿಯು ವಿಜ್ಞಾನಮಯನೆನಿಸಿದ ಜೀವನೇ ಪರಮಾತ್ಮನಾಗಿದ್ದಾನೆ ಎಂಬ ಅದ್ವೈತಿಗಳ ವ್ಯಾಖ್ಯಾನವನ್ನು ನಿರಾಕರಿಸಿದಂತಾಯಿತು. ಸೂತ್ರವು ಸ್ಪಷ್ಟವಾಗಿ ಪರಮಾತ್ಮನಿಗಿಂತ ಭೇದವನ್ನು ಪ್ರತಿಪಾದನೆ ಮಾಡುತ್ತಿರುವಾಗ ಅದಕ್ಕೆ ವಿರುದ್ಧವಾಗಿ ಅಭೇದವನ್ನು ಹೇಳಿದರೆ ಸೂತ್ರವಿರೋಧವು ಬರುತ್ತದೆ. ಮತ್ತು 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' ಎಂಬ ಭೇದಪ್ರತಿಪಾದಕ ಶ್ರುತಿಯ ವಿರೋಧವೂ ಕೂಡ ಬರುತ್ತದೆ.

ಶ್ರುತಿಯಲ್ಲಿ ಭೇದವು ಪ್ರತಿಪಾದಿತವಾಗಿದೆಯೆಂದು ಹೇಳಬಾರದು. ಏಕೆಂದರೆ 'ಅತ ಊರ್ಧ್ವಂ ವಿಮೋಕ್ಷಾಯೈವ ಬ್ರೂಹಿ' ಮೋಕ್ಷದ ಮಾರ್ಗವನ್ನು ಉಪದೇಶ ಮಾಡು ಎಂದು ಪ್ರಶ್ನಿಸಿದಾಗ ಭೇದ ಹಾಗೂ ಭೇದಕಧರ್ಮಗಳನ್ನು ಶ್ರುತಿಯು ಹೇಳಿದೆ. ಆದ್ದರಿಂದ ಇವುಗಳನ್ನು ಮಿಥ್ಯಾಭೂತವೆಂದು ಹೇಳಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಬೇರೆ ಪ್ರಮಾಣಗಳಿಂದ ಹಾಗೂ ಸ್ವಪ್ರಕರಣದಲ್ಲೇ ಇರುವ 'ಪ್ರಾಜ್ಞೇನಾತ್ಮನಾ' ಇತ್ಯಾದಿ ವಾಕ್ಯಗಳಿಂದ ಅವಿರುದ್ಧವಾದ ಮಹತ್ವಾದಿವಿಧಿಪರತ್ವವನ್ನೇ ಹೇಳಲು ಬರುತ್ತದೆ. ಹೀಗಿರುವಾಗ ಅದಕ್ಕೆ ವಿರುದ್ಧವಾಗಿ ಅಭೇದಪರತ್ವವನ್ನು ಒಪ್ಪುವುದು ಯುಕ್ತವಲ್ಲ. ಆದ್ದರಿಂದ 'ಅತ ಊರ್ಧ್ವಂ' ಇತ್ಯಾದಿ ವಾಕ್ಯದಿಂದಲೇ ಐಕ್ಯವನ್ನು ಪ್ರತಿಪಾದನೆ ಮಾಡಲು ಸಾಧ್ಯವಿಲ್ಲ.

ಮತ್ತು ಶ್ರುತಿಸೂತ್ರಗಳಲ್ಲಿ ಯಾವ ಭೇದವು ಪ್ರತಿಪಾದಿತವಾಗಿದೆಯೋ, ಅದು ಅದ್ವೈತಮತದ ತತ್ತ್ವವಲ್ಲ. ಆದ್ದರಿಂದ ಶ್ರುತಿಸೂತ್ರಗಳ ವಿರೋಧವೂ ಬರುತ್ತದೆ. ಮತ್ತು 'ಪತ್ಯಾದಿಶಬ್ದೇಭ್ಯಃ' ಎಂಬ ಸೂತ್ರವು ಹಿಂದಿನ ಸೂತ್ರಕ್ಕೆ ಗುಣಸೂತ್ರವಾದಲ್ಲಿ 'ಚ' ಶಬ್ದವನ್ನು ಹೇಳಬೇಕಿತ್ತು. ಹಿಂದಿನ ಸೂತ್ರದಲ್ಲಿ ಹೇಳಿದ ಪ್ರಮೇಯಕ್ಕೆ ಮತ್ತೊಂದು ಕಾರಣವನ್ನು ಹೇಳಲು ಹೊರಟಾಗ ಸೂತ್ರದಲ್ಲಿ 'ಚ' ಶಬ್ದವನ್ನು ಉಲ್ಲೇಖ ಮಾಡಬೇಕು. ಈ ಎಲ್ಲಾ ಕಾರಣಗಳಿಂದ ಅದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ.

ರಾಮಾನುಜರ ಅಧಿಕರಣಶರೀರ ಹೀಗಿದೆ -

೧. 'ಆಕಾಶೋऽರ್ಥಾಂತರತ್ವಾದಿವ್ಯಪದೇಶಾತ್' ೨. 'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ೩. 'ಪತ್ಯಾದಿಶಬ್ದೇಭ್ಯಃ' ಇತ್ಯಾದಿ ಮೂರು ಸೂತ್ರಗಳು ಸೇರಿ, ಒಂದೇ ಅಧಿಕರಣ. ಈ ಮೂರು ಸೂತ್ರಗಳಲ್ಲಿಯೂ ಆಕಾಶಶಬ್ದದ ಸಮನ್ವಯವನ್ನು ಸಾಧಿಸಲಾಗಿದೆ. ನಾವು ಹೇಳಿದ ಛಾಂದೋಗ್ಯದ ಮಂತ್ರವೇ ಅಧಿಕರಣದ ವಿಷಯವಾಕ್ಯವಾಗಿದೆ. ನಾಮರೂಪವಿಲಕ್ಷಣನೆಂದು ಹೇಳಿರುವುದರಿಂದ, ಆಕಾಶಶಬ್ದದಿಂದ ಪ್ರತಿಪಾದ್ಯನಾದವನು ಬ್ರಹ್ಮನೇ ಆಗುತ್ತಾನೆ ಹೊರತು, ಮುಕ್ತಜೀವನು ಆಗುವುದಿಲ್ಲವೆಂದು ಸಿದ್ಧಾಂತ ಮಾಡಿದ್ದಾರೆ. ಮುಕ್ತಜೀವನು ಆಕಾಶಶಬ್ದವಾಚ್ಯನೆಂದು ಪೂರ್ವಪಕ್ಷ. ಬ್ರಹ್ಮನೆಂದು ಸಿದ್ಧಾಂತ.

ಇವರ ಈ ಪೂರ್ವಪಕ್ಷಸಿದ್ಧಾಂತಗಳು ಅಸಾಧುವಾಗಿವೆ. ಏಕೆಂದರೆ 'ಆಕಾಶೋ ವೈ ನಾಮ' ಎಂಬಲ್ಲಿ ಆಕಾಶಶಬ್ದದಿಂದ ಮುಕ್ತಜೀವನೇ ಪ್ರತಿಪಾದ್ಯನಾಗಿದ್ದಾನೆ ಹೊರತು, ಬ್ರಹ್ಮನಲ್ಲವೆಂದು ಪೂರ್ವಪಕ್ಷವನ್ನು ಮಾಡುತ್ತಿದ್ದಾರೆ. ಇದರಿಂದ ಪೂರ್ವಪಕ್ಷಿಯು ಜೀವನಿಗೂ ಬ್ರಹ್ಮನಿಗೂ ಭೇದವನ್ನು ಒಪ್ಪಿ ಪ್ರಶ್ನೆ ಮಾಡುತ್ತಿದ್ದಾನೆ ಎಂದಂತಾಯಿತು. ಮೊದಲು ತಾನು ಒಪ್ಪಿರುವ ಭೇದಕ್ಕೆ ವಿರುದ್ಧವಾಗಿ ಅವರಿಬ್ಬರಿಗೆ ಐಕ್ಯವನ್ನು 'ತತ್ತ್ವಮಸ್ಯಾದಿ' ವಾಕ್ಯಗಳ ಆಧಾರದಿಂದ ಒಪ್ಪಿ, ಸುಷುಪ್ತಿಸೂತ್ರಕ್ಕೆ ಪೂರ್ವಪಕ್ಷವನ್ನು ಮಾಡುವುದು ಅತ್ಯಂತ ಅನುಚಿತವಾಗಿದೆ.

ಶಾಂಕರಭಾಷ್ಯದಲ್ಲಿ ಹಾಗೂ ರಾಮಾನುಜಭಾಷ್ಯದಲ್ಲಿ ಅವ್ಯಕ್ತಶಬ್ದದಿಂದ ಪ್ರಕೃತಿ ಪ್ರತಿಪಾದ್ಯವಲ್ಲವೆಂದು ಹೇಳಿದ್ದಾರೆ. ಇದು ಸರಿಯಲ್ಲ. ಏಕೆಂದರೆ, ಅವ್ಯಕ್ತಶಬ್ದಕ್ಕೆ ಪ್ರಕೃತಿಯು ಅರ್ಥವಲ್ಲವೆಂದಾದರೆ, ಬ್ರಹ್ಮನೆಂಬರ್ಥವನ್ನು ಹೇಳುತ್ತೀರೋ? ಅಥವಾ ಅವಿದ್ಯಾದಿಗಳನ್ನು ಅರ್ಥವೆಂದು ಹೇಳುತ್ತೀರೋ?

'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ಎಂಬ ಸೂತ್ರದ ವಿಷಯವನ್ನಾಗಿ ನೀವು ಉದಾಹರಿಸಿದ 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ ಪ್ರಾಜ್ಞೇನಾತ್ಮನಾನ್ವಾರೂಢಃ' ಎಂಬೆರಡು ಶ್ರುತಿಗಳು ಬ್ರಹ್ಮನು ಜೀವನಿಗಿಂತ ಭಿನ್ನನಾಗಿದ್ದಾನೆಂದೇ ಪ್ರತಿಪಾದನೆ ಮಾಡುತ್ತಿವೆ.

ಅದರಂತೆ 'ಪತ್ಯಾದಿಶಬ್ದೇಭ್ಯಃ' ಎಂಬ ಸೂತ್ರಕ್ಕೆ ವಿಷಯವಾಕ್ಯವನ್ನಾಗಿ ಅದ್ವೈತಿಗಳೇ ಉದಾಹರಿಸಿದ 'ಏಷ ಲೋಕಾಧಿಪತಿಃ' ಎಂಬ ಶ್ರುತಿಯೂ ಕೂಡ ಜೀವನಿಗಿಂತ ಬ್ರಹ್ಮನು ಭಿನ್ನನಾಗಿದ್ದಾನೆಂದು ತಿಳಿಸುವ ಭೇದಕಧರ್ಮವನ್ನೇ ಪ್ರತಿಪಾದನೆ ಮಾಡುತ್ತಿದೆ ಹೊರತು, ಅದ್ವೈತಿಗಳ ತತ್ವವೆನಿಸಿದ ಅದ್ವೈತಕ್ಕೆ ಅನುಕೂಲಕರವಾದ ವಿಷಯವನ್ನು ಪ್ರತಿಪಾದನೆ ಮಾಡಿಲ್ಲ.

ಹೀಗೆ ಹೇಳಿದ್ದರಿಂದ 'ಯೋऽಯಂ ವಿಜ್ಞಾನಮಯಃ' ಎಂಬ ಶ್ರುತಿಯು ವಿಜ್ಞಾನಮಯನೆನಿಸಿದ ಜೀವನೇ ಪರಮಾತ್ಮನಾಗಿದ್ದಾನೆ ಎಂಬ ಅದ್ವೈತಿಗಳ ವ್ಯಾಖ್ಯಾನವನ್ನು ನಿರಾಕರಿಸಿದಂತಾಯಿತು. ಸೂತ್ರವು ಸ್ಪಷ್ಟವಾಗಿ ಪರಮಾತ್ಮನಿಗಿಂತ ಭೇದವನ್ನು ಪ್ರತಿಪಾದನೆ ಮಾಡುತ್ತಿರುವಾಗ ಅದಕ್ಕೆ ವಿರುದ್ಧವಾಗಿ ಅಭೇದವನ್ನು ಹೇಳಿದರೆ ಸೂತ್ರವಿರೋಧವು ಬರುತ್ತದೆ. ಮತ್ತು 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' ಎಂಬ ಭೇದಪ್ರತಿಪಾದಕ ಶ್ರುತಿಯ ವಿರೋಧವೂ ಕೂಡ ಬರುತ್ತದೆ.

ಶ್ರುತಿಯಲ್ಲಿ ಭೇದವು ಪ್ರತಿಪಾದಿತವಾಗಿದೆಯೆಂದು ಹೇಳಬಾರದು. ಏಕೆಂದರೆ 'ಅತ ಊರ್ಧ್ವಂ ವಿಮೋಕ್ಷಾಯೈವ ಬ್ರೂಹಿ' ಮೋಕ್ಷದ ಮಾರ್ಗವನ್ನು ಉಪದೇಶ ಮಾಡು ಎಂದು ಪ್ರಶ್ನಿಸಿದಾಗ ಭೇದ ಹಾಗೂ ಭೇದಕಧರ್ಮಗಳನ್ನು ಶ್ರುತಿಯು ಹೇಳಿದೆ. ಆದ್ದರಿಂದ ಇವುಗಳನ್ನು ಮಿಥ್ಯಾಭೂತವೆಂದು ಹೇಳಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಬೇರೆ ಪ್ರಮಾಣಗಳಿಂದ ಹಾಗೂ ಸ್ವಪ್ರಕರಣದಲ್ಲೇ ಇರುವ 'ಪ್ರಾಜ್ಞೇನಾತ್ಮನಾ' ಇತ್ಯಾದಿ ವಾಕ್ಯಗಳಿಂದ ಅವಿರುದ್ಧವಾದ ಮಹತ್ವಾದಿವಿಧಿಪರತ್ವವನ್ನೇ ಹೇಳಲು ಬರುತ್ತದೆ. ಹೀಗಿರುವಾಗ ಅದಕ್ಕೆ ವಿರುದ್ಧವಾಗಿ ಅಭೇದಪರತ್ವವನ್ನು ಒಪ್ಪುವುದು ಯುಕ್ತವಲ್ಲ. ಆದ್ದರಿಂದ 'ಅತ ಊರ್ಧ್ವಂ' ಇತ್ಯಾದಿ ವಾಕ್ಯದಿಂದಲೇ ಐಕ್ಯವನ್ನು ಪ್ರತಿಪಾದನೆ ಮಾಡಲು ಸಾಧ್ಯವಿಲ್ಲ.

ಮತ್ತು ಶ್ರುತಿಸೂತ್ರಗಳಲ್ಲಿ ಯಾವ ಭೇದವು ಪ್ರತಿಪಾದಿತವಾಗಿದೆಯೋ, ಅದು ಅದ್ವೈತಮತದ ತತ್ವವಲ್ಲ. ಆದ್ದರಿಂದ ಶ್ರುತಿಸೂತ್ರಗಳ ವಿರೋಧವೂ ಬರುತ್ತದೆ. ಮತ್ತು 'ಪತ್ಯಾದಿಶಬ್ದೇಭ್ಯಃ' ಎಂಬ ಸೂತ್ರವು ಹಿಂದಿನ ಸೂತ್ರಕ್ಕೆ ಗುಣಸೂತ್ರವಾದಲ್ಲಿ 'ಚ' ಶಬ್ದವನ್ನು ಹೇಳಬೇಕಿತ್ತು. ಹಿಂದಿನ ಸೂತ್ರದಲ್ಲಿ ಹೇಳಿದ ಪ್ರಮೇಯಕ್ಕೆ ಮತ್ತೊಂದು ಕಾರಣವನ್ನು ಹೇಳಲು ಹೊರಟಾಗ ಸೂತ್ರದಲ್ಲಿ 'ಚ' ಶಬ್ದವನ್ನು ಉಲ್ಲೇಖ ಮಾಡಬೇಕು. ಈ ಎಲ್ಲಾ ಕಾರಣಗಳಿಂದ ಅದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ.

ರಾಮಾನುಜರ ಅಧಿಕರಣಶರೀರ ಹೀಗಿದೆ -

೧. 'ಆಕಾಶೋऽರ್ಥಾಂತರತ್ವಾದಿವ್ಯಪದೇಶಾತ್' ೨. 'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ' ೩. 'ಪತ್ಯಾದಿಶಬ್ದೇಭ್ಯಃ' ಇತ್ಯಾದಿ ಮೂರು ಸೂತ್ರಗಳು ಸೇರಿ, ಒಂದೇ ಅಧಿಕರಣ. ಈ ಮೂರು ಸೂತ್ರಗಳಲ್ಲಿಯೂ ಆಕಾಶಶಬ್ದದ ಸಮನ್ವಯವನ್ನು ಸಾಧಿಸಲಾಗಿದೆ. ನಾವು ಹೇಳಿದ ಛಾಂದೋಗ್ಯದ ಮಂತ್ರವೇ ಅಧಿಕರಣದ ವಿಷಯವಾಕ್ಯವಾಗಿದೆ. ನಾಮರೂಪವಿಲಕ್ಷಣನೆಂದು ಹೇಳಿರುವುದರಿಂದ, ಆಕಾಶಶಬ್ದದಿಂದ ಪ್ರತಿಪಾದ್ಯನಾದವನು ಬ್ರಹ್ಮನೇ ಆಗುತ್ತಾನೆ ಹೊರತು, ಮುಕ್ತಜೀವನು ಆಗುವುದಿಲ್ಲವೆಂದು ಸಿದ್ಧಾಂತ ಮಾಡಿದ್ದಾರೆ. ಮುಕ್ತಜೀವನು ಆಕಾಶಶಬ್ದವಾಚ್ಯನೆಂದು ಪೂರ್ವಪಕ್ಷ. ಬ್ರಹ್ಮನೆಂದು ಸಿದ್ಧಾಂತ.

ಇವರ ಈ ಪೂರ್ವಪಕ್ಷಸಿದ್ಧಾಂತಗಳು ಅಸಾಧುವಾಗಿವೆ. ಏಕೆಂದರೆ 'ಆಕಾಶೋ ವೈ ನಾಮ' ಎಂಬಲ್ಲಿ ಆಕಾಶಶಬ್ದದಿಂದ ಮುಕ್ತಜೀವನೇ ಪ್ರತಿಪಾದ್ಯನಾಗಿದ್ದಾನೆ ಹೊರತು, ಬ್ರಹ್ಮನಲ್ಲವೆಂದು ಪೂರ್ವಪಕ್ಷವನ್ನು ಮಾಡುತ್ತಿದ್ದಾರೆ. ಇದರಿಂದ ಪೂರ್ವಪಕ್ಷಿಯು ಜೀವನಿಗೂ ಬ್ರಹ್ಮನಿಗೂ ಭೇದವನ್ನು ಒಪ್ಪಿ ಪ್ರಶ್ನೆ ಮಾಡುತ್ತಿದ್ದಾನೆ ಎಂದಂತಾಯಿತು. ಮೊದಲು ತಾನು ಒಪ್ಪಿರುವ ಭೇದಕ್ಕೆ ವಿರುದ್ಧವಾಗಿ ಅವರಿಬ್ಬರಿಗೆ ಐಕ್ಯವನ್ನು 'ತತ್ತ್ವಮಸ್ಯಾದಿ' ವಾಕ್ಯಗಳ ಆಧಾರದಿಂದ ಒಪ್ಪಿ, ಸುಷುಪ್ತಿಸೂತ್ರಕ್ಕೆ ಪೂರ್ವಪಕ್ಷವನ್ನು ಮಾಡುವುದು ಅತ್ಯಂತ ಅನುಚಿತವಾಗಿದೆ.

ಶಾಂಕರಭಾಷ್ಯದಲ್ಲಿ ಹಾಗೂ ರಾಮಾನುಜಭಾಷ್ಯದಲ್ಲಿ ಅವ್ಯಕ್ತಶಬ್ದದಿಂದ ಪ್ರಕೃತಿ ಪ್ರತಿಪಾದ್ಯವಲ್ಲವೆಂದು ಹೇಳಿದ್ದಾರೆ. ಇದು ಸರಿಯಲ್ಲ. ಏಕೆಂದರೆ, ಅವ್ಯಕ್ತಶಬ್ದಕ್ಕೆ ಪ್ರಕೃತಿಯು ಅರ್ಥವಲ್ಲವೆಂದಾದರೆ, ಬ್ರಹ್ಮನೆಂಬರ್ಥವನ್ನು ಹೇಳುತ್ತೀರೋ? ಅಥವಾ ಅವಿದ್ಯಾದಿಗಳನ್ನು ಅರ್ಥವೆಂದು ಹೇಳುತ್ತೀರೋ?

ಬ್ರಹ್ಮನೇ ಅವ್ಯಕ್ತಶಬ್ದದ ಅರ್ಥವೆಂದು ನೀವು ಅಂಗೀಕಾರ ಮಾಡಿಲ್ಲ. ಅವಿದ್ಯಾದಿಗಳನ್ನು ಅರ್ಥವೆಂದು ಹೇಳುವುದೂ ಕೂಡ ಸರಿಯಲ್ಲ. ಏಕೆಂದರೆ ಬ್ರಹ್ಮನಲ್ಲಿ ಅವ್ಯಕ್ತಶಬ್ದದ ಸಮನ್ವಯವನ್ನು ಮಾಡದ ಕಾರಣ ಸಮನ್ವಯಾಧ್ಯಾಯದಿಂದ ಅಸಾಂಗತ್ಯ ಬರುತ್ತದೆ.

ಮತ್ತು ಬ್ರಹ್ಮನ ಲಕ್ಷಣಕ್ಕೆ ಪ್ರಧಾನದಲ್ಲಿ ಅತಿವ್ಯಾಪ್ತಿದೋಷವು ಪ್ರಾಪ್ತವಾದಾಗ ಅದರ ಪರಿಹಾರಕ್ಕೆ ಅವಿದ್ಯಾದಿಗಳು ಪ್ರತಿಪಾದ್ಯವೆಂದು ಹೇಳಿದರೆ, ಅವಿದ್ಯಾದಿಗಳಲ್ಲಿಯೇ ಅತಿವ್ಯಾಪ್ತಿ ಬರುತ್ತದೆ. ಆದ್ದರಿಂದ ಪ್ರಧಾನದಲ್ಲಿ ಅತಿವ್ಯಾಪ್ತಿಯನ್ನು ಪರಿಹರಿಸಲು ಹೋಗಿ, ಅವಿದ್ಯಾದಿಗಳಲ್ಲಿ ಅತಿವ್ಯಾಪ್ತಿಯನ್ನು ಒಪ್ಪಿಕೊಂಡಂತಾಯಿತು.

ಕಾರಣತ್ವಂ ಪ್ರಧಾನಸ್ಯ ನಿರಸ್ಯ ಸ್ಥಾಪಿತಂ ಯದಿ ।
ಅವಿದ್ಯಾದೇಸ್ತದಾ ಕೋನು ಲಾಭೋऽಸ್ತಿ ಬ್ರಹ್ಮವಾದಿನಃ ॥

ಬ್ರಹ್ಮವಾದಿಯಾದ ನಿನಗೆ ಕಾರಣತ್ವವನ್ನು ಪ್ರಧಾನದಲ್ಲಿ ನಿರಾಕರಿಸಿ, ಅವಿದ್ಯಾದಿಗಳಲ್ಲಿ ಸ್ಥಾಪನೆ ಮಾಡುವುದಾದರೆ, ಏನು ಲಾಭವಿದೆ ?

ವೃಕೋಣಾಪಹೃತಂ ಮೇಷಮಾದಾಯಾತಿಪ್ರಯತ್ನತಃ ।
ಸ ಚೇದ್ವ್ಯಾಘ್ರಾಯ ದೀಯೇತ ಕೋ ಲಾಭಸ್ತೇನ ಸಿಧ್ಯತಿ ॥

ತೋಳದಿಂದ ಕುರಿಯನ್ನು ಮಹಾಪ್ರಯತ್ನದಿಂದ ರಕ್ಷಣೆ ಮಾಡಿ ಹುಲಿಯ ಬಾಯಿಯಲ್ಲಿ ನೀಡಿದರೆ ನಿನಗೇನು ಲಾಭವಾಗುತ್ತದೆ.

ಶಂಕೆ - 'ಪರ' ಶಬ್ದಕ್ಕೆ ಕೇವಲ 'ಉತ್ಕರ್ಷ' ಎಂದಷ್ಟೇ ಅರ್ಥ. ಹೊರತು, ಕಾರಣತ್ವವೆಂದರ್ಥವಲ್ಲ. ಹೀಗೆ ಸಿದ್ಧಾಂತ ಮಾಡುತ್ತೇವೆ. ಆದ್ದರಿಂದ ಅವಿದ್ಯಾದಿಗಳೂ ಕೂಡ ಅವ್ಯಕ್ತಾದಿಶಬ್ದಗಳಿಂದ ಪ್ರತಿಪಾದ್ಯವಾದರೆ, ಅತಿಪ್ರಸಂಗಾದಿ ದೋಷಗಳಿಗೆ ಅವಕಾಶವಿಲ್ಲವಲ್ಲವೇ?

ಸಮಾಧಾನ - 'ಪರ'ಶಬ್ದಕ್ಕೆ 'ಉತ್ಕರ್ಷ' ಎಂಬರ್ಥವನ್ನು ಹೇಳುವುದಾದರೆ, ಪ್ರಕೃತಿಯೇ ಅವ್ಯಕ್ತಶಬ್ದದಿಂದ ಪ್ರತಿಪಾದ್ಯವಾಗಬಹುದಲ್ಲವೇ? ಪ್ರಕೃತಿಯು ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೆಂದು ಹೇಳಿದಾಗ, ಅತಿಪ್ರಸಂಗಾದಿ ದೋಷಗಳಿಗೆ ಅವಕಾಶವೇ ಇಲ್ಲ. ಹೀಗಿರುವಾಗ ಇದರ ಪರಿಹಾರಕ್ಕಾಗಿ ಪ್ರಯಾಸ ಪಡುವುದು ವ್ಯರ್ಥವಾಗುತ್ತದೆ.

ಒಂದು ವೇಳೆ ಸಾಂಖ್ಯರಿಗೆ ಅಭಿಮತವಾದ ಈಶ್ವರಾನಧೀನವಾದ ಪ್ರಕೃತಿಯನ್ನು ನಿರಾಕರಣೆ ಮಾಡುವ ಉದ್ದೇಶವು ನಿನ್ನದಾಗುವುದಾದರೆ 'ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ' ಇತ್ಯಾದಿ ಸ್ಥಳಗಳಲ್ಲಿಯೂ ಅರ್ಥಾದಿ ಶಬ್ದಗಳಿಗೆ ಸಾಂಖ್ಯರಿಗೆ ಅಭಿಮತವಾದ ಈಶ್ವರಾನಧೀನವಾದಶಬ್ದಸ್ಪರ್ಶಾದ್ಯರ್ಥವನ್ನು ನಿರಾಕರಣೆ ಮಾಡಬೇಕಾದೀತು. ಮತ್ತು 'ಆಕಾಶಾದ್ವಾಯುಃ' ಇತ್ಯಾದಿ ಸ್ಥಳಗಳಲ್ಲಿಯೂ ಈಶ್ವರಾನಧೀನವಾದ ಆಕಾಶಾದ್ಯರ್ಥವನ್ನು ನೀನು ನಿರಾಕರಣೆ ಮಾಡಬೇಕಾದೀತು.

ಮತ್ತು ಜಗತ್ತಿಗೆ ಉಪಾದಾನಕಾರಣವಾದ ಪ್ರಕೃತಿಯು ಅನೇಕ ಶ್ರುತಿ-ಸ್ಮೃತಿಗಳಿಂದ ಪ್ರತಿಪಾದ್ಯವಾಗಿದೆಯೆಂದು ನೀನೂ ಕೂಡ ಅಂಗೀಕರಿಸಿರುವಿ. ಅವ್ಯಕ್ತಶಬ್ದದ ಅರ್ಥವೆನಿಸಿದ ಪ್ರಕೃತಿಯು ಗುಣತ್ರಯಾತ್ಮಕವಾಗಿದೆ. ಅನಾದಿಯಾದ ಭಾವರೂಪವಾದ ಪದಾರ್ಥವಾಗಿದೆ. ಇಂತಹ ಪ್ರಕೃತಿತತ್ವವು 'ಮಾಯಾಂ ತು ಪ್ರಕೃತಿಂ ವಿದ್ಯಾತ್' 'ದೈವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ' 'ಗೌರನಾದ್ಯಂತವತೀ' 'ಯಸ್ಯಾವ್ಯಕ್ತಂ ಶರೀರಮ್' ಇವೇ ಮೊದಲಾದ ಶ್ರುತಿಗಳಿಂದ ಮತ್ತು 'ಸತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ' 'ಯತ್ತತ್ತ್ರಿಗುಣಮವ್ಯಕ್ತಮ್' ಇವೇ ಮೊದಲಾದ ಸ್ಮೃತಿಗಳಿಂದಲೂ ಪ್ರತಿಪಾದ್ಯವಾಗಿರುತ್ತದೆ.

ಈ ಶ್ರುತಿ-ಸ್ಮೃತಿಗಳಲ್ಲಿ ಪ್ರತಿಪಾದ್ಯವಾದದ್ದು ಭೂತಸೂಕ್ಷ್ಮವೆಂದು ನೀನು ವಾದಿಸಬಹುದು. ಹಾಗಾದಲ್ಲಿ ಕೇವಲ ಹೆಸರಿನಲ್ಲಷ್ಟೇ ವಿವಾದ ಮಾಡಿದಂತಾಗುತ್ತದೆ. ಎರಡರ ಲಕ್ಷಣವು ಒಂದೇ ಆಗಿರುವಾಗ, ತತ್ವದಲ್ಲಿ ಏನೂ ವ್ಯತ್ಯಾಸವಿಲ್ಲದಿದ್ದಾಗ ಹೆಸರಿನಲ್ಲಿ ವಾದ ಮಾಡಿದಂತಾಗುತ್ತದೆ. ಮತ್ತು ಈಶ್ವರಾನಧೀನವಾದ ಸತ್ಯತ್ವಾದಿಗಳು ಆಕಾಶಾದಿಗಳಲ್ಲಾ ಕೂಡ ಇರುವುದಿಲ್ಲ. ಆದ್ದರಿಂದ ಆಕಾಶಾದಿಗಳಲ್ಲಿಯೂ ಕೂಡ ಈಶಾನಧೀನಸತ್ಯತ್ವವನ್ನು ಈ ಅಧಿಕರಣದಲ್ಲಿ ನಿರಾಕರಣೆ ಮಾಡಬಹುದಿತ್ತಲ್ಲವೇ?

'ಸೂಕ್ಷ್ಮಂ ತು ತದರ್ಹತ್ವಾತ್' ಎಂಬ ಎರಡನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನ ಮಾಡಿದ್ದಾರೆ - ಶರೀರವು ಸ್ಥೂಲವಾಗಿರುವ ಕಾರಣ ಅವ್ಯಕ್ತಶಬ್ದದಿಂದ ಪ್ರತಿಪಾದ್ಯ-ವಾಗಿರುವುದಿಲ್ಲವೆಂದು ಆಶಂಕಿಸಬಾರದು.

ಏಕೆಂದರೆ ಶರೀರಕ್ಕೆ ಭೂತಸೂಕ್ಷ್ಮವು ಕಾರಣವಾಗಿದೆ. ಶರೀರವು ನಾಮ ಹಾಗೂ ರೂಪಗಳಿಂದ ಅಭಿವ್ಯಕ್ತವಾಗಿದ್ದರೂ ಕೂಡ ಶರೀರಕ್ಕೆ ಕಾರಣವಾದ ಭೂತಸೂಕ್ಷ್ಮವು ನಾಮದಿಂದಾಗಲೀ, ರೂಪದಿಂದಾಗಲೀ ಅಭಿವ್ಯಕ್ತವಾಗಿಲ್ಲ. ಹೀಗೆ ಅನಭಿವ್ಯಕ್ತಸ್ವರೂಪದಲ್ಲಿ

ಶರೀರವು ಮೊದಲು ಇರುತ್ತದೆ. ಹೀಗೆ ಶರೀರಕ್ಕೆ ಕಾರಣವಾದ ಭೂತಸೂಕ್ಷ್ಮವು ಅವ್ಯಕ್ತಶಬ್ದದಿಂದ ಪ್ರತಿಪಾದ್ಯವಾಗಲು ಅರ್ಹವಾಗಿದೆ, ಆದ್ದರಿಂದ ತತ್ಕಾರ್ಯವಾದ ಶರೀರವೂ ಕೂಡ ಅಮುಖ್ಯವೃತ್ತಿಯಿಂದ ಅವ್ಯಕ್ತಶಬ್ದಪ್ರತಿಪಾದ್ಯವಾಗುತ್ತದೆಂದು ಎರಡನೆಯ ಸೂತ್ರಾರ್ಥ.

ಇದೂ ಕೂಡ ಸರಿಯಲ್ಲ. ಶರೀರಕ್ಕೆ ಕಾರಣವಾಗಿರುವ ಭೂತಸೂಕ್ಷ್ಮವನ್ನೇ 'ಮಹತಃ ಪರಮವ್ಯಕ್ತಂ' ಎಂಬಲ್ಲಿರುವ ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೆಂದು ಹೇಳಲು ಬರುತ್ತದೆ. ಹೀಗಿರುವಾಗ ಶರೀರವನ್ನು ಅವ್ಯಕ್ತಶಬ್ದದಿಂದ ಸ್ವೀಕರಿಸಿ ಗೌಣಾರ್ಥ ಮಾಡುವುದು ಯುಕ್ತವಾಗುವುದಿಲ್ಲ. ವಾಸ್ತವಿಕವಾಗಿ 'ಶರೀರಂ ರಥಮೇವ ಚ' ಎಂಬುದಾಗಿ ಹಿಂದೆ ಶರೀರವು ಪ್ರಕೃತವಾಗಿದ್ದರೂ ಮಹತ್‌ಪರತ್ವವನ್ನು ಅಂತಹ ಶರೀರದಲ್ಲಿ ಹೇಳಲು ಸಾಧ್ಯವಿಲ್ಲ. ಮತ್ತು ಅವ್ಯಕ್ತತ್ವವನ್ನೂ ಕೂಡ ಶರೀರದಲ್ಲಿ ಹೇಳಲು ಸಾಧ್ಯವಿಲ್ಲ. ಆದರೆ ಭೂತಸೂಕ್ಷ್ಮದಲ್ಲಿ ಮಹತ್ ಪರತ್ವವಾಗಲೀ, ಅವ್ಯಕ್ತತ್ವವಾಗಲೀ ಇರುವ ಕಾರಣ, ಇದನ್ನೇ ಅವ್ಯಕ್ತಶಬ್ದಪ್ರತಿಪಾದ್ಯವೆಂದು ಹೇಳಬಹುದಿತ್ತು.

ಹಾಗಾದರೆ ಶರೀರವನ್ನಾಗಲೀ, ಶರೀರಕ್ಕೆ ಕಾರಣವಾದ ಭೂತಸೂಕ್ಷ್ಮವನ್ನಾಗಲೀ, ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೆಂದು ಹೇಳುವುದಿಲ್ಲ. ಶಾಂಕರಭಾಷ್ಯಕ್ಕೆ ಅನುಸಾರಿಯಾಗಿ ಅವಿದ್ಯೆಯನ್ನೇ ಅವ್ಯಕ್ತಶಬ್ದಾರ್ಥವೆಂದು ಹೇಳಬಹುದಲ್ಲವೇ ? ಎಂದೂ ಕೂಡ ಶಂಕಿಸಬಾರದು. ಅವಿದ್ಯೆಯನ್ನು ಅವ್ಯಕ್ತಶಬ್ದದಿಂದ ಸ್ವೀಕರಿಸಿದಲ್ಲಿ ಸೂತ್ರದಲ್ಲಿರುವ ಶರೀರಶಬ್ದದ ವಿರೋಧ ಬರುತ್ತದೆ. ಶರೀರಶಬ್ದಕ್ಕೆ ಅವಿದ್ಯೆಯೆಂಬರ್ಥವನ್ನಂತೂ ಮಾಡಲು ಸುತರಾಂ ಸಾಧ್ಯವಿಲ್ಲ.

ಮತ್ತು ನೀವೇ ಹೇಳಿದಂತೆ ಹಿಂದಿನ ಪ್ರಕರಣದಲ್ಲಿ ಶರೀರವೇ ಪ್ರಕೃತವಾಗಿದೆ. ಮತ್ತು ಪರಿಶೇಷಪ್ರಮಾಣದಿಂದ ಶರೀರವೇ ವಿವಕ್ಷಿತವಾಗಿದೆ. ಇಂತಹ ಶರೀರವನ್ನು ಬಿಟ್ಟು, ಅವಿದ್ಯಾಪರತ್ವವನ್ನು ಹೇಳುವುದಾದರೆ, ಸಾಂಖ್ಯರಿಗೆ ಅಭಿಮತವಾದ ಪ್ರಧಾನಪರತ್ವವನ್ನೇ ಹೇಳಬಹುದಲ್ಲವೇ? ಅಂತಹ ಪ್ರಧಾನವನ್ನು ಬಿಟ್ಟು ಅವಿದ್ಯಾಪರತ್ವವನ್ನು ಹೇಳುವುದರಲ್ಲಿ ಏನು ಅರ್ಥವಿದೆ?

ಮತ್ತು ಅವಿದ್ಯೆಯು ಸಾಕ್ಷಿಸಿದ್ಧವಾಗಿ ಯಾವಾಗಲೂ ವ್ಯಕ್ತವೇ ಆಗಿರುತ್ತದೆ. ಹೀಗಿರುವಾಗ ಅವ್ಯಕ್ತತ್ವ ಎಂಬ ಅವ್ಯಕ್ತಶಬ್ದದ ಪ್ರವೃತ್ತಿನಿಮಿತ್ತವು ಅವಿದ್ಯೆಯಲ್ಲಿ ಸರ್ವಥಾ ಬರುವುದಿಲ್ಲ. ಅವ್ಯಕ್ತತ್ವಕ್ಕೆ ಪ್ರಯೋಜಕವಾದ ಸೂಕ್ಷ್ಮತ್ವವೂ ಕೂಡ ಅವಿದ್ಯೆಯಲ್ಲಿರುವುದಿಲ್ಲ.

'ತದಧೀನತ್ವಾದರ್ಥವತ್' ಎಂಬ ಮೂರನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನ ಮಾಡುತ್ತಾರೆ - ಬೀಜರೂಪವಾದ ಶರೀರಾದಿಕಾರ್ಯಗಳಿಗೆ ಪ್ರಾಗವಸ್ಥಾರೂಪವಾದ, ಅವ್ಯಾಕೃತವಾದ = ಅನಾದಿಯಾದ, ಅವ್ಯಕ್ತಶಬ್ದಕ್ಕೆ ಅರ್ಹವಾದ ಒಂದು ವಸ್ತುವನ್ನು ನೀವು ಸ್ವೀಕಾರ ಮಾಡುವುದಾದರೆ, ಸಾಂಖ್ಯಮತವನ್ನು ಪ್ರವೇಶಿಸಿದಂತಾಯಿತಲ್ಲವೇ? ಏಕೆಂದರೆ ಸಾಂಖ್ಯರೂ ಕೂಡ ಜಗತ್ತಿನ ಪ್ರಾಗವಸ್ಥಾನವನ್ನೇ ಪ್ರಧಾನವೆಂದು ಕರೆಯುತ್ತಾರೆ. ಹೀಗೆ ಶಂಕಿಸಬಾರದು.

ಏಕೆಂದರೆ ನಾವು ಅಂಗೀಕರಿಸುತ್ತಿರುವ ಪ್ರಾಗವಸ್ಥೆಯು ಪರಮೇಶ್ವರನ ಅಧೀನವಾಗಿದೆ. ಆದರೆ ಸಾಂಖ್ಯರು ಹೇಳುವ ಪ್ರಧಾನವು ಪರಮೇಶ್ವರನ ಅನಧೀನವಾಗಿ ಸ್ವತಂತ್ರವಾಗಿರುವಂತಹದ್ದು. ಹಾಗಾಗಿ ಸಾಂಖ್ಯಮತಪ್ರವೇಶದೋಷವು ಬರುವುದಿಲ್ಲ.

ಪ್ರಾಗವಸ್ಥಾಪನ್ನವಾದ ಭೂತಸೂಕ್ಷ್ಮವನ್ನು ಒಪ್ಪುವುದು ವ್ಯರ್ಥವಲ್ಲ. ಬೀಜರೂಪವಾದ ಆ ವಸ್ತುವು ಸಾರ್ಥಕವೇ ಆಗಿದೆ. ಏಕೆಂದರೆ ಭೂತಸೂಕ್ಷ್ಮವಿಲ್ಲದೇ ಈ ಜಗತ್ತನ್ನು ಸೃಷ್ಟಿಸಲು ಈಶ್ವರನಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಉಪಾದಾನಕಾರಣಕ್ಕೋಸ್ಕರ ಬೀಜರೂಪವಾದ ವಸ್ತುವನ್ನು ಒಪ್ಪಲೇಬೇಕು.

ಈ ಸೂತ್ರವ್ಯಾಖ್ಯಾನವೂ ಸರಿಯಿಲ್ಲ. ಏಕೆಂದರೆ ನಿಮ್ಮ ಮತದ ಪ್ರಕಾರ ಹಿಂದಿನ ಎರಡು ಸೂತ್ರಗಳಲ್ಲಿ ಈಶ್ವರನು ಪ್ರಕೃತನೇ ಆಗಿಲ್ಲ. ಹೀಗಿರುವಾಗ 'ತತ್' ಶಬ್ದದಿಂದ ಅಪ್ರಕೃತವಾದದ್ದನ್ನು ಪರಾಮರ್ಶ ಮಾಡಿದಂತಾಗುತ್ತದೆ. ಮತ್ತು 'ತದಧೀನತ್ವಾತ್' ಎಂಬ ಹೇತುವಿಗೆ ಅಲ್ಲಿಯೇ ಶ್ರುತವಾದ 'ಅರ್ಥವತ್ವ' ಎಂಬ ಸಾಧ್ಯದ ಜೊತೆಗೆ ಅನ್ವಯ ಮಾಡದೇ 'ಸಾಂಖ್ಯಮತಾಪತ್ತಿಃ ನ' ಎಂಬುದನ್ನು ಅಧ್ಯಾಹಾರ ಮಾಡಿಕೊಂಡು, ಅಂತಹ ಸಾಧ್ಯದಲ್ಲಿ ಅನ್ವಯ ಮಾಡುವುದು ಕೂಡುವುದಿಲ್ಲ.

'ಯಸ್ಯಾವ್ಯಕ್ತಂ ಶರೀರಮ್' ಇವೇ ಮೊದಲಾದ ಶ್ರುತಿಗಳ ಆಧಾರದಲ್ಲಿ ಪ್ರಕೃತಿಗೆ ನೀವು ಸ್ವಾತಂತ್ರ್ಯವನ್ನಷ್ಟೇ ಅಲ್ಲಗಳೆಯಬೇಕು. ಇದನ್ನು ಬಿಟ್ಟು ಪ್ರಕೃತಿಯು ಅವ್ಯಕ್ತಶಬ್ದದಿಂದ ಪ್ರತಿಪಾದ್ಯವೇ ಅಲ್ಲವೆಂಬ ನಿರಾಕರಣೆ ಅಯುಕ್ತ.

ಅದ್ವೈತಿಗಳು ನಾಲ್ಕನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - ಸತ್ವರಜಸ್ತಮೋ-ಗುಣಾತ್ಮಕವಾದ ಪ್ರಕೃತಿ ಹಾಗೂ ಜೀವ ಈ ಎರಡು ಪದಾರ್ಥಗಳ ಭೇದಜ್ಞಾನದಿಂದ ಮೋಕ್ಷವಾಗುತ್ತದೆಂದು ಸಾಂಖ್ಯರು ಹೇಳುತ್ತಾರೆ. ಇವರ ಈ ಮಾತಿನಿಂದ ಪ್ರಕೃತಿಯೂ ಕೂಡ ಜ್ಞೇಯವೆಂಬುದು ಸಾಂಖ್ಯರ ಅಭಿಪ್ರಾಯವೆಂದು ತಿಳಿಯುತ್ತದೆ. ಆದರೆ ಪ್ರಕೃತ ಶ್ರುತಿಯಲ್ಲಿರುವ ಅವ್ಯಕ್ತಕ್ಕೆ ಜ್ಞೇಯತ್ವವನ್ನು ಹೇಳಿರುವುದಿಲ್ಲ. ಆದ್ದರಿಂದ ಇಲ್ಲಿರುವ ಅವ್ಯಕ್ತಶಬ್ದವು ಪ್ರಕೃತಿಪರವಾಗುವುದಿಲ್ಲ.

ಇದೂ ಕೂಡ ತಪ್ಪು. ಶ್ರುತಿಯಲ್ಲಿ 'ಜ್ಞೇಯಂ' ಎಂದು ಹೇಳದ್ದಿದರೂ 'ಮಹತಃ ಪರಮವ್ಯಕ್ತಮ್' ಎಂದು ಹೇಳಿರುವುದರಿಂದಲೇ ಪ್ರಕೃತಿಗೆ ಜ್ಞೇಯತ್ವವು ಸಿದ್ಧವಾಗುತ್ತದೆ.

ಮತ್ತು 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿರುವ 'ಪರ' ಶಬ್ದಕ್ಕೆ 'ವಿಲಕ್ಷಣ' ಎಂಬರ್ಥವು ಇರುವುದರಿಂದ ಪ್ರಕೃತಿಗಿಂತಲೂ ಪುರುಷನು ವಿಲಕ್ಷಣನೆಂದು ಶ್ರುತಿಯಲ್ಲಿ ತಿಳಿಸಲಾಗಿದೆ. ಮತ್ತು ಬ್ರಹ್ಮನನ್ನು ಅನೃತಕ್ಕಿಂತ ಭಿನ್ನನೆಂದು ತಿಳಿಯಬೇಕೆಂದು ನೀವು ಒಪ್ಪಿದ್ದೀರಿ. 'ಅನೃತ' ಎಂದರೆ ಅವಿದ್ಯೆಯೆಂದರ್ಥ. ಇದರಿಂದ ಅವಿದ್ಯೆಗೂ ಜ್ಞೇಯತ್ವವನ್ನು ನೀವು ಒಪ್ಪಲೇಬೇಕು.

ಮತ್ತು ಅವ್ಯಕ್ತಶಬ್ದದಿಂದ ಪ್ರಕೃತಿಯನ್ನು ಸ್ವೀಕರಿಸದೇ ಅವಿದ್ಯೆಯನ್ನು ಸ್ವೀಕರಿಸಬೇಕೆಂದು ನೀವು ಹೇಳುವುದಾದರೆ, ಅವಿದ್ಯೆಯ ಸ್ವಭಾವವೆನಿಸಿದ ಅನಿರ್ವಾಚ್ಯತ್ವ, ಜಗದುಪಾನತ್ವ ಇವುಗಳನ್ನೂ ಕೂಡ ಶ್ರುತಿಯಲ್ಲಿ ಹೇಳಿರುವುದಿಲ್ಲ.

'ವದತೀತಿ ಚೇನ್ನ ಪ್ರಾಜ್ಞೋ ಹಿ ಪ್ರಕರಣಾತ್' ಎಂಬ ಐದನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ -

''ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ' ಎಂಬುದಾಗಿ ಮಹತ್ತತ್ವಕ್ಕಿಂತಲೂ ಪ್ರಕೃತಿಯು ಉತ್ತಮವಾಗಿದೆಯೆಂದು ತಿಳಿಯಬೇಕು'. ಹೀಗೆ ಶ್ರುತಿಯು ಹೇಳುತ್ತಿದೆಯೆಂದ ಮೇಲೆ, ಪ್ರಧಾನವು ಜ್ಞೇಯವೆಂದು ಹೇಳಿದಂತಾಯಿತಲ್ಲವೇ ? ಎಂದು ಪ್ರಶ್ನಿಸಬಾರದು. ಏಕೆಂದರೆ 'ಮಹತಃ ಪರಮ್' ಎಂಬುದಾಗಿ ಬ್ರಹ್ಮನನ್ನು ಹೇಳಿ, ಅವನನ್ನೇ ಜ್ಞೇಯನನ್ನಾಗಿ ನಿರ್ದೇಶಿಸಲಾಗಿದೆ. ಏಕೆಂದರೆ ಇದು 'ಸಾ ಕಾಷ್ಠಾ ಸಾ ಪರಾ ಗತಿಃ' ಎಂಬುದಾಗಿ ಬ್ರಹ್ಮನ ಪ್ರಕರಣವೇ ಆಗಿರುತ್ತದೆ. ಇಷ್ಟು ಐದನೆಯ ಸೂತ್ರಾರ್ಥ.

ಇದು ತಪ್ಪು. ಏಕೆಂದರೆ ನಿಮ್ಮ ಮತದಲ್ಲಿ ಜ್ಞಾತೃತ್ವಾದಿ ಧರ್ಮಗಳಿಂದ ರಹಿತನಾದ, ಶುದ್ಧನಾದ ತುರೀಯ ಬ್ರಹ್ಮನ ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ಒಪ್ಪಲಾಗಿದೆ. ಆದರೆ ಸೂತ್ರದಲ್ಲಿ ಜ್ಞಾತೃತ್ವಾದಿ ಧರ್ಮಗಳನ್ನು ಹೇಳುವಂತಹ 'ಪ್ರಜ್ಞಾವತ್' ಎಂಬ ಅರ್ಥದಲ್ಲಿರುವ 'ಪ್ರಾಜ್ಞ' ಎಂಬ ಪದವನ್ನು ಪ್ರಯೋಗಿಸಲಾಗಿದೆ.

'ಪ್ರಜ್ಞಾಶ್ರದ್ಧಾರ್ಚಾಭ್ಯೋ ಣಃ' ಎಂಬ ವ್ಯಾಕರಣ ಸೂತ್ರದಲ್ಲಿ ಪ್ರಜ್ಞಾಶಬ್ದದ ಮೇಲೆ ಮತ್ವರ್ಥದಲ್ಲಿ 'ಅಣ್' ಪ್ರತ್ಯಯವು ಬಂದು 'ಪ್ರಾಜ್ಞ' ಎಂಬ ಶಬ್ದವು ನಿಷ್ಪನ್ನವಾಗಿದೆ. ಆದ್ದರಿಂದ ಪ್ರಾಜ್ಞಶಬ್ದಕ್ಕೆ ಜ್ಞಾತೃತ್ವಾದಿ ಧರ್ಮಗಳುಳ್ಳವನು ಎಂಬರ್ಥ ತಿಳಿಯುತ್ತದೆ.

'ಮಹತಃ ಪರಮವ್ಯಕ್ತಮ್' ಎಂಬ ಶ್ರುತಿಯೂ ಕೂಡ ಅದ್ವೈತಿಗಳಿಗೆ ಪ್ರತಿಕೂಲವೇ ಆಗಿದೆ. ಏಕೆಂದರೆ ಮಹತ್ತತ್ವಕ್ಕಿಂತ ಶ್ರೇಷ್ಠನಾಗಿದ್ದಾನೆಂಬ ವಿಶಿಷ್ಟಾಜ್ಞಾನದಿಂದಲೇ ಮೋಕ್ಷವು ದೊರೆಯುತ್ತದೆಂದು ಶ್ರುತಿ ಹೇಳುತ್ತಿದೆ. ಹೀಗಿರುವಾಗ ಶುದ್ಧಬ್ರಹ್ಮನ ಜ್ಞಾನದಿಂದ ಮೋಕ್ಷವಾಗುತ್ತದೆಂಬ ಅದ್ವೈತ ಮತ ಶ್ರುತಿಗೆ ವಿರುದ್ಧವಾಗಿದೆ.

'ತ್ರಯಾಣಾಮೇವ ಚೈವಮುಪನ್ಯಾಸಃ ಪ್ರಶ್ನಶ್ಚ' ಎಂಬ ಆರನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ -

ಕಾಠಕೋಪನಿಷತ್ತಿನಲ್ಲಿ ನಚಿಕೇತನು ಮೂರರ ಬಗ್ಗೆ ಮಾತ್ರ ಪ್ರಶ್ನಿಸಿದ್ದಾನೆ. 'ಸತ್ವಮಗ್ನಿಮ್' ಎಂಬುದಾಗಿ ಅಗ್ನಿಯ ಬಗ್ಗೆ, 'ಯೇಯಂ ಪ್ರೇತೇ ವಿಚಿಕಿತ್ಸಾ' ಎಂಬುದಾಗಿ ಮರಣವನ್ನು ಹೊಂದಿದ ಜೀವನ ಬಗ್ಗೆ 'ಅನ್ಯತ್ರ ಧರ್ಮಾತ್' ಎಂಬುದರಿಂದ ಬ್ರಹ್ಮನ ಬಗ್ಗೆ ನಚಿಕೇತನು ಪ್ರಶ್ನಿಸಿದ್ದಾನೆ. ಅದಕ್ಕನುಗುಣವಾಗಿ ಯಮನು ಉತ್ತರಿಸಿದ್ದಾನೆ. ಹೀಗಿರುವಾಗ ಜಡಪ್ರಕೃತಿಯ ನಿರೂಪಣೆಯ ಪ್ರಸಂಗವೇ ಇಲ್ಲಿ ಕಾಣಿಸುವುದಿಲ್ಲ. ಇಷ್ಟು ಆರನೆಯ ಸೂತ್ರ ವ್ಯಾಖ್ಯಾನ.

ಈ ಸೂತ್ರ ವ್ಯಾಖ್ಯಾನವೂ ಕೂಡ ಸರಿಯಿಲ್ಲ. ಏಕೆಂದರೆ ಶ್ರುತಿಯಲ್ಲಿ ನಚಿಕೇತನು ಮೂರರ ಬಗ್ಗೆ ಮಾತ್ರ ಪ್ರಶ್ನಿಸಿದ್ದರೂ ಉತ್ತರ ನೀಡುವ ವಾಕ್ಯದಲ್ಲಿ 'ಇಂದ್ರಿಯೇಭ್ಯಃ ಪರಾ ಹ್ಯರ್ಥಾಃ' ಇತ್ಯಾದಿಯಾಗಿ ಮೂರು ವಿಷಯಗಳಿಗಿಂತ ಅತಿರಿಕ್ತವಾದ ಇಂದ್ರಿಯಾದಿಗಳೂ ಪ್ರಸಕ್ತವಾಗಿವೆ. ಅದರಂತೆ ಪ್ರಕೃತಿಯ ಬಗ್ಗೆಯೂ ಕೂಡ ಹೇಳಿರಬಹುದಲ್ಲವೇ?

ಮುಖ್ಯವಾಗಿ ಇಂದ್ರಿಯಗಳನ್ನು ನಿರೂಪಣೆ ಮಾಡಿಲ್ಲ. ಬ್ರಹ್ಮನ ಬಗ್ಗೆ ಹೇಳಲು ಅಂಗತ್ವೇನ ಇಂದ್ರಿಯಾದಿಗಳನ್ನು ನಿರೂಪಣೆ ಮಾಡಿದ್ದಾನೆಂದು ಉತ್ತರಿಸುವುದಾದರೆ, ಪ್ರಧಾನದಲ್ಲಿಯೂ ಕೂಡ 'ಅವ್ಯಕ್ತಾತ್ ಪುರುಷಃ ಪರಃ' ಎಂಬುದಾಗಿ ಪುರುಷನ ಬಗ್ಗೆ ಹೇಳುವುದಕ್ಕಾಗಿ ಎಂದು ಉತ್ತರಿಸಬಹುದು. ಅಪ್ರಧಾನವಾಗಿ ಪ್ರಧಾನವು ಪ್ರತಿಪಾದ್ಯವೆಂದು ಹೇಳಲು ಯಾವ ಬಾಧಕವೂ ಇಲ್ಲ. ಹೀಗೊಪ್ಪದಿದ್ದರೆ ಅವ್ಯಕ್ತಶಬ್ದದಿಂದ ಅವಿದ್ಯೆಯು ಪ್ರತಿಪಾದ್ಯವೆಂದು ನೀವು ಹೇಳುತ್ತೀರಿ. ಅದೂ ಸಹ ಮೂರು ವಿಷಯಗಳಿಗಿಂತ ಅತಿರಿಕ್ತವಾದ್ದರಿಂದ ಅವ್ಯಕ್ತಶಬ್ದ ಪ್ರತಿಪಾದ್ಯವಾಗಲು ಹೇಗೆ ಸಾಧ್ಯ ? ಆದ್ದರಿಂದ ನಿಮ್ಮ ಮಾತು ಸ್ವವಚನ ವಿರೋಧಗ್ರಸ್ತವಾಗಿದೆ.

ಮತ್ತು ಶ್ರುತಿಯಲ್ಲಿ 'ತ್ರೀನ್ ವರಾನ್ ವೃಣೀಷ್ವ' ಎಂದು ಮೂರು ವರಗಳನ್ನು ಬೇಡು ಎಂದು ಯಮನು ಹೇಳಿದಾಗ, ನಚಿಕೇತನು 'ಪ್ರಥಮಂ ವರಂ ವೃಣೇ' ಎಂದು ಮೊದಲನೆಯ ವರವನ್ನು, ತಂದೆಯ ಮನಶ್ಶಾಂತಿಯ ಬಗ್ಗೆ 'ದ್ವಿತಿಯೇನ ವೃಣೇ ವರೇಣ' ಎಂಬುದಾಗಿ ಸ್ವರ್ಗಕಾರಣವಾದ ಅಗ್ನಿಯಲ್ಲಿರುವ ಪರಮಾತ್ಮನ ಬಗ್ಗೆ, 'ವರಾಣಾಮೇಷ ವೃತಸ್ತೃತೀಯಃ' ಎಂಬುದರಿಂದ ಮುಕ್ತನಿಯಾಮಕನಾದ ಪರಮಾತ್ಮನ ಬಗ್ಗೆ ವರವನ್ನು ಕೇಳಿದ್ದಾನೆ. ಆದ್ದರಿಂದ 'ತ್ರಿಶಬ್ದದಿಂದ ಮತ್ತು ಪ್ರಥಮಾದಿಶಬ್ದಗಳಿಂದ ಹೇಳಲ್ಪಟ್ಟ ಪಿತೃಸೌಮನಸ್ಯ, ಅಗ್ನಿ ಮತ್ತು ಈಶ್ವರ ಈ ಮೂವರನ್ನು ಬಿಟ್ಟು ಸೂತ್ರದಲ್ಲಿರುವ ತ್ರಿಶಬ್ದಕ್ಕೆ ಬೇರೆ ಅರ್ಥವನ್ನು ನೀವು ಮಾಡುತ್ತಿರುವುದು ಅಯುಕ್ತವಾಗುತ್ತದೆ.

ಮತ್ತು 'ಯೇಯಂ ಪ್ರೇತೇ ವಿಚಿಕಿತ್ಸಾ' ಎಂಬ ಶ್ರುತಿಗೆ ದೇಹಾತಿರಿಕ್ತನಾದ ಜೀವನ ಬಗ್ಗೆ ಪ್ರಶ್ನಿಸಲಾಗಿದೆ. ಮರಣವನ್ನು ಹೊಂದಿದ ಅನಂತರ ದೇಹಾತಿರಿಕ್ತನಾದ ಜೀವನು ಲೋಕಾಂತರವನ್ನು ಕುರಿತು ಹೋಗುತ್ತಾನೆ. ಅಂತಹ ಜೀವನು ದೇಹಾತಿರಿಕ್ತನಾಗಿ ಇರುತ್ತಾನೆಂದು ಕೆಲವರು ಹೇಳುತ್ತಾರೆ. ಇಲ್ಲವೆಂದು ಇನ್ನು ಕೆಲವರು ಹೇಳುತ್ತಾರೆ. ಆದ್ದರಿಂದ ಲೋಕಾಂತರವನ್ನು ಕುರಿತು ಹೋಗುವ ಜೀವನು ದೇಹಾತಿರಿಕ್ತನಾಗಿ ಇದ್ದಾನೋ, ಇಲ್ಲವೋ ? ಎಂಬುದರ ಬಗ್ಗೆ ನನಗೆ ಉತ್ತರ ನೀಡಿ, ಎಂದು ನಚಿಕೇತನ ಅಭಿಪ್ರಾಯವೆಂದು ನೀವು ವ್ಯಾಖ್ಯಾನ ಮಾಡುತ್ತೀರಿ. ಇದು ಸರಿಯಲ್ಲ.

'ಪ್ರಬ್ರೂಹಿ ತಂ ಶ್ರದ್ಧಧಾನಾಯ ಮಹ್ಯಮ್' ಇತ್ಯಾದಿ ವಾಕ್ಯಗಳಲ್ಲಿ ಅಗ್ನ್ಯಾದಿ ವಿಷಯಕವಾದ ಪ್ರಶ್ನೆಯಿರುತ್ತದೆ. 'ಪ್ರತೇ ಬ್ರವೀಮಿ ತದು ಮೇ ನಿಬೋಧ ಸ್ವರ್ಗ್ಯಮಗ್ನಿಂ

ನಚಿಕೇತಃ' ಉತ್ತರವಾಕ್ಯಗಳಲ್ಲಿ ಸ್ಪಷ್ಟವಾಗಿ ಅಗ್ನ್ಯಾದಿಗಳ ವಿಷಯವೇ ಇರುತ್ತದೆ. ಇದನ್ನು ಬಿಟ್ಟು ಒಂದೇ ಶ್ಲೋಕದಲ್ಲಿ ಉಪಾಯ, ಉಪೇತೃ, ಉಪೇಯಗಳ ಪ್ರಶ್ನೆಗಳನ್ನು ನೀವು ಕಷ್ಟದಿಂದ ಸಂಪಾದನೆ ಮಾಡಿ, ಸೂತ್ರದಲ್ಲಿರುವ 'ತ್ರಯಾಣಾಮ್' ಎಂಬ ಪದಕ್ಕೆ ತತ್ಪರತ್ವವನ್ನು ಹೇಳುವುದು ಯುಕ್ತವಾಗುವುದಿಲ್ಲ.

ಮತ್ತು ನೀವು ಹೇಳಿದ ಉಪಾಯಾದಿಗಳಿಗಿಂತ ವಿಲಕ್ಷಣವಾದ ಅಗ್ನ್ಯಾದಿಗಳ ಬಗ್ಗೆಯೂ ಪ್ರಶ್ನೆಗಳಿರುವ ಕಾರಣ 'ತ್ರಯಾಣಾಮೇವ' ಎಂಬಲ್ಲಿರುವ ಅವಧಾರಣೆಯು ಅಯುಕ್ತವಾಗುತ್ತದೆ.

'ಮಹದ್ವಚ್ಚ' ಎಂಬ ಏಳನೆಯ ಸೂತ್ರಾರ್ಥವನ್ನು ರಾಮಾನುಜರು ಹಾಗೂ ಶಂಕರರು ಹೀಗೆ ಹೇಳುತ್ತಾರೆ - 'ವೇದಾಹಮೇತಂ ಪುರುಷಂ ಮಹಾಂತಮ್' ಎಂಬಲ್ಲಿರುವ 'ಮಹತ್' ಶಬ್ದವು ಸಾಂಖ್ಯಸ್ಮೃತಿಸಿದ್ಧವಾದ ಮಹತ್ತತ್ವವನ್ನು ಹೇಗೆ ಪ್ರತಿಪಾದನೆ ಮಾಡುವುದಿಲ್ಲವೋ, ಅದರಂತೆ ಅವ್ಯಕ್ತಶಬ್ದವೂ ಕೂಡ ಸಾಂಖ್ಯಸ್ಮೃತಿಸಿದ್ಧವಾದ ಪ್ರಕೃತಿಯನ್ನು ಹೇಳುವುದಿಲ್ಲ. ಇಷ್ಟು 'ಮಹದ್ವಚ್ಚ' ಎಂಬ ಸೂತ್ರದ ಅರ್ಥ.

ಇದು ತಪ್ಪು. 'ವೇದಾಹಮೇತಂ' ಇತ್ಯಾದಿ ವಾಕ್ಯದಲ್ಲಿ 'ಆದಿತ್ಯವರ್ಣಮ್' ಇತ್ಯಾದಿಯಾದ ಬಾಧಕಗಳಿರುವ ಕಾರಣ ಮಹತ್ತತ್ವವನ್ನು ಸ್ವೀಕರಿಸಲು ಬರುವುದಿಲ್ಲ. ಆದರೆ ಅವ್ಯಕ್ತಶಬ್ದದಿಂದ ಪ್ರಧಾನವನ್ನು ಸ್ವೀಕರಿಸಲು ಅಂತಹ ಯಾವುದೇ ಬಾಧಕಗಳಿದಿರುವುದಿಲ್ಲ.

ಆಶಂಕೆ - ಆತ್ಮಶಬ್ದದ ಸಾಮಾನಾಧಿಕರಣ್ಯವಿರುವ ಪ್ರಯುಕ್ತ ಮಹತ್‌ಶಬ್ದವು ಆತ್ಮನನ್ನೇ ಪ್ರತಿಪಾದನೆ ಮಾಡುತ್ತದೆ. ಮಹತ್ತತ್ವವನ್ನು ಹೇಳುವುದಿಲ್ಲ. ಆದರೆ ಮುಂದಿರುವ ಅವ್ಯಕ್ತಶಬ್ದದಿಂದ ಪ್ರಕೃತಿಯನ್ನು ಸ್ವೀಕರಿಸಲು ಸಾಧ್ಯವಿಲ್ಲ. ಏಕೆಂದರೆ ಆತ್ಮನಿಗಿಂತ ಉತ್ತಮತ್ವವನ್ನು ಪ್ರಕೃತಿಯಲ್ಲಿ ಹೇಳಲು ಹೇಗೆ ಸಾಧ್ಯ? ಹೀಗೆ ಬಾಧಕವಿರುವ ಕಾರಣ ಅವ್ಯಕ್ತಶಬ್ದವು ಪ್ರಕೃತಿಯನ್ನು ಹೇಳಲು ಸಾಧ್ಯವಿಲ್ಲವಲ್ಲವೇ?

ಸಮಾಧಾನ - ಅವ್ಯಕ್ತಶಬ್ದಕ್ಕೆ ಪ್ರಕೃತಿಪರತ್ವವನ್ನು ನೀವು ಒಪ್ಪದಿದ್ದರೂ ಅವಿದ್ಯಾಪರವೆನ್ನುತ್ತೀರಿ. ಇಂತಹ ಅವಿದ್ಯೆಯೂ ಕೂಡ ಆತ್ಮನಿಗಿಂತ ಉತ್ತಮವಾಗಲು ಹೇಗೆ ಸಾಧ್ಯ? ಆದ್ದರಿಂದ ಪ್ರಕೃತಿಪರವಲ್ಲವೆಂದು ಹೇಳುವ ನಿಮಗೆ ದೋಷವು ತಪ್ಪಿದ್ದಲ್ಲ.

ನಿಜವಾಗಿ ವಿಚಾರ ಮಾಡಿದರೆ 'ಅವ್ಯಕ್ತಾತ್ ಪುರುಷಃ ಪರಃ' ಎಂಬಲ್ಲಿ ಪುರುಷನಿಗಿಂತ ಅವ್ಯಕ್ತವು ಅಧಮವಾಗಿದೆಯೆಂದು ಹೇಳಿದ್ದರಿಂದ ಪ್ರಕೃತಿಯನ್ನು ವಿವಕ್ಷಿಸಲು ಯಾವುದೇ ತೊಂದರೆಯೂ ಇರುವುದಿಲ್ಲ. ಆತ್ಮಶಬ್ದಕ್ಕೆ 'ಸ್ವರೂಪ' ಎಂಬರ್ಥವನ್ನೂ ಕೂಡ ಹೇಳಬಹುದಾದ್ದರಿಂದ 'ಮಹತ್' ಶಬ್ದಕ್ಕೆ ಆತ್ಮಶಬ್ದದ ಸಾಮಾನಾಧಿಕರಣ್ಯವಿದೆಯೆಂಬ ಕಾರಣದಿಂದ 'ಮಹತ್' ಶಬ್ದವು ಆತ್ಮನನ್ನೇ ಹೇಳಬೇಕೆಂಬ ನಿಯಮವಿಲ್ಲ.

ಇಲ್ಲಿಗೆ ಅನುಮಾನಿಕಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ವಾದಾವಲೀ ನೋಡಿ . . . ಸ್ವಲ್ಪ ಬದಲಿಸಿ,

ಅದನ್ನೇ ದಾವಾವಲೀ ಎನ್ನಿ

ಸಾಲು . . . ಸಾಲು . . . ವಾದಗಳ ಸಾಲು . . .

ಅರಣ್ಯಗಳ ಸಾಲನ್ನು ಸುಟ್ಟಿತು . . . ಬೇಗ ಬೇಗ ಸುಟ್ಟಿತು

ವನನಾಶದಿಂದ ನಲಿಯೋಣ

ರಾಯರ ಕಾಡ್ಗಿಚ್ಚು ಸುಟ್ಟಿದ್ದು ಹಸಿರನ್ನಲ್ಲ, ಮಾಯಾಮತವನ್ನ,

ಇದು ಹೊಸದಲ್ಲ . .

ಶ್ರೀಮದ್ವರ ವಂಶದವರೇ ಐಕ್ಯಮತ ಸುಡುವುದು

ಶ್ರೀವ್ಯಾಸರು ಬಿತ್ತಿದ ಬೀಜ ಬೆಳೆಯುತ್ತಾ ಬಂದು

ಇಂದು ಶ್ರೀರಾಘವೇಂದ್ರ ಗುರುಸಾರ್ವಭೌಮರ

ಅಮೃತಮಯಕೃತಿಗಳಿಂದ ಫಲಗಳುಂಟಾಗಿ

ಮಧ್ವಸಿದ್ಧಾಂತವೆಂಬ ಮಹಾವೃಕ್ಷವು

ಸೊಬಗಿನಿಂದ ಕಂಗೊಳಿಸುತ್ತಿದೆ.

ಸ್ಫೂರ್ತಿ :- ಗುರುಗುಣಸ್ತವನ

ಪ್ರಕಾಶನ

ಶ್ರೀ ಗುರುಸಾರ್ವಭೌಮ ಸಂಶೋಧನ ಮಂದಿರ

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ

ಶ್ರೀ ರಾಘವೇಂದ್ರಸ್ವಾಮಿಗಳ ಮಠ

ಮಂತ್ರಾಲಯ - 518 345 (ಆಂಧ್ರ ಪ್ರದೇಶ)